ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ

# ಶ್ರೀಮದ್ವಾಲ್ಮೀಕಿರಾಮಾಯಣ

ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ

ಭಾರತ ದರ್ಶನ ಪ್ರಕಾಶನ

ಶ್ರೀ ರಾಮಃ ಶರಣಂ ಮಮ



ಶ್ರೀ ರಾಮಃ ಶರಣಂ ಮಮ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್॥

ಸುಂದರ
ಯುದ್ಧ

ಸಂಪುಟ
೨

ಭಾರತ ದರ್ಶನ ಪ್ರಕಾಶನ

# ಶ್ರೀಮದ್ವಾಲ್ಮೀಕಿರಾಮಾಯಣ

ವಾಲ್ಮೀಕಿಗಿರಿಸಂಭೂತಾ
ರಾಮಸಾಗರಗಾಮಿನೀ ।
ಪುನಾತು ಭುವನಂ ಪುಣ್ಯಾ
ರಾಮಾಯಣಮಹಾನದೀ ॥

**ಸಂಪುಟ 7**

*ಮುದ್ರಕರು:*
**ಭಾರತ ದರ್ಶನ ಮುದ್ರಣಾಲಯ**
163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
**ದೂರವಾಣಿ: 080-26765381**

ಪ್ರಥಮ ಇ-ಮುದ್ರಣ ಜನವರಿ ೨೦೧೪

*ಆದಿ ಅಧ್ಯಕ್ಷರು:*

**ಪರಮಪೂಜ್ಯ ಶ್ರೀ ಶ್ರೀ**
**ರಂಗಪ್ರಿಯಮಹಾದೇಶಿಕಸ್ವಾಮಿಗಳವರು**

*ಆದಿ ವ್ಯವಸ್ಥಾಪಕ ಸಂಪಾದಕರು:*

**ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')**

*ಆದಿ ಸಂಪಾದಕರು:*

**ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ**

*ಆದಿ ಸಂಪಾದಕರು:*

**ದಿ|| ವಿದ್ವಾನ್ ರಾಮೇಶ್ವರಾವಧಾನೀ**

**ಸಂಪಾದಕ ಮಂಡಲಿ:**

ಶ್ರೀ ಶ್ರೀಹರಿ
ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ವಿ. ಸೂರ್ಯನಾರಾಯಣ್, M.A. B.Com., B.L.,
ಕೋಶಾಧ್ಯಕ್ಷರು

# ವಿನಮ್ರವಚನಗಳು

ದಯಾಮಯನಾದ ಪರಮಾತ್ಮನ ದಯೆಯಿಂದ ಶ್ರೀಮದ್ವಾಲ್ಮೀಕಿ ರಾಮಾಯಣದ ಏಳನೆಯ ಸಂಪುಟವನ್ನು ಹೊರತಂದು, ದಿವ್ಯಕುಸುಮ ರೂಪವಾಗಿರುವ ಇದನ್ನು ಅವನ ಪಾದಪದ್ಮಗಳಲ್ಲಿ ಸಮರ್ಪಿಸಿ, ಪರಮಾತ್ಮನ ಜ್ಞಾನಪ್ರಸಾದರೂಪವಾಗಿರುವ ಈ ದಿವ್ಯಕುಸುಮವನ್ನೇ ನಮ್ಮ ವಾಚಕರ ಅಂಜಲಿಪುಟಗಳಲ್ಲಿ ಸಮರ್ಪಿಸುತ್ತಿದ್ದೇವೆ. ಪರಮಾತ್ಮನ ಅನುಗ್ರಹದಿಂದಲೇ ಸೃಷ್ಟಿಯಾಗಿರುವ ಈ ಕುಸುಮವನ್ನು ಗ್ರಾಹಕರು ಭಕ್ತಿಭಾವದಿಂದ ಸ್ವೀಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಈ ಸಂಪುಟವು ಹೊರಬರಲು ಸ್ವಲ್ಪ ಸಾವಕಾಶವೇ ಆಯಿತು. 1988ನೇ ಡಿಸೆಂಬರ್ ಕಡೆಯೊಳಗಾಗಿ ಪ್ರಕಾಶನಗೊಳಿಸಬೇಕೆಂಬ ಆಶಯ ವಿದ್ದಿತು. ಆದರೆ ಆ ವೇಳೆಗೆ ಸಂಪುಟದ ಮುದ್ರಣವು ಮುಗಿಯಿತೆಂಬುದೇ ಒಂದು ತೃಪ್ತಿ. ಈ ಸಂಪುಟವು ಹೊರಬರಲು ಮಾನಸಿಕವಾಗಿ ಸ್ವಲ್ಪ ತ್ರಾಸವೇ ಆಯಿತು. ಸುಮಾರು ಎರಡು ತಿಂಗಳವರೆಗೆ ಮುದ್ರಣಯಂತ್ರವು ಸರಿಯಾಗಿ ಕೆಲಸಮಾಡುತ್ತಿರಲಿಲ್ಲ. ಕಾಗದದ ಅಭಾವ ; ಸಕಾಲಕ್ಕೆ ಕಾಗದವು ಸಿಕ್ಕಲಿಲ್ಲ. ಹಣದ ತೊಂದರೆ. ಹೆಚ್ಚು ವೆಚ್ಚ ; ವೆಚ್ಚಕ್ಕೆ ತಕ್ಕಷ್ಟು ಹಣಸಂಗ್ರಹವಾಗದೇ ಇರುವುದು. ಎರಡು ಕಾರಣಗಳಿಂದ ಸ್ವಲ್ಪ ಹಣದ ಮುಗ್ಗಟ್ಟು ತಲೆದೋರು ತ್ತಿದೆ. ಕಳೆದ ವರ್ಷದಲ್ಲಿ ಕಾಗದ ಒಂದಕ್ಕೇ ಸುಮಾರು ಸಾವಿರ ರೂ.ಗಳು ಹೆಚ್ಚು ವೆಚ್ಚವಾಗಿದೆ. ರಿಯಾಯಿತಿ ಕಾಗದವಂತೂ ಸಿಕ್ಕುತ್ತಲೇ ಇಲ್ಲ. ಅದು ನಿಂತುಹೋಗಿ ನಾಲ್ಕುವರ್ಷಗಳೇ ಆದುವು. ಭದ್ರಾವತಿ ಕಾಗದ ಕಾರ್ಖಾನೆ ಯವರೇ ನೇರವಾಗಿ ಕಾಗದವನ್ನು ಸರಬರಾಜು ಮಾಡುತ್ತಿದ್ದಾರೆ. ಅಲ್ಲಿಯೇ ಬೆಲೆಯು ವಿಪರೀತವಾಗಿ ಏರುತ್ತಿದೆ. 1988ನೇ ಜನವರಿಯಲ್ಲಿ 5 ಟನ್ ಗಳಿಗೆ 58,000 ರೂ. ಇದ್ದುದು ಕಡೆಯ ವೇಳೆಗೆ 71,000 ರೂ.ಗಳಾಗಿವೆ. ಸುಮಾರು 13,000 ರೂ.ಗಳಷ್ಟು ಕಾಗದದ ಬೆಲೆ ಹೆಚ್ಚಾಗಿದೆ. ವರ್ಷಕ್ಕೆ ಸುಮಾರು 15 ಟನ್ ಕಾಗದ ಬೇಕಾಗುವುದರಿಂದ ಈ ಕಾಗದ ಒಂದಕ್ಕಾಗಿಯೇ ವರ್ಷಕ್ಕೆ 40,000ರೂ. ಅಧಿಕವಾಗಿದೆ. ಬೆಲೆಯು ಸ್ಥಗಿತ ವಾಗುವ ಪ್ರಶ್ನೆಯೇ ಇಲ್ಲ. ಉಳಿದ ಕಚ್ಚಾವಸ್ತುಗಳ ಬೆಲೆಯೂ ಸಾಮಾನ್ಯ ವಾಗಿ ಇದೇ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಇದರ ಬಗೆಗೆ ಏನು ಮಾಡ

ಬೇಕೆಂಬುದೇ ತಿಳಿಯದಾಗಿದೆ. ಪರಮಾತ್ಮನ ದಯೆ, ಗ್ರಾಹಕರ ಸಹಕಾರ ಗಳಿಂದ ಈ ಸಮಸ್ಯೆಯೂ ಬಗೆಹರಿದೀತು.

ಏಳನೆಯ ಸಂಪುಟವು ಗ್ರಾಹಕರಿಗೆ ಬಹಳ ಬೇಗ ಬೇಕಾಗಿದ್ದಿತು. ಏಕೆಂದರೆ : 6ನೆಯ ಸಂಪುಟದಲ್ಲಿ ಕಥಾಭಾಗವು ಬಹಳ ಕಡಿಮೆ. ಈ ಕಾರಣ ದಿಂದ ಈ ಸಂಪುಟಕ್ಕಾಗಿ ಎಲ್ಲರೂ ಕಾಯುತ್ತಿದ್ದಾರೆ. ಈ ಸಂಪುಟದಲ್ಲಿ ಹಿಂದಿನ ಸಂಪುಟದಲ್ಲಿ ತಿಳಿಸಿದ್ದಂತೆ ಸುಂದರಕಾಂಡದ ಕಥಾಭಾಗವನ್ನು ಸಂಪೂರ್ಣವಾಗಿ ಕೊಟ್ಟು ಯುದ್ಧಕಾಂಡದ ಹದಿನೆಂಟು ಸರ್ಗಗಳನ್ನು ಅಳವಡಿಸಲಾಗಿದೆ. ಹಣದ ಮುಗ್ಗಟ್ಟು ಎಷ್ಟೇ ಇದ್ದರೂ ಸಂಪುಟದ ಆಕಾರ ವಾಗಲೀ ವಿಷಯಸಂಪತ್ತಿಯಾಗಲೀ ವಿಕೃತಗೊಂಡಿರುವುದಿಲ್ಲ. ಈ ಮಧ್ಯೆ ಮಹಾಭಾರತದ 7 ಮತ್ತು 10ನೇ ಸಂಪುಟಗಳನ್ನು ಪುನರ್ಮುದ್ರಣ ಮಾಡಲಾಗಿದೆ. 1988ರಲ್ಲಿ ಮಹಾಭಾರತದ 5 ಸಂಪುಟಗಳನ್ನು ಪುನರ್ಮು ದ್ರಣಮಾಡಲಾಗಿದೆ. ಆದರೂ ಈಗ ಲಭಿಸುವುದು 14 ಸಂಪುಟಗಳು ಮಾತ್ರ. 5 ಸಂಪುಟಗಳ ಪುನರ್ಮುದ್ರಣವಾದರೆ ಮುಗಿದಿರುವ ಸಂಪುಟಗಳು 6. ಪುನರ್ಮುದ್ರಣಕಾರ್ಯವು ಸತತವಾಗಿ ನಡೆಯುತ್ತಿದೆ.

ರಾಮಾಯಣದ ಗ್ರಾಹಕರ ಸಂಖ್ಯೆಯೂ ಹೆಚ್ಚಿದೆ. ರಾಮಾಯಣ-ಮಹಾಭಾರತಗಳ ಪ್ರಚಾರಕ್ಕಾಗಿ ಅನೇಕರು ಶ್ರಮಿಸುತ್ತಿದ್ದಾರೆ. ದೂರದರ್ಶನ ದಲ್ಲಿ ಮಹಾಭಾರತ-ರಾಮಾಯಣಗಳು ಪ್ರಸಾರವಾಗುತ್ತಿರುವುದರಿಂದ ಸ್ವಲ್ಪ ಕೇಳಿಕೆ ಹೆಚ್ಚಾಗಿದೆಯೆನ್ನಬಹುದು. ಆದರೂ ಮಹಾಭಾರತದ ಪೂರ್ಣಮಾಲೆ ಯನ್ನು ಒಟ್ಟಾಗಿ ಬೇಕೆಂದು ಎಲ್ಲರೂ ಅಪೇಕ್ಷಿಸುತ್ತಾರೆ. ಇದು ಸಹಜವೂ ಆಗಿದೆ. ಆದರೆ ಪರಮಾತ್ಮನು ಅಂತಹ ಸಾಮರ್ಥ್ಯವನ್ನು ಇನ್ನೂ ಅನುಗ್ರಹಿ ಸಿರುವುದಿಲ್ಲ. ಮುಂದೆ ಅನುಗ್ರಹಿಸಬಹುದು. ಗ್ರಾಹಕರಿಗೆ ಪೂರ್ಣಮಾಲೆ ಯನ್ನು 2-3 ವರ್ಷಗಳ ಅವಧಿಯಲ್ಲಾದರೂ ಒದಗಿಸಿಕೊಡುವಷ್ಟು ಸಾಮರ್ಥ್ಯವನ್ನು ಈಗ ಕೊಟ್ಟಿದ್ದಾನೆ. ಇದೂ ಪರಮಾನುಗ್ರಹವೇ ಸರಿ. ಏಕೆಂದರೆ ಪುನರ್ಮುದ್ರಣವೆಂಬುದೇ ಪ್ರಕಾಶಕರಿಗೆ ಅತಿದುಸ್ತರವಾದ ಕಾರ್ಯ.

ಪ್ರಸಕ್ತ ಮಹಾಭಾರತದ ಮೊದಲ ಮೂರು ಸಂಪುಟಗಳೂ ಮುಗಿ ದಿವೆ. ಇವುಗಳನ್ನು ನಾವು ಅನುಕ್ರಮವಾಗಿ ಮುದ್ರಿಸಬೇಕಾದರೆ ಮೂರು ವರ್ಷಗಳ ನಂತರವೇ ಪುನರ್ಮುದ್ರಣಮಾಡಬೇಕಾಗುತ್ತದೆ. ಆದರೆ ಹೊಸ

ಗ್ರಾಹಕರ ಸಲುವಾಗಿ ಸ್ವಲ್ಪಮುಂಚಿತವಾಗಿ ಕ್ರಮವನ್ನು ಬಿಟ್ಟು ಈ ಮೂರು ಸಂಪುಟಗಳನ್ನೂ ಪುನರ್ಮುದ್ರಣಮಾಡಬೇಕಾಗಿದೆ.

ಎಲ್ಲ ಪದಾರ್ಥಗಳ ಬೆಲೆಯೂ ಅನಿರೀಕ್ಷಿತವಾದ ರೀತಿಯಲ್ಲಿ ಹೆಚ್ಚುತ್ತಿರುವಾಗ ನಾವೂ ಬೆಲೆಯನ್ನು ಸ್ವಲ್ಪಮಟ್ಟಿಗಾದರೂ ಹೆಚ್ಚಿಸುವುದು ಅನಿವಾರ್ಯವಾಗಿದೆ. ಗ್ರಾಹಕರು ಸಹಕರಿಸುವರೆಂಬ ಭರವಸೆಯಿದೆ.

ಮಹಾಭಾರತ-ರಾಮಾಯಣಗಳ ಪ್ರಚಾರಕಾರ್ಯವು ಒಬ್ಬ ವ್ಯಕ್ತಿಗೆ ಸೇರಿದುದಲ್ಲ. ಇದು ಭಾರತವರ್ಷದಲ್ಲಿರುವ ಪ್ರತಿವ್ಯಕ್ತಿಗೂ ಸೇರಿದ್ದು. ಮಹಾಭಾರತ-ರಾಮಾಯಣಗಳನ್ನು ಮುಂದಿನ ಪೀಳಿಗೆಗೂ ನಾವು ಕಾದಿರಿಸ ಬೇಕಾಗಿದೆ. ನಮ್ಮ ಧರ್ಮ-ಸಂಸ್ಕೃತಿಗಳು ಉಳಿದಿರಬೇಕಾದರೆ ಅವುಗಳಿಗೆ ಅಡಿಗಲ್ಲುಗಳಂತಿರುವ ಈ ಮೇರುಕೃತಿಗಳೂ ಉಳಿದಿರಲೇಬೇಕು. ಆದುದ ರಿಂದ ಎಲ್ಲ ಕನ್ನಡಬಾಂಧವರೂ ಈ ಗ್ರಂಥಗಳ ಪ್ರಚಾರ-ಪ್ರಕಾಶನಗಳಿಗೆ ಸಕಲವಿಧವಾದ ನೆರವನ್ನೂ ನೀಡಬೇಕಾಗಿ ಪ್ರಾರ್ಥಿಸುತ್ತೇವೆ.

ವಿಭವಸಂವತ್ಸರದ ಆಷಾಢ ಶುದ್ಧ ಏಕಾದಶೀ (ತಾ.25.7.88) ಸೋಮವಾರದಂದು ಸಂಜೆ 5-30ಕ್ಕೆ ನಗರದ ಬಸವನಗುಡಿ ರಸ್ತೆಯಲ್ಲಿರುವ ಶ್ರೀಗುರುನರಸಿಂಹ ಕಲ್ಯಾಣಮಂದಿರದಲ್ಲಿ ಆರನೆಯ ಸಂಪುಟದ ಪ್ರಕಾಶನವು ನೆರವೇರಿತು. ಗಣ್ಯರನ್ನು ಪೂರ್ಣಕುಂಭಸ್ವಾಗತದೊಡನೆ ವೇದಿಕೆಯ ಮೇಲೆ ಕರೆತರಲಾಯಿತು. ಋಗ್ವೇದ, ಯಜುರ್ವೇದ ಹಾಗೂ ಸಾಮವೇದಗಳ ಘೋಷವಾದ ಬಳಿಕ ಶ್ರೀಮತೀ ಪೂರ್ಣಿಮಾಗೋವಿಂದರವರು ಸ್ವಾಗತ ಪದ್ಯಮಾಲಿಕೆಯನ್ನು ವಾಚಿಸಿದರು. ಬಳಿಕ ವಿದ್ವಾನ್ ಹೆಚ್. ಎನ್. ರಂಗಸ್ವಾಮಿ ಯವರು ಎಲ್ಲರನ್ನೂ ಸ್ವಾಗತಿಸಿ ಭಾರತ ದರ್ಶನ ಸಂಸ್ಥೆಯ ಇಲ್ಲಿಯವರೆಗಿನ ಪ್ರಗತಿಯ ಬಗೆಗೆ ತಿಳಿಸಿದರು. ನಂತರ ಮುಖ್ಯ ಅಭ್ಯಾಗತರಾಗಿ ಆಗಮಿಸಿದ್ದ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷರೂ, ಹೆಸರಾಂತಕೈಗಾರಿಕೋದ್ಯಮಿ ಗಳೂ ಆದ ಸನ್ಮಾನ್ಯ ಶ್ರೀ ಬಿ. ಎನ್. ವಿ. ಸುಬ್ರಹ್ಮಣ್ಯಂರವರು ನೂತನ ಸಂಪುಟ ರಾಮಾಯಣಸರಸ್ವತಿಗೆ ಪೂಜೆಯನ್ನು ಸಲ್ಲಿಸಿ ಆರನೆಯ ಸಂಪುಟ ವನ್ನು ಬಿಡುಗಡೆಮಾಡಿ ಸಭಿಕರಿಗೆ ತೋರಿಸಿದಾಗ ಸಭೆಯು ಪ್ರಚಂಡ ಕರ ತಾಡನಗಳೊಂದಿಗೆ ಆ ಸುಮುಹೂರ್ತವನ್ನು ಸ್ವಾಗತಿಸಿತು. ವೇದಮೂರ್ತಿ ಗಳು ಸ್ವಸ್ತಿ ವಾಚನಮಾಡಿದರು. ಮಂಗಳವಾದ್ಯಗಳು ಮೊಳಗಿದುವು.ಅನಂತರ

ಶ್ರೀಮತೀ ಪೂರ್ಣಿಮಾಗೋವಿಂದರವರು ಪ್ರಕಾಶಿತ ಸಂಪುಟದಿಂದ ಆಯ್ದ ಶ್ಲೋಕಗಳನ್ನು ಸುಶ್ರಾವ್ಯವಾಗಿ ಹಾಡಿದರು. ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯರು ಬರೆದು ಕೊಟ್ಟಿದ್ದ ಈ ಸಂಪುಟದ ಪರಿಚಯವನ್ನು ಶ್ರೀ ಟಿ. ಎನ್. ಪ್ರಭಾಕರ್‌ರವರು ಓದಿದರು.

ನಂತರ ಮುಖ್ಯ ಅಭ್ಯಾಗತರಾಗಿದ್ದ ಸನ್ಮಾನ್ಯ ಶ್ರೀ ಬಿ. ಎನ್. ವಿ. ಸುಬ್ರಹ್ಮಣ್ಯಂರವರು ತಮ್ಮ ಭಾಷಣದಲ್ಲಿ ರಾಮಾಯಣದ ಹಿರಿಮೆಯನ್ನು ವರ್ಣಿಸುತ್ತಾ ಭಾರತ ದರ್ಶನ ಸಂಸ್ಥೆಯವರ ಶ್ರಮವನ್ನು ಶ್ಲಾಘಿಸಿದರು. ಸಂಪಾದಕಮಂಡಲಿಯವರ ಶ್ರಮ ಸಾರ್ಥಕವಾಗಬೇಕಾದರೆ ಪ್ರತಿಯೊಬ್ಬರೂ ಈ ಸಂಪುಟಗಳನ್ನು ಕೊಂಡು ಓದಬೇಕು. ಒಂದು ಸಂಪುಟ ಹೊರಬರ ಬೇಕಾದರೆ ಎಷ್ಟು ಶ್ರಮಸಾಧ್ಯ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಅದು ಅನುಭವದ ವಿಚಾರ. ನಮ್ಮ ಭಾರತೀಯ ಸಂಸ್ಕೃತಿಯು ಮೇರುಕೃತಿಗಳಾದ ರಾಮಾಯಣ-ಮಹಾಭಾರತ-ಭಗವದ್ಗೀತೆ-ಭಾಗವತ ಮುಂತಾದ ಶ್ರೇಷ್ಠ ಗ್ರಂಥಗಳ ಆಧಾರದ ಮೇಲೆ ನಿಂತಿದೆ—ಎಂದರೆ ಅಚ್ಚರಿಯೇನಲ್ಲ. ಈ ಗ್ರಂಥ ಗಳಲ್ಲಿ ಕಾಣಬರುವ ಸುಂದರವಾದ ನಡವಳಿಕೆಗಳು ಅಂದರೆ ತಂದೆ-ತಾಯಿ ಗಳ ಬಗೆಗೆ ಮಕ್ಕಳ ನಡತೆ, ಅಣ್ಣ-ತಮ್ಮಂದಿರು ಹೇಗಿರಬೇಕು, ಸ್ವಾಮಿನಿಷ್ಠೆ, ಪ್ರಾಮಾಣಿಕತೆ, ಸಖ್ಯತನದ ಚಿಹ್ನೆಗಳು—ಹೀಗೆ ಎಲ್ಲ ರೀತಿಯ ಗುಣಗಳನ್ನೂ ನಾವು ಈ ಗ್ರಂಥಗಳ ಪಾತ್ರಗಳಲ್ಲಿ ಗಮನಿಸಬಹುದು. ಇವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸನ್ಮಾರ್ಗಪ್ರವೃತ್ತರಾಗಬಹುದು. ಭಾರತ ದರ್ಶನ ಪ್ರಕಾಶನಸಂಸ್ಥೆಯವರು ಬಹಳ ಉತ್ತಮವಾದ ಕಾರ್ಯವನ್ನು ಮಾಡುತ್ತಿದ್ದಾರೆ. ಅವರ ಈ ಸತ್ಕಾರ್ಯದಲ್ಲಿ ಎಲ್ಲ ರೀತಿಯ ಸಹಾಯ-ಸಹಕಾರಗಳೂ ಒದಗಿಬರಲೆಂದು ಹಾರೈಸಿದರು.

ಅನಂತರ ಬೆಂಗಳೂರಿನ ಶ್ರೀ ರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಚಿದಾನಂದಸ್ವಾಮೀಜೀಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ—“ಶ್ರೀಮದ್ರಾಮಾಯಣದ ಆರನೆಯ ಸಂಪುಟದ ಪ್ರಕಾಶನವು ಇಂದು ಇಲ್ಲಿ ನೆರವೇರಿದೆ. ರಾಮಾಯಣಪಠನವು ಅಮೃತಪಾನಕ್ಕೆ ಸಮಾನ. ಅಮೃತಪಾನಮಾಡಿದರೆ ಮನಸ್ಸಿಗೆ ಆನಂದ ಸಿಗುತ್ತದೆ. ಯಾವ ರೀತಿ ಜೀವನ

ನಡೆಸಬೇಕು? ಯಾವ ರೀತಿ ಆದರ್ಶವನ್ನಿಟ್ಟುಕೊಳ್ಳಬೇಕು?–ಎಂಬ ಹಲವಾರು ವಿಚಾರಗಳು ರಾಮಾಯಣಪಠನದಿಂದ ನಮಗೆ ತಿಳಿಯುತ್ತವೆ. ಕಿಷ್ಕಿಂಧಾ ಕಾಂಡದಲ್ಲಿ ಮುಖ್ಯವಾಗಿ ಸಖ್ಯಭಾವ ಯಾವ ರೀತಿ ಇರಬೇಕು, ಯಾವ ರೀತಿ ಅದನ್ನು ಬೆಳೆಸಿಕೊಳ್ಳಬೇಕು–ಎಂಬುದನ್ನು ಸುಸ್ಪಷ್ಟವಾಗಿ ನಾವು ಕಾಣುತ್ತೇವೆ. ಮೊಟ್ಟಮೊದಲಿಗೆ ಹನುಮಂತನು ಶ್ರೀರಾಮಚಂದ್ರನನ್ನು ಭೇಟಿಯಾದ ಪ್ರಸಂಗವು ಬಹಳ ಸುಂದರವಾಗಿದೆ. ಹನುಮಂತನು ಶ್ರೀರಾಮನ ಪ್ರೀತಿಯನ್ನು ಹೇಗೆ ಸಂಪಾದಿಸಿದನೆಂಬ ವರ್ಣನೆ ಈ ಕಿಷ್ಕಿಂಧಾ ಕಾಂಡದಲ್ಲಿದೆ. ಸುಗ್ರೀವನು ವಾಲಿಯಿಂದ ಹೊರದೂಡಲ್ಪಟ್ಟು ದೇಶದ ಹೊರಗೆ ಬಂದಿದ್ದಾನೆ. ಮತ್ತೊಂದು ವಿಶೇಷವೇನೆಂದರೆ : ಸುಗ್ರೀವನು ವಾಸಿಸುತ್ತಿದ್ದ ಸುಂದರವನಪ್ರದೇಶ, ಶ್ರೀರಾಮನು ಸುಗ್ರೀವನನ್ನು ಭೇಟಿ ಮಾಡಿದ ಪ್ರದೇಶ–ಇವುಗಳು ನಮ್ಮ ಕರ್ನಾಟಕದಲ್ಲಿಯೇ ಇವೆ. ನಿಜಕ್ಕೂ ನಾವು ಪುಣ್ಯವಂತರೇ ಸರಿ. ಕರ್ನಾಟಕದ ಅಧಿಷ್ಠಾತೃದೇವತೆ ಆಂಜನೇಯ ನೆಂದರೆ ತಪ್ಪಾಗಲಾರದು.

ಸುಗ್ರೀವನ ಜೊತೆ ರಾಮನ ಮೈತ್ರಿಯ ಪ್ರಸಂಗವಂತೂ ಸುಂದರವಾದ ಒಂದು ಪ್ರಸಂಗ. ಸುಗ್ರೀವನು ರಾಮ-ಲಕ್ಷ್ಮಣರಿಬ್ಬರನ್ನೂ ದೂರದಿಂದಲೇ ನೋಡುತ್ತಾನೆ. ಅವರನ್ನು ನೋಡಿದ ಸುಗ್ರೀವನು–ಬಹುಶಃ ವಾಲಿಯು ತನ್ನನ್ನು ವಧಿಸಲು ಇವರುಗಳನ್ನು ಕಳುಹಿಸಿರಬಹುದಾಗಿ ಸಂದೇಹಪಟ್ಟು ಆಂಜನೇಯನನ್ನು ಅವರುಗಳ ಬಳಿಗೆ ಕಳುಹಿಸುತ್ತಾನೆ. ವಟುವಿನ ವೇಷದಿಂದ ಹನುಮಂತನು ರಾಮನಲ್ಲಿಗೆ ಹೋಗಿ, ನಿಷ್ಕಪಟ, ಸರಳಭಾವದಿಂದ ಮಾತನಾಡುತ್ತಾನೆ. ಸಂತಸಗೊಂಡ ಶ್ರೀರಾಮನು ತಾನೇ ನೇರವಾಗಿ ಮಾತ ನಾಡದೇ ಸಹೋದರನಾದ ಲಕ್ಷ್ಮಣನಿಗೆ ಆತನ ಬಗೆಗೆ ತಿಳಿಯಲು ಆದೇಶ ನೀಡುತ್ತಾನೆ. ಹನುಮಂತ ಹಾಗೂ ಲಕ್ಷ್ಮಣರಿಬ್ಬರ ಸಂಭಾಷಣೆ ನಡೆಯುತ್ತದೆ. ಇದು ಬಹುಸುಂದರವಾದ ಸಂಭಾಷಣೆ. ಲಕ್ಷ್ಮಣನು ತನ್ನ ಪರಿಚಯ ಮಾಡಿಕೊಡುತ್ತಾ ತನ್ನನ್ನು ರಾಮನ ದಾಸ ಎಂದು ಹೇಳಿಕೊಳ್ಳುತ್ತಾನೆ. ರಾಮನಿಗೆ ಉನ್ನತಸ್ಥಾನ ಕೊಡುತ್ತಾನೆ. ರಾಮನ ದೃಷ್ಟಿಯಲ್ಲಿ ನಾನು ಶ್ರೀರಾಮನ ತಮ್ಮ. ನನ್ನ ದೃಷ್ಟಿಯಲ್ಲಿ ಶ್ರೀರಾಮನ ದಾಸ ನಾನು. ಇದು ಲಕ್ಷ್ಮಣನ ಒಂದು ಆದರ್ಶ. ನಂತರ ಆಂಜನೇಯನ ವ್ಯಕ್ತಿತ್ವವನ್ನು ತಿಳಿಯು ತ್ತಾನೆ. ಹನುಮಂತನು

ಅವರಿಬ್ಬರನ್ನೂ ತನ್ನ ಹೆಗಲ ಮೇಲೆ ಕೂರಿಸಿಕೊಂಡು ಸುಗ್ರೀವನ ಬಳಿಗೆ ಹೋಗುತ್ತಾನೆ. ರಾಮ ಮತ್ತು ಸುಗ್ರೀವರು ಸಖ್ಯಮಾಡಿ ಕೊಳ್ಳಲು ತೊಡಗುತ್ತಾರೆ. ಸುಗ್ರೀವನು ಸಖ್ಯದ ಮರ್ಯಾದೆಯನ್ನು ಕಾಪಾಡಿಕೊಳ್ಳಲು ಅಪೇಕ್ಷಿಸುತ್ತಾನೆ. ಮರ್ಯಾದೆ ಎಂದರೆ ಸ್ವಾಮಿತ್ವ ಹಾಗೂ ದಾಸತ್ವ. ಶ್ರೀರಾಮನು ಸ್ವಾಮೀ, ಸುಗ್ರೀವನು ದಾಸ. ನಿನ್ನ ಸ್ವಾಮಿತ್ವವೂ ನನ್ನ ದಾಸತ್ವವೂ ಉಳಿಯಬೇಕೆಂದು ಸುಗ್ರೀವನು ಶ್ರೀರಾಮನನ್ನು ಪ್ರಾರ್ಥಿಸಿ ಕೊಳ್ಳುತ್ತಾನೆ. ಹನುಮಂತನ ಪಾತ್ರವಂತೂ ರಾಮಾಯಣದಲ್ಲಿ ವಿಶೇಷ ಮಹತ್ತ್ವವುಳ್ಳದ್ದು. ರಾಮನಿಲ್ಲದೇ ಹನುಮಂತನಿಲ್ಲ. ಹನುಮಂತನಿಲ್ಲದೇ ರಾಮನಿಲ್ಲ. ಇಲ್ಲಿ ಹನುಮಂತನು ರಾಮನಿಗೂ ಸುಗ್ರೀವನಿಗೂ ಸೇತುವೆ ಯಂತೆ ಆಗುತ್ತಾನೆ. ಇಂತಹ ಮಹತ್ತರ ಪಾತ್ರವನ್ನು ವಹಿಸುವ, ಸುಂದರ ಆದರ್ಶಗಳನ್ನು ಹೊಂದಿರುವ ಹನುಮಂತನ ವ್ಯಕ್ತಿತ್ವವನ್ನು ನಾವು ಕಿಷ್ಕಿಂಧಾ ಕಾಂಡದಲ್ಲಿ ಕಾಣಬಹುದು. ಇಂದಿನ ಸಂಸ್ಕಾರರಹಿತಸಮಾಜದ ಜನರಿಗಂತೂ ರಾಮಾಯಣ ಅತ್ಯಗತ್ಯ. ಯಾವ ರೀತಿ ಶರೀರವನ್ನು ಬೆಳೆಸಲು ನಾವು ಪೌಷ್ಟಿಕವಾದ ಆಹಾರವನ್ನು ತೆಗೆದುಕೊಳ್ಳುತ್ತೇವೆಯೋ–ಅದೇ ರೀತಿ ಮನಸ್ಸಿಗೆ ಪೌಷ್ಟಿಕಚಿಂತನೆಯನ್ನು ಕೊಡುವುದು ಅಗತ್ಯ. ರಾಮಾಯಣ, ಮಹಾಭಾರತ, ಭಾಗವತಗಳೇ ಮೊದಲಾದ ಅನೇಕ ಶ್ರೇಷ್ಠಗ್ರಂಥಗಳು ಭಾರತದಲ್ಲಿವೆ. ನಾವು ಶಾಂತಿಯನ್ನು ಹೊರಗಡೆ ಹುಡುಕಬಾರದು. ಅದು ನಮ್ಮೊಳಗೇ ಅಡಗಿದೆ. ನಾವು ನಮ್ಮ ದುರಹಂಕಾರದಿಂದ ದುರ್ಮಾರ್ಗಿಗಳಾಗಿ ಅಸಭ್ಯವಾಗಿ ವರ್ತಿಸುತ್ತಾ ಆ ಶಾಂತಿಯನ್ನು ಅರಿಯಲು ಅಸಮರ್ಥರಾಗಿದ್ದೇವೆ. ಅದಕ್ಕೆ ನಾವೇ ಕಾರಣ. ಈ ಪವಿತ್ರಗ್ರಂಥವನ್ನು ಓದಿದರೆ ನಮ್ಮ ಮನಸ್ಸಿಗೆ ಶಾಂತಿ ದೊರೆಯುತ್ತೆ. ಇಂದು ಈ ಪವಿತ್ರಗ್ರಂಥವನ್ನು ಹೊರ ತಂದಿದ್ದಾರೆ. ನೀವುಗಳೆಲ್ಲರೂ ಶ್ರದ್ಧಾ-ಭಕ್ತಿಗಳಿಂದ ಈ ಸಮಾರಂಭದಲ್ಲಿ ಭಾಗವಹಿಸಿದ್ದೀರಿ. ನಿಮಗೆಲ್ಲರಿಗೂ ಶ್ರೀರಾಮಚಂದ್ರನು ಸಕಲಸನ್ಮಂಗಳಗಳನ್ನೂ ಉಂಟುಮಾಡಲಿ”–ಎಂದು ಆಶೀರ್ವದಿಸಿದರು. ಅನಂತರ ತೀರ್ಥ ಹಳ್ಳಿಯ ಶ್ರೀರಾಮಚಂದ್ರಾಪುರ ಮಠದ ಶ್ರೀ ಶ್ರೀ ರಾಘವೇಂದ್ರಭಾರತೀ ಸ್ವಾಮೀಜೀಯವರು ಅನುಗ್ರಹಿಸಿದ್ದ ಸುವರ್ಣಮಂತ್ರಾಕ್ಷತೆಯನ್ನು ಶ್ರೀ ಶ್ರೀ ಚಿದಾನಂದಸ್ವಾಮೀಜೀಯವರು ಸಂಪಾದಕಮಂಡಲಿಯ ವಿದ್ವಾಂಸರಿಗೆ

ಅನುಗ್ರಹಿಸಿದರು. ಶ್ರೀ ಟಿ. ಎನ್. ಪ್ರಭಾಕರ್‌ರವರ ವಂದನಾರ್ಪಣೆಯ ನಂತರ ಸಾಮೂಹಿಕಶಾಂತಿಪಾಠದೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು.

ಸಂಪಾದಕಮಂಡಲಿಯ ವಿದ್ವಾಂಸರು ಹಿಂದಿನಂತೆಯೇ ಹರ್ಷೋತ್ಸಾಹಗಳಿಂದ ಗ್ರಂಥವನ್ನು ಸಂಪಾದಿಸಿಕೊಡುತ್ತಿದ್ದಾರೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕವಂದನೆಗಳು. ಪ್ರಕಾಶನಸಮಿತಿಯ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದದೇಶಿಕಾಚಾರ್ಯರ ದೇಹಾರೋಗ್ಯವು ಪರಮಾತ್ಮನ ದಯೆಯಿಂದ ಸುಧಾರಿಸಿದೆ. ಆದರೆ ಪ್ರಮುಖಸಂಪಾದಕರಾದ ವಿದ್ವಾನ್ ಹೆಚ್. ಎನ್. ರಂಗಸ್ವಾಮಿಯವರ ದೇಹಾರೋಗ್ಯವು ಸ್ವಲ್ಪ ವಿಷಮಿಸಿದೆ. ಪರಮಾತ್ಮನ ದಯೆಯಿಂದ ಅವರ ದೇಹಾರೋಗ್ಯವು ಬೇಗ ಸುಧಾರಿಸಿ ಈ ಮಹಾಕಾರ್ಯಕ್ಕೆ ಅವರ ನೆರವು ನಿರಂತರವಾಗಿ ಲಭಿಸಲೆಂದು ನಾವೆಲ್ಲರೂ ಪರಮಾತ್ಮನನ್ನು ಪ್ರಾರ್ಥಿಸೋಣ.

ಈ ಏಳನೆಯ ಸಂಪುಟಕ್ಕೆ ಪ್ರಕಾಶನಸಮಿತಿಯ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯರು ವೈದುಷ್ಯಪೂರ್ಣವಾದ ಮುನ್ನಡಿಯನ್ನು ಬರೆದುಕೊಟ್ಟು ಅನುಗ್ರಹಿಸಿರುತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ಎಲೆಯ ಮರೆಯ ಕಾಯಿಯಂತೆ ತೆರೆಯ ಮರೆಯಲ್ಲಿ ಮಹಾಭಾರತ-ರಾಮಾಯಣಗಳನ್ನು ಪ್ರಚಾರಮಾಡುತ್ತಾ ನೆರವು ನೀಡುತ್ತಿರುವ ಎಲ್ಲ ಕರ್ಮಯೋಗಿಗಳಿಗೂ ಹೃತ್ಪೂರ್ವಕ ವಂದನೆಗಳನ್ನು ಸಮರ್ಪಿಸಿ ಎಂಟನೆಯ ಸಂಪುಟವು ನಿರ್ವಿಘ್ನವಾಗಿ ಹೊರಬರುವಂತೆ ಎಲ್ಲ ಗ್ರಾಹಕರೂ ಪರಮಾತ್ಮನನ್ನು ಪ್ರಾರ್ಥಿಸಬೇಕೆಂಬ ಕಳಕಳಿಯ ಪ್ರಾರ್ಥನೆಯೊಡನೆ ವಿರಮಿಸುವೆವು.

—ಪ್ರಕಾಶಕರು.

ಶ್ರೀಃ

# ಮುನ್ನುಡಿ

**ಶ್ರೀರಂಗೇ ಶೋಭತೇ ಯಸ್ಯ ಶ್ರೀರಂಗೇ ಶೋಭತೇ ಚ ಯಃ ।**
**ನಮೋಽಹಂ ಕಲಯೇ ತಸ್ಮೈ ನ ಮೋಹಂ ಕಲಯೇ ತತಃ ॥**

ಇದು ಸತ್ಯ-ಶಿವ-ಸೌಂದರ್ಯಗಳ ಸಾಕ್ಷಾತ್ಕಾರದಿಂದ ಸಂಪನ್ನನಾಗಿದ್ದ ಮಹರ್ಷಿ-ಕವಿಬ್ರಹ್ಮ-ವಾಲ್ಮೀಕಿಭಗವಂತನು ರಚಿಸಿದ ಕಾವ್ಯ ; ಆದಿಕಾವ್ಯ ; ಆದರ್ಶಕಾವ್ಯ ; ಆಕರಕಾವ್ಯ ; ಚಿರಪುರಾತನವಾಗಿದ್ದರೂ ನಿತ್ಯನೂತನವೇ ಆಗಿರುವ ಕಮನೀಯಕಾವ್ಯ ; ಸಾತ್ತ್ವಿಕರಿಗೆ ಪ್ರಿಯವಾಗಿರುವ ಆಹಾರದಂತೆ ರಸ್ಯವಾಗಿ, ಸ್ನಿಗ್ಧವಾಗಿ, ಸ್ಥಿರವಾಗಿ, ಹೃದ್ಯವಾಗಿರುವ ಕಾವ್ಯ ; ಸನಾತನ ಆರ್ಯ ಭಾರತೀಯಸಂಸ್ಕೃತಿಯ ಶ್ರೀಕೋಶವಾಗಿರುವ ಕಾವ್ಯ ; ವೇದದ ಅವತಾರ ವಾಗಿ ಗಾಯತ್ರಿಯ ಸಾರವಾಗಿ ವೇದವೇದ್ಯನೂ ಗಾಯತ್ರೀಪ್ರತಿಪಾದ್ಯನೂ ಆಗಿರುವ ಪರಬ್ರಹ್ಮಪುರುಷೋತ್ತಮ ಶ್ರೀರಾಮಚಂದ್ರಪ್ರಭುವಿನ ಶಬ್ದರೂಪ ಮೂರ್ತಿಯಾಗಿರುವ ಕಾವ್ಯ ; ಧರ್ಮಚೈತನ್ಯವಾಗಿರುವ ಕಾವ್ಯ ; ಚತುರ್ಭದ್ರ ಗಳನ್ನೂ ಪ್ರತಿಪಾದಿಸುವ ಕಲ್ಪತರುಕಾವ್ಯ ; ಸತ್ಯಲೋಕದ ಸ್ವಾಮಿಯ ಅನುಗ್ರಹಪೂರ್ವಕ ಸಂದೇಶದಂತೆ ಅಸತ್ಯದ ಸೋಂಕೇ ಇಲ್ಲದ ಮಾತು ಗಳಿಂದ ರಚಿತವಾಗಿ ಸತ್ಯಜ್ಞಾನಾನಂತಸ್ವರೂಪಿಯೂ, ಸತ್ಯಶೀಲ-ಸತ್ಯಸಂಧ-ಸತ್ಯಪರಾಕ್ರಮಿಯೂ ಆಗಿರುವ ಸಕಲಲೋಕಸಾರ್ವಭೌಮನು ತನ್ನ ಸಭೆಯಲ್ಲಿ—"ಇದು ನನಗೂ ಭೂತಿಯನ್ನುಂಟುಮಾಡುವ ಚರಿತ್ರೆ"—ಎಂದು ಅಭಿನಂದನೆ ಮಾಡಿದ ಅದ್ವಿತೀಯ ಕಾವ್ಯ ; ಅಮೂಲ್ಯಕಾವ್ಯ ; ಅಮರಕಾವ್ಯ. ಕಾವ್ಯವಾಗಿ, ಕಥೆಯಾಗಿ, ನೀತಿಗ್ರಂಥವಾಗಿ, ಧರ್ಮಗ್ರಂಥವಾಗಿ, ಅಧ್ಯಾತ್ಮ ಗ್ರಂಥವಾಗಿ ಎಲ್ಲ ದೃಷ್ಟಿಗಳಿಂದಲೂ ಅಗ್ಗಳಿಕೆ ಪಡೆದಿರುವ ಕೃತಿರತ್ನ, ಭಾರತ ಜನತೆಯ ರಾಷ್ಟ್ರಕಾವ್ಯ—ಇತ್ಯಾದಿ ಸತ್ಯಪ್ರಶಂಸೆಗೆ ವಿಷಯವಾಗಿರುವ ಮೇರು ಕೃತಿ ವಾಲ್ಮೀಕಿಯ ಶ್ರೀಮದ್ರಾಮಾಯಣ.* ಜನಾರ್ದನನಿಗೆ ಪ್ರಿಯತಮ

---

* 'ಆದಿಕಾವ್ಯಮಿದಂ ಪ್ರೋಕ್ತಂ ಪುರಾ ವಾಲ್ಮೀಕಿನಾ ಕೃತಂ' 'ಪರಂ ಕವೀನಾ ಮಾಧಾರಂ ಸಮಾಪ್ತಂ ಚ ಯಥಾಕ್ರಮಂ' 'ತಿಣುಕಿದನು ಫಣಿರಾಯ ರಾಮಾ ಯಣದ ಗಡಣದ ಭಾರದಲಿ' 'ಕಾಮಾರ್ಥಗುಣಸಂಯುಕ್ತಂ ಧರ್ಮಾರ್ಥಗುಣ ವಿಸ್ತರಂ' 'ಸಮುದ್ರಮಿವ ರತ್ನಾಢ್ಯಂ ಸರ್ವಶ್ರುತಿಮನೋಹರಂ', 'ರಾಮಾಯಣಂ ವೇದಸಮಂ ಪವಿತ್ರಂ' 'ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಂಮಿತಂ'

ವಾಗಿರುವ ಅತ್ಯಂತಪ್ರಿಯವಾಗಿ ಪಾಪಭಂಜಕ ಮತ್ತು ಲೋಕರಂಜಕ ಆಗಿರುವ ಸಮಾಭ್ಯಧಿಕರಹಿತವಾದ ಕಾವ್ಯ. ಭಾರತೀಯರ ಸಂಸ್ಕೃತಿ, ಸಮಾಜ, ರಾಜಕೀಯ, ಧರ್ಮ ಮುಂತಾದ ಜೀವನದ ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸಿ ಪ್ರಭಾವ ಬೀರಿರುವ ಮಹಾಮಹಿಮೆಯ ಗ್ರಂಥ ವೆಂದರೆ (ಮಹಾಭಾರತವನ್ನು ಬಿಟ್ಟರೆ) ಇದೊಂದೇ.

ಭಾವಕ್ಕೆ ತಕ್ಕ ಭಾಷೆ, ರಸಧ್ವನಿ, ರೀತಿ ಗುಣ, ಅಲಂಕಾರ, ಪಾತ್ರ ಪೋಷಣೆ, ಮನೋವಿಶ್ಲೇಷಣೆ, ಲೋಕಚಿತ್ರಣ, ಸಂದೇಶಘೋಷಣೆ– ಮುಂತಾದ ಎಲ್ಲ ಕಾವ್ಯಗುಣಸಂಪತ್ತಿನಿಂದಲೂ ಕಳಕಳಿಸುತ್ತಿರುವ ಈ ಕಾವ್ಯ ರತ್ನದಲ್ಲಿ ಇನ್ನೂ ಕೆಲವು ವಿಶೇಷಗಳು ರಾರಾಜಿಸುತ್ತಿವೆ. ಅವುಗಳನ್ನು ನಮ್ಮ ಗಮನಕ್ಕೆ ತಂದ ಮಹಾನುಭಾವರು ಅಷ್ಟಾಂಗಯೋಗವಿಜ್ಞಾನಮಂದಿರದ ಶ್ರೀರಂಗಮಹಾಗುರುಗಳು. ಅವರು ನಮಗೆ ಮನವರಿಕೆಮಾಡಿಕೊಟ್ಟ ವಿಶೇಷಗಳಲ್ಲಿ ಇವು ಕೆಲವು :

1) ಕುಶಲೆಯಾದ ಗೃಹಿಣಿಯು ಉಪ್ಪು, ಹುಳಿ, ಖಾರ, ಸಿಹಿ, ಕಹಿ, ಒಗರು–ಎಂಬ ಷಡ್ರಸಗಳನ್ನು ಸರಿಯಾದ ಪ್ರಮಾಣದಲ್ಲಿ ಸೇರಿಸಿ ನಾಲಿಗೆಗೂ ರುಚಿಯಾಗಿ, ಆರೋಗ್ಯಕ್ಕೂ ಹಿತವಾಗಿ, ಭಗವದರ್ಪಿತವಾಗಿ, ಯೋಗ-ಭೋಗಗಳೆರಡಕ್ಕೂ ಪೋಷಕವಾಗುವ ಅಡಿಗೆಯ ಔತಣವನ್ನು ಉಣಬಡಿಸುತ್ತಾಳಲ್ಲವೇ? (ಇದು ಸಂಸಾರದ ವಿಷಯವಾಯಿತು.) ಅಂತೆಯೇ ಮಹರ್ಷಿ-ಕವಿ ವಾಲ್ಮೀಕಿಯು ಶೃಂಗಾರ-ವೀರ-ಕರುಣಾದಿ ನವರಸಗಳನ್ನು

---

'ಗಾಯತ್ರೀಮಂತ್ರವಿಸ್ತಾರಂ' 'ವೇದೋಪಬೃಂಹಣಾರ್ಥಾಯ ತಾವಗ್ರಾಹಯತ ಪ್ರಭುಃ' 'ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ । ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ ॥' 'ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ । ಆದಾವಂತೇ ಚ ಮಧ್ಯೇ ಚ ಹರಿಃ ಸರ್ವತ್ರ ಗೀಯತೇ ॥' 'ಮಮಾಪಿ ತದ್ ಭೂತಿಕರಂ ಪ್ರಚಕ್ಷತೇ' 'ಯಾವತ್ ಸ್ಥಾಸ್ಯನ್ತಿ ಗಿರಯಃ ಸರಿತಶ್ಚ ಮಹೀತಲೇ । ತಾವದ್ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ ॥' 'ಜನ್ಮವ್ಯಾಧಿಜರಾವಿಪತ್ತಿ ಮರಣೈರತ್ಯನ್ತಸೋಽಪದ್ರವಂ । ಸಂಸಾರಂ ಸ ವಿಹಾಯ ಗಚ್ಛತಿ ಪುಮಾನ್ ವಿಷ್ಣೋಃ ಪದಂ ಶಾಶ್ವತಂ' 'ಆಯುಷ್ಯಮಾರೋಗ್ಯಕರಂ ಯಶಸ್ಯಂ ಸೌಭ್ರಾತೃಕಂ ಬುದ್ಧಿಕರಂ ಶುಭಂ ಚ' 'ಏವಮೇತತ್ಪುರಾವೃತ್ತಮಾಖ್ಯಾನಂ ಭದ್ರಮಸ್ತು ವಃ'.

ಪ್ರಮಾಣದಲ್ಲಿ ಸಂಯೋಜನೆಮಾಡಿ ಮನೋಬುದ್ಧಿಗಳ ರಂಜನೆ ಮತ್ತು ಆತ್ಮೋದ್ಧಾರ–ಇವೆರಡಕ್ಕೂ ಪೋಷಕವಾಗುವ ಭಗವದರ್ಪಿತ ಸಾಹಿತ್ಯ ರೂಪದ ಕಾವ್ಯದ ಸಂತರ್ಪಣೆಯನ್ನು ಈ ಶ್ರೀಮದ್ರಾಮಾಯಣದ ಮೂಲಕ ಮಾಡಿಸಿದ್ದಾನೆ.

2) ಈ ಕಾವ್ಯದ ನಾಯಕನು ನರ-ನಾರಾಯಣ, ಸ್ಥೂಲದೃಷ್ಟಿಗೆ ಮನುಷ್ಯ, ಸೂಕ್ಷ್ಮದೃಷ್ಟಿಗೆ ದೇವತೆ ಮತ್ತು ಪರಾದೃಷ್ಟಿಗೆ ಪರಂಜ್ಯೋತಿ. ನಾರಾಯಣನನ್ನು ನರನನ್ನಾಗಿ ಧರೆಗೆ ಇಳಿಸಿ ಆತನ ಮಾರ್ಗದಲ್ಲಿ ನರನನ್ನು ಆ ನಾರಾಯಣನ ಪದಕ್ಕೆ ಒಯ್ಯುವುದಕ್ಕೆ ರಚಿತವಾದ ಧರ್ಮಸೇತುವಾಗಿದೆ ಈ ಶ್ರೀಮದ್ರಾಮಾಯಣ ಶ್ರೀಕೋಶ.

3) ಇದರ ನಾಯಕನು ಮಂಗಲದೇವತೆಗೂ ಮಾಂಗಲ್ಯವಾಗಿರುವ ಮಹಾವಿಷ್ಣು. ನಾಯಕಿಯು ಸ್ವಯಂ ಮಂಗಲದೇವತೆಯಾಗಿರುವ ಸೀತಾ ರೂಪಿಣಿಯಾದ ಶ್ರೀಮಹಾಲಕ್ಷ್ಮಿ. ಆಚಾರ್ಯಶ್ರೇಷ್ಠರಾದ ಶಂಕರರು, ರಾಮಾನುಜರು, ಆನಂದತೀರ್ಥರು ಮುಂತಾದವರ, ಯೋಗಾಚಾರ್ಯರು, ಸಂಗೀತಾಚಾರ್ಯರು, ಜ್ಞಾನಿಗಳು, ಭಕ್ತರು, ಸಾಧುಗಳು, ದಾಸವರೇಣ್ಯರು ಮುಂತಾದವರ ಹೃದಯವನ್ನು ಸೂರೆಗೊಂಡಿರುವ ದಿವ್ಯ ದಂಪತಿಗಳು ಇವರು. ಇವರು ದೇವಕಾರ್ಯನಿರ್ವಹಣೆಗೋಸ್ಕರ ಅವತರಿಸಿದ ತಮ್ಮ ಪರಿವಾರವಾದ ಲಕ್ಷ್ಮಣ, ಭರತ, ಶತ್ರುಘ್ನ, ಮಾರುತಿ, ಸುಗ್ರೀವ, ವಿಭೀಷಣ ಮುಂತಾದ ಮಹಾತ್ಮರೊಡನೆ ಸಹಜಸುಂದರತೆಯಿಂದ ಇಲ್ಲಿ ಚಿತ್ರಿತರಾಗಿದ್ದಾರೆ.

4) ಈ ಕಾವ್ಯವು ದೈವ ಮತ್ತು ಆಸುರಶಕ್ತಿಗಳನ್ನು, ನರ-ವಾನರ ಮತ್ತು ರಾಕ್ಷಸರ ರೂಪದಲ್ಲಿ ಅವತಾರಮಾಡಿಸಿ, ಅವರ ಹೋರಾಟವನ್ನು ಚಿತ್ರಿಸಿ ಅಂತ್ಯದಲ್ಲಿ ಧರ್ಮದುಂದುಭಿಯ ನಿನಾದಲಹರಿಯನ್ನು ತುಂಬಿ ರಸ ತನ್ಮಯತೆಯನ್ನು ಉಂಟುಮಾಡುತ್ತದೆ.

5) ಇಲ್ಲಿ ಅನಾದರ್ಶಪಾತ್ರಗಳ ಹಿನ್ನೆಲೆಯಲ್ಲಿ ಭಾಗಶಃ ಆದರ್ಶವಾದ ಮತ್ತು ಪೂರ್ಣವಾಗಿ ಆದರ್ಶವಾದ ಪಾತ್ರಗಳನ್ನು ಚಿತ್ರಿಸಿ, ಜೀವನದ ಮಹಾಮೌಲ್ಯಗಳು ಮನಸ್ಸಿನಲ್ಲಿ ಪ್ರಭಾವಪೂರ್ಣವಾಗಿ ಮುದ್ರಿತವಾಗುವಂತೆ ಮಾಡಲಾಗಿದೆ.

ಈ ವಿಶೇಷಗಳಲ್ಲಿ ಕೆಲವು ಮಹಾಭಾರತದಲ್ಲಿಯೂ ಇದ್ದರೂ ಕಾವ್ಯಗುಣ ಸಂಪತ್ತಿನ ದೃಷ್ಟಿಯಿಂದ ಶ್ರೀಮದ್ರಾಮಾಯಣವು ಮಹಾಭಾರತ ಕ್ಕಿಂತಲೂ ಹೆಚ್ಚು ರಮಣೀಯವಾಗಿದೆ.

ಇಂತಹ ಶ್ರೀಮದ್ರಾಮಾಯಣಮಹಾವೃಕ್ಷದ ಒಂದು ವಿಶಿಷ್ಟಕಾಂಡ ವಾದ ಸುಂದರಕಾಂಡದ ಕನ್ನಡ ಭಾವಾನುವಾದವನ್ನೂ ಮತ್ತು ಯುದ್ಧ ಕಾಂಡದ ಪ್ರಾರಂಭಭಾಗವನ್ನೂ ಒಳಗೊಂಡಿರುವ ಸಂಪುಟ ಈ ಪುಸ್ತಕ. ಇವುಗಳಲ್ಲಿ ಸುಂದರಕಾಂಡದ ಶೀರ್ಷಿಕೆ ಮತ್ತು ವಿಷಯವನ್ನು ಈ ಕೆಳಗೆ ಸ್ವಲ್ಪ ವಿಮರ್ಶಿಸುತ್ತೇವೆ.

ಈ ಕಥಾಭಾಗಕ್ಕೆ ಕವಿಪುಂಗವನು ಸುಂದರಕಾಂಡ ಎಂಬ ಶೀರ್ಷಿಕೆ ಯನ್ನೇ ಏಕೆ ಕೊಡಬೇಕಾಗಿತ್ತು? ಈ ಕಾಂಡದಲ್ಲಿ ಲಂಕೆಯಲ್ಲಿ ನಡೆದ ವಿದ್ಯ ಮಾನಗಳೇ ಹೆಚ್ಚಾಗಿವೆ. ಲಂಕೆಯೇ ಹೆಚ್ಚು ಘಟನೆಗಳಿಗೆ ಕೇಂದ್ರವಾಗಿದೆ. ಆದ್ದರಿಂದ ಲಂಕಾಕಾಂಡವೆಂದು ಇದನ್ನು ಏಕೆ ಹೆಸರಿಸಲಿಲ್ಲ? ಕಾಂಡದ ಉದ್ದಕ್ಕೂ ಹನುಮಂತನ ಮಹಾಮಹಿಮೆ ಮತ್ತು ವಿಜಯಪರಂಪರೆಯ ಉಲ್ಲಾಸವನ್ನೇ ಇಲ್ಲಿ ನೋಡುತ್ತೇವೆ. ಆದ್ದರಿಂದ ಹನುಮತ್ಕಾಂಡ ಅಥವಾ ಹನುಮದ್ವಿಜಯಕಾಂಡ ಎಂದೂ ಕರೆಯಬಹುದಾಗಿತ್ತು. ಕೆಲವು ಪುರಾಣ ಗಳು ಹನುಮಂತನ ನಾಮಾಂಕಿತವನ್ನೇ ಈ ಕಥಾಭಾಗಕ್ಕೆ ಕೊಟ್ಟಿವೆ. 'ಶ್ರುತ್ವಾ ತು ಪಂಚಮಂ ಕಾಂಡಂ ಹನುಮದ್ವಿಜಯಾಂಕಿತಮ್' 'ಹನುಮದ್ವಿಜಯಂ ಕಾಂಡಂ ಯಃ ಪಾರಾಯಣಮಾಚರೇತ್ ।' ಕನ್ನಡ ದಲ್ಲಿ ಹನುಮದ್ವಿಲಾಸ ಎಂಬ ಕಾವ್ಯವೇ ರಚಿತವಾಗಿದೆ. ಆದರೆ ವಾಲ್ಮೀಕಿಯು ಹಾಗೆ ಹನುಮಂತನ ಹೆಸರಿನಿಂದಲೂ ಕಥಾಭಾಗವನ್ನು ಅಂಕಿತಮಾಡಿಲ್ಲ. ಸೀತಾದೇವಿಯ ವಿಷಯವು ಹೆಚ್ಚು ಬಂದಿರುವುದರಿಂದ ಸೀತಾಕಾಂಡವೆಂದಾ ದರೂ ಕರೆಯಬಹುದಾಗಿತ್ತು. ಆದರೆ ಕವಿಯು ಹಾಗೂ ಮಾಡಿಲ್ಲ. ಸುಂದರ ಕಾಂಡ ಎಂಬ ಸುಂದರವಾದ ನಾಮಾಂಕಿತವನ್ನೇ ಇದಕ್ಕೆ ಕೊಟ್ಟಿದ್ದಾನೆ.

ಇಡೀ ಶ್ರೀಮದ್ರಾಮಾಯಣವೇ ಸೌಂದರ್ಯರಸದ ಘನೀಭೂತವಾದ ಪುತ್ಥಳಿಯಾಗಿದೆ. ಸಕ್ಕರೆಬೊಂಬೆಯ ಯಾವುದೇ ಒಂದು ಭಾಗವನ್ನು ನಾಲಿಗೆಗೆ ತಗುಲಿಸಿದರೂ ಅದು ಸಿಹಿಯೇ ಆಗಿರುತ್ತದೆ. ಹಾಗೆಯೇ

ರಾಮಾಯಣದ ಯಾವುದೇ ಕಾಂಡವನ್ನು ಮನಸ್ಸು-ಬುದ್ಧಿಗಳು ಮುಟ್ಟಿ ದರೂ ಅಲ್ಲಿ ಸೌಂದರ್ಯವೇ ಸ್ರವಿಸುತ್ತದೆ. ಹೀಗಿರುವಾಗ ಈ ಕಾಂಡವನ್ನು ಮಾತ್ರವೇ ಸುಂದರಕಾಂಡವೆಂದು ವಾಲ್ಮೀಕಿ ಏಕೆ ಹೆಸರಿಸಿದರು? ಎಂದರೆ ಸರ್ವಾವಯವಗಳಲ್ಲೂ ಸುಂದರವಾಗಿರುವ ಶ್ರೀರಾಮಾಯಣವಿಗ್ರಹದಲ್ಲೂ ಈ ವಿಶಿಷ್ಟಭಾಗದ ಸೌಂದರ್ಯ ಅನುಪಮವಾಗಿದೆ.

ಅಂತಹ ಸುಂದರವಾದ ಅಂಶ ಇದರಲ್ಲಿ ಏನಿದೆ? ಎಂದರೆ : ಇದರಲ್ಲಿ ಯಾವ ಅಂಶ ಸುಂದರವಾಗಿಲ್ಲ? ಎಂಬ ಮರುಪ್ರಶ್ನೆಯಿಂದ ಉತ್ತರಿಸ ಬೇಕಾಗುತ್ತದೆ. ಸೌಂದರ್ಯರಾಶಿಯ ನಿಧಿಯೇ ಆಗಿದೆ ಈ ಕಾಂಡ.

**ಸುಂದರೇ ಸುಂದರೋ ರಾಮಃ ಸುಂದರೇ ಸುಂದರಃ ಕಪಿಃ ।**
**ಸುಂದರೇ ಸುಂದರೀ ಸೀತಾ ಸುಂದರೇ ಕಿಂ ನ ಸುಂದರಮ್ ॥**

ಸುಂದರಕಾಂಡ ಎಂಬ ಶಬ್ದವನ್ನು ಎರಡು ರೀತಿಗಳಲ್ಲಿ ಬಿಡಿಸಿ ಅರ್ಥೈಸಬಹುದು. (1) ಸುಂದರನನ್ನು ಪ್ರಧಾನವಾಗಿ ಹೊಂದಿರುವ ಕಾಂಡ. (ಸುಂದರಪ್ರಧಾನಂ ಕಾಂಡಂ) (2) ಸುಂದರವಾಗಿರುವ ಕಾಂಡ. (ಸುಂದರಂ ಚ ತತ್ ಕಾಂಡಂ ಚ) ಮೊದಲನೆಯ ವಿವರಣೆಯ ಪ್ರಕಾರ ಸುಂದರನೇ ಈ ಕಾಂಡದ ಮುಖ್ಯತಮಪಾತ್ರ. ಯಾರು ಆ ಸುಂದರ? ಎಂದರೆ ಕಪಿಮುಖ್ಯನಾದ ಆಂಜನೇಯ ಎಂದು ಉತ್ತರ ದೊರೆಯುತ್ತದೆ. ಸುಂದರ ಶಬ್ದಕ್ಕೆ ಕಪಿಮುಖ್ಯ ಎಂಬ ಅರ್ಥವೂ ಉಂಟೆಂದು ಕೋಶ ಹೇಳುತ್ತದೆ. **'ಸುಂದರಃ ಕಪಿಮುಖ್ಯೇ ಸ್ಯಾತ್ ಕಾಮೇ ಚ ಮಣಿಸೂರ್ಯಯೋಃ ॥'** ಇದಲ್ಲದೇ ಆಂಜನೇಯಸ್ವಾಮಿಯ ಅಷ್ಟೋತ್ತರ ನಾಮಾವಳಿಯಲ್ಲಿ ಸುಂದರ ಎಂಬ ಶಬ್ದ ಪಠಿತವಾಗಿದೆ. '**ದ್ವಿಭುಜಃ ಸುಂದರಃ ಶೂರಃ**' ಆಂಜನೇಯನ ರೂಪ, ಗುಣ, ಶೀಲ, ಕೃತಿ ಎಲ್ಲವೂ ಅತ್ಯಂತಸುಂದರವಾಗಿವೆ. '**ಸುಂದರೇ ಸುಂದರಸ್ಸೋಽಯಮಂಜನಾನನ್ದನೋತ್ಸವಃ** '

ತರುಣಸೂರ್ಯನಂತೆ ತೊಳ-ತೊಳಗಿ ಬೆಳಗುತ್ತಿರುವ ಮುಖಾರ ವಿಂದ–ಏಕಕಾಲದಲ್ಲಿ ಉದಯಿಸಿದ ಚಂದ್ರ-ಸೂರ್ಯರಂತೆಯೂ, ಪರ್ವತ ದಲ್ಲಿರುವ ಅಗ್ನಿಜ್ವಾಲೆಗಳಂತೆಯೂ, ವಿಶಾಲವಾದ ಕಮಲದಳಗಳಂತೆಯೂ

ಹೊಳೆಯುತ್ತಿರುವ ಕಣ್ಣುಗಳು, ತೊಂಡೆಯ ಹಣ್ಣಿನಂತೆ ಕಂಗೊಳಿಸುತ್ತಿರುವ ತುಟಿಗಳು–ಇಡೀ ದೇಹವೇ ಸುಂದರಸ್ವರ್ಣಪರ್ವತದ ಪ್ರತಿರೂಪ–ಹೀಗೆ ಯೋಗಿಗಳ ಒಳ-ಹೊರ ದೃಷ್ಟಿಗಳಿಗೆ ಉತ್ಸವವಾಗುವ ದಿವ್ಯಸೌಂದರ್ಯದ ರಾಶಿ ಆತನ ಶ್ರೀದೇಹ. **'ತರುಣಾರುಣಮುಖಕಮಲಂ ಕರುಣಾರಸಪೂರ-ಪೂರಿತಾಪಾಂಗಂ' 'ಚಕ್ಷುಷೀ ಸಂಪ್ರಕಾಶೇತೇ ಚಂದ್ರಸೂರ್ಯಾವಿವೋದಿತೌ' 'ನಯನೇ ಸಂಪ್ರಕಾಶೇತೇ ಪರ್ವತಸ್ಥಾವಿವಾನಲೌ' 'ಅಂಬುಜದಲವಿಪುಲಲೋಚನೋದಾರಂ' 'ಬಿಂಬಜ್ವಲಿತೋಷ್ಠಮೇಕ-ಮವಲಂಬೇ' 'ಕಾಂಚನಾದ್ರಿಕಮನೀಯ ವಿಗ್ರಹಂ'** ತೋಳುಗಳೆರಡನ್ನೂ ಚಾಚಿಕೊಂಡು ಮಹಾಸಮುದ್ರವನ್ನು ಹಾರುವಾಗಲಂತೂ ಆತನ ಬೃಹದಾಕಾರದ ದೇಹವು ರೆಕ್ಕೆಗಳಿಂದ ಕೂಡಿದ ಮಹಾಪರ್ವತವೇ ಎಂಬಂತೆ ತೋರುತ್ತದೆ. ಸಾಕ್ಷಾತ್ ಗರುಡದೇವರಂತೆಯೇ ಕಾಣುತ್ತದೆ. ಅದೇ ಬೃಹದಾಕಾರ, ಅದೇ ವೇಗ, ಅದೇ ಬಲ. ಬಾಲವೂ ಗರುತ್ಮಂತನು ರಭಸದಿಂದ ಆಕಾಶದಲ್ಲಿ ಒಯ್ಯುತ್ತಿರುವ ಸರ್ಪದಂತೆ ಬಳುಕುತ್ತಿದೆ. **'ಪಕ್ಷವಾನಿವ ಪರ್ವತಃ' 'ದದೃಶೇ ಗರುಡೇನೇವ ಹ್ರಿಯಮಾಣೋ ಮಹೋರಗಃ' 'ಸುಪರ್ಣಮಿವ ಚಾತ್ಮಾನಂ ಮೇನೇ ಸ ಕಪಿಕುಂಜರಃ'. 'ಯತ್ರಾಕೃತಿಸ್ತತ್ರ ಗುಣಃ' 'ಪಾಪವೃತ್ತಯೇ ನ ರೂಪಂ' 'ರೂಪಮೇವಾಸ್ಯ ವ್ಯಾಚಷ್ಟೇ ಮಹಿಮಾನಂ'** ಎಂಬಂತೆ ಆತನ ಗುಣ-ಶೀಲಗಳೂ ಅಷ್ಟೇ ಸುಂದರವಾಗಿವೆ.

ತನ್ನ ಮಾತಿನ ಜಾಣ್ಮೆಯಿಂದ ಪ್ರಥಮಸಂದರ್ಶನದಲ್ಲೇ ಶ್ರೀರಾಮನ ಹೃದಯವನ್ನು ಸೂರೆಗೊಂಡಿದ್ದವನು ಅವನು. ಸೀತಾದೇವಿಗೆ ಶ್ರೀರಾಮನ ಸಮಾಚಾರವನ್ನು ಕೊಟ್ಟು ನಂಬಿಕೆಯನ್ನುಂಟುಮಾಡಿ ಸಮಾಧಾನ ಹೇಳುವಾಗಲೂ, ರಾಕ್ಷಸರಿಗೆ ಸವಾಲು ಹಾಕುವಾಗಲೂ, ರಾಕ್ಷಸರಾಜನಿಗೆ ತಿಳಿವಳಿಕೆ ಮತ್ತು ಎಚ್ಚರಿಕೆಯ ಮಾತುಗಳನ್ನು ಆಡುವಾಗಲೂ, ಶ್ರೀರಾಮನಿಗೆ ಸೀತಾದೇವಿಯ ಸಮಾಚಾರ-ಸಂದೇಶಗಳನ್ನು ಮುಟ್ಟಿಸುವಾಗಲೂ–ಇದೇ ಮಾತಿನ ಪಾಟವವನ್ನು ಅವನಲ್ಲಿ ಕಾಣುತ್ತೇವೆ. ಅವನ ಸ್ಮರಣೆಮಾಡಿದರೂ ಮಾತಿನ ಪಾಟವ ಉಂಟಾಗುತ್ತದೆಯಲ್ಲವೇ? **'ಅಜಾಡ್ಯಂ ವಾಕ್ಪಟುತ್ವಂ ಚ ಹನೂಮತ್ಸ್ಮರಣಾದ್ಭವೇತ್'**

ಅದಟು, ಉತ್ಸಾಹ, ಧೈರ್ಯ, ಸಮಯಸ್ಫೂರ್ತಿ ಮತ್ತು ಪರಾಕ್ರಮ ಗಳಲ್ಲಿ ಆತನಿಗೆ ಸರಿಸಮರಾರು? ಎಂತಹ ವಿಷಮಪರಿಸ್ಥಿತಿಯಲ್ಲೂ ಆತನು ಮನಸ್ಸಿನ ಹತೋಟಿಯನ್ನು ಕಳೆದುಕೊಳ್ಳುವುದಿಲ್ಲ. ನಿರ್ವೇದವು ಮಿತಿ ಮೀರಿ ಬಂದಾಗ ಅದಕ್ಕೆ ಸ್ವಲ್ಪ ಅವಕಾಶಕೊಟ್ಟರೂ ಶೀಘ್ರದಲ್ಲಿ ಅದನ್ನು ಓಡಿಸಿ ಉತ್ಸಾಹದಿಂದ ಕಾರ್ಯತತ್ಪರನಾಗುತ್ತಾನೆ. ಭಯವೆಂಬುದನ್ನೇ ಅರಿಯದ ಕಲಿ ಈ ಮಾರುತಿ. ಸುರಸೆಯೋ, ಸಿಂಹಿಕೆಯೋ, ಲಂಕಿಣಿಯೋ, ರಾಕ್ಷಸರಾಜನ ಸೈನಿಕವೀರರೋ ಅಥವಾ ಸ್ವಯಂ ತ್ರೈಲೋಕ್ಯತಲ್ಲಣನಾದ ರಾವಣನೋ–ಯಾರಾದರೇನು? ಯಾರ ಮುಂದೆಯೂ ಆತ ಎದೆಗುಂದು ವುದಿಲ್ಲ. ಯಾವ ವಿಘ್ನವೂ ಆತನನ್ನು ಹೆಚ್ಚುಕಾಲ ತಡೆಯಲಾರದು. ಯಾರನ್ನು ಬುದ್ಧಿಬಲದಿಂದ ಗೆಲ್ಲಬೇಕು? ಯಾರನ್ನು ದೇಹಬಲದಿಂದ ಜಯಿಸಬೇಕು? ಯಾರನ್ನು ಇವೆರಡರಿಂದಲೂ ಗೆಲ್ಲಬೇಕು? ಎಂಬುದನ್ನು ಶೀಘ್ರವಾಗಿಯೇ ನಿರ್ಣಯಿಸಿ ಕಾರ್ಯಪ್ರವೃತ್ತನಾಗಿ ಜಯಗಳಿಸಿಬಿಡುತ್ತಾನೆ. ಆತನನ್ನು ಯುದ್ಧದಲ್ಲಿ ಎದುರಾಯಿಸಿ ಬದುಕಿಹೋದವನು ಇಂದ್ರಜಿತುವೊಬ್ಬನೇ. ಬ್ರಹ್ಮದೇವರನ್ನು ಗೌರವಿಸುವುದಕ್ಕೋಸ್ಕರ ಅವನ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದರೂ ಅದನ್ನು ರಾವಣನ ಸಂದರ್ಶನಕ್ಕೆ ಸಾಧನವನ್ನಾಗಿ ಉಪಯೋಗಿಸಿಕೊಳ್ಳುತ್ತಾನೆ.

ಹೊರಗಿನ ಶತ್ರುಗಳನ್ನು ಗೆಲ್ಲುವುದರಲ್ಲಿ ಮಾತ್ರವಲ್ಲ, ಒಳಗಿನ ಮಹಾ ಶತ್ರುವಾದ ದುಷ್ಟ ಕಾಮವನ್ನು ಗೆಲ್ಲುವುದರಲ್ಲೂ ಆತನು ಅದ್ವಿತೀಯ- 'ಶಂಬರವೈರಿಶರಾತಿಗಂ' ಭೋಗ-ಭಾಗ್ಯಗಳ ಆಗರವಾಗಿದ್ದ ರಾವಣನ ಅಂತಃಪುರದಲ್ಲಿ ನಾನಾಭಂಗಿಗಳಲ್ಲಿ ನಿದ್ರಿಸುತ್ತಿದ್ದ ಸುಂದರಿಯರ ಸಮೂಹ ವನ್ನು ಕಾರ್ಯವಶದಿಂದ ದಿಟ್ಟಿಸಿದಾಗಲೂ ಆತನ ಮನಸ್ಸಿನಲ್ಲಿ ಕಿಂಚಿತ್ತೂ ವಿಕಾರವುಂಟಾಗುವುದಿಲ್ಲ. ಇದಕ್ಕೆ ಅವನ ಅನುಭವವೇ ಸಾಕ್ಷಿ ಹೇಳು ತ್ತದೆ. **'ನ ತು ಮೇ ಮನಸಾ ಕಿಂಚಿತ್ ವೈಕೃತ್ಯಮುಪಪದ್ಯತೇ' 'ಮನೋ ಹಿ ಹೇತುಃ ಸರ್ವೇಷಾಮಿಂದ್ರಿಯಾಣಾಂ' 'ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಂ'** 'ವಿಕಾರಗೊಳಿಸುವ ಸನ್ನಿವೇಶ-ಸಾಮಗ್ರಿಗಳು ಹೇರಳವಾಗಿದ್ದರೂ ಯಾವನ ಮನಸ್ಸು ವಿಕಾರಕ್ಕೆ ಒಳಗಾಗುವುದಿಲ್ಲವೋ ಆತನೇ ನಿಜವಾಗಿಯೂ ಧೀರ'–ಎನ್ನುತ್ತಾನೆ ನಮ್ಮ ರಾಷ್ಟ್ರಕವಿ ಕಾಳಿದಾಸ.

'ವಿಕಾರಹೇತೌ ಸತಿ ವಿಕ್ರಿಯನ್ತೇ ಯೇಷಾಂ ನ ಚೇತಾಂಸಿ ತ ಏವ ಧೀರಾಃ' 'ಮನಸೋ ನಿರ್ವಿಕಾರತ್ವಂ ಧೈರ್ಯಂ ಸತ್ಸ್ವಪಿ ಹೇತುಷು' ಇಂತಹ ಧೀರರಿಗೆ ಅದ್ಭುತ ಉದಾಹರಣೆ ಭಗವಂತನಾದ ನಾರಾಯಣ ಮುನಿ, ಶ್ರೀ ರುದ್ರದೇವರು ಮತ್ತು ನಮ್ಮ ಈ ಮಾರುತಿ. ಮಾರುತಿಯು ರುದ್ರದೇವರ ಒಂದು ಅಂಶಾವತಾರವೆಂದು ಶಿವಪುರಾಣ ಹೇಳುತ್ತದೆ.

ಆತನು ಮಾಡಿದ ಸಮುದ್ರಲಂಘನ, ಸೀತಾನ್ವೇಷಣವಿಜಯ, ಮಹಾ ಶತ್ರುನಿಬರ್ಹಣ ಮತ್ತು ಲಂಕಾದಹನ–ಇವು ಇತರರಿಗೆ ಊಹಿಸಲೂ ಆಗದ ಕೆಲಸ. ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸುಗಳಿಗೆ ಆಯ ತನನಾದ ಶ್ರೀರಾಮಚಂದ್ರನೇ ಈ ಬಗೆಗೆ ಆತನನ್ನು ಅಭಿನಂದಿಸುತ್ತಾನೆ.

**ಕೃತಂ ಹನುಮತಾ ಕಾರ್ಯಂ ಸುಮಹದ್ಭುವಿ ದುರ್ಲಭಮ್ ।**
**ಮನಸಾಪಿ ಯದನ್ಯೇನ ನ ಶಕ್ಯಂ ಧರಣೀತಲೇ ॥**

ಯುದ್ಧಕಾಂಡ-ಸರ್ಗ ೧

ಸೀತೆಯು ಇರುವ ಜಾಗವನ್ನು ಪತ್ತೆಮಾಡುವುದು ಮತ್ತು ಆಕೆಗೆ ಶ್ರೀರಾಮನ ಸಂದೇಶ-ಅಭಿಜ್ಞಾನಗಳನ್ನು ಮುಟ್ಟಿಸುವುದು ಇಷ್ಟು ಮಾತ್ರ ಅವನು ಮಾಡಿದ್ದರೆ ಅದು ಸಾಮಾನ್ಯದೂತನ ಕಾರ್ಯವಾಗುತ್ತಿತ್ತು. ಆದರೆ ಈತನ ಸಾಧನೆ ಎಷ್ಟು ದೊಡ್ಡದು! ಮೇಲ್ಕಂಡ ಕೆಲಸಗಳ ಜೊತೆಗೆ ಸೀತೆಗೆ ಸಮಾಧಾನ ಹೇಳಿ ಆಕೆಯು ಪ್ರಾಣಧರಿಸುವಂತೆ ಮಾಡುತ್ತಾನೆ. ರಾವಣೇಶ್ವರನ ಮಹಾಸೇನೆಯನ್ನೂ, ಸೇನಾಪತಿಗಳನ್ನೂ ಬಡಿದುಹಾಕಿ ತನ್ನ ಮಹಾಶಕ್ತಿಯ ಪರಿಚಯವನ್ನು ಶತ್ರುಗಳಿಗೆ ಮಾಡಿಕೊಡುತ್ತಾನೆ. ಲಂಕೆಯ ಆಯಕಟ್ಟಿನ ಸ್ಥಾನಗಳನ್ನೂ ಶತ್ರುಗಳ ಬಲಾಬಲವನ್ನೂ ತಾನು ಪರಿಚಯ ಮಾಡಿಕೊಳ್ಳುತ್ತಾನೆ. (ಅರಿವಿನಿಂದ ವಿಭೀಷಣನ ಗೃಹ ಮತ್ತು ಅರಿಯದೇ ಸೀತಾದೇವಿಯು ಇದ್ದ ಸ್ಥಾನಗಳನ್ನು ಬಿಟ್ಟು) ಇಡೀ ಲಂಕಾನಗರಿಯನ್ನು ಅಗ್ನಿದೇವರಿಗೆ ಆಹುತಿ ಕೊಟ್ಟುಬಿಡುತ್ತಾನೆ.

ಇಷ್ಟೆಲ್ಲಾ ಬಲದೋರಿದ ತಾನು ಸುಗ್ರೀವರಾಯನ ಸೇನೆಯಲ್ಲಿ ಒಬ್ಬ ಸಾಧಾರಣ ವಾನರ ; ತನಗಿಂತ ಪರಾಕ್ರಮಿಗಳು ಆ ಸೇನೆಯಲ್ಲಿ ಲಕ್ಷಾಂತರ ಮಂದಿ ಉಂಟು–ಎಂದು ಘೋಷಣೆಮಾಡಿ ಶತ್ರುಗಳ ಗರ್ವವನ್ನು ಮುರಿದು

ಅವರಲ್ಲಿ ಭಯವನ್ನು ತುಂಬಿ, ಮುಂದೆ ನಡೆಯುವ ಯುದ್ಧದಲ್ಲಿ ವಾನರರ ಕೆಲಸವನ್ನು ಸುಲಭಗೊಳಿಸುತ್ತಾನೆ ಮತ್ತು ತನ್ನ ಈ ಎಲ್ಲ ಸಾಧನೆಗಳನ್ನೂ ತನ್ನ ಮಿತ್ರರಲ್ಲೂ ಮತ್ತು ಪ್ರಭುದೇವರಲ್ಲೂ ಅರಿಕೆಮಾಡಿಕೊಂಡು ಅವರಲ್ಲಿ ಆನಂದ-ಉತ್ಸಾಹಗಳನ್ನು ತುಂಬುತ್ತಾನೆ. ಅವನ ಈ ಅದ್ಭುತವಾದ ದೌತ್ಯ ನಿರ್ವಹಣೆಯ ಆದರ್ಶವನ್ನು ಗುಣಜ್ಞನಾದ ಶ್ರೀರಾಮಚಂದ್ರನೇ ಕೊಂಡಾಡುತ್ತಾನೆ.

**ಯೋ ಹಿ ಭೃತ್ಯೋ ನಿಯುಕ್ತಃ ಸನ್ಭರ್ತ್ರಾ ಕರ್ಮಣಿ ದುಷ್ಕರೇ ।**
**ಕುರ್ಯಾತ್ತದನುರೂಪೇಣ ತಮಾಹುಃ ಪುರುಷೋತ್ತಮಮ್ ॥'**

ಯುದ್ಧಕಾಂಡ-ಸರ್ಗ ೧

ಇಷ್ಟೆಲ್ಲಾ ಮಹತ್ಕಾರ್ಯಮಾಡಿದ ತಾನು ಯಾರು? ಎಂದರೆ ರಾಮ ದೇವರ ಒಬ್ಬ ದಾಸ, ಮತ್ತು ಅವನಿಂದ ಪೋಷಿತನಾದ ಸುಗ್ರೀವರಾಜನ ಬಂಟ ಎಂದು ಹೇಳಿಕೊಳ್ಳುವ ಆತನ ವಿನಯಸಂಪತ್ತೂ ಎಷ್ಟು ಸುಂದರ ವಾಗಿದೆ!

**'ದಾಸೋಽಹಂ ಕೋಸಲೇನ್ದ್ರಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।**
**ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ ।**
**ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥'**

ಇಷ್ಟೆಲ್ಲಾ ಗುಣಸಂಪತ್ತುಳ್ಳ ಹನುಮನಲ್ಲಿ ಮಧ್ಯೆ-ಮಧ್ಯೆ ನಿರುತ್ಸಾಹ-ನಿರ್ವೇದಗಳು ಉಂಟಾಗುವುದು ; ಕೋಪವಶನಾಗಿ ಇಡೀ ಲಂಕೆಗೆ ಬೆಂಕಿ ಹಚ್ಚಿದಾಗ ಸೀತಾದೇವಿಯೂ ಸುಟ್ಟುಹೋಗಿದ್ದರೆ ತಾನು ಮೂಲಘಾತಕ್ಕೇ ಕಾರಣನಾದೆನಲ್ಲಾ! ಎಂದು ಪಶ್ಚಾತ್ತಾಪ ಉಂಟಾಗುವುದು ; ಮಂಡೋದರಿ ಯನ್ನು ಸೀತೆಯೆಂದು ಭ್ರಮಿಸಿ ಕಪಿಚಾಪಲ್ಯದ ಚೇಷ್ಟೆಗಳನ್ನು ಮಾಡು ವುದು—ಇತ್ಯಾದಿಗಳೂ ದೋಷಗಳಾಗಿ ಕಾಣದೇ ಆತನ ಸಹಜಸೌಂದರ್ಯ ವನ್ನೇ ಪ್ರಕಟಿಸುತ್ತವೆ.

ಕಪಿಮುಖ್ಯನಾದ ಹನುಮಂತನಲ್ಲಿ ಇಷ್ಟೆಲ್ಲಾ ಬಹಿರಂಗ ಮತ್ತು ಅಂತ ರಂಗಸೌಂದರ್ಯವಿದ್ದರೂ ಆತನ ಪಾತ್ರದ ಸೌಂದರ್ಯ—ಅಷ್ಟರಿಂದಲೇ ಈ ಕಾಂಡಕ್ಕೆ ಸುಂದರಕಾಂಡವೆಂದು ಹೆಸರು ಬಂದಿದೆಯೆಂದು ಹೇಳಲಾಗು ವುದಿಲ್ಲ. ಹನುಮಂತನು ಪ್ರಭುಪ್ರಾಣನಾದ ದಾಸಶ್ರೇಷ್ಠ. ತನ್ನ ಪ್ರಭುವಿನ

ವೃದ್ಧಿಯಲ್ಲೇ ತನ್ನ ವೃದ್ಧಿಯನ್ನು ಕಾಣುವವನು. **'ವವೃಧೇ ರಾಮ- ವೃದ್ಧ್ಯರ್ಥಂ ಸಮುದ್ರ ಇವ ಪರ್ವಸು ।'** ಅವನ ಹೃದಯನಾಯಕನಾಗಿ ಪುರುಷರಿಗೂ ಮೋಹನರೂಪನಾಗಿ ಸುಂದರತಮನಾಗಿರುವ ಶ್ರೀರಾಮನ ಅಪ್ರತಿಮಸೌಂದರ್ಯದ ಭವ್ಯವರ್ಣನೆಯನ್ನೂ ಇಲ್ಲಿ ಕಾಣುತ್ತೇವೆ. ಅವನ ದೇಹಸೌಂದರ್ಯ ಮತ್ತು ಆತ್ಮಸೌಂದರ್ಯ—ಎರಡೂ ಅಪ್ರತಿಮವಾಗಿ ಚಿತ್ರಿತವಾಗಿವೆ. ಮೃತಸಂಜೀವಿನಿಯಾದ ಶ್ರೀರಾಮನ ಕಥೆ ಮರಳಿ-ಮರಳಿ ಇಲ್ಲಿ ವರ್ಣಿತವಾಗಿದೆ. ಅದನ್ನು ಭಕ್ತವರೇಣ್ಯನಾದ ಸುಂದರಕಪಿವೀರ ಆಂಜನೇಯನೇ ಕೀರ್ತನೆಮಾಡುತ್ತಾನೆ. ಅಂತೆಯೇ ಸೌಂದರ್ಯನಿಧಿಯಾದ ಕಥಾನಾಯಕಿ ಸೀತೆಯ ದೇಹಸೌಂದರ್ಯ ಮತ್ತು ಗುಣಶೀಲಗಳ ಸೌಂದರ್ಯವೂ ಸುಂದರವಾಗಿ ಚಿತ್ರಿತವಾಗಿದೆ.

ಅಂತೆಯೇ ಉತ್ಸಾಹ, ಅನುತ್ಸಾಹ, ಆಸೆ, ನಿರಾಸೆ, ಶೋಕ, ಸಂತೋಷ, ಸಂಭ್ರಮ—ಮುಂತಾದ ಬೇರೆ ಬೇರೆ ಸ್ಥಿತಿಗಳಲ್ಲಿ ಶ್ರೀ ಆಂಜನೇಯ, ಶ್ರೀ ಸೀತಾದೇವಿ, ಶ್ರೀರಾಮಚಂದ್ರ ಮುಂತಾದವರ ಮನೋವಿಶ್ಲೇಷಣೆಯೂ ಅತಿಸುಂದರವಾಗಿ ಇಲ್ಲಿ ನಿರೂಪಿತವಾಗಿದೆ.

ಇಂತಹ ಪಾತ್ರವಿವೇಚನೆ ಮಾತ್ರವಲ್ಲದೇ—ರಸ, ಅಲಂಕಾರ, ಗುಣ, ರೀತಿ—ಮುಂತಾದುವುಗಳ ಸೌಂದರ್ಯವೂ ಇಲ್ಲಿ ಅನ್ಯಾದೃಶವಾಗಿದೆ. ಸೀತಾ-ರಾಮರ ಚಿತ್ರಣದಲ್ಲಿ (ವಿಪ್ರಲಂಭ) ಶೃಂಗಾರ, ರಾವಣನ ಚಿತ್ರಣದಲ್ಲಿ ಶೃಂಗಾರದ ಆಭಾಸ, ಆಂಜನೇಯನ ಸಮುದ್ರಲಂಘನಾದಿ ಸಾಹಸಗಳಲ್ಲಿ ವೀರ ಮತ್ತು ಅದ್ಭುತರಸಗಳು, ಸೀತೆಯ ಶೋಚನೀಯಸ್ಥಿತಿಯ ವರ್ಣನೆಯಲ್ಲಿ ಕರುಣರಸ, ಆಂಜನೇಯನ ಕಪಿಚೇಷ್ಟಾದಿಗಳ ವರ್ಣನೆಯಲ್ಲಿ ಹಾಸ್ಯ ರಸ, ಯುದ್ಧವರ್ಣನೆಯಲ್ಲಿ ಭಯಾನಕ-ಬೀಭತ್ಸಾದಿ ರಸಗಳು ಮತ್ತು ಭಕ್ತ ಮಾರುತಿಯು ಮಾಡುವ ದೇವತಾಸ್ತುತಿವಂದನಗಳಲ್ಲಿ ಶಾಂತರಸ—ಹೀಗೆ ನವರಸಗಳೂ ಆಯಾ ಸನ್ನಿವೇಶಗಳಲ್ಲಿ ಯೋಗ್ಯವಾಗಿ ಭಾವಿತವಾಗಿವೆ. ಆದರೆ ಅವುಗಳಲ್ಲಿ ಎದ್ದುಕಾಣುವುದು ಶೃಂಗಾರರಸ. ನಾಯಕ-ನಾಯಕಿ ಯರು ಒಟ್ಟಿಗೆ ಇದ್ದಾಗ ಸಂಭೋಗಶೃಂಗಾರ ಮತ್ತು ಅವರು ಅಗಲಿಕೆಯಲ್ಲಿ ಒಬ್ಬರನ್ನೊಬ್ಬರು ಭಾವಿಸುತ್ತಿ ರುವಾಗ ವಿಪ್ರಲಂಭಶೃಂಗಾರ ಎಂದುಶೃಂಗಾರವು ಎರಡು ಬಗೆಯಾಗಿದೆ. ಅವುಗಳಲ್ಲಿ ವಿಪ್ರಲಂಭವು ಸಂಭೋಗಶೃಂಗಾರಕ್ಕಿಂತಲೂ

ಶ್ರೇಷ್ಠ ಎನ್ನುತ್ತಾರೆ. ಏಕೆಂದರೆ : ಅದರಲ್ಲಿ ನಾಯಕ-ನಾಯಕಿಯರ ಭೌತಿಕವಾದ ಸಂಯೋಗವಿಲ್ಲದೇ ಮಾನಸಿಕವಾದ ಸಂಯೋಗವೇ ಇದ್ದರೂ ಪ್ರೇಮವು ಸ್ಥಿರವಾಗಿ ಹೃದ್ಯವಾಗಿರುತ್ತದೆ ಮತ್ತು ಕಾಲವಿಶೇಷದಲ್ಲಿ ಒದಗುವ ಸಂಭೋಗಶೃಂಗಾರವು ವಿಪ್ರಲಂಭಶೃಂಗಾರದಿಂದಲೇ ಪುಷ್ಟಿಯನ್ನು ಹೊಂದುತ್ತದೆ. 'ನ ವಿನಾ ವಿಪ್ರಲಂಭೇನ ಸಂಭೋಗಃ ಪುಷ್ಟಿಮಶ್ನುತೇ'. ಸೀತಾ-ರಾಮರನ್ನು ಕುರಿತಾಗಿ ಅಂತಹ ವಿಪ್ರಲಂಭಶೃಂಗಾರವು ಅತ್ಯಂತ ಸುಂದರವಾಗಿ ರೂಪಿತವಾಗಿರುವುದು ಈ ಕಾಂಡದಲ್ಲಿ.

ಅತ್ಯಂತಹೃದಯಂಗಮವಾದ ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳು ಇಲ್ಲಿ ಹೇರಳವಾಗಿವೆ.

**'ತತೋ ರಾವಣನೀತಾಯಾಃ ಸೀತಾಯಾಃ ಶತ್ರುಕರ್ಶನಃ ।'**
**'ದುಷ್ಕರಂ ನಿಷ್ಪ್ರತಿದ್ವನ್ದ್ವಂ ಚಿಕೀರ್ಷನ್ಕರ್ಮ ವಾನರಃ ।'**
**ಲೋಕಸ್ಯ ಪಾಪಾನಿ ವಿನಾಶಯನ್ತಂ**
**ಮಹೋದಧಿಂ ಚಾಪಿ ಸಮೇಧಯನ್ತಮ್ ।'**
**'ಹಂಸೋ ಯಥಾ ರಾಜತಪಂಜರಸ್ಥಃ**
**ಸಿಂಹೋ ಯಥಾ ಮನ್ದರಕಂದರಸ್ಥಃ ।'**
**'ವವೃಧೇ ರಾಮವೃದ್ಧ್ಯರ್ಥಂ ಸಮುದ್ರ ಇವ ಪರ್ವಸು ॥'**
**'ಯಥಾ ರಾಘವನಿರ್ಮುಕ್ತಃ ಶರಃ ಶ್ವಸನವಿಕ್ರಮಃ ।**
**ಗಚ್ಛೇತ್ತದ್ವದ್ಗಮಿಷ್ಯಾಮಿ ಲಙ್ಕಾಂ ರಾವಣಪಾಲಿತಾಮ್ ॥'**
**'ತಸ್ಯ ಲಾಙ್ಗೂಲಮಾವಿದ್ಧಮತಿವೇಗಸ್ಯ ಪೃಷ್ಠತಃ ।**
**ದದೃಶೇ ಗರುಡೇನೇವ ಹ್ರಿಯಮಾಣೋ ಮಹೋರಗಃ ॥'**

ಇತ್ಯಾದಿಗಳು ಇದಕ್ಕೆ ಕೆಲವು ಉದಾಹರಣೆಗಳು.

ವಾಲ್ಮೀಕಿಯ ಸರಸಸಾಹಿತ್ಯಕ್ಕೆ ಅನುಗುಣವಾದ ವೈದರ್ಭೀರೀತಿ, ಪ್ರಸಾದಗುಣ ಮತ್ತು ದ್ರಾಕ್ಷಾಪಾಕಗಳನ್ನು ಇಲ್ಲಿ ನಾವು ಆಸ್ವಾದಿಸುತ್ತೇವೆ. **'ತದುಪಗತಸಮಾಸಸಂಧಿಯೋಗಂ ಸಮಮಧುರೋಪನತಾರ್ಥ ವಾಕ್ಯಬದ್ಧಂ'**–ಎಂಬಂತೆ ಪದರಚನೆಯೂ ಅತ್ಯಂತಹೃದ್ಯವಾಗಿದೆ. ಇಲ್ಲಿ ನಿರೂಪಿತವಾಗಿರುವ ಸಮುದ್ರಲಂಘನವರ್ಣನೆ, ಚಂದ್ರೋದಯವರ್ಣನೆ, ಲಂಕಾನಗರೀವರ್ಣನೆ, ಪುಷ್ಪಕವಿಮಾನವರ್ಣನೆ, ಅಂತಃಪುರವರ್ಣನೆ, ಪತಿ

ವಿರಹದೀನಳಾದ ಸತೀಮಣಿ ಸೌಂದರ್ಯನಿಧಿ ಸೀತಾದೇವಿಯ ವರ್ಣನೆ–ಇತ್ಯಾದಿ ಎಲ್ಲ ವರ್ಣನೆಗಳೂ ಅತ್ಯಂತಸುಂದರವಾಗಿವೆ.

ಆಂಜನೇಯನು ಇಲ್ಲಿ ಶ್ರೀರಾಮನ ಸಮಾಚಾರ-ಸಂದೇಶ-ಅಭಿಜ್ಞಾನಗಳನ್ನು ಸೀತಾದೇವಿಗೂ, ಸೀತಾದೇವಿಯ ಸಮಾಚಾರ-ಸಂದೇಶ-ಅಭಿಜ್ಞಾನಗಳನ್ನು ಶ್ರೀರಾಮನಿಗೂ ಮುಟ್ಟಿಸಿ ಅವರಿಗೆ ಮಾನಸಿಕಸಮಾಗಮವನ್ನು ಉಂಟುಮಾಡುವ ಪ್ರಕರಣವಂತೂ ಸುಂದರತಮವಾಗಿದೆ. ಇದು ಅವನ ದೌತ್ಯಸೌಂದರ್ಯದ ಒಂದು ಸೀಮಾಸ್ಥಾನವಾಗಿದೆ.

ಸೀತಾ-ರಾಮರ ಯೋಗವನ್ನು ಉಂಟುಮಾಡುವ ಆಂಜನೇಯ ಸ್ವಾಮಿಯು ಜೀವ-ದೇವರ ಸಂಯೋಗವನ್ನುಂಟುಮಾಡುವ ಸದಾ ಚಾರ್ಯನ ಪ್ರತೀಕವಾಗಿದ್ದಾನೆ. **'ಅದ್ಯತ್ವೇ ಹನುಮತ್ಸಮೇನ ಗುರುಣಾ ಪ್ರಖ್ಯಾಪಿತಾರ್ಥಃ ಪುಮಾನ್ ಲಂಕಾರುದ್ಧವಿದೇಹರಾಜತನಯಾ ನ್ಯಾಯೇನ ಲಾಲಪ್ಯತೇ'** ಇದು ಕಾಂಡದ ಆಧ್ಯಾತ್ಮಿಕಸೌಂದರ್ಯವನ್ನು ಹೆಚ್ಚಿಸುತ್ತದೆಯೆಂದು ಸಂಪ್ರದಾಯಸ್ಥರು ಹೇಳುತ್ತಾರೆ.

ಕಳೆದುಹೋಗಿದ್ದ ಪದಾರ್ಥ ದೊರಕಿದರೆ ಅದಕ್ಕೂ ಪಾರಿಭಾಷಿಕವಾಗಿ ಸುಂದರ ಎಂಬ ಹೆಸರಿದೆ. 'ನಷ್ಟದ್ರವ್ಯಸ್ಯ ಲಾಭೋ ಹಿ ಸುಂದರಃ ಪರಿಕೀರ್ತಿತಃ।' ರಾವಣನಿಂದ ಅಪಹೃತಳಾಗಿದ್ದು ಕಳೆದುಹೋಗಿದ್ದ ಸೀತಾ ದೇವಿಯ ಸಮಾಚಾರವು ದೊರೆತದ್ದು ಈ ಕಾಂಡದ ಮುಖ್ಯವಿಷಯವೆಂದು ಕೆಲವರು ಹೇಳುತ್ತಾರೆ. ಇದು ಸರಿಯೇ? 'ಸುಂದರ ಎಂಬ ಶಬ್ದಕ್ಕೆ ಕಪಿವೀರ ಎಂಬ ಅರ್ಥ ಮತ್ತು ನಷ್ಟವಾಗಿದ್ದ ದ್ರವ್ಯದ ಪುನರ್ಲಾಭ ಎಂಬ ಅರ್ಥಗಳು ಹಿಂದೆ ಇರಲಿಲ್ಲ. ಸುಂದರಕಾಂಡರಾಮಾಯಣದ ಕಥಾರಚನೆ ಆದ ನಂತರ ಆ ಅರ್ಥಗಳು ಅದಕ್ಕೆ ಕೊಡಲ್ಪಟ್ಟುವು'–ಎಂದು ಕೆಲವರು ಹೇಳುತ್ತಾರೆ. ಇದು ಹೇಗಾದರೂ ಇರಲಿ. ಅದಕ್ಕೆ ಆ ಅರ್ಥಗಳು ಬಂದ ಕಾಲ ನಮಗೆ ಮುಖ್ಯವಲ್ಲ. ಅದಕ್ಕೆ ಆ ಅರ್ಥಗಳು ಇವೆ. ಅವು ಪ್ರಕೃತ ವಿಮರ್ಶೆಗೆ ಉಪಯೋಗಿಸಲ್ಪಟ್ಟಿವೆ ಎಂದು ಮಾತ್ರ ನಾವು ಗಮನಿಸಿರುತ್ತೇವೆ.

ಶೀರ್ಷಿಕೆಯಲ್ಲಿರುವ 'ಸುಂದರ' ಶಬ್ದವು ('ಕಟಪಯಾದಿ ಪದ್ಧತಿ' ಎಂಬ ಪಾರಿಭಾಷಿಕಸಂಕೇತದಂತೆ) ಈ ಕಾಂಡದಲ್ಲಿರಬೇಕಾದ ಶ್ಲೋಕಗಳ ಸಂಖ್ಯೆಯನ್ನು (೨೮೦೭) ಸೂಚಿಸುತ್ತದೆಯೆಂಬ ಚಮತ್ಕಾರಪೂರ್ಣವಾದ

ಒಂದು ವ್ಯಾಖ್ಯಾನವಿದೆ. ಈ ಅಭಿಪ್ರಾಯವು ಸ್ವಾರಸ್ಯವಾಗಿದ್ದರೂ ಸರಿಯಾಗಿಲ್ಲ. ಏಕೆಂದರೆ : ಪ್ರಕೃತದಲ್ಲಿ ದೊರೆಯುವ ಶ್ಲೋಕಸಂಖ್ಯೆ ಇದಕ್ಕಿಂತಲೂ ಹೆಚ್ಚಾಗಿದೆ. ಆ ಅಧಿಕಶ್ಲೋಕಗಳನ್ನು ಪ್ರಕ್ಷಿಪ್ತವೆಂದು ಪರಿತ್ಯಜಿಸೋಣ–ಎಂದರೆ ಉಳಿದ ಕಾಂಡಗಳ ಶೀರ್ಷಿಕೆಗಳು ಆಯಾ ಕಾಂಡದ ಶ್ಲೋಕಸಂಖ್ಯೆಯನ್ನು ಮೇಲ್ಕಂಡ ಸೂತ್ರಪದ್ಧತಿಯಿಂದ ಸೂಚಿಸುವುದಿಲ್ಲ.*

ಒಟ್ಟಿನಲ್ಲಿ ನಾನಾರೀತಿಯ ವಿಶೇಷಸೌಂದರ್ಯಗಳ ಸಂಗಮಸ್ಥಾನವಾಗಿರುವುದರಿಂದ ಈ ಕಾಂಡವು 'ಸುಂದರ' ವೆಂಬ ಸಂಕೇತವನ್ನು ಅನ್ವರ್ಥವಾಗಿ ಪಡೆದಿದೆಯೆಂದು ನಾವು ಹೇಳಬಹುದು.

ರಾಮಾಯಣದ ಏಳೂ ಕಾಂಡಗಳ ಪಾರಾಯಣ, ಪಾಠ, ಪ್ರವಚನ, ಅರ್ಥಾನುಸಂಧಾನ, ಶ್ರವಣ, ಪೂಜನಗಳು ಅತ್ಯಂತಪವಿತ್ರವಾದುವು. ಅವುಗಳಲ್ಲಿಯೂ ಸುಂದರಕಾಂಡದ ಅನುಸಂಧಾನವು ವಿಶಿಷ್ಟಸ್ಥಾನವನ್ನು ಪಡೆದಿದೆ. ಇಡೀ ರಾಮಾಯಣದಲ್ಲಿಯೂ ಇದು 'ಬೀಜಕಾಂಡ'. ಇದರ ಪಾರಾಯಣದಿಂದ ಕಾವ್ಯಾನಂದವು ಮಾತ್ರವಲ್ಲದೇ ದುಷ್ಟಸ್ವಪ್ನ, ಗ್ರಹಪೀಡೆ, ವಿಷಮರೋಗ, ಅಗ್ನಿಭಯ ಮುಂತಾದ ಅರಿಷ್ಟಗಳ ಪರಿಹಾರವೂ ಆಗುತ್ತದೆ. ಧರ್ಮಾರ್ಥ-ಕಾಮಗಳು ಸಿದ್ಧಿಸುತ್ತವೆ. ಆಂಜನೇಯದೇವರ ವರಪ್ರಸಾದದಿಂದ ಬ್ರಹ್ಮಲೋಕಪ್ರಾಪ್ತಿಯೂ ಆಗುತ್ತದೆ ಎಂದು ಆಗಮ-ಪುರಾಣಗಳು ಸಾರುತ್ತವೆ.[1] 'ಬೀಜಕಾಂಡಮಿದಂ ಪ್ರೋಕ್ತಂ'

**'ತಸ್ಮಾತ್ಪಾರಾಯಣಂ ಕೃತ್ವಾ ಧನ್ಯೋ ಭವತಿ ತತ್ತ್ವತಃ ।**
**ತ್ರಿವರ್ಗಫಲಕಾಮೇನ ವಿಪದುತ್ತರಣೇಚ್ಛುನಾ ॥**
**ಶಾಂತಿಕರ್ಮಣಿ ಸರ್ವತ್ರ ತಥಾ ದುಃಸ್ವಪ್ನದರ್ಶನೇ ।**
**ಗ್ರಹಪೀಡಾಸು ಚೋಗ್ರಾಸು ರೋಗೇಷು ವಿಷಮೇಷು ಚ ॥**
**ಅರಣ್ಯಪ್ರಾಂತರೇ ಚಾಪಿ ಶಸ್ತ್ರಚೋರಾಗ್ನಿಪೀಡನೇ ।**
**ಸರ್ವಾಪತ್ಸು ಚ ಘೋರೇಷು ನೈತಸ್ಮಾತ್ತಾರಕಂ ಪರಮ್ ।**
**ಆಂಜನೇಯಪ್ರಸಾದೇನ ಬ್ರಹ್ಮಲೋಕಂ ಸ ಗಚ್ಛತಿ ॥'**

---

* ವಿದ್ವಾನ್ ಶ್ರೀ ರಂಗನಾಥಶರ್ಮರ ಶ್ರೀಮದ್ರಾಮಾಯಣಾನುವಾದದ ನಿವೇದನೆ.

1 ಅಗಸ್ತ್ಯಸಂಹಿತಾ ಮತ್ತು ಪಾರಾಶರ್ಯೋಪಪುರಾಣ.

ನಿತ್ಯಪಾರಾಯಣ, ಷೋಡಶಾಹಪಾರಾಯಣ, ಸಪ್ತಸರ್ಗೀಪಾರಾ ಯಣ* ಮುಂತಾದ ನಾನಾಕಲ್ಪಗಳಂತೆ ವಿಧಿಪೂರ್ವಕವಾಗಿ ಭಕ್ತಿ-ಶ್ರದ್ಧೆಗಳಿಂದ ಇದರ ಪಾರಾಯಣಮಾಡಿ ಸಾಧಕರು ಸಿದ್ಧಿಯನ್ನು ಪಡೆಯುತ್ತಾರೆ. ಬರೀ ಪಾರಾಯಣಕ್ಕಿಂತಲೂ ಅರ್ಥಾನುಸಂಧಾನಸಹಿತವಾಗಿ ರಸಾನುಭವ ಮಾಡುತ್ತಾ ಪಾರಾಯಣಮಾಡುವುದು ವಿಶೇಷಲಾಭಕರವೆಂಬುದರಲ್ಲಿ ಸಂಶಯವಿಲ್ಲ. 'ಯದೇವ ವಿದ್ಯಯಾ ಕರೋತಿ ತದೇವ ವೀರ್ಯವತ್ತರಂ ಭವತಿ'. ಈ ಸಂಪುಟವನ್ನಲಂಕರಿಸಿರುವ ಭಾವಾನುವಾದ, ಟಿಪ್ಪಣಿ, ಪರಿಶಿಷ್ಟ ಇತ್ಯಾದಿಗಳು ಈ ಅರ್ಥಗ್ರಹಣ, ಸಂಶಯನಿವಾರಣೆ ಮತ್ತು ರಸಾನುಭೂತಿ ಗಳಿಗೆ ಸಹಾಯಮಾಡಲಿ. ಓದುಗರಿಗೂ ಗ್ರಂಥಪ್ರಕಾಶನ ಸಹಾಯಕರಿಗೂ ಆಂಜನೇಯಪ್ರಭುವಿನ ಪ್ರಸಾದವು ಲಭಿಸಲಿ—ಎಂದು ನಮ್ಮ ಹಾರೈಕೆ.

ಅಷ್ಟಾಂಗಯೋಗವಿಜ್ಞಾನ
ಮಂದಿರಂ, ವಿಭವ-ಪೌಷ-ಶುಕ್ಲ
ಸಪ್ತಮೀ, ಮಕರ ಸಂಕ್ರಾಂತಿ
13.1.1989

**ವರದದೇಶಿಕಾಚಾರ್ಯರಂಗಪ್ರಿಯ**

---

* ನಿತ್ಯಪಾರಾಯಣ: ಪ್ರತಿದಿನದಲ್ಲೂ ಯಥಾಶಕ್ತಿ ಮಾಡುವ ಪಾರಾಯಣ. ಒಂದು ದಿನಕ್ಕೆ ಇಷ್ಟೇ ಸರ್ಗಗಳನ್ನೇ ಪಾರಾಯಣಮಾಡಬೇಕೆಂಬ ನಿಯಮವಿಲ್ಲ. ಸರ್ಗದ ಮಧ್ಯದಲ್ಲಿ ಪಾರಾಯಣವನ್ನು ನಿಲ್ಲಿಸಬಾರದು. 'ತ್ರ್ಯಂಬಕಂ ಯಜಾಮಹೇ' ಎಂಬ ಮಂತ್ರ, 'ಧರ್ಮಾತ್ಮಾ ಸತ್ಯಸಂಧಶ್ಚ' 'ಜಯತ್ಯತಿಬಲೋರಾಮಃ' 'ನ ರಾವಣಸಹಸ್ರಂ ಮೇ' 'ದಾಸೋಽಹಂ ಕೋಸಲೇನ್ದ್ರಸ್ಯ' ಶ್ರೀರಾಮಷಡಕ್ಷರೀಮಂತ್ರ ಇತ್ಯಾದಿಗಳಿಂದ ಸಂಪುಟೀಕರಣಮಾಡಿ ಪಾರಾಯಣಮಾಡುವ ಪದ್ಧತಿಯೂ ಇದೆ.

2) ಷೋಡಶಾಹಪಾರಾಯಣ : ಪ್ರತಿದಿನವೂ ಕ್ರಮವಾಗಿ 2, 4, 4, 4, 8, 1, 5, 5, 7, 6, 1, 6, 2, 4 ಸರ್ಗಗಳನ್ನು ಪಾರಾಯಣಮಾಡುತ್ತಾ ೧೬ ದಿವಸಗಳಲ್ಲಿ ಕಾಂಡದ ೬೮ ಸರ್ಗಗಳನ್ನೂ ಪಾರಾಯಣಮಾಡಿ ಮುಗಿಸುವುದು. 'ರಾಘವೋ ವಿಜಯಂ ದದ್ಯಾತ್ ಮಮ ಸೀತಾಪತಿಃಪ್ರಭುಃ' ಎಂಬುದು ಇದರ ಸೂತ್ರಮಂತ್ರ.

3) ಸಪ್ತಸರ್ಗೀಪಾರಾಯಣ : ಪ್ರತಿದಿನವೂ ಏಳೇಳು ಸರ್ಗಗಳಂತೆ ಪಾರಾಯಣ ಮಾಡಿದರೆ ೬೮ ದಿನಗಳಲ್ಲಿ ೭ ಬಾರಿ ಸುಂದರಕಾಂಡದ ಪಾರಾಯಣದ ಆವರ್ತಿ ಪೂರ್ತಿಯಾಗುತ್ತದೆ. ಹೀಗೆ ಏಳು ಆವರ್ತಿ ಪಾರಾಯಣಮಾಡುವುದು ಮಹಾಸಪ್ತಸರ್ಗೀ ಎನಿಸುತ್ತದೆ.

## ಶ್ರೀಮದ್ವಾಲ್ಮೀಕಿರಾಮಾಯಣ-ಏಳನೆಯ ಸಂಪುಟ
## ಸುಂದರಕಾಂಡದ ವಿಷಯಾನುಕ್ರಮಣಿಕೆ

# ಯುದ್ಧಕಾಂಡ

ಸರ್ಗಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ

(ವಿ. ಸೂ. ಮೊದಲನೆಯದು : ಮೂಲಶ್ಲೋಕಗಳ ಸರ್ಗಗಳ ಪುಟಸಂಖ್ಯೆ-
ಎರಡನೆಯದು : ವಿಷಯಗಳ ಪುಟಸಂಖ್ಯೆ)

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀಮದ್ರಾಮಚಂದ್ರಾಪುರಮಠಸ್ಥ



ಶ್ರೀಮದ್ರಾಘವೇಂದ್ರಭಾರತೀ ಶ್ರೀಸ್ವಾಮಿಭಿಃ

ಅಸ್ಮದತ್ಯಂತ ಪ್ರಿಯಶಿಷ್ಯ ಭಾರತ ದರ್ಶನ ಸಂಪಾದಕ-ಶ್ರೀಯುತ ಕೇಶವ ಸುಬ್ರಹ್ಮಣ್ಯ ಕೌಶಿಕರು, ತ್ಯಾಗರಾಜನಗರ, ಬೆಂಗಳೂರು-ಇವರಿಗೆ

॥ ಶ್ರೀಮನ್ನಾರಾಯಣಸ್ಮರಣಪುರಸ್ಸರಂ ಸಂದಿಷ್ಟೋಽಯಂ ಸಂದೇಶಃ ॥

ಅದಾಗಿ ಶ್ರೀಮನ್ಮಹಾಭಾರತವನ್ನು ಕನ್ನಡಾನುವಾದದ ಸಂಪುಟ ಸಂಪುಟವಾಗಿ ಪ್ರಕಾಶಿಸಿ, ಕನ್ನಡಿಗರಿಗೆ ಮಹತ್ವಪೂರ್ಣ ದೈವಿಕ ಇತಿಹಾಸದ

ವಿಶೇಷ ಕೊಡುಗೆಯನ್ನಿತ್ತಿರುವುದು ಪ್ರಶಂಸಾರ್ಹ ಹಾಗೂ ಶ್ರೀ ಮಹರ್ಷಿ ವಾಲ್ಮೀಕಿವಿರಚಿತ, ಶ್ರೀಮದ್ರಾಮಾಯಣವನ್ನು ಹೊರಡಿಸಲಾರಂಭಿಸಿ, ಇದೀಗ ಏಳನೆಯ ಸಂಪುಟದಲ್ಲಿ ಅತಿಶ್ರೇಷ್ಠವೂ, ಶ್ರೀರಾಮಭಕ್ತ ಆಂಜನೇಯನ ಅದ್ಭುತಶಕ್ತಿಪ್ರದರ್ಶನವೂ, ಶ್ರೀ ಸೀತಾದೇವಿಯ ಶೋಕನಿವಾರಣೆಯ ಸನ್ನಿವೇಶ ವಿವರಣೆಯೊಂದಿಗೆ ಸುಂದರವೂ, ಪಠಿಸುವವರಿಗೆ ಸಹ ಇಷ್ಟಾರ್ಥ ನೀಡುವಂತಹದ್ದೂ ಆದ, ಶ್ರೀಮದ್ರಾಮಾಯಣದ ಶ್ರೀಮತ್ಸುಂದರಕಾಂಡ ವನ್ನು ಪ್ರಕಾಶಿಸಲಿರುವ ಸಂಗತಿ ತಿಳಿದು ಅತೀವ ಸಂತಸವಾಯಿತು.

ಶ್ರೀಮದ್ರಾಮಾಯಣದ ಪ್ರತಿಕಾಂಡದಲ್ಲಿಯೂ, ಹಿರಿಮೆ, ಗರಿಮೆ ತನ್ನದೇ ಆದ ವಿಶೇಷಮಹಿಮೆ ಸಹ ತುಂಬಿದ್ದು, ಶ್ರೀಮತ್ಸುಂದರಕಾಂಡ ವಂತೂ, ಭಜಕರಿಗೆ ಇಷ್ಟಾರ್ಥ ನೀಡುವ ಅದ್ಭುತ ಶಕ್ತಿಸಂಪನ್ನವಾಗಿದೆ.

ಮುದ್ರಣಸೌಲಭ್ಯವಿಲ್ಲದಾಗಲೂ ಶ್ರೀಮತ್ಸುಂದರಕಾಂಡದ ಹಸ್ತಪ್ರತಿ ಗಳು ಜಗತ್ತಿನ ಎಲ್ಲೆಡೆಗಳಲ್ಲಿದ್ದುದು ತಿಳಿಯುತ್ತಿದೆ. ಭಾರತೀಯಸಂಸ್ಕೃತಿಯ ಶಕ್ತಿದ್ಯೋತಕವೂ ದೈವಿಕ ಇತಿಹಾಸವೂ ಮಾನವರಿಗೆ ಸಾರ್ವಕಾಲಿಕಮಾರ್ಗ ದರ್ಶಕವೂ ಆಗಿ ರಾರಾಜಿಸುತ್ತಿರುವ, ಶ್ರೀಮದ್ರಾಮಾಯಣದ ಕನ್ನಡಾನು ವಾದಕ್ಕೆ ತೊಡಗಿದ್ದ ನೀವು ಈಗ ಏಳನೆಯ ಸಂಪುಟ ಪ್ರಕಾಶಪಡಿಸಿದಂತೆ, ಬಾಕಿ ಇರುವ ಎಲ್ಲ ಸಂಪುಟಗಳನ್ನೂ ನಿರಾತಂಕವಾಗಿ ಹೊರತರುವಂತಾಗ ಲೆಂದೂ ಕನ್ನಡಿಗರೆಲ್ಲ ಇದರ ಪ್ರಯೋಜನ ಪಡೆದು ಸುಖ-ಶಾಂತಿ-ಸಮೃದ್ಧಿ ಭಾಜನರಾಗಲೆಂದೂ ಹಾರೈಸಿ, ನೀವು ಸಂಕಲ್ಪಿತ ಕಾರ್ಯಸಾಧನೆಯಲ್ಲಿ ಯಶಸ್ವಿಗಳಾಗಲೆಂದು, ಸುವರ್ಣಮಂತ್ರಾಕ್ಷತೆಯೊಂದಿಗೆ ಆಶಿಸುತ್ತೇವೆ.

ಇತಿ ಶ್ರೀಮನ್ನಾರಾಯಣಸ್ಮೃತಯಃ

---

ಮಿತಿ :- ಶ್ರೀ ವಿಭವನಾಮ ಸಂವತ್ಸರ, ಮಾರ್ಗಶೀರ್ಷ ಕೃಷ್ಣಪಕ್ಷ ಅಷ್ಟಮಿಯು,
ಶನಿವಾರ ತಾ : ೩೧-೧೨-೧೯೮೮.

ಮುಕ್ಕಾಂ :-ಶ್ರೀ ವಿದ್ಯಾಮಂದಿರ ೨, ಎ.ಜೆ.ಪಿ. ರಸ್ತೆ, ಮೊದಲನೇ ಹಂತ,
ಗಿರಿನಗರ, ಬೆಂಗಳೂರು-೫೬೦ ೦೮೫.

## ತೃತೀಯ ಮುದ್ರಣದ ಪ್ರಸ್ತಾವನೆ

ದಯಾಮಯನಾದ ಪರಮಾತ್ಮನ ಕರುಣೆಯಿಂದಲೂ ಶ್ರೀರಂಗ ಮಹಾಗುರುವಿನ ದಿವ್ಯಾಶೀರ್ವಾದದಿಂದಲೂ ಸಾಧುಸತ್ಪುರುಷರ ಸದಾಶಯ ಸಹಕಾರಗಳಿಂದಲೂ ಶ್ರೀಮದ್ವಾಲ್ಮೀಕಿರಾಮಾಯಣದ 7ನೆ ಸಂಪುಟದ ತೃತೀಯ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ. ಸಂಪುಟ ಮುಗಿದು ಕೇವಲ 2 ತಿಂಗಳಾಯಿತು. ಗ್ರಾಹಕರಿಗೆ ಯಾವ ಸಂಪುಟದ ಲೋಪವು ಇಲ್ಲದಂತೆ 11 ಸಂಪುಟಗಳ ಸೆಟ್ಟನ್ನು, ಮಹಾಭಾರತದ 32 ಸಂಪುಟಗಳ ಸೆಟ್ಟನ್ನು, ಭಾಗವತದ 9 ಸಂಪುಟಗಳ ಸೆಟ್ಟನ್ನು, ಹರಿವಂಶದ 6 ಸಂಪುಟಗಳ ಸೆಟ್ಟನ್ನು ಪೂರ್ಣಮಾಲೆಗಳನ್ನು ಒಟ್ಟಾಗಿ ಕೊಡಬೇಕೆಂಬುದೇ ನಮ್ಮ ಸಂಕಲ್ಪವಾಗಿದೆ ಮತ್ತು ಪ್ರಯತ್ನವಾಗಿದೆ. ಸಧ್ಯಕ್ಕೆ ರಾಮಾಯಣ, ಭಾಗವತ, ಹರಿವಂಶಗಳ ಸೆಟ್ಟಗಳನ್ನು ಕೊಡಲು ಸಾಧ್ಯವಾಗಿದೆ. ಮಹಾಭಾರತದ 5 ಸಂಪುಟಗಳನ್ನು ಪುನರ್ಮುದ್ರಿಸಿ ಕೊಡಬೇಕಾಗಿದೆ. ಚಂದಾದಾರರ ನೆರವಿನಿಂದಲೂ ಭಗವಂತನ ಕೃಪೆಯಿಂದಲೂ ಈ ನಮ್ಮ ಸಂಕಲ್ಪವು ಕೈಗೂಡುವುದೆಂಬ ಭರವಸೆದಿಂದಿರುತ್ತೇವೆ. ಈ ಮಹಾಗ್ರಂಥದ ಪ್ರಚಾರಕ್ಕೆ ಕನ್ನಡ ಬಾಂಧವರೆಲ್ಲರೂ ಒಮ್ಮತದಿಂದ ಶ್ರಮಿಸಬೇಕಾದದ್ದು ಅನಿವಾರ್ಯ.

**ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು – ಸಮಸ್ತಸನ್ಮಙ್ಗಳಾನಿ ಭವನ್ತು**

–ಪ್ರಕಾಶಕರು.

# ಶ್ರೀಮದ್ವಾಲ್ಮೀಕಿರಾಮಾಯಣ

## ಯುದ್ಧಕಾಂಡದ ಪಾರಾಯಣಕ್ರಮ

ಅಸ್ಯಶ್ರೀಯುದ್ಧಕಾಂಡಮಹಾಮಂತ್ರಸ್ಯ । ವಿಭೀಷಣ ಋಷಿಃ । ಅನುಷ್ಟುಪ್ ಛನ್ದಃ । ವಿಧಾತಾ ದೇವತಾ । ಬಂ ಬೀಜಂ ।ನಮಃಶಕ್ತಿ। ವಿಧಾತೇತಿ ಕೀಲಕಮ್ । ಶ್ರೀಧಾತೃಪ್ರಸಾದಸಿದ್ಧ್ಯರ್ಥೇ ಯುದ್ಧಕಾಂಡ ಪಾರಾಯಣೇ ವಿನಿಯೋಗಃ । ವಿಭೀಷಣ ಋಷಯೇ ನಮಃ– ಶಿರಸಿ । ಅನುಷ್ಟುಪ್ ಛನ್ದಸೇ ನಮಃ – ಮುಖೇ । ವಿಧಾತೃದೇವತಾಯೈ ನಮಃ–ಹೃದಿ । ಬಂ ಬೀಜಾಯ ನಮಃ–ಗುಹ್ಯೇ । ನಮಃ ಶಕ್ತಯೇ ನಮಃ–ಪಾದಯೋಃ। ವಿಧಾತೇತಿ ಕೀಲಕಾಯ ನಮಃ – ನಾಭೌ । ವಿಧಾತೃದೇವತಾಯೈ ನಮಃ ಸರ್ವಾಙ್ಗೇ ॥

ವಿಧಾತ್ರೇ ಅಂಗುಷ್ಠಾಭ್ಯಾಂ ನಮಃ ।ಮಹಾದೇವಾಯ ತರ್ಜನೀಭ್ಯಾಂ ನಮಃ । ಭಕ್ತಾನಾಮಭಯಪ್ರದಾಯ ಮಧ್ಯ ಮಾಭ್ಯಾಂ ನಮಃ । ಸರ್ವದೇವಪ್ರೀತಿಕರಾಯ ಅನಾಮಿಕಾಭ್ಯಾಂ ನಮಃ । ಭಗವತ್ಪ್ರಿಯಾಯ ಕನಿಷ್ಠಿಕಾಭ್ಯಾಂ ನಮಃ ।ಈಶ್ವರಾಯ ಕರತಲಕರಪೃಷ್ಠಾಭ್ಯಾಂ ನಮಃ ।ವಿಧಾತ್ರೇ ಹೃದಯಾಯ ನಮಃ । ಮಹಾದೇವಾಯ ಶಿರಸೇ ಸ್ವಾಹಾ । ಭಕ್ತಾನಾಮಭಯಪ್ರದಾಯ ಶಿಖಾಯೈ ವಷಟ್ । ಸರ್ವದೇವಪ್ರೀತಿಕರಾಯ ಕವಚಾಯ ಹುಂ । ಭಗವತ್ಪ್ರಿಯಾಯ ನೇತ್ರತ್ರಯಾಯ ವೌಷಟ್ । ಈಶ್ವರಾಯ ಅಸ್ತ್ರಾಯ ಫಟ್ । ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ।

ಧ್ಯಾನಮ್ :- ದೇವಂ ವಿಧಾತಾರಮನನ್ತವೀರ್ಯಂ
ಭಕ್ತಾಭಯಂ ಶ್ರೀಪರಮಾದಿದೇವಮ್ ।
ಸರ್ವಾಮರಪ್ರೀತಿಕರಂ ಪ್ರಶಾನ್ತಂ
ವನ್ದೇ ಸದಾ ಭೂಮಿಪತಿಂ ಸುಭೂತಿಮ್ ॥

ಪಂಚೋಪಚಾರಪೂಜೆಯನ್ನು ಮಾಡಿ ಈ ಕೆಳಗಿನ ಮಂತ್ರದಿಂದ ಸಂಪುಟೀಕರಣಮಾಡಿ ಪಾರಾಯಣಮಾಡುವುದು.

ವಿಧಾತಾರಂ ಮಹಾದೇವಂ ಭಕ್ತಾನಾಮಭಯಪ್ರದಮ್ ।
ಸರ್ವದೇವಪ್ರೀತಿಕರಂ ಭಗವತ್ಪ್ರಿಯಮೀಶ್ವರಮ್ ॥

ಶ್ರೀಮಹಾಗಣಪತಯೇ ನಮಃ      ಶ್ರೀಸರಸ್ವತ್ಯೈ ನಮಃ      ಶ್ರೀಸದ್ಗುರವೇ ನಮಃ

# ಶ್ರೀಮದ್ವಾಲ್ಮೀಕಿರಾಮಾಯಣೇ ಯುದ್ಧಕಾಣ್ಡೇ

## ಪ್ರಥಮಃ ಸರ್ಗಃ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥

ಶ್ರುತ್ವಾ ಹನುಮತೋ ವಾಕ್ಯಂ ಯಥಾವದನುಭಾಷಿತಮ್ ।
ರಾಮಃ ಪ್ರೀತಿಸಮಾಯುಕ್ತೋ ವಾಕ್ಯಮುತ್ತರಮಬ್ರವೀತ್ ॥೧॥

ಕೃತಂ ಹನುಮತಾ ಕಾರ್ಯಂ ಸುಮಹದ್ಭುವಿ ದುಷ್ಕರಮ್ ।
ಮನಸಾಪಿ ಯದನ್ಯೇನ ನ ಶಕ್ಯಂ ಧರಣೀತಲೇ ॥೨॥

ನ ಹಿ ತಂ ಪರಿಪಶ್ಯಾಮಿ ಯಸ್ತರೇತ ಮಹೋದಧಿಮ್ ।
ಅನ್ಯತ್ರ ಗರುಡಾದ್ವಾಯೋರನ್ಯತ್ರ ಚ ಹನೂಮತಃ ॥೩॥

ದೇವದಾನವಯಕ್ಷಾಣಾಂ ಗನ್ಧರ್ವೋರಗರಕ್ಷಸಾಮ್ ।
ಅಪ್ರಧೃಷ್ಯಾಂ ಪುರೀಂ ಲಙ್ಕಾಂ ರಾವಣೇನ ಸುರಕ್ಷಿತಾಮ್ ॥೪॥

ಯೋ ವೀರ್ಯಬಲಸಂಪನ್ನೋ ದ್ವಿಷದ್ಭಿರನಿವಾರಿತಃ ।
ಪ್ರವಿಷ್ಟಃ ಸತ್ತ್ವಮಾಶ್ರಿತ್ಯ ಶ್ವಸನ್ಕೋ ನಾಮ ನಿಷ ಮೇತ್ ॥೫॥

ಕೋ ವಿಶೇತ್ಸುದುರಾಧರ್ಷಾಂ ರಾಕ್ಷಸೈಶ್ಚ ಸುರಕ್ಷಿತಾಮ್ ।
ಯೋ ವೀರ್ಯಬಲಸಂಪನ್ನೋ ನ ಸಮಃ ಸ್ಯಾದ್ಧನೂಮತಃ ॥೬॥

ಭೃತ್ಯಕಾರ್ಯಂ ಹನುಮತಾ ಸುಗ್ರೀವಸ್ಯ ಕೃತಂ ಮಹತ್ ।
ಏವಂ ವಿಧಾಯ ಸ್ವಬಲಂ ಸದೃಶಂ ವಿಕ್ರಮಸ್ಯ ಚ ॥೭॥

ಯೋ ಹಿ ಭೃತ್ಯೋ ನಿಯುಕ್ತಃ ಸನ್ಭರ್ತ್ರಾ ಕರ್ಮಣಿ ದುಷ್ಕರೇ ।
ಕುರ್ಯಾತ್ತದನುರಾಗೇಣ ತಮಾಹುಃ ಪುರುಷೋತ್ತಮಮ್ ॥೮॥

ಭೃತ್ಯಸ್ತು ಯಃ ಪರಂ ಕಾರ್ಯಂ
ನ ಕುರ್ಯಾನ್ನೃಪತೇಃ ಪ್ರಿಯಮ್ ।
ಭೃತ್ಯೋ ಯುಕ್ತಃ ಸಮರ್ಥಶ್ಚ
ತಮಾಹುರ್ಮಧ್ಯಮಂ ನರಮ್ ॥೯॥

ನಿಯುಕ್ತೋ ನೃಪತೇಃ ಕಾರ್ಯಂ ನ ಕುರ್ಯಾದ್ಯಃ ಸಮಾಹಿತಃ ।
ಭೃತ್ಯೋ ಯುಕ್ತಃ ಸಮರ್ಥಶ್ಚ ತಮಾಹುಃ ಪುರುಷಾಧಮಮ್ ॥೧೦॥

ತನ್ನಿಯೋಗೇ ನಿಯುಕ್ತೇನ ಕೃತಂ ಕೃತ್ಯಂ ಹನೂಮತಾ ।
ನ ಚಾತ್ಮಾ ಲಘುತಾಂ ನೀತಃ ಸುಗ್ರೀವಶ್ಚಾಪಿ ತೋಷಿತಃ ॥೧೧॥

ಅಹಂ ಚ ರಘುವಂಶಶ್ಚ ಲಕ್ಷ್ಮಣಶ್ಚ ಮಹಾಬಲಃ ।
ವೈದೇಹ್ಯಾ ದರ್ಶನೇನಾದ್ಯ ಧರ್ಮತಃ ಪರಿರಕ್ಷಿತಃ ॥೧೨॥

ಇದಂ ತು ಮಮ ದೀನಸ್ಯ ಮನೋ ಭೂಯಃ ಪ್ರಕರ್ಷತಿ ।
ಯದಿಹಾಸ್ಯ ಪ್ರಿಯಾಖ್ಯಾತುರ್ನ ಕುರ್ಮಿ ಸದೃಶಂ ಪ್ರಿಯಮ್ ॥೧೩॥

ಏಷ ಸರ್ವಸ್ವಭೂತಸ್ತು ಪರಿಷ್ವಙ್ಗೋ ಹನೂಮತಃ ।
ಮಯಾ ಕಾಲಮಿಮಂ ಪ್ರಾಪ್ಯ ದತ್ತಶ್ಚಾಸ್ತು ಮಹಾತ್ಮನಃ ॥೧೪॥

ಇತ್ಯುಕ್ತ್ವಾ ಪ್ರೀತಿಹೃಷ್ಟಾಙ್ಗೋ ರಾಮಸ್ತಂ ಪರಿಷಸ್ವಜೇ ।
ಹನೂಮನ್ತಂ ಮಹಾತ್ಮಾನಂ ಕೃತಕಾರ್ಯಮುಪಾಗತಮ್ ॥೧೫॥

ಧ್ಯಾತ್ವಾ ಪುನರುವಾಚೇದಂ ವಚನಂ ರಘುಸತ್ತಮಃ ।
ಹರೀಣಾಮೀಶ್ವರಸ್ಯೈವ ಸುಗ್ರೀವಸ್ಯೋಪಶೃಣ್ವತಃ ॥೧೬॥

ಸರ್ವಥಾ ಸುಕೃತಂ ತಾವತ್ಸೀತಾಯಾಃ ಪರಿಮಾರ್ಗಣಮ್ ।
ಸಾಗರಂ ತು ಸಮಾಸಾದ್ಯ ಭೂಯೋ ನಷ್ಟಂ ಮನೋ ಮಮ ॥೧೭॥

ಕಥಂ ನಾಮ ಸಮುದ್ರಸ್ಯ ದುಷ್ಪಾರಸ್ಯ ಮಹಾಮ್ಭಸಃ ।
ಹರಯೋ ದಕ್ಷಿಣಂ ಪಾರಂ ಗಮಿಷ್ಯನ್ತಿ ಸಮಾಹಿತಾಃ ॥೧೮॥

ಯದ್ಯಪ್ಯೇಷ ತು ವೃತ್ತಾನ್ತೋ ವೈದೇಹ್ಯಾ ಗದಿತೋ ಮಮ ।
ಸಮುದ್ರಪಾರಗಮನೇ ಹರೀಣಾಂ ಕಿಮಿವೋತ್ತರಮ್ ॥೧೯॥

ಇತ್ಯುಕ್ತ್ವಾ ಶೋಕಸಂಭ್ರಾನ್ತೋ ರಾಮಃ ಶತ್ರುನಿಬರ್ಹಣಃ ।
ಹನುಮನ್ತಂ ಮಹಾಬಾಹುಸ್ತತೋ ಧ್ಯಾನಮುಪಾಗಮತ್ ॥೨೦॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕಿಯೇ ಆದಿಕಾವ್ಯೇ
ಯುದ್ಧಕಾಣ್ಡೇ ಪ್ರಥಮಃ ಸರ್ಗಃ

---

## ದ್ವಿತೀಯಃ ಸರ್ಗಃ

ತಂ ತು ಶೋಕಪರಿದ್ಯೂನಂ ರಾಮಂ ದಶರಥಾತ್ಮಜಮ್ ।
ಉವಾಚ ವಚನಂ ಶ್ರೀಮಾನ್ಸುಗ್ರೀವಃ ಶೋಕನಾಶನಮ್ ॥೧॥

ಕಿಂ ತ್ವಂ ಸಂತಪ್ಯಸೇ ವೀರ ಯಥಾನ್ಯಃ ಪ್ರಾಕೃತಸ್ತಥಾ ।
ಮೈವಂ ಭೂಸ್ತ್ಯಜ ಸಂತಾಪಂ ಕೃತಘ್ನ ಇವ ಸೌಹೃದಮ್ ॥೨॥

ಸಂತಾಪಸ್ಯ ಚ ತೇ ಸ್ಥಾನಂ ನ ಹಿ ಪಶ್ಯಾಮಿ ರಾಘವ ।
ಪ್ರವೃತ್ತಾವುಪಲಬ್ಧಾಯಾಂ ಜ್ಞಾತೇ ಚ ನಿಲಯೇ ರಿಪೋಃ ॥೩॥

ಮತಿಮಾನ್ ಶಾಸ್ತ್ರವಿತ್ಪ್ರಾಜ್ಞಃ ಪಣ್ಡಿತಶ್ಚಾಸಿ ರಾಘವ ।
ತ್ಯಜೇಮಾಂ ಪಾಪಿಕಾಂ ಬುದ್ಧಿಂ ಕೃತಾತ್ಮೇವಾತ್ಮದೂಷಣೀಮ್ ॥

ಸಮುದ್ರಂ ಲಙ್ಘಯಿತ್ವಾ ತು ಮಹಾನಕ್ರಸಮಾಕುಲಮ್ ।
ಲಙ್ಕಾಮಾರೋಹಯಿಷ್ಯಾಮೋ ಹನಿಷ್ಯಾಮಶ್ಚ ರಾವಣಮ್ ॥೫॥

ನಿರುತ್ಸಾಹಸ್ಯ ದೀನಸ್ಯ ಶೋಕಪರ್ಯಾಕುಲಾತ್ಮನಃ ।
ಸರ್ವಥಾ ವ್ಯವಸೀದನ್ತಿ ವ್ಯಸನಂ ಚಾಧಿಗಚ್ಛತಿ ॥೬॥

ಇಮೇ ಶೂರಾಃ ಸಮರ್ಥಾಶ್ಚ ಸರ್ವೇ ನೋ ಹರಿಯೂಥಪಾಃ ।
ತ್ವತ್ಪ್ರಿಯಾರ್ಥಂ ಕೃತೋತ್ಸಾಹಾಃ ಪ್ರವೇಷ್ಟುಮಪಿ ಪಾವಕಮ್ ॥೭॥

ಏಷಾಂ ಹರ್ಷೇಣ ಜಾನಾಮಿ ತರ್ಕಶ್ಚಾಸ್ತಿ ದೃಢೋ ಮಮ ।
ವಿಕ್ರಮೇಣ ಸಮಾನೇಷ್ಯೇ ಸೀತಾಂ ಹತ್ವಾ ಯಥಾ ರಿಪುಮ್ ॥೮॥

ರಾವಣಂ ಪಾಪಕರ್ಮಾಣಂ ತಥಾ ತ್ವಂ ಕರ್ತುಮರ್ಹಸಿ ।
ಸೇತುಮತ್ರ ಯಥಾ ಬದ್ಧ್ವಾ ಯಥಾ ಪಶ್ಯಾಮ ತಾಂ ಪುರೀಮ್ ॥

ತಸ್ಯ ರಾಕ್ಷಸರಾಜಸ್ಯ ತಥಾ ತ್ವಂ ಕುರು ರಾಘವ ।
ತಾಂ ದೃಷ್ಟ್ವಾ ತು ಪುರೀಂ ಲಙ್ಕಾಂ ತ್ರಿಕೂಟಶಿಖರೇ ಸ್ಥಿತಾಮ್ ॥

ಹತಂ ಚ ರಾವಣಂ ಯುದ್ಧೇ ದರ್ಶನಾದುಪಧಾರಯ ।
ಅಬದ್ಧ್ವಾ ಸಾಗರೇ ಸೇತುಂ ಘೋರೇ ತು ವರುಣಾಲಯೇ ॥೧೧॥

ಲಙ್ಕಾ ನೋ ಮರ್ದಿತುಂ ಶಕ್ಯಾ ಸೇನ್ದ್ರೈರಪಿ ಸುರಾಸುರೈಃ ।
ಸೇತುರ್ಬದ್ಧಃ ಸಮುದ್ರೇ ಚ ಯಾವಲ್ಲಙ್ಕಾಸಮೀಪತಃ ॥೧೨॥

ಸರ್ವಂ ತೀರ್ಣಂ ಚ ಮೇ ಸೈನ್ಯಂ ಜಿತಮಿತ್ಯುಪಧಾರಯ ।
ಇಮೇ ಹಿ ಸಮರೇ ಶೂರಾ ಹರಯಃ ಕಾಮರೂಪಿಣಃ ॥೧೩॥

ಶಕ್ತಾ ಲಙ್ಕಾಂ ಸಮಾನೇತುಂ ಸಮುತ್ಪಾಟ್ಯ ಸರಾಕ್ಷಸಾಮ್ ।
ತದಲಂ ವಿಕ್ಲವಾ ಬುದ್ಧೀ ರಾಜನ್ಸರ್ವಾರ್ಥನಾಶಿನೀ ॥೧೪॥

ಪುರುಷಸ್ಯ ಹಿ ಲೋಕೇಽಸ್ಮಿನ್ ಶೋಕಃ ಶೌರ್ಯಾಪಕರ್ಷಣಃ ।
ತನ್ನ ಕಾರ್ಯಂ ಮನುಷ್ಯೇಣ ಶೌಣ್ಡೀರ್ಯಮವಲಮ್ಬತಾ ॥೧೫॥

ಅಸ್ಮಿನ್ಕಾಲೇ ಮಹಾಪ್ರಾಜ್ಞ ಸತ್ತ್ವಮಾತಿಷ್ಠ ತೇಜಸಾ ।
ಶೂರಾಣಾಂ ಹಿ ಮನುಷ್ಯಾಣಾಂ ತ್ವದ್ವಿಧಾನಾಂ ಮಹಾತ್ಮನಾಮ್ ॥೧೬॥

ವಿನಷ್ಟೇ ವಾ ಪ್ರಣಷ್ಟೇ ವಾ ಕ್ಷಮಂ ನ ಹ್ಯನುಶೋಚಿತುಮ್ ।
ತ್ವಂ ತು ಬುದ್ಧಿಮತಾಂ ಶ್ರೇಷ್ಠಃ ಸರ್ವಶಾಸ್ತ್ರಾರ್ಥಕೋವಿದಃ ॥೧೭॥

ಮದ್ವಿಧೈಃ ಸಚಿವೈಃ ಸಾರ್ಧಮರಿಂ ಜೇತುಮಿಹಾರ್ಹಸಿ ।
ನ ಹಿ ಪಶ್ಯಾಮ್ಯಹಂ ಕಂಚಿತ್ತ್ರಿಷು ಲೋಕೇಷು ರಾಘವ ॥೧೮॥

ಗೃಹೀತಧನುಷೋ ಯಸ್ತೇ ತಿಷ್ಠೇದಭಿಮುಖೋ ರಣೇ ।
ವಾನರೇಷು ಸಮಾಸಕ್ತಂ ನ ತೇ ಕಾರ್ಯಂ ವಿಪತ್ಸ್ಯತೇ ॥೧೯॥

ಅಚಿರಾದ್ದ್ರಕ್ಷ್ಯಸೇ ಸೀತಾಂ ತೀರ್ತ್ವಾ ಸಾಗರಮಕ್ಷಯಮ್ ।
ತದಲಂ ಶೋಕಮಾಲಮ್ಬ್ಯ ಕ್ರೋಧಮಾಲಮ್ಬ ಭೂಪತೇ ॥೨೦॥

ನಿಶ್ಚೇಷ್ಟಾಃ ಕ್ಷತ್ರಿಯಾ ಮನ್ದಾಃ ಸರ್ವೇ ಚಣ್ಡಸ್ಯ ಬಿಭ್ಯತಿ ।
ಲಙ್ಘನಾರ್ಥಂ ಚ ಘೋರಸ್ಯ ಸಮುದ್ರಸ್ಯ ನದೀಪತೇಃ ॥೨೧॥

ಸಹಾಸ್ಮಾಭಿರಿಹೋಪೇತಃ ಸೂಕ್ಷ್ಮಬುದ್ಧಿರ್ವಿಚಾರಯ ।
ಸರ್ವಂ ತೀರ್ಣಂ ಚ ಮೇ ಸೈನ್ಯಂ ಜಿತಮಿತ್ಯುಪಧಾರಯ ॥೨೨॥

ಇಮೇ ಹಿ ಸಮರೇ ಶೂರಾ ಹರಯಃ ಕಾಮರೂಪಿಣಃ ।
ತಾನರೀನ್ವಿಧಮಿಷ್ಯನ್ತಿ ಶಿಲಾಪಾದಪವೃಷ್ಟಿಭಿಃ ॥೨೩॥

ಕಥಂಚಿತ್ಸಂತರಿಷ್ಯಾಮಸ್ತಂ ವಯಂ ವರುಣಾಲಯಮ್ ।
ಹತಮಿತ್ಯೇವ ತಂ ಮನ್ಯೇ ಯುದ್ಧೇ ಸಮಿತಿನನ್ದನ ॥೨೪॥

ಕಿಮುಕ್ತ್ವಾ ಬಹುಧಾ ಚಾಪಿ ಸರ್ವಥಾ ವಿಜಯೀ ಭವಾನ್ ।
ನಿಮಿತ್ತಾನಿ ಚ ಪಶ್ಯಾಮಿ ಮನೋ ಮೇ ಸಂಪ್ರಹೃಷ್ಯತಿ ॥೨೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ದ್ವಿತೀಯಃ ಸರ್ಗಃ

---

## ತೃತೀಯಃ ಸರ್ಗಃ

ಸುಗ್ರೀವಸ್ಯ ವಚಃ ಶ್ರುತ್ವಾ ಹೇತುಮತ್ಪರಮಾರ್ಥವಿತ್ ।
ಪ್ರತಿಜಗ್ರಾಹ ಕಾಕುತ್ಸ್ಥೋ ಹನುಮನ್ತಮಥಾಬ್ರವೀತ್ ॥೧॥

ತಪಸಾ ಸೇತುಬನ್ಧೇನ ಸಾಗರೋಚ್ಛೋಷಣೇನ ವಾ ।
ಸರ್ವಥಾ ಸುಸಮರ್ಥೋಽಸ್ಮಿ ಸಾಗರಸ್ಯಾಸ್ಯ ಲಙ್ಘನೇ ॥೨॥

ಕತಿ ದುರ್ಗಾಣಿ ದುರ್ಗಾಯಾ ಲಙ್ಕಾಯಾ ಬ್ರೂಹಿ ತಾನಿ ಮೇ ।
ಜ್ಞಾತುಮಿಚ್ಛಾಮಿ ತತ್ಸರ್ವಂ ದರ್ಶನಾದಿವ ವಾನರ ॥೩॥

ಬಲಸ್ಯ ಪರಿಮಾಣಂ ಚ ದ್ವಾರದುರ್ಗಕ್ರಿಯಾಮಪಿ ।
ಗುಪ್ತಿಕರ್ಮ ಚ ಲಙ್ಕಾಯಾ ರಕ್ಷಸಾಂ ಸದನಾನಿ ಚ ॥೪॥

ಯಥಾಸುಖಂ ಯಥಾವಚ್ಚ ಲಙ್ಕಾಯಾಮಸಿ ದೃಷ್ಟವಾನ್ ।
ಸರ್ವಮಾಚಕ್ಷ್ವ ತತ್ತ್ವೇನ ಸರ್ವಥಾ ಕುಶಲೋ ಹ್ಯಸಿ ॥೫॥

ಶ್ರುತ್ವಾ ರಾಮಸ್ಯ ವಚನಂ ಹನೂಮಾನ್ಮಾರುತಾತ್ಮಜಃ ।
ವಾಕ್ಯಂ ವಾಕ್ಯವಿದಾಂ ಶ್ರೇಷ್ಠೋ ರಾಮಂ ಪುನರಥಾಬ್ರವೀತ್ ॥೬॥

ಶ್ರೂಯತಾಂ ಸರ್ವಮಾಖ್ಯಾಸ್ಯೇ ದುರ್ಗಕರ್ಮವಿಧಾನತಃ ।
ಗುಪ್ತಾ ಪುರೀ ಯಥಾ ಲಙ್ಕಾ ರಕ್ಷಿತಾ ಚ ಯಥಾ ಬಲೈಃ ॥೭॥

ರಾಕ್ಷಸಾಶ್ಚ ಯಥಾ ಸ್ನಿಗ್ಧಾ ರಾವಣಸ್ಯ ಚ ತೇಜಸಾ ।
ಪರಾಂ ಸಮೃದ್ಧಿಂ ಲಙ್ಕಾಯಾಃ ಸಾಗರಸ್ಯ ಚ ಭೀಮತಾಮ್ ॥೮॥

ವಿಭಾಗಂ ಚ ಬಲೌಘಸ್ಯ ನಿರ್ದೇಶಂ ವಾಹನಸ್ಯ ಚ ।
ಏವಮುಕ್ತ್ವಾ ಹರಿಶ್ರೇಷ್ಠಃ ಕಥಯಾಮಾಸ ತತ್ತ್ವತಃ ॥೯॥

ಹೃಷ್ಟಾ ಪ್ರಮುದಿತಾ ಲಙ್ಕಾ ಮತ್ತದ್ವಿಪಸಮಾಕುಲಾ ।
ಮಹತೀ ರಥಸಂಪೂರ್ಣಾ ರಕ್ಷೋಗಣಸಮಾಕುಲಾ ॥೧೦॥

ವಾಜಿಭಿಶ್ಚ ಸುಸಂಪೂರ್ಣಾ ಸಾ ಪುರೀ ದುರ್ಗಮಾ ಪರೈಃ ।
ದೃಢಬದ್ಧಕವಾಟಾನಿ ಮಹಾಪರಿಘವನ್ತಿ ಚ ॥೧೧॥

ಚತ್ವಾರಿ ವಿಪುಲಾನ್ಯಸ್ಯಾ ದ್ವಾರಾಣಿ ಸುಮಹನ್ತಿ ಚ ।
ವಪ್ರೇಷೂಪಲಯನ್ತ್ರಾಣಿ ಬಲವನ್ತಿ ಮಹಾನ್ತಿ ಚ ॥೧೨॥

ಆಗತಂ ಪ್ರತಿಸೈನ್ಯಂ ತೈಸ್ತತ್ರ ಪ್ರತಿನಿವಾರ್ಯತೇ ।
ದ್ವಾರೇಷು ಸಂಸ್ಕೃತಾ ಭೀಮಾಃ ಕಾಲಾಯಸಮಯಾಃ ಶಿತಾಃ ॥೧೩॥

ಶತಶೋ ರಚಿತಾ ವೀರೈಃ ಶತಘ್ನ್ಯೋ ರಕ್ಷಸಾಂ ಗಣೈಃ ।
ಸೌವರ್ಣಶ್ಚ ಮಹಾಂಸ್ತಸ್ಯಾಃ ಪ್ರಾಕಾರೋ ದುಷ್ಪ್ರಧರ್ಷಣಃ ॥೧೪॥

ಮಣಿವಿದ್ರುಮವೈಡೂರ್ಯಮುಕ್ತಾವಿರಚಿತಾನ್ತರಃ ।
ಸರ್ವತಶ್ಚ ಮಹಾಭೀಮಾಃ ಶೀತತೋಯವಹಾಃ ಶುಭಾಃ ॥೧೫॥

ಅಗಾಧಾ ಗ್ರಾಹವತ್ಯಶ್ಚ ಪರಿಖಾ ಮೀನಸೇವಿತಾಃ ।
ದ್ವಾರೇಷು ತಾಸಾಂ ಚತ್ವಾರಃ ಸಂಕ್ರಮಾಃ ಪರಮಾಯತಾಃ ॥೧೬॥

ಯನ್ತ್ರೈರುಪೇತಾ ಬಹುಭಿರ್ಮಹದ್ಭಿರ್ಗೃಹಪಙ್ಕ್ತಿಭಿಃ ।
ತ್ರಾಯನ್ತೇ ಸಂಕ್ರಮಾಸ್ತತ್ರ ಪರಸೈನ್ಯಾಗಮೇ ಸತಿ ॥೧೭॥

ಯನ್ತ್ರೈಸ್ತೈರವಕೀರ್ಯನ್ತೇ ಪರಿಖಾಸು ಸಮನ್ತತಃ ।
ಏಕಸ್ತ್ವಕಮ್ಪ್ಯೋ ಬಲವಾನ್ಸಂಕ್ರಮಃ ಸುಮಹಾನ್ ದೃಢಃ ॥೧೮॥

ಕಾಞ್ಚನೈರ್ಬಹುಭಿಃ ಸ್ತಮ್ಭೈರ್ವೇದಿಕಾಭಿಶ್ಚ ಶೋಭಿತಃ ।
ಸ್ವಯಂ ಪ್ರಕೃತಿಸಂಪನ್ನೋ ಯುಯುತ್ಸೂ ರಾಮ ರಾವಣಃ ॥೧೯॥

ಉತ್ಥಿತಶ್ಚಾಪ್ರಮತ್ತಶ್ಚ ಬಲಾನಾಮನುದರ್ಶನೇ ।
ಲಙ್ಕಾ ಪುನರ್ನಿರಾಲಮ್ಬಾ ದೇವದುರ್ಗಾ ಭಯಾವಹಾ ॥೨೦॥

ನಾದೇಯಂ ಪಾರ್ವತಂ ವಾನ್ಯಂ ಕೃತ್ರಿಮಂ ಚ ಚತುರ್ವಿಧಮ್ ।
ಸ್ಥಿತಾ ಪಾರೇ ಸಮುದ್ರಸ್ಯ ದೂರಪಾರಸ್ಯ ರಾಘವ ॥೨೧॥

ನೌಪಥೋಽಪಿ ಚ ನಾಸ್ತ್ಯತ್ರ ನಿರಾದೇಶಶ್ಚ ಸರ್ವತಃ ।
ಶೈಲಾಗ್ರೇ ರಚಿತಾ ದುರ್ಗಾ ಸಾ ಪೂರ್ದೇವಪುರೋಪಮಾ ॥೨೨॥

ವಾಜಿವಾರಣಸಂಪೂರ್ಣಾ ಲಙ್ಕಾ ಪರಮದುರ್ಜಯಾ ।
ಪರಿಖಾಶ್ಚ ಶತಘ್ನ್ಯಶ್ಚ ಯನ್ತ್ರಾಣಿ ವಿವಿಧಾನಿ ಚ ॥೨೩॥

ಶೋಭಯನ್ತಿ ಪುರೀಂ ಲಙ್ಕಾಂ ರಾವಣಸ್ಯ ದುರಾತ್ಮನಃ ।
ಅಯುತಂ ರಕ್ಷಸಾಮತ್ರ ಪೂರ್ವದ್ವಾರಂ ಸಮಾಶ್ರಿತಮ್ ॥೨೪॥

ಶೂಲಹಸ್ತಾ ದುರಾಧರ್ಷಾಃ ಸರ್ವೇ ಖಡ್ಗಾಗ್ರಯೋಧಿನಃ ।
ನಿಯುತಂ ರಕ್ಷಸಾಮತ್ರ ದಕ್ಷಿಣದ್ವಾರಮಾಶ್ರಿತಮ್ ॥೨೫॥

ಚತುರಙ್ಗೇಣ ಸೈನ್ಯೇನ ಯೋಧಾಸ್ತತ್ರಾಪ್ಯನುತ್ತಮಾಃ ।
ಪ್ರಯುತಂ ರಕ್ಷಸಾಮತ್ರ ಪಶ್ಚಿಮದ್ವಾರಮಾಶ್ರಿತಮ್ ॥೨೬॥

ಚರ್ಮಖಡ್ಗಧರಾಃ ಸರ್ವೇ ತಥಾ ಸರ್ವಾಸ್ತ್ರಕೋವಿದಾಃ ।
ನ್ಯರ್ಬುದಂ ರಕ್ಷಸಾಮತ್ರ ಉತ್ತರದ್ವಾರಮಾಶ್ರಿತಮ್ ॥೨೭॥

ರಥಿನಶ್ಚಾಶ್ವವಾಹಾಶ್ಚ ಕುಲಪುತ್ರಾಃ ಸುಪೂಜಿತಾಃ ।
ಶತಶೋಽಥ ಸಹಸ್ರಾಣಿ ಮಧ್ಯಮಂ ಸ್ಕನ್ಧಮಾಶ್ರಿತಾಃ ॥೨೮॥

ಯಾತುಧಾನಾ ದುರಾಧರ್ಷಾಃ ಸಾಗ್ರಕೋಟಿಶ್ಚ ರಕ್ಷಸಾಮ್ ।
ತೇ ಮಯಾ ಸಂಕ್ರಮಾ ಭಗ್ನಾಃ ಪರಿಖಾಶ್ಚಾವಪೂರಿತಾಃ ॥೨೯॥

ದಗ್ಧಾ ಚ ನಗರೀ ಲಙ್ಕಾ ಪ್ರಾಕಾರಾಶ್ಚಾವಸಾದಿತಾಃ ।
ಬಲೈಕದೇಶಃ ಕ್ಷಪಿತೋ ರಾಕ್ಷಸಾನಾಂ ಮಹಾತ್ಮನಾಮ್ ॥೩೦॥

ಯೇನ ಕೇನ ಚ ಮಾರ್ಗೇಣ ತರಾಮ ವರುಣಾಲಯಮ್ ।
ಹತೇತಿ ನಗರೀ ಲಙ್ಕಾ ವಾನರೈರವಧಾರ್ಯತಾಮ್ ॥೩೧॥

ಅಙ್ಗದೋ ದ್ವಿವಿದೋ ಮೈನ್ದೋ ಜಾಮ್ಬವಾನ್ಪನಸೋ ನಲಃ ।
ನೀಲಃ ಸೇನಾಪತಿಶ್ಚೈವ ಬಲಶೇಷೇಣ ಕಿಂ ತವ ॥೩೨॥

ಪ್ಲವಮಾನಾ ಹಿ ಗತ್ವಾ ತಾಂ ರಾವಣಸ್ಯ ಮಹಾಪುರೀಮ್ ।
ಸಪರ್ವತವನಾಂ ಭಿತ್ತ್ವಾ ಸಖಾತಾಂ ಸಪ್ರತೋರಣಾಮ್ ॥೩೩॥

ಸಪ್ರಾಕಾರಾಂ ಸಭವನಾಮಾನಯಿಷ್ಯನ್ತಿ ರಾಘವ ।
ಏವಮಾಜ್ಞಾಪಯ ಕ್ಷಿಪ್ರಂ ಬಲಾನಾಂ ಸರ್ವಸಂಗ್ರಹಮ್ ।
ಮುಹೂರ್ತೇನ ತು ಯುಕ್ತೇನ ಪ್ರಸ್ಥಾನಮಭಿರೋಚಯ ॥೩೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ತೃತೀಯಃ ಸರ್ಗಃ

## ಚತುರ್ಥಃ ಸರ್ಗಃ

ಶ್ರುತ್ವಾ ಹನುಮತೋ ವಾಕ್ಯಂ ಯಥಾವದನುಪೂರ್ವಶಃ ।
ತತೋಽಬ್ರವೀನ್ಮಹಾತೇಜಾ ರಾಮಃ ಸತ್ಯಪರಾಕ್ರಮಃ ॥೧॥

ಯಾಂ ನಿವೇದಯಸೇ ಲಙ್ಕಾಂ ಪುರೀಂ ಭೀಮಸ್ಯ ರಕ್ಷಸಃ ।
ಕ್ಷಿಪ್ರಮೇನಾಂ ಮಥಿಷ್ಯಾಮಿ ಸತ್ಯಮೇತದ್ಬ್ರವೀಮಿ ತೇ ॥೨॥

ಅಸ್ಮಿನ್ಮುಹೂರ್ತೇ ಸುಗ್ರೀವ
ಪ್ರಯಾಣಮಭಿರೋಚಯೇ ।
ಯುಕ್ತೋ ಮುಹೂರ್ತೋ ವಿಜಯಃ
ಪ್ರಾಪ್ತೋ ಮಧ್ಯಂ ದಿವಾಕರಃ ॥೩॥

ಅಸ್ಮಿನ್ಮುಹೂರ್ತೇ ವಿಜಯೇ ಪ್ರಾಪ್ತೇ ಮಧ್ಯಂ ದಿವಾಕರೇ ।
ಸೀತಾಂ ಹೃತ್ವಾ ತು ಮೇ ಜಾತು ಕ್ವಾಸೌ ಯಾಸ್ಯತಿ ಯಾಸ್ಯತಃ ॥೪॥

ಸೀತಾ ಶ್ರುತ್ವಾಭಿಯಾನಂ ಮೇ ಆಶಾಮೇಷ್ಯತಿ ಜೀವಿತೇ ।
ಜೀವಿತಾನ್ತೇಽಮೃತಂ ಸ್ಪೃಷ್ಟ್ವಾ ಪೀತ್ವಾ ವಿಷಮಿವಾತುರಃ ॥೫॥

ಉತ್ತರಾಫಲ್ಗುನೀ ಹ್ಯದ್ಯ ಶ್ವಸ್ತು ಹಸ್ತೇನ ಯೋಕ್ಷ್ಯತೇ ।
ಅಭಿಪ್ರಯಾಮ ಸುಗ್ರೀವ ಸರ್ವಾನೀಕಸಮಾವೃತಾಃ ॥೬॥

ನಿಮಿತ್ತಾನಿ ಚ ಪಶ್ಯಾಮಿ ಯಾನಿ ಪ್ರಾದುರ್ಭವನ್ತಿ ಚ ।
ನಿಹತ್ಯ ರಾವಣಂ ಸೀತಾಮಾನಯಿಷ್ಯಾಮಿ ಜಾನಕೀಮ್ ॥೭॥

ಉಪರಿಷ್ಟಾದ್ಧಿ ನಯನಂ ಸ್ಫುರಮಾಣಮಿದಂ ಮಮ ।
ವಿಜಯಂ ಸಮನುಪ್ರಾಪ್ತಂ ಶಂಸತೀವ ಮನೋರಥಮ್ ॥೮॥

ತತೋ ವಾನರರಾಜೇನ ಲಕ್ಷ್ಮಣೇನ ಚ ಪೂಜಿತಃ ।
ಉವಾಚ ರಾಮೋ ಧರ್ಮಾತ್ಮಾ ಪುನರಪ್ಯರ್ಥಕೋವಿದಃ ॥೯॥

ಅಗ್ರೇ ಯಾತು ಬಲಸ್ಯಾಸ್ಯ ನೀಲೋ ಮಾರ್ಗಮವೇಕ್ಷಿತುಮ್ ।
ವೃತಃ ಶತಸಹಸ್ರೇಣ ವಾನರಾಣಾಂ ತರಸ್ವಿನಾಮ್ ॥೧೦॥

ಫಲಮೂಲವತಾ ನೀಲ ಶೀತಕಾನನವಾರಿಣಾ ।
ಪಥಾ ಮಧುಮತಾ ಚಾಶು ಸೇನಾಂ ಸೇನಾಪತೇ ನಯ ॥೧೧॥

ದೂಷಯೇಯುರ್ದುರಾತ್ಮಾನಃ ಪಥಿ ಮೂಲಫಲೋದಕಮ್ ।
ರಾಕ್ಷಸಾಃ ಪರಿರಕ್ಷೇಥಾಸ್ತೇಭ್ಯಸ್ತ್ವಂ ನಿತ್ಯಮುದ್ಯತಃ ॥೧೨॥

ನಿಮ್ನೇಷು ಗಿರಿದುರ್ಗೇಷು ವನೇಷು ಚ ವನೌಕಸಃ ।
ಅಭಿಪ್ಲುತ್ಯಾಭಿಪಶ್ಯೇಯುಃ ಪರೇಷಾಂ ನಿಹಿತಂ ಬಲಮ್ ॥೧೩॥

ಯಚ್ಚ ಫಲ್ಗು ಬಲಂ ಕಿಂಚಿತ್ತದತ್ರೈವೋಪಯುಜ್ಯತಾಮ್ ।
ಏತದ್ಧಿ ಕೃತ್ಯಂ ಘೋರಂ ನೋ ವಿಕ್ರಮೇಣ ಪ್ರಯುಧ್ಯತಾಮ್ ॥೧೪॥

ಸಾಗರೌಘನಿಭಂ ಭೀಮಮಗ್ರಾನೀಕಂ ಮಹಾಬಲಾಃ ।
ಕಪಿಸಿಂಹಾಃ ಪ್ರಕರ್ಷನ್ತು ಶತಶೋಽಥ ಸಹಸ್ರಶಃ ॥೧೫॥

ಗಜಶ್ಚ ಗಿರಿಸಂಕಾಶೋ ಗವಯಶ್ಚ ಮಹಾಬಲಃ ।
ಗವಾಕ್ಷಶ್ಚಾಗ್ರತೋ ಯಾನ್ತು ವಾಹಿನ್ಯಾ ವಾನರರ್ಷಭಾಃ ॥೧೬॥

ಯಾತು ವಾನರವಾಹಿನ್ಯಾ ವಾನರಃ ಪ್ಲವತಾಂ ವರಃ ।
ಪಾಲಯನ್ದಕ್ಷಿಣಂ ಪಾರ್ಶ್ವಮೃಷಭೋ ವಾನರರ್ಷಭಃ ॥೧೭॥

ಗನ್ಧಹಸ್ತೀವ ದುರ್ಧರ್ಷಸ್ತರಸ್ವೀ ಗನ್ಧಮಾದನಃ ।
ಯಾತು ವಾನರವಾಹಿನ್ಯಾಃ ಸವ್ಯಂ ಪಾರ್ಶ್ವಮಧಿಷ್ಠಿತಃ ॥೧೮॥

ಯಾಸ್ಯಾಮಿ ಬಲಮಧ್ಯೇಽಹಂ ಬಲೌಘಮಭಿಹರ್ಷಯನ್ ।
ಅಧಿರುಹ್ಯ ಹನೂಮನ್ತಮೈರಾವತಮಿವೇಶ್ವರಃ ॥೧೯॥

ಅಙ್ಗದೇನೈಷ ಸಂಯಾತು ಲಕ್ಷ್ಮಣಶ್ಚಾನ್ತಕೋಪಮಃ ।
ಸಾರ್ವಭೌಮೇನ ಭೂತೇಶೋ ದ್ರವಿಣಾಧಿಪತಿರ್ಯಥಾ ॥೨೦॥

ಜಾಮ್ಬವಾಂಶ್ಚ ಸುಷೇಣಶ್ಚ ವೇಗದರ್ಶೀ ಚ ವಾನರಃ ।
ಋಕ್ಷರಾಜೋ ಮಹಾಸತ್ತ್ವಃ ಕುಕ್ಷಿಂ ರಕ್ಷನ್ತು ತೇ ತ್ರಯಃ ॥೨೧॥

ರಾಘವಸ್ಯ ವಚಃ ಶ್ರುತ್ವಾ ಸುಗ್ರೀವೋ ವಾಹಿನೀಪತಿಃ ।
ವ್ಯಾದಿದೇಶ ಮಹಾವೀರ್ಯಾನ್ವಾನರಾನ್ವಾನರರ್ಷಭಃ ॥೨೨॥

ತೇ ವಾನರಗಣಾಃ ಸರ್ವೇ ಸಮುತ್ಪತ್ಯ ಯುಯುತ್ಸವಃ ।
ಗುಹಾಭ್ಯಃ ಶಿಖರೇಭ್ಯಶ್ಚ ಆಶು ಪುಪ್ಲುವಿರೇ ತದಾ ॥೨೩॥

ತತೋ ವಾನರರಾಜೇನ ಲಕ್ಷ್ಮಣೇನ ಚ ಪೂಜಿತಃ ।
ಜಗಾಮ ರಾಮೋ ಧರ್ಮಾತ್ಮಾ ಸಸೈನ್ಯೋ ದಕ್ಷಿಣಾಂ ದಿಶಮ್ ॥೨೪॥

ಶತೈಃ ಶತಸಹಸ್ರೈಶ್ಚ ಕೋಟೀಭಿರಯುತೈರಪಿ ।
ವಾರಣಾಭೈಶ್ಚ ಹರಿಭಿರ್ಯಯೌ ಪರಿವೃತಸ್ತದಾ ॥೨೫॥

ತಂ ಯಾನ್ತಮನುಯಾನ್ತಿ ಸ್ಮ ಮಹತೀ ಹರಿವಾಹಿನೀ ।
ಹೃಷ್ಟಾಃ ಪ್ರಮುದಿತಾಃ ಸರ್ವೇ ಸುಗ್ರೀವೇಣಾಭಿಪಾಲಿತಾಃ ॥೨೬॥

ಆಪ್ಲವನ್ತಃ ಪ್ಲವನ್ತಶ್ಚ ಗರ್ಜನ್ತಶ್ಚ ಪ್ಲವಂಗಮಾಃ ।
ಕ್ಷ್ವೇಲನ್ತೋ ವಿನದನ್ತಶ್ಚ ಜಗ್ಮುರ್ವೈ ದಕ್ಷಿಣಾಂ ದಿಶಮ್ ॥೨೭॥

ಭಕ್ಷಯನ್ತಃ ಸುಗನ್ಧೀನಿ ಮಧೂನಿ ಚ ಫಲಾನಿ ಚ ।
ಉದ್ವಹನ್ತೋ ಮಹಾವೃಕ್ಷಾನ್ಮಞ್ಜರೀಪುಞ್ಜಧಾರಿಣಃ ॥೨೮॥

ಅನ್ಯೋನ್ಯಂ ಸಹಸಾ ದೃಪ್ತಾ ನಿರ್ವಹನ್ತಿ ಕ್ಷಿಪನ್ತಿ ಚ ।
ಪತತಶ್ಚೋತ್ಪತನ್ತ್ಯನ್ಯೇ ಪಾತಯನ್ತ್ಯಪರೇ ಪರಾನ್ ॥೨೯॥

ರಾವಣೋ ನೋ ನಿಹನ್ತವ್ಯಃ ಸರ್ವೇ ಚ ರಜನೀಚರಾಃ ।
ಇತಿ ಗರ್ಜನ್ತಿ ಹರಯೋ ರಾಘವಸ್ಯ ಸಮೀಪತಃ ॥೩೦॥

ಪುರಸ್ತಾದೃಷಭೋ ವೀರೋ ನೀಲಃ ಕುಮುದ ಏವ ಚ ।
ಪನ್ಥಾನಂ ಶೋಧಯನ್ತಿ ಸ್ಮ ವಾನರೈರ್ಬಹುಭಿರ್ವೃತಾಃ ॥೩೧॥

ಮಧ್ಯೇ ತು ರಾಜಾ ಸುಗ್ರೀವೋ ರಾಮೋ ಲಕ್ಷ್ಮಣ ಏವ ಚ ।
ಬಲಿಭಿರ್ಬಹುಭಿಃ ಶೂರೈರ್ವೃತಾಃ ಶತ್ರುನಿಬರ್ಹಣೈಃ ॥೩೨॥

ಹರಿಃ ಶತಬಲಿರ್ವೀರಃ ಕೋಟಿಭಿರ್ದಶಭಿರ್ವೃತಃ ।
ಸರ್ವಾಮೇಕೋ ಹ್ಯವಷ್ಟಭ್ಯ ರರಕ್ಷ ಹರಿವಾಹಿನೀಮ್ ॥೩೩॥

ಕೋಟೀಶತಪರೀವಾರಃ ಕೇಸರೀ ಪನಸೋ ಗಜಃ ।
ಋಕ್ಷಶ್ಚಾತಿಬಲಃ ಪಾರ್ಶ್ವಮೇಕಂ ತಸ್ಯಾಭಿರಕ್ಷತಿ ॥೩೪॥

ಸುಷೇಣೋ ಜಾಮ್ಬವಾಂಶ್ಚೈವ ಋಕ್ಷೈಶ್ಚ ಬಹುಭಿರ್ವೃತೌ ।
ಸುಗ್ರೀವಂ ಪುರತಃ ಕೃತ್ವಾ ಜಘನಂ ಸಂರರಕ್ಷತುಃ ॥೩೫॥

ತೇಷಾಂ ಸೇನಾಪತಿರ್ವೀರೋ ನೀಲೋ ವಾನರಪುಙ್ಗವಃ ।
ಸಂಪತನ್ಪತತಾಂ ಶ್ರೇಷ್ಠಸ್ತದ್ಬಲಂ ಪರ್ಯಪಾಲಯತ್ ॥೩೬॥

ದರೀಮುಖಃ ಪ್ರಜಙ್ಘಶ್ಚ ರಮ್ಭೋಽಥ ರಭಸಃ ಕಪಿಃ ।
ಸರ್ವತಶ್ಚ ಯಯುರ್ವೀರಾಸ್ತ್ವರಯನ್ತಃ ಪ್ಲವಂಗಮಾನ್ ॥೩೭॥

ಏವಂ ತೇ ಹರಿಶಾರ್ದೂಲಾ ಗಚ್ಛನ್ತೋ ಬಲದರ್ಪಿತಾಃ ।
ಅಪಶ್ಯಂಸ್ತೇ ಗಿರಿಶ್ರೇಷ್ಠಂ ಸಹ್ಯಂ ದ್ರುಮಲತಾಯುತಮ್ ॥೩೮॥

ಸರಾಂಸಿ ಚ ಸುಫುಲ್ಲಾನಿ ತಟಾಕಾನಿ ಮಹಾನ್ತಿ ಚ ।
ರಾಮಸ್ಯ ಶಾಸನಂ ಜ್ಞಾತ್ವಾ ಭೀಮಕೋಪಸ್ಯ ಭೀತವತ್ ॥೩೯॥

ವರ್ಜಯನ್ನಗರಾಭ್ಯಾಶಾಂಸ್ತಥಾ ಜನಪದಾನಪಿ ।
ಸಾಗರೌಘನಿಭಂ ಭೀಮಂ ತದ್ವಾನರಬಲಂ ಮಹತ್ ॥೪೦॥

ನಿಃಸಸರ್ಪ ಮಹಾಘೋಷಂ ಭೀಮಘೋಷ ಇವಾರ್ಣವಃ ।
ತಸ್ಯ ದಾಶರಥೇಃ ಪಾರ್ಶ್ವೇ ಶೂರಾಸ್ತೇ ಕಪಿಕುಞ್ಜರಾಃ ॥೪೧॥

ತೂರ್ಣಮಾಪುಪ್ಲುವುಃ ಸರ್ವೇ ಸದಶ್ವಾ ಇವ ಚೋದಿತಾಃ ।
ಕಪಿಭ್ಯಾಮೂಹ್ಯಮಾನೌ ತೌ ಶುಶುಭಾತೇ ನರರ್ಷಭೌ ॥೪೨॥

ಮಹದ್ಭ್ಯಾಮಿವ ಸಂಸ್ಪೃಷ್ಟೌ ಗ್ರಹಾಭ್ಯಾಂ ಚನ್ದ್ರಭಾಸ್ಕರೌ ।
ತತೋ ವಾನರರಾಜೇನ ಲಕ್ಷ್ಮಣೇನ ಚ ಪೂಜಿತಃ ॥೪೩॥

ಜಗಾಮ ರಾಮೋ ಧರ್ಮಾತ್ಮಾ ಸಸೈನ್ಯೋ ದಕ್ಷಿಣಾಂ ದಿಶಮ್ ।
ತಮಙ್ಗದಗತೋ ರಾಮಂ ಲಕ್ಷ್ಮಣಃ ಶುಭಯಾ ಗಿರಾ ॥೪೪॥

ಉವಾಚ ಪರಿಪೂರ್ಣಾರ್ಥಃ ವಚನಂ ಪ್ರತಿಭಾನವಾನ್ ।
ಹೃತಾಮವಾಪ್ಯ ವೈದೇಹೀಂ ಕ್ಷಿಪ್ರಂ ಹತ್ವಾ ಚ ರಾವಣಮ್ ॥೪೫॥

ಸಮೃದ್ಧಾರ್ಥಃ ಸಮೃದ್ಧಾರ್ಥಾಮಯೋಧ್ಯಾಂ ಪ್ರತಿ ಯಾಸ್ಯಸಿ ।
ಮಹಾನ್ತಿ ಚ ನಿಮಿತ್ತಾನಿ ದಿವಿ ಭೂಮೌ ಚ ರಾಘವ ॥೪೬॥

ಶುಭಾನಿ ತವ ಪಶ್ಯಾಮಿ ಸರ್ವಾಣ್ಯೇವಾರ್ಥಸಿದ್ಧಯೇ ।
ಅನುವಾತಿ ಶುಭೋ ವಾಯುಃ ಸೇನಾಂ ಮೃದುಹಿತಃ ಸುಖಃ ॥೪೭॥

ಪೂರ್ಣವಲ್ಗುಸ್ವರಾಶ್ಚೇಮೇ ಪ್ರವದನ್ತಿ ಮೃಗದ್ವಿಜಾಃ ।
ಪ್ರಸನ್ನಾಶ್ಚ ದಿಶಃ ಸರ್ವಾ ವಿಮಲಶ್ಚ ದಿವಾಕರಃ ॥೪೮॥

ಉಶನಾಶ್ಚ ಪ್ರಸನ್ನಾರ್ಚಿರನು ತ್ವಾಂ ಭಾರ್ಗವೋ ಗತಃ ।
ಬ್ರಹ್ಮರಾಶಿರ್ವಿಶುದ್ಧಶ್ಚ ಶುದ್ಧಾಶ್ಚ ಪರಮರ್ಷಯಃ ॥೪೯॥

ಅರ್ಚಿಷ್ಮನ್ತಃ ಪ್ರಕಾಶನ್ತೇ ಧ್ರುವಂ ಸರ್ವೇ ಪ್ರದಕ್ಷಿಣಮ್ ।
ತ್ರಿಶಙ್ಕುರ್ವಿಮಲೋ ಭಾತಿ ರಾಜರ್ಷಿಃ ಸಪುರೋಹಿತಃ ॥೫೦॥

ಪಿತಾಮಹವರೋಽಸ್ಮಾಕಮಿಕ್ಷ್ವಾಕೂಣಾಂ ಮಹಾತ್ಮನಾಮ್ ।
ವಿಮಲೇ ಚ ಪ್ರಕಾಶೇತೇ ವಿಶಾಖೇ ನಿರುಪದ್ರವೇ ॥೫೧॥

ನಕ್ಷತ್ರವರಮಸ್ಮಾಕಮಿಕ್ಷ್ವಾಕೂಣಾಂ ಮಹಾತ್ಮನಾಮ್ ।
ನೈರ್ಋತಂ ನೈರ್ಋತಾನಾಂ ಚ ನಕ್ಷತ್ರಮಭಿಪೀಡ್ಯತೇ ॥೫೨॥

ಮೂಲೋ ಮೂಲವತಾಂ ಸ್ಪೃಷ್ಟೋ ಧೂಪ್ಯತೇ ಧೂಮಕೇತುನಾ ।
ಸರ್ವಂ ಚೈತದ್ವಿನಾಶಾಯ ರಾಕ್ಷಸಾನಾಮುಪಸ್ಥಿತಮ್ ॥೫೩॥

ಕಾಲೇ ಕಾಲಗೃಹೀತಾನಾಂ ನಕ್ಷತ್ರಂ ಗ್ರಹಪೀಡಿತಮ್ ।
ಪ್ರಸನ್ನಾಃ ಸುರಸಾಶ್ಚಾಪೋ ವನಾನಿ ಫಲವನ್ತಿ ಚ ॥೫೪॥

ಪ್ರವಾನ್ತ್ಯಭ್ಯಧಿಕಂ ಗನ್ಧಾನ್ಯಥರ್ತುಕುಸುಮಾ ದ್ರುಮಾಃ ।
ವ್ಯೂಢಾನಿ ಕಪಿಸೈನ್ಯಾನಿ ಪ್ರಕಾಶನ್ತೇಽಧಿಕಂ ಪ್ರಭೋ ॥೫೫॥

ದೇವಾನಾಮಿವ ಸೈನ್ಯಾನಿ ಸಙ್ಗ್ರಾಮೇ ತಾರಕಾಮಯೇ ।
ಏವಮಾರ್ಯ ಸಮೀಕ್ಷ್ಯೈ ತಾನ್ಪ್ರೀತೋ ಭವಿತುಮರ್ಹಸಿ ॥೫೬॥

ಇತಿ ಭ್ರಾತರಮಾಶ್ವಾಸ್ಯ ಹೃಷ್ಟಃ ಸೌಮಿತ್ರಿರಬ್ರವೀತ್ ।
ಅಥಾವೃತ್ಯ ಮಹೀಂ ಕೃತ್ಸ್ನಾಂ ಜಗಾಮ ಮಹತೀ ಚಮೂಃ ॥೫೭॥

ಋಕ್ಷವಾನರಶಾರ್ದೂಲೈರ್ನಖದಂಷ್ಟ್ರಾಯುಧೈರ್ವೃತಾ ।
ಕರಾಗ್ರೈಶ್ಚರಣಾಗ್ರೈಶ್ಚ ವಾನರೈರುತ್ಥಿತಂ ರಜಃ ॥೫೮॥

ಭೀಮಮನ್ತರ್ದಧೇ ಲೋಕಂ ನಿವಾರ್ಯ ಸವಿತುಃ ಪ್ರಭಾಮ್ ।
ಸಪರ್ವತವನಾಕಾಶಾಂ ದಕ್ಷಿಣಾಂ ಹರಿವಾಹಿನೀ ॥೫೯॥

ಛಾದಯನ್ತೀ ಯಯೌ ಭೀಮಾ ದ್ಯಾಮಿವಾಮ್ಬುದಸಂತತಿಃ ।
ಉತ್ತರನ್ಯಾಂ ಚ ಸೇನಾಯಾಂ ಸತತಂ ಬಹುಯೋಜನಮ್ ॥೬೦॥

ನದೀಸ್ರೋತಾಂಸಿ ಸರ್ವಾಣಿ ಸಸ್ಯನ್ದುರ್ವಿಪರೀತವತ್ ।
ಸರಾಂಸಿ ವಿಮಲಾಮ್ಭಾಂಸಿ ದ್ರುಮಾಕೀರ್ಣಾಂಶ್ಚ ಪರ್ವತಾನ್ ॥೬೧॥

ಸಮಾನ್ಭೂಮಿಪ್ರದೇಶಾಂಶ್ಚ ವನಾನಿ ಫಲವನ್ತಿ ಚ ।
ಮಧ್ಯೇನ ಚ ಸಮನ್ತಾಚ್ಚ ತಿರ್ಯಕ್ಚಾಧಶ್ಚ ಸಾವಿಶತ್ ॥೬೨॥

ಸಮಾವೃತ್ಯ ಮಹೀಂ ಕೃತ್ಸ್ನಾಂ ಜಗಾಮ ಮಹತೀ ಚಮೂಃ ।
ತೇ ಹೃಷ್ಟಮನಸಃ ಸರ್ವೇ ಜಗ್ಮುರ್ಮಾರುತರಂಹಸಃ ॥೬೩॥

ಹರಯೋ ರಾಘವಸ್ಯಾರ್ಥೇ ಸಮಾರೋಪಿತವಿಕ್ರಮಾಃ ।
ಹರ್ಷವೀರ್ಯಬಲೋದ್ರೇಕಾನ್ದರ್ಶಯನ್ತಃ ಪರಸ್ಪರಮ್ ॥೬೪॥

ಯೌವನೋತ್ಸೇಕಜಾನ್ದರ್ಪಾನ್ವಿವಿಧಾಂಶ್ಚಕ್ರುರಧ್ವನಿ ।
ತತ್ರ ಕೇಚಿದ್ದ್ರುತಂ ಜಗ್ಮುರುತ್ಪೇತುಶ್ಚ ತಥಾಪರೇ ॥೬೫॥

ಕೇಚಿತ್ಕಿಲಿಕಿಲಾಂ ಚಕ್ರುರ್ವಾನರಾ ವನಗೋಚರಾಃ ।
ಪ್ರಾಸ್ಫೋಟಯಂಶ್ಚ ಪುಚ್ಛಾನಿ ಸಂನಿಜಘ್ನುಃ ಪದಾನ್ಯಪಿ ॥೬೬॥

ಭುಜಾನ್ವಿಕ್ಷಿಪ್ಯ ಶೈಲಾಂಶ್ಚ ದ್ರುಮಾನ್ಯನ್ಯೇ ಬಭಞ್ಜಿರೇ ।
ಆರೋಹನ್ತಶ್ಚ ಶೃಙ್ಗಾಣಿ ಗಿರೀಣಾಂ ಗಿರಿಗೋಚರಾಃ ॥೬೭॥

ಮಹಾನಾದಾನ್ವಿಮುಞ್ಚನ್ತಿ ಕ್ಷ್ವೇಲಾಮನ್ಯೇ ಪ್ರಚಕ್ರಿರೇ ।
ಊರುವೇಗೈಶ್ಚ ಮಮೃದುರ್ಲತಾಜಾಲಾನ್ಯನೇಕಶಃ ॥೬೮॥

ಜೃಮ್ಭಮಾಣಾಶ್ಚ ವಿಕ್ರಾನ್ತಾ ವಿಚಿಕ್ರೀಡುಃ ಶಿಲಾದ್ರುಮೈಃ ।
ಶತೈಃ ಶತಸಹಸ್ರೈಶ್ಚ ಕೋಟಿಭಿಶ್ಚ ಸಹಸ್ರಶಃ ॥೬೯॥

ವಾನರಾಣಾಂ ಸುಘೋರಾಣಾಂ ಯೂಥೈಃ ಪರಿವೃತಾ ಮಹೀ ।
ಸಾ ಸ್ಮ ಯಾತಿ ದಿವಾರಾತ್ರಂ ಮಹತೀ ಹರಿವಾಹಿನೀ ॥೭೦॥

ಹೃಷ್ಟಾ ಪ್ರಮುದಿತಾ ಸೇನಾ ಸುಗ್ರೀವೇಣಾಭಿರಕ್ಷಿತಾ ।
ವಾನರಾಸ್ತ್ವರಿತಂ ಯಾನ್ತಿ ಸರ್ವೇ ಯುದ್ಧಾಭಿನನ್ದಿನಃ ॥೭೧॥

ಮುಮೋಕ್ಷಯಿಷವಃ ಸೀತಾಂ ಮುಹೂರ್ತಂ ಕ್ವಾಪಿ ನಾಸತ ।
ತತಃ ಪಾದಪಸಂಬಾಧಂ ನಾನಾಮೃಗಸಮಾಯುತಮ್ ॥೭೨॥

ಸಹ್ಯಪರ್ವತಮಾಸೇದುರ್ಮಲಯಂ ಚ ಮಹೀಧರಮ್ ।
ಕಾನನಾನಿ ವಿಚಿತ್ರಾಣಿ ನದೀಪ್ರಸ್ರವಣಾನಿ ಚ ॥೭೩॥

ಪಶ್ಯನ್ನಭಿಯಯೌ ರಾಮಃ ಸಹ್ಯಸ್ಯ ಮಲಯಸ್ಯ ಚ ।
ಚಮ್ಪಕಾಂಸ್ತಿಲಕಾಂಶ್ಚೂತಾನಶೋಕಾನ್ಸಿನ್ಧುವಾರಕಾನ್ ॥೭೪॥

ಕರವೀರಾಂಶ್ಚ ತಿಮಿಶಾನ್ಭಞ್ಜನ್ತಿ ಸ್ಮ ಪ್ಲವಙ್ಗಮಾಃ ।
ಅಙ್ಕೋಲಾಂಶ್ಚ ಕರಞ್ಜಾಂಶ್ಚ ಪ್ಲಕ್ಷನ್ಯಗ್ರೋಧತಿನ್ದುಕಾನ್ ॥೭೫॥

ಜಮ್ಬೂಕಾಮಲಕಾನ್ನೀಪಾನ್ಭಞ್ಜನ್ತಿ ಸ್ಮ ಪ್ಲವಙ್ಗಮಾಃ ।
ಪ್ರಸ್ತರೇಷು ಚ ರಮ್ಯೇಷು ವಿವಿಧಾಃ ಕಾನನದ್ರುಮಾಃ ॥೭೬॥

ವಾಯುವೇಗಪ್ರಚಲಿತಾಃ ಪುಷ್ಪೈರವಕಿರನ್ತಿ ತಾನ್ ।
ಮಾರುತಃ ಸುಖಸಂಸ್ಪರ್ಶೋ ವಾತಿ ಚನ್ದನಶೀತಲಃ ।
ಷಟ್ಪದೈರನುಕೂಜದ್ಭಿರ್ವನೇಷು ಮಧುಗನ್ಧಿಷು ॥೭೭॥

ಅಧಿಕಂ ಶೈಲರಾಜಸ್ತು ಧಾತುಭಿಃ ಸುವಿಭೂಷಿತಃ ।
ಧಾತುಭ್ಯಃ ಪ್ರಸೃತೋ ರೇಣುರ್ವಾಯುವೇಗವಿಘಟ್ಟಿತಃ ।
ಸುಮಹದ್ವಾನರಾನೀಕಂ ಛಾದಯಾಮಾಸ ಸರ್ವತಃ ॥೭೮॥

ಗಿರಿಪ್ರಸ್ಥೇಷು ರಮ್ಯೇಷು ಸರ್ವತಃ ಸಂಪ್ರಪುಷ್ಪಿತಾಃ ।
ಕೇತಕ್ಯಃ ಸಿನ್ಧುವಾರಾಶ್ಚ ವಾಸನ್ತ್ಯಶ್ಚ ಮನೋರಮಾಃ ।
ಮಾಧವ್ಯೋ ಗನ್ಧಪೂರ್ಣಾಶ್ಚ ಕುನ್ದಗುಲ್ಮಾಶ್ಚ ಪುಷ್ಪಿತಾಃ ॥೭೯॥

ಚಿರಿಬಿಲ್ವಾ ಮಧೂಕಾಶ್ಚ ವಞ್ಜುಲಾ ಬಕುಲಾಸ್ತಥಾ ।
ರಂಜಕಾಸ್ತಿಲಕಾಶ್ಚೈವ ನಾಗವೃಕ್ಷಾಶ್ಚ ಪುಷ್ಪಿತಾಃ ॥೮೦॥

ಚೂತಾಃ ಪಾಟಲಯಶ್ಚೈವ ಕೋವಿದಾರಾಶ್ಚ ಪುಷ್ಪಿತಾಃ ।
ಮುಚುಲಿನ್ದಾರ್ಜುನಾಶ್ಚೈವ ಶಿಂಶುಪಾಃ ಕುಟಜಾಸ್ತಥಾ ॥೮೧॥

ಹಿನ್ತಾಲಾಸ್ತಿನಿಶಾಶ್ಚೈವ ಚೂರ್ಣಕಾ ನೀಪಕಾಸ್ತಥಾ ।
ನೀಲಾಶೋಕಾಶ್ಚ ಸರಲಾ ಅಙ್ಕೋಲಾಃ ಪದ್ಮಕಾಸ್ತಥಾ ॥೮೨॥

ಪ್ರೀಯಮಾಣೈಃ ಪ್ಲವಙ್ಗೈಸ್ತು ಸರ್ವೇ ಪರ್ಯಾಕುಲೀಕೃತಾಃ ।
ವಾಪ್ಯಸ್ತಸ್ಮಿನ್ಗಿರೌ ರಮ್ಯಾಃ ಪಲ್ವಲಾನಿ ತಥೈವ ಚ ॥೮೩॥

ಚಕ್ರವಾಕಾನುಚರಿತಾಃ ಕಾರಣ್ಡವನಿಷೇವಿತಾಃ ।
ಪ್ಲವೈಃ ಕ್ರೌಞ್ಚೈಶ್ಚ ಸಂಕೀರ್ಣಾ ವರಾಹಮೃಗಸೇವಿತಾಃ ॥೮೪॥

ಋಕ್ಷೈಸ್ತರಕ್ಷುಭಿಃ ಸಿಂಹೈಃ ಶಾರ್ದೂಲೈಶ್ಚ ಭಯಾವಹೈಃ ।
ವ್ಯಾಲೈಶ್ಚ ಬಹುಭಿರ್ಭೀಮೈಃ ಸೇವ್ಯಮಾನಾಃ ಸಮನ್ತತಃ ॥೮೫॥

ಪದ್ಮೈಃ ಸೌಗನ್ಧಿಕೈಃ ಫುಲ್ಲೈಃ ಕುಮುದೈಶ್ಚೋತ್ಪಲೈಸ್ತಥಾ ।
ವಾರಿಜೈರ್ವಿವಿಧೈಃ ಪುಷ್ಪೈ ರಮ್ಯಾಸ್ತತ್ರ ಜಲಾಶಯಾಃ ॥೮೬॥

ತಸ್ಯ ಸಾನುಷು ಕೂಜನ್ತಿ ನಾನಾದ್ವಿಜಗಣಾಸ್ತಥಾ ।
ಸ್ನಾತ್ವಾ ಪೀತ್ವೋದಕಾನ್ಯತ್ರ ಜಲೇ ಕ್ರೀಡನ್ತಿ ವಾನರಾಃ ॥೮೭॥

ಅನ್ಯೋನ್ಯಂ ಪ್ಲಾವಯನ್ತಿ ಸ್ಮ ಶೈಲಮಾರುಹ್ಯ ವಾನರಾಃ ।
ಫಲಾನ್ಯಮೃತಗನ್ಧೀನಿ ಮೂಲಾನಿ ಕುಸುಮಾನಿ ಚ ॥೮೮॥

ಬಭಞ್ಜುರ್ವಾನರಾಸ್ತತ್ರ ಪಾದಪಾನಾಂ ಬಲೋತ್ಕಟಾಃ ।
ದ್ರೋಣಮಾತ್ರಪ್ರಮಾಣಾನಿ ಲಮ್ಬಮಾನಾನಿ ವಾನರಾಃ ।
ಯಯುಃ ಪಿಬನ್ತೋ ಹೃಷ್ಟಾಸ್ತೇ ಮಧೂನಿ ಮಧುಪಿಙ್ಗಲಾಃ ॥

ಪಾದಪಾನವಭಞ್ಜನ್ತೋ ವಿಕರ್ಷನ್ತಸ್ತಥಾ ಲತಾಃ ।
ವಿಧಮನ್ತೋ ಗಿರಿವಾರನ್ಪ್ರಯಯುಃ ಪ್ಲವಗರ್ಷಭಾಃ ॥೯೦॥

ವೃಕ್ಷೇಭ್ಯೋಽನ್ಯೇ ತು ಕಪಯೋ ನರ್ದನ್ತೋ ಮಧುದರ್ಪಿತಾಃ ।
ಅನ್ಯೇ ವೃಕ್ಷಾನ್ಪ್ರಪದ್ಯನ್ತೇ ಪ್ರಪಿಬನ್ತ್ಯಪಿ ಚಾಪರೇ ॥೯೧॥

ಬಭೂವ ವಸುಧಾ ತೈಸ್ತು ಸಂಪೂರ್ಣಾ ಹರಿಯೂಥಪೈಃ ।
ಯಥಾ ಕಲಮಕೇದಾರೈಃ ಪಕ್ವೈರಿವ ವಸುನ್ಧರಾ ॥೯೨॥

ಮಹೇನ್ದ್ರಮಥ ಸಂಪ್ರಾಪ್ಯ ರಾಮೋ ರಾಜೀವಲೋಚನಃ ।
ಅಧ್ಯಾರೋಹನ್ಮಹಾಬಾಹುಃ ಶಿಖರಂ ದ್ರುಮಭೂಷಿತಮ್ ॥೯೩॥

ತತಃ ಶಿಖರಮಾರುಹ್ಯ ರಾಮೋ ದಶರಥಾತ್ಮಜಃ ।
ಕೂರ್ಮಮೀನಸಮಾಕೀರ್ಣಮಪಶ್ಯತ್ಸಲಿಲಾಶಯಮ್ ॥೯೪॥

ತೇ ಸಹ್ಯಂ ಸಮತಿಕ್ರಮ್ಯ ಮಲಯಂ ಚ ಮಹಾಗಿರಿಮ್ ।
ಆಸೇದುರಾನುಪೂರ್ವ್ಯೇಣ ಸಮುದ್ರಂ ಭೀಮನಿಃಸ್ವನಮ್ ॥೯೫॥

ಅವರುಹ್ಯ ಜಗಾಮಾಶು ವೇಲಾವನಮನುತ್ತಮಮ್ ।
ರಾಮೋ ರಮಯತಾಂ ಶ್ರೇಷ್ಠಃ ಸಸುಗ್ರೀವಃ ಸಲಕ್ಷ್ಮಣಃ ॥೯೬॥

ಅಥ ಧೌತೋಪಲತಲಾಂ ತೋಯೌಘೈಃ ಸಹಸೋತ್ಥಿತೈಃ ।
ವೇಲಾಮಾಸಾದ್ಯ ವಿಪುಲಾಂ ರಾಮೋ ವಚನಮಬ್ರವೀತ್ ॥೯೭॥

ಏತೇ ವಯಮನುಪ್ರಾಪ್ತಾಃ ಸುಗ್ರೀವ ವರುಣಾಲಯಮ್ ।
ಇಹೇದಾನೀಂ ವಿಚಿನ್ತಾ ಸಾ ಯಾ ನಃ ಪೂರ್ವಂ ಸಮುತ್ಥಿತಾ ॥೯೮॥

ಅತಃ ಪರಮತೀರೋಽಯಂ ಸಾಗರಃ ಸರಿತಾಂ ಪತಿಃ ।
ನ ಚಾಯಮನುಪಾಯೇನ ಶಕ್ಯಸ್ತರಿತುಮರ್ಣವಃ ॥೯೯॥

ತದಿಹೈವ ನಿವೇಶೋಽಸ್ತು ಮನ್ತ್ರಃ ಪ್ರಸ್ತೂಯತಾಮಿಹ ।
ಯಥೇದಂ ವಾನರಬಲಂ ಪರಂ ಪಾರಮವಾಪ್ನುಯಾತ್ ॥೧೦೦॥

ಇತೀವ ಸ ಮಹಾಬಾಹುಃ ಸೀತಾಹರಣಕರ್ಶಿತಃ ।
ರಾಮಃ ಸಾಗರಮಾಸಾದ್ಯ ವಾಸಮಾಜ್ಞಾಪಯತ್ತದಾ ॥೧೦೧॥

ಸರ್ವಾಃ ಸೇನಾ ನಿವೇಶ್ಯನ್ತಾಂ ವೇಲಾಯಾಂ ಹರಿಪುಙ್ಗವ ।
ಸಂಪ್ರಾಪ್ತೋ ಮನ್ತ್ರಕಾಲೋ ನಃ ಸಾಗರಸ್ಯಾಸ್ಯ ಲಙ್ಘನೇ ॥೧೦೨॥

ಸ್ವಾಂ ಸ್ವಾಂ ಸೇನಾಂ ಸಮುತ್ಸೃಜ್ಯ
ಮಾ ಚ ಕಶ್ಚಿತ್ಕುತೋ ವ್ರಜೇತ್ ।
ಗಚ್ಛನ್ತು ವಾನರಾಃ ಶೂರಾಃ
ಜ್ಞೇಯಂ ಛನ್ನಂ ಭಯಂ ಚ ನಃ ॥೧೦೩॥

ರಾಮಸ್ಯ ವಚನಂ ಶ್ರುತ್ವಾ ಸುಗ್ರೀವಃ ಸಹಲಕ್ಷ್ಮಣಃ ।
ಸೇನಾಂ ನ್ಯವೇಶಯತ್ತೀರೇ ಸಾಗರಸ್ಯ ದ್ರುಮಾಯುತೇ ॥೧೦೪॥

ವಿರರಾಜ ಸಮೀಪಸ್ಥಂ ಸಾಗರಸ್ಯ ಚ ತದ್ಬಲಮ್ ।
ಮಧುಪಾಣ್ಡುಜಲಃ ಶ್ರೀಮಾನ್ದ್ವಿತೀಯ ಇವ ಸಾಗರಃ ॥೧೦೫॥

ವೇಲಾವನಮುಪಾಗಮ್ಯ ತತಸ್ತೇ ಹರಿಪುಙ್ಗವಾಃ ।
ವಿನಿವಿಷ್ಟಾಃ ಪರಂ ಪಾರಂ ಕಾಂಕ್ಷಮಾಣಾ ಮಹೋದಧೇಃ ॥೧೦೬॥

ತೇಷಾಂ ನಿವಿಶಮಾನಾನಾಂ ಸೈನ್ಯಸನ್ನಾಹನಿಃಸ್ವನಃ ।
ಅನ್ತರ್ಧಾಯ ಮಹಾನಾದಮರ್ಣವಸ್ಯ ಪ್ರಶುಶ್ರುವೇ ॥೧೦೭॥

ಸಾ ವಾನರಾಣಾಂ ಧ್ವಜಿನೀ ಸುಗ್ರೀವೇಣಾಭಿಪಾಲಿತಾ ।
ತ್ರಿಧಾ ನಿವಿಷ್ಟಾ ಮಹತೀ ರಾಮಸ್ಯಾರ್ಥಪರಾಭವತ್ ॥೧೦೮॥

ಸಾ ಮಹಾರ್ಣವಮಾಸಾದ್ಯ ಹೃಷ್ಟಾ ವಾನರವಾಹಿನೀ ।
ವಾಯುವೇಗಸಮಾಧೂತಂ ಪಶ್ಯಮಾನಾ ಮಹಾರ್ಣವಮ್ ॥೧೦೯॥

ದೂರಪಾರಮಸಂಬಾಧಂ ರಕ್ಷೋಗಣನಿಷೇವಿತಮ್ ।
ಪಶ್ಯನ್ತೋ ವರುಣಾವಾಸಂ ವಿಷೇದುರ್ಹರಿಯೂಥಪಾಃ ॥೧೧೦॥

ಚಣ್ಡನಕ್ರಗ್ರಾಹಘೋರಂ ಕ್ಷಪಾದೌ ದಿವಸಕ್ಷಯೇ ।
ಹಸನ್ತಮಿವ ಫೇನೌಘೈರ್ನೃತ್ಯನ್ತಮಿವ ಚೋರ್ಮಿಭಿಃ ॥೧೧೧॥

ಚನ್ದ್ರೋದಯಸಮುದ್ಧೂತಂ ಪ್ರತಿಚನ್ದ್ರಸಮಾಕುಲಮ್ ।
ಚಣ್ಡಾನಿಲಮಹಾಗ್ರಾಹೈಃ ಕೀರ್ಣಂ ತಿಮಿತಿಮಿಙ್ಗಿಲೈಃ ॥೧೧೨॥

ದೀಪ್ತಭೋಗೈರವಾಕೀರ್ಣಂ ಭುಜಙ್ಗೈರ್ವಾರುಣಾಲಯಮ್ ।
ಅವಗಾಢಂ ಮಹಾಸತ್ತ್ವೈರ್ನಾನಾಶೈಲಸಮಾಕುಲಮ್ ॥೧೧೩॥

ಸುದುರ್ಗಂ ದುರ್ಗಮಾರ್ಗಂ ತಮಗಾಧಮಸುರಾಲಯಮ್ ।
ಮಕರೈರ್ನಾಗಭೋಗೈಶ್ಚ ವಿಗಾಢಾ ವಾತಲೋಲಿತಾಃ ।
ಉತ್ಪೇತುಶ್ಚ ನಿಪೇತುಶ್ಚ ಪ್ರವೃದ್ಧಾ ಜಲರಾಶಯಃ ॥೧೧೪॥

ಅಗ್ನಿಚೂರ್ಣಮಿವಾವಿದ್ಧಂ ಭಾಸ್ವರಾಮ್ಬುಮಹೋರಗಮ್ ।
ಸುರಾರಿವಿಷಯಂ ಘೋರಂ ಪಾತಾಲವಿಷಯಂ ಸದಾ ॥೧೧೫॥

ಸಾಗರಂ ಚಾಮ್ಬರಪ್ರಖ್ಯಮಮ್ಬರಂ ಸಾಗರೋಪಮಮ್ ।
ಸಾಗರಂ ಚಾಮ್ಬರಂ ಚೇತಿ ನಿರ್ವಿಶೇಷಮದೃಶ್ಯತ ॥೧೧೬॥

ಸಂಪೃಕ್ತಂ ನಭಸಾಪ್ಯಮ್ಭಃ ಸಂಪೃಕ್ತಂ ಚ ನಭೋಽಮ್ಭಸಾ ।
ತಾದೃಗ್ರೂಪೇ ಚ ದೃಶ್ಯೇತೇ ತಾರಾರತ್ನಸಮಾಕುಲೇ ॥೧೧೭॥

ಸಮುತ್ಪತಿತಮೇಘಸ್ಯ ವೀಚಿಮಾಲಾಕುಲಸ್ಯ ಚ ।
ವಿಶೇಷೋ ನ ದ್ವಯೋರಾಸೀತ್ಸಾಗರಸ್ಯಾಮ್ಬರಸ್ಯ ಚ ॥೧೧೮॥

ಅನ್ಯೋನ್ಯಮಾಹತಾಃ ಸಕ್ತಾಃ ಸಸ್ವನುರ್ಭೀಮನಿಃಸ್ವನಾಃ ।
ಊರ್ಮಯಃ ಸಿನ್ಧುರಾಜಸ್ಯ ಮಹಾಭೇರ್ಯ ಇವಾಮ್ಬರೇ ॥೧೯॥

ರತ್ನೌಘಜಲಸನ್ನಾದಂ ವಿಷಕ್ತಮಿವ ವಾಯುನಾ ।
ಉತ್ಪತನ್ತಮಿವ ಕ್ರುದ್ಧಂ ಯಾದೋಗಣಸಮಾಕುಲಮ್ ॥೨೦॥

ದದೃಶುಸ್ತೇ ಮಹಾತ್ಮಾನೋ ವಾತಾಹತಮಪಾಂಪತಿಮ್ ।
ಅನಿಲೋದ್ಧತಮಾಕಾಶೇ ಪ್ರವಲ್ಗನ್ತಮಿವೋರ್ಮಿಭಿಃ ॥೨೧॥

ತತೋ ವಿಸ್ಮಯಮಾಪನ್ನಾ ದದೃಶುರ್ಹರಯಸ್ತದಾ ।
ಭ್ರಾನ್ತೋರ್ಮಿಜಲಸನ್ನಾದಂ ಪ್ರಲೋಲಮಿವ ಸಾಗರಮ್ ॥೨೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಚತುರ್ಥಃ ಸರ್ಗಃ

---

## ಪಞ್ಚಮಃ ಸರ್ಗಃ

ಸಾ ತು ನೀಲೇನ ವಿಧಿವತ್ಸ್ವಾರಕ್ಷಾ ಸುಸಮಾಹಿತಾ ।
ಸಾಗರಸ್ಯೋತ್ತರೇ ತೀರೇ ಸಾಧು ಸೇನಾ ನಿವೇಶಿತಾ ॥೧॥

ಮೈನ್ದಶ್ಚ ದ್ವಿವಿದಶ್ಚೋಭೌ ತತ್ರ ವಾನರಪುಂಗವೌ ।
ವಿಚೇರತುಶ್ಚ ತಾಂ ಸೇನಾಂ ರಕ್ಷಾರ್ಥಂ ಸರ್ವತೋದಿಶಮ್ ॥೨॥

ನಿವಿಷ್ಟಾಯಾಂ ತು ಸೇನಾಯಾಂ ತೀರೇ ನದನದೀಪತೇಃ ।
ಪಾರ್ಶ್ವಸ್ಥಂ ಲಕ್ಷ್ಮಣಂ ದೃಷ್ಟ್ವಾ ರಾಮೋ ವಚನಮಬ್ರವೀತ್ ॥೩॥

ಶೋಕಶ್ಚ ಕಿಲ ಕಾಲೇನ ಗಚ್ಛತಾ ಹ್ಯಪಗಚ್ಛತಿ ।
ಮಮ ಚಾಪಶ್ಯತಃ ಕಾನ್ತಾಮಹನ್ಯಹನಿ ವರ್ಧತೇ ॥೪॥

ನ ಮೇ ದುಃಖಂ ಪ್ರಿಯಾ ದೂರೇ ನ ಮೇ ದುಃಖಂ ಹೃತೇತಿ ವಾ ।
ಏತದೇವಾನುಶೋಚಾಮಿ ವಯೋಽಸ್ಯಾ ಹ್ಯತಿವರ್ತತೇ ॥೫॥

ವಾಹಿ ವಾತ ಯತಃ ಕಾನ್ತಾ ತಾಂ ಸ್ಪೃಷ್ಟ್ವಾ ಮಾಮಪಿ ಸ್ಪೃಶ ।
ತ್ವಯಿ ಮೇ ಗಾತ್ರಸಂಸ್ಪರ್ಶಶ್ಚನ್ದ್ರೇ ದೃಷ್ಟಿಸಮಾಗಮಃ ॥೬॥

ತನ್ಮೇ ದಹತಿ ಗಾತ್ರಾಣಿ ವಿಷಂ ಪೀತಮಿವಾಶಯೇ ।
ಹಾ ನಾಥೇತಿ ಪ್ರಿಯಾ ಸಾ ಮಾಂ ಹ್ರಿಯಮಾಣಾ ಯದಬ್ರವೀತ್ ॥

ತದ್ವಿಯೋಗೇನ್ಧನವತಾ ತಚ್ಚಿನ್ತಾವಿಪುಲಾರ್ಚಿಷಾ ।
ರಾತ್ರಿಂದಿವಂ ಶರೀರಂ ಮೇ ದಹ್ಯತೇ ಮದನಾಗ್ನಿನಾ ॥೮॥

ಅವಗಾಹ್ಯಾರ್ಣವಂ ಸ್ವಪ್ಸ್ಯೇ ಸೌಮಿತ್ರೇ ಭವತಾ ವಿನಾ ।
ಕಥಂಚಿತ್ಪ್ರಜ್ವಲನ್ಕಾಮಃ ನ ಮಾಂ ಸುಪ್ತಂ ಜಲೇ ದಹೇತ್ ॥೯॥

ಬಹ್ವೇತತ್ಕಾಮಯಾನಸ್ಯ ಶಕ್ಯಮೇತೇನ ಜೀವಿತುಮ್ ।
ಯದಹಂ ಸಾ ಚ ವಾಮೋರೂರೇಕಾಂ ಧರಣಿಮಾಶ್ರಿತೌ ॥೧೦॥

ಕೇದಾರಸ್ಯೇವ ಕೇದಾರಃ ಸೋದಕಸ್ಯ ನಿರೂದಕಃ ।
ಉಪಸ್ನೇಹೇನ ಜೀವಾಮಿ ಜೀವನ್ತೀಂ ಯಚ್ಛೃಣೋಮಿ ತಾಮ್ ॥

ಕದಾ ನು ಖಲು ಸುಶ್ರೋಣೀಂ ಶತಪತ್ರಾಯತೇಕ್ಷಣಾಮ್ ।
ವಿಜಿತ್ಯ ಶತ್ರೂನ್ದ್ರಕ್ಷ್ಯಾಮಿ ಸೀತಾಂ ಸ್ಫೀತಾಮಿವ ಶ್ರಿಯಮ್ ॥೧೨॥

ಕದಾ ಚಾರುಸುದನ್ತೋಷ್ಠಂ ತಸ್ಯಾಃ ಪದ್ಮಮಿವಾನನಮ್ ।
ಈಷದುನ್ನಾಮ್ಯ ಪಾಸ್ಯಾಮಿ ರಸಾಯನಮಿವಾತುರಃ ॥೧೩॥

ತಸ್ಯಾಸ್ತು ಸಂಹತೌ ಪೀನೌ ಸ್ತನೌ ತಾಲಫಲೋಪಮೌ ।
ಕದಾ ನು ಖಲು ಸೋತ್ಕಮ್ಪೌ ಶ್ಲಿಷ್ಯನ್ತ್ಯಾ ಮಾಂ ಭಜಿಷ್ಯತಃ ॥೧೪॥

ಸಾ ನೂನಮಸಿತಾಪಾಙ್ಗೀ ರಕ್ಷೋಮಧ್ಯಗತಾ ಸತೀ ।
ಮನ್ನಾಥಾ ನಾಥಹೀನೇವ ತ್ರಾತಾರಂ ನಾಧಿಗಚ್ಛತಿ ॥೧೫॥

ಕಥಂ ಜನಕರಾಜಸ್ಯ ದುಹಿತಾ ಸಾ ಮಮ ಪ್ರಿಯಾ ।
ರಾಕ್ಷಸೀಮಧ್ಯಗಾ ಶೇತೇ ಸ್ನುಷಾ ದಶರಥಸ್ಯ ಚ ॥೧೬॥

ಕದಾ ವಿಕ್ಷೋಭ್ಯ ರಕ್ಷಾಂಸಿ ಸಾ ವಿಧೂಯೋತ್ಪತಿಷ್ಯತಿ ।
ವಿಧೂಯ ಜಲದಾನ್ನೀಲಾನ್ ಶಶಿರೇಖಾ ಶರತ್ಸ್ವಿವ ॥೧೭॥

ಸ್ವಭಾವತನುಕಾ ನೂನಂ ಶೋಕೇನಾನಶನೇನ ಚ ।
ಭೂಯಸ್ತನುತರಾ ಸೀತಾ ದೇಶಕಾಲವಿಪರ್ಯಯಾತ್ ॥೧೮॥

ಕದಾ ನು ರಾಕ್ಷಸೇನ್ದ್ರಸ್ಯ ನಿಧಾಯೋರಸಿ ಸಾಯಕಾನ್ ।
ಸೀತಾಂ ಪ್ರತ್ಯಾಹರಿಷ್ಯಾಮಿ ಶೋಕಮುತ್ಸೃಜ್ಯ ಮಾನಸಮ್ ॥೧೯॥

ಕದಾ ನು ಖಲು ಮಾಂ ಸಾಧ್ವೀ ಸೀತಾ ಸುರಸುತೋಪಮಾ ।
ಸೋತ್ಕಣ್ಠಾ ಕಣ್ಠಮಾಲಮ್ಬ್ಯ ಮೋಕ್ಷ್ಯತ್ಯಾನನ್ದಜಂ ಪಯಃ ॥೨೦॥

ಕದಾ ಶೋಕಮಿಮಂ ಘೋರಂ ಮೈಥಿಲೀವಿಪ್ರಯೋಗಜಮ್ ।
ಸಹಸಾ ವಿಪ್ರಮೋಕ್ಷ್ಯಾಮಿ ವಾಸಃ ಶುಕ್ಲೇತರಂ ಯಥಾ ॥೨೧॥

ಏವಂ ವಿಲಪತಸ್ತಸ್ಯ ತತ್ರ ರಾಮಸ್ಯ ಧೀಮತಃ ।
ದಿನಕ್ಷಯಾನ್ಮನ್ದರುಚಿರ್ಭಾಸ್ಕರೋಽಸ್ತಮುಪಾಗಮತ್ ॥೨೨॥

ಆಶ್ವಾಸಿತೋ ಲಕ್ಷ್ಮಣೇನ ರಾಮಃ ಸಂಧ್ಯಾಮುಪಾಸತ ।
ಸ್ಮರನ್ಕಮಲಪತ್ರಾಕ್ಷೀಂ ಸೀತಾಂ ಶೋಕಾಕುಲೀಕೃತಃ ॥೨೩॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕಿಯೇ ಆದಿಕಾವ್ಯೇ
ಯುದ್ಧಕಾಣ್ಡೇ ಪಞ್ಚಮಃ ಸರ್ಗಃ

---

## ಷಷ್ಠಃ ಸರ್ಗಃ

ಲಙ್ಕಾಯಾಂ ತು ಕೃತಂ ಕರ್ಮ
ಘೋರಂ ದೃಷ್ಟ್ವಾ ಭಯಾವಹಮ್ ।
ರಾಕ್ಷಸೇನ್ದ್ರೋ ಹನುಮತಾ
ಶಕ್ರೇಣೇವ ಮಹಾತ್ಮನಾ ।
ಅಬ್ರವೀದ್ರಾಕ್ಷಸಾನ್ಸರ್ವಾನ್ ಹ್ರಿಯಾ ಕಿಂಚಿದವಾಙ್ಮುಖಃ ॥೧॥

ಧರ್ಷಿತಾ ಚ ಪ್ರವಿಷ್ಟಾ ಚ ಲಙ್ಕಾ ದುಷ್ಪ್ರಸಹಾ ಪುರೀ ।
ತೇನ ವಾನರಮಾತ್ರೇಣ ದೃಷ್ಟಾ ಸೀತಾ ಚ ಜಾನಕೀ ॥೨॥

ಪ್ರಾಸಾದೋ ಧರ್ಷಿತಶ್ಚೈತ್ಯಃ ಪ್ರವರಾ ರಾಕ್ಷಸಾ ಹತಾಃ ।
ಆಕುಲಾ ಚ ಪುರೀ ಲಙ್ಕಾ ಸರ್ವಾ ಹನುಮತಾ ಕೃತಾ ॥೩॥

ಕಿಂ ಕರಿಷ್ಯಾಮಿ ಭದ್ರಂ ವಃ ಕಿಂ ವಾ ಯುಕ್ತಮನನ್ತರಮ್ ।
ಉಚ್ಯತಾಂ ನಃ ಸಮರ್ಥಂ ಯತ್ಕೃತಂ ಚ ಸುಕೃತಂ ಭವೇತ್ ॥೪॥

ಮನ್ತ್ರಮೂಲಂ ಹಿ ವಿಜಯಂ ಪ್ರಾಹುರಾರ್ಯಾ ಮನಸ್ವಿನಃ ।
ತಸ್ಮಾದ್ವೈ ರೋಚಯೇ ಮನ್ತ್ರಂ ರಾಮಂ ಪ್ರತಿ ಮಹಾಬಲಾಃ ॥೫॥

ತ್ರಿವಿಧಾಃ ಪುರುಷಾ ಲೋಕೇ ಉತ್ತಮಾಧಮಮಧ್ಯಮಾಃ ।
ತೇಷಾಂ ತು ಸಮವೇತಾನಾಂ ಗುಣದೋಷೌ ವದಾಮ್ಯಹಮ್ ॥೬॥

ಮನ್ತ್ರಿಭಿರ್ಹಿತಸಂಯುಕ್ತೈಃ ಸಮರ್ಥೈರ್ಮನ್ತ್ರನಿರ್ಣಯೇ ।
ಮಿತ್ರೈರ್ವಾಪಿ ಸಮಾನಾರ್ಥೈರ್ಬಾನ್ಧವೈರ್ವಾ ಸಮಾಹಿತೈಃ ॥೭॥

ಸಹಿತೋ ಮನ್ತ್ರಯಿತ್ವಾ ಯಃ ಕರ್ಮಾರಮ್ಭಾನ್ಪ್ರವರ್ತಯೇತ್ ।
ದೈವೇ ಚ ಕುರುತೇ ಯತ್ನಂ ತಮಾಹುಃ ಪುರುಷೋತ್ತಮಮ್ ॥೮॥

ಏಕೋಽರ್ಥಂ ವಿಮೃಶೇದೇಕೋ ಧರ್ಮೇ ಪ್ರಕುರುತೇ ಮನಃ ।
ಏಕಃ ಕಾರ್ಯಾಣಿ ಕುರುತೇ ತಮಾಹುರ್ಮಧ್ಯಮಂ ನರಮ್ ॥೯॥

ಗುಣದೋಷಾವನಿಶ್ಚಿತ್ಯ ತ್ಯಕ್ತ್ವಾ ಧರ್ಮವ್ಯಪಾಶ್ರಯಮ್ ।
ಕರಿಷ್ಯಾಮೀತಿ ಯಃ ಕಾರ್ಯಮುಪೇಕ್ಷೇತ್ಸ ನರಾಧಮಃ ॥೧೦॥

ಯಥೇಮೇ ಪುರುಷಾ ನಿತ್ಯಮುತ್ತಮಾಧಮಮಧ್ಯಮಾಃ ।
ಏವಂ ಮನ್ತ್ರಾ ಹಿ ವಿಜ್ಞೇಯಾ ಉತ್ತಮಾಧಮಮಧ್ಯಮಾಃ ॥೧೧॥

ಐಕಮತ್ಯಮುಪಾಗಮ್ಯ ಶಾಸ್ತ್ರದೃಷ್ಟೇನ ಚಕ್ಷುಷಾ ।
ಮನ್ತ್ರಿಣೋ ಯತ್ರ ನಿರತಾಸ್ತಮಾಹುರ್ಮನ್ತ್ರಮುತ್ತಮಮ್ ॥೧೨॥

ಬಹ್ವ್ಯೋಽಪಿ ಮತಯೋ ಭೂತ್ವಾ ಮನ್ತ್ರಿಣಾಮರ್ಥನಿರ್ಣಯೇ ।
ಪುನರ್ಯತ್ರೈಕತಾಂ ಪ್ರಾಪ್ತಾಃ ಸ ಮನ್ತ್ರೋ ಮಧ್ಯಮಃ ಸ್ಮೃತಃ ॥೧೩॥

ಅನ್ಯೋನ್ಯಂ ಮತಿಮಾಸ್ಥಾಯ ಯತ್ರ ಸಂಪ್ರತಿಭಾಷ್ಯತೇ ।
ನ ಚೈಕಮತ್ಯೇ ಶ್ರೇಯೋಽಸ್ತಿ ಮನ್ತ್ರಃ ಸೋಽಧಮ ಉಚ್ಯತೇ ॥೧೪॥

ತಸ್ಮಾತ್ಸುಮನ್ತ್ರಿತಂ ಸಾಧು ಭವನ್ತೋ ಮತಿಸತ್ತಮಾಃ ।
ಕಾರ್ಯಂ ಸಂಪ್ರತಿಪದ್ಯನ್ತಾಮೇತತ್ಕೃತ್ಯಂ ಮತಂ ಮಮ ॥೧೫॥

ವಾನರಾಣಾಂ ಹಿ ವೀರಾಣಾಂ ಸಹಸ್ರೈಃ ಪರಿವಾರಿತಃ ।
ರಾಮೋಽಭ್ಯೇತಿ ಪುರೀಂ ಲಙ್ಕಾಮಸ್ಮಾಕಮುಪರೋಧಕಃ ॥೧೬॥

ತರಿಷ್ಯತಿ ಚ ಸುವ್ಯಕ್ತಂ ರಾಘವಃ ಸಾಗರಂ ಸುಖಮ್ ।
ತರಸಾ ಯುಕ್ತರೂಪೇಣ ಸಾನುಜಃ ಸಬಲಾನುಗಃ ॥೧೭॥

ಸಮುದ್ರಮುಚ್ಛೋಷಯತಿ ವೀರ್ಯೇಣಾನ್ಯತ್ಕರೋತಿ ವಾ ।
ಅಸ್ಮಿನ್ನೇವಂಗತೇ ಕಾರ್ಯೇ ವಿರುದ್ಧೇ ವಾನರೈಃ ಸಹ ।
ಹಿತಂ ಪುರೇ ಚ ಸೈನ್ಯೇ ಚ ಸರ್ವಂ ಸಂಮನ್ತ್ರ್ಯತಾಂ ಮಮ ॥೧೮॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಷಷ್ಠಃ ಸರ್ಗಃ

---

## ಸಪ್ತಮಃ ಸರ್ಗಃ

ಇತ್ಯುಕ್ತಾ ರಾಕ್ಷಸೇನ್ದ್ರೇಣ ರಾಕ್ಷಸಾಸ್ತೇ ಮಹಾಬಲಾಃ ।
ಊಚುಃ ಪ್ರಾಞ್ಜಲಯಃ ಸರ್ವೇ ರಾವಣಂ ರಾಕ್ಷಸೇಶ್ವರಮ್ ।
ದ್ವಿಷತ್ಪಕ್ಷಮವಿಜ್ಞಾಯ ನೀತಿಬಾಹ್ಯಾಸ್ತ್ವಬುದ್ಧಯಃ ॥೧॥

ರಾಜನ್ಪರಿಘಶಕ್ತ್ಯೃಷ್ಟಿ ಶೂಲಪಟ್ಟಿಶಸಂಕುಲಮ್ ।
ಸುಮಹನ್ನೋ ಬಲಂ ಕಸ್ಮಾದ್ವಿಷಾದಂ ಭಜತೇ ಭವಾನ್ ॥೨॥

ತ್ವಯಾ ಭೋಗವತೀಂ ಗತ್ವಾ ನಿರ್ಜಿತಾಃ ಪನ್ನಗಾ ಯುಧಿ ।
ಕೈಲಾಸಶಿಖರಾವಾಸೀ ಯಕ್ಷೈರ್ಬಹುಭಿರಾವೃತಃ ॥೩॥

ಸುಮಹತ್ಕದನಂ ಕೃತ್ವಾ ವಶ್ಯಸ್ತೇ ಧನದಃ ಕೃತಃ ॥೪॥

ಸ ಮಹೇಶ್ವರಸಖ್ಯೇನ ಶ್ಲಾಘಮಾನಸ್ತ್ವಯಾ ವಿಭೋ ।
ನಿರ್ಜಿತಃ ಸಮರೇ ರೋಷಾಲ್ಲೋಕಪಾಲೋ ಮಹಾಬಲಃ ॥೫॥

ವಿನಿಹತ್ಯ ಚ ಯಕ್ಷೌಘಾನ್ವಿಕ್ಷೋಭ್ಯ ಚ ವಿಗೃಹ್ಯ ಚ ।
ತ್ವಯಾ ಕೈಲಾಸಶಿಖರಾದ್ವಿಮಾನಮಿದಮಾಹೃತಮ್ ॥೬॥

ಮಯೇನ ದಾನವೇನ್ದ್ರೇಣ ತ್ವದ್ಭಯಾತ್ಸಖ್ಯಮಿಚ್ಛತಾ ।
ದುಹಿತಾ ತವ ಭಾರ್ಯಾರ್ಥೇ ದತ್ತಾ ರಾಕ್ಷಸಪುಂಗವ ॥೭॥

ದಾನವೇನ್ದ್ರೋ ಮಧುರ್ನಾಮ ವೀರ್ಯೋತ್ಸಿಕ್ತೋ ದುರಾಸದಃ ।
ವಿಗೃಹ್ಯ ವಶಮಾನೀತಃ ಕುಮ್ಭೀನಸ್ಯಾಃ ಸುಖಾವಹಃ ॥೮॥

ನಿರ್ಜಿತಾಸ್ತೇ ಮಹಾಬಾಹೋ ನಾಗಾ ಗತ್ವಾ ರಸಾತಲಮ್ ।
ವಾಸುಕಿಸ್ತಕ್ಷಕಃ ಶಙ್ಖೋ ಜಟೀ ಚ ವಶಮಾಹೃತಾಃ ॥೯॥

ಅಕ್ಷಯಾ ಬಲವನ್ತಶ್ಚ ಶೂರಾ ಲಬ್ಧವರಾಃ ಪುರಾ ।
ತ್ವಯಾ ಸಂವತ್ಸರಂ ಯುಧ್ವಾ ಸಮರೇ ದಾನವಾ ವಿಭೋ ॥೧೦॥

ಸ್ವಬಲಂ ಸಮುಪಾಶ್ರಿತ್ಯ ನೀತಾ ವಶಮರಿನ್ದಮ ।
ಮಾಯಾಶ್ಚಾಧಿಗತಾಸ್ತತ್ರ ಬಹವೋ ರಾಕ್ಷಸಾಧಿಪ ॥೧೧॥

ನಿರ್ಜಿತಾಃ ಸಮರೇ ರೋಷಾಲ್ಲೋಕಪಾಲಾ ಮಹಾಬಲಾಃ ।
ದೇವಲೋಕಮಿತೋ ಗತ್ವಾ ಶಕ್ರಶ್ಚಾಪಿ ವಿನಿರ್ಜಿತಃ ॥೧೨॥

ಶೂರಾಶ್ಚ ಬಲವನ್ತಶ್ಚ ವರುಣಸ್ಯ ಸುತಾ ರಣೇ ।
ನಿರ್ಜಿತಾಸ್ತೇ ಮಹಾಬಾಹೋ ಚತುರ್ವಿಧಬಲಾನುಗಾಃ ॥೧೩॥

ಮೃತ್ಯುದಣ್ಡಮಹಾಗ್ರಾಹಂ ಶಾಲ್ಮಲೀದ್ರುಮಮಣ್ಡಿತಮ್ ।
ಕಾಲಪಾಶಮಹಾವೀಚಿಂ ಯಮಕಿಙ್ಕರಪನ್ನಗಮ್ ॥೧೪॥

ಅವಗಾಹ್ಯ ತ್ವಯಾ ರಾಜನ್ಯಮಸ್ಯ ಬಲಸಾಗರಮ್ ।
ಜಯಶ್ಚ ವಿಪುಲಃ ಪ್ರಾಪ್ತೋ ಮೃತ್ಯುಶ್ಚ ಪ್ರತಿಷೇಧಿತಃ ।
ಸುಯುದ್ಧೇನ ಚ ತೇ ಸರ್ವೇ ಲೋಕಾಸ್ತತ್ರ ಸುತೋಷಿತಾಃ ॥೧೫॥

ಕ್ಷತ್ರಿಯೈರ್ಬಹುಭಿರ್ವೀರೈಃ ಶಕ್ರತುಲ್ಯಪರಾಕ್ರಮೈಃ ।
ಆಸೀದ್ವಸುಮತೀ ಪೂರ್ಣಾ ಮಹದ್ಭಿರಿವ ಪಾದಪೈಃ ॥೧೬॥

ತೇಷಾಂ ವೀರ್ಯಗುಣೋತ್ಸಾಹೈರ್ನ ಸಮೋ ರಾಘವೋ ರಣೇ ।
ಪ್ರಸಹ್ಯ ತೇ ತ್ವಯಾ ರಾಜನ್ಹತಾಃ ಪರಮದುರ್ಜಯಾಃ ॥೧೭॥

ತಿಷ್ಠ ವಾ ಕಿಂ ಮಹಾರಾಜ ಶ್ರಮೇಣ ತವ ವಾನರಾನ್ ।
ಅಯಮೇಕೋ ಮಹಾಬಾಹುರಿನ್ದ್ರಜಿತ್ಕ್ಷಪಯಿಷ್ಯತಿ ॥೧೮॥

ಅನೇನ ಹಿ ಮಹಾರಾಜ ಮಾಹೇಶ್ವರಮನುತ್ತಮಮ್ ।
ಇಷ್ಟ್ವಾ ಯಜ್ಞಂ ವರೋ ಲಬ್ಧೋ ಲೋಕೇ ಪರಮದುರ್ಲಭಃ ॥೧೯॥

ಶಕ್ತಿತೋಮರಮೀನಂ ಚ ವಿನಿಕೀರ್ಣಾನ್ತ್ರಶೈವಲಮ್ ।
ಗಜಕಚ್ಛಪಸಂಬಾಧಮಶ್ವಮಣ್ಡೂಕಸಂಕುಲಮ್ ॥೨೦॥

ರುದ್ರಾದಿತ್ಯಮಹಾಗ್ರಾಹಂ ಮರುದ್ವಸುಮಹೋರಗಮ್ ।
ರಥಾಶ್ವಗಜತೋಯೌಘಂ ಪದಾತಿಪುಲಿನಂ ಮಹತ್ ॥೨೧॥

ಅನೇನ ಹಿ ಸಮಾಸಾದ್ಯ ದೇವಾನಾಂ ಬಲಸಾಗರಮ್ ।
ಗೃಹೀತೋ ದೈವತಪತಿರ್ಲಙ್ಕಾಂ ಚಾಪಿ ಪ್ರವೇಶಿತಃ ॥೨೨॥

ಪಿತಾಮಹನಿಯೋಗಾಚ್ಚ ಮುಕ್ತಃ ಶಮ್ಬರವೃತ್ರಹಾ ।
ಗತಸ್ತ್ರಿವಿಷ್ಟಪಂ ರಾಜನ್ಸರ್ವದೇವನಮಸ್ಕೃತಃ ॥೨೩॥

ತಮೇವ ತ್ವಂ ಮಹಾರಾಜ ವಿಸೃಜೇನ್ದ್ರಜಿತಂ ಸುತಮ್ ।
ಯಾವದ್ವಾನರಸೇನಾಂ ತಾಂ ಸರಾಮಾಂ ನಯತಿ ಕ್ಷಯಮ್ ॥೨೪॥

ರಾಜನ್ನಾಪದಯುಕ್ತೇಯಮಾಗತಾ ಪ್ರಾಕೃತಾಜ್ಜನಾತ್ ।
ಹೃದಿ ನೈವ ತ್ವಯಾ ಕಾರ್ಯಾ ತ್ವಂ ವಧಿಷ್ಯಸಿ ರಾಘವಮ್ ॥೨೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಸಪ್ತಮಃ ಸರ್ಗಃ

---

## ಅಷ್ಟಮಃ ಸರ್ಗಃ

ತತೋ ನೀಲಾಮ್ಬುದನಿಭಃ ಪ್ರಹಸ್ತೋ ನಾಮ ರಾಕ್ಷಸಃ ।
ಅಬ್ರವೀತ್ಪ್ರಾಞ್ಜಲಿರ್ವಾಕ್ಯಂ ಶೂರಃ ಸೇನಾಪತಿಸ್ತದಾ ॥೧॥

ದೇವದಾನವಗನ್ಧರ್ವಾಃ ಪಿಶಾಚಪತಗೋರಗಾಃ ।
ನ ತ್ವಾಂ ಧರ್ಷಯಿತುಂ ಶಕ್ತಾಃ ಕಿಂ ಪುನರ್ವಾನರಾ ರಣೇ ॥೨॥

ಸರ್ವೇ ಪ್ರಮತ್ತಾ ವಿಶ್ವಸ್ತಾ ವಞ್ಚಿತಾಃ ಸ್ಮ ಹನೂಮತಾ ।
ನ ಹಿ ಮೇ ಜೀವತೋ ಗಚ್ಛೇಜ್ಜೀವನ್ಸ ವನಗೋಚರಃ ॥೩॥

ಸರ್ವಾಂ ಸಾಗರಪರ್ಯನ್ತಾಂ ಸಶೈಲವನಕಾನನಾಮ್ ।
ಕರೋಮ್ಯವಾನರಾಂ ಭೂಮಿಮಾಜ್ಞಾಪಯತು ಮಾಂ ಭವಾನ್ ॥೪॥

ರಕ್ಷಾಂ ಚೈವ ವಿಧಾಸ್ಯಾಮಿ ವಾನರಾದ್ರಜನೀಚರ ।
ನಾಗಮಿಷ್ಯತಿ ತೇ ದುಃಖಂ ಕಿಂಚಿದಾತ್ಮಾಪರಾಧಜಮ್ ॥೫॥

ಅಬ್ರವೀತ್ತು ಸುಸಂಕೃದ್ಧೋ ದುರ್ಮುಖೋ ನಾಮ ರಾಕ್ಷಸಃ ।
ಇದಂ ನ ಕ್ಷಮಣೀಯಂ ಹಿ ಸರ್ವೇಷಾಂ ನಃ ಪ್ರಧರ್ಷಣಮ್ ॥೬॥

ಅಯಂ ಪರಿಭವೋ ಭೂಯಃ ಪುರಸ್ಯಾನ್ತಃಪುರಸ್ಯ ಚ ।
ಶ್ರೀಮತೋ ರಾಕ್ಷಸೇನ್ದ್ರಸ್ಯ ವಾನರೇಣ ಪ್ರಧರ್ಷಣಮ್ ॥೭॥

ಅಸ್ಮಿನ್ಮುಹೂರ್ತೇ ಗತ್ವೈಕೋ ನಿವರ್ತಿಷ್ಯಾಮಿ ವಾನರಾನ್ ।
ಪ್ರವಿಷ್ಟಾನ್ಸಾಗರಂ ಭೀಮಮಮ್ಬರಂ ವಾ ರಸಾತಲಮ್ ॥೮॥

ತತೋಽಬ್ರವೀತ್ಸುಸಂಕ್ರುದ್ಧೋ ವಜ್ರದಂಷ್ಟ್ರೋ ಮಹಾಬಲಃ ।
ಪ್ರಗೃಹ್ಯ ಪರಿಘಂ ಘೋರಂ ಮಾಂಸಶೋಣಿತರೂಷಿತಮ್ ॥೯॥

ಕಿಂ ವೋ ಹನುಮತಾ ಕಾರ್ಯಂ ಕೃಪಣೇನ ದುರಾತ್ಮನಾ ।
ರಾಮೇ ತಿಷ್ಠತಿ ದುರ್ಧರ್ಷೇ ಸಸುಗ್ರೀವೇ ಸಲಕ್ಷ್ಮಣೇ ॥೧೦॥

ಅದ್ಯ ರಾಮಂ ಸಸುಗ್ರೀವಂ ಪರಿಘೇಣ ಸಲಕ್ಷ್ಮಣಮ್ ।
ಆಗಮಿಷ್ಯಾಮಿ ಹತ್ವೈಕೋ ವಿಕ್ಷೋಭ್ಯ ಹರಿವಾಹಿನೀಮ್ ॥೧೧॥

ಇದಂ ಮಮಾಪರಂ ವಾಕ್ಯಂ ಶೃಣು ರಾಜನ್ಯದಿಚ್ಛಸಿ ।
ಉಪಾಯಕುಶಲೋ ಹ್ಯೇವಂ ಜಯೇಚ್ಛತ್ರೂನತನ್ದ್ರಿತಃ ॥೧೨॥

ಕಾಮರೂಪಧರಾಃ ಶೂರಾಃ ಸುಭೀಮಾ ಭೀಮದರ್ಶನಾಃ ।
ರಾಕ್ಷಸಾ ವೈ ಸಹಸ್ರಾಣಿ ರಾಕ್ಷಸಾಧಿಪ ನಿಶ್ಚಿತಾಃ ॥೧೩॥

ಕಾಕುತ್ಸ್ಥಮುಪಸಂಗಮ್ಯ ಬಿಭ್ರತೋ ಮಾನುಷಂ ವಪುಃ ।
ಸರ್ವೇ ಹ್ಯಸಂಭ್ರಮಾ ಭೂತ್ವಾ ಬ್ರುವನ್ತು ರಘುಸತ್ತಮಮ್ ॥೧೪॥

ಪ್ರೇಷಿತಾ ಭರತೇನ ಸ್ಮ ತವ ಭ್ರಾತ್ರಾ ಯವೀಯಸಾ ।
ಸ ಹಿ ಸೇನಾಂ ಸಮುತ್ಥಾಪ್ಯ ಕ್ಷಿಪ್ರಮೇವೋಪಯಾಸ್ಯತಿ ॥೧೫॥

ತತೋ ವಯಮಿತಸ್ತೂರ್ಣಂ ಶೂಲಶಕ್ತಿಗದಾಧರಾಃ ।
ಚಾಪಬಾಣಾಸಿಹಸ್ತಾಶ್ಚ ತ್ವರಿತಾಸ್ತತ್ರ ಯಾಮಹೇ ॥೧೬॥

ಆಕಾಶೇ ಗಣಶಃ ಸ್ಥಿತ್ವಾ ಹತ್ವಾ ತಾಂ ಹರಿವಾಹಿನೀಮ್ ।
ಅಶ್ಮಶಸ್ತ್ರಮಹಾವೃಷ್ಟ್ಯಾ ಪ್ರಾಪಯಾಮ ಯಮಕ್ಷಯಮ್ ॥೧೭॥

ಏವಂ ಚೇದುಪಸರ್ಪೇತಾಮನಯಂ ರಾಮಲಕ್ಷ್ಮಣೌ ।
ಅವಶ್ಯಮಪನೀತೇನ ಜಹತಾಮೇವ ಜೀವಿತಮ್ ॥೧೮॥

ಕೌಮ್ಭಕರ್ಣಿಸ್ತತೋ ವೀರೋ
ನಿಕುಮ್ಭೋ ನಾಮ ವೀರ್ಯವಾನ್ ।

ಅಬ್ರವೀತ್ಪರಮಕ್ರುದ್ಧೋ
ರಾವಣಂ ಲೋಕರಾವಣಮ್ ॥೧೯॥

ಸರ್ವೇ ಭವನ್ತಸ್ತಿಷ್ಠನ್ತು ಮಹಾರಾಜೇನ ಸಂಗತಾಃ ।
ಅಹಮೇಕೋ ಹನಿಷ್ಯಾಮಿ ರಾಘವಂ ಸಹಲಕ್ಷ್ಮಣಮ್ ।
ಸುಗ್ರೀವಂ ಚ ಹನೂಮನ್ತಂ ಸರ್ವಾನೇವ ಚ ವಾನರಾನ್ ॥೨೦॥

ತತೋ ವಜ್ರಹನುರ್ನಾಮ ರಾಕ್ಷಸಃ ಪರ್ವತೋಪಮಃ ।
ಕ್ರುದ್ಧಃ ಪರಿಲಿಹನ್ಸೃಕ್ಕಾಂ ಜಿಹ್ವಯಾ ವಾಕ್ಯಮಬ್ರವೀತ್ ॥೨೧॥

ಸ್ವೈರಂ ಕುರ್ವನ್ತು ಕಾರ್ಯಾಣಿ ಭವನ್ತೋ ವಿಗತಜ್ವರಾಃ ।
ಏಕೋಽಹಂ ಭಕ್ಷಯಿಷ್ಯಾಮಿ ತಾನ್ಸರ್ವಾನ್ಹರಿಯೂಥಪಾನ್ ॥೨೨॥

ಸ್ವಸ್ಥಾಃ ಕ್ರೀಡನ್ತು ನಿಶ್ಚಿನ್ತಾಃ ಪಿಬನ್ತೋ ಮಧುವಾರುಣೀಮ್ ।
ಅಹಮೇಕೋ ವಧಿಷ್ಯಾಮಿ ಸುಗ್ರೀವಂ ಸಹಲಕ್ಷ್ಮಣಮ್ ।
ಸಾಙ್ಗದಂ ಚ ಹನೂಮನ್ತಂ ರಾಮಂ ಚ ರಣಕುಞ್ಜರಮ್ ॥೨೩॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಅಷ್ಟಮಃ ಸರ್ಗಃ

---

## ನವಮಃ ಸರ್ಗಃ

ತತೋ ನಿಕುಮ್ಭೋ ರಭಸಃ
ಸೂರ್ಯಶತ್ರುರ್ಮಹಾಬಲಃ ।
ಸುಪ್ತಘ್ನೋ ಯಜ್ಞಹಾ ರಕ್ಷೋ
ಮಹಾಪಾರ್ಶ್ವೋ ಮಹೋದರಃ ॥೧॥

ಅಗ್ನಿಕೇತುಶ್ಚ ದುರ್ಧರ್ಷೋ ರಶ್ಮಿಕೇತುಶ್ಚ ವೀರ್ಯವಾನ್ ।
ಇನ್ದ್ರಜಿಚ್ಚ ಮಹಾತೇಜಾ ಬಲವಾನ್ರಾವಣಾತ್ಮಜಃ ॥೨॥

ಪ್ರಹಸ್ತೋಽಥ ವಿರೂಪಾಕ್ಷೋ ವಜ್ರದಂಷ್ಟ್ರೋ ಮಹಾಬಲಃ ।
ಧೂಮ್ರಾಕ್ಷಶ್ಚಾತಿಕಾಯಶ್ಚ ದುರ್ಮುಖಶ್ಚೈವ ರಾಕ್ಷಸಃ ॥೩॥

ಪರಿಘಾನ್ಪಟ್ಟಿಶಾನ್ಪ್ರಾಸಾನ್ ಶಕ್ತಿಶೂಲಪರಶ್ವಧಾನ್ ।
ಚಾಪಾನಿ ಚ ಸಬಾಣಾನಿ ಖಡ್ಗಾಂಶ್ಚ ವಿಪುಲಾನ್ ಶಿತಾನ್ ॥೪॥

ಪ್ರಗೃಹ್ಯ ಪರಮಕ್ರುದ್ಧಾಃ ಸಮುತ್ಪತ್ಯ ಚ ರಾಕ್ಷಸಾಃ ।
ಅಬ್ರುವನ್ರಾವಣಂ ಸರ್ವೇ ಪ್ರದೀಪ್ತಾ ಇತ ತೇಜಸಾ ॥೫॥

ಅದ್ಯ ರಾಮಂ ವಧಿಷ್ಯಾಮಃ ಸುಗ್ರೀವಂ ಚ ಸಲಕ್ಷ್ಮಣಮ್ ।
ಕೃಪಣಂ ಚ ಹನೂಮನ್ತಂ ಲಙ್ಕಾ ಯೇನ ಪ್ರದೀಪಿತಾ ॥೬॥

ತಾನ್ಗೃಹೀತಾನಾಯುಧಾನ್ಸರ್ವಾನ್ವಾರಯಿತ್ವಾ ವಿಭೀಷಣಃ ।
ಅಬ್ರವೀತ್ಪ್ರಾಞ್ಜಲಿರ್ವಾಕ್ಯಂ ಪುನಃ ಪ್ರತ್ಯುಪವೇಶ್ಯ ತಾನ್ ॥೭॥

ಅಪ್ಯುಪಾಯೈಸ್ತ್ರಿಭಿಸ್ತಾತ ಯೋಽರ್ಥಃ ಪ್ರಾಪ್ತುಂ ನ ಶಕ್ಯತೇ ।
ತಸ್ಯ ವಿಕ್ರಮಕಾಲಾಂಸ್ತಾನ್ಯುಕ್ತಾನಾಹುರ್ಮನೀಷಿಣಃ ॥೮॥

ಪ್ರಮತ್ತೇಷ್ವಭಿಯುಕ್ತೇಷು ದೈವೇನ ಪ್ರಹತೇಷು ಚ ।
ವಿಕ್ರಮಾಸ್ತಾತ ಸಿದ್ಧ್ಯನ್ತಿ ಪರೀಕ್ಷ್ಯ ವಿಧಿನಾ ಕೃತಾಃ ॥೯॥

ಅಪ್ರಮತ್ತಂ ಕಥಂ ತಂ ತು ವಿಜಿಗೀಷುಂ ಬಲೇ ಸ್ಥಿತಮ್ ।
ಜಿತರೋಷಂ ದುರಾಧರ್ಷಂ ಪ್ರಧರ್ಷಯಿತುಮಿಚ್ಛಥ ॥೧೦॥

ಸಮುದ್ರಂ ಲಙ್ಘಯಿತ್ವಾ ತು ಘೋರಂ ನದನದೀಪತಿಮ್ ।
ಗತಂ ಹನುಮತೋ ಲೋಕೇ ಕೋ ವಿದ್ಯಾತ್ತರ್ಕಯೇತ ವಾ ॥೧೧॥

ಬಲಾನ್ಯಪರಿಮೇಯಾನಿ ವೀರ್ಯಾಣಿ ಚ ನಿಶಾಚರಾಃ ।
ಪರೇಷಾಂ ಸಹಸಾವಜ್ಞಾ ನ ಕರ್ತವ್ಯಾ ಕಥಂಚನ ॥೧೨॥

ಕಿಂ ಚ ರಾಕ್ಷಸರಾಜಸ್ಯ ರಾಮೇಣಾಪಕೃತಂ ಪುರಾ ।
ಆಜಹಾರ ಜನಸ್ಥಾನಾದ್ಯಸ್ಯ ಭಾರ್ಯಾಂ ಯಶಸ್ವಿನಃ ॥೧೩॥

ಖರೋ ಯದ್ಯತಿವೃತ್ತಸ್ತು ರಾಮೇಣ ನಿಹತೋ ರಣೇ ।
ಅವಶ್ಯಂ ಪ್ರಾಣಿನಾಂ ಪ್ರಾಣಾ ರಕ್ಷಿತವ್ಯಾ ಯಥಾಬಲಮ್ ॥೧೪॥

ಅಯಶಸ್ಯಮನಾಯುಷ್ಯಂ ಪರದಾರಾಭಿಮರ್ಶನಮ್ ।
ಅರ್ಥಕ್ಷಯಕರಂ ಘೋರಂ ಪಾಪಸ್ಯ ಚ ಪುನರ್ಭವಮ್ ॥೧೫॥

ಏತನ್ನಿಮಿತ್ತಂ ವೈದೇಹೀ ಭಯಂ ನಃ ಸುಮಹದ್ಭವೇತ್ ।
ಆಹೃತಾ ಸಾ ಪರಿತ್ಯಾಜ್ಯಾ ಕಲಹಾರ್ಥೇ ಕೃತೇನ ಕಿಮ್ ॥೧೬॥

ನ ನಃ ಕ್ಷಮಂ ವೀರ್ಯವತಾ ತೇನ ಧರ್ಮಾನುವರ್ತಿನಾ ।
ವೈರಂ ನಿರರ್ಥಕಂ ಕರ್ತುಂ ದೀಯತಾಮಸ್ಯ ಮೈಥಿಲೀ ॥೧೭॥

ಯಾವನ್ನ ಸಗಜಾಂ ಸಾಶ್ವಾಂ ಬಹುರತ್ನಸಮಾಕುಲಾಮ್ ।
ಪುರೀಂ ದಾರಯತೇ ಬಾಣೈರ್ದೀಯತಾಮಸ್ಯ ಮೈಥಿಲೀ ॥೧೮॥

ಯಾವತ್ಸುಘೋರಾ ಮಹತೀ ದುರ್ಧರ್ಷಾ ಹರಿವಾಹಿನೀ ।
ನಾವಸ್ಕನ್ದತಿ ನೋ ಲಙ್ಕಾಂ ದೀಯತಾಮಸ್ಯ ಮೈಥಿಲೀ ॥೧೯॥

ವಿನಶ್ಯೇದ್ಧಿ ಪುರೀ ಲಙ್ಕಾ ಶೂರಾಃ ಸರ್ವೇ ಚ ರಾಕ್ಷಸಾಃ ।
ರಾಮಸ್ಯ ದಯಿತಾ ಪತ್ನೀ ಸ್ವಯಂ ಯದಿ ನ ದೀಯತೇ ॥೨೦॥

ಪ್ರಸಾದಯೇ ತ್ವಾಂ ಬನ್ಧುತ್ವಾತ್ಕುರುಷ್ವ ವಚನಂ ಮಮ ।
ಹಿತಂ ತಥ್ಯಮಹಂ ಬ್ರೂಮಿ ದೀಯತಾಮಸ್ಯ ಮೈಥಿಲೀ ॥೨೧॥

ಪುರಾ ಶರತ್ಸೂರ್ಯಮರೀಚಿಸನ್ನಿಭಾ-
ನ್ನವಾನ್ಸುಪುಙ್ಖಾನ್ಸುದೃಢಾನ್ನೃಪಾತ್ಮಜಃ ।
ಸೃಜತ್ಯಮೋಘಾನ್ವಿಶಿಖಾನ್ವಧಾಯ ತೇ
ಪ್ರದೀಯತಾಂ ದಾಶರಥಾಯ ಮೈಥಿಲೀ ॥೨೨॥

ತ್ಯಜಸ್ವ ಕೋಪಂ ಸುಖಧರ್ಮನಾಶನಂ
ಭಜಸ್ವ ಧರ್ಮಂ ರತಿಕೀರ್ತಿವರ್ಧನಮ್ ।
ಪ್ರಸೀದ ಜೀವೇಮ ಸಪುತ್ರಬಾನ್ಧವಾಃ
ಪ್ರದೀಯತಾಂ ದಾಶರಥಾಯ ಮೈಥಿಲೀ ॥೨೩॥

ವಿಭೀಷಣವಚಃ ಶ್ರುತ್ವಾ ರಾವಣೋ ರಾಕ್ಷಸೇಶ್ವರಃ ।
ವಿಸರ್ಜಯಿತ್ವಾ ತಾನ್ಸರ್ವಾನ್ಪ್ರವಿವೇಶ ಸ್ವಕಂ ಗೃಹಮ್ ॥೨೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ನವಮಃ ಸರ್ಗಃ

---

## ದಶಮಃ ಸರ್ಗಃ

ತತಃ ಪ್ರತ್ಯುಷಸಿ ಪ್ರಾಪ್ತೇ ಪ್ರಾಪ್ತಧರ್ಮಾರ್ಥನಿಶ್ಚಯಃ ।
ರಾಕ್ಷಸಾಧಿಪತೇರ್ವೇಶ್ಮ ಭೀಮಕರ್ಮಾ ವಿಭೀಷಣಃ ॥೧॥

ಶೈಲಾಗ್ರಚಯಸಂಕಾಶಂ ಶೈಲಶೃಙ್ಗಮಿವೋನ್ನತಮ್ ।
ಸುವಿಭಕ್ತಮಹಾಕಕ್ಷ್ಯಂ ಮಹಾಜನಪರಿಗ್ರಹಮ್ ॥೨॥

ಮತಿಮದ್ಭಿರ್ಮಹಾಮಾತ್ಯೈರನುರಕ್ತೈರಧಿಷ್ಠಿತಮ್ ।
ರಾಕ್ಷಸೈಶ್ಚಾಪ್ತಪರ್ಯಾಪ್ತೈಃ ಸರ್ವತಃ ಪರಿರಕ್ಷಿತಮ್ ॥೩॥

ಮತ್ತಮಾತಙ್ಗನಿಃಶ್ವಾಸೈರ್ವ್ಯಾಕುಲೀಕೃತಮಾರುತಮ್ ।
ಶಙ್ಖಘೋಷಮಹಾಘೋಷಂ ತೂರ್ಯನಾದಾನುನಾದಿತಮ್ ॥೪॥

ಪ್ರಮದಾಜನಸಂಬಾಧಂ ಪ್ರಜಲ್ಪಿತಮಹಾಪಥಮ್ ।
ತಪ್ತಕಾಞ್ಚನನಿರ್ಯೂಹಂ ಭೂಷಣೋತ್ತಮಭೂಷಿತಮ್ ॥೫॥

ಗನ್ಧರ್ವಾಣಾಮಿವಾವಾಸಮಾಲಯಂ ಮರುತಾಮಿವ ।
ರತ್ನಸಂಚಯಸಂಬಾಧಂ ಭವನಂ ಭೋಗಿನಾಮಿವ ॥೬॥

ತಂ ಮಹಾಭ್ರಮಿವಾದಿತ್ಯಸ್ತೇಜೋವಿಸ್ತೃತರಶ್ಮಿಮಾನ್ ।
ಅಗ್ರಜಸ್ಯಾಲಯಂ ವೀರಃ ಪ್ರವಿವೇಶ ಮಹಾದ್ಯುತಿಃ ॥೭॥

ಪುಣ್ಯಾನ್ಪುಣ್ಯಾಹಘೋಷಾಂಶ್ಚ ವೇದವಿದ್ಭಿರುದಾಹೃತಾನ್ ।
ಶುಶ್ರಾವ ಸುಮಹಾತೇಜಾ ಭ್ರಾತುರ್ವಿಜಯಸಂಶ್ರಿತಾನ್ ॥೮॥

ಪೂಜಿತಾನ್ದಧಿಪಾತ್ರೈಶ್ಚ ಸರ್ಪಿಭಿಃ ಸುಮನೋಕ್ಷತೈಃ ।
ಮನ್ತ್ರವೇದವಿದೋ ವಿಪ್ರಾನ್ದದರ್ಶ ಸುಮಹಾಬಲಃ ॥೯॥

ಸ ಪೂಜ್ಯಮಾನೋ ರಕ್ಷೋಭಿರ್ದೀಪ್ಯಮಾನಂ ಸ್ವತೇಜಸಾ ।
ಆಸನಸ್ಥಂ ಮಹಾಬಾಹುರ್ವವನ್ದೇ ಧನದಾನುಜಮ್ ॥೧೦॥

ಸ ರಾಜದೃಷ್ಟಿಸಂಪನ್ನಮಾಸನಂ ಹೇಮಭೂಷಿತಮ್ ।
ಜಗಾಮ ಸಮುದಾಚಾರಂ ಪ್ರಯುಜ್ಯಾಚಾರಕೋವಿದಃ ॥೧೧॥

ಸ ರಾವಣಂ ಮಹಾತ್ಮಾನಂ ವಿಜನೇ ಮನ್ತ್ರಿಸನ್ನಿಧೌ ।
ಉವಾಚ ಹಿತಮತ್ಯರ್ಥಂ ವಚನಂ ಹೇತುನಿಶ್ಚಿತಮ್ ॥೧೨॥

ಪ್ರಸಾದ್ಯ ಭ್ರಾತರಂ ಜ್ಯೇಷ್ಠಂ ಸಾನ್ತ್ವೇನೋಪಸ್ಥಿತಕ್ರಮಃ ।
ದೇಶಕಾಲಾರ್ಥಸಂವಾದಿ ದೃಷ್ಟಲೋಕಪರಾವರಃ ॥೧೩॥

ಯದಾಪ್ರಭೃತಿ ವೈದೇಹೀ ಸಂಪ್ರಾಪ್ತೇಹ ಪರಂತಪ ।
ತದಾಪ್ರಭೃತಿ ದೃಶ್ಯನ್ತೇ ನಿಮಿತ್ತಾನ್ಯಶುಭಾನಿ ನಃ ॥೧೪॥

ಸಸ್ಫುಲಿಙ್ಗಃ ಸಧೂಮಾರ್ಚಿಃ ಸಧೂಮಕಲುಷೋದಯಃ ।
ಮನ್ತ್ರಸಂಧುಕ್ಷಿತೋಽಪ್ಯಗ್ನಿರ್ನ ಸಮ್ಯಗಭಿವರ್ಧತೇ ॥೧೫॥

ಅಗ್ನಿಷ್ಟೇಷ್ವಗ್ನಿಶಾಲಾಸು ತಥಾ ಬ್ರಹ್ಮಸ್ಥಲೀಷು ಚ ।
ಸರೀಸೃಪಾಣಿ ದೃಶ್ಯನ್ತೇ ಹವ್ಯೇಷು ಚ ಪಿಪೀಲಿಕಾಃ ॥೧೬॥

ಗವಾಂ ಪಯಾಂಸಿ ಸ್ಕನ್ನಾನಿ ವಿಮದಾ ವರಕುಞ್ಜರಾಃ ।
ದೀನಮಶ್ವಾಃ ಪ್ರಹೇಷನ್ತೇ ನ ಚ ಗ್ರಾಸಾಭಿನನ್ದಿನಃ ॥೧೭॥

ಖರೋಷ್ಟ್ರಾಶ್ವತರಾ ರಾಜನ್ಭಿನ್ನರೋಮಾಃ ಸ್ರವನ್ತಿ ಚ ।
ನ ಸ್ವಭಾವೇಽವತಿಷ್ಠನ್ತೇ ವಿಧಾನೈರಪಿ ಚಿನ್ತಿತಾಃ ॥೧೮॥

ವಾಯಸಾಃ ಸಙ್ಘಶಃ ಕ್ರೂರಾ ವ್ಯಾಹರನ್ತಿ ಸಮನ್ತತಃ ।
ಸಮವೇತಾಶ್ಚ ದೃಶ್ಯನ್ತೇ ವಿಮಾನಾಗ್ರೇಷು ಸಙ್ಘಶಃ ॥೧೯॥

ಗೃಧ್ರಾಶ್ಚ ಪರಿಲೀಯನ್ತೇ ಪುರೀಮುಪರಿ ಪಿಣ್ಡಿತಾಃ ।
ಉಪಪನ್ನಾಶ್ಚ ಸನ್ಧ್ಯೇ ದ್ವೇ ವ್ಯಾಹರನ್ತ್ಯಶಿವಂ ಶಿವಾಃ ॥೨೦॥

ಕ್ರವ್ಯಾದಾನಾಂ ಮೃಗಾಣಾಂ ಚ ಪುರದ್ವಾರೇಷು ಸಙ್ಘಶಃ ।
ಶ್ರೂಯನ್ತೇ ವಿಪುಲಾ ಘೋಷಾಃ ಸವಿಸ್ಫೂರ್ಜಿತನಿಃಸ್ವನಾಃ ॥೨೧॥

ತದೇವಂ ಪ್ರಸ್ತುತೇ ಕಾರ್ಯೇ ಪ್ರಾಯಶ್ಚಿತ್ತಮಿದಂ ಕ್ಷಮಮ್ ।
ರೋಚತೇ ಯದಿ ವೈದೇಹೀ ರಾಘವಾಯ ಪ್ರದೀಯತಾಮ್ ॥೨೨॥

ಇದಂ ಚ ಯದಿ ವಾ ಮೋಹಾಲ್ಲೋಭಾದ್ವಾ ವ್ಯಾಹೃತಂ ಮಯಾ ।
ತತ್ರಾಪಿ ಚ ಮಹಾರಾಜ ನ ದೋಷಂ ಕರ್ತುಮರ್ಹಸಿ ॥೨೩॥

ಅಯಂ ಚ ದೋಷಃ ಸರ್ವಸ್ಯ ಜನಸ್ಯಾಸ್ಯೋಪಲಕ್ಷ್ಯತೇ ।
ರಕ್ಷಸಾಂ ರಾಕ್ಷಸೀನಾಂ ಚ ಪುರಸ್ಯಾನ್ತಃಪುರಸ್ಯ ಚ ॥೨೪॥

ಶ್ರಾವಣೇ ಚಾಸ್ಯ ಮನ್ತ್ರಸ್ಯ ನಿವೃತ್ತಾಃ ಸರ್ವಮನ್ತ್ರಿಣಃ ।
ಅವಶ್ಯಂ ಚ ಮಯಾ ವಾಚ್ಯಂ ಯದ್ದೃಷ್ಟಮಪಿ ವಾ ಶ್ರುತಮ್ ।
ಸಂಪ್ರಧಾರ್ಯ ಯಥಾನ್ಯಾಯಂ ತದ್ಭವಾನ್ಕರ್ತುಮರ್ಹತಿ ॥೨೫॥

ಇತಿ ಸ್ಮ ಮನ್ತ್ರಿಣಾಂ ಮಧ್ಯೇ ಭ್ರಾತಾ ಭ್ರಾತರಮೂಚಿವಾನ್ ।
ರಾವಣಂ ರಾಕ್ಷಸಶ್ರೇಷ್ಠಂ ಪಥ್ಯಮೇತದ್ವಿಭೀಷಣಃ ॥೨೬॥

ಹಿತಂ ಮಹಾರ್ಥಂ ಮೃದು ಹೇತುಸಂಹಿತಂ
ವ್ಯತೀತಕಾಲಾಯತಿಸಂಪ್ರತಿಕ್ಷಮಮ್ ।
ನಿಶಮ್ಯ ತದ್ವಾಕ್ಯಮುಪಸ್ಥಿತಜ್ವರಃ
ಪ್ರಸಙ್ಗವಾನುತ್ತರಮೇತದಬ್ರವೀತ್ ॥೨೭॥

ಭಯಂ ನ ಪಶ್ಯಾಮಿ ಕುತಶ್ಚಿದಪ್ಯಹಂ
ನ ರಾಘವಃ ಪ್ರಾಪ್ಸ್ಯತಿ ಜಾತು ಮೈಥಿಲೀಮ್ ।
ಸುರೈಃ ಸಹೇನ್ದ್ರೈರಪಿ ಸಂಗತಃ ಕಥಂ
ಮಮಾಗ್ರತಃ ಸ್ಥಾಸ್ಯತಿ ಲಕ್ಷ್ಮಣಾಗ್ರಜಃ ॥೨೮॥

ಇತ್யೇವಮುಕ್ತ್ವಾ ಸುರಸೈನ್ಯನಾಶನೋ
ಮಹಾಬಲಃ ಸಂಯತಿ ಚಣ್ಡವಿಕ್ರಮಃ ।
ದಶಾನನೋ ಭ್ರಾತರಮಾಪ್ತವಾದಿನಂ
ವಿಸರ್ಜಯಾಮಾಸ ತದಾ ವಿಭೀಷಣಮ್ ॥೨೯॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ದಶಮಃ ಸರ್ಗಃ

---

## ಏಕಾದಶಃ ಸರ್ಗಃ

ಸ ಬಭೂವ ಕೃಶೋ ರಾಜಾ ಮೈಥಿಲೀಕಾಮಮೋಹಿತಃ ।
ಅಸಂಮಾನಾಚ್ಚ ಸುಹೃದಾಂ ಪಾಪಃ ಪಾಪೇನ ಕರ್ಮಣಾ ॥೧॥

ಅತೀವ ಕಾಮಸಂಪನ್ನೋ ವೈದೇಹೀಮನುಚಿನ್ತಯನ್ ।
ಅತೀತಸಮಯೇ ಕಾಲೇ ತಸ್ಮಿನ್ವೈ ಯುಧಿ ರಾವಣಃ ।
ಅಮಾತ್ಯೈಶ್ಚ ಸುಹೃದ್ಭಿಶ್ಚ ಪ್ರಾಪ್ತಕಾಲಮಮನ್ಯತ ॥೨॥

ಸ ಹೇಮಜಾಲವಿತತಂ ಮಣಿವಿದ್ರುಮಭೂಷಿತಮ್ ।
ಉಪಗಮ್ಯ ವಿನೀತಾಶ್ವಮಾರುರೋಹ ಮಹಾರಥಮ್ ॥೩॥

ತಮಾಸ್ಥಾಯ ರಥಶ್ರೇಷ್ಠಂ ಮಹಾಮೇಘಸಮಸ್ವನಮ್ ।
ಪ್ರಯಯೌ ರಾಕ್ಷಸಶ್ರೇಷ್ಠೋ ದಶಗ್ರೀವಃ ಸಭಾಂ ಪ್ರತಿ ॥೪॥

ಅಸಿಚರ್ಮಧರಾ ಯೋಧಾಃ ಸರ್ವಾಯುಧಧರಾಸ್ತಥಾ ।
ರಾಕ್ಷಸಾ ರಾಕ್ಷಸೇನ್ದ್ರಸ್ಯ ಪುರಸ್ತಾತ್ಸಂಪ್ರತಸ್ಥಿರೇ ॥೫॥

ನಾನಾವಿಕೃತವೇಷಾಶ್ಚ ನಾನಾಭೂಷಣಭೂಷಿತಾಃ ।
ಪಾರ್ಶ್ವತಃ ಪೃಷ್ಠತಶ್ಚೈನಂ ಪರಿವಾರ್ಯ ಯಯುಸ್ತದಾ ॥೬॥

ರಥೈಶ್ಚಾತಿರಥಾಃ ಶೀಘ್ರಂ ಮತ್ತೈಶ್ಚ ವರವಾರಣೈಃ ।
ಅನುತ್ಪೇತುರ್ದಶಗ್ರೀವಮಾಕ್ರೀಡದ್ಭಿಶ್ಚ ವಾಜಿಭಿಃ ॥೭॥

ಗದಾಪರಿಘಹಸ್ತಾಶ್ಚ ಶಕ್ತಿತೋಮರಪಾಣಯಃ ।
ಪರಶ್ವಧಧರಾಶ್ಚಾನ್ಯೇ ತಥಾನ್ಯೇ ಶೂಲಪಾಣಯಃ ॥೮॥

ತತಸ್ತೂರ್ಯಸಹಸ್ರಾಣಾಂ ಸಂಜಜ್ಞೇ ನಿಃಸ್ವನೋ ಮಹಾನ್ ।
ತುಮುಲಃ ಶಙ್ಖಶಬ್ದಶ್ಚ ಸಭಾಂ ಗಚ್ಛತಿ ರಾವಣೇ ॥೯॥

ಸ ನೇಮಿಘೋಷೇಣ ಮಹಾನ್ಮಹತಾಭಿವಿನಾದಯನ್ ।
ರಾಜಮಾರ್ಗಂ ಶ್ರಿಯಾ ಜುಷ್ಟಂ ಪ್ರತಿಪೇದೇ ಮಹಾರಥಃ ॥೧೦॥

ವಿಮಲಂ ಚಾತಪತ್ರಾಣಂ ಪ್ರಗೃಹೀತಮಶೋಭತ ।
ಪಾಣ್ಡುರಂ ರಾಕ್ಷಸೇನ್ದ್ರಸ್ಯ ಪೂರ್ಣಸ್ತಾರಾಧಿಪೋ ಯಥಾ ॥೧೧॥

ಹೇಮಮಞ್ಜರಿಗರ್ಭೇ ಚ ಶುದ್ಧಸ್ಫಟಿಕವಿಗ್ರಹೇ ।
ಚಾಮರವ್ಯಜನೇ ಚಾಸ್ಯ ರೇಜತುಃ ಸವ್ಯದಕ್ಷಿಣೇ ॥೧೨॥

ತೇ ಕೃತಾಞ್ಜಲಯಃ ಸರ್ವೇ ರಥಸ್ಥಂ ಪೃಥಿವೀಸ್ಥಿತಾಃ ।
ರಾಕ್ಷಸಾ ರಾಕ್ಷಸಶ್ರೇಷ್ಠಂ ಶಿರೋಭಿಸ್ತಂ ವವನ್ದಿರೇ ॥೧೩॥

ರಾಕ್ಷಸೈಃ ಸ್ತೂಯಮಾನಃ ಸಞ್ಜಯಾಶೀರ್ಭಿರರಿನ್ದಮಃ ।
ಆಸಸಾದ ಮಹಾತೇಜಾಃ ಸಭಾಂ ಸುವಿಹಿತಾಂ ಶುಭಾಮ್ ॥೧೪॥

ಸುವರ್ಣರಜತಾಸ್ತೀರ್ಣಾಂ ವಿಶುದ್ಧಸ್ಫಟಿಕಾನ್ತರಾಮ್ ।
ವಿರಾಜಮಾನೋ ವಪುಷಾ ರುಕ್ಮಪಟ್ಟೋತ್ತರಚ್ಛದಾಮ್ ॥೧೫॥

ತಾಂ ಪಿಶಾಚಶತೈಃ ಷಡ್ಭಿರಭಿಗುಪ್ತಾಂ ಸದಾ ಶುಭಾಮ್ ।
ಪ್ರವಿವೇಶ ಮಹಾತೇಜಾಃ ಸುಕೃತಾಂ ವಿಶ್ವಕರ್ಮಣಾ ॥೧೬॥

ತಸ್ಯಾಂ ತು ವೈಡೂರ್ಯಮಯಂ ಪ್ರಿಯಕಾಜಿನಸಂವೃತಮ್ ।
ಮಹತ್ಸೋಪಾಶ್ರಯಂ ಭೇಜೇ ರಾವಣಃ ಪರಮಾಸನಮ್ ।
ತತಃ ಶಶಾಸೇಶ್ವರವದ್ದೂತಾನ್ ಲಘುಪರಾಕ್ರಮಾನ್ ॥೧೭॥

ಸಮಾನಯತ ಮೇ ಕ್ಷಿಪ್ರಮಿಹೈತಾನ್ರಾಕ್ಷಸಾನಿತಿ ।
ಕೃತ್ಯಮಸ್ತಿ ಮಹಜ್ಜಾತೇ ಕರ್ತವ್ಯಮಿತಿ ಶತ್ರುಭಿಃ ॥೧೮॥

ರಾಕ್ಷಸಾಸ್ತದ್ವಚಃ ಶ್ರುತ್ವಾ ಲಙ್ಕಾಯಾಂ ಪರಿಚಕ್ರಮುಃ ।
ಅನುಗೇಹಮವಸ್ಥಾಯ ವಿಹಾರಶಯನೇಷು ಚ ।
ಉದ್ಯಾನೇಷು ಚ ರಕ್ಷಾಂಸಿ ಚೋದಯನ್ತೋ ಹ್ಯಭೀತವತ್ ॥೧೯॥

ತೇ ರಥಾನ್ರುಚಿರಾನೇಕೇ ದೃಪ್ತಾನೇಕೇ ದೃಢಾನ್ಹಯಾನ್ ।
ನಾಗಾನನ್ಯೇಽಧಿರುರುಹುರ್ಜಗ್ಮುಶ್ಚೈಕೇ ಪದಾತಯಃ ॥೨೦॥

ಸಾ ಪುರೀ ಪರಮಾಕೀರ್ಣಾ ರಥಕುಞ್ಜರವಾಜಿಭಿಃ ।
ಸಂಪತದ್ಭಿರ್ವಿರುರುಚೇ ಗರುತ್ಮದ್ಭಿರಿವಾಮ್ಬರಮ್ ॥೨೧॥

ತೇ ವಾಹನಾನ್ಯವಸ್ಥಾಪ್ಯ ಯಾನಾನಿ ವಿವಿಧಾನಿ ಚ ।
ಸಭಾಂ ಪದ್ಭಿಃ ಪ್ರವಿವಿಶುಃ ಸಿಂಹಾಃ ಗಿರಿಗುಹಾಮಿವ ॥೨೨॥

ರಾಜ್ಞಃ ಪಾದೌ ಗೃಹೀತ್ವಾ ತು ರಾಜ್ಞಾ ತೇ ಪ್ರತಿಪೂಜಿತಾಃ ।
ಪೀಠೇಷ್ವನ್ಯೇ ಬೃಸೀಷ್ವನ್ಯೇ ಭೂಮೌ ಕೇಚಿದುಪಾವಿಶನ್ ॥೨೩॥

ತೇ ಸಮೇತ್ಯ ಸಭಾಯಾಂ ವೈ ರಾಕ್ಷಸಾ ರಾಜಶಾಸನಾತ್ ।
ಯಥಾರ್ಹಮುಪತಸ್ಥುಸ್ತೇ ರಾವಣಂ ರಾಕ್ಷಸಾಧಿಪಮ್ ॥೨೪॥

ಮನ್ತ್ರಿಣಶ್ಚ ಯಥಾ ಮುಖ್ಯಾ ನಿಶ್ಚಿತಾರ್ಥೇಷು ಪಣ್ಡಿತಾಃ ।
ಅಮಾತ್ಯಾಶ್ಚ ಗುಣೋಪೇತಾಃ ಸರ್ವಜ್ಞಾ ಬುದ್ಧಿದರ್ಶನಾಃ ॥೨೫॥

ಸಮೇಯುಸ್ತತ್ರ ಶತಶಃ ಶೂರಾಶ್ಚ ಬಹವಸ್ತದಾ ।
ಸಭಾಯಾಂ ಹೇಮವರ್ಣಾಯಾಂ ಸರ್ವಾರ್ಥಸ್ಯ ಸುಖಾಯ ವೈ ॥

ತತೋ ಮಹಾತ್ಮಾ ವಿಪುಲಂ ಸುಯುಗ್ಯಂ
ವರಾರ್ಹಜಾಮ್ಬೂನದಚಿತ್ರಿತಾಙ್ಗಮ್ ।
ರಥಂ ಸಮಾಸ್ಥಾಯ ಯಯೌ ಯಶಸ್ವೀ
ವಿಭೀಷಣಃ ಸಂಸದಮಗ್ರಜಸ್ಯ ॥೨೬॥

ಸ ಪೂರ್ವಜಾಯಾವರಜಃ ಶಶಂಸ
ನಾಮಾಥ ಪಶ್ಚಾಚ್ಚರಣೌ ವವನ್ದೇ ।
ಶುಕಃ ಪ್ರಹಸ್ತಶ್ಚ ತಥೈವ ತೇಭ್ಯೋ
ದದೌ ಯಥಾರ್ಹಂ ಪೃಥಗಾಸನಾನಿ ॥೨೮॥

ಸುವರ್ಣನಾನಾಮಣಿಭೂಷಣಾನಾಂ
ಸುವಾಸಸಾಂ ಸಂಸದಿ ರಾಕ್ಷಸಾನಾಮ್ ।
ತೇಷಾಂ ಪರಾರ್ಧ್ಯಾಗರುಚನ್ದನಾನಾಂ
ಸ್ರಜಶ್ಚ ಗನ್ಧಾಃ ಪ್ರವವುಃ ಸಮನ್ತಾತ್ ॥೨೯॥

ನ ಚುಕ್ರುಶುರ್ನಾನೃತಮಾಹ ಕಶ್ಚಿ-
ತ್ಸಭಾಸದೋ ನೈವ ಜಜಲ್ಪುರುಚ್ಚೈಃ ।
ಸಂಸಿದ್ಧಾರ್ಥಾಃ ಸರ್ವ ಏವೋಗ್ರವೀರ್ಯಾ
ಭರ್ತುಃ ಸರ್ವೇ ದದೃಶುಶ್ಚಾನನಂ ತೇ ॥೩೦॥

ಸ ರಾವಣಃ ಶಸ್ತ್ರಭೃತಾಂ ಮನಸ್ವಿನಾಂ
ಮಹಾಬಲಾನಾಂ ಸಮಿತೌ ಮನಸ್ವೀ ।
ತಸ್ಯಾಂ ಸಭಾಯಾಂ ಪ್ರಭಯಾ ಚಕಾಶೇ
ಮಧ್ಯೇ ವಸೂನಾಮಿವ ವಜ್ರಹಸ್ತಃ ॥೩೧॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಏಕಾದಶಃ ಸರ್ಗಃ

---

## ದ್ವಾದಶಃ ಸರ್ಗಃ

ಸ ತಾಂ ಪರಿಷದಂ ಕೃತ್ಸ್ನಾಂ ಸಮೀಕ್ಷ್ಯ ಸಮಿತಿಂಜಯಃ ।
ಪ್ರಚೋದಯಾಮಾಸ ತದಾ ಪ್ರಹಸ್ತಂ ವಾಹಿನೀಪತಿಮ್ ॥೧॥

ಸೇನಾಪತೇ ಯಥಾ ತೇ ಸ್ಯುಃ ಕೃತವಿದ್ಯಾಶ್ಚತುರ್ವಿಧಾಃ ।
ಯೋಧಾ ನಗರರಕ್ಷಾಯಾಂ ತಥಾ ವ್ಯಾದೇಷ್ಟುಮರ್ಹಸಿ ॥೨॥

ಸ ಪ್ರಹಸ್ತಃ ಪ್ರಣೀತಾತ್ಮಾ ಚಿಕೀರ್ಷನ್ರಾಜಶಾಸನಮ್ ।
ವಿನಿಕ್ಷಿಪದ್ಬಲಂ ಸರ್ವಂ ಬಹಿರನ್ತಶ್ಚ ಮನ್ದಿರೇ ॥೩॥

ತತೋ ವಿನಿಕ್ಷಿಪ್ಯ ಬಲಂ ಸರ್ವಂ ನಗರಗುಪ್ತಯೇ ।
ಪ್ರಹಸ್ತಃ ಪ್ರಮುಖೇ ರಾಜ್ಞೋ ನಿಷಸಾದ ಜಗಾದ ಚ ॥೪॥

ನಿಹಿತಂ ಬಹಿರನ್ತಶ್ಚ ಬಲಂ ಬಲವತಸ್ತವ ।
ಕುರುಷ್ವಾವಿಮನಾಃ ಕ್ಷಿಪ್ರಂ ಯದಭಿಪ್ರೇತಮಸ್ತಿ ತೇ ॥೫॥

ಪ್ರಹಸ್ತಸ್ಯ ವಚಃ ಶ್ರುತ್ವಾ ರಾಜಾ ರಾಜ್ಯಹಿತೈಷಿಣಃ ।
ಸುಖೇಪ್ಸುಃ ಸುಹೃದಾಂ ಮಧ್ಯೇ ವ್ಯಾಜಹಾರ ಸ ರಾವಣಃ ॥೬॥

ಪ್ರಿಯಾಪ್ರಿಯೇ ಸುಖೇ ದುಃಖೇ ಲಾಭಾಲಾಭೇ ಹಿತಾಹಿತೇ ।
ಧರ್ಮಕಾಮಾರ್ಥಕೃಚ್ಛ್ರೇಷು ಯೂಯಮರ್ಹಥ ವೇದಿತುಮ್ ॥೭॥

ಸರ್ವಕೃತ್ಯಾನಿ ಯುಷ್ಮಾಭಿಃ ಸಮಾರಬ್ಧಾನಿ ಸರ್ವದಾ ।
ಮನ್ತ್ರಕರ್ಮನಿಯುಕ್ತಾನಿ ನ ಜಾತು ವಿಫಲಾನಿ ಮೇ ॥೮॥

ಸಸೋಮಗ್ರಹನಕ್ಷತ್ರೈರ್ಮರುದ್ಭಿರಿವ ವಾಸವಃ ।
ಭವದ್ಭಿರಹಮತ್ಯರ್ಥಂ ವೃತಃ ಶ್ರಿಯಮವಾಪ್ನುಯಾಮ್ ॥೯॥

ಅಹಂ ತು ಖಲು ಸರ್ವಾನ್ವಃ ಸಮರ್ಥಯಿತುಮುದ್ಯತಃ ।
ಕುಮ್ಭಕರ್ಣಸ್ಯ ತು ಸ್ವಪ್ನಾನ್ನೇಮಮರ್ಥಮಚೋದಯಮ್ ॥೧೦॥

ಅಯಂ ಹಿ ಸುಪ್ತಃ ಷಣ್ಮಾಸಾನ್ಕುಮ್ಭಕರ್ಣೋ ಮಹಾಬಲಃ ।
ಸರ್ವಶಸ್ತ್ರಭೃತಾಂ ಮುಖ್ಯಃ ಸ ಇದಾನೀಂ ಸಮುತ್ಥಿತಃ ॥೧೧॥

ಇಯಂ ಚ ದಣ್ಡಕಾರಣ್ಯಾದ್ರಾಮಸ್ಯ ಮಹಿಷೀ ಪ್ರಿಯಾ ।
ರಕ್ಷೋಭಿಶ್ಚರಿತಾದ್ದೇಶಾದಾನೀತಾ ಜನಕಾತ್ಮಜಾ ॥೧೨॥

ಸಾ ಮೇ ನ ಶಯ್ಯಾಮಾರೋಢುಮಿಚ್ಛತ್ಯಲಸಗಾಮಿನೀ ।
ತ್ರಿಷು ಲೋಕೇಷು ಚಾನ್ಯಾ ಮೇ ನ ಸೀತಾಸದೃಶೀ ಮತಾ ॥೧೩॥

ತನುಮಧ್ಯಾ ಪೃಥುಶ್ರೋಣೀ ಶಾರದೇನ್ದುನಿಭಾನನಾ ।
ಹೇಮಬಿಮ್ಬನಿಭಾ ಸೌಮ್ಯಾ ಮಾಯೇವ ಮಯನಿರ್ಮಿತಾ ॥೧೪॥

ಸುಲೋಹಿತತಲೌ ಶ್ಲಕ್ಷ್ಣೌ ಚರಣೌ ಸುಪ್ರತಿಷ್ಠಿತೌ ।
ದೃಷ್ಟ್ವಾ ತಾಮ್ರನಖೌ ತಸ್ಯಾ ದೀಪ್ಯತೇ ಮೇ ಶರೀರಜಃ ॥೧೫॥

ಹುತಾಗ್ನೇರರ್ಚಿಸಂಕಾಶಾಮೇನಾಂ ಸೌರೀಮಿವ ಪ್ರಭಾಮ್ ।
ಉನ್ನಸಂ ವದನಂ ವಲ್ಗು ವಿಪುಲಂ ಚಾರುಲೋಚನಮ್ ।
ಪಶ್ಯಂಸ್ತದಾ ವಶಸ್ತಸ್ಯಾಃ ಕಾಮಸ್ಯ ವಶಮೇಯಿವಾನ್ ॥೧೬॥

ಕ್ರೋಧಹರ್ಷಸಹಾರ್ಯೇನ ದುರ್ವರ್ಣಕರಣೇನ ಚ ।
ಶೋಕಸಂತಾಪನಿತ್ಯೇನ ಕಾಮೇನ ಕಲುಷೀಕೃತಃ ॥೧೭॥

ಸಾ ತು ಸಂವತ್ಸರಂ ಕಾಲಂ ಮಾಮಯಾಚತ ಭಾಮಿನೀ ।
ಪ್ರತೀಕ್ಷಮಾಣಾ ಭರ್ತಾರಂ ರಾಮಮಾಯತಲೋಚನಾ ।
ತನ್ಮಯಾ ಚಾರುನೇತ್ರಾಯಾಃ ಪ್ರತಿಜ್ಞಾತಂ ವಚಃ ಶುಭಮ್ ॥೧೮॥

ಭ್ರಾನ್ತೋಽಹಂ ಸತತಂ ಕಾಮಾದ್ಯಾತೋ ಹಯ ಇವಾಧ್ವನಿ ॥೧೯॥

ಕಥಂ ಸಾಗರಮಕ್ಷೋಭ್ಯಂ ತರಿಷ್ಯನ್ತಿ ವನೌಕಸಃ ।
ಬಹುಸತ್ತ್ವಸಮಾಕೀರ್ಣಂ ತೌ ವಾ ದಶರಥಾತ್ಮಜೌ ॥೨೦॥

ಅಥ ವಾ ಕಪಿನೈಕೇನ ಕೃತಂ ನಃ ಕದನಂ ಮಹತ್ ।
ದುರ್ಜ್ಞೇಯಾಃ ಕಾರ್ಯಗತಯೋ ಬ್ರೂತ ಯಸ್ಯ ಯಥಾಮತಿ ॥೨೧॥

ಮಾನುಷಾನ್ಮೇ ಭಯಂ ನಾಸ್ತಿ ತಥಾಪಿ ತು ವಿಮೃಶ್ಯತಾಮ್ ॥೨೨॥

ತದಾ ದೇವಾಸುರೇ ಯುದ್ಧೇ
ಯುಷ್ಮಾಭಿಃ ಸಹಿತೋಽಜಯಮ್ ।
ತೇ ಮೇ ಭವನ್ತಶ್ಚ ತಥಾ
ಸುಗ್ರೀವಪ್ರಮುಖಾನ್ಹರೀನ್ ॥೨೩॥

ಪರೇ ಪಾರೇ ಸಮುದ್ರಸ್ಯ ಪುರಸ್ಕೃತ್ಯ ನೃಪಾತ್ಮಜೌ ।
ಸೀತಾಯಾಃ ಪದವೀಂ ಪ್ರಾಪ್ತೌ ಸಂಪ್ರಾಪ್ತೌ ವರುಣಾಲಯಮ್ ॥೨೪॥

ಅದೇಯಾ ಚ ಮಯಾ ಸೀತಾ ವಧ್ಯೌ ದಶರಥಾತ್ಮಜೌ ।
ಭವದ್ಭಿರ್ಮನ್ತ್ರ್ಯತಾಂ ಮನ್ತ್ರಃ ಸುನೀತಿಶ್ಚಾಭಿಧೀಯತಾಮ್ ॥೨೫॥

ನ ಹಿ ಶಕ್ತಿಂ ಪ್ರಪಶ್ಯಾಮಿ ಜಗತ್ಯನ್ಯಸ್ಯ ಕಸ್ಯಚಿತ್ ।
ಸಾಗರಂ ವಾನರೈಸ್ತೀರ್ತ್ವಾ ನಿಶ್ಚಯೇನ ಜಯೋ ಮಮ ॥೨೬॥

ತಸ್ಯ ಕಾಮಪರೀತಸ್ಯ ನಿಶಮ್ಯ ಪರಿದೇವಿತಮ್ ।
ಕುಮ್ಭಕರ್ಣಃ ಪ್ರಚುಕ್ರೋಧ ವಚನಂ ಚೇದಮಬ್ರವೀತ್ ॥೨೭॥

ಯದಾ ತು ರಾಮಸ್ಯ ಸಲಕ್ಷ್ಮಣಸ್ಯ
ಪ್ರಸಹ್ಯ ಸೀತಾ ಖಲು ಸಾ ಇಹಾಹೃತಾ ।
ಸಕೃತ್ಸಮೀಕ್ಷ್ಯೈವ ಸುನಿಶ್ಚಿತಂ ತದಾ
ಭಜೇತ ಚಿತ್ತಂ ಯಮುನೇವ ಯಾಮುನಮ್ ॥೨೮॥

ಸರ್ವಮೇತನ್ಮಹಾರಾಜ ಕೃತಮಪ್ರತಿಮಂ ತವ ।
ವಿಧೀಯೇತ ಸಹಾಸ್ಮಾಭಿರಾದಾವೇವಾಸ್ಯ ಕರ್ಮಣಃ ॥೨೯॥

ನ್ಯಾಯೇನ ರಾಜಾ ಕಾರ್ಯಾಣಿ ಯಃ ಕರೋತಿ ದಶಾನನ ।
ನ ಸ ಸಂತಪ್ಯತೇ ಪಶ್ಚಾನ್ನಿಶ್ಚಿತಾರ್ಥಮತಿರ್ನೃಪಃ ॥೩೦॥

ಅನುಪಾಯೇನ ಕರ್ಮಾಣಿ ವಿಪರೀತಾನಿ ಯಾನಿ ಚ ।
ಕ್ರಿಯಮಾಣಾನಿ ದುಷ್ಯನ್ತಿ ಹವೀಂಷ್ಯಪ್ರಯತೇಷ್ವಿವ ॥೩೧॥

ಯಃ ಪಶ್ಚಾತ್ಪೂರ್ವಕಾರ್ಯಾಣಿ ಕುರುತೇ ಬುದ್ಧಿಮೋಹಿತಃ ।
ಪೂರ್ವಂ ಚೋತ್ತರಕಾರ್ಯಾಣಿ ನ ಸ ವೇದ ನಯಾನಯೌ ॥೩೨॥

ಚಪಲಸ್ಯ ತು ಕೃತ್ಯೇಷು ಪ್ರಸಮೀಕ್ಷ್ಯಾಧಿಕಂ ಬಲಮ್ ।
ಕ್ಷಿಪ್ರಮನ್ಯೇ ಪ್ರಪದ್ಯನ್ತೇ ಕ್ರೌಞ್ಚಸ್ಯ ಖಮಿವ ದ್ವಿಜಾಃ ॥೩೩॥

ತ್ವಯೇದಂ ಮಹದಾರಬ್ಧಂ ಕಾರ್ಯಮಪ್ರತಿಚಿನ್ತಿತಮ್ ।
ದಿಷ್ಟ್ಯಾ ತ್ವಾಂ ನಾವಧೀದ್ರಾಮೋ ವಿಷಮಿಶ್ರಮಿವಾಮಿಷಮ್ ॥೩೪॥

ತಸ್ಮಾತ್ತ್ವಯಾ ಸಮಾರಬ್ಧಂ ಕರ್ಮ ಹ್ಯಪ್ರತಿಮಂ ಪರೈಃ ।
ಅಹಂ ಸಮೀಕರಿಷ್ಯಾಮಿ ಹತ್ವಾ ಶತ್ರೂಂಸ್ತವಾನಘ ॥೩೫॥

ಯದಿ ಶಕ್ರವಿವಸ್ವನ್ತೌ ಯದಿ ಪಾವಕಮಾರುತೌ ।
ತಾವಹಂ ಯೋಧಯಿಷ್ಯಾಮಿ ಕುಬೇರವರುಣಾವಪಿ ॥೩೬॥

ಗಿರಿಮಾತ್ರಶರೀರಸ್ಯ ಶಿತಶೂಲಧರಸ್ಯ ಚ ।
ನರ್ದತಸ್ತೀಕ್ಷ್ಣದಂಷ್ಟ್ರಸ್ಯ ಬಿಭೀಯಾದ್ವೈ ಪುರನ್ದರಃ ॥೩೭॥

ಪುನರ್ಮಾಂ ಸ ದ್ವಿತೀಯೇನ ಶರೇಣ ನಿಹನಿಷ್ಯತಿ ।
ತತೋಽಹಂ ತಸ್ಯ ಪಾಸ್ಯಾಮಿ ರುಧಿರಂ ಕಾಮಮಾಶ್ವಸ ॥೩೮॥

ವಧೇನ ತೇ ದಾಶರಥೇಃ ಸುಖಾವಹಂ
ಜಯಂ ತವಾಹರ್ತುಮಹಂ ಯತಿಷ್ಯೇ ।
ಹತ್ವಾ ಚ ರಾಮಂ ಸಹ ಲಕ್ಷ್ಮಣೇನ
ಖಾದಾಮಿ ಸರ್ವಾನ್ಹರಿಯೂಥಮುಖ್ಯಾನ್ ॥೩೯॥

ರಮಸ್ವ ಕಾಮಂ ಪಿಬ ಚಾಗ್ರ್ಯವಾರುಣೀಂ
ಕುರುಷ್ವ ಕಾರ್ಯಾಣಿ ಹಿತಾನಿ ವಿಜ್ವರಃ ।
ಮಯಾ ತು ರಾಮೇ ಗಮಿತೇ ಯಮಕ್ಷಯಂ
ಚಿರಾಯ ಸೀತಾ ವಶಗಾ ಭವಿಷ್ಯತಿ ॥೪೦॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ದ್ವಾದಶಃ ಸರ್ಗಃ

---

## ತ್ರಯೋದಶಃ ಸರ್ಗಃ

ರಾವಣಂ ಕ್ರುದ್ಧಮಾಜ್ಞಾಯ ಮಹಾಪಾರ್ಶ್ವೋ ಮಹಾಬಲಃ ।
ಮುಹೂರ್ತಮನುಸಂಚಿನ್ತ್ಯ ಪ್ರಾಞ್ಜಲಿರ್ವಾಕ್ಯಮಬ್ರವೀತ್ ॥೧॥

ಯಃ ಖಲ್ವಪಿ ವನಂ ಪ್ರಾಪ್ಯ ಮೃಗವ್ಯಾಲಸಮಾಕುಲಮ್ ।
ನ ಪಿಬೇನ್ಮಧು ಸಂಪ್ರಾಪ್ತಂ ಸ ನರೋ ಬಾಲಿಶೋ ಭವೇತ್ ॥೨॥

ಈಶ್ವರಸ್ಯೇಶ್ವರಃ ಕೋಽಸ್ತಿ ತವ ಶತ್ರುನಿಬರ್ಹಣ ।
ರಮಸ್ವ ಸಹ ವೈದೇಹ್ಯಾ ಶತ್ರೂನಾಕ್ರಮ್ಯ ಮೂರ್ಧಸು ॥೩॥

ಬಲಾತ್ಕುಕ್ಕುಟವೃತ್ತೇನ ವರ್ತಸ್ವ ಸುಮಹಾಬಲ ।
ಆಕ್ರಮ್ಯ ಸೀತಾಂ ವೈದೇಹೀಂ ತಥಾ ಭುಂಕ್ಷ್ವ ರಮಸ್ವ ಚ ॥೪॥

ಲಬ್ಧಕಾಮಸ್ಯ ತೇ ಪಶ್ಚಾದಾಗಮಿಷ್ಯತಿ ಯದ್ಭಯಮ್ ।
ಪ್ರಾಪ್ತಮಪ್ರಾಪ್ತಕಾಲಂ ವಾ ಸರ್ವಂ ಪ್ರತಿಸಹಿಷ್ಯಸಿ ॥೫॥

ಕುಮ್ಭಕರ್ಣಃ ಸಹಾಸ್ಮಾಭಿರಿನ್ದ್ರಜಿಚ್ಚ ಮಹಾಬಲಃ ।
ಪ್ರತಿಷೇಧಯಿತುಂ ಶಕ್ತೌ ಸವಜ್ರಮಪಿ ವಜ್ರಿಣಮ್ ॥೬॥

ಉಪಪ್ರದಾನಂ ಸಾನ್ತ್ವಂ ವಾ ಭೇದಂ ವಾ ಕುಶಲೈಃ ಕೃತಮ್ ।
ಸಮತಿಕ್ರಮ್ಯ ದಣ್ಡೇನ ಸಿದ್ಧಿಮರ್ಥೇಷು ರೋಚಯೇ ॥೭॥

ಇಹ ಪ್ರಾಪ್ತಾನ್ವಯಂ ಸರ್ವಾನ್ ಶತ್ರೂಂಸ್ತವ ಮಹಾಬಲ ।
ವಶೇ ಶಸ್ತ್ರಪ್ರಪಾತೇನ ಕರಿಷ್ಯಾಮೋ ನ ಸಂಶಯಃ ॥೮॥

ಏವಮುಕ್ತಸ್ತದಾ ರಾಜಾ ಮಹಾಪಾರ್ಶ್ವೇನ ರಾವಣಃ ।
ತಸ್ಯ ಸಂಪೂಜಯನ್ವಾಕ್ಯಮಿದಂ ವಚನಮಬ್ರವೀತ್ ॥೯॥

ಮಹಾಪಾರ್ಶ್ವ ನಿಬೋಧ ತ್ವಂ ರಹಸ್ಯಂ ಕಿಂಚಿದಾತ್ಮನಃ ।
ಚಿರವೃತ್ತಂ ತದಾಖ್ಯಾಸ್ಯೇ ಯದವಾಪ್ತಂ ಮಯಾ ಪುರಾ ॥೧೦॥

ಪಿತಾಮಹಸ್ಯ ಭವನಂ ಗಚ್ಛನ್ತೀಂ ಪುಞ್ಜಿಕಸ್ಥಲಾಮ್ ।
ಚಞ್ಚೂರ್ಯಮಾಣಾಮದ್ರಾಕ್ಷಮಾಕಾಶೇಽಗ್ನಿಶಿಖಾಮಿವ ॥೧೧॥

ಸಾ ಪ್ರಸಹ್ಯ ಮಯಾ ಭುಕ್ತಾ ಕೃತಾ ವಿವಸನಾ ತತಃ ।
ಸ್ವಯಂಭೂಭವನಂ ಪ್ರಾಪ್ತಾ ಲೋಲಿತಾ ನಲಿನೀ ಯಥಾ ॥೧೨॥

ತಸ್ಯ ತಚ್ಚ ತಥಾ ಮನ್ಯೇ ಜ್ಞಾತಮಾಸೀನ್ಮಹಾತ್ಮನಃ ।
ಅಥ ಸಂಕುಪಿತೋ ದೇವೋ ಮಾಮಿದಂ ವಾಕ್ಯಮಬ್ರವೀತ್ ॥೧೩॥

ಅದ್ಯಪ್ರಭೃತಿ ಯಾಮನ್ಯಾಂ ಬಲಾನ್ನಾರೀಂ ಗಮಿಷ್ಯಸಿ ।
ತದಾ ತೇ ಶತಧಾ ಮೂರ್ಧಾ ಫಲಿಷ್ಯತಿ ನ ಸಂಶಯಃ ॥೧೪॥

ಇತ್ಯಹಂ ತಸ್ಯ ಶಾಪಸ್ಯ ಭೀತಃ ಪ್ರಸಭಮೇವ ತಾಮ್ ।
ನಾರೋಪಯೇ ಬಲಾತ್ಸೀತಾಂ ವೈದೇಹೀಂ ಶಯನೇ ಶುಭೇ ॥೧೫॥

ಸಾಗರಸ್ಯೇವ ಮೇ ವೇಗೋ ಮಾರುತಸ್ಯೇವ ಮೇ ಗತಿಃ ।
ನೈತದ್ದಾಶರಥಿರ್ವೇದ ಹ್ಯಾಸಾದಯತಿ ತೇನ ಮಾಮ್ ॥೧೬॥

ಕೋ ಹಿ ಸಿಂಹಮಿವಾಸೀನಂ ಸುಪ್ತಂ ಗಿರಿಗುಹಾಶಯೇ ।
ಕ್ರುದ್ಧಂ ಮೃತ್ಯುಮಿವಾಸೀನಂ ಪ್ರಬೋಧಯಿತುಮಿಚ್ಛತಿ ॥೧೭॥

ನ ಮತ್ತೋ ನಿರ್ಗತಾನ್ಬಾಣಾನ್ದ್ವಿಜಿಹ್ವಾನ್ಪನ್ನಗಾನಿವ ।
ರಾಮಃ ಪಶ್ಯತಿ ಸಂಗ್ರಾಮೇ ತೇನ ಮಾಮಭಿಗಚ್ಛತಿ ॥೧೮॥

ಕ್ಷಿಪ್ರಂ ವಜ್ರೋಪಮೈರ್ಬಾಣೈಃ ಶತಧಾ ಕಾರ್ಮುಕಚ್ಯುತೈಃ ।
ರಾಮಮಾದೀಪಯಿಷ್ಯಾಮಿ ಉಲ್ಕಾಭಿರಿವ ಕುಞ್ಜರಮ್ ॥೧೯॥

ತಚ್ಚಾಸ್ಯ ಬಲಮಾದಾಸ್ಯೇ ಬಲೇನ ಮಹತಾ ವೃತಃ ।
ಉದಿತಃ ಸವಿತಾ ಕಾಲೇ ನಕ್ಷತ್ರಾಣಾಂ ಪ್ರಭಾಮಿವ ॥೨೦॥

ನ ವಾಸವೇನಾಪಿ ಸಹಸ್ರಚಕ್ಷುಷಾ
ಯುಧಾಸ್ಮಿ ಶಕ್ಯೋ ವರುಣೇನ ವಾ ಪುನಃ ।
ಮಯಾ ತ್ವಿಯಂ ಬಾಹುಬಲೇನ ನಿರ್ಜಿತಾ
ಪುರೀ ಪುರಾ ವೈಶ್ರವಣೇನ ಪಾಲಿತಾ ॥೨೧॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ತ್ರಯೋದಶಃ ಸರ್ಗಃ

## ಚತುರ್ದಶಃ ಸರ್ಗಃ

ನಿಶಾಚರೇನ್ದ್ರಸ್ಯ ನಿಶಮ್ಯ ವಾಕ್ಯಂ
ಸ ಕುಮ್ಭಕರ್ಣಸ್ಯ ಚ ಗರ್ಜಿತಾನಿ ।
ವಿಭೀಷಣೋ ರಾಕ್ಷಸರಾಜಮುಖ್ಯ-
ಮುವಾಚ ವಾಕ್ಯಂ ಹಿತಮರ್ಥಯುಕ್ತಮ್ ॥೧॥

ವೃತೋ ಹಿ ಬಾಹ್ವನ್ತರಭೋಗರಾಶಿ-
ಶ್ಚಿನ್ತಾವಿಷಃ ಸುಸ್ಮಿತತೀಕ್ಷ್ಣದಂಷ್ಟ್ರಃ ।
ಪಞ್ಚಾಙ್ಗುಲೀಪಞ್ಚಶಿರೋತಿಕಾಯಃ
ಸೀತಾಮಹಾಹಿಸ್ತವ ಕೇನ ರಾಜನ್ ॥೨॥

ಯಾವನ್ನ ಲಙ್ಕಾಂ ಸಮಭಿದ್ರವನ್ತಿ
ವಲೀಮುಖಾಃ ಪರ್ವತಕೂಟಮಾತ್ರಾಃ ।
ದಂಷ್ಟ್ರಾಯುಧಾಶ್ಚೈವ ನಖಾಯುಧಾಶ್ಚ
ಪ್ರದೀಯತಾಂ ದಾಶರಥಾಯ ಮೈಥಿಲೀ ॥೩॥

ಯಾವನ್ನ ಗೃಹ್ಣನ್ತಿ ಶಿರಾಂಸಿ ಬಾಣಾ
ರಾಮೇರಿತಾ ರಾಕ್ಷಸಪುಂಗವಾನಾಮ್ ।
ವಜ್ರೋಪಮಾ ವಾಯುಸಮಾನವೇಗಾಃ
ಪ್ರದೀಯತಾಂ ದಾಶರಥಾಯ ಮೈಥಿಲೀ ॥೪॥

ನ ಕುಮ್ಭಕರ್ಣೇನ್ದ್ರಜಿತೌ ನ ರಾಜಂ-
ಸ್ತಥಾ ಮಹಾಪಾರ್ಶ್ವಮಹೋದರೌ ಚ ।
ನಿಕುಮ್ಭಕುಮ್ಭೌ ನ ತಥಾತಿಕಾಯಃ
ಸ್ಥಾತುಂ ನ ಶಕ್ತಾ ಯುಧಿ ರಾಘವಸ್ಯ ॥೫॥

ಜೀವಂಸ್ತು ರಾಮಸ್ಯ ನ ಮೋಕ್ಷ್ಯಸೇ ತ್ವಂ
ಗುಪ್ತಃ ಸವಿತ್ರಾಪ್ಯಥ ವಾ ಮರುದ್ಭಿಃ ।
ನ ವಾಸವಸ್ಯಾಙ್ಕಗತೋ ನ ಮೃತ್ಯೋ-
ರ್ನ ಖಂ ನ ಪಾತಾಲಮನುಪ್ರವಿಷ್ಟಃ ॥೬॥

ನಿಶಮ್ಯ ವಾಕ್ಯಂ ತು ವಿಭೀಷಣಸ್ಯ
ತತಃ ಪ್ರಹಸ್ತೋ ವಚನಂ ಬಭಾಷೇ ।
ನ ನೋ ಭಯಂ ವಿದ್ಮ ನ ದೈವತೇಭ್ಯೋ
ನ ದಾನವೇಭ್ಯೋಽಪ್ಯಥವಾ ಕುತಶ್ಚಿತ್ ॥೭॥

ನ ಯಕ್ಷಗನ್ಧರ್ವಮಹೋರಗೇಭ್ಯೋ
ಭಯಂ ನ ಸಂಖ್ಯೇ ಪತಗೋತ್ತಮೇಭ್ಯಃ ।
ಕಥಂ ನು ರಾಮಾದ್ಭವಿತಾ ಭಯಂ ನೋ
ನರೇನ್ದ್ರಪುತ್ರಾತ್ಸಮರೇ ಕದಾಚಿತ್ ॥೮॥

ಪ್ರಹಸ್ತವಾಕ್ಯಂ ತ್ವಹಿತಂ ನಿಶಮ್ಯ
ವಿಭೀಷಣೋ ರಾಜಹಿತಾನುಕಾಂಕ್ಷೀ ।
ತತೋ ಮಹಾರ್ಥಂ ವಚನಂ ಬಭಾಷೇ
ಧರ್ಮಾರ್ಥಕಾಮೇಷು ನಿವಿಷ್ಟಬುದ್ಧಿಃ ॥೯॥

ಪ್ರಹಸ್ತ ರಾಜಾ ಚ ಮಹೋದರಶ್ಚ
ತ್ವಂ ಕುಮ್ಭಕರ್ಣಶ್ಚ ಯದರ್ಥಜಾತಮ್ ।
ಬ್ರವೀಥ ರಾಮಂ ಪ್ರತಿ ತನ್ನ ಶಕ್ಯಂ
ಯಥಾ ಗತಿಃ ಸ್ವರ್ಗಮಧರ್ಮಬುದ್ಧೇಃ ॥೧೦॥

ವಧಸ್ತು ರಾಮಸ್ಯ ಮಯಾ ತ್ವಯಾ ವಾ
ಪ್ರಹಸ್ತ ಸರ್ವೈರಪಿ ರಾಕ್ಷಸೈರ್ವಾ ।
ಕಥಂ ಭವೇದರ್ಥವಿಶಾರದಸ್ಯ
ಮಹಾರ್ಣವಂ ತರ್ತುಮಿವಾಪ್ಲವಸ್ಯ ॥೧೧॥

ಧರ್ಮಪ್ರಧಾನಸ್ಯ ಮಹಾರಥಸ್ಯ
ಇಕ್ಷ್ವಾಕುವಂಶಪ್ರಭವಸ್ಯ ರಾಜ್ಞಃ ।
ಪುರೋಽಸ್ಯ ದೇವಾಶ್ಚ ತಥಾವಿಧಸ್ಯ
ಕೃತ್ಯೇಷು ಶಕ್ತಸ್ಯ ಭವನ್ತಿ ಮೂಢಾಃ ॥೧೨॥

ತೀಕ್ಷ್ಣಾ ನ ತಾವತ್ತವ ಕಙ್ಕಪತ್ರಾ
ದುರಾಸದಾ ರಾಘವವಿಪ್ರಮುಕ್ತಾಃ ।
ಭಿತ್ತ್ವಾ ಶರೀರಂ ಪ್ರವಿಶನ್ತಿ ಬಾಣಾಃ
ಪ್ರಹಸ್ತ ತೇನೈವ ವಿಕತ್ಥಸೇ ತ್ವಮ್ ॥೧೩॥

ಭಿತ್ತ್ವಾ ನ ತಾವತ್ಪ್ರವಿಶನ್ತಿಕಾಯಂ
ಪ್ರಾಣಾನ್ತಿಕಾಸ್ತೇಽಶನಿತುಲ್ಯವೇಗಾಃ ।
ಶಿತಾಃ ಶರಾ ರಾಘವ ವಿಪ್ರಮುಕ್ತಾಃ
ಪ್ರಹಸ್ತ ತೇನೈವ ವಿಕತ್ಥಸೇ ತ್ವಮ್ ॥೧೪॥

ನ ರಾವಣೋ ನಾತಿಬಲಸ್ತ್ರಿಶೀರ್ಷೋ
ನ ಕುಮ್ಭಕರ್ಣಸ್ಯ ಸುತೋ ನಿಕುಮ್ಭಃ ।
ನ ಚೇನ್ದ್ರಜಿದ್ದಾಶರಥಿಂ ಪ್ರಸೋಢುಂ
ತ್ವಂ ವಾ ರಣೇ ಶಕ್ರಸಮಂ ಸಮರ್ಥಾಃ ॥೧೫॥

ದೇವಾನ್ತಕೋ ವಾಪಿ ನರಾನ್ತಕೋ ವಾ
ತಥಾತಿಕಾಯೋಽತಿರಥೋ ಮಹಾತ್ಮಾ ।
ಅಕಮ್ಪನಶ್ಚಾದ್ರಿಸಮಾನಸಾರಃ
ಸ್ಥಾತುಂ ನ ಶಕ್ತಾ ಯುಧಿ ರಾಘವಸ್ಯ ॥೧೬॥

ಅಯಂ ಹಿ ರಾಜಾ ವ್ಯಸನಾಭಿಭೂತೋ
ಮಿತ್ರೈರಮಿತ್ರಪ್ರತಿಮೈರ್ಭವದ್ಭಿಃ ।
ಅನ್ವಾಸ್ಯತೇ ರಾಕ್ಷಸನಾಶನಾಯ
ತೀಕ್ಷ್ಣಃ ಪ್ರಕೃತ್ಯಾ ಹ್ಯಸಮೀಕ್ಷ್ಯಕಾರೀ ॥೧೭॥

ಅನನ್ತಭೋಗೇನ ಸಹಸ್ರಮೂರ್ಧ್ನಾ
ನಾಗೇನ ಭೀಮೇನ ಮಹಾಬಲೇನ ।
ಬಲಾತ್ಪರಿಕ್ಷಿಪ್ತಮಿಮಂ ಭವನ್ತೋ
ರಾಜಾನಮುತ್ಕ್ಷಿಪ್ಯ ವಿಮೋಚಯನ್ತು ॥೧೮॥

ಯಾವದ್ಧಿ ಕೇಶಗ್ರಹಣಂ ಸುಹೃದ್ಭಿಃ
ಸಮೇತ್ಯ ಸರ್ವೈಃ ಪರಿಪೂರ್ಣಕಾಮೈಃ ।
ನಿಗೃಹ್ಯ ರಾಜಾ ಪರಿರಕ್ಷಿತವ್ಯೋ
ಭೂತೈರ್ಯಥಾ ಭೀಮಬಲೈರ್ಗೃಹೀತಃ ॥೧೯॥

ಸುವಾರಿಣಾ ರಾಘವಸಾಗರೇಣ
ಪ್ರಚ್ಛಾದ್ಯಮಾನಸ್ತರಸಾ ಭವದ್ಭಿಃ ।
ಯುಕ್ತಸ್ತ್ವಯಂ ತಾರಯಿತುಂ ಸಮೇತ್ಯ
ಕಾಕುತ್ಥ್ಸಪಾತಾಲಮುಖೇ ಪತನ್ಸಃ ॥೨೦॥

ಇದಂ ಪುರಸ್ಯಾಸ್ಯ ಸರಾಕ್ಷಸಸ್ಯ
ರಾಜ್ಞಶ್ಚ ಪಥ್ಯಂ ಸಸುಹೃಜ್ಜನಸ್ಯ ।
ಸಮ್ಯಗ್ಘಿ ವಾಕ್ಯಂ ಸತತಂ ಬ್ರವೀಮಿ
ನರೇನ್ದ್ರಪುತ್ರಾಯ ದದಾತು ಪತ್ನೀಮ್ ॥೨೧॥

ಪರಸ್ಯ ವೀರ್ಯಂ ಸ್ವಬಲಂ ಚ ಬುದ್ಧ್ವಾ
ಸ್ಥಾನಂ ಕ್ಷಯಂ ಚೈವ ತಥೈವ ವೃದ್ಧಿಮ್ ।
ತಥಾ ಸ್ವಪಕ್ಷೇಽಪ್ಯನುಮೃಶ್ಯ ಬುದ್ಧ್ಯಾ
ವದೇತ್ಕ್ಷೇಮಂ ಸ್ವಾಮಿಹಿತಂ ಚ ಮನ್ತ್ರೀ ॥೨೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಚತುರ್ದಶಃ ಸರ್ಗಃ

---

## ಪಞ್ಚದಶಃ ಸರ್ಗಃ

ಬೃಹಸ್ಪತೇಸ್ತುಲ್ಯಮತೇರ್ವಚಸ್ತ-
ನ್ನಿಶಮ್ಯ ಯತ್ನೇನ ವಿಭೀಷಣಸ್ಯ ।
ತತೋ ಮಹಾತ್ಮಾ ವಚನಂ ಬಭಾಷೇ
ತದೇನ್ದ್ರಜಿನ್ನೈರ್ಋತಯೋಧಮುಖ್ಯಃ ॥೧॥

ಕಿಂ ನಾಮ ತೇ ತಾತ ಕನಿಷ್ಠವಾಕ್ಯ-
ಮನರ್ಥಕಂ ಚೈವ ಸುಭೀತವಚ್ಚ ।
ಅಸ್ಮಿನ್ಕುಲೇ ಯೋಽಪಿ ಭವೇನ್ನಜಾತಃ
ಸೋಽಪೀದೃಶಂ ನೈವ ವದೇನ್ನ ಕುರ್ಯಾತ್ ॥೨॥

ಸತ್ತ್ವೇನ ವೀರ್ಯೇಣ ಪರಾಕ್ರಮೇಣ
ಶೌರ್ಯೇಣ ಧೈರ್ಯೇಣ ಚ ತೇಜಸಾ ಚ ।
ಏಕಃ ಕುಲೇಽಸ್ಮಿನ್ಪುರುಷೋ ವಿಮುಕ್ತೋ
ವಿಭೀಷಣಸ್ತಾತ ಕನಿಷ್ಠ ಏಷಃ ॥೩॥

ಕಿಂ ನಾಮ ತೌ ರಾಕ್ಷಸ ರಾಜಪುತ್ರಾ
ವಸ್ಮಾಕಮೇಕೇನ ಹಿ ರಾಕ್ಷಸೇನ ।
ಸುಪ್ರಾಕೃತೇನಾಪಿ ರಣೇ ನಿಹನ್ತುಂ
ಶಕ್ಯೌ ಕುತೋ ಭೀಷಯಸೇ ಸ್ಮ ಭೀರೋ ॥೪॥

ತ್ರಿಲೋಕನಾಥೋ ನನು ದೇವರಾಜಃ
ಶಕ್ರೋ ಮಯಾ ಭೂಮಿತಲೇ ನಿವಿಷ್ಟಃ ।
ಭಯಾರ್ದಿತಾಶ್ಚಾಪಿ ದಿಶಃ ಪ್ರಪನ್ನಾಃ
ಸರ್ವೇ ತಥಾ ದೇವಗಣಾಃ ಸಮಗ್ರಾಃ ॥೫॥

ಐರಾವತೋ ವಿಸ್ವರಮುನ್ನದನ್ಸ
ನಿಪಾತಿತೋ ಭೂಮಿತಲೇ ಮಯಾ ತು ।
ವಿಕೃಷ್ಯ ದನ್ತೌ ತು ಮಯಾ ಪ್ರಸಹ್ಯ
ವಿತ್ರಾಸಿತಾ ದೇವಗಣಾಃ ಸಮಗ್ರಾಃ ॥೬॥

ಸೋಽಹಂ ಸುರಾಣಾಮಪಿ ದರ್ಪಹನ್ತಾ
ದೈತ್ಯೋತ್ತಮಾನಾಮಪಿ ಶೋಕದಾತಾ ।
ಕಥಂ ನರೇನ್ದ್ರಾತ್ಮಜಯೋರ್ನ ಶಕ್ತೋ
ಮನುಷ್ಯಯೋಃ ಪ್ರಾಕೃತಯೋಃ ಸುವೀರ್ಯಃ ॥೭॥

ಅಥೇನ್ದ್ರಕಲ್ಪಸ್ಯ ದುರಾಸದಸ್ಯ
ಮಹೌಜಸಸ್ತದ್ವಚನಂ ನಿಶಮ್ಯ ।
ತತೋ ಮಹಾರ್ಥಂ ವಚನಂ ಬಭಾಷೇ
ವಿಭೀಷಣಃ ಶಸ್ತ್ರಭೃತಾಂ ವರಿಷ್ಠಃ ॥೮॥

ನ ತಾತ ಮನ್ತ್ರೇ ತವ ನಿಶ್ಚಯೋಽಸ್ತಿ
ಬಾಲಸ್ತ್ವಮದ್ಯಾಪ್ಯವಿಪಕ್ವಬುದ್ಧಿಃ ।
ತಸ್ಮಾತ್ತ್ವಯಾ ಹ್ಯಾತ್ಮವಿನಾಶನಾಯ
ವಚೋಽರ್ಥಹೀನಂ ಬಹು ವಿಪ್ರಲಪ್ತಮ್ ॥೯॥

ಪುತ್ರಪ್ರವಾದೇನ ತು ರಾವಣಸ್ಯ
ತ್ವಮಿನ್ದ್ರಜಿನ್ಮಿತ್ರಮುಖೋಽಸಿ ಶತ್ರುಃ ।
ಯಸ್ಯೇದೃಶಂ ರಾಘವತೋ ವಿನಾಶಂ
ನಿಶಮ್ಯ ಮೋಹಾದನುಮನ್ಯಸೇ ತ್ವಮ್ ॥೧೦॥

ತ್ವಮೇವ ವಧ್ಯಶ್ಚ ಸುದುರ್ಮತಿಶ್ಚ
ಸ ಚಾಪಿ ವಧ್ಯೋ ಯ ಇಹಾನಯತ್ತ್ವಾಮ್ ।
ಬಾಲಂ ದೃಢಂ ಸಾಹಸಿಕಂ ಚ ಯೋಽದ್ಯ
ಪ್ರಾವೇಶಯನ್ಮನ್ತ್ರಕೃತಾಂ ಸಮೀಪಮ್ ॥೧೧॥

ಮೂಢಃ ಪ್ರಗಲ್ಭೋಽವಿನಯೋಪಪನ್ನ-
ಸ್ತೀಕ್ಷ್ಣಸ್ವಭಾವೋಽಲ್ಪಮತಿರ್ದುರಾತ್ಮಾ ।
ಮೂರ್ಖಸ್ತ್ವಮತ್ಯನ್ತಸುದುರ್ಮತಿಶ್ಚ
ತ್ವಮಿನ್ದ್ರಜಿದ್ಬಾಲತಯಾ ಬ್ರವೀಷಿ ॥೧೨॥

ಕೋ ಬ್ರಹ್ಮದಣ್ಡಪ್ರತಿಮಪ್ರಕಾಶಾ-
ನರ್ಚಿಷ್ಮತಃ ಕಾಲನಿಕಾಶರೂಪಾನ್ ।
ಸಹೇತ ಬಾಣಾನ್ಯಮದಣ್ಡಕಲ್ಪಾ-
ನ್ಸಮೀಕ್ಷ್ಯ ಮುಕ್ತಾನ್ಯುಧಿ ರಾಘವೇಣ ॥೧೩॥

ಧನಾನಿ ರತ್ನಾನಿ ವಿಭೂಷಣಾನಿ
ವಾಸಾಂಸಿ ದಿವ್ಯಾನಿ ಮಣೀಂಶ್ಚ ಚಿತ್ರಾನ್ ।

ಸೀತಾಂ ಚ ರಾಮಾಯ ನಿವೇದ್ಯ ದೇವೀಂ
ವಸೇಮ ರಾಜನ್ನಿಹ ವೀತಶೋಕಾಃ ॥೧೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಪಞ್ಚದಶಃ ಸರ್ಗಃ

---

## ಷೋಡಶಃ ಸರ್ಗಃ

ಸುನಿವಿಷ್ಟಂ ಹಿತಂ ವಾಕ್ಯಮುಕ್ತವನ್ತಂ ವಿಭೀಷಣಮ್ ।
ಅಬ್ರವೀತ್ಪರುಷಂ ವಾಕ್ಯಂ ರಾವಣಃ ಕಾಲಚೋದಿತಃ ॥೧॥

ವಸೇತ್ಸಹ ಸಪತ್ನೇನ ಕ್ರುದ್ಧೇನಾಶೀವಿಷೇಣ ವಾ ।
ನ ತು ಮಿತ್ರಪ್ರವಾದೇನ ಸಂವಸೇಚ್ಛತ್ರುಸೇವಿನಾ ॥೨॥

ಜಾನಾಮಿ ಶೀಲಂ ಜ್ಞಾತೀನಾಂ ಸರ್ವಲೋಕೇಷು ರಾಕ್ಷಸ ।
ಹೃಷ್ಯನ್ತಿ ವ್ಯಸನೇಷ್ವೇತೇ ಜ್ಞಾತೀನಾಂ ಜ್ಞಾತಯಃ ಸದಾ ॥೩॥

ಪ್ರಧಾನಂ ಸಾಧನಂ ವೈದ್ಯಂ ಧರ್ಮಶೀಲಂ ಚ ರಾಕ್ಷಸ ।
ಜ್ಞಾತಯೋ ಹ್ಯವಮನ್ಯನ್ತೇ ಶೂರಂ ಪರಿಭವನ್ತಿ ಚ ॥೪॥

ನಿತ್ಯಮನ್ಯೋನ್ಯಸಂಹೃಷ್ಟಾ ವ್ಯಸನೇಷ್ವಾತತಾಯಿನಃ ।
ಪ್ರಚ್ಛನ್ನಹೃದಯಾ ಘೋರಾ ಜ್ಞಾತಯಸ್ತು ಭಯಾವಹಾಃ ॥೫॥

ಶ್ರೂಯನ್ತೇ ಹಸ್ತಿಭಿರ್ಗೀತಾಃ ಶ್ಲೋಕಾಃ ಪದ್ಮವನೇ ಪುರಾ ।
ಪಾಶಹಸ್ತಾನ್ನರಾನ್ದೃಷ್ಟ್ವಾ ಶೃಣು ತಾನ್ಗದತೋ ಮಮ ॥೬॥

ನಾಗ್ನಿರ್ನಾನ್ಯಾನಿ ಶಸ್ತ್ರಾಣಿ
ನ ನಃ ಪಾಶಾ ಭಯಾವಹಾಃ ।
ಘೋರಾಃ ಸ್ವಾರ್ಥಪ್ರಯುಕ್ತಾಸ್ತು
ಜ್ಞಾತಯೋ ನೋ ಭಯಾವಹಾಃ ॥೭॥

ಉಪಾಯಮೇತೇ ವಕ್ಷ್ಯನ್ತಿ ಗ್ರಹಣೇ ನಾತ್ರ ಸಂಶಯಃ ।
ಕೃತ್ಸ್ನಾದ್ಭಯಾಜ್ಜ್ಞಾತಿಭಯಂ ಸುಕಷ್ಟಂ ವಿದಿತಂ ಚ ನಃ ॥೮॥

ವಿದ್ಯತೇ ಗೋಷು ಸಂಪನ್ನಂ ವಿದ್ಯತೇ ಬ್ರಾಹ್ಮಣೇ ತಪಃ ।
ವಿದ್ಯತೇ ಸ್ತ್ರೀಷು ಚಾಪಲ್ಯಂ ವಿದ್ಯತೇ ಜ್ಞಾತಿತೋ ಭಯಮ್ ॥೯॥

ತತೋ ನೇಷ್ಟಮಿದಂ ಸೌಮ್ಯ ಯದಹಂ ಲೋಕಸತ್ಕೃತಃ ।
ಐಶ್ವರ್ಯೇಣಾಭಿಜಾತಶ್ಚ ರಿಪೂಣಾಂ ಮೂರ್ಧ್ನಿ ಚ ಸ್ಥಿತಃ ॥೧೦॥

ಯಥಾ ಪುಷ್ಕರಪರ್ಣೇಷು ಪತಿತಾಸ್ತೋಯಬಿನ್ದವಃ ।
ನ ಶ್ಲೇಷಮಭಿಗಚ್ಛನ್ತಿ ತಥಾನಾರ್ಯೇಷು ಸೌಹೃದಮ್ ॥೧೧॥

ಯಥಾ ಶರದಿ ಮೇಘಾನಾಂ ಸಿಞ್ಚತಾಮಪಿ ಗರ್ಜತಾಮ್ ।
ನ ಭವತ್ಯಮ್ಬುಸಂಕ್ಲೇದಸ್ತಥಾನಾರ್ಯೇಷು ಸೌಹೃದಮ್ ॥೧೨॥

ಯಥಾ ಮಧುಕರಸ್ತರ್ಷಾದ್ರಸಂ ವಿನ್ದನ್ನ ತಿಷ್ಠತಿ ।
ತಥಾ ತ್ವಮಪಿ ತತ್ರೈವ ತಥಾನಾರ್ಯೇಷು ಸೌಹೃದಮ್ ॥೧೩॥

ಯಥಾ ಮಧುಕರಸ್ತರ್ಷಾತ್ಕಾಶಪುಷ್ಪಂ ಪಿಬನ್ನಿವ ।
ರಸಮತ್ರ ನ ವಿನ್ದೇತ ತಥಾನಾರ್ಯೇಷು ಸೌಹೃದಮ್ ॥೧೪॥

ಯಥಾ ಪೂರ್ವಂ ಗಜಃ ಸ್ನಾತ್ವಾ ಗೃಹ್ಯ ಹಸ್ತೇನ ವೈ ರಜಃ ।
ದೂಷಯತ್ಯಾತ್ಮನೋ ದೇಹಂ ತಥಾನಾರ್ಯೇಷು ಸೌಹೃದಮ್ ॥೧೫॥

ಅನ್ಯಸ್ತ್ವೇವಂವಿಧಂ ಬ್ರೂಯಾದ್ವಾಕ್ಯಮೇತನ್ನಿಶಾಚರ ।
ಅಸ್ಮಿನ್ಮುಹೂರ್ತೇ ನ ಭವೇತ್ತ್ವಾಂ ತು ಧಿಕ್ಕುಲಪಾಂಸನಮ್ ॥೧೬॥

ಇತ್ಯುಕ್ತಃ ಪರುಷಂ ವಾಕ್ಯಂ ನ್ಯಾಯವಾದೀ ವಿಭೀಷಣಃ ।
ಉತ್ಪಪಾತ ಗದಾಪಾಣಿಶ್ಚತುರ್ಭಿಃ ಸಹ ರಾಕ್ಷಸೈಃ ॥೧೭॥

ಅಬ್ರವೀಚ್ಚ ತದಾ ವಾಕ್ಯಂ ಜಿತಕ್ರೋಧೋ ವಿಭೀಷಣಃ ।
ಅನ್ತರಿಕ್ಷಗತಃ ಶ್ರೀಮಾನ್ಭ್ರಾತರಂ ರಾಕ್ಷಸಾಧಿಪಮ್ ॥೧೮॥

ಸ ತ್ವಂ ಭ್ರಾತಾಸಿ ಮೇ ರಾಜನ್ಬ್ರೂಹಿ ಮಾಂ ಯದ್ಯದಿಚ್ಛಸಿ ।
ಜ್ಯೇಷ್ಠೋ ಮಾನ್ಯಃ ಪಿತೃಸಮೋ ನ ಚ ಧರ್ಮಪಥೇ ಸ್ಥಿತಃ ।
ಇದಂ ತು ಪರುಷಂ ವಾಕ್ಯಂ ನ ಕ್ಷಮಾಮ್ಯಹಿತಂ ತವ ॥೧೯॥

ಸುನೀತಂ ಹಿತಕಾಮೇನ ವಾಕ್ಯಮುಕ್ತಂ ದಶಾನನ ।
ನ ಗೃಹ್ಣನ್ತ್ಯಕೃತಾತ್ಮಾನಃ ಕಾಲಸ್ಯ ವಶಮಾಗತಾಃ ॥೨೦॥

ಸುಲಭಾಃ ಪುರುಷಾ ರಾಜನ್ಸತತಂ ಪ್ರಿಯವಾದಿನಃ ।
ಅಪ್ರಿಯಸ್ಯ ತು ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ॥೨೧॥

ಬದ್ಧಂ ಕಾಲಸ್ಯ ಪಾಶೇನ ಸರ್ವಭೂತಾಪಹಾರಿಣಾ ।
ನ ನಶ್ಯನ್ತಮುಪೇಕ್ಷೇಯಂ ಪ್ರದೀಪ್ತಂ ಶರಣಂ ಯಥಾ ॥೨೨॥

ದೀಪ್ತಪಾವಕಸಂಕಾಶೈಃ ಶಿತೈಃ ಕಾಞ್ಚನಭೂಷಣೈಃ ।
ನ ತ್ವಾಮಿಚ್ಛಾಮ್ಯಹಂ ದ್ರಷ್ಟುಂ ರಾಮೇಣ ನಿಹತಂ ಶರೈಃ ॥೨೩॥

ಶೂರಾಶ್ಚ ಬಲವನ್ತಶ್ಚ ಕೃತಾಸ್ತ್ರಾಶ್ಚ ರಣಾಜಿರೇ ।
ಕಾಲಾಭಿಪನ್ನಾಃ ಸೀದನ್ತಿ ಯಥಾ ವಾಲುಕಸೇತವಃ ॥೨೪॥

ತನ್ಮರ್ಷಯತು ಯಚ್ಚೋಕ್ತಂ ಗುರುತ್ವಾದ್ಧಿತಮಿಚ್ಛತಾ ।
ಆತ್ಮಾನಂ ಸರ್ವಥಾ ರಕ್ಷ ಪುರೀಂ ಚೇಮಾಂ ಸರಾಕ್ಷಸಾಮ್ ।
ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಸುಖೀ ಭವ ಮಯಾ ವಿನಾ ॥೨೫॥

ನೂನಂ ನ ತೇ ರಾಕ್ಷಸ ಕಶ್ಚಿದಸ್ತಿ
ರಕ್ಷೋನಿಕಾಯೇಷು ಸುಹೃತ್ಸಖಾ ವಾ ।
ಹಿತೋಪದೇಶಸ್ಯ ನ ಮನ್ತ್ರವಕ್ತಾ
ಯೋ ವಾರಯೇತ್ತ್ವಾಂ ಸ್ವಯಮೇವ ಪಾಪಾತ್ ॥೨೬॥

ನಿವಾರ್ಯಮಾಣಸ್ಯ ಮಯಾ ಹಿತೈಷಿಣಾ
ನ ರೋಚತೇ ತೇ ವಚನಂ ನಿಶಾಚರ ।
ಪರೀತಕಾಲಾ ಹಿ ಗತಾಯುಷೋ ನರಾ
ಹಿತಂ ನ ಗೃಹ್ಣನ್ತಿ ಸುಹೃದ್ಭಿರೀರಿತಮ್ ॥೨೭॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಷೋಡಶಃ ಸರ್ಗಃ

---

## ಸಪ್ತದಶಃ ಸರ್ಗಃ

ಇತ್ಯುಕ್ತ್ವಾ ಪರುಷಂ ವಾಕ್ಯಂ ರಾವಣಂ ರಾವಣಾನುಜಃ ।
ಆಜಗಾಮ ಮುಹೂರ್ತೇನ ಯತ್ರ ರಾಮಃ ಸಲಕ್ಷ್ಮಣಃ ॥೧॥

ತಂ ಮೇರುಶಿಖರಾಕಾರಂ ದೀಪ್ತಾಮಿವ ಶತಹ್ರದಾಮ್ ।
ಗಗನಸ್ಥಂ ಮಹೀಸ್ಥಾಸ್ತೇ ದದೃಶುರ್ವಾನರಾಧಿಪಾಃ ॥೨॥

ಯೇ ಚಾಪ್ಯನುಚರಾಸ್ತಸ್ಯ ಚತ್ವಾರೋ ಭೀಮವಿಕ್ರಮಾಃ ।
ತೇಽಪಿ ವರ್ಮಾಯುಧೋಪೇತಾ ಭೂಷಣೈಶ್ಚ ವಿಭೂಷಿತಾಃ ॥೩॥

ಸ ಹಿ ಮೇಘಾಚಲಪ್ರಖ್ಯೋ ವಜ್ರಾಯುಧಸಮಪ್ರಭಃ ।
ವರಾಯುಧಧರೋ ವೀರೋ ದಿವ್ಯಾಭರಣಭೂಷಿತಃ ॥೪॥

ತಮಾತ್ಮಪಞ್ಚಕಂ ದೃಷ್ಟ್ವಾ ಸುಗ್ರೀವೋ ವಾನರಾಧಿಪಃ ।
ವಾನರೈಃ ಸಹ ದುರ್ಧರ್ಷಶ್ಚಿನ್ತಯಾಮಾಸ ಬುದ್ಧಿಮಾನ್ ॥೫॥

ಚಿನ್ತಯಿತ್ವಾ ಮುಹೂರ್ತಂ ತು ವಾನರಾಂಸ್ತಾನುವಾಚ ಹ ।
ಹನುಮತ್ಪ್ರಮುಖಾನ್ಸರ್ವಾನಿದಂ ವಚನಮುತ್ತಮಮ್ ॥೬॥

ಏಷ ಸರ್ವಾಯುಧೋಪೇತಶ್ಚತುರ್ಭಿಃ ಸಹ ರಾಕ್ಷಸೈಃ ।
ರಾಕ್ಷಸೋಽಭ್ಯೇತಿ ಪಶ್ಯಧ್ವಮಸ್ಮಾನ್ಹನ್ತುಂ ನ ಸಂಶಯಃ ॥೭॥

ಸುಗ್ರೀವಸ್ಯ ವಚಃ ಶ್ರುತ್ವಾ ಸರ್ವೇ ತೇ ವಾನರೋತ್ತಮಾಃ ।
ಸಾಲಾನುದ್ಯಮ್ಯ ಶೈಲಾಂಶ್ಚ ಇದಂ ವಚನಮಬ್ರುವನ್ ॥೮॥

ಶೀಘ್ರಂ ವ್ಯಾದಿಶ ನೋ ರಾಜನ್ವಧಾಯೈಷಾಂ ದುರಾತ್ಮನಾಮ್ ।
ನಿಪತನ್ತಿ ಹತಾ ಯಾವದ್ಧರಣ್ಯಾಮಲ್ಪಚೇತನಾಃ ॥೯॥

ತೇಷಾಂ ಸಂಭಾಷಮಾಣಾನಾಮನ್ಯೋನ್ಯಂ ಸ ವಿಭೀಷಣಃ ।
ಉತ್ತರಂ ತೀರಮಾಸಾದ್ಯ ಖಸ್ಥ ಏವ ವ್ಯತಿಷ್ಠತ ॥೧೦॥

ಉವಾಚ ಚ ಮಹಾಪ್ರಾಜ್ಞಃ ಸ್ವರೇಣ ಮಹತಾ ಮಹಾನ್ ।
ಸುಗ್ರೀವಂ ತಾಂಶ್ಚ ಸಂಪ್ರೇಕ್ಷ್ಯ ಸರ್ವಾನ್ವಾನರಯೂಥಪಾನ್ ॥೧೧॥

ರಾವಣೋ ನಾಮ ದುರ್ವೃತ್ತೋ ರಾಕ್ಷಸೋ ರಾಕ್ಷಸೇಶ್ವರಃ ।
ತಸ್ಯಾಹಮನುಜೋ ಭ್ರಾತಾ ವಿಭೀಷಣ ಇತಿ ಶ್ರುತಃ ॥೧೨॥

ತೇನ ಸೀತಾ ಜನಸ್ಥಾನಾದ್ಧೃತಾ ಹತ್ವಾ ಜಟಾಯುಷಮ್ ।
ರುದ್ಧಾ ಚ ವಿವಶಾ ದೀನಾ ರಾಕ್ಷಸೀಭಿಃ ಸುರಕ್ಷಿತಾ ॥೧೩॥

ತಮಹಂ ಹೇತುಭಿರ್ವಾಕ್ಯೈರ್ವಿವಿಧೈಶ್ಚ ನ್ಯದರ್ಶಯಮ್ ।
ಸಾ ತು ನಿರ್ಯಾತ್ಯತಾಂ ಸೀತಾ ರಾಮಾಯೇತಿ ಪುನಃ ಪುನಃ ॥೧೪॥

ಸ ಚ ನ ಪ್ರತಿಜಗ್ರಾಹ ರಾವಣಃ ಕಾಲಚೋದಿತಃ ।
ಉಚ್ಯಮಾನಂ ಹಿತಂ ವಾಕ್ಯಂ ವಿಪರೀತ ಇವೌಷಧಮ್ ॥೧೫॥

ಸೋಽಹಂ ಪರುಷಿತಸ್ತೇನ ದಾಸವಚ್ಚಾವಮಾನಿತಃ ।
ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ ॥೧೬॥

ಸರ್ವಲೋಕಶರಣ್ಯಾಯ ರಾಘವಾಯ ಮಹಾತ್ಮನೇ ।
ನಿವೇದಯತ ಮಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಮ್ ॥೧೭॥

ಏತತ್ತು ವಚನಂ ಶ್ರುತ್ವಾ ಸುಗ್ರೀವೋ ಲಘುವಿಕ್ರಮಃ ।
ಲಕ್ಷ್ಮಣಸ್ಯಾಗ್ರತೋ ರಾಮಂ ಸಂರಬ್ಧಮಿದಮಬ್ರವೀತ್ ॥೧೮॥

ರಾವಣಸ್ಯಾನುಜೋ ಭ್ರಾತಾ ವಿಭೀಷಣ ಇತಿ ಶ್ರುತಃ ।
ಚತುರ್ಭಿಃ ಸಹ ರಕ್ಷೋಭಿರ್ಭವನ್ತಂ ಶರಣಂ ಗತಃ ॥೧೯॥

ಪ್ರವಿಷ್ಟಃ ಶತ್ರುಸೈನ್ಯಂ ಹಿ ಪ್ರಾಪ್ತಃ ಶತ್ರುರತರ್ಕಿತಃ ।
ನಿಹನ್ಯಾದನ್ತರಂ ಲಬ್ಧ್ವಾ ಉಲೂಕೋ ವಾಯಸಾನಿವ ॥೨೦॥

ಮನ್ತ್ರೇ ವ್ಯೂಹೇ ನಯೇ ಚಾರೇ ಯುಕ್ತೋ ಭವಿತುಮರ್ಹಸಿ ।
ವಾನರಾಣಾಂ ಚ ಭದ್ರಂ ತೇ ಪರೇಷಾಂ ಚ ಪರಂತಪ ॥೨೧॥

ಅನ್ತರ್ಧಾನಗತಾ ಹ್ಯೇತೇ ರಾಕ್ಷಸಾಃ ಕಾಮರೂಪಿಣಃ ।
ಶೂರಾಶ್ಚ ನಿಕೃತಿಜ್ಞಾಶ್ಚ ತೇಷು ಜಾತು ನ ವಿಶ್ವಸೇತ್ ॥೨೨॥

ಪ್ರಣಿಧೀ ರಾಕ್ಷಸೇನ್ದ್ರಸ್ಯ ರಾವಣಸ್ಯ ಭವೇದಯಮ್ ।
ಅನುಪ್ರವಿಶ್ಯ ಸೋಽಸ್ಮಾಸು ಭೇದಂ ಕುರ್ಯಾನ್ನಸಂಶಯಃ ॥೨೩॥

ಅಥವಾ ಸ್ವಯಮೇವೈಷ ಛಿದ್ರಮಾಸಾದ್ಯ ಬುದ್ಧಿಮಾನ್ ।
ಅನುಪ್ರವಿಶ್ಯ ವಿಶ್ವಸ್ತೇ ಕದಾಚಿತ್ಪ್ರಹರೇದಪಿ ॥೨೪॥

ಮಿತ್ರಾಟವಿಬಲಂ ಚೈವ ಮೌಲಭೃತ್ಯಬಲಂ ತಥಾ ।
ಸರ್ವಮೇತದ್ಬಲಂ ಗ್ರಾಹ್ಯಂ ವರ್ಜಯಿತ್ವಾ ದ್ವಿಷದ್ಬಲಮ್ ॥೨೫॥

ಪ್ರಕೃತ್ಯಾ ರಾಕ್ಷಸೋ ಹ್ಯೇಷ ಭ್ರಾತಾಮಿತ್ರಸ್ಯ ವೈ ಪ್ರಭೋ ।
ಆಗತಶ್ಚ ರಿಪೋಃ ಪಕ್ಷಾತ್ಕಥಮಸ್ಮಿನ್ಹಿ ವಿಶ್ವಸೇತ್ ॥೨೬॥

ರಾವಣೇನ ಪ್ರಣಿಹಿತಂ ತಮವೇಹಿ ವಿಭೀಷಣಮ್ ।
ತಸ್ಯಾಹಂ ನಿಗ್ರಹಂ ಮನ್ಯೇ ಕ್ಷಮಂ ಕ್ಷಮವತಾಂ ವರ ॥೨೭॥

ರಾಕ್ಷಸೋ ಜಿಹ್ಮಯಾ ಬುದ್ಧ್ಯಾ ಸಂದಿಷ್ಟೋಽಯಮುಪಸ್ಥಿತಃ ।
ಪ್ರಹರ್ತುಂ ಮಾಯಯಾ ಛನ್ನೋ ವಿಶ್ವಸ್ತೇ ತ್ವಯಿ ರಾಘವ ॥೨೮॥

ವಧ್ಯತಾಮೇಷ ದಣ್ಡೇನ ತೀವ್ರೇಣ ಸಚಿವೈಃ ಸಹ ।
ರಾವಣಸ್ಯ ನೃಶಂಸಸ್ಯ ಭ್ರಾತಾ ಹ್ಯೇಷ ವಿಭೀಷಣಃ ॥೨೯॥

ಏವಮುಕ್ತ್ವಾ ತು ತಂ ರಾಮಂ ಸಂರಬ್ಧೋ ವಾಹಿನೀಪತಿಃ ।
ವಾಕ್ಯಜ್ಞೋ ವಾಕ್ಯಕುಶಲಂ ತತೋ ಮೌನಮುಪಾಗಮತ್ ॥೩೦॥

ಸುಗ್ರೀವಸ್ಯ ತು ತದ್ವಾಕ್ಯಂ ಶ್ರುತ್ವಾ ರಾಮೋ ಮಹಾಬಲಃ ।
ಸಮೀಪಸ್ಥಾನುವಾಚೇದಂ ಹನುಮತ್ಪ್ರಮುಖಾನ್ಹರೀನ್ ॥೩೧॥

ಯದುಕ್ತಂ ಕಪಿರಾಜೇನ ರಾವಣಾವರಜಂ ಪ್ರತಿ ।
ವಾಕ್ಯಂ ಹೇತುಮದತ್ಯರ್ಥ್ಯಂ ಭವದ್ಭಿರಪಿ ತಚ್ಛ್ರುತಮ್ ॥೩೨॥

ಸುಹೃದಾಮರ್ಥಕೃಚ್ಛ್ರೇಷು ಯುಕ್ತಂ ಬುದ್ಧಿಮತಾ ಸತಾ ।
ಸಮರ್ಥೇನೋಪಸಂದೇಷ್ಟುಂ ಶಾಶ್ವತೀಂ ಭೂತಿಮಿಚ್ಛತಾ ॥೩೩॥

ಇತ್ಯೇವಂ ಪರಿಪೃಷ್ಟಾಸ್ತೇ ಸ್ವಂ ಸ್ವಂ ಮತಮತನ್ದ್ರಿತಾಃ ।
ಸೋಪಚಾರಂ ತದಾ ರಾಮಮೂಚುಃ ಪ್ರಿಯಚಿಕೀರ್ಷವಃ ॥೩೪॥

ಅಜ್ಞಾತಂ ನಾಸ್ತಿ ತೇ ಕಿಂಚಿತ್ತ್ರಿಷು ಲೋಕೇಷು ರಾಘವ ।
ಆತ್ಮಾನಂ ಸೂಚಯನ್ರಾಮ ಪೃಚ್ಛಸ್ಯಸ್ಮಾನ್ಸುಹೃತ್ತಯಾ ॥೩೫॥

ತ್ವಂ ಹಿ ಸತ್ಯವ್ರತಃ ಶೂರೋ ಧಾರ್ಮಿಕೋ ದೃಢವಿಕ್ರಮಃ ।
ಪರೀಕ್ಷ್ಯಕಾರೀ ಸ್ಮೃತಿಮಾನ್ನಿಸೃಷ್ಟಾತ್ಮಾ ಸುಹೃತ್ಸು ಚ ॥೩೬॥

ತಸ್ಮಾದೇಕೈಕಶಸ್ತಾವದ್ಬ್ರುವನ್ತು ಸಚಿವಾಸ್ತವ ।
ಹೇತುತೋ ಮತಿಸಂಪನ್ನಾಃ ಸಮರ್ಥಾಶ್ಚ ಪುನಃ ಪುನಃ ॥೩೭॥

ಇತ್ಯುಕ್ತೇ ರಾಘವಾಯಾಥ ಮತಿಮಾನಙ್ಗದೋಽಗ್ರತಃ ।
ವಿಭೀಷಣಪರೀಕ್ಷಾರ್ಥಮುವಾಚ ವಚನಂ ಹರಿಃ ॥೩೮॥

ಶತ್ರೋಃ ಸಕಾಶಾತ್ಸಂಪ್ರಾಪ್ತಃ ಸರ್ವಥಾ ಶಙ್ಕ್ಯ ಏವ ಹಿ ।
ವಿಶ್ವಾಸಯೋಗ್ಯಃ ಸಹಸಾ ನ ಕರ್ತವ್ಯೋ ವಿಭೀಷಣಃ ॥೩೯॥

ಛಾದಯಿತ್ವಾತ್ಮಭಾವಂ ಹಿ ಚರನ್ತಿ ಶಠಬುದ್ಧಯಃ ।
ಪ್ರಹರನ್ತಿ ಚ ರನ್ಧ್ರೇಷು ಸೋಽನರ್ಥಃ ಸುಮಹಾನ್ಭವೇತ್ ॥೪೦॥

ಅರ್ಥಾನರ್ಥೌ ವಿನಿಶ್ಚಿತ್ಯ ವ್ಯವಸಾಯಂ ಭಜೇತ ಹ ।
ಗುಣತಃ ಸಂಗ್ರಹಂ ಕುರ್ಯಾದ್ದೋಷತಸ್ತು ವಿಸರ್ಜಯೇತ್ ॥೪೧॥

ಯದಿ ದೋಷೋ ಮಹಾಂಸ್ತಸ್ಮಿಂಸ್ತ್ಯಜ್ಯತಾಮವಿಶಙ್ಕಿತಮ್ ।
ಗುಣಾನ್ವಾಪಿ ಬಹೂನ್ ಜ್ಞಾತ್ವಾ ಸಂಗ್ರಹಃ ಕ್ರಿಯತಾಂ ನೃಪ ॥೪೨॥

ಶರಭಸ್ತ್ವಥ ನಿಶ್ಚಿತ್ಯ ಸಾರ್ಥಂ ವಚನಮಬ್ರವೀತ್ ।
ಕ್ಷಿಪ್ರಮಸ್ಮಿನ್ನರವ್ಯಾಘ್ರ ಚಾರಃ ಪ್ರತಿವಿಧೀಯತಾಮ್ ॥೪೩॥

ಪ್ರಣಿಧಾಯ ಹಿ ಚಾರೇಣ ಯಥಾವತ್ಸೂಕ್ಷ್ಮಬುದ್ಧಿನಾ ।
ಪರೀಕ್ಷ್ಯ ಚ ತತಃ ಕಾರ್ಯೋ ಯಥಾನ್ಯಾಯ್ಯಂ ಪರಿಗ್ರಹಃ ॥೪೪॥

ಜಾಮ್ಬವಾಂಸ್ತ್ವಥ ಸಂಪ್ರೇಕ್ಷ್ಯ ಶಾಸ್ತ್ರಬುದ್ಧ್ಯಾ ವಿಚಕ್ಷಣಃ ।
ವಾಕ್ಯಂ ವಿಜ್ಞಾಪಯಾಮಾಸ ಗುಣವದ್ದೋಷವರ್ಜಿತಮ್ ॥೪೫॥

ಬದ್ಧವೈರಾಚ್ಚ ಪಾಪಾಚ್ಚ ರಾಕ್ಷಸೇನ್ದ್ರಾದ್ವಿಭೀಷಣಃ ।
ಅದೇಶಕಾಲೇ ಸಂಪ್ರಾಪ್ತಃ ಸರ್ವಥಾ ಶಙ್ಕ್ಯತಾಮಯಮ್ ॥೪೬॥

ತತೋ ಮೈನ್ದಸ್ತು ಸಂಪ್ರೇಕ್ಷ್ಯ ನಯಾಪನಯಕೋವಿದಃ ।
ವಾಕ್ಯಂ ವಚನಸಂಪನ್ನೋ ಬಭಾಷೇ ಹೇತುಮತ್ತರಮ್ ॥೪೭॥

ಅನುಜೋ ನಾಮ ತಸ್ಯೈಷ ರಾವಣಸ್ಯ ವಿಭೀಷಣಃ ।
ಪೃಚ್ಛತಾಂ ಮಧುರೇಣಾಯಂ ಶನೈರ್ನರವರೇಶ್ವರ ॥೪೮॥

ಭಾವಮಸ್ಯ ತು ವಿಜ್ಞಾಯ ತತಸ್ತತ್ತ್ವಂ ಕರಿಷ್ಯಸಿ ।
ಯದಿ ದುಷ್ಟೋ ನ ದುಷ್ಟೋ ವಾ ಬುದ್ಧಿಪೂರ್ವಂ ನರರ್ಷಭ ॥

ಅಥ ಸಂಸ್ಕಾರಸಂಪನ್ನೋ ಹನೂಮಾನ್ಸಚಿವೋತ್ತಮಃ ।
ಉವಾಚ ವಚನಂ ಶ್ಲಕ್ಷ್ಣಮರ್ಥವನ್ಮಧುರಂ ಲಘು ॥೫೦॥

ನ ಭವನ್ತಂ ಮತಿಶ್ರೇಷ್ಠಂ ಸಮರ್ಥಂ ವದತಾಂ ವರಮ್ ।
ಅತಿಶಾಯಯಿತುಂ ಶಕ್ತೋ ಬೃಹಸ್ಪತಿರಪಿ ಬ್ರುವನ್ ॥೫೧॥

ನ ವಾದಾನ್ನಾಪಿ ಸಙ್ಘರ್ಷಾನ್ನಾಧಿಕ್ಯಾನ್ನ ಚ ಕಾಮತಃ ।
ವಕ್ಷ್ಯಾಮಿ ವಚನಂ ರಾಜನ್ಯಥಾರ್ಥಂ ರಾಮ ಗೌರವಾತ್ ॥೫೨॥

ಅರ್ಥಾನರ್ಥನಿಮಿತ್ತಂ ಹಿ ಯದುಕ್ತಂ ಸಚಿವೈಸ್ತವ ।
ತತ್ರ ದೋಷಂ ಪ್ರಪಶ್ಯಾಮಿ ಕ್ರಿಯಾ ನ ಹ್ಯುಪಪದ್ಯತೇ ॥೫೩॥

ಋತೇ ನಿಯೋಗಾತ್ಸಾಮರ್ಥ್ಯಮವಬೋದ್ಧುಂ ನ ಶಕ್ಯತೇ ।
ಸಹಸಾ ವಿನಿಯೋಗೋ ಹಿ ದೋಷವಾನ್ಪ್ರತಿಭಾತಿ ಮಾ ॥೫೪॥

ಚಾರಪ್ರಣಿಹಿತಂ ಯುಕ್ತಂ ಯದುಕ್ತಂ ಸಚಿವೈಸ್ತವ ।
ಅರ್ಥಸ್ಯಾಸಂಭವಾತ್ತತ್ರ ಕಾರಣಂ ನೋಪಪದ್ಯತೇ ॥೫೫॥

ಅದೇಶಕಾಲೇ ಸಂಪ್ರಾಪ್ತ ಇತ್ಯಯಂ ಯದ್ವಿಭೀಷಣಃ ।
ವಿವಕ್ಷಾ ತತ್ರ ಮೇಽಸ್ತೀಯಂ ನಿಬೋಧ ತು ಯಥಾಮತಿ ॥೫೬॥

ಸ ಏಷ ದೇಶಃ ಕಾಲಶ್ಚ ಭವತೀತಿ ಯಥಾ ತಥಾ ।
ಪುರುಷಾತ್ಪುರುಷಂ ಪ್ರಾಪ್ಯ ತಥಾ ದೋಷಗುಣಾವಪಿ ॥೫೭॥

ದೌರಾತ್ಮ್ಯಂ ರಾವಣೇ ದೃಷ್ಟ್ವಾ ವಿಕ್ರಮಂ ಚ ತಥಾ ತ್ವಯಿ ।
ಯುಕ್ತಮಾಗಮನಂ ಹ್ಯತ್ರ ಸದೃಶಂ ತಸ್ಯ ಬುದ್ಧಿತಃ ॥೫೮॥

ಅಜ್ಞಾತರೂಪೈಃ ಪುರುಷೈಃ ಸ ರಾಜನ್ಪೃಚ್ಛ್ಯತಾಮಿತಿ ।
ಯದುಕ್ತಮತ್ರ ಮೇ ಪ್ರೇಕ್ಷಾ ಕಾಚಿದಸ್ತಿ ಸಮೀಕ್ಷಿತಾ ॥೫೯॥

ಪೃಚ್ಛ್ಯಮಾನೋ ವಿಶಙ್ಕೇತ ಸಹಸಾ ಬುದ್ಧಿಮಾನ್ವಚಃ ।
ತತ್ರ ಮಿತ್ರಂ ಪ್ರದುಷ್ಯೇತ ಮಿಥ್ಯಾ ಪೃಷ್ಟಂ ಸುಖಾಗತಮ್ ॥೬೦॥

ಅಶಕ್ಯಃ ಸಹಸಾ ರಾಜನ್ಭಾವೋ ವೇತ್ತುಂ ಪರಸ್ಯ ವೈ ।
ಅನ್ತಃಸ್ವಭಾವೈರ್ಗೀತೈಸ್ತೈರ್ನೈಪುಣ್ಯಂ ಪಶ್ಯತಾ ಭೃಶಮ್ ॥೬೧॥

ನ ತ್ವಸ್ಯ ಬ್ರುವತೋ ಜಾತು ಲಕ್ಷ್ಯತೇ ದುಷ್ಟಭಾವತಾ ।
ಪ್ರಸನ್ನಂ ವದನಂ ಚಾಪಿ ತಸ್ಮಾನ್ಮೇ ನಾಸ್ತಿ ಸಂಶಯಃ ॥೬೨॥

ಆಶಙ್ಕಿತಮತಿಃ ಸ್ವಸ್ಥೋ ನ ಶಠಃ ಪರಿಸರ್ಪತಿ ।
ನ ಚಾಸ್ಯ ದುಷ್ಟಾ ವಾಕ್ಚಾಪಿ ತಸ್ಮಾನ್ನಾಸ್ತೀಹ ಸಂಶಯಃ ॥೬೩॥

ಆಕಾರಶ್ಛಾದ್ಯಮಾನೋಽಪಿ ನ ಶಕ್ಯೋ ವಿನಿಗೂಹಿತುಮ್ ।
ಬಲಾದ್ಧಿ ವಿವೃಣೋತ್ಯೇವ ಭಾವಮನ್ತರ್ಗತಂ ನೃಣಾಮ್ ॥೬೪॥

ದೇಶಕಾಲೋಪಪನ್ನಂ ಚ ಕಾರ್ಯಂ ಕಾರ್ಯವಿದಾಂ ವರ ।
ಸಫಲಂ ಕುರುತೇ ಕ್ಷಿಪ್ರಂ ಪ್ರಯೋಗೇಣಾಭಿಸಂಹಿತುಮ್ ॥೬೫॥

ಉದ್ಯೋಗಂ ತವ ಸಂಪ್ರೇಕ್ಷ್ಯ ಮಿಥ್ಯಾವೃತ್ತಂ ಚ ರಾವಣಮ್ ।
ವಾಲಿನಶ್ಚ ವಧಂ ಶ್ರುತ್ವಾ ಸುಗ್ರೀವಂ ಚಾಭಿಷೇಚಿತಮ್ ॥೬೬॥

ರಾಜ್ಯಂ ಪ್ರಾರ್ಥಯಮಾನಶ್ಚ ಬುದ್ಧಿಪೂರ್ವಮಿಹಾಗತಃ ।
ಏತಾವತ್ತು ಪುರಸ್ಕೃತ್ಯ ಯುಜ್ಯತೇ ತ್ವಸ್ಯ ಸಂಗ್ರಹಃ ॥೬೭॥

ಯಥಾಶಕ್ತಿ ಮಯೋಕ್ತಂ ತು ರಾಕ್ಷಸಸ್ಯಾರ್ಜವಂ ಪ್ರತಿ ।
ತ್ವಂ ಪ್ರಮಾಣಂ ಹಿ ಶೇಷಸ್ಯ ಶ್ರುತ್ವಾ ಬುದ್ಧಿಮತಾಂ ವರ ॥೬೮॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಸಪ್ತದಶಃ ಸರ್ಗಃ

## ಅಷ್ಟಾದಶಃ ಸರ್ಗಃ

ಅಥ ರಾಮಃ ಪ್ರಸನ್ನಾತ್ಮಾ ಶ್ರುತ್ವಾ ವಾಯುಸುತಸ್ಯ ಹ ।
ಪ್ರತ್ಯಭಾಷತ ದುರ್ಧರ್ಷಃ ಶ್ರುತವಾನಾತ್ಮನಿ ಸ್ಥಿತಮ್ ॥೧॥

ಮಮಾಪಿ ತು ವಿವಕ್ಷಾಸ್ತಿ ಕಾಚಿತ್ಪ್ರತಿ ವಿಭೀಷಣಮ್ ।
ಶ್ರುತಮಿಚ್ಛಾಮಿ ತತ್ಸರ್ವಂ ಭವದ್ಭಿಃ ಶ್ರೇಯಸಿ ಸ್ಥಿತೈಃ ॥೨॥

ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ ।
ದೋಷೋ ಯದ್ಯಪಿ ತಸ್ಯ ಸ್ಯಾತ್ಸತಾಮೇತದಗರ್ಹಿತಮ್ ॥೩॥

ಸುಗ್ರೀವಸ್ತ್ವಥ ತದ್ವಾಕ್ಯಮಾಭಾಷ್ಯ ಚ ವಿಮೃಶ್ಯ ಚ ।
ತತಃ ಶುಭತರಂ ವಾಕ್ಯಮುವಾಚ ಹರಿಪುಂಗವಃ ॥೪॥

ಸುದುಷ್ಟೋ ವಾಪ್ಯದುಷ್ಟೋ ವಾ ಕಿಮೇಷ ರಜನೀಚರಃ ।
ಈದೃಶಂ ವ್ಯಸನಂ ಪ್ರಾಪ್ತಂ ಭ್ರಾತರಂ ಯಃ ಪರಿತ್ಯಜೇತ್ ।
ಕೋ ನಾಮ ಸ ಭವೇತ್ತಸ್ಯ ಯಮೇಷ ನ ಪರಿತ್ಯಜೇತ್ ॥೫॥

ವಾನರಾಧಿಪತೇರ್ವಾಕ್ಯಂ ಶ್ರುತ್ವಾ ಸರ್ವಾನುದೀಕ್ಷ್ಯ ಚ ।
ಈಷದುತ್ಸ್ಮಯಮಾನಸ್ತು ಲಕ್ಷ್ಮಣಂ ಪುಣ್ಯಲಕ್ಷಣಮ್ ॥೬॥

ಇತಿ ಹೋವಾಚ ಕಾಕುತ್ಸ್ಥೋ ವಾಕ್ಯಂ ಸತ್ಯಪರಾಕ್ರಮಃ ॥೭॥

ಅನಧೀತ್ಯ ಚ ಶಾಸ್ತ್ರಾಣಿ ವೃದ್ಧಾನನುಪಸೇವ್ಯ ಚ ।
ನ ಶಕ್ಯಮೀದೃಶಂ ವಕ್ತುಂ ಯದುವಾಚ ಹರೀಶ್ವರಃ ॥೮॥

ಅಸ್ತಿ ಸೂಕ್ಷ್ಮತರಂ ಕಿಂಚಿದ್ಯದತ್ರ ಪ್ರತಿಭಾತಿ ಮೇ ।
ಪ್ರತ್ಯಕ್ಷಂ ಲೌಕಿಕಂ ವಾಪಿ ವಿದ್ಯತೇ ಸರ್ವರಾಜಸು ॥೯॥

ಅಮಿತ್ರಾಸ್ತತ್ಕುಲೀನಾಶ್ಚ ಪ್ರಾತಿದೇಶ್ಯಾಶ್ಚ ಕೀರ್ತಿತಾಃ ।
ವ್ಯಸನೇಷು ಪ್ರಹರ್ತಾರಸ್ತಸ್ಮಾದಯಮಿಹಾಗತಃ ॥೧೦॥

ಅಪಾಪಾಸ್ತತ್ಕುಲೀನಾಶ್ಚ ಮಾನಯನ್ತಿ ಸ್ವಕಾನ್ಹಿತಾನ್ ।
ಏವಂ ಪ್ರಾಯೋ ನರೇನ್ದ್ರಾಣಾಂ ಶಙ್ಕನೀಯಸ್ತು ಶೋಭನಃ ॥೧೧॥

ಯಸ್ತು ದೋಷಸ್ತ್ವಯಾ ಪ್ರೋಕ್ತೋ ಹ್ಯಾದಾನೇಽರಿಬಲಸ್ಯ ಚ ।
ತತ್ರ ವೈ ಕೀರ್ತಯಿಷ್ಯಾಮಿ ಯಥಾಶಾಸ್ತ್ರಮಿದಂ ಶೃಣು ॥೧೨॥

ನ ವಯಂ ತತ್ಕುಲೀನಾಶ್ಚ ರಾಜ್ಯಕಾಂಕ್ಷೀ ಚ ರಾಕ್ಷಸಃ ।
ಪಣ್ಡಿತಾ ಹಿ ಭವಿಷ್ಯನ್ತಿ ತಸ್ಮಾದ್ಗ್ರಾಹ್ಯೋ ವಿಭೀಷಣಃ ॥೧೩॥

ಅವ್ಯಗ್ರಾಶ್ಚ ಪ್ರಹೃಷ್ಟಾಶ್ಚ ತೇ ಭವಿಷ್ಯನ್ತಿ ಸಂಗತಾಃ ।
ಪ್ರಣಾದಶ್ಚ ಮಹಾನೇಷೋಽನ್ಯೋನ್ಯಸ್ಯ ಭಯಮಾಗತಮ್ ।
ಇತಿ ಭೇದಂ ಗಮಿಷ್ಯನ್ತಿ ತಸ್ಮಾದ್ಗ್ರಾಹ್ಯೋ ವಿಭೀಷಣಃ ॥೧೪॥

ನ ಸರ್ವೇ ಭ್ರಾತರಸ್ತಾತ ಭವನ್ತಿ ಭರತೋಪಮಾಃ ।
ಮದ್ವಿಧಾ ವಾ ಪಿತುಃ ಪುತ್ರಾಃ ಸುಹೃದೋ ವಾ ಭವದ್ವಿಧಾಃ ॥೧೫॥

ಏವಮುಕ್ತಸ್ತು ರಾಮೇಣ ಸುಗ್ರೀವಃ ಸಹಲಕ್ಷ್ಮಣಃ ।
ಉತ್ಥಾಯೇದಂ ಮಹಾಪ್ರಾಜ್ಞಃ ಪ್ರಣತೋ ವಾಕ್ಯಮಬ್ರವೀತ್ ॥೧೬॥

ರಾವಣೇನ ಪ್ರಣಿಹಿತಂ ತಮವೇಹಿ ವಿಭೀಷಣಮ್ ।
ತಸ್ಯಾಹಂ ನಿಗ್ರಹಂ ಮನ್ಯೇ ಕ್ಷಮಂ ಕ್ಷಮವತಾಂ ವರ ॥೧೭॥

ರಾಕ್ಷಸೋ ಜಿಹ್ಮಯಾ ಬುದ್ಧ್ಯಾ ಸಂದಿಷ್ಟೋಽಯಮಿಹಾಗತಃ ।
ಪ್ರಹರ್ತುಂ ತ್ವಯಿ ವಿಶ್ವಸ್ತೇ ಪ್ರಚ್ಛನ್ನೋ ಮಯಿ ವಾನಘ ॥೧೮॥

ಲಕ್ಷ್ಮಣೇ ವಾ ಮಹಾಬಾಹೋ ಸ ವಧ್ಯಃ ಸಚಿವೈಃ ಸಹ ।
ರಾವಣಸ್ಯ ನೃಶಂಸಸ್ಯ ಭ್ರಾತಾ ಹ್ಯೇಷ ವಿಭೀಷಣಃ ॥೧೯॥

ಏವಮುಕ್ತ್ವಾ ರಘುಶ್ರೇಷ್ಠಂ ಸುಗ್ರೀವೋ ವಾಹಿನೀಪತಿಃ ।
ವಾಕ್ಯಜ್ಞೋ ವಾಕ್ಯಕುಶಲಂ ತತೋ ಮೌನಮುಪಾಗಮತ್ ॥೨೦॥

ಸುಗ್ರೀವಸ್ಯ ತು ತದ್ವಾಕ್ಯಂ ಶ್ರುತ್ವಾ ರಾಮೋ ವಿಮೃಶ್ಯ ಚ ।
ತತಃ ಶುಭತರಂ ವಾಕ್ಯಮುವಾಚ ಹರಿಪುಂಗವಮ್ ॥೨೧॥

ಸುದುಷ್ಟೋ ವಾಪ್ಯದುಷ್ಟೋ ವಾ ಕಿಮೇಷ ರಜನೀಚರಃ ।
ಸೂಕ್ಷ್ಮಮಪ್ಯಹಿತಂ ಕರ್ತುಂ ಮಮಾಶಕ್ತಃ ಕಥಂಚನ ॥೨೨॥

ಪಿಶಾಚಾನ್ದಾನವಾನ್ಯಕ್ಷಾನ್ಪೃಥಿವ್ಯಾಂ ಚೈವ ರಾಕ್ಷಸಾನ್ ।
ಅಙ್ಗುಲ್ಯಗ್ರೇಣ ತಾನ್ಹನ್ಯಾಮಿಚ್ಛನ್ಹರಿಗಣೇಶ್ವರ ॥೨೩॥

ಶ್ರೂಯತೇ ಹಿ ಕಪೋತೇನ ಶತ್ರುಃ ಶರಣಮಾಗತಃ ।
ಅರ್ಚಿತಶ್ಚ ಯಥಾನ್ಯಾಯಂ ಸ್ವೈಶ್ಚ ಮಾಂಸೈರ್ನಿಮನ್ತ್ರಿತಃ ॥೨೪॥

ಸ ಹಿ ತಂ ಪ್ರತಿಜಗ್ರಾಹ ಭಾರ್ಯಾಹರ್ತಾರಮಾಗತಮ್ ।
ಕಪೋತೋ ವಾನರಶ್ರೇಷ್ಠ ಕಿಂ ಪುನರ್ಮದ್ವಿಧೋ ಜನಃ ॥೨೫॥

ಋಷೇಃ ಕಣ್ವಸ್ಯ ಪುತ್ರೇಣ ಕಣ್ಡುನಾ ಪರಮರ್ಷಿಣಾ ।
ಶೃಣು ಗಾಥಾಂ ಪುರಾ ಗೀತಾಂ ಧರ್ಮಿಷ್ಠಾಂ ಸತ್ಯವಾದಿನಾ ॥೨೬॥

ಬದ್ಧಾಞ್ಜಲಿಪುಟಂ ದೀನಂ ಯಾಚನ್ತಂ ಶರಣಾಗತಮ್ ।
ನ ಹನ್ಯಾದಾನೃಶಂಸ್ಯಾರ್ಥಮಪಿ ಶತ್ರುಂ ಪರಂತಪ ॥೨೭॥

ಆರ್ತೋ ವಾ ಯದಿ ವಾ ದೃಪ್ತಃ ಪರೇಷಾಂ ಶರಣಂ ಗತಃ ।
ಅಪಿ ಪ್ರಾಣಾನ್ಪರಿತ್ಯಜ್ಯ ರಕ್ಷಿತವ್ಯಃ ಕೃತಾತ್ಮನಾ ॥೨೮॥

ತಂ ಚೇದ್ಭಯಾದ್ವಾ ಮೋಹದ್ವಾ ಕಾಮಾದ್ವಾಪಿ ನ ರಕ್ಷತಿ ।
ಸ್ವಯಾ ಶಕ್ತ್ಯಾ ಯಥಾನ್ಯಾಯಂ ತತ್ಪಾಪಂ ಲೋಕಗರ್ಹಿತಮ್ ॥೨೯॥

ವಿನಷ್ಟಃ ಪಶ್ಯತೋಯಸ್ಯಾರಕ್ಷಿತುಃ ಶರಣಾ ಗತಃ ।
ಆದಾಯ ಸುಕೃತಂ ತಸ್ಯ ಸರ್ವಂ ಗಚ್ಛೇದರಕ್ಷಿತಃ ॥೩೦॥

ಏವಂ ದೋಷೋ ಮಹಾನತ್ರ ಪ್ರಪನ್ನಾನಾಮರಕ್ಷಣೇ ।
ಅಸ್ವರ್ಗ್ಯಂ ಚಾಯಶಸ್ಯಂ ಚ ಬಲವೀರ್ಯವಿನಾಶನಮ್ ॥೩೧॥

ಕರಿಷ್ಯಾಮಿ ಯಥಾರ್ಥಂ ತು ಕಣ್ಡೋರ್ವಚನಮುತ್ತಮಮ್ ।
ಧರ್ಮಿಷ್ಠಂ ಚ ಯಶಸ್ಯಂ ಚ ಸ್ವರ್ಗ್ಯಂ ಸ್ಯಾತ್ತು ಫಲೋದಯೇ ॥೩೨॥

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥೩೩॥

ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ ।
ವಿಭೀಷಣೋ ವಾ ಸುಗ್ರೀವ ಯದಿ ವಾ ರಾವಣಃ ಸ್ವಯಮ್ ॥೩೪॥

ರಾಮಸ್ಯ ತು ವಚಃ ಶ್ರುತ್ವಾ ಸುಗ್ರೀವಃ ಪ್ಲವಗೇಶ್ವರಃ ।
ಪ್ರತ್ಯಭಾಷತ ಕಾಕುತ್ಸ್ಥಂ ಸೌಹಾರ್ದೇನಾಭಿಚೋದಿತಃ ॥೩೫॥

ಕಿಮತ್ರ ಚಿತ್ರಂ ಧರ್ಮಜ್ಞ ಲೋಕನಾಥ ಸುಖಾವಹ ।
ಯತ್ತ್ವಮಾರ್ಯಂ ಪ್ರಭಾಷೇಥಾಃ ಸತ್ತ್ವವಾನ್ಸತ್ಪಥೇ ಸ್ಥಿತಃ ॥೩೬॥

ಮಮ ಚಾಪ್ಯನ್ತರಾತ್ಮಾಯಂ ಶುದ್ಧಂ ವೇತ್ತಿ ವಿಭೀಷಣಮ್ ।
ಅನುಮಾನಾಚ್ಚ ಭಾವಾಚ್ಚ ಸರ್ವತಃ ಸುಪರೀಕ್ಷಿತಃ ॥೩೭॥

ತಸ್ಮಾತ್ಕ್ಷಿಪ್ರಂ ಸಹಾಸ್ಮಾಭಿಸ್ತುಲ್ಯೋ ಭವತು ರಾಘವ ।
ವಿಭೀಷಣೋ ಮಹಾಪ್ರಾಜ್ಞಃ ಸಖಿತ್ವಂ ಚಾಭ್ಯುಪೈತು ನಃ ॥೩೮॥

ತತಸ್ತು ಸುಗ್ರೀವವಚೋ ನಿಶಮ್ಯ ತ-
ದ್ಧರೀಶ್ವರೇಣಾಭಿಹಿತಂ ನರೇಶ್ವರಃ ।
ವಿಭೀಷಣೇನಾಶು ಜಗಾಮ ಸಂಗಮಂ
ಪತತ್ರಿರಾಜೇನ ಯಥಾ ಪುರಂದರಃ ॥೩೯॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಅಷ್ಟಾದಶಃ ಸರ್ಗಃ

---

## ಏಕೋನವಿಂಶಃ ಸರ್ಗಃ

ರಾಘವೇಣಾಭಯೇ ದತ್ತೇ ಸಂನತೋ ರಾವಣಾನುಜಃ ।
ವಿಭೀಷಣೋ ಮಹಾಪ್ರಾಜ್ಞೋ ಭೂಮಿಂ ಸಮವಲೋಕಯತ್

ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಶ್ರೀಮಹಾಗಣಪತಯೇ ನಮಃ     ಶ್ರೀಸರಸ್ವತ್ಯೈ ನಮಃ     ಶ್ರೀಸದ್ಗುರವೇ ನಮಃ

# ಶ್ರೀಮದ್ವಾಲ್ಮೀಕಿರಾಮಾಯಣ - ಏಳನೆಯ ಸಂಪುಟ
# ಸುಂದರಕಾಂಡ

**ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।**
**ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥**



## ಹನುಮಂತನಿಂದ ಸಮುದ್ರೋಲ್ಲಂಘನ : ಮಾರ್ಗಮಧ್ಯದಲ್ಲಿ ಮೈನಾಕನಿಂದ ಸ್ವಾಗತ : ಸುರಸೆಯ ಪರಾಜಯ : ಸಿಂಹಿಕೆಯ ವಧೆ : ಲಂಕೆಯ ಸೌಂದರ್ಯದ ವೀಕ್ಷಣೆ

**ತತೋ ರಾವಣನೀತಾಯಾಃ ಸೀತಾಯಾಃ ಶತ್ರುಕರ್ಶನಃ ।**
**ಇಯೇಷ ಪದಮನ್ವೇಷ್ಟುಂ ಚಾರಣಾಚರಿತೇ ಪಥಿ ॥೧॥**

ಶತ್ರುಸಂಹಾರಕನಾದ ಹನುಮಂತನು ತನ್ನಲ್ಲಿರುವ ಅದ್ಭುತವಾದ ಶಕ್ತಿಯನ್ನು ಸ್ಮರಿಸಿಕೊಂಡು, ರಾವಣನಿಂದ ಒಯ್ಯಲ್ಪಟ್ಟ ಸೀತೆಯಿರುವ ಸ್ಥಾನ ವನ್ನು ಹುಡುಕುವ ಸಲುವಾಗಿ, ಚಾರಣರೆಂಬ ದೇವತೆಗಳು ಸಂಚರಿಸುವ ಆಕಾಶಮಾರ್ಗದಲ್ಲಿ ಪ್ರಯಾಣಮಾಡಲು ಬಯಸಿದನು.*

ಹನುಮಂತನು ಸಾಟಿಯೇ ಇಲ್ಲದ, ಅತ್ಯಂತದುಷ್ಕರವಾದ ಕಾರ್ಯವನ್ನು ಮಾಡಲು ಬಯಸಿದ್ದನು. ಇಂತಹ ಮಹಾಕಾರ್ಯಕ್ಕೆ ಅವನಿಗೆ ಸಹಾಯಕರಾರೂ ಇರಲಿಲ್ಲ. ಏಕಾಕಿಯಾಗಿಯೇ ಈ ಕಾರ್ಯವನ್ನು ಅವನು

---

* ಈ ಶ್ಲೋಕವನ್ನು ಹನ್ನೆರಡನೆಯ ಸಾವಿರದ ಆದಿಯ ಶ್ಲೋಕವೆಂದೂ–ರಾ 'ವ' ಣನೀತಾಯಾಃ –ಪದದಲ್ಲಿರುವ 'ವ' ಕಾರವೇ ಗಾಯತ್ರೀಮಹಾಮಂತ್ರದ ಹನ್ನೆರಡನೆಯ ಅಕ್ಷರವಾಗಿರುವುದೆಂದೂ ಒಬ್ಬ ವ್ಯಾಖ್ಯಾನಕಾರರು ಹೇಳಿರುತ್ತಾರೆ.

ಮಾಡಲು ನಿರ್ಧರಿಸಿದನು. ಆ ಸಮಯದಲ್ಲಿ ತಲೆ ಮತ್ತು ಕುತ್ತಿಗೆಗಳನ್ನು ಮೇಲಕ್ಕೆತ್ತಿ ಸೆಟೆದು ನಿಂತಿದ್ದ ಅವನು ಗೂಳಿಯಂತೆಯೇ ಪ್ರಕಾಶಿಸುತ್ತಿದ್ದನು. ಅಂತಹ ಧೀರನಾದ, ಮಹಾಬಲನಾದ ಹನುಮಂತನು ಹಚ್ಚನೆಯ ಹುಲ್ಲಿನ ಮೇಲೆ ಸುಖವಾಗಿ ನಡೆದು ಹೋಗುತ್ತಿದ್ದನು. ಆ ಗರಿಕೆಯ ಹುಲ್ಲುಗಳು ವೈಡೂರ್ಯವರ್ಣದಿಂದ ಶೋಭಿಸುತ್ತಿದ್ದುವು. ವಿಶಾಲವಾದ ಜಲರಾಶಿ ಯಂತೆಯೂ ಕಾಣುತ್ತಿದ್ದುವು.

ಹಾಗೆ ಅವನು ವೇಗವಾಗಿ ಹೋಗುತ್ತಿದ್ದಾಗ ಪಕ್ಷಿಗಳು ಭಯಗೊಂಡು ಚದುರಿ ಹಾರಿಹೋಗುತ್ತಿದ್ದುವು. ಅವನ ಉಬ್ಬಿದ ಎದೆಗೆ ಎದುರಾಗಿ ಸಿಕ್ಕಿದ ಅನೇಕವೃಕ್ಷಗಳು ಮುರಿದುಬಿದ್ದುವು. ಅನೇಕಮೃಗಗಳು ಕಾಲಿನ ತುಳಿತಕ್ಕೆ ಸಿಕ್ಕಿ ಸತ್ತುಹೋದುವು. ಆ ಸಮಯದಲ್ಲವನು ಕೊಬ್ಬಿದ ಸಿಂಹದಂತೆಯೇ ಕಾಣುತ್ತಿದ್ದನು. ಹನುಮಂತನು ಹತ್ತಿಹೋಗುತ್ತಿದ್ದ ಪರ್ವತವು ಸ್ವಭಾವ ಸಿದ್ಧವಾದ ಕಪ್ಪು, ಕೆಂಪು, ಹಸಿರು, ಎಣ್ಣೆಗೆಂಪು, ಬಿಳಿ ಮತ್ತು ಕಪ್ಪುಬಣ್ಣಗಳ ಧಾತುಗಳಿಂದ ಅಲಂಕೃತವಾಗಿದ್ದಿತು. ಬೇಕುಬೇಕಾದಂತೆ ರೂಪಗಳನ್ನು ಧರಿಸುವ ಸಾಮರ್ಥ್ಯವುಳ್ಳ ಯಕ್ಷ-ಗಂಧರ್ವ-ಕಿನ್ನರರಿಂದಲೂ, ದೇವಸದೃಶ ರಾದ ಪನ್ನಗರಿಂದಲೂ ಮತ್ತು ಅವರ ಪರಿವಾರದವರಿಂದಲೂ ಆ ಪರ್ವತವು ಸಮಾವೃತವಾಗಿದ್ದಿತು.

ದೊಡ್ಡ-ದೊಡ್ಡ ಆನೆಗಳಿಂದ ಕೂಡಿದ್ದ ಆ ಪರ್ವತದ ತಪ್ಪಲುಪ್ರದೇಶ ದಲ್ಲಿ ನಿಂತಿದ್ದ ಹನುಮಂತನು ಜಲರಾಶಿಯ ಮಧ್ಯದಲ್ಲಿರುವ ದೊಡ್ಡದಾದ ಆನೆಯಂತೆಯೇ ಪ್ರಕಾಶಿಸುತ್ತಿದ್ದನು.

ಬಳಿಕ ಹನುಮಂತನು ಸೂರ್ಯನಿಗೂ, ಮಹೇಂದ್ರನಿಗೂ, ವಾಯು ವಿಗೂ, ಬ್ರಹ್ಮನಿಗೂ ಮತ್ತು ಇತರ ಭೂತಗಣಗಳಿಗೂ ಕೈಜೋಡಿಸಿ ನಮಸ್ಕರಿಸಿ ಮುಂದೆ ಹೋಗಲು ನಿಶ್ಚಯಿಸಿದನು. ಸರ್ವಕಾರ್ಯಸಮರ್ಥ ನಾದ ಆತನು ಪೂರ್ವಾಭಿಮುಖವಾಗಿ ನಿಂತು ತನ್ನ ಹುಟ್ಟಿಗೆ ಕಾರಣನಾದ ವಾಯುದೇವನಿಗೆ ಪುನಃ ನಮಸ್ಕರಿಸಿ, ದಕ್ಷಿಣದಿಕ್ಕಿನಲ್ಲಿದ್ದ ಸಮುದ್ರವನ್ನು ಲಂಘಿಸುವ ಸಲುವಾಗಿ ಎತ್ತರವಾಗಿ ಬೆಳೆಯತೊಡಗಿದನು. ಹಾರಿಕೊಂಡೇ ಸಮುದ್ರವನ್ನು ದಾಟಬೇಕೆಂದು ದೃಢವಾಗಿ ನಿಶ್ಚಯಿಸಿದ್ದ ಹನುಮಂತನು

ಶ್ರೀರಾಮನ ಅಭ್ಯುದಯಾರ್ಥವಾಗಿ ಪರ್ವಕಾಲದಲ್ಲಿ ಸಮುದ್ರವು ಉಕ್ಕೇರುವಂತೆ ಮೈಯ್ಯುಬ್ಬಿ ಬೆಳೆಯುತ್ತಿರುವುದನ್ನು ಕಪಿನಾಯಕರೆಲ್ಲರೂ ವೀಕ್ಷಿಸಿ ದರು. ಸಮುದ್ರವನ್ನು ಲಂಘಿಸುವ ಆಶಯದಿಂದ ಹನುಮಂತನು ಅಪರಿ ಮಿತವಾಗಿ ಬೆಳೆದು ನಿಂತನು. ಹಾರಲು ಸಿದ್ಧನಾದ ಆತನು ಕೈಗಳಿಂದಲೂ, ಕಾಲುಗಳಿಂದಲೂ ಪರ್ವತವನ್ನು ಬಹಳವಾಗಿ ಪೀಡಿಸಿದನು.* ಕಪೀಶ್ವರನ ಕೈ-ಕಾಲುಗಳಿಂದ ಪೀಡಿಸಲ್ಪಟ್ಟ ಆ ಪರ್ವತವು ಸ್ವಲ್ಪಹೊತ್ತಿನವರೆಗೆ ಅಲುಗಾಡುತ್ತಲೇ ಇದ್ದಿತು. ಅದರ ಪರಿಣಾಮವಾಗಿ ಪುಷ್ಪಿತವಾದ ಅಗ್ರಭಾಗಗಳುಳ್ಳ ವೃಕ್ಷಗಳಿಂದ ಎಲ್ಲ ಪುಷ್ಪಗಳೂ ಕೆಳಗುದುರಿದುವು. ಹಾಗೆ ಕೆಳಕ್ಕುದುರಿದ ಸುಗಂಧಯುಕ್ತವಾದ ಪುಷ್ಪರಾಶಿಯಿಂದ ಸಮಾವೃತವಾಗಿದ್ದ ಆ ಪರ್ವತವು ತತ್ಕಾಲದಲ್ಲಿ ಪುಷ್ಪಮಯವಾಗಿರುವಂತೆಯೇ ಕಾಣುತ್ತಿದ್ದಿತು. ಮಹಾಪರಾಕ್ರಮಿಯಾದ ಹನುಮಂತನಿಂದ ಪೀಡಿಸಲ್ಪಟ್ಟ ಆ ಪರ್ವತವು ಮದಿಸಿದ ಆನೆಯು ತನ್ನ ಗಂಡಸ್ಥಳದಿಂದ ಮದೋದಕವನ್ನು ಸುರಿಸುವಂತೆ ಎಲ್ಲ ಕಡೆಗಳಿಂದಲೂ ನೀರನ್ನು ಹೊರಚಿಮ್ಮಿತು. ಮಹಾಬಲಿಷ್ಠನಾದ ಹನುಮಂತನ ಕೈ-ಕಾಲುಗಳಿಂದ ಪೀಡಿಸಲ್ಪಟ್ಟ ಆ ಮಹೇಂದ್ರಪರ್ವತವು (ತನ್ನಲ್ಲಿದ್ದ ಬಂಡೆಗಳು ಒಡೆದುದರ ಕಾರಣದಿಂದಾಗಿ) ಸುವರ್ಣಮಯವಾದ, ರಜತಮಯವಾದ ಮತ್ತು ಕಪ್ಪಾದ ರೇಖೆಗಳನ್ನು ಪ್ರಕಟಗೊಳಿಸಿತು.

ಹೀಗೆ ಪೀಡಿತವಾದ ಆ ಮಹೇಂದ್ರಪರ್ವತವು ಸಾಧಾರಣಜ್ವಾಲೆ ಗಳಿಂದ ಕೂಡಿರುವ ಅಗ್ನಿಯು ಹೊಗೆಯ ಸಾಲುಗಳನ್ನು ಹೊರಹಾಕುವಂತೆ ಮಣಿಶಿಲೆಗಳಿಂದ ಯುಕ್ತವಾದ ದೊಡ್ಡ-ದೊಡ್ಡ ಬಂಡೆಗಳನ್ನು ಹೊರಹಾಕಿತು. ಹನುಮಂತನಿಂದ ಪೀಡಿಸಲ್ಪಟ್ಟ, ಪರ್ವತದ ಕಂಪನದಿಂದ ತೊಂದರೆಗೊಳ ಗಾದ, ಪರ್ವತಗುಹೆಗಳಲ್ಲಿದ್ದ ಎಲ್ಲ ಪ್ರಾಣಿಗಳೂ ಎಲ್ಲ ಕಡೆಗಳಿಂದಲೂ

---

* ಕಪಿಗಳಿಗೆ ಮುಂಭಾಗದಲ್ಲಿ ಎರಡು ಕೈಗಳೇ ಇದ್ದರೂ ನಡೆಯುವಾಗ ಆ ಎರಡು ಕೈಗಳನ್ನೂ ಕಾಲುಗಳಂತೆಯೇ ಉಪಯೋಗಿಸಿಕೊಳ್ಳುತ್ತವೆ. ಆದುದರಿಂದ ಕಪಿಗಳು ಚತುಷ್ಪಾದಿಗಳು. ಪರ್ವತವನ್ನು ಪೀಡಿಸುವುದೆಂದರೆ ಹಾರುವ ಮೊದಲು ಕೈಗಳನ್ನು ನೆಲಕ್ಕೆ ಅಪ್ಪಳಿಸಿ ಸಜ್ಜಾಗಿ ನಿಲ್ಲುವುದು. ಪರ್ವತವೂ ಅಲುಗಾಡುವಷ್ಟು ಜೋರಾಗಿ ಕೈಕಾಲುಗಳನ್ನು ಅಪ್ಪಳಿಸಿದನು–ಎಂದು ಭಾವ.

ವಿಕಾರಸ್ವರಗಳಿಂದ ಕೂಗಿಕೊಂಡುವು. ಪರ್ವತದ ಕಂಪನದಿಂದಾಗಿ ಗುಹೆಗಳಲ್ಲಿ ವಾಸಮಾಡುತ್ತಿದ್ದ ಎಲ್ಲ ಪ್ರಾಣಿಗಳೂ ಭಯದಿಂದ ಆರ್ತನಾದಗಳನ್ನು ಮಾಡಿದುವು. ಹಾಗೆ ಭಯಗೊಂಡು ಕೂಗಿಕೊಂಡ ಅಲ್ಲಿದ್ದ ಮಹಾಪ್ರಾಣಿಗಳ ಘೋರನಿನಾದವು ಭೂಮಂಡಲವನ್ನೂ, ದಿಕ್ಕುಗಳನ್ನೂ, ವನಗಳನ್ನೂ ಆವರಿಸಿತು. ಸ್ಪಷ್ಟವಾಗಿ ಕಾಣುವ ಸ್ವಸ್ತಿಕಲಕ್ಷಣಗಳಿಂದ* ಯುಕ್ತವಾಗಿದ್ದ, ದೊಡ್ಡದಾದ ತಲೆಗಳನ್ನು ಹೊಂದಿದ್ದ ಸರ್ಪಗಳು ಪರ್ವತದ ಕಂಪನದಿಂದ ಖತಿಗೊಂಡು ಮುಖದಿಂದ ಘೋರವಾದ ಬೆಂಕಿಯನ್ನೇ ಕಾರುತ್ತಾ ವಿಷದ ಹಲ್ಲುಗಳಿಂದ ಬಂಡೆಗಳನ್ನೇ ಕಚ್ಚುತ್ತಿದ್ದುವು. ಕೋಪಗೊಂಡ ಆ ಮಹಾವಿಷಸರ್ಪಗಳಿಂದ ಕಚ್ಚಲ್ಪಟ್ಟ ಮಹೇಂದ್ರಪರ್ವತದ ದೊಡ್ಡ-ದೊಡ್ಡ ಬಂಡೆಗಳು ಅಗ್ನಿಯಿಂದ ಉದ್ದೀಪನಗೊಂಡು ಪ್ರಜ್ವಲಿಸುತ್ತಾ ಕ್ಷಣಮಾತ್ರದಲ್ಲಿ ಸಾವಿರಾರು ಚೂರುಗಳಾಗಿ ಒಡೆದುಹೋದುವು. ಆ ಪರ್ವತದಲ್ಲಿಯೇ ಹುಟ್ಟಿ ಬೆಳೆದಿದ್ದ ವಿಷವನ್ನು ಹೋಗಲಾಡಿಸಲು ಸಮರ್ಥವಾದ ಓಷಧಿಲತೆಗಳ ಸಮೂಹಗಳು ಕೂಡ ಖತಿಗೊಂಡ ಸರ್ಪಗಳ ಆ ವಿಷವನ್ನು ಉಪಶಮನಗೊಳಿಸಲು ಸಮರ್ಥವಾಗಲಿಲ್ಲ.

ಮಹೇಂದ್ರಪರ್ವತವು ಮಹಾಸತ್ತ್ವಯುಕ್ತವಾದ ಪ್ರಾಣಿಗಳಿಂದ ಭೇದಿಸಲ್ಪಡುತ್ತಿದೆಯೆಂದು ಭಾವಿಸಿ ಅಲ್ಲಿ ಆಶ್ರಯವನ್ನು ಪಡೆದಿದ್ದ ತಪಸ್ವಿಗಳೂ ವಿದ್ಯಾಧರರೂ ಭಯಗೊಂಡು ತಮ್ಮ ಸ್ತ್ರೀಯರೊಡನೆ ಅಂತರಿಕ್ಷದ ಕಡೆಗೆ ಧಾವಿಸಿದರು. ಕಂಠಾಭರಣಗಳನ್ನೂ–ಕೆಂಪುಹೂವಿನ ಮಾಲೆಗಳನ್ನೂ ಧರಿಸಿ, ಗಂಧವನ್ನು ಪೂಸಿಕೊಂಡಿದ್ದ, ಕೆಂಗಣ್ಣರೂ ಕಮಲಾಕ್ಷರೂ ಆಗಿದ್ದ, ಪಾನಭೂಮಿಯಲ್ಲಿ ಮದ್ಯಾಸವಗಳನ್ನು ಸೇವಿಸುತ್ತಾ ಆನಂದತುಂದಿಲರಾಗಿದ್ದ ವಿದ್ಯಾಧರರು ಪರ್ವತವು ಕಂಪಿಸುತ್ತಲೇ ಆಸವದಿಂದ ತುಂಬಿದ್ದ ಸುವರ್ಣಮಯವಾದ ಪಾತ್ರೆಗಳನ್ನೂ, ಸುವರ್ಣಮಯವಾದ ಕಮಂಡಲುಗಳನ್ನೂ, ನಾನಾವಿಧವಾದ ಲೇಹ್ಯಗಳನ್ನೂ, ಭಕ್ಷ್ಯಗಳನ್ನೂ, ವಿಧ-ವಿಧವಾದ ಮಾಂಸಗಳನ್ನೂ, ಎತ್ತಿನ ಚರ್ಮಗಳನ್ನೂ, ಚಿನ್ನದ ಹಿಡಿಗಳಿಂದ ಕೂಡಿದ ಕತ್ತಿಗಳನ್ನೂ ಪರಿತ್ಯಜಿಸಿ ಆಕಾಶವನ್ನು ಸೇರಿದರು. ಹಾರಗಳನ್ನೂ, ಕಾಲಂದಿಗೆ

---

* ಸರ್ಪಗಳಿಗೆ ಹೆಡೆಗಳಲ್ಲಿ ನೀಲವರ್ಣದ ಅರ್ಧಚಂದ್ರಾಕಾರದ ಗುರುತಿರುತ್ತದೆ. ಅದನ್ನೇ ಇಲ್ಲಿ ಸ್ವಸ್ತಿಕಲಕ್ಷಣಗಳೆಂದು ಹೇಳಿದ್ದಾರೆ.

ಗಳನ್ನೂ, ತೋಳಂದಿಗೆಗಳನ್ನೂ, ಬಳೆಗಳನ್ನೂ ಧರಿಸಿದ್ದ ವಿದ್ಯಾಧರ ಸ್ತ್ರೀಯರು ಹನುಮಂತನ ಬೃಹದಾಕಾರವನ್ನೂ, ಪರ್ವತವನ್ನು ಅಲ್ಲಾಡಿ ಸುತ್ತಿದ್ದ ಅವನ ಹೆಜ್ಜೆಗಳ ಸಂಘಟ್ಟನೆಯನ್ನೂ ನೋಡಿ ವಿಸ್ಮಿತರಾಗಿ ತಮ್ಮ- ತಮ್ಮ ಪತಿಗಳೊಡನೆ ಮಂದಹಾಸವನ್ನು ಬೀರುತ್ತಾ ಆಕಾಶದಲ್ಲಿಯೇ ನಿಂತಿದ್ದರು. ಹೀಗೆ ವಿದ್ಯಾಧರರೂ ಮತ್ತು ಮಹರ್ಷಿಗಳೂ ನಿರಾಲಂಬರಾಗಿ ಆಕಾಶದಲ್ಲಿಯೇ ನಿಂತವರಾಗಿ, ತಮ್ಮ ವಾಯುಸ್ತಂಭನವೆಂಬ ಮಹಾವಿದ್ಯೆಯನ್ನು ಪ್ರದರ್ಶಿಸುತ್ತಾ ಜೊತೆಗೂಡಿ ನಿಂತು, ತಾವು ಪರಿತ್ಯಜಿಸಿ ಬಂದಿದ್ದ ಪರ್ವತದ ಕಡೆಗೆ ನೋಡಿದರು. ಅವರು ಆ ಸಮಯದಲ್ಲಿ ತಮ್ಮಂತೆಯೇ ಆಕಾಶದಲ್ಲಿ ನಿಂತಿದ್ದ ಪವಿತ್ರಾಂತಃಕರಣರಾದ ಮಹರ್ಷಿಗಳೂ ಮತ್ತು ಸಿದ್ಧ-ಚಾರಣರೂ ಆಡುತ್ತಿದ್ದ ಮಾತುಗಳನ್ನು ಕೇಳಿದರು :

**ಏಷ ಪರ್ವತಸಂಕಾಶೋ ಹನೂಮಾನ್ಮಾರುತಾತ್ಮಜಃ ।**
**ತಿತೀರ್ಷತಿ ಮಹಾವೇಗಃ ಸಮುದ್ರಂ ವರುಣಾಲಯಮ್ ॥೨೯॥**

"ಆಶ್ಚರ್ಯ! ಪರ್ವತೋಪಮನಾದ, ವಾಯುಪುತ್ರನಾದ, ಮಹಾ ವೇಗಶಾಲಿಯಾದ ಹನುಮಂತನು ವರುಣನ ನಿವಾಸಸ್ಥಾನವಾದ ಈ ಸಮುದ್ರವನ್ನು ದಾಟಲು ಮನಸ್ಸುಮಾಡಿದ್ದಾನೆ.

**ರಾಮಾರ್ಥಂ ವಾನರಾರ್ಥಂ ಚ ಚಿಕೀರ್ಷನ್ಕರ್ಮ ದುಷ್ಕರಮ್ ।**
**ಸಮುದ್ರಸ್ಯ ಪರಂ ಪಾರಂ ದುಷ್ಪ್ರಾಪಂ ಪ್ರಾಪ್ತುಮಿಚ್ಛತಿ ॥೩೦॥**

ಶ್ರೀರಾಮನ ಕಾರ್ಯಸಿದ್ಧಿಗಾಗಿಯೂ ಮತ್ತು ವಾನರರ ಸಂರಕ್ಷಣೆ ಗಾಗಿಯೂ ದುಷ್ಕರವಾದ ಕಾರ್ಯವನ್ನು ಮಾಡಲು ಬಯಸಿರುವ ಇವನು ಅತಿಕಷ್ಟಸಾಧ್ಯವಾದ ಈ ಸಮುದ್ರದ ಆಚೆಯ ದಡವನ್ನು ಸೇರಲು ಇಚ್ಛಿಸಿದ್ದಾನೆ."

ಹೀಗೆ ನಿರ್ಮಲವಾದ ಆಕಾಶದಲ್ಲಿ ನಿಂತಿದ್ದ ಸಿದ್ಧ-ಚಾರಣರೂ ಮತ್ತು ತಪಸ್ವಿಗಳೂ ಹೇಳುತ್ತಿದ್ದ ಮಾತುಗಳನ್ನು ಕೇಳಿ ವಿದ್ಯಾಧರರು ಕುತೂಹಲಾ ವಿಷ್ಟರಾಗಿ ಮಹೇಂದ್ರಪರ್ವತದಲ್ಲಿದ್ದ, ಅಪ್ರಮೇಯನಾದ, ವಾನರಶ್ರೇಷ್ಠನಾದ ಹನುಮಂತನನ್ನು ನೋಡುತ್ತಿದ್ದರು.

ಆ ಸಮಯದಲ್ಲಿ ಆಂಜನೇಯನು ಸಾಕ್ಷಾತ್ ಯಜ್ಞೇಶ್ವರನಂತೆಯೇ

ಕಾಣುತ್ತಿದ್ದನು. ಅವನ ಶರೀರದಲ್ಲಿದ್ದ ರೋಮಕೋಟಿಗಳು ನಿಮಿರಿ ನಿಂತಿದ್ದುವು. ಮೈಯನ್ನೊಮ್ಮೆ ಒದರಿದನು. ಮೇಘವು ಗರ್ಜಿಸುವಂತೆ ಗಟ್ಟಿಯಾಗಿ ಗರ್ಜಿಸಿದನು. ಗರುಡನು ಹಾವನ್ನು ಮೇಲಿನಿಂದ ಕೆಳ್ಳಕೆ ಕುಕ್ಕುವಂತೆ ಆಂಜನೇಯನು ಕ್ರಮವನ್ನನುಸರಿಸಿ ಸುತ್ತಿಕೊಂಡಿದ್ದ, ಕೊದಲುಗಳಿಂದ ತುಂಬಿ ಹೋಗಿದ್ದ ಬಾಲವನ್ನು ಮೇಲಕ್ಕೆತ್ತಿ ನೆಲದ ಮೇಲೆ ಅಪ್ಪಳಿಸಿದನು. ಹನುಮಂತನ ಹಿಂಬದಿಯಲ್ಲಿ ಸಂಬದ್ಧವಾಗಿದ್ದ ಮಹಾವೇಗವಾದ ಆ ಬಾಲವು ಗರುಡನಿಂದ ಸೆಳೆಯಲ್ಪಡುತ್ತಿದ್ದ ಮಹಾಸರ್ಪದಂತೆಯೇ ಕಾಣುತ್ತಿದ್ದಿತು.

ಶ್ರೀಮಂತನಾದ ಹನುಮಂತನು ಹಾರಲು ಸಿದ್ಧನಾಗುತ್ತಿದ್ದಂತೆ ತನ್ನೆರಡು ತೋಳುಗಳನ್ನೂ ಬಿಗಿಗೊಳಿಸಿದನು. ಸೊಂಟದ ಮೇಲೆ ಶರೀರದ ಭಾರವನ್ನಿಟ್ಟನು. ಕಾಲುಗಳನ್ನು ಸಂಕೋಚಗೊಳಿಸಿದನು. ಮಂಡಿಗಳನ್ನು ಬಗ್ಗಿಸಿದನು.* ತೋಳುಗಳನ್ನು ಮಡಿಸಿಕೊಂಡನು. ಕಂಠವನ್ನು ಚಿಕ್ಕದು ಮಾಡಿಕೊಂಡನು. ಅನಂತರ ಹಾರಲು ಮುಖ್ಯವಾಗಿ ಬೇಕಾಗುವ ತೇಜಸ್ಸಿನೊಳಗೆ, ಸತ್ತ್ವದೊಳಗೆ, ವೀರ್ಯದೊಳಗೆ ಪ್ರವೇಶಿಸಿದನು.[1] ಊರ್ಧ್ವದೃಷ್ಟಿಯುಳ್ಳವನಾಗಿದ್ದ ಹನುಮಂತನು ದೂರದಿಂದಲೇ ತಾನು ಸಾಗಬೇಕಾಗಿದ್ದ ಮಾರ್ಗವನ್ನು ಅವಲೋಕಿಸುತ್ತಾ ಮತ್ತೊಮ್ಮೆ ಆಕಾಶದ ಕಡೆಗೂ ವೀಕ್ಷಿಸುತ್ತಾ ಹಾರುವ ಸಲುವಾಗಿ ಪ್ರಾಣಗಳನ್ನು ಸ್ತಂಭಿಸಿ

---

* ಹನುಮಂತನು ಸಮುದ್ರವನ್ನು ದಾಟುವ ಮೊದಲು ಆತನಿದ್ದ ಸ್ಥಿತಿಯನ್ನು ಈ ಶ್ಲೋಕದಲ್ಲಿ ಹೇಳಿದ್ದಾರೆ. ನಾವು ಹಾರುವಾಗ ಓಡುವಾಗ ಯಾವ ರೀತಿ ನಿಂತಿರುತ್ತೇವೆಂಬುದನ್ನು ಜ್ಞಾಪಿಸಿಕೊಂಡರೆ ಈ ಶ್ಲೋಕದ ಅರ್ಥವು ಸ್ಪಷ್ಟವಾಗುತ್ತದೆ. ಹಾರು ವಾಗ ಕೈಗಳನ್ನು ಬಿಗಿಯಾಗಿ ಹಿಡಿದಿರುತ್ತೇವೆ. ಇದಕ್ಕೆ ಸ್ತಂಭನಗೊಳಿಸಿದ್ದನೆಂದು ಇಲ್ಲಿ ಹೇಳಿದೆ. ಮಂಡಿಯು ಬಗ್ಗಿರುತ್ತದೆ. ಸ್ವಲ್ಪ ಬಗ್ಗಿದ್ದು ಭಾರವೆಲ್ಲವೂ ಸೊಂಟದ ಮೇಲಿರುತ್ತದೆ. ಹಾರುವ ಸಮಯದಲ್ಲಿ ಸ್ವಾಭಾವಿಕವಾಗಿಯೇ ಆಗುವ ಸ್ಥಿತಿಯಿದು.

1 ತೇಜಸ್-ಸತ್ತ್ವ-ವೀರ್ಯಗಳು ಹನುಮಂತನಲ್ಲಿ ಸೇರಿಕೊಂಡುವು–ಎಂಬುದು ಒಂದು ಬಗೆ. ಆದರೆ ಇಲ್ಲಿ ಹನುಮಂತನೇ ತೇಜಃ-ಸತ್ತ್ವ-ವೀರ್ಯಗಳೊಳಗೆ ಪ್ರವೇಶಿಸಿದನು ಎಂದಿದೆ. ಅರ್ಥಾತ್ ಆ ಸಮಯದಲ್ಲಿ ಹನುಮಂತನು ತೇಜೋಮಯನೂ, ಸತ್ತ್ವಮಯನೂ, ವೀರ್ಯಮಯನೂ ಆದನು ಎಂದರ್ಥ.

ಒಬ್ಬ ವ್ಯಾಖ್ಯಾನಕಾರರು ತೇಜಃ-ಸತ್ತ್ವ-ವೀರ್ಯ ಎಂಬುದಕ್ಕೆ ಹೀಗೆ ವ್ಯಾಖ್ಯಾ

ದನು. (ಉಸಿರುಕಟ್ಟಿದನು.) ಹೀಗೆ ಹಾರಲು ಸಿದ್ಧನಾಗಿ ನಿಂತ ಕಪಿಶ್ರೇಷ್ಠನಾದ, ಮಹಾಬಲನಾದ ಆಂಜನೇಯನು ಕಾಲುಗಳನ್ನು ದೃಢವಾಗಿಟ್ಟುಕೊಂಡು ಎರಡು ಕಿವಿಗಳನ್ನೂ ಹಿಂದಕ್ಕೆ ಮಡಿಚಿಕೊಂಡು ಪರ್ವತದ ಕೆಳಭಾಗದಲ್ಲಿ ನಿಂತಿದ್ದ ವಾನರರಿಗೆ ಹೀಗೆ ಹೇಳಿದನು :

**ಯಥಾ ರಾಘವನಿರ್ಮುಕ್ತಃ ಶರಃ ಶ್ವಸನವಿಕ್ರಮಃ ।**
**ಗಚ್ಛೇತ್ತದ್ವದ್ಗಮಿಷ್ಯಾಮಿ ಲಙ್ಕಾಂ ರಾವಣಪಾಲಿತಾಮ್ ॥೩೯॥**

**ನ ಹಿ ದ್ರಕ್ಷ್ಯಾಮಿ ಯದಿ ತಾಂ ಲಙ್ಕಾಯಾಂ ಜನಕಾತ್ಮಜಾಮ್ ।**
**ಅನೇನೈವ ಹಿ ವೇಗೇನ ಗಮಿಷ್ಯಾಮಿ ಸುರಾಲಯಮ್ ॥೪೦॥**

**ಯದಿ ವಾ ತ್ರಿದಿವೇ ಸೀತಾಂ ನ ದ್ರಕ್ಷ್ಯಾಮಿ ಕೃತಶ್ರಮಃ ।**
**ಬದ್ಧ್ವಾ ರಾಕ್ಷಸರಾಜಾನಮಾನಯಿಷ್ಯಾಮಿ ರಾವಣಮ್ ॥೪೧॥**

**ಸರ್ವಥಾ ಕೃತಕಾರ್ಯೋಽಹಮೇಷ್ಯಾಮಿ ಸಹ ಸೀತಯಾ ।**
**ಆನಯಿಷ್ಯಾಮಿ ವಾ ಲಙ್ಕಾಂ ಸಮುತ್ಪಾಟ್ಯ ಸರಾವಣಾಮ್ ॥೪೨॥**

"ವಾನರಶ್ರೇಷ್ಠರೇ! ಶ್ರೀರಾಘವನು ಬಿಡುವ ವಾಯುಸಮಾನವೇಗವುಳ್ಳ ಬಾಣದಂತೆ ರಾವಣನಿಂದ ಪರಿಪಾಲಿಸಲ್ಪಡುತ್ತಿರುವ ಲಂಕಾಪಟ್ಟಣಕ್ಕೆ ವೇಗವಾಗಿ ಹೋಗುತ್ತೇನೆ.* ಒಂದು ವೇಳೆ ನಾನು ಜನಕನ ಮಗಳನ್ನು ಲಂಕಾಪಟ್ಟಣದಲ್ಲಿ ಕಾಣದಿದ್ದರೆ ಅದೇ ಶರವೇಗದಿಂದಲೇ ಸ್ವರ್ಗಕ್ಕೆ ಹೋಗುತ್ತೇನೆ. ಅಷ್ಟೂ ಶ್ರಮಪಟ್ಟು ಸ್ವರ್ಗಕ್ಕೆ ಹೋಗಿ ಅಲ್ಲಿಯೂ ನಾನು ಸೀತೆ

---

ನಿಸಿದ್ದಾರೆ : ತೇಜಃ = ಪರಾಭವಸಾಮರ್ಥ್ಯಂ–ಇತರರನ್ನು ಅಥವಾ ಶತ್ರುವನ್ನು ಪರಾಜಯಗೊಳಿಸುವ ಸಾಮರ್ಥ್ಯ. ಸತ್ತ್ವಂ = ಬಲಂ ಶಾರೀರಂ–ಶಾರೀರಕವಾದ ಬಲ. ವೀರ್ಯಂ = ಆನ್ತರಂ ಬಲಂ–ಆಂತರಿಕವಾದ ಬಲ (ಮನೋಬಲ) ಇವುಗಳನ್ನು ಪಡೆದುಕೊಂಡನು.

* ಈ ಶ್ಲೋಕದಲ್ಲಿ ಆಂಜನೇಯನು ರಾಮಬಾಣಕ್ಕೆ ತನ್ನನ್ನು ಹೋಲಿಸಿಕೊಂಡಿದ್ದಾನೆ. ಇದನ್ನು ಹೀಗೆ ವಿವರಿಸಬಹುದಾಗಿದೆ. 'ರಾಮಬಾಣದಷ್ಟೇ ವೇಗವಾಗಿ ಅಡೆತಡೆಗಳಿಲ್ಲದೆ ಗುರಿಮುಟ್ಟುತ್ತೇನೆ. ಅಮೋಘವಾದ ರಾಮಬಾಣದಂತೆ ಕಾರ್ಯವನ್ನು ಸಾಧಿಸುತ್ತೇನೆ. ರಾಮಬಾಣವು ಲಕ್ಷ್ಯವನ್ನು ಭೇದಿಸಿ ಅಥವಾ ಕಾರ್ಯವನ್ನು ಸಾಧಿಸಿ ಪುನಃ ಬತ್ತಳಿಕೆಗೆ ಬಂದು ಸೇರಿಕೊಳ್ಳುವಂತೆ ನಾನೂ ಕೂಡ ಕಾರ್ಯವನ್ನು ಸಾಧಿಸಿಕೊಂಡು ಹಿಂದಿರುಗುತ್ತೇನೆ. ರಾಮಬಾಣದಂತೆ ನಾನೊಬ್ಬ ದೂತ. ಬಾಣದಂತೆ ನನ್ನ

ಯನ್ನು ಕಾಣದಿದ್ದರೆ ಪುನಃ ಲಂಕಾಪಟ್ಟಣಕ್ಕೇ ಹೋಗಿ ರಾಕ್ಷಸರಾಜನಾದ ರಾವಣನನ್ನು ಬಂಧಿಸಿ ಇಲ್ಲಿಗೆ ಕರೆತರುತ್ತೇನೆ. ಆದರೆ ನಾನು ಅಷ್ಟು ನಿರಾಶ ನಾಗಬೇಕಾದ ಕಾರಣವಿಲ್ಲ. ಸರ್ವಪ್ರಕಾರದಿಂದಲೂ ನಾನು ಕೃತಕೃತ್ಯನಾಗಿ ಸೀತೆಯೊಡನೆ ಇಲ್ಲಿಗೆ ಬರುತ್ತೇನೆ. ಒಂದುವೇಳೆ ಲಂಕಾಪಟ್ಟಣದಲ್ಲಿ ನಾನು ಸೀತೆಯನ್ನು ಹುಡುಕಲು ಸಾಧ್ಯವಾಗದಿದ್ದರೆ ಲಂಕಾಪಟ್ಟಣವನ್ನೇ ಕಿತ್ತು ರಾವಣನೊಡನೆ ಇಲ್ಲಿಗೆ ತರುತ್ತೇನೆ. ಆದುದರಿಂದ ನೀವು ಸ್ವಲ್ಪವಾದರೂ ಚಿಂತಿಸುವ ಕಾರಣವಿಲ್ಲ. ನಿಶ್ಚಿಂತರಾಗಿರಬಹುದು."

ವಾನರಶ್ರೇಷ್ಠನಾದ ಹನುಮಂತನು ಕಪಿನಾಯಕರಿಗೆ ಹೀಗೆ ಹೇಳಿ ಮುಂದೆ ಬರಬಹುದಾದ ವಿಘ್ನಗಳಾವುದನ್ನೂ ಪರಿಗಣಿಸದೇ ವೇಗದಿಂದ ಮೇಲಕ್ಕೆ ಹಾರಿದನು. ಆ ಸಮಯದಲ್ಲಿ ಹನುಮಂತನು ತನ್ನನ್ನು ಗರುಡ ನೆಂದೇ ಭಾವಿಸಿಕೊಂಡನು. ಆತನು ವೇಗದಿಂದ ಮೇಲಕ್ಕೆ ಹಾರಿದಾಗ ಆ ರಭಸಕ್ಕೆ ಪರ್ವತದ ಮೇಲಿದ್ದ ವೃಕ್ಷಗಳೆಲ್ಲವೂ ಬುಡಮೇಲಾಗಿ ರೆಂಬೆಗಳನ್ನು ಹಿಂದಕ್ಕೆಳೆದುಕೊಂಡು ಎಲ್ಲ ಕಡೆಗಳಿಂದಲೂ ಹನುಮಂತನನ್ನೇ ಹಿಂಬಾಲಿ ಸಿದುವು. ಬಿಳಿಯ ಕೊಕ್ಕರೆಗಳಿಂದಲೂ ಪುಷ್ಪಗಳಿಂದಲೂ ಯುಕ್ತವಾಗಿದ್ದ ವೃಕ್ಷಗಳನ್ನು ತನ್ನ ತೊಡೆಗಳ ವೇಗದಿಂದಲೇ ಹಾರಿಸಿಕೊಂಡು ಮಾರುತಿಯು ಶುಭ್ರವಾದ ಆಕಾಶದಲ್ಲಿ ಪ್ರಯಾಣಮಾಡಿದನು. ಬಹಳ ದೂರ ಪ್ರಯಾಣ ಹೊರಟಿರುವ ನೆಂಟನೊಬ್ಬನನ್ನು ಅವನ ಬಂಧುಗಳು ಸ್ವಲ್ಪ ದೂರದವರೆಗೆ ಹಿಂಬಾಲಿಸುವಂತೆ–ಹನುಮಂತನ ತೊಡೆಗಳ ವೇಗದಿಂದ ಬುಡಸಹಿತವಾಗಿ ಕಿತ್ತು ಬಂದ ವೃಕ್ಷಗಳು ಸ್ವಲ್ಪ ಹೊತ್ತಿನವರೆಗೆ ಕಪಿಶ್ರೇಷ್ಠನಾದ ಹನುಮಂತನನ್ನು ಹಿಂಬಾಲಿಸಿದುವು. ಹಾಗೆ ಬುಡಮೇಲಾದ ಸರ್ಜವೃಕ್ಷ ಗಳೂ ಮತ್ತು ಇತರ ಎತ್ತರವಾದ ವೃಕ್ಷಗಳೂ ಮಹಾರಾಜನನ್ನು ಅನುಸರಿಸಿ ಸೈನಿಕರು ಹೋಗುವಂತೆ–ಹನುಮಂತನನ್ನು ಅನುಸರಿಸಿ ಹೋಗುತ್ತಿದ್ದುವು. ಅರಳಿದ ಪುಷ್ಪಗಳನ್ನು ಅಗ್ರಭಾಗಗಳಲ್ಲಿ ಹೊಂದಿದ್ದ ವೃಕ್ಷಗಳಿಂದ ಹಿಂಬಾಲಿಸಲ್ಪಡುತ್ತಿದ್ದ ಹನುಮಂತನು ಪರ್ವತದ ಆಕಾರವನ್ನೇ ಹೊಂದಿ

---

ಚಾಲನೆಯು ಅವನಿಂದಲೇ ಆಗಬೇಕು. ಶಕ್ತಿಯೂ ಅವನಿಂದಲೇ ಪ್ರಾಪ್ತವಾಗಬೇಕು. ಪ್ರೇರಣೆಯೂ ಅವನಿಂದಲೇ ಲಭಿಸಬೇಕು.' ಇಷ್ಟು ವಿವರಣೆಯನ್ನು ನಾವು ರಾಮಬಾಣದ ಉಪಮಾನಕ್ಕೆ ಕೊಡಬಹುದಾಗಿದೆ.

ಅದ್ಭುತಾಕಾರನಾಗಿ ಕಾಣುತ್ತಿದ್ದನು. ಮಹೇಂದ್ರನ ಭಯದಿಂದ ಪರ್ವತಗಳು ಸಮುದ್ರದಲ್ಲಿ ಮುಳುಗಿ ಹೋದಂತೆ ಹನುಮಂತನನ್ನು ಅನುಸರಿಸಿ ಹೋಗುತ್ತಿದ್ದ ಸಾರವತ್ತಾದ (ಭಾರವಾದ) ವೃಕ್ಷಗಳೆಲ್ಲವೂ ಸ್ವಲ್ಪಹೊತ್ತಿನಲ್ಲಿಯೇ



ಲವಣಸಮುದ್ರದಲ್ಲಿ ಮುಳುಗಿಹೋದುವು. ಮೇಘದಂತೆ ವಿಶಾಲಕಾಯನಾದ ಹನುಮಂತನು ತನ್ನ ತೊಡೆಯ ವೇಗದಿಂದ ತನ್ನನ್ನೇ ಅನುಸರಿಸಿ ಬರುತ್ತಿದ್ದ ವೃಕ್ಷಗಳ ಚಿಗುರುಗಳಿಂದಲೂ, ಮೊಗ್ಗುಗಳಿಂದಲೂ, ಅರಳಿದ ಹೂಗಳಿಂದಲೂ ಸಮಾವೃತನಾಗಿ ರಾತ್ರಿಯಲ್ಲಿ ಮಿಣುಕುಹುಳುಗಳಿಂದ ವ್ಯಾಪ್ತವಾದ ಪರ್ವತದಂತೆಯೇ ಪ್ರಕಾಶಿಸುತ್ತಿದ್ದನು. ಅವನನ್ನೇ ಅನುಸರಿಸಿ ಹೋಗುತ್ತಿದ್ದ ವೃಕ್ಷಗಳು ತಮ್ಮಲ್ಲಿದ್ದ ಪುಷ್ಪಗಳನ್ನು ಹಾದಿಯುದ್ದಕ್ಕೂ ಸುರಿಸುತ್ತಾ ಸ್ವಲ್ಪ ದೂರದವರೆಗೆ ಹೋದನಂತರ ಸಮುದ್ರದ ನೀರಿನಲ್ಲಿ

ಬಿದ್ದುಬಿಟ್ಟುವು. ಅದನ್ನು ನೋಡಿದರೆ ಮಿತ್ರರನ್ನು ಪ್ರಯಾಣಮಾಡಿಸಿ ಹಿಂದಿರುಗಿದವರಂತೆ ಕಾಣುತ್ತಿದ್ದುವು.

ಹನುಮಂತನ ತೊಡೆಗಳ ವೇಗದಿಂದ ಹುಟ್ಟಿದ ಬಿರುಗಾಳಿಯಿಂದ ಬುಡಮೇಲಾಗಿ ಜೊತೆಯಲ್ಲಿಯೇ ಒಯ್ಯಲ್ಪಡುತ್ತಿದ್ದ ಮಹಾವೃಕ್ಷಗಳ ಹಗುರವಾದ ಕುಸುಮಗಳು ಸಮುದ್ರವನ್ನು ವ್ಯಾಪಿಸಿದ್ದುವು. ಹೀಗೆ ಹಲವು ಬಣ್ಣಗಳ ಕುಸುಮಗಳಿಂದ ವ್ಯಾಪ್ತವಾಗಿದ್ದ ಆ ಲವಣಸಮುದ್ರವು ನಕ್ಷತ್ರ ಗಳಿಂದ ವ್ಯಾಪ್ತವಾದ ಆಕಾಶದಂತೆಯೇ ಕಾಣುತ್ತಿದ್ದಿತು. ಬಣ್ಣ-ಬಣ್ಣವಾಗಿದ್ದ ಮತ್ತು ಸುಗಂಧಯುಕ್ತವಾಗಿದ್ದ ಪುಷ್ಪಗಳಿಂದ ಮುಚ್ಚಿಹೋಗಿದ್ದ ಹನುಮಂತನು ಆ ಸಮಯದಲ್ಲಿ ಮಿಂಚಿನ ಸಮೂಹಗಳಿಂದ ಯುಕ್ತವಾದ ಆಕಾಶದಲ್ಲಿನ ಮೇಘದಂತೆಯೇ ವಿರಾಜಿಸುತ್ತಿದ್ದನು. ಹನುಮಂತನ ವೇಗದ ಕಾರಣದಿಂದ ಸರ್ವತ್ರ ಚೆಲ್ಲಿಹೋದ ಹೂಗಳಿಂದ ವ್ಯಾಪ್ತವಾಗಿದ್ದ ಸಮುದ್ರದ ನೀರು ಆಗ ತಾನೇ ಹುಟ್ಟಿದ ಸುಂದರವಾದ ನಕ್ಷತ್ರಗಳಿಂದ ಪ್ರಕಾಶಿಸುವ ಆಕಾಶದಂತೆಯೇ ಕಾಣುತ್ತಿದ್ದಿತು. ಆಕಾಶದ ಕಡೆಗೆ ಚಾಚಲ್ಪಟ್ಟಿದ್ದ ಹನುಮಂತನ ಎರಡು ತೋಳುಗಳು ಪರ್ವತದ ಶಿಖರದಿಂದ ಹೊರಬಂದಿರುವ ಐದು ಹೆಡೆಗಳ ಎರಡು ಸರ್ಪಗಳಂತೆಯೇ ಕಾಣುತ್ತಿದ್ದುವು. ಹನುಮಂತನು ಗರುಡನಂತೆ ಆಕಾಶದಲ್ಲಿ ಹಾರಿಹೋಗುತ್ತಿದ್ದ ಸಮಯದಲ್ಲಿ ಅಧೋಮುಖನಾಗಿದ್ದಾಗ ಅಲೆಗಳಿಂದ ಕೂಡಿದ ಸಮುದ್ರವನ್ನೇ ಪಾನಮಾಡುತ್ತಿರುವವನಂತೆಯೂ, ಊರ್ಧ್ವಮುಖನಾದಾಗ ಆಕಾಶವನ್ನೇ ಕಬಳಿಸಲು ಬಯಸುತ್ತಿರುವವ ನಂತೆಯೂ ಕಾಣುತ್ತಿದ್ದನು. ವಾಯುವಿನ ಮಾರ್ಗವನ್ನು ಅನುಸರಿಸಿ ಹಾರಿ ಕೊಂಡು ಹೋಗುತ್ತಿದ್ದ ಹನುಮಂತನ ಮಿಂಚಿನ ಪ್ರಭೆಯಂತೆ ಹೊಳೆಯು ತ್ತಿದ್ದ ಎರಡು ಕಣ್ಣುಗಳೂ ಪರ್ವತದಲ್ಲಿನ ಎರಡು ಕಾಡುಗಿಚ್ಚುಗಳಂತೆಯೇ ಪ್ರಜ್ವಲಿಸುತ್ತಿದ್ದುವು. ಕಪಿಗಳಿಗೆ ಮುಖ್ಯನಾದ ಹನುಮಂತನ ಕಂದು ಹಳದೀ ಬಣ್ಣದ ವಿಶಾಲವಾಗಿದ್ದ ಮತ್ತು ದುಂಡಾಗಿದ್ದ ಎರಡು ಕಣ್ಣುಗಳು ಆಗ ತಾನೇ ಹುಟ್ಟಿದ ಚಂದ್ರ-ಸೂರ್ಯರಂತೆ ಪ್ರಕಾಶಿಸುತ್ತಿದ್ದುವು. ಸಂಧ್ಯಾರಾಗದಿಂದ ಮಿಳಿತವಾದ ಸೂರ್ಯಮಂಡಲವು ಕೆಂಪಾದ ಛಾಯೆಯಿಂದ ಕೂಡಿ ಪ್ರಕಾಶಿ ಸುವಂತೆ–ತಾಮ್ರವರ್ಣದ ಮೂಗಿನಿಂದ ಯುಕ್ತನಾಗಿದ್ದ ಹನುಮಂತನ ಮುಖವು ಕೆಂಪು ಛಾಯೆಯಿಂದ ಪ್ರಕಾಶಿಸುತ್ತಿದ್ದಿತು. ಆಕಾಶದಲ್ಲಿ ಹಾರಿ

ಕೊಂಡು ಹೋಗುತ್ತಿದ್ದಾಗ ಹನುಮಂತನು ತನ್ನ ಬಾಲವನ್ನು ಮೇಲಕ್ಕೆತ್ತಿ ಕೊಂಡು ಹೋಗುತ್ತಿದ್ದನು. ಹನುಮಂತನ ಆ ಬಾಲವು ಆಕಾಶದಲ್ಲಿ ಎತ್ತಿ ಹಿಡಿದ ಇಂದ್ರನ ಧ್ವಜದಂತೆ ಪ್ರಕಾಶಿಸುತ್ತಿದ್ದಿತು. ಕೆಲವೊಮ್ಮೆ ಹನುಮಂತನು ತನ್ನ ಬಾಲವನ್ನು ಚಕ್ರಾಕಾರವಾಗಿ ತನ್ನ ಸುತ್ತಲೂ ಸುತ್ತಿಕೊಳ್ಳುತ್ತಿದ್ದನು. ವಾಯುಪುತ್ರನಿಗೆ ಬಿಳುಪಾದ ಕೋರೆದಾಡೆಗಳಿದ್ದುವು. ಆದರಿಂದ ಮಹಾ ಪ್ರಾಜ್ಞನಾದ ಹನುಮಂತನು ಪರಿವೇಷದಿಂದ ಯುಕ್ತನಾದ ಸೂರ್ಯ ದೇವನಂತೆಯೇ ಕಾಣುತ್ತಿದ್ದನು. ತುಂಬಾ ಕೆಂಪಾಗಿದ್ದ ನಿತಂಬದ ಭಾಗವನ್ನು ಹೊಂದಿದ್ದ ಮಹಾಕಪಿಯಾದ ಹನುಮಂತನು ಗೈರಿಕಾದಿ ಧಾತುಗಳಿಂದ ಸೀಳಲ್ಪಟ್ಟಂತೆ ಕಾಣುತ್ತಿರುವ ಪರ್ವತದಂತೆಯೇ ಪ್ರಕಾಶಿಸುತ್ತಿದ್ದನು. ಸಮುದ್ರವನ್ನು ಲಂಘಿಸುತ್ತಿದ್ದ ವಾನರಶ್ರೇಷ್ಠನಾದ ಹನುಮಂತನ ಕಂಕುಳು ಗಳ ಸಂದಿಯಿಂದ ನುಗ್ಗಿ ಹೋಗುತ್ತಿದ್ದ ವಾಯುವು ಮೇಘದಂತೆಯೇ ಶಬ್ದಮಾಡುತ್ತಿದ್ದಿತು.

ಆಕಾಶದಲ್ಲಿ ಉತ್ತರದಿಕ್ಕಿನ ಎತ್ತರವಾದ ಪ್ರದೇಶದಿಂದ ಹೊರಟು ಕೆಳಕ್ಕೆ ಬೀಳುವ ಬಾಲದಿಂದ ಯುಕ್ತವಾದ ಉಲ್ಕೆಯಂತೆ–ಉತ್ತರದ ಕಡೆಯಿಂದ ದಕ್ಷಿಣದಿಕ್ಕಿಗೆ ಹಾರಿಹೋಗುತ್ತಿದ್ದ, ಬಾಲದಿಂದ ಯುಕ್ತನಾದ ಹನುಮಂತನು ಕಾಣುತ್ತಿದ್ದನು. ಚಲಿಸುತ್ತಿರುವ ಸೂರ್ಯನಿಗೆ ಸದೃಶನಾಗಿದ್ದ, ದೀರ್ಘಾಕಾರದ ನೀಳವಾದ ಬಾಲವನ್ನು ಹೊಂದಿದ್ದ, ಕಪಿಶ್ರೇಷ್ಠನಾದ ಹನುಮಂತನು ದೊಡ್ಡದಾಗಿ ಬೆಳೆದಿರುವ ಕಾರಣ ಹಗ್ಗದಿಂದ ಬಂಧಿಸಲ್ಪಟ್ಟ ಆನೆಯಂತೆಯೇ ಕಾಣುತ್ತಿದ್ದನು.*

ಮೇಲ್ಭಾಗದಲ್ಲಿದ್ದ ಶರೀರದಿಂದಲೂ, ಸಮುದ್ರದಲ್ಲಿ ಬಿದ್ದಿದ್ದ ಅವನ ದಟ್ಟವಾದ ಪ್ರತಿಬಿಂಬದಿಂದಲೂ ಹನುಮಂತನು, ಸಮುದ್ರದಲ್ಲಿ ಗಾಳಿಯಿಂದ ಪ್ರೇರಿತವಾದ ನೌಕೆಯಂತೆಯೇ ಆದನು.[1]

---

* **ಕಕ್ಷ್ಯಾ** = ಆನೆಯನ್ನು ಕಟ್ಟುವ ಹಗ್ಗ. **ಕಕ್ಷ್ಯಾಪ್ರಕೋಷ್ಠೇ ಹರ್ಮ್ಯಾದೇಃ ಕಾಞ್ಚ್ಯಾಂ ಮಧ್ಯೇಭಬನ್ಧನೇ** (ಅಮರಃ)

1 ಅಂತರಿಕ್ಷದಲ್ಲಿ ಹಾರಿಹೋಗುತ್ತಿದ್ದ ಹನುಮಂತನ ನೆಳಲು ಸಮುದ್ರದ ಮೇಲೆ ದಟ್ಟವಾಗಿ ಬಿದ್ದಿದ್ದಿತು. ಹನುಮಂತನಷ್ಟೇ ವೇಗವಾಗಿ ಅವನ ಛಾಯೆಯೂ ಮುಂದೆ ಮುಂದೆ ಹೋಗುತ್ತಿದ್ದಿತು. ಹನುಮಂತನ ಶರೀರವೇ ನೌಕೆಯ ಮೇಲುಭಾಗ.

ಮಹಾಕಪಿಯಾದ ಹನುಮಂತನು ಸಮುದ್ರದ ಯಾವ ಯಾವ ಭಾಗಗಳಿಂದ ಹಾರಿಹೋಗುತ್ತಿದ್ದನೋ–ಆಯಾ ಭಾಗಗಳು ಅವನ ಶರೀರದ ವೇಗದ ಕಾರಣದಿಂದಾಗಿ ಮೂರ್ಛೆಬಿದ್ದಿರುವಂತೆ ಕಾಣುತ್ತಿದ್ದುವು.* ಮಹಾವೇಗಯುಕ್ತನಾಗಿದ್ದ ಮಹಾಕಪಿಯಾದ ಹನುಮಂತನು ಪರ್ವತೋಪಮವಾದ ಶರೀರದಿಂದಲೂ ವಕ್ಷಸ್ಥಳದಿಂದಲೂ ಸಮುದ್ರದ ಅಲೆಗಳನ್ನು ಭೇದಿಸಿಕೊಂಡು ಮುಂದೆ ಮುಂದೆ ಹಾರಿಕೊಂಡು ಹೋಗುತ್ತಿದ್ದನು.

ಹನುಮಂತನ ವೇಗದಿಂದ ಉಂಟಾದ ಬಲಿಷ್ಠವಾದ ವಾಯುವೂ ಮೇಘಮಂಡಲದಿಂದ ಹೊರಹೊಮ್ಮಿದ ವಾಯುವೂ ಮಹಾಭಯಂಕರವಾದ ಧ್ವನಿಯಿಂದ ಕೂಡಿದ್ದ ಸಮುದ್ರವನ್ನು ಬಹಳವಾಗಿ ಕಂಪನಗೊಳಿಸಿದುವು. ಲವಣಸಮುದ್ರದಲ್ಲಿದ್ದ ದೊಡ್ಡ ದೊಡ್ಡ ಅಲೆಗಳನ್ನು ತನ್ನ ಜೊತೆಯಲ್ಲಿಯೇ ಸೆಳೆದೊಯ್ಯುತ್ತಿದ್ದ ಹನುಮಂತನು ಭೂ-ಸ್ವರ್ಗಗಳನ್ನು ವಿಭಾಗಿಸುತ್ತಿರುವನೋ ಎಂಬಂತೆ ಕಾಣುತ್ತಿದ್ದನು.

ಮಹಾವೇಗಯುಕ್ತನಾಗಿದ್ದ ಹನುಮಂತನು ಮಹಾಸಮುದ್ರದಲ್ಲಿ ಉಕ್ಕೇರಿಬರುತ್ತಿದ್ದ ಮೇರು-ಮಂದರಪರ್ವತಗಳಂತೆಯೇ ಇದ್ದ ದೊಡ್ಡ ದೊಡ್ಡ ಅಲೆಗಳನ್ನು ಅತಿಕ್ರಮಿಸಿ ಹೋಗುತ್ತಿದ್ದಾಗ ಅವುಗಳನ್ನು ಎಣಿಕೆ ಮಾಡುತ್ತಾ ಹೋಗುತ್ತಿರುವಂತೆ ಕಾಣುತ್ತಿದ್ದಿತು.

ಹನುಮಂತನ ವೇಗದಿಂದ ಮೇಲಕ್ಕೆ ಚಿಮ್ಮಿದ ಸಮುದ್ರದ ನೀರು

---

ಛಾಯೆಯೇ ನೌಕೆಯ ಕೆಳಭಾಗ. ಇದನ್ನೇ ವಾಯುಪ್ರೇರಿತವಾದ ನೌಕೆಯೆಂದು ಹೇಳಿದ್ದಾರೆ.

* ಹನುಮಂತನು ಹಾರಿಹೋಗುತ್ತಿರುವಾಗ ಅವನ ಶರೀರವೇಗದಿಂದ ಸಮುದ್ರದ ನೀರು ಅಲ್ಲೋಲಕಲ್ಲೋಲವಾಗಿ ಭೋರ್ಗರೆಯುವ ಶಬ್ದವೂ ಅಪಾರವಾದ ನೊರೆಯೂ ಉಂಟಾಗುತ್ತಿದ್ದಿತು. ಅಪಸ್ಮಾರರೋಗಕ್ಕೆ ಬಾಯಲ್ಲಿ ನೊರೆಬರುವುದು ಒಂದು ಲಕ್ಷಣ. ಹಾರುತ್ತಿದ್ದ ಪ್ರದೇಶಗಳಲ್ಲಿ ನೊರೆಯುಂಟಾಗುತ್ತಿದ್ದುದರಿಂದ ವೇಗವನ್ನು ನೋಡಿ ನೀರು ಮೂರ್ಛೆ ಹೊಂದಿದಂತೆ ಕಾಣುತ್ತಿದ್ದುವೆಂದು ವರ್ಣಿಸಲಾಗಿದೆ. ಘೂರ್ಣನ= ಸುತ್ತುವುದು, ಫೇನ= ಬಾಯಲ್ಲಿ ನೊರೆಬರುವುದು ಮತ್ತು ವಾಂತಿಮಾಡುವುದು, ವಿಕ್ರೋಶನ= ಕೂಗಿಕೊಳ್ಳುವುದು–ಮುಂತಾದ ಅಪಸ್ಮಾರರೋಗ ಲಕ್ಷಣಗಳನ್ನು ಸಮುದ್ರದ ನೀರು ಹನುಮಂತನು ಹಾರಿಹೋಗುತ್ತಿದ್ದ ಪ್ರದೇಶಗಳಲ್ಲಿ ಹೊಂದಿದ್ದಿತು.

ಆಕಾಶದಲ್ಲಿದ್ದ ಮೇಘಗಳೊಡನೆ ಸೇರಿಕೊಂಡು ಸರ್ವತ್ರ ವ್ಯಾಪ್ತವಾದ ಶರತ್ಕಾಲದ ಮೇಘದಂತೆ ಬಿಳುಪಾಗಿ ಕಾಣುತ್ತಿದ್ದಿತು.

ಬಟ್ಟೆಯನ್ನು ತೆಗೆದುಹಾಕಿದಾಗ ಮನುಷ್ಯನ ಶರೀರವೆಲ್ಲವೂ ಸ್ಪಷ್ಟವಾಗಿ ಕಾಣುವಂತೆ–ಸಮುದ್ರದ ನೀರು ಮೇಲಕ್ಕೆ ಚಿಮ್ಮುತ್ತಿದ್ದುದರಿಂದ ತಿಮಿಂಗಿಲಗಳು, ಮೊಸಳೆಗಳು, ಮೀನುಗಳು ಮತ್ತು ಆಮೆಗಳು ಬಹಳ ಸ್ಪಷ್ಟವಾಗಿ ಗೋಚರಿಸುತ್ತಿದ್ದುವು.

ಸಮುದ್ರದಲ್ಲಿದ್ದ ಮೀನುಗಳು–ಆಕಾಶದಲ್ಲಿ ಹಾರಿಕೊಂಡು ಹೋಗುತ್ತಿದ್ದ ಕಪಿಶಾರ್ದೂಲನನ್ನು ನೋಡಿ ತಮ್ಮ ಶತ್ರುವಾದ ಗರುಡನೇ ಹಾರಿ ಹೋಗುತ್ತಿರುವನೆಂದು ಭಾವಿಸಿದುವು.

**ದಶಯೋಜನವಿಸ್ತೀರ್ಣಾ ತ್ರಿಂಶದ್ಯೋಜನಮಾಯತಾ ।**
**ಛಾಯಾ ವಾನರಸಿಂಹಸ್ಯ ಜಲೇ ಚಾರುತರಾಭವತ್ ॥೭೬॥**

ವಾಯುಪುತ್ರನು ವೇಗವಾಗಿ ಹಾರಿಹೋಗುತ್ತಿರುವಾಗ ಹತ್ತು ಯೋಜನಗಳಷ್ಟು ವಿಸ್ತಾರವಾದ ಮತ್ತು ಮೂವತ್ತು ಯೋಜನಗಳಷ್ಟು ಉದ್ದವಾದ ಅವನ ನೆಳಲು ಸುಮನೋಹರವಾಗಿ ಕಾಣುತ್ತಿದ್ದಿತು.*

ವಾಯುಪುತ್ರನನ್ನು ಅನುಸರಿಸಿಕೊಂಡು ಹೋಗುತ್ತಿದ್ದ ಉಪ್ಪು ಸಮುದ್ರದಲ್ಲಿ ಬಿದ್ದಿದ್ದ ಅವನ ನೆಳಲು ಬಿಳಿಯ ಮೋಡಗಳ ಸಾಲಿನಂತೆ ಪ್ರಕಾಶಿಸುತ್ತಿದ್ದಿತು. ಮಹಾತೇಜಸ್ವಿಯಾದ, ಮಹಾಕಾಯನಾದ, ಮಹಾಕಪಿಯಾದ ಹನುಮಂತನು ಆಲಂಬನವೇ ಇಲ್ಲದ ವಾಯುಮಾರ್ಗದಲ್ಲಿ ರೆಕ್ಕೆಗಳಿಂದ ಕೂಡಿರುವ ಪರ್ವತದಂತೆಯೇ ಪ್ರಕಾಶಿಸಿದನು.

ಕಪಿಶ್ರೇಷ್ಠನಾದ, ಬಲಿಷ್ಠನಾದ ಹನುಮಂತನು ಯಾವ ಮಾರ್ಗದಿಂದ

---

* ಮನುಷ್ಯನ ಪರಿಮಾಣದಷ್ಟೇ ಅವನ ಛಾಯೆಯೂ ಇರುತ್ತದೆಂಬುದು ಲೋಕ ಪ್ರಸಿದ್ಧವಾಗಿದೆ. ಹಾಗಾದರೆ ಹನುಮಂತನು ಮೂವತ್ತು ಯೋಜನಗಳಷ್ಟು ಉದ್ದವಾಗಿದ್ದನೇ? ಹಾಗಿದ್ದ ಪಕ್ಷದಲ್ಲಿ ನಾಲ್ಕೇ ಹೆಜ್ಜೆಗಳಲ್ಲಿಯೇ ಹನುಮಂತನು ಲಂಕಾಪಟ್ಟಣವನ್ನು ಸೇರಬಹುದಾಗಿದ್ದಿತು. ಮೈನಾಕಪರ್ವತದೊಡನೆ ಮತ್ತು ಸುರಸೆಯೊಡನೆ ಸಂಭಾಷಣೆಗೆ ಅವಕಾಶವೇ ಇರುತ್ತಿರಲಿಲ್ಲ. ಸಮುದ್ರವನ್ನು ಹಾರುವ ಮೊದಲು ಹನುಮಂತನು ಎತ್ತರವಾಗಿ ಬೆಳೆದನು–ಎಂದು ಹೇಳಿದೆಯೇ ಹೊರತು

ಹಾರಿಹೋಗುತ್ತಿದ್ದನೋ ಆ ಮಾರ್ಗದಲ್ಲಿದ್ದ ಸಮುದ್ರವು ಹನುಮಂತನಿಗೆ ದೋಣಿಯಾಗಿ ಮಾಡಲ್ಪಟ್ಟಿರುವಂತೆ ಕಾಣುತ್ತಿದ್ದಿತು.

ಪಕ್ಷಿಗಳ ಸಮೂಹಗಳು ಹಾರಿಕೊಂಡು ಹೋಗುತ್ತಿದ್ದ ಆಕಾಶಮಾರ್ಗ ದಲ್ಲಿ ಹನುಮಂತನು ಪಕ್ಷಿರಾಜನಾದ ಗರುಡನಂತೆಯೇ ಹಾರಿಕೊಂಡು ಹೋಗುತ್ತಿದ್ದನು. ಗಾಳಿಯಂತೆ ಮೇಘಗಳ ಸಮೂಹವನ್ನು ತನ್ನ ಜೊತೆ ಯಲ್ಲಿಯೇ ಸೆಳೆದುಕೊಂಡು ಹೋಗುತ್ತಿದ್ದನು. ಹನುಮಂತನಿಂದ ಹಾಗೆ ಸೆಳೆದೊಯ್ಯಲ್ಪಡುತ್ತಿದ್ದ ಮೇಘಗಳು ಬಿಳಿ-ಎಣ್ಣೆಗೆಂಪು-ಕಪ್ಪು-ನಸುಹಳದಿ– ಇವೇ ಮುಂತಾದ ವಿಧವಿಧವಾದ ಬಣ್ಣಗಳಿಂದ ಪ್ರಕಾಶಿಸುತ್ತಿದ್ದುವು.

ಆಕಾಶದಲ್ಲಿದ್ದ ಮೇಘಗಳ ಸಮೂಹಗಳನ್ನು ಪ್ರವೇಶಿಸುತ್ತಲೂ ಪುನಃ ಅವುಗಳಿಂದ ಹೊರಬರುತ್ತಲೂ ಇದ್ದ ಹನುಮಂತನು ಮೇಘಾವೃತನಾದ ಮತ್ತು ಮೇಘಗಳಿಂದ ಹೊರಬಂದ ಚಂದ್ರನಂತೆಯೇ ಕಾಣುತ್ತಿದ್ದನು. ದೇವ-ಗಂಧರ್ವ-ದಾನವರು ತ್ವರೆಯಿಂದ ಹಾರಿಕೊಂಡು ಹೋಗುತ್ತಿದ್ದ ಹನುಮಂತನನ್ನು ನೋಡಿ ಅವನ ಮೇಲೆ ಹೂಗಳ ಮಳೆಗರೆದರು.

**ತತಾಪ ನ ಹಿ ತಂ ಸೂರ್ಯಃ ಪ್ಲವನ್ತಂ ವಾನರೋತ್ತಮಮ್ ।**
**ನಿಷೇವೇ ಚ ತದಾ ವಾಯೂ ರಾಮಕಾರ್ಯಾರ್ಥಸಿದ್ಧಯೇ ॥**

ಹಾಗೆ ಶ್ರೀರಾಮನ ಕಾರ್ಯಸಿದ್ಧಿಗಾಗಿ ಹಾರಿಕೊಂಡು ಹೋಗುತ್ತಿದ್ದ ವಾನರೋತ್ತಮನಾದ ಹನುಮಂತನಿಗೆ ಸೂರ್ಯನು ತಾಪವನ್ನುಂಟುಮಾಡ ಲಿಲ್ಲ. ವಾಯುವು ಹನುಮಂತನ ಸುತ್ತಲೂ ಮಂದವಾಗಿ ಬೀಸುತ್ತಾ ಅವನ ಶ್ರಮವನ್ನು ಪರಿಹರಿಸುತ್ತಿದ್ದನು. ಆಕಾಶದ ಮೂಲಕವಾಗಿ ಹಾರಿಕೊಂಡು

---

ಮೂವತ್ತು ಯೋಜನಗಳಷ್ಟು ಬೆಳೆದನು–ಎಂದು ಹೇಳಿಲ್ಲ. ಹೀಗಿರುವಾಗ ಮೂವತ್ತು ಯೋಜನಗಳಷ್ಟು ದೀರ್ಘವಾದ ನೆಳಲು ಸಮುದ್ರದಲ್ಲಿ ಹೇಗೆ ಬಿದ್ದಿತೆಂಬುದನ್ನು ಸಮರ್ಥಿಸುತ್ತಾ ವ್ಯಾಖ್ಯಾನಕಾರರು ಹೀಗೆ ಹೇಳಿದ್ದಾರೆ : **ಪ್ರಾತರೇವ ಹಿ ಸಮುದ್ರ ತರಣಮುಕ್ತಂ ತದಾ ತಸ್ಯ ಛಾಯಾ ಸಮುದ್ರೇ ತಥಾಪ್ರಮಾಣಾ ದೃಶ್ಯೇತ್ಯೈವ.** ಪ್ರಾತಃಕಾಲದಲ್ಲಿಯೇ ಹನುಮಂತನು ಸಮುದ್ರವನ್ನು ದಾಟಿದನೆಂದು ಹೇಳಿದೆ. ಪ್ರಾತಃಕಾಲದಲ್ಲಿ ಪ್ರತಿಯೊಬ್ಬರ ನೆಳಲು ಸುದೀರ್ಘವಾಗಿಯೇ ಇರುತ್ತದೆ. ಆದುದರಿಂದ ಹನುಮಂತನ ನೆಳಲು ಸಮುದ್ರದಲ್ಲಿ ಮೂವತ್ತು ಯೋಜನಗಳಷ್ಟು ದೀರ್ಘವಾಗಿ ಕಾಣುತ್ತಿತ್ತೆಂದು ಹೇಳಿರುವುದು ಸಾಧುವಾಗಿಯೇ ಇದೆ.

ಹೋಗುತ್ತಿದ್ದ ಹನುಮಂತನನ್ನು ಋಷಿಗಳು ಸ್ತುತಿಸಿದರು. ದೇವ- ಗಂಧರ್ವರು ಮಹಾತೇಜಸ್ವಿಯಾದ ಹನುಮಂತನನ್ನು ಶ್ಲಾಘನೆಮಾಡುತ್ತಾ ಅವನ ಗುಣಗಾನಮಾಡುತ್ತಿದ್ದರು. ಇತರರಿಂದ ಮಾಡಲು ಅಸಾಧ್ಯವಾದ ಕಾರ್ಯವನ್ನು ಮಾಡುತ್ತಿದ್ದರೂ ಸ್ವಲ್ಪವೂ ಆಯಾಸಗೊಳ್ಳದಿದ್ದ ವಾಯು ಪುತ್ರನನ್ನು ನೋಡಿ ನಾಗ-ಯಕ್ಷ-ರಾಕ್ಷಸರೂ, ದೇವರ್ಷಿಗಳೂ ಪರಿ-ಪರಿ ಯಾಗಿ ಸ್ತೋತ್ರಮಾಡಿದರು.

ಕಪಿಕುಂಜರನಾದ ಹನುಮಂತನು ಹೀಗೆ ಸಮುದ್ರದ ಮೇಲೆ ಹಾರಿ ಕೊಂಡು ಹೋಗುತ್ತಿದ್ದಾಗ ಅವನನ್ನು ನೋಡಿದ ಸಮುದ್ರರಾಜನು ತನ್ನ ಹುಟ್ಟಿಗೆ ಕಾರಣವಾದ ಇಕ್ಷ್ವಾಕುವಂಶವನ್ನು ಗೌರವಿಸಲು ಬಯಸಿ ಹೀಗೆ ಯೋಚಿಸಿದನು:

**ಸಾಹಾಯ್ಯಂ ವಾನರೇನ್ದ್ರಸ್ಯ ಯದಿ ನಾಹಂ ಹನೂಮತಃ ।**
**ಕರಿಷ್ಯಾಮಿ ಭವಿಷ್ಯಾಮಿ ಸರ್ವವಾಚ್ಯೋ ವಿವಕ್ಷತಾಮ್ ॥೮೮॥**

“ಶ್ರೀರಾಮನ ಕಾರ್ಯಾರ್ಥವಾಗಿ ಹೊರಟಿರುವ ಈ ಸಮಯದಲ್ಲಿ ನಾನು ವಾನರೇಂದ್ರನಾದ ಹನುಮಂತನಿಗೆ ಸಹಾಯವನ್ನು ಮಾಡದಿದ್ದರೆ ಆಡಿಕೊಳ್ಳುವವರ ಸರ್ವಪ್ರಕಾರವಾದ ನಿಂದನೆಗಳಿಗೂ ಪಾತ್ರನಾಗುತ್ತೇನೆ. ಮರ್ಯಾದೆಯನ್ನೂ ಕಳೆದುಕೊಳ್ಳುತ್ತೇನೆ.

**ಅಹಮಿಕ್ಷ್ವಾಕುನಾಥೇನ ಸಗರೇಣ ವಿವರ್ಧಿತಃ ।**
**ಇಕ್ಷ್ವಾಕುಸಚಿವಶ್ಚಾಯಂ ನಾವಸೀದತುಮರ್ಹತಿ ॥೮೯॥**

ನಾನಾದರೋ ಇಕ್ಷ್ವಾಕುವಂಶದ ಅರಸನಾದ ಸಗರನಿಂದ ಸಂವರ್ಧಿತ ನಾಗಿದ್ದೇನೆ. ಹನುಮಂತನೂ ಅದೇ ಇಕ್ಷ್ವಾಕುವಂಶದ ಅರಸನಾದ ಶ್ರೀರಾಮ ನಿಗೆ ಸಚಿವನಾಗಿದ್ದಾನೆ. ಆದುದರಿಂದ ಇವನು ಯಾವುದೇ ಕಾರಣದಿಂದಲೂ ಕಷ್ಟವನ್ನನುಭವಿಸಬಾರದು.

**ತಥಾ ಮಯಾ ವಿಧಾತವ್ಯಂ ವಿಶ್ರಮೇತ ಯಥಾ ಕಪಿಃ ।**
**ಶೇಷಂ ಚ ಮಯಿ ವಿಶ್ರಾನ್ತಃ ಸುಖೇನಾತಿಪತಿಷ್ಯತಿ ॥೯೦॥**

ಈ ಕಪೀಶ್ವರನು ಸ್ವಲ್ಪಹೊತ್ತಾದರೂ ಇಲ್ಲಿ ವಿಶ್ರಮಿಸಿಕೊಳ್ಳಲು ನಾನು

ವ್ಯವಸ್ಥೆಮಾಡಬೇಕಾಗಿದೆ. ವಿಶ್ರಮಿಸಿಕೊಂಡ ಬಳಿಕ ಉಳಿದ ಮಾರ್ಗ ವನ್ನಿವನು ಆಯಾಸವಿಲ್ಲದೆ ದಾಟಬಲ್ಲನು."

ಹೀಗೆ ಸಮುದ್ರರಾಜನು ಸಮಯೋಚಿತವಾಗಿ ನಿಶ್ಚಯಮಾಡಿ ತನ್ನ ಲ್ಲಿಯೇ ಅಡಗಿಕೊಂಡಿದ್ದ ಗಿರಿಶ್ರೇಷ್ಠನಾದ, ಹಿರಣ್ಯನಾಭನಾದ* ಮೈನಾಕ ನಿಗೆ ಹೇಳಿದನು :

"ಪರ್ವತೋತ್ತಮನೇ! ಪಾತಾಳವಾಸಿಗಳಾದ ರಾಕ್ಷಸರು ಮೇಲೆ ಬರುವುದನ್ನು ತಡೆಯುವ ಸಲುವಾಗಿ ದೇವರಾಜನಾದ ಇಂದ್ರನು ನಿನ್ನನ್ನಿಲ್ಲಿ ಅಗಳಿಯ ರೂಪದಲ್ಲಿ ಸ್ಥಾಪಿಸಿರುವನು. ಆ ಅಸುರರ ಪರಾಕ್ರಮವೆಷ್ಟೆಂಬುದು ಸರ್ವತ್ರ ವಿದಿತವಾಗಿದೆ. ಅವರು ಪುನಃ ಪುನಃ ಪಾತಾಳಲೋಕದಿಂದ ಹೊರಬರಲು ಪ್ರಯತ್ನಿಸುತ್ತಲೇ ಇರುತ್ತಾರೆ. ಅವರು ಹೊರಕ್ಕೆ ಬರಲು ಸಾಧ್ಯವಾಗದಂತೆ ಅಪ್ರಮೇಯವಾದ ಪಾತಾಳಲೋಕದ ಬಾಗಿಲನ್ನು ಆವರಿಸಿ ಕೊಂಡು ನೀನು ನಿಂತಿರುವೆ. ನಿನಗೆ ಅಡ್ಡವಾಗಿಯೂ ಎತ್ತರವಾಗಿಯೂ ಬೆಳೆಯುವ ಶಕ್ತಿಯಿದೆ. ಆದುದರಿಂದಲೇ ನಾನು ನಿನ್ನನ್ನು ಮೇಲೆದ್ದು ನಿಲ್ಲು ವಂತೆ ಪ್ರಚೋದಿಸುತ್ತಿದ್ದೇನೆ. 'ಉತ್ತಿಷ್ಠ ಗಿರಿಸತ್ತಮ!' ಪರ್ವತಶ್ರೇಷ್ಠನೇ! ಎದ್ದುನಿಲ್ಲು, ಅದೋ ನೋಡು! ಆ ಕಪಿಶ್ರೇಷ್ಠನು ನಿನ್ನ ಮೇಲೆಯೇ ಹಾರಿಹೋಗುವುದರಲ್ಲಿದ್ದಾನೆ. ಭಯಂಕರಕರ್ಮನಾದ ಅವನು ಶ್ರೀರಾಮನ ಕಾರ್ಯದ ಸಲುವಾಗಿ ಆಕಾಶದಲ್ಲಿ ಹಾರಿಕೊಂಡು ಹೋಗುತ್ತಿದ್ದಾನೆ. ಇಕ್ಷ್ವಾಕುಕುಲಸಂಭೂತನಾದ, ಶ್ರೀರಾಮನ ಅನುಯಾಯಿಯಾಗಿರುವ

---

* ಹಿರಣ್ಯನಾಭಃ= ಎಂಬುದಕ್ಕೆ ಹಿರಣ್ಯಪ್ರಧಾನ ಅಥವಾ ಹಿರಣ್ಮಯನೆಂದು ಕೆಲವರೂ, ಹಿರಮ್ಯಶೃಂಗಃ –ಎಂದು ಕೆಲವರೂ ಅರ್ಥಮಾಡಿರುತ್ತಾರೆ. ಹೀಗೆ ಅರ್ಥಮಾಡುವಾಗ **'ನಾಭಿಃ ಪ್ರಧಾನೇ ಕಸ್ತೂರ್ಯಾಂ'** ಎಂಬ ನಿಘಂಟನ್ನು ಉದ್ಧರಿಸಿ ನಾಭಿಃ = ಪ್ರಧಾನಂ, ಹಿರಣ್ಯವೇ ಪ್ರಧಾನವಾಗಿ ಉಳ್ಳದ್ದು ಅಥವಾ ಹಿರಣ್ಮಯ ಎಂದು ಅರ್ಥಮಾಡಿದ್ದಾರೆ. ಮತ್ತೊಬ್ಬರು : **ನಾಭಿರಧ್ಯಕ್ಷಕಸ್ತೂರ್ಯೋಃ** ಎಂಬ ಕೋಶವನ್ನು ಉದ್ಧರಿಸಿ ನಾಭಿಶಬ್ದಕ್ಕೆ ಅಧ್ಯಕ್ಷ ಎಂಬ ಅರ್ಥವನ್ನು ಮಾಡಿ ಪರ್ವತಶೃಂಗವು ಎತ್ತರದ ಸ್ಥಾನದಲ್ಲಿರುವುದರಿಂದ ಪರ್ಯಾಯಾಂತರವಾಗಿ ಶೃಂಗವೆಂದು ಅರ್ಥಮಾಡಿ ಹಿರಣ್ಯಶೃಂಗ ಎಂದು ವ್ಯಾಖ್ಯಾನಿ ಸಿದ್ದಾರೆ. ಪರ್ವತದ ಕೆಲವು ಭಾಗಗಳಲ್ಲಿ ಚಿನ್ನವು ಸಿಕ್ಕುವುದರಿಂದ ನಾಭಿಪ್ರದೇಶದಲ್ಲಿ (ಮಧ್ಯಭಾಗದಲ್ಲಿ ) ಹಿರಣ್ಯವುಳ್ಳವನು ಎಂದು ಅರ್ಥಮಾಡಿದರೂ ಸಮಂಜಸವೇ ಆಗುತ್ತದೆ.

ಹನುಮಂತನಿಗೆ ಈ ಸಮಯದಲ್ಲಿ ಸಹಾಯಮಾಡುವುದು ನನ್ನ ಕರ್ತವ್ಯವಾಗಿದೆ. ನನಗೆ ಇಕ್ಷ್ವಾಕುಕುಲದವರು ಪೂಜ್ಯರು. ಅವರು ನಿನಗೆ ಇನ್ನೂ ಹೆಚ್ಚಿನ ಪೂಜ್ಯರಾಗಿರುವರು. ನಾವು ಮಾಡಬೇಕಾಗಿರುವ ಕಾರ್ಯವು ಸಮಯವು ಮೀರುವುದರೊಳಗೆ ಕೈಗೂಡುವಂತೆ ನೀನು ನಮಗೆ ತಕ್ಕ ಸಹಾಯವನ್ನು ಮಾಡಬೇಕು.

**ಕರ್ತವ್ಯಮಕೃತಂ ಕಾರ್ಯಂ ಸತಾಂ ಮನ್ಯುಮುದೀರಯೇತ್ ॥**

ಮಾಡಬೇಕಾಗಿರುವ ಕರ್ತವ್ಯವನ್ನು ಸಕಾಲದಲ್ಲಿ ಮಾಡದಿದ್ದರೆ ಸತ್ಪುರುಷರು ಕುಪಿತರಾಗುತ್ತಾರೆ.

ಮೈನಾಕ! ನೀನೀಗಲೇ ನೀರಿನಿಂದ ಮೇಲಕ್ಕೆ ಎದ್ದುನಿಲ್ಲು. ನಿನ್ನ ಶಿಖರದಲ್ಲಿ ಆಂಜನೇಯನು ಸ್ವಲ್ಪಹೊತ್ತು ತಂಗಲಿ. ವಾನರರಲ್ಲಿ ಶ್ರೇಷ್ಠನಾದ ಹನುಮಂತನು ನಮಗೆ ಪೂಜ್ಯನಾದ ಅತಿಥಿಯಾಗಿರುವನು. ದೇವ ಗಂಧರ್ವಸೇವಿತನೇ! ಸುವರ್ಣಮಯವಾದ ಮಹಾಶೃಂಗದಿಂದ ಶೋಭಿಸು ವವನೇ! ಮೈನಾಕ! ಹನುಮಂತನು ನಿನ್ನಲ್ಲಿ ಸ್ವಲ್ಪಹೊತ್ತು ವಿಶ್ರಮಿಸಿದ್ದು ಅನಂತರ ಮುಂದೆ ಪ್ರಯಾಣಮಾಡಲಿ.

**ಕಾಕುತ್ಥ ಸ್ಯಾನೃಶಂಸ್ಯಂ ಚ ಮೈಥಿಲ್ಯಾಶ್ಚ ವಿವಾಸನಮ್ ।**
**ಶ್ರಮಂ ಚ ಪ್ಲವಗೇನ್ದ್ರಸ್ಯ ಸಮೀಕ್ಷ್ಯೋತ್ಥಾತುಮರ್ಹಸಿ ॥೧೦೦॥**

ಶ್ರೀರಾಮನ ದಯಾಪರತೆಯನ್ನೂ, ಸೀತಾದೇವಿಯ ದೇಶಭ್ರಂಶ ವನ್ನೂ ಮತ್ತು ಪ್ಲವಗಶ್ರೇಷ್ಠನಾದ ಹನುಮಂತನ ದಣಿವನ್ನೂ ಗಮನಿಸಿ ನೀನು ಎದ್ದುನಿಲ್ಲುವುದು ಯೋಗ್ಯವಾಗಿದೆ.”

ಸಮುದ್ರರಾಜನ ಆ ಮಾತುಗಳನ್ನು ಕೇಳಿದೊಡನೆಯೇ ಮಹಾವೃಕ್ಷ ಗಳಿಂದಲೂ ಲತೆಗಳಿಂದಲೂ ಸಮಾವೃತನಾಗಿದ್ದ, ಹಿರಣ್ಯನಾಭನಾದ ಮೈನಾಕನು ತನ್ನ ಶಿಖರವನ್ನು ನೀರಿನಿಂದ ಮೇಲಕ್ಕೆ ಚಾಚಿದನು.

ಮೈನಾಕನು ಸಮುದ್ರವನ್ನು ಭೇದಿಸಿಕೊಂಡು ಹೊರಬಂದು ಪ್ರದೀಪ್ತ

ವಾದ ಕಿರಣಗಳುಳ್ಳ ಸೂರ್ಯದೇವನು ಮೋಡಗಳನ್ನು ಭೇದಿಸಿಕೊಂಡು ಹೊರಬಂದು ಪ್ರಕಾಶಿಸುವಂತೆ ಪ್ರಕಾಶಿಸಿದನು.

ಸಮುದ್ರರಾಜನಿಂದ ಪ್ರೇರಿತನಾದ, ನೀರಿನಿಂದ ಸುತ್ತುವರಿಯಲ್ಪಟ್ಟಿದ್ದ, ಮಹಾತ್ಮನಾದ ಮೈನಾಕನು ಮುಹೂರ್ತಮಾತ್ರದಲ್ಲಿ ತನ್ನ ಎಲ್ಲ ಶಿಖರಗಳನ್ನೂ ಹೊರಚಾಚಿದನು.

ಕಿನ್ನರ-ಮಹಾಸರ್ಪಗಳಿಂದ ವ್ಯಾಪ್ತವಾಗಿದ್ದ, ಉದಯಿಸಿದ ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯನ್ನು ಹೊಂದಿದ್ದ, ಆಕಾಶದಲ್ಲಿ ರೇಖೆಯನ್ನೆಳೆಯಲು ಹೊರಟಿರುವುದೋ ಎಂಬಂತೆ ಅತ್ಯಂತ ಎತ್ತರವಾಗಿದ್ದ, ಸುವರ್ಣಮಯವಾದ ಶಿಖರಗಳಿಂದ ಮೈನಾಕಪರ್ವತವು ಪ್ರಕಾಶಿಸುತ್ತಿದ್ದಿತು.

ಶಸ್ತ್ರಸದೃಶವಾಗಿದ್ದ* ನೀಲವರ್ಣದ ಆಕಾಶವು–ನೀರಿನಿಂದ ಹೊರ ಚಾಚಿದ್ದ ಮೈನಾಕಪರ್ವತದ ಸುವರ್ಣಮಯವಾದ ಶಿಖರಗಳಿಂದ ವ್ಯಾಪ್ತ ವಾಗಿದ್ದು ಸುವರ್ಣದ ಪ್ರಭೆಯಿಂದ ಕೂಡಿರುವಂತೆಯೇ ಕಾಣುತ್ತಿದ್ದಿತು. ಸುವರ್ಣಮಯವಾದ ಶಿಖರಗಳಿಂದ ಕೂಡಿ ಮಹಾಪ್ರಭೆಯಿಂದ ಜಾಜ್ವಲ್ಯ ಮಾನವಾಗಿ ಪ್ರಕಾಶಿಸುತ್ತಿದ್ದ ಶ್ರೇಷ್ಠವಾದ ಮೈನಾಕಪರ್ವತವು ನೂರು ಸೂರ್ಯರಿಗೆ ಸದೃಶವಾಗಿದ್ದಿತು.

ಯಾವುದೇ ಕಾರಣವೂ ಇಲ್ಲದೇ ಇದ್ದಕ್ಕಿದ್ದಂತೆಯೇ ಸಮುದ್ರದ ಮಧ್ಯಭಾಗದಿಂದ ಹೊರಬಂದಿದ್ದ ಮೈನಾಕಪರ್ವತದ ಶಿಖರವನ್ನು ನೋಡಿ ಅದು ತನಗೆ ವಿಘ್ನಕಾರಿಯೆಂದೇ ಹನುಮಂತನು ಭಾವಿಸಿದನು. ಮಹಾವೇಗ ಯುಕ್ತನಾಗಿದ್ದ ಮಹಾಕಪಿಯಾದ ಹನುಮಂತನು, ಬಹಳ ಎತ್ತರವಾಗಿದ್ದ ಮೈನಾಕಪರ್ವತದ ಶಿಖರವನ್ನು–ವಾಯುವು ಕಾರ್ಮುಗಿಲನ್ನು ಚದುರಿಸಿ ಬಿಡುವಂತೆ ಎದೆಯಿಂದಲೇ ಅಪ್ಪಳಿಸಿ ಕೆಳಕ್ಕುರುಳಿಸಿದನು. ಹಾಗೆ ಕೆಳಕ್ಕುರುಳಿದ ಮೈನಾಕನು ಹನುಮಂತನ ವೇಗವೆಷ್ಟೆಂಬುದು ಅರಿತವನಾಗಿ ಸಂತೋಷಪಟ್ಟು ಸಿಂಹನಾದಮಾಡಿದನು. ಮನುಷ್ಯನ ರೂಪವನ್ನು ಧರಿಸಿ

---

ಶಸ್ತ್ರಸದೃಶಂ –ಎಂಬುದಕ್ಕೆ ವ್ಯಾಖ್ಯಾನಕಾರರು 'ನೀಲ' ಎಂದು ಅರ್ಥಮಾಡಿರುತ್ತಾರೆ. ಶಸ್ತ್ರವು ಅಥವಾ ಖಡ್ಗವು ಶ್ಯಾಮಲವರ್ಣದ್ದೆಂದು ಅವರ ಅಭಿಪ್ರಾಯವಾಗಿದೆ.

ತನ್ನ ಶಿಖರದ ಮೇಲೆ ನಿಂತಿದ್ದ ಮೈನಾಕನು ಹನುಮಂತನ ವೇಗವನ್ನು ನೋಡಿ ಪ್ರಹೃಷ್ಟನೂ ಪರಮಪ್ರೀತನೂ ಆಗಿ ಆಂಜನೇಯನಿಗೆ ಹೇಳಿದನು :

**ದುಷ್ಕರಂ ಕೃತವಾನ್ಕರ್ಮ ತ್ವಮಿದಂ ವಾನರೋತ್ತಮ ।**
**ನಿಪತ್ಯ ಮಮ ಶೃಙ್ಗೇಷು ವಿಶ್ರಮಸ್ವ ಯಥಾಸುಖಮ್ ॥೧೧೧॥**

"ವಾನರಶ್ರೇಷ್ಠನೇ! ನೀನು ಅತ್ಯಂತದುಷ್ಕರವಾದ ಕಾರ್ಯವನ್ನು ಮಾಡಿರುವೆ. ನನ್ನ ಶಿಖರದ ಮೇಲಿಳಿದು ಸ್ವಲ್ಪಹೊತ್ತು ವಿಶ್ರಮಿಸಿಕೊಂಡು ಅನಂತರ ಮುಂದಕ್ಕೆ ಪ್ರಯಾಣಮಾಡು.

**ರಾಘವಸ್ಯ ಕುಲೇ ಜಾತೈರುದಧಿಃ ಪರಿವರ್ಧಿತಃ ।**
**ಸ ತ್ವಾಂ ರಾಮಹಿತೇ ಯುಕ್ತಂ ಪ್ರತ್ಯರ್ಚಯತಿ ಸಾಗರಃ ॥೧೧೨॥**

ರಾಘವನ ವಂಶದಲ್ಲಿ ಹುಟ್ಟಿದವರಿಂದಲೇ ಸಮುದ್ರರಾಜನು ಅಭಿವೃದ್ಧಿಯನ್ನು ಹೊಂದಿದ್ದಾನೆ. ಅವನ ಇರುವಿಕೆಗೆ ರಾಘವರೇ ಮುಖ್ಯ ಕಾರಣರು. ಈ ಕಾರಣದಿಂದ ಸಮುದ್ರರಾಜನು ರಾಮನ ಹಿತದಲ್ಲಿಯೇ ಆಸಕ್ತನಾಗಿರುವ ನಿನ್ನನ್ನು ಗೌರವಿಸಲು ಬಯಸಿದ್ದಾನೆ.

**ಕೃತೇ ಚ ಪ್ರತಿಕರ್ತವ್ಯಮೇಷ ಧರ್ಮಃ ಸನಾತನಃ ।**
**ಸೋಽಯಂ ತತ್ಪ್ರತಿಕಾರಾರ್ಥೀ ತ್ವತ್ತಃ ಸಂಮಾನಮರ್ಹತಿ ॥೧೧೩॥**

ಉಪಕಾರವನ್ನು ಮಾಡಿದವರಿಗೆ ಪ್ರತ್ಯುಪಕಾರಮಾಡುವುದು ಸನಾತನ ಧರ್ಮವಾಗಿದೆ. ಆದುದರಿಂದಲೇ ರಘುವಂಶೀಯರು ತನಗೆ ಮಾಡಿರುವ ಉಪಕಾರಕ್ಕೆ ಈ ರೀತಿಯಲ್ಲಿ ಪ್ರತ್ಯುಪಕಾರಮಾಡಲು ಸಮುದ್ರರಾಜನು ಬಯಸಿದ್ದಾನೆ. ಅವನ ಆತಿಥ್ಯವನ್ನು ಅಂಗೀಕರಿಸುವುದರ ಮೂಲಕ ನೀನು ಅವನನ್ನು ಗೌರವಿಸು. ನಿನ್ನ ಸಮ್ಮಾನಕ್ಕೆ ಅವನು ಯೋಗ್ಯನಾಗಿರುವನು.

ನಿನ್ನ ಸಲುವಾಗಿಯೇ ಸಮುದ್ರರಾಜನು ಬಹುಮಾನಪೂರ್ವಕವಾಗಿ ನನಗೆ ಹೀಗೆ ಹೇಳಿರುವನು :

**ಯೋಜನಾನಾಂ ಶತಂ ಚಾಪಿ ಕಪಿರೇಷ ಖಮಾಪ್ಲುತಃ ।**
**ತವ ಸಾನುಷು ವಿಶ್ರಾನ್ತಃ ಶೇಷಂ ಪ್ರಕ್ರಮತಾಮಿತಿ ॥೧೧೪॥**

'ಆಕಾಶದಲ್ಲಿ ಹಾರಿಬರುತ್ತಿರುವ ಕಪೀಶ್ವರನು ನೂರು ಯೋಜನ ಗಳನ್ನಾದರೂ ಒಂದೇ ನೆಗೆತದಲ್ಲಿ ಹಾರಬಲ್ಲನು. ಆದರೂ ಅವನು ನಿನ್ನ ತಪ್ಪಲುಗಳಲ್ಲಿ ಸ್ವಲ್ಪಹೊತ್ತು ವಿಶ್ರಮಿಸಿಕೊಂಡಿದ್ದು ಅನಂತರ ಉಳಿದ ಭಾಗ ವನ್ನು ಲಂಘಿಸಲಿ.'

ಹರಿಶ್ರೇಷ್ಠನೇ! ನಾನೂ ನಿನ್ನನ್ನು ಪ್ರಾರ್ಥಿಸುತ್ತೇನೆ. ಇಲ್ಲಿಯೇ ನಿಲ್ಲು; ನನ್ನಲ್ಲಿ ಸ್ವಲ್ಪಹೊತ್ತು ವಿಶ್ರಮಿಸಿಕೊಂಡು ಅನಂತರ ಮುಂದೆ ಪ್ರಯಾಣಮಾಡು. ಸುಗಂಧಯುಕ್ತವಾಗಿರುವ ಈ ಗೆಡ್ಡೆ-ಗೆಣಸುಗಳು ಮತ್ತು ಫಲಗಳು ತುಂಬಾ ರುಚಿಕರವಾಗಿವೆ. ಇವೆಲ್ಲವನ್ನೂ ತಿಂದು ವಿಶ್ರಾಂತಿಯನ್ನು ಪಡೆದು ಅನಂತರ ಹೋಗುವೆಯಂತೆ. ಕಪಿಮುಖ್ಯನೇ! ನೀನು ಮಹಾಗುಣ ಗಳನ್ನು ಮೈಗೂಡಿಸಿಕೊಂಡಿರುವೆ. ಈ ಕಾರಣದಿಂದಲೇ ಮೂರು ಲೋಕ ಗಳಲ್ಲಿಯೂ ವಿಖ್ಯಾತನಾಗಿರುವೆ. ಮೇಲಾಗಿ ನೀನು ನಮಗೆ ಸಂಬಂಧಿಯೂ ಆಗಬೇಕು. ಬಹಳ ವೇಗವಾಗಿ ಹಾರುವ ಸಾಮರ್ಥ್ಯವಿರುವ ಕಪಿಗಳೆಲ್ಲರಿಗೂ ನೀನು ಮುಖ್ಯತಮನಾದವನೆಂದು ನಾನು ಭಾವಿಸುತ್ತೇನೆ.

**ಅತಿಥಿಃ ಕಿಲ ಪೂಜಾರ್ಹಃ ಪ್ರಾಕೃತೋऽಪಿ ವಿಜಾನತಾ ।**
**ಧರ್ಮಂ ಜಿಜ್ಞಾಸಮಾನೇನ ಕಿಂ ಪುನರ್ಯಾದೃಶೋ ಭವಾನ್ ॥**

ಧರ್ಮವನ್ನು ಜಿಜ್ಞಾಸೆಮಾಡಿ ಅದರ ರಹಸ್ಯವನ್ನು ಸಂಪೂರ್ಣವಾಗಿ ತಿಳಿದವನಿಗೆ-ಅತಿಥಿಯಾಗಿ ಬಂದವನು ಮನುಷ್ಯಸಾಮಾನ್ಯನೇ ಆಗಿದ್ದರೂ– ಪೂಜಾರ್ಹನಾಗುತ್ತಾನೆ. ಹೀಗಿರುವಾಗ ನಿನ್ನಂತಹ ಅತಿಥಿಯ ವಿಷಯದಲ್ಲಿ ಹೇಳುವುದೇನಿದೆ? ನೀನಾದರೋ ದೇವಶ್ರೇಷ್ಠನಾದ ಮಹಾತ್ಮನಾದ ವಾಯುದೇವನ ಪುತ್ರನು. ವೇಗದಲ್ಲಿಯೂ ಅವನಿಗೆ ಸಮಾನನೇ ಆಗಿರುವೆ.

**ಪೂಜಿತೇ ತ್ವಯಿ ಧರ್ಮಜ್ಞೇ ಪೂಜಾಂ ಪ್ರಾಪ್ನೋತಿ ಮಾರುತಃ ।**
**ತಸ್ಮಾತ್ತ್ವಂ ಪೂಜನೀಯೋ ಮೇ ಶೃಣು ಚಾಪ್ಯತ್ರ ಕಾರಣಮ್ ॥**

ಧರ್ಮಜ್ಞನಾದ ನಿನ್ನನ್ನು ಸತ್ಕರಿಸಿದರೆ ವಾಯುದೇವನನ್ನೇ ಸತ್ಕರಿಸಿ ದಂತಾಗುತ್ತದೆ. ನಿನಗೆ ಮಾಡಿದ ಸತ್ಕಾರವನ್ನು ವಾಯುದೇವನು ಪಡೆದು ಕೊಳ್ಳುತ್ತಾನೆ. ಆದುದರಿಂದ ನೀನು ನನಗೆ ಪೂಜನೀಯನಾಗಿರುವೆ. ನಿನ್ನ ತಂದೆಯೂ ನನಗೆ ಪೂಜ್ಯನು ಹೇಗೆಂಬುದಕ್ಕೆ ಕಾರಣವನ್ನು ಹೇಳುವೆನು ; ಕೇಳು.

ಹಿಂದೆ ಕೃತಯುಗದಲ್ಲಿ ಪರ್ವತಗಳಿಗೂ ರೆಕ್ಕೆಗಳಿದ್ದುವು. ಗರುಡಪಕ್ಷಿ ಗಳಂತೆಯೇ ವೇಗಶಾಲಿಗಳಾಗಿ ಎಲ್ಲ ದಿಕ್ಕುಗಳಿಗೂ ಹಾರಿಕೊಂಡು ಹೋಗು ತ್ತಿದ್ದುವು. ಹಾಗೆ ಸ್ವೇಚ್ಛೆಯಿಂದ ಹಾರಿಕೊಂಡು ಹೋಗುತ್ತಿದ್ದಾಗ ಯಾವಾಗ ಲಾದರೊಮ್ಮೆ ತಮ್ಮ ಮೇಲೂ ಈ ಪರ್ವತಗಳು ಬೀಳಬಹುದೆಂಬ ಸಂದೇಹ ದಿಂದ ದೇವತೆಗಳೂ, ಸಕಲಪ್ರಾಣಿಗಳೂ ಮತ್ತು ಋಷಿಗಳೂ ಭಯಪೀಡಿತ ರಾದರು. ಪರ್ವತಗಳ ಆ ಹಾರಾಟವನ್ನು ಕಂಡು ಇಂದ್ರನೂ ಕ್ರುದ್ಧನಾದನು. ಅವುಗಳ ರೆಕ್ಕೆಗಳನ್ನು ವಜ್ರಾಯುಧದಿಂದ ಅವುಗಳಿದ್ದಲ್ಲಿಯೇ ಸಾವಿರಾರು ಸಂಖ್ಯೆಯಲ್ಲಿ ಕತ್ತರಿಸಿದನು. ಕ್ರುದ್ಧನಾಗಿದ್ದ ಇಂದ್ರನು ನನ್ನ ರೆಕ್ಕೆಗಳನ್ನೂ ತುಂಡರಿಸುವ ಸಲುವಾಗಿ ವಜ್ರಾಯುಧವನ್ನೆತ್ತಿಕೊಂಡು ನನ್ನ ಬಳಿಗೂ ಬಂದನು. ಆ ಸಮಯಕ್ಕೆ ಸರಿಯಾಗಿ ಮಹಾತ್ಮನಾದ ನಿನ್ನ ತಂದೆ ವಾಯು ದೇವನು ನನ್ನನ್ನು ಹಾರಿಸಿಕೊಂಡುಹೋಗಿ ಸಮುದ್ರದಲ್ಲಿ ಹಾಕಿಬಿಟ್ಟನು. ಹೀಗೆ ನಿನ್ನ ತಂದೆಯು ನನ್ನನ್ನು ಸಮುದ್ರಕ್ಕೆಸೆದು ನನ್ನನ್ನು ಮಾತ್ರವಲ್ಲದೇ ನನ್ನ ಸಮಗ್ರವಾದ ರೆಕ್ಕೆಗಳನ್ನೂ ಸಂರಕ್ಷಿಸಿದನು.

ಕಪಿಮುಖ್ಯನೇ! ಮಾರುತಿಯೇ! ನಿನ್ನೊಡನೆ ನನಗೆ ನಿನ್ನ ತಂದೆಯ ಉಪಕಾರರೂಪವಾದ ಮಹಾಗುಣಯುಕ್ತವಾದ ಈ ಸಂಬಂಧವಿದೆ. ಈ ಕಾರಣದಿಂದಲೇ ನಾನು ನಿನ್ನನ್ನು ಸಮ್ಮಾನಿಸುತ್ತಿದ್ದೇನೆ. ನಿಮ್ಮ ತಂದೆಯಂತೆಯೇ ನೀನೂ ನನಗೆ ಮಾನ್ಯನಾಗಿರುವೆ.

ಮಹಾಮತಿವಂತನೇ! ನಾನು ಈ ಹಿಂದೆ ಹೇಳಿದಂತೆ ಸಮುದ್ರರಾಜನ ಅಭ್ಯುದಯಕ್ಕೆ ರಾಘವರೇ ಕಾರಣರು. ಅಂತೆಯೇ ನಾನು ರೆಕ್ಕೆಗಳೊಡನೆ ಬಾಳಿ ಬದುಕಲು ನಿಮ್ಮ ತಂದೆಯೇ ಕಾರಣನು.

ಹೀಗೆ ನಾವಿಬ್ಬರೂ ನಿಮ್ಮಿಂದ ಉಪಕೃತರಾಗಿದ್ದೇವೆ. ಆದುದರಿಂದ ನೀನು ಪ್ರೀತಮನಸ್ಕನಾಗಿ ಪ್ರತ್ಯುಪಕಾರರೂಪವಾದ ನಮ್ಮ ಆತಿಥ್ಯವನ್ನು ಪ್ರೀತಿಯಿಂದ ಸ್ವೀಕರಿಸುವುದು ಯೋಗ್ಯವಾಗಿದೆ.

ವಾಯುಪುತ್ರನೇ! ಇಲ್ಲಿ ವಿಶ್ರಮಿಸಿಕೊಂಡು ಶ್ರಮವನ್ನು ಪರಿಹರಿ ಸಿಕೊ. ನಮ್ಮ ಸತ್ಕಾರವನ್ನು ಸ್ವೀಕರಿಸು. ನಿನ್ನ ದರ್ಶನದಿಂದಲೇ ನಾನು

ಪರಮಪ್ರೀತನಾಗಿದ್ದೇನೆ. ನಿನ್ನ ಮೇಲೆ ನನಗುಂಟಾಗಿರುವ ವಿಶ್ವಾಸವನ್ನು ಪುರಸ್ಕರಿಸು."

ಹೀಗೆ ಮೈನಾಕನು ವಿನೀತನಾಗಿ ಹೇಳಲು ಕಪಿಶ್ರೇಷ್ಠನಾದ ಹನುಮಂತನು ಯಥೋಚಿತವಾಗಿ ಉತ್ತರಿಸಿದನು :

**ಪ್ರೀತೋಽಸ್ಮಿ ಕೃತಮಾತಿಥ್ಯಂ ಮನ್ಯುರೇಷೋಽಪನೀಯತಾಮ್ ।**
**ತ್ವರತೇ ಕಾರ್ಯಕಾಲೋ ಮೇ ಅಹಶ್ಚಾಪ್ಯತಿವರ್ತತೇ ।**
**ಪ್ರತಿಜ್ಞಾ ಚ ಮಯಾ ದತ್ತಾ ನ ಸ್ಥಾತವ್ಯಮಿಹಾನ್ತರೇ ॥೧೩೦॥**

"ಮೈನಾಕನೇ! ನಿನ್ನ ಮಾತುಗಳಿಂದಲೇ ನಾನು ಸುಪ್ರೀತನಾಗಿದ್ದೇನೆ. ನಿನ್ನ ಈ ಸವಿನುಡಿಗಳಿಂದ ನೀನು ಆತಿಥ್ಯವನ್ನು ಮಾಡಿದಂತೆಯೇ ಆಗಿದೆ. 'ಇಷ್ಟು ಪ್ರಾರ್ಥಿಸಿಕೊಂಡರೂ ಆತಿಥ್ಯವನ್ನು ಸ್ವೀಕರಿಸಲಿಲ್ಲವಲ್ಲಾ'–ಎಂಬ ದೈನ್ಯವನ್ನು ಅಥವಾ ಕೋಪವನ್ನು ದೂರಮಾಡು.* ಕಾರ್ಯದ ಸಮಯವು ನನ್ನನ್ನು ಆತುರಗೊಳಿಸುತ್ತಿದೆ. ಹಗಲೂ ಕಳೆದುಹೋಗುತ್ತಿದೆ. ಮಧ್ಯದಲ್ಲೆಲ್ಲೂ ನಿಲ್ಲುವುದಿಲ್ಲವೆಂದು ನಾನು ಪ್ರತಿಜ್ಞೆಯನ್ನು ಮಾಡಿದ್ದೇನೆ."

ಕಪಿಶ್ರೇಷ್ಠನಾದ, ವೀರ್ಯವಂತನಾದ ಹನುಮಂತನು ಮೈನಾಕನಿಗೆ ಹೀಗೆ ಸಮಾಧಾನವನ್ನು ಹೇಳಿ ಅವನ ಮೈದಡವಿ ನಗು-ನಗುತ್ತಲೇ ಆಕಾಶ ಮಾರ್ಗವಾಗಿ ಮುಂದೆ ಹಾರಿದನು.

ಆ ಸಮಯದಲ್ಲಿ ಸಮುದ್ರ-ಪರ್ವತರು ಮಾರುತಿಯನ್ನು ಅಭಿಮಾನ ಪೂರ್ವಕವಾಗಿ ವೀಕ್ಷಿಸುತ್ತಿದ್ದರು. ತತ್ಕಾಲೋಚಿತವಾದ ಆಶೀರ್ವಾದಗಳಿಂದ ಕಾರ್ಯಸಿದ್ಧಿಯಾಗುವಂತೆ ಹರಸಿದರು.

ಬಳಿಕ ಮಾರುತಿಯು ಪರ್ವತ-ಸಮುದ್ರರಿಬ್ಬರನ್ನೂ ಬಿಟ್ಟು ಮೇಲ್ಮುಖ

---

* ಮನ್ಯುಃ = ಮನ್ಯುರ್ದೈನ್ಯೇ ಕ್ರತೌ ಕ್ರುಧಿ–ಎಂಬ ಅಮರಸಿಂಹನ ಕೋಶದಂತೆ ಮನ್ಯುಶಬ್ದಕ್ಕೆ ದೈನ್ಯ, ಕೋಪ–ಎಂಬ ಎರಡು ಅರ್ಥಗಳಿವೆ. ಇಲ್ಲಿಯ ಸಂದರ್ಭದಲ್ಲಿ ಕೋಪ ಅಥವಾ ದೈನ್ಯ–ಎಂಬ ಎರಡು ಅರ್ಥಗಳೂ ಹೊಂದಿಕೊಳ್ಳುತ್ತವೆ. ಆದುದರಿಂದಲೇ ಒಬ್ಬ ವ್ಯಾಖ್ಯಾನಕಾರರು ದೈನ್ಯವೆಂದೂ–ಮತ್ತೊಬ್ಬರು ಕೋಪವೆಂದೂ ಅರ್ಥಮಾಡಿದ್ದಾರೆ. ಆದರೆ ಮನ್ಯುಶಬ್ದಕ್ಕೆ ಹೆಚ್ಚು ರೂಢಿಯಲ್ಲಿರುವುದು ಕೋಪವೆಂದೇ.

ವಾಗಿ ಬಹಳ ಎತ್ತರಕ್ಕೆ ಹಾರಿ ವಾಯುಮಾರ್ಗವನ್ನು ಸೇರಿ ಆಕಾಶದಲ್ಲಿ ಪ್ರಯಾಣವನ್ನು ಮುಂದುವರಿಸಿದನು. ಮುಂದೆ-ಮುಂದೆ ಇನ್ನೂ ಎತ್ತರಕ್ಕೆ ಹೋಗಿ ಮೈನಾಕಪರ್ವತವನ್ನೇ ವೀಕ್ಷಿಸುತ್ತಾ ಯಾವ ಅವಲಂಬನೆಯೂ ಇಲ್ಲದೆ ಗರುಡಪಕ್ಷಿಯಂತೆಯೇ ಆಕಾಶಮಾರ್ಗದಲ್ಲಿ ಹಾರಿಕೊಂಡು ಹೋಗುತ್ತಿದ್ದನು.

**ತದ್ವಿತೀಯಂ ಹನುಮತೋ ದೃಷ್ಟ್ವಾ ಕರ್ಮ ಸುದುಷ್ಕರಮ್ ।**
**ಪ್ರಶಶಂಸುಃ ಸುರಾಃ ಸರ್ವೇ ಸಿದ್ಧಾಶ್ಚ ಪರಮರ್ಷಯಃ ॥೧೩೫॥**

ಹನುಮಂತನ ಅತಿದುಷ್ಕರವಾದ ಎರಡನೆಯ ಆ ಕಾರ್ಯವನ್ನು ನೋಡಿ ದೇವತೆಗಳೂ, ಮಹರ್ಷಿಗಳೂ ಮತ್ತು ಸಿದ್ಧರೂ ಮಾರುತಿಯನ್ನು ಬಹಳವಾಗಿ ಶ್ಲಾಘಿಸಿದರು.*

ಸುವರ್ಣನಾಭನಾದ ಮೈನಾಕನು ಸಮುದ್ರದಿಂದ ಹೊರಬಂದು ಹನುಮಂತನನ್ನು ಸತ್ಕರಿಸಲು ಆಹ್ವಾನಿಸಿದ್ದಕ್ಕಾಗಿ ಆ ಪ್ರದೇಶದಲ್ಲಿದ್ದ ದೇವತೆಗಳೂ ಮತ್ತು ಸಾವಿರ ಕಣ್ಣುಗಳುಳ್ಳ ಇಂದ್ರನೂ ಪರಮಹೃಷ್ಟರಾದರು. ತಾನಾಗಿಯೇ ಧೀಮಂತನಾದ ಶಚೀಪತಿಯು ಅತಿಸಂತೋಷದಿಂದುಂಟಾದ ಗದ್ಗದಧ್ವನಿಯಿಂದ ಮೈನಾಕನಿಗೆ ಹೇಳಿದನು :

---

* ದ್ವಿತೀಯಂ ಕರ್ಮ—ಮೊದಲನೆಯ ಕರ್ಮವು ಪರ್ವತದ ತುದಿಯಿಂದ ಹಾರಿ ದುದು. ಎರಡನೆಯದು—ಮೈನಾಕಪರ್ವತವನ್ನು ಜಯಿಸಿದುದು. ತತ್ಪರ್ವತಜಯರೂಪಂ ಕರ್ಮ । ವಿಶ್ರಾನ್ತ್ಯಕರಣರೂಪಂ ಕರ್ಮ—ವಿಶ್ರಾಂತಿಯನ್ನು ಪಡೆಯದೆಯೇ ಮುಂದೆ ಹೋದುದು—ಎಂಬುದಾಗಿ ವ್ಯಾಖ್ಯಾನಕಾರರು ವಿವರಣೆ ನೀಡಿದ್ದಾರೆ. ಮೊದಲನೆಯ ಕರ್ಮವು ಮೇಲೆದ್ದು ನಿಂತಿದ್ದ ಮೈನಾಕಪರ್ವತದ ಶಿಖರಗಳನ್ನು ಕೆಡವಿ ಪಕ್ಷಿಯಂತೆ ಆಕಾಶದಲ್ಲಿಯೇ ನಿಂತು ಮಾತನಾಡಿ ಪರ್ವತದ ಮೇಲೆ ಇಳಿಯದೆಯೇ ವೇಗವನ್ನು ಹೆಚ್ಚಿಸಿಕೊಂಡು ಎತ್ತರಕ್ಕೆ ಹಾರಿದುದು. ಹೊರಟ ವೇಗದಲ್ಲಿಯೇ ಹೋಗುತ್ತಿರುವುದೂ ಮತ್ತು ವೇಗವನ್ನು ಬೇಕು ಬೇಕಾದಾಗ ಕಡಿಮೆಮಾಡಿಕೊಂಡು ಹೋಗುವುದೂ ಪಕ್ಷಿಗಳಿಗೆ ಸಾಧ್ಯವಾಗುವುದೇ ಹೊರತು ರೆಕ್ಕೆಗಳಿಲ್ಲದವರಿಂದ ಸಾಧ್ಯವಿಲ್ಲ. ಆದರೆ ಹನುಮಂತನಿಲ್ಲಿ ಅಂತಹ ಆಶ್ಚರ್ಯಕರವಾದ ತನ್ನ ಶಕ್ತಿಯನ್ನೂ ಪ್ರದರ್ಶಿಸಿದ್ದಾನೆ. ಇದೇ ಅವನ ಎರಡನೆಯ ಅದ್ಭುತಕರ್ಮ. ಹೀಗೂ ವಿವರಿಸಬಹುದಾಗಿದೆ.

**ಹಿರಣ್ಯನಾಭ ಶೈಲೇನ್ದ್ರ ಪರಿತುಷ್ಟೋಽಸ್ಮಿ ತೇ ಭೃಶಮ್ ।**
**ಅಭಯಂ ತೇ ಪ್ರಯಚ್ಛಾಮಿ ತಿಷ್ಠ ಸೌಮ್ಯ ಯಥಾಸುಖಮ್ ॥**

"ಹಿರಣ್ಯನಾಭನೇ! ಶೈಲಶ್ರೇಷ್ಠನೇ! ನಿನ್ನ ಈ ಕಾರ್ಯದಿಂದ ನಾನು ನಿನ್ನ ವಿಷಯದಲ್ಲಿ ಹೆಚ್ಚು ಪ್ರೀತನಾಗಿದ್ದೇನೆ. ನಾನು ನಿನಗೆ ಅಭಯದಾನ ಮಾಡುತ್ತೇನೆ. ನನ್ನಿಂದ ನಿನಗೆ ಮುಂದೆ ಯಾವ ಭಯವೂ ಇರದು. ಈ ಸ್ಥಾನದಲ್ಲಿಯೇ ನೀನು ಸುಖವಾಗಿರು.

**ಸಾಹ್ಯಂ ಕೃತಂ ತ್ವಯಾ ಸೌಮ್ಯ ವಿಕ್ರಾನ್ತಸ್ಯ ಹನೂಮತಃ ।**
**ಕ್ರಮತೋ ಯೋಜನಶತಂ ನಿರ್ಭಯಸ್ಯ ಭಯೇ ಸತಿ ॥೧೩೬॥**

ಭಯಪಡುವ ಸಂದರ್ಭವಿದ್ದರೂ ಭಯವಿಲ್ಲದೇ ನೂರು ಯೋಜನಗಳನ್ನು ಹಾರಹೊರಟಿರುವ, ಭಯರಹಿತನಾದ, ಮಹಾಪರಾಕ್ರಮಿಯಾದ ಹನುಮಂತನಿಗೆ ನೀನು ಸಹಾಯವನ್ನೆಸಗಲು ಮುಂದೆಬಂದಿರುವೆ.

**ರಾಮಸ್ಯೈಷ ಹಿ ದೌತ್ಯೇನ ಯಾತಿ ದಾಶರಥೇಃ ಕಪಿಃ ।**
**ಸತ್ಕ್ರಿಯಾಂ ಕುರ್ವತಾ ತಸ್ಯ ತೋಷಿತೋಽಸ್ಮಿ ಭೃಶಂ ತ್ವಯಾ ॥**

ದಶರಥನ ಮಗನಾದ ಶ್ರೀರಾಮನ ಹಿತಕ್ಕಾಗಿಯೇ ಈ ಮಾರುತಿಯು ಲಂಕೆಗೆ ಹೋಗುತ್ತಿದ್ದಾನೆ. ಅಂತಹವನನ್ನು ನೀನು ಸತ್ಕರಿಸಲು ಬಂದುದಕ್ಕಾಗಿ ನಾನು ಪರಮಪ್ರೀತನಾಗಿದ್ದೇನೆ."

ದೇವತೆಗಳ ಒಡೆಯನಾದ ಮತ್ತು ತನ್ನ ಸಮುದ್ರವಾಸಕ್ಕೆ ಕಾರಣನಾದ ಇಂದ್ರನೇ ತನ್ನ ವಿಷಯದಲ್ಲಿ ಪರಿತುಷ್ಟನಾದನೆಂಬುದನ್ನು ತಿಳಿದು ಮೈನಾಕನು ಪರಮಹೃಷ್ಟನಾದನು. ಅಭಯಪ್ರದಾನದ ವರವನ್ನು ಇಂದ್ರನಿಂದ ಪಡೆದುಕೊಂಡು ಮೈನಾಕನು ಮುಂದೆ ಯಾವ ವಿಧವಾದ ಭಯವೂ ಇಲ್ಲದೇ ತಾನು ಹಿಂದಿದ್ದ ಸ್ಥಳದಲ್ಲಿಯೇ ಸುಸ್ಥಿರವಾಗಿ ನಿಂತನು. ಇತ್ತಲಾಗಿ ಹನುಮಂತನು ಮೈನಾಕನು ಆಶ್ರಯಿಸಿದ್ದ ಸಮುದ್ರಪ್ರದೇಶವನ್ನುಮುಹೂರ್ತ ಮಾತ್ರದಲ್ಲಿ ಅತಿಕ್ರಮಿಸಿ ಮುಂದೆ ಸಾಗಿದನು. ಅದಾದ ಬಳಿಕ ಗಂಧರ್ವರಿಂದ ಕೂಡಿದ ದೇವತೆಗಳೂ, ಸಿದ್ಧರೂ, ಮಹರ್ಷಿಗಳೂ–ಸರ್ಪಗಳ ತಾಯಿಯಾದ ಸೂರ್ಯಸದೃಶಳಾದ ಸುರಸೆಯನ್ನು ಕಂಡು ಹೇಳಿದರು :

**ಅಯಂ ವಾತಾತ್ಮಜಃ ಶ್ರೀಮಾನ್ಪ್ಲವತೇ ಸಾಗರೋಪರಿ ।**
**ಹನೂಮಾನ್ನಾಮ ತಸ್ಯ ತ್ವಂ ಮುಹೂರ್ತಂ ವಿಘ್ನಮಾಚರ ॥**

"ವಾಯುವಿನ ಮಗನಾದ, ಶ್ರೀಮಂತನಾದ ಹನುಮಂತನೆಂಬ ಹೆಸರಿನ ಕಪಿಶ್ರೇಷ್ಠನು ಸಮುದ್ರದ ಮೇಲೆ ಹಾರಿಹೋಗುತ್ತಿದ್ದಾನೆ. ಅವನಿಗೆ ನೀನು ಕ್ಷಣಕಾಲ ವಿಘ್ನವನ್ನುಂಟುಮಾಡು.

ಪರ್ವತೋಪಮವಾದ, ಸುಘೋರವಾದ ರಾಕ್ಷಸಿಯ ರೂಪವನ್ನು ಧರಿಸಿ ಕೋರೆದಾಡೆಗಳಿಂದ ಭಯಂಕರವಾಗಿ ಕಾಣುವ, ಕಂದು-ಹಳದೀ ಬಣ್ಣದ ಕಣ್ಣುಗಳಿಂದ ಕೂಡಿರುವ, ಆಕಾಶವನ್ನು ಮುಟ್ಟುವ ಮುಖದಿಂದ ಕೂಡಿ ಅವನ ಗಮನಕ್ಕೆ ವಿಘ್ನವನ್ನುಂಟುಮಾಡು.

ಪುನಃ ನಾವು ಈ ಕಪೀಶ್ವರನ ಬಲವನ್ನೂ ಪರಾಕ್ರಮವನ್ನೂ ತಿಳಿಯಬಯಸಿದ್ದೇವೆ. ಇವನು ಉಪಾಯಾಂತರಗಳಿಂದ ನಿನ್ನನ್ನೂ ಜಯಿಸು ತ್ತಾನೆಯೋ ಅಥವಾ ವಿಷಾದಪಡುತ್ತಾನೆಯೋ ನೋಡೋಣ."

ದೇವತೆಗಳು ಸುರಸೆಯನ್ನು ಸತ್ಕರಿಸಿ ಹೀಗೆ ಹೇಳಲು ಅವರು ಹೇಳಿ ದಂತೆ ಸುರಸೆಯು ಸಮುದ್ರದ ಮಧ್ಯದಲ್ಲಿ ನಿಂತುಕೊಂಡಳು. ಸರ್ವರಿಗೂ ಭಯವನ್ನುಂಟುಮಾಡುವ, ವಿಕೃತವೂ ವಿರೂಪವೂ ಆದ ರಾಕ್ಷಸಿಯ ರೂಪವನ್ನು ಧರಿಸಿ ಸುರಸಾದೇವಿಯು ಆಕಾಶದಲ್ಲಿ ಹಾರಿಹೋಗುತ್ತಿದ್ದ ಹನುಮಂತನ ಮಾರ್ಗವನ್ನು ತಡೆದು ಹೇಳಿದಳು :

**ಮಮ ಭಕ್ಷ್ಯಃ ಪ್ರದಿಷ್ಟಸ್ತ್ವಮೀಶ್ವರೈರ್ವಾನರರ್ಷಭ ।**
**ಅಹಂ ತ್ವಾಂ ಭಕ್ಷಯಿಷ್ಯಾಮಿ ಪ್ರವಿಶೇದಂ ಮಮಾನನಮ್ ॥**

"ವಾನರಶ್ರೇಷ್ಠನೇ! ದೇವತೆಗಳು ನಿನ್ನನ್ನು ನನಗೆ ಆಹಾರವನ್ನಾಗಿ ಕಳುಹಿಸಿಕೊಟ್ಟಿರುತ್ತಾರೆ. ನಾನು ನಿನ್ನನ್ನು ಭಕ್ಷಿಸುವೆನು. ಈ ನನ್ನ ಮುಖವನ್ನು (ಬಾಯನ್ನು) ಈಗಲೇ ಪ್ರವೇಶಿಸು. ಬ್ರಹ್ಮನೇ ಹಿಂದೆ ನನಗೆ ಈ ವರವನ್ನು ದಯಪಾಲಿಸಿದ್ದಾನೆ."

ಹೀಗೆ ಹೇಳಿ ಆಹಾರಕ್ಕಾಗಿ ಅವಸರಿಸುತ್ತಿದ್ದ ಸುರಸೆಯು ಬಾಯನ್ನು ಅಗಲವಾಗಿ ತೆರೆದುಕೊಂಡು ಹನುಮಂತನ ಮುಂಭಾಗದಲ್ಲಿ ನಿಂತಳು.

ಹನುಮಂತನು ಕೈಜೋಡಿಸಿಕೊಂಡು ಪ್ರಹೃಷ್ಟವಾದ ಮುಖಭಾವದಿಂದ ಸುರಸೆಗೆ ಹೇಳಿದನು :

"ತಾಯೇ! ದಶರಥನ ಮಗನಾದ ರಾಮನೆಂಬುವನು ತಮ್ಮನಾದ ಲಕ್ಷ್ಮಣನೊಡನೆಯೂ, ಭಾರ್ಯೆಯಾದ ಸೀತೆಯೊಡನೆಯೂ ದಂಡಕಾರಣ್ಯಕ್ಕೆ ಬಂದನು. ತನ್ನ ಪತ್ನಿಯ ಸಲುವಾಗಿ ಮಾಯಾಮೃಗವನ್ನು ಹಿಡಿಯಲು ಹೋಗಿದ್ದ, ರಾಕ್ಷಸರ ಬದ್ಧವೈರಿಯಾದ ಶ್ರೀರಾಮನ ಭಾರ್ಯೆಯಾದ, ಯಶೋವತಿಯಾದ ಸೀತಾದೇವಿಯನ್ನು ರಾವಣನೆಂಬ ರಾಕ್ಷಸನು ಅಪಹರಿಸಿಕೊಂಡು ಹೋಗಿದ್ದಾನೆ. ನಾನು ಶ್ರೀರಾಮನ ದೂತನು. ನನ್ನ ಸ್ವಾಮಿಯಾದ ಶ್ರೀರಾಮನ ಆಜ್ಞಾನುಸಾರವಾಗಿ ಸೀತಾದೇವಿಯ ಬಳಿಗೆ ಹೋಗುತ್ತಿದ್ದೇನೆ. ಧರ್ಮಾತ್ಮನಾದ ಶ್ರೀರಾಮನ ದೇಶದಲ್ಲಿ ವಾಸಿಸುತ್ತಿರುವ ನೀನು ಈ ಸಮಯದಲ್ಲಿ ಅವನ ಕಾರ್ಯಕ್ಕೆ ಸಹಕಾರವನ್ನು ನೀಡಬೇಕು. ಒಂದು ವೇಳೆ ಬ್ರಹ್ಮನಿತ್ತಿರುವ ವರದಂತೆ ನಾನು ನಿನಗೆ ಆಹಾರವೇ ಆಗಬೇಕೆನ್ನುವುದಾದರೆ ಹೀಗಾದರೂ ಮಾಡು. ಸೀತಾದೇವಿಯನ್ನೂ ಮತ್ತು ಕ್ಲಿಷ್ಟಕಾರ್ಯಗಳನ್ನು ಸುಲಭವಾಗಿ ಮಾಡಿ ಮುಗಿಸುವ ಶ್ರೀರಾಮನನ್ನೂ ನೋಡಿದನಂತರ ನಾನು ನಿನ್ನ ಬಾಯಿಗೆ ಬಂದು ಬೀಳುತ್ತೇನೆ. ಈ ಮಾತನ್ನು ನಾನು ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ."

ಹನುಮಂತನು ಹೀಗೆ ಹೇಳಲು ಕಾಮರೂಪಿಣಿಯಾದ ಸುರಸೆಯು ಪುನಃ ಹೇಳಿದಳು :

"ವಾನರೇಶ್ವರನೇ! ನನ್ನನ್ನು ಅತಿಕ್ರಮಿಸಿ ಯಾರೂ ಹೋಗಲಾರರು. ಯಾರಿಗೂ ನನ್ನನ್ನು ದಾಟಿ ಹೋಗಲು ಸಾಧ್ಯವಾಗದಂತಹ ಅಮೋಘವಾದ ವರವನ್ನೇ ನಾನು ಬ್ರಹ್ಮನಿಂದ ಪಡೆದಿರುತ್ತೇನೆ."

ತಾನು ಹೀಗೆ ಹೇಳಿದರೂ ಲಕ್ಷ್ಯವಿಲ್ಲದೇ ಮುನ್ನಡೆಯುತ್ತಿದ್ದ ಹನುಮಂತನನ್ನು ನೋಡಿ ಅವನ ಬಲವೆಷ್ಟಿರುವುದೆಂಬುದನ್ನು ತಿಳಿಯುವ ಬಯಕೆಯಿಂದ ನಾಗಮಾತೆಯಾದ ಸುರಸೆಯು ಪುನಃ ಹೇಳಿದಳು :

"ವಾನರಶ್ರೇಷ್ಠನೇ! ನನ್ನ ಮುಖವನ್ನು ಪ್ರವೇಶಿಸಿಯೇ ನೀನು

ಮುಂದೆ ಹೋಗಬೇಕು. ನಿನಗೆ ಬೇರೆ ಮಾರ್ಗವೇ ಇಲ್ಲ. ಇಂತಹ ವರವನ್ನೇ ನಾನು ಬ್ರಹ್ಮನಿಂದ ಪಡೆದುಕೊಂಡಿರುತ್ತೇನೆ."

ಹೀಗೆ ಹೇಳಿ ಸುರಸೆಯು ಅವಸರದಿಂದ ತನ್ನ ಬಾಯನ್ನು ಅಗಲವಾಗಿ ತೆರೆದುಕೊಂಡು ಮಾರುತಿಯ ಸಮ್ಮುಖದಲ್ಲಿ ನಿಂತುಕೊಂಡಳು.

ಅದರಿಂದ ಕ್ರುದ್ಧನಾದ ಮಾರುತಿಯು ಹೇಳಿದನು : "ಹಾಗಾದರೆ ನನ್ನ ಭಾರವನ್ನು ಸಹಿಸಲು ಶಕ್ಯವಾಗುವಂತೆ ಮತ್ತು ನನ್ನನ್ನು ನುಂಗಲು ಸಾಧ್ಯವಾಗುವಂತೆ ನಿನ್ನ ಬಾಯನ್ನು ಅಗಲವಾಗಿ ತೆರೆದುಕೋ."

ಒಡನೆಯೇ ಸುರಸೆಯು ತನ್ನ ಬಾಯನ್ನು ಐದು ಯೋಜನಗಳಷ್ಟು ಅಗಲವಾಗಿ ತೆರೆದುಕೊಂಡಳು. ಕಪಿಶ್ರೇಷ್ಠನಾದ ಹನುಮಂತನು ಹತ್ತು ಯೋಜನಗಳಷ್ಟು ವಿಸ್ತಾರವಾಗಿ ಬೆಳೆದನು. ಮೇಘಸದೃಶನಾದ ಹನುಮಂತನು ಹತ್ತು ಯೋಜನಗಳಷ್ಟು ವಿಸ್ತಾರವಾಗಿ ಬೆಳೆದುದನ್ನು ಕಂಡು ಸುರಸೆಯು ತನ್ನ ಬಾಯನ್ನು ಇಪ್ಪತ್ತು ಯೋಜನಗಳಷ್ಟು ಅಗಲವಾಗಿ ಮಾಡಿಕೊಂಡಳು. ಒಡನೆಯೇ ಹನುಮಂತನು ಮೂವತ್ತು ಯೋಜನಗಳಷ್ಟು ವಿಸ್ತಾರವಾಗಿ ಬೆಳೆದನು. ಅದನ್ನು ನೋಡಿ ಸುರಸೆಯು ತನ್ನ ಮುಖವನ್ನು ನಲವತ್ತು ಯೋಜನ ವಿಸ್ತಾರವುಳ್ಳದ್ದನ್ನಾಗಿ ಮಾಡಿಕೊಂಡಳು. ವೀರನಾದ ಹನುಮಂತನು ಐವತ್ತು ಯೋಜನಗಳಷ್ಟು ವಿಸ್ತಾರವಾಗಿ ಶರೀರವನ್ನು ಬೆಳೆಸಿಕೊಂಡನು. ಮರುಕ್ಷಣದಲ್ಲಿಯೇ ಸುರಸೆಯ ಬಾಯಿ ಅರುವತ್ತು ಯೋಜನಗಳಷ್ಟು ವಿಸ್ತಾರವಾಯಿತು. ಪುನಃ ಮಾರುತಿಯು ತನ್ನ ಶರೀರವನ್ನು ಎಪ್ಪತ್ತು ಯೋಜನಗಳಷ್ಟು ದೊಡ್ಡದನ್ನಾಗಿ ಮಾಡಿಕೊಂಡನು. ಸುರಸೆಯು ತನ್ನ ಮುಖವನ್ನು ಎಂಬತ್ತು ಯೋಜನಗಳಷ್ಟು ಅಗಲವಾಗಿ ಮಾಡಿಕೊಂಡಳು. ಹನುಮಂತನ ಶರೀರವು ತೊಂಬತ್ತು ಯೋಜನಗಳಷ್ಟು ದೊಡ್ಡದಾಯಿತು. ಅದಕ್ಕೆ ಅನುಗುಣವಾಗಿ ಸುರಸೆಯ ಬಾಯಿ ನೂರು ಯೋಜನಗಳಷ್ಟು ವಿಸ್ತಾರವಾಯಿತು. ನೀಳವಾದ ನಾಲಿಗೆಯಿಂದ ಕೂಡಿದ್ದ, ನರಕ ಸದೃಶವಾಗಿದ್ದ, ಅತ್ಯಂತಭಯಂಕರವಾಗಿದ್ದ, ನೂರು ಯೋಜನಗಳಷ್ಟು ಅಗಲವಾಗಿದ್ದ ಸುರಸೆಯ ಮುಖವನ್ನು ನೋಡಿ ಬುದ್ಧಿವಂತನಾದ ಮಾರುತಿಯು ಜೀಮೂತವೆಂಬ ಮೇಘದಷ್ಟು ವಿಶಾಲವಾಗಿದ್ದ ತನ್ನ ತೊಂಬತ್ತು ಯೋಜನ

ಗಳಷ್ಟು ದೊಡ್ಡದಾಗಿದ್ದ ಶರೀರವನ್ನು ತುಂಬಾ ಸಣ್ಣದು ಮಾಡಿಕೊಂಡನು. ಆ ಸಮಯದಲ್ಲಿ ಹನುಮಂತನು ಕೇವಲ ಹೆಬ್ಬೆರಳಷ್ಟು ಗಾತ್ರದವನಾಗಿದ್ದನು. ಮಹಾಬಲನಾದ, ಶ್ರೀಮಂತನಾದ ಹನುಮಂತನು ಕ್ಷಣಮಾತ್ರದಲ್ಲಿ ಸುರಸೆಯ ಬಾಯನ್ನು ಹೊಕ್ಕು ಮರುಕ್ಷಣದಲ್ಲಿ ಅಲ್ಲಿಂದ ಹೊರಬಂದು ಅಂತರಿಕ್ಷದಲ್ಲಿ ಸುರಸೆಗೆ ಹೇಳಿದನು :

**ಪ್ರವಿಷ್ಟೋಽಸ್ಮಿ ಹಿ ತೇ ವಕ್ತ್ರಂ ದಾಕ್ಷಾಯಣಿ ನಮೋಽಸ್ತು ತೇ ।**
**ಗಮಿಷ್ಯೇ ಯತ್ರ ವೈದೇಹೀ ಸತ್ಯಶ್ಚಾಸ್ತು ವರಸ್ತವ ॥೧೬೯॥**

“ದಾಕ್ಷಾಯಿಣಿಯೇ! ನಿನಗೆ ನಮಸ್ಕರಿಸುತ್ತೇನೆ. ನಿನ್ನ ಮಾತಿನಂತೆ ನಾನು ನಿನ್ನ ಮುಖವನ್ನು ಪ್ರವೇಶಿಸಿ ಪುನಃ ಅಲ್ಲಿಂದಲೇ ಹೊರಕ್ಕೆ ಬಂದಿರುವೆನು. ವೈದೇಹಿಯಿರುವ ಸ್ಥಳಕ್ಕೆ ನಾನಿನ್ನು ಹೋಗುತ್ತೇನೆ. ನಾನು ಹೀಗೆ ಮಾಡಿದುದರಿಂದ ಬ್ರಹ್ಮನು ನಿನಗೆ ಕೊಟ್ಟಿದ್ದ ವರವು ಸತ್ಯವಾಗಿಯೇ ಪರಿಣಮಿಸಿದಂತಾಗಿದೆ.”

ರಾಹುವಿನಿಂದ ಮುಕ್ತನಾದ ಚಂದ್ರನಂತೆ–ತನ್ನ ಬಾಯಿಂದ ಹೊರ ಬಂದು ಆಕಾಶದಲ್ಲಿ ಪ್ರಕಾಶಮಾನನಾಗಿ ನಿಂತಿದ್ದ ಮಾರುತಿಯನ್ನು ನೋಡಿ ಸುರಸೆಯು ತನ್ನ ಪೂರ್ವರೂಪವನ್ನು ತಾಳಿ ಹನುಮಂತನಿಗೆ ಹೇಳಿದಳು :

**ಅರ್ಥಸಿದ್ಧ್ಯೈ ಹರಿಶ್ರೇಷ್ಠ ಗಚ್ಛ ಸೌಮ್ಯ ಯಥಾಸುಖಮ್ ।**
**ಸಮಾನಯಸ್ವ ವೈದೇಹೀಂ ರಾಘವೇಣ ಮಹಾತ್ಮನಾ ॥೧೭೦॥**

“ಸೌಮ್ಯನೇ! ಹರಿಶ್ರೇಷ್ಠನೇ! ಕಾರ್ಯಸಿದ್ಧಿಗಾಗಿ ಮುಂದೆ ಸುಖವಾಗಿ ಪ್ರಯಾಣಮಾಡು. ಮಹಾತ್ಮನಾದ ಶ್ರೀರಾಮನೊಡನೆ ಸೀತಾದೇವಿಯನ್ನು ಸೇರಿಸು.”

ಹನುಮಂತನ ಸುದುಷ್ಕರವಾದ ಮೂರನೆಯ ಆ ಸಾಹಸಕಾರ್ಯವನ್ನು ನೋಡಿ ಎಲ್ಲ ಪ್ರಾಣಿಗಳೂ ‘ಸಾಧು ಮಾರುತೇ! ಸಾಧು!’ ಎಂಬುದಾಗಿ ಹೇಳುತ್ತಾ ಪ್ರಶಂಸೆಮಾಡಿದರು.

ಅನಂತರ ಗರುಡಸದೃಶನಾದ ಹನುಮಂತನು ಸಾಮಾನ್ಯರಿಂದ ದಾಟಲು ಅಸಾಧ್ಯವಾದ, ವರುಣದೇವನ ಆಲಯವಾದ ಸಾಗರದ ಮೇಲ್ಭಾಗಕ್ಕೆ

ಜಿಗಿದು ಆಕಾಶವನ್ನು ಸೇರಿ ಸಮುದ್ರದ ದಕ್ಷಿಣತೀರದ ಕಡೆಗೆ ವೇಗವಾಗಿ ಪ್ರಯಾಣವನ್ನು ಮುಂದುವರಿಸಿದನು.

ಹನುಮಂತನು ಪ್ರಯಾಣಮಾಡುತ್ತಿದ್ದ ಆ ವಾಯುಮಾರ್ಗವು ನೀರಿನ ಧಾರೆಗಳಿಂದ ವ್ಯಾಪ್ತವಾಗಿದ್ದು ನಾನಾವಿಧವಾದ ಪಕ್ಷಿಗಳಿಂದ ಸೇವಿಸಲ್ಪಡುತ್ತಿದ್ದಿತು. ಗಾನ-ನೃತ್ಯಾದಿಗಳಿಗೆ ಆಚಾರ್ಯರಾದ ತುಂಬುರು ಮೊದಲಾದ ಗಂಧರ್ವರಿಂದ ತುಂಬಿಹೋಗಿದ್ದಿತು. ಐರಾವತನೆಂಬ ಇಂದ್ರನ ಆನೆಯಿಂದ ಸೇವಿಸಲ್ಪಡುತ್ತಿದ್ದಿತು. ಸಿಂಹ-ಗಜ-ಶಾರ್ದೂಲ-ಪಕ್ಷಿ-ಸರ್ಪ– ಇವೇ ಮೊದಲಾದ ದೇವತೆಗಳ ವಾಹನಗಳಿಂದಲೂ, ಹಾರಾಡುತ್ತಿರುವ ನಿರ್ಮಲವಾದ ವಿಮಾನಗಳಿಂದಲೂ ಸಮಲಂಕೃತವಾಗಿದ್ದಿತು. ವಜ್ರಾಯುಧದ ಪ್ರಹಾರಗಳಿಂದಲೂ ಸಿಡಿಲುಗಳ ಸಿಡಿತಗಳಿಂದಲೂ ಹುಟ್ಟಿದ ಅಗ್ನಿಯಿಂದ ಪ್ರಕಾಶಮಾನವಾಗಿ ಕಾಣುತ್ತಿದ್ದಿತು. ಮಾರುತಿಯು ಪಯಣಿಸುತ್ತಿದ್ದ ವಾಯುಮಾರ್ಗವು ಪುಣ್ಯಮಾಡಿರುವ, ಮಹಾಭಾಗ್ಯಶಾಲಿಗಳಾದ, ಸ್ವರ್ಗವನ್ನು ಜಯಿಸಿರುವ ಮಹಾಪುರುಷರಿಂದ ಆಶ್ರಯಿಸಲ್ಪಟ್ಟಿದ್ದಿತು. ದೇವತೆಗಳ ಸಲುವಾಗಿ ಭಾರವಾದ ಹವಿಸ್ಸನ್ನು ಹೊತ್ತಿರುವ ಹವ್ಯವಾಹನನಿಂದ ಸೇವಿಸಲ್ಪಡುತ್ತಿದ್ದಿತು. ಗ್ರಹ-ನಕ್ಷತ್ರಗಳಿಂದಲೂ, ಸೂರ್ಯ-ಚಂದ್ರರಿಂದಲೂ, ತಾರಾಗಣಗಳಿಂದಲೂ ವಿಭೂಷಿತವಾಗಿದ್ದಿತು. ಮಹರ್ಷಿಗಳ ಸಮೂಹಗಳಿಂದಲೂ ಗಂಧರ್ವ-ನಾಗ-ಯಕ್ಷರಿಂದಲೂ ವ್ಯಾಪ್ತವಾಗಿದ್ದಿತು. ವಿಲಕ್ಷಣವಾಗಿಯೂ, ವಿಶಾಲವಾಗಿಯೂ, ಶುಭ್ರವಾಗಿಯೂ ಇದ್ದಿತು. ವಿಶ್ವಾವಸುವೆಂಬ ಗಂಧರ್ವನಿಂದ ಆಶ್ರಯಿಸಲ್ಪಟ್ಟಿದ್ದಿತು. ದೇವರಾಜನ ಆನೆಗಳಿಂದ ಆಕ್ರಮಿಸಲ್ಪಟ್ಟಿದ್ದಿತು. ಆ ವಾಯುಮಾರ್ಗವು ಚಂದ್ರ-ಸೂರ್ಯರು ಸಂಚರಿಸುವ ಮಾರ್ಗವೂ ಆಗಿದ್ದು ಶುಭಕರವಾಗಿದ್ದಿತು. ಜೀವಲೋಕಕ್ಕೆ ಮೇಲುಚಾವಣಿಯಂತಿದ್ದಿತು. ಬ್ರಹ್ಮನಿಂದಲೇ ನಿರ್ಮಿಸಲ್ಪಟ್ಟಿದ್ದ ಆ ವಾರ್ಯುಮಾರ್ಗವು ಮಲರಹಿತವಾಗಿದ್ದಿತು. ಅನೇಕ ವೀರರಿಂದ ಸೇವಿಸಲ್ಪಡುತ್ತಿದ್ದಿತು. ವಿದ್ಯಾಧರರಿಂದ ವ್ಯಾಪ್ತವಾಗಿದ್ದಿತು. ಅಂತಹ ಮನೋಹರವಾದ ವಾಯುಮಾರ್ಗದಲ್ಲಿ ಗರುಡಪಕ್ಷಿಯಂತೆಯೇ ಹನುಮಂತನು ಹಾರಿಕೊಂಡು ಹೋಗುತ್ತಿದ್ದನು. ತಂದೆಯಾದ ವಾಯುದೇವನಂತೆಯೇ ಆಂಜನೇಯನು ಕಪ್ಪಾಗಿಯೂ, ಬಿಳುಪಾಗಿಯೂ, ಕೆಂಪಾಗಿಯೂ, ಹಳದಿಯಾಗಿಯೂ ಇದ್ದ ಮೇಘಗಳ ಸಮೂಹವನ್ನು

ತನ್ನೊಡನೆ ಸೆಳೆದುಕೊಂಡು ಹೋಗುತ್ತಿದ್ದನು. ಕಪೀಶ್ವರನಿಂದ ಒಯ್ಯಲ್ಪಡುತ್ತಿದ್ದ ಆ ಮೇಘಗಳು ಅತ್ಯಂತಪ್ರಕಾಶಮಾನವಾಗಿ ಕಾಣುತ್ತಿದ್ದುವು. ಕ್ಷಣ-ಕ್ಷಣಕ್ಕೂ ಮೇಘಗಳ ಸಮೂಹಗಳನ್ನು ಪ್ರವೇಶಿಸುತ್ತಾ ಮತ್ತು ಹೊರಬರುತ್ತಾ ಇದ್ದ ಹನುಮಂತನು ವರ್ಷಾಕಾಲದಲ್ಲಿ ಮೋಡಗಳೊಳಗೆ ಪ್ರವೇಶಿಸಿ ಹೊರಬರುವ ಚಂದ್ರನಂತೆಯೇ ಕಾಣುತ್ತಿದ್ದನು. ಎಲ್ಲೆಡೆಗಳಲ್ಲಿಯೂ ಎಲ್ಲರಿಂದಲೂ ನೋಡಲ್ಪಡುತ್ತಿದ್ದ ವಾಯುಪುತ್ರನಾದ ಹನುಮಂತನು ರೆಕ್ಕೆಗಳನ್ನು ಹೊಂದಿರುವ ಪರ್ವತರಾಜನಂತೆ ನಿರಾಲಂಬನಾಗಿ ಆಕಾಶದಲ್ಲಿ ಹಾರಿಕೊಂಡು ಹೋಗುತ್ತಿದ್ದನು. ಹೀಗೆ ಹಾರಿಕೊಂಡು ಸಮುದ್ರದ ದಕ್ಷಿಣತೀರದ ಕಡೆಗೆ ಹೋಗುತ್ತಿದ್ದ ಹನುಮಂತನನ್ನು ಕಾಮರೂಪಿಣಿಯಾಗಿದ್ದ ಬೃಹದಾಕಾರಳಾಗಿದ್ದ ಸಿಂಹಿಕೆಯೆಂಬ ರಾಕ್ಷಸಿಯು ನೋಡಿ ಮನಸ್ಸಿನಲ್ಲಿಯೇ ಹೀಗೆ ಯೋಚಿಸಿದಳು :

**ಅದ್ಯ ದೀರ್ಘಸ್ಯ ಕಾಲಸ್ಯ ಭವಿಷ್ಯಾಮ್ಯಹಮಾಶಿತಾ ।**
**ಇದಂ ಹಿ ಮೇ ಮಹಾಸತ್ತ್ವಂ ಚಿರಸ್ಯ ವಶಮಾಗತಮ್ ॥೧೮೫॥**

"ಬಹಳ ಕಾಲದ ಮೇಲೆ ನನಗಿಂದು ಒಳ್ಳೆಯ ಭೋಜನವು ದೊರಕಿದೆ. ಬಹಳ ಕಾಲಾನಂತರ ಇದೊಂದು ಮಹಾಪ್ರಾಣಿಯು ನನ್ನ ವಶವಾಗುವುದರಲ್ಲಿದೆ."

ಹೀಗೆ ಯೋಚಿಸಿದ ಸಿಂಹಿಕೆಯು ಸಮುದ್ರದ ಮೇಲೆ ಬಿದ್ದಿದ್ದ ಹನುಮಂತನ ನೆಳಲನ್ನು ಹಿಡಿದುಕೊಂಡಳು. ಛಾಯಾಗ್ರಹಣದ ಮೂಲಕವಾಗಿ ಮೂಲವಸ್ತುವನ್ನು ಸ್ವಾಧೀನಪಡಿಸಿಕೊಳ್ಳುವ ಶಕ್ತಿಯನ್ನು ಸಿಂಹಿಕೆಗೆ ಬ್ರಹ್ಮನೇ ದಯಪಾಲಿಸಿದ್ದನು. ಆ ಛಾಯಾಗ್ರಹಣದಿಂದ ನಡೆ ಕುಗ್ಗಿದ ಹನುಮಂತನು ಯೋಚಿಸತೊಡಗಿದನು :

**ಸಮಾಕ್ಷಿಪ್ತೋಽಸ್ಮಿ ಸಹಸಾ ಪಙ್ಗೂಕೃತಪರಾಕ್ರಮಃ ।**
**ಪ್ರತಿಲೋಮೇನ ವಾತೇನ ಮಹಾನೌರಿವ ಸಾಗರೇ ॥೧೮೭॥**

"ಎದುರುಗಾಳಿಯು ಬೀಸಿದಾಗ ಸಮುದ್ರದಲ್ಲಿ ದೊಡ್ಡ ಹಡಗಿನ ವೇಗವೂ ಕಡಿಮೆಯಾಗುವಂತೆ–ನನ್ನ ಪರಾಕ್ರಮವು ಕಡಿಮೆಯಾಗುತ್ತಿದೆ. ನನ್ನನ್ನು ಯಾರೋ ಹಿಂದಕ್ಕೆ ಸೆಳೆದುಕೊಂಡಿದ್ದಾರೆ."

ಹೀಗೆ ಯೋಚಿಸಿ ತನ್ನನ್ನು ಹಿಂದಕ್ಕೆ ಸೆಳೆಯುತ್ತಿರುವ ವ್ಯಕ್ತಿಯು ಯಾರೆಂಬುದನ್ನು ತಿಳಿದುಕೊಳ್ಳಲು ಅಕ್ಕ-ಪಕ್ಕಗಳಲ್ಲಿಯೂ ಮೇಲ್ಭಾಗ-ಕೆಳ ಭಾಗಗಳಲ್ಲಿಯೂ ದೃಷ್ಟಿಯನ್ನು ಹಾಯಿಸಿದನು. ಸಮುದ್ರದ ಕಡೆಗೆ ನೋಡಿದಾಗ ಸಮುದ್ರಮಧ್ಯದಿಂದ ಮೇಲೆದ್ದು ಬಂದ ಮಹಾಪ್ರಾಣಿ ಯೊಂದನ್ನು ವೀಕ್ಷಿಸಿದನು.

ವಿಕಾರವಾದ ಮುಖವನ್ನು ಹೊಂದಿದ್ದ ಆ ಪ್ರಾಣಿಯನ್ನು ನೋಡಿ ಮಾರುತಿಯು ತನ್ನಲ್ಲಿಯೇ ಹೀಗೆ ಚಿಂತಿಸಿದನು :

**ಕಪಿರಾಜೇನ ಕಥಿತಂ ಸತ್ತ್ವಮದ್ಭುತದರ್ಶನಮ್ ।**
**ಛಾಯಾಗ್ರಾಹಿ ಮಹಾವೀರ್ಯಂ ತದಿದಂ ನಾತ್ರ ಸಂಶಯಃ ॥**

'ಕಪಿರಾಜನಾದ ಸುಗ್ರೀವನು ಹೇಳಿದ್ದಂತೆ ಪರಮಾದ್ಭುತವಾಗಿ ಕಾಣುತ್ತಾ, ಮಹಾಶಕ್ತಿಯಿಂದ ಯುಕ್ತವಾಗಿರುವ, ಛಾಯೆಯ ಮೂಲಕ ವಾಗಿಯೇ ಪ್ರಾಣಿಗಳನ್ನು ಸೆಳೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವ ಮಹಾಸತ್ತ್ವವು ಇದೇ ಆಗಿರಬೇಕು. ಇದರಲ್ಲಿ ಸಂಶಯವೇ ಇಲ್ಲ.'*

ಬುದ್ಧಿವಂತನಾದ ಮಹಾಕಾಯನಾದ ಹನುಮಂತನು ಹಿಂದೆ ಸುಗ್ರೀವನು ಹೇಳಿದ್ದನ್ನು ಜ್ಞಾಪಿಸಿಕೊಂಡು, ಅವನು ಹೇಳಿದ್ದಂತೆಯೇ ಛಾಯಾಗ್ರಹಣದ ಮೂಲಕ ತನ್ನ ಗಮನವನ್ನು ನಿರೋಧಿಸಿದ ಕಾರಣ ಆ ಮಹಾಸತ್ತ್ವವನ್ನು ಸಿಂಹಿಕಾ ಎಂಬ ರಾಕ್ಷಸಿಯೆಂದು ನಿಶ್ಚಯಿಸಿ ವರ್ಷಾಕಾಲದ ಮೇಘದಂತೆ ದೇಹವನ್ನು ಹಿಗ್ಗಿಸಿದನು.

ಸಿಂಹಿಕೆಯು ಬೆಳೆಯುತ್ತಿದ್ದ ಮಹಾಕಪಿಯ ಶರೀರವನ್ನು ನೋಡಿ ಪಾತಾಳಾಕಾಶಗಳ ಮಧ್ಯಭಾಗದಷ್ಟು ವಿಶಾಲವಾಗಿ ತನ್ನ ಬಾಯನ್ನು ತೆರೆದು

---

* ಸುಗ್ರೀವನು ದಕ್ಷಿಣದಿಕ್ಕಿನ ಪ್ರದೇಶಗಳನ್ನು ವಾನರನಾಯಕರಿಗೆ ಪರಿಚಯಿಸಿ ಕೊಡುವಾಗ ಹೀಗೆ ಹೇಳುತ್ತಾನೆ :

ದಕ್ಷಿಣಸ್ಯ ಸಮುದ್ರಸ್ಯ ಮಧ್ಯೇ ತಸ್ಯ ತು ರಾಕ್ಷಸೀ ।
ಅಙ್ಗಾರಕೇತಿ ವಿಖ್ಯಾತಾ ಛಾಯಾಮಾಕ್ಷಿಪ್ಯ ಭೋಜನೀ ॥೨೬॥

-ಕಿಷ್ಕಿಂಧಾಕಾಂಡ-ಸರ್ಗ ೪೧

ಆದರೆ ಈ ಪ್ರಕರಣದಲ್ಲಿ ರಾಕ್ಷಸಿಯ ಹೆಸರನ್ನು ಸಿಂಹಿಕಾ ಎಂದು ಹೇಳಲಾಗಿದೆ.

ನಿಂತಳು. ಅಷ್ಟು ವಿಶಾಲವಾಗಿ ಬಾಯ್ದೆರೆದುಕೊಂಡು ಮೇಘಗಳ ಗುಂಪು ಗರ್ಜಿಸುವಂತೆ ಗಟ್ಟಿಯಾಗಿ ಗರ್ಜನೆಮಾಡುತ್ತಾ ಹನುಮಂತನ ಕಡೆಗೆ ಧಾವಿಸಿದಳು. ಆ ಸಮಯದಲ್ಲಿ ಮೇಧಾವಿಯಾದ ಹನುಮಂತನು ದೊಡ್ಡದಾಗಿ ತೆರೆದುಕೊಂಡಿದ್ದ ಅವಳ ವಿಶಾಲವಾದ ಮುಖವನ್ನೂ, ಅವಳ ದೇಹದ ಪ್ರಮಾಣವನ್ನೂ ಮತ್ತು ಮರ್ಮಸ್ಥಳಗಳನ್ನೂ ವೀಕ್ಷಿಸಿದನು. ವಜ್ರದೇಹಿಯಾದ, ಮಹಾಬಲನಾದ ಹನುಮಂತನು ತನ್ನ ಶರೀರವನ್ನು ಕಿರಿದು ಮಾಡಿಕೊಂಡು ವಿಶಾಲವಾಗಿ ತೆರೆದುಕೊಂಡಿದ್ದ ರಾಕ್ಷಸಿಯ ಬಾಯೊಳಗೆ ನುಗ್ಗಿದನು. ಗ್ರಹಣಕಾಲದ ಹುಣ್ಣಿಮೆಗಳಲ್ಲಿ ರಾಹುವಿನಿಂದ ನುಂಗಲ್ಪಡುವ ಚಂದ್ರನಂತೆ–ಸಿಂಹಿಕೆಯ ಬಾಯಲ್ಲಿ ಬಿದ್ದು ಅವಳಿಂದ ನುಂಗಲ್ಪಡುತ್ತಿದ್ದ ಹನುಮಂತನನ್ನು ಸಿದ್ಧ-ಚಾರಣರಾದಿಯಾಗಿ ಎಲ್ಲರೂ ನೋಡುತ್ತಿದ್ದರು. ಹೀಗೆ ಸಿಂಹಿಕೆಯ ಬಾಯೊಳಗೆ ಪ್ರವೇಶಿಸಿದ, ಮನೋವೇಗಕ್ಕೆ ಸಮಾನವಾದ ವೇಗದಿಂದ ಕೂಡಿದ್ದ ಹನುಮಂತನು ತೀಕ್ಷ್ಣವಾದ ಉಗುರುಗಳಿಂದ ಅವಳ ಮರ್ಮಸ್ಥಾನಗಳೆಲ್ಲವನ್ನೂ ಕಿತ್ತುಹಾಕಿ ಅತ್ಯಂತವೇಗದಿಂದ ಎದೆಯನ್ನು ಸೀಳಿಕೊಂಡು ಹೊರಬಂದನು. ಹೀಗೆ ಕಪಿಶ್ರೇಷ್ಠನಾದ ಜಿತೇಂದ್ರಿಯನಾದ ಹನುಮಂತನು ದೈವಾನುಕೂಲ್ಯದಿಂದಲೂ, ಧೈರ್ಯದಿಂದಲೂ ಮತ್ತು ಸಮಯೋಚಿತವಾದ ಚತುರತೆಯಿಂದಲೂ ಸಿಂಹಿಕೆಯನ್ನು ಕೆಳಕ್ಕೆ ಕೆಡವಿ ಸಂಹರಿಸಿ ಪುನಃ ವೃದ್ಧಿಹೊಂದಿದನು. ಹನುಮಂತನು ಎದೆಯನ್ನು ಸೀಳಿಕೊಂಡು ಹೊರಬಂದ ನಂತರ ಸಿಂಹಿಕೆಯು ಆರ್ತನಾದಮಾಡುತ್ತಾ ಸಮುದ್ರದ ನೀರಿನಲ್ಲಿ ಬಿದ್ದುಹೋದಳು. ಅವಳನ್ನು ಕೊಲ್ಲುವ ಸಲುವಾಗಿಯೂ ಬ್ರಹ್ಮನು ಹನುಮಂತನನ್ನು ಸೃಷ್ಟಿಸಿದ್ದನು. ಅಷ್ಟು ಶೀಘ್ರವಾಗಿ ಹನುಮಂತನು ಸಿಂಹಿಕೆಯನ್ನು ಸಂಹರಿಸಿದುದನ್ನು ನೋಡಿ ಆಕಾಶದಲ್ಲಿ ಸಂಚರಿಸುತ್ತಿದ್ದವರೆಲ್ಲರೂ ಏಕಕಂಠದಿಂದ ಮಾರುತಿಗೆ ಹೇಳಿದರು :

**ಭೀಮಮದ್ಯ ಕೃತಂ ಕರ್ಮ ಮಹತ್ಸತ್ತ್ವಂ ತ್ವಯಾ ಹತಮ್ ।**
**ಸಾಧಯಾರ್ಥಮಭಿಪ್ರೇತಮರಿಷ್ಟಂ ಗಚ್ಛ ಮಾರುತೇ ॥೧೯॥**

"ಕಪಿಶ್ರೇಷ್ಠನೇ! ಬಲುದೊಡ್ಡ ಪ್ರಾಣಿಯನ್ನು ಸಂಹರಿಸಿ ಭಯಂಕರವಾದ ಕಾರ್ಯವನ್ನೇ ಮಾಡಿರುವೆ. ಈಗ ನೀನು ಬಯಸಿಬಂದಿರುವ

ಸೀತಾನ್ವೇಷಣೆಯ ಕಾರ್ಯವನ್ನು ಯಾವ ವಿಧವಾದ ಎಡರು-ತೊಡರುಗಳೂ ಇಲ್ಲದೆ ಸಾಧಿಸು.

**ಯಸ್ಯ ತ್ವೇತಾನಿ ಚತ್ವಾರಿ ವಾನರೇನ್ದ್ರ ಯಥಾ ತವ ।**
**ಧೃತಿರ್ದೃಷ್ಟಿರ್ಮತಿರ್ದಾಕ್ಷ್ಯಂ ಸ ಕರ್ಮಸು ನ ಸೀದತಿ ॥೨೦೦॥**

ಯಾವನಿಗೆ ನಿನ್ನಲ್ಲಿರುವಂತೆ ಧೈರ್ಯ, ದೂರದೃಷ್ಟಿ, ಬುದ್ಧಿ ಮತ್ತು ಕಾರ್ಯಕುಶಲತೆ–ಈ ನಾಲ್ಕು ಗುಣಗಳು ಇರುತ್ತವೆಯೋ ಅಂತಹವನ ಯಾವುದೇ ಕಾರ್ಯವೂ ಕೈಗೂಡದೇ ಇರುವುದಿಲ್ಲ."

ಹೀಗೆ ಕಾರ್ಯಸಿದ್ಧಿಯನ್ನು ಪಡೆದ (ಸಿಂಹಿಕೆಯನ್ನು ಸಂಹರಿಸಿದ) ಪೂಜ್ಯನಾದ ಮಾರುತಿಯು ಆಕಾಶಚಾರಿಗಳಿಂದ ಗೌರವಿಸಲ್ಪಟ್ಟವನಾಗಿ ಪುನಃ ವಾಯುಮಾರ್ಗವನ್ನು ಹಿಡಿದು ಗರುಡನಂತೆಯೇ ಹಾರಿಕೊಂಡು ಸಮುದ್ರದ ದಕ್ಷಿಣತೀರದ ಕಡೆಗೆ ಧಾವಿಸಿದನು. ನೂರು ಯೋಜನಗಳಷ್ಟು ಪ್ರಯಾಣಮಾಡಿದನಂತರ 'ದಡವು ಇನ್ನೇನು ಸಿಕ್ಕಿಬಿಟ್ಟಿತು' ಎನ್ನುವಷ್ಟು ಸಮೀಪಕ್ಕೆ ಹೋದ ಹನುಮಂತನು ಎಲ್ಲ ಕಡೆಗಳಲ್ಲಿಯೂ ನೋಡುತ್ತಾ ಅಲ್ಲಿದ್ದ ವನರಾಜಿಯನ್ನು ವೀಕ್ಷಿಸಿದನು. ಆಕಾಶದಿಂದ ಇಳಿಯುತ್ತಿರುವಾಗಲೇ ವಿಧ-ವಿಧವಾದ ವೃಕ್ಷಗಳಿಂದ ಸಮಲಂಕೃತವಾಗಿದ್ದ ಲಂಕಾದ್ವೀಪವನ್ನೂ ಮಲಯಪರ್ವತದ ಉಪವನಗಳನ್ನೂ ನೋಡಿದನು. ಸಮುದ್ರವನ್ನೂ, ಸಮುದ್ರದ ಸಮೀಪದಲ್ಲಿದ್ದ ಜವುಗುಪ್ರದೇಶಗಳನ್ನೂ, ಸಮುದ್ರದ ತೀರ ಪ್ರದೇಶಗಳಲ್ಲಿ ಬೆಳೆದಿದ್ದ ವೃಕ್ಷಗಳನ್ನೂ, ಸಾಗರನ ಪತ್ನಿಯರೆನಿಸಿದ ನದಿಗಳು ಸಮುದ್ರಕ್ಕೆ ಸೇರುವ ಸ್ಥಳಗಳನ್ನೂ ನೋಡಿದನು. ಆಕಾಶವನ್ನೇ ತಡೆಗಟ್ಟು ತ್ತಿರುವುದೋ ಎಂಬಂತೆ ಕಾಣುತ್ತಿದ್ದ, ಮಹಾಮೇಘಸದೃಶವಾಗಿದ್ದ ಆಗಿನ ತನ್ನ ಬೃಹದಾಕಾರದ ಶರೀರವನ್ನು ನೋಡಿಕೊಂಡು ಬುದ್ಧಿವಂತನಾದ ಮತ್ತು ಜಿತೇಂದ್ರಿಯನಾದ ಮಾರುತಿಯು ಹೀಗೆ ನಿಶ್ಚಯಿಸಿದನು :

**ಕಾರ್ಯವೃದ್ಧಿಂ ಪ್ರವೇಗಂ ಚ ಮಮ ದೃಷ್ಟ್ವೈವ ರಾಕ್ಷಸಾಃ ।**
**ಮಯಿ ಕೌತೂಹಲಂ ಕುರ್ಯುರಿತಿ ಮೇನೇ ಮಹಾಮತಿಃ ॥**

'ದೊಡ್ಡದಾಗಿ ಬೆಳೆದಿರುವ ಈ ನನ್ನ ಶರೀರವನ್ನೂ ಮತ್ತು ವೇಗವನ್ನೂ

ನೋಡಿದೊಡನೆಯೇ ಇಲ್ಲಿರುವ ರಾಕ್ಷಸರು  ನನ್ನ ವಿಷಯದಲ್ಲಿ ಕುತೂಹಲ ವುಳ್ಳವರಾಗುತ್ತಾರೆ.

ಆದುದರಿಂದ ಇದೇ ಶರೀರವನ್ನು ಧರಿಸಿ ಲಂಕಾಪಟ್ಟಣವನ್ನು ಪ್ರವೇಶಿ ಸುವುದು ಸೂಕ್ತವಲ್ಲ.'

ಹೀಗೆ ಯೋಚಿಸಿದ ಹನುಮಂತನು–ಜಿತೇಂದ್ರಿಯನಾದ ಯೋಗಿಯು ಮೋಹದಿಂದ ರಹಿತನಾಗಿ ತನ್ನ ಮೂಲಸ್ವರೂಪದಲ್ಲಿ ಸ್ಥಿರನಾಗಿರುವಂತೆ ಪರ್ವತೋಪಮವಾಗಿದ್ದ ತನ್ನ ಶರೀರವನ್ನು ಸಂಕ್ಷೇಪಿಸಿಕೊಂಡು ಆತ್ಮಜ್ಞಾನ ದಿಂದ ಸಂಪನ್ನವಾದ ತನ್ನ ಹಿಂದಿನ ಸಹಜವಾದ ಶರೀರವನ್ನೇ ಹೊಂದಿದನು. ಬಲಿಚಕ್ರವರ್ತಿಯ ಪರಾಕ್ರಮವನ್ನು ಅಪಹರಿಸಿದ ಶ್ರೀಹರಿಯು ತನ್ನ ವಿರಾ ಡ್ರೂಪದಿಂದ ಮೂರು ಹೆಜ್ಜೆಗಳಿಂದ ಅಳೆಯುವುದರ ಮೂಲಕ ಮೂರು ಲೋಕಗಳನ್ನೂ ಬಲಿಚಕ್ರವರ್ತಿಯಿಂದ ಕಿತ್ತುಕೊಂಡನಂತರ ನಿಜಸ್ವರೂಪ ವನ್ನು ಧರಿಸಿದಂತೆ–ದೊಡ್ಡದಾದ ಶರೀರದಿಂದ ನೂರುಯೋಜನ ವಿಸ್ತೀರ್ಣದ ಸಮುದ್ರವನ್ನು ದಾಟಿದನಂತರ ಹನುಮಂತನು ತನ್ನ ಬೃಹದಾಕಾರದ ಶರೀರವನ್ನು ಸಂಕುಚಿಸಿ ನಿಜಸ್ವರೂಪವನ್ನು ತಾಳಿದನು. ಸುಂದರವಾದ ನಾನಾರೂಪಗಳನ್ನು ಧರಿಸುವ ಸಾಮರ್ಥ್ಯವಿದ್ದ ಹನುಮಂತನು ಇತರರಿಂದ ಹೊಂದಲು ಅಶಕ್ಯವಾದ ಸಮುದ್ರದ ದಕ್ಷಿಣತೀರವನ್ನು ಸೇರಿ ದೊಡ್ಡದಾಗಿದ್ದ ತನ್ನ ಶರೀರವನ್ನು ನೋಡಿಕೊಂಡು ಮುಂದೆ ಮಾಡಬೇಕಾಗಿರುವ ಕಾರ್ಯದ ಬಗ್ಗೆ ಸಮಾಲೋಚಿಸಿ ಅತಿದೊಡ್ಡದಾಗಿದ್ದ ತನ್ನ ಆ ರೂಪವನ್ನು ತೊರೆದು ಹಿಂದಿನಂತೆ ಸಹಜವಾದ ರೂಪವನ್ನು ಹೊಂದಿದನು.

ವಿಶಾಲವಾದ ಮೇಘಮಂಡಲಸದೃಶನಾಗಿದ್ದ, ಮಹಾತ್ಮನಾದ ಹನುಮಂತನು ಫಲ-ಪುಷ್ಪಾದಿಗಳಿಂದಲೂ, ಕೇದಗೆ-ಚಳ್ಳೆ-ತೆಂಗು ಇವೇ ಮೊದಲಾದ ವೃಕ್ಷಗಳಿಂದಲೂ ಸಮೃದ್ಧವಾಗಿದ್ದ, ವಿಚಿತ್ರವಾದ ಶಿಖರಗಳನ್ನು ಹೊಂದಿದ್ದ ಲಂಬವೆಂಬ ಪರ್ವತದ ಪ್ರಧಾನಶಿಖರದಲ್ಲಿ ಇಳಿದನು.

ಹನುಮಂತನು ಸಮುದ್ರತೀರಕ್ಕೆ ಬರುತ್ತಲೇ ಶ್ರೇಷ್ಠವಾದ ತ್ರಿಕೂಟ ಪರ್ವತಶಿಖರದಲ್ಲಿದ್ದ ಲಂಕೆಯನ್ನು ನೋಡಿದನು. ತನ್ನ ದೊಡ್ಡದಾದ ರೂಪವನ್ನು ಪರಿತ್ಯಜಿಸಿ  ಪೂರ್ವರೂಪವನ್ನು ಹೊಂದಿ ಮೃಗಗಳನ್ನೂ ಪಕ್ಷಿ

ಗಳನ್ನೂ ಭಯಪಡಿಸುತ್ತಾ ಅದೇ ಪರ್ವತದ ಶಿಖರದಲ್ಲಿ ಇಳಿದನು. ದಾನವರಿಂದಲೂ ಸರ್ಪಗಳಿಂದಲೂ ವ್ಯಾಪ್ತವಾಗಿದ್ದ, ಎತ್ತರವಾದ ಅಲೆಗಳಿಂದ ಕೂಡಿದ್ದ ಸಮುದ್ರವನ್ನು ತನ್ನ ಬಲಾತಿಶಯದಿಂದ ದಾಟಿ ಮಹೋದಧಿಯ ತೀರದಲ್ಲಿಳಿದು (ತೀರಪ್ರದೇಶದಲ್ಲಿದ್ದ ಲಂಬಪರ್ವತದ ಶಿಖರದಲ್ಲಿಳಿದು) ಇಂದ್ರನ ಅಮರಾವತಿಯಂತಿದ್ದ ಲಂಕಾಪಟ್ಟಣವನ್ನು ನೋಡಿದನು.

ಗನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೨ನೆಯ ಸರ್ಗ

## ಲಂಕಾಪಟ್ಟಣದ ವರ್ಣನೆ : ಪಟ್ಟಣವನ್ನು ಪ್ರವೇಶಿಸಲು ಹನುಮಂತನು ಯೋಚಿಸಿದುದು : ಸೂಕ್ಷ್ಮರೂಪವನ್ನು ಧರಿಸಿ ಪಟ್ಟಣಕ್ಕೆ ಪ್ರವೇಶ : ಚಂದ್ರೋದಯದ ವರ್ಣನೆ

**ಸ ಸಾಗರಮನಾಧೃಷ್ಯಮತಿಕ್ರಮ್ಯ ಮಹಾಬಲಃ ।**
**ತ್ರಿಕೂಟಶಿಖರೇ ಲಙ್ಕಾಂ ಸ್ಥಿತಾಂ ಸ್ವಸ್ಥೋ ದದರ್ಶ ಹ ॥೧॥**

ಮಹಾಬಲನಾದ ಹನುಮಂತನು ಎದುರಿಸಲು ಅಸಾಧ್ಯವಾದ, ಸಾಮಾನ್ಯರಿಂದ ದಾಟಲು ಅಸಾಧ್ಯವಾದ ಸಮುದ್ರವನ್ನು ಲಂಘಿಸಿ ಸ್ವಸ್ಥಚಿತ್ತನಾಗಿ ತ್ರಿಕೂಟಪರ್ವತದ ಶಿಖರದಲ್ಲಿದ್ದ ಲಂಕಾಪಟ್ಟಣವನ್ನು ನೋಡಿದನು.

ಹಾಗೆ ನೋಡುತ್ತಾ ನಿಂತಿದ್ದಾಗ ಪರ್ವತದಲ್ಲಿದ್ದ ಪುಷ್ಪವೃಕ್ಷಗಳಿಂದ ಬೀಳುತ್ತಿದ್ದ ಪುಷ್ಪಗಳ ಮಳೆಯೇ ಹನುಮಂತನ ಮೇಲೆ ಸುರಿಯಿತು. ಅದರಿಂದಾಗಿ ಹನುಮಂತನು ಪುಷ್ಪಮಯನಾಗಿರುವಂತೆಯೇ ಪ್ರಕಾಶಿಸಿದನು. ಶ್ರೀಮಂತನಾದ, ಮಹಾಪರಾಕ್ರಮಿಯಾದ ಹನುಮಂತನು ನೂರು ಯೋಜನಗಳನ್ನು ಹಾರಿಕೊಂಡು ಬಂದಿದ್ದರೂ ಆಯಾಸಸೂಚಕವಾದ ನಿಟ್ಟುಸಿರನ್ನು ಬಿಡುತ್ತಿರಲಿಲ್ಲ. ಅವನಿಗೆ ಸ್ವಲ್ಪವೂ ಆಯಾಸವೇ ಆಗಿರಲಿಲ್ಲ. ಸಮುದ್ರವನ್ನು ದಾಟಿದನಂತರ ಹನುಮಂತನ ಮನಸ್ಸಿನಲ್ಲಿ ಈ ಅಭಿಪ್ರಾಯವು ಮೂಡಿತು :

**ಶತಾನ್ಯಹಂ ಯೋಜನಾನಾಂ ಕ್ರಮೇಯಂ ಸುಬಹೂನ್ಯಪಿ ।**
**ಕಿಂ ಪುನಃ ಸಾಗರಸ್ಯಾನ್ತಂ ಸಂಖ್ಯಾತಂ ಶತಯೋಜನಮ್ ॥೪॥**

"ಅನೇಕಶತಯೋಜನಗಳನ್ನಾದರೂ ನಾನು ಲಂಘಿಸಲು ಸಮರ್ಥನಾಗಿರುವೆನು. ಹೀಗಿರುವಾಗ ನೂರು ಯೋಜನಗಳಿರುವ ಈ ಸಮುದ್ರವನ್ನು ದಾಟಿರುವುದರಲ್ಲಿ ವಿಶೇಷವೇನಿದೆ?"

ವೀರ್ಯವಂತರಲ್ಲಿ ಶ್ರೇಷ್ಠನೂ, ಹಾರುವವರಲ್ಲಿ ಉತ್ತಮನೂ, ಮಹಾವೇಗವಂತನೂ ಆದ ಹನುಮಂತನು ಹೀಗೆ ಮಹೋದಧಿಯನ್ನು ಲಂಘಿಸಿ ಲಂಕೆಗೆ ಹೊರಟನು. ಅವನು ಹೋಗುತ್ತಿದ್ದ ವನಪ್ರದೇಶವು ಹಚ್ಚ ಹಸಿರಾದ ಗರಿಕೆಯ ಹುಲ್ಲಿನಿಂದ ವ್ಯಾಪ್ತವಾಗಿದ್ದು, ನೀಲವರ್ಣದ್ದಾಗಿಯೂ ಸುಗಂಧಯುಕ್ತವಾಗಿಯೂ ಇದ್ದಿತು. ಆ ವನದಲ್ಲಿ ಮಧುವಿಶಿಷ್ಟವಾಗಿದ್ದ ವೃಕ್ಷಗಳಿದ್ದುವು. ಅಂತಹ ಸುಂದರವಾದ ಅರಣ್ಯದ ಮಧ್ಯದಲ್ಲಿ ಹನು ಮಂತನು ನಡೆದುಹೋಗುತ್ತಿದ್ದನು. ಹೀಗೆ ಹನುಮಂತನು ವೃಕ್ಷಗಳಿಂದ ತುಂಬಿಹೋಗಿದ್ದ ಪರ್ವತಗಳನ್ನೂ ಸುಪುಷ್ಪಿತವಾದ ಅರಣ್ಯದ ಸಾಲುಗಳನ್ನೂ ದಾಟಿ ಮುಂದೆಹೋದನು. ವಾಯುಪುತ್ರನಾದ ಹನುಮಂತನು ಆ ಪರ್ವತದ ಮೇಲೆ ನಿಂತು ವನಗಳನ್ನೂ, ಉಪವನಗಳನ್ನೂ, ತ್ರಿಕೂಟ ಪರ್ವತದ ಮೇಲ್ಭಾಗದಲ್ಲಿದ್ದ ಲಂಕಾಪಟ್ಟಣವನ್ನೂ ನೋಡಿದನು. ಅಲ್ಲಿಂದಲೇ ಸರಲಕರ್ಣಿಕಾರವೃಕ್ಷಗಳನ್ನೂ, ಪುಷ್ಪಗಳಿಂದ ಯುಕ್ತವಾದ ಖರ್ಜೂರ ವೃಕ್ಷಗಳನ್ನೂ, ಪ್ರಿಯಾಲ, ಮುಚುಲಿಂದ, ಕುಟಜ (ಬೆಟ್ಟದಮಲ್ಲಿಗೆ), ಕೇದಗೆ ವೃಕ್ಷಗಳನ್ನೂ, ಸುಗಂಧಯುಕ್ತವಾದ ಪ್ರೇಂಖಣ ಗಿಡಗಳನ್ನೂ, ಕದಂಬ, ಸಪ್ತಗುಚ್ಛ (ಏಳೆಲೆ ಬಾಳೆ), ಹೊನ್ನೆ, ಕೋವಿದಾರ ವೃಕ್ಷಗಳನ್ನೂ, ಸುಪುಷ್ಪಿತ ವಾದ ಕರವೀರ (ಕಣಗಿಲೆ) ವೃಕ್ಷಗಳನ್ನೂ, ನಾನಾಬಗೆಯ ಹೂವಿನ ಗಿಡಗಳನ್ನೂ ನೋಡಿದನು. ಪುಷ್ಪಭಾರದಿಂದ ಬಗ್ಗಿದ ಮತ್ತು ಮೊಗ್ಗುಗಳಿಂದ ಕೂಡಿದ, ಪಕ್ಷಿಗಳಿಂದ ವ್ಯಾಪ್ತವಾಗಿದ್ದ, ಗಾಳಿಯಿಂದ ಬಗ್ಗಿದ್ದ ಅಗ್ರಭಾಗ ಗಳುಳ್ಳ, ನಾನಾವಿಧವಾದ ವೃಕ್ಷಗಳನ್ನೂ ನೋಡಿದನು. ಹಂಸ-ಕಾರಂಡವ ಪಕ್ಷಿಗಳಿಂದಲೂ ಸಾವಿರಾರು ಕಮಲಗಳಿಂದಲೂ ಸುಶೋಭಿಸುತ್ತಿದ್ದ ಅನೇಕ ಸರೋವರಗಳನ್ನೂ, ವಿಧ-ವಿಧವಾದ ಕ್ರೀಡಾಸ್ಥಾನಗಳನ್ನೂ, ಜಲಾಶಯ ಗಳನ್ನೂ ನೋಡಿದನು. ಸುತ್ತಲೂ ಹಚ್ಚಹಸಿರಾಗಿದ್ದ ಪ್ರದೇಶಗಳನ್ನೂ, ಸರ್ವರ್ತುಗಳಲ್ಲಿಯೂ ಫಲ-ಪುಷ್ಪಗಳಿಂದ ತುಂಬಿರುತ್ತಿದ್ದ, ನಾನಾವಿಧವಾದ ವೃಕ್ಷಗಳಿಂದ ನಿಬಿಡವಾಗಿದ್ದ ರಮ್ಯವಾದ ಉದ್ಯಾನವನಗಳನ್ನೂ ವೀಕ್ಷಿಸಿದನು.

ಕಾಂತಿಯುಕ್ತನಾಗಿದ್ದ ಹನುಮಂತನು ಇನ್ನೂ ಮುಂದೆ ಹೋಗಿ ಕಮಲಗಳಿಂದಲೂ ಕನ್ನೈದಿಲೆಗಳಿಂದಲೂ ಸಮಲಂಕೃತವಾಗಿದ್ದ, ಕಂದಕಗಳಿಂದ ಸುತ್ತುವರಿಯಲ್ಪಟ್ಟಿದ್ದ ಮತ್ತು ರಾವಣನಿಂದ ಪರಿಪಾಲಿಸಲ್ಪಡುತ್ತಿದ್ದ ಲಂಕಾಪಟ್ಟಣವನ್ನು ನೋಡಿದನು. ಸೀತಾದೇವಿಯನ್ನು ಅಪಹರಿಸಿ ತಂದು ಲಂಕೆಯಲ್ಲಿಟ್ಟಿದ್ದ ಕಾರಣ–ಭಯಂಕರವಾದ ಧನುಸ್ಸುಗಳನ್ನು ಹಿಡಿದು ಸುತ್ತಲೂ ತಿರುಗಾಡುತ್ತಿದ್ದ, ರಾವಣನಿಂದ ನಿಯುಕ್ತರಾದ ರಾಕ್ಷಸರಿಂದ ನಿರಂತರವಾಗಿ ರಕ್ಷಿಸಲ್ಪಡುತ್ತಿದ್ದ ಲಂಕಾಪಟ್ಟಣವನ್ನು ಹನುಮಂತನು ವೀಕ್ಷಿಸಿದನು. ಸುವರ್ಣಮಯವಾದ ಪ್ರಾಕಾರದಿಂದ ಸಮಾವೃತವಾಗಿದ್ದ, ಮಹಾಪುರಿಯಾದ ಆ ಲಂಕಾಪಟ್ಟಣದಲ್ಲಿ ಶರತ್ಕಾಲದ ಮೇಘಗಳಂತೆ ಮತ್ತು ಪರ್ವತಗಳಂತೆ ಅತಿದೊಡ್ಡದಾದ ಸೌಧಗಳಿದ್ದುವು. ಬಿಳುಪಾಗಿ ಕಾಣುತ್ತಿದ್ದ ಉದ್ದುದ್ದವಾದ ರಾಜಬೀದಿಗಳಿದ್ದುವು. ಆ ಪಟ್ಟಣವು ನೂರಾರು ಉಪ್ಪರಿಗೆ ಮನೆಗಳಿಂದ ಸಮಲಂಕೃತವಾಗಿದ್ದಿತು. ಎಲ್ಲೆಡೆಗಳಲ್ಲಿಯೂ ಪತಾಕೆಗಳೂ ಧ್ವಜಗಳೂ ಹಾರಾಡುತ್ತಿದ್ದುವು. ಅಂತಹ ಸುಂದರವಾದ ಲಂಕಾಪಟ್ಟಣವನ್ನು ಹನುಮಂತನು ನೋಡಿದನು. ಆ ಲಂಕಾಪಟ್ಟಣವು ಸುವರ್ಣಮಯವಾದ ಮತ್ತು ದಿವ್ಯವಾದ ತೋರಣಗಳಿಂದ ಶೋಭಾಯಮಾನವಾಗಿ ಕಾಣುತ್ತಿದ್ದಿತು. ವಿಚಿತ್ರವಾದ ಲತೆಗಳ ಸಾಲುಗಳಿಂದ ಕೂಡಿ ಸುಮನೋಹರವಾಗಿದ್ದಿತು. ವಾಸ್ತವವಾಗಿ ಸ್ವರ್ಗದ ಅಮರಾವತಿಯಂತೆಯೇ ಕಾಣುತ್ತಿದ್ದಿತು. ತ್ರಿಕೂಟಪರ್ವತದ ಶಿಖರದಲ್ಲಿದ್ದ ಶುಭಾವಹವಾದ, ಬಿಳಿಯ ಬಣ್ಣದ ಸೌಧಗಳಿಂದ ಸಮಾಕುಲವಾಗಿದ್ದ, ಆಕಾಶನಗರಿಯಂತೆಯೇ ಕಾಣುತ್ತಿದ್ದ ಸುಂದರವಾದ ಲಂಕಾಪಟ್ಟಣವನ್ನು ಹನುಮಂತನು ನೋಡಿದನು. ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿದ್ದ ಆ ಪಟ್ಟಣವು ರಾಕ್ಷಸೇಂದ್ರನಾದ ರಾವಣನಿಂದ ಪರಿಪಾಲಿಸಲ್ಪಡುತ್ತಿದ್ದು ಆಕಾಶದಲ್ಲಿ ತೇಲುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು.

ಆ ಲಂಕಾಪಟ್ಟಣಕ್ಕೆ ಇಳಕಲುಪ್ರದೇಶಗಳಿಂದ ಕೂಡಿರುವ ಗೋಡೆಗಳೇ ಕಟಿಪ್ರದೇಶವಾಗಿದ್ದಿತು. ಸಾಗರ ಮತ್ತು ವನೋಪವನಗಳೇ ವಸ್ತ್ರರೂಪದಲ್ಲಿದ್ದುವು. ಶತಘ್ನೀ ಮತ್ತು ಶೂಲಗಳು ತಲೆಗೂದಲಿನ ತುದಿಗಳಂತಿದ್ದುವು. ಉಪ್ಪರಿಗೆಗಳು ಕರ್ಣಾಭರಣಗಳಂತಿದ್ದುವು. ವಿಶ್ವಕರ್ಮನ ಮನಸ್ಸಂಕಲ್ಪದಿಂದಲೇ ಅದು ನಿರ್ಮಿತವಾಗಿದ್ದಿತು. ಹನುಮಂತನು ಅಂತಹ ಲಂಕಾ

ಪಟ್ಟಣದ ಉತ್ತರದಿಕ್ಕಿನ ಮಹಾದ್ವಾರವನ್ನು ಸೇರಿ ವೈದೇಹಿಯನ್ನು ನೋಡುವುದು ಹೇಗೆಂಬ ಬಗೆಗೆ ಯೋಚಿಸತೊಡಗಿದನು.

ಲಂಕೆಯು ಕೈಲಾಸಶಿಖರಕ್ಕೆ ಸಮಾನವಾಗಿದ್ದು ಆಕಾಶದಲ್ಲಿ ರೇಖೆಯನ್ನೇನಾದರೂ ಎಳೆಯುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಎತ್ತರ ವಾಗಿದ್ದ ಶ್ರೇಷ್ಠಭವನಗಳನ್ನು ಹೊಂದಿದ್ದು ಆಕಾಶವನ್ನೇ ಎತ್ತಿಕೊಂಡು ಹೋಗುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಭೋಗವತಿಯು ಸರ್ಪಗಳಿಂದ ತುಂಬಿರುವಂತೆ–ಲಂಕಾಪಟ್ಟಣವು ಘೋರರೂಪಿಗಳಾದ ರಾಕ್ಷಸರಿಂದ ನಿಬಿಡವಾಗಿದ್ದಿತು. ಅದು ವಿಶ್ವಕರ್ಮನಿಂದ ಸುಂದರವಾಗಿ ನಿರ್ಮಿಸಲ್ಪಟ್ಟಿದ್ದು ಊಹೆಗೂ ನಿಲುಕದಷ್ಟು ಚೆಲುವಾಗಿದ್ದಿತು. ಹಿಂದೆ ಆ ಪಟ್ಟಣವು ಕುಬೇರನ ವಾಸಸ್ಥಾನವಾಗಿದ್ದಿತು. ವಿಷಸರ್ಪಗಳು ಗುಹೆಯನ್ನು ರಕ್ಷಿಸುವಂತೆ ಶೂಲ-ಪಟ್ಟಿಶಪಾಣಿಗಳಾದ, ಕೋರೆದಾಡೆಗಳುಳ್ಳ, ಶೂರರಾದ, ಘೋರರೂಪಿಗಳಾದ ರಾಕ್ಷಸರು ಆ ಪಟ್ಟಣವನ್ನು ರಕ್ಷಿಸುತ್ತಿದ್ದರು. ಅಂತಹ ಸುಭದ್ರವಾದ ರಕ್ಷಣೆಯನ್ನೂ ಪಟ್ಟಣದ ಸುತ್ತಲೂ ಇದ್ದ ಸಾಗರವನ್ನೂ ವೀಕ್ಷಿಸುತ್ತಾ ಹನುಮಂತನು ಘೋರರೂಪನಾದ ರಾವಣನು ಶತ್ರುವಾಗಿರುವನೆಂಬುದನ್ನೂ ಗಮನಿಸಿ ಸೀತಾದೇವಿಯನ್ನು ಹುಡುಕುವುದು ಹೇಗೆಂದು ಚಿಂತಿಸತೊಡಗಿದನು.

**ಆಗತ್ಯಾಪೀಹ ಹರಯೋ ಭವಿಷ್ಯನ್ತಿ ನಿರರ್ಥಕಾಃ ।**
**ನ ಹಿ ಯುದ್ಧೇನ ವೈ ಲಙ್ಕಾ ಶಕ್ಯಾ ಜೇತುಂ ಸುರೈರಪಿ ॥೨೭॥**

"ಒಂದು ವೇಳೆ ಕಪಿವೀರರು ಕಷ್ಟಪಟ್ಟುಕೊಂಡು ಇಲ್ಲಿಗೆ ಬಂದರೂ ಪ್ರಯೋಜನವಿಲ್ಲದವರಾಗುತ್ತಾರೆ. ಯುದ್ಧಮಾಡಿ ಲಂಕೆಯನ್ನು ಗೆಲ್ಲಲು ದೇವತೆಗಳಿಂದಲೂ ಸಾಧ್ಯವಾಗಲಾರದು.

ಈ ನಗರಿಯು ಸಮತಟ್ಟಾದ ಸ್ಥಾನದಲ್ಲಿದೆ. ಅತ್ಯಂತದುರ್ಗಮ ವಾಗಿದೆ. ಮಹಾವೀರನಾದ ರಾವಣನೇ ಇದನ್ನು ರಕ್ಷಿಸುತ್ತಿದ್ದಾನೆ. ಇಂತಹ ಅಭೇದ್ಯವಾದ ಅತ್ಯಂತದುರ್ಗಮವಾದ ಸ್ಥಳಕ್ಕೆ ಬಂದರೂ ಮಹಾಬಾಹು ವಾದ ಶ್ರೀರಾಮನು ಏನು ತಾನೇ ಮಾಡಬಲ್ಲನು?

**ಅವಕಾಶೋ ನ ಸಾನ್ತ್ವಸ್ಯ ರಾಕ್ಷಸೇಷ್ವಭಿಗಮ್ಯತೇ ।**
**ನ ದಾನಸ್ಯ ನ ಭೇದಸ್ಯ ನೈವ ಯುದ್ಧಸ್ಯ ದೃಶ್ಯತೇ ॥೨೯॥**

ಈ ರಾಕ್ಷಸರಲ್ಲಿ ಸಾಮೋಪಾಯಕ್ಕಾಗಲೀ ದಾನ-ಭೇದೋಪಾಯ ಗಳಿಗಾಗಲೀ ಅವಕಾಶವೇ ಇಲ್ಲ. ಯುದ್ಧಮಾಡಿ ಇವರನ್ನು ಗೆಲ್ಲುವುದಂತೂ ಸಾಧ್ಯವಾಗದ ವಿಷಯ.

**ಚತುರ್ಣಾಮೇವ ಹಿ ಗತಿರ್ವಾನರಾಣಾಂ ತರಸ್ವಿನಾಮ್ ।**
**ವಾಲಿಪುತ್ರಸ್ಯ ನೀಲಸ್ಯ ಮಮ ರಾಜ್ಞಶ್ಚ ಧೀಮತಃ ॥೩೦॥**

ವೇಗವಂತರಾದ ನಾಲ್ವರು ಕಪೀಶ್ವರರು ಮಾತ್ರವೇ ಇಲ್ಲಿಗೆ ಬರಬಲ್ಲರು. ವಾಲಿಯ ಮಗನಾದ ಅಂಗದ, ನೀಲ, ನಮ್ಮ ರಾಜನಾದ ಧೀಮಂತನಾದ ಸುಗ್ರೀವ ಮತ್ತು ನಾನು. ಈ ನಾಲ್ವರಿಗೆ ಮಾತ್ರವೇ ಇಲ್ಲಿಗೆ ಬರಲು ಸಾಧ್ಯವಾಗುತ್ತದೆ. ಆದುದರಿಂದ ಸೈನ್ಯವನ್ನು ಇಲ್ಲಿಗೆ ಕರೆತರುವ ಸಾಧ್ಯತೆಯೇ ಇಲ್ಲ.

ಹೇಗಾದರೂ ಮಾಡಿ ವೈದೇಹಿಯು ಜೀವಿಸಿರುವಳೇ? ಇಲ್ಲವೇ?-ಎಂಬುದನ್ನು ಮೊದಲು ತಿಳಿಯುವೆನು. ಅವಳನ್ನು ಕಂಡ ಬಳಿಕ ಮುಂದೇನು ಮಾಡಬೇಕೆಂಬುದನ್ನು ಅವಳೊಡನೆಯೇ ಆಲೋಚಿಸುವೆನು."

ಬಳಿಕ ಶ್ರೀರಾಮನ ಅಭ್ಯುದಯದಲ್ಲಿಯೇ ನಿರತನಾಗಿದ್ದ, ಪರ್ವತ ಶಿಖರದಲ್ಲಿ ನಿಂತಿದ್ದ ಕಪಿಶ್ರೇಷ್ಠನಾದ ಹನುಮಂತನು ಮುಹೂರ್ತಕಾಲದ ವರೆಗೆ ನಾನಾರೀತಿಯಲ್ಲಿ ಯೋಚಿಸುತ್ತಲೇ ಇದ್ದನು.

"ಮಹಾಕ್ರೂರಿಗಳಾದ, ಬಲಿಷ್ಠರಾದ ರಾಕ್ಷಸರಿಂದ ರಕ್ಷಿಸಲ್ಪಡುತ್ತಿರುವ ರಾಕ್ಷಸರ ಈ ಪಟ್ಟಣವನ್ನು ಈಗ ನಾನು ಧರಿಸಿರುವ ಆಕಾರದಿಂದಲೇ ಪ್ರವೇಶಿಸಲು ಸಾಧ್ಯವಾಗುವುದಿಲ್ಲ. ಜಾನಕಿಯನ್ನು ಹುಡುಕಲು ಹೊರಟಿ ರುವ ನಾನು ಭಯಂಕರವಾದ ತೇಜಸ್ಸಿನಿಂದ ಕೂಡಿರುವ, ಮಹಾವೀರ್ಯ ರಾದ, ಬಲಿಷ್ಠರಾದ ರಾಕ್ಷಸರನ್ನು ವಂಚಿಸಲೇಬೇಕಾಗುತ್ತದೆ. ಕಂಡೂ-ಕಾಣ ದಂತಹ ರೂಪವನ್ನು ಧರಿಸಿದರೆ ರಾತ್ರಿಯಲ್ಲಿ ಲಂಕಾಪಟ್ಟಣವನ್ನು ಪ್ರವೇಶಿಸಲು ಸಾಧ್ಯವಾಗಬಹುದು. ಸೀತಾನ್ವೇಷಣೆಯ ಮಹಾಕಾರ್ಯವನ್ನು ಸಾಧಿಸಲು ರಾತ್ರಿಯೇ ಸಕಾಲವಾಗಿದೆ."

ಸುರಾಸುರರಿಂದಲೂ ಜಯಿಸಲು ಅಸಾಧ್ಯವಾಗಿದ್ದ ಅತ್ಯಂತದುರ್ಭೇದ್ಯ

ವಾಗಿದ್ದ ಲಂಕಾಪಟ್ಟಣವನ್ನು ನೋಡಿ ಹನುಮಂತನು ಬಾರಿ-ಬಾರಿಗೂ ನಿಟ್ಟುಸಿರುಬಿಡುತ್ತಾ ಹೀಗೆ ಯೋಚಿಸುತ್ತಲೇ ಇದ್ದನು.



**ಕೇನೋಪಾಯೇನ ಪಶ್ಯೇಯಂ ಮೈಥಿಲೀಂ ಜನಕಾತ್ಮಜಾಮ್ ।**
**ಅದೃಷ್ಟೋ ರಾಕ್ಷಸೇನ್ದ್ರೇಣ ರಾವಣೇನ ದುರಾತ್ಮನಾ ॥೩೭॥**

"ದುರಾತ್ಮನಾದ, ರಾಕ್ಷಸೇಂದ್ರನಾದ ರಾವಣನ ಕಣ್ಣಿಗೆ ಬೀಳದಂತೆ ಜನಕನ ಮಗಳಾದ ಜಾನಕಿಯನ್ನು ನಾನು ಯಾವ ಉಪಾಯದಿಂದ ಹುಡುಕಲಿ?

**ನ ವಿನಶ್ಯೇತ್ಕಥಂ ಕಾರ್ಯಂ ರಾಮಸ್ಯ ವಿದಿತಾತ್ಮನಃ ।**
**ಏಕಾಮೇಕಸ್ತು ಪಶ್ಯೇಯಂ ರಹಿತೇ ಜನಕಾತ್ಮಜಾಮ್ ॥೩೮॥**

ಆತ್ಮವಿದನಾದ ಶ್ರೀರಾಮನ ಕಾರ್ಯವು ಕೆಟ್ಟುಹೋಗದ ರೀತಿಯಲ್ಲಿ ನಾನು ಹೇಗೆ ನಡೆದುಕೊಳ್ಳಲಿ? ನಾನೊಬ್ಬನೇ ಏಕಾಂತದಲ್ಲಿ ಜನಕನ ಮಗಳಾದ ಸೀತೆಯೊಬ್ಬಳನ್ನೇ ಹೇಗೆ ಸಂಧಿಸಲಿ?

**ಭೂತಾಶ್ಚಾರ್ಥಾ ವಿಪದ್ಯನ್ತೇ ದೇಶಕಾಲವಿರೋಧಿತಾಃ ।**
**ವಿಕ್ಲವಂ ದೂತಮಾಸಾದ್ಯ ತಮಃ ಸೂರ್ಯೋದಯೇ ಯಥಾ ॥**

ಸೂರ್ಯೋದಯವಾದೊಡನೆಯೇ ವಿನಾಶಹೊಂದಿದ ಕತ್ತಲೆಯಂತೆ ವಿವೇಚನಾರಹಿತನಾದ ದೂತನಿಗೊಪ್ಪಿಸಿದ ಕಾರ್ಯಗಳು–ಸಿದ್ಧಿಸುವುದರಲ್ಲಿದ್ದರೂ ದೇಶ-ಕಾಲಕ್ಕೆ ವಿಪರೀತವಾಗಿ ವ್ಯವಹರಿಸುವ ಕಾರಣದಿಂದಾಗಿ ಹಾಳಾಗುತ್ತವೆ.*

**ಅರ್ಥಾನರ್ಥಾನ್ತರೇ ಬುದ್ಧಿರ್ನಿಶ್ಚಿತಾಪಿ ನ ಶೋಭತೇ ।**
**ಘಾತಯನ್ತಿ ಹಿ ಕಾರ್ಯಾಣಿ ದೂತಾಃ ಪಣ್ಡಿತಮಾನಿನಃ ॥೪೦॥**

ಕಾರ್ಯಾಕಾರ್ಯಗಳ ವಿಷಯದಲ್ಲಿ ರಾಜನು ಮಂತ್ರಿಗಳೊಡನೆ ಸಮಾಲೋಚಿಸಿ ನಿರ್ಣಯಿಸಿದ ಬುದ್ಧಿಯೂ (ಬುದ್ಧಿವಾದವೂ) ಅವಿವೇಕಿಯಾದ ದೂತನಲ್ಲಿ ಶೋಭಿಸುವುದಿಲ್ಲ. (ಪರಿಣಾಮಕಾರಿಯಾಗುವುದಿಲ್ಲ.) ತಾವೇ ಮಹಾಪಂಡಿತರೆಂದು ಭಾವಿಸಿ ಸ್ವೇಚ್ಛೆಯಿಂದ ಕಾರ್ಯಮಾಡುವ ದೂತರು ಸ್ವಾಮಿಯ ಕಾರ್ಯವನ್ನು ಹಾಳುಮಾಡುತ್ತಾರೆ.[1]

---

* ವಿಕ್ಲವಃ = ಕಕ್ಕಾಬಿಕ್ಕಿಯಾದ, ಕಳವಳಗೊಂಡ, ಅಧೀರನಾದ, ವಿಮರ್ಶೆಯಿಲ್ಲದೇ ಕಾರ್ಯಮಾಡುವವ–ಎಂದು ವ್ಯಾಖ್ಯಾನಕಾರರು ವಿವರಣೆಯನ್ನು ಕೊಟ್ಟಿರುತ್ತಾರೆ. ಕಾರ್ಯಗಳು ಸಿದ್ಧಿಸುವುದರಲ್ಲಿದ್ದರೂ ವಿವೇಚನಾರಹಿತನಾದ ದೂತನಿಂದ ಹಾಳಾಗುವುದುಂಟು. ಕಳವಳಗೊಂಡ ದೂತನು ದೇಶ-ಕಾಲಗಳಿಗೆ ವಿರುದ್ಧವಾದ ಕಾರ್ಯವನ್ನು ಮಾಡುವುದರಿಂದ ಸಿದ್ಧಿಸಲಿದ್ದ ಕಾರ್ಯವೂ ಹಾಳಾಗಲು ಕಾರಣವಾಗುತ್ತದೆ. ದೇಶಕಾಲಾನುಗುಣವಾಗಿ ಕಾರ್ಯಮಾಡದಿದ್ದರೆ ಸೂರ್ಯೋದಯವಾದೊಡನೆಯೇ ಎಷ್ಟು ಬೇಗ ಕತ್ತಲು ನಾಶವಾಗುವುದೋ ಅಷ್ಟೇ ಬೇಗ ಕೆಲಸವು ಕೆಟ್ಟುಹೋಗುತ್ತದೆ. ಇದು ತಾತ್ಪರ್ಯ.

1 ಅರ್ಥಾನರ್ಥಾನ್ತರಃ : ಅರ್ಥಃ = ಕಾರ್ಯ, ಅನರ್ಥಃ = ಅಕಾರ್ಯ, ಅಂತರ = ವಿಷಯ. ಕಾರ್ಯಾಕಾರ್ಯಗಳ ವಿಷಯವನ್ನು ರಾಜನು ಅಮಾತ್ಯರೊಡನೆ ಸೇರಿ ಹೀಗೆಯೇ ಮಾಡಬೇಕೆಂದು ನಿಶ್ಚಯಿಸಿ ಕಾರ್ಯವನ್ನು ಯಥಾನುರೂಪವಾಗಿ ಪೂರ್ಣ

**ನ ವಿನಶ್ಯೇತ್ಕಥಂ ಕಾರ್ಯಂ ವೈಕ್ಲವ್ಯಂ ನ ಕಥಂ ಭವೇತ್ ।**
**ಲಙ್ಘನಂ ಚ ಸಮುದ್ರಸ್ಯ ಕಥಂ ನು ನ ಭವೇದ್ವೃಥಾ ॥೪೧॥**

ಯಾವ ರೀತಿಯಲ್ಲಿ ವರ್ತಿಸಿದರೆ ಶ್ರೀರಾಮನ ಕಾರ್ಯವು ಹಾಳಾಗುವುದಿಲ್ಲ? ಇಂತಹ ಸಂದರ್ಭದಲ್ಲಿ ನನಗೆ ಭ್ರಮೆಯುಂಟಾಗದಿರುವುದು ಹೇಗೆ? ನಾನು ಸಮುದ್ರವನ್ನು ದಾಟಿ ಬಂದುದು ವ್ಯರ್ಥವಾಗದಿರುವುದು ಹೇಗೆ?

ನನ್ನನ್ನೇನಾದರೂ ರಾಕ್ಷಸರು ನೋಡಿಬಿಟ್ಟರೆ ರಾವಣನ ವಿನಾಶವನ್ನೇ ಬಯಸಿರುವ ಶ್ರೀರಾಮನ ಸೀತಾನ್ವೇಷಣೆಯ ಕಾರ್ಯವೇ ವ್ಯರ್ಥವಾಗಿ ಹೋಗುತ್ತದೆ. ರಾಕ್ಷಸರಿಗೆ ತಿಳಿಯದಂತೆ ಈ ಲಂಕಾಪಟ್ಟಣದ ಯಾವ ಕಡೆಯಲ್ಲಿಯೂ ಇರಲು ಸಾಧ್ಯವೇ ಇಲ್ಲ. ರಾಕ್ಷಸರ ರೂಪವನ್ನೇ ಧರಿಸಿದರೂ ಇಲ್ಲಿರಲು ಸಾಧ್ಯವಾಗುವುದಿಲ್ಲವೆಂದ ಮೇಲೆ ಬೇರೆಯ ರೂಪದಿಂದ ನಾನಿಲ್ಲಿರಲು ಹೇಗೆ ತಾನೇ ಸಾಧ್ಯವಾಗುತ್ತದೆ? ಇಲ್ಲಿ ವಾಯುವು ಕೂಡ ತಿಳಿಯದಂತೆ ಚಲಿಸಲು ಸಾಧ್ಯವಿಲ್ಲ. ಈ ಲಂಕಾಪಟ್ಟಣದಲ್ಲಿರುವ ಭಯಂಕರರಾದ ರಾಕ್ಷಸರಿಗೆ ತಿಳಿಯದೇ ಇರುವ ವಸ್ತುವೇ ಯಾವುದೂ ಇಲ್ಲ. ಆದುದರಿಂದ ನಾನು ಈ ನನ್ನ ರೂಪದಿಂದಲೇ ಇದ್ದರೆ ಖಂಡಿತವಾಗಿಯೂ ವಿನಾಶ ಹೊಂದುತ್ತೇನೆ. ಸ್ವಾಮಿಯ ಕಾರ್ಯವೂ ಹಾಳಾಗುತ್ತದೆ. ಆದುದರಿಂದ ಈ ರಾತ್ರಿಯಲ್ಲಿ ಚಿಕ್ಕದಾದ ಆಕಾರವನ್ನು ತಳೆದು ಈ ಕಪಿರೂಪದಿಂದಲೇ ಶ್ರೀರಾಮನ ಕಾರ್ಯಸಿದ್ಧಿಗಾಗಿ ಲಂಕೆಯನ್ನು ಪ್ರವೇಶಿಸುತ್ತೇನೆ. ಯಾರಿಂದಲೂ ಪ್ರವೇಶಿಸಲು ಅಶಕ್ಯವಾದ ರಾವಣನ ಈ ಪಟ್ಟಣವನ್ನು ನಾನು ರಾತ್ರಿಯಲ್ಲಿ ಪ್ರವೇಶಿಸಿ ಸೀತೆಯನ್ನು ಹುಡುಕುತ್ತಾ ಇಲ್ಲಿರುವ ಎಲ್ಲ ಸೌಧಗಳನ್ನೂ ಒಳಹೊಕ್ಕು ನೋಡುತ್ತೇನೆ."

ವೀರನಾದ, ಕಪಿಶ್ರೇಷ್ಠನಾದ ಹನುಮಂತನು ಹೀಗೆ ನಿಶ್ಚಯಿಸಿ ವೈದೇಹಿಯನ್ನು ನೋಡಬೇಕೆನ್ನುವ ಉತ್ಸುಕತೆಯಿಂದ ಸೂರ್ಯನು ಅಸ್ತನಾಗುವು

---

ಗೊಳಿಸಲು ದೂತರನ್ನು ಕಳುಹಿಸುತ್ತಾನೆ. ದೂತರು ಬುದ್ಧಿವಂತರಾದರೆ ರಾಜರು ಹೇಳಿರುವ ರೀತಿಯಲ್ಲಿಯೇ ನಡೆದು ಕಾರ್ಯವನ್ನು ಪೂರ್ಣಗೊಳಿಸುತ್ತಾರೆ. ಸಂದರ್ಭವನ್ನು ನೋಡಿ ಅಧೀರರಾಗಿಬಿಟ್ಟರೆ ರಾಜರ ಬುದ್ಧಿನಿಶ್ಚಯವೂ ಅಂತಹ ದೂತರಲ್ಲಿ ಶೋಭಿಸುವುದಿಲ್ಲ. ನಿಷ್ಪ್ರಯೋಜಕವಾಗುತ್ತದೆ.

ದನ್ನೇ ನಿರೀಕ್ಷಿಸುತ್ತಿದ್ದನು. ಸೂರ್ಯನು ಅಸ್ತಮಿಸಲು ಮಾರುತಿಯು ಆ ರಾತ್ರಿಯಲ್ಲಿ ತನ್ನ ದೇಹವನ್ನು ಸಂಕ್ಷೇಪಿಸಿಕೊಂಡು ಬೆಕ್ಕಿನಷ್ಟು ಗಾತ್ರ ದವನಾದನು. ಅಷ್ಟು ಚಿಕ್ಕವನಾಗಿದ್ದರೂ ಪರಮಾದ್ಭುತವಾಗಿ ಕಾಣುತ್ತಿದ್ದನು.*

ಪ್ರದೋಷಕಾಲವಾಗುತ್ತಲೇ ವೀರ್ಯವಂತನಾದ ಹನುಮಂತನು ಶೀಘ್ರವಾಗಿ ಮೇಲಕ್ಕೆ ಹಾರಿ ಚೆನ್ನಾಗಿ ವಿಂಗಡಿಸಲ್ಪಟ್ಟಿರುವ ರಾಜಮಾರ್ಗ ಗಳುಳ್ಳ ಲಂಕಾಪಟ್ಟಣವನ್ನು ಪ್ರವೇಶಿಸಿದನು.

ಆ ಲಂಕಾಪಟ್ಟಣದಲ್ಲಿ ಪ್ರಾಸಾದಗಳು ಸಾಲುಸಾಲಾಗಿದ್ದುವು. ಪ್ರತಿ ಯೊಂದು ಪ್ರಾಸಾದದಲ್ಲಿಯೂ ಏಳೆಂಟು ಉಪ್ಪರಿಗೆಗಳಿದ್ದುವು. ಆ ಪ್ರಾಸಾದ ಗಳು ಚಿನ್ನದ ಮತ್ತು ಬೆಳ್ಳಿಯ ಕಂಬಗಳಿಂದಲೂ ಸುವರ್ಣಮಯವಾದ ಜಾಲರಿಗಳಿಂದಲೂ ಸಮಲಂಕೃತವಾಗಿದ್ದುವು. ಅಂತಹ ಸುಂದರವಾದ ಪ್ರಾಸಾದಗಳಿಂದ ಪರಿಪೂರ್ಣವಾಗಿದ್ದು ಗಂಧರ್ವನಗರದಂತೆಯೇ ಕಾಣು ತ್ತಿದ್ದಿತು. ಅಲ್ಲಿದ್ದ ಮಹಾಸೌಧಗಳ ಹೊರಾಂಗಣಗಳು ಸ್ಫಟಿಕದ ಮಣಿ ಗಳಿಂದಲೂ ಚಿನ್ನದಿಂದಲೂ ವ್ಯಾಪ್ತವಾಗಿದ್ದುವು. ವೈಡೂರ್ಯಮಣಿಗಳಿಂದ ಚಿತ್ರಿತವಾಗಿದ್ದುವು. ಮುತ್ತಿನ ಜಾಲರಿಗಳಿಂದ ವಿಭೂಷಿತವಾಗಿದ್ದುವು. ಅಷ್ಟು ಸುಂದರವಾದ ಹೊರಪ್ರದೇಶಗಳಿಂದ ಕೂಡಿದ್ದ ರಾಕ್ಷಸರ ಭವನಗಳು ಬಹಳವಾಗಿ ಶೋಭಿಸುತ್ತಿದ್ದುವು. ರಾಕ್ಷಸರ ಸೌಧಗಳಲ್ಲಿದ್ದ ಎಲ್ಲ ಕಡೆ ಗಳಲ್ಲಿಯೂ ಅಲಂಕರಿಸಲ್ಪಟ್ಟಿದ್ದ ಸುವರ್ಣಮಯವಾದ ಮತ್ತು ವಿಚಿತ್ರವಾದ ಮುಂಬಾಗಿಲುಗಳು ಲಂಕಾಪಟ್ಟಣವನ್ನೇ ಬೆಳಗುತ್ತಿದ್ದುವು. ಮಹಾಕಪಿ ಯಾದ ಹನುಮಂತನು ಯೋಚಿಸಲೂ ಅಶಕ್ಯವಾದಷ್ಟು ಅದ್ಭುತವಾಗಿದ್ದ ಲಂಕಾಪಟ್ಟಣವನ್ನು ನೋಡಿ ವಿಷಣ್ಣನೂ ವೈದೇಹಿಯನ್ನು ಕಾಣುವುದರಲ್ಲಿ ಉತ್ಸುಕನೂ ಮತ್ತು ಪ್ರಹೃಷ್ಟನೂ ಆಗಿದ್ದನು.

ಲಂಕಾಪಟ್ಟಣವು ಏಳೆಂಟು ಉಪ್ಪರಿಗೆಗಳಿಂದ ಕೂಡಿದ್ದು ಮತ್ತು ಬಿಳು ಪಾಗಿದ್ದ ಭವನಗಳ ಸಾಲುಗಳಿಂದ ಯುಕ್ತವಾಗಿದ್ದಿತು. ಸುವರ್ಣಮಯವಾದ

---

* ವೃಷದಂಶಕಃ = ಬೆಕ್ಕು. ವೃಷಾನ್ ಮೂಷಿಕಾನ್ ದಶತೀತಿ ವೃಷದಂಶಕಃ ಇಲಿ ಗಳನ್ನು ಕಚ್ಚಿ ತಿನ್ನುವುದರಿಂದ ವೃಷದಂಶಕ. ವೃಷೋ ಗವಯಾಖುಧರ್ಮಯೋಃ ವೃಷ ಶಬ್ದಕ್ಕೆ ಗೋವು, ಇಲಿ ಮತ್ತು ಧರ್ಮ–ಎಂಬ ಮೂರು ಅರ್ಥಗಳಿವೆ. ( ಹೇಮಾದ್ರಿ )

ತೋರಣಗಳಿಂದಲೂ ಜಾಲರಿಗಳಿಂದಲೂ ಸಮಲಂಕೃತವಾಗಿದ್ದಿತು. ಭೀಮ ಬಲರಾದ ರಾಕ್ಷಸರಿಂದ ಸಮಾವೃತವಾಗಿದ್ದಿತು. ರಾವಣೇಶ್ವರನ ಭುಜಬಲ ದಿಂದ ರಕ್ಷಿಸಲ್ಪಡುತ್ತಿದ್ದಿತು. ಅಂತಹ ರಾವಣನ ಯಶೋವರ್ಧಕವಾದ ಲಂಕಾಪಟ್ಟಣವನ್ನು ಹನುಮಂತನು ನೋಡಿದನು. ನಕ್ಷತ್ರಗಳ ಸಮೂಹ ಗಳೊಡನೆ ಹುಟ್ಟಿ ಅವುಗಳ ಮಧ್ಯದಲ್ಲಿ ವಿರಾಜಿಸುತ್ತಿದ್ದ ಅನೇಕ ಸಹಸ್ರ ರಶ್ಮಿಗ್ರಳಿಂದ ಯುಕ್ತನಾಗಿದ್ದ ಚಂದ್ರನು ಕೂಡ ಹನುಮಂತನಿಗೆ ಸಹಾಯ ಮಾಡುವ ಇಚ್ಛೆಯಿಂದಲೋ ಎಂಬಂತೆ ಎಲ್ಲೆಡೆಯಲ್ಲಿಯೂ ಬೆಳದಿಂಗಳನ್ನು ಹೊರಚೆಲ್ಲುತ್ತಾ ಉದಯಿಸಿದನು. ಆಗ ತಾನೇ ಉದಯಿಸಿದ್ದ ಚಂದ್ರನು ಶಂಖದ ಪ್ರಭೆಯಂತೆ ಪ್ರಭೆಯುಳ್ಳವನಾಗಿದ್ದನು. ಹಾಲಿನ ಮತ್ತು ತಾವರೇದಂಟಿನ ಬಣ್ಣದಿಂದ ಪ್ರಕಾಶಿಸುತ್ತಿದ್ದನು. ಸರೋವರದಲ್ಲಿ ಹಂಸ ಪಕ್ಷಿಯು ತೇಲಿಕೊಂಡು ಹೋಗುವಂತೆ ನಿರ್ಮಲವಾದ ಆಕಾಶದಲ್ಲಿ ತೇಲಿ ಕೊಂಡು ಹೋಗುತ್ತಿದ್ದನು. ಅಂತಹ ನಯನಮನೋಹರನಾದ ಚಂದ್ರನನ್ನು ಹನುಮಂತನು ನೋಡಿದನು.

೨ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೩ನೆಯ ಸರ್ಗ

## ಲಂಕಾಪಟ್ಟಣವನ್ನು ನೋಡಿ ಹನುಮಂತನು ವಿಸ್ಮಿತನಾದುದು : ಲಂಕೆಯನ್ನು ಪ್ರವೇಶಿಸುತ್ತಿದ್ದಾಗ ಲಂಕೆಯ ಅಧಿದೇವತೆಯು ಹನುಮಂತನನ್ನು ತಡೆದುದು : ಹನುಮಂತನಿಂದ ಪೆಟ್ಟುತಿಂದು ಅವನು ಲಂಕೆಯನ್ನು ಪ್ರವೇಶಿಸಲು ಅನುಮತಿಸಿದುದು

ಸ ಲಮ್ಬಶಿಖರೇ ಲಮ್ಬೇ ಲಮ್ಬತೋಯದಸಂನಿಭೇ ।
ಸತ್ತ್ವಮಾಸ್ಥಾಯ ಮೇಧಾವೀ ಹನುಮಾನ್ಮಾರುತಾತ್ಮಜಃ ॥೧॥
ನಿಶಿ ಲಙ್ಕಾಂ ಮಹಾಸತ್ತ್ವೋ ವಿವೇಶ ಕಪಿಕುಞ್ಜರಃ ।
ರಮ್ಯಕಾನನತೋಯಾಢ್ಯಾಂ ಪುರೀಂ ರಾವಣಪಾಲಿತಾಮ್ ॥೨॥

ಜೋಲಾಡುತ್ತಿರುವ ಮೇಘದೋಪಾದಿಯಲ್ಲಿದ್ದ ವಿಸ್ತೀರ್ಣವಾಗಿದ್ದ ಲಂಬ (ತ್ರಿಕೂಟ) ಪರ್ವತದ ಶಿಖರದಲ್ಲಿ ಮೇಧಾವಿಯಾದ, ಮಹಾಸತ್ತ್ವ

ನಾದ, ವಾಯುಪುತ್ರನಾದ ಹನುಮಂತನು ತನ್ನ ಬಲವನ್ನೇ ಆಶ್ರಯಿಸಿ ರಮ್ಯವಾದ ಅರಣ್ಯಗಳಿಂದ ಸಮಾವೃತವಾಗಿದ್ದ, ಜಲಸಮೃದ್ಧಿಯಿಂದ ಕೂಡಿದ್ದ, ರಾವಣನಿಂದ ಪರಿಪಾಲಿತವಾಗಿದ್ದ ಲಂಕಾಪಟ್ಟಣವನ್ನು ರಾತ್ರಿಯಲ್ಲಿ ಪ್ರವೇಶಿಸಿದನು.

ಲಂಕಾಪಟ್ಟಣವು ಶರತ್ಕಾಲದ ಮೇಘಗಳಂತಿದ್ದ ಶ್ವೇತಭವನಗಳಿಂದ ಶೋಭಾಯಮಾನವಾಗಿದ್ದಿತು. ಸಾಗರದಂತೆ ಶಬ್ದಾಯಮಾನವಾಗಿದ್ದಿತು. ಸಮುದ್ರದ ಮೇಲಿಂದ ಬೀಸುವ ಗಾಳಿಯಿಂದ ಸೇವಿಸಲ್ಪಡುತ್ತಿದ್ದಿತು. ಅಲ್ಲಿ ಪುಷ್ಟರಾದ ಸೈನಿಕರ ಜಯಘೋಷಗಳು ಕೇಳಿಬರುತ್ತಿದ್ದುವು. ಸುಂದರವಾದ ತೋರಣಗಳಿಂದ ಕೂಡಿದ ಗೋಪುರಗಳಿದ್ದುವು. ಮಹಾದ್ವಾರದಲ್ಲಿ ಬಿಳುಪಾದ ತೋರಣವನ್ನು ಹೊಂದಿದ್ದು ಅಲಕಾಪುರಿಗೆ ಸಮಾನವಾಗಿದ್ದ ಲಂಕಾಪಟ್ಟಣವನ್ನು ಹನುಮಂತನು ಸುತ್ತಲೂ ನೋಡಿದನು. ಸರ್ಪಗಳ ಸಂಚಾರವುಳ್ಳ ಮತ್ತು ಸರ್ಪಗಳ ಪಟ್ಟಣವಾದ ಭೋಗವತಿಯಂತೆಯೇ ಲಂಕಾಪಟ್ಟಣವು ರಾಕ್ಷಸರಿಂದ ರಕ್ಷಿಸಲ್ಪಡುತ್ತಿದ್ದಿತು. ಆ ಸಮಯದಲ್ಲಿ ಲಂಕಾಪಟ್ಟಣವು ಮಿಂಚಿನಿಂದ ಕೂಡಿದ ಮೇಘಗಳಿಂದ ಸಮಾವೃತವಾಗಿದ್ದಿತು. ದೀಪಗಳ ಸಮೂಹಗಳಿಂದ ಕಂಗೊಳಿಸುತ್ತಿದ್ದು ಶೋಭಾಯಮಾನವಾಗಿ ಕಾಣುತ್ತಿದ್ದಿತು. ಆ ಪಟ್ಟಣದಲ್ಲಿ ಇಂದ್ರನ ಅಮರಾವತಿಯಲ್ಲಿ ಹೇಗೋ ಹಾಗೆ ಮಾರುತನು ಮಂದವಾಗಿ ಬೀಸುತ್ತಿದ್ದನು. ಸುವರ್ಣಮಯವಾದ ಮಹಾಪ್ರಾಕಾರದಿಂದ ಆ ಲಂಕಾಪಟ್ಟಣವು ಸುತ್ತುವರಿಯಲ್ಪಟ್ಟಿದ್ದಿತು. ಶಬ್ದಮಾಡುತ್ತಿದ್ದ ಚಿಕ್ಕ ಚಿಕ್ಕ ಗಂಟೆಗಳಿಂದ ಕೂಡಿದ್ದ ಪತಾಕೆಗಳಿಂದ ಸಮಲಂಕೃತವಾಗಿದ್ದಿತು. ಅಂತಹ ಲಂಕಾಪಟ್ಟಣದ ಪ್ರಾಕಾರವನ್ನು ಹನುಮಂತನು ಪರಮಹೃಷ್ಟನಾಗಿ ಸೇರಿದನು.

ಹನುಮಂತನು ನಗರದ ಎಲ್ಲ ಭಾಗಗಳನ್ನೂ ನೋಡಿ ಅತ್ಯಂತ ವಿಸ್ಮಿತನಾದನು. ಅಲ್ಲಿಯ ಸೌಧಗಳ ಬಾಗಿಲುಗಳೆಲ್ಲವೂ ಸುವರ್ಣಮಯವಾಗಿದ್ದುವು. ವೈಡೂರ್ಯದಿಂದಲೇ ನಿರ್ಮಿತವಾದ ಜಗುಲಿಗಳಿದ್ದುವು. ವಜ್ರಗಳಿಂದಲೂ, ಸ್ಫಟಿಕಗಳಿಂದಲೂ, ಮುತ್ತುಗಳಿಂದಲೂ ಮತ್ತು ಮಣಿಗಳಿಂದಲೂ ಕೂಡಿದ ನೆಲಗಳಿಂದ ಸಮಲಂಕೃತವಾಗಿದ್ದುವು. ಸೌಧಗಳು ಸುವರ್ಣಮಯವಾದ ಗೋಪುರಗಳಿಂದ ಕೂಡಿದ್ದು ಪರಿಶುದ್ಧವಾದ ಬೆಳ್ಳಿಯಂತೆ ಬಿಳುಪಾಗಿದ್ದುವು.

ವೈಡೂರ್ಯದಿಂದಲೇ ನಿರ್ಮಿತವಾದ ಸೋಪಾನಗಳಿಂದ (ಮಹಡಿ ಮೆಟ್ಟಿಲುಗಳಿಂದ) ಕೂಡಿದ್ದುವು. ಸ್ಫಟಿಕಮಯವಾದ ಧೂಳುಳ್ಳ ಒಳ ಅಂಗಣಗಳಿಂದ ಯುಕ್ತವಾಗಿದ್ದುವು. ರಮಣೀಯವಾದ ಚತುಃಶಾಲಗಳಿಂದ (ಸಭಾಭವನಗಳಿಂದ) ಪರಿಶೋಭಿಸುತ್ತಿದ್ದುವು. ಅವುಗಳು ಹೆಚ್ಚು ಎತ್ತರ ವಾಗಿದ್ದು ಆಕಾಶಕ್ಕೆ ಹೋಗುತ್ತಿವೆಯೋ ಎಂಬಂತೆ ಕಾಣುತ್ತಿದ್ದುವು. ಶುಭಾವಹಗಳಾಗಿದ್ದುವು. ಅಂತಹ ಅತಿಸುಂದರವಾದ ಭವನಗಳಿಂದ ವ್ಯಾಪ್ತ ವಾಗಿದ್ದ ಲಂಕಾಪಟ್ಟಣವನ್ನು ಹನುಮಂತನು ನೋಡಿ ನೋಡಿ ಅಚ್ಚರಿ ಗೊಂಡನು. ಅಲ್ಲಿದ್ದ ಉದ್ಯಾನವನಗಳಲ್ಲಿ ಕ್ರೌಂಚಗಳೂ ನವಿಲುಗಳೂ ನಿನಾದಮಾಡುತ್ತಿದ್ದುವು. ಸರೋವರಗಳಲ್ಲಿ ರಾಜಹಂಸಗಳು ವಾಸಮಾಡು ತ್ತಿದ್ದುವು. ಮಂಗಳವಾದ್ಯಗಳ ಘೋಷಗಳೂ ಆಭರಣಗಳ ಕಿಣಿ-ಕಿಣಿಧ್ವನಿ ಗಳೂ ನಗರದ ಎಲ್ಲ ಕಡೆಗಳಿಂದಲೂ ಕೇಳಿಬರುತ್ತಿದ್ದುವು. ಕುಬೇರನ ಅಲಕಾಪಟ್ಟಣಕ್ಕೆ ಸಮಾನವಾಗಿ ಶೋಭಿಸುತ್ತಾ ತ್ರಿಕೂಟಪರ್ವತದ ಶಿಖರ ದಲ್ಲಿದ್ದುದರಿಂದ ಆ ಪಟ್ಟಣವು ಆಕಾಶಕ್ಕೆ ಹಾರಲು ಸಿದ್ಧವಾಗಿರುವುದೋ ಎಂಬಂತೆ ಎದ್ದುಕಾಣುತ್ತಿದ್ದಿತು. ಅಂತಹ ಅತ್ಯಂತಸುಂದರವಾದ ಲಂಕಾ ಪಟ್ಟಣವನ್ನು ನೋಡಿ ಹನುಮಂತನು ಆನಂದಿಸಿದನು.

ಲಂಕೆಯು ಸರ್ವಶ್ರೇಷ್ಠವಾದ ಪಟ್ಟಣವಾಗಿದ್ದಿತು. ಸಕಲಸಂಪತ್ತಿ ನಿಂದಲೂ ಸಮೃದ್ಧವಾಗಿದ್ದಿತು. ಶುಭಾವಹವಾಗಿದ್ದಿತು. ರಾಕ್ಷಸರಿಗೆ ಅಧಿಪತಿ ಯಾದ ರಾವಣನ ಆ ಪಟ್ಟಣವನ್ನು ನೋಡಿ ಹನುಮಂತನು ಚಿಂತಿಸ ತೊಡಗಿದನು :

**ನೇಯಮನ್ಯೇನ ನಗರೀ ಶಕ್ಯಾ ಧರ್ಷಯಿತುಂ ಬಲಾತ್ ।**
**ರಕ್ಷಿತಾ ರಾವಣಬಲೈರುದ್ಯತಾಯುಧಧಾರಿಭಿಃ ॥೧೪॥**

“ಆಯುಧಗಳನ್ನು ಮೇಲೆತ್ತಿ ಹಿಡಿದು ಯುದ್ಧಕ್ಕೆ ಸಜ್ಜಾಗಿ ನಿಂತಿರುವ ರಾವಣನ ಸೈನಿಕರಿಂದ ಸರ್ವಕಾಲದಲ್ಲಿಯೂ ರಕ್ಷಿಸಲ್ಪಡುತ್ತಿರುವ ಈ ಲಂಕಾ ಪಟ್ಟಣವನ್ನು ಬೇರೆ ಯಾರಿಂದಲೂ ಬಲಪೂರ್ವಕವಾಗಿ ಆಕ್ರಮಿಸಲು ಸಾಧ್ಯವಾಗುವುದಿಲ್ಲ.

**ಕುಮುದಾಙ್ಗದಯೋರ್ವಾಪಿ ಸುಷೇಣಸ್ಯ ಮಹಾಕಪೇಃ ।**
**ಪ್ರಸಿದ್ಧೇಯಂ ಭವೇದ್ಭೂಮಿರ್ಮೈನ್ದದ್ವಿವಿದಯೋರಪಿ ॥೧೫॥**

**ವಿವಸ್ವತಸ್ತನೂಜಸ್ಯ ಹರೇಶ್ಚ ಕುಶಪರ್ವಣಃ ।**
**ಋಕ್ಷಸ್ಯ ಕೇತುಮಾಲಸ್ಯ ಮಮ ಚೈವ ಗತಿರ್ಭವೇತ್ ॥೧೬॥**

ವಿಖ್ಯಾತವಾದ ಈ ಭೂಭಾಗವನ್ನು ಕುಮುದ, ಅಂಗದ, ಮೈಂದ, ದ್ವಿವಿದ, ಸೂರ್ಯಪುತ್ರನಾದ ಸುಗ್ರೀವ, ಕುಶಪರ್ವ, ಜಾಂಬವಂತ, ಕೇತುಮಾಲಿ ಮತ್ತು ನಾನು–ಇಷ್ಟು ಮಂದಿಗೆ ಮಾತ್ರ ಪ್ರವೇಶಿಸಲು ಸಾಧ್ಯವಾಗಬಹುದು."*

ಬಳಿಕ ಹನುಮಂತನು ಸ್ವಲ್ಪಹೊತ್ತು ಹಾಗೆಯೇ ಯೋಚಿಸುತ್ತಿದ್ದು ಮಹಾಬಾಹುವಾದ ಶ್ರೀರಾಮನ ಮತ್ತು ಲಕ್ಷ್ಮಣನ ಅತುಲಪರಾಕ್ರಮಗಳನ್ನು ನೆನೆದು ಪ್ರಸನ್ನಚಿತ್ತನಾದನು.

ಆ ಸಮಯದಲ್ಲಿ ಲಂಕಾಪಟ್ಟಣವು ಹನುಮಂತನಿಗೆ ಕ್ಷಣಕಾಲ ವಸ್ತ್ರಾದಿ ಭೂಷಣಗಳಿಂದ ಅಲಂಕೃತಳಾದ ಸುಂದರಯುವತಿಯಂತೆಯೇ ಕಂಡಿತು. ರತ್ನಮಯವಾದ ಕೋಟೆಯು ಲಂಕಾಸುಂದರಿಯ ವಸ್ತ್ರವಾಗಿ ಕಂಡಿತು. ಗಗನಚುಂಬಿಯಾದ ಸಭಾಭವನಗಳೇ ಸುಂದರಿಯ ಶಿರೋಭೂಷಣಗಳಂತಿದ್ದುವು. ಪ್ರಾಕಾರಗಳ ಮೇಲಿದ್ದ ಯಂತ್ರಾಗಾರಗಳೇ ಯುವತಿಯ ಸ್ತನಗಳ ರೂಪದಲ್ಲಿದ್ದುವು. ಕಡುಚೆಲುವೆಯಾದ ಲಂಕಾಯುವತಿಯು ದೊಡ್ಡ- ದೊಡ್ಡ ಸೌಧಗಳ ಪ್ರಕಾಶಮಾನವಾದ ದೀಪಗಳಿಂದ ಕತ್ತಲೆಯನ್ನು ದೂರ ಮಾಡಿ ದೇದೀಪ್ಯಮಾನಳಾಗಿ ಬೆಳಗುತ್ತಿದ್ದಳು. ರಾಕ್ಷಸೇಂದ್ರನ ಮಡದಿಯಾದ ಅಂತಹ ಲಂಕಾಯುವತಿಯನ್ನು ಹನುಮಂತನು ನೋಡಿದನು.

ಸುಂದರವಾದ ಲಂಕಾನಗರಿಯ ಸೊಬಗನ್ನು ನೋಡುತ್ತಾ ಪ್ರವೇಶಿಸುವುದರಲ್ಲಿದ್ದ ಮಹಾಬಲನಾದ ಹನುಮಂತನನ್ನು ಲಂಕಾಪಟ್ಟಣದ ಅಧಿದೇವತೆಯು ನೋಡಿದಳು. ಆಗ ಅವಳು ನಿಜಸ್ವರೂಪವನ್ನು ಧರಿಸಿದ್ದಳು.

---

* ಈ ಹಿಂದೆ ಹನುಮಂತನು ಎರಡನೆಯ ಸರ್ಗದ ೩೦ನೆಯ ಶ್ಲೋಕದಲ್ಲಿ **'ಚತುರ್ಣಾಮೇವ ಹಿ ಗತಿಃ'** ನಾಲ್ವರಿಗೆ ಮಾತ್ರ ಪ್ರವೇಶಿಸಲು ಸಾಧ್ಯವಾಗುವುದೆಂದು ಹೇಳಿ ತನ್ನ ಜೊತೆಗೆ ಅಂಗದ, ನೀಲ, ಸುಗ್ರೀವರನ್ನು ಹೆಸರಿಸಿದ್ದನು. ಇಲ್ಲಿ ನೀಲನ ಹೆಸರಿಲ್ಲ. ತನ್ನನ್ನೂ ಸೇರಿಸಿಕೊಂಡು ಇಲ್ಲಿ ಒಂಭತ್ತು ಮಂದಿಯನ್ನು ಹೆಸರಿಸಿದ್ದಾನೆ. 'ಬಹಳ ದೀರ್ಘವಾಗಿ ಯೋಚಿಸಿದನಂತರ ಹನುಮಂತನಿಗೆ ಇನ್ನೂ ಕೆಲವರ ಪರಾಕ್ರಮದ ನೆನಪಾಗಿ ಅವರ ಶುಭನಾಮಗಳನ್ನು ಇಲ್ಲಿ ಸೇರಿಸಿ ಹೇಳಿದ್ದಾನೆಂದು ಭಾವಿಸ

ಹನುಮಂತನನ್ನು ನೋಡುತ್ತಲೇ ಇಷ್ಟಬಂದ ರೂಪವನ್ನು ಧರಿಸುವ ಲಂಕಾಧಿದೇವತೆಯು ವಿಕಾರವಾದ ಮುಖವುಳ್ಳ ರೂಪವನ್ನು ಧರಿಸಿ ತಾನಾಗಿಯೇ ಎದ್ದು ನಿಂತಳು. ಬಳಿಕ ವೀರನಾದ ವಾಯುಕುಮಾರನ ಬಳಿಗೆ ಹೋಗಿ ಎದುರಾಗಿ ನಿಂತು ಗಟ್ಟಿಯಾಗಿ ಗರ್ಜನೆಮಾಡುತ್ತಾ ಹೇಳಿದಳು :

**ಕಸ್ತ್ವಂ ಕೇನ ಚ ಕಾರ್ಯೇಣ ಇಹ ಪ್ರಾಪ್ತೋ ವನಾಲಯ ।**
**ಕಥಯಸ್ವೇಹ ಯತ್ತತ್ತ್ವಂ ಯಾವತ್ಪ್ರಾಣಾನ್ಧರಿಷ್ಯಸಿ ॥೨೩॥**

"ವನಚರನೇ! ನೀನು ಯಾರು? ಯಾವ ಕಾರ್ಯಕ್ಕಾಗಿ ಇಲ್ಲಿಗೆ ಬಂದಿರುವೆ? ಜೀವವಿರುವಾಗಲೇ (ನನ್ನ ಪ್ರಹಾರದಿಂದ ನಿನ್ನ ಪ್ರಾಣಗಳು ಹೋಗುವುದರೊಳಗಾಗಿ) ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಹೇಳು.

**ನ ಶಕ್ಯಾ ಖಲ್ವಿಯಂ ಲಙ್ಕಾ ಪ್ರವೇಷ್ಟುಂ ವಾನರ ತ್ವಯಾ ।**
**ರಕ್ಷಿತಾ ರಾವಣಬಲೈರಭಿಗುಪ್ತಾ ಸಮನ್ತತಃ ॥೨೪॥**

ರಾವಣನ ಸೈನಿಕರಿಂದ ಸುತ್ತಲೂ ಸಂರಕ್ಷಿಸಲ್ಪಡುತ್ತಿರುವ ಈ ಲಂಕಾ ಪಟ್ಟಣವನ್ನು ಪ್ರವೇಶಿಸಲು ನಿನ್ನಿಂದ ಸಾಧ್ಯವಿಲ್ಲ"

ಲಂಕಾಧಿದೇವತೆಯ ಆ ಮಾತನ್ನು ಕೇಳಿ ಹನುಮಂತನು ಯಥೋಚಿತವಾಗಿ ಉತ್ತರಿಸಿದನು :

"ಭಯಂಕರಸ್ವರೂಪಳೇ! ನೀನು ಕೇಳಿರುವ ಎಲ್ಲ ಪ್ರಶ್ನೆಗಳಿಗೂ ನಾನು ಯಥಾವತ್ತಾಗಿಯೇ ಉತ್ತರಿಸುವೆನು. ಆದರೆ ಮೊದಲು ನೀನಾರೆಂಬುದನ್ನು ನನಗೆ ಹೇಳಬೇಕು.

**ಕಾ ತ್ವಂ ವಿರೂಪನಯನಾ ಪುರದ್ವಾರೇಽವತಿಷ್ಠಸೇ ।**
**ಕಿಮರ್ಥಂ ಚಾಪಿ ಮಾಂ ರುದ್ಧ್ವಾ ನಿರ್ಭರ್ತ್ಸಯಸಿ ದಾರುಣಮ್ ॥**

ವಿಕಾರವಾದ ಕಣ್ಣುಗಳನ್ನು ಹೊಂದಿರುವ ನೀನು ಯಾರು? ಏತಕ್ಕಾಗಿ

---

ಬಹುದಾಗಿದೆ. ನೀಲನ ಹೆಸರನ್ನು ಇಲ್ಲಿ ಹೇಳದಿದ್ದರೂ ಅದು ಅನುವರ್ತಿತವಾಗುವುದೆಂದು ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ. ಕುಶಪರ್ವ ಎಂಬುದು ಜಾಂಬವಂತನಿಗೆ ವಿಶೇಷಣ ಎಂದು ಕೆಲವರ ಅಭಿಪ್ರಾಯ. ಕುಶಪರ್ವಸದೃಶರೋಮವಂತಃ ದರ್ಭೆಯಂತಹ ಕೂದಲುಗಳುಳ್ಳವನು : ಜಾಂಬವಂತ.

ಪಟ್ಟಣದ ಹೆಬ್ಬಾಗಿಲಿನಲ್ಲಿ ನಿಂತಿರುವೆ? ಭಯಂಕರಸ್ವರೂಪಳೇ! ಯಾವ ಕಾರಣದಿಂದ ನೀನು ನನ್ನನ್ನು ತಡೆದು ಭಯಪಡಿಸುತ್ತಿರುವೆ?"

ಕಾಮರೂಪಿಣಿಯಾದ ಲಂಕಾಧಿದೇವತೆಯು ಹನುಮಂತನ ಮಾತನ್ನು ಕೇಳಿ ಕೋಪದಿಂದ ಕಿಡಿಕಿಡಿಯಾದಳು. ವಾಯುಪುತ್ರನನ್ನು ಕುರಿತು ಅತಿ ಕಠೋರವಾದ ಈ ಮಾತನ್ನು ಹೇಳಿದಳು :

**ಅಹಂ ರಾಕ್ಷಸರಾಜಸ್ಯ ರಾವಣಸ್ಯ ಮಹಾತ್ಮನಃ ।**
**ಆಜ್ಞಾಪ್ರತೀಕ್ಷಾ ದುರ್ಧರ್ಷಾ ರಕ್ಷಾಮಿ ನಗರೀಮಿಮಾಮ್ ॥೨೮॥**

**ನ ಶಕ್ಯಾ ಮಾಮವಜ್ಞಾಯ ಪ್ರವೇಷ್ಟುಂ ನಗರೀ ತ್ವಯಾ ।**
**ಅದ್ಯ ಪ್ರಾಣೈಃ ಪರಿತ್ಯಕ್ತಃ ಸ್ವಪ್ಸ್ಯಸೇ ನಿಹತೋ ಮಯಾ ॥೨೯॥**

**ಅಹಂ ಹಿ ನಗರೀ ಲಙ್ಕಾ ಸ್ವಯಮೇವ ಪ್ಲವಙ್ಗಮ ।**
**ಸರ್ವತಃ ಪರಿರಕ್ಷಾಮಿ ಹ್ಯೇತತ್ತೇ ಕಥಿತಂ ಮಯಾ ॥೩೦॥**

"ಇತರರಿಂದ ಎದುರಿಸಲು ಅಸಾಧ್ಯಳಾದ ನಾನು-ರಾಕ್ಷಸರ ರಾಜ ನಾದ, ಮಹಾತ್ಮನಾದ ರಾವಣನ ಆಜ್ಞಾಧಾರಕಳಾಗಿ ಈ ನಗರವನ್ನು ರಕ್ಷಿಸುತ್ತಿರುವೆನು. ನನ್ನನ್ನು ಅನಾದರಣೆಮಾಡಿ ಈ ನಗರವನ್ನು ಪ್ರವೇಶಿಸಲು ನಿನ್ನಿಂದಾಗದು. ಈಗಲೇ ನನ್ನಿಂದ ಹತನಾಗುವ ನೀನು ಪ್ರಾಣಗಳನ್ನು ತೊರೆದು ಭೂಮಿಯ ಮೇಲೆ ಬೀಳುವೆ. ಕಪೀಶ್ವರನೇ! ನಾನೇ ಈ ಲಂಕೆಗೆ ಅಧಿದೇವತೆಯಾಗಿರುವೆನು. ಎಲ್ಲ ಕಡೆಗಳಲ್ಲಿಯೂ ನಾನೇ ಸಾಕ್ಷಾತ್ತಾಗಿ ಈ ಪಟ್ಟಣವನ್ನು ರಕ್ಷಿಸುತ್ತಿರುವೆನು. ಈ ಕಾರಣದಿಂದಲೇ ನಾನು ನಿನಗೆ ನಗರ ವನ್ನು ಪ್ರವೇಶಮಾಡಕೂಡದೆಂದು ಹೇಳಿದೆನು."

ಲಂಕಾಧಿದೇವತೆಯ ಆ ಮಾತನ್ನು ಕೇಳಿ ವಾಯುಪುತ್ರನಾದ, ಹರಿಶ್ರೇಷ್ಠನಾದ, ಪ್ರಯತ್ನಶೀಲನಾದ ಹನುಮಂತನು ಅವಳ ಮುಂದೆ ಮತ್ತೊಂದು ಪರ್ವತದಂತೆಯೇ ಅಚಲನಾಗಿ ನಿಂತನು. ಮೇಧಾವಿಯಾದ, ಪ್ಲವಗಶ್ರೇಷ್ಠನಾದ, ಬಲಿಷ್ಠನಾದ ಹನುಮಂತನು ವಿಕಾರರೂಪದ ರಾಕ್ಷಸ ಸ್ತ್ರೀಗೆ ಹೇಳಿದನು :

"ಲಂಕಾಧಿದೇವತೆಯೇ! ಉಪ್ಪರಿಗೆಗಳಿಂದಲೂ, ಕೋಟೆ-ಕೊತ್ತಲುಗಳಿಂದಲೂ, ತೋರಣಗಳಿಂದಲೂ ಪ್ರಶಸ್ತವಾಗಿರುವ ಲಂಕಾಪಟ್ಟಣವನ್ನು ನೋಡುವ ಸಲುವಾಗಿಯೇ ನಾನಿಲ್ಲಿಗೆ ಬಂದಿರುವೆನು. ಇದನ್ನು ನೋಡಲು ನನಗೆ ಹೆಚ್ಚಿನ ಕುತೂಹಲವುಂಟಾಗಿದೆ. ಈ ಪಟ್ಟಣದ ವನಗಳನ್ನೂ, ಉಪವನಗಳನ್ನೂ, ಅರಣ್ಯಗಳನ್ನೂ, ಎಲ್ಲ ಕಡೆಗಳಲ್ಲಿಯೂ ಇರುವ ಶ್ರೇಷ್ಠವಾದ ಸೌಧಗಳನ್ನೂ ನೋಡುವುದೇ ನನ್ನ ಆಗಮನದ ಉದ್ದೇಶವಾಗಿದೆ."

ಹನುಮಂತನು ಹೀಗೆ ಹೇಳಲು ಕಾಮರೂಪಿಣಿಯಾದ ಲಂಕಾಧಿದೇವತೆಯು ಕಠೋರವಾದ ಅಕ್ಷರಗಳಿಂದ ಕೂಡಿರುವ ಈ ವಾಕ್ಯವನ್ನು ಹೇಳಿದಳು :

**ಮಾಮನಿರ್ಜಿತ್ಯ ದುರ್ಬುದ್ಧೇ ರಾಕ್ಷಸೇಶ್ವರಪಾಲಿತಾ ।**
**ನ ಶಕ್ಯಂ ಹ್ಯದ್ಯ ತೇ ದ್ರಷ್ಟುಂ ಪುರೀಯಂ ವಾನರಾಧಮ ॥೩೬॥**

"ವಾನರಾಧಮನೇ! ದುಷ್ಟಬುದ್ಧಿಯವನೇ! ನನ್ನನ್ನು ಜಯಿಸದೇ ರಾಕ್ಷಸೇಶ್ವರನಿಂದ ಪರಿಪಾಲಿಸಲ್ಪಡುತ್ತಿರುವ ಈ ಲಂಕಾಪಟ್ಟಣವನ್ನು ನೀನು ನೋಡಲಾರೆ."

ಅದಕ್ಕೆ ಹನುಮಂತನು ರಾಕ್ಷಸಿಗೆ ಪುನಃ ಹೇಳಿದನು :

**ದೃಷ್ಟ್ವಾ ಪುರೀಮಿಮಾಂ ಭದ್ರೇ ಪುನರ್ಯಾಸ್ಯೇ ಯಥಾಗತಮ್ ॥**

"ಮಂಗಳಸ್ವರೂಪಳೇ! ಈ ಪಟ್ಟಣವನ್ನು ಒಮ್ಮೆ ನೋಡಿ ನಾನು ಎಲ್ಲಿಂದ ಬಂದಿರುವೆನೋ ಅಲ್ಲಿಗೇ ಪುನಃ ಹೊರಟುಹೋಗುತ್ತೇನೆ."

ಹನುಮಂತನು ಹೀಗೆ ಹೇಳಲು ಲಂಕಾಧಿದೇವತೆಯು ಪರಮಕ್ರುದ್ಧಳಾಗಿ ಭಯಂಕರವಾಗಿ ಗರ್ಜನೆಯನ್ನು ಮಾಡುತ್ತಾ ಅಂಗೈನಿಂದ ವಾನರಶ್ರೇಷ್ಠನನ್ನು ವೇಗವಾಗಿ ಪ್ರಹರಿಸಿದಳು. ರಾಕ್ಷಸಿಯಿಂದ ಬಲವಾಗಿ ಪ್ರಹರಿಸಲ್ಪಟ್ಟ, ವೀರ್ಯವಂತನಾದ, ವಾಯುಪುತ್ರನಾದ, ಹರಿಶ್ರೇಷ್ಠನಾದ ಹನುಮಂತನು ಅತ್ಯಂತಬಿರುಸಾಗಿ ಗರ್ಜಿಸಿದನು. ಕ್ರೋಧದಿಂದ ಮೈಮರೆತಿದ್ದ ಹನುಮಂತನು ಎಡಗೈಯಿನ ಬೆರಳುಗಳನ್ನು ಮುಷ್ಟಿಗಟ್ಟಿಕೊಂಡು ರಾಕ್ಷಸಿಯನ್ನು ಗಟ್ಟಿಯಾಗಿ ಪ್ರಹರಿಸಿದನು. ಲಂಕಾಧಿದೇವತೆಯನ್ನು ಸ್ತ್ರೀಮಾತ್ರಳೆಂದು ಭಾವಿಸಿದ ಹನುಮಂತನು ಅವಳ ಮೇಲೆ ಹೆಚ್ಚು ಕೋಪ

ಗೊಳ್ಳಲಿಲ್ಲ. ಸಾಧಾರಣವಾದ ರೀತಿಯಲ್ಲಿ ಅದೂ ಎಡಗೈಯಿನ ಮುಷ್ಟಿಯಿಂದ ಪ್ರಹರಿಸಿದನು. ಆ ಪ್ರಹಾರದಿಂದಲೇ ಅವಳ ಶರೀರವು ಜರ್ಝರಿತ ವಾಯಿತು. ವಿಕಾರವಾಗಿ ಮುಖವನ್ನು ಮಾಡಿಕೊಂಡು ಭೂಮಿಯ ಮೇಲೆ ಬಿದ್ದಳು. ಬಳಿಕ ತೇಜಸ್ವಿಯಾದ ಪ್ರಾಜ್ಞನಾದ ಹನುಮಂತನು ಲಂಕಾಧಿ ದೇವತೆಯು ಬಿದ್ದುದನ್ನು ನೋಡಿ ಸ್ತ್ರೀಮಾತ್ರಳೆಂದು ಭಾವಿಸಿ ಅವಳ ಮೇಲೆ ಕೃಪೆದೋರಿದನು. ಪೆಟ್ಟುತಿಂದು ಉದ್ವಿಗ್ನಳಾಗಿದ್ದ ರಾಕ್ಷಸಿಯು ಹನುಮಂತನಿಗೆ ಗರ್ವದಿಂದ ರಹಿತವಾದ ಈ ಮಾತನ್ನು ಗದ್ಗದಧ್ವನಿಯಿಂದ ಹೇಳಿದಳು :

**ಪ್ರಸೀದ ಸುಮಹಾಬಾಹೋ ತ್ರಾಯಸ್ವ ಹರಿಸತ್ತಮ ।**
**ಸಮಯೇ ಸೌಮ್ಯ ತಿಷ್ಠನ್ತಿ ಸತ್ತ್ವವನ್ತೋ ಮಹಾಬಲಾಃ ॥೪೪॥**

"ಮಹಾಬಾಹುವೇ! ಪ್ರಸನ್ನನಾಗು. ಹರಿಶ್ರೇಷ್ಠನೇ! ಸೌಮ್ಯನೇ! ನನ್ನನ್ನು ಸಂರಕ್ಷಿಸು. ಮಹಾಬಲರಾದ ಧೈರ್ಯವಂತರಾದ ಪುರುಷರು ಸಮಯಗಳಲ್ಲಿ ಶಾಸ್ತ್ರಮರ್ಯಾದೆಯನ್ನು ಮೀರಿ ನಡೆದುಕೊಳ್ಳುವುದಿಲ್ಲ ; ಧರ್ಮಮಾರ್ಗದಲ್ಲಿಯೇ ಸ್ಥಿರವಾಗಿರುತ್ತಾರೆ. ಶಾಸ್ತ್ರಗಳಲ್ಲಿ ಸ್ತ್ರೀಯು ಅವಧ್ಯ ಳೆಂದು ಹೇಳಿದೆ. ಆದುದರಿಂದ ನೀನು ನನ್ನ ಪ್ರಾಣಹರಣಮಾಡಬೇಡ.

ಪ್ಲವಂಗಮನೇ! ಈ ಲಂಕಾಪಟ್ಟಣದ ಮೂರ್ತಸ್ವರೂಪಳೇ ನಾನಾಗಿ ದ್ದೇನೆ. ಮಹಾಬಲನೇ! ವೀರನೇ! ಪರಾಕ್ರಮದಿಂದ ನೀನಿಂದು ನನ್ನನ್ನು ಜಯಿಸಿರುವೆ. ನಾನು ಹೇಳಲಿರುವ ಈ ಸತ್ಯವಾಕ್ಯವನ್ನು ಕೇಳು. ಹಿಂದೆ ಬ್ರಹ್ಮನು ನನಗೆ ಯಾವ ವರವನ್ನು ಕೊಟ್ಟಿದ್ದನೆಂಬ ವಿಷಯವಾಗಿ ಹೇಳುತ್ತೇನೆ:

**ಯದಾ ತ್ವಾಂ ವಾನರಃ ಕಶ್ಚಿದ್ವಿಕ್ರಮಾದ್ವಶಮಾನಯೇತ್ ।**
**ತದಾ ತ್ವಯಾ ಹಿ ವಿಜ್ಞೇಯಂ ರಕ್ಷಸಾಂ ಭಯಮಾಗತಮ್ ॥೪೭॥**

'ಯಾವಾಗ ವಾನರನೊಬ್ಬನು ನಿನ್ನ ಬಳಿಗೆ ಬಂದು ಪರಾಕ್ರಮದಿಂದ ನಿನ್ನನ್ನು ಜಯಿಸುವನೋ-ಆಗ ರಾಕ್ಷಸರಿಗೆ ಭಯವು ಒದಗಿಬಂದಿತೆಂದು ನೀನು ತಿಳಿಯಬೇಕು'-ಎಂಬ ವರವನ್ನು ಬ್ರಹ್ಮನು ನನಗೆ ಅನುಗ್ರಹಿಸಿದ್ದನು. ನಿನ್ನ ದರ್ಶನದಿಂದ ಆ ಸಮಯವೀಗ ನನಗೆ ಪ್ರಾಪ್ತವಾಗಿದೆ. ಬ್ರಹ್ಮನು

ಹೇಳಿದುದು ಸತ್ಯವಾಗಿ ಪರಿಣಮಿಸಿದೆ. ಅವನು ಹೇಳಿರುವ ಮಾತು ಬದಲಾಗುವುದೇ ಇಲ್ಲ. ಸೀತಾನಿಮಿತ್ತವಾಗಿ ದುರಾತ್ಮನಾದ ರಾವಣನಿಗೂ ಎಲ್ಲ ರಾಕ್ಷಸರಿಗೂ ವಿನಾಶವು ಸನ್ನಿಹಿತವಾಗಿದೆ. ಹರಿಶ್ರೇಷ್ಠನೇ! ನೀನೀಗ ರಾವಣನಿಂದ ಪರಿಪಾಲಿಸಲ್ಪಡುತ್ತಿರುವ ಈ ಲಂಕಾಪಟ್ಟಣವನ್ನು ಪ್ರವೇಶಿಸಿ ಯಾವ-ಯಾವ ಕಾರ್ಯಗಳನ್ನು ಮಾಡಲು ಅಪೇಕ್ಷಿಸುವೆಯೋ ಆ ಎಲ್ಲ ಕಾರ್ಯಗಳನ್ನೂ ಮಾಡು.

ಹರೀಶ್ವರನೇ! ರಾಕ್ಷಸಮುಖ್ಯನಾದ ರಾವಣನಿಂದ ಪರಿಪಾಲಿಸಲ್ಪಡುತ್ತಿರುವ ಸುಂದರವಾದ ಈ ಲಂಕಾನಗರಿಯು ಆಗಲೇ ಶಾಪದಿಂದ* ವಿನಾಶಹೊಂದಿದೆ. ಶುಭಕರವಾಗಿರುವ ಈ ಲಂಕಾನಗರಿಯನ್ನು ಪ್ರವೇಶಿಸಿ ಸ್ವೇಚ್ಛೆಯಿಂದ ಎಲ್ಲ ಕಡೆಗಳಲ್ಲಿಯೂ ಸುಖವಾಗಿ ಸಂಚರಿಸುತ್ತಾ ಸಾಧ್ವಿಯಾದ ಜನಕನ ಮಗಳನ್ನು ಹುಡುಕು."

ಇನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೪ನೆಯ ಸರ್ಗ

## ಹನುಮಂತನು ಲಂಕಾಪಟ್ಟಣವನ್ನು ಪ್ರವೇಶಿಸಿ ರಾವಣನ ಅಂತಃಪುರಕ್ಕೂ ಹೋದುದು

**ಸ ನಿರ್ಜಿತ್ಯ ಪುರೀಂ ಲಙ್ಕಾಂ ಶ್ರೇಷ್ಠಾಂ ತಾಂ ಕಾಮರೂಪಿಣೀಮ್ ।**
**ವಿಕ್ರಮೇಣ ಮಹಾತೇಜಾ ಹನೂಮಾನ್ಕಪಿಸತ್ತಮಃ ॥೧॥**

**ಅದ್ವಾರೇಣ ಮಹಾವೀರ್ಯಃ ಪ್ರಾಕಾರಮಭಿಪುಪ್ಲುವೇ ।**
**ನಿಶಿ ಲಙ್ಕಾಂ ಮಹಾಸತ್ತ್ವೋ ವಿವೇಶ ಕಪಿಕುಞ್ಜರಃ ॥೨॥**

ಮಹಾತೇಜಸ್ವಿಯಾದ, ಮಹಾಸತ್ತ್ವನಾದ, ಮಹಾವೀರ್ಯನಾದ, ಕಪಿಶ್ರೇಷ್ಠನಾದ ಹನುಮಂತನು ಕಾಮರೂಪಿಣಿಯಾದ, ಶ್ರೇಷ್ಠರಾಕ್ಷಸಿಯಾದ ಲಂಕಾಪಟ್ಟಣದ ಅಧಿದೇವತೆಯನ್ನು ಪರಾಕ್ರಮದಿಂದ ಗೆದ್ದು

---

* ಕಪಿಗಳ ಮೂಲಕವಾಗಿ ವಂಶನಾಶವಾಗಲೆಂದು ರಾವಣನಿಗೆ ನಂದೀಶ್ವರನು ಶಾಪವಿತ್ತನೆಂಬ ಕಥೆಯು ಉತ್ತರಕಾಂಡದಲ್ಲಿ ಬರುತ್ತದೆ.

ಅಪದ್ವಾರದಿಂದ ರಾತ್ರಿಯಲ್ಲಿ ಕೋಟೆಯನ್ನು ಹಾರಿ ಲಂಕಾಪಟ್ಟಣವನ್ನು ಪ್ರವೇಶಿಸಿದನು.*

ಕಪಿರಾಜನಾದ ಸುಗ್ರೀವನಿಗೆ ಹಿತಕರನಾದ ಹನುಮಂತನು ಲಂಕಾ ಪಟ್ಟಣವನ್ನು ಪ್ರವೇಶಿಸುವಾಗ ಎಡಗಾಲನ್ನು ಮುಂದಿಟ್ಟನು. ಅಂತೆಯೇ ಶತ್ರುಗಳ ತಲೆಗಳನ್ನೂ ಎಡಗಾಲಿನಿಂದ ಮೆಟ್ಟಿದನು.[1]

ಸತ್ತ್ವಸಂಪನ್ನನಾದ ವಾಯುಪುತ್ರನಾದ ಹನುಮಂತನು ರಾತ್ರಿಯಲ್ಲಿ ಮುತ್ತುಗಳಿಂದಲೂ ಅರಳಿದ ಪುಷ್ಪಗಳಿಂದಲೂ ಅಲಂಕರಿಸ್ಪಟ್ಟು ರಾರಾಜಿಸು ತ್ತಿದ್ದ ರಾಜಮಾರ್ಗವನ್ನು ಆಶ್ರಯಿಸಿ ರಮ್ಯವಾದ ಲಂಕಾಪಟ್ಟಣಕ್ಕೆ ಅಭಿ ಮುಖವಾಗಿ ಪ್ರಯಾಣಮಾಡುತ್ತಿದ್ದನು.

ಆಕಾಶವು ಬಿಳಿಯ ಮೇಘಗಳಿಂದ ಶೋಭಾಯಮಾನವಾಗಿ ಕಾಣು ವಂತೆ ಲಂಕಾಪಟ್ಟಣವು ಶ್ವೇತಭವನಗಳಿಂದ ಶೋಭಾಯಮಾನವಾಗಿ ಕಾಣು ತ್ತಿದ್ದಿತು. ಆ ಸೌಧಗಳು ಜನರ ಅಟ್ಟಹಾಸಗಳಿಂದ ಹುಟ್ಟಿದ ಶಬ್ದಗಳಿಂದಲೂ ಮತ್ತು ಮಂಗಳವಾದ್ಯಘೋಷಗಳ ಶಬ್ದಗಳಿಂದಲೂ ನಿನಾದಿತವಾಗಿದ್ದುವು. ಆ ಸೌಧಗಳು ವಜ್ರ ಮತ್ತು ಅಂಕುಶಗಳ ಚಿಹ್ನೆಗಳಿಂದ ಸಮಲಂಕೃತವಾಗಿದ್ದುವು ; ಅವುಗಳ ಕಿಟಕಿಗಳು ವಜ್ರಖಚಿತವಾದ ಬಲೆಗಳಿಂದ ಕೂಡಿದ್ದು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದುವು. ಇಂತಹ ಸುಂದರವಾದ ಸೌಧಗಳಿಂದ ಲಂಕಾಪಟ್ಟಣವು ರಾರಾಜಿಸುತ್ತಿದ್ದಿತು. ಆ ಸಮಯದಲ್ಲಿ

---

* **ಅದ್ವಾರೇಣ ಪ್ರವಿಶೇಚ್ಛತ್ರುವಿನಾಶಾಯ**–ಶತ್ರುವಿನ ವಿನಾಶವನ್ನು ಬಯಸುವವನು ಹೆಬ್ಬಾಗಿಲಿನ ಮೂಲಕವಾಗಿ ನಗರವನ್ನು ಪ್ರವೇಶಿಸಬಾರದು–ಎಂಬ ನೀತಿಯನ್ನು ಅನುಸರಿಸಿ ಹನುಮಂತನು ಹೆಬ್ಬಾಗಿಲಿನಿಂದ ಲಂಕೆಯನ್ನು ಪ್ರವೇಶಿಸಲಿಲ್ಲ.

1 ಶತ್ರುಗಳ ಪಟ್ಟಣವನ್ನು ಪ್ರವೇಶಿಸುವಾಗ ಎಡಗಾಲನ್ನು ಮುಂದೆ ಮಾಡಿಕೊಂಡು ಪ್ರವೇಶಿಸಬೇಕೆಂದು ಬೃಹಸ್ಪತಿಯು ಹೇಳಿದ್ದಾನೆ : **ಪ್ರಯಾಣಕಾಲೇ ಸ್ವಗೃಹಪ್ರವೇಶೇ ವಿವಾಹಕಾಲೇಽಪಿ ಚ ದಕ್ಷಿಣಾಂಘ್ರಿಮ್ । ಕೃತ್ವಾಗ್ರತಃ ಶತ್ರುಪುರಪ್ರವೇಶೇ ವಾಮಂ ನಿದಧ್ಯಾಚ್ಚರಣಂ ನೃಪಾಲ ॥** ಪ್ರಯಾಣಕಾಲದಲ್ಲಿಯೂ, ತನ್ನ ಮನೆಯನ್ನು ಪ್ರವೇಶಿಸುವಾಗಲೂ, ವಿವಾಹಕಾಲದಲ್ಲಿಯೂ ಬಲಗಾಲನ್ನು ಮುಂದಿಡಬೇಕು. ರಾಜ ನಾದವನು (ಅಥವಾ ರಾಜದೂತನು) ಶತ್ರುಪುರಪ್ರವೇಶಕಾಲದಲ್ಲಿ ಎಡಗಾಲನ್ನೇ ಮುಂದಿಟ್ಟುಕೊಂಡು ಪ್ರವೇಶಿಸಬೇಕು.

ಲಂಕಾಪಟ್ಟಣವು ಬಿಳಿಯ ಮೋಡಕ್ಕೆ ಸದೃಶವಾಗಿದ್ದ, ಶುಭಪ್ರದವಾಗಿದ್ದ, ಪದ್ಮ-ಸ್ವಸ್ತಿಕ ಮತ್ತು ವರ್ಧಮಾನಗಳೆಂಬ ಆಕೃತಿಗಳಿಂದ ಕೂಡಿದ್ದ, ಸರ್ವತ್ರ ಸಿಂಗರಿಸಿದ್ದ ರಾಕ್ಷಸರ ಮನೆಗಳಿಂದ ಪ್ರಜ್ಜ್ವಲಿಸುತ್ತಿದ್ದಿತು.*

ಕಪಿರಾಜನಾದ ಸುಗ್ರೀವನಿಗೆ ಹಿತಕರನಾದ ಶ್ರೀಮಂತನಾದ ಹನುಮಂತನು ಶ್ರೀರಾಘವನ ಕಾರ್ಯಾರ್ಥವಾಗಿ ಸಂಚರಿಸುತ್ತಾ ವಿಚಿತ್ರವಾದ ಮಾಲೆಗಳಿಂದಲೂ ಆಭರಣಗಳಿಂದಲೂ ಸಮಲಂಕೃತವಾಗಿದ್ದ ಲಂಕಾಪಟ್ಟಣವನ್ನು ನೋಡಿ ಆನಂದಿಸಿದನು. ರಾಜಮಾರ್ಗದಲ್ಲಿ ನಡೆದುಹೋಗುತ್ತಿದ್ದಾಗ ಒಂದೊಂದು ಭವನವನ್ನೂ ನೋಡುತ್ತಾ ಹೋಗುತ್ತಿದ್ದ ಹನುಮಂತನು ನಾನಾವಿಧವಾದ ಪದ್ಮ-ಸ್ವಸ್ತಿಕಗಳೇ ಮೊದಲಾದ ಆಕಾರಗಳಿಂದಲೂ ವರ್ಣಗಳಿಂದಲೂ ಕೂಡಿದ್ದ ಭವನಗಳನ್ನು ನೋಡಿದನು. ಹಾಗೆಯೇ ಹೋಗುತ್ತಿದ್ದಾಗ ಮದನಪರವಶರಾಗಿದ್ದ ಸ್ವರ್ಗದ ಅಪ್ಸರೆಯರಂತೆಯೇ ಇದ್ದ ಸ್ತ್ರೀಯರ ಎದೆ-ಕತ್ತು-ಶಿರಸ್ಸು ಎಂಬ ಮೂರು ಸ್ಥಾನಗಳಲ್ಲಿ ಹುಟ್ಟುವ ಮಂದ್ರ-ಮಧ್ಯಮ-ತಾರಸ್ವರಗಳಿಂದ ಕೂಡಿದ್ದ ಸುಮಧುರವಾದ ಗೀತೆಗಳನ್ನು ಕೇಳಿದನು. ಮಹಾತ್ಮರಾದ ರಾಕ್ಷಸರ ಭವನಗಳಲ್ಲಿ ಸ್ತ್ರೀಯರು ತೊಟ್ಟಿದ್ದ ಒಡ್ಯಾಣಗಳ ಧ್ವನಿಯನ್ನೂ, ಕಾಲಂದುಗೆಗಳ ಧ್ವನಿಯನ್ನೂ, ಅವರು ಮಹಡಿಯಿಂದ ಇಳಿದು ಬರುತ್ತಿದ್ದಾಗ ಆಗುತ್ತಿದ್ದ ಕಾಲುಗಳ ಸಪ್ಪಳವನ್ನೂ ಕೇಳಿದನು. ಹಾಗೆಯೇ ರಾಕ್ಷಸರ ಮನೆಗಳಲ್ಲಿ ಸ್ತ್ರೀಯರು ಮಾಡುತ್ತಿದ್ದ ಚಪ್ಪಾಳೆಗಳ ಧ್ವನಿಯನ್ನೂ, ಪುರುಷರ ಸಿಂಹಗರ್ಜನೆಗಳನ್ನೂ, ಜಪಮಾಡುತ್ತಿರು

---

* ಪದ್ಮ-ಸ್ವಸ್ತಿಕ-ವರ್ಧಮಾನಗಳು ಆಯಾ ಲಕ್ಷಣಗಳಿಂದ ಕೂಡಿದ ಗೃಹಗಳ ಪ್ರಭೇದಗಳು. **ಚತುಃಶಾಲಂ ಚತುರ್ದ್ವಾರಂ ಸರ್ವತೋಭದ್ರಸಂಜ್ಞಕಮ್ । ಪಶ್ಚಿಮದ್ವಾರರಹಿತಂ ನಂದ್ಯಾವರ್ತಾಹ್ವಯಂ ತು ತತ್ । ದಕ್ಷಿಣದ್ವಾರರಹಿತಂ ವರ್ಧಮಾನಂ ಧನಪ್ರದಮ್ । ಪ್ರಾಗ್ದ್ವಾರರಹಿತಂ ಸ್ವಸ್ತಿಕಾಖ್ಯಂ ಪುತ್ರಧನಪ್ರದಮ್ ॥** ನಾಲ್ಕು ಪ್ರಾಂಗಣಗಳುಳ್ಳ ಮತ್ತು ನಾಲ್ಕು ಬಾಗಿಲುಗಳುಳ್ಳ ಮನೆಗೆ ಸರ್ವತೋಭದ್ರವೆಂದು ಹೆಸರು. ಪಶ್ಚಿಮದಲ್ಲಿ ಬಾಗಿಲು ಇಲ್ಲದೇ ಇರುವುದಕ್ಕೆ ನಂದ್ಯಾವರ್ತವೆಂದು ಹೆಸರು. ದಕ್ಷಿಣದಲ್ಲಿ ಬಾಗಿಲು ಇಲ್ಲದಿರುವುದಕ್ಕೆ ವರ್ಧಮಾನವೆಂದು ಹೆಸರು. ಇದು ಧನಪ್ರದವಾದುದು. ಪೂರ್ವದಿಕ್ಕಿಗೆ ಬಾಗಿಲು ಇಲ್ಲದಿರುವುದಕ್ಕೆ ಸ್ವಸ್ತಿಕವೆಂದು ಹೆಸರು. ಇಂತಹ ಮನೆಯಲ್ಲಿ ವಾಸಮಾಡುವುದರಿಂದ ಪುತ್ರಾಭಿವೃದ್ಧಿಯೂ ಧನಾಭಿವೃದ್ಧಿಯೂ ಆಗುವುದು.

ವವರು ಹೇಳುತ್ತಿದ್ದ ಮಂತ್ರಗಳ ಧ್ವನಿಯನ್ನೂ ಕೇಳುತ್ತಾ ಹೋದನು. ಅಧ್ಯಯನದಲ್ಲಿಯೇ ನಿರತರಾಗಿದ್ದ ರಾಕ್ಷಸರನ್ನೂ ರಾವಣನನ್ನೇ ಸ್ತೋತ್ರ ಮಾಡುತ್ತಾ ಗರ್ಜನೆಮಾಡುತ್ತಿದ್ದ ರಾಕ್ಷಸರನ್ನೂ ನೋಡಿದನು. ರಾಜಮಾರ್ಗ ವನ್ನು ಆವರಿಸಿಕೊಂಡು ನಿಂತಿದ್ದ ರಾಕ್ಷಸರ ಸಮೂಹಗಳನ್ನೂ ನೋಡುತ್ತಾ ಮಾರುತಿಯು ಮುನ್ನಡೆದನು.

ಲಂಕಾಪಟ್ಟಣದ ಮಧ್ಯಮಕಕ್ಷೆಯಲ್ಲಿ (ಮಧ್ಯಭಾಗದ ಸೇನಾನಿವೇಶನ ದಲ್ಲಿ ) ರಾಕ್ಷಸರಾಜನ ಅನೇಕ ಗೂಢಚಾರರನ್ನೂ, ವ್ರತಿಗಳನ್ನೂ ಮಾರುತಿಯು ನೋಡಿದನು. ಅವರಲ್ಲಿ ಕೆಲವರು ದೀಕ್ಷಿತರಾಗಿದ್ದರು. ಜಟೆ ಗಳನ್ನು ಧರಿಸಿದ್ದರು. ಸಂನ್ಯಾಸಿಗಳಂತಿದ್ದರು. ಕೆಲವರು ಗೋಚರ್ಮಗಳನ್ನು ಧರಿಸಿದ್ದರು. ಆಯುಧಗಳ ರೂಪದಲ್ಲಿ ದರ್ಭೆಗಳನ್ನೇ ಮುಷ್ಟಿಗಳಲ್ಲಿ ಹಿಡಿದಿದ್ದರು.* ಮದ್ದು-ಮಾಟಗಳ ದೇವತೆಗಳನ್ನೇ ಆಯುಧಗಳ ರೂಪವಾಗಿ ಸೃಷ್ಟಿಸಬಲ್ಲ ಅಗ್ನಿಕುಂಡಗಳನ್ನು ಕೆಲವರು ಆರಾಧಿಸುತ್ತಿದ್ದರು. ಕೆಲವರು ಶೂಲಾಯುಧಗಳನ್ನೂ ಕೆಲವರು ಮುದ್ಗರಗಳನ್ನೂ ಮತ್ತೆ ಕೆಲವರು ದಂಡಾಯುಧಗಳನ್ನೂ ಹಿಡಿದಿದ್ದರು. ಅವರಲ್ಲಿ ಕೆಲವರಿಗೆ ಒಂದೇ ಕಣ್ಣಿದ್ದಿತು. ಕೆಲವರೆಗೆ ಒಂದೇ ಕಿವಿಯಿದ್ದಿತು. ಕೆಲವರು ದೀರ್ಘವಾದ ಹೊಟ್ಟೆಗಳನ್ನೂ ಸ್ತನಗಳನ್ನೂ ಹೊಂದಿದ್ದರು. ಎಲ್ಲರೂ ಭಯಂಕರವಾದ ಆಕಾರವುಳ್ಳವರಾಗಿದ್ದರು. ವಕ್ರಮುಖರೂ ಕುಟಿಲಮುಖರೂ ಅಲ್ಲಿದ್ದರು. ಕೆಲವರು ಏರು ಪೇರಾದ ಅಂಗವುಳ್ಳವರೂ, ಕುಳ್ಳರೂ ಆಗಿದ್ದರು. ಹಲವಾರು ಮಂದಿ ಧನುಸ್ಸು, ಖಡ್ಗ, ಶತಘ್ನೀ, ಮುಸಲ ಇವೇ ಮುಂತಾದ ಆಯುಧಗಳನ್ನು ಧರಿಸಿದ್ದರು. ಕೆಲವರು ಉತ್ತಮವಾದ ಪರಿಘಾಯುಧಗಳನ್ನೂ ಕೆಲವರು ವಿಚಿತ್ರವಾದ ಕವಚಗಳನ್ನೂ ಧರಿಸಿ ಪ್ರಜ್ವಲಿಸುತ್ತಿದ್ದರು. ಅಂತಹ ರಾವಣನ ಅನುಚರರನ್ನು ಹನುಮಂತನು ಲಂಕೆಯ ಮಧ್ಯಮಕಕ್ಷೆಯಲ್ಲಿ ನೋಡಿದನು.

---

* ಮಂತ್ರಜ್ಞನಾದ ಬ್ರಾಹ್ಮಣನ ಕೈಯಲ್ಲಿರುವ ದರ್ಭೆಯು ವಜ್ರಾಯುಧಕ್ಕೆ ಸಮಾನವೆನ್ನುತ್ತಾರೆ. ಯಥಾ ವಜ್ರಂ ಹರೇಃ ಪಾಣೌ ತಥಾ ವಿಪ್ರಕರೇ ಕುಶಾಃ ।ಕೂಟಃ = ಆಯುಧವಿಶೇಷ, ಕೂಟೋಽಸ್ತ್ರೀ ಪುಞ್ಜಮಾಯಾದ್ರಿಶೃಙ್ಗಾಯೋಧನ ವೇಶ್ಮಸು । ಛಲೇ ಬಾಣಾನ್ತರೇ ದಮ್ಭೇ ಭಗ್ನಶೃಙ್ಗವೃಷೇತುನಾ । ( ಶಬ್ದರತ್ನಾಕರ ) ಮುದ್ಗರಃ = ಕಬ್ಬಿಣದ ಹಾರೆ, ಮುದ್ಗರೋ ದ್ರುಘಣೋ ಘನಃ (ವೈಜಯಂತೀ).

ಹನುಮಂತನು ಹಾಗೆಯೇ ಮುಂದುವರಿದು ಹೋಗುತ್ತಿದ್ದಾಗ ಲಂಕಾ ಪಟ್ಟಣದ ಮತ್ತೊಂದು ವಿಭಾಗದಲ್ಲಿ ಹೆಚ್ಚು ಸ್ಥೂಲರಲ್ಲದವರನ್ನೂ, ಅತ್ಯಂತ ಕೃಶರಲ್ಲದವರನ್ನೂ, ಹೆಚ್ಚು ಎತ್ತರವಾಗಿಲ್ಲದವರನ್ನೂ, ಮೋಟರಲ್ಲದ ವರನ್ನೂ, ಹೆಚ್ಚು ಬಿಳುಪಾಗಿಲ್ಲದವರನ್ನೂ, ಅಂತೆಯೇ ಹೆಚ್ಚು ಕಪ್ಪಾಗಿಲ್ಲದವ ರನ್ನೂ, ಹೆಚ್ಚು ಕುಳ್ಳರಲ್ಲದವರನ್ನೂ ನೋಡಿದನು. ವಿರೂಪರನ್ನೂ, ಬಹು ರೂಪರನ್ನೂ, ಸುರೂಪರನ್ನೂ ಮತ್ತು ಒಳ್ಳೆಯ ತೇಜಸ್ವಿಗಳನ್ನೂ ಹನುಮಂತನು ಅಲ್ಲಿ ನೋಡಿದನು. ಧ್ವಜ-ಪತಾಕೆಗಳನ್ನು ಕೈಗಳಲ್ಲಿ ಹಿಡಿದಿರುವವರನ್ನೂ, ಶಕ್ತಿ, ವೃಕ್ಷ, ಪಟ್ಟಿಶ, ವಜ್ರ, ಕವಣೆ, ಹಗ್ಗ–ಮುಂತಾದ ಹಲವು ಬಗೆಯ ಆಯುಧಗಳನ್ನು ಹಿಡಿದು ನಿಂತಿದ್ದ ರಾಕ್ಷಸರನ್ನೂ ಮಹಾಕಪಿಯು ನೋಡಿದನು.

ಸ್ವೇಚ್ಛೆಯಿಂದ ಸಂಚರಿಸುತ್ತಿದ್ದವರನ್ನೂ, ಮಾಲಾಧಾರಿಗಳನ್ನೂ, ಗಂಧ ಬಳಿದುಕೊಂಡಿದ್ದವರನ್ನೂ, ಶ್ರೇಷ್ಠವಾದ ಆಭರಣಗಳಿಂದ ಅಲಂಕೃತರಾದವ ರನ್ನೂ, ನಾನಾವಿಧವಾದ ವೇಷಧಾರಿಗಳನ್ನೂ, ತೀಕ್ಷ್ಣವಾದ ಶೂಲಗಳನ್ನು ಧರಿಸಿದ್ದವರನ್ನೂ, ವಜ್ರಾಯುಧಧಾರಿಗಳನ್ನೂ, ಮಹಾಬಲಶಾಲಿಗಳನ್ನೂ ಹನುಮಂತನು ಅಲ್ಲಿ ನೋಡಿದನು. ನಗರರಕ್ಷಣೆಯಲ್ಲಿಯೇ ಏಕಾಗ್ರತೆಯಿಂದ ನಿರತರಾಗಿದ್ದ ರಾಕ್ಷಸಾಧಿಪತಿಯಾದ ರಾವಣನಿಂದ ಆಜ್ಞಪ್ತರಾಗಿದ್ದ ಲಕ್ಷ ಮಂದಿ ರಾಕ್ಷಸರು ಅಂತಃಪುರದ ಮುಂಭಾಗದಲ್ಲಿದ್ದುದನ್ನು ಕಂಡನು. ಅನಂತರ ಹನುಮಂತನು ರಾಕ್ಷಸೇಂದ್ರನಾದ ರಾವಣನ ಸುವಿಖ್ಯಾತವಾದ, ಪರ್ವತದ ಅಗ್ರಭಾಗದಲ್ಲಿದ್ದ ಭವ್ಯವಾದ ಅರಮನೆಯನ್ನು ನೋಡಿದನು. ಆ ಅರಮನೆಗೆ ಸುವರ್ಣಮಯವಾದ ಮುಂಬಾಗಿಲಿದ್ದಿತು. ಬಿಳಿಯ ಕಮಲಗಳಿಂದ ವಿಭೂ ಷಿತವಾದ ಕಂದಕಗಳಿಂದ ಅದು ಸುತ್ತುವರಿಯಲ್ಪಟ್ಟಿದ್ದಿತು. ಸುತ್ತಲೂ ಪ್ರಾಕಾರವಿದ್ದಿತು. ಸ್ವರ್ಗಸದೃಶವಾಗಿದ್ದ ಆ ರಾಜಭವನವು ದಿವ್ಯನಾದದಿಂದ ನಿನಾದಿತವಾಗಿದ್ದಿತು. ಅಲ್ಲಿ ಕುದುರೆಗಳ ಹೇಷಾರವವು ಕೇಳಿಬರುತ್ತಿದ್ದಿತು. ಅದ್ಭುತವಾದ ಕುದುರೆಗಳೂ, ರಥಗಳೂ, ಯಾನಗಳೂ, ವಿಮಾನಗಳೂ, ಶುಭಲಕ್ಷಣಗಳಿಂದ ಕೂಡಿದ ಆನೆ-ಕುದುರೆಗಳೂ, ಬಿಳಿಯ ಮೋಡಗಳ ರಾಶಿಯಂತೆಯೇ ಕಾಣುತ್ತಿದ್ದ ನಾಲ್ಕು ದಂತಗಳುಳ್ಳ ಮದಿಸಿದ ಆನೆಗಳೂ, ಮೃಗ-ಪಕ್ಷಿಗಳೂ ಆ ಅರಮನೆಯಲ್ಲಿದ್ದುವು. ಅರಮನೆಗೆ ಸುಂದರವಾದ

ಮಹಾದ್ವಾರವಿದ್ದಿತು. ಮಹಾವೀರ್ಯರಾದ ಸಾವಿರಾರು ರಾಕ್ಷಸರು ಆ ದಿವ್ಯ ಭವನವನ್ನು ಸರ್ವಕಾಲದಲ್ಲಿಯೂ ರಕ್ಷಿಸುತ್ತಿದ್ದರು. ಅಂತಹ ಅತಿಗೋಪ್ಯ ವಾಗಿದ್ದ ರಾಕ್ಷಸಾಧಿಪತಿಯಾದ ರಾವಣನ ಅರಮನೆಯನ್ನು ಹನುಮಂತನು ನೋಡಿದನು.

ರಾವಣನ ಅಂತಃಪುರವು ಜಂಬೂನದಿಯಲ್ಲಿ ಸಿಕ್ಕುವ ಸುವರ್ಣದಿಂದ ನಿರ್ಮಿತವಾದ ಪ್ರಾಕಾರದಿಂದ ಕೂಡಿದ್ದಿತು. ಒಳಭಾಗವು ಅನರ್ಘವಾದ ಮುತ್ತಿನ ಮಣಿಗಳಿಂದ ಸಮಲಂಕೃತವಾಗಿದ್ದಿತು. ಶ್ರೇಷ್ಠವಾದ ಕಾಲಾಗುರು-ಚಂದನ-ಧೂಪಗಳಿಂದ ಧೂಪಿತವಾಗಿದ್ದಿತು. ಅಂತಹ ಪರಮಾದ್ಭುತವಾದ ಕಾಂತಿಯಿಂದ ಕೂಡಿದ್ದ ಅಂತಃಪುರವನ್ನು ಹನುಮಂತನು ಪ್ರವೇಶಿಸಿದನು.

ಳನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೫ನೆಯ ಸರ್ಗ

## ಹನುಮಂತನು ರಾವಣನ ಅಂತಃಪುರದ ಪ್ರತಿಯೊಂದು ಕಡೆಯಲ್ಲಿಯೂ ಸೀತೆಯನ್ನು ಹುಡುಕಿ ಅವಳು ಸಿಕ್ಕದ ಕಾರಣ ದುಃಖಿತನಾದುದು

**ತತಃ ಸ ಮಧ್ಯಂ ಗತಮಂಶುಮನ್ತಂ**
**ಜ್ಯೋತ್ಸ್ನಾವಿತಾನಂ ಮಹದುದ್ವಮನ್ತಮ್ ।**
**ದದರ್ಶ ಧೀಮಾನ್ಭುವಿ ಭಾನುಮನ್ತಂ**
**ಗೋಷ್ಠೇ ವೃಷಂ ಮತ್ತಮಿವ ಭ್ರಮನ್ತಮ್ ॥೧॥**

ಧೀಮಂತನಾದ ಹನುಮಂತನು ಅಂತಃಪುರವನ್ನು ಪ್ರವೇಶಿಸಿದನಂತರ ಗೋಶಾಲೆಯೊಳಗೆ ಗೋವುಗಳ ಮಧ್ಯದಲ್ಲಿ ಸುತ್ತಾಡುತ್ತಿರುವ ಮದಿಸಿದ ಹೋರಿಯಂತೆ ಅತ್ತಲಿತ್ತ ಸಂಚರಿಸುತ್ತಾ ಪೃಥ್ವಿಯ ಮೇಲ್ಭಾಗದಲ್ಲಿ ಅಪಾರ ವಾದ ಬೆಳದಿಂಗಳನ್ನು ಹೊರಚೆಲ್ಲುತ್ತಾ ನಕ್ಷತ್ರಗಳೊಡನೆ ಆಕಾಶದ ಮಧ್ಯ ದಲ್ಲಿ ಸಂಚರಿಸುತ್ತಿದ್ದ ಚಂದ್ರನನ್ನು ನೋಡಿದನು.

ಲೋಕದ ಜನರ ದುಃಖವನ್ನು ತನ್ನ ಆಹ್ಲಾದಕರವಾದ ಬೆಳದಿಂಗಳಿ ನಿಂದ ನಿವಾರಿಸುತ್ತಿದ್ದ, ಸಮುದ್ರವನ್ನೂ ಉಕ್ಕಿಸುತ್ತಿದ್ದ, ಸರ್ವಪ್ರಾಣಿಗಳನ್ನೂ ಪ್ರಕಾಶಗೊಳಿಸುತ್ತಿದ್ದ, ಆಕಾಶದ ಮಧ್ಯಭಾಗದಲ್ಲಿ ಹೋಗುತ್ತಿದ್ದ ಚಂದ್ರನನ್ನು ಹನುಮಂತನು ನೋಡಿದನು.

ಪ್ರಪಂಚದಲ್ಲಿ ಮಂದರಪರ್ವತದಲ್ಲಿರುವ ಕಾಂತಿಯು ಹೇಗೆ ಪ್ರಕಾಶಿಸುವುದೋ, ಪ್ರದೋಷಕಾಲದಲ್ಲಿ ಸಾಗರದಲ್ಲಿರುವ ಕಾಂತಿಯು ಹೇಗೆ ಪ್ರಕಾಶಿಸುವುದೋ, ಸರೋವರಗಳಲ್ಲಿ ಕಮಲಗಳಲ್ಲಿರುವ ಕಾಂತಿಯು ಹೇಗೆ ಪ್ರಕಾಶಿಸುವುದೋ ಅದೇ ರೀತಿಯಲ್ಲಿ ಚಂದ್ರನಲ್ಲಿದ್ದ ಮನೋಹರ ವಾದ ಕಾಂತಿಯು ಪ್ರಕಾಶಿಸುತ್ತಿದ್ದಿತು.

ಬೆಳ್ಳಿಯ ಪಂಜರದಲ್ಲಿರುವ ಹಂಸವು ಹೇಗೆ ಪ್ರಕಾಶಿಸುವುದೋ, ರಜತಪರ್ವತವೆಂದು ಪ್ರಸಿದ್ಧವಾಗಿರುವ ಮಂದರಪರ್ವತದ ಗುಹೆಯಲ್ಲಿ ರುವ ಸಿಂಹವು ಹೇಗೆ ಪ್ರಕಾಶಿಸುವುದೋ, ಮದಿಸಿದ ಆನೆಯ ಮೇಲೆ ಕುಳಿತಿ ರುವ ವೀರಪುರುಷನು ಹೇಗೆ ಪ್ರಕಾಶಿಸುವನೋ–ಹಾಗೆಯೇ ಆಕಾಶದ ಮಧ್ಯದಲ್ಲಿದ್ದ ಚಂದ್ರನು ಪ್ರಕಾಶಿಸುತ್ತಿದ್ದನು. ಚೂಪಾದ ಕೋಡುಗಳುಳ್ಳ ಗೂಳಿಯಂತೆಯೂ, ಎತ್ತರವಾದ ಶಿಖರಗಳಿರುವ ಶ್ವೇತಪರ್ವತದಂತೆಯೂ, ಸುವರ್ಣದ ಪಟ್ಟಿಗಳಿಂದ ಸಮಲಂಕೃತವಾದ ದಂತಗಳುಳ್ಳ ಆನೆಯಂತೆಯೂ ಪರಿಪೂರ್ಣವಾದ ಶೃಂಗಗಳಿಂದ ಕೂಡಿದ್ದ ಚಂದ್ರನು ಪ್ರಕಾಶಿಸುತ್ತಿದ್ದನು.

ಮಂಜಿನ ತುಂತುರುಗಳೆಂಬ ಮಾಲಿನ್ಯವನ್ನು ದೂರಮಾಡಿದ್ದ, ಮಹಾಗ್ರಹವಾದ ಸೂರ್ಯನ ಖ ಸಂಪರ್ಕದಿಂದಾಗಿ ಉಜ್ಜ್ವಲವಾದ ಬೆಳಕನ್ನು ಹೊಂದಿ ಕತ್ತಲೆಯನ್ನು ಹೋಗಲಾಡಿಸಿದ್ದ,* ಪ್ರಕಾಶಮಾನವಾದ ಕಾಂತಿಯ ಆಶ್ರಯದಿಂದ ನಿರ್ಮಲವಾಗಿ ಕಾಣುತ್ತಿದ್ದ ಮೃಗಲಾಂಛನವನ್ನು ಹೊಂದಿದ್ದ ಪೂಜ್ಯನಾದ ಚಂದ್ರನು ರಾರಾಜಿಸುತ್ತಿದ್ದನು. ಹಾಸುಗಲ್ಲಿನ ಮೇಲೆ ನಿಂತಿರುವ ಸಿಂಹವು ರಾರಾಜಿಸುವಂತೆಯೂ, ಮಹಾಯುದ್ಧಕ್ಕೆ ಹೋದ ಮಹಾಗಜವು ಪ್ರಕಾಶಿಸುವಂತೆಯೂ, ಕಳೆದುಹೋಗಿದ್ದ ರಾಜ್ಯ ವನ್ನು ಪಡೆದುಕೊಂಡ ಚಕ್ರವರ್ತಿಯು ಪ್ರಕಾಶಿಸುವಂತೆಯೂ–ಪ್ರಕಾಶಮಾನ ನಾದ ಚಂದ್ರನು ಅಂತರಿಕ್ಷದ ಮಧ್ಯದಲ್ಲಿ ರಾರಾಜಿಸುತ್ತಿದ್ದನು. ಚಂದ್ರೋ

---

* ಸೂರ್ಯನ ಕಿರಣಗಳೇ ಚಂದ್ರನ ಮೇಲೆ ಬಿದ್ದು ತನ್ಮೂಲಕವಾಗಿ ಚಂದ್ರನು ಬೆಳಗುತ್ತಾನೆ. ಸೂರ್ಯನ ಕಿರಣಗಳ ಸಂಪರ್ಕವಿಲ್ಲದಿದ್ದರೆ ಚಂದ್ರನು ಬೆಳಗಲು ಸಾಧ್ಯವಾಗುವುದಿಲ್ಲ. ಈ ವಿಷಯವನ್ನು ವರಾಹಮಿಹಿರನು ಸ್ಪಷ್ಟವಾಗಿ ಹೇಳಿದ್ದಾನೆ. ಸಲಿಲಸಮೇ ಶಶಿನಿ ರವೇರ್ದೀಧಿತಯೋ ಮೂರ್ಛಿತಾಸ್ತಮೋ ನೈಶಮ್ । ಕ್ಷಪಯನ್ತಿ ದರ್ಪಣೋದರನಿಹಿತಾ ಇವ ಮನ್ದಿರಸ್ಯಾನ್ತಃ

ದಯವಾದನಂತರ ಕತ್ತಲೆಯಿಂದ ರಹಿತವಾಗಿದ್ದ, ರಾಕ್ಷಸರ ಪ್ರಾಣಿಹಿಂಸೆ ಮತ್ತು ಮಾಂಸಭಕ್ಷಣರೂಪವಾದ ದೋಷವನ್ನು ಹೆಚ್ಚಿಸುವ, ಸ್ತ್ರೀಯರಿಗೂ ಮತ್ತು ಪುರುಷರಿಗೂ ರಮಿಸಬೇಕೆನ್ನುವ ಚಿತ್ತದೋಷವನ್ನು ಕಲ್ಪಿಸುವ, ಸ್ವರ್ಗದಂತೆ ಆನಂದದಾಯಕವಾದ ಪ್ರದೋಷಕಾಲವು ಕಾಣಿಸಿತು. ಆ ಸಮಯದಲ್ಲಿ ಲಂಕೆಯಲ್ಲಿ ಕರ್ಣಾನಂದಕರವಾದ ವೀಣಾವಾದನಶಬ್ದಗಳು ಕೇಳಿಬರುತ್ತಿದ್ದುವು. ಒಳ್ಳೆಯ ಸ್ವಭಾವವುಳ್ಳ ಸ್ತ್ರೀಯರು ತಮ್ಮ ಗಂಡಂದಿರೊಡನೆ ಮಲಗಿದ್ದರು. ಅದ್ಭುತವಾದ ಮತ್ತು ಭಯಂಕರವಾದ ಆಚರಣೆಯುಳ್ಳ ರಾಕ್ಷಸರು ವಿಹರಿಸಲು ಹೊರಟಿದ್ದರು. ಬುದ್ಧಿವಂತನಾದ ಹನುಮಂತನು ಲಂಕಾಪಟ್ಟಣದಲ್ಲಿ ಅನೇಕಭವನಗಳನ್ನು ನೋಡಿದನು. ಕೆಲವು ಮನೆಗಳಲ್ಲಿ ಐಶ್ವರ್ಯದ ಮದದಿಂದ ಕೊಬ್ಬಿದ ರಾಕ್ಷಸರಿದ್ದರು. ಕೆಲವು ಮನೆಗಳಲ್ಲಿ ಮದ್ಯಪಾನದಿಂದ ಮತ್ತರಾದ ರಾಕ್ಷಸರಿದ್ದರು. ಕೆಲವು ಮನೆಗಳು ರಥ, ಅಶ್ವ ಮತ್ತು ಭದ್ರಾಸನಗಳಿಂದ ಸಂಪನ್ನವಾಗಿದ್ದುವು. ಕೆಲವು ಗೃಹಗಳು ವೀರರ ಸಂಪತ್ತಿನಿಂದ ಸಂಪನ್ನವಾಗಿದ್ದುವು. ಆ ಮನೆಗಳಲ್ಲಿದ್ದ ರಾಕ್ಷಸರಲ್ಲಿ ಕೆಲವರು ಪರಸ್ಪರವಾಗಿ ಆಕ್ಷೇಪಿಸುತ್ತಿದ್ದರು. ತಮ್ಮ ಉಬ್ಬಿದ ಹೆಗಲುಗಳನ್ನು ಮುಂಚಾಚಿ ಬಡಿದಾಡಲು ಸಿದ್ಧವಾಗಿರುವಂತೆ ಕಾಣುತ್ತಿದ್ದರು. ಮದ್ಯವನ್ನು ಕುಡಿದು ಮತ್ತರಾಗಿ ಅಸಂಬದ್ಧವಾದ ಮಾತುಗಳನ್ನಾಡುತ್ತಿದ್ದರು. ಮದಿಸಿದ ರಾಕ್ಷಸರು ಅನ್ಯೋನ್ಯವಾಗಿ ಬೈದಾಡುತ್ತಿದ್ದರು. ಕೆಲವು ರಾಕ್ಷಸರು ಪರಾಕ್ರಮದ ಸೂಚಕವಾಗಿ ಎದೆಗಳನ್ನು ತಟ್ಟಿಕೊಳ್ಳುತ್ತಿದ್ದರು. ಕೆಲವರು ಅಂಗಾಂಗಗಳನ್ನು ಪತ್ನಿಯರ ಅಂಗಾಂಗಗಳ ಮೇಲೆ ಇಡುತ್ತಿದ್ದರು. ಕೆಲವರು ಸುಂದರವಾದ ಚಿತ್ರಪಟಗಳನ್ನು ಅಲ್ಲಲ್ಲಿ ಜೋಡಿಸುತ್ತಿದ್ದರು. ಕೆಲವರು ದೃಢವಾದ ಧನುಸ್ಸಿನ ನಾಣನ್ನು ಕಿವಿಯವರೆಗೂ ಸೆಳೆದು ಅಭ್ಯಾಸಮಾಡುತ್ತಿದ್ದರು.

ರಾಕ್ಷಸರ ಪತ್ನಿಯರಲ್ಲಿ ಕೆಲವರು ಅಂಗರಾಗಾದಿಗಳನ್ನು ಲೇಪಿಸಿ ಕೊಳ್ಳುತ್ತಿದ್ದರು. ಕೆಲವರು ಮಲಗಿದ್ದರು. ಕೆಲವರು ಸಂತೋಷಸೂಚಕ ವಾದ ಮುಖಭಾವದಿಂದ ನಗುತ್ತಿದ್ದರು. ಕೆಲವರು ರಾಕ್ಷಸಪತ್ನಿಯರು ಪತಿಯ ಮೇಲೆ ಕುಪಿತರಾಗಿರುತ್ತಿದ್ದರು. ಕೆಲವರು ಕಾಂತನನ್ನು ಕಾಣದೇ ನಿಟ್ಟುಸಿರುಬಿಡುತ್ತಿದ್ದರು. ಈ ಎಲ್ಲ ದೃಶ್ಯಗಳನ್ನೂ ಹನುಮಂತನು

ನೋಡುತ್ತಾ ಹೋಗುತ್ತಿದ್ದನು. ಘೀಳಿಡುತ್ತಿದ್ದ ದೊಡ್ಡ-ದೊಡ್ಡ ಆನೆ ಗಳಿಂದಲೂ, ಪೂಜ್ಯರಾದ ಸಭಾಸದರಿಂದಲೂ ಮತ್ತು ನಿಟ್ಟುಸಿರುಬಿಡುತ್ತಿದ್ದ ವೀರರಿಂದಲೂ ತುಂಬಿದ್ದ ಆ ಲಂಕಾಪಟ್ಟಣವು ಬುಸುಗುಟ್ಟುವ ಸರ್ಪಗಳಿಂದ ತುಂಬಿದ ಸರೋವರದಂತೆಯೇ ಕಾಣುತ್ತಿದ್ದಿತು.

ಲಂಕೆಯಲ್ಲಿ ಹನುಮಂತನು ಮಹಾಬುದ್ಧಿಶಾಲಿಗಳನ್ನೂ, ಸುಮಧುರ ವಾಗಿ ಮಾತನಾಡುವವರನ್ನೂ, ಶ್ರದ್ಧಾಳುಗಳನ್ನೂ, ಅತ್ತಿಂದಿತ್ತ ತಿರುಗಾಡು ತ್ತಿದ್ದ ಪ್ರಧಾನಭೂತರಾದ ರಾಕ್ಷಸರನ್ನೂ, ನಾನಾವಿಧವಾದ ವೇಷಗಳನ್ನು ಧರಿಸಿರುವವರನ್ನೂ, ಮನೋಹರವಾದ ನಾಮಧೇಯಗಳುಳ್ಳವರನ್ನೂ ವೀಕ್ಷಿಸಿದನು. ಅವರನ್ನು ನೋಡಿ ಮಹಾಬಲನಾದ, ವಾಯುಪುತ್ರನಾದ ಹನುಮಂತನು ಬಹಳವಾಗಿ ಸಂತೋಷಪಟ್ಟನು. ಅಂತೆಯೇ ಅಲ್ಲಿ ಕೆಲವು ಕುರೂಪಿಗಳಾದ ರಾಕ್ಷಸರನ್ನೂ ನೋಡಿದನು. ಹಾಗೆಯೇ ರಾಜಬೀದಿಯಲ್ಲಿ ಹೋಗುತ್ತಿದ್ದಾಗ ಹನುಮಂತನು ಶ್ರೇಷ್ಠವಾದ ಭೂಷಣಾನುಲೇಪನಗಳಿಗೆ ಯೋಗ್ಯರಾದ, ಗಂಡಂದಿರ ವಿಷಯದಲ್ಲಿ ನಿರ್ಮಲಹೃದಯರಾಗಿದ್ದ, ಪ್ರಭಾವಶಾಲಿನಿಯರಾಗಿದ್ದ, ಪ್ರೀತಿಯನ್ನುಂಟುಮಾಡುವ ಪಾನಾದಿಗಳಲ್ಲಿ ಆಸಕ್ತರಾಗಿದ್ದ, ನಕ್ಷತ್ರಗಳಂತೆ ಒಳ್ಳೆಯ ಪ್ರಭೆಯಿಂದ ಕೂಡಿದ್ದ ಸ್ತ್ರೀಯರನ್ನು ನೋಡಿದನು.

ರೂಪಾದಿಸಂಪತ್ತುಗಳಿಂದ ಪ್ರಕಾಶಮಾನರಾಗಿದ್ದ ಕೆಲವು ಸ್ತ್ರೀಯರು ನಾಚಿಕೆಯುಳ್ಳವರಾಗಿದ್ದರು. ಮತ್ತೆ ಕೆಲವರು ಪತಿಗಳಿಂದ ಆಲಂಗಿಸಲ್ಪಟ್ಟವ ರಾಗಿ ಪ್ರಮೋದಾಮೋದಗಳಲ್ಲಿದ್ದರು. ಹೆಣ್ಣುಪಕ್ಷಿಗಳು ಪುಷ್ಪವೃಕ್ಷಗಳಲ್ಲಿ ಗೂಡುಗಳನ್ನು ಕಟ್ಟಿಕೊಂಡು ಗಂಡುಪಕ್ಷಿಗಳೊಡನೆ ವಿಹರಿಸುವಂತೆ–ಕೆಲ ವರು ಸ್ತ್ರೀಯರು ಕುಸುಮಿತವಾದ ಲತಾಕುಂಜಗಳಲ್ಲಿ ತಮ್ಮ ಪತಿಗಳೊಡನೆ ವಿಹರಿಸುತ್ತಿದ್ದರು. ಆ ಎಲ್ಲ ದೃಶ್ಯಗಳನ್ನೂ ನೋಡುತ್ತಾ ಹನುಮಂತನು ರಾಜಮಾರ್ಗದಲ್ಲಿ ಹೋಗುತ್ತಿದ್ದನು. ಕೆಲವರು ಉಪ್ಪರಿಗೆಗಳಲ್ಲಿ ಕುಳಿ ತಿದ್ದರು. ಕೆಲವರು ಗಂಡಂದಿರ ತೊಡೆಗಳ ಮೇಲೆ ಸುಖವಾಗಿ ಕುಳಿತಿದ್ದರು. ಕೆಲವರು ಧಾರ್ಮಿಕಸ್ತ್ರೀಯರು ಪತಿಗಳ ಸೇವೆಯಲ್ಲಿ ನಿರತರಾಗಿದ್ದರು. ಕೆಲವರು ಕಾಮಾಭಿಭೂತರಾಗಿ ಪ್ರಿಯಕರರೊಡನೆ ಕಾಮಕೇಳಿಯಲ್ಲಿ ನಿರತರಾಗಿದ್ದರು. ಹೀಗೆ ಎಲ್ಲ ಬಗೆಯ ಸ್ತ್ರೀಯರನ್ನೂ ಹನುಮಂತನು ಆ

ಲಂಕಾಪಟ್ಟಣದಲ್ಲಿ ನೋಡಿದನು. ಕೆಲವರು ಮೇಲು ಹೊದಿಕೆಯಿಲ್ಲದೇ ಸುವರ್ಣರೇಖೆಗೆ ಸದೃಶವಾದ ಕಾಂತಿಯಿಂದ ಕೂಡಿ ರಾರಾಜಿಸುತ್ತಿದ್ದರು. ಕೆಲವು ಶ್ರೇಷ್ಠರಾದ ಸ್ತ್ರೀಯರು ಪುಟಕ್ಕೆ ಹಾಕಿದ ಚಿನ್ನದಂತೆ ಬಣ್ಣವುಳ್ಳವ ರಾಗಿದ್ದರು. ಕೆಲವರು ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿ ದ್ದರು. ಕೆಲವರು ಪತಿಯಿಂದ ವಿಹೀನರಾಗಿ ಖಿನ್ನವಾದ ಮುಖಭಾವವುಳ್ಳವ ರಾಗಿದ್ದರು. ಕೆಲವರು ಸುಂದರವಾದ ಅಂಗಕಾಂತಿಯಿಂದ ಕೂಡಿದ್ದರು. ಅವರೆಲ್ಲರನ್ನೂ ನೋಡಿಕೊಂಡು ಮುಂದೆಹೋಗುತ್ತಿದ್ದ ಹನುಮಂತನು ಕೆಲವು ಮನೆಗಳಲ್ಲಿ ಮನಸ್ಸಿಗೆ ಆನಂದವನ್ನುಂಟುಮಾಡುವ, ಪ್ರಿಯರನ್ನು ಹೊಂದಿ ಪ್ರೀತಿಯುಕ್ತರಾದ, ಪುಷ್ಪಗಳಿಂದ ಸಿಂಗರಿಸಿಕೊಂಡು ಕಂಗೊಳಿಸುತ್ತಿದ್ದ, ಪರಮಹೃಷ್ಟರಾಗಿದ್ದ, ಕಡುಚೆಲುವೆಯರಾಗಿದ್ದ, ಸ್ತ್ರೀಯರನ್ನು ನೋಡಿದನು. ಬೆಳದಿಂಗಳಿನಂತೆ ಪ್ರಕಾಶಮಾನವಾಗಿ ಕಾಣುತ್ತಿದ್ದ ಸ್ತ್ರೀಯರ ಸುಂದರ ಮುಖಾವಲಿಗಳನ್ನೂ, ಸುಂದರವಾದ ಮತ್ತು ವಕ್ರವಾದ ಹುಬ್ಬುಗಳ ಕೂದಲಿ ನಿಂದ ಕೂಡಿದ ಕಣ್ಣುಗಳ ಸಾಲುಗಳನ್ನೂ, ಮಿಂಚಿನ ಸಾಲುಗಳಂತೆಯೇ ಕಾಣುತ್ತಿದ್ದ ಸುಂದರವಾದ ಆಭರಣಗಳ ಸಾಲುಗಳನ್ನೂ ಹನುಮಂತನು ನೋಡಿದನು.

ಆದರೆ ಕಡುಚೆಲುವೆಯಾದ, ಅಯೋನಿಜೆಯಾಗಿದ್ದ, ಚೆನ್ನಾಗಿ ಬೆಳೆದು ಸುತ್ತಲೂ ಹರಡಿಕೊಂಡಿರುವ ಲತೆಯಂತೆ ಕೃಶಾಂಗಿಯಾಗಿದ್ದ, ಧರ್ಮ ಮಾರ್ಗದಲ್ಲಿಯೇ ಸುಸ್ಥಿರಳಾಗಿದ್ದ, ರಾಜಕುಲದಲ್ಲಿ ಹುಟ್ಟಿದ್ದ ಸೀತಾದೇವಿ ಯನ್ನು ಹನುಮಂತನು ಎಲ್ಲಿಯೂ ಕಾಣಲಿಲ್ಲ. ಅವಿಚ್ಛಿನ್ನವಾದ ಪಾತಿವ್ರತ್ಯ ಮಾರ್ಗದಲ್ಲಿ ಸುಸ್ಥಿರಳಾಗಿದ್ದ, ಶ್ರೀರಾಮನನ್ನು ನೋಡಬೇಕೆಂಬ ಕಾತರತೆ ಯಿಂದಿದ್ದ, ಮನ್ಮಥನಿಂದ ಆವಿಷ್ಟಳಾಗಿದ್ದ, ಶ್ರೀರಾಮನ ಕಲ್ಯಾಣಮಯವಾದ ಮನಸ್ಸಿನಲ್ಲಿ ನೆಲೆಗೊಂಡಿದ್ದ, ಎಲ್ಲ ಶ್ರೇಷ್ಠಸ್ತ್ರೀಯರಿಗೂ ಶ್ರೇಷ್ಠಳಾಗಿದ್ದ ಸೀತಾದೇವಿಯು ಹನುಮಂತನಿಗೆ ಅಲ್ಲೆಲ್ಲೂ ಕಾಣಿಸಲಿಲ್ಲ.

ಸೀತಾದೇವಿಯು ವಿರಹಪೀಡಿತಳಾಗಿದ್ದಳು. ಅವಳು ಸುರಿಸುತ್ತಿದ್ದ ಕಣ್ಣೀರು ಕುತ್ತಿಗೆಯವರೆಗೂ ಹರಿದುಹೋಗುತ್ತಿದ್ದಿತು. ಈಗ ಕಂಬನಿದುಂಬಿದ ಕಂಠದಿಂದ ಕೂಡಿರುವ ಅವಳು ಹಿಂದೆ ಬಹುಮೂಲ್ಯವಾದ ಮತ್ತು ಶ್ರೇಷ್ಠವಾದ ಕಂಠಾಭರಣಗಳಿಂದ ಕಂಗೊಳಿಸುತ್ತಿದ್ದಳು. ಚೆನ್ನಾಗಿ ಬೆಳೆದಿರುವ

ಕೂದಲುಗಳಿಂದ ಕೂಡಿದ್ದ ಅವಳ ಹುಬ್ಬುಗಳು ಬಹಳ ಸುಂದರವಾಗಿದ್ದುವು. ಅರಣ್ಯದಲ್ಲಿರುವ ಹೆಣ್ಣುನವಿಲಿನ ಸುಮಧುರನಿನಾದದಂತೆ ಸೀತಾದೇವಿಯ ಕಂಠಧ್ವನಿಯು ಸುಮಧುರವಾಗಿದ್ದಿತು. ಕಂಡೂ-ಕಾಣದಂತಿರುವ ಪ್ರಥಮೆಯ ಚಂದ್ರರೇಖೆಯಂತೆ ಸೀತಾದೇವಿಯು ಅತ್ಯಂತಕೃಶಳಾಗಿದ್ದಳು ; ಕಾಂತಿಹೀನಳಾಗಿದ್ದಳು. ಧೂಳಿನಿಂದ ಮುಚ್ಚಲ್ಪಟ್ಟ ಸುವರ್ಣದ ಶಲಾಕೆಯಂತಿದ್ದಳು. ಬಾಣದ ಗಾಯದಂತೆ ರೂಢಮೂಲವಾಗಿದ್ದ ಮಾನಸಿಕ ಗಾಯದಿಂದ ಪರಿತಪಿಸುತ್ತಿದ್ದಳು. ವಾಯುವಿನಿಂದ ಛಿದ್ರ-ಛಿದ್ರವಾಗಿ ಮಾಡಲ್ಪಟ್ಟ ಮೇಘಗಳಂತೆ ಭಗ್ನವಾದ ಮನೋರಥವುಳ್ಳವಳಾಗಿದ್ದಳು. ಅಂತಹ ಅವಸ್ಥೆಯಲ್ಲಿದ್ದ ಸೀತಾದೇವಿಯು ಹನುಮಂತನಿಗೆ ಅಲ್ಲೆಲ್ಲೂ ಕಾಣಲಿಲ್ಲ.

ವಾಗ್ಮಿಗಳಲ್ಲಿ ಶ್ರೇಷ್ಠನಾದ ಮನುಜೇಶ್ವರನಾದ ಶ್ರೀರಾಮನ ಪತ್ನಿಯನ್ನು ಬಹಳ ಹೊತ್ತಿನವರೆಗೂ ಕಾಣದೇ ಕಪೀಶ್ವರನಾದ ಹನುಮಂತನು ಸ್ವಲ್ಪಕಾಲ ವಿವೇಚನೆಯಿಲ್ಲದ ಮೂರ್ಖನಂತೆ ದುಃಖಪೀಡಿತನಾದನು.

೯ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೬ನೆಯ ಸರ್ಗ

## ಹನುಮಂತನು ರಾವಣನ ಅರಮನೆಯಲ್ಲಿಯೂ ಇತರ ರಾಕ್ಷಸರ ಮನೆಗಳಲ್ಲಿಯೂ ಸೀತಾದೇವಿಯನ್ನು ಹುಡುಕಿದುದು

**ಸ ನಿಕಾಮಂ ವಿಮಾನೇಷು ವಿಷಣ್ಣಃ ಕಾಮರೂಪಧೃಕ್ ।**
**ವಿಚಚಾರ ಪುನರ್ಲಜ್ಕಾಂ ಲಾಘವೇನ ಸಮನ್ವಿತಃ ॥೧॥**

ಮನಬಂದಂತೆ ರೂಪಧರಿಸುವ ಶಕ್ತಿಯನ್ನು ಹೊಂದಿದ್ದ ಆ ಕಪೀಶ್ವರನು ಉಪ್ಪರಿಗೆಗಳಿಂದ ಕೂಡಿದ್ದ ಅರಮನೆಗಳಲ್ಲಿ ಸಂಚರಿಸುತ್ತಾ ಸೀತೆಯನ್ನು ಕಾಣದೇ ದುಃಖಿತನಾಗಿ ಲಂಕೆಯ ಸುತ್ತಲೂ ಪುನಃ ಹುಡುಕುವ ಸಲುವಾಗಿ ವೇಗದಿಂದ ನಡೆಯತೊಡಗಿದನು.

ವೀರ್ಯಸಂಪತ್ತಿನಿಂದ ಶೋಭಿಸುತ್ತಿದ್ದ ಹನುಮಂತನು ಹಾಗೆಯೇ ಸಂಚರಿಸುತ್ತಿದ್ದಾಗ ಪ್ರಕಾಶಮಾನವಾದ ಸೂರ್ಯನ ವರ್ಣದಿಂದ ಕಂಗೊಳಿಸು

ತ್ತಿದ್ದ, ಪ್ರಾಕಾರದಿಂದ ಸುತ್ತುವರಿಯಲ್ಪಟ್ಟಿದ್ದ ರಾಕ್ಷಸೇಂದ್ರನಾದ ರಾವಣನ ಅರಮನೆಗೆ ಬಂದನು. ಸಿಂಹಗಳಿಂದ ರಕ್ಷಿಸಲ್ಪಡುವ ಮಹಾರಣ್ಯದಂತೆ– ಭಯಂಕರರಾದ ರಾಕ್ಷಸರಿಂದ ರಕ್ಷಿಸಲ್ಪಡುತ್ತಿದ್ದ ರಾವಣನ ಅರಮನೆಯನ್ನು ನೋಡಿದೊಡನೆಯೇ ಹನುಮಂತನು ಪರಮಹೃಷ್ಟನಾದನು.

ರಾವಣನ ಅರಮನೆಯು ಬೆಳ್ಳಿಯಿಂದ ಮಾಡಲ್ಪಟ್ಟ ಚಿತ್ರಗಳಿಂದ ಸಮಲಂಕೃತವಾಗಿದ್ದಿತು. ಸುವರ್ಣಭೂಷಿತವಾದ ಹೊರಬಾಗಿಲುಗಳಿಂದ ಕೂಡಿದ್ದಿತು. ವಿಚಿತ್ರವಾದ ಅಂತಃಪುರಗಳಿಂದಲೂ, ಸುಂದರವಾದ ಒಳ ಬಾಗಿಲುಗಳಿಂದಲೂ ಕೂಡಿದ್ದ ರಾವಣನ ಅಂತಃಪುರವನ್ನು ಹನುಮಂತನು ವೀಕ್ಷಿಸಿದನು. ಆ ಅರಮನೆಯು ಆನೆಗಳ ಮೇಲೆ ಕುಳಿತಿದ್ದ ಮಾವಟಿಗ ರಿಂದಲೂ, ಬಳಲಿಕೆಯೇ ಇಲ್ಲದ ಶೂರರಿಂದಲೂ, ಅಪ್ರತಿಹತವಾದ ವೇಗ ವುಳ್ಳ ರಥಗಳನ್ನೆಳೆಯುವ ಕುದುರೆಗಳಿಂದಲೂ, ವಿಚಿತ್ರವಾದ ರಥಗಳಿಂದಲೂ ಸಮಾವೃತವಾಗಿದ್ದಿತು. ರಥಗಳು ಸಿಂಹ-ವ್ಯಾಘ್ರಗಳ ಚರ್ಮಗಳಿಂದ ಹೊದ್ದಿಸಲ್ಪಟ್ಟಿದ್ದು ದಂತ, ಚಿನ್ನ ಮತ್ತು ಬೆಳ್ಳಿಗಳಿಂದ ಮಾಡಿದ ಪ್ರತಿಮೆಗಳಿಂದ ಸಮಾವೃತವಾಗಿದ್ದುವು. ಸುತ್ತಲೂ ಚಿಕ್ಕ-ಚಿಕ್ಕ ಗಂಟೆಗಳಿದ್ದು ಸುಮಧುರವಾಗಿ ಧ್ವನಿಮಾಡುತ್ತಿದ್ದುವು.

ರಾವಣನ ಆ ಅರಮನೆಯು ಹೇರಳವಾದ ಮತ್ತು ನಾನಾಬಗೆಯ ರತ್ನಗಳಿಂದಲೂ ಅನರ್ಘವಾದ ಆಸನಗಳಿಂದಲೂ ಅಲಂಕರಿಸಲ್ಪಟ್ಟಿದ್ದಿತು. ದೊಡ್ಡ-ದೊಡ್ಡ ರಥಗಳಿಗೂ ನಿವಾಸಸ್ಥಾನವಾಗಿದ್ದಿತು. ಮಹಾರಥರು* ಕುಳಿತುಕೊಳ್ಳುವ ವರಾಸನಗಳಿಂದಲೂ ಕೂಡಿದ್ದಿತು. ಅಂತಹ ಅರಮನೆ ಯನ್ನು ಹನುಮಂತನು ನೋಡಿದನು. ಆ ಅರಮನೆಯ ಸುತ್ತಲೂ ಸುಂದರ ವಾದ ಅನೇಕದೃಶ್ಯಗಳಿದ್ದುವು. ವಿಧ-ವಿಧವಾದ ಅನೇಕ ಸಾವಿರ ಮೃಗ-ಪಕ್ಷಿ ಗಳು ಆ ಅರಮನೆಯ ಸುತ್ತಲೂ ವಾಸವಾಗಿದ್ದುವು.

---

* ಮಹಾರಥನ ಲಕ್ಷಣವನ್ನು ಹೀಗೆ ಹೇಳಿದ್ದಾರೆ : **ಏಕೋ ದಶಸಹಸ್ರಾಣಿ ಯೋಧಯೇದ್ಯಸ್ತು ಧನ್ವಿನಾಮ್ । ಶಸ್ತ್ರಶಾಸ್ತ್ರಪ್ರವೀಣಶ್ಚ ಸ ಮಹಾರಥ ಉಚ್ಯತೇ ॥** ಧನುರ್ಬಾಣಗಳನ್ನು ಹಿಡಿದು ಹತ್ತುಸಾವಿರ ಯೋಧರನ್ನು ಏಕಾಕಿಯಾಗಿ ಎದುರಿಸಿ ಯುದ್ಧಮಾಡುವವನೂ, ಶಸ್ತ್ರಶಾಸ್ತ್ರದಲ್ಲಿ (ಧನುರ್ವಿದ್ಯೆಯಲ್ಲಿ) ಪ್ರವೀಣನಾದವನೂ ಮಹಾರಥನೆನಿಸಿಕೊಳ್ಳುತ್ತಾನೆ.

ಅಂತಃಪುರವು ವಿನೀತರಾದ ಪಹರೆಯವರಿಂದಲೂ ರಾಕ್ಷಸರಿಂದಲೂ ಸುರಕ್ಷಿತವಾಗಿದ್ದಿತು. ಮುಖ್ಯರಾದ ಮತ್ತು ಶ್ರೇಷ್ಠರಾದ ಸ್ತ್ರೀಯರಿಂದ ತುಂಬಿಹೋಗಿದ್ದಿತು. ರಾಕ್ಷಸೇಂದ್ರನಾದ ರಾವಣನ ಆ ಅರಮನೆಯು ಸಂತೋಷಭರಿತರಾದ ಉತ್ತಮಸ್ತ್ರೀಯರಿಂದ ಸಂಪನ್ನವಾಗಿದ್ದಿತು. ರತ್ನ ಪ್ರಾಯರಾದ ಸ್ತ್ರೀಯರು ತೊಟ್ಟಿದ್ದ ಶ್ರೇಷ್ಠವಾದ ಆಭರಣಗಳ ನಿನಾದದಿಂದ ಕೂಡಿದ್ದ ಆ ಅರಮನೆಯು ಸಮುದ್ರದ ಭೋರ್ಗರೆಯುವ ಶಬ್ದವನ್ನೇ ಅನುಕರಿಸುತ್ತಿದ್ದಿತು. ಆ ಅರಮನೆಯು ಛತ್ರ-ಚಾಮರ-ಸಿಂಹಾಸನಾದಿಗಳಿಂದ ಯುಕ್ತವಾಗಿದ್ದಿತು. ಮುಖ್ಯವಾದ ಮತ್ತು ಶ್ರೇಷ್ಠವಾದ ಚಂದನಗಳಿಂದ ಸುವಾಸಿತವಾಗಿದ್ದಿತು. ಸಿಂಹಗಳಿಂದ ನಿಬಿಡವಾಗಿರುವ ಮಹಾವನದಂತೆ ಮಹಾಜನರಿಂದ ನಿಬಿಡವಾಗಿದ್ದು ಭೇರೀ-ಮೃದಂಗಾದಿ ವಾದ್ಯಗಳಿಂದಲೂ ಶಂಖಧ್ವನಿಯಿಂದಲೂ ನಿನಾದಿತವಾಗಿದ್ದಿತು. ರಾಕ್ಷಸರು ಆ ಅರಮನೆಯನ್ನು ನಿತ್ಯವೂ ಪೂಜಿಸಿ ಸಿಂಗರಿಸುತ್ತಿದ್ದರು. ಪರ್ವದಿವಸಗಳಲ್ಲಿ ಹೋಮಮಾಡುತ್ತಿದ್ದರು. ಅದು ಸಮುದ್ರದಂತೆ ಅತಿಗಂಭೀರವಾಗಿಯೂ ಮತ್ತು ಸಮುದ್ರದ ಧ್ವನಿಯಂತೆ ಶಬ್ದಾಯಮಾನವಾಗಿಯೂ ಇದ್ದಿತು. ಮಹಾರತ್ನಗಳಿಂದ ಸಮಲಂಕೃತವಾಗಿದ್ದಿತು.

ಆ ಅರಮನೆಯು ಆನೆ-ಕುದುರೆ ಮತ್ತು ರಥಗಳಿಂದ ತುಂಬಿಹೋಗಿ ಮಹಾರತ್ನಗಳಿಂದ ವ್ಯಾಪ್ತವಾಗಿದ್ದು ತನ್ನ ಕಾಂತಿಯಿಂದಲೇ ದೇದೀಪ್ಯಮಾನ ವಾಗಿ ಬೆಳಗುತ್ತಿದ್ದಿತು. ಮಹಾತ್ಮನಾದ ರಾವಣನ ಅಂತಹ ಮಹಾಸೌಧವನ್ನು ಹನುಮಂತನು ನೋಡಿದನು.

ಹನುಮಂತನು ಆ ಸುಂದರವಾದ ಅರಮನೆಯನ್ನು ಲಂಕಾಧಿ ದೇವತೆಯ ಆಭರಣವೆಂದೇ ಭಾವಿಸಿದನು. ಆ ಸಮಯದಲ್ಲಿ ಅವನು ರಾವಣನ ಸಮೀಪದಲ್ಲಿಯೇ ಸಂಚರಿಸುತ್ತಿದ್ದನು. ವಾನರಶ್ರೇಷ್ಠನಾದ ಹನುಮಂತನು ಸೀತೆಯನ್ನು ಹುಡುಕಲು ರಾಕ್ಷಸರ ಒಂದು ಮನೆಯಿಂದ ಮತ್ತೊಂದು ಮನೆಗೆ ಹೋಗುತ್ತಿದ್ದನು. ಸುತ್ತಲೂ ಇದ್ದ ಉದ್ಯಾನವನಗಳಿಗೂ ಹೋಗಿ ಅಲ್ಲಿಯೂ ಹುಡುಕುತ್ತಿದ್ದನು. ಸ್ವಲ್ಪವಾದರೂ ಭಯವಿಲ್ಲದವನಾಗಿ ಲಂಕಾಪಟ್ಟಣದಲ್ಲಿದ್ದ ಪ್ರತಿಯೊಂದು ಪ್ರಾಸಾದದಲ್ಲಿಯೂ ಸೀತಾದೇವಿಯನ್ನು ಹುಡುಕುತ್ತಾ ಸಂಚರಿಸುತ್ತಿದ್ದನು.

ಮಹಾವೇಗಶಾಲಿಯಾದ, ವೀರ್ಯವಂತನಾದ ಹನುಮಂತನು ಹಾರಿ ಕೊಂಡೇ ಪ್ರಹಸ್ತನ ಮನೆಗೆ ಹೋದನು. ಅಲ್ಲಿಂದ ಮಹಾಪಾರ್ಶ್ವನೆಂಬ ರಾಕ್ಷಸಮುಖ್ಯನ ಮನೆಗೆ ಹಾರಿದನು. ಅಲ್ಲೆಲ್ಲೂ ಸೀತೆಯನ್ನು ಕಾಣದೇ ಮೇಘಸದೃಶನಾದ ಕುಂಭಕರ್ಣನ ಮನೆಗೆ ಹೋದನು. ಅಲ್ಲಿಂದ ಮುಂದೆ ವಿಭೀಷಣನ ಮನೆಗೆ ಹೋದನು. ಅಲ್ಲಿಯೂ ಸೀತಾದೇವಿಯನ್ನು ಕಾಣದೇ ಮುಂದೆ ರಾಕ್ಷಸಮುಖ್ಯರಾದ ಮಹೋದರ, ವಿರೂಪಾಕ್ಷ, ವಿದ್ಯುಜ್ಜಿಹ್ವ ಮತ್ತು ವಿದ್ಯುನ್ಮಾಲಿಗಳ ಮನೆಗಳಿಗೆ ಅನುಕ್ರಮವಾಗಿ ಹಾರಿಕೊಂಡೇ ಹೋದನು. ಅಲ್ಲೆಲ್ಲೂ ಸೀತಾದೇವಿಯನ್ನು ಕಾಣದೇ ಬೆಕ್ಕಿನಷ್ಟೇ ಗಾತ್ರದಲ್ಲಿದ್ದ, ಕಪಿಮುಖ್ಯನಾದ, ಮಹಾವೇಗವಂತನಾದ ಹನುಮಂತನು ವಜ್ರದಂಷ್ಟ್ರನೆಂಬ ರಾಕ್ಷಸನ ಮನೆಗೂ ಧೀಮಂತನಾದ ಸಾರಣನೆಂಬ ರಾಕ್ಷಸನ ಮನೆಗೂ ಕುಪ್ಪಳಿಸಿದನು. ಕಪಿಸೈನ್ಯದ ರಕ್ಷಕನೂ ಕಪಿಶ್ರೇಷ್ಠನೂ ಆದ ಹನುಮಂತನು ಅಲ್ಲೆಲ್ಲೂ ಸೀತೆಯನ್ನು ಕಾಣದೇ ಮುಂದೆ ಇಂದ್ರಜಿತು ವಿನ ಮನೆಗೂ ಬಳಿಕ ಜಂಬುಮಾಲಿ ಮತ್ತು ಸುಮಾಲಿಗಳೆಂಬ ರಾಕ್ಷಸ ಶ್ರೇಷ್ಠರ ಮನೆಗಳಿಗೂ ಹೋದನು. ಆ ಮನೆಗಳಲ್ಲಿಯೂ ಸೀತಾದೇವಿಯನ್ನು ಹುಡುಕಿ ಅವಳನ್ನು ಕಾಣದೇ ಮುಂದೆ ಆಂಜನೇಯನು ರಶ್ಮಿಕೇತು, ಸೂರ್ಯಶತ್ರು, ವಜ್ರಕಾಯರ ಮನೆಗಳಿಗೂ ಹಾರಿಕೊಂಡೇ ಹೋದನು. ಅಲ್ಲಿಂದ ಮುಂದೆ ಧೂಮ್ರಾಕ್ಷ, ಸಂಪಾತಿ, ವಿದ್ಯುದ್ರೂಪ, ಭೀಮ, ಘನ, ವಿಘನ–ಇವರ ಮನೆಗಳಿಗೂ ಅನುಕ್ರಮವಾಗಿ ಹಾರಿಕೊಂಡು ಹೋದನು. ಮುಂದೆ ವಾಯುಸುತನು–ಶುಕನಾಸ, ವಕ್ರ, ಶಠ, ವಿಕಟ, ಹ್ರಸ್ವಕರ್ಣ, ದಂಷ್ಟ್ರ, ಲೋಮಶರೆಂಬ ರಾಕ್ಷಸಶ್ರೇಷ್ಠರ ಮನೆಗಳಿಗೂ ಹೋದನು. ಅಲ್ಲೆಲ್ಲೂ ಸೀತೆಯು ಸಿಕ್ಕದ ಕಾರಣ ಮುಂದೆ ವಾಯುಸುತನು ಹಾರಿ ಕೊಂಡೇ ಯುದ್ಧೋನ್ಮತ್ತ, ಮತ್ತ, ಧ್ವಜಗ್ರೀವ ವಿದ್ಯುಜ್ಜಿಹ್ವ, ದ್ವಿಜಿಹ್ವ, ಹಸ್ತಿಮುಖ, ಕರಾಲ, ವಿಶಾಲ, ಶೋಣಿತಾಕ್ಷ–ಇವರೆಲ್ಲರ ಮನೆಗಳಿಗೂ ಅನುಕ್ರಮವಾಗಿ ಹೋದನು.

ಮಹಾಯಶಸ್ವಿಯಾದ ಆ ಮಹಾಕಪಿಯು ಬಹುಮೂಲ್ಯವಾದ ಆ ಅರಮನೆಗಳಲ್ಲಿ ಸಂಪದ್ಯುಕ್ತರಾದ ರಾಕ್ಷಸರ ಅಪಾರವಾದ ಸಂಪತ್ತನ್ನು ಪ್ರತ್ಯಕ್ಷವಾಗಿ ನೋಡಿದನು. ಆ ಎಲ್ಲ ರಾಕ್ಷಸರ ಮನೆಗಳಲ್ಲಿಯೂ ಸೀತಾ

ದೇವಿಯನ್ನು ಹುಡುಕಿ ನಿರಾಶನಾಗಿ ಕಾಂತಿಮಂತನಾದ ಹನುಮಂತನು ರಾಕ್ಷಸೇಂದ್ರನಾದ ರಾವಣನ ಅರಮನೆಯನ್ನು ಸೇರಿದನು. ರಾವಣನ ಅರಮನೆಯಲ್ಲಿ ಸಂಚರಿಸುತ್ತಿದ್ದಾಗ ರಾವಣೇಶ್ವರನ ಪರ್ಯಂಕವನ್ನು ರಕ್ಷಿಸುತ್ತಾ ಸಮೀಪದಲ್ಲಿ ಮಲಗಿದ್ದ ವಿಕಾರವಾದ ಕಣ್ಣುಗಳನ್ನು ಹೊಂದಿದ್ದ ರಾಕ್ಷಸಿಯರನ್ನು ನೋಡಿದನು. ಶೂಲ-ಮುದ್ಗರ-ಶಕ್ತಿ-ತೋಮರಾದಿ ಆಯುಧಗಳನ್ನು ಹಿಡಿದಿದ್ದ ರಾಕ್ಷಸರ ನಾನಾವಿಧವಾದ ಸೇನೆಯ ತುಕಡಿ ಗಳನ್ನು ರಾವಣನ ಅರಮನೆಯಲ್ಲಿ ವೀಕ್ಷಿಸಿದನು. ಆ ಅರಮನೆಯಲ್ಲಿಯೇ ಹನುಮಂತನು ಮಹಾಕಾಯರಾದ, ನಾನಾವಿಧವಾದ ಆಯುಧಗಳನ್ನು ಮೇಲಕ್ಕೆತ್ತಿಕೊಂಡು ನಿಂತಿದ್ದ ರಾಕ್ಷಸರನ್ನೂ, ಕಟ್ಟಿಹಾಕಲ್ಪಟ್ಟಿದ್ದ, ಮಹಾ ವೇಗಯುಕ್ತವಾದ ಕೆಂಪು ಮತ್ತು ಬಿಳಿಯ ಕುದುರೆಗಳನ್ನು ನೋಡಿದನು. ಒಳ್ಳೆಯ ಕುಲದಲ್ಲಿ ಹುಟ್ಟಿದ್ದ, ಒಳ್ಳೆಯ ರೂಪವನ್ನು ಹೊಂದಿದ್ದ, ಶತ್ರುಗಳ ಆನೆಗಳನ್ನು ಗಾಯಗೊಳಿಸುವುದರಲ್ಲಿ ಸಮರ್ಥವಾದ, ಗಜಶಿಕ್ಷೆಯಲ್ಲಿ ಶಿಕ್ಷಣವನ್ನು ಪಡೆದಿದ್ದ, ಐರಾವತಕ್ಕೆ ಸಮವಾಗಿ ಯುದ್ಧಮಾಡುವ ಸಾಮರ್ಥ್ಯವನ್ನು ಹೊಂದಿದ್ದ, ಶತ್ರುಸೈನ್ಯಗಳನ್ನು ಸಂಹರಿಸಲು ಸಮರ್ಥವಾದ ಆನೆಗಳನ್ನು ಅಲ್ಲಿ ನೋಡಿದನು. ಆ ಆನೆಗಳು ನೀರನ್ನು ಸುರಿಸುವ ಮೇಘಗಳಂತೆ ಮತ್ತು ಪ್ರವಾಹರೂಪವಾಗಿ ನೀರನ್ನು ಸುರಿಸುವ ಬೆಟ್ಟಗಳಂತೆ ಮದೋದಕವನ್ನು ಸುರಿಸುತ್ತಿದ್ದುವು. ಮೇಘಗಳಂತೆಯೇ ಗರ್ಜಿಸುತ್ತಿದ್ದುವು. ಶತ್ರುಗಳಿಂದ ಎದುರಿಸಲು ಅಸಾಧ್ಯವಾಗಿದ್ದುವು.

ಮುಂದೆ ಹನುಮಂತನು ಆ ಅರಮನೆಯಲ್ಲಿ ಸುವರ್ಣಾಭರಣಗಳಿಂದ ಅಲಂಕೃತರಾಗಿದ್ದ ಸಾವಿರಾರು ಸೈನಿಕರನ್ನು ನೋಡಿದನು. ಸುವರ್ಣಮಯ ವಾದ ಬಲೆಗಳಿಂದ ಸಮಾವೃತರಾಗಿದ್ದ ಅವರೆಲ್ಲರೂ ಬಾಲಸೂರ್ಯ ರಂತೆಯೇ ಕಾಣುತ್ತಿದ್ದರು.

ಬಳಿಕ ವಾಯುಪುತ್ರನಾದ ಹನುಮಂತನು ರಾವಣನ ಅರಮನೆಯಲ್ಲಿ ವಿಧ-ವಿಧವಾದ ಆಕಾರಗಳಿಂದ ಕೂಡಿದ್ದ ಪಲ್ಲಕ್ಕಿಗಳನ್ನೂ, ಲತಾಗೃಹ ಗಳನ್ನೂ, ಚಿತ್ರಶಾಲೆಗಳನ್ನೂ, ಆಟದ ಮನೆಗಳನ್ನೂ, ಮರದಿಂದ ಮಾಡಿದ ಕೃತ್ರಿಮ ಕ್ರೀಡಾಪರ್ವತಗಳನ್ನೂ, ರಮ್ಯವಾದ ರತಿಗೃಹಗಳನ್ನೂ, ಹಗಲಿನ ವಿಹಾರಗೃಹಗಳನ್ನೂ ನೋಡಿದನು. ಮಂದರಪರ್ವತದಂತಿದ್ದ, ನವಿಲುಗಳ

ಕ್ರೀಡಾಗೃಹಗಳಿಂದ ಸಮಾಕುಲವಾಗಿದ್ದ, ಧ್ವಜದಂಡಗಳಿಂದ ವ್ಯಾಪ್ತವಾಗಿದ್ದ ರಾವಣನ ಉತ್ತಮೋತ್ತಮವಾದ ಪ್ರಾಸಾದವನ್ನೂ ನೋಡಿದನು. ರಾವಣನ ಆ ಭವ್ಯವಾದ ಅರಮನೆಯು ಅನೇಕವಾದ ರತ್ನಗಳ ರಾಶಿಗಳಿಂದ ತುಂಬಿ ಹೋಗಿದ್ದಿತು. ನಿಧಿಗಳ ಸಮೂಹಗಳಿಂದ ವ್ಯಾಪ್ತವಾಗಿದ್ದಿತು. ಧೀರರಾದ ರಾಕ್ಷಸರಿಂದ ಅನವರತವೂ ರಕ್ಷಿಸಲ್ಪಡುತ್ತಿದ್ದಿತು. ಆ ಅರಮನೆಯು ನಿಶ್ಚಯವಾಗಿಯೂ ಭೂತಪತಿಯಾದ ಪರಶಿವನ ಕೈಲಾಸಪರ್ವತದಂತೆಯೇ ಇದ್ದಿತು. ರತ್ನಗಳ ಕಾಂತಿಯಿಂದಲೂ, ರಾವಣನ ತೇಜಸ್ಸಿನಿಂದಲೂ ಆ ಮಹಾಪ್ರಾಸಾದವು ಕಿರಣಗಳಿಂದ ಕೂಡಿದ ಸೂರ್ಯನಂತೆಯೇ ಪ್ರಕಾಶ ಮಾನವಾಗಿದ್ದಿತು. ಅಲ್ಲಿದ್ದ ಹಾಸಿಗೆಗಳು, ಆಸನಗಳು, ಮುಖ್ಯ-ಮುಖ್ಯವಾದ ಪಾತ್ರೆಗಳು–ಎಲ್ಲವೂ ಸುವರ್ಣಮಯವೇ ಆಗಿದ್ದುವು.

ರಾವಣನ ಆ ಅರಮನೆಯಲ್ಲಿ ಮಧುವಿನಿಂದಲೂ ಆಸವಗಳಿಂದಲೂ ತುಂಬಿದ್ದ ಅನೇಕಮಣಿಮಯವಾದ ಪಾತ್ರೆಗಳಿದ್ದುವು. ಅದು ಕುಬೇರನ ಅರಮನೆಯಂತೆ ಮನೋಹರವಾಗಿಯೂ ವಿಶಾಲವಾಗಿಯೂ ಇದ್ದಿತು. ಹೆಂಗಸರ ಕಾಲಂದಿಗೆಗಳ, ಒಡ್ಯಾಣಗಳ ಮತ್ತು ಮೃದಂಗ-ತಾಲಗಳ ಧ್ವನಿಯಿಂದ ನಿನಾದಿತವಾಗಿದ್ದಿತು. ಪ್ರಾಸಾದಗಳ ಸಮೂಹಗಳಿಂದ ಕೂಡಿ ದ್ದಿತು. ರತ್ನಪ್ರಾಯರಾದ ನೂರಾರು ಸ್ತ್ರೀಯರಿಂದ ವ್ಯಾಪ್ತವಾಗಿದ್ದಿತು. ವಿಶಾಲ ವಾದ ಅನೇಕ ಒಳಹಜಾರಗಳು ಅಲ್ಲಿದ್ದುವು. ಅಂತಹ ಅತ್ಯಂತಸುಂದರವಾದ ಅರಮನೆಯನ್ನು ಹನುಮಂತನು ಪ್ರವೇಶಿಸಿದನು.

ಆರನೆಯ ಸರ್ಗವು ಮುಗಿಯಿತು.

ಸುಂದರಕಾಂಡ ಏಳನೆಯ ಸರ್ಗ

## ರಾವಣನ ಅರಮನೆಯ ಮತ್ತು ಪುಷ್ಪಕವಿಮಾನದ ವರ್ಣನೆ

**ಸ ವೇಶ್ಮಜಾಲಂ ಬಲವಾನ್ದದರ್ಶ**
**ವ್ಯಾಸಕ್ತವೈಡೂರ್ಯಸುವರ್ಣಜಾಲಮ್ ।**
**ಯಥಾ ಮಹತ್ಪ್ರಾವೃಷಿ ಮೇಘಜಾಲಂ**
**ವಿದ್ಯುತ್ಪಿನದ್ಧಂ ಸುವಿಹಂಗಜಾಲಮ್ ॥೧॥**

ಬಲಿಷ್ಠನಾದ ಹನುಮಂತನು ಆ ಅರಮನೆಯ ಸಮುಚ್ಚಯದಲ್ಲಿ

ಸುಂದರವಾದ ಮನೆಗಳ ಸಮೂಹವನ್ನೇ ನೋಡಿದನು. ಎಲ್ಲ ಮನೆಗಳೂ, ಮಿಂಚಿನಿಂದ ಕೂಡಿದ ಮೇಘಗಳ ಸಾಲಿನಂತಿದ್ದುವು. ವೈಡೂರ್ಯಮಣಿಗಳಿಂದ ನಿಬದ್ಧವಾದ ಚಿನ್ನದ ಬಲೆಗಳಿಂದ ಕೂಡಿದ್ದುವು. ಪಕ್ಷಿಗಳ ಸಮೂಹಗಳಿಂದ ಶೋಭಾಯಮಾನವಾಗಿದ್ದುವು.


ಅಲ್ಲಿ ಪ್ರಶಸ್ತವಾದ ಶಂಖಗಳು, ಆಯುಧಗಳು, ಧನುಸ್ಸುಗಳು–ಇವೇ ಮುಂತಾದುವುಗಳಿಂದ ಸುಶೋಭಿತವಾದ ಅಂತರ್ಗೃಹಗಳಿದ್ದುವು. ಪರ್ವತ ಸದೃಶವಾದ ಪ್ರಾಸಾದಗಳಲ್ಲಿ ಮನೋಹರವಾದ ಮತ್ತು ವಿಶಾಲವಾದ ಚಂದ್ರಶಾಲೆಗಳಿದ್ದುವು. ಅವು ನಾನಾವಿಧವಾದ ಸಂಪತ್ತುಗಳಿಂದ ದೇದೀಪ್ಯಮಾನವಾಗಿ ಕಾಣುತ್ತಿದ್ದು ದೇವಾಸುರರಿಂದಲೂ ಪೂಜಿಸಲ್ಪಡುತ್ತಿದ್ದುವು. ಸಕಲವಿಧವಾದ ದೋಷಗಳಿಂದಲೂ ಮುಕ್ತವಾಗಿದ್ದುವು. ಸ್ವಬಲ-ಪರಾಕ್ರಮಗಳಿಂದ ಸಂಪಾದಿಸಿದ್ದ ಅಂತಹ ಭವ್ಯವಾದ ಮತ್ತು ಸುಂದರವಾದ ಗೃಹಗಳನ್ನು ಹನುಮಂತನು ನೋಡಿದನು.

ಪ್ರಯತ್ನಪೂರ್ವಕವಾಗಿಯೇ ಬಹಳ ಸುಂದರರಾಗಿ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿದ್ದ ಆ ಸೌಧಗಳಲ್ಲಿನ ಮಾಯಾವಿಶೇಷಗಳಿಂದಾಗಿ ಮಯನಿಂದಲೇ ನಿರ್ಮಿಸಲ್ಪಟ್ಟಿರುವುದೋ ಎಂಬಂತೆ ಕಾಣುತ್ತಿದ್ದ, ಭೂಮಂಡಲದಲ್ಲಿಯೇ ಸಕಲಗುಣಗಳಿಂದಲೂ ವಿಶಿಷ್ಟವಾಗಿದ್ದ, ಲಂಕಾಧಿಪತಿಯಾದ ರಾವಣನ ಪ್ರಾಸಾದಗಳನ್ನು ಹನುಮಂತನು ನೋಡಿದನು.

ರಾವಣನ ಆ ಉತ್ತಮೋತ್ತಮವಾದ ಅರಮನೆಯು ಎತ್ತರದಲ್ಲಿರುವ ಮೇಘದೋಪಾದಿಯಲ್ಲಿದ್ದಿತು. ಮನೋಹರವಾಗಿದ್ದಿತು. ಸುವರ್ಣದಂತೆ ಸುಂದರವಾಗಿಯೂ ರಾಕ್ಷಸರ ಅಧಿಪತಿಯಾದ ರಾವಣನ ಆತ್ಮಬಲಕ್ಕೆ ಅನುರೂಪವಾಗಿಯೂ ಇದ್ದಿತು. ಭೂಮಿಯ ಮೇಲೆ ವ್ಯಾಪಿಸಿರುವ ಸ್ವರ್ಗದಂತೆಯೇ ಶೋಭಿಸುತ್ತಾ ಅನುಪಮವಾದ ಕಾಂತಿಯಿಂದ ಹೊಳೆಯುತ್ತಿದ್ದಿತು. ಅನೇಕ ರತ್ನರಾಶಿಗಳಿಂದ ಸಮೃದ್ಧವಾಗಿತ್ತಲ್ಲದೇ ನಾನಾವಿಧವಾದ ವೃಕ್ಷಗಳ ಕುಸುಮಗಳಿಂದಲೂ ವ್ಯಾಪ್ತವಾಗಿದ್ದು ಪುಷ್ಪಗಳ ಧೂಳಿಯಿಂದ ವ್ಯಾಪ್ತವಾದ ಪರ್ವತದಂತೆಯೇ ಕಾಣುತ್ತಿದ್ದಿತು. ಅಂತಹ ಅನುಪಮ ಸೌಂದರ್ಯದ ಅರಮನೆಯನ್ನು ಹನುಮಂತನು ನೋಡಿದನು.

ಅನಂತರ ಹನುಮಂತನು ಆಕಾಶದಲ್ಲಿ ರಾವಣನ ವಿಮಾನವನ್ನು

ನೋಡಿದನು. ಅದು ವಿದ್ಯುನ್ಮಾಲೆಗಳಿಂದ ಸುಶೋಭಿತವಾದ ಮೇಘದಂತೆ ಶ್ರೇಷ್ಠರಾದ ನಾರೀಮಣಿಯರಿಂದ ಬೆಳಗುತ್ತಿದ್ದಿತು. ಶ್ರೇಷ್ಠವಾದ ಹಂಸಗಳಿಂದ ಒಯ್ಯಲ್ಪಡುತ್ತಿರುವಂತೆ ಕಾಣುತ್ತಿದ್ದಿತು. ಕಾಂತಿಯುಕ್ತವಾಗಿದ್ದ ಆ ವಿಮಾನವು ಸಮೀಚೀನವಾಗಿ ನಿರ್ಮಿಸಲ್ಪಟ್ಟಿದ್ದಿತು.



ಅನೇಕವಿಧವಾದ ಗೈರಿಕಾದಿ ಧಾತುಗಳಿಂದ ಚಿತ್ರಿತವಾಗಿರುವ ಪರ್ವತದಂತೆ ಆ ವಿಮಾನವು ಕಾಣುತ್ತಿದ್ದಿತು. ಗ್ರಹಗಳಿಂದಲೂ ಚಂದ್ರನಿಂದಲೂ ಚಿತ್ರಿತವಾಗಿ ಕಾಣುವ ಆಕಾಶದಂತಿದ್ದಿತು. ಒಟ್ಟುಗೂಡಿದ ಸುಂದರವಾದ ಮೇಘಗಳ ಸಮೂಹದಂತೆ ಕಾಣುತ್ತಿದ್ದಿತು. ಅಪಾರವಾದ ರತ್ನಗಳಿಂದ ಆ ವಿಮಾನವು ವಿಚಿತ್ರವಾದ ರೀತಿಯಲ್ಲಿ ನಿರ್ಮಿಸಲ್ಪಟ್ಟಿದ್ದಿತು. ಅದರಲ್ಲಿ

ಪರ್ವತಗಳ ಸಾಲುಗಳಿಂದ ಯುಕ್ತವಾದ ಭೂಮಿಯಿದ್ದಿತು. ಪರ್ವತಗಳು ವೃಕ್ಷಗಳ ಸಮೂಹಗಳಿಂದ ವ್ಯಾಪ್ತವಾಗಿದ್ದುವು. ವೃಕ್ಷಗಳು ಪುಷ್ಪಗಳ ಗುಚ್ಛಗಳಿಂದ ಸಮೃದ್ಧವಾಗಿದ್ದುವು. ಪುಷ್ಪಗಳು ಕೇಸರಗಳಿಂದಲೂ ದಳ ಗಳಿಂದಲೂ ಕೂಡಿದ್ದು ಬಹುಸುಂದರವಾಗಿ ಕಾಣುತ್ತಿದ್ದುವು. ಆ ವಿಮಾನದಲ್ಲಿ ಶ್ವೇತವರ್ಣದ ಭವನಗಳಿದ್ದುವು. ವಿಚಿತ್ರವಾದ ವನಗಳೂ ಮತ್ತು ಕಮಲಪುಷ್ಪಗಳಿಂದ ಕೂಡಿದ ಸರೋವರಗಳೂ ಇದ್ದುವು. ಅದು ತನ್ನಲ್ಲಿದ್ದ ರತ್ನಗಳ ಪ್ರಭೆಯಿಂದ ರಾರಾಜಿಸುತ್ತಿದ್ದಿತು. ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಹಾರಾಡುತ್ತಿದ್ದಿತು. ಉತ್ತಮೋತ್ತಮವಾದ ಪ್ರಾಸಾದಗಳಿಗೂ ಶ್ರೇಷ್ಠತಮ ವಾಗಿರುವ ಪ್ರಾಸಾದದಂತೆ ಕಂಗೊಳಿಸುತ್ತಿದ್ದಿತು. ಅಂತಹ ಪುಷ್ಪಕವೆಂಬ ಹೆಸರಿನ ಮಹಾವಿಮಾನವನ್ನು ಹನುಮಂತನು ನೋಡಿದನು.

ಆ ವಿಮಾನದಲ್ಲಿ ವೈಡೂರ್ಯಮಯವಾದ ಪಕ್ಷಿಗಳೂ, ಬೆಳ್ಳಿ ಯಿಂದಲೂ ಮತ್ತು ಹವಳದಿಂದಲೂ ಮಾಡಿದ ಪಕ್ಷಿಗಳೂ ಇದ್ದುವು. ನಾನಾ ವಿಧವಾದ ಮುತ್ತು-ರತ್ನಗಳಿಂದ ಚಿತ್ರಿತವಾದ ಹಾವುಗಳಿದ್ದುವು. ಜಾತಿಗೆ ಅನುರೂಪವಾದ ಶುಭಲಕ್ಷಣಗಳಿಂದ ಕೂಡಿದ ಕುದುರೆಗಳಿದ್ದುವು.

ಹವಳ ಮತ್ತು ಸುವರ್ಣಪುಷ್ಪಗಳೇ ರೆಕ್ಕೆಗಳ ರೂಪದಲ್ಲಿದ್ದ ಪಕ್ಷಿಗಳು ವಿಮಾನದಲ್ಲಿದ್ದುವು. ಅವುಗಳು ವಕ್ರವಾಗಿದ್ದ ರೆಕ್ಕೆಗಳನ್ನು ಲೀಲಾಜಾಲವಾಗಿ ಒಳಕ್ಕೆ ಎಳೆದುಕೊಳ್ಳುತ್ತಿದ್ದುವು. ಕಾಮದೇವನಿಗೆ ಒತ್ತಾಸೆನೀಡುವ ವಸ್ತುಗಳೋ ಎಂಬಂತೆ ಆ ಹಕ್ಕಿಗಳು ಪ್ರಕಾಶಿಸುತ್ತಿದ್ದುವು. ಅಂತಹ ಸುಂದರವಾದ ಮತ್ತು ಅನುಪಮವಾದ ರೆಕ್ಕೆಗಳಿಂದಲೂ ಸುಂದರವಾದ ಮುಖಗಳಿಂದಲೂ ಕೂಡಿದ ಪಕ್ಷಿಗಳು ಆ ವಿಮಾನದಲ್ಲಿದ್ದುವು. ಕೇಸರಗಳಿಂದಲೂ, ಕಮಲದ ಎಲೆಗಳಿಂದಲೂ ಕೂಡಿದ ಸುಂದರವಾದ ಸೊಂಡಿಲುಗಳುಳ್ಳ ಆನೆಗಳನ್ನು ಆ ವಿಮಾನದ ಸುತ್ತಲೂ ಕೆತ್ತಿದ್ದರು. ವಿಮಾನದಲ್ಲಿದ್ದ ಸರೋವರದಲ್ಲಿ ಸುಂದರವಾದ ಕೈಗಳನ್ನು ಹೊಂದಿದ್ದ ಲಕ್ಷ್ಮೀದೇವಿಯು ಕಮಲವನ್ನು ಹಿಡಿದು ಕುಳಿತಿದ್ದ ಚಿತ್ರವಿಗ್ರಹವು ಕಂಗೊಳಿಸುತ್ತಿದ್ದಿತು.*

---

* ಪದ್ಮಹಸ್ತಳಾದ ಲಕ್ಷ್ಮೀದೇವಿಯನ್ನು ಅಭಿಷೇಚಿಸಲು ಆನೆಗಳು ನೀರನ್ನು ಸೊಂಡಿಲುಗಳ ಮೂಲಕವಾಗಿ ಮೇಲೆತ್ತುವಾಗ ನೀರಿನೊಡನೆ ಕೇಸರಗಳೂ ಕಮಲದೆಲೆಗಳೂ ಕೂಡಿ ಬಂದಿರುವ ಚಿತ್ರವು ಆ ವಿಮಾನದಲ್ಲಿದ್ದಿತೆಂದು ಊಹಿಸಬಹುದಾಗಿದೆ.

ಸುಂದರವಾದ ಪೊಟರೆಯಿಂದ ಕೂಡಿದ ಸುಗಂಧಯುಕ್ತವಾದ ವೃಕ್ಷದಂತೆಯೂ—ವಸಂತಕಾಲದಲ್ಲಿ ಸುಂದರವಾದ ಗುಹೆಯಿಂದ ಕೂಡಿದ ಪರ್ವತದಂತೆಯೂ ಶೋಭಾಯಮಾನವಾಗಿ ಕಾಣುತ್ತಿದ್ದ, ಮನೋಹರವಾದ ಮತ್ತು ಭವ್ಯವಾದ ಆ ವಿಮಾನವನ್ನು ನೋಡಿ ಮಾರುತಿಯು ವಿಸ್ಮಿತನಾದನು.

ಹೀಗೆ ಹನುಮಂತನು ರಾವಣೇಶ್ವರನಿಂದ ಪರಿಪಾಲಿಸಲ್ಪಡುತ್ತಿದ್ದ ಮತ್ತು ಸಕಲರಿಂದಲೂ ಪೂಜಿಸಲ್ಪಡುತ್ತಿದ್ದ ಲಂಕಾಪಟ್ಟಣದ ಎಲ್ಲ ಕಡೆಗಳಲ್ಲಿಯೂ ಸಂಚರಿಸಿ ಸೀತಾದೇವಿಯನ್ನು ಹುಡುಕಿದನು. ಸೀತಾದೇವಿಯಾದರೋ ಎಲ್ಲರ ಗೌರವಕ್ಕೂ ಪಾತ್ರಳಾಗಿದ್ದಳು. ಪತಿಯಲ್ಲಿದ್ದ ಅಪಾರವಾದ ಮತ್ತು ಅನುಪಮವಾದ ಸದ್ಗುಣಗಳಿಂದ ಜಯಿಸಲ್ಪಟ್ಟಿದ್ದಳು. ಆದರೆ ಆ ಸಮಯದಲ್ಲಿ ಜನಕನ ಮಗಳಾದ ಜಾನಕಿಯು ಅತ್ಯಂತದುಃಖಿತಳಾಗಿದ್ದಳು. ಎಷ್ಟು ಹುಡುಕಿದರೂ ಹನುಮಂತನು ಸೀತಾದೇವಿಯನ್ನು ಎಲ್ಲಿಯೂ ಕಾಣದೇ ಅತ್ಯಂತದುಃಖಿತನಾದನು.

ಆ ಸಮಯದಲ್ಲಿ ಲಂಕಾಪಟ್ಟಣದಲ್ಲಿ ಸಂಚರಿಸುತ್ತಿದ್ದ, ಮಹಾತ್ಮನಾದ, ಬಹುವಿಧವಾದ ಆಗು-ಹೋಗುಗಳನ್ನು ಮನಸ್ಸಿನಲ್ಲಿಯೇ ವಿಚಾರಮಾಡುತ್ತಿದ್ದ, ತೀಕ್ಷ್ಣಬುದ್ಧಿಯವನಾದ, ಸದಾಚಾರಸಂಪನ್ನನಾದ, ದೂರದರ್ಶಿಯಾದ, ಹನುಮಂತನ ಮನಸ್ಸು ಸೀತೆಯನ್ನು ಕಾಣದೆ ಅತಿದುಃಖಿತವಾಯಿತು.

೭ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೮ನೆಯ ಸರ್ಗ

## ಹನುಮಂತನು ಪುನಃ ಪುಷ್ಪಕವಿಮಾನವನ್ನು ಸಂದರ್ಶಿಸಿದುದು

ಸ ತಸ್ಯ ಮಧ್ಯೇ ಭವನಸ್ಯ ಸಂಸ್ಥಿತಂ
ಮಹದ್ವಿಮಾನಂ ಮಣಿರತ್ನಚಿತ್ರಿತಮ್ ।
ಪ್ರತಪ್ತಜಾಮ್ಬೂನದಜಾಲಕೃತ್ರಿಮಂ
ದದರ್ಶ ವೀರಃ ಪವನಾತ್ಮಜಃ ಕಪಿಃ ॥೧॥

ಧೀಮಂತನಾದ ವಾಯುಪುತ್ರನಾದ ಹನುಮಂತನು ಮಣಿಗಳಿಂದಲೂ

ರತ್ನಗಳಿಂದಲೂ ನಿಬದ್ಧವಾಗಿದ್ದ, ಪುಟಕ್ಕೆ ಹಾಕಿದ ಚಿನ್ನದ ಗಟ್ಟಿಯಿಂದಲೇ ನಿರ್ಮಿತವಾಗಿದ್ದ ಮಹಾವಿಮಾನವನ್ನು ರಾವಣನ ಆ ಮಹಾಸೌಧದ ಮಧ್ಯದಲ್ಲಿ ನೋಡಿದನು.

ಆ ಪುಷ್ಪಕವಿಮಾನವು ಅಪ್ರಮೇಯನಾದ ಸೌಂದರ್ಯದಿಂದ ಕೂಡಿರುವ ಪ್ರತಿಮೆಯಂತೆ ನಿರ್ಮಿತವಾಗಿದ್ದಿತು. ಅದನ್ನು ಅತ್ಯಂತಸುಂದರವಾಗಿ ನಿರ್ಮಿಸಿರುವೆನೆಂದು ವಿಶ್ವಕರ್ಮನೇ ಭಾವಿಸಿದ್ದನು. ಆ ಪುಷ್ಪಕ ವಿಮಾನವು ಆಕಾಶಕ್ಕೆ ಹೋಗುವ ವಾಯುಮಾರ್ಗದಲ್ಲಿ ಪ್ರತಿಷ್ಠಿತವಾಗಿದ್ದಿತು. ಸೂರ್ಯನ ಮಾರ್ಗಕ್ಕೆ ತೋರುಗಲ್ಲಿನಂತೆ ಕಾಣುತ್ತಿದ್ದ ಆ ದಿವ್ಯ ವಿಮಾನವನ್ನು ಹನುಮಂತನು ನೋಡಿದನು.*

ಪ್ರಯತ್ನಪೂರ್ವಕವಾಗಿ ಮಾಡದಿರುವ ಯಾವ ಒಂದು ಭಾಗವೂ ಆ ವಿಮಾನದಲ್ಲಿರಲಿಲ್ಲ. ಪ್ರತಿಯೊಂದು ಬಿಡಿಭಾಗವನ್ನೂ ವಿಶ್ವಕರ್ಮನು ಪ್ರಯತ್ನಪೂರ್ವಕವಾಗಿ ಪರಿಷ್ಕರಿಸಿ ಮಾಡಿದ್ದನು. ಬಹುಮೂಲ್ಯವಾದ ರತ್ನಗಳಿಂದ ಕೂಡಿರದ ಯಾವ ಭಾಗಗಳೂ ಆ ವಿಮಾನದಲ್ಲಿರಲಿಲ್ಲ. ಅದರಲ್ಲಿದ್ದ ಆಸನ-ಭಾಜನಾದಿ ಎಲ್ಲವೂ ರತ್ನಖಚಿತವಾಗಿದ್ದುವು. ಅತಿರಚನಾವಿಶಿಷ್ಟವಾದ ಪ್ರತ್ಯೇಕವಾದ ಯಾವ ಭಾಗವೂ ಅದರಲ್ಲಿರಲಿಲ್ಲ. ಅದರಲ್ಲಿನ ಎಲ್ಲ ಭಾಗಗಳೂ ಶಿಲ್ಪಚಾತುರ್ಯದ ವೈಶಿಷ್ಟ್ಯದಿಂದಲೇ ಕೂಡಿದ್ದುವು. ದೇವತೆಗಳಲ್ಲಿಯೂ ಅಂತಹ ವಿಶಿಷ್ಟರೀತಿಯಿಂದ ನಿರ್ಮಿಸಿದ ವಿಮಾನಗಳಿರಲಿಲ್ಲ.

ತಪೋನುಷ್ಠಾನದಿಂದಲೂ ಪರಾಕ್ರಮದಿಂದಲೂ ರಾವಣನು ಆ ಪುಷ್ಪಕವಿಮಾನವನ್ನು ಸಂಪಾದಿಸಿದ್ದನು. ಮನಸ್ಸಮಾಧಾನದಿಂದ ನಿಶ್ಚಯಿಸಿದ ಸ್ಥಳಕ್ಕೆ ಆ ವಿಮಾನವು ಹೋಗುತ್ತಿದ್ದಿತು. ಅನೇಕವಿಧವಾದ ವಿಲಕ್ಷಣವಾದ ಭಾಗಗಳಿಂದ ಕೂಡಿದ್ದಿತು. ಸರ್ವಸಾಮಾನ್ಯವಾದ ಮತ್ತು ವಿಶೇಷವಾದ ವಿಮಾನಗಳನ್ನು ನೋಡಿದ್ದ ಮಾರುತಿಯು ಎಲ್ಲಕ್ಕಿಂತಲೂ ಪರಮಾದ್ಭುತ

---

* ಹಿಂದಿನ ಶ್ಲೋಕದಲ್ಲಿ 'ಭವನಸ್ಯ ಮಧ್ಯೇ' ಸೌಧದ ಮಧ್ಯದಲ್ಲಿ ವಿಮಾನವಿದ್ದಿತೆಂದು ಹೇಳಿದೆ. ಈ ಶ್ಲೋಕದಲ್ಲಿ ವಾಯುಪಥದಲ್ಲಿ ಪ್ರತಿಷ್ಠಿತವಾಗಿತ್ತೆಂದು ಹೇಳಿದೆ. ಆದುದರಿಂದ ಸೌಧದ ಮಧ್ಯದಲ್ಲಿ ಅರ್ಥಾತ್ ವಾಯುಮಾರ್ಗದಲ್ಲಿ ಇದ್ದಿತೆಂದು ಅರ್ಥಮಾಡಬೇಕಾಗಿದೆ. ಸೌಧದ ಮಧ್ಯದಲ್ಲಿ ನೆಲದ ಮೇಲಿರಲಿಲ್ಲ. ಮೇಲ್ಭಾಗದ ವಾಯುಮಾರ್ಗದಲ್ಲಿದ್ದಿತು.

ವಾಗಿ ನಿರ್ಮಿಸಲ್ಪಟ್ಟಿದ್ದ ಆ ಪುಷ್ಪಕವಿಮಾನವನ್ನು ನೋಡಿ ಅಚ್ಚರಿಗೊಂಡನು.

ಸ್ವಾಮಿಯ ಮನಸ್ಸಿಗೆ ಅನುಸಾರವಾಗಿ ಬಹಳ ಶೀಘ್ರವಾಗಿ ಆ ವಿಮಾನವು ನಿರ್ದಿಷ್ಟವಾದ ಸ್ಥಳಕ್ಕೆ ಹೋಗುತ್ತಿದ್ದಿತು. ಶತ್ರುಗಳಿಂದ ಎದುರಿಸಲು ಅಸಾಧ್ಯವಾಗಿದ್ದಿತು. ವಾಯುವಿನಷ್ಟೇ ವೇಗವಾಗಿ ಚಲಿಸು ತ್ತಿದ್ದಿತು. ಪುಣ್ಯಾತ್ಮರಾದ, ಯಶೋವಂತರಾದ, ಶ್ರೇಷ್ಠವಾದ ಆನಂದವುಳ್ಳ ಇಂದ್ರನೇ ಮೊದಲಾದ ಮಹಾತ್ಮರ ಅರಮನೆಗಳಂತೆಯೇ ಆ ಪುಷ್ಪಕ ವಿಮಾನವೂ ಇದ್ದಿತು.

ಆಕಾಶಗಮನವೇ ಮೊದಲಾದ ವಿಶೇಷಗುಣಗಳನ್ನು ಹೊಂದಿದ್ದುದರಿಂದ ವಿಶೇಷವಾದ ವಾಯುಮಾರ್ಗದಲ್ಲಿಯೇ ಅದು ಸ್ಥಾಪಿಸಲ್ಪಟ್ಟಿದ್ದಿತು. ಆಶ್ಚರ್ಯಕರವಾದ ವಸ್ತುಗಳಿಂದ ಸಮಾಕುಲವಾಗಿದ್ದಿತು. ಮನಸ್ಸಿಗೆ ಆಹ್ಲಾದವನ್ನುಂಟುಮಾಡುವುದಾಗಿದ್ದಿತು. ಶರತ್ಕಾಲದ ಚಂದ್ರನಂತೆ ನಿರ್ಮಲವಾಗಿದ್ದಿತು. ಅನೇಕ ಸಣ್ಣ ಶಿಖರಗಳಿಂದ ಕೂಡಿದ ಪರ್ವತದ ದೊಡ್ಡ ಶಿಖರದಂತೆ ವಿಚಿತ್ರವಾದ ಶಿಖರದಿಂದಲೂ ಕೂಡಿದ್ದ ಪುಷ್ಪಕವಿಮಾನವನ್ನು ಹನುಮಂತನು ನೋಡಿದನು.

ರಾತ್ರಿಯಲ್ಲಿ ಸಂಚರಿಸುವ ಸಾವಿರಾರು ಭೂತಗಳು ಆ ಪುಷ್ಪಕವಿಮಾನವನ್ನು ಹೊತ್ತಿದ್ದುವು. ಅವುಗಳ ಮುಖಗಳು ಕರ್ಣಕುಂಡಲಗಳಿಂದ ಕೂಡಿದ್ದು ಶೋಭಾಯಮಾನವಾಗಿ ಕಾಣುತ್ತಿದ್ದುವು. ಆ ಭೂತಗಳು ಮಹಾಕಾಯಗಳಾಗಿದ್ದು ರೆಪ್ಪೆಗಳೇ ಇಲ್ಲದ ದುಂಡಾದ ಕಣ್ಣುಗಳನ್ನು ಹೊಂದಿದ್ದುವು. ಆಕಾಶಚಾರಿಗಳಾದ ಅವು ಮಹಾವೇಗಶಾಲಿಗಳಾಗಿದ್ದುವು.*

ವಸಂತಕಾಲದ ಪುಷ್ಪಗಳ ಸಮೂಹದಂತೆ ಬಹಳ ಸುಂದರವಾಗಿ ಕಾಣುತ್ತಿದ್ದ, ವಸಂತಮಾಸಕ್ಕಿಂತಲೂ ಹೆಚ್ಚು ಚೆಲುವಾಗಿದ್ದ, ಉತ್ತಮೋ

---

* ಸ್ವೇಚ್ಛೆಯಿಂದ ಹೋಗುವ ವಿಮಾನಕ್ಕೆ ಹೊರುವವರ ಅಪೇಕ್ಷೆಯಿಲ್ಲದಿರುವುದರಿಂದ ಭೂತಗಣಗಳು ಗೋಪುರಗಳಲ್ಲಿ ಅಥವಾ ರಥಗಳಲ್ಲಿರುವಂತೆ ಪ್ರತಿಮಾರೂಪವಾಗಿದ್ದುವೆಂದು ವ್ಯಾಖ್ಯಾನಕಾರರು ಹೇಳಿರುತ್ತಾರೆ. ಸಾವಿರಾರು ಭೂತಗಣಗಳು ಒಯ್ಯಬೇಕಾಗಿದ್ದರೆ ವಿಮಾನಕ್ಕೆ 'ಕಾಮಗ'–ಎಂಬ ಹೆಸರು ಬರುತ್ತಿರಲಿಲ್ಲ–ಎಂಬುದು ಅವರ ಅಭಿಪ್ರಾಯವಾಗಿದೆ.

ತ್ತಮವಾದ ಆ ಪುಷ್ಪಕವಿಮಾನವನ್ನು ವಾನರಶ್ರೇಷ್ಠನಾದ ಹನುಮಂತನು ನೋಡಿದನು.

ಲನೆಯ ಸರ್ಗವು ಮುಗಿಯಿತು.[1]



## ಹನುಮಂತನು ರಾವಣನ ಶ್ರೇಷ್ಠವಾದ ಅರಮನೆಯನ್ನೂ ಪುಷ್ಪಕವಿಮಾನವನ್ನೂ ನೋಡಿದ ಬಳಿಕ ರಾವಣನ ಅಂತಃಪುರದಲ್ಲಿ ಮಲಗಿದ್ದ ಸ್ತ್ರೀಯರನ್ನು ನೋಡಿದುದು

**ತಸ್ಯಾಲಯವರಿಷ್ಠಸ್ಯ ಮಧ್ಯೇ ವಿಪುಲಮಾಯತಮ್ ।**
**ದದರ್ಶ ಭವನಶ್ರೇಷ್ಠಂ ಹನುಮಾನ್ಮಾರುತಾತ್ಮಜಃ ॥೧॥**

ವಾಯುವಿನ ಮಗನಾದ ಹನುಮಂತನು ಶ್ರೇಷ್ಠವಾದ ಆಲಯಗಳಿಂದ ಸಂಪನ್ನವಾಗಿದ್ದ ಲಂಕಾಪಟ್ಟಣದ ಮಧ್ಯದಲ್ಲಿ ನಿರ್ಮಲವಾಗಿಯೂ, ವಿಸ್ತಾರವಾಗಿಯೂ ಇದ್ದ ಶ್ರೇಷ್ಠವಾದ ರಾಜಭವನವನ್ನು ನೋಡಿದನು.

ಶತ್ರುಹಂತಕನಾದ ಹನುಮಂತನು ವಿಶಾಲನೇತ್ರೆಯಾದ ಸೀತಾದೇವಿಯನ್ನು ಹುಡುಕುತ್ತಿದ್ದಾಗ ಅರ್ಧಯೋಜನದಷ್ಟು ಅಗಲವಾಗಿದ್ದ, ಒಂದು ಯೋಜನದಷ್ಟು ಉದ್ದವಾಗಿದ್ದ, ಅನೇಕ ಪ್ರಾಕಾರಗಳಿಂದ ಶೋಭಿಸುತ್ತಿದ್ದ, ರಾಕ್ಷಸರಾಜನಾದ ರಾವಣನ ರಾಜಭವನದ ಸುತ್ತಲೂ ತಿರುಗಾಡಿದನು. ಶೌರ್ಯವೇ ಮೊದಲಾದ ಸಂಪತ್ತುಗಳಿಂದ ವಿಶಿಷ್ಟನಾದ ಹನುಮಂತನು ರಾಕ್ಷಸರ ಶ್ರೇಷ್ಠವಾದ ಸೌಧಗಳೆಲ್ಲವನ್ನೂ ನೋಡಿಕೊಂಡು ರಾಕ್ಷಸೇಂದ್ರನಾದ ರಾವಣನ ಅರಮನೆಗೂ ಬಂದನು.

ಆ ಅರಮನೆಯು ನಾಲ್ಕು ದಂತಗಳಿರುವ ಮತ್ತು ಮೂರು ದಂತಗಳಿರುವ ಆನೆಗಳಿಂದ ಪರಿವೃತವಾಗಿದ್ದಿತು. ರಾಕ್ಷಸರು ಆಯುಧಗಳನ್ನು ಎತ್ತಿ ಹಿಡಿದು ಸರ್ವಕಾಲದಲ್ಲಿಯೂ ಅದನ್ನು ರಕ್ಷಿಸುತ್ತಿದ್ದರು. ರಾವಣನ ರಾಕ್ಷಸ ಪತ್ನಿಯರೂ ಮತ್ತು ಪರಾಕ್ರಮದಿಂದ ಸೆಳೆದು ತಂದ ರಾಜಕನ್ಯೆಯರೂ ಆ ಅರಮನೆಯಲ್ಲಿದ್ದರು. ರಾಕ್ಷಸರಾಜನಾದ ರಾವಣನ ಆ ಅರಮನೆಯು–

1 ಈ ಸರ್ಗವು ಬರೋಡಾದ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರು ಸಂಪಾದಿಸಿರುವ ಪುಸ್ತಕದಲ್ಲಿರುವುದಿಲ್ಲ.

ಮೊಸಳೆಗಳಿಂದಲೂ, ಮೀನುಗಳಿಂದಲೂ, ತಿಮಿಂಗಿಲಗಳಿಂದಲೂ, ಮಹಾ ಮತ್ಸ್ಯಗಳಿಂದಲೂ ಕೂಡಿರುವ, ವಾಯುವೇಗದಿಂದ ಅಲ್ಲೋಲಕಲ್ಲೋಲ ವಾಗಿ ಮಾಡಲ್ಪಟ್ಟ ಸರ್ಪಭರಿತವಾದ ಸಾಗರದಂತೆಯೇ ಕಾಣುತ್ತಿದ್ದಿತು.

ಯಾವ ಲಕ್ಷ್ಮಿಯು (ಐಶ್ವರ್ಯವು) ಕುಬೇರನ ಅರಮನೆಯಲ್ಲಿದೆಯೋ, ಹರಿವಾಹನನಾದ ಇಂದ್ರನ ಅರಮನೆಯಲ್ಲಿದೆಯೋ–ಸುರಮ್ಯವಾದ ಆ ಲಕ್ಷ್ಮಿಯೇ ರಾವಣನ ಅರಮನೆಯಲ್ಲಿಯೂ ಶಾಶ್ವತವಾಗಿದ್ದಿತು. ಕುಬೇರ-ಯಮ-ವರುಣರಲ್ಲಿ ಯಾವ ಸಂಪತ್ಸಮೃದ್ಧಿಯಿರುವುದೋ ಅದೇ ಸಮೃದ್ಧಿಯು ಅಥವಾ ಅದಕ್ಕಿಂತಲೂ ಮಿಗಿಲಾದ ಸಂಪತ್ಸಮೃದ್ಧಿಯು ಲಂಕಾ ಪಟ್ಟಣದಲ್ಲಿದ್ದ ಎಲ್ಲ ರಾಕ್ಷಸರ ಮನೆಗಳಲ್ಲಿಯೂ ಇದ್ದಿತು. ಅರ್ಧಯೋಜನ ವಿಸ್ತೀರ್ಣವಿದ್ದ ರಾವಣನ ಭವನದ ಮಧ್ಯದಲ್ಲಿ ಬಹಳ ಸುಂದರವಾಗಿ ನಿರ್ಮಿಸಲ್ಪಟ್ಟಿದ್ದ, ಮದಿಸಿದ ಹಲವಾರು ಆನೆಗಳಿಂದ ಸಮಾವೃತವಾಗಿದ್ದ ಮತ್ತೊಂದು ಅರಮನೆಯನ್ನು ಹನುಮಂತನು ನೋಡಿದನು. ಬ್ರಹ್ಮನ ಸಲುವಾಗಿ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿದ್ದ ಸರ್ವರತ್ನವಿಭೂಷಿತವಾದ ಪುಷ್ಪಕವೆಂಬ ಹೆಸರಿನ ವಿಮಾನವು ಅಲ್ಲಿದ್ದಿತು. ವಿಶ್ವಕರ್ಮನಿಂದ ಬ್ರಹ್ಮನಿಗೆ ಕೊಡಲ್ಪಟ್ಟ ಆ ಪುಷ್ಪಕವಿಮಾನವನ್ನು ಮಹಾತಪಸ್ಸನ್ನು ಮಾಡಿ ಕುಬೇರನು ಬ್ರಹ್ಮನಿಂದ ಪಡೆದುಕೊಂಡಿದ್ದನು. ಅನಂತರ ರಾವಣೇಶ್ವರನು ಭುಜಬಲ-ಪರಾಕ್ರಮಗಳಿಂದ ಕುಬೇರನನ್ನು ಜಯಿಸಿ ಅದೇ ವಿಮಾನವನ್ನು ಪಡೆದುಕೊಂಡನು.

ಅಪರಂಜಿಚಿನ್ನದಿಂದ ನಿರ್ಮಿತವಾದ ತೋಳ, ಆನೆ ಇವೇ ಮುಂತಾದ ಪ್ರತಿಮೆಗಳಿಂದ ಆ ವಿಮಾನವು ಅಲಂಕೃತವಾಗಿದ್ದಿತು. ಕಲಾತ್ಮಕವಾಗಿ ತಯಾರಿಸಿದ ಸ್ತಂಭಗಳಿಂದ ವ್ಯಾಪ್ತವಾಗಿದ್ದಿತು. ಕಾಂತಿಯಿಂದ ಶೋಭಾಯ ಮಾನವಾಗಿ ಕಾಣುತ್ತಿದ್ದಿತು. ಮೇರು-ಮಂದರಪರ್ವತಗಳಿಗೆ ಸದೃಶವಾಗಿದ್ದು ಆಕಾಶವನ್ನು ಉಜ್ಜುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಅಗ್ನಿ- ಸೂರ್ಯರ ಪ್ರಕಾಶಕ್ಕೆ ಸಮಾನವಾದ ಪ್ರಕಾಶದಿಂದ ಬೆಳಗುತ್ತಾ ಚಂದ್ರಶಾಲೆ ಗಳಿಂದಲೂ ವಿಹಾರಗೃಹಗಳಿಂದಲೂ ಶ್ರೇಷ್ಠವಾದ ಜಗುಲಿಗಳಿಂದಲೂ ಕೂಡಿದ್ದಿತು. ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿದ್ದ ಅಂತಹ ಸರ್ವಶ್ರೇಷ್ಠ ವಾದ ಪುಷ್ಪಕವಿಮಾನವನ್ನು ಹನುಮಂತನು ನೋಡಿದನು. ಆ ವಿಮಾನವು

ಸುವರ್ಣಮಯವಾದ ಮತ್ತು ಸ್ಫಟಿಕಮಯವಾದ ಜಾಲರಿಗಳಿಂದ ಕೂಡಿದ ಕಿಟಕಿಗಳಿಂದ ಸಮಲಂಕೃತವಾಗಿದ್ದಿತು. ಅದರಲ್ಲಿದ್ದ ಜಗುಲಿಗಳು ಶ್ರೇಷ್ಠವಾದ ಇಂದ್ರನೀಲ-ಮಹಾನೀಲಮಣಿಗಳಿಂದ ನಿರ್ಮಿಸಲ್ಪಟ್ಟಿದ್ದು ತಳಭಾಗವು ವಿಚಿತ್ರವಾದ ಹವಳಗಳಿಂದಲೂ, ಅಪಾರಮೌಲ್ಯದ ಮಣಿಗಳಿಂದಲೂ, ಉಪಮಾನರಹಿತವಾದ ಮುತ್ತುಗಳಿಂದಲೂ ಚಿತ್ರಿತವಾಗಿ ಮಾಡಲ್ಪಟ್ಟು ರಾರಾಜಿಸುತ್ತಿದ್ದಿತು. ಸುವರ್ಣಸದೃಶವಾದ ಪುಣ್ಯಗಂಧದಿಂದ ಯುಕ್ತವಾದ ಬಾಲಸೂರ್ಯಸದೃಶವಾದ ರಕ್ತಚಂದನದಿಂದ ಸಮಲಂಕೃತವಾಗಿದ್ದಿತು.

ಅಂತಹ ಅತಿಸುಂದರವಾದ ಪುಷ್ಪಕವಿಮಾನವನ್ನು ಹನುಮಂತನು ಹತ್ತಿದನು. ಪಾನೀಯ-ಭಕ್ಷ್ಯ ಮತ್ತು ಅನ್ನಗಳಿಂದ ಹೊರಸೂಸುತ್ತಿದ್ದ, ಸರ್ವತ್ರ ವ್ಯಾಪ್ತವಾಗಿದ್ದ ದಿವ್ಯಗಂಧವನ್ನು ರೂಪವಂತನಾದ ವಾಯುವನ್ನೇ ಮೂಸಿನೋಡುವಂತೆ ಆಘ್ರಾಣಿಸಿದನು. ಪಾನ-ಭಕ್ಷ್ಯಾನ್ನಗಳಿಂದ ಹೊರ ಸೂಸುತ್ತಿದ್ದ ಆ ದಿವ್ಯಗಂಧವು ಬಂಧುವೊಬ್ಬನನ್ನು ಮತ್ತೊಬ್ಬ ಉತ್ತಮನಾದ ಬಂಧುವು–'ಇತ್ತ ಬಾ-ಇತ್ತ ಬಾ'–ಎಂದು ಹೇಳಿಕೊಂಡು ಕರೆಯುವಂತೆ ಮಹಾಸತ್ತ್ವನಾದ ಹನುಮಂತನನ್ನು ಕರೆಯುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಅಲ್ಲಿಂದ ಮುಂದೆ ಹೋದ ಹನುಮಂತನು ರಾವಣಾಸುರನ ಸುಂದರವಾದ ಶಾಲೆಯೊಂದನ್ನು ನೋಡಿದನು. ಅದು ಕಡುಚೆಲುವೆ ಯಾದ ಸ್ತ್ರೀಯಂತೆ ಕಂಗೊಳಿಸುತ್ತಾ ಆಹ್ಲಾದವನ್ನುಂಟುಮಾಡುತ್ತಿದ್ದಿತು. ಮಣಿಮಯವಾದ ಸೋಪಾನದಿಂದ ಯುಕ್ತವಾಗಿತ್ತಲ್ಲದೇ ಸುವರ್ಣಮಯ ವಾದ ಬಲೆಗಳಿಂದ ಕೂಡಿದ ಗವಾಕ್ಷಗಳಿಂದ ವಿರಾಜಿಸುತ್ತಾ ಮಂಗಳಕರ ವಾಗಿದ್ದಿತು. ನೆಲಕ್ಕೆ ಸ್ಫಟಿಕಶಿಲೆಗಳ ಫಲಕಗಳನ್ನು ಹಾಸಿ ಅಲ್ಲಲ್ಲಿ ದಂತದ ಚಿತ್ರಗಳನ್ನು ಕೆತ್ತಿದ್ದರು. ಮುತ್ತು-ವಜ್ರ-ಹವಳಗಳಿಂದಲೂ, ಬೆಳ್ಳಿ-ಚಿನ್ನದ ತಗಡುಗಳಿಂದಲೂ ಸಮಲಂಕೃತವಾದ ಮಣಿಮಯವಾದ ಸ್ತಂಭಗಳೇ ಅಲ್ಲದೆ ಇನ್ನೂ ಅನೇಕ ಸುಂದರವಾದ ಸ್ತಂಭಗಳಿಂದ ಆ ದಿವ್ಯಶಾಲೆಯು ಭೂಷಿತವಾಗಿದ್ದಿತು. ಅಲ್ಲಿ ನೇರವಾಗಿರುವ ಮತ್ತು ಎತ್ತರವಾಗಿರುವ ಕಂಬಗಳು ಪಕ್ಷಿಗಳ ರೆಕ್ಕೆಗಳಂತೆಯೇ ಕಾಣುತ್ತಿದ್ದು ಆಕಾಶದ ಕಡೆಗೆ ಹಾರಲು ಸಿದ್ಧವಾಗಿರುವಂತೆ ಕಾಣುತ್ತಿದ್ದಿತು. ಆ ದಿವ್ಯಶಾಲೆಯ ಮಧ್ಯದಲ್ಲಿ ನದಿ-ಸಮುದ್ರ ಮತ್ತು ಅರಣ್ಯಗಳ ಚಿಹ್ನೆಗಳಿಂದ ಕೂಡಿದ ದೊಡ್ಡದಾದ

ರತ್ನಗಂಬಳಿಯನ್ನು ಹಾಸಿದ್ದರು. ರಾಷ್ಟ್ರ, ಗೃಹ, ಇವೇ ಮುಂತಾದ ಚಿತ್ರಗಳನ್ನೊಳಗೊಂಡಿದ್ದ ಆ ದಿವ್ಯಶಾಲೆಯು ಭೂಮಿಯಂತೆ ವಿಸ್ತಾರವಾಗಿಯೂ ಕಾಣುತ್ತಿದ್ದಿತು. ಅಲ್ಲಿ ಮದಿಸಿದ ಪಕ್ಷಿಗಳು ಕಲಕಲ ಧ್ವನಿಮಾಡುತ್ತಿದ್ದುವು. ದಿವ್ಯಗಂಧಗಳಿಂದ ಆ ಶಾಲೆಯು ಸುವಾಸಿತವಾಗಿದ್ದಿತು. ಅಲ್ಲಿ ಬಹುಮೂಲ್ಯವಾದ ರತ್ನಗಂಬಳಿಯನ್ನು ಹಾಸಿದ್ದರು. ರಾಕ್ಷಸಾಧಿಪತಿಯಾದ ರಾವಣನೇ ಆ ದಿವ್ಯಶಾಲೆಯಲ್ಲಿ ವಾಸಮಾಡುತ್ತಿದ್ದನು. ಅಗುರು-ಧೂಪಗಳಿಂದ ಧೂಪಿತವಾದ ಆ ಶಾಲೆಯು ಧೂಮ್ರವರ್ಣದ್ದಾಗಿ ಕಾಣಿಸುತ್ತಿದ್ದಿತು. ಆದರೆ ವಾಸ್ತವವಾಗಿ ಹಂಸದಂತೆ ಬಿಳುಪಾಗಿಯೂ ನಿರ್ಮಲವಾಗಿಯೂ ಇದ್ದಿತು. ನಾನಾವರ್ಣದ ಪತ್ರ-ಪುಷ್ಪಗಳ ಸಮರ್ಪಣೆಯಿಂದಾಗಿ ಅದು ಚಿತ್ರವರ್ಣದಂತೆ ಕಾಣುತ್ತಿದ್ದು ವಸಿಷ್ಠರ ಧೇನುವಿನಂತೆ ಸಕಲಕಾಮನಾವಸ್ತುಗಳನ್ನೂ ಕೊಡುತ್ತಿದ್ದಿತು. ಒಳ್ಳೆಯ ಪ್ರಭೆಯಿಂದ ರಾರಾಜಿಸುತ್ತಾ ಮನಸ್ಸಿಗೆ ಆಮೋದವನ್ನುಂಟುಮಾಡುವುದಾಗಿದ್ದಿತು. ಅಲ್ಲಿ ವಾಸಮಾಡುವವರ ಶರೀರದ ಶೋಭೆಯನ್ನು ಹೆಚ್ಚಿಸುತ್ತಲೂ ಶೋಕವನ್ನು ಪರಿಹರಿಸುತ್ತಲೂ ಇದ್ದಿತು. ಸಂಪತ್ತಿನ ಉಗಮಸ್ಥಾನವೇ ಆಗಿರುವುದೋ ಎಂಬಂತೆ ಕಾಣುತ್ತಿದ್ದಿತು.

**ಇನ್ದ್ರಿಯಾಣೀನ್ದ್ರಿಯಾರ್ಥೈಸ್ತು ಪಞ್ಚಪಞ್ಚಭಿರುತ್ತಮೈಃ ।**
**ತರ್ಪಯಾಮಾಸ ಮಾತೇವ ತದಾ ರಾವಣಪಾಲಿತಾ ॥೨೮॥**

ರಾವಣನಿಂದ ಪರಿಪಾಲಿಸಲ್ಪಡುತ್ತಿದ್ದ ಆ ದಿವ್ಯಶಾಲೆಯು ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ಐದು ಇಂದ್ರಿಯವಿಷಯಗಳಿಂದ ಕಿವಿ-ಚರ್ಮ-ಕಣ್ಣು-ನಾಲಿಗೆ ಮತ್ತು ಮೂಗುಗಳೆಂಬ ಹನುಮಂತನ ಐದು ಇಂದ್ರಿಯಗಳನ್ನೂ ತಾಯಿಯೋಪಾದಿಯಲ್ಲಿ ತೃಪ್ತಿಗೊಳಿಸಿತು. ಆ ದಿವ್ಯಶಾಲೆಯಲ್ಲಿ ಪಂಚೇಂದ್ರಿಯಗಳಿಗೂ ತೃಪ್ತಿಯುಂಟಾಗುತ್ತಿದ್ದಿತು.

ಅಂತಹ ದಿವ್ಯಶಾಲೆಯನ್ನೂ ಅದರ ಅನುಪಮವಾದ ಸೌಂದರ್ಯವನ್ನೂ ನೋಡಿ ಮಾರುತಿಯು ಅಂದುಕೊಂಡನು :

**ಸ್ವರ್ಗೋಽಯಂ ದೇವಲೋಕೋಽಯಮಿನ್ದ್ರಸ್ಯೇಯಂ ಪುರೀ ಭವೇತ್ ।**
**ಸಿದ್ಧಿರ್ವೇಯಂ ಪರಾ ಹಿ ಸ್ಯಾದಿತ್ಯಮನ್ಯತ ಮಾರುತಿಃ ॥೨೯॥**

"ಇದು ನಿಶ್ಚಯವಾಗಿಯೂ ಸ್ವರ್ಗಲೋಕವೇ ಸರಿ. ದೇವಲೋಕವಾದರೂ ಆಗಿರಬಹುದು ಅಥವಾ ಇಂದ್ರನ ಪಟ್ಟಣವಾದ ಅಮರಾವತಿಯಿರಬಹುದೇ? ಅದಕ್ಕಿಂತಲೂ ಮಿಗಿಲಾದ ತಪಸ್ಸಿದ್ಧಿರೂಪವಾದ ಬ್ರಹ್ಮನ ಸ್ಥಾನವೇ ಆಗಿರಬಹುದು."*

ಸುವರ್ಣಮಯವಾದ ದೀಪಸ್ತಂಭಗಳಲ್ಲಿ ಅಲ್ಲಾಡದೇ ಉರಿಯುತ್ತಿದ್ದ ದೀಪಗಳ ಸಾಲುಗಳನ್ನು ಮಾರುತಿಯು ನೋಡಿದನು. ಆದರೆ ಆ ದೀಪಗಳ ಸಾಲುಗಳು ರಾವಣನ ದಿವ್ಯತೇಜಸ್ಸಿನ ಮುಂದೆ ಮಸುಕು-ಮಸುಕಾಗಿ ಕಾಣುತ್ತಿದ್ದುವು. ಜೂಜಿನಲ್ಲಿ ಮಹಾಧೂರ್ತರಿಂದ ಪರಾಜಿತರಾಗಿ ಚಿಂತಾಮಗ್ನರಾಗಿ ಕುಳಿತಿರುವ ಸಾಧಾರಣಧೂರ್ತರಂತೆ ಕಾಣುತ್ತಿದ್ದುವು. ದೀಪಗಳ ಪ್ರಕಾಶದಿಂದಲೂ, ರಾವಣನ ತೇಜಸ್ಸಿನಿಂದಲೂ, ಆಭರಣಗಳ ಕಾಂತಿಯಿಂದಲೂ ಆ ದಿವ್ಯಶಾಲೆಯು ಪ್ರಜ್ವಲಿಸುತ್ತಿದೆಯೋ ಎಂಬಂತೆ ಹನುಮಂತನಿಗೆ ಭಾಸವಾಯಿತು.

ಅನಂತರ ಮಾರುತಿಯು ಆ ದಿವ್ಯಶಾಲೆಯಲ್ಲಿ ಸಾವಿರಾರು ಉತ್ತಮ ಸ್ತ್ರೀಯರನ್ನು ನೋಡಿದನು. ಅವರೆಲ್ಲರೂ ರತ್ನಗಂಬಳಿಗಳ ಮೇಲೆ ಕುಳಿತಿದ್ದರು. ಬಗೆ-ಬಗೆಯ ಬಣ್ಣಗಳ ವಸ್ತ್ರಗಳನ್ನೂ ಮಾಲೆಗಳನ್ನೂ ಧರಿಸಿದ್ದರು. ನಾನಾವಿಧವಾದ ವೇಷ-ಭೂಷಣಗಳಿಂದ ಸಮಲಂಕೃತರಾಗಿದ್ದರು. ಕೆಲವರು ಅರ್ಧರಾತ್ರಿಯು ಕಳೆದನಂತರ ಕ್ರೀಡಾದಿಗಳಿಂದ ವಿರತರಾಗಿ ಮಧುಪಾನ ಮಾಡಿ ಗಾಢವಾದ ನಿದ್ರೆಯಲ್ಲಿದ್ದರು. ಕ್ರೀಡೆಯ ಆಯಾಸದಿಂದಲೂ

---

* ಸ್ವರ್ಗಲೋಕ, ದೇವಲೋಕ, ಇಂದ್ರನ ಪಟ್ಟಣವಾದ ಅಮರಾವತಿ, ಸಿದ್ಧಿಯಿಂದ ಪಡೆದ ಲೋಕ-ಎಂದು ನಾಲ್ಕು ಪ್ರಕಾರವಾಗಿ ಇಲ್ಲಿ ಹೇಳಿದೆ. ಇವೆಲ್ಲವೂ ಪರ್ಯಾಯ ಪದಗಳು–ಎಂಬ ಭಾವನೆ ಉಂಟಾಗುತ್ತದೆ. ವ್ಯಾಖ್ಯಾನಕಾರರು ಇವು ಪುನರುಕ್ತಿಯಲ್ಲವೆಂಬುದನ್ನು ಪ್ರತಿಪಾದಿಸುತ್ತಾ ಒಂದೊಂದು ಪದಕ್ಕೂ ಪ್ರತ್ಯೇಕವಾದ ಅರ್ಥವನ್ನು ಹೇಳಿರುತ್ತಾರೆ. ಸ್ವರ್ಗಃ = ತ್ರಿದಿವ, ಬ್ರಹ್ಮ-ವಿಷ್ಣು-ರುದ್ರರಿರುವ ಲೋಕ ಅಥವಾ ಮೂರನೆಯ ಲೋಕ. (ಜ್ಯೋತಿಷ್ಟೋಮಾದಿಗಳ ಫಲಭೋಗಭೂಮಿ) ಭೂರ್ಲೋಕ ಭುವರ್ಲೋಕಗಳಾದನಂತರ ಮೂರನೆಯದು ಸ್ವರ್ಗಲೋಕ. ದೇವಲೋಕಃ = ವಾಯು-ವರುಣಾದಿಗಳ ಲೋಕ. ಇಂದ್ರನ ಪಟ್ಟಣ ವಸ್ವೌಕಸಾರಾ. (ಅಮರಾವತಿ) ಇದು ಪೂರ್ವದಿಕ್ಕಿನಲ್ಲಿದೆ. ಇಂದ್ರನು ಪೂರ್ವದಿಕ್ಕಿಗೂ ಅಧಿಪತಿ.

ಮಧುಪಾನದಿಂದಲೂ ಅವರು ಬಲಾತ್ಕಾರವಾಗಿ ನಿದ್ರಾದೇವಿಯನ್ನು ಆಲಿಂಗಿಸಬೇಕಾಯಿತು. ಹೆಂಗಸರ ಸಮೂಹವು ಹಾಗೆ ಮಲಗಿದ್ದಾಗ ಕಾಲಂದುಗೆ-ಗೊಲಸು-ಒಡ್ಯಾಣ–ಇವೇ ಮುಂತಾದ ಆಭರಣಗಳ ಶಬ್ದವು ಸ್ವಾಭಾವಿಕವಾಗಿಯೇ ಕೇಳಿ ಬರುತ್ತಿರಲಿಲ್ಲ. ಅದನ್ನು ನೋಡಿದರೆ ಶಾಂತವಾಗಿರುವ ಹಂಸಪಕ್ಷಿಗಳಿಂದಲೂ ದುಂಬಿಗಳಿಂದಲೂ ಕೂಡಿರುವ ಪದ್ಮಸರೋವರದಂತೆಯೇ ಆ ಸ್ತ್ರೀಯರ ಸಮೂಹವು ಕಾಣುತ್ತಿದ್ದಿತು. ಮಲಗಿದ್ದ ಸಮಯದಲ್ಲಿ ಆ ಸ್ತ್ರೀಯರೆಲ್ಲರೂ ತುಟಿಗಳನ್ನೂ ಕಣ್ಣುಗಳನ್ನೂ ಮುಚ್ಚಿಕೊಂಡಿದ್ದರು. ಅವರ ಮುಖಗಳು ಸುಗಂಧಯುಕ್ತವಾಗಿದ್ದು ಹಗಲಿನಲ್ಲಿ ವಿಕಸಿತವಾಗಿ ರಾತ್ರಿಯಾಗುತ್ತಲೇ ಮುಕುಳಿತವಾಗುವ ಪದ್ಮ ಗಳಂತೆಯೇ ಪ್ರಕಾಶಿಸುತ್ತಿದ್ದುವು. "ಮದಿಸಿದ ದುಂಬಿಗಳಿಗೆ–ಸರೋವರ ದಲ್ಲಿನ ಪದ್ಮಕ್ಕೂ, ದಿವ್ಯಶಾಲೆಯಲ್ಲಿದ್ದ ವರಸ್ತ್ರೀಯರ ಮುಖಪದ್ಮಕ್ಕೂ ವ್ಯತ್ಯಾಸವೇ ಗೊತ್ತಾಗುತ್ತಿಲ್ಲ. ಮದಿಸಿದ ದುಂಬಿಗಳು ಉತ್ತಮಸ್ತ್ರೀಯರ ಆ ಮುಖಪದ್ಮಗಳನ್ನು ಅರಳಿದ ಕಮಲಗಳನ್ನು ಆಶ್ರಯಿಸುವಂತೆಯೇ ನಿತ್ಯವೂ ಆಶ್ರಯಿಸುತ್ತಿವೆ"–ಎಂಬುದಾಗಿ ಮಹಾಕಪಿಯಾದ ಹನುಮಂತನು ಯುಕ್ತಿ ಯಿಂದ ಭಾವಿಸಿದನು. ಸೌರಭ್ಯಾದಿ ಗುಣಸಾಮ್ಯದಿಂದ ಅವರ ಮುಖಗಳನ್ನು ಕಮಲಗಳಿಗೆ ಸಮಾನವೆಂದೇ ಭಾವಿಸಿದನು.

ವರನಾರಿಯರಿಂದ ಸಮಾಕುಲವಾಗಿದ್ದ ಆ ದಿವ್ಯಶಾಲೆಯು ಶರತ್ಕಾಲ ದಲ್ಲಿ ನಕ್ಷತ್ರಗಳಿಂದ ಶೋಭಿಸುವ ನಿರ್ಮಲವಾದ ಆಕಾಶದಂತೆಯೇ ವಿರಾಜಿ ಸುತ್ತಿದ್ದು ಅವರಿಂದ ಪರಿವೃತನಾಗಿದ್ದ ರಾವಣೇಶ್ವರನು ನಕ್ಷತ್ರಗಳಿಂದ ಪರಿವೃತನಾದ ಚಂದ್ರನಂತೆಯೇ ಪ್ರಕಾಶಿಸುತ್ತಿದ್ದನು.

ಸೌಂದರ್ಯದ ಖನಿಯಂತಿದ್ದ ಆ ಸ್ತ್ರೀಸಮೂಹವನ್ನು ನೋಡಿ ಮಾರುತಿಯು ಸ್ವರ್ಗಭೋಗಗಳನ್ನು ಅನುಭವಿಸಿ ಮಿಕ್ಕ ಪುಣ್ಯಶೇಷದಿಂದ

---

ತಪಃಸಿದ್ಧಿಯಿಂದ ಪಡೆದುಕೊಳ್ಳಬಹುದಾದುದು ಸತ್ಯಲೋಕ ಅಥವಾ ಬ್ರಹ್ಮಲೋಕ. ಮೇಲಿನ ಏಳು ಲೋಕಗಳನ್ನು ದೇವಲೋಕವೆಂದು ಹೇಳುವ ಪುರಾಣವಚನವೂ ಇದೆ. **ಭೂರ್ಲೋಕೋಽಥ ಭುವರ್ಲೋಕಃ ಸ್ವರ್ಲೋಕೋಽಥ ಮಹರ್ಜನಾಃ । ತಪಃ ಸತ್ಯಂ ಚ ಸಪ್ತೈತೇ ದೇವಲೋಕಾಃ ಪ್ರಕೀರ್ತಿತಾಃ ॥** (ಮತ್ಸ್ಯಪುರಾಣ.)

ಭೂಲೋಕಕ್ಕಿಳಿದ ಎಲ್ಲ ತಾರೆಗಳೂ ಒಟ್ಟಾಗಿ ಈ ದಿವ್ಯಶಾಲೆಯಲ್ಲಿ ಸೇರಿಕೊಂಡಿರಬಹುದೆಂದು ಭಾವಿಸಿದನು.

ರಾವಣನ ಆ ದಿವ್ಯಶಾಲೆಯಲ್ಲಿದ್ದ, ಶುಭಕರವಾದ, ಕಾಂತಿಯಿಂದ ಕೂಡಿದ್ದ, ಮಹಾನಕ್ಷತ್ರಗಳಂತೆ ಶೋಭಾಯಮಾನವಾಗಿದ್ದ ವರರಮಣಿಯರ ಸಮೂಹವು ಕಾಂತಿ-ರೂಪ-ಪ್ರಸನ್ನತೆಗಳಿಂದ ಬಹಳವಾಗಿ ವಿರಾಜಿಸುತ್ತಿದ್ದಿತು.

ದಿವ್ಯಶಾಲೆಯಲ್ಲಿದ್ದ ಸ್ತ್ರೀಯರು ಮಧುಪಾನಾನಂತರ ರಾವಣನನ್ನು ಸಂತೋಷಗೊಳಿಸಲು ನೃತ್ಯ-ಗೀತ-ಕ್ರೀಡೆಗಳಲ್ಲಿ ಆಸಕ್ತರಾಗಿದ್ದಾಗ ಅವರ ತಲೆಗೂದಲುಗಳು ಕೆದರಿಹೋಗಿದ್ದುವು. ಹಾರಗಳು ಅಸ್ತವ್ಯಸ್ತವಾಗಿದ್ದುವು. ಆಭರಣಗಳು ಚೆಲ್ಲಾಪಿಲ್ಲಿಯಾಗಿ ಸುತ್ತಲೂ ಬಿದ್ದಿದ್ದುವು. ಮಧುಪಾನದಿಂದ ಮತ್ತು ಆಯಾಸದಿಂದ ಪ್ರಮತ್ತರಾಗಿದ್ದ ಅವರಿಗೆ ಅವೆಲ್ಲವನ್ನೂ ಸರಿಪಡಿಸಿಕೊಳ್ಳಲೂ ಎಚ್ಚರವಿರಲಿಲ್ಲ. ಆವರಿಸಿದ ನಿದ್ರೆಯಿಂದ ಜ್ಞಾನಶೂನ್ಯರಾದವರಂತೆ ಮಲಗಿದ್ದ ಆ ನಾರೀಮಣಿಯರನ್ನು ಹನುಮಂತನು ನೋಡಿದನು.

ಅಲ್ಲಿದ್ದ ಸಾವಿರಾರು ವರನಾರಿಯರಲ್ಲಿ ಕೆಲವರ ಹಣೆಯಲ್ಲಿದ್ದ ಕಸ್ತೂರೀ ಸಿಂಧೂರಾದಿ ತಿಲಕಗಳು ಅಳಿಸಿಹೋಗಿದ್ದುವು. ಕೆಲವರ ಕಾಲಂದುಗೆಗಳು ಕಳಚಿಬಿದ್ದಿದ್ದುವು. ಕೆಲವರ ಪಕ್ಕದಲ್ಲಿ ಬಾಡಿದ ಪುಷ್ಪಹಾರಗಳು ಬಿದ್ದಿದ್ದುವು. ಕೆಲವರ ಮುತ್ತಿನ ಹಾರಗಳು ಕಡಿದುಹೋಗಿದ್ದುವು. ಕೆಲವರ ವಸ್ತ್ರಗಳು ಸಡಿಲವಾಗಿದ್ದುವು. ಕೆಲವರ ಒಡ್ಯಾಣಗಳು ಕಳಚಿ ಕೆಳಕ್ಕೆ ಬಿದ್ದಿದ್ದುವು. ಅವರೆಲ್ಲರೂ ಭಾರವನ್ನು ಹೊತ್ತ ಹೆಣ್ಣುಕುದುರೆಮರಿಗಳಂತೆ ಕಾಣುತ್ತಿದ್ದರು.* ಕೆಲವು ವರನಾರಿಯರ ಕುಂಡಲಗಳು ಕೆಳಗೆ ಬಿದ್ದಿದ್ದುವು. ಕೆಲವರು ಧರಿಸಿದ್ದ ಪುಷ್ಪಮಾಲಿಕೆಗಳು ಕಡಿದುಹೋಗಿ ಕೆಳಗೆ ಬಿದ್ದು ಮರ್ದಿತವಾಗಿದ್ದುವು. ಆ ಸಮಯದಲ್ಲಿ ಅವರು ಮಹಾವನದಲ್ಲಿ ಗಜೇಂದ್ರನಿಂದ ತುಳಿಯಲ್ಪಟ್ಟ ವಿಕಸಿತವಾದ ಲತೆಗಳಂತೆಯೇ ಕಾಣುತ್ತಿದ್ದರು. ಕೆಲವು ಸ್ತ್ರೀಯರ ಸ್ತನಗಳ ಮಧ್ಯದಲ್ಲಿ ಚಂದ್ರಕಿರಣಗಳಂತೆ ಆಹ್ಲಾದಕರವಾದ ಪ್ರಭೆ

* ರಥವನ್ನೆಳೆದ ಶ್ರಮದಿಂದ ಕೂಡಿದ ಹೆಣ್ಣುಕುದುರೆಮರಿಗಳು ರಥದಿಂದ ಬಿಚ್ಚಿದೊಡನೆಯೇ ಶ್ರಮಪರಿಹಾರಕ್ಕಾಗಿ ಕಾಲುಗಳನ್ನು ಅಸ್ತವ್ಯಸ್ತವಾಗಿ ಚಾಚಿಕೊಂಡು ಮಲಗಿಬಿಡುವಂತೆ ರಾವಣನ ಶಾಲೆಯಲ್ಲಿದ್ದ ವರನಾರಿಯರು ಕ್ರೀಡಾವಿಹಾರಗಳ ಆಯಾಸದಿಂದ ಅಸ್ತವ್ಯಸ್ತವಾಗಿ ಮಲಗಿದ್ದರು.

ಯಿಂದ ಕೂಡಿದ್ದ ಮುತ್ತಿನ ಹಾರಗಳು ಮೇಲೆದ್ದು ಕಾಣುತ್ತಿದ್ದುವು. ಅದನ್ನು ನೋಡಿದರೆ ಹಂಸಪಕ್ಷಿಗಳೇನಾದರೂ ವರಸ್ತ್ರೀಯರ ಸ್ತನಗಳ ಮಧ್ಯದಲ್ಲಿ ಮಲಗಿವೆಯೋ ಎಂಬಂತೆ ಭಾಸವಾಗುತ್ತಿದ್ದಿತು. ಮತ್ತೆ ಕೆಲವು ಸ್ತ್ರೀಯರ ಸ್ತನಗಳ ಮಧ್ಯದಲ್ಲಿ ಎದ್ದುಕಾಣುತ್ತಿದ್ದ ವೈಡೂರ್ಯಮಣಿಮಾಲೆಗಳು ಕದಂಬ ಪಕ್ಷಿಗಳಂತೆ ಕಾಣುತ್ತಿದ್ದುವು. ಕೆಲವು ಸ್ತ್ರೀಯರ ಸ್ತನಗಳ ಮಧ್ಯದಲ್ಲಿ ಎದ್ದು ಕಾಣುತ್ತಿದ್ದ ಹೇಮಸೂತ್ರಗಳು ಚಕ್ರವಾಕಪಕ್ಷಿಗಳಂತೆ ಕಾಣುತ್ತಿದ್ದುವು. ನದಿಗಳಲ್ಲಿನ ಮರಳುದಿಣ್ಣೆಗಳಂತಿರುವ ಜಘನಪ್ರದೇಶಗಳಿಂದಲೂ ಮುಕ್ತಾ ಹಾರ-ವೈಡೂರ್ಯ-ಹೇಮಸೂತ್ರರೂಪವಾದ ಹಂಸ-ಕದಂಬ-ಚಕ್ರವಾಕ ಪಕ್ಷಿಗಳಿಂದಲೂ ಕೂಡಿದ್ದ ಆ ವರನಾರಿಯರು ನದಿಗಳಂತೆಯೇ ಪ್ರಕಾಶಿಸು ತ್ತಿದ್ದರು. ಅವರು ಕಾಲುಗಳಲ್ಲಿ ತೊಟ್ಟಿದ್ದ ಗೆಜ್ಜೆಗಳು ಕಮಲಗಳ ಮೊಗ್ಗಿನಂತಿ ದ್ದುವು. ಸುವರ್ಣಾಭರಣಗಳು ನದಿಗಳಲ್ಲಿರುವ ಕಮಲಗಳಂತಿದ್ದುವು. ಅವರು ಮಾಡುತ್ತಿದ್ದ ಶೃಂಗಾರಚೇಷ್ಟೆಗಳು ಮೊಸಳೆಗಳ ರೂಪದಲ್ಲಿದ್ದುವು. ಮಹಾಪತಿವ್ರತೆಯರೆಂದು ಗಳಿಸಿದ್ದ ಯಶಸ್ಸು ನದಿಯ ತೀರಗಳ ರೂಪ ದಲ್ಲಿದ್ದಿತು. ಹಾಗೆ ನದಿಗಳಂತೆಯೇ ಕಾಣುತ್ತಿದ್ದ ಆ ವರನಾರಿಯರು ನಿದ್ರಿಸು ತ್ತಿದ್ದಾಗ ಶಾಂತವಾದ ಮಹಾನದಿಗಳಂತೆಯೇ ಪ್ರಕಾಶಿಸುತ್ತಿದ್ದರು.

**ಮೃದುಷ್ವಙ್ಗೇಷು ಕಾಸಾಂಚಿತ್ಕುಚಾಗ್ರೇಷು ಚ ಸಂಸ್ಥಿತಾಃ ।**
**ಬಭೂವುರ್ಭ್ರಮರಾಣೀವ ಶುಭಾ ಭೂಷಣರಾಜಯಃ ॥೫೧॥**

ಕೆಲವು ಸ್ತ್ರೀಯರ ಮೃದುವಾದ ಅಂಗಗಳಲ್ಲಿಯೂ ಕುಚಾಗ್ರಗಳಲ್ಲಿಯೂ ಇದ್ದ ಶುಭಾವಹವಾದ ಆಭರಣಗಳು ದುಂಬಿಗಳ ಸಾಲುಗಳಂತೆಯೇ ಕಾಣುತ್ತಿದ್ದುವು.*

* ಒಬ್ಬ ವ್ಯಾಖ್ಯಾನಕಾರರು ಭ್ರಮರಾಣೀವ = ಭ್ರಮರಾ ಇವ ಎಂದು ಅರ್ಥಮಾಡಿ ವ್ಯತ್ಯಯಃ ಆರ್ಷಃ, ಆರ್ಷಪ್ರಯೋಗವೆಂದು ಸಮರ್ಥಿಸಿದ್ದಾರೆ. ಮತ್ತೊಬ್ಬರು ಭ್ರಮರಾಣಿ ಎಂಬುದಕ್ಕೆ ಭೂಷಣಾನಿ ಎಂಬ ಪಾಠಾಂತರವನ್ನಿಟ್ಟುಕೊಂಡು ಭೂಷಣ ರಾಜಯಃ ಎಂಬುದಕ್ಕೆ ಬದಲಾಗಿ ಭೂಷಣಜನಿತರೇಖಾಃ –ಒಡವೆಗಳ ಒತ್ತುವಿಕೆಯಿಂದ ಉಂಟಾದ ಕುಚಾಗ್ರಗಳಲ್ಲಿದ್ದ ಗೆರೆಗಳೂ ಆಭರಣಾನೀವ ಆಭರಣದಂತೆ ಕಾಣುತ್ತಿದ್ದುವು ಎಂದು ಅರ್ಥಮಾಡಿದ್ದಾರೆ.

ಕೆಲವು ಸ್ತ್ರೀಯರ ಮುಖಗಳಿಂದ ಹೊರಬರುತ್ತಿದ್ದ ಉಸಿರಿನ ಗಾಳಿ ಯಿಂದ ಅಲುಗಾಡುತ್ತಿದ್ದ ಸೀರೆಯ ಸೆರಗುಗಳು ಆ ಸ್ತ್ರೀಯರ ಮುಖಗಳ ಮೇಲೆ ಪುನಃ ಪುನಃ ಹಾರಾಡುತ್ತಿದ್ದುವು.

ನಾನಾಪ್ರಕಾರವಾದ ಸುಂದರವಾದ ರೂಪಗಳಿಂದಲೂ ಮತ್ತು ಶೋಭಾಯಮಾನವಾದ ವರ್ಣಗಳಿಂದಲೂ ಪರಿಶೋಭಿಸುತ್ತಿದ್ದ, ಸುಂದರ ವಾದ ಪ್ರಭೆಗಳಿಂದ ಕೂಡಿದ್ದ ಮತ್ತು ನಿಃಶ್ವಾಸದಿಂದ ಮೇಲಕ್ಕೂ ಕೆಳಕ್ಕೂ ಹಾರಾಡುತ್ತಿದ್ದ ರಾವಣನ ಪತ್ನಿಯರ ಸೀರೆಗಳ ಸೆರಗುಗಳು ಮೂಲಗಳಲ್ಲಿ ನೆಟ್ಟಿರುವ ಧ್ವಜಪಟಗಳಂತೆ ಪ್ರಕಾಶಿಸುತ್ತಿದ್ದುವು.

ಮನೋಹರವಾದ ಕಾಂತಿಯಿಂದ ಕೂಡಿದ್ದ ಕೆಲವು ಸ್ತ್ರೀಯರ ಕುಂಡಲ ಗಳು ಅವರ ಮುಖಗಳಿಂದ ಬರುತ್ತಿದ್ದ ಉಸಿರಿನ ಗಾಳಿಯ ಸಂಸರ್ಗದಿಂದ ಮೆಲ್ಲಮೆಲ್ಲನೆ ಕುಣಿದಾಡುತ್ತಿದ್ದುವು.

ಸುಂದರಸ್ತ್ರೀಯರ ಮುಖದಿಂದ ಹೊರಬರುತ್ತಿದ್ದ, ಸ್ವಾಭಾವಿಕವಾಗಿಯೇ ಸುಗಂಧಯುಕ್ತವಾಗಿದ್ದ ನಿಃಶ್ವಾಸವಾಯುವು ಸಕ್ಕರೆಯಿಂದ ತಯಾರಿಸಿದ ಆಸವದ ಮನೋಹರವಾದ ಗಂಧದಿಂದಲೂ ಕೂಡಿದ್ದು ಅತ್ಯಂತಸುಖ ದಾಯಕವಾಗಿ ರಾವಣನನ್ನು ಸೇವಿಸುತ್ತಿದ್ದಿತು. (ರಾವಣನ ವರಸ್ತ್ರೀಯರ ಉಸಿರು ಸುಗಂಧಭೂಯಿಷ್ಠವಾಗಿದ್ದಿತು. ಅವರೆಲ್ಲರೂ ಆಸವವನ್ನು ಕುಡಿದ್ದು ದರಿಂದ ಅದರ ವಾಸನೆಯೂ ಉಸಿರಿನೊಡನೆ ಸೇರಿಕೊಂಡು ಬರುತ್ತಿದ್ದಿತು. ಅಂತಹ ನಿಃಶ್ವಾಸವು ರಾವಣನನ್ನು ಸೇವಿಸುತ್ತಿದ್ದಿತು. ಕಾಮಮೋಹಿತರಾಗಿದ್ದ ಸ್ತ್ರೀಯರು ಅಂತಹ ಸುಗಂಧಪೂರ್ಣವಾದ ನಿಃಶ್ವಾಸದೊಡನೆ ರಾವಣನನ್ನು ಚುಂಬಿಸುತ್ತಿದ್ದರು.) ರಾವಣನ ಕೆಲವು ಮಡದಿಯರು ಪಾನಮತ್ತರಾಗಿ ತಮ್ಮ ಜೊತೆಯಲ್ಲಿ ಮಲಗಿರುತ್ತಿದ್ದ ಸವತಿಯರ ಮುಖಗಳನ್ನೇ ರಾವಣನ ಮುಖ ವೆಂದು ಭ್ರಮಿಸಿ ಪುನಃ ಪುನಃ ಚುಂಬಿಸುತ್ತಿದ್ದರು.

ರಾವಣನ ವಿಷಯದಲ್ಲಿ ಅತ್ಯಾಸಕ್ತರಾಗಿದ್ದ, ಮಧುಪಾನದಿಂದಲೂ ಮತ್ತು ನಿದ್ರೆಯಿಂದಲೂ ಅವಶರಾಗಿದ್ದ, ಚುಂಬನದ ಸೌಖ್ಯವನ್ನು ಪಡೆದ ಆ ಶ್ರೇಷ್ಠನಾರಿಯರು ತಮ್ಮ ಸವತಿಯರನ್ನೂ ಪ್ರತಿಚುಂಬಿಸುವುದರ ಮೂಲಕ ಹಿತವನ್ನೇ ಮಾಡಿದರು. ಅವರೂ ಭ್ರಾಂತರಾಗಿ ತಮ್ಮ ಪ್ರಿಯಕರ ನಾದ ರಾವಣನೇ ತಮ್ಮನ್ನು ಚುಂಬಿಸಿರುವನೆಂದು ಭಾವಿಸಿ ಪ್ರತಿಯಾಗಿ

ತಾವೂ ಚುಂಬಿಸುತ್ತಿದ್ದರು. ಮತ್ತೆ ಕೆಲವು ಪ್ರಮದೆಯರು ಕಡಗಗಳಿಂದ ಸಮಲಂಕೃತವಾದ ತೋಳುಗಳನ್ನೂ, ರಮ್ಯವಾದ ವಸ್ತ್ರಗಳನ್ನೂ ತಲೆದಿಂಬು ಗಳನ್ನಾಗಿ ಮಾಡಿಕೊಂಡು ಮಲಗಿದ್ದರು. ರಾವಣನ ಪ್ರಮದೆಯರಲ್ಲಿ ಒಬ್ಬಳು ಮತ್ತೊಬ್ಬಳ ವಕ್ಷಃಸ್ಥಳದಲ್ಲಿ ತಲೆಯನ್ನಿಟ್ಟುಕೊಂಡು ಮಲಗಿದ್ದಳು. ಮತ್ತೊಬ್ಬಳು ಅವಳ ಭುಜದ ಮೇಲೆಯೇ ಮಲಗಿದ್ದಳು. ಮತ್ತೊಬ್ಬ ಸ್ತ್ರೀಯು ಬೇರೊಬ್ಬಳ ತೊಡೆಯನ್ನೇ ದಿಂಬನ್ನಾಗಿ ಮಾಡಿಕೊಂಡು ಮಲಗಿದ್ದಳು. ಮತ್ತೊಬ್ಬಳು ಸವತಿಯ ಕುಚಗಳನ್ನೇ ತಲೆದಿಂಬನ್ನಾಗಿ ಮಾಡಿ ಕೊಂಡಿದ್ದಳು. ಪಾನಮತ್ತರಾಗಿ ನಿದ್ರಾವಶರಾಗಿದ್ದ ಆ ನಾರೀಮಣಿಯರಿಗೆ ಯಾವ ವಿವೇಚನೆಯೂ ಇರಲಿಲ್ಲ. ಮಧುಪಾನದಿಂದ ಉಂಟಾದ ಪ್ರಮತ್ತತೆಗೂ ಮತ್ತು ಸ್ನೇಹಕ್ಕೂ ವಶರಾಗಿದ್ದ ರಾವಣನ ಆ ವರಸ್ತ್ರೀಯರು ಪರಸ್ಪರವಾಗಿ ಒಬ್ಬರು ಮತ್ತೊಬ್ಬರ ತೊಡೆಗಳನ್ನೂ, ಪಾರ್ಶ್ವಗಳನ್ನೂ, ಕಟಿಪ್ರದೇಶಗಳನ್ನೂ, ಪೃಷ್ಠಭಾಗಗಳನ್ನೂ ಆಶ್ರಯಿಸಿ ಒಬ್ಬರ ಅಂಗಾಂಗ ಗಳನ್ನು ಮತ್ತೊಬ್ಬರ ಅಂಗಾಂಗಗಳ ಮೇಲಿಟ್ಟುಕೊಂಡು ಮಲಗಿದ್ದರು. ಸುಮಧ್ಯಮೆಯರಾದ ರಾವಣನ ಆ ಪ್ರೇಯಸಿಯರು ಅಂಗಗಳ ಪರಸ್ಪರ ಸಂಸ್ಪರ್ಶದಿಂದ ಸುಪ್ರೀತರಾಗಿ ಏಕೀಕೃತವಾದ ಭುಜವುಳ್ಳವರಾಗಿ ರಾವಣನ ಆ ಅಂತಃಪುರದಲ್ಲಿ ಮಲಗಿದ್ದರು.

ಏಕೀಕೃತವಾದ ತೋಳುಗಳೆಂಬ ದಾರದ ಮೂಲಕವಾಗಿ ಪೋಣಿಸ ಲ್ಪಟ್ಟಿದ್ದ ಆ ವರನಾರಿಯರ ಮಾಲೆಯು–ದಾರದಲ್ಲಿ ಪೋಣಿಸಿದ ಮದಿಸಿದ ದುಂಬಿಗಳಿರುವ ಪುಷ್ಪಮಾಲೆಯಂತೆಯೇ ಕಾಣುತ್ತಿದ್ದಿತು.

ಗಾಳಿಯಿಂದ ಅಳ್ಳಾಡಿಸಲ್ಪಟ್ಟ ಅರಣ್ಯದಂತೆಯೇ ರಾವಣನ ದಿವ್ಯಶಾಲೆ ಯಲ್ಲಿದ್ದ ಸ್ತ್ರೀವನವೂ ಇದ್ದಿತು. ವಸಂತಮಾಸದಲ್ಲಿ ಮಲಯಾನಿಲವು ಬೀಸುವುದರಿಂದ ಲತೆಗಳಿಂದ ಕೂಡಿದ ವನವು ಕಂಪಿಸುವಂತೆ ರಾವಣನ ವರಸ್ತ್ರೀಯರ ನಿಃಶ್ವಾಸವಾಯುವಿನಿಂದ ಲತೆಗಳ ರೂಪದ ಅವರ ಸೀರೆಗಳ ಸೆರಗುಗಳು ಕಂಪಿಸುತ್ತಿದ್ದುವು. ಗಾಳಿಯು ಸತತವಾಗಿ ಬೀಸುತ್ತಿದ್ದುದರಿಂದ ಪುಷ್ಪಗುಚ್ಛಗಳಿರುವ ಲತೆಗಳೆಲ್ಲವೂ ಒಂದಕ್ಕೊಂದಕ್ಕೆ ಸೇರಿಕೊಂಡು ಮಾಲೆ ಯಂತೆಯೇ ಕಾಣುತ್ತಿದ್ದುವು. ಅಂತೆಯೇ ರಾವಣನ ಸ್ತ್ರೀವನದಲ್ಲಿ ಭುಜ ಗಳೆಂಬ ದಾರದ ಮೂಲಕವಾಗಿ ಸ್ತ್ರೀಕುಸುಮಗಳು ಮಾಲೆಯ ರೂಪದಲ್ಲಿ

ಪೋಣಿಸಲ್ಪಟ್ಟಿದ್ದುವು. ಗಾಳಿಯು ಸತತವಾಗಿ ಬೀಸುತ್ತಿದ್ದು ರೆಂಬೆಗಳು (ಸ್ಕಂದಗಳು) ಒಂದಕ್ಕೊಂದು ಸೇರಿಕೊಳ್ಳುವಂತೆ–ರಾವಣನ ಸ್ತ್ರೀವನ ದಲ್ಲಿಯೂ ಸ್ತ್ರೀಯರ ಸ್ಕಂಧಗಳು (ಹೆಗಲುಗಳು) ಪರಸ್ಪರವಾಗಿ ಸೇರಿಕೊಂಡಿ ದ್ದುವು. ವಸಂತದಲ್ಲಿ ಅರಣ್ಯವು ದುಂಬಿಗಳಿಂದ ಸಮಾಕುಲವಾಗಿರುವಂತೆ–ರಾವಣನ ಸ್ತ್ರೀವನವು ಸ್ತ್ರೀಯರ ಕೇಶರಾಶಿಗಳ ರೂಪವಾದ ಭ್ರಮರಗಳಿಂದ ಸಮಾಕುಲವಾಗಿದ್ದಿತು. ಹೀಗೆ ರಾವಣೇಶ್ವರನ ದಿವ್ಯಶಾಲೆಯಲ್ಲಿದ್ದ ಸ್ತ್ರೀವನವು ಮಧುಮಾಸದ ಅರಣ್ಯದಂತೆಯೇ ಕಂಗೊಳಿಸುತ್ತಿದ್ದಿತು.

ಆಭರಣಗಳೂ, ವಸ್ತ್ರಗಳೂ ಮತ್ತು ಮಾಲೆಗಳೂ ಇರಬೇಕಾದ ಉಚಿತವಾದ ಸ್ಥಳಗಳಲ್ಲಿಯೇ ಇದ್ದರೂ ಆ ಸಮಯದಲ್ಲಿ ರಾವಣನ ಆ ವರಸ್ತ್ರೀಯರೆಲ್ಲರೂ ಪರಸ್ಪರವಾಗಿ ತಬ್ಬಿಕೊಂಡು ಮಲಗಿದ್ದುದರಿಂದ ಯಾವ ಆಭರಣಗಳು ಯಾರವು?–ಎಂಬುದನ್ನು ವಿವೇಚಿಸಲು ಸಾಧ್ಯವಾಗು ತ್ತಿರಲಿಲ್ಲ. ರಾವಣನು ಸುಖವಾಗಿ ಮಲಗಿ ನಿದ್ರಿಸುತ್ತಿರುವಾಗ ನಾನಾಪ್ರಕಾರ ವಾದ ಪ್ರಭೆಗಳಿಂದ ಯುಕ್ತರಾಗಿದ್ದ ಆ ವರಸ್ತ್ರೀಯರನ್ನು ಪ್ರಜ್ವಲಿಸುತ್ತಿದ್ದ ಸುವರ್ಣಮಯವಾದ ದೀಪಗಳು ರೆಪ್ಪೆಗಳನ್ನೂ ಆಡಿಸದೇ ನೋಡು ತ್ತಿವೆಯೋ ಎಂಬಂತೆ ಕಾಣುತ್ತಿದ್ದಿತು.

ರಾಜರ್ಷಿ-ದ್ವಿಜ-ದೈತ್ಯ-ಗಂಧರ್ವ-ರಾಕ್ಷಸಕನ್ಯೆಯರು ರಾವಣನನ್ನು ನೋಡಿ ಕಾಮವಶರಾಗಿ ಅವನ ಪತ್ನಿಯರಾಗಿದ್ದರು. ಆ ಸ್ತ್ರೀಯರಲ್ಲಿ ಸಾಮಾನ್ಯವಾಗಿ ಹೆಚ್ಚು ಮಂದಿ ಯುದ್ಧಕಾಮನಾದ ರಾವಣನಿಂದ ಯುದ್ಧದಲ್ಲಿ ಶತ್ರುಗಳನ್ನು ಗೆದ್ದು ತರಲ್ಪಟ್ಟವರು. ಮದಿಸಿದ್ದ ಕೆಲವು ಪ್ರಮದೆಯರು ಕಾಮಮೋಹಿತರಾಗಿ ತಾವಾಗಿಯೇ ರಾವಣನ ಪತ್ನಿಯರಾಗಲು ಬಯಸಿ ಬಂದಿದ್ದರು.

**ನ ತತ್ರ ಕಾಚಿತ್ಪ್ರಮದಾ ಪ್ರಸಹ್ಯ**
**ವೀರ್ಯೋಪಪನ್ನೇನ ಗುಣೇನ ಲಬ್ಧಾ ।**
**ನ ಚಾನ್ಯಕಾಮಾಪಿ ನ ಚಾನ್ಯಪೂರ್ವಾ**
**ವಿನಾ ವರಾರ್ಹಾಂ ಜನಕಾತ್ಮಜಾಂ ತಾಮ್ ॥೬॥**

ವೀರ್ಯದಿಂದಲೂ ಗುಣಗಳಿಂದಲೂ ಸಂಪನ್ನನಾಗಿದ್ದ ರಾವಣನು

ಪೂಜಾರ್ಹಳಾದ, ಜನಕನ ಮಗಳಾದ ಸೀತಾದೇವಿಯೊಬ್ಬಳನ್ನು ಬಿಟ್ಟು ಅಂತಃಪುರದಲ್ಲಿದ್ದ ಯಾವಳೇ ಸ್ತ್ರೀಯನ್ನೂ ಬಲಾತ್ಕಾರಪೂರ್ವಕವಾಗಿ ಸೆಳೆದು ತಂದಿರಲಿಲ್ಲ. ಬೇರೆಯವರನ್ನು ಕಾಮಿಸಿದ್ದ ಸ್ತ್ರೀಯಾಗಲೀ ಬೇರೆಯವರೊಡನೆ ವಿವಾಹವಾಗಿದ್ದ ಸ್ತ್ರೀಯಾಗಲೀ ರಾವಣನ ಅಂತಃಪುರದಲ್ಲಿರಲಿಲ್ಲ.

**ನ ಚಾಕುಲೀನಾ ನ ಚ ಹೀನರೂಪಾ**
**ನಾದಕ್ಷಿಣಾ ನಾನುಪಚಾರಯುಕ್ತಾ ।**
**ಭಾರ್ಯಾಭವತ್ತಸ್ಯ ನ ಹೀನಸತ್ತ್ವಾ**
**ನ ಚಾಪಿ ಕಾನ್ತಸ್ಯ ನ ಕಾಮನೀಯಾ ॥೭೦॥**

ಹೀನಕುಲದವಳಾಗಲೀ, ಕುರೂಪಿಯಾಗಲೀ, ಕುಶಲತೆಯಿಲ್ಲದವಳಾಗಲೀ, ಉತ್ತಮಭೂಷಣಗಳಿಂದ ರಹಿತಳಾದವಳಾಗಲೀ, ದುರ್ಬಲಳಾಗಲೀ, ಕಾಂತನಾದ ರಾವಣನ ಮೋಹಕ್ಕೆ ಅರ್ಹಳಾಗದವಳಾಗಲೀ ರಾವಣನ ಅಂತಃಪುರದಲ್ಲಿರಲಿಲ್ಲ.

**ಬಭೂವ ಬುದ್ಧಿಸ್ತು ಹರೀಶ್ವರಸ್ಯ**
**ಯದೀದೃಶೀ ರಾಘವಧರ್ಮಪತ್ನೀ ।**
**ಇಮಾ ಯಥಾ ರಾಕ್ಷಸರಾಜಭಾರ್ಯಾಃ**
**ಸುಜಾತಮಸ್ಯೇತಿ ಹಿ ಸಾಧುಬುದ್ಧೇಃ ॥೭೧॥**

ಆ ಸಮಯದಲ್ಲಿ ಒಳ್ಳೆಯ ಬುದ್ಧಿಯವನಾದ ಹನುಮಂತನ ಬುದ್ಧಿಗೆ ಹೀಗೆ ತೋಚಿತು: "ಈ ಮಹಾರಾಕ್ಷಸನಾದ ರಾವಣನ ಭಾರ್ಯೆಯರಿರುವಂತೆಯೇ ಶ್ರೀರಾಘವನ ಧರ್ಮಪತ್ನಿಯಾದ ಸೀತಾದೇವಿಯೂ ತನ್ನ ಪತಿಯೊಡನೆ ಆಮೋದ-ಪ್ರಮೋದಗಳಿಂದ ಇರುವಂತಾಗಿದ್ದರೆ ಈ ರಾವಣನ ಜನ್ಮವು ಸಾರ್ಥಕವಾಗುತ್ತಿದ್ದಿತು."*

---

* ಈ ಶ್ಲೋಕಕ್ಕೆ ಒಬ್ಬೊಬ್ಬರೂ ಒಂದೊಂದು ವಿಧವಾಗಿ ಅರ್ಥಮಾಡಿರುತ್ತಾರೆ. (1) ಈ ರಾಕ್ಷಸಮಹಾರಾಜನ ಭಾರ್ಯೆಯರು ರಾವಣನಿಂದ ಉಪಭೋಗಿಸಲ್ಪಡುತ್ತಿರುವಂತೆ ಸೀತಾದೇವಿಯೂ ರಾವಣನಿಂದ ಉಪಭೋಗಿಸಲ್ಪಟ್ಟಿದ್ದರೆ ರಾವಣನಿಗೆ ಒಳ್ಳೆಯದೇ ಆಗುತ್ತದೆ. ಹೇಗೆಂದರೆ : ನಾನು ಈ ವಿಷಯವನ್ನು ರಾಮನಿಗೆ ಹೇಳಿದರೆ ಸೀತೆಯು ಸತ್ತುಹೋದಳೆಂದೇ ಭಾವಿಸಿ ರಾವಣನ ವಿಷಯದಲ್ಲಿ ಉಪೇಕ್ಷೆಯನ್ನೇ ತಾಳುತ್ತಾನೆ. ವಧಿಸಲು ಪ್ರಯತ್ನಿಸುವುದಿಲ್ಲ. (2) ಈ ರಾಕ್ಷಸಭಾರ್ಯೆಯರು ಯಾವ

**ಪುನಶ್ಚ ಸೋऽಚಿನ್ತಯದಾರ್ತರೂಪಃ**
**ಧ್ರುವಂ ವಿಶಿಷ್ಟಾ ಗುಣತೋ ಹಿ ಸೀತಾ ।**
**ಅಥಾಯಮಸ್ಯಾಂ ಕೃತವಾನ್ಮಹಾತ್ಮಾ**
**ಲಙ್ಕೇಶ್ವರಃ ಕಷ್ಟಮನಾರ್ಯಕರ್ಮ ॥೭೨॥**

ಸೀತಾದೇವಿಯು ವಿರಹವೇದನೆಯನ್ನು ಅನುಭವಿಸುತ್ತಿರುವಳೆಂಬುದನ್ನು ಯೋಚಿಸಿ ದೀನಭಾವದಿಂದ ಕೂಡಿದ್ದ ಹನುಮಂತನು ಪುನಃ ಹೀಗೆ ಯೋಚಿಸಿದನು : "ನಿಶ್ಚಯವಾಗಿಯೂ ಸೀತಾದೇವಿಯು ಸಕಲಸದ್ಗುಣಗಳಿಂದಲೂ ಶ್ರೇಷ್ಠಳಾದವಳೆಂಬುದು ನಿಜ. ಆದರೆ ಮಹಾತ್ಮನಾದ ಲಂಕೇಶ್ವರನಾದ ರಾವಣನು ಇವಳನ್ನು ಅಪಹರಿಸಿ ತಂದು ಇವಳ ವಿಷಯದಲ್ಲಿ ಅನಾರ್ಯರು ಮಾಡುವ ಅತಿಕುತ್ಸಿತವಾದ ಕಾರ್ಯವನ್ನೇ ಮಾಡಿರುವನು."

೯ನೆಯ ಸರ್ಗವು ಮುಗಿಯಿತು.

---

ರೀತಿಯಲ್ಲಿ ತಮ್ಮ ಪತಿಯ ಸ್ಮರಣೆಯಲ್ಲಿ ನಿರತರಾಗಿರುವರೋ-ಅದೇ ರೀತಿಯಲ್ಲಿ ಸೀತಾದೇವಿಯೂ ಬಂಧಮುಕ್ತಳಾಗಿ ತನ್ನ ಪತಿಯ ಸ್ಮರಣೆಯಲ್ಲಿಯೇ ನಿರತಳಾಗುವುದಾದರೆ ರಾವಣನಿಗೆ ಒಳ್ಳೆಯದೇ ಆಗುತ್ತದೆ. (3) ರಾಘವನ ಧರ್ಮಪತ್ನಿಯು ರಾಮನನ್ನು ವರಿಸುವ ಮೊದಲೇ ರಾವಣನ ಧರ್ಮಪತ್ನಿಯಾಗಿಬಿಟ್ಟಿದ್ದರೆ ರಾವಣನಿಗೆ ಒಳ್ಳೆಯದೇ ಆಗುತ್ತಿದ್ದಿತು–ಎಂಬುದಾಗಿ ಮೊದಲು ತನ್ನ ಕಪಿತ್ವದ್ಯೋತಕವಾದ ಬುದ್ಧಿಯಲ್ಲಿ ಯೋಚಿಸಿ ಅನಂತರ ತಾನು ಹಾಗೆ ಯೋಚಿಸಿದುದಕ್ಕಾಗಿ ಪಶ್ಚಾತ್ತಾಪಪಟ್ಟು ಸಾಧುಬುದ್ಧಿಯವನಾಗಿ ಪುನಃ ಹೀಗೆ ಯೋಚಿಸಿದನು. ಮಹಾರಾಕ್ಷಸರಾಜನ ಭಾರ್ಯೆಯರು ಸ್ವತಂತ್ರವಾಗಿ ಸುಖೋಪಭೋಗಗಳನ್ನು ತಮ್ಮ ಪತಿಯೊಡನೆ ಅನುಭವಿಸುತ್ತಿರುವಂತೆಯೇ ರಾಘವನ ಧರ್ಮಪತ್ನಿಯಾದ ಸೀತೆಯೂ ತನ್ನ ಪತಿಯಾದ ಶ್ರೀರಾಮಚಂದ್ರನೊಡನೆ ಸುಖೋಪಭೋಗಗಳನ್ನು ಅನುಭವಿಸುವಂತಾದರೆ (ರಾವಣನು ಸೀತೆಯನ್ನು ರಾಮನಿಗೆ ಒಪ್ಪಿಸಿದರೆ) ರಾವಣನಿಗೆ ಶುಭೋದಯವೇ ಆಗುತ್ತದೆ.

ಸುಂದರಕಾಂಡ ೧೦ನೆಯ ಸರ್ಗ

## ಹನುಮಂತನು ಅಂತಃಪುರದಲ್ಲಿ ಮಲಗಿದ್ದ ರಾವಣನನ್ನೂ ಮತ್ತು ಅವನ ಪತ್ನಿಯರನ್ನೂ ನೋಡಿದುದು : ಮಂಡೋದರಿಯನ್ನು ಸೀತೆಯೆಂದು ಭಾವಿಸಿ ಹೃಷ್ಟನಾದುದು

**ತತ್ರ ದಿವ್ಯೋಪಮಂ ಮುಖ್ಯಂ ಸ್ಫಾಟಿಕಂ ರತ್ನಭೂಷಿತಮ್ ।**
**ಅವೇಕ್ಷಮಾಣೋ ಹನುಮಾನ್ದದರ್ಶ ಶಯನಾಸನಮ್ ॥೧॥**

**ದಾನ್ತಕಾಞ್ಚನಚಿತ್ರಾಙ್ಗೈರ್ವೈಡೂರ್ಯೈಶ್ಚ ವರಾಸನೈಃ ।**
**ಮಹಾರ್ಹಾಸ್ತರಣೋಪೇತೈರುಪಪನ್ನಂ ಮಹಾಧನೈಃ ॥೨॥**

ಹನುಮಂತನು ಆ ದಿವ್ಯಶಾಲೆಯಲ್ಲಿ ಸೀತಾದೇವಿಯನ್ನು ಹುಡುಕುತ್ತಿದ್ದಾಗ–ಬಹುಮೂಲ್ಯವಾದ, ಶ್ರೇಷ್ಠವಾದ ಆಸನಗಳಿಂದ ಕೂಡಿದ್ದ ಮಹಾಪರ್ಯಂಕವನ್ನು ನೋಡಿದನು. ಆ ಶಯನಾಸನಗಳು ಸ್ವರ್ಗದಲ್ಲಿರುವ ಶಯನಾಸನಗಳಿಗೆ ಅನುರೂಪವಾಗಿದ್ದುವು. ಸ್ಫಟಿಕಮಯವಾಗಿಯೂ, ರತ್ನಭೂಷಿತವಾಗಿಯೂ, ದಂತದಿಂದಲೂ ಸುವರ್ಣದಿಂದಲೂ ಚಿತ್ರಿತವಾಗಿದ್ದ ಕಾಲುಗಳೇ ಮೊದಲಾದ ಭಾಗಗಳಿಂದಲೂ ಕೂಡಿದ್ದುವು. ಬಹುಮೂಲ್ಯವಾದ ರತ್ನಗಂಬಳಿಗಳಿಂದ ಆಚ್ಛಾದಿತವಾಗಿದ್ದು ವೈಡೂರ್ಯಮಣಿಗಳಿಂದ ಸಮಲಂಕೃತವಾಗಿದ್ದುವು.

ಆ ಪರ್ಯಂಕದ ಒಂದು ಭಾಗದಲ್ಲಿ ಹನುಮಂತನು ಚಂದ್ರನಿಗೆ ಸಮಾನವಾಗಿದ್ದ, ದಿವ್ಯಮಾಲೆಯಿಂದ ಸಮಲಂಕೃತವಾಗಿದ್ದ ಬಿಳಿಯ ಛತ್ರಿಯನ್ನು ನೋಡಿದನು. ಆ ಪರ್ಯಂಕವು ಚಿನ್ನದಿಂದ ಮಾಡಲ್ಪಟ್ಟಿದ್ದು ಅಗ್ನಿಯಂತೆ ದೇದೀಪ್ಯಮಾನವಾಗಿ ರಾರಾಜಿಸುತ್ತಾ ಅಶೋಕಪುಷ್ಪದ ಮಾಲೆಗಳಿಂದ ಸಮಲಂಕೃತವಾಗಿದ್ದಿತು. ರಾವಣನು ಎಚ್ಚರಗೊಂಡಾಗ ಸುತ್ತಲೂ ಚಾಮರ-ಬೀಸಣಿಗೆಗಳನ್ನು ಹಿಡಿದು ನಿಂತ ಸ್ತ್ರೀಯರಿಂದ ಬೀಸಲ್ಪಡುತ್ತಿದ್ದ* ಆ ಮಂಚವು ಅನೇಕವಿಧವಾದ ಗಂಧಗಳಿಂದ ಯುಕ್ತವಾಗಿದ್ದಿತು. ಉತ್ತಮ ವಾದ ಧೂಪಗಳಿಂದ ಸುವಾಸಿತವಾಗಿದ್ದಿತು. ರತ್ನಗಂಬಳಿಗಳಿಂದ ಆಚ್ಛಾದಿತವಾಗಿದ್ದಿತು. ಮೃದುವಾದ ಕುರಿಯ ಚರ್ಮದಿಂದ ಸಮಾವೃತವಾಗಿದ್ದು ಎಲ್ಲ

* ವಾಲವ್ಯಜನಹಸ್ತಾಭಿರ್ವೀಚ್ಯಮಾನಂ ಸಮನ್ತತಃ –ಕೈಗಳಲ್ಲಿ ಚಾಮರ-ಬೀಸಣಿಗೆ

ಕಡೆಗಳಲ್ಲಿಯೂ ಶ್ರೇಷ್ಠವಾದ ಪುಷ್ಪಮಾಲಿಕೆಗಳಿಂದ ಅಲಂಕರಿಸಲ್ಪಟ್ಟಿದ್ದ ಪರಮಾಸನವು ಅತ್ಯಂತಶೋಭಾಯಮಾನವಾಗಿ ಕಾಣುತ್ತಿದ್ದಿತು.

ಅಂತಹ ಶ್ರೇಷ್ಠವಾದ ಪರ್ಯಂಕದಲ್ಲಿ ಸರ್ಪದಂತೆ ನಿಟ್ಟುಸಿರು ಬಿಡುತ್ತಾ ಮಲಗಿದ್ದ ರಾಕ್ಷಸೇಶ್ವರನನ್ನು ಹನುಮಂತನು ನೋಡಿದನು. ರಾವಣನ ಮೈಬಣ್ಣವು ಮೋಡದಂತಿದ್ದಿತು. ಅವನು ಪ್ರದೀಪ್ತವಾಗಿಯೂ ಉಜ್ವಲವಾಗಿಯೂ ಇದ್ದ ಕುಂಡಲಗಳನ್ನು ಧರಿಸಿದ್ದನು. ಅವನ ಕಣ್ಣುಗಳು ಕೆಂಡದಂತೆ ಕೆಂಪಾಗಿದ್ದುವು. ಮಹಾಬಾಹುವಾದ ಅವನು ಸುವರ್ಣದ ದಾರ ಗಳಿಂದಲೇ ಹೆಣೆದಿದ್ದ ವಸ್ತ್ರವನ್ನು ಧರಿಸಿದ್ದನು. ಅವನ ಅಂಗಾಂಗಗಳೆಲ್ಲವೂ ಸುಂಗಧಯುಕ್ತವಾದ ಗಂಧದಿಂದ ಪೂಸಲ್ಪಟ್ಟಿದ್ದುವು. ಆತನು ಸಂಧ್ಯಾಕಾಲದ ರಕ್ತವರ್ಣದಿಂದಲೂ ಮಿಂಚುಗಳಿಂದಲೂ ಕೂಡಿದ ಮೇಘದಂತೆಯೇ ಪ್ರಕಾಶಿಸುತ್ತಿದ್ದನು. ದಿವ್ಯಾಭರಣಗಳಿಂದ ಸಮಲಂಕೃತನಾಗಿದ್ದು ಸ್ಫುರ ದ್ರೂಪಿಯೂ ಕಾಮರೂಪನೂ ಆಗಿದ್ದನು. ರಾತ್ರಿಯಲ್ಲಿ ವರಸ್ತ್ರೀಯರೊಡನೆ ರತಿಕ್ರೀಡೆಯನ್ನಾಡಿ ವಿಶ್ರಾಂತನಾಗಿದ್ದ ಅವನು ವೃಕ್ಷಗಳಿಂದಲೂ, ವನ ಗಳಿಂದಲೂ ಲತೆಗಳಿಂದಲೂ ಕೂಡಿ ಶಾಂತವಾಗಿ ನಿದ್ರಿಸುತ್ತಿರುವ ಮಂದರ ಪರ್ವತದಂತೆಯೇ ಕಾಣುತ್ತಿದ್ದನು. ಶ್ರೇಷ್ಠವಾದ ಆಭರಣಗಳನ್ನು ಧರಿಸಿ ದ್ದನು. ರಾಕ್ಷಸಕನ್ಯೆಯರಿಗೆ ಅತ್ಯಂತಪ್ರಿಯನೂ ರಾಕ್ಷಸರಿಗೆ ಸುಖದಾಯಕನೂ ಆಗಿದ್ದನು. ಮಧುಪಾನಮಾಡಿ, ವಿಹರಿಸಿ ಆಯಾಸಗೊಂಡು ಅತ್ಯಂತಪ್ರಕಾಶ ಮಾನವಾದ ಮಹಾಪರ್ಯಂಕದಲ್ಲಿ ಮಲಗಿದ್ದನು. ರಾವಣನ ಬಳಿಗೆ ಹೋದೊಡನೆಯೇ ಅವನನ್ನು ನೋಡಿ ವ್ಯಾಕುಲನಾದ ಹನುಮಂತನು ಭಯಗೊಂಡವನಂತೆ ಹಿಂದಕ್ಕೆ ಸರಿದು ಸೋಪಾನವನ್ನು ಹತ್ತಿ ಮತ್ತೊಂದು ಜಗುಲಿಯನ್ನು ಏರಿ ನಿಂತು ಮತ್ತನಾಗಿ ಮಲಗಿದ್ದ ರಾಕ್ಷಸಸಿಂಹನನ್ನು ನೋಡುತ್ತಲೇ ಇದ್ದನು.

ಯಾವ ಆನೆಯ ವಾಸನೆಯನ್ನು ಆಘ್ರಾಣಿಸಿದೊಡನೆಯೇ ಇತರ ಆನೆ

---

ಗಳನ್ನು ಹಿಡಿದ ಸ್ತ್ರೀಯರಿಂದ ಸುತ್ತಲೂ ಬೀಸಲ್ಪಡುತ್ತಿದ್ದ–ಎಂದು ಅರ್ಥವಾಗುತ್ತದೆ. ಎಲ್ಲರೂ ಮಲಗಿರುವಾಗ ಕೆಲವು ಸ್ತ್ರೀಯರು ಗಾಳಿಬೀಸುತ್ತಿದ್ದರೆಂದರೆ ಅಥವಾ ರಾವಣನು ರತಿಕ್ರೀಡೆಯಲ್ಲಿದ್ದಾಗ ಸ್ತ್ರೀಯರು ಸುತ್ತಲೂ ನಿಂತು ಗಾಳಿಬೀಸುತ್ತಿದ್ದರೆಂದರೆ ಸಮಂಜಸವಾಗಿ ಕಾಣುವುದಿಲ್ಲ. ಆದುದರಿಂದ ಒಬ್ಬ ವ್ಯಾಖ್ಯಾನಕಾರರು ಯನ್ತ್ರನಿರ್ಮಿತಸ್ತ್ರೀಪುತಿಮಾದಿಭಿಃ– ಯಂತ್ರನಿರ್ಮಿತವಾದ ಸ್ತ್ರೀಪ್ರತಿಮೆಗಳಿಂದ ಎಂದು ಅರ್ಥಮಾಡಿದ್ದಾರೆ.

ಗಳು ಪಲಾಯನಮಾಡುವುವೋ–ಅಂತಹ ಗಂಧಹಸ್ತಿಯಿಂದ ಅಧಿಷ್ಠಿತ ವಾದ ಪ್ರಸ್ರವಣಪರ್ವತದಂತೆ ರಾವಣೇಂದ್ರನು ಮಲಗಿದ್ದ ಸುಂದರವಾದ ಮಹಾಪರ್ಯಂಕವು ಪ್ರಕಾಶಿಸುತ್ತಿದ್ದಿತು. ಸುವರ್ಣಮಯವಾದ ಭುಜ ಕೀರ್ತಿಗಳಿಂದ ಯುಕ್ತವಾಗಿದ್ದ, ಇಂದ್ರಧ್ವಜಸದೃಶವಾಗಿದ್ದ, ಹೊರಚಾಚಿ ಕೊಂಡಿದ್ದ ರಾಕ್ಷಸೇಂದ್ರನಾದ ರಾವಣನ ತೋಳುಗಳು ಇಂದ್ರನೊಡನೆ ಮಾಡಿದ ಯುದ್ಧದಲ್ಲಿ ಐರಾವತದ ದಂತಗಳಿಂದ ತಿವಿಯಲ್ಪಟ್ಟು ಗಾಯ ಗೊಂಡಿದ್ದುವು. ಇಂದ್ರನ ವಜ್ರಾಯುಧದಿಂದಲೂ ಉಪೇಂದ್ರನ ಚಕ್ರ ದಿಂದಲೂ ಹೊಡೆಯಲ್ಪಟ್ಟಿದ್ದುವು. ಆ ಎಲ್ಲ ಪ್ರಹಾರಗಳಿಂದಲೂ ಆ ತೋಳುಗಳು ಜಡ್ಡುಕಟ್ಟಿ ಹೋಗಿತ್ತಲ್ಲದೇ ಸ್ಥೂಲವಾಗಿಯೂ, ಸಮ ವಾಗಿಯೂ, ಸುಂದರವಾಗಿಯೂ ಇದ್ದುವು. ಬಲಿಷ್ಠವಾಗಿದ್ದುವು. ಸುಂದರ ವಾದ ಸುಲಕ್ಷಣವಾದ ಉಗುರುಗಳುಳ್ಳ ಅಂಗುಷ್ಠಗಳಿಂದ ಕೂಡಿದ್ದುವು. ಸುಂದರವಾದ ಬೆರಳುಗಳಿಂದಲೂ ಶೋಭಾಯಮಾನವಾಗಿ ಕಾಣುತ್ತಿದ್ದುವು. ದುಂಡಾಗಿಯೂ ಪುಷ್ಟವಾಗಿಯೂ ಇದ್ದ ಆ ತೋಳುಗಳು ಪರಿಘಾಯುಧ ಗಳಂತೆಯೂ, ಆನೆಯ ಸೊಂಡಿಲುಗಳಂತೆಯೂ, ಐದು ಹೆಡೆಗಳ ಎರಡು ಸರ್ಪಗಳಂತೆಯೂ ಕಾಣುತ್ತಿದ್ದುವು. ಮೊಲದ ರಕ್ತದಂತೆ ಶೀತಲವಾದ, ಸುಗಂಧಯುಕ್ತವಾದ, ಹೆಚ್ಚು ಬೆಲೆಬಾಳುವ, ಶ್ರೇಷ್ಠವಾದ ಚಂದನದಿಂದ ಅವು ಲೇಪಿತವಾಗಿದ್ದುವು. ಕನಕಾಂಗದ-ಕೇಯೂರಾದಿ ಆಭರಣಗಳಿಂದ ಸಮಲಂಕೃತವಾಗಿದ್ದುವು. ಶ್ರೇಷ್ಠರಾದ ಸ್ತ್ರೀಯರು ಉತ್ತಮವಾದ ಗಂಧದಿಂದ ಲೇಪಿತವಾಗಿದ್ದ ರಾವಣನ ಆ ತೋಳುಗಳನ್ನು ಸುಖಕರವಾದ ರೀತಿಯಲ್ಲಿ ಒತ್ತುತ್ತಿದ್ದರು. ಯಕ್ಷ-ಗಂಧರ್ವ-ಪನ್ನಗ-ದೇವ-ದಾನವರನ್ನು ಭಯದಿಂದ ಕೂಗಿಕೊಳ್ಳುವಂತೆ ಮಾಡಲು ರಾವಣನ ಆ ಮಹಾಬಾಹುಗಳು ಸಮರ್ಥ ವಾಗಿದ್ದುವು. ಮಂದರಪರ್ವತದಲ್ಲಿ ಮಲಗಿರುವ ರೋಷಗೊಂಡ ಸರ್ಪ ಗಳಂತೆಯೇ ಇದ್ದ ರಾವಣನ ಆ ತೋಳುಗಳನ್ನು ಹನುಮಂತನು ನೋಡಿದನು. ಪರಿಪುಷ್ಟವಾಗಿದ್ದ ಅಂತಹ ತೋಳುಗಳಿಂದ ಶೋಭಿತನಾಗಿದ್ದ ಪರ್ವತೋಪಮನಾದ ರಾವಣನು–ಎರಡು ಶಿಖರಗಳಿಂದ ಕೂಡಿರುವ ಮಂದರಪರ್ವತದಂತೆಯೇ ಪ್ರಕಾಶಿಸುತ್ತಿದ್ದನು.

ಮಲಗಿದ್ದ ರಾಕ್ಷಸರಾಜನ ಮುಖದಿಂದ ಹೊರಬರುತ್ತಿದ್ದ ಸುದೀರ್ಘ ವಾದ ಉಸುರಿನ ಶಬ್ದವು ಆ ಅರಮನೆಯನ್ನೇ ತುಂಬುವುದೋ ಎಂಬಂತೆ

ಕೇಳಿ ಬರುತ್ತಿದ್ದಿತು. ಅವನು ಬಿಡುತ್ತಿದ್ದ ಉಸಿರು ಸಿಹಿಮಾವು ಮತ್ತು ಸುರಹೊನ್ನೇಮರಗಳ ಹೂವಿನ ವಾಸನೆಯಂತೆ ಸುವಾಸನೆಯಿಂದ ಕೂಡಿ ದ್ದಿತು. ಉತ್ತಮವಾದ ವಕುಳಪುಷ್ಪದ ಸುಗಂಧದಿಂದಲೂ, ಷಡ್ರಸೋಪೇತ ವಾದ ಮೃಷ್ಟಾನ್ನದ ವಾಸನೆಯಿಂದಲೂ, ಮಧುವಿನ ವಾಸನೆಯಿಂದಲೂ ಕೂಡಿದ್ದಿತು. ಅನಂತರ ಹನುಮಂತನು ರಾವಣನ ಮುಖವನ್ನು ನೋಡಿ ದನು. ಆ ಮುಖವು ಕರ್ಣಕುಂಡಲಗಳಿಂದ ಸಮಲಂಕೃತವಾಗಿದ್ದಿತು. ಮುತ್ತಿನ ಮಣಿಗಳಿಂದ ಚಿತ್ರಿತವಾಗಿದ್ದ, ಥಳಥಳಿಸುತ್ತಿದ್ದ, ಸುವರ್ಣಖಚಿತ ವಾದ, ಸ್ವಲ್ಪ ಓರೆಯಾಗಿದ್ದ ಕಿರೀಟದಿಂದ ಕಂಗೊಳಿಸುತ್ತಿದ್ದಿತು.* ರಾವಣನ ವಕ್ಷಃಸ್ಥಳವು ರಕ್ತಚಂದನದಿಂದ ಲೇಪಿತವಾಗಿದ್ದಿತು. ರತ್ನಹಾರಗಳಿಂದ ಶೋಭಿಸುತ್ತಿದ್ದಿತು. ಎತ್ತರವಾಗಿಯೂ, ದಪ್ಪವಾಗಿಯೂ, ವಿಶಾಲ ವಾಗಿಯೂ ಇದ್ದಿತು. ಅವನು ಸ್ವಲ್ಪ ಸರಿದಿದ್ದ ಬಿಳುಪಾದ ಪಟ್ಟವಸ್ತ್ರವನ್ನು ಟ್ಟಿದ್ದನು. ಹೊಂಬಣ್ಣದ ಮಹಾಮೌಲ್ಯದ ಮೇಲುಹೊದಿಕೆಯಿಂದ ಸಮಲಂಕೃತನಾಗಿದ್ದನು. ಉದ್ದಿನ ರಾಶಿಯಂತೆ ನೀಲವರ್ಣದವನಾಗಿದ್ದನು. ಸರ್ಪದಂತೆ ಉಸಿರುಬಿಡುತ್ತಿದ್ದನು. ರತ್ನಪರ್ಯಂಕದಲ್ಲಿ ಮಲಗಿದ್ದ ಅವನು ಗಂಗಾನದಿಯ ಮಹಾಪ್ರವಾಹದ ಮಧ್ಯದಲ್ಲಿ ಮಲಗಿರುವ ಆನೆಯಂತೆಯೇ ಪ್ರಕಾಶಿಸುತ್ತಿದ್ದನು. ನಾಲ್ಕು ದಿಕ್ಕುಗಳನ್ನೂ ಬೆಳಗುವ ಸುವರ್ಣದ ನಾಲ್ಕು ದೀಪಾಲೆಗಳನ್ನು ರಾವಣನ ಪರ್ಯಂಕದ ಸುತ್ತಲೂ ಇಟ್ಟಿದ್ದರು. ಮಿಂಚಿ ನಿಂದ ಮೇಘಗಳು ಪ್ರಕಾಶಿಸುವಂತೆ ಆ ದೀಪಗಳಿಂದ ರಾವಣನ ಸರ್ವಾಂಗಗಳೂ ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಿದ್ದುವು.

ಭಾರ್ಯೆಯರಿಗೆ ಅತ್ಯಂತಪ್ರಿಯನಾಗಿದ್ದ, ಮಹಾತ್ಮನಾದ, ರಾಕ್ಷಸಾಧಿ ಪತಿಯಾದ ರಾವಣನ ಅರಮನೆಯಲ್ಲಿ ರಾವಣನ ಪದತಲದಲ್ಲಿ ಮಲಗಿದ್ದ

---

* ಇಲ್ಲಿ ರಾವಣನ ಒಂದೇ ಮುಖದ ಹಾಗೂ ಎರಡು ಭುಜಗಳ ವಿವರಣೆಯಿದೆ. ಹತ್ತು ಮುಖಗಳ ಅಥವಾ ಹತ್ತು ತಲೆಗಳ ವಿವರಣೆಯಿಲ್ಲ. ಆದುದರಿಂದ ಕಾಮ ರೂಪನಾದ ರಾವಣನು ತನಗೆ ಬೇಕಾದಾಗ ಹತ್ತು ತಲೆಗಳನ್ನೂ ಹತ್ತು ಮುಖಗಳನ್ನೂ ಇಪ್ಪತ್ತು ಭುಜಗಳನ್ನೂ ಧರಿಸುತ್ತಿದ್ದನೆಂದು ಭಾವಿಸಬಹುದಾಗಿದೆ. ಮೇಲಾಗಿ ಮಲಗುವಾಗ ಮತ್ತು ರತಿಕ್ರೀಡಾಸಮಯಗಳಲ್ಲಿ ಒಂದು ತಲೆ ಎರಡು ಕೈಗಳೇ ಇರಬೇಕು. ಹತ್ತು ತಲೆಗಳ ಇಪ್ಪತ್ತು ಬಾಹುಗಳ ಭಯಂಕರಾಕೃತಿಯು ಯುದ್ಧಸಮಯದಲ್ಲಿ ಅಪೇಕ್ಷಣೀಯ.

ಅವನ ಪತ್ನಿಯರನ್ನೂ ಹನುಮಂತನು ನೋಡಿದನು. ಅವರೆಲ್ಲರೂ ರಾಕ್ಷಸೇಂದ್ರನ ಭುಜಗಳನ್ನೂ ತೊಡೆಗಳನ್ನೂ ಆಶ್ರಯಿಸಿ ಮಲಗಿದ್ದರು. ನೃತ್ಯ-ವಾದ್ಯಗಳಲ್ಲಿ ಕುಶಲೆಯರಾಗಿದ್ದರು. ಶ್ರೇಷ್ಠವಾದ ಆಭರಣಗಳನ್ನು ಧರಿಸಿದ್ದರು. ವಜ್ರ-ವೈಡೂರ್ಯಗಳಿಂದ ಘಟಿತವಾಗಿದ್ದ ಸುವರ್ಣಮಯವಾದ ಕುಂಡಲಗಳನ್ನೂ ಭುಜದ ಅಂಗದಗಳನ್ನೂ ರಾಕ್ಷಸಪತ್ನಿಯರ ಕಿವಿಯ ಅಂಚಿನಲ್ಲಿ ಹನುಮಂತನು ನೋಡಿದನು.* ಚಂದ್ರಸದೃಶವಾದ ಮುಖಗಳಿಂದಲೂ ಶುಭಪ್ರದವಾದ ಮತ್ತು ಸುಂದರವಾದ ಕುಂಡಲಗಳಿಂದಲೂ ಯುಕ್ತವಾಗಿದ್ದ ರಾವಣನ ಪತ್ನಿಯರ ಆ ಶಯನಗೃಹವು ಚಂದ್ರನಿಂದಲೂ ಮತ್ತು ನಕ್ಷತ್ರಗಳ ಸಮೂಹಗಳಿಂದಲೂ ಕೂಡಿರುವ ಆಕಾಶದಂತೆಯೇ ಕಾಣುತ್ತಿದ್ದಿತು.

ಮದ್ಯಪಾನದ ಮದದಿಂದಲೂ–ರತಿಕ್ರೀಡೆಯಿಂದಲೂ ಆಯಾಸಗೊಂಡಿದ್ದ, ಕೃಶವಾದ ನಡುವಿನಿಂದ ಕೂಡಿದ್ದ ರಾವಣನ ಮಡದಿಯರು ಅವಕಾಶವಿದ್ದೆಡೆಗಳಲ್ಲಿ ಅಸ್ತವ್ಯಸ್ತವಾಗಿ ಮಲಗಿದ್ದರು. ಬ್ರಹ್ಮನಿಂದ ವಿಶೇಷ ರೀತಿಯಲ್ಲಿ ನಿರ್ಮಿಸಲ್ಪಟ್ಟವಳಂತೆ ಕಾಣುತ್ತಿದ್ದ, ಶುಭಕರವಾದ ಅವಯವಗಳಿಂದ ಕೂಡಿದ್ದ, ಶ್ರೇಷ್ಠವಾದ ಮೈಬಣ್ಣವುಳ್ಳ ರಾವಣನ ಒಬ್ಬ ಭಾರ್ಯೆಯು ಕೋಮಲವಾದ ಅಂಗಹಾರಗಳಿಂದ (ಆಂಗಿಕವಾದ ಅಭಿನಯಗಳಿಂದ ) ಕೂಡಿದವಳಾಗಿ ನೃತ್ಯದ ಭಂಗಿಯಲ್ಲಿಯೇ ಮಲಗಿದ್ದಳು.[1] ವೀಣೆಯನ್ನೇ ತಬ್ಬಿಕೊಂಡು ಮಲಗಿದ್ದ ರಾವಣನ ಮತ್ತೊಬ್ಬ ಮಡದಿಯು ಹರಿಗೋಲಿಗೆ ಸುತ್ತಿಕೊಂಡು ಮಹಾದರಿಯಲ್ಲಿ ಹರಡಿಕೊಂಡಿರುವ ಕಮಲದ ಬಳ್ಳಿಯಂತೆಯೇ ಕಾಣುತ್ತಿದ್ದಳು.

ಕಂಕುಳಿನಲ್ಲಿ ಮದ್ದುಕವೆಂಬ ವಾದ್ಯವನ್ನಿಟ್ಟುಕೊಂಡು ಮಲಗಿದ್ದ, ಕಪ್ಪಾದ ಕಣ್ಣುಗಳಿಂದ ಕೂಡಿದ್ದ ರಾವಣನ ಮತ್ತೊಬ್ಬ ಭಾರ್ಯೆಯು

---

* ರಾಕ್ಷಸಭಾರ್ಯೆಯರು ಎಡ ಅಥವಾ ಬಲದ ತೋಳನ್ನು ತಲೆಯ ಕೆಳಗೆ ಇಟ್ಟುಕೊಂಡು ಮಲಗಿದ್ದುದರಿಂದ ಹನುಮಂತನಿಗೆ ಕರ್ಣಕುಂಡಲಗಳನ್ನೂ ಅಂಗದಗಳನ್ನೂ ಕಿವಿಯಂಚಿನಲ್ಲಿ ನೋಡಲು ಸಾಧ್ಯವಾಯಿತು.

1 ಅಂಗಹಾರವೆಂದರೆ ಅಂಗಗಳನ್ನು ಯಥಾಯೋಗ್ಯವಾಗಿ ತಿರುಗಿಸುವುದು. **ಅಂಗಸ್ಯ ಹಾರಃ ಹರಣಃ.** ಭರತನಾಟ್ಯಶಾಸ್ತ್ರದಲ್ಲಿ ಅಂಗಹಾರವನ್ನು ಹೀಗೆ ನಿರೂಪಿಸಿದ್ದಾರೆ : **ಅಙ್ಗಾನಾಂ ಯೋಗ್ಯದೇಶೇಷು ಹರಣೇನ ಯಥೋಚಿತಮ್ । ಅಙ್ಗ**

ವಾತ್ಸಲ್ಯದ ಕಾರಣದಿಂದಾಗಿ ಚಿಕ್ಕ ಮಗುವನ್ನು ಕಂಕುಳಿನಲ್ಲೆತ್ತಿಕೊಂಡೇ ಮಲಗಿರುವಳೋ ಎಂಬಂತೆ ಕಾಣುತ್ತಿದ್ದಳು.

ಭೇರಿಯನ್ನು ಆಲಿಂಗಿಸಿಕೊಂಡು ಮಲಗಿದ್ದ, ಸರ್ವಾಂಗಸುಂದರಿಯಾದ, ಸುಂದರವಾದ ಕುಚಗಳುಳ್ಳ ರಾವಣನ ಮತ್ತೊಬ್ಬ ಭಾರ್ಯೆಯು ಬಹಳ ಕಾಲಾನಂತರ ಆಗಮಿಸಿದ ರಮಣನನ್ನು ಗಟ್ಟಿಯಾಗಿ ತಬ್ಬಿಕೊಂಡು ಮಲಗಿರುವಳೋ ಎಂಬಂತೆ ಕಾಣುತ್ತಿದ್ದಳು.

ಕೊಳಲನ್ನು ತಬ್ಬಿಕೊಂಡು ಮಲಗಿದ್ದ, ಕಮಲಾಕ್ಷಿಯಾದ, ಕಮನೀಯ ರೂಪಳಾದ ರಾಕ್ಷಸರಾಜನ ಮತ್ತೊಬ್ಬ ಭಾರ್ಯೆಯು ಪ್ರಿಯತಮನನ್ನು ಏಕಾಂತವಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ತನ್ನ ಬಯಕೆಯನ್ನು ಪೂರ್ಣಗೊಳಿಸಿಕೊಳ್ಳುತ್ತಿರುವಳೋ ಎಂಬಂತೆ ಕಾಣುತ್ತಿದ್ದಳು.

ವಿಪಂಚೀ ಎಂಬ ಏಳು ತಂತಿಯ ವೀಣೆಯನ್ನು ಹಿಡಿದು ನೃತ್ಯಭಂಗಿಯಲ್ಲಿಯೇ ಮಲಗಿದ್ದ ರಾವಣನ ಮತ್ತೊಬ್ಬ ಭಾರ್ಯೆಯು ಪ್ರಿಯತಮನೊಡನೆ ನಿದ್ರೆಮಾಡುತ್ತಿರುವಳೋ ಎಂಬಂತೆ ಕಾಣುತ್ತಿದ್ದಳು.

ಮಧುಪಾನದಿಂದ ಮತ್ತವಾದ ಕಣ್ಣುಗಳಿಂದ ಕೂಡಿದ್ದ ರಾವಣನ ಮತ್ತೊಬ್ಬ ಭಾರ್ಯೆಯು ಮೃದುವಾಗಿಯೂ, ಸ್ಥೂಲವಾಗಿಯೂ, ಮನೋಹರವಾಗಿಯೂ ಇದ್ದ ಸುವರ್ಣಸದೃಶವಾದ ಅಂಗಗಳಿಂದ ಮೃದಂಗವನ್ನೇ ತಬ್ಬಿಕೊಂಡು ಮಲಗಿದ್ದಳು.

ರತಿಕ್ರೀಡೆಯಿಂದ ಆಯಾಸಗೊಂಡಿದ್ದ, ತೆಳ್ಳನೆಯ ಹೊಟ್ಟೆಯಿಂದ ಕೂಡಿದ್ದ, ಅನಿಂದ್ಯಳಾದ ರಾವಣನ ಮತ್ತೊಬ್ಬ ಭಾರ್ಯೆಯು ಭುಜಗಳ ಮಧ್ಯದ ಕಂಕುಳುಗಳಲ್ಲಿದ್ದ ಮದ್ದಲೆಯೊಡನೆ ಮಲಗಿದ್ದಳು.

ಡಿಂಡಿಮವಾದ್ಯದಲ್ಲಿ ಆಸಕ್ತಳಾಗಿ ಆ ವಾದ್ಯವನ್ನೇ ತಬ್ಬಿಕೊಂಡು ಮಲಗಿದ್ದ ಮತ್ತೊಬ್ಬ ಭಾರ್ಯೆಯು ತರುಣನಾದ ಪುತ್ರನನ್ನು ತನ್ನಲ್ಲಿಯೇ ಅಡಗಿಸಿಟ್ಟುಕೊಂಡು ಮಲಗಿರುವಳೋ ಎಂಬಂತೆ ಕಾಣುತ್ತಿದ್ದಳು.

---

ನಿರ್ವರ್ತನೀಯತ್ವಾದಙ್ಗಹಾರಸ್ತಥೋಚ್ಯತೇ ॥ ಯೋಗ್ಯವಾದ ಪ್ರದೇಶಗಳಲ್ಲಿ ಅವಯವಗಳನ್ನು ತಿರುಗಿಸುವುದರಿಂದ (ಅಂಗಗಳಿಂದಲೇ ನರ್ತನಕಾರ್ಯವನ್ನು ಸಂಪೂರ್ಣವಾಗಿ ನಿರ್ವಹಿಸುವುದರಿಂದ) ಹಸ್ತಾದಿಗಳಿಂದ ಮಾಡುವ ಅಭಿನಯಕ್ಕೆ ಅಂಗಹಾರವೆಂದು ಹೇಳುತ್ತಾರೆ.

ಕಮಲಪತ್ರಾಕ್ಷಿಯಾದ, ಮದದಿಂದ ವಿಮೋಹಗೊಂಡಿದ್ದ ರಾವಣನ ಮತ್ತೊಬ್ಬ ಭಾರ್ಯೆಯು ತುತ್ತೂರಿಯನ್ನು ಭುಜಗಳ ಆಲಿಂಗನದಿಂದ ಪೀಡಿಸುತ್ತಾ ಮಲಗಿದ್ದಳು. (ಗಟ್ಟಿಯಾಗಿ ತಬ್ಬಿಕೊಂಡು ಮಲಗಿದ್ದಳು.) ಅತ್ತಲಿತ್ತ ಹೊರಳಾಡುತ್ತಾ ತನ್ನ ಬಳಿಯಲ್ಲಿದ್ದ ನೀರುತುಂಬಿರುವ ಕಲಶವನ್ನು ಕೆಳಕ್ಕೆ ಬೀಳಿಸಿ ನೀರಿನಿಂದ ತೋಯ್ದುಹೋದರೂ ಆ ಅವಸ್ಥೆಯಲ್ಲಿಯೇ ಗಾಢವಾಗಿ ನಿದ್ರಿಸುತ್ತಿದ್ದ ರಾವಣನ ಮತ್ತೊಬ್ಬ ಭಾರ್ಯೆಯು–ವಸಂತಕಾಲ ದಲ್ಲಿ ಬಾಡದಿರಲೆಂದು ನೀರಿನಿಂದ ಚುಮುಕಿಸಲ್ಪಟ್ಟ ಹಲವು ಬಣ್ಣಗಳಿಂದ ಕೂಡಿದ ಪುಷ್ಪಗಳ ಮಾಲೆಯಂತೆಯೇ ಕಾಣುತ್ತಿದ್ದಳು.

ಗಾಢವಾದ ನಿದ್ರೆಯಿಂದ ವಿವಶಳಾಗಿದ್ದ, ಅಬಲೆಯಾದ ರಾವಣನ ಮತ್ತೊಬ್ಬ ಪತ್ನಿಯು ಸುವರ್ಣಕಲಶಗಳಂತೆಯೇ ಇದ್ದ ತನ್ನೆರಡು ಸ್ತನಗಳನ್ನೂ ಎರಡು ಕೈಗಳಿಂದಲೂ ಮುಚ್ಚಿಕೊಂಡು ಮಲಗಿದ್ದಳು. ರತಿಕ್ರೀಡೆಯಿಂದ ಆಯಾಸಗೊಂಡಿದ್ದ, ಕಮಲಪತ್ರಾಕ್ಷಿಯಾಗಿದ್ದ, ಪೂರ್ಣಚಂದ್ರನಿಗೆ ಸದೃಶವಾದ ಸುಂದರಮುಖವನ್ನು ಹೊಂದಿದ್ದ ರಾವಣನ ಮತ್ತೊಬ್ಬ ಭಾರ್ಯೆಯು ಸುಂದರವಾದ ಸೊಂಟದಿಂದ ಕೂಡಿದ್ದ ಸವತಿಯನ್ನು ಆಲಿಂಗಿಸಿಕೊಂಡು ಮಲಗಿದ್ದಳು. ರಾವಣನ ಶ್ರೇಷ್ಠರಾದ ಇನ್ನೂ ಅನೇಕ ಭಾರ್ಯೆಯರು–ಕಾಮಿನಿಯರು ಕಾಮುಕರನ್ನು ತಬ್ಬಿಕೊಂಡು ಸ್ತನಗಳಿಂದ ಪೀಡಿಸುವಂತೆ–ವಿಚಿತ್ರವಾದ ಬಗೆ-ಬಗೆಯ ವಾದ್ಯಗಳನ್ನು ತಬ್ಬಿಕೊಂಡು ಕುಚಗಳಿಂದ ಪೀಡಿಸುತ್ತಾ ಮಲಗಿದ್ದರು. ಆ ವರಸ್ತ್ರೀಯರಿದ್ದ ಸ್ಥಳದಿಂದ ಪ್ರತ್ಯೇಕವಾಗಿದ್ದ ಏಕಾಂತಸ್ಥಳದಲ್ಲಿ ಸುಂದರವಾದ ಹಾಸಿಗೆಯಲ್ಲಿ ಮಲಗಿದ್ದ ರೂಪಸಂಪನ್ನಳಾಗಿದ್ದ ಮತ್ತೊಬ್ಬ ಸ್ತ್ರೀಯನ್ನು ಕಪಿಶ್ರೇಷ್ಠನಾದ ಹನುಮಂತನು ನೋಡಿದನು.

ಆ ನಾರೀಮಣಿಯು ಮುತ್ತಿನ ಮಣಿಗಳಿಂದ ನಿರ್ಮಿತವಾದ ಒಡವೆ ಗಳಿಂದ ಸಮಲಂಕೃತಳಾಗಿದ್ದಳು. ದಿವ್ಯವಾದ ಮತ್ತು ಶ್ರೇಷ್ಠವಾದ ಆ ಭವನ ವನ್ನೇ ತನ್ನ ಶರೀರಕಾಂತಿಯಿಂದ ಅಲಂಕರಿಸುತ್ತಿ ರುವಳೋ ಎಂಬಂತೆಕಾಣುತ್ತಿ ದ್ದ ಳು ; ಗೌರಾಂಗಳೂ ಸುವರ್ಣವರ್ಣಸದೃಶಳೂ ಆಗಿದ್ದ ಳು. ಅವಳುರಾವಣ ನಿಗೆ ಇಷ್ಟಳಾಗಿದ್ದ ಳು. ಸುಮನೋಹರವಾದ ರೂಪಿನಿಂದಕಂಗೊಳಿಸುತ್ತಿದ್ದಳು. ಅಂತಃಪುರಕ್ಕೇ ಅವಳು ಒಡತಿಯಾಗಿದ್ದಳು. ಅಂತಹ ಸರ್ವಾಂಗಸುಂದರಿ

ಯಾದ ಏಕಾಂತವಾದ ಸ್ಥಳದಲ್ಲಿ ಮಲಗಿದ್ದ ಮಂಡೋದರಿಯನ್ನು ಹನುಮಂತನು ನೋಡಿದನು.

ಮಹಾಬಾಹುವಾದ ವಾಯುಪುತ್ರನಾದ ಹನುಮಂತನು ಸರ್ವಾಭರಣಗಳಿಂದಲೂ ಭೂಷಿತೆಯಾಗಿದ್ದ ಮಂಡೋದರಿಯನ್ನು ನೋಡಿ ಅವಳಲ್ಲಿದ್ದ ರೂಪಸಂಪತ್ತಿಯಿಂದ ಅವಳು ಸೀತೆಯೇ ಇರಬಹುದೆಂದು ಊಹಿಸಿದನು. ಸೀತೆಯನ್ನೇ ಕಂಡೆನೆಂದು ಭಾವಿಸಿದ ಹನುಮಂತನು ಮಹಾಹರ್ಷಯುಕ್ತನಾಗಿ ಆನಂದತುಂದಿಲನಾದನು.

**ಆಸ್ಫೋಟಯಾಮಾಸ ಚುಚುಮ್ಬ ಪುಚ್ಛಂ**
**ನನನ್ದ ಚಿಕ್ರೀಡ ಜಗೌ ಜಗಾಮ ।**
**ಸ್ತಮ್ಭಾನರೋಹನ್ನಿಪಪಾತ ಭೂಮೌ**
**ನಿದರ್ಶಯನ್ಸ್ವಾಂ ಪ್ರಕೃತಿಂ ಕಪೀನಾಮ್ ॥೫೩॥**

ಹನುಮಂತನು ತನ್ನದೇ ಆದ ಕಪಿಸ್ವಭಾವಗುಣಗಳನ್ನು ಪ್ರದರ್ಶಿಸುತ್ತಾ ಸೀತೆಯನ್ನು ನೋಡಿದೆನೆಂಬ ಆನಂದಾತಿರೇಕದಿಂದ ಮಹತ್ತರವಾದ ಕಾರ್ಯವನ್ನು ಸಾಧಿಸಿದವನಂತೆ ತನ್ನೆರಡು ಭುಜಗಳನ್ನೂ ತಟ್ಟಿಕೊಂಡನು. ಬಾಲಕ್ಕೆ ಮುತ್ತಿಟ್ಟನು ; ಆನಂದಿಸಿದನು ; ಕುಣಿದಾಡಿ ಹಾಡಿದನು ; ಅತ್ತಿಂದಿತ್ತ ತಿರುಗಾಡಿದನು. ವಿಜಯೋತ್ಸಾಹದಿಂದ ಕಂಬವನ್ನು ಹತ್ತಿದನು. ಪುನಃ ಅಲ್ಲಿಂದ ಕೆಳಕ್ಕೆ ಧುಮುಕಿದನು. ಈ ವಿಧವಾದ ಅನೇಕಕಪಿಚೇಷ್ಟೆಗಳಿಂದ ಹನುಮಂತನು ತನಗಾದ ಆನಂದವನ್ನು ವ್ಯಕ್ತಪಡಿಸಿದನು.

೧೦ನೆಯ ಸರ್ಗವು ಮುಗಿಯಿತು.



## ಮಲಗಿರುವವಳು ಸೀತೆಯಲ್ಲವೆಂಬುದನ್ನು ನಿಶ್ಚಯಿಸಿದ ಹನುಮಂತನು ಅಂತಃಪುರದಲ್ಲಿ ಮತ್ತು ಪಾನಗೃಹದಲ್ಲಿ ಸೀತೆಯನ್ನು ಹುಡುಕಲು ಪುನಃ ತೊಡಗಿದುದು : ಅಂತಃಪುರ ದರ್ಶನದಿಂದ ಸಂಭವಿಸುವ ಧರ್ಮಲೋಪದ ವ್ಯಾಕುಲತೆಯನ್ನು ತಾನೇ ಪರಿಹರಿಸಿಕೊಂಡುದು

**ಅವಧೂಯ ಚ ತಾಂ ಬುದ್ಧಿಂ ಬಭೂವಾವಸ್ಥಿತಸ್ತದಾ ।**
**ಜಗಾಮ ಚಾಪರಾಂ ಚಿನ್ತಾಂ ಸೀತಾಂ ಪ್ರತಿ ಮಹಾಕಪಿಃ ॥೧॥**

ಸೀತಾದೇವಿಯ ಪಾತಿವ್ರತ್ಯವೇ ಮೊದಲಾದ ಮಹಾಗುಣಗಳನ್ನು ಸ್ಮರಿಸಿದ ಹನುಮಂತನು ರಾವಣನ ಅಂತಃಪುರದಲ್ಲಿ ಮಲಗಿರುವವಳು ಸೀತೆಯಲ್ಲವೆಂದು ನಿಶ್ಚಯಿಸಿ ಸ್ಥಿರತೆಯನ್ನು ಹೊಂದಿ ಸೀತಾದೇವಿಯು ಸಿಕ್ಕದಿರುವ ವಿಷಯವಾಗಿ ಪುನಃ ಯೋಚಿಸತೊಡಗಿದನು :

**ನ ರಾಮೇಣ ವಿಯುಕ್ತಾ ಸಾ ಸ್ವಪ್ತುಮರ್ಹತಿ ಭಾಮಿನೀ ।**
**ನ ಭೋಕ್ತುಂ ನಾಪ್ಯಲಂಕರ್ತುಂ ನ ಪಾನಮುಪಸೇವಿತುಮ್ ॥೨॥**

**ನಾನ್ಯಂ ನರಮುಪಸ್ಥಾತುಂ ಸುರಾಣಾಮಪಿ ಚೇಶ್ವರಮ್ ।**
**ನ ಹಿ ರಾಮಸಮಃ ಕಶ್ಚಿದ್ವಿದ್ಯತೇ ತ್ರಿದಶೇಷ್ವಪಿ ॥೩॥**

'ಶ್ರೀರಾಮನಿಂದ ಬೇರ್ಪಟ್ಟಿರುವ ಸೀತಾದೇವಿಯು ನಿಶ್ಚಿಂತಳಾಗಿ ಮಲಗಿರಲಾರಳು. ಊಟಮಾಡಲಾರಳು. ಅಲಂಕಾರವನ್ನು ಮಾಡಿಕೊಳ್ಳ ಲಾರಳು. ದ್ರಾಕ್ಷಾಸವಾದಿಗಳನ್ನು ಸೇವಿಸಲಾರಳು. ಅನ್ಯಮನುಷ್ಯನ ಅಥವಾ ದೇವತೆಗಳಿಗೆ ಈಶ್ವರನಾದ ಇಂದ್ರನ ಬಳಿಯಲ್ಲಿಯೂ ಅವಳು ಸ್ವಸ್ಥಚಿತ್ತಳಾಗಿ ಕುಳಿತುಕೊಳ್ಳಲಾರಳು. ಯಾರ ಬಳಿಗೂ ಹೋಗಲಾರಳು. ಏಕೆಂದರೆ : ಶ್ರೀರಾಮನಿಗೆ ಸದೃಶನಾದವನು ದೇವತೆಗಳಲ್ಲಿಯೂ ಯಾರೂ ಇಲ್ಲ.

ಆದುದರಿಂದ ಇಲ್ಲಿ ಮಲಗಿರುವವಳು ಬೇರೆ ಯಾವಳೋ ಆಗಿರಬೇಕು. ಸೀತೆಯಂತೂ ಅಲ್ಲ'–ಎಂಬುದಾಗಿ ನಿಶ್ಚಯಿಸಿ ಸೀತೆಯನ್ನು ಸಂದರ್ಶಿಸಬೇಕೆನ್ನುವ ಉತ್ಸಾಹದಿಂದ ಅಂತಃಪುರದಲ್ಲಿಯೂ ಮತ್ತು ಅದರ ಸಮೀಪದಲ್ಲಿಯೇ ಇದ್ದ ಪಾನಗೃಹದಲ್ಲಿಯೂ ಪುನಃ ಸೀತೆಯನ್ನು ಹುಡುಕ ತೊಡಗಿದನು.

ಪಾನಗೃಹದಲ್ಲಿ ಕೆಲವು ಸ್ತ್ರೀಯರು ಕ್ರೀಡಾವಿಹಾರಗಳ ಬಳಲಿಕೆಯಿಂದ ಮಲಗಿದ್ದರು. ಕೆಲವರು ಹಾಡಿ-ಪಾಡಿ ಆಯಾಸಗೊಂಡು ಮಲಗಿದ್ದರು. ಕೆಲವು ನೃತ್ಯವಾಡಿದ ಆಯಾಸದಿಂದ ಮಲಗಿದ್ದರು. ಇನ್ನೂ ಕೆಲವರು ಅತಿ ಯಾಗಿ ಪಾನಮಾಡಿ ಪ್ರಜ್ಞಾಶೂನ್ಯರಾಗಿ ಮಲಗಿದ್ದರು. ಕೆಲವರು ಡೋಲು-ಮೃದಂಗ-ಚೇಲಿಕೆಗಳೆಂಬ ವಾದ್ಯಗಳನ್ನು ನುಡಿಸುವುದರಲ್ಲಿ ಆಸಕ್ತರಾಗಿ ನಿದ್ದೆಹೋಗಿದ್ದರು. ಕೆಲವರು ಶ್ರೇಷ್ಠವಾದ ಹಂಸತೂಲಿಕಾತಲ್ಪಗಳಲ್ಲಿ ಮಲಗಿದ್ದರು.

ಅಂತಃಪುರದ ಸಮೀಪದಲ್ಲಿಯೇ ಇದ್ದ ಪಾನಗೃಹದಲ್ಲಿಯೂ ಸಾವಿರಾರು ಅಂಗನೆಯರಿದ್ದರು. ಅವರೆಲ್ಲರೂ ಸುಂದರವಾದ ಮತ್ತು ಶ್ರೇಷ್ಠವಾದ ಆಭರಣಗಳಿಂದ ಸಮಲಂಕೃತರಾಗಿದ್ದರು. ತಮ್ಮ ರೂಪ-ಸೌಂದರ್ಯಗಳನ್ನು ಬಗೆ-ಬಗೆಯಾಗಿ ವರ್ಣಿಸಿ ಹೇಳುವ ಸ್ವಭಾವದವರಾಗಿದ್ದರು. ಅಂತೆಯೇ ರಾವಣನ ರೂಪವನ್ನೂ, ವೀರ್ಯ-ಪರಾಕ್ರಮಗಳನ್ನೂ ಬಗೆ-ಬಗೆಯಾಗಿ ಬಣ್ಣಿಸಿ ಹೇಳುತ್ತಿದ್ದರು. ತತ್ಕಾಲೋಚಿತವಾದ ಗೀತೆಗಳನ್ನು ಹಾಡಿ ಅವುಗಳ ಅರ್ಥಗಳನ್ನು ಹೇಳುತ್ತಿದ್ದರು. ಎಲ್ಲರೂ ದೇಶ-ಕಾಲೋಚಿತವಾಗಿ ಮಾತನಾಡುವ ಕುಶಲತೆಯಿಂದ ಕೂಡಿದ್ದರು. ಮತ್ತೊಂದೆಡೆಯಲ್ಲಿಯೂ ರೂಪಸಂಪತ್ತಿನಿಂದ ಕೂಡಿದ್ದ, ಸಲ್ಲಾಪಕುಶಲೆಯರಾಗಿದ್ದ, ನವಯುವತಿಯರಾದ ಸಾವಿರಾರು ಸ್ತ್ರೀಯರು ಮಲಗಿದ್ದರು. ಅವರೂ ಕೂಡ ದೇಶ-ಕಾಲೋಚಿತವಾದ ಮಾತುಗಳನ್ನು ಪರಸ್ಪರವಾಗಿ ಹೇಳಿಕೊಳ್ಳುವ ಸ್ವಭಾವದವರಾಗಿದ್ದರು. ಅವರೆಲ್ಲರೂ ರತಿಕ್ರೀಡೆಯಿಂದ ಬಳಲಿ ಮಲಗಿ ದ್ದರು. ಶ್ರೇಷ್ಠರಾದ ಆ ವರನಾರಿಯರ ಮಧ್ಯದಲ್ಲಿ ರಾಕ್ಷಸೇಶ್ವರನಾದ, ಮಹಾಬಾಹುವಾದ ರಾವಣನು-ದೊಡ್ಡದಾದ ದನದ ಕೊಟ್ಟಿಗೆಯಲ್ಲಿ ಶ್ರೇಷ್ಠ ವಾದ ಗೋವುಗಳ ಮಧ್ಯದಲ್ಲಿರುವ ಗೂಳಿಯಂತೆ ರಾರಾಜಿಸುತ್ತಿದ್ದನು. ಕಡುಚೆಲುವೆಯರಾಗಿದ್ದ ಆ ನವಯುವತಿಯರಿಂದ ಪರಿವೃತನಾಗಿದ್ದ ರಾಕ್ಷಸೇಶ್ವರನು–ಮಹಾರಣ್ಯದಲ್ಲಿ ಹೆಣ್ಣಾನೆಗಳಿಂದ ಸುತ್ತುವರಿಯಲ್ಪಟ್ಟ ಸಲಗದೋಪಾದಿಯಲ್ಲಿಯೂ ಪ್ರಕಾಶಿಸುತ್ತಿದ್ದನು.

ಕಪಿಶ್ರೇಷ್ಠನಾದ ಹನುಮಂತನು ಮಹಾತ್ಮನಾದ ರಾಕ್ಷಸೇಶ್ವರ ಅರಮನೆಯಲ್ಲಿದ್ದ, ಸಕಲವಿಧವಾದ ಕಾಮನಾವಸ್ತುಗಳಿಂದಲೂ ಸಮೃದ್ಧ ವಾಗಿದ್ದ ಪಾನಗೃಹದಲ್ಲಿ ಸಂಚರಿಸುತ್ತಿದ್ದನು. ಪಾನಗೃಹದ ಒಂದು ಭಾಗದಲ್ಲಿ ಮೃಗ-ಮಹಿಷ-ವರಾಹಗಳ ಮಾಂಸವನ್ನು ತುಂಡು-ತುಂಡಾಗಿ ಕತ್ತರಿಸಿ ಇಟ್ಟಿದ್ದರು. ಮತ್ತೊಂದೆಡೆಯಲ್ಲಿ ಸುವರ್ಣಮಯವಾದ ವಿಶಾಲವಾದ ಪರಾತಗಳಲ್ಲಿ ಅರ್ಧಭಾಗವನ್ನು ಮಾತ್ರವೇ ತಿಂದುಳಿಸಿದ್ದ ನವಿಲುಗಳ ಮತ್ತು ಕೋಳಿಗಳ ಮಾಂಸವಿದ್ದುದನ್ನು ಹನುಮಂತನು ನೋಡಿದನು.

ಉಪ್ಪಿನಿಂದಲೂ ಮೊಸರಿನಿಂದಲೂ ಸಂಸ್ಕರಿಸಿದ್ದ ಹಂದಿ, ಮುಳ್ಳು

ಹಂದಿ, ವಾರ್ಧ್ರಾಣಸ*(ಖಡ್ಗಮೃಗ), ಜಿಂಕೆ ಮತ್ತು ನವಿಲುಗಳ ಮಾಂಸ ವನ್ನು ಪಾನಗೃಹದ ಮತ್ತೊಂದು ಭಾಗದಲ್ಲಿ ನೋಡಿದನು.

ಇನ್ನೊಂದು ಭಾಗದಲ್ಲಿ ಕತ್ತರಿಸಿ ಪಕ್ವಮಾಡಿದ್ದ ಕಾಡುಕೊಕ್ಕರೆಗಳ ಮತ್ತು ಚಕೋರಪಕ್ಷಿಗಳ ಮಾಂಸವಿದ್ದಿತು. ಸುವರ್ಣಮಯವಾದ ತಟ್ಟೆಗಳಲ್ಲಿ ಅರ್ಧತಿಂದು ಬಿಟ್ಟಿದ್ದ ಎಮ್ಮೆ, ಆಡು ಮತ್ತು ಮೀನುಗಳ ಮಾಂಸವಿದ್ದಿತು.

ದ್ರಾಕ್ಷಿ ಮತ್ತು ದಾಳಿಂಬೆಗಳು ರಸದಿಂದಲೂ, ಕಷಾಯದಿಂದಲೂ ಹುಳಿಯೇ ಪ್ರಧಾನವಾದ ಮತ್ತು ಉಪ್ಪೇ ಪ್ರಧಾನವಾದ ರಸಗಳಿಂದಲೂ ಕೂಡಿದ್ದ ಅನೇಕವಿಧವಾದ ಲೇಹ್ಯಗಳನ್ನೂ, ಪಾನೀಯಗಳನ್ನೂ, ಅನೇಕ ವಿಧವಾದ ಭಕ್ಷ್ಯಗಳನ್ನೂ, ರಾಗ-ಖಾಂಡವಗಳನ್ನೂ[1] ಹನುಮಂತನು ನೋಡಿದನು.

---

* ವಾರ್ಧ್ರಾಣಸಃ ಎಂಬುದಕ್ಕೆ ಮೂರು ಅರ್ಥಗಳಿವೆ. 1) ಪಕ್ಷಿವಿಶೇಷಃ = **ಕೃಷ್ಣಗ್ರೀವೋ ರಕ್ತಶಿರಾಃ ಶ್ವೇತಪಕ್ಷೋ ವಿಹಂಗಮಃ । ಸ ವೈ ವಾರ್ಧ್ರಾಣಸಃ ಪ್ರೋಕ್ತಃ ।** (ವಿಷ್ಣುಧರ್ಮೋಕ್ತಿ ) ಕಪ್ಪುಕುತ್ತಿಗೆ, ಕೆಂಪುತಲೆ ಮತ್ತು ಬಿಳಿಯ ರೆಕ್ಕೆ–ಇವುಗಳಿರುವ ಪಕ್ಷಿಗೆ ವಾರ್ಧ್ರಾಣಸವೆಂದು ಹೆಸರು. 2) ವಿಶೇಷರೀತಿಯ ಆಡು, **ತ್ರಿಪಿಬಂ ತ್ವಿನ್ದ್ರಿಯಕ್ಷೀಣಂ ಯೂಪಸ್ಯಾಗ್ರಚರಂ ತಥಾ । ರಕ್ತವರ್ಣಂ ಚ ರಾಜೇನ್ದ್ರ ಚ್ಛಾಗಂ ವಾರ್ಧ್ರಾಣಸಂ ವಿದುಃ ।** ತ್ರಿಪಿಬಂ ಎಂದರೆ ಮುಖ-ಕಿವಿಗಳಿಂದ ನೀರನ್ನು ಕುಡಿಯುವ ಪ್ರಾಣಿ ಆಡು. ಆಡು ನೀರನ್ನು ಕುಡಿಯುವಾಗ ಎರಡು ಕಿವಿಗಳೂ ನೀರಿಗೆ ತಾಗಿರುತ್ತವೆ. ಆದುದರಿಂದ ಅದು ತ್ರಿಪಿಬ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಕ್ಷೀಣಿಸಿರುವ ಇಂದ್ರಿಯಗಳುಳ್ಳ, ಯೂಪಸ್ತಂಭದ ಮೇಲ್ಭಾಗದಲ್ಲಿ ಸಂಚರಿಸುವ ಕೆಂಪುಬಣ್ಣದ ಆಡನ್ನು ವಾರ್ಧ್ರಾಣಸವೆಂದು ಕರೆಯುತ್ತಾರೆ. 3) ಖಡ್ಗಮೃಗ, **ವಾಧ್ರಿಣಸೋ ಖಡ್ಗಮೃಗಃ** (ಹಲಾಯುಧಕೋಶ.)

1 ರಾಗ ಮತ್ತು ಖಾಂಡವಗಳ ಲಕ್ಷಣವನ್ನು ಹೀಗೆ ಹೇಳಿದ್ದಾರೆ : **ಸಿತಾಮಧ್ವಾದಿ ಮಧುರೋ ದ್ರಾಕ್ಷಾದಾಡಿಮಜೋ ರಸಃ । ವಿರಲಶ್ಚೇತ್ಸ್ಮತೋ ರಾಗಃ ಸಾನ್ದ್ರಶ್ಚೇತ್ಖಾಣ್ಡವಃ ಸ್ಮೃತಃ॥** ಸಕ್ಕರೆ ಮತ್ತು ಜೇನುತುಪ್ಪದಂತೆ ಮಧುರವಾಗಿರುವ ದ್ರಾಕ್ಷಾ-ದಾಡಿಮರಸಗಳು ನೀರಿನ ರೂಪದಲ್ಲಿದ್ದರೆ ಅದಕ್ಕೆ ರಾಗವೆಂದೂ–ದಟ್ಟವಾಗಿ ಕಷಾಯದ ರೂಪದಲ್ಲಿದ್ದರೆ ಖಾಂಡವವೆಂದೂ ಹೆಸರು.

ವರನಾರಿಯರ ಕಾಲುಗಳಿಂದ ಕಳಚಿ ಅಲ್ಲಲ್ಲಿ ಬಿದ್ದಿದ್ದ, ಅತಿಮೌಲ್ಯವಾದ ದೊಡ್ಡ-ದೊಡ್ಡ ಕಾಲಂದುಗೆಗಳಿಂದಲೂ, ಕೇಯೂರಗಳಿಂದಲೂ, ಅಸ್ತವ್ಯಸ್ತವಾಗಿ ಬಿದ್ದಿದ್ದ ಪಾನಪಾತ್ರೆಗಳಿಂದಲೂ, ವಿಧ-ವಿಧವಾದ ಫಲಗಳಿಂದಲೂ, ಅಲ್ಲಲ್ಲಿ ಸುವ್ಯವಸ್ಥಿತವಾಗಿ ಇಡಲ್ಪಟ್ಟಿದ್ದ ಹಂಸತೂಲಿಕಾತಲ್ಪಗಳಿಂದಲೂ ಮತ್ತು ಆಸನಗಳಿಂದಲೂ ಸಂಪನ್ನವಾಗಿದ್ದ ಆ ಪಾನಗೃಹವು ಪುಷ್ಪಬಲಿಯನ್ನು ಅರ್ಪಿಸಿದ ಭೂಮಿಯಂತೆಯೇ ಕಾಣುತ್ತಿದ್ದು ಆ ಅರಮನೆಯ ಕಾಂತಿಯನ್ನು ಹೆಚ್ಚಿಸುತ್ತಿದ್ದಿತು.

ಬಹುಪ್ರಕಾರವಾದ, ವಿಧ-ವಿಧವಾದ, ಶ್ರೇಷ್ಠವಾದ ಸಂಸ್ಕಾರಗಳಿಂದ ಸಂಸ್ಕೃತವಾದ, ಕುಶಲರಾದ ಪಾಚಕರಿಂದ ಪ್ರತ್ಯೇಕ-ಪ್ರತ್ಯೇಕವಾಗಿ ಸಿದ್ಧಗೊಳಿಸಿದ, ಮಾಂಸದ ರಾಶಿಗಳಿಂದ ಯುಕ್ತವಾಗಿದ್ದ ಆ ಪಾನಗೃಹವು ಬೆಂಕಿಯೇ ಇಲ್ಲದಿದ್ದರೂ ಕೆಂಪಾದ ಮಾಂಸವು ರಾಶಿ-ರಾಶಿಯಾಗಿದ್ದ ಕಾರಣದಿಂದ ಜಾಜ್ವಲ್ಯಮಾನವಾಗಿ ಉರಿಯುತ್ತಿರುವಂತೆಯೇ ಕಾಣುತ್ತಿದ್ದಿತು. ಆ ಪಾನಗೃಹದಲ್ಲಿ ಹನುಮಂತನು ದಿವ್ಯವಾದ, ಮನಸ್ಸನ್ನು ಪ್ರಸನ್ನಗೊಳಿಸುವ, ಪ್ರಾಕೃತವಾದ ಸುರೆಗಳನ್ನೂ (ಈಚಲ, ತೆಂಗು ಮತ್ತು ತಾಳೇಮರಗಳಿಂದ ಭಟ್ಟಿ ಇಳಿಸಿದ ಮದ್ಯಗಳನ್ನೂ) ವಿಧ-ವಿಧವಾದ ವಾಸನಾಚೂರ್ಣಗಳಿಂದಲೂ, ಸಕ್ಕರೆಯಿಂದಲೂ, ಜೇನುತುಪ್ಪದಿಂದಲೂ, ಪುಷ್ಪರಸಗಳಿಂದಲೂ, ದ್ರಾಕ್ಷಿಯೇ ಮೊದಲಾದ ಫಲಗಳಿಂದಲೂ ತಯಾರಿಸಿದ ಶರ್ಕರಾಸವ, ಮಾಧ್ವೀಕಾಸವ, ಪುಷ್ಪಾಸವ, ಫಲಾಸವಗಳೇ ಮೊದಲಾದ ಕೃತ್ರಿಮವಾಗಿ ತಯಾರಿಸಿದ ಪಾನೀಯಗಳನ್ನೂ ನೋಡಿದನು. ಅನೇಕಸ್ಥಳಗಳಲ್ಲಿ ಅಲಂಕಾ ರಾರ್ಥವಾಗಿ ಹಾಕಿದ್ದ ಮಾಲೆಗಳಿಂದಲೂ, ಸುವರ್ಣಮಯವಾದ ಕಲಶ ಗಳಿಂದಲೂ, ಸ್ಫಟಿಕಮಯವಾದ ಪಾತ್ರೆಗಳಿಂದಲೂ, ಸುವರ್ಣಮಯವಾದ ಗಿಂಡಿಗಳಿಂದಲೂ ವ್ಯಾಪ್ತವಾಗಿದ್ದ ಆ ಪಾನಭೂಮಿಯು ಬಹಳವಾಗಿ ಪ್ರಕಾಶಿಸುತ್ತಿದ್ದಿತು. ಚಿನ್ನದ ಮತ್ತು ಬೆಳ್ಳಿಯ ಬಿಂದಿಗೆಗಳಲ್ಲಿ ಶ್ರೇಷ್ಠವಾದ ಪಾನೀಯಗಳನ್ನು ಅಲ್ಲಿ ತುಂಬಿಟ್ಟಿದ್ದರು. ಸುವರ್ಣಮಯವಾದ ಮತ್ತು ಮಣಿಮಯವಾದ ಮದ್ಯದ ಗಡಿಗೆಗಳೂ ಪಾನಪಾತ್ರೆಗಳೂ ಹೇರಳವಾಗಿದ್ದುವು.

ಕೆಲವು ಕಡೆಗಳಲ್ಲಿ ಪಾನಪಾತ್ರೆಗಳಲ್ಲಿದ್ದ ಸುರೆಯಲ್ಲಿ ಅರ್ಧಭಾಗವನ್ನು ಮಾತ್ರ ಕುಡಿದು ಉಳಿದ ಅರ್ಧಭಾಗವನ್ನು ಹಾಗೆಯೇ ಉಳಿಸಿದ್ದರು. ಕೆಲವು

ಕಡೆಗಳಲ್ಲಿ ಸಂಪೂರ್ಣವಾಗಿ ಕುಡಿದಿದ್ದರು. ಕೆಲವು ಕಡೆಗಳಲ್ಲಿ ಪಾನಪಾತ್ರೆ ಗಳು ಸುರೆಯಿಂದ ಪೂರ್ಣವಾಗಿಯೇ ಇದ್ದುವು. ಅವೆಲ್ಲವನ್ನೂ ಹನುಮಂತನು ನೋಡುತ್ತಾ ಹೋದನು. ಪಾನಗೃಹದ ಕೆಲವೆಡೆಗಳಲ್ಲಿ ವಿಧ-ವಿಧವಾದ ಭಕ್ಷ್ಯಗಳನ್ನೂ, ಕೆಲವು ಕಡೆಗಳಲ್ಲಿ ಭಾಗಶಃ ಕುಡಿದು ಭಾಗಶಃ ಮದ್ಯವಿದ್ದ ಪಾನಪಾತ್ರೆಗಳನ್ನೂ, ಕೆಲವು ಕಡೆಗಳಲ್ಲಿ ಅರ್ಧಭಾಗದಷ್ಟು ಸುರೆಯಿಂದ ಕೂಡಿದ್ದ ಪಾನಪಾತ್ರೆಗಳನ್ನೂ ನೋಡುತ್ತಾ ಹನುಮಂತನು ಅಲ್ಲಲ್ಲೇ ಸಂಚರಿಸುತ್ತಿದ್ದನು. ಪಾನಗೃಹದಲ್ಲಿದ್ದ ಅನೇಕ ಹಾಸಿಗೆಗಳು ಶೂನ್ಯವಾಗಿದ್ದುವು. ಏಕೆಂದರೆ : ಶ್ರೇಷ್ಠರಾದ ಕೆಲವು ಸ್ತ್ರೀಯರು ತಮ್ಮ ಹಾಸಿಗೆಗಳನ್ನು ಬಿಟ್ಟು ಇತರ ಸ್ತ್ರೀಯರ ಹಾಸಿಗೆಗಳಿಗೆ ಹೋಗಿ ಅವರನ್ನು ಗಾಢವಾಗಿ ಆಲಿಂಗಿಸಿಕೊಂಡು ಮಲಗಿದ್ದರು.

ನಿದ್ರಾದೇವಿಯ ಬಲದಿಂದ ಪರಾಜಿತಳಾಗಿದ್ದ ನಾರೀಮಣಿಯೊಬ್ಬಳು ಮಲಗಿದ್ದ ಮತ್ತೊಬ್ಬ ನಾರೀಮಣಿಯ ವಸ್ತ್ರವನ್ನೆಳೆದುಕೊಂಡು ಅದನ್ನೇ ಹೊದೆದುಕೊಂಡು ಮಲಗಿದ್ದಳು.

ಆ ವರನಾರಿಯರ ಉಚ್ಛ್ವಾಸದ ಗಾಳಿಯಿಂದ ಅವರ ಶರೀರಗಳಲ್ಲಿದ್ದ ಚಿತ್ರವಾದ ವಸ್ತ್ರಗಳೂ ಮತ್ತು ಚಿತ್ರವಾದ ಮಾಲೆಗಳೂ ಹೆಚ್ಚು ಸ್ಪಂದಿಸುತ್ತಿರ ಲಿಲ್ಲ. ಅವರ ಉಚ್ಛ್ವಾಸದ ಗಾಳಿಗಳು ಮಂದಮಾರುತದಂತೆ ಹಿತಕರವಾಗಿ ದ್ದುವು. ಮಾರುತವು ಶೀತಲ ಚಂದನ, ಮದ್ಯ, ಮಧುರಸ, ವಿಧವಿಧವಾದ ಪುಷ್ಪಗಳು, ವಿಧ-ವಿಧವಾದ ಮಾಲೆಗಳು, ಷಡ್ರಸಗಳು, ಚಂದನಗಳು, ಧೂಪಗಳು–ಇವೆಲ್ಲದರ ವಾಸನೆಯನ್ನು ಹೊತ್ತು ಪರಿಮಳಭರಿತವಾಗಿ ಪುಷ್ಪಕವಿಮಾನದಲ್ಲಿ ಬೀಸುತ್ತಿದ್ದಿತು. ರಾಕ್ಷಸನ ಆ ಅರಮನೆಯಲ್ಲಿ ಶ್ಯಾಮಲ ವರ್ಣದ, ಶ್ವೇತವರ್ಣದ, ಕೃಷ್ಣವರ್ಣದ, ಹೊಂಬಣ್ಣದ ಅನೇಕ ಪ್ರಮದೆ ಯರಿದ್ದರು. ಅವರೆಲ್ಲರೂ ನಿದ್ರಾವಶರಾಗಿದ್ದುದರಿಂದಲೂ ರತಿಕ್ರೀಡೆಯಿಂದ ಆಯಾಸಗೊಂಡಿದ್ದರಿಂದಲೂ ಅವರ ರೂಪವು ಮುಕುಳಿತವಾದ ಕಮಲ ಗಳಂತೆಯೇ ಕಾಣುತ್ತಿದ್ದುವು.

ಹೀಗೆ ಮಹಾಕಪಿಯಾದ ಮಹಾತೇಜಸ್ವಿಯಾದ ಹನುಮಂತನು ರಾವಣನ ಅಂತಃಪುರದಲ್ಲಿ ಯಾವುದನ್ನೂ ಬಿಡದೇ ಎಲ್ಲವನ್ನೂ ನೋಡಿದನು. ಆದರೆ ಸೀತಾದೇವಿಯನ್ನು ಮಾತ್ರ ಅಲ್ಲವನು ಕಾಣಲಿಲ್ಲ.

ಹೀಗೆ ಎಲ್ಲವನ್ನೂ ನೋಡುತ್ತಿದ್ದಂತೆ ಮಹಾಕಪಿಯಾದ ಹನುಮಂತನಿಗೆ ಧರ್ಮಲೋಪದ ಭಯದಿಂದ ಚಿಂತೆಯುಂಟಾಯಿತು :

**ಪರದಾರಾವರೋಧಸ್ಯ ಪ್ರಸುಪ್ತಸ್ಯ ನಿರೀಕ್ಷಣಮ್ ।**
**ಇದಂ ಖಲು ಮಮಾತ್ಯರ್ಥಂ ಧರ್ಮಲೋಪಂ ಕರಿಷ್ಯತಿ ॥೩೭॥**

"ಪರಪತ್ನಿಯರು ಮಲಗಿರುವ ಈ ಅಂತಃಪುರದ ನಿರೀಕ್ಷಣೆಯಿಂದ ನನಗೆ ತುಂಬಾ ಧರ್ಮಲೋಪವುಂಟಾಗಿದೆ."

ಹನುಮಂತನು ಪುನಃ ಯೋಚಿಸಿ ತನ್ನಲ್ಲಿಯೇ ಹೇಳಿಕೊಂಡನು :

**ನ ಹಿ ಮೇ ಪರದಾರಾಣಾಂ ದೃಷ್ಟಿರ್ವಿಷಯವರ್ತಿನೀ ।**
**ಅಯಂ ಚಾತ್ರ ಮಯಾ ದೃಷ್ಟಃ ಪರದಾರಪರಿಗ್ರಹಃ ॥೩೮॥**

"ವಿಷಯಾಸಕ್ತಿಯಿಂದ ನಾನು ಈ ಪರಸ್ತ್ರೀಯರನ್ನು ನೋಡುತ್ತಿಲ್ಲ. ಆದುದರಿಂದ ಧರ್ಮಲೋಪವಾಗುವುದಿಲ್ಲ. ಆದರೆ ಇಲ್ಲಿ ನಾನು ಪರಸ್ತ್ರೀಯರ ಅಪಹಾರಕನನ್ನು ನೋಡಿದೆನು."

ಮನನಶೀಲನಾದ, ನಿಯತವಾದ ಮನಸ್ಸಿನಿಂದ ಕೂಡಿದ್ದ ಹನುಮಂತನಿಗೆ ಮತ್ತೊಂದು ವಿಚಾರಧಾರೆಯೂ ಹೊಳೆಯಿತು. ಅವನ ಮನಸ್ಸು ಲಕ್ಷ್ಯದಲ್ಲಿ ಸ್ಥಿರವಾಗಿದ್ದಿತು. ಮಾಡಬೇಕಾದ ಕರ್ತವ್ಯವನ್ನು ಅದು ನಿಶ್ಚಯಿಸಿದ್ದಿತು.

**ಕಾಮಂ ದೃಷ್ಟ್ವಾ ಮಯಾ ಸರ್ವಾ ವಿಶ್ವಸ್ತಾ ರಾವಣಸ್ತ್ರಿಯಃ ।**
**ನ ಹಿ ಮೇ ಮನಸಃ ಕಿಂಚಿದ್ವೈಕೃತ್ಯಮುಪಪದ್ಯತೇ ॥೪೦॥**

"ಪರಪುರುಷರು ನೋಡಲಾರರೆಂಬ ದೃಢವಿಶ್ವಾಸದಿಂದ ಮಲಗಿದ್ದ ರಾವಣನ ಪತ್ನಿಯರೆಲ್ಲರನ್ನೂ ನಾನು ಚೆನ್ನಾಗಿ ನೋಡಿದೆನು. ಅಸ್ತವ್ಯಸ್ತವಾದ ಸ್ಥಿತಿಯಲ್ಲಿದ್ದ ಇವರನ್ನು ನೋಡಿಯೂ ನನ್ನ ಮನಸ್ಸಿನಲ್ಲಿ ಸ್ವಲ್ಪವಾದರೂ ವಿಕಾರಭಾವವುಂಟಾಗಿರುವುದಿಲ್ಲ.

**ಮನೋ ಹಿ ಹೇತುಃ ಸರ್ವೇಷಾಮಿನ್ದ್ರಿಯಾಣಾಂ ಪ್ರವರ್ತನೇ ।**
**ಶುಭಾಶುಭಾಸ್ವವಸ್ಥಾಸು ತಚ್ಚ ಮೇ ಸುವ್ಯವಸ್ಥಿತಮ್ ॥೪೧॥**

ಪಾಪ-ಪುಣ್ಯಗಳ ಕರ್ಮಗಳಲ್ಲಿ ಇಂದ್ರಿಯಗಳು ಪ್ರವರ್ತಿಸಬೇಕಾದರೆ

ಮನಸ್ಸೇ ಮುಖ್ಯಕಾರಣವಾಗಿರುತ್ತದೆ. ಮನಸ್ಸಿನ ಮೂಲಕವಾಗಿಯೇ ಇಂದ್ರಿಯಗಳು ಶುಭಾಶುಭಕರ್ಮಗಳಲ್ಲಿ ತೊಡಗುತ್ತವೆ. ಈ ವಿಷಯದಲ್ಲಿ ನನ್ನ ಮನಸ್ಸು ಸುವ್ಯವಸ್ಥಿತವಾಗಿದೆ ; ಸ್ಥಿರವಾಗಿದೆ. ಇಂದ್ರಿಯಗಳನ್ನು ಪಾಪಕರ್ಮಗಳಿಗೆ ಪ್ರಚೋದಿಸುತ್ತಿಲ್ಲ.

**ನಾನ್ಯತ್ರ ಚ ಮಯಾ ಶಕ್ಯಾ ವೈದೇಹೀ ಪರಿಮಾರ್ಗಿತುಮ್ ।**
**ಸ್ತ್ರಿಯೋ ಹಿ ಸ್ತ್ರೀಷು ದೃಶ್ಯನ್ತೇ ಸದಾ ಸಂಪರಿಮಾರ್ಗಣೇ ॥೪೨॥**

ಸ್ತ್ರೀಯರ ಸಮೂಹವಲ್ಲದೇ ಬೇರೆಯ ಸ್ಥಳಗಳಲ್ಲಿ ಸೀತೆಯನ್ನು ಹುಡುಕುವ ಅಥವಾ ಕಾಣುವ ಸಾಧ್ಯತೆಯಿಲ್ಲ. ಏಕೆಂದರೆ : ಸ್ತ್ರೀಯರ ಮಧ್ಯದಲ್ಲಿಯೇ ನಮಗೆ ಬೇಕಾದ ಸ್ತ್ರೀಯರು ಇರುವ ಸಂಭವವಿದೆ. ಸ್ತ್ರೀಯರನ್ನು ಹುಡುಕಬೇಕಾದರೆ ಸ್ತ್ರೀಯರ ಸಮೂಹದಲ್ಲಿಯೇ ಹುಡುಕ ಬೇಕು. ಸಾಮಾನ್ಯವಾಗಿ ಅವರು ಅಲ್ಲಿಯೇ ಇರುತ್ತಾರೆ.

**ಯಸ್ಯ ಸತ್ತ್ವಸ್ಯ ಯಾ ಯೋನಿಸ್ತಸ್ಯಾಂ ತತ್ಪರಿಮಾರ್ಗ್ಯತೇ ।**
**ನ ಶಕ್ಯಾ ಪ್ರಮದಾ ನಷ್ಟಾ ಮೃಗೀಷು ಪರಿಮಾರ್ಗಿತುಮ್ ॥೪೩॥**

ತಪ್ಪಿಸಿಕೊಂಡುಹೋದ ಒಂದು ಪ್ರಾಣಿಯನ್ನು ಆ ಜಾತಿಯ ಪ್ರಾಣಿ ಗಳಿರುವ ಎಡೆಗಳಲ್ಲಿಯೇ ಹುಡುಕಬೇಕು. ಹಸುವು ತಪ್ಪಿಸಿಕೊಂಡು ಹೋದರೆ ಹಸುಗಳ ಗುಂಪುಗಳಲ್ಲಿಯೇ ಅದನ್ನು ಹುಡುಕಬೇಕು. ಆದುದರಿಂದ ಕಳೆದುಹೋಗಿರುವ ಸ್ತ್ರೀಯನ್ನು ಹೆಣ್ಣುಜಿಂಕೆಗಳ ಮಧ್ಯದಲ್ಲಿ ಹುಡುಕುವುದಕ್ಕಾಗುವುದಿಲ್ಲ. ಸ್ತ್ರೀಯರ ಮಧ್ಯದಲ್ಲಿಯೇ ಹುಡುಕಬೇಕು.

**ತದಿದಂ ಮಾರ್ಗಿತಂ ತಾವಚ್ಛುದ್ಧೇನ ಮನಸಾ ಮಯಾ ।**
**ರಾವಣಾನ್ತಃಪುರಂ ಸರ್ವಂ ದೃಶ್ಯತೇ ನ ಚ ಜಾನಕೀ ॥೪೪॥**

ಈ ಕಾರಣದಿಂದಲೇ ನಾನು ಶುದ್ಧವಾದ ಮನಸ್ಸಿನಿಂದ ರಾವಣನ ಅಂತಃಪುರದಲ್ಲಿ ಸ್ತ್ರೀಯರ ಮಧ್ಯದಲ್ಲಿಯೇ ಸೀತಾದೇವಿಯು ಇರಬಹುದೆಂದು ಹುಡುಕಿದೆನು ; ಆದರೆ ಅವಳು ಮಾತ್ರ ಇಲ್ಲಿ ಕಾಣಲಿಲ್ಲ."

ಹೀಗೆ ಸ್ತ್ರೀಯರ ಮಧ್ಯದಲ್ಲಿ ಸೀತಾನ್ವೇಷಣೆಯನ್ನು ಸಮರ್ಥಿಸಿಕೊಂಡು ಪುನಃ ದೇವ-ಗಂಧರ್ವ-ನಾಗಕನ್ಯೆಯರ ಮಧ್ಯದಲ್ಲಿ ಸೀತೆಯನ್ನು ಹುಡುಕಿದನು. ಆದರೆ ಅಲ್ಲಿಯೂ ಅವನು ಜಾನಕಿಯನ್ನು ಕಾಣಲಿಲ್ಲ.

ಕಪಿಶ್ರೇಷ್ಠನಾದ, ವೀರನಾದ ಹನುಮಂತನು ಅಲ್ಲೆಲ್ಲೂ ಸೀತಾದೇವಿಯನ್ನು ಕಾಣದೇ ಇತರ ಶ್ರೇಷ್ಠರಾದ ಸ್ತ್ರೀಯರನ್ನೇ ಅನುಲಕ್ಷಿಸುತ್ತಾ ನಿರಾಶನಾಗಿ ಅಲ್ಲಿಂದ ಹೊರಡಲು ಅನುವಾದನು.

ಶ್ರೀಮಂತನಾದ ಮಾರುತಿಯು ಆ ಪಾನಭೂಮಿಯಿಂದ ನಿರ್ಗಮಿಸಿ ಪುನಃ ಉಳಿದೆಲ್ಲ ಕಡೆಗಳಲ್ಲಿಯೂ ಸಂಪೂರ್ಣಪ್ರಯತ್ನದಿಂದ ಸೀತಾದೇವಿಯನ್ನು ಹುಡುಕಲು ಪ್ರಾರಂಭಿಸಿದನು.

೧೧ನೆಯ ಸರ್ಗವು ಮುಗಿಯಿತು.



## ಸೀತಾದೇವಿಯು ಮರಣ ಹೊಂದಿರಬಹುದೆಂದು ಶಂಕಿಸಿದ ಹನುಮಂತನು ದುಃಖಿತನಾದುದು : ಪುನಃ ಉತ್ಸಾಹವನ್ನಾಶ್ರಯಿಸಿ ಹುಡುಕಲು ಹೊರಟುದು : ಎಷ್ಟು ಹುಡುಕಿದರೂ ಸೀತೆಯು ಸಿಕ್ಕದಿರಲು ಪುನಃ ಚಿಂತಾಮಗ್ನನಾದುದು

**ಸ ತಸ್ಯ ಮಧ್ಯೇ ಭವನಸ್ಯ ಮಾರುತಿ-**
**ರ್ಲತಾಗೃಹಾಂಶ್ಚಿತ್ರಗೃಹಾನ್ನಿಶಾಗೃಹಾನ್ ।**
**ಜಗಾಮ ಸೀತಾಂ ಪ್ರತಿ ದರ್ಶನೋತ್ಸುಕೋ**
**ನ ಚೈವ ತಾಂ ಪಶ್ಯತಿ ಚಾರುದರ್ಶನಾಮ್ ॥೧॥**

ಸೀತಾದೇವಿಯನ್ನು ನೋಡುವ ಉತ್ಸಾಹದಿಂದ ಕೂಡಿದ್ದ ಹನುಮಂತನು ರಾವಣನ ಅರಮನೆಯ ಮಧ್ಯಭಾಗದಲ್ಲಿದ್ದ ಲತಾಗೃಹಗಳ, ಚಿತ್ರಗೃಹಗಳ ಮತ್ತು ನಿಶಾಗೃಹಗಳ ಕಡೆಗೆ ಹೋದನು. ಕಡುಚೆಲುವೆಯಾಗಿದ್ದ ವೈದೇಹಿಯನ್ನು ಅಲ್ಲಿಯೂ ಕಾಣಲಿಲ್ಲ.

ಮಹಾಕಪಿಯಾದ ಆಂಜನೇಯನು ಶ್ರೀರಾಮನ ಭಾರ್ಯೆಯಾದ ಸೀತಾದೇವಿಯನ್ನು ಕಾಣದೇ ಚಿಂತಿಸತೊಡಗಿದನು.

**ಧ್ರುವಂ ಹಿ ಸೀತಾ ಮ್ರಿಯತೇ ಯಥಾ ನ ಮೇ ।**
**ವಿಚಿನ್ವತೋ ದರ್ಶನಮೇತಿ ಮೈಥಿಲೀ ॥೨॥**

"ಎಲ್ಲ ಕಡೆಗಳಲ್ಲಿಯೂ ಹುಡುಕುತ್ತಿದ್ದರೂ ನನ್ನ ಕಣ್ಣಿಗೆ ಬೀಳದಿರುವುದರಿಂದ ಸೀತೆಯು ನಿಶ್ಚಯವಾಗಿಯೂ ಪ್ರಾಣಗಳನ್ನು ತೊರೆದಿರಬಹುದು.

ಆರ್ಯರ ಶ್ರೇಷ್ಠವಾದ ಮಾರ್ಗವನ್ನೇ ಅನುಸರಿಸುತ್ತಿದ್ದ ಅವಳು ತನ್ನ ಶೀಲದ ಸಂರಕ್ಷಣೆಯಲ್ಲಿಯೇ ನಿರತಳಾಗಿದ್ದ ಕಾರಣ ರಾಕ್ಷಸಶ್ರೇಷ್ಠನಾದ ದುಷ್ಕರ್ಮಿಯಾದ ರಾವಣನಿಂದ ವಧಿಸಲ್ಪಟ್ಟಿರಲೂಬಹುದು. ರಾವಣನ ದಾಸಿಯರಾದ ರಾಕ್ಷಸಿಯರು ವಿಕಾರವಾದ ರೂಪಗಳನ್ನು ಹೊಂದಿರತಕ್ಕವರು, ಭಯಂಕರವಾದ ಕಾಂತಿಯುಳ್ಳವರು, ವಿಶಾಲವಾದ ಮುಖವುಳ್ಳವರು, ದೀರ್ಘವಾಗಿಯೂ ವಿಕಾರವಾಗಿಯೂ ಇರುವ ಕಣ್ಣುಗಳುಳ್ಳವರು. ಇಂತಹ ಭಯಂಕರರೂಪಿಣಿಯರಾದ ರಾಕ್ಷಸಿಯರನ್ನು ನೋಡಿಯೇ ಜನಕರಾಜಪುತ್ರಿಯು ಭಯದಿಂದ ಪ್ರಾಣಗಳನ್ನು ತೊರೆದಿರಬಹುದು.

ವಾನರರೊಡನೆ ಬಹಳ ಕಾಲದವರೆಗೆ ಅಲೆದಾಡಿ ಸೀತೆಯನ್ನು ಹುಡುಕಲು ಇಲ್ಲಿಗೆ ಬಂದರೂ ಅವಳನ್ನು ಇದುವರೆಗೂ ನಾನು ಕಾಣಲಿಲ್ಲ. ಯಾವ ಪುರುಷಾರ್ಥವನ್ನೂ ಸಾಧಿಸಲಾಗಲಿಲ್ಲ. ಆದುದರಿಂದ ಸುಗ್ರೀವನ ಬಳಿಗೆ ಹೋಗುವ ಮಾರ್ಗವೇ ಈಗ ನನಗೆ ಮುಚ್ಚಿಹೋಗಿದೆ. ಏಕೆಂದರೆ : ಸುಗ್ರೀವನು ಬಲಿಷ್ಠನು. ಅಪರಾಧವನ್ನು ಮಾಡಿದವರಿಗೆ ತೀಕ್ಷ್ಣವಾದ ದಂಡನೆಯನ್ನೂ ವಿಧಿಸುವವನು. ರಾವಣನ ಅಂತಃಪುರದ ಎಲ್ಲ ಸ್ಥಳಗಳನ್ನೂ ನೋಡಿಯಾಯಿತು. ರಾಕ್ಷಸೇಶ್ವರನ ಪತ್ನಿಯರ ಮಧ್ಯದಲ್ಲಿ ಹುಡುಕಿದ್ದಾಯಿತು. ಆದರೆ ಸಾಧ್ವಿಯಾದ ಸೀತಾದೇವಿಯು ಅಲ್ಲೆಲ್ಲೂ ಕಾಣಲಿಲ್ಲ. ಇದರಿಂದಾಗಿ ಸಮುದ್ರವನ್ನು ಹಾರಿಕೊಂಡು ಇಲ್ಲಿಗೆ ಬಂದ ನನ್ನ ಶ್ರಮವು ನಿರರ್ಥಕವಾಯಿತು. ನಾನೇನಾದರೂ ಈಗ ಹಿಂದಕ್ಕೆ ಹೋದರೆ ವಾನರರೆಲ್ಲರೂ ಒಟ್ಟಾಗಿ ಸೇರಿ ನನ್ನನ್ನು ಏನೆಂದು ಪ್ರಶ್ನಿಸುವರು?

**ಗತ್ವಾ ತತ್ರ ತ್ವಯಾ ವೀರ ಕಿಂ ಕೃತಂ ತದ್ವದಸ್ವ ನಃ ॥೭॥**

'ವೀರನೇ! ನೀನು ಲಂಕೆಗೆ ಹೋಗಿ ಅಲ್ಲೇನು ಮಾಡಿಬಂದೆ? ಮೊದಲು ಹೇಳು'–ಎಂದಲ್ಲವೇ ಪ್ರಶ್ನಿಸುತ್ತಾರೆ?

ಜಾನಕಿಯನ್ನು ಕಾಣದಿರುವ ನಾನು ಅವರಿಗೆ ಏನೆಂದು ಹೇಳಲಿ? ಯಾವ ಕಾರ್ಯವನ್ನು ಮಾಡಿಬಂದೆನೆಂದು ಹೇಳಲಿ? ಮೇಲಾಗಿ ಸುಗ್ರೀವನು

ಹೇಳಿದ ಸಮಯದ ಗಡುವೂ ಮೀರಿಹೋಗಿದೆ. ಆದುದರಿಂದ ಅವರೆಲ್ಲರೂ ಪ್ರಾಯೋಪವೇಶವನ್ನೇ ಮಾಡುವರು. ಕಿಷ್ಕಿಂಧೆಗೆ ಹಿಂದಿರುಗುವುದಿಲ್ಲ.

ಸಮುದ್ರದ ಉತ್ತರತೀರವನ್ನು ಸೇರಿದೊಡನೆಯೇ ವೃದ್ಧನಾದ ಜಾಂಬವಂತನಾದರೂ ಏನೆನ್ನುತ್ತಾನೆ? ಅಂಗದನು ಏನೆನ್ನುತ್ತಾನೆ? ಸೀತಾನ್ವೇಷಣೆಗಾಗಿ ಆಗಮಿಸಿ ನನಗಾಗಿ ಕಾಯುತ್ತಿರುವ ವಾನರರಾದರೂ ಏನೆನ್ನುತ್ತಾರೆ? ನನ್ನನ್ನು ಖಂಡಿತವಾಗಿಯೂ ಧಿಕ್ಕರಿಸುತ್ತಾರೆ. ಆದುದರಿಂದ ನಾನು ಕೃತಕೃತ್ಯನಾಗದೇ ಹಿಂದಿರುಗುವಂತೆಯೇ ಇಲ್ಲ.

**ಅನಿರ್ವೇದಃ ಶ್ರಿಯೋ ಮೂಲಮನಿರ್ವೇದಃ ಪರಂ ಸುಖಮ್ ।**
**ಭೂಯಸ್ತತ್ರ ವಿಚೇಷ್ಯಾಮಿ ನ ಯತ್ರ ವಿಚಯಃ ಕೃತಃ ॥೧೦॥**

ಕಳವಳಗೊಳ್ಳದೇ ಉತ್ಸಾಹಶೀಲನಾಗಿರುವುದೇ ಶ್ರೇಯಃಸಾಧನೆಗೆ ಮೂಲ. ಅದೇ ಪರಮಸುಖವನ್ನು ಕೊಡುತ್ತದೆ. ಆದುದರಿಂದ ನಾನು ಇದುವರೆಗೆ ಯಾವ-ಯಾವ ಸ್ಥಳಗಳಲ್ಲಿ ಸೀತೆಯನ್ನು ಹುಡುಕಿಲ್ಲವೋ–ಆ ಎಲ್ಲ ಸ್ಥಳಗಳಲ್ಲಿಯೂ ಪುನಃ ಅವಳನ್ನು ಹುಡುಕುತ್ತೇನೆ.

**ಅನಿರ್ವೇದೋ ಹಿ ಸತತಂ ಸರ್ವಾರ್ಥೇಷು ಪ್ರವರ್ತಕಃ ।**
**ಕರೋತಿ ಸಫಲಂ ಜನ್ತೋಃ ಕರ್ಮ ಯಚ್ಚ ಕರೋತಿ ಸಃ ॥೧೧॥**

ಉತ್ಸಾಹವೆಂಬುದೇ ಮನುಷ್ಯನನ್ನು ಯಾವಾಗಲೂ ಸಕಲಕರ್ತವ್ಯ ಗಳಲ್ಲಿಯೂ ಪ್ರವರ್ತಕನನ್ನಾಗಿ ಮಾಡುತ್ತದೆ. ಪ್ರಯತ್ನದಲ್ಲಿ ನಿರಾಶನಾಗ ದಿರುವುದು ಮನುಷ್ಯನು ಪ್ರಾರಂಭಿಸಿದ ಕಾರ್ಯವನ್ನು ಸಫಲಗೊಳಿಸುತ್ತದೆ.

ಆದುದರಿಂದ ಪ್ರಯತ್ನದಲ್ಲಿ ನಿರಾಶನಾಗದೇ ಉತ್ಸಾಹದಿಂದ ಉತ್ತಮ ರೀತಿಯಲ್ಲಿ ಪ್ರಯತ್ನವನ್ನು ಮುಂದುವರಿಸುತ್ತೇನೆ. ನಾನು ಇದುವರೆಗೂ ನೋಡದೇ ಇರುವ, ರಾವಣನಿಂದ ಪರಿಪಾಲಿಸಲ್ಪಡುತ್ತಿರುವ ಸ್ಥಳಗಳಲ್ಲಿ ಪುನಃ ಸೀತೆಯನ್ನು ಹುಡುಕುತ್ತೇನೆ. ನಾನಿದುವರೆಗೆ ಮದ್ಯಗೋಷ್ಠಿಗಳಲ್ಲಿ, ಪುಷ್ಪಗೃಹಗಳಲ್ಲಿ, ಚಿತ್ರಶಾಲೆಗಳಲ್ಲಿ, ಕ್ರೀಡಾಗೃಹಗಳಲ್ಲಿ, ಅರಮನೆಯ ಕೈತೋಟಗಳಲ್ಲಿ, ಓಣಿಗಳಲ್ಲಿ, ಸೀತೆಯನ್ನು ಹುಡುಕಿದೆನು. ರಾಜಗೃಹಗಳ ಎಲ್ಲೆಡೆಗಳಲ್ಲಿಯೂ ನೋಡಿದೆನು. ಮುಂದೆ ಇವುಗಳನ್ನು ಬಿಟ್ಟು ಬೇರೆಡೆಗಳಲ್ಲಿ ಹುಡುಕುತ್ತೇನೆ"–ಎಂದು ನಿಶ್ಚಯಿಸಿ ಪುನಃ ಹುಡುಕಲು ಪ್ರಾರಂಭಿಸಿದನು.

ನೆಲಮಾಳಿಗೆಗಳಲ್ಲಿಯೂ, ನಾಲ್ಕು ದಾರಿಗಳು ಸೇರುವ ಕಡೆಗಳಲ್ಲಿಯೂ, ಮಂಟಪಗಳಲ್ಲಿಯೂ, ಮನೆಗಳಿಗೆ ಸ್ವಲ್ಪ ದೂರದಲ್ಲಿ ಸ್ವೇಚ್ಛಾ ವಿಹಾರಾರ್ಥವಾಗಿ ನಿರ್ಮಿಸಿರುವ ಮನೆಗಳಲ್ಲಿಯೂ ಸೀತಾದೇವಿಯನ್ನು ಹುಡುಕತೊಡಗಿದನು. ಹಾಗೆ ಹೋಗುತ್ತಿರುವಾಗ ಹನುಮಂತನು ಒಮ್ಮೆ ನೆಗೆಯುತ್ತಿದ್ದನು. ಮತ್ತೊಮ್ಮೆ ಮೇಲಿಂದ ಕೆಳಕ್ಕೆ ಧುಮುಕುತ್ತಿದ್ದನು. ಮತ್ತೊಮ್ಮೆ ಒಂದೆಡೆಯಲ್ಲಿ ನಿಂತು ನೋಡುತ್ತಿದ್ದನು. ಅನಂತರ ಪುನಃ ಮುಂದೆ ಹೋಗುತ್ತಿದ್ದನು.

ಮನೆಗಳ ಬಾಗಿಲುಗಳನ್ನು ತೆಗೆಯುತ್ತಾ, ಚಿಕ್ಕ-ಚಿಕ್ಕ ಬಾಗಿಲುಗಳನ್ನು ತಟ್ಟುತ್ತಾ, ಒಮ್ಮೆ ಮನೆಗಳೊಳಗೆ ಪ್ರವೇಶಿಸುತ್ತಾ, ಅಲ್ಲಿ ಸೀತೆಯನ್ನು ಕಾಣದೇ ಹೊರಬಂದು ಮನೆಯ ಮೇಲಕ್ಕೆ ಹಾರುತ್ತಾ, ಮೇಲಿಂದ ಕೆಳಕ್ಕೆ ಧುಮುಕುತ್ತಾ ಹುಡುಕುತ್ತಿದ್ದನು. ಒಳಹೋಗಲು ಅವಕಾಶವಿದ್ದ ಎಲ್ಲ ಸ್ಥಳಗಳಲ್ಲಿಯೂ ಮಹಾಕಪಿಯಾದ ಹನುಮಂತನು ಸಂಚರಿಸಿದನು. ರಾವಣನ ಆ ಅಂತಃಪುರದಲ್ಲಿ ಅವನು ಹೋಗದಿರುವ ನಾಲ್ಕು ಅಂಗುಲಗಳಷ್ಟು ಸ್ಥಳವೂ ಇರಲಿಲ್ಲ. ಪ್ರಾಕಾರದ ಒಳಭಾಗದಲ್ಲಿದ್ದ ಬೀದಿಗಳನ್ನೂ, ಚೌಕಗಳ ಸಮೀಪದಲ್ಲಿ ಮರಗಳ ಕೆಳಗಿರುತ್ತಿದ್ದ ಜಗುಲಿಗಳನ್ನೂ, ಹಳ್ಳಗಳನ್ನೂ, ಸರೋವರಗಳನ್ನೂ, ಇತರ ಎಲ್ಲ ಪ್ರದೇಶಗಳನ್ನೂ ಅವನು ವೀಕ್ಷಿಸಿದನು. ವಿಧ-ವಿಧವಾದ ಆಕಾರಗಳನ್ನು ಹೊಂದಿದ್ದ, ವಿರೂಪಿಣಿಯರಾಗಿದ್ದ, ವಿಕಾರವಾಗಿ ಕಾಣುತ್ತಿದ್ದ ರಾಕ್ಷಸಿಯರನ್ನು ಹನುಮಂತನು ಆ ಎಲ್ಲ ಸ್ಥಳಗಳಲ್ಲಿಯೂ ನೋಡಿದನು. ಆದರೆ ಜನಕನ ಮಗಳನ್ನು ಮಾತ್ರ ಎಲ್ಲಿಯೂ ಕಾಣಲಿಲ್ಲ.

ರೂಪದಲ್ಲಿ ಅಪ್ರತಿಮೆಯರಾಗಿದ್ದ ಶ್ರೇಷ್ಠರಾದ ವಿದ್ಯಾಧರಸ್ತ್ರೀಯರನ್ನು ಹನುಮಂತನು ಅಲ್ಲಿ ನೋಡಿದನು. ಆದರೆ ರಾಘವನಿಗೆ ಆನಂದವನ್ನುಂಟು ಮಾಡುವ ಸೀತೆಯನ್ನು ಮಾತ್ರ ಕಾಣಲಿಲ್ಲ. ಸುಂದರವಾದ ನಿತಂಬಗಳಿಂದ ಕೂಡಿದ್ದ, ಪೂರ್ಣಚಂದ್ರಸದೃಶವಾದ ಮುಖಗಳನ್ನು ಹೊಂದಿದ್ದ ನಾಗಕನ್ಯೆಯರನ್ನು ಅಲ್ಲಿ ನೋಡಿದನು. ಆದರೆ ಜನಕನ ಮಗಳಾದ ಸೀತೆಯನ್ನು ಕಾಣಲಿಲ್ಲ. ನಾಗರಾಜರೊಡನೆ ಯುದ್ಧಮಾಡಿ ಅವರನ್ನು ಪರಾಜಯಗೊಳಿಸಿ ಅಪಹರಿಸಲ್ಪಟ್ಟಿದ್ದ ನಾಗಕನ್ಯೆಯರನ್ನೂ ನೋಡಿದನು. ಆದರೆ ಜನಕನಂದಿನಿಯನ್ನು ಕಾಣಲಿಲ್ಲ.

ಮಹಾಬಲನಾದ, ಧೀಮಂತನಾದ, ವಾಯುಪುತ್ರನಾದ ಹನುಮಂತನು ಇತರ ಎಲ್ಲ ಶ್ರೇಷ್ಠನಾರಿಯರನ್ನು ಕಂಡರೂ ಸೀತಾದೇವಿಯನ್ನು ಕಾಣದೇ ಬಾರಿ-ಬಾರಿಗೂ ವಿಷಾದಿಸಿದನು.

ವಾನರಶ್ರೇಷ್ಠರ ಸೀತಾನ್ವೇಷಣೆಯ ಪ್ರಯತ್ನವನ್ನೂ ತನ್ನ ಸಮುದ್ರದ ಲಂಘನವನ್ನೂ ವ್ಯರ್ಥವೆಂದು ಭಾವಿಸಿದ ವಾಯುಪುತ್ರನು ಪುನಃ ಚಿಂತೆಯಲ್ಲಿ ಮಗ್ನನಾದನು. ಶೋಕದಿಂದ ಕಂಗೆಟ್ಟ ಬುದ್ಧಿಯವನಾಗಿದ್ದ, ವಾಯುಪುತ್ರನು ಉಪ್ಪರಿಗೆಯಿಂದ ಕೆಳಗಿಳಿದು ಆಲೋಚಿಸತೊಡಗಿದನು.

೧೨ನೆಯ ಸರ್ಗವು ಮುಗಿಯಿತು.



## ಸೀತಾದೇವಿಯು ವಿನಾಶಹೊಂದಿರಬಹುದೆಂದು ಹನುಮಂತನು ಪುನಃ ಶಂಕಿಸಿದುದು : ಶ್ರೀರಾಮನಿಗೆ ಸೀತೆಯು ಸಿಕ್ಕಲಿಲ್ಲವೆಂಬ ವಾರ್ತೆಯನ್ನು ತಿಳಿಸುವುದರಿಂದ ಉಂಟಾಗಬಹುದಾದ ಅನರ್ಥವನ್ನು ನೆನೆದು ಕಿಷ್ಕಿಂಧೆಗೆ ಹಿಂದಿರುಗದಿರಲು ನಿಶ್ಚಯಿಸಿ ಅಶೋಕವನದಲ್ಲಿ ಸೀತೆಯನ್ನು ಹುಡುಕಲು ಹೊರಟುದು

**ವಿಮಾನಾತ್ತು ಸುಸಂಕ್ರಮ್ಯ ಪ್ರಾಕಾರಂ ಹರಿಯೂಥಪಃ ।**
**ಹನುಮಾನ್ವೇಗವಾನಾಸೀದ್ಯಥಾ ವಿದ್ಯುದ್ಘನಾನ್ತರೇ ॥೧॥**

ಕಪಿಸೈನ್ಯದ ರಕ್ಷಕನಾದ ಹನುಮಂತನು ಉಪ್ಪರಿಗೆಯಿಂದಿಳಿದು ಪ್ರಾಕಾರವನ್ನು ದಾಟಿ ಮೋಡಗಳ ಮಧ್ಯದಲ್ಲಿನ ಮಿಂಚಿನಂತೆ ವೇಗವಾಗಿ ಹೋಗತೊಡಗಿದನು.

ಕಪಿಶ್ರೇಷ್ಠನಾದ ಮಾರುತಿಯು ರಾವಣನ ಅರಮನೆಯಿಂದ ಹೊರಟು ಎಲ್ಲೆಡೆಗಳಲ್ಲಿಯೂ ಸುತ್ತಾಡಿ ಸೀತಾದೇವಿಯನ್ನು ಎಲ್ಲಿಯೂ ಕಾಣದೇ ಹೀಗೆ ಹೇಳಿಕೊಂಡನು :

“ರಾಮನಿಗೆ ಪ್ರಿಯವಾದ ಕಾರ್ಯವನ್ನು ಮಾಡುವ ಆಶಯದಿಂದಲೂ ಸೀತೆಯನ್ನು ಕಾಣಬೇಕೆಂಬ ಆಶಯದಿಂದಲೂ ಎಲ್ಲೆಡೆಗಳಲ್ಲಿಯೂ ಸಂಚರಿಸಿದ ನಾನು ಹಲವಾರು ಬಾರಿ ಲಂಕಾಪಟ್ಟಣವನ್ನು ಶೋಧಿಸಿಬಿಟ್ಟೆನು. ಆದರೆ ಸರ್ವಾಂಗಶೋಭನೆಯಾದ ವೈದೇಹಿಯನ್ನು ಎಲ್ಲಿಯೂ ಕಾಣಲಿಲ್ಲ.

ಸಣ್ಣಕೊಳಗಳ ಬಳಿಯಲ್ಲಿಯೂ, ಕೆರೆಗಳ ಬಳಿಯಲ್ಲಿಯೂ, ಸರೋವರಗಳ ಬಳಿಯಲ್ಲಿಯೂ, ಜೌಗಾದ ಸ್ಥಳಗಳಲ್ಲಿಯೂ, ಉಪನದಿ-ಮಹಾನದಿಗಳ ತೀರಗಳಲ್ಲಿಯೂ, ಅರಣ್ಯಗಳಲ್ಲಿಯೂ, ದುರ್ಗ-ಪರ್ವತಗಳ್ಲಲಿಯೂ, ಇತರ ಎಲ್ಲ ಪ್ರದೇಶಗಳಲ್ಲಿಯೂ ಸೀತೆಯನ್ನು ಹುಡುಕಿದೆನು. ಆದರೆ ಅವಳು ಮಾತ್ರ ಸಿಕ್ಕಲಿಲ್ಲ. ಗೃಧ್ರರಾಜನಾದ ಸಂಪಾತಿಯೂ ಈ ರಾವಣನ ಅರಮನೆಯಲ್ಲಿಯೇ ಸೀತೆಯಿರುವಳೆಂದು ಹೇಳಿದ್ದನು. ಆದರೆ ನಾನು ಅವಳನ್ನಿಲ್ಲಿ ಕಾಣಲಾಗಲಿಲ್ಲ. ರಾವಣನಿಂದ ಬಲಾತ್ಕಾರವಾಗಿ ಸೆಳೆದು ತರಲ್ಪಟ್ಟ, ವಿದೇಹವಂಶೋತ್ಪನ್ನಳಾದ, ಜನಕನ ಮಗಳಾದ ಸೀತಾದೇವಿಯು ಅಸ್ವತಂತ್ರಳಾಗಿ ದುರಾಚಾರಿಯಾದ ರಾವಣನನ್ನೇ ಸೇವಿಸುತ್ತಿರಬಹುದೇ? ಅಥವಾ ರಾಮನ ಬಾಣಗಳಿಗೆ ಹೆದರಿದ ರಾವಣರಾಕ್ಷಸನು ಶೀಘ್ರಾತಿಶೀಘ್ರವಾಗಿ ಸೀತೆಯನ್ನೆತ್ತಿಕೊಂಡು ಮೇಲಕ್ಕೆ ಹಾರಿ ಸಮುದ್ರದ ಮಧ್ಯದಲ್ಲಿ ಹೋಗುತ್ತಿದ್ದಾಗ ಅವನ ಹಿಡಿತದಿಂದ ತಪ್ಪಿಸಿಕೊಂಡು ಸಮುದ್ರದಲ್ಲಿ ಬಿದ್ದು ಬಿಟ್ಟಿರಬಹುದೇ? ಅಥವಾ ಸಿದ್ಧರಿಂದ ಸೇವಿಸಲ್ಪಡುವ ಆಕಾಶಮಾರ್ಗದಲ್ಲಿ ರಾವಣನಿಂದ ಸೆಳೆದೊಯ್ಯಲ್ಪಡುತ್ತಿದ್ದಾಗ ಆರ್ಯೆಯಾದ ಸೀತಾದೇವಿಯ ಹೃದಯವು ಮಹಾಸಾಗರವನ್ನು ನೋಡಿದೊಡನೆಯೇ ಭಗ್ನವಾಗಿಬಿಟ್ಟಿರಬಹುದೇ?

ರಾವಣನ ತೊಡೆಗಳ ವೇಗದಿಂದಲೂ, ಭುಜಗಳಿಂದ ಅನವರತವಾಗಿ ಪೀಡಿಸಲ್ಪಡುತ್ತಿದ್ದುದರಿಂದಲೂ ಕಂಗೆಟ್ಟುಹೋಗಿದ್ದ ವಿಶಾಲನೇತ್ರೆಯಾದ ಸೀತೆಯು ಜೀವಿತವನ್ನೇ ತ್ಯಜಿಸಿರಬಹುದೇ? ರಾವಣನು ಸೀತೆಯನ್ನೆತ್ತಿ ಕೊಂಡು ಸಮುದ್ರದ ಮೇಲೆ ಹೋಗುತ್ತಿದ್ದಾಗ ಅವನ ಹಿಡಿತದಿಂದ ಬಿಡಿಸಿ ಕೊಳ್ಳಲು ಹೆಣಗಾಡಿ ಸಮುದ್ರದಲ್ಲಾದರೂ ಬಿದ್ದುಹೋಗಿರಬಹುದೇ?

ಬಂಧುಗಳಿಂದ ರಹಿತಳಾಗಿದ್ದ, ಶೀಲವನ್ನು ರಕ್ಷಿಸಿಕೊಳ್ಳುವುದರಲ್ಲಿಯೇ ಜಾಗರೂಕಳಾಗಿದ್ದ, ತಪಸ್ವಿನಿಯಾದ ಸೀತಾದೇವಿಯನ್ನು ಕ್ಷುದ್ರನಾದ ರಾವಣನು ಭಕ್ಷಿಸಿರಲೂಬಹುದು. ಅಥವಾ ಕಪ್ಪುಕಣ್ಣಿನವಳಾದ ಸಾಧುಶೀಲೆ ಯಾದ ಸೀತಾದೇವಿಯನ್ನು ಪರಮದುಷ್ಟೆಯರಾದ ರಾಕ್ಷಸೇಂದ್ರನ ಮಡದಿ ಯರಾದರೂ ತಿಂದುಹಾಕಿರಬಹುದು. ದೀನಳಾದ ಸೀತೆಯು ಪೂರ್ಣಚಂದ್ರ ಸದೃಶವಾದ ಕಮಲಪತ್ರಕ್ಕೆ ಸಮಾನವಾದ ಕಣ್ಣುಗಳಿಂದ ಕಂಗೊಳಿಸುವ ಶ್ರೀರಾಮನ ಮುಖಕಮಲವನ್ನೇ ಧ್ಯಾನಮಾಡುತ್ತಾ ಸಾವನ್ನಪ್ಪಿರಬಹುದು.

'ಹಾ ರಾಮ! ಹಾ ಲಕ್ಷ್ಮಣ! ಹಾ ಅಯೋಧ್ಯೇ'–ಇವೇ ಮುಂತಾಗಿ ಕೂಗಿಕೊಳ್ಳುತ್ತಾ ಮೈಥಿಲಿಯು ದೇಹತ್ಯಾಗಮಾಡಿರಲೂಬಹುದು. ಅಥವಾ ಯಾರ ಕಣ್ಣುಗಳಿಗೂ ಬೀಳದಂತೆ ರಾವಣನ ಅರಮನೆಯ ಒಂದು ಭಾಗದಲ್ಲಿ ಬಂಧಿಸಲ್ಪಟ್ಟಿರುವ ಸೀತಾದೇವಿಯು ಪಂಜರದಲ್ಲಿರುವ ಮೈನಾಹಕ್ಕಿಯಂತೆ ಸತತವಾಗಿ ವಿಲಪಿಸುತ್ತಿರಬಹುದು. ಸುಂದರವಾದ ಕಟಿಪ್ರದೇಶವನ್ನು ಹೊಂದಿರುವ, ನೀಲೋತ್ಪಲದಳನೇತ್ರೆಯಾದ, ಮಹಾನುಭಾವನಾದ ಜನಕನ ಮಗಳಾದ, ಪುರುಷೋತ್ತಮನಾದ ಶ್ರೀರಾಮನ ಮಡದಿಯಾದ ಸೀತಾದೇವಿಯು ಹೇಗೆ ತಾನೇ ರಾವಣನ ಅಧೀನಳಾಗುವಳು? ಯಾರ ಕಣ್ಣಿಗೂ ಬೀಳದಿರುವ ಸ್ಥಳದಲ್ಲಿ ರಾವಣನು ಬಂಧಿಸಿಟ್ಟಿರುವುದರಿಂದ ಅವಳು ಅದೃಶ್ಯಳಾಗಿರಬಹುದು ; ತಪ್ಪಿಸಿಕೊಂಡಿರಬಹುದು ; ವಿನಾಶಹೊಂದಿರ ಬಹುದು. ಶ್ರೀರಾಮನನ್ನೇ ಸತತವಾಗಿ ಚಿಂತಿಸುತ್ತಾ ಸಾವನ್ನಪ್ಪಿರಬಹುದು. ಆದರೆ ಅವಳ ಸ್ಥಿತಿ-ಗತಿಗಳನ್ನು ನಿಖರವಾಗಿ ತಿಳಿದುಕೊಳ್ಳದೇ ಭಾರ್ಯೆಯ ವಿಷಯದಲ್ಲಿ ಹೆಚ್ಚು ಮಮತೆಯಿಂದಿರುವ ರಾಮನಿಗೆ ಸಂದೇಹಕ್ಕೆ ಆಸ್ಪದ ವಾದ ವಾರ್ತೆಯನ್ನು ತಿಳಿಸುವುದು ಯುಕ್ತವಾಗಿ ಕಾಣುವುದಿಲ್ಲ.

**ನಿವೇದ್ಯಮಾನೇ ದೋಷಃ ಸ್ಯಾದ್ದೋಷಃ ಸ್ಯಾದನಿವೇದನೇ ।**
**ಕಥಂ ನು ಖಲು ಕರ್ತವ್ಯಂ ವಿಷಮಂ ಪ್ರತಿಭಾತಿ ಮೇ ॥೧೯॥**

'ಸೀತೆಯು ಸಿಕ್ಕಲಿಲ್ಲ'–ಎಂಬ ಅಪ್ರಿಯವಾರ್ತೆಯನ್ನು ತಿಳಿಸುವುದೂ ದೋಷವಾಗುತ್ತದೆ. ಒಂದು ವೇಳೆ ಯಾವ ವಿಷಯವನ್ನೂ ಹೇಳದೆಯೇ ಹೋದರೆ ಆಗಲೂ ಸ್ವಾಮಿಗೆ ವಂಚನೆಮಾಡಿದ ದೋಷವು ಪ್ರಾಪ್ತವಾಗುತ್ತದೆ. ಹೀಗಿರುವಾಗ ಈಗ ನನ್ನ ಕರ್ತವ್ಯವೇನು? ನನಗಂತೂ ಇದು ಇಕ್ಕಟ್ಟಿನ ಪರಿಸ್ಥಿತಿಯಾಗಿದೆ."

ಹನುಮಂತನ ಸೀತಾನ್ವೇಷಣೆಯ ಕಾರ್ಯವು ಇಂತಹ ಇಕ್ಕಟ್ಟಿನ ಸ್ಥಿತಿಯನ್ನು ಮುಟ್ಟಲಾಗಿ ತತ್ಕಾಲೋಚಿತವಾದ ಯಾವ ಕಾರ್ಯವನ್ನು ಮಾಡಬಹುದೆಂಬುದರ ಬಗೆಗೆ ಪುನಃ ಕಪೀಶ್ವರನು ಯೋಚಿಸತೊಡಗಿದನು :

"ಒಂದುವೇಳೆ ಸೀತೆಯನ್ನು ಕಾಣದೆಯೇ ವಾನರೇಂದ್ರನಾದ ಸುಗ್ರೀವನ ಪಟ್ಟಣವಾದ ಕಿಷ್ಕಿಂಧೆಗೆ ಹೋದುದಾದರೆ ನನಗೆ–ಲಭಿಸುವ ಪುರುಷಾರ್ಥ ವಾದರೂ ಏನಿದೆ? ನನ್ನ ಈ ಸಮುದ್ರಲಂಘನವೂ, ಲಂಕಾಪ್ರವೇಶವೂ,

ರಾಕ್ಷಸರ ದರ್ಶನವೂ ವ್ಯರ್ಥವೇ ಆಗುತ್ತದೆ. ಕಾರ್ಯವನ್ನು ಸಾಧಿಸದೇ ಕಿಷ್ಕಿಂಧೆಗೆ ಹಿಂದಿರುಗಿದ ನನ್ನನ್ನು ನೋಡಿ ಸುಗ್ರೀವನೂ, ಅಲ್ಲಿಗೆ ಆಗಮಿಸಿರುವ ಇತರ ವಾನರಶ್ರೇಷ್ಠರೂ, ದಶರಥನ ಮಕ್ಕಳಾದ ರಾಮ-ಲಕ್ಷ್ಮಣರೂ ಏನೆನ್ನುವರು? ಅಲ್ಲಿಗೆ ಹೋಗಿ ಶ್ರೀರಾಮನಿಗೆ–'ನಾನು ಸೀತಾದೇವಿಯನ್ನು ಎಲ್ಲಿಯೂ ನೋಡಿಲಿಲ್ಲ'–ಎಂದು ಹೇಳಿಬಿಟ್ಟರೆ ಆ ಕರ್ಣಕಠೋರವಾದ ಮಾತನ್ನು ಕೇಳಿದೊಡನೆಯೇ ಮಹಾಪುರುಷನಾದ ಅವನು ಜೀವಿತವನ್ನೇ ತ್ಯಜಿಸಬಹುದು. ದಾರುಣವಾದ, ಅತಿತೀಕ್ಷ್ಣವಾದ, ಕ್ರೂರವಾದ, ಮನಸ್ಸಿಗೆ ತಾಪವನ್ನುಂಟುಮಾಡುವ, ಸೀತಾನಿಮಿತ್ತವಾದ–'ನ ದೃಷ್ಟಾ ಮಯಾ ಸೀತಾ'–ಎಂಬ ದುರ್ವಾಕ್ಯವನ್ನು ಕೇಳಿ ಶ್ರೀರಾಮನು ಉಳಿಯಲಾರನು. ಅದನ್ನು ಕೇಳಿದೊಡನೆಯೇ ದಾರುಣವಾದ ಸಂಕಟಕ್ಕೊಳಗಾಗುವ ಮತ್ತು ಪ್ರಾಣಗಳನ್ನು ತೊರೆದುಬಿಡಬೇಕೆಂದು ನಿಶ್ಚಯಿಸುವ ಶ್ರೀರಾಮನನ್ನು ನೋಡಿ, ಅಣ್ಣನ ವಿಷಯದಲ್ಲಿ ಅತ್ಯಂತಾನುರಕ್ತನಾದ ಮೇಧಾವಿಯಾದ ಲಕ್ಷ್ಮಣನೂ ಬದುಕುವುದಿಲ್ಲ. ಅರಣ್ಯಕ್ಕೆ ಹೋದ ಸಹೋದರರಿಬ್ಬರೂ ಮೃತರಾದರೆಂದು ತಿಳಿದೊಡನೆಯೇ ಅತ್ತಲಾಗಿ ಭರತನೂ ಸಾಯುತ್ತಾನೆ. ಭರತನು ಸತ್ತುದನ್ನು ನೋಡಿ ಶತ್ರುಘ್ನನೂ ಸಾಯುತ್ತಾನೆ. ನಾಲ್ಕು ಮಕ್ಕಳೂ ಸತ್ತುದನ್ನು ನೋಡಿ ಅವರ ತಾಯಂದಿರಾದ ಕೌಸಲ್ಯಾ-ಸುಮಿತ್ರಾ-ಕೈಕೇಯಿಯರೂ ಸಾಯುತ್ತಾರೆ. ರಾಮನು ಸತ್ತುದನ್ನು ನೋಡಿ ಪಡೆದ ಉಪಕಾರವನ್ನು ಯಾವಾಗಲೂ ಸ್ಮರಿಸುವ ಸತ್ಯಸಂಧನಾದ ಕಪೀಶ್ವರನೂ ಸಾಯುತ್ತಾನೆ. ಪತಿಯ ಮರಣಶೋಕದಿಂದ ಪೀಡಿತಳಾಗುವ, ನಿರಾನಂದಳಾದ, ತಪಸ್ವಿನಿಯಾದ ರುಮಾದೇವಿಯೂ ಅತ್ಯಂತದುಃಖಿತೆಯಾಗಿ ಮನಸ್ಸನ್ನು ಕೆಡಿಸಿಕೊಂಡು ದೀನಳಾಗಿ ಜೀವವನ್ನು ತೊರೆಯುತ್ತಾಳೆ. ವಾಲಿಯ ಮರಣದಿಂದುಂಟಾದ ದುಃಖದಿಂದ ಪೀಡಿತಳಾಗಿರುವ, ಶೋಕಾಕುಲಳಾದ, ಮಹಾರಾಣಿಯಾದ ತಾರಾದೇವಿಯೂ ರಾಜನಾದ ಸುಗ್ರೀವನು ಅವಸಾನ ಹೊಂದಿದನಂತರ ಬದುಕಿರಲಾರಳು. ಮಾತಾ-ಪಿತೃಗಳಾದ ತಾರಾ-ವಾಲಿಯರ ನಿಧನದಿಂದಲೂ ಸುಗ್ರೀವನನ್ನಗಲಿದ ವ್ಯಸನದಿಂದಲೂ ವ್ಯಾಕುಲಿತನಾಗುವ ಅಂಗದಕುಮಾರನು ತಾನೇ ಹೇಗೆ ಜೀವಿಸಿದ್ದಾನು? ಅವನೂ ಸಾಯುತ್ತಾನೆ. ಸ್ವಾಮಿಯ ಮರಣದಿಂದ ಕಂಗೆಡುವ ವಾನರರು ಅಂಗೈಗಳಿಂದಲೂ ಮುಷ್ಟಿ

ಗಳಿಂದಲೂ ತಲೆಗಳನ್ನು ಚೆಚ್ಚಿಕೊಂಡು ಸಾಯುತ್ತಾರೆ. ಯಶಸ್ವಿಯಾದ ಕಪಿರಾಜನಾದ ಸುಗ್ರೀವನು ಪ್ರಜೆಗಳನ್ನು ಸಾಂತ್ವವಚನಗಳಿಂದಲೂ, ದಾನಾದಿಗಳಿಂದಲೂ, ಗೌರವದಿಂದಲೂ ಲಾಲಿಸಿ ಪೋಷಿಸುತ್ತಿರುವನು. ತಮ್ಮ ರಾಜನ ನಿಧನದಿಂದಾಗಿ ದುಃಖಿತರಾಗುವ ಪ್ರಜೆಗಳೆಲ್ಲರೂ ಪ್ರಾಣಗಳನ್ನು ಪರಿತ್ಯಜಿಸುತ್ತಾರೆ. ಹೀಗೆಲ್ಲಾ ಆದನಂತರ ಕಪಿಶ್ರೇಷ್ಠರು ಅರಣ್ಯಗಳಲ್ಲಿಯೂ, ಪರ್ವತಪ್ರದೇಶಗಳಲ್ಲಿಯೂ, ಗೃಹಗಳ ಮಧ್ಯದಲ್ಲಿಯೂ ಒಟ್ಟಾಗಿ ಸೇರಿ ವಿನೋದಾಮೋದ-ಪ್ರಮೋದಗಳನ್ನು ಅನುಭವಿಸಲಾಗುವುದಿಲ್ಲ. ರಾಜನ ವಿಯೋಗದುಃಖದಿಂದ ಪೀಡಿತರಾಗುವ ವಾನರಶ್ರೇಷ್ಠರು ಪುತ್ರ-ಪುತ್ರೀ-ಪತ್ನಿಯರೊಡನೆ ಪರ್ವತಗಳ ಮೇಲಿನಿಂದ ಧುಮುಕಿ ಸಮ ಪ್ರದೇಶಗಳಲ್ಲಿಯೂ, ಹಳ್ಳ-ಕೊಳ್ಳಗಳಲ್ಲಿಯೂ ಬಿದ್ದು ಅಸುನೀಗುತ್ತಾರೆ. ಕೆಲವು ವಾನರರು ವಿಷವನ್ನು ಕುಡಿದು, ಕೆಲವರು ನೇಣುಹಾಕಿಕೊಂಡು ಸಾಯುತ್ತಾರೆ. ಮತ್ತೆ ಕೆಲವರು ಭರ್ತೃವಿಯೋಗದುಃಖವನ್ನು ತಾಳಲಾರದೇ ಬೆಂಕಿಯಲ್ಲಿ ಬಿದ್ದೂ, ಕೆಲವರು ಮರಣಾಂತವಾಗಿ ಉಪವಾಸಮಾಡಿಯೂ ಸಾಯುತ್ತಾರೆ. ಕೆಲವರು ಶಸ್ತ್ರಗಳಿಂದ ತಮ್ಮ ಕುತ್ತಿಗೆಗಳನ್ನೇ ಕತ್ತರಿಸಿಕೊಂಡು ಅಸುನೀಗುತ್ತಾರೆ. ನಾನೇನಾದರೂ ಕೃತಕೃತ್ಯನಾಗದೇ ಕಿಷ್ಕಿಂಧೆಗೆ ಹಿಂದಿರುಗಿ ಸೀತೆಯು ಸಿಕ್ಕಲಿಲ್ಲವೆಂಬ ದುರ್ವಾರ್ತೆಯನ್ನು ತಿಳಿಸಿಬಿಟ್ಟರೆ—ಮಹಾಘೋರ ವಾದ ರೋದನವೇ ಅಲ್ಲಿ ಪ್ರಾರಂಭವಾಗುತ್ತದೆ. ಅಲ್ಲದೇ ಈ ದುರ್ವಾರ್ತೆಯ ಪರಿಣಾಮವಾಗಿ ಇಕ್ಷ್ವಾಕುಕುಲವೂ ನಾಶವಾಗುತ್ತದೆ. ಕಪಿಕುಲವೂ ನಾಶವಾಗುತ್ತದೆ. ಈ ಕಾರಣದಿಂದ ಅಂತಹ ಸರ್ವನಾಶಕ್ಕೆ ಕಾರಣನಾಗುವ ನಾನು ಕಿಷ್ಕಿಂಧೆಗೆ ಹೋಗುವುದೇ ಇಲ್ಲ. ಮೈಥಿಲಿಯನ್ನು ಕಾಣದೇ ಸುಗ್ರೀವನನ್ನು ಸಂದರ್ಶಿಸುವ ಸಾಮರ್ಥ್ಯವು ನನಗಿಲ್ಲ.

ನಾನು ಕಿಷ್ಕಿಂಧೆಗೆ ಹೋಗದೆ ಇಲ್ಲಿಯೇ ಇದ್ದುಬಿಟ್ಟರೆ ಧರ್ಮಾತ್ಮರಾದ ರಾಮ-ಲಕ್ಷ್ಮಣರು ಸೀತೆಯು ಸಿಕ್ಕುವಳೆಂಬ ಪ್ರತ್ಯಾಶೆಯಿಂದಲಾದರೂ ಪ್ರಾಣ ಗಳನ್ನು ಧರಿಸಿರುತ್ತಾರೆ. ಅವರೊಡನೆ ಮಹಾತ್ಮರಾದ ವಾನರರೂ ಜೀವಿಸಿರು ತ್ತಾರೆ.

**ಹಸ್ತಾದಾನೋ ಮುಖಾದಾನೋ ನಿಯತೋ ವೃಕ್ಷಮೂಲಿಕಃ ।**
**ವಾನಪ್ರಸ್ಥೋ ಭವಿಷ್ಯಾಮಿ ಹ್ಯದೃಷ್ಟ್ವಾ ಜನಕಾತ್ಮಜಾಮ್ ॥**

ಜನಕನ ಮಗಳಾದ ಸೀತಾದೇವಿಯನ್ನು ಕಾಣದಿರುವ ನಾನು ಇನ್ನು ಮುಂದೆ ವಾನಪ್ರಸ್ಥನಾಗಿ ಮರದ ಬುಡದಲ್ಲಿ ವಾಸಿಸುತ್ತಾ ತಾನಾಗಿಯೇ ಕೈಮೇಲೆ ಬೀಳುವ ಅಥವಾ ಬಾಯೊಳಗೆ ಬೀಳುವ ಫಲಗಳನ್ನು ಮಾತ್ರವೇ ತಿನ್ನುತ್ತಾ ಜೀವಿಸುತ್ತೇನೆ.

ಬಹುಮೂಲ-ಫಲಗಳಿಂದ ವಿಶಿಷ್ಟವಾದ ಸಮುದ್ರದ ಸಮೀಪದಲ್ಲಿರುವ ಪ್ರದೇಶದಲ್ಲಿ ಚಿತೆಯೊಂದನ್ನು ನಿರ್ಮಿಸಿ ಅರಣಿಯಿಂದ ಹುಟ್ಟಿದ ಪ್ರಜ್ವಲಿಸುವ ಬೆಂಕಿಯಲ್ಲಿ ಬೀಳುತ್ತೇನೆ.

ಪ್ರಾಯೋಪವೇಶವ್ರತವನ್ನು ಹಿಡಿದು ಸಂನ್ಯಾಸಸಿದ್ಧಿಯನ್ನು ಸಾಧಿಸಿ ಶರೀರವನ್ನು ತ್ಯಾಗಮಾಡಿದನಂತರ ಈ ಶರೀರವನ್ನು ಕಾಗೆಗಳೂ ಮಾಂಸಾಹಾರಿಗಳಾದ ಇತರ ಪ್ರಾಣಿಗಳೂ ತಿಂದುಹಾಕುತ್ತವೆ.

ನಾನು ಸೀತಾದೇವಿಯನ್ನು ಕಾಣದಿದ್ದರೆ ನೀರಿನಲ್ಲಿ ಮುಳುಗಿ ಯಾದರೂ ಸಾಯುತ್ತೇನೆ. ನನ್ನ ಅಭಿಪ್ರಾಯದಂತೆ ಈ ವಿಧವಾದ ದೇಹ ತ್ಯಾಗವನ್ನೂ ಮಹರ್ಷಿಗಳು ಕಂಡುಕೊಂಡಿದ್ದರು.

ಪ್ರಾರಂಭದಲ್ಲಿ ಶುಭಕರವಾಗಿದ್ದ, ಸೌಭಾಗ್ಯದಾಯಕವಾಗಿದ್ದ, ನನ್ನ ಕೀರ್ತಿಗೆ ಮಾಲಾರೂಪವಾಗಿದ್ದ, ಯಶಸ್ವಿನಿಯಾದ, ದೀರ್ಘಕಾಲದ ಈ ರಾತ್ರಿಯು ಕೂಡ ಸೀತೆಯನ್ನು ನೋಡದೆಯೇ ಕಳೆದುಹೋಗುತ್ತಿದೆ.

ನಾನೀಗ ತಪಸ್ವಿಯಾದರೂ ಆಗುತ್ತೇನೆ. ನಿಯತವಾದ ವ್ರತವನ್ನು ಕೈಗೊಂಡು ವೃಕ್ಷದ ಅಡಿಯಲ್ಲಿ ವಾಸಮಾಡುತ್ತಾ ವಾನಪ್ರಸ್ಥನಾದರೂ ಆಗುವೆನು. ಕಪ್ಪಾದ ಕಣ್ಣುಗಳುಳ್ಳ ಸೀತಾದೇವಿಯನ್ನು ಕಾಣದೇ ನಾನು ಕಿಷ್ಕಿಂಧೆಗೆ ಹೋಗುವುದಿಲ್ಲ. ಒಂದು ವೇಳೆ ನಾನೇನಾದರೂ ಸೀತಾದೇವಿಯನ್ನು ಕಾಣದೇ ಇಲ್ಲಿಂದ ಹಿಂದಿರುಗಿದ್ದೇ ಆದರೆ–ಸಮಸ್ತವಾನರರೊಡನೆ ಅಂಗದನೂ ವಿನಾಶಹೊಂದುವನು."

ಅನಂತರ ಹನುಮಂತನು ಹೀಗೂ ಯೋಚಿಸಿದನು :

**ವಿನಾಶೇ ಬಹವೋ ದೋಷಾ ಜೀವನ್ಭದ್ರಾಣಿ ಪಶ್ಯತಿ ।**
**ತಸ್ಮಾತ್ಪ್ರಾಣಾನ್ಧರಿಷ್ಯಾಮಿ ಧ್ರುವೋ ಜೀವತಿ ಸಂಗಮಃ ॥೪೭॥**

"ನಿರಾಶೆಯಿಂದ ಅಸುನೀಗಿದರೆ ಅನೇಕದೋಷಗಳುಂಟಾಗುತ್ತವೆ. ಜೀವಿ

ಸಿದ್ದರೆ ಎಂದಾದರೊಂದು ದಿನ ಶುಭವನ್ನು ಕಾಣಬಹುದು. ಆದುದರಿಂದ ನಾನು ಪ್ರಾಣಗಳನ್ನು ತೊರೆಯುವುದಿಲ್ಲ. ಜೀವವನ್ನು ಉಳಿಸಿಕೊಂಡಿರು ವೆನು. ಜೀವಿಸಿರುವವನಿಗೆ ಸುಖವು ಲಭಿಸುವುದು ನಿಶ್ಚಯ."

ಹೀಗೆ ಕಪಿಶ್ರೇಷ್ಠನಾದ ಹನುಮಂತನು ಪರಿ-ಪರಿಯಾಗಿ ಯೋಚಿ ಸುತ್ತಾ ನಾನಾವಿಧವಾದ ದುಃಖಗಳನ್ನು ಮನಸ್ಸಿನಲ್ಲಿ ತುಂಬಿಕೊಂಡಿದ್ದನು. ಶೋಕದ ಕೊನೆಯು ಯಾವಾಗ? ಎಂಬುದನ್ನು ಅವನಿಗೆ ತಿಳಿಯಲು ಸಾಧ್ಯವಾಗಲೇ ಇಲ್ಲ.

ಶೋಕಮಗ್ನನಾಗಿದ್ದ, ಧೈರ್ಯವಂತನಾದ, ಕಪಿಶ್ರೇಷ್ಠನಾದ, ಹನುಮಂತನು ತನ್ನ ಪರಾಕ್ರಮವನ್ನು ಸ್ಮರಿಸುತ್ತಾ ಹೇಳಿಕೊಂಡನು :

**ರಾವಣಂ ವಾ ವಧಿಷ್ಯಾಮಿ ದಶಗ್ರೀವಂ ಮಹಾಬಲಮ್ ।**
**ಕಾಮಮಸ್ತು ಹೃತಾ ಸೀತಾ ಪ್ರತ್ಯಾಚೀರ್ಣಂ ಭವಿಷ್ಯತಿ ॥೪೯॥**

**ಅಥ ವೈನಂ ಸಮುತ್ಕ್ಷಿಪ್ಯ ಉಪರ್ಯುಪರಿ ಸಾಗರಮ್ ।**
**ರಾಮಾಯೋಪಹರಿಷ್ಯಾಮಿ ಪಶುಂ ಪಶುಪತೇರಿವ ॥೫೦॥**

"ಅಪಹೃತಳಾಗಿರುವ ಸೀತಾದೇವಿಯು ತನ್ನ ಪಾಡಿಗೆ ತಾನು ಎಲ್ಲಾ ದರೂ ಇದ್ದುಕೊಳ್ಳಲಿ. ನಾನೀಗ ಮಹಾಬಲನಾದ ಹತ್ತು ತಲೆಯ ರಾವಣ ನನ್ನೇ ಸಂಹಾರಮಾಡುತ್ತೇನೆ. ಇದರಿಂದ ಅವನು ಮಾಡಿದ ಅಪರಾಧಕ್ಕೆ ತಕ್ಕ ಪ್ರತೀಕಾರವೂ ಆದಂತಾಗುತ್ತದೆ. ಹಾಗಲ್ಲದಿದ್ದರೆ ಇವನನ್ನೆತ್ತಿಕೊಂಡು ಸಮುದ್ರವನ್ನು ಲಂಘಿಸಿ ಪಶುಪತಿಗೆ* ಪಶುವನ್ನು ಒಪ್ಪಿಸುವಂತೆ ರಾಮ-ಲಕ್ಷ್ಮಣರಿಗೆ ಒಪ್ಪಿಸಿಬಿಡುತ್ತೇನೆ."

ಮಹಾಭಾಗೆಯಾದ ಸೀತಾದೇವಿಯನ್ನು ಕಾಣದೇ ಹನುಮಂತನು ಹೀಗೆ ಪರಿ-ಪರಿಯಾಗಿ ಚಿಂತಿಸುತ್ತಿದ್ದನು. ಚಿಂತೆ ಮತ್ತು ಶೋಕಗಳಿಂದ ಅವನ ಮನಸ್ಸು ತುಂಬಿಹೋಗಿದ್ದಿತು. ಮುಂದೇನು ಮಾಡಬೇಕೆಂಬುದರ ಬಗೆಗೆ ಪುನಃ ಪುನಃ ಚಿಂತಿಸುತ್ತಲೇ ಇದ್ದನು.

---

* ಪಶುಪತಿಶಬ್ದಕ್ಕೆ ಅಗ್ನಿ ಎಂದು ಅರ್ಥಮಾಡಿರುವ ವ್ಯಾಖ್ಯಾನಕಾರರು ಈ ವೇದವಾಕ್ಯವನ್ನು ಉದಾಹರಿಸಿದ್ದಾರೆ : 'ಇಮಂ ಪಶುಂ ಪಶುಪತೇ ತೇ ಆದ್ಯ ಬಧ್ನಾಮ್ಯಗ್ನೇ' ( ತೈತ್ತಿರೀಯಸಂಹಿತಾ )

**ಯಾವತ್ಸೀತಾಂ ಹಿ ಪಶ್ಯಾಮಿ ರಾಮಪತ್ನೀಂ ಯಶಸ್ವಿನೀಮ್ ।**
**ತಾವದೇತಾಂ ಪುರೀಂ ಲಙ್ಕಾಂ ವಿಚಿನೋಮಿ ಪುನಃ ಪುನಃ ॥೫೨॥**

"ಯಶೋವತಿಯಾದ, ಶ್ರೀರಾಮನ ಪತ್ನಿಯಾದ ಸೀತಾದೇವಿಯನ್ನು ಕಾಣುವವರೆಗೂ ನಾನು ಈ ಲಂಕೆಯಲ್ಲಿ ಪುನಃ ಪುನಃ ಹುಡುಕುತ್ತಲೇ ಇರುತ್ತೇನೆ.

ಒಂದು ವೇಳೆ ಸಂಪಾತಿಯು ಹೇಳಿದ ಮಾತನ್ನೇ ಪ್ರಮಾಣವನ್ನಾಗಿಟ್ಟು ಕೊಂಡು ಸೀತೆಯು ಲಂಕೆಯಲ್ಲಯೇ ಇರುವಳೆಂದು ಹೇಳಿ ಶ್ರೀರಾಮನನ್ನು ಇಲ್ಲಿಗೆ ಕರೆತಂದರೂ ಪ್ರಯೋಜನವಿಲ್ಲ. ಹಾಗೆ ಬಂದ ಶ್ರೀರಾಮನೂ ಇಲ್ಲಿ ತನ್ನ ಪ್ರಿಯಭಾರ್ಯೆಯನ್ನು ಕಾಣದೇ ಕುಪಿತನಾಗಿ ಎಲ್ಲ ವಾನರರನ್ನೂ ದಹಿಸಿಬಿಡಬಹುದು.

ಆದುದರಿಂದ ನಾನು ಇಲ್ಲಿಯೇ ಜಿತೇಂದ್ರಿಯನಾಗಿ ನಿಯತವಾದ ಆಹಾರವನ್ನು ಭಕ್ಷಿಸುತ್ತಾ ಇದ್ದುಬಿಡುತ್ತೇನೆ. ನನ್ನ ಸಲುವಾಗಿ ನರರೂ-ವಾನರರೂ ವಿನಾಶಹೊಂದದಿರಲಿ.

ಇಲ್ಲಿ ಕಾಣುತ್ತಿರುವ ಅಶೋಕವನವು ಬಹಳ ವಿಸ್ತಾರವಾಗಿರುವಂತೆ ಕಾಣುತ್ತಿದೆ. ಅನೇಕಮಹಾವೃಕ್ಷಗಳಿಂದ ಸಂಪನ್ನವಾಗಿದೆ. ನಾನು ಇದು ವರೆಗೂ ಈ ವನದಲ್ಲಿ ಸೀತೆಯನ್ನು ಹುಡುಕಿಲ್ಲ. ಈಗ ಈ ವನವನ್ನು ಹೊಕ್ಕು ಸೀತೆಯನ್ನು ಇಲ್ಲಿಯೂ ಹುಡುಕುತ್ತೇನೆ.

ರಾಕ್ಷಸರ ಶೋಕವನ್ನು ಹೆಚ್ಚಿಸಲು ಬಂದಿರುವ ನಾನು ವಸುಗಳನ್ನೂ, ರುದ್ರರನ್ನೂ, ಆದಿತ್ಯರನ್ನೂ, ಅಶ್ವಿನೀದೇವತೆಗಳನ್ನೂ, ಮರುತ್ತುಗಳನ್ನೂ ನಮಸ್ಕರಿಸಿ ಸೀತೆಯನ್ನು ಹುಡುಕುವ ಸಲುವಾಗಿ ಈ ಅಶೋಕವನವನ್ನು ಪ್ರವೇಶಿಸುತ್ತೇನೆ. ರಾಕ್ಷಸರೆಲ್ಲರನ್ನೂ ಸಂಹರಿಸಿ–ದೇವತೆಗಳು ತಪಸ್ವಿಗೆ ಸಿದ್ಧಿಯನ್ನು ಅನುಗ್ರಹಿಸುವಂತೆ–ಇಕ್ಷ್ವಾಕುಕುಲನಂದಿನಿಯಾದ ಸೀತಾದೇವಿ ಯನ್ನು ಶ್ರೀರಾಮನಿಗೆ ಒಪ್ಪಿಸುತ್ತೇನೆ."

ಚಿಂತೆಯಿಂದ ವ್ಯಾಕುಲವಾದ ಮನಸ್ಸಿನಿಂದ ಕೂಡಿದ್ದ, ಮಹಾಬಾಹು ವಾದ ವಾಯುಪುತ್ರನು ಮುಹೂರ್ತಕಾಲದವರೆಗೆ ಚಿಂತಿಸುತ್ತಿದ್ದು ಒಂದು

ನಿರ್ಧಾರಕ್ಕೆ ಬಂದವನಂತೆ ಥಟ್ಟನೆ ಎದ್ದುನಿಂತು ದೇವತೆಗಳನ್ನು ಪ್ರಾರ್ಥಿಸಿದನು.

**ನಮೋಽಸ್ತು ರಾಮಾಯ ಸಲಕ್ಷ್ಮಣಾಯ**
**ದೇವ್ಯೈ ಚ ತಸ್ಯೈ ಜನಕಾತ್ಮಜಾಯೈ ।**
**ನಮೋಽಸ್ತು ರುದ್ರೇನ್ದ್ರಯಮಾನಿಲೇಭ್ಯೋ**
**ನಮೋಽಸ್ತು ಚನ್ದ್ರಾರ್ಕಮರುದ್ಗಣೇಭ್ಯಃ ॥೫೯॥**

"ಲಕ್ಷ್ಮಣಸಹಿತನಾದ ಶ್ರೀರಾಮನಿಗೆ ನಮಸ್ಕಾರಮಾಡುತ್ತೇನೆ. ಜನಕನ ಪುತ್ರಿಯಾದ ಸೀತಾದೇವಿಗೂ ನಮಸ್ಕರಿಸುತ್ತೇನೆ. ರುದ್ರನಿಗೂ, ಇಂದ್ರನಿಗೂ, ಯಮನಿಗೂ, ವಾಯುವಿಗೂ ನಮಸ್ಕಾರಮಾಡುತ್ತೇನೆ. ಚಂದ್ರನಿಗೂ, ಸೂರ್ಯನಿಗೂ, ಮರುದ್ಗಣಗಳಿಗೂ ನಮಸ್ಕಾರಮಾಡುತ್ತೇನೆ."

ಹೀಗೆ ಮಾರುತಿಯು ಎಲ್ಲರಿಗೂ ನಮಸ್ಕರಿಸಿ ಒಡೆಯನಾದ ಸುಗ್ರೀವನನ್ನು ಮನಸ್ಸಿನಿಂದಲೇ ನಮಸ್ಕರಿಸಿ ಸುತ್ತಲೂ ನೋಡುತ್ತಾ ಅಶೋಕವನದ ಕಡೆಗೆ ಹೊರಟನು. ಹನುಮಂತನು ಮೊದಲು ಅಶೋಕವನವನ್ನು ಮನಸ್ಸಿನಿಂದಲೇ ಪ್ರವೇಶಿಸಿ ಅಶೋಕವನದಲ್ಲಿಯೇ ಇರುವೆನೆಂಬ ಭಾವನೆಯಿಂದ ಮುಂದೆ ಮಾಡಬೇಕಾದ ಕಾರ್ಯಗಳ ಬಗೆಗೆ ಮತ್ತು ಅಲ್ಲಿರಬಹುದಾದ ವಾತಾವರಣದ ಬಗೆಗೆ ಯೋಚಿಸತೊಡಗಿದನು.

**ಧ್ರುವಂ ತು ರಕ್ಷೋಬಹುಲಾ ಭವಿಷ್ಯತಿ ವನಾಕುಲಾ ।**
**ಅಶೋಕವನಿಕಾಚಿನ್ತ್ಯಾ ಸರ್ವಸಂಸ್ಕಾರಸಂಸ್ಕೃತಾ ॥೬೨॥**

"ಉದ್ಯಾನವನಗಳ ಸಮೂಹಗಳಿಂದ ವ್ಯಾಪ್ತವಾಗಿರುವ, ಪುಣ್ಯತಮವಾದ, ಸಕಲವಿಧವಾದ ಸಂಸ್ಕಾರಗಳಿಂದಲೂ ಸಂಸ್ಕೃತವಾಗಿ ಚೆನ್ನಾಗಿ ಬೆಳೆಸಿರುವ ಗಿಡ-ಮರ-ಬಳ್ಳಿಗಳಿಂದ ತುಂಬಿರುವ ಈ ಅಶೋಕವನದಲ್ಲಿ ಅನೇಕ ರಾಕ್ಷಸರಿದ್ದಾರೆ. ಇದು ನಿಶ್ಚಯ.

ಈ ವನವನ್ನು ರಕ್ಷಿಸಲು ನಿಯೋಜಿತರಾದ ರಾಕ್ಷಸರೆಲ್ಲರೂ ಇಲ್ಲಿರುವ ವೃಕ್ಷಗಳನ್ನು ಬಹಳ ಎಚ್ಚರಿಕೆಯಿಂದ ಸಂರಕ್ಷಿಸುತ್ತಿದ್ದಾರೆ. ಭಗವಂತನಾದ ವಾಯುದೇವನು ಕೂಡ ವೃಕ್ಷಗಳು ಹೆಚ್ಚು ಅಲ್ಲಾಡದ ರೀತಿಯಲ್ಲಿ ಮೆಲ್ಲ-ಮೆಲ್ಲನೆ ಬೀಸುತ್ತಿರುವನು. ಶ್ರೀರಾಮನ ಕಾರ್ಯಸಾಧನೆಗೂ ಮತ್ತು ರಾವಣ

ನಿಗೆ ಕಾಣಿಸಿಕೊಳ್ಳದೇ ಇರುವುದಕ್ಕೂ ನನ್ನ ಶರೀರವನ್ನು ಬಹಳ ಚಿಕ್ಕದಾಗಿ ಮಾಡಿಕೊಂಡಿದ್ದೇನೆ.

**ಸಿದ್ಧಿಂ ಮೇ ಸಂವಿಧಾಸ್ಯನ್ತಿ ದೇವಾಃ ಸರ್ಷಿಗಣಾಸ್ತ್ವಿಹ ॥೬೪॥**

**ಬ್ರಹ್ಮಾ ಸ್ವಯಂಭೂರ್ಭಗವಾನ್ದೇವಾಶ್ಚೈವ ದಿಶನ್ತು ಮೇ ।**
**ಸಿದ್ಧಿಮಗ್ನಿಶ್ಚ ವಾಯುಶ್ಚ ಪುರುಹೂತಶ್ಚ ವಜ್ರಭೃತ್ ॥೬೫॥**

**ವರುಣಃ ಪಾಶಹಸ್ತಶ್ಚ ಸೋಮಾದಿತ್ಯೌ ತಥೈವ ಚ ।**
**ಅಶ್ವಿನೌ ಚ ಮಹಾತ್ಮಾನೌ ಮರುತಃ ಶರ್ವ ಏವ ಚ ॥೬೬॥**

**ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂ ಚೈವ ಯಃ ಪ್ರಭುಃ ।**
**ದಾಸ್ಯನ್ತಿ ಮಮ ಯೇ ಚಾನ್ಯೇ ಹ್ಯದೃಷ್ಟಾಃ ಪಥಿ ಗೋಚರಾಃ ॥**

ಋಷಿಗಳ ಸಮೂಹಗಳಿಂದ ಕೂಡಿರುವ ದೇವತೆಗಳು ನನ್ನ ಕಾರ್ಯವು ಸಿದ್ಧಿಸುವಂತೆ ಅನುಗ್ರಹಿಸಲಿ. ಸ್ವಯಂವ್ಯಕ್ತನಾದ ಬ್ರಹ್ಮನೂ, ದೇವತೆಗಳೂ, ತಪಸ್ವಿಗಳೂ, ವಾಯ್ವಗ್ನಿಗಳೂ, ವಜ್ರಪಾಣಿಯಾದ ಇಂದ್ರನೂ ನನ್ನ ಕಾರ್ಯವು ಸಿದ್ಧಿಸುವಂತೆ ಅನುಗ್ರಹಿಸಲಿ. ಪಾಶಾಯುಧ ವನ್ನು ಹಿಡಿದಿರುವ ವರುಣನೂ, ಸೂರ್ಯ-ಚಂದ್ರರೂ, ಮಹಾತ್ಮರಾದ ಅಶ್ವಿನೀದೇವತೆಗಳೂ, ಮರುತ್ತುಗಳೂ, ಭಗವಂತನಾದ ಶಂಕರನೂ ನನ್ನ ಕಾರ್ಯವು ಸಿದ್ಧಿಸುವಂತೆ ಅನುಗ್ರಹಿಸಲಿ. ಸಕಲಪ್ರಾಣಿಗಳೂ, ಸಕಲಪ್ರಾಣಿ ಗಳಿಗೂ ಪ್ರಭುವಾದ ಮಹಾವಿಷ್ಣುವೂ, ಕಣ್ಣಿಗೆ ಕಾಣಿಸದಿರುವ ಇತರ ದೇವತೆ ಗಳೂ, ನಾನು ಹೋಗುವ ಹಾದಿಯಲ್ಲಿ ಕಣ್ಣಿಗೆ ಕಾಣಿಸುವ ಎಲ್ಲ ಪ್ರಾಣಿಗಳೂ ನನ್ನ ಕಾರ್ಯವು ಸಿದ್ಧಿಸುವಂತೆ ಅನುಗ್ರಹಿಸಲಿ."

ಅನಂತರ ಹನುಮಂತನು ಸೀತಾದೇವಿಯನ್ನು ಮನಸ್ಸಿನಲ್ಲಿಯೇ ಧ್ಯಾನಮಾಡುತ್ತಾ ಅವಳನ್ನು ಯಾವಾಗ ನೋಡುವೆನೋ–ಎಂದು ಹಲುಬ ತೊಡಗಿದನು :

"ಆರ್ಯೆಯಾದ ಸೀತಾದೇವಿಯ ಮುಖಾರವಿಂದವು ಉನ್ನತವಾಗಿ ರುವ ಮೂಗಿನಿಂದ ಕೂಡಿದೆ. ಬಿಳುಪಾದ ಹಲ್ಲುಗಳಿಂದ ಶೋಭಾಯಮಾನ ವಾಗಿದೆ. ಆ ಸುಂದರವಾದ ಮುಖದಲ್ಲಿ ಯಾವ ಕಲೆಗಳೂ ಇಲ್ಲ. ಶುಭ್ರ ವಾದ ಮಂದಹಾಸದಿಂದ ಯುಕ್ತವಾಗಿದೆ. ತಾವರೆಯ ಎಸಳಿಗೆ ಸಮಾನವಾದ

ಕಣ್ಣುಗಳಿಂದ ಕೂಡಿದೆ. ನಕ್ಷತ್ರಗಳ ಅಧಿಪತಿಯಾದ ಚಂದ್ರನ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದೆ. ಅಂತಹ ಸುಂದರವಾದ ಮುಖವನ್ನು ನಾನು ಯಾವಾಗ ನೋಡುವೆನು?

ರಾವಣನು ಕ್ಷುದ್ರನು. ಪಾಪಿಷ್ಠನು. ಕ್ರೂರಕರ್ಮನು. ಭಯಂಕರನು. ಆದರೂ ಅಲಂಕಾರಯುಕ್ತವಾದ ವಿಶ್ವಸನೀಯವಾದ ವೇಷವನ್ನು ಧರಿಸಿರತಕ್ಕವನು. ಆ ದುಷ್ಟನು ಅಬಲೆಯಾದ ಸೀತಾದೇವಿಯನ್ನು ಬಲಾತ್ಕಾರದಿಂದ ಅಪಹರಿಸಿಕೊಂಡು ಬಂದು ತನ್ನ ಅಧೀನದಲ್ಲಿಟ್ಟುಕೊಂಡಿರುವನು. ಅಂತಹವಳು ನನ್ನ ದೃಷ್ಟಿಗೆ ಹೇಗೆ ಗೋಚರಿಸುವಳು? ನನಗೆಲ್ಲಿ ಸಿಕ್ಕುವಳು?"

೧೩ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೧೪ನೆಯ ಸರ್ಗ

## ಹನುಮಂತನು ಅಶೋಕವನವನ್ನು ಪ್ರವೇಶಿಸಿ ಅದರ ಸೊಬಗನ್ನು ನೋಡಿದುದು : ಅಶೋಕವೃಕ್ಷವೊಂದರ ಮೇಲೆ ಕುಳಿತು ಸೀತೆಯಿರುವ ಸ್ಥಳವನ್ನು ಹುಡುಕಿದುದು

**ಸ ಮುಹೂರ್ತಮಿವ ಧ್ಯಾತ್ವಾ ಮನಸಾ ಚಾಧಿಗಮ್ಯ ತಾಮ್ ।**
**ಅವಪ್ಲುತೋ ಮಹಾತೇಜಾಃ ಪ್ರಾಕಾರಂ ತಸ್ಯ ವೇಶ್ಮನಃ ॥೧॥**

ಕಪಿಶ್ರೇಷ್ಠನಾದ ಮಹಾತೇಜಸ್ವಿಯಾದ ಹನುಮಂತನು ಮುಹೂರ್ತ ಕಾಲದವರೆಗೆ ಮುಂದೆ ಮಾಡಬೇಕಾದ ಕಾರ್ಯದ ವಿಷಯವಾಗಿ ಯೋಚಿಸುತ್ತಿದ್ದು, ಮನಸ್ಸಿನಿಂದ ಸೀತಾದೇವಿಯನ್ನು ಸ್ಮರಿಸಿ, ರಾವಣನ ಅರಮನೆಯ ಪ್ರಾಕಾರದಿಂದ ಹಾರಿ ಅಶೋಕವನದ ಪ್ರಾಕಾರವನ್ನು ಸೇರಿದನು.

ಪ್ರಾಕಾರದ ಮೇಲಿದ್ದ ಸಂತುಷ್ಟಸರ್ವಾಂಗನಾಗಿದ್ದ ಹನುಮಂತನು ವಸಂತರ್ತುವಿನ ಪ್ರಾರಂಭದಲ್ಲಿ ಪುಷ್ಪಿತವಾಗಿದ್ದ ಅಗ್ರಭಾಗಗಳುಳ್ಳ ವಿಧ-ವಿಧವಾದ ವೃಕ್ಷಗಳನ್ನು ಆ ಅಶೋಕವನದಲ್ಲಿ ನೋಡಿದನು.

ಆ ವನವು ಮಾವಿನ ತೋಪುಗಳಿಂದ ಸಮಾವೃತವಾಗಿದ್ದಿತು. ನೂರಾರು ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟಿದ್ದ ಅನೇಕ ಮತ್ತೀಮರಗಳೂ, ಭವ್ಯವಾದ ಅಶೋಕವೃಕ್ಷಗಳೂ, ಹೂವುಗಳಿಂದ ಸಮಲಂಕೃತವಾದ ಸಂಪಿಗೆಯ ಮರ

ಗಳೂ, ಚಳ್ಳೀಮರಗಳೂ, ನಾಗಸಂಪಿಗೆ ವೃಕ್ಷಗಳೂ, ಅನೇಕಜಾತಿಯ ಮಾವಿನ ಮರಗಳೂ ಇದ್ದುವು. ಕಪಿಮುಖದಂತೆ ಫಲಗಳಿದ್ದ ವೃಕ್ಷಗಳೂ ಅಲ್ಲಿ ಹೇರಳವಾಗಿದ್ದುವು. ಅವೆಲ್ಲವನ್ನೂ ಹನುಮಂತನು ನೋಡುತ್ತಾ ಹೋದನು.

ಬಿಲ್ಲಿನ ನಾಣಿಂದ ಹೊರಬಂದ ಬಾಣದಂತೆ ಹನುಮಂತನು ವೃಕ್ಷಗಳ ಸಮೂಹದಿಂದ ಕೂಡಿದ್ದ ಆ ಅಶೋಕವನಕ್ಕೆ ಹಾರಿದನು.

ಆ ಅಶೋಕವನವು ಪಕ್ಷಿಗಳಿಂದ ನಿನಾದಿತವಾಗಿದ್ದಿತು. ಚಿನ್ನದ ಮತ್ತು ಬೆಳ್ಳಿಯ ವೃಕ್ಷಗಳಿಂದ ಸರ್ವತ್ರ ವ್ಯಾಪ್ತವಾಗಿದ್ದಿತು. ಪಕ್ಷಿಗಳಿಂದಲೂ ಮೃಗಗಳ ಸಮೂಹಗಳಿಂದಲೂ ಕೂಡಿದ್ದು ವಿಚಿತ್ರವಾಗಿ ಕಾಣುತ್ತಿದ್ದಿತು. ಉದಿಸಿದ ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯಿಂದ ವಿರಾಜಿಸುತ್ತಿದ್ದಿತು. ಬಲಿಷ್ಠನಾದ ಹನುಮಂತನು ಅಂತಹ ವಿಚಿತ್ರವಾದ ಉದ್ಯಾನವನವನ್ನು ನೋಡಿದನು. ಆ ಸಮಯವು ಮಾನವರೆಲ್ಲರೂ ನಕ್ಕುನಲಿಯುವ ವಸಂತ ಕಾಲವಾಗಿದ್ದಿತು. ಆ ವನವು ಫಲ-ಪುಷ್ಪಗಳಿಂದ ಸಮೃದ್ಧವಾದ ನಾನಾವಿಧ ವೃಕ್ಷಗಳಿಂದ ವ್ಯಾಪ್ತವಾಗಿದ್ದಿತು. ಮದಿಸಿದ ದುಂಬಿಗಳೂ ಕೋಗಿಲೆಗಳೂ ಆ ವೃಕ್ಷಗಳನ್ನು ಆಶ್ರಯಿಸಿದ್ದುವು. ಮದಿಸಿದ ನವಿಲುಗಳು ನಿನಾದಮಾಡುತ್ತಿದ್ದುವು. ನಾನಾ ವಿಧವಾದ ಪಕ್ಷಿಗಳ ಸಮೂಹಗಳಿಂದ ವ್ಯಾಪ್ತವಾಗಿದ್ದಿತು. ಮೃಗ-ಪಕ್ಷಿಗಳಿಂದ ಸಮಾಕುಲವಾಗಿದ್ದಿತು. ಅಂತಹ ಸುಂದರವಾದ ಅಶೋಕವನವನ್ನು ಹನುಮಂತನು ನೋಡಿದನು.

ಸುಂದರವಾದ ಕಟಿಪ್ರದೇಶದಿಂದ ಕೂಡಿದ್ದ, ನಿಷ್ಕಳಂಕಳಾದ, ರಾಜಪುತ್ರಿಯಾದ ಸೀತಾದೇವಿಯನ್ನು ಅಶೋಕವನದಲ್ಲಿ ಹುಡುಕುತ್ತಿದ್ದ ಹನುಮಂತನು ಶಬ್ದಮಾಡುತ್ತಾ, ವೃಕ್ಷಗಳ ರೆಂಬೆಗಳನ್ನು ಅಲ್ಲಾಡಿಸುತ್ತಾ ಸುಖವಾಗಿ ವೃಕ್ಷಗಳ ಪೊಟರೆಗಳಲ್ಲಿ ಮತ್ತು ಗೂಡುಗಳಲ್ಲಿ ಮಲಗಿ ನಿದ್ರಿಸುತ್ತಿದ್ದ ಪಕ್ಷಿಗಳನ್ನು ಎಚ್ಚರಗೊಳಿಸಿದನು. ಗಾಬರಿಗೊಂಡು ಮೇಲಕ್ಕೆ ಹಾರುತ್ತಿದ್ದ ಪಕ್ಷಿಗಳ ರೆಕ್ಕೆಗಳ ಬಡಿತದಿಂದಾಗಿ ಪುಷ್ಪಭರಿತವಾಗಿದ್ದ ವೃಕ್ಷಗಳು ನೂರಾರು ಬಣ್ಣಗಳ ಹೂಗಳ ಮಳೆಯನ್ನೇ ಸುರಿಸಿದುವು. ವಾಯುಪುತ್ರನಾದ ಹನುಮಂತನು ಹಾಗೆ ಸುರಿಯುತ್ತಿದ್ದ ಪುಷ್ಪಗಳ ವೃಷ್ಟಿಯಿಂದ ವ್ಯಾಪ್ತನಾಗಿ ಅಶೋಕವನದ ಮಧ್ಯದಲ್ಲಿ ಪುಷ್ಪಮಯವಾದ ಪರ್ವತದಂತೆಯೇ ಪ್ರಕಾಶಿಸು

ತ್ತಿದ್ದನು. ಹನುಮಂತನು ಅಶೋಕವನದ ಎಲ್ಲ ದಿಕ್ಕುಗಳಲ್ಲಿಯೂ ಸೀತೆಯನ್ನು ಹುಡುಕಿಕೊಂಡು ಓಡಾಡುತ್ತಾ ವೃಕ್ಷಗಳ ಸಮೂಹದಲ್ಲಿ ನುಸುಳಿಕೊಂಡು ಹೋಗುತ್ತಿದ್ದನು. ಹಾಗೆ ಓಡಾಡುತ್ತಿದ್ದ ಹನುಮಂತನನ್ನು ನೋಡಿ ಅಶೋಕವನದಲ್ಲಿದ್ದ ಎಲ್ಲ ಪ್ರಾಣಿಗಳೂ ವಸಂತನೇ ಕಪಿಯ ಶರೀರವನ್ನು ಧರಿಸಿ ಬಂದಿರಬಹುದೆಂದು ಭಾವಿಸಿದುವು. ವೃಕ್ಷಗಳಿಂದ ಉದುರಿದ್ದ ನಾನಾವಿಧವಾದ ಪುಷ್ಪಗಳಿಂದ ವ್ಯಾಪ್ತಳಾಗಿದ್ದ ಭೂದೇವಿಯು ಆಭರಣಗಳಿಂದ ಸಮಲಂಕೃತಳಾದ ಹೆಂಗಸಿನಂತೆಯೇ ಕಾಣುತ್ತಿದ್ದಳು.

ವೇಗಶಾಲಿಯಾದ ಹನುಮಂತನು ಅಲ್ಲಿದ್ದ ಪುಷ್ಪವೃಕ್ಷಗಳನ್ನು ಬಿರುಸಾಗಿ ಅಲ್ಲಾಡಿಸುತ್ತಿದ್ದನು. ಒಡನೆಯೇ ಅವು ಹಲವಾರು ಬಣ್ಣಗಳ ಹೂಗಳನ್ನು ಸುರಿಸುತ್ತಿದ್ದುವು. ಹನುಮಂತನು ವೃಕ್ಷಗಳನ್ನು ಅಲ್ಲಾಡಿಸುವಾಗ ಅನೇಕವೃಕ್ಷಗಳ ಎಲೆಗಳೂ ಹೂಗಳೊಡನೆ ಉದುರಿಹೋಗಿದ್ದು ಆ ವೃಕ್ಷಗಳು ಜೂಜಿನಲ್ಲಿ ಪರಾಜಿತರಾಗಿ ವಸ್ತ್ರಾಭರಣಗಳನ್ನು ಕಳೆದುಕೊಂಡ ಜೂಜು ಕೋರರಂತೆಯೇ ಕಾಣುತ್ತಿದ್ದುವು. ವೇಗಶಾಲಿಯಾದ ಹನುಮಂತನಿಂದ ರಭಸದಿಂದ ಅಲ್ಲಾಡಿಸಲ್ಪಡುತ್ತಿದ್ದ ಆ ವೃಕ್ಷಗಳು ಕ್ಷಣಮಾತ್ರದಲ್ಲಿ ಪತ್ರ- ಪುಷ್ಪ-ಫಲಗಳನ್ನು ಕಳೆದುಕೊಂಡುವು. ಕಾಂಡಗಳು ಮಾತ್ರ ಉಳಿದು ಬೋಳುಮರಗಳಾಗಿ ಅವುಗಳಲ್ಲಿದ್ದ ಪಕ್ಷಿಗಳೂ ದಿಕ್ಕಾಪಾಲಾಗಿ ಓಡಿ ಹೋದುವು. ಹನುಮಂತನು ತನ್ನ ಬಾಲದಿಂದಲೂ ಕೈ-ಕಾಲುಗಳಿಂದಲೂ ಅಶೋಕವನದಲ್ಲಿದ್ದ ವೃಕ್ಷಗಳನ್ನು ಒಂದಾದ ಮೇಲೆ ಮತ್ತೊಂದರಂತೆ ಮರ್ದನಮಾಡಿದನು. ಆ ಸಮಯದಲ್ಲಿ ಆ ಅಶೋಕವನವು ರತಿಸಮಯದಲ್ಲಿ ಕೆದರಿದ ತಲೆಗೂದಲುಳ್ಳ, ಅಳಿಸಿಹೋದ ಅಂಗರಾಗವುಳ್ಳ, ಅಧರಪಾನ ಮಾಡಿ ಶುಭ್ರವಾದ ಹಲ್ಲುಗಳಿಂದ ಕೂಡಿರುವ, ದಂತಕ್ಷತ-ನಖಕ್ಷತಗಳಿಂದ ಪೀಡಿತಳಾದ ಅಂಗನೆಯಂತೆಯೇ ಕಾಣುತ್ತಿದ್ದಿತು. ವರ್ಷಾಕಾಲದಲ್ಲಿ ಬಿರುಗಾಳಿಯು ವೇಗವಾಗಿ ಬೀಸುತ್ತಾ ಮೇಘಗಳ ಸಮೂಹಗಳನ್ನೇ ಛಿದ್ರ-ವಿಚ್ಛಿದ್ರಗೊಳಿಸುವಂತೆ–ಕಪೀಶ್ವರನಾದ ಹನುಮಂತನು ಕ್ಷಣಮಾತ್ರದಲ್ಲಿ ಆ ಅಶೋಕವನದಲ್ಲಿದ್ದ ಲತೆಗಳ ಸಮೂಹಗಳನ್ನು ಧ್ವಂಸಮಾಡಿದನು.

ಹನುಮಂತನು ಅಶೋಕವನದಲ್ಲಿ ಸಂಚರಿಸುತ್ತಿದ್ದಾಗ ಮನೋಹರವಾದ, ಮಣಿಮಯವಾದ, ರಜತಮಯವಾದ ಮತ್ತು ಸುವರ್ಣಮಯವಾದ

ಭೂಮಿಗಳನ್ನೂ ನೋಡಿದನು. ಶ್ರೇಷ್ಠವಾದ ಮತ್ತು ಸ್ವಚ್ಛವಾದ ನೀರಿನಿಂದ ಪೂರ್ಣವಾಗಿದ್ದ, ಮಹಾಮೌಲ್ಯದ ಮಣಿಮಯವಾದ ಸೋಪಾನಗಳಿಂದ ಸಂಪನ್ನವಾಗಿದ್ದ, ವಿಧ-ವಿಧವಾದ ಆಕಾರಗಳಲ್ಲಿದ್ದ ಕೊಳಗಳನ್ನು ನೋಡಿದನು. ಹವಳ ಮತ್ತು ಮುತ್ತುಗಳೇ ಅವುಗಳಲ್ಲಿ ಮಳಲುಗಳ ರೂಪದಲ್ಲಿದ್ದುವು. ಒಳಭಾಗದ ಗೋಡೆಗಳು ಸ್ಫಟಿಕಮಯವಾಗಿದ್ದುವು. ತೀರಪ್ರದೇಶಗಳಲ್ಲಿ ಹುಟ್ಟಿಬೆಳೆದಿದ್ದ ಸುವರ್ಣಮಯವಾದ ಮತ್ತು ವಿಚಿತ್ರವಾದ ವೃಕ್ಷಗಳಿಂದ ಅವು ಶೋಭಾಯಮಾನವಾಗಿ ಕಾಣುತ್ತಿದ್ದುವು. ವಿಕಸಿತವಾದ ಕಮಲಗಳಿಂದಲೂ ಕನ್ನೈದಿಲೆಗಳಿಂದಲೂ ಕೂಡಿದ್ದ ಸರೋವರಗಳನ್ನೂ ಹನುಮಂತನು ನೋಡಿದನು. ಆ ಸರೋವರಗಳು ಚಕ್ರವಾಕಪಕ್ಷಿಗಳಿಂದ ಸುಶೋಭಿತವಾಗಿದ್ದುವು. ನೀರುಕೋಳಿಗಳ ಧ್ವನಿಯಿಂದ ನಿನಾದಿತವಾಗಿದ್ದುವು. ಹಂಸ-ಸಾರಸಪಕ್ಷಿಗಳಿಂದ ನಿಬಿಡವಾಗಿದ್ದುವು. ಕೆಲವು ಸರೋವರಗಳು ವಿಶಾಲವಾದ ವೃಕ್ಷಗಳಿಂದ ಸುತ್ತುವರಿಯಲ್ಪಟ್ಟಿದ್ದುವು. ಅಮೃತೋಪಮವಾದ ನೀರಿನಿಂದ ಕೂಡಿದ್ದುವು. ನದಿಗಳು ಹರಿದು ಹೋಗುವಾಗ ಸರೋವರಗಳಿಗೆ ನೀರನ್ನು ತುಂಬುತ್ತಿದ್ದುವು. ಎಲ್ಲವೂ ನೂರಾರು ಲತೆಗಳಿಂದಲೂ ಕಲ್ಪವೃಕ್ಷಗಳ ಪುಷ್ಪಗಳಿಂದಲೂ ಸಮಾವೃತವಾಗಿದ್ದುವು. ಕರವೀರವೃಕ್ಷಗಳನ್ನೊಳಗೊಂಡ ನಾನಾವಿಧವಾದ ಪೊದೆಗಳಿಂದ ಸಮಾವೃತವಾಗಿದ್ದುವು. ಅಂತಹ ಸುಂದರವಾದ ಸರೋವರಗಳನ್ನು ಹನುಮಂತನು ಅಶೋಕವನದಲ್ಲಿ ನೋಡಿದನು.

ಹಾಗೆಯೇ ಮುಂದೆ ಹೋಗುತ್ತಿದ್ದಾಗ ಹನುಮಂತನು ಅಶೋಕವನದಲ್ಲಿ ಪ್ರಪಂಚದಲ್ಲಿಯೇ ಅತ್ಯಂತರಮ್ಯವಾಗಿದ್ದ ಪರ್ವತವನ್ನು ವೀಕ್ಷಿಸಿದನು. ಅದು ಮೇಘಸದೃಶವಾಗಿದ್ದಿತು. ಎತ್ತರವಾದ ಮತ್ತು ವಿಚಿತ್ರವಾದ ಶಿಖರದಿಂದಲೂ ಇತರ ಸಣ್ಣ-ಸಣ್ಣ ಶಿಖರಗಳಿಂದಲೂ ಸುತ್ತುವರಿಯಲ್ಪಟ್ಟಿದ್ದಿತು. ಅಲ್ಲಲ್ಲಿ ಶಿಲಾಮಯವಾದ ಗೃಹಗಳಿದ್ದು ನಾನಾವಿಧವಾದ ವೃಕ್ಷಗಳಿಂದ ನಿಬಿಡವಾಗಿದ್ದಿತು. ಪ್ರಿಯತಮನ ತೊಡೆಯಿಂದ ಮೇಲೆದ್ದು ದೂರಸರಿದು ನಿಲ್ಲುವ ಪ್ರೇಯಸಿಯಂತೆ–ಆ ಪರ್ವತದಿಂದ ಕೆಳಕ್ಕೆ ಧುಮುಕುತ್ತಿದ್ದ ನದಿಯೊಂದನ್ನು ಹನುಮಂತನು ನೋಡಿದನು. ಅಲ್ಲಿದ್ದ ವೃಕ್ಷಗಳ ತುದಿಗಳು ಧುಮುಕುತ್ತಿದ್ದ ನದಿಯ ನೀರಿನಿಂದ ತೋಯ್ದುಹೋಗಿದ್ದುವು. ಪರ್ವತದ ಮೇಲಿಂದ ಹರಿದುಬರುತ್ತಿದ್ದ ನದಿಯ ನೀರು ದಟ್ಟವಾಗಿ ಬೆಳೆದು

ನಿಂತಿದ್ದ ವೃಕ್ಷಗಳಿಂದ ತಡೆಯಲ್ಪಡುತ್ತಿದ್ದಿತು. ಅದನ್ನು ನೋಡಿದರೆ ಕ್ರುದ್ಧಳಾಗಿ ಪ್ರಿಯನನ್ನಗಲಿ ಹೊರಟ ಪ್ರಮದೆಯನ್ನು ಪ್ರಿಯಬಂಧುಗಳೇನಾದರೂ ತಡೆಯುತ್ತಿರುವರೋ ಎಂಬಂತೆ ಕಾಣುತ್ತಿದ್ದಿತು. ದಟ್ಟವಾದ ವೃಕ್ಷಗಳಿಂದ ತಡೆಯಲ್ಪಟ್ಟ ಗಿರಿನದಿಯ ನೀರು ಹಿಂದಕ್ಕೆ ಸರಿದು ನಿಂತಿರುವು ದನ್ನು ನೋಡಿದರೆ–ಪ್ರಸನ್ನಳಾದ ಪ್ರೇಯಸಿಯು ಪುನಃ ಪ್ರಿಯಕರನೊಡನೆ ಸೇರಿಕೊಂಡಳೋ ಎಂಬಂತೆ ಕಾಣುತ್ತಿದ್ದಿತು. ಆ ಪರ್ವತದ ಸಮೀಪ ದಲ್ಲಿಯೇ ನಾನಾವಿಧವಾದ ಪಕ್ಷಿಗಳ ಸಮೂಹಗಳಿಂದ ಸಮಾವೃತವಾಗಿದ್ದ ಸರೋವರಗಳೂ ಇದ್ದುವು.

ಮುಂದೆ ಹೋಗುತ್ತಿದ್ದಾಗ ಹನುಮಂತನು ಅಲ್ಲಿ ಕೆಲವು ಕೃತ್ರಿಮ ಸರೋವರಗಳನ್ನೂ ನೋಡಿದನು. ಅವು ಶೀತಲವಾದ ನೀರಿನಿಂದ ತುಂಬಿ ದ್ದುವು. ಶ್ರೇಷ್ಠವಾದ ರತ್ನಗಳಿಂದ ಕಲ್ಪಿತವಾದ ಸೋಪಾನಗಳಿಂದ ಕೂಡಿ ದ್ದುವು. ಮುತ್ತಿನ ರೂಪವಾದ ಮರಳಿನಿಂದ ಕಂಗೊಳಿಸುತ್ತಿದ್ದುವು. ಅಲ್ಲಿಂದ ಮುಂದೆ ಮಾರುತಿಯು ಉದ್ಯಾನವನಗಳಿಂದ ಸರ್ವತ್ರಶೋಭಾಯಮಾನ ವಾಗಿ ಕಾಣುತ್ತಿದ್ದ, ವಿಚಿತ್ರವಾದ ಕಾಡನ್ನು ನೋಡಿದನು. ಅದು ವಿಧ-ವಿಧ ವಾದ ಮೃಗಗಳ ಸಮೂಹಗಳಿಂದ ಕೂಡಿದ್ದು ವಿಚಿತ್ರವಾಗಿ ಕಾಣುತ್ತಿದ್ದಿತು. ಅಲ್ಲಿ ವಿಶ್ವಕರ್ಮನಿಂದಲೇ ನಿರ್ಮಿಸಲ್ಪಟ್ಟಿದ್ದ ಮಹಾಪ್ರಾಸಾದಗಳಿದ್ದುವು. ಅಲ್ಲಿದ್ದ ಕೆಲವು ವೃಕ್ಷಗಳು ಎಲ್ಲ ಕಾಲಗಳಲ್ಲಿಯೂ ಫಲ-ಪುಷ್ಪಭರಿತ ವಾಗಿರುತ್ತಿದ್ದುವು. ಅವೆಲ್ಲವೂ ಛತ್ರಿಯ ಆಕಾರವನ್ನು ಹೊಂದಿದ್ದು ಬುಡಗಳಲ್ಲಿ ಸುವರ್ಣಮಯವಾದ ಜಗುಲಿಗಳೂ ಸೋಪಾನಗಳೂ ಇದ್ದುವು.

ಅನಂತರ ಹನುಮಂತನು ಸುವರ್ಣಮಯವಾದ ಒಂದು ಶಿಂಶುಪಾ ವೃಕ್ಷವನ್ನು ನೋಡಿದನು. ಅದು ಅಪರಿಮಿತವಾದ ಲತೆಗಳ ಸಮೂಹ ಗಳಿಂದಲೂ ಎಲೆಗಳಿಂದಲೂ ಸಮಾವೃತವಾಗಿದ್ದಿತು. ಅದರ ಸುತ್ತಲೂ ಸುಂದರವಾದ ಜಗುಲಿಗಳಿದ್ದುವು. ಹನುಮಂತನು ಆ ಅಶೋಕವನದಲ್ಲಿ ಸುಂದರವಾಗಿದ್ದ ಇನ್ನೂ ಅನೇಕ ಭೂಪ್ರದೇಶಗಳನ್ನೂ, ಪರ್ವತದ ಝರಿ ಗಳನ್ನೂ, ಅಗ್ನಿಯಂತೆ ಪ್ರಜ್ವಲಿಸುತ್ತಿದ್ದ ಕನಕವೃಕ್ಷಗಳನ್ನೂ ನೋಡಿದನು. ಮೇರುಪರ್ವತದ ಪ್ರಭೆಯಿಂದ ಸೂರ್ಯನು ಬೆಳಗುವಂತೆ–ಆ ಕನಕವೃಕ್ಷಗಳ ಪ್ರಭೆಯಿಂದ ಪ್ರಭಾವಿತನಾದ ಹನುಮಂತನು ತನ್ನನ್ನೂ ಸುವರ್ಣ ಮಯನೆಂದೇ ಭಾವಿಸಿಕೊಂಡನು.

ಸುವರ್ಣಮಯವಾದ ಜಗುಲಿಗಳಿಂದ ಸುತ್ತುವರಿಯಲ್ಪಟ್ಟಿದ್ದು ಸುವರ್ಣಮಯವಾಗಿಯೇ ಇದ್ದ ಶಿಂಶುಪಾವೃಕ್ಷವನ್ನು ನೋಡಿ ಹನುಮಂತನು ಅಚ್ಚರಿಗೊಂಡನು. ಆ ವೃಕ್ಷವು ಪುಷ್ಪಿತವಾದ ಅಗ್ರಭಾಗಗಳಿಂದ ಕೂಡಿ ಸುಂದರವಾಗಿ ಕಾಣುತ್ತಿದ್ದಿತು. ಚಿಗುರೆಲೆಗಳಿಂದಲೂ ಅಂಕುರಗಳಿಂದಲೂ ವ್ಯಾಪ್ತವಾಗಿದ್ದಿತು. ಗಾಳಿಯಿಂದ ಅಲ್ಲಾಡಿಸಲ್ಪಡುತ್ತಿದ್ದ ಕನಕವೃಕ್ಷಗಳ ಸಮೂಹಗಳಿಂದ ಸಮಾವೃತವಾಗಿದ್ದಿತು. ನೂರಾರು ಕಿರುಗಂಟೆಗಳಿಂದ ಶಬ್ದಾಯಮಾನವಾಗಿದ್ದಿತು. ಮಹಾಬಾಹುವಾದ ಹನುಮಂತನು ಎಲೆ ಗಳಿಂದ ಸಮಾವೃತವಾಗಿದ್ದ ಆ ಅಶೋಕವೃಕ್ಷವನ್ನು ಹತ್ತಿ ಕುಳಿತು ಹೀಗೆ ಯೋಚಿಸಿದನು:

**ಇತೋ ದ್ರಕ್ಷ್ಯಾಮಿ ವೈದೇಹೀಂ ರಾಮದರ್ಶನಲಾಲಸಾಮ್ ।**
**ಇತಶ್ಚೇತಶ್ಚ ದುಃಖಾರ್ತಾಂ ಸಂಪತನ್ತೀಂ ಯದೃಚ್ಛಯಾ ॥೪೧॥**

"ಶ್ರೀರಾಮನನ್ನು ನೋಡಲು ತವಕಗೊಂಡಿರುವ, ದುಃಖಪೀಡಿತಳಾದ ವೈದೇಹಿಯು ಸ್ವೇಚ್ಛೆಯಿಂದ ಅಲ್ಲಲ್ಲಿ ಸಂಚರಿಸುತ್ತಾ ಇಲ್ಲಿಗೂ ಬರಬಹುದು. ಆಗ ನಾನು ಅವಳನ್ನು ನೋಡುವೆನು.

ಚಂದನ-ಸಂಪಿಗೆ-ಪಗಡೆ ಇವೇ ಮೊದಲಾದ ವೃಕ್ಷಗಳಿಂದ ವಿಭೂಷಿತ ವಾಗಿರುವ, ದುರಾತ್ಮನಾದ ರಾವಣನ ಈ ಅಶೋಕವನವು ನಿಶ್ಚಯ ವಾಗಿಯೂ ಅತ್ಯಂತರಮ್ಯವಾಗಿದೆ. ಸಾವಿರಾರು ಪಕ್ಷಿಗಳು ಆಶ್ರಯಿಸಿರುವ ಈ ಸರೋವರವೂ ಅತ್ಯಂತರಮಣೀಯವಾಗಿದೆ. ರಾಜಮಹಿಷಿಯಾದ ಸೀತಾದೇವಿಯು ಆ ಅಶೋಕವನದಲ್ಲಿಯೇ ಇದ್ದುದಾದರೆ ರಮ್ಯವಾಗಿರುವ ಈ ಸರೋವರದ ಬಳಿಗೆ ಬಂದೇ ಬರುವಳು. ವನಸಂಚಾರದಲ್ಲಿ ನಿಪುಣೆಯಾದ, ರಾಘವನ ಪ್ರಿಯೆಯಾದ, ಕಡುಚೆಲುವೆಯಾದ ಜಾನಕಿಯು ಇಲ್ಲಿಗೆ ನಿಶ್ಚಯವಾಗಿಯೂ ಬರುವಳೆಂದು ನನ್ನ ಮನಸ್ಸಿಗೆ ಭಾಸ ವಾಗುತ್ತಿದೆ. ಜಿಂಕೆಯ ಮರಿಯ ಕಣ್ಣುಗಳಂತೆ ಕಣ್ಣುಗಳನ್ನು ಹೊಂದಿರುವ, ಈ ಅಶೋಕ ವನದಲ್ಲಿರುವ ಎಲ್ಲ ಭಾಗಗಳನ್ನೂ ಚೆನ್ನಾಗಿ ತಿಳಿದುಕೊಂಡಿರುವ, ಶ್ರೀರಾಮನ ಚಿಂತೆಯಲ್ಲಿಯೇ ಕೃಶಳಾಗಿರುವ ಸೀತೆಯು ಈಗಲೇ ಇಲ್ಲಿಗೆ ಬರುವಳು. ಶ್ರೀರಾಮನ ವಿರಹಶೋಕ ದಿಂದ ಪರಿತಪ್ತಳಾಗಿರುವ, ಅರಣ್ಯವಾಸದಲ್ಲಿಯೇ ಪ್ರೀತಿಯುಳ್ಳ, ವನ

ಚಾರಿಣಿಯಾದ ವಾಮಲೋಚನೆಯು ಈ ರಮ್ಯವಾದ ಸರೋವರದ ಬಳಿಗೆ ನಿತ್ಯವೂ ಬರಬಹುದೆಂದು ನನಗೆ ಭಾಸವಾಗುತ್ತಿದೆ. ಸಾಧ್ವಿಯಾದ ಜನಕ ಪುತ್ರಿಯು ಅರಣ್ಯದಲ್ಲಿರುವ ಮೃಗ-ಪಕ್ಷಿಗಳನ್ನು ಯಾವಾಗಲೂ ನೋಡಿ ಕೊಂಡಿರಬೇಕೆಂಬ ಆಸೆಯುಳ್ಳವಳು. ಈ ಕಾರಣದಿಂದಾದರೂ ಅವಳಿಲ್ಲಿಗೆ ಬಂದೇ ಬರುವಳು. ಸಂಧ್ಯಾಕಾಲಗಳಲ್ಲಿ ಮಾಡಬೇಕಾದ ಕರ್ಮಗಳಲ್ಲಿ ಸೀತಾ ದೇವಿಯು ನಿಯತವಾದ ಮನಸ್ಸುಳ್ಳವಳು. ಯೌವನದ ಮಧ್ಯಕಾಲದಲ್ಲಿರುವ ವರವರ್ಣಿನಿಯಾದ ಜಾನಕಿಯು ಶುಭಕರವಾದ ನೀರಿನಿಂದ ಕೂಡಿರುವ ಈ ಸರೋವರದ ಬಳಿಗೆ ಸಂಧ್ಯಾವಂದನಾರ್ಥವಾಗಿಯಾದರೂ ಬಂದೇ ಬರುವಳು. ಪಾರ್ಥಿವೇಂದ್ರನಾದ ಶ್ರೀರಾಮನಿಗೆ ಆದರಣೀಯ ಪತ್ನಿಯಾದ, ಶುಭಸ್ವರೂಪಳಾದ ಸೀತಾದೇವಿಗೆ ಶುಭಾವಹವಾದ ಈ ಅಶೋಕವನವು ಎಲ್ಲ ಪ್ರಕಾರಗಳಿಂದಲೂ ವಾಸಕ್ಕೆ ಯೋಗ್ಯವಾಗಿದೆ. ತಾರಾಧಿಪನಾದ ಚಂದ್ರನ ಮುಖಕ್ಕೆ ಅನುರೂಪವಾದ ಮುಖದಿಂದ ಕಂಗೊಳಿಸುವ ಸೀತಾದೇವಿಯು ಜೀವಿಸಿರುವುದೇ ಆದರೆ–ಖಂಡಿತವಾಗಿಯೂ ಶೀತಲ ವಾದ ನೀರಿನಿಂದ ಕೂಡಿರುವ ರಮ್ಯವಾದ ಈ ಸರೋವರದ ಬಳಿಗೆ ಬಂದೇ ಬರುವಳು."

ಮಹಾತ್ಮನಾದ ಹನುಮಂತನು ಹೀಗೆ ನಿಶ್ಚಯಿಸಿ ಸುಪುಷ್ಪಿತವಾದ ಮತ್ತು ದಟ್ಟವಾದ ಎಲೆಗಳಿಂದ ಕೂಡಿದ್ದ ಸುವರ್ಣಮಯವಾದ ಶಿಂಶುಪಾ ವೃಕ್ಷದಲ್ಲಿ ಅಡಗಿ ಕುಳಿತು ಮನುಜೇಂದ್ರನ ಪತ್ನಿಯಾದ ಸೀತಾದೇವಿಯನ್ನೇ ಪ್ರತೀಕ್ಷಿಸುತ್ತಾ ಎಲ್ಲ ಕಡೆಗಳಲ್ಲಿಯೂ ನೋಡುತ್ತಿದ್ದನು.

೧೪ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೧೫ನೆಯ ಸರ್ಗ

## ವನಸಿರಿಯನ್ನು ನೋಡುತ್ತಿದ್ದ ಹನುಮಂತನು ಚೈತ್ರಪ್ರಾಸಾದದ ಬಳಿಯಲ್ಲಿ ದಯನೀಯಸ್ಥಿತಿಯಲ್ಲಿದ್ದ ಸೀತಾದೇವಿಯನ್ನು ಕಂಡುದು

**ಸ ವೀಕ್ಷಮಾಣಸ್ತತ್ರಸ್ಥೋ ಮಾರ್ಗಮಾಣಶ್ಚ ಮೈಥಿಲೀಮ್ ।**
**ಅವೇಕ್ಷಮಾಣಶ್ಚ ಮಹೀಂ ಸರ್ವಾಂ ತಾಮನ್ವವೈಕ್ಷತ ॥೧॥**

ಹನುಮಂತನು ಶಿಂಶುಪಾವೃಕ್ಷದ ಮೇಲೆ ಕುಳಿತು ಆ ಅಶೋಕವನದ ಸುತ್ತಲೂ ದೃಷ್ಟಿಯನ್ನು ಹಾಯಿಸುತ್ತಾ ಸೀತೆಯನ್ನು ಹುಡುಕುತ್ತಿದ್ದನು.

ಅವನು ನೋಡುತ್ತಿದ್ದ ಅಶೋಕವನದ ಭೂಭಾಗವು ಕಲ್ಪವೃಕ್ಷದ ಲತೆಗಳಿಂದಲೂ ಮತ್ತು ವೃಕ್ಷಗಳಿಂದಲೂ ಸುಶೋಭಿತವಾಗಿದ್ದಿತು. ದಿವ್ಯಗಂಧದಿಂದಲೂ ಮತ್ತು ದಿವ್ಯರಸದಿಂದಲೂ ಪರಿಪೂರ್ಣವಾಗಿದ್ದಿತು. ಎಲ್ಲ ಕಡೆಗಳಲ್ಲಿಯೂ ಸಮಲಂಕೃತವಾಗಿದ್ದಿತು. ಮೃಗ-ಪಕ್ಷಿಗಳಿಂದ ಸುತ್ತುವರಿಯಲ್ಪಟ್ಟಿದ್ದಿತು. ಸುವರ್ಣಮಯವಾದ ಪ್ರಾಸಾದಗಳಿಂದ ನಿಬಿಡವಾಗಿದ್ದು ಕೋಗಿಲೆಗಳ ಸಮೂಹಗಳಿಂದ ನಿನಾದಿತವಾಗಿದ್ದು ಇಂದ್ರನ ನಂದನವನದಂತೆಯೇ ಶೋಭಿಸುತ್ತಾ ಸುವರ್ಣಮಯವಾದ ಕಮಲ ಮತ್ತು ಕನ್ನೈದಿಲೆಗಳುಳ್ಳ ಕೊಳಗಳಿಂದ ಶೋಭಾಯಮಾನವಾಗಿದ್ದಿತು.

ಅಲ್ಲಿ ಅನೇಕ ನೆಲಮಾಳಿಗೆಗಳಿದ್ದುವು. ಅವು ಆಸನಗಳಿಂದಲೂ ಚಿತ್ರಗಂಬಳಿಗಳಿಂದಲೂ ಸಮಲಂಕೃತವಾಗಿದ್ದುವು. ಹನುಮಂತನ ದೃಷ್ಟಿಪಥದಲ್ಲಿದ್ದ ಅಶೋಕವನದ ಭೂಭಾಗವು ಎಲ್ಲ ಋತುಗಳಲ್ಲಿಯೂ ಹೂ-ಹಣ್ಣುಗಳನ್ನು ನೀಡುವ ಫಲಯುಕ್ತವಾದ ವೃಕ್ಷಗಳಿಂದ ಕೂಡಿದ್ದಿತು. ಪುಷ್ಪಿತವಾದ ಅಶೋಕವೃಕ್ಷಗಳ ಕಾಂತಿಯಿಂದ ಸೂರ್ಯೋದಯದ ಪ್ರಭೆಯನ್ನು ಅನುಕರಿಸುತ್ತಿದ್ದು ದೇದೀಪ್ಯಮಾನವಾಗಿ ಕಾಣುತ್ತಿದ್ದಿತು.

ವೃಕ್ಷಗಳ ಮೇಲೆ ಕುಳಿತಿರುತ್ತಿದ್ದ ನೂರಾರು ಪಕ್ಷಿಗಳ ತಲೆಗಳು ಪುಷ್ಪಗಳಿಂದ ಸಮಲಂಕೃತವಾಗಿದ್ದುವು. ಅವೆಲ್ಲವೂ ಏಕಕಾಲದಲ್ಲಿ ರೆಂಬೆಯೊಂದರ ಮೇಲೆ ಕುಳಿತುಕೊಳ್ಳುತ್ತಿದ್ದುವು. ಅವುಗಳ ಹಾರಾಟದ ಸಮಯದಲ್ಲಿ ರೆಕ್ಕೆಗಳು ತಗುಲಿ ವೃಕ್ಷಗಳ ಎಲೆಗಳು ಕೆಳಗೆ ಬೀಳುತ್ತಿದ್ದದರಿಂದ ಪಕ್ಷಿಗಳೇನಾದರೂ ರೆಂಬೆಗಳನ್ನು ಎಲೆಗಳಿಲ್ಲದಂತೆ ಮಾಡುತ್ತಿವೆಯೋ ಎಂಬಂತೆ ಕಾಣುತ್ತಿದ್ದಿತು. ಅಲ್ಲಿದ್ದ ಅಶೋಕವೃಕ್ಷಗಳು ಆಮೂಲಾಗ್ರವಾಗಿ ಪುಷ್ಪಗಳಿಂದ ತುಂಬಿಹೋಗಿದ್ದುವು. ಅದರಿಂದಾಗಿ ಅವು ನೋಡುವವರ ಶೋಕವನ್ನು ಮರೆಸುತ್ತಿದ್ದುವು. ಅಂತಹ ಹಲವಾರು ಅಶೋಕವೃಕ್ಷಗಳಿಂದ ತುಂಬಿಹೋಗಿದ್ದ ಅಶೋಕವನವನ್ನು ಹನುಮಂತನು ನೋಡಿದನು.

ಆ ಅಶೋಕವನದಲ್ಲಿ ಕುಸುಮಿತವಾದ ಕಣಿಗಿಲೇಗಿಡಗಳೂ ಸುಪುಷ್ಪಿತ

ವಾದ ಮುತ್ತುಗದ ಮರಗಳೂ ಇದ್ದುವು. ಅತಿಯಾದ ಪುಷ್ಪಗಳ ಭಾರದಿಂದ ಆ ವೃಕ್ಷಗಳು ಭೂಮಿಯನ್ನೇ ಸ್ಪರ್ಶಿಸುತ್ತಿವೆಯೋ ಎಂಬಂತೆ ಕಾಣುತ್ತಿದ್ದುವು. ಆ ಪ್ರದೇಶವು ಆ ಎಲ್ಲ ಪುಷ್ಪವೃಕ್ಷಗಳಿಂದಲೂ ಸುತ್ತುವರಿಯಲ್ಪಟ್ಟಿದ್ದು ಅವುಗಳ ಪ್ರಭೆಯಿಂದ ಉದ್ದೀಪ್ತವಾಗಿರುವುದೋ ಎಂಬಂತೆ ಕಾಣುತ್ತಿದ್ದಿತು. ಹನುಮಂತನು ನೋಡುತ್ತಿದ್ದ ಅಶೋಕವನದ ಮತ್ತೊಂದು ಭೂಭಾಗದಲ್ಲಿ ಸುರಹೊನ್ನೆಮರಗಳೂ, ಏಳೆಲೇಬಾಳೆಗಳೂ, ಸಂಪಿಗೇಮರಗಳೂ, ಚಳ್ಳೇಮರಗಳೂ, ಬಹಳ ಆಳದವರೆಗೂ ಬೇರುಬಿಟ್ಟುಕೊಂಡಿದ್ದ ಇನ್ನೂ ಅನೇಕಪುಷ್ಪವೃಕ್ಷಗಳೂ ಸುಗಂಧಯುಕ್ತವಾದ ಪುಷ್ಪಗಳಿಂದ ಕೂಡಿದ್ದು ಕಣ್ಣುಗಳಿಗೆ ಆನಂದವನ್ನುಂಟುಮಾಡುತ್ತಿದ್ದುವು.

ಅಲ್ಲಿದ್ದ ಕೆಲವು ವೃಕ್ಷಗಳು ಸುವರ್ಣಸದೃಶವಾಗಿಯೂ, ಕೆಲವು ಅಗ್ನಿಯ ಜ್ವಾಲೆಯಂತಹ ಪ್ರಭೆಯಿಂದ ಸಂಪನ್ನವಾಗಿಯೂ, ಕೆಲವು ಕಪ್ಪು ಕಾಡಿಗೆಯಂತೆಯೂ ಇದ್ದುವು. ಅಶೋಕವೃಕ್ಷಗಳಂತೂ ಸಾವಿರಾರು ಸಂಖ್ಯೆಯಲ್ಲಿದ್ದುವು. ಅಶೋಕವನದಲ್ಲಿದ್ದ ಆ ಉದ್ಯಾನವನವು ದೇವತೆಗಳ ಉದ್ಯಾನವಾದ ನಂದನವನವನ್ನೂ, ಕುಬೇರನ ಉದ್ಯಾನವಾದ ಚೈತ್ರರಥೋದ್ಯಾನವನ್ನೂ ರಮ್ಯತೆಯಲ್ಲಿ ಅತಿಶಯಿಸಿದ್ದಿತು. ಊಹೆಗೂ ನಿಲುಕದಂತಹ ಸೊಬಗಿನಿಂದ ಕೂಡಿದ್ದಿತು. ದಿವ್ಯವಾದ ಮತ್ತು ರಮ್ಯವಾದ ಕಾಂತಿಯಿಂದ ಕೂಡಿದ್ದಿತು. ಪುಷ್ಪರೂಪವಾದ ತಾರೆಗಳ ಸಮೂಹಗಳಿಂದ ವ್ಯಾಪ್ತವಾಗಿದ್ದು ಎರಡನೆಯ ಆಕಾಶದಂತೆಯೇ ಕಾಣುತ್ತಿದ್ದಿತು. ಪುಷ್ಪರೂಪವಾದ ನೂರಾರು ರತ್ನಗಳಿಂದ ಚಿತ್ರಿತವಾಗಿದ್ದು ಐದನೆಯ ಸಮುದ್ರದಂತೆಯೇ ಕಂಗೊಳಿಸುತ್ತಿದ್ದಿತು. ಎಲ್ಲ ಋತುಗಳಲ್ಲಿಯೂ ಬಿಡುವ ಪುಷ್ಪಗಳಿಂದ ವ್ಯಾಪ್ತವಾಗಿದ್ದಿತು. ಮಧುವಿನ ಗಂಧದಿಂದ ಕೂಡಿರುವ ವೃಕ್ಷಗಳಿಂದ ಸಮಲಂಕೃತವಾಗಿದ್ದಿತು. ನಾನಾಪ್ರಕಾರವಾಗಿ ಧ್ವನಿಮಾಡುತ್ತಿದ್ದ ಮೃಗ-ಪಕ್ಷಿಗಳ ಸಮೂಹಗಳಿಂದ ನಿಬಿಡವಾಗಿ ಅನೇಕವಿಧವಾದ ಗಂಧವನ್ನು ಹೊರಸೂಸುತ್ತಾ ಪುಣ್ಯಗಂಧಯುಕ್ತವಾಗಿದ್ದಿತು. ಹೀಗೆ ಅತ್ಯಂತಮನೋಹರವಾದ ಗಂಧದಿಂದ ಯುಕ್ತವಾಗಿದ್ದ ಆ ಉದ್ಯಾನವನವು ಪರ್ವತಗಳಲ್ಲಿ ಶ್ರೇಷ್ಠವಾದ ಎರಡನೆಯ ಗಂಧಮಾದನಪರ್ವತವೋ ಎಂಬಂತೆ ಭಾಸವಾಗುತ್ತಿದ್ದಿತು.

ಬಳಿಕ ಹನುಮಂತನು ಮತ್ತೊಂದು ಕಡೆಗೆ ದೃಷ್ಟಿಯನ್ನು ಹಾಯಿಸಿ

ಅಲ್ಲಿದ್ದ ಅತ್ಯುನ್ನತವಾದ ಚೈತ್ಯಪ್ರಾಸಾದವನ್ನು ನೋಡಿದನು. ಅಶೋಕ ವನದ ಮಧ್ಯಭಾಗದಲ್ಲಿದ್ದ, ಸಾವಿರ ಕಂಬಗಳಿಂದ ಕೂಡಿದ್ದ ಮತ್ತು ಬಿಳುಪಾಗಿದ್ದ ಆ ಪ್ರಾಸಾದವು ಕೈಲಾಸಪರ್ವತದಂತೆಯೇ ಕಾಣುತ್ತಿದ್ದಿತು. ಅದರ ಸೋಪಾನವು ಹವಳದ ಮಣಿಗಳಿಂದ ನಿರ್ಮಿತವಾಗಿದ್ದಿತು. ಜಗುಲಿಗಳು ಪುಟಕ್ಕೆ ಹಾಕಿದ ಚಿನ್ನದಿಂದ ನಿರ್ಮಿತವಾಗಿದ್ದುವು. ಆ ಚೈತ್ಯ ಪ್ರಾಸಾದವು ತನ್ನ ರಮ್ಯತೆಯಿಂದ ನೋಡುವವರ ಕಣ್ಣುಗಳನ್ನೇ ಅಪಹರಿಸು ವಂತಿದ್ದಿತು. ಕಾಂತಿಯಿಂದ ಪ್ರಜ್ವಲಿಸುತ್ತಿದ್ದಿತು. ಹೆಚ್ಚು ಎತ್ತರವಾಗಿದ್ದು ಆಕಾಶದೊಡನೆ ಘರ್ಷಿಸುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಅಂತಹ ನಿರ್ಮಲವಾದ ವರ್ತುಲಾಕಾರದ ಚೈತ್ಯಪ್ರಾಸಾದವನ್ನು ಹನುಮಂತನು ನೋಡಿದನು. ಅದರ ಬಳಿಯಲ್ಲಿಯೇ ಹನುಮಂತನು ಬಹಳ ಹೊತ್ತಿನಿಂದ ನಿರೀಕ್ಷಿಸುತ್ತಿದ್ದ, ಪಾಡ್ಯಮಿಯ ಚಂದ್ರರೇಖೆಯಂತೆ ಪರಿಶುದ್ಧಳಾಗಿದ್ದ ಸೀತಾದೇವಿಯನ್ನು ನೋಡಿದನು. ಆ ಸಮಯದಲ್ಲವಳು ಮಲಿನವಾದ ವಸ್ತ್ರ ವನ್ನು ಉಟ್ಟಿದ್ದಳು. ಘೋರರೂಪಿಣಿಯರಾದ ರಾಕ್ಷಸಿಯರಿಂದ ಪರಿವೃತ ಳಾಗಿದ್ದಳು. ನಿತ್ಯೋಪವಾಸದಿಂದ ಕೃಶಳಾಗಿದ್ದಳು. ಅತ್ಯಂತದೀನೆಯಾಗಿ ದ್ದಳು. ಬಾರಿ ಬಾರಿಗೂ ನಿಟ್ಟುಸಿರುಬಿಡುತ್ತಿದ್ದಳು. ಸಾವಕಾಶವಾಗಿ ಪ್ರಕಾಶ ಗೊಳ್ಳುವ, ಸೂಕ್ಷ್ಮವಾಗಿ ಗಮನಿಸಿದರೆ ಮಾತ್ರವೇ ಇವಳೇ ಅವಳಿರಬಹು ದೆಂದು ತಿಳಿಯಬಹುದಾಗಿದ್ದ ರೂಪಸಂಪತ್ತಿಯಿಂದ ಕೂಡಿದ್ದಳು. ಧೂಮಜಾಲದಿಂದ ಸಮಾವೃತವಾದ ಯಜ್ಞೇಶ್ವರನ ಜ್ವಾಲೆಯಂತೆ ಕಾಣುತ್ತಿದ್ದಳು. ಜೀರ್ಣವಾಗಿ ಹೋಗಿದ್ದ ಪೀತಾಂಬರವನ್ನುಟ್ಟಿದ್ದಳು. ಯಾವ ವಿಧವಾದ ಅಲಂಕಾರವನ್ನೂ ಮಾಡಿಕೊಳ್ಳದೇ ಇದ್ದುದರಿಂದ ಕಮಲಪುಷ್ಪಗಳಿಂದ ರಹಿತವಾದ ಮತ್ತು ಕೆಸರಿನಿಂದ ಯುಕ್ತವಾದ ಸರೋವರದಂತೆ ಕಾಣುತ್ತಿದ್ದಳು. ಲಜ್ಜಾಯುಕ್ತಳಾಗಿಯೂ, ದುಃಖದಿಂದ ಪರಿತಪಿಸುತ್ತಲೂ, ಅತ್ಯಂತಕೃಶಳಾಗಿಯೂ, ತಪಸ್ವಿನಿಯಂತೆಯೂ ಇದ್ದಳು. ಅಂಗಾರಕಗ್ರಹದಿಂದ ಪೀಡಿತವಾದ ರೋಹಿಣಿಯಂತೆ ಪೀಡಿತಳಾಗಿ ದ್ದಳು. ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದಳು. ಸರಿಯಾಗಿ ಆಹಾರ ವನ್ನು ಸೇವಿಸದೇ ಇದ್ದುದರಿಂದ ಅತ್ಯಂತಕೃಶಳಾಗಿದ್ದಳು. ಶೋಕ-ಚಿಂತೆಗಳಲ್ಲಿ ಮಗ್ನಳಾಗಿದ್ದಳು. ದುಃಖವೆಂಬ ಸಾಗರದಲ್ಲಿ ಮುಳುಗಿಹೋಗಿ ದ್ದಳು. ಪ್ರಿಯಜನರನ್ನು ಕಾಣದೇ ಘೋರರೂಪಿಣಿಯರಾದ ರಾಕ್ಷಸಿಯ

ರನ್ನೇ ಅನವರತವಾಗಿ ನೋಡುತ್ತಿದ್ದ ಅವಳು–ಜಿಂಕೆಗಳ ಸಮೂಹದಿಂದ ತಪ್ಪಿಸಿಕೊಂಡು ನಾಯಿಗಳ ಮಧ್ಯದಲ್ಲಿರುವ ಹೆಣ್ಣುಜಿಂಕೆಯಂತೆಯೇ ಕಾಣು ತ್ತಿದ್ದಳು. ಕೃಷ್ಣಸರ್ಪಸದೃಶವಾದ ಅವಳ ನೀಳ್ಗೂದಲುಗಳು ಅವಳ ಕಟಿಯ ಪ್ರದೇಶದವರೆಗೂ ಪ್ರಸರಿಸಿದ್ದುವು. ಅಂತಹ ಕಪ್ಪಾದ ಮತ್ತು ನೀಳವಾದ ತಲೆಗೂದಲಿನಿಂದ ಸಮಲಂಕೃತಳಾಗಿದ್ದ ಸೀತಾದೇವಿಯು ಶರತ್ಕಾಲದಲ್ಲಿ ವನರಾಜಿಯಿಂದ ಕೂಡಿರುವ ಭೂಮಿಯಂತೆಯೇ ಕಂಗೊಳಿಸುತ್ತಿದ್ದಳು.

ರಾಜಕುಮಾರಿಯಾದ ಅವಳು ಸುಖವಾಗಿರಲು ಅರ್ಹಳಾಗಿದ್ದರೂ ದುಃಖದಿಂದ ಪರಿತಪಿಸುತ್ತಿದ್ದಳು. ಆ ಮೊದಲು ಅವಳು ವ್ಯಸನವೆಂದರೇ ನೆಂಬುದನ್ನೇ ತಿಳಿದವಳಾಗಿರಲಿಲ್ಲ. ಈಗಂತೂ ಅವಳು ಅಪಾರವಾದ ದುಃಖ ದಿಂದ ಮಲಿನಳೂ ಕೃಶಳೂ ಆಗಿದ್ದಳು. ವಿಶಾಲಾಕ್ಷಿಯಾದ ಅವಳನ್ನು ನೋಡಿ ಅವಳೇ ಸೀತೆಯೆಂಬುದನ್ನು ನಿಶ್ಚಯಿಸಲು ಯೋಗ್ಯವಾದ ಕಾರಣಗಳಿದ್ದುದರಿಂದ ಹನುಮಂತನು ತನ್ನ ದೃಷ್ಟಿಪಥಕ್ಕೆ ಬಿದ್ದ ಅವಳೇ ಸೀತೆಯೆಂದು ನಿಶ್ಚಯಿಸಿದನು.

**ಹ್ರಿಯಮಾಣಾ ತದಾ ತೇನ ರಕ್ಷಸಾ ಕಾಮರೂಪಿಣಾ ।**
**ಯಥಾರೂಪಾ ಹಿ ದೃಷ್ಟಾ ವೈ ತಥಾರೂಪೇಯಮಙ್ಗನಾ ॥೨೬॥**

"ಹಿಂದೆ ಕಾಮರೂಪಿಯಾದ ರಾಕ್ಷಸನಿಂದ ಅಪಹರಿಸಲ್ಪಡುತ್ತಿದ್ದ ಸ್ತ್ರೀಯು ಯಾವ ರೂಪ-ಲಾವಣ್ಯಗಳಿಂದ ಕಂಗೊಳಿಸುತ್ತಿದ್ದಳೋ ಈಕೆಯೂ ಹಾಗೆಯೇ ಕಂಗೊಳಿಸುತ್ತಿದ್ದಾಳೆ.

ಹುಣ್ಣಿಮೆಯ ಪೂರ್ಣಚಂದ್ರನಂತೆ ಅವಳ ಮುಖವಿದ್ದು ಅವಳಿಗೆ ಸುಂದರವಾದ ಮತ್ತು ಡೊಂಕಾದ ಹುಬ್ಬುಗಳೂ ಸುಂದರವಾಗಿಯೂ ಮತ್ತು ದುಂಡಾಗಿಯೂ ಇರುವ ಸ್ತನಗಳೂ ಇದ್ದುವು. ತನ್ನ ಪ್ರಭೆಯಿಂದಲೇ ಅವಳು ಎಲ್ಲ ದಿಕ್ಕುಗಳನ್ನೂ ಕತ್ತಲೆಯಿಲ್ಲದಂತೆ ಮಾಡುತ್ತಿದ್ದಳು. ನೀಳವಾದ ಮತ್ತು ಕಪ್ಪಾದ ಕೇಶರಾಶಿಯಿಂದಲೂ, ತೊಂಡೆಯ ಹಣ್ಣಿನಂತೆ ಕೆಂಪಾದ ತುಟಿ ಗಳಿಂದಲೂ ಕಂಗೊಳಿಸುತ್ತಿದ್ದಳು. ಸುಂದರವಾದ ನಡುವಿನಿಂದ ಕೂಡಿದ್ದಳು. ಅವಳ ಎಲ್ಲ ಅವಯವಗಳೂ ಸುಪ್ರತಿಷ್ಠಿತವಾಗಿದ್ದು ಕಣ್ಣುಗಳು ಪದ್ಮಪತ್ರದಂತೆ ವಿಶಾಲವಾಗಿದ್ದುವು. ಈ ಎಲ್ಲ ಸೌಂದರ್ಯಗಳಿಂದಲೂ ಸೀತಾದೇವಿಯು

ಮನ್ಮಥನ ಪತ್ನಿಯಾದ ರತೀದೇವಿಯಂತೆಯೇ ಕಾಣುತ್ತಿದ್ದಳು. ಹುಣ್ಣಿಮೆಯ ಬೆಳದಿಂಗಳಿನಂತೆ ಸಕಲಜಗತ್ತಿಗೂ ಇಷ್ಟಳಾಗಿದ್ದಳು. ಸುಂದರವಾದ ಶರೀರ ದಿಂದ ಕಂಗೊಳಿಸುತ್ತಾ ನಿಯಮನಿಷ್ಠಳಾದ ತಾಪಸಿಯಂತೆ ನೆಲದ ಮೇಲೆ ಕುಳಿತಿದ್ದಳು. ಭಯಗ್ರಸ್ತಳಾಗಿ ಸರ್ಪರಾಜನ ವಧುವಿನಂತೆ ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದಳು. ಬಹಳ ಕಾಲದ ಶೋಕಗಳ ಪರಂಪರೆಯಿಂದ ಕಾಂತಿಶೂನ್ಯಳಾಗಿದ್ದ ಸೀತಾದೇವಿಯು ದಟ್ಟವಾದ ಹೊಗೆಯಿಂದ ಮುಚ್ಚಲ್ಪಟ್ಟ ಯಜ್ಞೇಶ್ವರನ ಜ್ವಾಲೆಯಂತೆಯೇ ಕಾಣುತ್ತಿದ್ದಳು.



ಸಂದಿಗ್ಧವಾದ ಅರ್ಥವುಳ್ಳ ಸ್ಮೃತಿವಚನದಂತೆಯೂ, ನಾಶಹೊಂದು ತ್ತಿರುವ ಐಶ್ವರ್ಯದಂತೆಯೂ, ಅನಾದೃತವಾದ ಶ್ರದ್ಧೆಯಂತೆಯೂ, ಭಗ್ನ ಗೊಂಡ ಆಶೆಯಂತೆಯೂ, ವಿಘ್ನದಿಂದ ಕೂಡಿದ ಸಿದ್ಧಿಯಂತೆಯೂ, ಕಲುಷಿತ

ವಾದ ಬುದ್ಧಿಯಂತೆಯೂ, ಸುಳ್ಳು-ಸುಳ್ಳಾಗಿ ಆಪಾದಿಸಲ್ಪಟ್ಟ ಕಳಂಕದಿಂದ ಭ್ರಷ್ಟವಾಗಿ ಹೋದ ಕೀರ್ತಿಯಂತೆಯೂ–ಸೀತಾದೇವಿಯು ಆ ಸಮಯದಲ್ಲಿ ಕಾಣುತ್ತಿದ್ದಳು.

ಶ್ರೀರಾಮನ ಸೇವೆಗೆ ತಡೆಯುಂಟಾದುದರಿಂದ ಆಕೆಯು ಅತ್ಯಂತ ದುಃಖಿತೆಯಾಗಿ ರಾಕ್ಷಸಿಯರಿಂದ ಪೀಡಿಸಲ್ಪಡುತ್ತಿದ್ದಳು. ಅವಳಿಗೆ ಜಿಂಕೆ ಮರಿಯ ಕಣ್ಣುಗಳಂತೆ ಚಂಚಲವಾದ ಕಣ್ಣುಗಳಿದ್ದುವು. ಆ ಅಬಲೆಯು ಅಸಹಾಯಕಿಯಂತೆ ಅತ್ತಲಿತ್ತ ನೋಡುತ್ತಿದ್ದಳು. ಅವಳ ಕಣ್ಣುಗಳು ಕಂಬನಿ ಯಿಂದ ತುಂಬಿಹೋಗಿದ್ದು ಕಣ್ಣಿನ ರೆಪ್ಪೆಗಳು ಡೊಂಕಾಗಿಯೂ ಕಪ್ಪಾಗಿಯೂ ಇದ್ದುವು. ಅವಳ ಮುಖದಲ್ಲಿ ಪ್ರಸನ್ನತೆಯಿರಲಿಲ್ಲ. ಆಕೆಯು ಬಾರಿ-ಬಾರಿಗೂ ನಿಟ್ಟುಸಿರುಬಿಡುತ್ತಿದ್ದಳು. ಅವಳ ಶರೀರವು ಧೂಳಿನಿಂದಲೂ ಬೆವರಿನಿಂದ ಉಂಟಾದ ಕೆಸರಿನಿಂದಲೂ ತುಂಬಿಹೋಗಿದ್ದಿತು. ಅಲಂಕರಿಸಿಕೊಳ್ಳಲು ಯೋಗ್ಯಳಾಗಿದ್ದರೂ ಅಲಂಕಾರಾದಿಗಳಿಂದ ವಿಮುಖಳಾಗಿದ್ದಳು. ದೀನೆಯಾ ಗಿದ್ದಳು. ಈ ಕಾರಣಗಳಿಂದಲೇ ಅವಳು ಕಾಲಮೇಘಗಳಿಂದ ಸಮಾವೃತ ನಾದ ನಕ್ಷತ್ರರಾಜನಾದ ಚಂದ್ರನ ಕುಂದಿದ ಕಾಂತಿಯಂತೆ ಕಾಣುತ್ತಿದ್ದಳು.

ಸತತವಾದ ಅಭ್ಯಾಸವಿಲ್ಲದ ಕಾರಣ ಮರೆತು ಹೋದ ವಿದ್ಯೆ ಯಂತೆಯೂ–ಸಂಸ್ಕಾರವಿಲ್ಲದೇ ಅರ್ಥಾಂತರವನ್ನು ಹೊಂದಿದ ಮಾತಿ ನಂತೆಯೂ ಇದ್ದ, ಅಲಂಕಾರದಿಂದ ರಹಿತಳಾಗಿದ್ದ ಅವಳನ್ನು ಬಹಳ ಕಷ್ಟ ದಿಂದ ಹನುಮಂತನು ಸೀತೆಯೆಂದು ಗುರುತಿಸಿದನು. ವಿಶಾಲಾಕ್ಷಿಯಾದ, ಅನಿಂದ್ಯಳಾದ ರಾಜಪುತ್ರಿಯನ್ನು ನೋಡಿದ ಹನುಮಂತನು ಹಲವು ಬಗೆಯ ಕಾರಣಗಳಿಂದ ಸಮರ್ಥಿಸುತ್ತಾ ಅವಳು ಸೀತೆಯೇ ಇರಬಹುದೆಂದು ಊಹಿಸಿದನು.

ಶ್ರೀರಾಮನು ವೈದೇಹಿಯ ಯಾವ ಯಾವ ಅವಯವಗಳಲ್ಲಿ ಯಾವ ಯಾವ ಆಭರಣಗಳು ಇತ್ತೆಂದು ಹೇಳಿದ್ದನೋ–ಆ ಆಭರಣಗಳೆಲ್ಲವೂ ಆಕೆಯ ಅವಯವಗಳಿಗೆ ಶೋಭೆಯನ್ನುಂಟುಮಾಡುತ್ತಿರುವುದನ್ನು ಗಮನಿಸಿ ಹನುಮಂತನು ಮನಸ್ಸಿನಲ್ಲಿಯೇ ಹೇಳಿಕೊಂಡನು :

**ಸುಕೃತೌ ಕರ್ಣವೇಷ್ಟೌ ಚ ಶ್ವದಂಷ್ಟ್ರೌ ಚ ಸುಸಂಸ್ಥಿತೌ ।**
**ಮಣಿವಿದ್ರುಮಚಿತ್ರಾಣಿ ಹಸ್ತೇಷ್ವಾಭರಣಾನಿ ಚ ॥೩೯॥**

**ಶ್ಯಾಮಾನಿ ಚಿರಯುಕ್ತತ್ವಾತ್ತಥಾ ಸಂಸ್ಥಾನವನ್ತಿ ಚ ।**
**ತಾನ್ಯೇವೈತಾನಿ ಮನ್ಯೇಽಹಂ ಯಾನಿ ರಾಮೋಽನ್ವಕೀರ್ತಯತ್ ॥**

ಸುಂದರವಾಗಿ ನಿರ್ಮಿತವಾದ ಕರ್ಣಾಭರಣಗಳೂ, ನಾಯಿಗಳ ಹಲ್ಲುಗಳಂತೆ ಆಕೃತಿಯಿರುವ ತ್ರಿಕರ್ಣ ಎಂಬ ಹೆಸರಿನ ಕರ್ಣಪುಷ್ಪಗಳೂ ಎರಡು ಕಿವಿಗಳಲ್ಲಿಯೂ ಸುಪ್ರತಿಷ್ಠಿತವಾಗಿ ಶೋಭಿಸುತ್ತಿವೆ. ಬಹಳ ಕಾಲದಿಂದಲೂ ತೊಟ್ಟುಕೊಂಡಿರುವ ಕಾರಣ ಕಪ್ಪಾಗಿ ಕಾಣುತ್ತಿರುವ ಮಣಿ-ಹವಳಗಳಿಂದ ನಿರ್ಮಿಸಲ್ಪಟ್ಟಿರುವ ಹಸ್ತಾಭರಣಗಳೂ ಶ್ರೀರಾಮನು ವರ್ಣಿಸಿದ ಒಡವೆಗಳೆಂದೇ ನಾನು ಭಾವಿಸುತ್ತೇನೆ.

**ತತ್ರ ಯಾನ್ಯವಹೀನಾನಿ ತಾನ್ಯಹಂ ನೋಪಲಕ್ಷಯೇ ।**
**ಯಾನ್ಯಸ್ಯಾ ನಾವಹೀನಾನಿ ತಾನೀಮಾನಿ ನ ಸಂಶಯಃ ॥೪೧॥**

ಋಷ್ಯಮೂಕಪರ್ವತದಲ್ಲಿ ಸೀತಾದೇವಿಯು ಯಾವ-ಯಾವ ಆಭರಣಗಳನ್ನು ಕೆಳಕ್ಕೆ ಹಾಕಿದಳೋ–ಆ ಯಾವ ಆಭರಣಗಳನ್ನೂ ನಾನಿವಳ ಅವಯವಗಳಲ್ಲಿ ಕಾಣುತ್ತಿಲ್ಲ. ಉಳಿದಿರುವ ಮತ್ತು ಈಗ ತೊಟ್ಟುಕೊಂಡಿರುವ ಈ ಆಭರಣಗಳು ಶ್ರೀರಾಮನು ವರ್ಣಿಸಿದ ಆಭರಣಗಳೇ ಆಗಿವೆ. ಇದರಲ್ಲಿ ಸಂಶಯವೇ ಇಲ್ಲ.

ಸುವರ್ಣಮಯವಾದ ಪೀತಾಂಬರದಂತೆ ಹೊಂಬಣ್ಣದ ಕಾಂತಿಯಿಂದ ಕೂಡಿದ್ದ, ಶರೀರದಿಂದ ಜಾರಿಬಿದ್ದಿದ್ದ, ಹೊಂಬಣ್ಣದ ಉತ್ತರೀಯವು (ಮೇಲುವಸ್ತ್ರವು) ವೃಕ್ಷವೊಂದರಲ್ಲಿ ಸಿಕ್ಕಿಹಾಕಿಕೊಂಡಿದ್ದುದನ್ನು ಹಿಂದೆ ಸುಗ್ರೀವನೇ ಮೊದಲಾದ ಕಪಿಶ್ರೇಷ್ಠರು ನೋಡಿದ್ದರು.

ಸೀತೆಯೇ ಹಾಕಿದ, ಝುಣ-ಝುಣ ಎಂಬ ಶಬ್ದದಿಂದ ಕೂಡಿದ್ದ, ಮುಖ್ಯವಾದ ಮತ್ತು ಮಹತ್ತರವಾದ ಆಭರಣಗಳನ್ನು ಕಪಿಮುಖ್ಯರು ನೆಲದ ಮೇಲೆ ಬಿದ್ದುದನ್ನು ನೋಡಿದ್ದರು. ಅಂತಹ ಯಾವ ಆಭರಣಗಳೂ ಈಗ ಇವಳ ಶರೀರದಲ್ಲಿ ಕಾಣುತ್ತಿಲ್ಲ.

ಈಗ ಇವಳುಟ್ಟಿರುವ ವಸ್ತ್ರವು ಬಹಳ ಕಾಲದಿಂದ ಧರಿಸಿರುವುದರಿಂದ

ಪರಿಣಾಮವಾಗಿ ಮಲಿನವಾಗಿದೆ. ಆದರೂ ಬಣ್ಣವು ಸ್ವಲ್ಪವಾದರೂ ಮಾಸಿರುವುದಿಲ್ಲ. ಋಷ್ಯಮೂಕಪರ್ವತದಲ್ಲಿ ಬಿದ್ದಿದ್ದ ಇನ್ನೊಂದು ಮೇಲು ವಸ್ತ್ರದಂತೆಯೇ ಇವಳು ಈಗ ಉಟ್ಟಿರುವ ವಸ್ತ್ರವೂ ಕಾಂತಿಯುಕ್ತವಾಗಿದೆ.

ಚಿನ್ನದಂತೆ ಮೈಬಣ್ಣವಿರುವ, ರಾಮನ ಪಟ್ಟಮಹಿಷಿಯಾದ, ಪತಿವ್ರತೆ ಯಾದ, ಅಗಲಿದ್ದರೂ ಶ್ರೀರಾಮನ ಮನಸ್ಸಿನಿಂದ ಎಂದಿಗೂ ಅಳಿದುಹೋಗ ದಿರುವ ಸೀತಾದೇವಿಯೇ ಇವಳಾಗಿದ್ದಾಳೆ. ಶ್ರೀರಾಮನು ಯಾವಳ ಸಲು ವಾಗಿ ಕಾರುಣ್ಯ-ಆನೃಶಂಸ್ಯ-ಶೋಕ-ಮದ ಎಂಬ ನಾಲ್ಕರಿಂದಲೂ ಪರಿತಪಿಸುತ್ತಿರುವನೋ ಅಂತಹ ಸೀತಾದೇವಿಯು ಇವಳೇ ಆಗಿದ್ದಾಳೆ.

**ಸ್ತ್ರೀ ಪ್ರಣಷ್ಟೇತಿ ಕಾರುಣ್ಯಾದಾಶ್ರಿತೇತ್ಯಾನೃಶಂಸ್ಯತಃ ।**
**ಪತ್ನೀ ನಷ್ಟೇತಿ ಶೋಕೇನ ಪ್ರಿಯೇತಿ ಮದನೇನ ಚ ॥೪೭॥**

ಸ್ತ್ರೀಯೊಬ್ಬಳು ಅಪಹೃತಳಾದಳೆಂಬುದು ಕರುಣಾಮಯವಾದ ತಾಪಕ್ಕೆ ಕಾರಣ. ತನಗೆ ಆಶ್ರಿತಳಾಗಿದ್ದ ಸ್ತ್ರೀಯೊಬ್ಬಳು ಅಪಹೃತಳಾದಳೆಂಬುದು ಅಕ್ರೂರತೆಯ ಪರಿಣಾಮವಾಗಿ ಉಂಟಾದ ತಾಪಕ್ಕೆ ಕಾರಣ. ಸ್ತ್ರೀಯೂ ಆಶ್ರಿತಳೂ ಮತ್ತು ಪತ್ನಿಯೂ ಆದವಳು ನಷ್ಟವಾಗಿ ಹೋದಳೆಂಬುದು ಶೋಕರೂಪವಾದ ತಾಪಕ್ಕೆ ಕಾರಣ. ಸ್ತ್ರೀಯೂ, ಆಶ್ರಿತಳೂ, ಪತ್ನಿಯೂ ಮತ್ತು ಅತಿಪ್ರಿಯಳೂ ಆಗಿದ್ದವಳು ನಷ್ಟಳಾದಳೆಂಬುದು ಮದನನಿಂದ ಉಂಟಾದ ವೇದನೆಗೆ ಕಾರಣ. ಹೀಗೆ ನಾಲ್ಕು ವಿಧವಾದ ಕಾರಣಗಳಿಂದ ಶ್ರೀರಾಮನು ಪರಿತಪಿಸುತ್ತಿದ್ದಾನೆ.

ಸೀತಾದೇವಿಯ ರೂಪ ಮತ್ತು ಅಂಗೋಪಾಂಗಗಳ ಸೌಷ್ಠವಗಳು ಹೇಗಿವೆಯೋ ಹಾಗೆಯೇ ಶ್ರೀರಾಮನ ರೂಪ ಮತ್ತು ಅಂಗೋಪಾಂಗಗಳ ಸೌಷ್ಠವಗಳೂ ಇವೆ. ಶ್ರೀರಾಮನ ರೂಪ ಮತ್ತು ಅಂಗೋಪಾಂಗಗಳ ಸೌಷ್ಠವವಿರುವಂತೆ ಸೀತಾದೇವಿಯ ರೂಪ ಮತ್ತು ಅಂಗೋಪಾಂಗಗಳ ವಿನ್ಯಾಸಗಳೂ ಇವೆ. ಆದುದರಿಂದ ಅಸಿತಾಪಾಂಗಿಯಾದ ಸೀತೆಯು ಶ್ರೀರಾಮನಿಗೆ ಅನುರೂಪಳಾದ ಪತ್ನಿಯೇ ಆಗಿರುವಳು.

**ಅಸ್ಯಾ ದೇವ್ಯಾ ಮನಸ್ತಸ್ಮಿಂಸ್ತಸ್ಯ ಚಾಸ್ಯಾಂ ಪ್ರತಿಷ್ಠಿತಮ್ ।**
**ತೇನೇಯಂ ಸ ಚ ಧರ್ಮಾತ್ಮಾ ಮುಹೂರ್ತಮಪಿ ಜೀವತಿ ॥೪೯॥**

ಸೀತಾದೇವಿಯ ಮನಸ್ಸು ಶ್ರೀರಾಮನಲ್ಲಿಯೇ ಲೀನವಾಗಿಬಿಟ್ಟಿದೆ. ಶ್ರೀರಾಮನ ಮನಸ್ಸು ಸೀತೆಯಲ್ಲಿ ಲೀನವಾಗಿಬಿಟ್ಟಿದೆ. ಶರೀರಗಳ ದೃಷ್ಟಿಯಿಂದ ಪರಸ್ಪರವಾಗಿ ಬಹಳ ದೂರವಿದ್ದರೂ ಅಂತರಂಗದಲ್ಲಿ ಪರಸ್ಪರವಾಗಿ ಒಬ್ಬರು ಮತ್ತೊಬ್ಬರನ್ನು ಯಾವಾಗಲೂ ನೋಡುತ್ತಲೇ ಇರುತ್ತಾರೆ. ಈ ಕಾರಣದಿಂದಲೇ ಸೀತಾದೇವಿಯೂ ಮತ್ತು ಧರ್ಮಾತ್ಮನಾದ ಶ್ರೀರಾಮನೂ ಇಲ್ಲಿಯವರೆಗೂ ಬದುಕಿದ್ದಾರೆ.

**ದುಷ್ಕರಂ ಕೃತವಾನ್ರಾಮೋ ಹೀನೋ ಯದನಯಾ ಪ್ರಭುಃ ।**
**ಧಾರಯತ್ಯಾತ್ಮನೋ ದೇಹಂ ನ ಶೋಕೇನಾವಸೀದತಿ ॥೫೦॥**

ಸಾಧ್ವಿಯಾದ ಮತ್ತು ಸರ್ವಾಂಗಸುಂದರಿಯಾದ ಇವಳಿಂದ ಅಗಲಿದ್ದರೂ ಶ್ರೀರಾಮನು ತನ್ನ ದೇಹವನ್ನು ಧರಿಸಿಕೊಂಡಿದ್ದಾನೆ. ವಿರಹಶೋಕದಿಂದ ನಾಶಹೊಂದಿಲ್ಲ. ಪ್ರಾಣಗಳನ್ನು ಧರಿಸಿಕೊಂಡಿರುವ ಇದು ಅತ್ಯಂತ ದುಷ್ಕರವಾದ ಸಾಹಸಕಾರ್ಯವೇ ಸರಿ."

ಹೀಗೆ ಸೀತೆಯನ್ನು ಕಂಡ ಹನುಮಂತನು ಅನೇಕಕಾರಣಗಳಿಂದ ಇವಳೇ ಸೀತೆಯೆಂಬುದನ್ನು ನಿಶ್ಚಯಿಸಿದನು. ಅದರಿಂದ ಆಂಜನೇಯನಿಗೆ ಮಹಾನಂದವಾಯಿತು. ಅವನು ಶ್ರೀರಾಮನನ್ನು ಮನಸ್ಸಿನಿಂದಲೇ ಧ್ಯಾನಿಸುತ್ತಾ ಶ್ರೀರಾಮನ ಸ್ಥೈರ್ಯವನ್ನು ಪ್ರಶಂಸೆಮಾಡಿದನು.

ಹದಿನೈದನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೧೬ನೆಯ ಸರ್ಗ

## ಹನುಮಂತನು ಸೀತಾದೇವಿಯ ಶೀಲ-ಸೌಂದರ್ಯಗಳನ್ನು ಮನಸ್ಸಿನಲ್ಲಿಯೇ ಶ್ಲಾಘಿಸುತ್ತಾ ಅವಳ ಕಷ್ಟಕೋಟಲೆಗಳಿಗೆ ಮರುಗಿದುದು

**ಪ್ರಶಸ್ಯ ತು ಪ್ರಶಸ್ತವ್ಯಾಂ ಸೀತಾಂ ತಾಂ ಹರಿಪುಙ್ಗವಃ ।**
**ಗುಣಾಭಿರಾಮಂ ರಾಮಂ ಚ ಪುನಶ್ಚಿನ್ತಾಪರೋಽಭವತ್ ॥೧॥**

ಕಪಿಶ್ರೇಷ್ಠನಾದ ಹನುಮಂತನು ಪ್ರಶಂಸಾರ್ಹಳಾದ ಸೀತಾದೇವಿಯನ್ನು ಬಹಳವಾಗಿ ಪ್ರಶಂಸಿಸುತ್ತಾ ಗುಣಗಳಿಂದ ಸುಮನೋಹರನಾದ ಶ್ರೀರಾಮನನ್ನೂ ಸ್ಮರಿಸಿದನು. ಒಡನೆಯೇ ಪುನಃ ಚಿಂತಾಮಗ್ನನೂ ಆದನು.

ಹನುಮಂತನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಮುಹೂರ್ತ ಕಾಲದವರೆಗೆ ಚಿಂತಿಸುತ್ತಿದ್ದು ಸೀತೆಯ ಆಗಿನ ಪರಿಸ್ಥಿತಿಯನ್ನು ನೋಡಿ ಗಟ್ಟಿಯಾಗಿ ವಿಲಪಿಸತೊಡಗಿದನು :

**ಮಾನ್ಯಾ ಗುರುವಿನೀತಸ್ಯ ಲಕ್ಷ್ಮಣಸ್ಯ ಗುರುಪ್ರಿಯಾ ।**
**ಯದಿ ಸೀತಾಪಿ ದುಃಖಾರ್ತಾ ಕಾಲೋ ಹಿ ದುರತಿಕ್ರಮಃ ॥೩॥**

"ಗುರುಜನರಿಂದ ಒಳ್ಳೆಯ ಶಿಕ್ಷಣವನ್ನು ಪಡೆದಿರುವ ಲಕ್ಷ್ಮಣನಿಗೆ ಮಾನ್ಯೆಯಾಗಿ, ಆತನ ಅಣ್ಣನಿಗೆ ಪತ್ನಿಯಾಗಿರುವ ಈ ಸೀತೆಯೂ ದುಃಖ ದಿಂದ ಪೀಡಿತಳಾಗುವುದೆಂದರೆ ಕಾಲವನ್ನು ಯಾರು ತಾನೇ ಮೀರಲು ಸಾಧ್ಯ?

ಗಂಗಾನದಿಯು ಮಳೆಗಾಲದಲ್ಲಿ ಮಹಾಪ್ರವಾಹ ಬಂದಾಗಲೂ ಕ್ಷೋಭೆಗೊಳ್ಳುವುದಿಲ್ಲ. ಅಂತೆಯೇ ಶ್ರೀರಾಮನ ಮತ್ತು ಲಕ್ಷ್ಮಣನ ಎಣೆ ಯಿಲ್ಲದ ಪರಾಕ್ರಮವನ್ನು ತಿಳಿದಿರುವುದರಿಂದ ಈಕೆಯೂ ಅಧೀರಳಾಗಿಲ್ಲ.

**ತುಲ್ಯಶೀಲವಯೋವೃತ್ತಾಂ ತುಲ್ಯಾಭಿಜನಲಕ್ಷಣಾಮ್ ।**
**ರಾಘವೋಽರ್ಹತಿ ವೈದೇಹೀಂ ತಂ ಚೇಯಮಸಿತೇಕ್ಷಣಾ ॥೫॥**

ತನಗೆ ಸಮಾನವಾದ ಶೀಲ, ವಯಸ್ಸು, ಚಾರಿತ್ರ್ಯ ಮತ್ತು ಸತ್ಕುಲ ಲಕ್ಷಣಗಳುಳ್ಳ ಸೀತಾದೇವಿಯನ್ನು ಪತ್ನಿಯನ್ನಾಗಿ ಪಡೆಯಲು ನಿಶ್ಚಯ ವಾಗಿಯೂ ಶ್ರೀರಾಮನು ಯೋಗ್ಯನಾಗಿದ್ದಾನೆ. ಹಾಗೆಯೇ ತನಗೆ ಸಮಾನ ವಾದ ಶೀಲ-ವಯಸ್ಸು-ಚಾರಿತ್ರ್ಯ ಮತ್ತು ಕುಲ-ಲಕ್ಷಣಗಳುಳ್ಳ ಶ್ರೀರಾಮ ನನ್ನು ಪತಿಯನ್ನಾಗಿ ಪಡೆಯಲು ಕನ್ನೈದಿಲೆಯಂತೆ ಕಪ್ಪಾದ ಕಣ್ಣುಗಳುಳ್ಳ ವೈದೇಹಿಯೂ ಯೋಗ್ಯಳಾಗಿದ್ದಾಳೆ."

ಆಗ ತಾನೇ ಪುಟಕ್ಕೆ ಹಾಕಿ ತೆಗೆದ ಚಿನ್ನದ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ, ಲೋಕಕಮನೀಯಳಾದ, ಲಕ್ಷ್ಮಿಯಂತೆಯೇ ಶೋಭಾಯಮಾನಳಾಗಿದ್ದ ಸೀತಾದೇವಿಯನ್ನು ನೋಡಿ ಮನಸ್ಸಿನಿಂದ ಶ್ರೀರಾಮನನ್ನೇ ಧ್ಯಾನಿಸುತ್ತಾ ಹನುಮಂತನು ಪುನಃ ಹೀಗೆ ಹೇಳಿ ಕೊಂಡನು:

"ವಿಶಾಲನೇತ್ರೆಯಾದ ಇವಳ ಸಲುವಾಗಿಯೇ ಮಹಾಬಲಿಷ್ಠನಾದ ವಾಲಿಯ ಸಂಹಾರವಾಯಿತು. ವೀರ್ಯದಲ್ಲಿ ರಾವಣನಿಗೆ ಸಾಟಿಯಾಗಿದ್ದ

ಕಬಂಧನೂ ಹತನಾದನು. ಮಹೇಂದ್ರನು ಶಂಬರನನ್ನು ಸಂಹರಿಸಿದಂತೆ ಶ್ರೀರಾಮನು ಅರಣ್ಯದಲ್ಲಿ ಭಯಂಕರಪರಾಕ್ರಮನಾದ ವಿರಾಧನನ್ನು ಯುದ್ಧ ದಲ್ಲಿ ಸಂಹರಿಸಿದನು. ಜನಸ್ಥಾನದಲ್ಲಿದ್ದ ಭಯಂಕರಕರ್ಮಿಗಳಾದ ಹದಿನಾಲ್ಕು ಸಾವಿರ ರಾಕ್ಷಸರನ್ನು ಅಗ್ನಿಯ ಜ್ವಾಲೆಗೆ ಸಮಾನವಾದ ತನ್ನ ಬಾಣಗಳಿಂದ ಸಂಹರಿಸಿದನು. ಆತ್ಮವಿದನಾದ ಶ್ರೀರಾಮನು ಯುದ್ಧದಲ್ಲಿ ಖರನನ್ನೂ, ತ್ರಿಶಿರಸನನ್ನೂ, ಮಹಾತೇಜಸ್ವಿಯಾದ ದೂಷಣನನ್ನೂ ಸಂಹರಿಸಿದನು. ವಾಲಿಯಿಂದ ರಕ್ಷಿಸಲ್ಪಡುತ್ತಿದ್ದ, ಇತರರಿಂದ ಹೊಂದಲು ಅಶಕ್ಯವಾದ, ಲೋಕಪ್ರಸಿದ್ಧವಾದ ವಾನರರ ಅತುಲೈಶ್ವರ್ಯವನ್ನೂ ಇವಳ ನಿಮಿತ್ತ ದಿಂದಲೇ ಸುಗ್ರೀವನು ಪಡೆದುಕೊಂಡನು. ವಿಶಾಲಾಕ್ಷಿಯಾದ ಇವಳ ಸಲು ವಾಗಿಯೇ ನಾನು ನದೀ-ನದಗಳಿಗೆ ಪತಿಯಾದ ಶ್ರೀಮಂತನಾದ ಸಮುದ್ರ ನನ್ನು ಲಂಘಿಸಿ ಬಂದು ಈ ಲಂಕಾಪಟ್ಟಣವನ್ನು ನೋಡಿದೆನು. ಒಂದು ವೇಳೆ ಈ ಸೀತಾದೇವಿಯ ಸಲುವಾಗಿ ಶ್ರೀರಾಮನು ಸಮುದ್ರಾಂತವಾದ ಈ ಭೂಮಂಡಲವನ್ನೂ ಮತ್ತು ಮೂರು ಲೋಕಗಳನ್ನೂ ತಲೆಕೆಳಗಾಗಿ ಮಾಡಿದರೂ ಅದು ಯುಕ್ತವೆಂದೇ ನನ್ನ ಭಾವನೆಯಾಗಿದೆ.

**ರಾಜ್ಯಂ ವಾ ತ್ರಿಷು ಲೋಕೇಷು ಸೀತಾ ವಾ ಜನಕಾತ್ಮಜಾ ।**
**ತ್ರೈಲೋಕ್ಯರಾಜ್ಯಂ ಸಕಲಂ ಸೀತಾಯಾ ನಾಪ್ನುಯಾತ್ಕಲಾಮ್ ॥**

ಮೂರು ಲೋಕಗಳ ಆಧಿಪತ್ಯ ಮತ್ತು ಜನಕನ ಮಗಳಾದ ಸೀತೆಯ ಪ್ರಾಪ್ತಿ–ಈ ಎರಡರಲ್ಲಿ ಸಮಗ್ರವಾದ ಮೂರು ಲೋಕಗಳ ಆಧಿಪತ್ಯವೂ ಸೀತೆಯ ಪ್ರಾಪ್ತಿಗೆ ಹೋಲಿಸಿದರೆ ಹದಿನಾರನೆಯ ಒಂದಂಶದಷ್ಟು ಕೂಡ ಆಗಲಾರದೆಂದು ನಾನು ಭಾವಿಸುತ್ತೇನೆ.

ಮಿಥಿಲಾಧಿಪತಿಯಾದ, ಧರ್ಮಶೀಲನಾದ, ಮಹಾತ್ಮನಾದ ಜನಕನ ಮಗಳಾದ, ಪತಿಯನ್ನೇ ದೃಢವಾಗಿ ಆಶ್ರಯಿಸಿರುವ ಈ ಸೀತಾದೇವಿಯು ನೇಗಿಲಿನಿಂದ ಭೂಮಿಯನ್ನು ಉಳುತ್ತಿದ್ದಾಗ ಅದನ್ನು ಭೇದಿಸಿಕೊಂಡು ತಾವರೆಯ ಪರಾಗಗಳಿಗೆ ಸಮಾನವಾದ, ಶುಭಕರವಾದ, ಗದ್ದೆಯ ಧೂಳಿ ನಿಂದ ವ್ಯಾಪ್ತಳಾಗಿ ಮೇಲೆದ್ದು ಬಂದವಳು. ಈಕೆಯು ಅಯೋನಿಜೆ. ಮಹಾ ಪರಾಕ್ರಮಿಯಾದ, ಆರ್ಯರ ಗುಣ-ಶೀಲಗಳನ್ನೇ ಮೈಗೂಡಿಸಿಕೊಂಡಿದ್ದ,

ಯುದ್ಧಗಳಲ್ಲಿ ಯಾವಾಗಲೂ ಹಿಂದಿರುಗದೇ ಕೆಚ್ಚಿನಿಂದ ಶತ್ರುಗಳೊಡನೆ ಹೋರಾಡುತ್ತಿದ್ದ ದಶರಥಮಹಾರಾಜನ ಹಿರಿಯ ಸೊಸೆ.

ಧರ್ಮಜ್ಞನಾದ, ಮಾಡಿದ ಉಪಕಾರವನ್ನು ಯಾವಾಗಲೂ ಸ್ಮರಿಸುವ, ಆತ್ಮವಿದನಾದ ಶ್ರೀರಾಮನಿಗೆ ಇವಳು ಪರಮಪ್ರಿಯಳಾದ ಧರ್ಮಪತ್ನಿಯು. ಇಂತಹವಳು ಕೂಡ ಇಂದು ರಾಕ್ಷಸಿಯರ ವಶದಲ್ಲಿದ್ದಾಳೆ. ಸಾಧ್ವಿಯಾದ ಇವಳು ಪತಿಯ ಪ್ರೇಮಬಲದಿಂದ ಆಕರ್ಷಿತಳಾಗಿ ಸಕಲವಿಧವಾದ ರಾಜಭೋಗಗಳನ್ನೂ ಪರಿತ್ಯಜಿಸಿ ವನವಾಸದ ಕಷ್ಟಗಳೆಷ್ಟೆಂಬುದನ್ನು ಯೋಚಿಸದೆಯೇ ನಿರ್ಜನವಾದ ಅರಣ್ಯಕ್ಕೆ ಪತಿಯೊಡನೆ ಬಂದಳು. ಆ ಘೋರಾರಣ್ಯದಲ್ಲಿಯೂ ಇವಳು ಪತಿಶುಶ್ರೂಷೆಯಲ್ಲಿಯೇ ನಿರತಳಾಗಿದ್ದಳು. ಅರಣ್ಯದಲ್ಲಿ ಸಿಕ್ಕುವ ಕಂದ-ಮೂಲ-ಫಲಗಳಿಂದಲೇ ಸಂತುಷ್ಟಳಾಗುತ್ತಿದ್ದಳು. ಅರಣ್ಯದಲ್ಲಿಯೂ ಅರಮನೆಯಲ್ಲಿದ್ದಂತೆಯೇ ಶ್ರೀರಾಮನೊಡನೆ ಪರಮಸಂತೋಷದಿಂದಿದ್ದಳು. ಸುವರ್ಣವರ್ಣದ ಅವಯವಗಳಿಂದ ಪರಿಶೋಭಿಸುತ್ತಿರುವ, ಯಾವಾಗಲೂ ಮುಗುಳ್ನಗೆಯೊಡನೆ ಮಾತನಾಡುವ, ಅನರ್ಥಗಳಿಗೆ (ಕಷ್ಟ-ಕೋಟಲೆಗಳಿಗೆ) ಭಾಗಿನಿಯಾಗಲು ಯೋಗ್ಯಳಲ್ಲದ ಇವಳು ರಾಕ್ಷಸಿಯರು ಕೊಡುತ್ತಿರುವ ಉಪಟಳಗಳನ್ನು ಸಹಿಸಿಕೊಂಡಿದ್ದಾಳೆ. ಬಾಯಾರಿದವನು ಅರವಟ್ಟಿಗೆಯನ್ನು ಬಯಸುವಂತೆ– ರಾವಣೇಶ್ವರನಿಂದ ಪೀಡಿಸಲ್ಪಡುತ್ತಿರುವ ಶೀಲ-ಚಾರಿತ್ರಸಂಪನ್ನೆಯಾದ ಇವಳನ್ನು ನೋಡಲು ಶ್ರೀರಾಮನು ಕಾತರನಾಗಿದ್ದಾನೆ.

ರಾಜ್ಯದಿಂದ ಭ್ರಷ್ಟನಾದ ರಾಜನು ರಾಜ್ಯವನ್ನು ಪುನಃ ಪಡೆದುಕೊಂಡಾಗ ಸಂತೋಷಿಸುವಂತೆ–ಶ್ರೀರಾಮನು ಸೀತಾದೇವಿಯನ್ನು ಪುನಃ ಪಡೆದು ಕೊಂಡಾಗ ಬಹಳವಾಗಿ ಸಂತೋಷಪಡುತ್ತಾನೆ.

ಕಾಮೋಪಭೋಗಗಳೆಲ್ಲವನ್ನೂ ಪರಿತ್ಯಜಿಸಿರುವ, ಬಂಧುಜನ ರಿಂದಲೂ ವಿಹೀನಳಾಗಿರುವ ಇವಳು ಶ್ರೀರಾಮನ ಆಗಮನವನ್ನೇ ಪ್ರತೀಕ್ಷಿ ಸುತ್ತಾ ತನ್ನ ದೇಹವನ್ನು ಧರಿಸಿದ್ದಾಳೆ. (ಜೀವಂತಳಾಗಿದ್ದಾಳೆ.) ಸಾಧ್ವಿಯಾದ ಇವಳು ಸುತ್ತಲೂ ಇರುವ ರಾಕ್ಷಸಸ್ತ್ರೀಯರನ್ನಾಗಲೀ ಫಲ-ಪುಷ್ಪಗಳಿಂದ ಸಮೃದ್ಧವಾಗಿಯೂ, ಸುಂದರವಾಗಿಯೂ ಇರುವ ಈ ವೃಕ್ಷಗಳನ್ನಾಗಲೀ ನೋಡುತ್ತಲೇ ಇಲ್ಲ. ಶ್ರೀರಾಮನಲ್ಲಿಯೇ ಏಕಾಗ್ರಚಿತ್ತಳಾಗಿ ಹೃನ್ಮಂದಿರದಲ್ಲಿ ಶ್ರೀರಾಮನನ್ನೇ ಸರ್ವಕಾಲದಲ್ಲಿಯೂ ಕಾಣುತ್ತಿದ್ದಾಳೆ.

**ಭರ್ತಾ ನಾಮ ಪರಂ ನಾರ್ಯಾ ಭೂಷಣಂ ಭೂಷಣಾದಪಿ ।**
**ಏಷಾ ಹಿ ರಹಿತಾ ತೇನ ಶೋಭನಾರ್ಹಾ ನ ಶೋಭತೇ ॥೨೬॥**

ಹೆಂಗಸಿಗೆ ಇತರ ಎಲ್ಲ ಆಭರಣಗಳಿಗಿಂತಲೂ ಪತಿಯೇ ಪರಮಶ್ರೇಷ್ಠವಾದ ಆಭರಣವು. ಆಭರಣಗಳಿಂದ ಶೋಭಿಸಬೇಕಾಗಿರುವ ಇವಳು ಪತಿಯೆಂಬ ಆ ಆಭರಣದಿಂದ ರಹಿತಳಾಗಿ ಶೋಭಿಸುತ್ತಿಲ್ಲ.

ಇಂತಹ ಸಾಧ್ವೀಮಣಿಯಿಂದ ವಿಹೀನನಾಗಿರುವ ಶ್ರೀರಾಮನು ತನ್ನ ದೇಹವನ್ನಿನ್ನೂ ಧರಿಸಿಯೇ ಇದ್ದಾನೆ. ವಿರಹದುಃಖದಿಂದ ವಿನಾಶಹೊಂದಿಲ್ಲ. ಶ್ರೀರಾಮನು ನಿಶ್ಚಯವಾಗಿಯೂ ಅತ್ಯಂತದುಷ್ಕರವಾದ ಕಾರ್ಯವನ್ನೇ ಮಾಡುತ್ತಿದ್ದಾನೆ. ಕಪ್ಪಾದ ಕೂದಲುಗಳನ್ನು ಹೊಂದಿರುವ, ತಾವರೆಯಂತೆ ಕಣ್ಣುಗಳುಳ್ಳ, ಸುಖಪಡಲು ಯೋಗ್ಯಳಾದ ಇವಳು ದುಃಖಿತಳಾಗಿರುವುದನ್ನು ನೋಡಿ ನನ್ನ ಮನಸ್ಸೂ ವ್ಯಥೆಗೊಂಡಿದೆ. ಭೂದೇವಿಯಂತೆ ಕ್ಷಮಾಗುಣವುಳ್ಳ, ಕಮಲಸದೃಶವಾದ ಕಣ್ಣುಗಳುಳ್ಳ, ರಾಘವ-ಲಕ್ಷ್ಮಣರಿಂದ ರಕ್ಷಿಸಲ್ಪಡುತ್ತಿದ್ದ ಇವಳೀಗ ವೃಕ್ಷದ ಬುಡದಲ್ಲಿ ವಿಕಾರವಾದ ಕಣ್ಣುಗಳುಳ್ಳ ರಾಕ್ಷಸಿಯರಿಂದ ರಕ್ಷಿಸಲ್ಪಡುತ್ತಿದ್ದಾಳೆ. ಮಂಜುಮುಸುಕಿ ಶೋಭೆಯನ್ನು ಕಳೆದುಕೊಂಡ ಕಮಲದ ಬಳ್ಳಿಯಂತೆ ಕಾಂತಿಯಿಂದ ಹೀನಳಾಗಿರುವ, ಕಷ್ಟಗಳ ಪರಂಪರೆಯಿಂದ ಪೀಡಿತಳಾಗಿರುವ ಜಾನಕಿಯು ಸಹಚರನಿಂದ ವಿಹೀನವಾದ ಹೆಣ್ಣುಚಕ್ರವಾಕ ಪಕ್ಷಿಯಂತೆ ದೈನ್ಯಾವಸ್ಥೆಯನ್ನು ಹೊಂದಿದ್ದಾಳೆ. ಪುಷ್ಪಗಳ ಭಾರದಿಂದ ಬಗ್ಗಿರುವ ರೆಂಬೆಗಳುಳ್ಳ ಅಶೋಕವೃಕ್ಷಗಳೂ, ಮಂಜಿನಿಂದ ಹೊರಬಂದು ಸಾವಿರಾರು ಕಿರಣಗಳಿಂದ ಕೂಡಿರುವ ಶೀತರಶ್ಮಿಯಾದ ಚಂದ್ರನೂ ಈ ಸೀತಾದೇವಿಗೆ ಅತ್ಯಂತದಾರುಣವಾದ ವಿರಹಶೋಕವನ್ನುಂಟುಮಾಡುತ್ತಿದ್ದಾರೆ."

ಬಲಿಷ್ಠನಾದ, ಕಪಿಕುಂಜರನಾದ, ವೇಗವಂತನಾದ ಹನುಮಂತನು ಇವೇ ಮುಂತಾಗಿ ಯೋಚಿಸುತ್ತಾ–'ಇವಳು ಸೀತೆಯೇ ಸರಿ'–ಎಂದು ನಿಶ್ಚಿತವಾದ ಬುದ್ಧಿಯನ್ನು ಹೊಂದಿ ಆ ಶಿಂಶುಪಾವೃಕ್ಷದಲ್ಲಿಯೇ ಅಡಗಿ ಕುಳಿತನು.

ಂ೧೬ನೆಯ ಸರ್ಗವು ಮುಗಿಯಿತು.

## ಹನುಮಂತನು ಘೋರರೂಪಿಣಿಯರಾದ ರಾಕ್ಷಸಿಯರ ಮಧ್ಯೆ ಸೀತಾದೇವಿಯನ್ನು ನೋಡಿ ಪ್ರಸನ್ನನಾದುದು

**ತತಃ ಕುಮುದಷಣ್ಡಾಭೋ ನಿರ್ಮಲೋ ನಿರ್ಮಲಂ ಸ್ವಯಮ್ ।**
**ಪ್ರಜಗಾಮ ನಭಶ್ಚನ್ದ್ರೋ ಹಂಸೋ ನೀಲಮಿವೋದಕಮ್ ॥೧॥**

ಬಳಿಕ ಕನ್ನೈದಿಲೆಗಳ ಗುಂಪಿನ ಕಾಂತಿಯಂತೆ ಕಾಂತಿಯುಕ್ತನಾಗಿದ್ದ, ನಿರ್ಮಲನಾಗಿದ್ದ ಚಂದ್ರನು–ಹಂಸವು ನೀಲವರ್ಣದ ಸರೋವರವನ್ನು ಪ್ರವೇಶಿಸುವಂತೆ ಆಗ ನಿರ್ಮಲವಾದ ಆಕಾಶದಲ್ಲಿ ಪ್ರಾದುರ್ಭವಿಸಿದನು.

ನಿರ್ಮಲವಾದ ಪ್ರಭೆಯಿಂದ ಕೂಡಿದ್ದ ಚಂದ್ರನು ತನ್ನ ಪ್ರಭೆಯಿಂದ ಸಹಾಯವೆಸಗುತ್ತಿರುವನೋ ಎಂಬಂತೆ ಶೀತಲವಾದ ಕಿರಣಗಳಿಂದ ಹನುಮಂತನನ್ನು ಸೇವಿಸುತ್ತಿದ್ದನು.

ಹೆಚ್ಚು ಭಾರದಿಂದ ನೀರಿನಲ್ಲಿ ಮುಳುಗಿಹೋಗುತ್ತಿರುವ ನಾವೆಯಂತೆ ಶೋಕಭಾರದಿಂದ ಕುಗ್ಗಿಹೋಗಿದ್ದ ಚಂದ್ರಮುಖಿಯಾದ ಸೀತಾದೇವಿಯನ್ನು ಹನುಮಂತನು ನೋಡಿದನು. ವೈದೇಹಿಯನ್ನು ನೋಡಲು ಬಯಸಿದ್ದ ವಾಯುಪುತ್ರನಾದ ಹನುಮಂತನು ಅವಳ ಸಮೀಪದಲ್ಲಿಯೇ ಇದ್ದ ಭಯಂಕರವಾಗಿ ಕಾಣುತ್ತಿದ್ದ ರಾಕ್ಷಸಿಯರನ್ನೂ ನೋಡಿದನು.

ಆ ರಾಕ್ಷಸಿಯರ ದೇಹರಚನೆಯೇ ಬಹಳ ವಿಚಿತ್ರವಾಗಿದ್ದಿತು :

ಅವರಲ್ಲಿ ಕೆಲವು ರಾಕ್ಷಸಿಯರಿಗೆ ಒಂದೇ ಕಣ್ಣು ಒಂದೇ ಕಿವಿಗಳಿದ್ದುವು. ಕೆಲವರಿಗೆ ತಲೆಗಳನ್ನೇ ಮುಚ್ಚಿಕೊಂಡಿರುವಂತೆ ವಿಶಾಲವಾದ ಕಿವಿಗಳಿದ್ದುವು. ಕೆಲವರಿಗೆ ಮೂಗುಗಳು ಮೇಲ್ಮುಖವಾಗಿದ್ದುವು. ಕೆಲವು ರಾಕ್ಷಸಿಯರಿಗೆ ಅತಿದಪ್ಪವಾದ ತಲೆಗಳಿದ್ದುವು. ಕೆಲವರಿಗೆ ತೆಳ್ಳಗಾಗಿಯೂ ಮತ್ತು ಉದ್ದವಾಗಿಯೂ ಇದ್ದ ಕುತ್ತಿಗೆಗಳಿದ್ದುವು. ಕೆಲವರಿಗೆ ತಲೆಗಳಲ್ಲಿ ಸ್ವಲ್ಪ ಕೂದಲಿದ್ದು ಕೆಲವರಿಗೆ ಕೂದಲೇ ಇರಲಿಲ್ಲ. ಕೆಲವರಿಗೆ ಉಣ್ಣೆಯಂತಹ ಕೂದಲಿದ್ದಿತು. ಕೆಲವರಿಗೆ ಜೋಲಾಡುತ್ತಿರುವ ಕಿವಿಗಳೂ ಮತ್ತು ಹಣೆಗಳೂ ಇದ್ದವು. ಕೆಲವರಿಗೆ ಜೋತುಬಿದ್ದಿರುವ ಹೊಟ್ಟೆಗಳೂ ಮತ್ತು ಸ್ತನಗಳೂ ಇದ್ದುವು. ಕೆಲವರ ತುಟಿಗಳು ಜೋತುಬಿದ್ದಿದ್ದುವು. ಕೆಲವರಿಗೆ ಗಲ್ಲದಲ್ಲೇ ಸೇರಿಹೋದ ತುಟಿಗಳಿದ್ದುವು. ಕೆಲವರ ಮುಖಗಳು ಜೋತು ಬಿದ್ದಿದ್ದುವು.

ಕೆಲವರಿಗೆ ದೀರ್ಘವಾದ ಮಂಡಿಗಳಿದ್ದುವು. ಕೆಲವರಿಗೆ ಸೊಂಟದ ಮೇಲು ಭಾಗವು ಗಿಡ್ಡಾಗಿಯೂ ಕೆಳಭಾಗವು ಉದ್ದವಾಗಿಯೂ ಇದ್ದಿತು. ಅಲ್ಲಿ ಕೆಲವು ಗೂನುಬೆನ್ನಿನ ರಾಕ್ಷಸಿಯರಿದ್ದರು. ಸ್ಥೂಲವಾದ ಮೊಣಕಾಲುಳ್ಳವರಿದ್ದರು. ಕುಳ್ಳಿಯರಿದ್ದರು. ಉಬ್ಬಿದ ಹಲ್ಲುಗಳುಳ್ಳವರಿದ್ದರು. ತಗ್ಗಾದ ಮುಖವುಳ್ಳವರಿದ್ದರು. ಕಂದು-ಹಳದೀಬಣ್ಣದ ಕಣ್ಣುಗಳುಳ್ಳವರಿದ್ದರು. ಕೆಲವರ ಮುಖಗಳು ವಿಕಾರವಾಗಿದ್ದುವು. ಆಕಾರವೂ ವಿಕಾರವಾಗಿದ್ದಿತು. ಅಲ್ಲಿ ಪಿಂಗಲ ವರ್ಣದ ಮತ್ತು ಕೃಷ್ಣವರ್ಣದ ರಾಕ್ಷಸಿಯರನೇಕರಿದ್ದರು. ಕೋಪಿಷ್ಠೆಯರಾದ ರಾಕ್ಷಸಿಯರಿದ್ದರು. ಜಗಳಗಂಟಿಯರಿದ್ದರು. ಅವರಲ್ಲಿ ಕೆಲವರು ಕಾಲದಂಡಗಳನ್ನೂ ಕೆಲವರು ಕಬ್ಬಿಣದ ಆಯುಧಗಳನ್ನೂ ಹಿಡಿದಿದ್ದರು. ಕೆಲವರು ಶೂಲಾಯುಧಗಳನ್ನೂ ಕೆಲವರು ಪಾಶ-ಮುದ್ಗರಗಳನ್ನೂ ಹಿಡಿದಿದ್ದರು. ಅವರಲ್ಲಿ ಕೆಲವರಿಗೆ ಹಂದಿ, ಜಿಂಕೆ, ಸಿಂಹ, ಎಮ್ಮೆ, ಆಡು, ಗುಳ್ಳೇನರಿ–ಇವೇ ಮುಂತಾದ ಪ್ರಾಣಿಗಳ ಮುಖಗಳಿದ್ದುವು. ಆನೆ-ಒಂಟೆ-ಕುದುರೆಗಳ ಕಾಲುಗಳಂತಹ ಕಾಲುಗಳನ್ನು ಕೆಲವರು ರಾಕ್ಷಸಿಯರು ಹೊಂದಿದ್ದರು. ಕೆಲವು ರಾಕ್ಷಸಿಯರ ಕಿವಿಗಳು ಕತ್ತೆ-ಕುದುರೆ-ಹಸು-ಆನೆ-ಕಪಿ–ಇವುಗಳ ಕಿವಿಗಳಂತಿದ್ದುವು. ಕೆಲವು ರಾಕ್ಷಸಿಯರಿಗೆ ನೀಳವಾದ ಮೂಗಿದ್ದಿತು. ಕೆಲವರಿಗೆ ಅಡ್ಡವಾದ ಮೂಗಿದ್ದಿತು. ಕೆಲವರಿಗೆ ಮೂಗೆಂಬ ಇಂದ್ರಿಯವೇ ಇರಲಿಲ್ಲ. ಕೆಲವರಿಗೆ ಆನೆಯ ಮೂಗೂ ಕೆಲವರಿಗೆ ಹಣೆಯಲ್ಲಿ ಮೂಗೂ ಇದ್ದಿತು. ಕೆಲವು ರಾಕ್ಷಸಿಯರಿಗೆ ಆನೆಯ ಕಾಲುಗಳಂತಹ ಕಾಲುಗಳಿದ್ದುವು. ಕೆಲವರಿಗೆ ದೊಡ್ಡದಾದ ಹೆಜ್ಜೆಗಳಿದ್ದುವು. ಕೆಲವರ ಪಾದವು ಹಸುವಿನ ಪಾದದಂತಿದ್ದಿತು. ಕೆಲವರಿಗೆ ಕಾಲಿನಲ್ಲಿ ಶಿಖಾರೂಪವಾದ ಕೂದಲಿದ್ದಿತು. ಕೆಲವರು ಅಳತೆಗೆ ಮೀರಿದ ತಲೆಯಿಂದಲೂ ಕುತ್ತಿಗೆಯಿಂದಲೂ ಕೂಡಿದ್ದರು. ಕೆಲವರಿಗೆ ಮಿತಿಮೀರಿದ ಸ್ತನಗಳೂ ಹೊಟ್ಟೆಗಳೂ, ಕೆಲವರಿಗೆ ಮಿತಿಮೀರಿದ ಮುಖ-ನಾಸಿಕಗಳೂ ಇದ್ದುವು. ಕೆಲವರಿಗೆ ಉದ್ದವಾದ ನಾಲಿಗೆಗಳೂ ನೀಳವಾದ ಮುಖಗಳೂ ಇದ್ದುವು. ಕೆಲವರು ಆಡು-ಆನೆ-ಹಸು-ಹಂದಿ-ಕುದುರೆ-ಒಂಟೆ-ಕತ್ತೆ-ಇವೇ ಮುಂತಾದ ಪ್ರಾಣಿಗಳ ಮುಖಗಳನ್ನು ಹೊಂದಿದ್ದರು. ಕೆಲವರು ಶೂಲ-ಮುದ್ಗರಗಳನ್ನು ಹಿಡಿದಿದ್ದರು. ಕೆಲವರು ಮಹಾಕೋಪಿಷ್ಠೆಯರಾಗಿದ್ದರು. ಜಗಳಗಂಟಿಯರಾಗಿದ್ದರು. ಕೆಲವರು ಕರಾಲವಾದ ಮತ್ತು ಧೂಮ್ರ

ವರ್ಣದ ಕೇಶವುಳ್ಳವರಾಗಿದ್ದರು. ಅವರೆಲ್ಲರೂ ಸದಾ ಮಧುಪಾನಮಾಡುತ್ತಿದ್ದರು. ಅವರಿಗೆ ಮಾಂಸವನ್ನು ತಿನ್ನುವುದರಲ್ಲಿಯೂ ಸುರಾಪಾನದಲ್ಲಿಯೂ ವಿಶೇಷವಾದ ಆಸಕ್ತಿಯಿದ್ದಿತು. ಆ ಕಾರಣದಿಂದಾಗಿ ಅವರ ಶರೀರಗಳು ರಕ್ತ-ಮಾಂಸಗಳಿಂದ ನೆನೆದುಹೋಗಿದ್ದುವು. ಅವರು ವಿಕಾರವಾದ ಮುಖಗಳನ್ನು ಹೊಂದಿ ಭಯಂಕರವಾಗಿ ಕಾಣುತ್ತಿದ್ದರು. ನೋಡುವವರಿಗೆ ರೋಮಾಂಚನವನ್ನುಂಟುಮಾಡುತ್ತಿದ್ದರು. ಅಂತಹ ಅನೇಕರಾಕ್ಷಸಿಯರು ಶಿಂಶುಪಾವೃಕ್ಷವನ್ನು ಸುತ್ತುವರಿದು ಕುಳಿತಿರುವುದನ್ನು ಕಪಿಶ್ರೇಷ್ಠನಾದ ಹನುಮಂತನು ನೋಡಿದನು. ಅಂತೆಯೇ ಶಿಂಶುಪಾವೃಕ್ಷದ ಬುಡದಲ್ಲಿ ಕುಳಿತಿದ್ದ, ಶೋಕದಿಂದ ಪರಿತಪಿಸುತ್ತಿದ್ದ, ಕಾಂತಿಹೀನಳಾಗಿದ್ದ, ಮಲಿನವಾಗಿದ್ದ ತಲೆಗೂದಲಿನಿಂದ ಕೂಡಿದ್ದ, ಅನಿಂದ್ಯಳಾದ ಸೀತಾದೇವಿಯನ್ನೂ ನೋಡಿದನು. ಆ ಸಮಯದಲ್ಲಿ ಸೀತಾದೇವಿಯು–ಪುಣ್ಯವು ಮುಗಿದನಂತರ ಭೂಮಿಗೆ ಬಿದ್ದ ನಕ್ಷತ್ರದಂತೆ–ಕಾಣುತ್ತಿದ್ದಳು. ಆದರ್ಶವಾದ ಪಾತಿವ್ರತ್ಯವೆಂಬ ಚಾರಿತ್ರದಿಂದ ಸಂಪನ್ನಳಾಗಿದ್ದಳು ಮತ್ತು ಮಹಾಪತಿವ್ರತೆಯೆಂದು ವಿಖ್ಯಾತಳೂ ಆಗಿದ್ದಳು. ಅನೇಕದಿವಸಗಳಿಂದ ಪತಿಯ ದರ್ಶನವೇ ಆಗದೇ ಬಹಳವಾಗಿ ಕಂಗೆಟ್ಟಿದ್ದಳು. ಉತ್ತಮವಾದ ಆಭರಣಗಳನ್ನು ತೊಟ್ಟಿರಲಿಲ್ಲ. ಆದರೂ ಪತಿಪ್ರೇಮವೆಂಬ ಆಭರಣದಿಂದ ಸಮಲಂಕೃತಳಾಗಿದ್ದಳು. ರಾಕ್ಷಸಾಧಿಪನಾದ ರಾವಣನು ಅವಳನ್ನಲ್ಲಿ ಬಂಧಿಸಿಟ್ಟಿದ್ದನು. ಅಲ್ಲಿ ಅವಳಿಗೆ ಬಂಧುಗಳು ಯಾರೂ ಇರಲಿಲ್ಲ. **ವಿಯೂಥಾಂ ಸಿಂಹಸಂರುದ್ಧಾಂ ಬದ್ಧಾಂ ಗಜವಧೂಮಿವ ।** ಆನೆಗಳ ಸಮೂಹದಿಂದ ಬೇರ್ಪಟ್ಟು ಸಿಂಹದಿಂದ ತಡೆಯಲ್ಪಟ್ಟ ಹೆಣ್ಣಾನೆಯಂತೆಯೇ ಭಯಭೀತಳಾಗಿದ್ದಳು. ವರ್ಷಾಕಾಲವು ಕಳೆದನಂತರ ಶರತ್ಕಾಲದ ಮೋಡಗಳಿಂದ ಆವರಿಸಲ್ಪಟ್ಟ ಪಾಡ್ಯದ ಚಂದ್ರರೇಖೆಯಂತೆಯೇ ಕಾಣುತ್ತಿದ್ದಳು. ಅಭ್ಯಂಜನಾದಿ ಸಂಸ್ಕಾರಗಳಿಲ್ಲದೇ ಶರೀರವು ಮಲಿನವಾಗಿದ್ದಿತು. ವಾದಕನಿಲ್ಲದ ವೀಣೆಯಂತಿದ್ದಳು. ಸತಿಯಾದವಳಿಗೆ ಪತಿಯ ವಶದಲ್ಲಿರುವುದು ಸೂಕ್ತವಾಗಿದ್ದಿತು. ರಾಕ್ಷಸಿಯರ ವಶದಲ್ಲಿರುವುದು ಯೋಗ್ಯವಾಗಿ ಕಾಣುತ್ತಿರಲಿಲ್ಲ. ಈ ಕಾರಣಗಳಿಂದ ಸೀತೆಯು ಶೋಕವೆಂಬ ಸಮುದ್ರದಲ್ಲಿ ಮುಳುಗಿಹೋಗಿದ್ದಳು.

ಕ್ರೂರಗ್ರಹಗಳಿಂದ ಸಮಾವೃತವಾದ ರೋಹಿಣೀ ನಕ್ಷತ್ರದಂತೆ–ಕ್ರೂರ ರಾಕ್ಷಸಿಯರಿಂದ ಪರಿವೃತಳಾಗಿದ್ದಳು. ಕುಸುಮಗಳಿಲ್ಲದ ಲತೆಯಂತೆ ಕಾಂತಿ ಹೀನಳಾಗಿದ್ದಳು. ಅವಳ ಅಂಗಾಂಗಗಳು ಧೂಳಿನಿಂದ ಆವರಿಸಲ್ಪಟ್ಟಿದ್ದುವು. ಆದರೂ ಶರೀರದಿಂದ ದಿವ್ಯಕಾಂತಿಯು ಹೊರಸೂಸುತ್ತಿದ್ದಿತು. ಕೆಸರಿನಿಂದ ಬಳಿಯಲ್ಪಟ್ಟ ಕಮಲದ ಬಳ್ಳಿಯಂತೆ ಅಪ್ರಕಾಶಳಾಗಿಯೂ ಕಾಣುತ್ತಿದ್ದಳು. ಹೆಚ್ಚು ದಿವಸಗಳು ಉಪಯೋಗಿಸಿದ್ದ ಕಾರಣ ಉಟ್ಟಿದ್ದ ವಸ್ತ್ರವು ಮಲಿನ ವಾಗಿದ್ದಿತು. ಆಕೆಯು ಜಿಂಕೆಯ ಮರಿಯ ಕಣ್ಣುಗಳಂತೆ ಚಂಚಲವಾದ ಕಣ್ಣುಗಳಿಂದ ಶೋಭಿಸುತ್ತಿದ್ದಳು.

ಒಮ್ಮೆ ಅವಳ ಮುಖದಲ್ಲಿ ದೈನ್ಯಭಾವವು ಮೂಡಿಬರುತ್ತಿದ್ದಿತು. ಶ್ರೀರಾಮನ ತೇಜಸ್ಸನ್ನು ಸ್ಮರಿಸಿದೊಡನೆಯೇ ಆ ದೈನ್ಯಭಾವವು ಅಳಿಸಿ ಹೋಗುತ್ತಿದ್ದಿತು. ಶೀಲವನ್ನು ಅತ್ಯಂತಜಾಗರೂಕತೆಯಿಂದ ರಕ್ಷಿಸಿಕೊಳ್ಳುತ್ತಿದ್ದ ಅಸಿತಾಕ್ಷಿಯಾದ ಜಾನಕಿಯು ಜಿಂಕೇಮರಿಯ ಕಣ್ಣುಗಳಂತೆ ಚಂಚಲವಾದ ಕಣ್ಣುಗಳಿಂದ, ಭಯಗೊಂಡ ಹುಲ್ಲೆಯಂತೆ ಅತ್ತಲಿತ್ತ ನೋಡುತ್ತಿದ್ದಳು. ಚಿಗುರೊಡೆದ ವೃಕ್ಷಗಳನ್ನು ತನ್ನ ಬಿಸಿ-ಬಿಸಿಯಾದ ನಿಟ್ಟುಸಿರಿನಿಂದಲೇ ಸುಟ್ಟುಬಿಡುವಳೋ ಎಂಬಂತೆ ಕಾಣುತ್ತಿದ್ದಳು.

ಅವಳು ಶೋಕಗಳ ಸಮೂಹವೇ ಮೂರ್ತಿಮತ್ತಾಗಿ ಬಂದಿರು ವುದೋ ಎಂಬಂತೆ ಕಾಣುತ್ತಿದ್ದಳು. ದುಃಖವೆಂಬ ಸಾಗರದಲ್ಲಿ ಮೇಲುಕ್ಕಿ ಬರುವ ಅಲೆಯೋಪಾದಿಯಲ್ಲಿ ಕಾಣುತ್ತಿದ್ದಳು. ಅತ್ಯಂತ ಕೃಶಳಾಗಿದ್ದಳು. ಆದರೆ ಅವಳ ಅವಯವಗಳು ಸುಂದರವಾಗಿ ವಿಭಜಿಸಲ್ಪಟ್ಟಿದ್ದುವು. ಆ ಕಾರಣದಿಂದ ಆಭರಣಗಳಿಂದ ರಹಿತಳಾಗಿದ್ದರೂ ಶೋಭಾಯಮಾನ ಳಾಗಿಯೇ ಕಾಣುತ್ತಿದ್ದಳು. ಅಂತಹ ಸ್ಥಿತಿಯಲ್ಲಿದ್ದ ಸೀತಾದೇವಿಯನ್ನು ನೋಡಿ ಮಾರುತಿಯು ಆನಂದತುಂದಿಲನಾದನು. ಮೋಹಗೊಳಿಸುವ ಕಣ್ಣುಗಳಿಂದ ಕೂಡಿದ್ದ ಸೀತಾದೇವಿಯನ್ನು ನೋಡಿ ಆನಂದಬಾಷ್ಪವನ್ನು ಸುರಿಸುತ್ತಾ ಮನಸ್ಸಿನಿಂದಲೇ ರಾಘವನಿಗೂ ಲಕ್ಷ್ಮಣನಿಗೂ ನಮಸ್ಕರಿಸಿ ಸೀತೆಯ ದರ್ಶನದಿಂದ ಸಂಹೃಷ್ಟನಾಗಿ ಆ ಶಿಂಶುಪಾವೃಕ್ಷದಲ್ಲಿಯೇ ಉಡುಗಿದನು.

೧೭ನೆಯ ಸರ್ಗವು ಮುಗಿಯಿತು.

# ರಾವಣನು ಅಂತಃಪುರದ ಸ್ತ್ರೀಯರಿಂದ ಪರಿವೃತನಾಗಿ ಅಶೋಕವನಕ್ಕೆ ಬಂದುದು

**ತಥಾ ವಿಪ್ರೇಕ್ಷಮಾಣಸ್ಯ ವನಂ ಪುಷ್ಪಿತಪಾದಪಮ್ ।**
**ವಿಚಿನ್ವತಶ್ಚ ವೈದೇಹೀಂ ಕಿಂಚಿಚ್ಛೇಷಾ ನಿಶಾಭವತ್ ॥೧॥**

ಹನುಮಂತನು ಪುಷ್ಪಿತವಾದ ವೃಕ್ಷಗಳಿಂದ ನಿಬಿಡವಾಗಿದ್ದ ಅಶೋಕ ವನದಲ್ಲಿ ಜಾನಕಿಯನ್ನು ಹುಡುಕುತ್ತಿರುವಾಗಲೇ ರಾತ್ರಿಯ ಬಹುಭಾಗವು ಕಳೆದು ಸ್ವಲ್ಪಭಾಗ ಮಾತ್ರವೇ ಉಳಿದಿದ್ದಿತು.

ರಾತ್ರಿಯು ಕಳೆಯುತ್ತಿದ್ದ ಆ ಸಮಯದಲ್ಲಿ ಸಾಂಗವೇದಾಧ್ಯಯನ ಮಾಡಿದ್ದ, ಮಹಾಯಜ್ಞಗಳ ಯಾಜಕರಾಗಿದ್ದ ಬ್ರಾಹ್ಮಣರಾಕ್ಷಸರು ಮಾಡುತ್ತಿದ್ದ ವೇದಘೋಷಗಳನ್ನು ಹನುಮಂತನು ಕೇಳಿದನು. ಅದೇ ಸಮಯದಲ್ಲಿ ಮಹಾಬಾಹುವಾದ ದಶಗ್ರೀವನು ಇಂಪಾಗಿದ್ದ ಮಂಗಳವಾದ್ಯಗಳ ನಿನಾದದಿಂದ ಎಚ್ಚರಗೊಂಡನು. ಅವನು ಧರಿಸಿದ್ದ ಮಾಲೆಗಳೂ ಮತ್ತು ವಸ್ತ್ರಗಳೂ ಅಸ್ತವ್ಯಸ್ತವಾಗಿದ್ದುವು. ಮಹಾಭಾಗನಾದ ಪ್ರತಾಪವಂತನಾದ ರಾಕ್ಷಸೇಂದ್ರನು ವೈದೇಹಿಯ ವಿಷಯವಾಗಿ ಯೋಚಿಸತೊಡಗಿದನು.

ಮಾದಕಪದಾರ್ಥಗಳ ಸೇವನೆಯಿಂದ ಮದೋತ್ಕಟನಾಗಿದ್ದ ಮತ್ತು ಮನ್ಮಥನ ಪ್ರಭಾವದಿಂದ ಸೀತಾದೇವಿಯಲ್ಲಿಯೇ ಅತ್ಯಾಸಕ್ತನಾಗಿದ್ದ ರಾವಣ ನಿಗೆ ಕಾಮದ ಉದ್ವೇಗವನ್ನು ತಡೆಹಿಡಿಯಲು ಸಾಧ್ಯವಾಗಲಿಲ್ಲ. ಒಡನೆಯೇ ಆಭರಣಗಳೆಲ್ಲವನ್ನೂ ತೊಟ್ಟುಕೊಂಡು, ನಯನಮನೋಹರವಾಗಿ ಸಿಂಗರಿಸಿಕೊಂಡು, ಪರಮಶ್ರೇಷ್ಠವಾದ ಕಾಂತಿಯಿಂದ ರಾರಾಜಿಸುತ್ತಾ ಅಂತಃ ಪುರದಿಂದ ಹೊರಟು, ಮಣಿಮಯವಾದ ಮತ್ತು ಕಾಂಚನಮಯವಾದ ತೋರಣಗಳಿಂದ ಸಮಲಂಕೃತವಾಗಿದ್ದ ರಾಜಬೀದಿಯನ್ನು ವೀಕ್ಷಿಸುತ್ತಾ ನಿಬಿಡವಾದ ವೃಕ್ಷಗಳಿಂದ ಕಂಗೊಳಿಸುತ್ತಿದ್ದ ಅಶೋಕವನಕ್ಕೆ ಬಂದನು. ಆ ಅಶೋಕವಾಟಿಕೆಯು ಸಕಲವಿಧವಾದ ಪುಷ್ಪಗಳಿಂದಲೂ, ಫಲಗಳಿಂದಲೂ ತುಂಬಿಹೋಗಿದ್ದ ನಾನಾವಿಧವಾದ ವೃಕ್ಷಗಳಿಂದ ನಿಬಿಡವಾಗಿದ್ದಿತು. ನಾನಾ ವಿಧವಾದ ಸರೋವರಗಳಿಂದ ಸಮಲಂಕೃತವಾಗಿದ್ದಿತು. ನಾನಾಜಾತಿಯ

ಪುಷ್ಪಗಳಿಂದ ಪರಿಶೋಭಿಸುತ್ತಿದ್ದಿತು. ಪರಮಾದ್ಭುತವಾದ ಮತ್ತು ಮದಿಸಿದ ಪಕ್ಷಿಗಳಿಂದ ಚಿತ್ರಿತವಾಗಿದ್ದಿತು. ಕಣ್ಣುಗಳಿಗೆ ಹಬ್ಬವನ್ನುಂಟುಮಾಡುತ್ತಿದ್ದ ವಿಧ-ವಿಧವಾದ ಕೃತಕವಾದ ತೋಳಗಳಿಂದ ಸಮಾವೃತವಾಗಿದ್ದಿತು. ಹಲವು ಬಗೆಯ ಜಿಂಕೆಗಳಿಂದ ಸಮಾವೃತವಾಗಿದ್ದಿತು. ಪಕ್ವವಾಗಿ ಕೆಳಕ್ಕೆ ಬಿದ್ದ ಹಣ್ಣು ಗಳಿಂದ ಆ ಭೂಪ್ರದೇಶವು ಮುಚ್ಚಿಹೋಗಿದ್ದಿತು. ದೇವ-ಗಂಧರ್ವ ಸ್ತ್ರೀಯರು ಮಹೇಂದ್ರನನ್ನು ಅನುಸರಿಸಿ ಹೋಗುವಂತೆ–ನೂರಾರು ಮಂದಿ ಅಂತಃಪುರದ ಸ್ತ್ರೀಯರು ರಾವಣೇಶ್ವರನನ್ನು ಅನುಸರಿಸಿ ಹೋಗುತ್ತಿದ್ದರು. ಹಾಗೆ ಹೋಗುತ್ತಿದ್ದವರಲ್ಲಿ ಕೆಲವರು ಸುವರ್ಣಮಯವಾದ ದೀವಟಿಗೆಗಳನ್ನು ಹಿಡಿದು ಮುಂದೆಹೋಗುತ್ತಿದ್ದರು. ಕೆಲವರು ಬೀಸಣಿಗೆಗಳನ್ನೂ ಚಾಮರಗಳನ್ನೂ ಹಿಡಿದಿದ್ದರು. ಕೆಲವರು ಸುವರ್ಣಮಯವಾದ ಕಲಶಗಳಲ್ಲಿ ನೀರನ್ನು ತುಂಬಿಕೊಂಡು ಮುಂದೆ ಹೋಗುತ್ತಿದ್ದರು. ಕೆಲವರು ಅಗ್ರಭಾಗದಲ್ಲಿ ಮಂಡಲಾಕಾರವಾಗಿದ್ದ ಆಸನಗಳನ್ನು ಹಿಡಿದು ಹೋಗು ತ್ತಿದ್ದರು.

ಕುಶಲೆಯಾದ ಅಂಗನೆಯೊಬ್ಬಳು ಮದಿರೆಯಿಂದ ತುಂಬಿದ ಸುವರ್ಣ ಮಯವಾದ ಪಾನಪಾತ್ರೆಯನ್ನು ಬಲಗೈಯಲ್ಲಿ ಹಿಡಿದಿದ್ದಳು. ಮತ್ತೊಬ್ಬಳು ಶ್ವೇತಚ್ಛತ್ರವನ್ನು ಹಿಡಿದು ರಾವಣನ ಹಿಂದೆ ಹೋಗುತ್ತಿದ್ದಳು. ಆ ಛತ್ರವು ರಾಜಹಂಸದಂತೆ ಪ್ರಕಾಶಮಾನವಾಗಿಯೂ–ಪೂರ್ಣಚಂದ್ರನ ಪ್ರಭೆಯಂತೆ ಅಮಿತವಾದ ಪ್ರಭೆಯಿಂದ ಕೂಡಿಯೂ ಇದ್ದಿತು. ಅದಕ್ಕೆ ಸುವರ್ಣಮಯ ವಾದ ದಂಡವಿದ್ದಿತು. ಮಧುಪಾನದಿಂದ ಮತ್ತರಾಗಿದ್ದ ಅಂತಃಪುರಸ್ತ್ರೀಯರ ಕಣ್ಣುಗಳು ನಿದ್ರೆಯಿಂದ ಭ್ರಮಿಸುತ್ತಿದ್ದುವು. ಕೋಲುಮಿಂಚುಗಳು ಮೋಡ ವನ್ನು ಅನುಸರಿಸಿ ಹೋಗುವಂತೆ–ಅಂತಃಪುರದ ಸ್ತ್ರೀಯರು ರಾವಣೇಶ್ವರ ನನ್ನು ಅನುಸರಿಸಿ ಹೋಗುತ್ತಿದ್ದರು. ಆಗತಾನೇ ನಿದ್ರೆಯಿಂದ ಎಚ್ಚೆತ್ತು ಬಂದಿದ್ದ ಆ ಪ್ರಮದೆಯರ ಹಾರ-ಕೇಯೂರಗಳು ಅಸ್ತವ್ಯಸ್ತವಾಗಿದ್ದುವು. ಅಂಗರಾಗಗಳೆಲ್ಲವೂ ಅಳಿಸಿಹೋಗಿದ್ದುವು. ತಲೆಗೂದಲು ಕೆದರಿಹೋಗಿದ್ದಿತು. ಮುಖಗಳಲ್ಲಿ ಬೆವರು ತುಂಬಿದ್ದಿತು. ಸುಂದರಮುಖಿಯರಾಗಿದ್ದ ಅವರು ಪೂರ್ತಿ ಇಳಿಯದ ಮಧುವಿನ ಮತ್ತಿನಿಂದಲೂ, ನಿದ್ರೆಯಿಂದಲೂ ತತ್ತರಿಸು ತ್ತಿದ್ದರು. ಅವರು ಹಾಕಿಕೊಂಡಿದ್ದ ಹಾರಗಳು ಬೆವರಿನಿಂದ ಬಾಡಿಹೋಗಿ

ದ್ದುವು. ಹೂವಿನ ಗುಚ್ಛದಿಂದ ಕೂಡಿದ್ದ ಅವರ ಕೇಶರಾಶಿಯು ಕೆದರಿ ಹೋಗಿದ್ದಿತು. ಕಣ್ಣುಗಳು ಎಂತಹವರನ್ನೂ ವಿಮೋಹಗೊಳಿಸುತ್ತಿದ್ದುವು. ಹಾಗಿದ್ದ ರಾವಣನ ಪ್ರಿಯಭಾರ್ಯೆಯರು ರಾವಣನನ್ನು ಗೌರವಿಸುವ ಸಲುವಾಗಿಯೂ, ಸೀತೆಯನ್ನು ನೋಡಬೇಕೆನ್ನುವ ಬಯಕೆಯಿಂದಲೂ ರಾವಣನ ಹಿಂದೆ ಹೋಗುತ್ತಿದ್ದರು. ಆ ವರನಾರಿಯರ ಪತಿಯಾದ ರಾವಣನು ಕಾಮವಶನಾಗಿದ್ದನು ; ಮೂಢನಾಗಿದ್ದನು. ಸೀತೆಯಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿ ಮಂದಗತಿಯಿಂದ ಮುನ್ನೆಡೆಯುತ್ತಿದ್ದು ಪ್ರಕಾಶಮಾನನಾಗಿ ಕಾಣುತ್ತಿದ್ದನು. ಶಿಂಶುಪಾವೃಕ್ಷದಲ್ಲಿ ಅಡಗಿಕೊಂಡಿದ್ದ ವಾಯುಪುತ್ರನಾದ ಹನುಮಂತನು ಶ್ರೇಷ್ಠರಾದ ಆ ರಾವಣನ ಭಾರ್ಯೆಯರ ಒಡ್ಯಾಣಗಳ ಮತ್ತು ಕಾಲಂದುಗೆಗಳ ಧ್ವನಿಯನ್ನು ಕೇಳಿದನು. ಅಂತೆಯೇ ಅವರ ಜೊತೆಯಲ್ಲಿ ಅಶೋಕವನದ ದ್ವಾರದೇಶದ ಬಳಿಗೆ ಬಂದ ರಾವಣನನ್ನೂ ನೋಡಿದನು. ರಾವಣನು ಇತರರಿಂದ ಊಹಿಸಲು ಕೂಡ ಸಾಧ್ಯವಾಗದಷ್ಟು ಬಲ-ಪೌರುಷಗಳನ್ನು ಹೊಂದಿದ್ದನು. ಅಸದೃಶವಾದ ಸಾಹಸಕಾರ್ಯಗಳನ್ನು ಮಾಡಿದ್ದನು. ಅವನ ಮುಂದೆ ಶ್ರೇಷ್ಠರಾದ ಸ್ತ್ರೀಯರು ಸುಗಂಧಯುಕ್ತವಾದ ಎಣ್ಣೆಯಿಂದ ನೆನೆಸಿದ ಅನೇಕ ದೀವಟಿಗೆಗಳನ್ನು ಒಯ್ಯುತ್ತಿದ್ದರು. ಆ ದೀಪಗಳ ಬೆಳಕಿನಿಂದ ರಾವಣನು ಅತ್ಯಂತಪ್ರಕಾಶಮಾನವಾಗಿ ಕಾಣುತ್ತಿದ್ದನು. ಕಾಮ-ಮದ-ದರ್ಪಗಳಿಂದ ಕೂಡಿದ್ದನು. ಅವನ ಕಣ್ಣುಗಳು ಕೆಂಪಾಗಿಯೂ, ವಿಶಾಲವಾಗಿಯೂ, ವಕ್ರವಾಗಿಯೂ ಇದ್ದುವು. ಕುಸುಮಚಾಪವನ್ನು ತೊರೆದು ಪ್ರತ್ಯಕ್ಷವಾಗಿ ಕಾಣಿಸಿಕೊಂಡ ಕಾಮದೇವನಂತೆಯೇ ಕಾಣುತ್ತಿದ್ದನು. ಹಾಲನ್ನು ಕಡೆದಾಗ ಹೊರಬರುವ ನೊರೆಯಂತೆ ಬಿಳುಪಾದ, ಶುಭ್ರವಾದ ಮತ್ತು ಶ್ರೇಷ್ಠವಾದ ವಸ್ತ್ರಗಳನ್ನುಟ್ಟಿದ್ದು ಪುಷ್ಪಮಾಲೆಗಳಿಂದ ಸಮಲಂಕೃತನಾಗಿದ್ದನು. ತನ್ನ ಜಾಗದಿಂದ ಜಾರಿ ತೋಳಂದಿಗೆಯಲ್ಲಿ ಸಿಕ್ಕಿಹಾಕಿಕೊಂಡಿದ್ದ ಮೇಲುವಸ್ತ್ರವನ್ನು ಮೇಲಕ್ಕೆ ಸೆಳೆದುಕೊಳ್ಳುತ್ತಿದ್ದನು. ನೂರಾರು ಎಲೆಗಳಿಂದಲೂ, ಪುಷ್ಪಗಳಿಂದಲೂ ಸಮಾವೃತನಾಗಿ ಎಲೆಗಳಿಂದ ಸಮೃದ್ಧವಾಗಿದ್ದ ಶಿಂಶುಪಾವೃಕ್ಷದಲ್ಲಿ ಅಡಗಿ ಕುಳಿತಿದ್ದ ಹನುಮಂತನು ಆ ವೇಳೆಯಲ್ಲಿ ಹತ್ತಿರ ಬರುತ್ತಿರುವವನು ಯಾರಿರಬಹುದೆಂದು ಜಿಜ್ಞಾಸೆಮಾಡತೊಡಗಿದನು. ಹಾಗೆಯೇ ರಾವಣನ ಕಡೆಗೆ ನೋಡುತ್ತಿದ್ದಾಗ ಹಿಂಬಾಲಿಸಿ ಬರುತ್ತಿದ್ದ ರೂಪ-ಯೌವನಸಂಪನ್ನೆಯರಾದ

ಶ್ರೇಷ್ಠರಾದ ರಾವಣನ ಭಾರ್ಯೆಯರನ್ನೂ ನೋಡಿದನು. ಹೀಗೆ ಕಡು ಚೆಲುವೆಯರಾಗಿದ್ದ ಆ ವರನಾರಿಯರಿಂದ ಪರಿವೃತನಾಗಿದ್ದ ಮಹಾಯಶಸ್ವಿಯಾದ ರಾಕ್ಷಸೇಶ್ವರನು ಮೃಗ-ಪಕ್ಷಿಗಳಿಂದ ನಿನಾದಿತವಾಗಿದ್ದ ಪ್ರಮದೆಯರ ಕ್ರೀಡಾವನವೆಂದು ಪ್ರಸಿದ್ಧವಾಗಿದ್ದ ಅಶೋಕವನಕ್ಕೆ ಬಂದನು. ಆ ಸಮಯದಲ್ಲಿ ವಿಚಿತ್ರವಾದ ಆಭರಣಗಳನ್ನು ಧರಿಸಿದ್ದ ರಾವಣನು ಮದೋನ್ಮತ್ತನಾಗಿದ್ದನು. ಗೂಟದಂತಹ ಕಿವಿಗಳನ್ನು ಹೊಂದಿದ್ದನು. ವಿಶ್ರವಸನ ಮಗನಾದ ರಾಕ್ಷಸರ ಅಧಿಪತಿಯಾದ ರಾವಣನು ಮಹಾಬಲಿಷ್ಠನಾಗಿದ್ದನು. ತಾರೆಗಳಿಂದ ಸುತ್ತುವರಿಯಲ್ಪಟ್ಟ ಚಂದ್ರನಂತೆ ವರನಾರಿಯರಿಂದ ಸುತ್ತುವರಿಯಲ್ಪಟ್ಟಿದ್ದ ತೇಜೋವಿಶಿಷ್ಟನಾಗಿದ್ದ ಆ ರಾವಣೇಶ್ವರನನ್ನು, ಮಹಾತೇಜಸ್ವಿಯಾದ ಕಪೀಶ್ವರನಾದ ಹನುಮಂತನು ಶಿಂಶುಪಾವೃಕ್ಷದ ಎಲೆಗಳ ಮರೆಯಲ್ಲಿದ್ದುಕೊಂಡೇ ನೋಡಿದನು. **'ರಾವಣೋಽಯಂ ಮಹಾಬಾಹುಃ'** 'ಮಹಾಬಾಹುವಾದ ರಾವಣನು ಇವನೇ' **'ಸೋಽಯಮೇವ ಪುರಾ ಶೇತೇ ಪುರಮಧ್ಯೇ ಗೃಹೋತ್ತಮೇ'**–'ಹಿಂದೆ ಲಂಕಾಪಟ್ಟಣದ ಮಧ್ಯದಲ್ಲಿದ್ದ ಶ್ರೇಷ್ಠವಾದ ಅರಮನೆಯಲ್ಲಿ ಮಲಗಿದ್ದವನೂ ಇವನೇ'–ಎಂಬುದಾಗಿ ನಿಶ್ಚಯಿಸಿ ತಾನಿದ್ದ ರೆಂಬೆಯಿಂದ ಕೆಳಗಿನ ರೆಂಬೆಗೆ ಧುಮುಕಿದನು.* ಹನುಮಂತನು ಬುದ್ಧಿವಂತನು ; ಮಹಾಮೇಧಾವಿಯು. ತೀಕ್ಷ್ಣವಾದ ತೇಜಸ್ಸುಳ್ಳವನು. ಆದರೂ ರಾವಣನ ರಾಕ್ಷಸೀಯ ಮಹಾತೇಜಸ್ಸಿನಿಂದ ನಡುಗುತ್ತಾ ಗುಹೆಯಂತಿದ್ದ ಎಲೆಗಳ ಮಧ್ಯದಲ್ಲಿಯೇ ಪುನಃ ಉಡುಗಿದನು.

ಸೀತೆಯ ತಲೆಗೂದಲಿನ ತುದಿಯು ಕಪ್ಪಾಗಿದ್ದಿತು. ಆಕೆಯು ಸುಂದರವಾದ ಕಟಿಪ್ರದೇಶವನ್ನು ಹೊಂದಿದ್ದಳು. ಅವಳ ಸ್ತನಗಳು ಒಂದಕ್ಕೊಂದಕ್ಕೆ ಸೇರಿಕೊಂಡಿರುವಂತೆ ಕಾಣುತ್ತಿದ್ದುವು. ಓರೆಗಣ್ಣುಗಳು ಕಪ್ಪಾಗಿದ್ದುವು. ಅಂತಹ ಚೆಲುವೆಯನ್ನು ನೋಡುವ ಬಯಕೆಯಿಂದಲೇ ರಾವಣನು ಅಲ್ಲಿಗೆ ಆಗಮಿಸಿದನು.

ಹದಿನೆಂಟನೆಯ ಸರ್ಗವು ಮುಗಿಯಿತು.

---

* ಸೀತೆಯ ವಿಷಯದಲ್ಲಿ ರಾವಣನ ವ್ಯವಹಾರವನ್ನು ಚೆನ್ನಾಗಿ ವೀಕ್ಷಿಸಲು ಹನುಮಂತನು ಮೇಲಿನ ಕೊಂಬೆಯಿಂದ ಕೆಳಗಿನ ಕೊಂಬೆಗೆ ಹಾರಿದನು.

## ರಾವಣನನ್ನು ನೋಡಿ ದುಃಖ-ಭಯ ಮತ್ತು ಚಿಂತೆಗಳಲ್ಲಿ ಮಗ್ನಳಾದ ಸೀತಾದೇವಿಯ ಸ್ವರೂಪವರ್ಣನೆ

**ತಸ್ಮಿನ್ನೇವ ತತಃ ಕಾಲೇ ರಾಜಪುತ್ರೀ ತ್ವನಿನ್ದಿತಾ ।**
**ರೂಪಯೌವನಸಂಪನ್ನಂ ಭೂಷಣೋತ್ತಮಭೂಷಿತಮ್ ॥೧॥**

**ತತೋ ದೃಷ್ಟ್ವೈವ ವೈದೇಹೀ ರಾವಣಂ ರಾಕ್ಷಸಾಧಿಪಮ್ ।**
**ಪ್ರಾವೇಪತ ವರಾರೋಹಾ ಪ್ರವಾತೇ ಕದಲೀ ಯಥಾ ॥೨॥**

ಅದೇ ಸಮಯಕ್ಕೆ ಸರಿಯಾಗಿ ಶ್ರೇಷ್ಠವಾದ ಅವಯವಗಳಿಂದ ಕೂಡಿದ್ದ, ನಿಷ್ಕಳಂಕಿನಿಯಾದ, ರಾಜಪುತ್ರಿಯಾದ ವೈದೇಹಿಯು, ರೂಪ-ಯೌವನಸಂಪನ್ನನಾಗಿದ್ದ, ಉತ್ತಮಾಭರಣಗಳಿಂದ ಸಮಲಂಕೃತನಾಗಿದ್ದ, ರಾಕ್ಷಸಾಧಿಪತಿಯಾದ ರಾವಣನನ್ನು ನೋಡಿ ಬಿರುಗಾಳಿಗೆ ಸಿಕ್ಕಿದ ಬಾಳೆಯ ಕಂದಿನಂತೆ ನಡುಗತೊಡಗಿದಳು.

ವರವರ್ಣಿನಿಯಾದ ವಿಶಾಲಾಕ್ಷಿಯಾದ ಸೀತಾದೇವಿಯು ರಾವಣನನ್ನು ಕಾಣುತ್ತಲೇ ತೊಡೆಗಳಿಂದ ಹೊಟ್ಟೆಯನ್ನೂ-ತೋಳುಗಳಿಂದ ಸ್ತನಗಳನ್ನೂ ಮುಚ್ಚಿಕೊಂಡು ಅಳತೊಡಗಿದಳು.

ಆ ಸಮಯದಲ್ಲಿ ವೈದೇಹಿಯು ಮಹಾಸಮುದ್ರದಲ್ಲಿ ಮುಳುಗಿಹೋಗುತ್ತಿರುವ ನೌಕೆಯೋಪಾದಿಯಲ್ಲಿ ಶೋಕಸಾಗರದಲ್ಲಿ ಮುಳುಗಿಹೋಗಿದ್ದಳು. ದುಃಖಪೀಡಿತೆಯಾಗಿ ದೀನಳಾಗಿ ರಾಕ್ಷಸಿಯರಿಂದ ಸುತ್ತುವರಿಯಲ್ಪಟ್ಟಿದ್ದಳು. ಇಂತಹ ಸ್ಥಿತಿಯಲ್ಲಿದ್ದ ವೈದೇಹಿಯನ್ನು ರಾವಣನು ನೋಡಿದನು.

ಸೀತಾದೇವಿಯು ಕತ್ತರಿಸಿ ಕೆಳಕ್ಕೆ ಹಾಕಿದ ಮರದ ಕೊಂಬೆಯಂತಿದ್ದಳು. ಯಾವುದೇ ವಿಧವಾದ ಆಸನವೂ ಇಲ್ಲದೇ ನೆಲದ ಮೇಲೆ ಕುಳಿತಿದ್ದಳು. ಕಠೋರವ್ರತನಿಷ್ಠಳಾಗಿದ್ದಳು. ಧೂಳಿನ ರೂಪವಾದ ಆಭರಣದಿಂದಲೇ ಅವಳ ಶರೀರವು ಅಲಂಕೃತವಾಗಿದ್ದಿತು. ಆಭರಣಾದಿಗಳಿಂದ ಅಲಂಕರಿಸಿಕೊಳ್ಳಲು ಯೋಗ್ಯಳಾಗಿದ್ದರೂ ಅವುಗಳಿಂದ ರಹಿತಳಾಗಿದ್ದಳು. ಕೆಸರಿನಿಂದ ಯುಕ್ತವಾದ ಕಮಲದಂತೆ ಪ್ರಕಾಶಮಾನಳಾಗಿಯೂ ಅಪ್ರಕಾಶಮಾನಳಾಗಿಯೂ ಇದ್ದಳು.

ಸಂಕಲ್ಪರೂಪವಾದ ಕುದುರೆಗಳಿಂದ ಕೂಡಿರುವ ಮನೋರೂಪವಾದ ರಥದ ಮೂಲಕವಾಗಿ ಸುಪ್ರಸಿದ್ಧನಾದ, ರಾಜಸಿಂಹನಾದ ಶ್ರೀರಾಮನ ಬಳಿಗೆ ಹೋಗುತ್ತಿರುವಳೋ ಎಂಬಂತೆ ಕಾಣುತ್ತಿದ್ದಳು. ಏಕಾಕಿನಿಯಾಗಿ ಕುಳಿತು ರೋದನಮಾಡುತ್ತಿದ್ದಳು. ಸದಾ ಶ್ರೀರಾಮನನ್ನೇ ಧ್ಯಾನಿಸುತ್ತಾ ಶೋಕಪಡುತ್ತಿದ್ದಳು. ದುಃಖದ ಪಾರವನ್ನೇ ಕಾಣದವಳಾಗಿದ್ದು ಆ ಕಾರಣ ದಿಂದಲೇ ಅವಳು ಅತ್ಯಂತಕೃಶಳೂ, ಶ್ರೀರಾಮನಲ್ಲಿಯೇ ನೆಟ್ಟುಹೋದ ಮನಸ್ಸುಳ್ಳವಳೂ ಆಗಿದ್ದಳು. ಆದರೂ ಸೌಂದರ್ಯದಿಂದ ಅತಿಶಯಿಸಿದ್ದಳು. ಮಂತ್ರದಿಂದ ಬಂಧಿಸಲ್ಪಟ್ಟು ಚಡಪಡಿಸುವ ಹೆಣ್ಣುಸರ್ಪದಂತೆ ರಾವಣನಿಂದ ಬಂಧಿಸಲ್ಪಟ್ಟು ಚಡಪಡಿಸುತ್ತಿದ್ದಳು. ಧೂಮಕೇತುವಿನಿಂದ ಸಂತಾಪಗೊಳಿಸಲ್ಪಡುವ ರೋಹಿಣಿಯಂತೆ ಪರಿತಪಿಸುತ್ತಿದ್ದಳು. ಅವಳು ಹುಟ್ಟಿದ್ದ ಕುಲವು ಯಜ್ಞ-ದಾನಾದಿ ಧಾರ್ಮಿಕಕ್ರಿಯೆಗಳಿಂದ ಸಂಪನ್ನವಾಗಿದ್ದಿತು. ಸದಾಚಾರಯುಕ್ತವಾಗಿ ಚಾರಿತ್ರ್ಯದಿಂದಲೂ ಶೋಭಿಸುತ್ತಿದ್ದಿತು. ಜಾನಕಿಯು ಅಂತಹ ಮಹಾಕುಲಪ್ರಸೂತೆಯಾಗಿದ್ದಳು. ವಿವಾಹಸಂಸ್ಕಾರದಿಂದ ಸಂಸ್ಕೃತಳಾಗಿದ್ದಳು. ಅಂತಹವಳೀಗ ಮಲಿನವಾದ ಶರೀರದಿಂದಲೂ ವಸ್ತ್ರದಿಂದಲೂ ಕೂಡಿದ್ದು ದುಷ್ಕುಲದಲ್ಲಿ ಹುಟ್ಟಿದವಳೋ ಎಂಬಂತೆ ಕಾಣುತ್ತಿದ್ದಳು.*

**ಅಭೂತೇನಾಪವಾದೇನ ಕೀರ್ತಿಂ ನಿಪತಿತಾಮಿವ |**
**ಆಮ್ನಾಯಾನಾಮಯೋಗೇನ ವಿದ್ಯಾಂ ಪ್ರಶಿಥಿಲಾಮಿವ ||೧೧||**

ಇಲ್ಲದಿರುವ ದೋಷಾರೋಪಣೆಯ ಕಾರಣದಿಂದ ಕಳೆದುಹೋದ ಕೀರ್ತಿಯಂತೆಯೂ, ಚೆನ್ನಾಗಿ ಅಭ್ಯಾಸಮಾಡದ ಕಾರಣ ಶಿಥಿಲವಾದ (ಮರೆತುಹೋದ) ವಿದ್ಯೆಯಂತೆಯೂ ಕಾಣುತ್ತಿದ್ದಳು.

---

* ಪುನಃ ಸಂಸ್ಕಾರಮಾಪನ್ನಂ –ಪುನಃ ಸಂಸ್ಕಾರವೆಂದರೆ ವಿವಾಹಕರ್ಮವೆಂದು ಎಲ್ಲ ವ್ಯಾಖ್ಯಾನಕಾರರೂ ಅರ್ಥಮಾಡಿರುತ್ತಾರೆ. ಬಾಲಕರಿಗೆ ಉಪನಯನಸಂಸ್ಕಾರದಂತೆ ಬಾಲಕಿಯರಿಗೆ ವಿವಾಹಸಂಸ್ಕಾರವಾಗಬೇಕು. ಅದೇ ಅವರಿಗೆ ಎರಡನೆಯ ಜನ್ಮ ಅಥವಾ ದ್ವಿಜತ್ವ. ವೈವಾಹಿಕೋ ವಿಧಿಃ ಸ್ತ್ರೀಣಾಮೌಪನಾಯನಿಕಃ ಸ್ಮೃತಃ || ಸ್ತ್ರೀಯರಿಗೆ ವಿವಾಹವಿಧಿಯು ಬಾಲಕರ ಉಪನಯನಸಂಸ್ಕಾರಕ್ಕೆ ಸಮಾನವಾದುದೆಂದು ಸ್ಮೃತಿಯಲ್ಲಿ ಹೇಳಿದೆ.

ಕ್ಷೀಣಿಸಿದ ಮಹಾಕೀರ್ತಿಯಂತೆಯೂ, ಅವಮಾನದಿಂದ ಶಿಥಿಲವಾದ ಶ್ರದ್ಧೆಯಂತೆಯೂ, ಕ್ಷೀಣಿಸಿದ ಪ್ರಜ್ಞೆಯಂತೆಯೂ, ವ್ಯರ್ಥವಾಗಿ ಹೋದ ಆಸೆಯಂತೆಯೂ ಕಾಣುತ್ತಿದ್ದಳು. ನಷ್ಟವಾಗಿ ಹೋದ ಭವಿಷ್ಯತ್ಕಾಲ ದಂತೆಯೂ, ತಡೆಗಟ್ಟಲ್ಪಟ್ಟ ರಾಜಾಜ್ಞೆಯಂತೆಯೂ, ಉತ್ಪಾತದ ಸಮಯ ದಲ್ಲಿ ದೇದೀಪ್ಯಮಾನವಾಗಿ ಕಾಣುವ ದಿಕ್ಕಿನಂತೆಯೂ, ನಾಶಗೊಳಿಸಲ್ಪಟ್ಟ ಪೂಜೆಯಂತೆಯೂ ಕಾಣುತ್ತಿದ್ದಳು. ರಾಹುಗ್ರಸ್ತವಾದ ಚಂದ್ರಮಂಡಲವಿರುವ ಹುಣ್ಣಿಮೆಯ ರಾತ್ರಿಯಂತೆಯೂ, ಉದುರಿಹೋದ ದಳಗಳುಳ್ಳ ಕಮಲದಂತೆಯೂ, ಶೂರರನ್ನು ಕಳೆದುಕೊಂಡ ಸೈನ್ಯದಂತೆಯೂ ಕಾಣು ತ್ತಿದ್ದಳು. ಕತ್ತಲೆಯಿಂದ ವಿನಾಶಗೊಳಿಸಲ್ಪಟ್ಟ ಪ್ರಭೆಯಂತೆಯೂ, ಬತ್ತಿ ಹೋದ ನದಿಯಂತೆಯೂ, ಅಯೋಗ್ಯರಿಂದ ಅಪವಿತ್ರಗೊಳಿಸಲ್ಪಟ್ಟ ಯಜ್ಞವೇದಿಯಂತೆಯೂ, ಆರಿಹೋದ ಅಗ್ನಿಯ ಜ್ವಾಲೆಯಂತೆಯೂ ಸೀತಾದೇವಿಯು ಕಾಣುತ್ತಿದ್ದಳು. ಆನೆಯ ಸೊಂಡಿಲಿನಿಂದ ಕಿತ್ತುಹಾಕಲ್ಪಟ್ಟ ಕಮಲ ಮತ್ತು ಕಮಲದೆಲೆಗಳುಳ್ಳ, ಅದರಿಂದಲೇ ಭಯಗೊಳಿಸಲ್ಪಟ್ಟ ನೀರುಪಕ್ಷಿಗಳುಳ್ಳ, ಅಲ್ಲೋಲಕಲ್ಲೋಲವಾದ ಸರೋವರದಂತೆ ಕಾಣು ತ್ತಿದ್ದಳು. ತೀರಪ್ರದೇಶವು ಕೊಚ್ಚಿಹೋಗಿ ಪ್ರವಾಹವು ಬೇರೆಯ ಕಡೆಗೆ ಹರಿದುಹೋದ ಕಾರಣ ಒಣಗಿಹೋದ ನದಿಯಂತೆ ಸೀತಾದೇವಿಯು ಕಾಣುತ್ತಿದ್ದಳು. ಸ್ನಾನಾದಿಗಳಿಲ್ಲದೆ ಮಲಿನಳಾಗಿದ್ದಳು. ಪತಿಯನ್ನಗಲಿದ ಶೋಕದಿಂದ ಕಂಗೆಟ್ಟವಳಾಗಿ ಕೃಷ್ಣಪಕ್ಷದ ರಾತ್ರಿಯಂತೆ ಕಾಣುತ್ತಿದ್ದಳು. ರತ್ನ ಗಳಿಂದ ತುಂಬಿರುವ ಅರಮನೆಯಲ್ಲಿರಲು ಯೋಗ್ಯಳಾಗಿದ್ದ, ಸುಕುಮಾರಿ ಯಾದ, ಸುಂದರಾಂಗಿಯಾದ ಸೀತಾದೇವಿಯು ಆಗತಾನೇ ಕಿತ್ತುಹಾಕಿ ಬಿಸಿಲಿನಲ್ಲಿ ಬಾಡಿಹೋದ ತಾವರೆಯ ಬಳ್ಳಿಯಂತೆ ಕಾಣುತ್ತಿದ್ದಳು. ಹಿಡಿದು ಕಂಬಕ್ಕೆ ಕಟ್ಟಿಹಾಕಲ್ಪಟ್ಟು, ಗಂಡಾನೆಯಿಂದ ಬೇರ್ಪಟ್ಟ ಹೆಣ್ಣಾನೆಯಂತೆ ದುಃಖಪೀಡಿತಳಾಗಿ ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದಳು. ಮೋಡವಿಲ್ಲದ ಸಮಯದಲ್ಲಿ ನೀಲವರ್ಣದ ವನಶ್ರೀಯಿಂದ ಶೋಭಿಸುವ ಭೂದೇವಿಯಂತೆ ಸೀತಾದೇವಿಯು ಹೆಣೆಯಲ್ಪಡದ ನೀಳವಾದ ಒಂದೇ ಜಡೆಯಿಂದ ಕೂಡಿದ್ದು ಕೇಶಸಂಸ್ಕಾರವಿಲ್ಲದೆಯೇ ಶೋಭಾಯಮಾನಳಾಗಿ ಕಾಣುತ್ತಿದ್ದಳು.

**ಉಪವಾಸೇನ ಶೋಕೇನ ಧ್ಯಾನೇನ ಚ ಭಯೇನ ಚ ।**
**ಪರಿಕ್ಷೀಣಾಂ ಕೃಶಾಂ ದೀನಾಮಲ್ಪಾಹಾರಾಂ ತಪೋಧನಾಮ್ ॥**

ಉಪವಾಸದಿಂದಲೂ, ಶೋಕದಿಂದಲೂ, ಚಿಂತೆಯಿಂದಲೂ, ಭಯದಿಂದಲೂ ಬಹಳವಾಗಿ ಕ್ಷೀಣಿಸಿದ್ದಳು. ಆದುದರಿಂದಲೇ ಬಹಳ ಕೃಶಳಾಗಿದ್ದಳು. ದೀನೆಯಾಗಿದ್ದಳು. ಪ್ರಾಣಧಾರಣೆಗಾಗಿ ಸ್ವಲ್ಪವೇ ಆಹಾರವನ್ನು ಸೇವಿಸುತ್ತಿದ್ದಳು. ತಪೋಧನಳಾಗಿದ್ದಳು.* ದುಃಖಪೀಡಿತಳಾಗಿದ್ದ ಸೀತಾದೇವಿಯು ಶ್ರೀರಾಮಚಂದ್ರನ ಮೂಲಕ ರಾವಣನ ಪರಾಜಯವಾಗುವಂತೆ ಕೈಮುಗಿದುಕೊಂಡು ತನ್ನ ಕುಲದೇವತೆಯನ್ನು ಭಕ್ತಿಭಾವದಿಂದ ಯಾಚಿಸುತ್ತಿರುವಳೋ ಎಂಬಂತೆ ಕಾಣುತ್ತಿದ್ದಳು.

ಸೀತಾದೇವಿಯು ರಕ್ಷಕನಿಗಾಗಿ ಅತ್ತಲಿತ್ತ ಗಮನವಿಟ್ಟು ನೋಡುತ್ತಾ ರೋದನಮಾಡುತ್ತಿದ್ದಳು. ನಿಷ್ಕಲ್ಮಷಳಾಗಿದ್ದಳು. ಸುಂದರವಾದ ರೆಪ್ಪೆಗಳಿಂದ ಶೋಭಿಸುತ್ತಿದ್ದು ವಿಶಾಲವಾಗಿಯೂ, ಕೆಂಪಾಗಿಯೂ, ಬಿಳುಪಾಗಿಯೂ ಇದ್ದ ಕಣ್ಣುಗಳನ್ನು ಹೊಂದಿದ್ದಳು. ಶ್ರೀರಾಮನ ವಿಷಯದಲ್ಲಿ ಹೆಚ್ಚು ಅನುರಕ್ತಳಾಗಿದ್ದಳು. ಅಂತಹ ಪತಿವ್ರತಾಶಿರೋಮಣಿಯಾದ ವೈದೇಹಿಯನ್ನು ರಾವಣನು ತನ್ನ ವಿನಾಶಕ್ಕಾಗಿಯೇ ಪ್ರಲೋಭನಗೊಳಿಸಲು ಉಪಕ್ರಮಿಸಿದನು.

೧೯ನೆಯ ಸರ್ಗವು ಮುಗಿಯಿತು.

---

* ಅಲ್ಪಾಹಾರವೆಂಬುದಕ್ಕೆ ಒಬ್ಬರು ವ್ಯಾಖ್ಯಾನಕಾರರು ಸ್ನಾನವನ್ನು ಮಾಡದೇ ಇದ್ದುದರಿಂದ ಜಲಾಹಾರವನ್ನು ಮಾತ್ರ ಸೇವಿಸುತ್ತಿದ್ದಳೆಂದೂ, ದೇವರಾಜನು ಪಾಯಸವನ್ನು ಕೊಟ್ಟುದರಿಂದ ಆಹಾರದ ಅವಶ್ಯಕತೆಯೇ ಇರಲಿಲ್ಲವೆಂದೂ–ಮತ್ತೊಬ್ಬರು ಅಲ್ಪವೆಂಬುದಕ್ಕೆ ಸೂಕ್ಷ್ಮವೆಂಬ ಅರ್ಥವನ್ನು ಮಾಡಿ ಸೂಕ್ಷ್ಮಪದಕ್ಕೆ ವಾಯುವೆಂದು ಅರ್ಥೈಸಿ ವಾಯುವೇ ಆಹಾರವುಳ್ಳವಳಾಗಿದ್ದಳೆಂದೂ ಅರ್ಥಮಾಡಿರುತ್ತಾರೆ. ಈ ಕಾರಣದಿಂದಲೇ ಅವಳು ತಪೋಧನಳಾಗಿದ್ದಳೆಂಬುದನ್ನು ತಪೋಧನಾಂ ಎಂಬ ವಿಶೇಷವೂ ಸೂಚಿಸುತ್ತದೆ. ಅಲ್ಪಾಹಾರವೆಂದರೆ ಮಿತಭೋಜನ. ಮಿತಭೋಜನವು ಉತ್ತಮಸ್ತ್ರೀಯ ಲಕ್ಷಣವೆಂಬುದು ಮತ್ತೊಬ್ಬರ ಅಭಿಪ್ರಾಯವಾಗಿದೆ.

## ರಾವಣನು ಸೀತಾದೇವಿಯನ್ನು ಪ್ರಲೋಭನಗೊಳಿಸಲು ಪ್ರಯತ್ನಿಸಿದುದು

**ಸ ತಾಂ ಪತಿವ್ರತಾಂ ದೀನಾಂ ನಿರಾನನ್ದಾಂ ತಪಸ್ವಿನೀಮ್ ।**
**ಸಾಕಾರೈರ್ಮಧುರೈರ್ವಾಕ್ಯೈರ್ನ್ಯದರ್ಶಯತ ರಾವಣಃ ॥೧॥**

ರಾಕ್ಷಸಿಯರಿಂದ ಪರಿವೃತಳಾಗಿದ್ದ, ಆನಂದಶೂನ್ಯಳಾಗಿದ್ದ, ದೀನಳಾಗಿದ್ದ, ತಪಸ್ವಿನಿಯಾದ, ಪತಿವ್ರತೆಯಾದ ಸೀತಾದೇವಿಗೆ ರಾವಣನು ಅಭಿಪ್ರಾಯಯುಕ್ತವಾದ ಸುಮಧುರವಾದ ಮಾತುಗಳಿಂದ ತನ್ನ ಆಶಯವನ್ನು ವ್ಯಕ್ತಪಡಿಸತೊಡಗಿದನು :

"ಆನೆಯ ಸೊಂಡಿಲಿನಂತಹ ತೊಡೆಗಳುಳ್ಳವಳೇ! ನನ್ನನ್ನು ನೋಡಿದೊಡನೆಯೇ ಭಯದಿಂದ ತೋಳುಗಳಿಂದ ಸ್ತನಗಳನ್ನೂ-ತೊಡೆಗಳಿಂದ ಹೊಟ್ಟೆಯನ್ನೂ ಮುಚ್ಚಿಕೊಳ್ಳುತ್ತಾ ನಿನ್ನ ದೇಹವನ್ನು ನನಗೆ ತೋರಿಸಲೇ ಬಾರದೆಂದು ಅಪೇಕ್ಷಿಸುತ್ತಿರುವೆಯಾ?

ವಿಶಾಲಾಕ್ಷಿಯೇ! ಸುಂದರವಾದ ಸರ್ವಾಂಗಗಳಿಂದ ಸಂಪನ್ನಳಾಗಿರುವವಳೇ! ಸರ್ವಲೋಕಮನೋಹಾರಿಣಿಯೇ! ಪ್ರಿಯಳೇ! ನಿನ್ನನ್ನು ಕಾಮಿಸಿ ಬಂದಿರುವೆನು. ನನ್ನನ್ನು ಯಥೋಚಿತವಾಗಿ ಗೌರವಿಸು. ಇಲ್ಲಿ ಬೇರೆ ಯಾವ ಮನುಷ್ಯರಾಗಲೀ ಕಾಮರೂಪಿಗಳಾದ ರಾಕ್ಷಸರಾಗಲೀ ಇಲ್ಲ. ನನ್ನಿಂದ ನಿನಗೇನಾದರೂ ಭಯವಿದ್ದರೆ ಅದನ್ನು ಸಂಪೂರ್ಣವಾಗಿ ದೂರಮಾಡು.

**ಸ್ವಧರ್ಮೋ ರಕ್ಷಸಾಂ ಭೀರು ಸರ್ವಥೈವ ನ ಸಂಶಯಃ ।**
**ಗಮನಂ ವಾ ಪರಸ್ತ್ರೀಣಾಂ ಹರಣಂ ಸಂಪ್ರಮಥ್ಯ ವಾ ॥೫॥**

ಭಯಗ್ರಸ್ತಳೇ! ಪರಸ್ತ್ರೀಗಮನವಾಗಲೀ, ಸ್ತ್ರೀಯರನ್ನು ಬಲಾತ್ಕಾರಪೂರ್ವಕವಾಗಿ ಅಪಹರಿಸುವುದಾಗಲೀ-ರಾಕ್ಷಸರಿಗೆ ಸರ್ವಪ್ರಕಾರದಲ್ಲಿಯೂ ಸ್ವಧರ್ಮವೇ ಆಗಿದೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಹೀಗಿದ್ದರೂ ನನ್ನನ್ನು ಕಾಮಿಸದೇ ಇರುವುದರಿಂದ ನಿನ್ನನ್ನು ಮುಟ್ಟುತ್ತಿಲ್ಲ. ನನ್ನ ಶರೀರದಲ್ಲಿರುವ ಕಾಮದೇವನು ತನಗೆ ಇಚ್ಛೆಬಂದಂತೆ ನಡೆದು

ಕೊಳ್ಳಲಿ. ನಾನು ಕಾಮದೇವನಿಂದ ಅನವರತವಾಗಿ ಪೀಡಿಸಲ್ಪಡುತ್ತಿದ್ದರೂ ನಿನ್ನನ್ನು ಬಲಾತ್ಕರಿಸುವುದು ರಾಕ್ಷಸರ ದೃಷ್ಟಿಯಲ್ಲಿ ಅಧರ್ಮವಲ್ಲದಿದ್ದರೂ ನಿನ್ನನ್ನು ನಾನು ಸ್ಪರ್ಶಿಸುತ್ತಿಲ್ಲ.



ಪ್ರಿಯಳೇ! ನನ್ನಲ್ಲಿ ವಿಶ್ವಾಸವನ್ನಿಡು ; ಭಯಪಡಬೇಡ. ನಿಶ್ಚಿತ ಬುದ್ಧಿಯಿಂದ ನನ್ನನ್ನು ಪ್ರೀತಿಸು. ಹೀಗೆ ವೃಥಾ ದುಃಖಿಸುತ್ತಿರಬೇಡ. ಜಡೆಯನ್ನು ಹೆಣೆದುಕೊಳ್ಳದೇ ಒಂದೇ ವೇಣಿಯನ್ನು ಹೊಂದಿರುವುದಾಗಲೀ, ಭೂಮಿಯ ಮೇಲೆ ಮಲಗುವುದಾಗಲೀ, ಯಾವಾಗಲೂ ಚಿಂತೆಯಲ್ಲಿಯೇ ಮಗ್ನಳಾಗಿರುವುದಾಗಲೀ, ಮಲಿನವಾದ ವಸ್ತ್ರವನ್ನು ಧರಿ

ಸಿರುವುದಾಗಲೀ, ಭಕ್ಷ್ಯ-ಭೋಜ್ಯಾದಿಗಳನ್ನು ಸವಿಯಲು ಸಾಧ್ಯವಿರುವ ಸ್ಥಳದಲ್ಲಿ ಉಪವಾಸವಿರುವುದಾಗಲೀ–ನಿನಗೆ ಉಚಿತವಲ್ಲ. ಮಿಥಿಲರಾಜಪುತ್ರಿಯೇ! ನನ್ನನ್ನು ವರಿಸಿ ವಿಚಿತ್ರವಾದ ಮಾಲೆಗಳನ್ನೂ, ಚಂದನಗಳನ್ನೂ, ಅಗುರುಗಳನ್ನೂ, ವಿಧ-ವಿಧವಾದ ವಸ್ತ್ರಗಳನ್ನೂ, ದಿವ್ಯವಾದ ಆಭರಣಗಳನ್ನೂ, ಶ್ರೇಷ್ಠವಾದ ಪಾನೀಯಗಳನ್ನೂ, ಹಾಸಿಗೆಗಳನ್ನೂ, ಆಸನಗಳನ್ನೂ ಉಪಭೋಗಿಸು. ಬೇಕು-ಬೇಕಾದ ಗೀತಗಳನ್ನೂ ವಾದ್ಯಗಳನ್ನೂ ಕೇಳು. ನೃತ್ಯಗಳನ್ನು ಅವಲೋಕಿಸು. ಸುಂದರಾಂಗಿಯೇ! ನೀನು ಸ್ತ್ರೀಯರಲ್ಲಿಯೇ ಶ್ರೇಷ್ಠಳಾಗಿರುವೆ. ಹೀಗೆ ಮಾಡಬೇಡ. ಅಂಗಾಂಗಗಳನ್ನು ಸಿಂಗರಿಸಿಕೊ. ನನ್ನನ್ನು ಹೊಂದಿಯೂ ನೀನು ವಸ್ತ್ರಾಭರಣಗಳಿಂದ ನಿನ್ನ ಶರೀರವನ್ನು ಸಿಂಗರಿಸಿಕೊಳ್ಳಲು ಹೇಗೆ ಅನರ್ಹಳಾಗುವೆ? ನನ್ನನ್ನು ಪಡೆದೂ ನೀನು ಇಂತಹ ಹೀನಸ್ಥಿತಿಯಲ್ಲಿರಬಹುದೇ? ಒದಗಿಬಂದಿರುವ ಈ ನಿನ್ನ ಸುಮನೋಹರವಾದ ಯೌವನವು ಬೇಗ ಕಳೆದುಹೋಗಿಬಿಡುತ್ತದೆ. ಮಹಾಪ್ರವಾಹವಿರುವ ನದಿಗಳ ನೀರಿನ ಪ್ರವಾಹವು ಪುನಃ ಹಿಂದಕ್ಕೆ ಬರುವುದಿಲ್ಲ. ಹಾಗೆಯೇ ಕಳೆದುಹೋದ ನಿನ್ನ ಯೌವನವು ಹಿಂದಿರುಗಿ ಬರುವುದಿಲ್ಲ. ಶುಭದರ್ಶನಳೇ! ನಿನ್ನ ರೂಪವನ್ನು ನಿರ್ಮಿಸಿದ ಲೋಕಸೃಷ್ಟಿಕರ್ತನಾದ ಆ ಬ್ರಹ್ಮನು ನಿನ್ನನ್ನು ಸೃಷ್ಟಿಸಿದ ನಂತರ ವಿಶ್ರಾಂತನಾಗಿ ಬಿಟ್ಟಿರುವನೆಂದು ನಾನು ಭಾವಿಸುತ್ತೇನೆ. ಏಕೆಂದರೆ : ನಿನ್ನ ರೂಪಕ್ಕೆ ಸಮಾನವಾದ ರೂಪವುಳ್ಳವಳು ಬೇರೆ ಯಾರೂ ಇರುವುದಿಲ್ಲ. ರೂಪ-ಯೌವನಶಾಲಿಯಾದ ನಿನ್ನನ್ನು ಸಮೀಪಿಸಿದ ಯಾವನು ತಾನೇ ಲೋಕಮರ್ಯಾದೆಯನ್ನು ಮೀರದೇ ಸ್ಥಿರಚಿತ್ತನಾಗಿ ಇರಬಲ್ಲನು? ಸಾಕ್ಷಾತ್ ಪಿತಾಮಹನೇ ಆದರೂ ಲೋಕಮರ್ಯಾದೆಯನ್ನು ಮೀರಿ ನಿನ್ನ ಕೈಹಿಡಿಯಲು ಯತ್ನಿಸದೇ ಇರಲಾರನು. ಚಂದ್ರಮುಖಿಯೇ! ಬೃಹನ್ನಿತಂಬಗಳುಳ್ಳವಳೇ! ನಾನು ನಿನ್ನ ಶರೀರದಲ್ಲಿ ಯಾವ ಯಾವ ಅವಯವಗಳನ್ನು ನೋಡುವೆನೋ–ಆಯಾ ಅವಯವಗಳಲ್ಲಿಯೇ ನನ್ನ ಕಣ್ಣುಗಳು ನೆಟ್ಟುಹೋಗುತ್ತಿವೆ. ಕಣ್ಣುಗಳನ್ನು ಬೇರೆಯ ಕಡೆಗೆ ತಿರುಗಿಸಲು ಸಾಧ್ಯವೇ ಆಗುತ್ತಿಲ್ಲ.

ಮೈಥಿಲಿ! ರಾಮನನ್ನು ಪುನಃ ಸೇರುವೆನೆನ್ನುವ ನಿನ್ನ ಭ್ರಾಂತಿಯನ್ನು ಇನ್ನಾದರೂ ಬಿಟ್ಟುಬಿಡು. ನನ್ನ ಪತ್ನಿಯಾಗು. ನಾನು ನಾನಾದೇಶ

ಗಳಿಂದ ಕರೆತಂದಿರುವ ಉತ್ತಮಸ್ತ್ರೀಯರೆಲ್ಲರಿಗೂ ನೀನು ಪಟ್ಟಮಹಿಷಿಯಾಗು.

ಭೀರುವೇ! ನಾನು ಶತ್ರುಗಳನ್ನು ಸಮ್ಮರ್ದಿಸಿ ಅನೇಕಲೋಕಗಳಿಂದ ಯಾವ ಯಾವ ಅನರ್ಘವಾದ ರತ್ನಾಭರಣಗಳನ್ನು ತಂದಿರುವೆನೋ–ಆ ಎಲ್ಲವನ್ನೂ ಮತ್ತು ಆ ಲಂಕಾರಾಜ್ಯವನ್ನೂ ನಿನಗೇ ಸಮರ್ಪಿಸಿಬಿಡುವೆನು. ವಿಲಾಸಿನಿಯೇ! ನಿನ್ನ ಸಲುವಾಗಿ ನಾನಾನಗರಗಳನ್ನೇ ಮಾಲೆಗಳಂತೆ ಧರಿಸಿರುವ ಈ ಅಖಂಡಭೂಮಂಡಲವನ್ನೂ ಜಯಿಸಿ ನಿನ್ನ ತಂದೆಯಾದ ಜನಕನಿಗೆ ಕೊಟ್ಟುಬಿಡುವೆನು. ನನಗೆ ಎದುರಾಗಿ ನಿಲ್ಲಲು ಸಾಮರ್ಥ್ಯವಿರುವ ಯಾರನ್ನೂ ನಾನು ಈ ಲೋಕದಲ್ಲಿ ಕಾಣುತ್ತಿಲ್ಲ. ಯುದ್ಧದಲ್ಲಿ ಎದು ರಾಳಿಯೇ ಇಲ್ಲದಿರುವ ನನ್ನ ಮಹಾಪರಾಕ್ರಮವನ್ನಾದರೂ ನೋಡು. ನನ್ನ ಶತ್ರುಗಳು ಹಲವಾರು ಬಾರಿ ಯುದ್ಧಗಳಲ್ಲಿ ಧ್ವಜಗಳನ್ನು ಕಳೆದುಕೊಂಡು ಭಗ್ನರಾಗಿ ಹೋಗಿದ್ದಾರೆ.

ದೇವತೆಗಳಾಗಲೀ ಅಸುರರಾಗಲೀ ಯುದ್ಧದಲ್ಲಿ ನನಗೆ ಎದುರಾಗಿ ನಿಲ್ಲಲು ನಿಶ್ಚಯವಾಗಿಯೂ ಸಮರ್ಥರಲ್ಲ. ಇನ್ನಾದರೂ ನೀನು ನನ್ನನ್ನು ಬಯಸು. ಉತ್ತಮರೀತಿಯಲ್ಲಿ ಅಲಂಕಾರವನ್ನು ಮಾಡಿಕೊ. ಒಳ್ಳೆಯ ಪ್ರಭೆಯಿಂದ ಕೂಡಿರುವ ಆಭರಣಗಳು ನಿನ್ನ ಸರ್ವಾಂಗಗಳನ್ನೂ ಅಲಂಕರಿಸಲಿ. ಸುಮುಖಿಯೇ! ಅಲಂಕಾರವಸ್ತುಗಳಿಂದ ಸಿಂಗರಿಸಲ್ಪಟ್ಟಿರುವ ನಿನ್ನ ರೂಪವನ್ನು ಕಾಣಬೇಕೆಂದಿದ್ದೇನೆ. ನೀನು ಉದಾರತೆಯಿಂದ ನನ್ನ ಮೇಲೆ ಕೃಪೆದೋರಿ ನಿನ್ನ ಶರೀರವನ್ನು ಯಥಾಯೋಗ್ಯವಾಗಿ ಸಿಂಗರಿಸಿಕೊ. ಸುಖೋಪಭೋಗಗಳನ್ನು ಯಥೇಚ್ಛವಾಗಿ ಉಪಭೋಗಿಸು. ಸುರುಚಿರವಾದ ಪಾನೀಯಗಳನ್ನು ಬೇಕಾದಷ್ಟು ಪಾನಮಾಡು. ನನ್ನೊಡನೆ ಯಥೇಚ್ಛವಾಗಿ ವಿಹರಿಸು. ನಿನಗೆ ಬೇಕಾದವರಿಗೆ ಭೂಮಿಯನ್ನಾಗಲೀ ಧನವನ್ನಾಗಲೀ ಔದಾರ್ಯದಿಂದ ಯಥೇಚ್ಛವಾಗಿ ದಾನಮಾಡು. ಯಾವ ವಿಧವಾದ ಭಯವೂ ಇಲ್ಲದೇ ನನ್ನೊಡನೆ ಉಲ್ಲಾಸದಿಂದಿರು. ಧೈರ್ಯದಿಂದ ನನಗೆ ಆಜ್ಞಾಪಿಸು. ನನ್ನ ಮೇಲಿನ ಕೃಪೆಯಿಂದಾಗಿ ನೀನು ಇಲ್ಲಿಯ ಸುಖೋಪಭೋಗಗಳನ್ನು ಅನುಭವಿಸುವಂತೆ ನಿನ್ನ ಬಂಧುಗಳೂ ಇಲ್ಲಿ ಸಕಲವಿಧವಾದ ಸುಖೋಪಭೋಗಗಳನ್ನು ಅನುಭವಿಸಲಿ. ಯಶೋವಂತಳೇ! ಶುಭಸ್ವರೂಪಿಣಿಯೇ! ನನ್ನಲ್ಲಿರುವ ಹೇರಳವಾದ ಈ ಸಂಪತ್ತನ್ನಾದರೂ ನೋಡು. ಸೌಭಾಗ್ಯಶಾಲಿ

ನಿಯೇ! ನಾರುಮಡಿಯನ್ನುಟ್ಟಿರುವ ರಾಮನನ್ನು ಕಟ್ಟಿಕೊಂಡು ಏನು ಮಾಡುವೆ? ರಾಮನೀಗ ವಿಜಯವೆಂಬುದನ್ನೇ ಕಳೆದುಕೊಂಡಿದ್ದಾನೆ. ಮುಂದೆ ಅವನೆಂದೂ ವಿಜಯಿಯಾಗಲಾರನು. ಕಾಂತಿಹೀನನಾದ, ವನವಾಸಿಯಾದ ಅವನು ವ್ರತಾನುಷ್ಠಾನಗಳಲ್ಲಿಯೇ ನಿರತನಾಗಿದ್ದಾನೆ. ಹಾಸಿಗೆಗೂ ಗತಿಯಿಲ್ಲದೇ ನೆಲದ ಮೇಲೆ ಮಲಗುತ್ತಿದ್ದಾನೆ. ಅಂತಹವನೀಗ ಜೀವಿಸಿರುವನೋ, ಇಲ್ಲವೋ?–ಎಂದೇ ನಾನೀಗ ಸಂದೇಹಿಸುತ್ತಿದ್ದೇನೆ. ವೈದೇಹಿ! ಅಗ್ರಭಾಗದಲ್ಲಿ ಬೆಳ್ಳಕ್ಕಿಗಳಿರುವ ಕಾರ್ಮುಗಿಲುಗಳಿಂದ ಆವೃತ ನಾದ ಚಂದ್ರನನ್ನು ನೋಡಲಾಗದಂತೆ–ನಿನ್ನನ್ನು ಕಾಣಲು ರಾಮನಿಗೆ ಖಂಡಿತವಾಗಿಯೂ ಸಾಧ್ಯವಿಲ್ಲ.

**ನ ಚಾಪಿ ಮಮ ಹಸ್ತಾತ್ತ್ವಾಂ ಪ್ರಾಪ್ತುಮರ್ಹತಿ ರಾಘವಃ ।**
**ಹಿರಣ್ಯಕಶಿಪುಃ ಕೀರ್ತಿಮಿನ್ದ್ರಹಸ್ತಗತಾಮಿವ ॥೨೮॥**

ಹಿರಣ್ಯಕಶಿಪುವಿಗೆ ಇಂದ್ರನ ಹಸ್ತಗತವಾಗಿದ್ದ ಕೀರ್ತಿಯನ್ನು ಹಿಂದಕ್ಕೆ ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಹಾಗೆಯೇ ನನ್ನ ಹಸ್ತಗತಳಾಗಿರುವ ನಿನ್ನನ್ನು ರಾಮನು ಪಡೆದುಕೊಳ್ಳಲಾರನು.*

ಬಲುಸುಂದರವಾದ ಮಂದಹಾಸವುಳ್ಳವಳೇ! ಸುಂದರವಾದ ದಂತ ಪಂಕ್ತಿಯುಳ್ಳವಳೇ! ಚೆಲುವಾದ ಕಣ್ಣುಗಳುಳ್ಳವಳೇ! ವಿಲಾಸಿನಿಯೇ! ಭೀರುವೇ!

**ಮನೋ ಹರಸಿ ಮೇ ಭೀರು ಸುಪರ್ಣಃ ಪನ್ನಗಂ ಯಥಾ ॥೨೯॥**

---

* ಹಿರಣ್ಯಕಶಿಪುವು ಘೋರವಾದ ತಪಸ್ಸಿನಲ್ಲಿ ತೊಡಗಿದ್ದಾಗ ಗೆದ್ದಲುಹುಳುಗಳು ಅವನ ಶರೀರವನ್ನೇ ತಿಂದುಹಾಕಿಬಿಡುತ್ತವೆ. ಅದನ್ನು ಕಂಡ ಇಂದ್ರಪ್ರಮುಖರಾದ ದೇವತೆಗಳು ಆನಂದಭರಿತರಾಗಿ ಹಿರಣ್ಯಕಶಿಪುವಿನ ರಾಜಧಾನಿಯನ್ನು ಆಕ್ರಮಿಸುತ್ತಾರೆ. ಅಲ್ಲಿದ್ದ ರಾಕ್ಷಸಸೇನಾಪತಿಗಳೆಲ್ಲರೂ ಭಯಭೀತರಾಗಿ ಹೆಂಡತಿ-ಮಕ್ಕಳನ್ನೂ ಬಿಟ್ಟು ಓಡಿ ಹೋಗುತ್ತಾರೆ. ಆ ಸಮಯದಲ್ಲಿ ಇಂದ್ರನು ಗರ್ಭವತಿಯಾಗಿದ್ದ ಹಿರಣ್ಯಕಶಿಪುವಿನ ಹೆಂಡತಿಯನ್ನು ಕರೆದೊಯ್ಯಲು ನಿಶ್ಚಯಿಸುತ್ತಾನೆ. ಆ ಸಮಯಕ್ಕೆ ಸರಿಯಾಗಿ ನಾರದರು ಬಂದು ತಡೆಯುತ್ತಾರೆ. ನಾರದರ ಹಿತೋಪದೇಶದಂತೆ ಇಂದ್ರನು ಹಿರಣ್ಯಕಶಿಪುವಿನ ಹೆಂಡತಿಯನ್ನು ಬಿಟ್ಟು ಹೋಗುತ್ತಾನೆ.

ಆದರೆ ಅಲ್ಲಿ ಹಿರಣ್ಯಕಶಿಪುವಿನ ಹೆಂಡತಿಯ ಹೆಸರು ಕೀರ್ತಿ ಎಂದು ಹೇಳಿಲ್ಲ.

ಗರುಡಪಕ್ಷಿಯು ಹಾವನ್ನು ಅಪಹರಿಸುವಂತೆ ನನ್ನ ಮನಸ್ಸನ್ನು ನೀನು ಅಪಹರಿಸಿರುವೆ.

ಮಲಿನವಾದ ಪಟ್ಟವಸ್ತ್ರವನ್ನು ಧರಿಸಿದ್ದರೂ, ಉಪವಾಸಾದಿಗಳಿಂದ ಕೃಶಳಾಗಿದ್ದರೂ, ಅಲಂಕಾರವನ್ನು ಮಾಡಿಕೊಳ್ಳದೆಯೇ ಇದ್ದರೂ–ನಿನ್ನನ್ನು ನೋಡಿದ ಮೇಲೆ ನನಗೆ ನನ್ನ ಭಾರ್ಯೆಯರಲ್ಲಿ ಪ್ರೀತಿಯೇ ಉಂಟಾಗುತ್ತಿಲ್ಲ. ನನ್ನ ಅಂತಃಪುರದಲ್ಲಿ ಸಕಲಸದ್ಗುಣಸಂಪನ್ನೆಯರಾದ ಸ್ತ್ರೀಯರು ಎಷ್ಟು ಮಂದಿ ಇರುವರೋ–ಅವರೆಲ್ಲರ ಮೇಲೂ ನೀನು ಪರಮಾಧಿಕಾರವನ್ನು ವಹಿಸು. ಅಪ್ಸರೆಯರು ಲಕ್ಷ್ಮೀದೇವಿಯನ್ನು ಉಪಚರಿಸುವಂತೆ–ಮೂರು ಲೋಕಗಳಲ್ಲಿಯೂ ಶ್ರೇಷ್ಠರೆನಿಸಿರುವ ನನ್ನ ಭಾರ್ಯೆಯರು ಯಾವಾಗಲೂ ನಿನ್ನ ಶುಶ್ರೂಷೆಯಲ್ಲಿಯೇ ನಿರತರಾಗಿರುತ್ತಾರೆ. ಕುಬೇರನಲ್ಲಿ ಯಾವ ರತ್ನಗಳೂ, ಧನಗಳೂ ಇದ್ದುವೋ ಅವೆಲ್ಲವೂ ನನ್ನಲ್ಲಿಯೇ ಇವೆ. ಅಂತಹ ಪರಮವೈಭವೋಪೇತವಾದ ಐಶ್ವರ್ಯವನ್ನೂ ಮತ್ತು ಲೋಕಗಳನ್ನೂ ನನ್ನೊಡನೆ ನಿನಗೆ ಸುಖವುಂಟಾಗುವಂತೆ ಉಪಭೋಗಿಸು.

ರಾಮನು ತಪಸ್ಸಿನಿಂದಾಗಲೀ, ಬಲದಿಂದಾಗಲೀ, ಪರಾಕ್ರಮ ಗಳಿಂದಾಗಲೀ, ಧನದಿಂದಾಗಲೀ, ತೇಜಸ್ಸಿನಿಂದಾಗಲೀ, ಯಶಸ್ಸಿನಿಂದಾಗಲೀ ನನಗೆ ಸಮಾನನಲ್ಲ. ಸುಂದರಿಯೇ! ಸುರುಚಿರವಾದ ಪಾನೀಯಗಳನ್ನು ಪಾನಮಾಡು. ಯಥೇಚ್ಛವಾಗಿ ವಿಹರಿಸು. ಭೋಗಗಳನ್ನು ಅನುಭವಿಸು. ಸಕಲವಾದ ಭೋಗಸಾಮಗ್ರಿಗಳನ್ನೂ, ಧನದ ರಾಶಿಗಳನ್ನೂ ಮತ್ತು ಭೂಮಂಡಲದ ಭಾಗಗಳನ್ನೂ ನಿನಗೆ ಬೇಕಾದವರಿಗೆ ಕೊಡು. ನನ್ನೊಡನೆ

---

ಕಯಾಧು ಎಂದು ಅವಳ ಹೆಸರು. (ಭಾಗವತ ಸ್ಕಂದ-೭ ಅಧ್ಯಾಯ-೭) ಇದು ವೈಧರ್ಮ್ಯದೃಷ್ಟಾಂತವಾಗುತ್ತದೆ. 'ಇಂದ್ರನ ಹಸ್ತಗತವಾಗಿದ್ದ ಕೀರ್ತಿಯನ್ನು ಹಿರಣ್ಯ ಕಶಿಪುವು ಹಿಂದಕ್ಕೆ ಪಡೆದುಕೊಳ್ಳಲು ಅಸಮರ್ಥನಾದಂತೆ–ನನ್ನ ಹಸ್ತಗತಳಾಗಿರುವ ನಿನ್ನನ್ನು ರಾಮನು ಪಡೆದುಕೊಳ್ಳಲಾರನು'–ಎಂದು ಅರ್ಥಮಾಡುವುದೇ ಸಾಧು ವಾಗಿದೆ. ತತ್ಕಾಲದಲ್ಲಿ ಹಿರಣ್ಯಕಶಿಪುವಿಗೆ ಜಯವಾಗಿ ಕೀರ್ತಿಯು ಅವನಿಗೆ ಬಂದಂತೆ ಕಂಡರೂ ಕೊನೆಗೆ ಅವನು ನರಸಿಂಹಸ್ವಾಮಿಯಿಂದ ಸಂಹರಿಸಲ್ಪಟ್ಟಿದ್ದರಿಂದ ಕೀರ್ತಿಯು ಇಂದ್ರನದಾಗಿಯೇ ಉಳಿಯಿತು. ಆದುದರಿಂದ ಕೀರ್ತಿ ಎಂಬುದಕ್ಕೆ ಕೀರ್ತಿ–ಎಂಬ ಹೆಂಡತಿ ಎಂದು ಅರ್ಥಮಾಡುವುದಕ್ಕಿಂತಲೂ ಯಶಸ್ಸು–ಎಂದು ಅರ್ಥಮಾಡುವುದೇ ಉಚಿತ.

ಸುಖದಿಂದಲೂ ವಿಲಾಸದಿಂದಲೂ ಇರು. ನಿನ್ನ ಬಾಂಧವರೆಲ್ಲರೂ ನಿನ್ನೊಡನೆ ಸೇರಿಕೊಂಡು ಸುಖವಾಗಿರಲಿ.

ಭೀರುವೇ! ಸಮುದ್ರತೀರದಲ್ಲಿರುವ ವನಪ್ರದೇಶಗಳು–ದುಂಬಿ ಗಳಿಂದ ಕೂಡಿರುವ, ಕುಸುಮಿತವಾದ ವೃಕ್ಷಗಳ ಸಮೂಹಗಳಿಂದ ಸಮಲಂಕೃತವಾಗಿವೆ. ನಿನ್ನ ಅಂಗಾಂಗಗಳನ್ನು ಸುವರ್ಣಮಯವಾದ ಮತ್ತು ಶುಭ್ರವಾದ ಹಾರಗಳಿಂದ ಸಿಂಗರಿಸಿಕೊಂಡು ನನ್ನೊಡನೆ ಈ ಅರಣ್ಯಗಳಲ್ಲಿ ವಿಹರಿಸು."

೨೦ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೨೧ನೆಯ ಸರ್ಗ

## ಸೀತಾದೇವಿಯು ರಾವಣನನ್ನು ತಿರಸ್ಕರಿಸಿದುದು

**ತಸ್ಯ ತದ್ವಚನಂ ಶ್ರುತ್ವಾ ಸೀತಾ ರೌದ್ರಸ್ಯ ರಕ್ಷಸಃ ।**
**ಆರ್ತಾ ದೀನಸ್ವರಾ ದೀನಂ ಪ್ರತ್ಯುವಾಚ ಶನೈರ್ವಚಃ ॥೧॥**

ಮೃದುವಾದ ಇಂಚರದಿಂದ ಕೂಡಿದ್ದ ಸೀತೆಯು ರಾಕ್ಷಸರಾಜನ ಮಹಾಭಯಂಕರವಾದ ಆ ಮಾತನ್ನು ಕೇಳಿ ದೈನ್ಯದಿಂದ ಮೆಲ್ಲ-ಮೆಲ್ಲನೆ ಹೇಳಿದಳು :

ಆ ಸಮಯದಲ್ಲಿ ತಪಸ್ವಿನಿಯಾದ, ಶ್ರೇಷ್ಠವಾದ ಅವಯವಗಳಿಂದ ಕೂಡಿದ್ದ, ಪತಿವ್ರತೆಯಾದ ಸೀತಾದೇವಿಯು ದುಃಖಪೀಡಿತಳಾಗಿದ್ದಳು. ರೋದನಮಾಡುತ್ತಾ ತರತರನೆ ನಡುಗುತ್ತಿದ್ದಳು. ಪತಿಯನ್ನೇ ಯಾವಾ ಗಲೂ ಚಿಂತಿಸುತ್ತಿದ್ದಳು. ಶುಚಿಸ್ಮಿತೆಯಾದ* ಸೀತೆಯು ಪರಪುರುಷನೊಡನೆ ನೇರವಾಗಿ ಮಾತನಾಡಕೂಡದೆಂಬ ಅಭಿಪ್ರಾಯದಿಂದ ಹುಲ್ಲುಕಡ್ಡಿ ಯೊಂದನ್ನು ಮಧ್ಯದಲ್ಲಿಟ್ಟು ಹೇಳಿದಳು :

**ನಿವರ್ತಯ ಮನೋ ಮತ್ತಃ ಸ್ವಜನೇ ಕ್ರಿಯತಾಂ ಮನಃ ॥೩॥**

---

* ಅತಿದುಃಖಿತೆಯಾಗಿದ್ದರೂ ರಾವಣನೊಡನೆ ಶುಚಿಸ್ಮಿತೆಯು ಹೇಗಾದಳೆಂದರೆ ಅದು ತಾತ್ಸಾರವನ್ನು ಸೂಚಿಸುವ ನಗು. ಯಾರಾದರೂ ವಿಪರೀತವಾಗಿ ಹೊಗಳಿಕೊಂಡರೆ ನಾವು ಕೆಲವು ವೇಳೆ ನಕ್ಕುಬಿಡುತ್ತೇವೆ. ಅದು ಸಂತೋಷಸೂಚಕವಾದ ನಗುವಾಗುವುದಿಲ್ಲ. ತಿರಸ್ಕಾರದ ನಗುವಾಗುತ್ತದೆ.

"ರಾಕ್ಷಸರಾಜನೇ! ನನ್ನಿಂದ ಮನಸ್ಸನ್ನು ಹಿಂದಕ್ಕೆ ತೆಗೆದುಕೊ. ನಿನ್ನ ಭಾರ್ಯೆಯರಲ್ಲಿ ನಿನ್ನ ಮನಸ್ಸು ಅನುರಕ್ತವಾಗಿರಲಿ.

**ನ ಮಾಂ ಪ್ರಾರ್ಥಯಿತುಂ ಯುಕ್ತಂ ಸುಸಿದ್ಧಿಮಿವ ಪಾಪಕೃತ್ ।**
**ಅಕಾರ್ಯಂ ನ ಮಯಾ ಕಾರ್ಯಮೇಕಪತ್ನ್ಯಾ ವಿಗರ್ಹಿತಮ್ ।**
**ಕುಲಂ ಸಂಪ್ರಾಪ್ತಯಾ ಪುಣ್ಯಂ ಕುಲೇ ಮಹತಿ ಜಾತಯಾ ॥೪॥**

ಪಾಪಿಷ್ಠನು ಒಳ್ಳೆಯ ಸಿದ್ಧಿಯನ್ನು ಬಯುಸುವಂತೆ-ನೀನು ನನ್ನನ್ನು ಬಯಸುವುದು ಯುಕ್ತವಲ್ಲ. ಪಾಪಿಷ್ಠನಿಗೆ ಸಿದ್ಧಿಯು ಸಿದ್ಧಿಸದಂತೆ ನಾನು ನಿನಗೆ ದೊರಕತಕ್ಕವಳೂ ಅಲ್ಲ. ಮಹಾಕುಲದಲ್ಲಿ ಹುಟ್ಟಿ ಪುಣ್ಯಕುಲಕ್ಕೆ ಸೇರಿರುವ ಮತ್ತು ಶ್ರೀರಾಮನ ಏಕಪತ್ನಿಯಾಗಿರುವ (ಪತಿವ್ರತೆಯಾಗಿರುವ) ನನಗೆ ನೀನು ಸೂಚಿಸುತ್ತಿರುವಂತೆ ಅತಿನಿಂದ್ಯವಾದ ಕಾರ್ಯವನ್ನು ಮಾಡುವುದು ಯುಕ್ತವೆನಿಸುವುದಿಲ್ಲ."*

ಯಶೋವತಿಯಾದ ಸೀತಾದೇವಿಯು ಹೀಗೆ ಹೇಳಿ ರಾವಣನನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾ ಪುನಃ ಹೇಳಿದಳು.[1]

---

* ಏಕಪತ್ನೀ= ಏಕಾ ಪತ್ನೀ, ಏಕಮಾತ್ರಪತ್ನಿಯು ; ಸವತಿಯರಿಲ್ಲದ ಒಬ್ಬನ ಹೆಂಡತಿ. ಏಕಃ ಪತಿಃ ಯಸ್ಯಾಃ = ಪತಿವ್ರತೆ ; ಪತಿಗೆ ಅನುಕೂಲಳಾದ ಪತ್ನಿ ; ಪತಿಯ ಸೇವೆಯಲ್ಲಿಯೇ ನಿರತಳಾದ ಪತ್ನಿ. ಏಕಃ ಪತಿಃ ಯಸ್ಯಾಃ =ಒಬ್ಬನೇ ಗಂಡನುಳ್ಳ ಹೆಂಗಸು ; ಅನುರೂಪಪತಿಯುಳ್ಳ ಹೆಂಗಸು. ಸಪತ್ನೀ ಅಥವಾ ಸವತಿ :- ಹೀಗೆ ಮೂರು ವಿಧವಾದ ಅರ್ಥಗಳೂ ಈ ಶಬ್ದಕ್ಕಿರುವುದರಿಂದ ಶ್ರೀರಾಮನು ಏಕಪತ್ನೀವ್ರತನೆಂದು ಅರ್ಥಮಾಡಬೇಕು. ಪುರಾಣಾಂತರಗಳಲ್ಲಿ ಹೇಳಿರುವಂತೆ ಬಹುಪತ್ನೀವಂತನೆಂದು ಕೆಲವರು ಅರ್ಥಮಾಡುತ್ತಾರೆ. ಸೀತೆಯು ಹೇಳಿರುವ ಈ ಪದವನ್ನೇ ಆಧಾರ ವನ್ನಾಗಿಟ್ಟುಕೊಂಡು ಪಂಡಿತರಾದವರು ತಮ್ಮ ತಮ್ಮ ಅಭಿಪ್ರಾಯಗಳನ್ನು ಸಮರ್ಥಿ ಸುತ್ತಾರೆ. ಸಂದರ್ಭೋಚಿತವಾಗಿ 'ಶ್ರೀರಾಮನಿಗೆ ಏಕಮಾತ್ರ ಪತ್ನಿಯಾಗಿರುವವಳು'-ಎಂಬ ಅರ್ಥವೇ ಚೆನ್ನಾಗಿ ಹೊಂದಿಕೊಳ್ಳುತ್ತದೆ-ಎಂಬುದು ನಮ್ಮ ಅಭಿಪ್ರಾಯವಾಗಿದೆ. (ಇದರ ವಿವರಣೆಯನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ.)

1 **ಪೃಷ್ಠತಃ ಕೃತ್ವಾ ರಾವಣಂ** = ರಾವಣನನ್ನು ಹಿಂದಕ್ಕೆ ಮಾಡಿಕೊಂಡು ಅರ್ಥಾತ್ ರಾವಣನಿಗೆ-'ಬೆನ್ನು ತಿರುಗಿಸಿ ಕುಳಿತು'-ಎಂದು ಅರ್ಥವಾಗುತ್ತದೆ. ಒಬ್ಬ ವ್ಯಾಖ್ಯಾನಕಾರರು-ಪರಾವೃತ್ಯ ಸ್ಥಿತ್ವಾ । ಎಂದು ಹೀಗೆಯೇ ಅರ್ಥಮಾಡಿದ್ದಾರೆ. ಈ ಪದಕ್ಕೆ ಅನಾದರಣೆ ಎಂದೂ ಅರ್ಥವಾಗುತ್ತದೆ. ಈ ಸಂದರ್ಭದಲ್ಲಿ ಅನಾದರಣೆಮಾಡುತ್ತಾ

**ನಾಹಮೌಪಯಿಕೀ ಭಾರ್ಯಾ ಪರಭಾರ್ಯಾ ಸತೀ ತವ ।**
**ಸಾಧು ಧರ್ಮಮವೇಕ್ಷಸ್ವ ಸಾಧು ಸಾಧುವ್ರತಂ ಚರ ॥೬॥**

"ಪರಪತ್ನಿಯೂ, ಪತಿವ್ರತೆಯೂ ಆಗಿರುವ ನಾನು ನಿನಗೆ ಅನುಕೂಲೆಯಾದ ಭಾರ್ಯೆಯಾಗುವುದಿಲ್ಲ. ಸತ್ಪುರುಷರ ಧರ್ಮವೇನೆಂಬುದನ್ನು ತಿಳಿದು ಸತ್ಪುರುಷರು ಆಚರಿಸುವಂತೆಯೇ ಆಚರಿಸು.

**ಯಥಾ ತವ ತಥಾನ್ಯೇಷಾಂ ದಾರಾ ರಕ್ಷ್ಯಾ ನಿಶಾಚರ ।**
**ಆತ್ಮಾನಮುಪಮಾಂ ಕೃತ್ವಾ ಸ್ವೇಷು ದಾರೇಷು ರಮ್ಯತಾಮ್ ॥**

ನಿಶಾಚರನೇ! ನಿನ್ನ ಪತ್ನಿಯರನ್ನು ನೀನು ಹೇಗೆ ಪರಪುರುಷರ ವಶರಾಗದಂತೆ ರಕ್ಷಿಸುವೆಯೋ–ಹಾಗೆಯೇ ಪರಪತ್ನಿಯರನ್ನು ಅವರ ಶೀಲಕ್ಕೆ ಭಂಗವುಂಟಾಗದಂತೆ ನೀನು ರಕ್ಷಿಸಬೇಕು. ಈ ವಿಷಯದಲ್ಲಿ ಮೊದಲು ನಿನ್ನನ್ನೇ ನಿದರ್ಶನವನ್ನಾಗಿಟ್ಟುಕೊಂಡು ನಿನ್ನ ಪತ್ನಿಯರಲ್ಲಿ ಮಾತ್ರವೇ ಅನುರಕ್ತನಾಗಿರು.*

**ಅತುಷ್ಟಂ ಸ್ವೇಷು ದಾರೇಷು ಚಪಲಂ ಚಲಿತೇನ್ದ್ರಿಯಮ್ ।**
**ನಯನ್ತಿ ನಿಕೃತಿಪ್ರಜ್ಞಂ ಪರದಾರಾಃ ಪರಾಭವಮ್ ॥೮॥**

---

ಅವನಿಗೆ ಗೌರವವನ್ನು ತೋರಿಸದೇ ಅವನಿಗೆ ಸ್ವಲ್ಪವಾದರೂ ಭಯಪಡದೇ–ಎಂಬ ಅರ್ಥಗಳೇ ಹೊಂದಿಕೊಳ್ಳುತ್ತದೆ. ರಾವಣನಿಗೆ ಬೆನ್ನು ತೋರಿಸಿ ಕುಳಿತುಕೊಳ್ಳುವ ಆಶಯವಿದ್ದರೆ ಮೊದಲೇ ಹಾಗೆಯೇ ಸೀತೆಯು ಕುಳಿತುಕೊಳ್ಳುತ್ತಿದ್ದಳು. ಮಧ್ಯದಲ್ಲಿ ಹುಲ್ಲುಕಡ್ಡಿಯನ್ನಿಟ್ಟು ಮಾತನಾಡುವ ಸಂಭವವೇ ಇರುತ್ತಿರಲಿಲ್ಲ. ಮಾತನಾಡಲು ಪ್ರಾರಂಭಿಸಿದ ನಂತರ ಬೆನ್ನು ತಿರುಗಿಸಿ ಕುಳಿತುಕೊಳ್ಳುವುದೆಂದರೆ ಅಸ್ವಾಭಾವಿಕವಾಗಿ ಕಾಣುತ್ತದೆ.

* **ಆತ್ಮಾನಮುಪಮಾಂ** = 'ನೀನು ನಿನ್ನ ಪತ್ನಿಯರನ್ನು ಪರಪುರುಷರ ವಶರಾಗಲು ಬಿಡುವುದಿಲ್ಲ. ಪರಪುರುಷರ ವಶರಾಗದಂತೆ ನೀನು ಅವರನ್ನು ರಕ್ಷಿಸುತ್ತಿರುವೆ. ಒಬ್ಬನ ಭಾರ್ಯೆಯನ್ನು ಮತ್ತೊಬ್ಬನು ಅಪೇಕ್ಷಿಸಕೂಡದೆಂಬ ನಿಯಮವನ್ನು ನಿನ್ನ ಭಾರ್ಯೆಯರ ವಿಷಯದಲ್ಲಿ ನೀನು ಕಟ್ಟುನಿಟ್ಟಾಗಿ ಪರಿಪಾಲಿಸುತ್ತಿರುವೆ. ಇದೇ ಮಾದರಿಯಲ್ಲಿ ನೀನು ನನ್ನ ವಿಷಯದಲ್ಲಿಯೂ ನಡೆದುಕೊಳ್ಳಬೇಕು. ನಾನು ಪರಪತ್ನಿಯೆಂಬುದನ್ನು ಮನಗಂಡು ನನ್ನ ಮೇಲಿನ ಆಸೆಯನ್ನು ಸಂಪೂರ್ಣವಾಗಿ ತೊರೆದು ನಿನ್ನ ಪತ್ನಿಯರೊಡನೆ ಸ್ವೇಚ್ಛೆಯಿಂದ ವಿಹರಿಸು.'

ತನ್ನ ಪತ್ನಿಯರಲ್ಲಿ ತೃಪ್ತಿಹೊಂದದೇ ಇರುವ, ಅಸಭ್ಯನಾದ, ಚಂಚಲ ವಾದ ಮನಸ್ಸುಳ್ಳ, ವಂಚನೆಯ ಬುದ್ಧಿಯಿಂದ ಕೂಡಿರುವವನನ್ನು ಪರಪತ್ನಿ ಯರು ತಿರಸ್ಕಾರಕ್ಕೆ ಈಡುಮಾಡುತ್ತಾರೆ.

**ಇಹ ಸನ್ತೋ ನ ವಾ ಸನ್ತಿ ಸತೋ ವಾ ನಾನುವರ್ತಸೇ ।**
**ತಥಾ ಹಿ ವಿಪರೀತಾ ತೇ ಬುದ್ಧಿರಾಚಾರವರ್ಜಿತಾ ॥೯॥**

ನಿನ್ನ ಬುದ್ಧಿಯು ಸದಾಚಾರ-ಸದ್ವ್ಯವಹಾರಗಳಿಂದ ದೂರವಾಗಿರುವು ದನ್ನೂ ಮತ್ತು ಸದಾಚಾರ-ಸದ್ವ್ಯವಹಾರಗಳಿಗೆ ವಿರುದ್ಧವಾಗಿರುವುದನ್ನೂ ನೋಡಿದರೆ ನಿನ್ನ ಈ ರಾಜ್ಯದಲ್ಲಿ ಸತ್ಪುರುಷರೇ ಇಲ್ಲವೆಂದು ಭಾವಿಸ ಬೇಕಾಗಿದೆ. ಒಂದು ವೇಳೆ ಇದ್ದರೂ ಅವರ ಮಾರ್ಗವನ್ನು ನೀನು ಅನುಸರಿಸುತ್ತಿಲ್ಲ. ಇದಂತೂ ಸ್ಪಷ್ಟವಾಗಿದೆ.

**ವಚೋ ಮಿಥ್ಯಾಪ್ರಮೀತಾತ್ಮಾ ಪಥ್ಯಮುಕ್ತಂ ವಿಚಕ್ಷಣೈಃ ।**
**ರಾಕ್ಷಸಾನಾಮಭಾವಾಯ ತ್ವಂ ವಾ ನ ಪ್ರತಿಪದ್ಯಸೇ ॥೧೦॥**

ವಂಚನೆ ಅಥವಾ ಸುಳ್ಳು ಎಂಬ ಪದಾರ್ಥದಿಂದಲೇ ಮಾಡಲ್ಪಟ್ಟಿರುವ, ವಂಚಕಬುದ್ಧಿಯಿಂದ ಕೂಡಿರುವ ನೀನು, ಮುಂದಾಗುವುದನ್ನು ಪರ್ಯಾ ಲೋಚಿಸಿ ಹೇಳುವ ಚತುರರ ಹಿತೋಕ್ತಿಗಳನ್ನು–ರಾಕ್ಷಸರ ವಿನಾಶದ ಸಲುವಾಗಿಯೇ–ಪ್ರತಿಗ್ರಹಿಸದೆಯೂ ಇರಬಹುದು.

**ಅಕೃತಾತ್ಮಾನಮಾಸಾದ್ಯ ರಾಜಾನಮನಯೇ ರತಮ್ ।**
**ಸಮೃದ್ಧಾನಿ ವಿನಶ್ಯನ್ತಿ ರಾಷ್ಟ್ರಾಣಿ ನಗರಾಣಿ ಚ ॥೧೧॥**

ಸತ್ಪುರುಷರ ಉಪದೇಶವನ್ನು ಗ್ರಹಿಸದಿರುವ ಅನೀತಿವಂತನಾದ ರಾಜನನ್ನು ಪಡೆದು ಸಮೃದ್ಧವಾಗಿರುವ ರಾಷ್ಟ್ರಗಳೂ ಮತ್ತು ನಗರಗಳೂ ವಿನಾಶಹೊಂದುತ್ತವೆ.

**ತಥೇಯಂ ತ್ವಾಂ ಸಮಾಸಾದ್ಯ ಲಙ್ಕಾ ರತ್ನೌಘಸಂಕುಲಾ ।**
**ಅಪರಾಧಾತ್ತವೈಕಸ್ಯ ನ ಚಿರಾದ್ವಿನಶಿಷ್ಯತಿ ॥೧೨॥**

ಅದೇ ರೀತಿಯಲ್ಲಿ ರತ್ನಗಳ ರಾಶಿಗಳಿಂದ ಸಮೃದ್ಧವಾಗಿರುವ ಈ ಲಂಕಾಪಟ್ಟಣವು ಅನೀತಿವಂತನಾದ ಮತ್ತು ಜಿತೇಂದ್ರಿಯನಲ್ಲದ ನಿನ್ನನ್ನು

ರಾಜನನ್ನಾಗಿ ಪಡೆದು ನಿನ್ನೊಬ್ಬನ ಅಪರಾಧದಿಂದಲೇ ಬಹಳ ಬೇಗ ವಿನಾಶ ಹೊಂದುತ್ತದೆ.

**ಸ್ವಕೃತೈರ್ಹನ್ಯಮಾನಸ್ಯ ರಾವಣಾದೀರ್ಘದರ್ಶಿನಃ ।**
**ಅಭಿನನ್ದನ್ತಿ ಭೂತಾನಿ ವಿನಾಶೇ ಪಾಪಕರ್ಮಣಃ ॥೧೩॥**

ರಾವಣ! ದೂರದೃಷ್ಟಿಯಿಲ್ಲದೆ, ತಾನು ಮಾಡುವ ಪಾಪಕರ್ಮಗಳಿಂದಲೇ ವಿನಾಶಹೊಂದುವ ಪಾಪಕರ್ಮಿಯ ವಿನಾಶದಿಂದ ಎಲ್ಲ ಪ್ರಾಣಿಗಳೂ ಸಂತೋಷಗೊಳ್ಳುತ್ತವೆ.

**ಏವಂ ತ್ವಾಂ ಪಾಪಕರ್ಮಾಣಂ ವಕ್ಷ್ಯನ್ತಿ ನಿಕೃತಾ ಜನಾಃ ।**
**ದಿಷ್ಟ್ಯೈತದ್ವ್ಯಸನಂ ಪ್ರಾಪ್ತೋ ರೌದ್ರ ಇತ್ಯೇವ ಹರ್ಷಿತಾಃ ॥**

ನಿನ್ನಿಂದ ವಂಚಿತರಾದ ಜನರು ಹೀಗೆ ವಿನಾಶಹೊಂದುವ ಪಾಪಕರ್ಮಿಯಾದ ನಿನ್ನನ್ನು ನೋಡಿ ಸಂತೋಷಗೊಂಡು–'ಭಯಂಕರನಾದ, ಕ್ರೂರಿಯಾದ ರಾವಣನು ದೈವಯೋಗದಿಂದ ವಿನಾಶಹೊಂದಿದನು'–ಎಂದು ಹೇಳುವರು.

**ಶಕ್ಯಾ ಲೋಭಯಿತುಂ ನಾಹಮೈಶ್ವರ್ಯೇಣ ಧನೇನ ವಾ ।**
**ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾ ಯಥಾ ॥೧೫॥**

ರಾವಣ! ಐಶ್ವರ್ಯದಿಂದಾಗಲೀ, ಧನದಿಂದಾಗಲೀ ನನ್ನನ್ನು ಪ್ರಲೋಭಗೊಳಿಸಲು ಸರ್ವಥಾ ಸಾಧ್ಯವಿಲ್ಲ. ಸೂರ್ಯನೊಡನೆ ಪ್ರಭೆಯು ಸೇರಿರುವಂತೆ–ರಾಘವನೊಡನೆ ನಾನು ಸದಾ ಸೇರಿಕೊಂಡೇ ಇರುವೆನು.*

**ಉಪಧಾಯ ಭುಜಂ ತಸ್ಯ ಲೋಕನಾಥಸ್ಯ ಸತ್ಕೃತಮ್ ।**
**ಕಥಂ ನಾಮೋಪಧಾಸ್ಯಾಮಿ ಭುಜಮನ್ಯಸ್ಯ ಕಸ್ಯಚಿತ್ ॥೧೬॥**

ಲೋಕನಾಥನಾದ ಶ್ರೀರಾಮನ ತ್ರಿಲೋಕಸತ್ಕೃತವಾದ ಭುಜವನ್ನೇ ತಲೆ

---

* ಶರೀರಮಾತ್ರದಿಂದ ನಾನು ಪ್ರತ್ಯೇಕವಾಗಿರುವಂತೆ ಕಾಣುತ್ತಿರುವೆನೋ ಹೊರತು ನನ್ನ ಬುದ್ಧಿ-ಮನಸ್ಸುಗಳೆಲ್ಲವೂ ರಾಮನಲ್ಲಿಯೇ ಸೇರಿಹೋಗಿವೆ. ಪ್ರಭೆಯು ಸೂರ್ಯನನ್ನು ಬಿಟ್ಟಿರದಂತೆ–ನನ್ನ ಮನಸ್ಸು ನನ್ನ ಹೃತ್ಕಮಲದಲ್ಲಿಯೇ ನೆಲೆಸಿರುವ ಶ್ರೀರಾಮಮೂರ್ತಿಯಿಂದ ಕ್ಷಣವಾದರೂ ವಿಚಲಿತವಾಗುವುದಿಲ್ಲ. ಆದುದರಿಂದ ನಾನು ಯಾವಾಗಲೂ ರಾಘವನಿಂದ ಅನನ್ಯಳು. ಬೇರೆಯಾಗತಕ್ಕವಳಲ್ಲ.

ದಿಂಬನ್ನಾಗಿ ಮಾಡಿಕೊಳ್ಳುತ್ತಿದ್ದ ನಾನು ಬೇರೊಬ್ಬನ ಭುಜವನ್ನು ಹೇಗೆ ತಾನೇ ತಲೆದಿಂಬನ್ನಾಗಿ ಮಾಡಿಕೊಳ್ಳುವೆನು?

**ಅಹಮೌಪಯಿಕೀ ಭಾರ್ಯಾ ತಸ್ಯೈವ ವಸುಧಾಪತೇಃ ।**
**ವ್ರತಸ್ನಾತಸ್ಯ ವಿಪ್ರಸ್ಯ ವಿದ್ಯೇವ ವಿದಿತಾತ್ಮನಃ ॥೧೭॥**

ವೇದವ್ರತಗಳಿಂದ ಸ್ನಾತನಾದ, ಆತ್ಮಜ್ಞಾನಿಯಾದ ಬ್ರಾಹ್ಮಣನಿಗೆ ಬ್ರಹ್ಮವಿದ್ಯೆಯು ಯೋಗ್ಯವಾಗಿರುವಂತೆ ಭೂಮಿಗೆ ಒಡೆಯನಾದ ಶ್ರೀರಾಮನಿಗೆ ಮಾತ್ರವೇ ನಾನು ಯೋಗ್ಯಳಾದ ಭಾರ್ಯೆಯಾಗಿದ್ದೇನೆ.

**ಸಾಧು ರಾವಣ ರಾಮೇಣ ಮಾಂ ಸಮಾನಯ ದುಃಖಿತಾಮ್ ।**
**ವನೇ ವಾಶಿತಯಾ ಸಾರ್ಧಂ ಕರೇಣ್ವೇವ ಗಜಾಧಿಪಮ್ ॥೧೮॥**

ಅರಣ್ಯದಲ್ಲಿ ಯೌವನಾವಸ್ಥೆಯಲ್ಲಿರುವ (ಕಾಮುಕಿಯಾದ) ಹೆಣ್ಣಾನೆಯೊಡನೆ ಸಲಗವನ್ನು ಸೇರಿಸುವಂತೆ–ಪತಿಯ ವಿಯೋಗದಿಂದ ದುಃಖಿತಳಾಗಿರುವ ನನ್ನನ್ನು ಶ್ರೀರಾಮನೊಡನೆ ಸೇರಿಸು. ಹೀಗೆ ಮಾಡುವುದು ನಿನಗೆ ಉಚಿತವಾಗಿದೆ.

**ಮಿತ್ರಮೌಪಯಿಕಂ ಕರ್ತುಂ ರಾಮಃ ಸ್ಥಾನಂ ಪರೀಪ್ಸತಾ ।**
**ವಧಂ ಚಾನಿಚ್ಛತಾ ಘೋರಂ ತ್ವಯಾಸೌ ಪುರುಷರ್ಷಭಃ ॥೧೯॥**

ನೀನು ನಿನ್ನ ಸ್ಥಾನವನ್ನು (ಲಂಕಾಧಿಪತ್ಯವನ್ನು ) ಉಳಿಸಿಕೊಳ್ಳುವ ಇಚ್ಛೆಯುಳ್ಳವನಾಗಿದ್ದರೆ–ರಾಕ್ಷಸರ ಘೋರವಾದ ವಧೆಯಲ್ಲಿ ನಿನಗೆ ಇಚ್ಛೆಯಿಲ್ಲದಿದ್ದರೆ–ಪುರುಷಶ್ರೇಷ್ಠನಾದ ಶ್ರೀರಾಮನನ್ನು ಮಿತ್ರನನ್ನಾಗಿ ಮಾಡಿಕೊ.

**ವಿದಿತಃ ಸ ಹಿ ಧರ್ಮಜ್ಞಃ ಶರಣಾಗತವತ್ಸಲಃ ।**
**ತೇನ ಮೈತ್ರೀ ಭವತು ತೇ ಯದಿ ಜೀವಿತುಮಿಚ್ಛಸಿ ॥೨೦॥**

ಸರ್ವಧರ್ಮಗಳನ್ನೂ ತಿಳಿದಿರುವ ಶ್ರೀರಾಮನು ಶರಣಾಗತವತ್ಸಲನೆಂದು ಪ್ರಸಿದ್ಧನಾಗಿರುವನು. ನಿನಗೆ ಬದುಕುವ ಇಚ್ಛೆಯಿದ್ದರೆ ಅವನೊಡನೆ ಸ್ನೇಹಮಾಡಿಕೊ.

**ಪ್ರಸಾದಯಸ್ವ ತ್ವಂ ಚೈನಂ ಶರಣಾಗತವತ್ಸಲಮ್ ।**
**ಮಾಂ ಚಾಸ್ಮೈ ಪ್ರಯತೋ ಭೂತ್ವಾ ನಿರ್ಯಾತಯಿತುಮರ್ಹಸಿ ॥**

ಶರಣಾಗತವತ್ಸಲನಾದ ಶ್ರೀರಾಮನನ್ನು ನೀನು ಪ್ರಸನ್ನಗೊಳಿಸು. ವಿನೀತವಾಗಿ ನನ್ನನ್ನು ಅವನಿಗೆ ಒಪ್ಪಿಸಿಕೊಡುವುದು ಈ ಸಮಯದಲ್ಲಿ ನಿನಗೆ ಉಚಿತವಾಗಿದೆ. ಇದರಿಂದ ಅವನು ಪ್ರಸನ್ನನಾಗುತ್ತಾನೆ.

**ಏವಂ ಹಿ ತೇ ಭವೇತ್ಸ್ವಸ್ತಿ ಸಂಪ್ರದಾಯ ರಘೂತ್ತಮೇ ।**
**ಅನ್ಯಥಾ ತ್ವಂ ಹಿ ಕುರ್ವಾಣಃ ವಧಂ ಪ್ರಾಪ್ಸ್ಯಸಿ ರಾವಣ ॥೨೨॥**

ನೀನು ಹೀಗೆ ನನ್ನನ್ನು ಆ ರಘುಶ್ರೇಷ್ಠನಿಗೆ ಸಮರ್ಪಿಸುವುದರಿಂದ ಮಾತ್ರವೇ ನಿನಗೆ ಮಂಗಳವುಂಟಾಗುತ್ತದೆ. ಇದಕ್ಕೆ ವಿಪರೀತವಾಗಿ ವರ್ತಿಸಿ ದರೆ ಮರಣವನ್ನು ಹೊಂದುವೆ.

**ವರ್ಜಯೇದ್ವಜ್ರಮುತ್ಸೃಷ್ಟಂ ವರ್ಜಯೇದನ್ತಕಶ್ಚಿರಮ್ ।**
**ತ್ವದ್ವಿಧಂ ನ ತು ಸಂಕ್ರುದ್ಧೋ ಲೋಕನಾಥಃ ಸ ರಾಘವಃ ॥೨೩॥**

ಇಂದ್ರನಿಂದ ಬಿಡಲ್ಪಟ್ಟ ವಜ್ರಾಯುಧವಾದರೂ ನಿನ್ನನ್ನು ಸಂಹರಿಸದೇ ಬಿಟ್ಟುಬಿಡಬಹುದು. ಯಮನೂ ಬಹಳ ಕಾಲದವರೆಗೆ ನಿನ್ನ ಬಳಿಗೆ ಬರದೇ ಇರಬಹುದು. ಆದರೆ ಕೋಪಗೊಂಡ ಲೋಕನಾಥನಾದ ಆ ರಾಘವ ನೆಂದಿಗೂ ನಿನ್ನಂತಹ ದುರುಳನನ್ನು ಜೀವಸಹಿತವಾಗಿ ಬಿಡಲಾರನು.

ಇಂದ್ರನಿಂದ ಬಿಡಲ್ಪಟ್ಟ ವಜ್ರಾಯುಧದ ಶಬ್ದಕ್ಕೆ ಸದೃಶವಾದ ಮಹಾ ಶಬ್ದದಿಂದ ಕೂಡಿರುವ ಶ್ರೀರಾಮನ ಧನುಸ್ಸಿನ ಟೇಂಕಾರದ ಶಬ್ದವನ್ನು ನೀನು ಬೇಗನೆ ಕೇಳಲಿರುವೆ. ಒಳ್ಳೆಯ ಗಿಣ್ಣುಗಳನ್ನು ಹೊಂದಿರುವ ಸರ್ಪಗಳಂತೆ ಪ್ರಜ್ವಲಿಸುವ ಅಗ್ರಭಾಗಗಳುಳ್ಳ ರಾಮ-ಲಕ್ಷ್ಮಣರ ಗುರುತಿರುವ ಬಾಣಗಳು ಈ ಲಂಕಾಪಟ್ಟಣದಲ್ಲಿ ರಾಕ್ಷಸರನ್ನು ಸಂಹರಿಸುತ್ತಾ ಎಲ್ಲೆಡೆಗಳಲ್ಲಿಯೂ ತುಂಬಿಹೋಗುತ್ತವೆ. ಗರುಡನು ಸರ್ಪಗಳನ್ನು ಕ್ಷಣಮಾತ್ರದಲ್ಲಿ ಮೇಲೆತ್ತಿ ಕೊಂಡು ಹೋಗಿ ಸಂಹರಿಸುವಂತೆ–ಶ್ರೀರಾಮರೂಪನಾದ ಗರುಡನು ರಾಕ್ಷಸರೂಪರಾದ ಮಹಾಸರ್ಪಗಳನ್ನು ಬಹಳ ಬೇಗ ಸಂಹರಿಸಲಿದ್ದಾನೆ. ಮಹಾವಿಷ್ಣುವು ಮೂರೇ ಹೆಜ್ಜೆಗಳಿಂದ ರಾಕ್ಷಸರ ಉಜ್ವಲವಾದ ಅಪಾರ ಸಂಪತ್ತನ್ನೂ ಅಪಹರಿಸಿದಂತೆ–ಅರಿಂದಮನಾದ ನನ್ನ ಪತಿಯು ನಿನ್ನಿಂದ ನನ್ನನ್ನು ಕ್ಷಣಮಾತ್ರದಲ್ಲಿ ಬಿಡಿಸಿಕೊಂಡು ಹೋಗುತ್ತಾನೆ. ಜನಸ್ಥಾನದಲ್ಲಿ ರಾಕ್ಷಸರ ಸೈನ್ಯವೆಲ್ಲವೂ ನಾಶವಾಗಿ ಅದು ಸಂಹಾರಸ್ಥಾನವಾಯಿತು. ಶ್ರೀರಾಮ

ನನ್ನು ಎದುರಿಸಲು ಅಸಮರ್ಥನಾದ ನೀನು ಅಪಹರಣರೂಪವಾದ ಈ ಮಹಾದುಷ್ಕಾರ್ಯವನ್ನೆಸಗಿರುವೆ. ಅಧಮಾಧಮನೇ! ನರಶ್ರೇಷ್ಠರಾದ ರಾಮ-ಲಕ್ಷ್ಮಣರಿಬ್ಬರೂ ಆಶ್ರಮದಲ್ಲಿರಲಿಲ್ಲ. ವನಪ್ರದೇಶಕ್ಕೆ ಹೋಗಿದ್ದರು. ಆ ಸಮಯದಲ್ಲಿ ನೀನು ನನ್ನನ್ನು ಅಪಹರಿಸಿಕೊಂಡು ಬಂದಿರುವೆ.

**ನ ಹಿ ಗನ್ಧಮುಪಾಘ್ರಾಯ ರಾಮಲಕ್ಷ್ಮಣಯೋಸ್ತ್ವಯಾ ।**
**ಶಕ್ಯಂ ಸಂದರ್ಶನೇ ಸ್ಥಾತುಂ ಶುನಾ ಶಾರ್ದೂಲಯೋರಿವ ॥೩೧॥**

ಜೋಡಿ ಸಿಂಹಗಳ ವಾಸನೆಯನ್ನು ಆಘ್ರಾಣಿಸಿದ ನಾಯಿಗೆ ಅವು ಗಳನ್ನು ದಿಟ್ಟಿಸಿ ನೋಡಲೂ ಸಾಧ್ಯವಾಗದಂತೆ ರಾಮ-ಲಕ್ಷ್ಮಣರ ವಾಸನೆ ಯನ್ನು ಆಘ್ರಾಣಿಸಿದ ಮಾತ್ರದಿಂದ ನಿನಗೆ ಅವರನ್ನು ನೋಡುವುದಕ್ಕಾಗಲೀ ಅವರ ಎದುರಾಗಿ ನಿಲ್ಲುವುದಕ್ಕಾಗಲೀ ಸಾಧ್ಯವಾಗುವುದೇ ಇಲ್ಲ.

**ತಸ್ಯ ತೇ ವಿಗ್ರಹೇ ತಾಭ್ಯಾಂ ಯುಗಗ್ರಹಣಮಸ್ಥಿರಮ್ ।**
**ವೃತ್ರಸ್ಯೇವೇನ್ದ್ರಬಾಹುಭ್ಯಾಂ ಬಾಹೋರೇಕಸ್ಯ ನಿಗ್ರಹಃ ॥೩೨॥**

ಚೋರವೃತ್ತಿಯವನಾದ ನಿನಗೆ ರಾಮ-ಲಕ್ಷ್ಮಣರೊಡನೆ ಯುದ್ಧವು ಸಂಭವಿಸಿದರೆ–ಇಂದ್ರನ ಎರಡು ತೋಳುಗಳಿಗೂ ಮತ್ತು ವೃತ್ರಾಸುರನ ಒಂದು ತೋಳಿಗೂ ನಡೆದ ಯುದ್ಧದಲ್ಲಿ ವೃತ್ರಾಸುರನು ಪರಾಜಿತನಾದಂತೆ– ನಿನ್ನ ಪರಾಜಯವು ನಿಶ್ಚಯ.*

**ಕ್ಷಿಪ್ರಂ ತವ ಸ ನಾಥೋ ಮೇ ರಾಮಃ ಸೌಮಿತ್ರಿಣಾ ಸಹ ।**
**ತೋಯಮಲ್ಪಮಿವಾದಿತ್ಯಃ ಪ್ರಾಣಾನಾದಾಸ್ಯತೇ ಶರೈಃ ॥೩೩॥**

ಸ್ವಲ್ಪವೇ ನೀರಿರುವ ಕುಂಟೆಯನ್ನು ಸೂರ್ಯನು ತನ್ನ ಕಿರಣಗಳಿಂದ ಬಹಳ ಶೀಘ್ರವಾಗಿ ಹೀರಿಕೊಂಡುಬಿಡುವಂತೆ–ನನ್ನೊಡೆಯನಾದ ಆ

---

* ಇಂದ್ರ-ವೃತ್ರಾಸುರರಿಗೆ ನಡೆದ ಯುದ್ಧದಲ್ಲಿ ಇಂದ್ರನು ವೃತ್ರಾಸುರನ ಒಂದು ತೋಳನ್ನು ಕತ್ತರಿಸಿದನೆಂದೂ ಅನಂತರವೂ ವೃತ್ರಾಸುರನು ಇಂದ್ರನೊಡನೆ ಬಹಳ ಕಾಲದವರೆಗೆ ಒಂದೇ ತೋಳಿನಿಂದ ಯುದ್ಧಮಾಡುತ್ತಾ ಕಡೆಗೆ ಪರಾಜಿತನಾದನೆಂದೂ ಭಾಗವತದಲ್ಲಿ ಕಥೆಯಿದೆ.

ಶ್ರೀರಾಮನು ಸೌಮಿತ್ರಿಯೊಡನೆ ಬೇಗನೆ ಬಂದು ತೀಕ್ಷ್ಣವಾದ ಬಾಣಗಳಿಂದ ನಿನ್ನ ಪ್ರಾಣಗಳನ್ನು ಹೀರಿಬಿಡುತ್ತಾನೆ.

**ಗಿರಿಂ ಕುಬೇರಸ್ಯ ಗತೋಽಥ ವಾಲಯಂ**
**ಸಭಾಂ ಗತೋ ವಾ ವರುಣಸ್ಯ ರಾಜ್ಞಃ ।**
**ಅಸಂಶಯಂ ದಾಶರಥೇರ್ನ ಮೋಕ್ಷ್ಯಸೇ**
**ಮಹಾದ್ರುಮಃ ಕಾಲಹತೋಽಶನೇರಿವ ॥೩೪॥**

ವಿನಾಶಕಾಲವು ಒದಗಿಬಂದಿರುವ ವೃಕ್ಷವು ಸಿಡಿಲನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹಾಗೆಯೇ ಕಾಲಹತನಾಗಿರುವ ನೀನು ಕುಬೇರನ ಆಲಯವಾದ ಕೈಲಾಸಪರ್ವತವನ್ನು ಹೊಕ್ಕರೂ, ವರುಣರಾಜನ ಸಭೆಯಲ್ಲಿ ಆಶ್ರಯ ಪಡೆದರೂ–ದಾಶರಥಿಯ ಬಾಣಗಳನ್ನು ತಪ್ಪಿಸಿಕೊಳ್ಳಲಾರೆ. ಇದರಲ್ಲಿ ಸಂಶಯವೇ ಇಲ್ಲ."

ಇ೧ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೨೨ನೆಯ ಸರ್ಗ

## ರಾವಣನು ಸೀತೆಗೆ ವಶಳಾಗಲು ಎರಡು ತಿಂಗಳ ಅವಧಿಯನ್ನು ಕೊಟ್ಟುದು : ಸೀತೆಯ ತಿರಸ್ಕಾರ : ರಾವಣನು ಸೀತೆಯನ್ನು ರಾಕ್ಷಸಿಯರ ವಶಕ್ಕೊಪ್ಪಿಸಿ ಅರಮನೆಯನ್ನು ಸೇರಿದುದು

**ಸೀತಾಯಾ ವಚನಂ ಶ್ರುತ್ವಾ ಪರುಷಂ ರಾಕ್ಷಸೇಶ್ವರಃ ।**
**ಪ್ರತ್ಯುವಾಚ ತತಃ ಸೀತಾಂ ವಿಪ್ರಿಯಂ ಪ್ರಿಯದರ್ಶನಾಮ್ ॥೧॥**

ರಾಕ್ಷಸೇಶ್ವರನಾದ ರಾವಣನು ಸೀತಾದೇವಿಯ ಕಠೋರವಾದ ಮಾತುಗಳನ್ನು ಕೇಳಿ ಪ್ರಿಯದರ್ಶನಳಾದ ಸೀತಾದೇವಿಗೆ ಅಪ್ರಿಯವಾಗುವಂತಹ ಈ ಮಾತುಗಳನ್ನು ಹೇಳಿದನು :

**ಯಥಾ ಯಥಾ ಸಾನ್ತ್ವಯಿತಾ ವಶ್ಯಃ ಸ್ತ್ರೀಣಾಂ ತಥಾ ತಥಾ ।**
**ಯಥಾ ಯಥಾ ಪ್ರಿಯಂ ವಕ್ತಾ ಪರಿಭೂತಸ್ತಥಾ ತಥಾ ॥೨॥**

"ಲೋಕದಲ್ಲಿ ಪುರುಷನು ಸ್ತ್ರೀಯರನ್ನು ಯಾವ ಯಾವ ರೀತಿಯಲ್ಲಿ

ಸಾಂತ್ವನಗೊಳಿಸುವನೋ ಅದೇ ರೀತಿಯಲ್ಲಿ ಅವನು ಸ್ತ್ರೀಯರಿಗೆ ಅಧೀನನಾಗುತ್ತಾನೆ. ಆದರೆ ನಿನ್ನ ವಿಷಯದಲ್ಲಿ ಮಾತ್ರ ಎಷ್ಟೆಷ್ಟು ಹೆಚ್ಚಾಗಿ ಪ್ರಿಯಕರವಾದ ಮಾತುಗಳನ್ನಾಡುತ್ತಿದ್ದರೂ ಅಷ್ಟಷ್ಟು ಹೆಚ್ಚಾಗಿ ನಿನ್ನಿಂದ ಅವಮಾನಿತನಾಗುತ್ತಿದ್ದೇನೆ.

**ಸಂನಿಯಚ್ಛತಿ ಮೇ ಕ್ರೋಧಂ ತ್ವಯಿ ಕಾಮಃ ಸಮುತ್ಥಿತಃ ।**
**ದ್ರವತೋಽಮಾರ್ಗಮಾಸಾದ್ಯ ಹಯಾನಿವ ಸುಸಾರಥಿಃ ॥೩॥**

ಹದ್ದುಮೀರಿಹೋಗುತ್ತಿರುವ ಕುದುರೆಗಳನ್ನು ನಿಪುಣನಾದ ಸಾರಥಿಯು ತಡೆಹಿಡಿಯುವಂತೆ–ನಿನ್ನ ಮಾತನ್ನು ಕೇಳಿ ಉಕ್ಕಿಬರುತ್ತಿರುವ ನನ್ನ ಕೋಪವನ್ನು ನಿನ್ನ ವಿಷಯದಲ್ಲಿ ನನಗುಂಟಾಗಿರುವ ಕಾಮುಕತೆಯು ತಡೆಹಿಡಿಯುತ್ತಿದೆ.

**ವಾಮಃ ಕಾಮೋ ಮನುಷ್ಯಾಣಾಂ ಯಸ್ಮಿನ್ಕಿಲ ನಿಬಧ್ಯತೇ ।**
**ಜನೇ ತಸ್ಮಿಂಸ್ತ್ವನುಕ್ರೋಶಃ ಸ್ನೇಹಶ್ಚ ಕಿಲ ಜಾಯತೇ ॥೪॥**

ಯಾವ ಜನರ ವಿಷಯದಲ್ಲಿ ಉತ್ಕಟವಾದ ಕಾಮವಿರುವುದೋ–ಅವರ ವಿಷಯದಲ್ಲಿಯೇ ದಯೆ ಮತ್ತು ಸ್ನೇಹಭಾವಗಳೂ ಹುಟ್ಟುತ್ತವೆಯಲ್ಲವೇ?

**ಏತಸ್ಮಾತ್ಕಾರಣಾನ್ನ ತ್ವಾಂ ಘಾತಯಾಮಿ ವರಾನನೇ ।**
**ವಧಾರ್ಹಾಮವಮಾನಾರ್ಹಾಂ ಮಿಥ್ಯಾಪ್ರವ್ರಜಿತೇ ರತಾಮ್ ॥**

ಸುಂದರಮುಖಿಯೇ! ಈ ಕಾರಣದಿಂದಲೇ ವಧಾರ್ಹಳಾದ, ಅವಮಾನಗೊಳಿಸಲು ತಕ್ಕವಳಾದ, ಕಪಟಸಂನ್ಯಾಸಿಯಂತೆ ಕಾಡಿನಲ್ಲಿ ಅಲೆದಾಡುತ್ತಿರುವ ರಾಮನಲ್ಲಿಯೇ ಅನುರಕ್ತಳಾಗಿರುವ ನಿನ್ನನ್ನು ಶಿಕ್ಷಿಸುತ್ತಿಲ್ಲ.

ಮೈಥಿಲಿ! ನೀನು ನನ್ನ ವಿಷಯವಾಗಿ ಯಾವ ಯಾವ ಕರ್ಣಕಠೋರವಾದ ಮಾತುಗಳನ್ನಾಡಿದೆಯೋ–ಅವುಗಳಲ್ಲಿ ಒಂದೊಂದು ಮಾತೂ ದಾರುಣ ವಾದ ರೀತಿಯಲ್ಲಿ ಮರಣದಂಡನೆಯನ್ನು ವಿಧಿಸಲು ಅರ್ಹವಾಗಿದೆ."

ಕ್ರೋಧ-ಪ್ರಣಯಗಳೆರಡರಿಂದಲೂ ಕೂಡಿದ್ದ ರಾಕ್ಷಸಾಧಿಪನಾದ ರಾವಣನು ಸೀತೆಗೆ ಪುನಃ ಹೇಳಿದನು.

**ದ್ವೌ ಮಾಸೌ ರಕ್ಷಿತವ್ಯೌ ಮೇ ಯೋಽವಧಿಸ್ತೇ ಮಯಾ ಕೃತಃ ।**
**ತತಃ ಶಯನಮಾರೋಹ ಮಮ ತ್ವಂ ವರವರ್ಣಿನಿ ॥೮॥**

"ವರವರ್ಣಿನಿಯೇ! ನಾನು ಈ ಹಿಂದೆ ನನ್ನ ವಶಳಾಗಲು ಹನ್ನೆರಡು ಮಾಸಗಳ ಅವಧಿಯನ್ನು ನಿನಗೆ ಕೊಟ್ಟಿದ್ದೆನು. ಅವುಗಳಲ್ಲಿ ಎರಡು ಮಾಸಗಳು ಮಾತ್ರವೇ ಉಳಿದಿವೆ. ಆ ಎರಡು ಮಾಸಗಳನ್ನು ನಾನು ಪ್ರತೀಕ್ಷಿಸಬೇಕಾಗಿದೆ. ಅಷ್ಟರೊಳಗಾಗಿ ನೀನು ನನ್ನ ಹಾಸಿಗೆಯಲ್ಲಿ ಪವಡಿಸಲೇಬೇಕು.

**ದ್ವಾಭ್ಯಾಮೂರ್ಧ್ವಂ ತು ಮಾಸಾಭ್ಯಾಂ**
**ಭರ್ತಾರಂ ಮಾಮನಿಚ್ಛತೀಮ್**
**ಮಮ ತ್ವಾಂ ಪ್ರಾತರಾಶಾರ್ಥ-**
**ಮಾಲಭನ್ತೇ ಮಹಾನಸೇ ॥೯॥**

ಎರಡು ತಿಂಗಳು ಕಳೆದ ನಂತರವೂ ನೀನು ನನ್ನನ್ನು ಪತಿಯನ್ನಾಗಿ ವರಿಸಲು ಇಚ್ಛಿಸದಿದ್ದರೆ–ನನ್ನ ಅಡಿಗೆಯವರು ನಿನ್ನನ್ನು ಪ್ರಾತಃಕಾಲದ ಉಪಾಹಾರಕ್ಕೋಸ್ಕರ ಕತ್ತರಿಸಿಬಿಡುತ್ತಾರೆ."

ರಾಕ್ಷಸೇಂದ್ರನಾದ ರಾವಣನು ಹೀಗೆ ಸೀತಾದೇವಿಯನ್ನು ಬೆದರಿಸುತ್ತಿರಲು–ಅವನ ಸಮೀಪದಲ್ಲಿದ್ದ ದೇವ-ಗಂಧರ್ವಕನ್ಯೆಯರು ವಿಷಾದಿಸಿದರು. ಅವರ ಕಣ್ಣುಗಳು ನೀರು ತುಂಬಿ ವಿಕಾರವಾಗಿ ಕಾಣುತ್ತಿದ್ದುವು. ಅವರಲ್ಲಿ ಕೆಲವರು ತುಟಿಗಳ ಸ್ಪಂದನದಿಂದಲೂ, ಕೆಲವರು ಕಣ್ಣುಗಳ ನೋಟದಿಂದಲೂ ಕೆಲವರು ಮುಖಭಾವಗಳಿಂದಲೂ ಸೀತಾದೇವಿಯನ್ನು ಸಂತೈಸಿದರು. ಯಾರೊಬ್ಬರೂ ಮಾತನಾಡದೇ ಮುಖ-ನೇತ್ರಾಧರಸಂಜ್ಞೆಗಳಿಂದಲೇ ತಮ್ಮ ತಮ್ಮ ಅನುಕಂಪವನ್ನು ವ್ಯಕ್ತಪಡಿಸಿದರು.

ಸಂಜ್ಞೆಗಳ ಮೂಲಕವಾಗಿ ಅವರಿಂದ ಸಮಾಧಾನಗೊಳಿಸಲ್ಪಟ್ಟ ಸೀತಾದೇವಿಯು ರಾವಣನಿಗೆ–ಪಾತಿವ್ರತ್ಯಬಲದ ಗರ್ವದಿಂದ ಯುಕ್ತವಾದ ಆತ್ಮಹಿತಕ್ಕೆ ಸಾಧಕವಾದ ಈ ಮಾತನ್ನು ಹೇಳಿದಳು :

**ನೂನಂ ನ ತೇ ಜನಃ ಕಶ್ಚಿದಸ್ತಿ ನಿಃಶ್ರೇಯಸೇ ಸ್ಥಿತಃ ।**
**ನಿವಾರಯತಿ ಯೋ ನ ತ್ವಾಂ ಕರ್ಮಣೋಽಸ್ಮಾದ್ವಿಗರ್ಹಿತಾತ್ ॥**

"ನಿಶ್ಚಯವಾಗಿಯೂ ಈ ಪಟ್ಟಣದಲ್ಲಿ ನಿನ್ನ ಅಭ್ಯುದಯದಲ್ಲಿ ಆಸಕ್ತನಾಗಿರುವ ಯಾವೊಬ್ಬನೂ ಇಲ್ಲವೆಂದೇ ತೋರುತ್ತದೆ. ಏಕೆಂದರೆ : ಇಂತಹ

ನಿಂದನೀಯವಾದ ಕಾರ್ಯದಿಂದ ನಿನ್ನನ್ನು ವಿಮುಖನನ್ನಾಗಿ ಮಾಡಲು ಯಾರೂ ಮುಂದೆ ಬರುತ್ತಿಲ್ಲ.

**ಮಾಂ ಹಿ ಧರ್ಮಾತ್ಮನಃ ಪತ್ನೀಂ ಶಚೀಮಿವ ಶಚೀಪತೇಃ ।**
**ತ್ವದನ್ಯಸ್ತ್ರಿಷು ಲೋಕೇಷು ಪ್ರಾರ್ಥಯೇನ್ಮನಸಾಪಿ ಕಃ ॥೧೪॥**

ಶಚೀಪತಿಯಾದ ಇಂದ್ರನಿಗೆ ಶಚೀದೇವಿಯಂತೆ–ಧರ್ಮಾತ್ಮನಾದ ಶ್ರೀರಾಮನಿಗೆ ಪತ್ನಿಯಾಗಿರುವ ನನ್ನನ್ನು–ಈ ಮೂರು ಲೋಕಗಳಲ್ಲಿ ದುರಾತ್ಮನಾದ ನಿನ್ನೊಬ್ಬನ ಹೊರತಾಗಿ ಬೇರೆ ಯಾವನು ತಾನೇ ಮನಸ್ಸಿನಿಂದಲಾದರೂ ಬಯಸುವನು?

**ರಾಕ್ಷಸಾಧಮ ರಾಮಸ್ಯ ಭಾರ್ಯಾಮಮಿತತೇಜಸಃ ।**
**ಉಕ್ತವಾನಸಿ ಯತ್ಪಾಪಂ ಕ್ವ ಗತಸ್ತಸ್ಯ ಮೋಕ್ಷ್ಯಸೇ ॥೧೫॥**

ರಾಕ್ಷಸಾಧಮನೇ! ಮಹಾತೇಜಸ್ವಿಯಾದ ಶ್ರೀರಾಮನ ಭಾರ್ಯೆಯಾದ ನನ್ನ ವಿಷಯದಲ್ಲಿ ಮಹಾಪಾಪಕರವಾದ ಮಾತುಗಳನ್ನಾಡುತ್ತಿರುವ ನೀನು ಎಲ್ಲಿಗೆ ಹೋಗಿ ಆ ಪಾಪದಿಂದ ಬಿಡುಗಡೆ ಹೊಂದುವೆ?

**ಯಥಾ ದೃಪ್ತಶ್ಚ ಮಾತಙ್ಗಃ ಶಶಶ್ಚ ಸಹಿತೋ ವನೇ ।**
**ತಥಾ ದ್ವಿರದವದ್ರಾಮಸ್ತ್ವಂ ನೀಚ ಶಶವತ್ಸ್ಮೃತಃ ॥೧೬॥**

ಮದಿಸಿದ ಆನೆ ಮತ್ತು ಮೊಲ–ಈ ಎರಡು ಪ್ರಾಣಿಗಳೂ ಅರಣ್ಯದಲ್ಲೇ ವಾಸಮಾಡುತ್ತಿರುತ್ತವೆ. ಆದರೆ ಅವುಗಳಲ್ಲಿ ಒಂದಕ್ಕೊಂದಕ್ಕೆ ಯಾವ ರೀತಿಯಲ್ಲಿಯೂ ಸಾಮ್ಯವಿಲ್ಲ. ಆನೆಯು ಮಹಾಪ್ರಾಣಿ. ಮೊಲವು ಕ್ಷುದ್ರಜಂತು. ಹಾಗೆಯೇ ಶ್ರೀರಾಮನು ಮದಿಸಿದ ಗಜದಂತಿದ್ದಾನೆ. ನೀಚನೇ! ನೀನಾದರೋ ಕ್ಷುದ್ರವಾದ ಮೊಲದಂತಿರುವೆ.

**ಸ ತ್ವಮಿಕ್ಷ್ವಾಕುನಾಥಂ ವೈ ಕ್ಷಿಪನ್ನಿಹ ನ ಲಜ್ಜಸೇ ।**
**ಚಕ್ಷುಷೋರ್ವಿಷಯಂ ತಸ್ಯ ನ ತಾವದುಪಗಚ್ಛಸಿ ॥೧೭॥**

ಅಂತಹ ಅತಿಕ್ಷುದ್ರನಾದ ನೀನು ಇಕ್ಷ್ವಾಕುನಾಥನನ್ನು ಇಲ್ಲಿ ನಿಂದಿಸುತ್ತಿರುವೆ. ನಿನಗೆ ನಾಚಿಕೆಯೆಂಬುದೇ ಇಲ್ಲ. ಎಂದಿನವರೆಗೆ ನೀನು ಅವನ ಕಣ್ಣುಗಳಿಗೆ ಬೀಳುವುದಿಲ್ಲವೋ ಅಂದಿನವರೆಗೆ ನೀನು ಅವನನ್ನು ನಿಂದಿಸುತ್ತಿರಲು ಸಾಧ್ಯವಾಗುತ್ತದೆ.

**ಇಮೇ ತೇ ನಯನೇ ಕ್ರೂರೇ ವಿರೂಪೇ ಕೃಷ್ಣಪಿಙ್ಗಲೇ ।**
**ಕ್ಷಿತೌ ನ ಪತಿತೇ ಕಸ್ಮಾನ್ಮಾಮನಾರ್ಯ ನಿರೀಕ್ಷತಃ ॥೧೯॥**

ಅನಾರ್ಯನೇ! ನನ್ನನ್ನೇ ದುರ-ದುರನೆ ನೋಡುತ್ತಿರುವ ನಿನ್ನ ವಿರೂಪವಾದ, ಕ್ರೂರವಾದ, ಕೃಷ್ಣಪಿಂಗಳವರ್ಣವುಳ್ಳ ಕಣ್ಣುಗಳೇಕೆ ಇನ್ನೂ ಕಳಚಿ ಬೀಳುತ್ತಿಲ್ಲ?

**ತಸ್ಯ ಧರ್ಮಾತ್ಮನಃ ಪತ್ನೀಂ ಸ್ನುಷಾಂ ದಶರಥಸ್ಯ ಚ ।**
**ಕಥಂ ವ್ಯಾಹರತೋ ಮಾಂ ತೇ ಜಿಹ್ವಾ ಪಾಪ ನ ಶೀರ್ಯತೇ ॥**

ಪಾಪಿಷ್ಠನೇ! ಅಂತಹ ಧರ್ಮಾತ್ಮನ ಪತ್ನಿಯಾದ, ದಶರಥರಾಜನ ಸೊಸೆಯಾದ ನನ್ನ ವಿಷಯದಲ್ಲಿ ಆಡಬಾರದ ಮಾತುಗಳನ್ನು ಆಡುತ್ತಿರುವ ನಿನ್ನ ನಾಲಿಗೆಯೇಕೆ ಇನ್ನೂ ಸೀಳಿಹೋಗಲಿಲ್ಲ?

**ಅಸಂದೇಶಾತ್ತು ರಾಮಸ್ಯ ತಪಸಶ್ಚಾನುಪಾಲನಾತ್ ।**
**ನ ತ್ವಾಂ ಕುರ್ಮಿ ದಶಗ್ರೀವ ಭಸ್ಮ ಭಸ್ಮಾರ್ಹ ತೇಜಸಾ ॥೨೦॥**

ದಶಕಂಠನೇ! ನನ್ನ ತಪಃಪ್ರಭಾವದಿಂದ ಭಸ್ಮೀಭೂತನಾಗಲು ಅರ್ಹನಾದವನೇ! ನಿನ್ನನ್ನು ವಿನಾಶಗೊಳಿಸಲು ರಾಮನ ಅನುಮತಿಯಿಲ್ಲದಿರುವುದರಿಂದಲೂ ಪಾತಿವ್ರತ್ಯರೂಪವಾದ ತಪಸ್ಸನ್ನು ಪರಿಪಾಲಿಸುತ್ತಿರುವುದರಿಂದಲೂ ನನ್ನ ತೇಜಸ್ಸಿನಿಂದ ನಿನ್ನನ್ನು ಬೂದಿಮಾಡಿರುವುದಿಲ್ಲ.

**ನಾಪಹರ್ತುಮಹಂ ಶಕ್ಯಾ ತಸ್ಯ ರಾಮಸ್ಯ ಧೀಮತಃ ।**
**ವಿಧಿಸ್ತವ ವಧಾರ್ಥಾಯ ವಿಹಿತೋ ನಾತ್ರ ಸಂಶಯಃ ॥೨೧॥**

ಧೀಮಂತನಾದ ಶ್ರೀರಾಮನ ಭಾರ್ಯೆಯಾದ ನನ್ನನ್ನು ಅಪಹರಿಸಿಕೊಂಡು ಬರಲು ನಿನಗೆ ಖಂಡಿತವಾಗಿಯೂ ಸಾಧ್ಯವಾಗುತ್ತಿರಲಿಲ್ಲ. ಆದರೆ ವಿಧಿಯೇ ನಿನ್ನ ವಧೆಯ ಸಲುವಾಗಿ ನನ್ನನ್ನು ಅಪಹರಿಸಿಕೊಂಡು ಬರಲು ಸಂಚುಮಾಡಿದೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

**ಶೂರೇಣ ಧನದಭ್ರಾತ್ರಾ ಬಲೈಃ ಸಮುದಿತೇನ ಚ ।**
**ಅಪೋಹ್ಯ ರಾಮಂ ಕಸ್ಮಾದ್ಧಿ ದಾರಚೌರ್ಯಂ ತ್ವಯಾ ಕೃತಮ್ ॥**

ಮಹಾಶೂರನಾಗಿರುವ, ಸಕಲವಿಧವಾದ ಬಲಗಳಿಂದಲೂ ಸಂಪನ್ನ

ನಾಗಿರುವ, ಕುಬೇರನ ತಮ್ಮನಾಗಿರುವ ನೀನು–ಮೋಸದಿಂದ ಶ್ರೀರಾಮ ನನ್ನು ಬಹಳ ದೂರಕ್ಕೆ ಹೋಗುವಂತೆ ಮಾಡಿ–ಪತ್ನಿಯ ಚೌರ್ಯವನ್ನೇಕೆ ಮಾಡಿದೆ?"

ರಾಕ್ಷಸಾಧಿಪತಿಯಾದ ರಾವಣನು ಸೀತಾದೇವಿಯ ಮಾತನ್ನು ಕೇಳಿ ಪರಮಕ್ರುದ್ಧನಾಗಿ ಕ್ರೂರವಾದ ಕಣ್ಣುಗಳನ್ನು ಅಗಲಿಸಿ ಜಾನಕಿಯನ್ನು ದುರ-ದುರನೆ ನೋಡಿದನು. ರಾವಣನು ನೀಲಮೇಘಸದೃಶನಾಗಿದ್ದನು. ಅವನಿಗೆ ದೊಡ್ಡದಾದ ಭುಜಗಳಿದ್ದುವು. ದಪ್ಪವಾದ ಕುತ್ತಿಗೆಯಿದ್ದಿತು. ಅವನು ಸಿಂಹ ಪರಾಕ್ರಮನೂ–ಸಿಂಹದಂತೆ ನಡಿಗೆಯುಳ್ಳವನೂ ಆಗಿದ್ದನು. ಶ್ರೀಸಂಪನ್ನ ನಾಗಿದ್ದನು. ಅವನ ನಾಲಿಗೆಯ ತುದಿಯೂ ಕಣ್ಣುಗಳೂ ದೇದೀಪ್ಯಮಾನ ವಾಗಿದ್ದುವು. ಕೋಪದ ಕಾರಣದಿಂದ ಅವನ ಕಿರೀಟದ ತುದಿಯು ಅಲ್ಲಾಡು ತ್ತಿದ್ದು ಬಹಳ ಎತ್ತರವಾಗಿರುವಂತೆ ಕಾಣುತ್ತಿದ್ದನು. ಚಿತ್ರವಾದ ಮಾಲೆಗಳನ್ನು ಧರಿಸಿದ್ದನು. ಗಂಧವನ್ನು ಪೂಸಿಕೊಂಡಿದ್ದನು. ಕೆಂಪಾದ ಮಾಲೆಯನ್ನೂ ಮತ್ತು ವಸ್ತ್ರವನ್ನೂ ಧರಿಸಿದ್ದನು. ಪುಟಕ್ಕೆ ಹಾಕಿದ ಚಿನ್ನದಿಂದ ಮಾಡಿದ್ದ ತೋಳ್ಬಳೆಗಳಿಂದ ವಿಭೂಷಿತನಾಗಿದ್ದನು. ಅಮೃತಕ್ಕಾಗಿ ಸಮುದ್ರವನ್ನು ಕಡೆದಾಗ ವಾಸುಕಿಯಿಂದ ಸುತ್ತುವರಿಯಲ್ಪಟ್ಟ ಮಂದರಪರ್ವತದಂತೆ ಮಹಾಮೌಲ್ಯದ ನೀಲವರ್ಣದ ಕಟಿಸೂತ್ರದಿಂದ ಸಂವೃತನಾಗಿದ್ದನು. ಪರ್ವತಸದೃಶನಾದ ರಾಕ್ಷಸೇಶ್ವರನು ಸುಪ್ರಸಿದ್ಧವಾದ ಅತಿಪುಷ್ಟವಾದ ಎರಡು ಬಾಹುಗಳಿಂದ ಕೂಡಿದ್ದು ಎರಡು ಶಿಖರಗಳಿಂದ ಕೂಡಿರುವ ಮಂದರ ಪರ್ವತದಂತೆಯೇ ಪ್ರಕಾಶಿಸುತ್ತಿದ್ದನು. ಕೆಂಪಾದ ಚಿಗುರುಗಳಿಂದಲೂ ಹೂಗಳಿಂದಲೂ ಕೂಡಿರುವ ಎರಡು ಅಶೋಕವೃಕ್ಷಗಳಿಂದ ಶೋಭಿಸುವ ಪರ್ವತದಂತೆ–ಬಾಲ ಸೂರ್ಯನಂತೆ ಥಳ-ಥಳಿಸುತ್ತಿದ್ದ ಕರ್ಣಕುಂಡಲ ಗಳಿಂದ ಶೋಭಾಯಮಾನನಾಗಿ ಕಾಣುತ್ತಿದ್ದನು. ಹೀಗೆ ರಾವಣನು ನಾನಾ ವಿಧವಾದ ಆಭರಣಗಳಿಂದ ಸಿಂಗರಿಸಿಕೊಂಡಿದ್ದರೂ, ಕಲ್ಪವೃಕ್ಷಸದೃಶನಾಗಿ ದ್ದರೂ, ಶರೀರವನ್ನು ಧರಿಸಿ ಬಂದ ವಸಂತನಂತೆಯೇ ಕಾಣುತ್ತಿದ್ದರೂ–ಶ್ಮಶಾನದಲ್ಲಿರುವ ಮಂಟಪದಂತೆ ಜುಗುಪ್ಸಿತನಾಗಿ ಕಾಣುತ್ತಿದ್ದನು. ಕೋಪದಿಂದ ಕೆಂಗಣ್ಣನಾಗಿದ್ದ ಅವನು ಹಾವಿನಂತೆ ನಿಟ್ಟುಸಿರುಬಿಡುತ್ತಾ ಸೀತಾದೇವಿಯನ್ನು ದುರ-ದುರನೆ ನೋಡುತ್ತಾ ಹೇಳಿದನು :

**ಅನಯೇನಾಭಿಸಂಪನ್ನಮರ್ಥಹೀನಮನುವ್ರತೇ ।**
**ನಾಶಯಾಮ್ಯಹಮದ್ಯ ತ್ವಾಂ ಸೂರ್ಯಃ ಸಂಧ್ಯಾಮಿವೌಜಸಾ ॥**

"ಅನೀತಿಯಿಂದ ಸಂಪನ್ನನಾಗಿರುವ ದರಿದ್ರನನ್ನು ಅನುಸರಿಸಿರುವವಳೇ! ಸೂರ್ಯನು ತನ್ನ ತೇಜಸ್ಸಿನಿಂದ ಮುಂಜಾನೆಯ ಕತ್ತಲನ್ನು ಹೋಗಲಾಡಿಸುವಂತೆ–ಈಗಲೇ ನಿನ್ನನ್ನು ಧ್ವಂಸಮಾಡುತ್ತೇನೆ."

ಶತ್ರುಗಳನ್ನು ಕಿರಿ-ಕಿರಿಗುಟ್ಟಿಸುವುದರಲ್ಲಿ ಸಮರ್ಥನಾಗಿದ್ದ ರಾಕ್ಷಸರಾಜನಾದ ರಾವಣನು ಸೀತೆಗೆ ಹೀಗೆ ಹೇಳಿ ಭಯಂಕರರಾಗಿದ್ದ ರಾಕ್ಷಸಿಯರಿಗೆ ಆಜ್ಞಾಪಿಸಿದನು.

ಆ ರಾಕ್ಷಸಿಯರಲ್ಲಿ ಕೆಲವರಿಗೆ ಒಂದೇ ಕಣ್ಣಿದ್ದಿತು. ಕೆಲವರಿಗೆ ಒಂದೇ ಕಿವಿಯಿದ್ದಿತು. ಕೆಲವರು ಕಿವಿಗಳನ್ನೇ ಹೊದ್ದಿಕೆಯನ್ನಾಗಿ ಮಾಡಿಕೊಂಡಿದ್ದರು. ಕೆಲವರಿಗೆ ಗೋವಿನ ಕಿವಿಗಳೂ ಕೆಲವರಿಗೆ ಆನೆಯ ಕಿವಿಗಳೂ ಇದ್ದುವು. ಕೆಲವರಿಗೆ ಕಿವಿಗಳೇ ಇರಲಿಲ್ಲ. ಕೆಲವರಿಗೆ ಆನೆಯ ಕಾಲುಗಳೂ, ಕೆಲವರಿಗೆ ಕುದುರೆಯ ಕಾಲುಗಳೂ, ಕೆಲವರಿಗೆ ಹಸುವಿನ ಕಾಲುಗಳೂ ಇದ್ದವು. ಕೆಲವರ ಕಾಲುಗಳಲ್ಲಿ ಹುಂಜದ ಶಿಖೆಗಳಿದ್ದುವು. ಕೆಲವರಿಗೆ ಒಂದೇ ಕಣ್ಣಿದ್ದಿತು. ಕೆಲವರಿಗೆ ಒಂದೇ ಕಾಲಿದ್ದಿತು. ಕೆಲವರಿಗೆ ಅತಿದೊಡ್ಡದಾದ ಕಾಲುಗಳಿದ್ದುವು. ಕೆಲವರಿಗೆ ಕಾಲುಗಳೇ ಇರಲಿಲ್ಲ. ಕೆಲವರು ಅಳತೆಮೀರಿದ ತಲೆಗಳನ್ನೂ ಕುತ್ತಿಗೆಗಳನ್ನೂ ಹೊಂದಿದ್ದರು. ಕೆಲವರು ಮಿತಿಮೀರಿದ ಪ್ರಮಾಣವುಳ್ಳ ಸ್ತನಗಳನ್ನೂ ಹೊಟ್ಟೆಗಳನ್ನೂ ಹೊಂದಿದ್ದರು. ಕೆಲವರು ಅಳತೆಮೀರಿದ ಮುಖಗಳನ್ನೂ ಕಣ್ಣುಗಳನ್ನೂ ಹೊಂದಿದ್ದರು. ಕೆಲವರಿಗೆ ಉದ್ದವಾದ ನಾಲಿಗೆಗಳಿದ್ದುವು. ಕೆಲವರಿಗೆ ನಾಲಿಗೆ-ಮೂಗುಗಳೇ ಇರಲಿಲ್ಲ. ಕೆಲವರಿಗೆ ಸಿಂಹದ ಮುಖಗಳೂ, ಕೆಲವರಿಗೆ ಗೋವಿನ ಮುಖಗಳೂ, ಕೆಲವರಿಗೆ ಹಂದಿಯ ಮುಖಗಳೂ ಇದ್ದುವು. ಇಂತಹ ನಾನಾರೂಪಗಳ ರಾಕ್ಷಸಿಯರಿಗೆ ರಾವಣನು ಆಜ್ಞಾಪಿಸಿದನು :

**ಯಥಾ ಮದ್ವಶಗಾ ಸೀತಾ ಕ್ಷಿಪ್ರಂ ಭವತಿ ಜಾನಕೀ ॥೩೬॥**

**ತಥಾ ಕುರುತ ರಾಕ್ಷಸ್ಯಃ ಸರ್ವಾಃ ಕ್ಷಿಪ್ರಂ ಸಮೇತ್ಯ ಚ ।**

**ಪ್ರತಿಲೋಮಾನುಲೋಮೈಶ್ಚ ಸಾಮದಾನಾದಿಭೇದನೈಃ ।**
**ಆವರ್ಜಯತ ವೈದೇಹೀಂ ದಣ್ಡಸ್ಯೋದ್ಯಮನೇನ ಚ ॥೩೭॥**

"ರಾಕ್ಷಸಿಯರೇ! ಸೀತೆಯು ಬಹಳ ಶೀಘ್ರವಾಗಿ ನನ್ನವಳಾಗುವಂತೆ ಮಾಡಿರಿ. ನೀವೆಲ್ಲರೂ ಒಟ್ಟಾಗಿ ಸೇರಿ ಪ್ರತಿಕೂಲವಾದ ಮತ್ತು ಅನುಕೂಲ ವಾದ ಕಾರ್ಯಗಳಿಂದಲೂ, ಸಾಮ-ದಾನ-ಭೇದೋಪಾಯಗಳಿಂದಲೂ, ಕಡೆಗೆ ದಂಡವನ್ನು ಪ್ರಯೋಗಿಸಿಯಾದರೂ ವೈದೇಹಿಯು ನನ್ನ ವಶಳಾಗು ವಂತೆ ಮಾಡಿರಿ."

ಕಾಮ-ಕ್ರೋಧಗಳಿಂದ ಆಕ್ರಾಂತನಾಗಿದ್ದ ರಾಕ್ಷಸೇಂದ್ರನಾದ ರಾವಣನು ರಾಕ್ಷಸಿಯರಿಗೆ ಪುನಃ ಪುನಃ ನಿರ್ದೇಶಿಸುತ್ತಾ ಜಾನಕಿಯನ್ನು ಹೆದರಿಸಿದನು. ಆ ಸಮಯಕ್ಕೆ ಸರಿಯಾಗಿ ಧಾನ್ಯಮಾಲಿನೀ ಎಂಬ ರಾಕ್ಷಸಿಯು ಬಹಳ ಬೇಗ ರಾವಣನ ಬಳಿಗೆ ಹೋಗಿ ಅವನನ್ನು ಆಲಿಂಗಿಸಿ ಕೊಂಡು ಹೇಳಿದಳು :

**ಮಯಾ ಕ್ರೀಡ ಮಹಾರಾಜ ಸೀತಯಾ ಕಿಂ ತವಾನಯಾ ।**
**ವಿವರ್ಣಯಾ ಕೃಪಣಯಾ ಮಾನುಷ್ಯಾ ರಾಕ್ಷಸೇಶ್ವರ ॥೪೦॥**

"ರಾಕ್ಷಸೇಶ್ವರನೇ! ಮಹಾರಾಜ! ನನ್ನೊಡನೆ ರಮಿಸು. ಕಾಂತಿಹೀನ ಳಾಗಿರುವ, ಮನುಷ್ಯಮಾತ್ರಳಾಗಿರುವ ಈ ಜಾನಕಿಯಿಂದ ನಿನಗೇನಾಗ ಬೇಕಾಗಿದೆ? ನಿನ್ನ ಬಾಹುಬಲದಿಂದ ಉಪಾರ್ಜಿತವಾಗಿರುವ ದಿವ್ಯವಾದ ಭೋಗಸಾಮಗ್ರಿಗಳನ್ನು ಅನುಭವಿಸಲು ಅಮರಶ್ರೇಷ್ಠನಾದ ಬ್ರಹ್ಮನು ಇವಳ ಹಣೆಯಲ್ಲಿ ಬರೆದಿಲ್ಲವೆಂಬುದು ನಿಜ.

**ಅಕಾಮಾಂ ಕಾಮಯಾನಸ್ಯ ಶರೀರಮುಪತಪ್ಯತೇ ।**
**ಇಚ್ಛನ್ತೀಂ ಕಾಮಯಾನಸ್ಯ ಪ್ರೀತಿರ್ಭವತಿ ಶೋಭನಾ ॥೪೨॥**

ಒಲಿಯದಿರುವವಳನ್ನು ಕಾಮಿಸಹೋಗುವವನ ಶರೀರವು ಬಹಳವಾಗಿ ಪರಿತಪಿಸುತ್ತದೆ. ತಾನಾಗಿಯೇ ಬಯಸಿಬಂದವಳನ್ನು ಕಾಮಿಸುವವನಿಗೆ ಅಂತಹವಳ ಸಮಾಗಮದಿಂದ ಶೋಭನವಾದ ಪ್ರೀತಿಯುಂಟಾಗುತ್ತದೆ."

ಧಾನ್ಯಮಾಲಿನಿಯು ರಾಕ್ಷಸೇಶ್ವರನಿಗೆ ಹೀಗೆ ಹೇಳಿ ರಾವಣನನ್ನು ಬೇರೆಡೆಗೆ ಒಯ್ದಳು. ಬಲಿಷ್ಠನಾದ ಮೇಘಸದೃಶನಾದ ರಾಣವನು ಗಹ-ಗಹಿಸಿ ನಗುತ್ತಾ ಆ ಸ್ಥಳದಿಂದ ಹಿಂದಿರುಗಿದನು.

ಅಶೋಕವನದಿಂದ ಹೊರಟ ರಾವಣನು ಭೂಮಿಯನ್ನೇ ನಡುಗಿಸುತ್ತಿರುವನೋ ಎಂಬಂತೆ ಹೆಜ್ಜೆಗಳನ್ನಿಡುತ್ತಾ ಪ್ರಜ್ವಲಿಸುವ ಸೂರ್ಯನಿಗೆ ಸದೃಶವಾಗಿದ್ದ ಅರಮನೆಯನ್ನು ಪ್ರವೇಶಿಸಿದನು. ದೇವ-ಗಂಧರ್ವ-ನಾಗಕನ್ಯೆಯರೂ ದಶಗ್ರೀವನನ್ನು ಸುತ್ತುವರಿದು ಅವನ ಜೊತೆಯಲ್ಲಿಯೇ ಉತ್ತಮೋತ್ತಮವಾದ ಅರಮನೆಯನ್ನು ಪ್ರವೇಶಿಸಿದರು. ಮದನಮೋಹಿತನಾದ ರಾವಣನು ಧರ್ಮಪರಾಯಣೆಯಾದ, ಭಯದಿಂದ ತರ-ತರನೆ ನಡುಗುತ್ತಿದ್ದ ಸೀತೆಯನ್ನು ಗರ್ಜನೆಯಿಂದ ಮತ್ತಷ್ಟು ಹೆದರಿಸುತ್ತಾ ಅವಳನ್ನು ಅಲ್ಲಿಯೇ ಬಿಟ್ಟು ಪ್ರಕಾಶಮಾನವಾದ ತನ್ನ ಅರಮನೆಯನ್ನು ಪ್ರವೇಶಿಸಿದನು.

೨೨ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೨೩ನೆಯ ಸರ್ಗ

## ರಾಕ್ಷಸಿಯರು ಸೀತೆಯನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದುದು

**ಇತ್ಯುಕ್ತ್ವಾ ಮೈಥಿಲೀಂ ರಾಜಾ ರಾವಣಃ ಶತ್ರುರಾವಣಃ ।**
**ಸಂದಿಶ್ಯ ಚ ತತಃ ಸರ್ವಾ ರಾಕ್ಷಸೀರ್ನಿರ್ಜಗಾಮ ಹ ॥೧॥**

ಶತ್ರುಗಳನ್ನು 'ಹಾ ಹಾ' ಎಂದು ಕೂಗಿಕೊಳ್ಳುವಂತೆ ಮಾಡಲು ಸಮರ್ಥನಾಗಿದ್ದ ರಾವಣನು ಸೀತಾದೇವಿಗೆ ಹೀಗೆ ಹೇಳಿ ಅವಳನ್ನು ಬಹಳ ಬೇಗ ತನ್ನ ವಶಳಾಗುವಂತೆ ಮಾಡಬೇಕೆಂದು ಎಲ್ಲ ರಾಕ್ಷಸಿಯರಿಗೂ ಆಜ್ಞಾಪಿಸಿ ಅಶೋಕವನದಿಂದ ನಿರ್ಗಮಿಸಿದನು.*

ರಾಕ್ಷಸೇಂದ್ರನು ಅಂತಃಪುರಕ್ಕೆ ಹೊರಟುಹೋದನಂತರ ಭಯಂಕರ ರೂಪಿಣಿಯರಾದ ರಾಕ್ಷಸಿಯರು ಸೀತೆಯ ಕಡೆಗೆ ವೇಗವಾಗಿ ಧಾವಿಸಿದರು. ಸೀತೆಯ ಬಳಿಗೆ ಬಂದು ಕ್ರೋಧಾಭಿಭೂತೆಯರಾಗಿ ಅತ್ಯಂತಕಠೋರವಾದ ಈ ಮಾತುಗಳನ್ನು ಹೇಳಿದರು :

"ಸೀತೇ! ಪುಲಸ್ತ್ಯವಂಶೀಯನಾದ, ಮಹಾತ್ಮನಾದ, ಶ್ರೇಷ್ಠನಾದ,

---

* ಶತ್ರುರಾವಣಃ : ಶತ್ರೂನ್ ರಾವಯತಿ ಹಾಹಾಶಬ್ದಂ ಕಾರಯತಿ ಸಃ= ಶತ್ರು ಗಳನ್ನು ಹಾಹಾ ಎಂದು ಕೂಗಿಕೊಳ್ಳುವಂತೆ ಮಾಡುವವನು.

ದಶಕಂಠರಾವಣನಿಗೆ ಭಾರ್ಯೆಯಾಗುವುದನ್ನು ನೀನು ಒಂದು ದೊಡ್ಡ ಪುರಸ್ಕಾರವೆಂದೇಕೆ ಭಾವಿಸುತ್ತಿಲ್ಲ? ಇದು ನಿನ್ನ ಮೌಢ್ಯವೇ ಸರಿ."

ರಾಕ್ಷಸಿಯರೆಲ್ಲರೂ ಒಟ್ಟಾಗಿ ಹೀಗೆ ಹೇಳಿದನಂತರ ಆ ರಾಕ್ಷಸಿಯರಲ್ಲಿ ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ಮಾತನಾಡತೊಡಗಿದರು.

ಕ್ರೋಧದಿಂದ ಕೆಂಗಣ್ಣಳಾಗಿದ್ದ ಏಕಜಟಾ ಎಂಬ ರಾಕ್ಷಸಿಯು ಅಂಗೈಯಷ್ಟು ತೆಳುವಾದ ಹೊಟ್ಟೆಯುಳ್ಳವಳಾಗಿದ್ದ ಸೀತಾದೇವಿಯನ್ನು ಸಂಬೋಧಿಸಿ ಹೇಳಿದಳು :

"ಸೀತೆ! ಮರೀಚಿ-ಅತ್ರಿ-ಅಂಗಿರಸ-ಪುಲಸ್ತ್ಯ-ಪುಲಹ ಮತ್ತು ಕ್ರತು ಎಂಬ ಆರು ಪ್ರಜಾಪತಿಗಳಲ್ಲಿ ನಾಲ್ಕನೆಯವನಾದ ಮತ್ತು ವಿಖ್ಯಾತನಾದ ಪುಲಸ್ತ್ಯನು ಬ್ರಹ್ಮಮಾನಸಪುತ್ರನು. ಪ್ರಜಾಪತಿಗಳ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿರುವ, ಮಹಾತೇಜಸ್ವಿಯಾದ, ವಿಶ್ರವಸನೆಂಬ ಹೆಸರಿನಿಂದ ಪ್ರಸಿದ್ಧನಾಗಿರುವ ಮಹರ್ಷಿಯು ಪುಲಸ್ತ್ಯಮಹರ್ಷಿಯ ಮಾನಸಪುತ್ರನು. ಆ ವಿಶ್ರವಸನ ಮಗನೇ ಶತ್ರುರಾವಣನಾದ, ಮಹಾ ಪರಾಕ್ರಮಿಯಾದ ರಾವಣೇಶ್ವರನು. ಅಂತಹ ಮಹಾನುಭಾವನಾದ, ಮಹಾಪರಾಕ್ರಮಿಯಾದ, ಸದ್ವಂಶಪ್ರಸೂತನಾದ ರಾವಣೇಶ್ವರನಿಗೆ ಭಾರ್ಯೆ ಯಾಗಲು ನೀನು ಯೋಗ್ಯಳಾಗಿರುವೆ. ಸುಂದರಾಂಗಿಯೇ! ನನ್ನ ಈ ಮಾತನ್ನು ನೀನು ಅನುಮೋದಿಸುವುದಿಲ್ಲವೇಕೆ?"

ಸೀತೆಯು ಉತ್ತರಿಸಲಿಲ್ಲ.

ಬಳಿಕ ಬೆಕ್ಕಿನ ಕಣ್ಣಿನವಳಾದ ಹರಿಜಟಾ ಎಂಬ ಹೆಸರಿನ ರಾಕ್ಷಸಿಯು ಕಣ್ಣುಗಳನ್ನರಳಿಸಿಕೊಂಡು ಕೋಪದಿಂದ ಹೇಳಿದಳು :

"ಸೀತಾದೇವಿ! ರಾವಣನು ಮೂವತ್ತುಮೂರು ಪ್ರಮುಖದೇವತೆ ಗಳನ್ನೂ ದೇವೇಂದ್ರನನ್ನೂ ತನ್ನ ಅತುಲಪರಾಕ್ರಮದಿಂದ ಜಯಿಸಿದ್ದಾನೆ. ಅಂತಹವನಿಗೆ ನೀನು ಭಾರ್ಯೆಯಾಗಲು ಖಂಡಿತವಾಗಿಯೂ ಯೋಗ್ಯಳಾ ಗಿರುವೆ. ವೀರ್ಯದಿಂದ ಕೊಬ್ಬಿರುವ, ಶೂರನಾದ, ಯುದ್ಧಗಳಲ್ಲಿ ವಿಜಯಿ ಯಾಗದೇ ಯಾವಾಗಲೂ ಹಿಂದಿರುಗದಿರುವ, ಮಹಾಬಲಿಷ್ಠನಾದ, ಮಹಾ ವೀರ್ಯಯುಕ್ತನಾದ ರಾವಣನಿಗೆ ಭಾರ್ಯೆಯಾಗಲು ನೀನೇಕೆ ಅಪೇಕ್ಷಿಸು

ತ್ತಿಲ್ಲ? ಎಲ್ಲ ಶ್ರೇಷ್ಠನಾರಿಯರ ಮಧ್ಯದಲ್ಲಿ ಅತ್ಯಂತಪ್ರಿಯಳಾದ, ಎಲ್ಲರಿಂದಲೂ ಗೌರವಿಸಲ್ಪಡುತ್ತಿರುವ, ಮಹಾಭಾಗ್ಯಶಾಲಿನಿಯಾದ ಮಂಡೋದರಿಯನ್ನು ಕೂಡ ಪರಿತ್ಯಜಿಸಿ ಮಹಾಬಲನಾದ ರಾವಣನು ನಿನ್ನನ್ನು ಅಪೇಕ್ಷಿಸಿದ್ದಾನೆ. ಆದುದರಿಂದ ಅವನಿಗೆ ಭಾರ್ಯೆಯಾಗುವುದು ನಿನಗೆ ಉಚಿತವಾಗಿದೆ."

ಸೀತೆಯು ಮೌನಧರಿಸಿ ಅವರು ಹೇಳುತ್ತಿದ್ದುದೆಲ್ಲವನ್ನೂ ಕೇಳುತ್ತಾ ಕುಳಿತಿದ್ದಳು. ವಿಕಟಾ ಎಂಬ ಹೆಸರಿನ ಮತ್ತೊಬ್ಬ ರಾಕ್ಷಸಿಯು ಸೀತೆಗೆ ಹೇಳತೊಡಗಿದಳು :

"ನಾಗ-ಗಂಧರ್ವ-ದಾನವರನ್ನು ಹಲವಾರು ಬಾರಿ ಪರಾಜಯಗೊಳಿಸಿರುವ ಭಯಂಕರಪರಾಕ್ರಮಿಯಾದ, ಮಹಾಶೂರನಾದ ರಾವಣೇಶ್ವರನು ಪ್ರಣಯಭಿಕ್ಷೆಯನ್ನು ಬೇಡುತ್ತಾ ನಿನ್ನ ಬಳಿಗೆ ಬಂದನು. ನೀಚಳೇ! ಸರ್ವಸಮೃದ್ಧಿಯನ್ನು ಹೊಂದಿರುವ ಮಹಾತ್ಮನಾದ ರಾಕ್ಷಸೇಂದ್ರನಿಗೆ ಪತ್ನಿಯಾಗಲು ನೀನೇಕೆ ಬಯಸುತ್ತಿಲ್ಲ?"

ಬಳಿಕ ದುರ್ಮುಖೀ ಎಂಬ ಹೆಸರಿನ ರಾಕ್ಷಸಿಯು ಸೀತೆಗೆ ಉಪದೇಶಿಸತೊಡಗಿದಳು :

**ಯಸ್ಯ ಸೂರ್ಯೋ ನ ತಪತಿ ಭೀತೋ ಯಸ್ಯ ನ ಮಾರುತಃ ।**
**ನ ವಾತಿ ಸ್ಮಾಯತಾಪಾಙ್ಗೇ ಕಿಂ ತ್ವಂ ತಸ್ಯ ನ ತಿಷ್ಠಸಿ ॥೧೬॥**

"ದೀರ್ಘವಾದ ಕಡೆಗಣ್ಣುಗಳುಳ್ಳವಳೇ! ಯಾವನ ಭಯದಿಂದ ಸೂರ್ಯನು ತಾಪವನ್ನೇ ಉಂಟುಮಾಡುವುದಿಲ್ಲವೋ, ವಾಯುವು ವೇಗವಾಗಿ ಬೀಸುವುದೇ ಇಲ್ಲವೋ–ಅಂತಹ ಪ್ರತಾಪಶಾಲಿಯಾದ ರಾವಣನ ಅಧೀನದಲ್ಲಿರಲು ನೀನೇಕೆ ಒಪ್ಪುತ್ತಿಲ್ಲ?

**ಪುಷ್ಪವೃಷ್ಟಿಂ ಚ ತರವೋ ಮುಮುಚುರ್ಯಸ್ಯ ವೈ ಭಯಾತ್ ।**
**ಶೈಲಾಶ್ಚ ಸುಭ್ರೂಃ ಪಾನೀಯಂ ಜಲದಾಶ್ಚ ಯದೇಚ್ಛತಿ ॥೧೭॥**

ಶೋಭನವಾದ ಹುಬ್ಬುಗಳುಳ್ಳವಳೇ! ವೃಕ್ಷಗಳು ಯಾವನ ಭಯ ದಿಂದ ಅವನಿಚ್ಛಿಸಿದಾಗ ಹೂಗಳ ಮಳೆಗರೆಯುವುವೋ, ಪರ್ವತಗಳು ಮತ್ತು ಮೇಘಗಳು ಯಾವನು ಇಚ್ಛಿಸಿದಾಗಲೇ ನೀರನ್ನು ಸುರಿಸುವುವೋ– ಅಂತಹ ರಾಕ್ಷಸಚಕ್ರವರ್ತಿಯಾದ ರಾವಣೇಶ್ವರನ ಭಾರ್ಯೆಯಾಗಲು ನೀನೇಕೆ ಮನಸ್ಸು ಮಾಡುತ್ತಿಲ್ಲ?

ಭಾಮಿನಿಯೇ! ಮಂದಹಾಸಿನಿಯೇ! ಒಳ್ಳೆಯ ರೀತಿಯಲ್ಲಿ ಯಥಾವತ್ತಾಗಿ ಹೇಳುತ್ತಿರುವ ನಮ್ಮ ಮಾತನ್ನು ಒಳ್ಳೆಯ ಭಾವನೆಯಿಂದ ಪರಿಗ್ರಹಿಸು. ಹಾಗೇನಾದರೂ ನೀನು ನಮ್ಮ ಮಾತನ್ನು ಕೇಳದಿದ್ದರೆ ಖಂಡಿತ ವಾಗಿಯೂ ಉಳಿಯಲಾರೆ."

೨೩ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೨೪ನೆಯ ಸರ್ಗ

## ಸೀತಾದೇವಿಯು ರಾಕ್ಷಸಿಯರ ಮಾತನ್ನು ತಿರಸ್ಕರಿಸಿದುದು : ರಾಕ್ಷಸಿಯರು ಅವಳನ್ನು ಕೊಲ್ಲುವುದಾಗಿ ಹೆದರಿಸಿದುದು

**ತತಃ ಸೀತಾಂ ಸಮಸ್ತಾಸ್ತಾ ರಾಕ್ಷಸ್ಯೋ ವಿಕೃತಾನನಾಃ ।**
**ಪರುಷಂ ಪರುಷಾ ನಾರ್ಯ ಊಚುಸ್ತಾಂ ವಾಕ್ಯಮಪ್ರಿಯಮ್ ॥**

ಅನಂತರ ವಿಕಾರವದನೆಯರಾದ ಆ ಎಲ್ಲ ರಾಕ್ಷಸಿಯರೂ ಸೇರಿಕೊಂಡು ಕಠೋರವಾದ ಮಾತುಗಳನ್ನು ಕೇಳಲು ಅನರ್ಹಳಾಗಿದ್ದ ಸೀತಾದೇವಿಗೆ ಅತಿಕಠೋರವೂ ಅಪ್ರಿಯವೂ ಆದ ಮಾತುಗಳನ್ನು ಪುನಃ ಹೇಳತೊಡಗಿದರು :

"ಜಾನಕಿ! ಸಮಸ್ತಪ್ರಾಣಿಗಳ ಮನಸ್ಸುಗಳನ್ನೂ ಅಪಹರಿಸುವ ಸೌಂದರ್ಯದಿಂದ ಕೂಡಿರುವ, ಅನರ್ಘವಾದ ಹಂಸತೂಲಿಕಾತಲ್ಪದಿಂದ ಯಕ್ತವಾದ ರಾವಣೇಶ್ವರನ ಅಂತಃಪುರದಲ್ಲಿ ವಾಸಮಾಡಲು ನೀನೇಕೆ ಒಪ್ಪಿಕೊಳ್ಳುತ್ತಿಲ್ಲ? ಮನುಷ್ಯಳಾಗಿರುವ ನೀನು ಸಾಮಾನ್ಯಮನುಷ್ಯನೊಬ್ಬನ ಹೆಂಡತಿಯಾಗಿರುವುದನ್ನೇ ಸಮಾದರಿಸುತ್ತಿರುವೆ. ಇದು ಸರಿಯಲ್ಲ. ಅವನಿಂದ ನಿನ್ನ ಮನಸ್ಸನ್ನು ಹಿಂದಕ್ಕೆ ತೆಗೆದುಕೋ. ಏಕೆಂದರೆ : ನೀನು ಯಾವುದೇ ಕಾರಣದಿಂದಲೂ ಪುನಃ ರಾಮನ ಭಾರ್ಯೆಯಾಗುವುದಿಲ್ಲ. ಮೂರು ಲೋಕಗಳ ಐಶ್ವರ್ಯವನ್ನೂ ಉಪಭೋಗಿಸುತ್ತಿರುವ ರಾಕ್ಷಸೇಶ್ವರನಾದ ರಾವಣನನ್ನು ಪತಿಯನ್ನಾಗಿ ಮಾಡಿಕೊಂಡು ಸುಖವಾಗಿ ಅವನೊಡನೆ ವಿಹರಿಸು. ಅನಿಂದಿತಳೇ! ಶೋಭನಳೇ! ಮನುಷ್ಯಮಾತ್ರಳಾಗಿರುವ ನಿನಗೆ ಇಂತಹ ಒಳ್ಳೆಯ ಅವಕಾಶವು ಸಿಕ್ಕಿರುವಾಗ ಹುಲುಮನುಜನಾದ, ರಾಜ್ಯದಿಂದ ಭ್ರಷ್ಟನಾದ, ಅಪ್ರಯೋಜಕನಾದ, ಶಕ್ತಿಹೀನನಾದ ರಾಮನನ್ನೇ ಪುನಃ ಸೇರಲು ಅಪೇಕ್ಷಿಸುತ್ತಿರುವೆ. ನಿಶ್ಚಯವಾಗಿಯೂ ನೀನು ಮೂಢಳೇ ಸರಿ."

ಕಮಲಲೋಚನೆಯಾದ ಸೀತಾದೇವಿಯು ರಾಕ್ಷಸಿಯರು ಹೇಳಿದ ಕರ್ಣಕಠೋರವಾದ ಮಾತುಗಳನ್ನು ಕೇಳಿ ಕಂಬನಿದುಂಬಿದ ಕಣ್ಣುಗಳುಳ್ಳವಳಾಗಿ ಹೀಗೆಂದಳು :

“ರಾಕ್ಷಸಿಯರೇ! ನೀವೆಲ್ಲರೂ ಸೇರಿ ಹೇಳುತ್ತಿರುವ ಲೋಕಮರ್ಯಾದೆಗೆ ವಿರುದ್ಧವಾದ ಪಾಪಯುಕ್ತವಾದ ಮಾತು ನನ್ನ ಮನಸ್ಸಿನಲ್ಲಿ ಕ್ಷಣಕಾಲವೂ ಉಳಿಯುವುದಿಲ್ಲ. ನೀವು ಹೇಳುವ ಯಾವ ಮಾತೂ ನನ್ನ ಮನಸ್ಸಿಗೆ ಹಿಡಿಸುತ್ತಿಲ್ಲ.

**ನ ಮಾನುಷೀ ರಾಕ್ಷಸಸ್ಯ ಭಾರ್ಯಾ ಭವಿತುಮರ್ಹತಿ ।**
**ಕಾಮಂ ಖಾದತ ಮಾಂ ಸರ್ವಾ ನ ಕರಿಷ್ಯಾಮಿ ವೋ ವಚಃ ॥೮॥**

ಮನುಷ್ಯಸ್ತ್ರೀಯು ರಾಕ್ಷಸನ ಪತ್ನಿಯಾಗುವುದು ಖಂಡಿತವಾಗಿಯೂ ಯೋಗ್ಯವಲ್ಲ. ಆದುದರಿಂದ ನಾನು ನಿಮ್ಮ ಮಾತಿನಂತೆ ನಡೆಯಲಾರೆನು. ನೀವೆಲ್ಲರೂ ಸೇರಿ ನನ್ನನ್ನು ಇಷ್ಟಬಂದಂತೆ ತಿಂದುಹಾಕಿರಿ.

**ದೀನೋ ವಾ ರಾಜ್ಯಹೀನೋ ವಾ**
**ಯೋ ಮೇ ಭರ್ತಾ ಸ ಮೇ ಗುರುಃ ।**
**ತಂ ನಿತ್ಯಮನುರಕ್ತಾಸ್ಮಿ**
**ಯಥಾ ಸೂರ್ಯಂ ಸುವರ್ಚಲಾ ॥೯॥**

**ಯಥಾ ಶಚೀ ಮಹಾಭಾಗಾ ಶಕ್ರಂ ಸಮುಪತಿಷ್ಠತಿ ।**
**ಅರುನ್ಧತೀ ವಸಿಷ್ಠಂ ಚ ರೋಹಿಣೀ ಶಶಿನಂ ಯಥಾ ॥೧೦॥**

**ಲೋಪಾಮುದ್ರಾ ಯಥಾಗಸ್ತ್ಯಂ ಸುಕನ್ಯಾ ಚ್ಯವನಂ ಯಥಾ ।**
**ಸಾವಿತ್ರೀ ಸತ್ಯವನ್ತಂ ಚ ಕಪಿಲಂ ಶ್ರೀಮತೀ ಯಥಾ ॥೧೧॥**

**ಸೌದಾಸಂ ಮದಯನ್ತೀವ ಕೇಶಿನೀ ಸಗರಂ ಯಥಾ ।**
**ನೈಷಧಂ ದಮಯನ್ತೀವ ಭೈಮೀ ಪತಿಮನುವ್ರತಾ ।**
**ತಥಾಹಮಿಕ್ಷ್ವಾಕುವರಂ ರಾಮಂ ಪತಿಮನುವ್ರತಾ ॥೧೨॥**

ನನ್ನ ಪತಿಯು ದೀನನಾಗಿರಲಿ, ರಾಜ್ಯಹೀನನೇ ಆಗಿರಲಿ–ಅವನೇ ನನ್ನ ಗುರುವು. ಸುವರ್ಚಲೆಯು ಸೂರ್ಯನನ್ನೂ, ಶಚೀದೇವಿಯು ಇಂದ್ರ

ನನ್ನೂ, ಅರುಂಧತಿಯು ವಸಿಷ್ಠರನ್ನೂ, ರೋಹಿಣಿಯು ಚಂದ್ರನನ್ನೂ, ಲೋಪಾಮುದ್ರೆಯು ಅಗಸ್ತ್ಯರನ್ನೂ, ಸುಕನ್ಯೆಯು ಚ್ಯವನನನ್ನೂ, ಸಾವಿತ್ರಿಯು ಸತ್ಯವಂತನನ್ನೂ, ಶ್ರೀಮತಿಯು ಕಪಿಲಮಹರ್ಷಿಯನ್ನೂ, ಮದಯಂತಿಯು ಸೌದಾಸನನ್ನೂ, ಕೇಶಿನಿಯು ಸಗರನನ್ನೂ, ಭೀಮರಾಜನ ಮಗಳಾದ ಪತಿವ್ರತೆಯಾದ ದಮಯಂತಿಯು ನಲನನ್ನೂ ಅನುಸರಿಸಿದಂತೆ ನಾನೂ ನನ್ನ ಪತಿಯಾದ ಇಕ್ಷ್ವಾಕುಕುಲತಿಲಕನಾದ ಶ್ರೀರಾಮನನ್ನೇ ಅನುಸರಿಸಿಕೊಂಡಿರುತ್ತೇನೆ."

ಕ್ರೋಧಾಭಿಭೂತೆಯರಾಗಿದ್ದ ಆ ರಾಕ್ಷಸಿಯರು ರಾವಣನಿಂದ ಪ್ರೇರಿತ ರಾಗಿ ಸೀತಾದೇವಿಯು ಹೀಗೆ ಹೇಳಿದ ನಂತರವೂ ಕರ್ಣಕಠೋರವಾದ ಮಾತುಗಳಿಂದ ಅವಳನ್ನು ಮತ್ತೆ ಮತ್ತೆ ಭಯಪಡಿಸುತ್ತಲೇ ಇದ್ದರು.

ಶಿಂಶುಪಾವೃಕ್ಷದಲ್ಲಿ ಯಾವ ಮಾತನ್ನೂ ಆಡದೇ ಹುದುಗಿಕೊಂಡಿದ್ದ ಹನುಮಂತನು ಸೀತಾದೇವಿಯನ್ನು ಭಯಪಡಿಸುತ್ತಿದ್ದ ಆ ರಾಕ್ಷಸಿಯರ ಮಾತುಗಳೆಲ್ಲವನ್ನೂ ಕೇಳುತ್ತಿದ್ದನು.

ಕೋಪಗೊಂಡಿದ್ದ ಆ ರಾಕ್ಷಸಿಯರು ತರ-ತರನೆ ನಡುಗುತ್ತಿದ್ದ ಸೀತಾ ದೇವಿಯನ್ನು ಸುತ್ತುವರಿದು ಕುಳಿತು ಪ್ರದೀಪ್ತವಾಗಿಯೂ ಜೋಲಾಡು ತ್ತಲೂ ಇದ್ದ ತುಟಿಗಳನ್ನು ಕ್ಷಣಕ್ಷಣಕ್ಕೂ ನೆಕ್ಕಿಕೊಳ್ಳುತ್ತಿದ್ದರು. ಪರಮ ಕ್ರುದ್ಧೆಯರಾಗಿದ್ದ ಆ ರಾಕ್ಷಸಿಯರು ಗಂಡುಗೊಡಲಿಗಳನ್ನು ಮೇಲೆತ್ತಿ– '**ನೇಯಮರ್ಹತಿ ಭರ್ತಾರಂ ರಾವಣಂ ರಾಕ್ಷಸಾಧಿಪಮ್ ॥೧೬॥** ರಾಕ್ಷಸಾಧಿಪತಿಯಾದ ರಾವಣನನ್ನು ಪತಿಯನ್ನಾಗಿ ವರಿಸಲು ಇವಳು ಖಂಡಿತವಾಗಿಯೂ ಯೋಗ್ಯಳಲ್ಲ. ಆದುದರಿಂದ ಇವಳನ್ನು ಸಂಹರಿಸು ವುದೇ ಯುಕ್ತವಾಗಿದೆ'–ಎಂದು ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದರು.

ಭಯಂಕರರಾದ ರಾಕ್ಷಸಿಯರು ಹೀಗೆ ಭಯಪಡಿಸುತ್ತಿ ದ್ದಾ ಡುರಾಂಗನೆ ಯಾದ ಸೀತಾದೇವಿಯು ಕಣ್ಣೀರನ್ನು ಒರೆಸಿಕೊಳ್ಳುತ್ತಾ ಹನುಮಂತನು ಅವಿತುಕೊಂಡಿದ್ದ ಶಿಂಶುಪಾವೃಕ್ಷದ ಬಳಿಗೆ ಹೋದಳು. ಕಾವಲಿದ್ದ ರಾಕ್ಷಸಿ ಯರೂ ಅಲ್ಲಿಗೇ ಹೋಗಿ ಅವಳನ್ನು ಸುತ್ತುವರಿದು ಕುಳಿತರು. ಶೋಕಾಭಿ ಭೂತಳಾಗಿ ಸೀತಾದೇವಿಯೂ ಅವರ ಮಧ್ಯದಲ್ಲಿ ಕುಳಿತುಕೊಂಡಳು.

ಸೀತೆಯು ರಾಮವಿಯೋಗವ್ಯಸನದಿಂದ ಅತ್ಯಂತಕೃಶಳಾಗಿದ್ದಳು. ದೀನ ವದನೆಯಾಗಿದ್ದಳು. ಮಲಿನವಾದ ವಸ್ತ್ರವನ್ನುಟ್ಟಿದ್ದಳು. ಸುತ್ತಲೂ ಕುಳಿತಿದ್ದ ಭಯಂಕರಾಕಾರದ ರಾಕ್ಷಸಿಯರು ಅವಳನ್ನು ಭಯಪಡಿಸುತ್ತಲೇ ಇದ್ದರು.

ಅತ್ಯಂತಭಯಂಕರವಾಗಿ ಕಾಣುತ್ತಿದ್ದ, ಕೋಪಗೊಂಡಿದ್ದ, ಉಬ್ಬು ಹಲ್ಲುಗಳಿದ್ದ, ಹಳ್ಳದಂತೆ ಹೊಟ್ಟೆಯಿದ್ದ ವಿನತಾ ಎಂಬ ರಾಕ್ಷಸಿಯು ಪುನಃ ಸೀತೆಗೆ ಹೇಳತೊಡಗಿದಳು.

"ಸೀತಾದೇವಿ! ನಿನ್ನ ಗಂಡನ ವಿಷಯದಲ್ಲಿ ನಿನಗಿರುವ ಪ್ರೀತಿಯನ್ನು ಇಲ್ಲಿಯವರೆಗೂ ಪ್ರದರ್ಶಿಸಿರುವೆ. ಅದನ್ನು ಇಷ್ಟಕ್ಕೇ ಸಾಕುಮಾಡು.

**ಸರ್ವತ್ರಾತಿಕೃತಂ ಭದ್ರೇ ವ್ಯಸನಾಯೋಪಕಲ್ಪತೇ ॥೨೧॥**

ಮಂಗಳಾಂಗಿಯೇ! ಯಾವ ವಿಷಯದಲ್ಲೇ ಆಗಲೀ–ಯಾವಾಗಲೂ ಅತಿಯಾಗಿ ವರ್ತಿಸುವುದು ವ್ಯಸನಕ್ಕೆ ಕಾರಣವಾಗುತ್ತದೆ.

ಮನುಷ್ಯಸ್ತ್ರೀಯರು ತಮ್ಮ ಗಂಡಂದಿರ ವಿಷಯದಲ್ಲಿ ಹೇಗಿರಬೇಕೆಂಬು ದನ್ನು ನೀನು ಅನುಷ್ಠಾನದಲ್ಲಿ ತೋರಿಸಿಕೊಟ್ಟಿರುವೆ. ಇದರಿಂದ ನನಗೆ ಸಂತೋಷವಾಗಿದೆ. ನಿನಗೆ ಮಂಗಳವಾಗಲಿ. ಆದರೆ ನಿನಗೆ ಹಿತವಾಗುವು ದನ್ನೇ ಹೇಳಲಿರುವ ನನ್ನ ಮಾತಿನಂತೆ ನಡೆದುಕೊ. ದೇವತೆಗಳ ಒಡೆಯನಾದ ಇಂದ್ರನಂತೆ ಪರಾಕ್ರಮಿಯೂ ರೂಪವಂತನೂ ಆಗಿರುವ, ಎಲ್ಲ ರಾಕ್ಷಸರಿಗೂ ಅಧಿಪತಿಯಾಗಿರುವ ರಾವಣನನ್ನು ಪತಿಯನ್ನಾಗಿ ವರಿಸಿ ಸೇವಿಸು. ಮನುಷ್ಯಮಾತ್ರದವನಾದ ಮತ್ತು ದೀನನಾದ ರಾಮನನ್ನು ಪರಿತ್ಯಜಿಸು. ಸಮರ್ಥನಾದ, ತ್ಯಾಗಶೀಲನಾದ, ಎಲ್ಲರೊಡನೆಯೂ ಪ್ರಿಯವಾದ ಮಾತು ಗಳನ್ನೇ ಆಡುವ ರಾವಣೇಶ್ವರನನ್ನು ಆಶ್ರಯಿಸು. ಲೋಕೇಶ್ವರನಾದ ರಾವಣ ನನ್ನು ವರಿಸಿ ದಿವ್ಯವಾದ ಅಂಗರಾಗಗಳನ್ನು ಪೂಸಿಕೊಂಡು, ದಿವ್ಯಾಭರಣ ಗಳಿಂದ ಸಮಲಂಕೃತಳಾಗಿ ಇಂದು ಮೊದಲ್ಗೊಂಡು ಎಲ್ಲ ಲೋಕಗಳಿಗೂ ಈಶ್ವರಿಯಾಗು. ಶೋಭನಳೇ! ಅಗ್ನಿದೇವನಿಗೆ ಸ್ವಾಹಾದೇವಿಯು ಪತ್ನಿಯಾಗಿರುವಂತೆಯೂ–ಇಂದ್ರನಿಗೆ ಶಚೀದೇವಿಯು ಪತ್ನಿಯಾಗಿರು ವಂತೆಯೂ–ನೀನು ರಾವಣೇಶ್ವರನಿಗೆ ಪತ್ನಿಯಾಗು. ಅಲ್ಪಾಯುವಾದ ಮತ್ತು ದೀನನಾದ ರಾಮನಿಂದ ನಿನಗೇನಾಗಬೇಕಾಗಿದೆ? ನಾನು ಹೇಳುವ ಮಾತಿ

ನಂತೆ ನೀನು ನಡೆದುಕೊಳ್ಳದಿದ್ದರೆ ಈ ಕ್ಷಣದಲ್ಲಿಯೇ ನಾವೆಲ್ಲರೂ ನಿನ್ನನ್ನು ತಿಂದುಹಾಕಿಬಿಡುತ್ತೇವೆ."

ಜೋತುಬಿದ್ದ ಸ್ತನಗಳುಳ್ಳವಳಾಗಿದ್ದ ವಿಕಟೆಯೆಂಬ ಮತ್ತೊಬ್ಬ ರಾಕ್ಷಸಿಯು ಕುಪಿತಳಾಗಿ ಮುಷ್ಟಿಯನ್ನು ಮೇಲೆತ್ತಿ ಸೀತಾದೇವಿಯನ್ನು ಭಯಪಡಿಸುತ್ತಾ ಹೇಳಿದಳು :

"ಬಲುಕೆಟ್ಟಬುದ್ಧಿಯವಳೇ! ಮೈಥಿಲಿ! ಅಪ್ರಿಯವಾಗಿರುವ ನಿನ್ನ ಮಾತುಗಳೆಲ್ಲ ವನ್ನೂ ಕಾರುಣ್ಯದಿಂದಲೂ ತಾಳ್ಮೆಯಿಂದಲೂಸಹಿಸಿಕೊಂಡಿದ್ದಾಯಿತು. ಕಾಲಾನುಗುಣವಾದ ಮತ್ತು ನಿನಗೆ ಅತ್ಯಂತ ಹಿತಕರವಾದ ನಮ್ಮ ಮಾತಿನಂತೆ ನೀನು ನಡೆದುಕೊಳ್ಳುತ್ತಿಲ್ಲ. ರಾವಣನು ಇತರರಿಂದ ದಾಟಲು ಅಸಾಧ್ಯವಾದ ಸಮುದ್ರದ ದಕ್ಷಿಣತೀರಕ್ಕೆ ನಿನ್ನನ್ನು ಕರೆದು ತಂದಿ ದ್ದಾನೆ. ನೀನೀಗ ಅತಿಘೋರವಾಗಿ ಕಾಣುತ್ತಿರುವ ರಾವಣನ ಅಂತಃಪುರಕ್ಕೆ ಬಂದಿರುವೆ. ಹೀಗೆ ರಾವಣನ ಅರಮನೆಯಲ್ಲಿ ಬಂಧಿಸಲ್ಪಟ್ಟಿರುವ ಮತ್ತು ನಮ್ಮಿಂದ ರಕ್ಷಿಸಲ್ಪಡುತ್ತಿರುವ ನಿನ್ನನ್ನು ಕಾಪಾಡಲು ಸಾಕ್ಷಾತ್ ಪುರಂದರನೂ ಅಸಮರ್ಥನೇ ಸರಿ. ಆದುದರಿಂದ ಹಿತಕರವಾದ ನನ್ನ ಈ ಮಾತಿನಂತೆ ನಡೆದುಕೋ. ಅಳುವುದನ್ನು ನಿಲ್ಲಿಸು. ಅನರ್ಥಕರವಾದ ಶೋಕವನ್ನು ಪರಿತ್ಯಜಿಸು. ನಿತ್ಯದೈನ್ಯವನ್ನು ದೂರಮಾಡು. ಸುಪ್ರೀತಳಾಗು. ಉಲ್ಲಾಸ ದಿಂದಿರು. ರಾಕ್ಷಸರಾಜನಾದ ರಾವಣನೊಡನೆ ಮನಬಂದಂತೆ ಕ್ರೀಡಿಸಿ ಸುಖವನ್ನನುಭವಿಸು.

**ಜಾನಾಸಿ ಹಿ ಯಥಾ ಭೀರು ಸ್ತ್ರೀಣಾಂ ಯೌವನಮಧ್ರುವಮ್ ॥**

ಸ್ತ್ರೀಯರಿಗೆ ಯೌವನವು ಶಾಶ್ವತವಲ್ಲವೆಂಬುದನ್ನು ನೀನೂ ತಿಳಿದಿರುವೆಯಲ್ಲವೇ? ಯೌವನವು ಕಳೆದುಹೋಗುವುದರೊಳಗಾಗಿ ಎಲ್ಲ ಸುಖ ಗಳನ್ನೂ ಅನುಭವಿಸು.

ಮದನವಿಕಾರವನ್ನುಂಟುಮಾಡಲು ಸಮರ್ಥವಾದ ಕಣ್ಣುಗಳುಳ್ಳವಳೇ! ರಾಕ್ಷಸರಾಜನಾದ ರಾವಣೇಶ್ವರನೊಡನೆ ರಮ್ಯವಾದ ಉದ್ಯಾನವನಗಳಲ್ಲಿಯೂ ಪರ್ವತದ ಉಪವನಗಳಲ್ಲಿಯೂ ಆಮೋದದಿಂದ ಸಂಚರಿಸು. ಸುಂದರಿ! ಏಳು ಸಾವಿರ ಸ್ತ್ರೀಯರು ನಿನ್ನ ಅಧೀನದಲ್ಲಿರುತ್ತಾರೆ. ಸರ್ವರಾಕ್ಷಸರ

ಸ್ವಾಮಿಯಾದ ರಾವಣನನ್ನು ಸ್ವಾಮಿಯನ್ನಾಗಿ ಮಾಡಿಕೊಂಡು ಅವನನ್ನು ಸೇವಿಸು. ನಾನು ಈಗ ಹೇಳಿದಂತೆ ನೀನು ನಡೆದುಕೊಳ್ಳದಿದ್ದರೆ ನಿನ್ನ ಎದೆಯನ್ನಾದರೂ ಸೀಳಿ ನಿನ್ನನ್ನು ತಿಂದುಹಾಕುತ್ತೇವೆ."

ಅನಂತರ ಅತ್ಯಂತಕ್ರೂರಿಯಾಗಿ ಕಾಣುತ್ತಿದ್ದ ಚಂಡೋದರಿಯೆಂಬ ರಾಕ್ಷಸಿಯು ಮಹಾಶೂಲವನ್ನು ಸುತ್ತಲೂ ತಿರುಗಿಸುತ್ತಾ ಹೇಳಿದಳು :

"ಜಿಂಕೆಯ ಮರಿಯ ಕಣ್ಣುಗಳಂತೆ ಚಂಚಲವಾದ ಕಣ್ಣುಗಳನ್ನು ಹೊಂದಿರುವ, ಭಯದಿಂದ ಕಂಪಿಸುತ್ತಿರುವ ಸ್ತನಗಳಿಂದ ಕೂಡಿರುವ, ರಾವಣನಿಂದ ಇಲ್ಲಿಗೆ ತರಲ್ಪಟ್ಟಿರುವ ಈ ಸೀತಾದೇವಿಯನ್ನು ನೋಡಿ ನನಗೆ ಮಹತ್ತರವಾದೊಂದು ಬಯಕೆಯುಂಟಾಗಿದೆ. ಇವಳ ಹೃದಯದ ಬಲಭಾಗ ದಲ್ಲಿರುವ ಕಾಲಖಂಡವೆಂಬ ಮಾಂಸಖಂಡವನ್ನೂ, ಎಡಭಾಗದಲ್ಲಿರುವ ಗುಲ್ಮವೆಂಬ ಮಾಂಸಖಂಡವನ್ನೂ, ಎದೆಯ ಮೇಲಿರುವ ಮಾಂಸವನ್ನೂ, ಕರುಳುಗಳನ್ನೂ, ನಾಡೀಬಂಧನಯುಕ್ತವಾದ ಪದ್ಮಕೋಶಸದೃಶವಾದ ಮಾಂಸಖಂಡವನ್ನೂ, ಶರೀರದ ಅವಯವಗಳನ್ನೂ ಮತ್ತು ತಲೆಯನ್ನೂ ತಿಂದುಹಾಕಿಬಿಡಬೇಕೆಂಬ ಬುದ್ಧಿಯು ನನಗುಂಟಾಗಿದೆ."

ಬಳಿಕ ಪ್ರಘಸಾ ಎಂಬ ರಾಕ್ಷಸಿಯು ಹೇಳಿದಳು :

"ಎಲ್ಲರೂ ಏಕೆ ಸುಮ್ಮನೆ ಕುಳಿತಿರುವಿರಿ? ನಮ್ಮ ಸ್ವಾಮಿಯಾದ ರಾವಣನ ವಿಷಯದಲ್ಲಿ ಅತಿನಿಷ್ಠುರವಾಗಿ ವರ್ತಿಸುತ್ತಿರುವ ಇವಳ ಕುತ್ತಿಗೆಯನ್ನು ಹಿಚುಕಿಬಿಡೋಣ. ಅನಂತರ ರಾವಣನ ಬಳಿಗೆ ಹೋಗಿ ಆ ಮಾನವಿಯು ಸತ್ತುಹೋದಳೆಂದೇ ಹೇಳಿಬಿಡೋಣ. ಆಗ ನಮ್ಮ ರಾಜನು ನಮಗೆ–'ಅವಳನ್ನು ತಿಂದುಹಾಕಿರಿ'–ಎಂದೇ ಹೇಳುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ."

ಬಳಿಕ ಅಜಾಮುಖಿಯೆಂಬುವಳು ಹೇಳಿದಳು :

"ಗೆಳತಿಯರೇ! ಇವಳನ್ನು ಕತ್ತರಿಸಿ ಶರೀರದಿಂದ ಮಾಂಸಖಂಡ ಗಳನ್ನು ತೆಗೆದು ಸಮವಾಗಿ ಉಂಡೆಗಳನ್ನು ಮಾಡಿರಿ. ಅನಂತರ ನಾವೆಲ್ಲರೂ ಉಂಡೆಗಳನ್ನು ಸಮವಾಗಿ ಹಂಚಿಕೊಳ್ಳೋಣ. ಹಂಚಿಕೆಯ ವಿಷಯದಲ್ಲಿ ಪರಸ್ಪರ ವಿವಾದವುಂಟಾಗುವುದು ನನಗೆ ರುಚಿಸುವುದಿಲ್ಲ. ಇವಳ ಮಾಂಸದ

ಜೊತೆಗೆ ಕುಡಿಯಲು ಮದ್ಯವನ್ನೂ ವಿಧ-ವಿಧವಾದ ಲೇಹ್ಯ-ಚೋಷ್ಯ ಗಳನ್ನೂ ತನ್ನಿರಿ."

ಅನಂತರ ಶೂರ್ಪಣಖೆಯೆಂಬ ರಾಕ್ಷಸಿಯು ಹೇಳಿದಳು :

"ಸಖಿಯರೇ! ಅಜಾಮುಖಿಯು ಹೇಳುತ್ತಿರುವುದೇ ನನಗೂ ಸಮ್ಮತವಾಗಿದೆ. ಸರ್ವಶೋಕಗಳನ್ನೂ ವಿನಾಶಗೊಳಿಸುವ ಸುರೆಯನ್ನು ಬೇಗ ತನ್ನಿರಿ. ಮದ್ಯದೊಡನೆ ಮನುಷ್ಯಮಾಂಸವನ್ನು ಭಕ್ಷಿಸಿ ಭಗವತಿಯಾದ ನಿಕುಂಭಿಳೆಯೆಂಬ ಭದ್ರಕಾಲಿಯ ಸನ್ನಿಧಿಯಲ್ಲಿ ನರ್ತನಮಾಡೋಣ."

ವಿರೂಪಿಣಿಯರಾದ ರಾಕ್ಷಸಿಯರು ದೇವಕನ್ಯೆಯಂತೆಯೇ ಇದ್ದ ಸೀತಾದೇವಿಯನ್ನು ಹೀಗೆ ಭಯಗೊಳಿಸುತ್ತಿರುವಾಗ ಸೀತೆಯು ಧೈರ್ಯ ವನ್ನು ಕಳೆದುಕೊಂಡು ಅಳತೊಡಗಿದಳು.

೨೪ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೨೫ನೆಯ ಸರ್ಗ

## ರಾಕ್ಷಸಿಯರ ಮಾತನ್ನು ತಿರಸ್ಕರಿಸುತ್ತಾ ಸೀತಾದೇವಿಯು ಶೋಕಸಂತಪ್ತಳಾಗಿ ವಿಲಪಿಸಿದುದು

**ತಥಾ ತಾಸಾಂ ವದನ್ತೀನಾಂ ಪರುಷಂ ದಾರುಣಂ ಬಹು ।**
**ರಾಕ್ಷಸೀನಾಮಸೌಮ್ಯಾನಾಂ ರುರೋದ ಜನಕಾತ್ಮಜಾ ॥೧॥**

ಭಯಂಕರರೂಪಿಣಿಯರಾದ ಆ ರಾಕ್ಷಸಿಯರ ಕಠಿಣವೂ ಮತ್ತು ಅತಿ ದಾರುಣವೂ ಆಗಿದ್ದ ಮಾತುಗಳನ್ನು ಕೇಳಿ ಸೀತಾದೇವಿಯು ಅಳ ತೊಡಗಿದಳು.

ಭಯಗ್ರಸ್ತಳಾಗಿದ್ದ ಆದರೂ ದೃಢಚಿತ್ತಳಾಗಿದ್ದ ಅವಳು ಕಣ್ಣೀರಿಡು ತ್ತಿದ್ದುದರಿಂದ ಗದ್ಗದವಾದ ಸ್ವರದಿಂದ ಕೂಡಿದ ಈ ಮಾತನ್ನು ಹೇಳಿದಳು :

"ರಾಕ್ಷಸಸ್ತ್ರೀಯರೇ! ಮನುಷ್ಯಸ್ತ್ರೀಯು ರಾಕ್ಷಸನ ಭಾರ್ಯೆಯಾಗಲು ಖಂಡಿತವಾಗಿಯೂ ಯೋಗ್ಯಳಲ್ಲ. ಆದುದರಿಂದ ನಿಮ್ಮ ಮಾತಿನಂತೆ ನಾನು ನಡೆದುಕೊಳ್ಳುವುದಿಲ್ಲ. ನೀವು ಬಯಸುವುದಾದರೆ ಎಲ್ಲರೂ ನನ್ನನ್ನು ತಿಂದು ಹಾಕಿರಿ."

ಆ ಸಮಯದಲ್ಲಿ ದೇವಕನ್ಯೆಯಂತೆಯೇ ಇದ್ದ ಸೀತಾದೇವಿಯು ರಾಕ್ಷಸಿ

ಯರ ಮಧ್ಯದಲ್ಲಿ ಶೋಕಪೀಡಿತಳಾಗಿದ್ದಳು. ರಾವಣನೂ ಭಯಪಡಿಸಿ ಹೋಗಿದ್ದನು. ಆದರಿಂದಾಗಿ ಅವಳು ಬಹಳವಾಗಿ ಆತಂಕಗೊಂಡಿದ್ದಳು. ಅವಳಿಗೆ ಸುಖವೆಂಬುದೇ ಇರಲಿಲ್ಲ. ಭಯದಿಂದ ಕ್ಷಣ-ಕ್ಷಣಕ್ಕೂ ನಡುಗುತ್ತಿದ್ದಳು. ಅಂಗಾಂಗಗಳೆಲ್ಲವನ್ನೂ ಶರೀರದೊಳಕ್ಕೆ ಸೆಳೆದುಕೊಳ್ಳುತ್ತಿರುವಳೋ ಎಂಬಂತೆ ಕಾಣುತ್ತಿದ್ದಳು. ಅರಣ್ಯದಲ್ಲಿ ಗುಂಪಿನಿಂದ ತಪ್ಪಿಸಿಕೊಂಡು ತೋಳಗಳಿಗೆ ಸಿಕ್ಕಿ ಪೀಡಿಸಲ್ಪಡುವ ಹೆಣ್ಣುಜಿಂಕೆಯಂತೆಯೇ ಸೀತೆಯ ಆಗಿನ ಸ್ಥಿತಿಯಾಗಿದ್ದಿತು. ಅವಳ ಮನಸ್ಸು ಗಂಡನನ್ನು ಸೇರಬೇಕೆಂದಿದ್ದ ಆಸೆಯಿಂದ ಭಗ್ನವಾಗಿ ಹೋಗಿದ್ದಿತು. ವಿಶಾಲವಾಗಿದ್ದ ಮತ್ತು ಪುಷ್ಪಭರಿತವಾಗಿದ್ದ ವೃಕ್ಷದ ರೆಂಬೆಯನ್ನು ಹಿಡಿದು ಶೋಕಾಭಿಭೂತೆಯಾಗಿ ಗಂಡನನ್ನೇ ಚಿಂತಿಸುತ್ತಾ ನಿಂತಿದ್ದಳು. ಧಾರಾಕಾರವಾದ ಕಣ್ಣೀರಿನಿಂದ ಅವಳ ಪುಷ್ಟವಾಗಿದ್ದ ಸ್ತನಗಳು ತೋಯ್ದುಹೋಗಿದ್ದುವು. ಎಷ್ಟೇ ಚಿಂತಿಸಿದರೂ ಆ ಸಮಯದಲ್ಲಿ ಸೀತೆಯು ತನ್ನ ಕಷ್ಟಕ್ಕೆ–'ಕಡೆ ಯಾವಾಗ?'–ಎಂಬುದನ್ನೂ ಅರಿಯಲಿಲ್ಲ. ಬಿರುಗಾಳಿಯು ಬೀಸುತ್ತಿರುವಾಗ ಬಾಳೆಯ ಗಿಡವು ತೂರಾಡುತ್ತಾ ಕೆಳಕ್ಕೆ ಬೀಳುವಂತೆ ನಡುಗುತ್ತಾ ಕೆಳಕ್ಕೆ ಬಿದ್ದುಬಿಟ್ಟಳು.

ರಾಕ್ಷಸಿಯರ ಭಯದಿಂದಾಗಿ ಅವಳ ಮುಖವು ಬಹಳವಾಗಿ ಬಾಡಿ ಹೋಗಿದ್ದಿತು. ಉದ್ದವಾಗಿಯೂ ಮತ್ತು ದಪ್ಪವಾಗಿಯೂ ಇದ್ದ, ಗಡ-ಗಡನೆ ನಡುಗುತ್ತಿದ್ದ ಸೀತಾದೇವಿಯ ಕೇಶರಾಶಿಯೂ ಅಲ್ಲಾಡುತ್ತಿದ್ದು, ಡೊಂಕು ಡೊಂಕಾಗಿ ಹರಿದುಹೋಗುತ್ತಿರುವ ಹೆಣ್ಣು ಸರ್ಪದಂತೆಯೇ ಕಾಣುತ್ತಿದ್ದಿತು. ದುಃಖಪೀಡಿತಳಾಗಿದ್ದ, ಶೋಕದಿಂದ ಬುದ್ಧಿಗೆಟ್ಟಿದ್ದ ವೈದೇಹಿಯು ನಿಟ್ಟುಸಿರು ಬಿಡುತ್ತಾ ಕಣ್ಣೀರು ಸುರಿಸುತ್ತಿದ್ದರು. ಕೆಲವೊಮ್ಮೆ ಗಟ್ಟಿಯಾಗಿ ಬಿಕ್ಕಿ-ಬಿಕ್ಕಿ ಅಳುತ್ತಿದ್ದಳು. ಹಾಗವಳು ವಿಲಪಿಸುತ್ತಿದ್ದಾಗ ಒಮ್ಮೆ–'ಅಯ್ಯೋ ರಾಮ!'–ಎನ್ನುವಳು. ಮತ್ತೊಮ್ಮೆ–'ಹಾ ಲಕ್ಷ್ಮಣ!'–ಎನ್ನುವಳು. 'ಅಯ್ಯೋ ಅತ್ತೆ ಕೌಸಲ್ಯೇ! ನನ್ನ ಸ್ಥಿತಿಯು ಹೀಗಾಯಿತಲ್ಲವೇ?'–ಎಂದು ಹಲಬುವಳು. 'ಹಾ ಸುಮಿತ್ರೇ!'–ಎಂದೆನ್ನುತ್ತಾ ಗೋಳಾಡುವಳು.

**ಲೋಕಪ್ರವಾದಃ ಸತ್ಯೋಽಯಂ ಪಣ್ಡಿತೈಃ ಸಮುದಾಹೃತಃ ।**
**ಅಕಾಲೇ ದುರ್ಲಭೋ ಮೃತ್ಯುಃ ಸ್ತ್ರಿಯಾ ವಾ ಪುರುಷಸ್ಯ ವಾ ॥**

'ಸ್ತ್ರೀಗಾಗಲೀ ಪುರುಷನಿಗಾಗಲೀ–ಅಕಾಲದಲ್ಲಿ ಮರಣವು ಸಂಭವಿಸುವುದಿಲ್ಲ'–ಎಂದು ವಿದ್ವಾಂಸರು ಉದಹರಿಸುವ ಮತ್ತು ಲೋಕದ ಜನರಾಡಿಕೊಳ್ಳುವ ಈ ಮಾತು ಸತ್ಯವಾಗಿಯೇ ಇದೆ.

ಈ ಗಾದೆಗೆ ಇಂದು ನಾನೇ ಸಾಕ್ಷಿಯಾಗಿದ್ದೇನೆ. ಕ್ರೂರಿಗಳಾದ ರಾಕ್ಷಸಿಯರು ನನ್ನನ್ನು ಸತತವಾಗಿ ಪೀಡಿಸುತ್ತಲೇ ಇದ್ದಾರೆ. ಪ್ರಾಣಸಮಾನನಾದ ಶ್ರೀರಾಮನಿಂದಲೂ ನಾನು ಅಗಲಿದ್ದೇನೆ. ಆದರೂ ನಾನು ಅಲ್ಪಕಾಲವಾದರೂ ಜೀವಿಸಿಯೇ ಇದ್ದೇನೆ. ಸಾಮಗ್ರಿಗಳಿಂದ ತುಂಬಿರುವ ಹಡಗು ಸಮುದ್ರದ ಮಧ್ಯದಲ್ಲಿ ಬಿರುಗಾಳಿಯ ಬಡಿತದಿಂದ ನಷ್ಟವಾಗಿಹೋಗುವಂತೆ–ಅತ್ಯಲ್ಪಕಾಲದಲ್ಲಿಯೇ ಶೋಕದಿಂದ ವಿನಾಶವನ್ನು ಹೊಂದುತ್ತೇನೆ. ರಾಕ್ಷಸಿಯರ ಅಧೀನದಲ್ಲಿರುವ ನಾನು ಅಂತಹ ಮಹಾಮಹಿಮನಾದ ಪತಿಯನ್ನು ಕಾಣದೇ–ಅಲೆಗಳ ಬಡಿತಗಳಿಂದ ದಡವು ಕೊಚ್ಚಿಹೋಗುವಂತೆ ಈ ಪತಿವಿರಹ ಶೋಕದಿಂದಲೇ ಕಾಲಾನುಕ್ರಮವಾಗಿ ವಿನಾಶಹೊಂದುತ್ತೇನೆ.

**ತಂ ಪದ್ಮದಲಪತ್ರಾಕ್ಷಂ ಸಿಂಹವಿಕ್ರಾನ್ತಗಾಮಿನಮ್ ।**
**ಧನ್ಯಾಃ ಪಶ್ಯನ್ತಿ ಯೇ ನಾಥಂ ಕೃತಜ್ಞಂ ಪ್ರಿಯವಾದಿನಮ್ ॥೧೬॥**

ಅರಳಿದ ತಾವರೆಯಂತೆ ವಿಶಾಲಾಕ್ಷನಾದ, ಸಿಂಹದ ನಡಿಗೆಯಂತೆ ಗಂಭೀರವಾದ ನಡಿಗೆಯುಳ್ಳ, ಮಾಡಿದ ಸಣ್ಣ ಉಪಕಾರವನ್ನೂ ಸ್ಮರಿಸುವ, ಪ್ರಿಯಭಾಷಿಯಾದ ಆ ಶ್ರೀರಾಮನನ್ನು ಯಾರು ನೋಡುವರೋ ಅವರೇ ಧನ್ಯರು.

ಆತ್ಮವಿದನಾದ ಶ್ರೀರಾಮನಿಲ್ಲದ ನನ್ನ ಜೀವಿತವು ತೀಕ್ಷ್ಣವಾದ ವಿಷವನ್ನು ಕುಡಿದವನ ಜೀವಿತದಂತೆ ಕ್ಷಣಿಕವಾದುದು. ಹೆಚ್ಚು ಕಾಲ ಉಳಿಯುವುದಿಲ್ಲ.

**ಕೀದೃಶಂ ತು ಮಹಾಪಾಪಂ**
**ಪುರಾ ಜನ್ಮಾನ್ತರೇ ಕೃತಮ್ ।**
**ಯೇನೇದಂ ಪ್ರಾಪ್ಯತೇ ದುಃಖಂ**
**ಮಯಾ ಘೋರಂ ಸುದಾರುಣಮ್ ॥೧೮॥**

ನಾನು ನನ್ನ ಹಿಂದಿನ ಜನ್ಮದಲ್ಲಿ ಎಂತಹ ಮಹಾಪಾಪಕಾರ್ಯವನ್ನು

ಮಾಡಿದ್ದೆನೋ? ಅದರಿಂದಲೇ ಸುದಾರುಣವಾದ ಈ ಮಹಾದುಃಖವು ನನಗೆ ಪ್ರಾಪ್ತವಾಗಿದೆ.

ರಾಕ್ಷಸಿಯರ ರಕ್ಷಣೆಯೆಂಬ ಬಂಧನಕ್ಕೆ ಸಿಕ್ಕಿರುವ ನಾನು ಖಂಡಿತವಾಗಿಯೂ ಶ್ರೀರಾಮನನ್ನು ಹೊಂದಲಾರೆನು. ಇಂತಹ ಮಹಾವಿರಹ ಶೋಕದಿಂದ ಸಂಕಟಪಡುತ್ತಿರುವ ನನಗೆ ಜೀವಿಸಿರಲು ಇಚ್ಛೆಯಿಲ್ಲ. ಆದರೆ ಸ್ವೇಚ್ಛೆಯಿಂದ ಈ ಜೀವಿತವನ್ನು ಪರಿತ್ಯಜಿಸಲೂ ಸಾಧ್ಯವಾಗುವುದಿಲ್ಲ. ಆದುದರಿಂದ ಇಂತಹ ಮನುಷ್ಯತ್ವಕ್ಕೂ–ಸ್ವೇಚ್ಛೆಯಿಂದ ಜೀವಿತವನ್ನು ಕಡೆಗಾಣಿಸಲಾಗದ ಪರಾಧೀನತೆಗೂ ಧಿಕ್ಕಾರವಿರಲಿ!”

೨೫ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೨೬ನೆಯ ಸರ್ಗ

## ಸೀತೆಯ ವಿಲಾಪ : ಪ್ರಾಣಪರಿತ್ಯಾಗಮಾಡಲು ನಿಶ್ಚಯ

**ಪ್ರಸಕ್ತಾಶ್ರುಮುಖೀ ತ್ವೇವಂ ಬ್ರುವನ್ತೀ ಜನಕಾತ್ಮಜಾ ।**
**ಅಧೋಮುಖಮುಖೀ ಬಾಲಾ ವಿಲಪ್ತುಮುಪಚಕ್ರಮೇ ॥೧॥**

ಕಣ್ಣೀರಿನಿಂದ ತೋಯ್ದುಹೋಗಿದ್ದ ಮುಖದಿಂದ ಕೂಡಿದ್ದ ದಯನೀಯಳಾದ ಜಾನಕಿಯು ಹೀಗೆ ಹೇಳಿಕೊಳ್ಳುತ್ತಾ ತಲೆಯನ್ನು ತಗ್ಗಿಸಿಕೊಂಡು ಅಳತೊಡಗಿದಳು.

ಒಮ್ಮೆ ಭೂತಹಿಡಿದವಳಂತೆ ಕೂಗಿಕೊಳ್ಳುತ್ತಿದ್ದಳು. ಮತ್ತೊಮ್ಮೆ ಪಿತ್ತವು ತಲೆಗೇರಿದವಳಂತೆ ಅಳುತ್ತಿದ್ದಳು. ಇನ್ನೊಮ್ಮೆ ಬುದ್ಧಿಗೆಟ್ಟವಳಂತೆ ರೋದಿಸುತ್ತಿದ್ದಳು. ಬಳಲಿಕೆಯ ಪರಿಹಾರಕ್ಕಾಗಿ ನೆಲದ ಮೇಲೆ ಹೊರಳಾಡುವ ಹೆಣ್ಣುಕುದುರೆಮರಿಯಂತೆ ಕೆಲವೊಮ್ಮೆ ಹೊರಳಾಡುತ್ತಿದ್ದಳು.

“ಕಾಮರೂಪಿಯಾದ, ಮಾಯಾವಿಯಾದ ಮಾರೀಚರಾಕ್ಷಸನು ಶ್ರೀರಾಮನನ್ನು ಅಜಾಗರೂಕನನ್ನಾಗಿ ಮಾಡಿಬಿಟ್ಟನು. ಅನಂತರ ರಾವಣನು–ಕೂಗಿಕೊಳ್ಳುತ್ತಿದ್ದರೂ ಬಲಾತ್ಕಾರವಾಗಿ ನನ್ನನ್ನಿಲ್ಲಿಗೆ ಸೆಳೆದು ತಂದನು. ನಾನೀಗ ರಾಕ್ಷಸಿಯರ ವಶದಲ್ಲಿದ್ದೇನೆ. ಅವರು ನನ್ನನ್ನು

ಕ್ರೂರವಾದ ರೀತಿಯಲ್ಲಿ ಭಯಪಡಿಸುತ್ತಿದ್ದಾರೆ. ಇದರಿಂದಾಗಿ ನಾನು ಮಹಾದುಃಖವನ್ನು ಅನುಭವಿಸುತ್ತಿದ್ದೇನೆ. ಶ್ರೀರಾಮನನ್ನೇ ಯಾವಾಗಲೂ ಚಿಂತಿಸುತ್ತಿರುವ ನಾನು ಅವನ ಸಮಾಗಮದ ಹಾದಿಯನ್ನೇ ಕಾಣದಿರುವುದ ರಿಂದ ಇನ್ನು ಹೆಚ್ಚುಕಾಲ ಜೀವಿಸಿರಲು ಉತ್ಸುಕಳಾಗಿಲ್ಲ. ಈ ರೀತಿಯಲ್ಲಿ ಬದುಕಿರುವುದರಿಂದ ಯಾವ ಪ್ರಯೋಜನವೂ ಇಲ್ಲ. ಮಹಾರಥನಾದ ಶ್ರೀರಾಮನಿಲ್ಲದೆ ರಾಕ್ಷಸಿಯರ ಮಧ್ಯದಲ್ಲಿ ಜೀವಿಸುತ್ತಿರುವ ನನಗೆ ಐಶ್ವರ್ಯ ದಿಂದಾಗಲೀ ಆಭರಣಗಳಿಂದಾಗಲೀ ಯಾವ ಪ್ರಯೋಜನವೂ ಇಲ್ಲ.

**ಅಶ್ಮಸಾರಮಿದಂ ನೂನಮಥವಾಪ್ಯಜರಾಮರಮ್ ।**
**ಹೃದಯಂ ಮಮ ಯೇನೇದಂ ನ ದುಃಖೇನಾವಶೀರ್ಯತೇ ॥೬॥**

ನಿಶ್ಚಯವಾಗಿಯೂ ಈ ನನ್ನ ಹೃದಯವು ಕಬ್ಬಿಣದ್ದಾಗಿರಬೇಕು ಅಥವಾ ಮುಪ್ಪು-ಸಾವುಗಳಿಲ್ಲದ್ದಾಗಿರಬೇಕು. ಏಕೆಂದರೆ : ಇಂತಹ ದಾರುಣ ವಾದ ದುಃಖವನ್ನನುಭವಿಸುತ್ತಿದ್ದರೂ ಸೀಳಿಹೋಗುತ್ತಿಲ್ಲ.

ಪುರುಷೋತ್ತಮನಾದ ಶ್ರೀರಾಮನಿಂದ ರಹಿತಳಾಗಿರುವ ನಾನು ಇನ್ನೂ ಜೀವಿಸಿಯೇ ಇರುವೆನಲ್ಲಾ! ಅನಾರ್ಯೆಯಂತೆಯೂ ಪತಿತೆ ಯಂತೆಯೂ ಪರಪುರುಷನ ಮನೆಯಲ್ಲಿರುವ ನನಗೆ ಧಿಕ್ಕಾರವಿರಲಿ! ಇದು ನಿಶ್ಚಯವಾಗಿಯೂ ಪಾಪಜೀವಿಕೆಯೇ ಸರಿ.

**ಚರಣೇನಾಪಿ ಸವ್ಯೇನ ನ ಸ್ಪೃಶೇಯಂ ನಿಶಾಚರಮ್ ।**
**ರಾವಣಂ ಕಿಂ ಪುನರಹಂ ಕಾಮಯೇಯಂ ವಿಗರ್ಹಿತಮ್ ॥೮॥**

ನನ್ನ ಎಡಗಾಲಿನಿಂದಲೂ ನಾನು ಆ ರಾಕ್ಷಸನನ್ನು ಮುಟ್ಟುವುದಿಲ್ಲ. ಹೀಗಿರುವಾಗ ಅತಿನಿಂದ್ಯನಾದ ಆ ರಾವಣನನ್ನು ನಾನು ಕಾಮಿಸುವೆನೇ? ಕ್ರೂರವಾದ ಸ್ವಭಾವವಿರುವ ಕಾರಣದಿಂದ ನನ್ನನ್ನು ಪಡೆದುಕೊಳ್ಳಲು ಬಯಸಿರುವ ಆ ರಾಕ್ಷಸನು ನಾನು ಮಾಡುತ್ತಿರುವ ತಿರಸ್ಕಾರವನ್ನು ಪರಿಗಣಿಸುತ್ತಿಲ್ಲ. ತನ್ನ ಸ್ವರೂಪವನ್ನಾಗಲೀ ತನ್ನ ಕುಲವನ್ನಾಗಲೀ ಅರಿತವ ನಾಗಿಲ್ಲ.

**ಛಿನ್ನಾ ಭಿನ್ನಾ ವಿಭಕ್ತಾ ವಾ ದೀಪ್ತೇ ವಾಗ್ನೌ ಪ್ರದೀಪಿತಾ ।**
**ರಾವಣಂ ನೋಪತಿಷ್ಠೇಯಂ ಕಿಂ ಪ್ರಲಾಪೇನ ವಶ್ಚಿರಮ್ ॥೧೦॥**

ರಾಕ್ಷಸಿಯರೇ! ನೀವು ನನ್ನನ್ನು ಚೂರು-ಚೂರುಗಳಾಗಿ ಕತ್ತರಿಸಿರಿ ; ಜಜ್ಜಿರಿ ; ಅಥವಾ ಅಂಗಾಂಗಗಳನ್ನು ಬೇರೆ ಬೇರೆ ಮಾಡಿರಿ ; ಉರಿಯುತ್ತಿರುವ ಬೆಂಕಿಯಲ್ಲಾದರೂ ಹಾಕಿ ಸುಟ್ಟುಬಿಡಿರಿ. ರಾವಣನನ್ನು ಮಾತ್ರ ನಾನು ವರಿಸುವುದಿಲ್ಲ. ನೀವು ಅನಂತಕಾಲದವರೆಗೆ ರಗಳುತ್ತಿದ್ದರೂ ಯಾವ ಪ್ರಯೋಜನವೂ ಆಗುವುದಿಲ್ಲ.

**ಖ್ಯಾತಃ ಪ್ರಾಜ್ಞಃ ಕೃತಜ್ಞಶ್ಚ ಸಾನುಕ್ರೋಶಶ್ಚ ರಾಘವಃ ।**
**ಸದ್ವೃತ್ತೋ ನಿರನುಕ್ರೋಶಃ ಶಙ್ಕೇ ಮದ್ಭಾಗ್ಯಸಂಕ್ಷಯಾತ್ ॥**

ಶ್ರೀರಾಮನು ತನ್ನ ಸದ್ಗುಣಗಳಿಂದ ಸುವಿಖ್ಯಾತನು. ಮಹಾಪ್ರಾಜ್ಞನು. ದಯಾಪರನು. ಸದಾಚಾರಿಯು. ನನ್ನ ದೌರ್ಭಾಗ್ಯದಿಂದಾಗಿ ಇಂದವನು ನಿರ್ದಯನಾಗಿರಬಹುದೆಂದು ಊಹಿಸುತ್ತೇನೆ.

ಜನಸ್ಥಾನದಲ್ಲಿ ಹದಿನಾಲ್ಕು ಸಾವಿರ ರಾಕ್ಷಸರನ್ನು ಅವನೊಬ್ಬನೇ ಧ್ವಂಸಮಾಡಿದನು. ಅಂತಹ ಮಹಾವೀರನು ನನ್ನನ್ನು ಪುನಃ ಪಡೆಯಲಾರನೇ? ಅಲ್ಪವೀರ್ಯನಾದ ರಾವಣರಾಕ್ಷಸನು ನನ್ನನ್ನಿಂದು ಬಂಧಿಸಿದ್ದಾನೆ. ಆದರೆ ಯುದ್ಧದಲ್ಲಿ ನನ್ನ ಪತಿಯು ಇವನನ್ನು ಸಂಹರಿಸಲು ಖಂಡಿತವಾಗಿಯೂ ಸಮರ್ಥನಾಗಿದ್ದಾನೆ. ದಂಡಕಾರಣ್ಯದಲ್ಲಿ ನಡೆದ ಮಹಾಯುದ್ಧದಲ್ಲಿ ನನ್ನ ಪತಿಯು ರಾಕ್ಷಸಶ್ರೇಷ್ಠನಾದ ವಿರಾಧನನ್ನು ಸಂಹರಿಸಿದನು. ಅಂತಹ ಮಹಾವೀರನು ಈಗ ರಾವಣನನ್ನು ಕೊಂದು ನನ್ನನ್ನು ಪಡೆದುಕೊಳ್ಳಲಾರನೇ? ಸಮುದ್ರದ ಮಧ್ಯದಲ್ಲಿರುವ ಈ ಲಂಕಾಪಟ್ಟಣವು ಇತರರಿಂದ ದುರ್ಭೇದ್ಯವೇ ಇರಬಹುದು. ಆದರೆ ಶ್ರೀರಾಮನ ಬಾಣಗಳಿಗೆ ಎಲ್ಲಿಯೂ ಯಾವ ವಿಧವಾದ ತಡೆಯೂ ಇರುವುದಿಲ್ಲ. ದೃಢಪರಾಕ್ರಮನಾದ ಶ್ರೀರಾಮನು ರಾಕ್ಷಸನಿಂದ ಅಪಹೃತಳಾಗಿರುವ, ತನಗೆ ಇಷ್ಟಳಾಗಿರುವ ಭಾರ್ಯೆಯನ್ನು ಪುನಃ ಪಡೆಯಲು ಪ್ರಯತ್ನಿಸದಿರುವುದಕ್ಕೆ ಕಾರಣವಾದರೂ ಏನಿರಬಹುದು? ಲಕ್ಷ್ಮಣಾಗ್ರಜನು ನಾನಿಲ್ಲಿರುವುದನ್ನು ತಿಳಿದಿರಲಾರನೆಂದೇ ಸಂದೇಹಿಸುತ್ತೇನೆ. ಒಂದು ವೇಳೆ ತಿಳಿದಿದ್ದೂ ತೇಜಸ್ವಿಯಾದ ಶ್ರೀರಾಮನು ರಾವಣನ ಈ ದುರಾಕ್ರಮಣವನ್ನು ಸಹಿಸಿಕೊಂಡಿರುವನೇ? ಎಂದಿಗೂ ಇಲ್ಲ. ನಾನು ರಾವಣನಿಂದ ಅಪಹೃತಳಾದೆನೆಂಬ ವಾರ್ತೆಯನ್ನು ಶ್ರೀರಾಮನ

ಬಳಿಗೆ ಹೋಗಿ ಹೇಳುವವರು ತಾನೇ ಯಾರಿದ್ದಾರೆ? ಗೃಧ್ರರಾಜನು ಕೂಡ ಯುದ್ಧದಲ್ಲಿ ರಾವಣನಿಂದ ಹತನಾದನು. ರಾವಣನನ್ನು ವಧಿಸಿ ನನ್ನನ್ನು ರಕ್ಷಿಸಬೇಕೆಂದು ಅವನನ್ನೆದುರಿಸಿ ನಿಂತ ವೃದ್ಧನಾದ ಜಟಾಯುವು ಆ ಸಮಯದಲ್ಲಿ ಮಹಾಸಾಹಸಕಾರ್ಯವನ್ನೇ ಮಾಡಿದನು. ನಾನಿಲ್ಲಿರುವುದನ್ನು ರಾಘವನೇನಾದರೂ ತಿಳಿದರೆ ಕ್ರುದ್ಧನಾದ ಅವನು ಈ ಕ್ಷಣದಲ್ಲಿಯೇ ತೀಕ್ಷ್ಣವಾದ ಬಾಣಗಳಿಂದ ಈ ಲೋಕವನ್ನೇ ರಾಕ್ಷಸರಿಲ್ಲದಂತೆ ಮಾಡಿಬಿಡುವನು. ಅವನು ತನ್ನ ತೀಕ್ಷ್ಣವಾದ ಬಾಣಗಳಿಂದ ಈ ಲಂಕಾಪಟ್ಟಣವನ್ನೇ ಸುಟ್ಟುಬಿಡಬಲ್ಲನು. ಮಹೋದಧಿಯನ್ನೇ ಶೋಷಿಸಿಬಿಡಬಲ್ಲನು. ನೀಚನಾದ ರಾವಣನ ಕೀರ್ತಿಯನ್ನೂ ಮತ್ತು ಹೆಸರನ್ನೂ ಕ್ಷಣಮಾತ್ರದಲ್ಲಿ ಅಳಿಸಿಹಾಕಬಲ್ಲನು. ಲಂಕಾಪಟ್ಟಣದ ಎಲ್ಲ ಮನೆಗಳಲ್ಲಿಯೂ ಪತಿಗಳನ್ನು ಕಳೆದುಕೊಂಡ ರಾಕ್ಷಸ ಸ್ತ್ರೀಯರು ನಾನೀಗ ಅಳುತ್ತಿರುವುದಕ್ಕಿಂತಲೂ ನೂರುಪಟ್ಟು ಹೆಚ್ಚಾಗಿ ರೋದನಮಾಡುವರೆಂಬುದರಲ್ಲಿ ಸಂಶಯವೇ ಇಲ್ಲ. ಲಕ್ಷ್ಮಣನೊಡನಿರುವ ಶ್ರೀರಾಮನು ರಾಕ್ಷಸರ ಈ ಲಂಕಾಪಟ್ಟಣವನ್ನು ಹುಡುಕಿ ಮಾಡಬೇಕಾಗಿ ರುವ ಶತ್ರುವಿನಾಶಕಾರ್ಯವನ್ನು ಮಾಡಿಯೇ ತೀರುತ್ತಾನೆ. ರಾಮ-ಲಕ್ಷ್ಮಣರ ಕಣ್ಣುಗಳಿಗೆ ಲಕ್ಷ್ಯನಾಗುವ ಶತ್ರುವು ಮುಹೂರ್ತಕಾಲವೂ ಜೀವಿಸಿರಲಾರನು. ಅತ್ಯಲ್ಪಕಾಲದಲ್ಲಿಯೇ ಈ ಲಂಕಾಪಟ್ಟಣವು ಶ್ಮಶಾನದಂತಾಗುತ್ತದೆ. ಚಿತೆಗಳಿಂದ ಹೊರಡುವ ಹೊಗೆಯು ಲಂಕಾಪಟ್ಟಣದ ಎಲ್ಲ ಬೀದಿಗಳನ್ನೂ ಆವರಿಸಿಕೊಳ್ಳುತ್ತದೆ. ರಣಹದ್ದುಗಳ ಸಮೂಹಗಳಿಂದ ಸಮಲಂಕೃತವಾಗುತ್ತದೆ. ನಾನು ಬಹಳ ಬೇಗ ಈ ನನ್ನ ಮನೋರಥವನ್ನು ಈಡೇರಿಸಿಕೊಳ್ಳುತ್ತೇನೆ. ರಾಕ್ಷಸಿಯರೇ! ನಿಮ್ಮ ದುರಾಚಾರವು ನಿಮಗೆ ವಿಪರೀತವಾದ ಪರಿಣಾಮವನ್ನುಂಟುಮಾಡುತ್ತದೆ. ಇದೀಗ ಬಹಳ ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ಈ ಪಟ್ಟಣದಲ್ಲಿ ಈಗ ಎಂತೆಂತಹ ದೃಶ್ಯಗಳು ಕಾಣುತ್ತಿವೆಯೋ–ಅವೆಲ್ಲವೂ ಅಶುಭಸೂಚಕವಾದ ದೃಶ್ಯಗಳೇ ಆಗಿವೆ. ಇದರಿಂದಾಗಿ ಈ ಲಂಕಾಪಟ್ಟಣವು ಬಹಳ ಬೇಗ ಕಳೆಗುಂದುತ್ತದೆ. ರಾಕ್ಷಸಾಧಿಪತಿಯಾದ ಪಾಪಿಷ್ಠನಾದ ರಾವಣನು ಹತನಾಗುತ್ತಾನೆ. ಶತ್ರುಗಳಿಂದ ಎದುರಿಸಲು ಅಸಾಧ್ಯವೆನಿಸಿರುವ ಈ ಪಟ್ಟಣವು ಪತಿಯಿಂದ ವಿಹೀನಳಾದ ವಿಧವೆಯಂತಾಗುತ್ತದೆ. ಇದು ನಿಶ್ಚಯ. ರಾಕ್ಷಸರಿಂದ ತುಂಬಿರುವ, ಮಂಗಳೋತ್ಸವಗಳಿಂದ ಸಮೃದ್ಧವಾಗಿರುವ ಈ ಪಟ್ಟಣವು

ಅತ್ಯಲ್ಪಕಾಲದಲ್ಲಿಯೇ ಒಡೆಯನನ್ನು ಕಳೆದುಕೊಂಡು ಗಂಡನಿಲ್ಲದ ಹೆಂಗಸಿನಂತಾಗುತ್ತದೆ. ಪ್ರತಿಯೊಂದು ಮನೆಯಲ್ಲಿಯೂ ಪತಿವಿಯೋಗದುಃಖದಿಂದ ಪೀಡಿತರಾಗಿ ರೋದನಮಾಡುವ ರಾಕ್ಷಸರಕನ್ಯೆಯರ ಅಳುವಿನ ಧ್ವನಿಯನ್ನು ನಾನು ಬಹಳ ಬೇಗ ಕೇಳಲಿದ್ದೇನೆ. ರಕ್ತಾಂತಲೋಚನನಾದ ಮತ್ತು ಶೂರನಾದ ಶ್ರೀರಾಮನೇನಾದರೂ ನಾನು ರಾವಣರಾಕ್ಷಸನ ಮನೆಯಲ್ಲಿರುವೆನೆಂಬ ವಾರ್ತೆಯನ್ನು ತಿಳಿದರೆ–ಅವನ ನಿಶಿತವಾದ ಬಾಣಗಳಿಂದ ಈ ಪಟ್ಟಣವು ಕ್ಷಣಮಾತ್ರದಲ್ಲಿ ದಗ್ಧವಾಗಿ ಅಂಧಕಾರಮಯವಾಗುತ್ತದೆ. ಕಾಂತಿಹೀನವಾಗುತ್ತದೆ. ಲಂಕೆಯಲ್ಲಿರುವ ಎಲ್ಲ ರಾಕ್ಷಸಶ್ರೇಷ್ಠರೂ ಹತರಾಗುತ್ತಾರೆ. ಕ್ರೂರಿಯಾದ, ಅಧಮನಾದ ರಾವಣನು ನನ್ನನ್ನು ಸಂಹರಿಸಲು ನಿಗದಿಮಾಡಿರುವ ಕಾಲವೀಗ ಸನ್ನಿಹಿತವಾಗಿದೆ. ದುಷ್ಟನಾದ ರಾವಣನೇನೋ ನನ್ನ ಮರಣದ ದಿನವನ್ನು ಗೊತ್ತುಪಡಿಸಿದ್ದಾನೆ. ಆದರೆ ಪಾಪಿಷ್ಠರಾದ ರಾಕ್ಷಸರಾರೂ ಇದು ಅಕಾರ್ಯವೆಂಬುದನ್ನು ತಿಳಿದವರಾಗಿಲ್ಲ. ಮಾಂಸಭಕ್ಷಕರಾದ ಈ ರಾಕ್ಷಸರಿಗೆ ಧರ್ಮವೇ ತಿಳಿಯದು. ಪರಸ್ತ್ರೀಯ ಅಪಹರಣವೆಂಬ ಅಧರ್ಮಕಾರ್ಯದಿಂದಾಗಿ ಈ ಪಟ್ಟಣದಲ್ಲಿ ದೊಡ್ಡದಾದ ಅನರ್ಥವೇ ಸಂಭವಿಸುತ್ತದೆ. ನಿಗದಿತವಾದ ಕಾಲವು ಬಂದೊಡನೆಯೇ ಈ ರಾವಣನು ನಿಶ್ಚಯವಾಗಿಯೂ ನನ್ನನ್ನು ಕೊಂದು ತನ್ನ ಪ್ರಾತಃಕಾಲದ ಭೋಜನಕ್ಕೆ ಸಿದ್ಧಪಡಿಸಿಕೊಳ್ಳುತ್ತಾನೆ. ಅಂತಹ ಸಮಯವು ಒದಗಿಬಂದಾಗ ಪ್ರಿಯದರ್ಶನನಾದ ರಾಮನಿಲ್ಲದೇ ಅಬಲೆಯಾದ ನಾನು ಏನು ತಾನೇ ಮಾಡಲು ಸಾಧ್ಯವಾಗುತ್ತದೆ? ಆಪತ್ಕಾಲದಲ್ಲಿಯೂ ರಕ್ತಾಂತಲೋಚನನಾದ ಶ್ರೀರಾಮನನ್ನು ಕಾಣದೆಯೇ ಅತಿದುಃಖಿತಳಾಗಿ ರಾವಣನಿಂದ ಕೊಲ್ಲಲ್ಪಟ್ಟು, ಪತಿಯನ್ನು ಬಿಟ್ಟೇ ದೇವದೇವನಾದ ಯಮನನ್ನು ನೋಡುವೆನೋ ಏನೋ! ಭರತಾಗ್ರಜನಾದ ಶ್ರೀರಾಮನು ನಾನು ಬದುಕಿರುವುದನ್ನು ತಿಳಿದಿರಲಾರನು. ಹಾಗೇನಾದರೂ ನಾನು ಬದುಕಿರುವುದು ರಾಮ-ಲಕ್ಷ್ಮಣರಿಗೆ ತಿಳಿದಿದ್ದರೆ ಅವರು ನನ್ನನ್ನು ಈ ಭೂಮಂಡಲದಲ್ಲೆಲ್ಲಿದ್ದರೂ ಹುಡು ಕದೇ ಇರುತ್ತಿರಲಿಲ್ಲ. ಲಕ್ಷ್ಮಣಾಗ್ರಜನು ನಿಶ್ಚಯವಾಗಿಯೂ ನನ್ನ ವಿರಹಶೋಕದಿಂದಲೇ ಭೂಮಿಯಲ್ಲಿ ಮಾನುಷದೇಹವನ್ನು ತ್ಯಾಗಮಾಡಿ ದೇವಲೋಕಕ್ಕೆ ಹೋಗಿ ಬಿಟ್ಟಿರಬಹುದು. ದೇವಲೋಕದಲ್ಲಿ ನನ್ನೊಡೆಯನಾದ

ರಾಜೀವಲೋಚನನಾದ ಶ್ರೀರಾಮನನ್ನು ಸಂದರ್ಶಿಸುವ ದೇವ-ಗಂಧರ್ವ-ಸಿದ್ಧ-ಮಹರ್ಷಿಗಳು ನಿಶ್ಚಯವಾಗಿಯೂ ಧನ್ಯರೇ ಸರಿ.

ಅಥವಾ ಧೀಮಂತನಾದ, ಆತ್ಮಾನಾತ್ಮವಿವೇಕವುಳ್ಳ, ರಾಜರ್ಷಿಯಾದ, ಪರಮಾತ್ಮಸ್ವರೂಪನಾದ, ಧರ್ಮಕಾಮನಾದ ಶ್ರೀರಾಮನಿಗೆ ಭಾರ್ಯೆಯಾದ ನನ್ನಿಂದ ಯಾವ ಪ್ರಯೋಜನವೂ ಇಲ್ಲದೆಯೂ ಇರಬಹುದು.*

**ದೃಶ್ಯಮಾನೇ ಭವೇತ್ಪ್ರೀತಿಃ ಸೌಹೃದಂ ನಾಸ್ತ್ಯಪಶ್ಯತಃ ।**
**ನಾಶಯನ್ತಿ ಕೃತಘ್ನಾಸ್ತು ನ ರಾಮೋ ನಾಶಯಿಷ್ಯತಿ ॥೪೧॥**

ಸಾಮಾನ್ಯವಾಗಿ ಲೋಕದಲ್ಲಿ ಕಣ್ಣೆದುರಿನಲ್ಲಿ ಇದ್ದರೇನೇ ಪ್ರೀತಿಯು ಉಳಿದಿರುತ್ತದೆ. ಬಹಳ ಕಾಲ ನೋಡದೆಯೇ ಇದ್ದರೆ ಸೌಹಾರ್ದವು ಉಳಿಯುವುದಿಲ್ಲ. ಹೆಚ್ಚು ಕಾಲ ನೋಡದಿದ್ದ ಮಾತ್ರಕ್ಕೆ ಪ್ರೀತಿಯಾಗಲೀ ಸೌಹಾರ್ದವಾಗಲೀ ಇರಕೂಡದೆಂದೇನಲ್ಲ. ಸಾಮಾನ್ಯವಾಗಿ ಕೃತಘ್ನರಾದವರು ಕಾಲವು ಕಳೆದು ಹೋದಂತೆ ಪ್ರೀತಿಯನ್ನು ಸೌಹಾರ್ದವನ್ನೂ ಮರೆತುಬಿಡುತ್ತಾರೆ. ಆದರೆ ಶ್ರೀರಾಮನು ಮಾತ್ರ ಅಂತಹ ಸ್ವಭಾವದವನಲ್ಲ. ಎಷ್ಟೇ ಸಮಯವಾದರೂ ಅವನು ಪ್ರೀತಿಯನ್ನೂ ಸೌಹಾರ್ದವನ್ನೂ ಮರೆಯತಕ್ಕವನಲ್ಲ. ಅಥವಾ ನನ್ನಲ್ಲೇನಾದರೂ ದೋಷಗಳಿವೆಯೇ? ನನ್ನ ಸೌಭಾಗ್ಯವೆಲ್ಲವೂ ನಾಶವಾಗಿ ಹೋಯಿತೇ? ಏಕೆಂದರೆ ನಾನು ಪುರುಷ ಶ್ರೇಷ್ಠನಾದ ಶ್ರೀರಾಮನಿಂದ ಅಗಲಿ ನಾಶಹೊಂದುತ್ತಿದ್ದೇನೆ. ಇದಕ್ಕೆ ನನ್ನಲ್ಲಿರುವ ದೋಷಗಳೇ ಕಾರಣವಾಗಿರಬಹುದು ಅಥವಾ ನನ್ನ ಸೌಭಾಗ್ಯವೇ ನಶಿಸಿಹೋಗಿರಬಹುದು.

ಸ್ವಲ್ಪವಾದರೂ ನ್ಯೂನತೆಯಿಲ್ಲದ ಚಾರಿತ್ರ್ಯವುಳ್ಳ, ಶೂರನಾದ, ಶತ್ರುಭಂಜನನಾದ, ಮಹಾತ್ಮನಾದ ಶ್ರೀರಾಮನನ್ನು ಅಗಲಿರುವ ನನಗೆ ಬದುಕಿರುವುದಕ್ಕಿಂತಲೂ ಮರಣವೇ ಶ್ರೇಯಸ್ಕರ.

ಕಂದ-ಮೂಲ-ಫಲಗಳನ್ನು ತಿಂದು ಜೀವಿಸುತ್ತಿರುವ, ವನಚಾರಿಗಳಾದ,

---

* ಒಬ್ಬ ವ್ಯಾಖ್ಯಾನಕಾರರು ಹೀಗೆ ಹೇಳಿದ್ದಾರೆ : ಪುಣ್ಯಾಪೇಕ್ಷಿಗಳು ಯಜ್ಞಾದಿ ಕಾಮ್ಯಕರ್ಮಗಳನ್ನು ಮಾಡುವಾಗ ಸಪತ್ನೀಕರಾಗಿಯೇ ಇರಬೇಕು. ಪುಣ್ಯ-ಪಾಪ ಗಳೆರಡನ್ನೂ ದೂರೀಕರಿಸಿರುವ ಆತ್ಮಜ್ಞಾನಿಗಳಿಗೆ ಭಾರ್ಯೆಯಿಂದ ಯಾವ ಪ್ರಯೋಜನವೂ ಇಲ್ಲ. ಆದುದರಿಂದಲೇ ಸೀತೆಯು ಇಲ್ಲಿ ಶ್ರೀರಾಮನನ್ನು ಪರಮಾತ್ಮನೆಂದೇ ಹೇಳಿದ್ದಾಳೆ.

ನರಶ್ರೇಷ್ಠರಾದ, ಸಹೋದರರಾದ ರಾಮ-ಲಕ್ಷ್ಮಣರು ಶಸ್ತ್ರಸಂನ್ಯಾಸಮಾಡಿ ಕಾಡಿನಲ್ಲಿ ಅಲೆದಾಡುತ್ತಿರಬಹುದೇ? ದುರಾತ್ಮನಾದ ರಾವಣನು ಶೂರರಾದ ರಾಮ-ಲಕ್ಷ್ಮಣರನ್ನು ಮೋಸದಿಂದ ಸಂಹರಿಸಿಬಿಟ್ಟಿರಬಹುದೇ?

ಅತ್ಯಂತದುರ್ಭಾಗ್ಯಳಾಗಿರುವ ನನಗೆ ಇಂತಹ ಆಪತ್ಕಾಲದಲ್ಲಿ ಸರ್ವಥಾ ಸಾಯುವ ಇಚ್ಛೆಯೇ ಉಂಟಾಗಿದೆ. ಆದರೆ ಇಂತಹ ದುಃಖದ ಸಮಯದಲ್ಲಿಯೂ ನನಗೆ ಮರಣವು ಹಣೆಯಲ್ಲಿ ಬರೆದಿಲ್ಲ.

**ಧನ್ಯಾಃ ಖಲು ಮಹಾತ್ಮಾನೋ ಮುನಯಸ್ತ್ಯಕ್ತಕಿಲ್ಬಿಷಾಃ ।**
**ಜಿತಾತ್ಮಾನೋ ಮಹಾಭಾಗಾ ಯೇಷಾಂ ನ ಸ್ತಃ ಪ್ರಿಯಾಪ್ರಿಯೇ ॥**

ಪ್ರಿಯವಾದುದು, ಅಪ್ರಿಯವಾದುದು–ಎಂಬ ಎರಡು ಭಾವನೆಗಳೂ ಇಲ್ಲದಿರುವ, ಮಹಾತ್ಮರಾದ, ಪಾಪರಹಿತರಾದ, ಜಿತಾತ್ಮರಾದ, ಮಹಾ ಭಾಗ್ಯಶಾಲಿಗಳಾದ ಮುನಿಗಳೇ ಧನ್ಯರು.

**ಪ್ರಿಯಾನ್ನ ಸಂಭವೇದ್ದುಃಖ-**
**ಮಪ್ರಿಯಾದಧಿಕಂ ಭಯಮ್ ।**
**ತಾಭ್ಯಾಂ ಹಿ ಯೇ ವಿಯುಜ್ಯನ್ತೇ**
**ನಮಸ್ತೇಷಾಂ ಮಹಾತ್ಮನಾಮ್ ॥೪೮॥**

ಸಾಮಾನ್ಯರಾದವರಿಗೆ ಪ್ರಿಯವಾದ ಕಾರ್ಯವು ನಡೆದರೆ ಸಂತೋಷ ವಾಗುತ್ತದೆ. ಅಪ್ರಿಯವಾದ ಕಾರ್ಯವು ನಡೆದರೆ ಅಧಿಕವಾದ ದುಃಖವೇ ಆಗುತ್ತದೆ. ಆದರೆ ಯಾರು ಪ್ರಿಯಾಪ್ರಿಯಗಳೆರಡನ್ನೂ ಪರಿತ್ಯಜಿಸುವರೋ ಪ್ರಿಯಾಪ್ರಿಯಗಳೆರಡನ್ನೂ ಸಮಾನವಾಗಿ ಕಾಣುವರೋ–ಅಂತಹ ಮಹಾತ್ಮ ರಿಗೆ ನನ್ನ ನಮಸ್ಕಾರವಿರಲಿ.

ಆತ್ಮಜ್ಞಾನಿಯಾದ, ಪ್ರಿಯನಾದ ಶ್ರೀರಾಮನನ್ನು ಆಗಲಿರುವ, ಪಾಪಿಷ್ಠನಾದ ರಾವಣನ ವಶಳಾಗಿರುವ ನಾನು ಖಂಡಿತವಾಗಿಯೂ ಪ್ರಾಣ ಗಳನ್ನು ಪರಿತ್ಯಜಿಸುವೆನು."

ಉ೬ನೆಯ ಸರ್ಗವು ಮುಗಿಯಿತು.

## ತ್ರಿಜಟೆಯ ಸ್ವಪ್ನವೃತ್ತಾಂತ

**ಇತ್ಯುಕ್ತಾಃ ಸೀತಯಾ ಘೋರಾ ರಾಕ್ಷಸ್ಯಃ ಕ್ರೋಧಮೂರ್ಛಿತಾಃ ।**
**ಕಾಶ್ಚಿಜ್ಜಗ್ಮುಸ್ತದಾಖ್ಯಾತುಂ ರಾವಣಸ್ಯ ತರಸ್ವಿನಃ ॥೧॥**

ಸೀತಾದೇವಿಯು ಹೇಳಿದ ಮಾತುಗಳನ್ನು ಕೇಳಿ ಘೋರರೂಪಿಣಿಯರಾದ ಕೆಲವು ರಾಕ್ಷಸಿಯರು ಕೋಪದಿಂದ ಮೈಮರೆತವರಾಗಿ ದುರಾತ್ಮನಾದ ರಾವಣನಿಗೆ ಆ ವಿಷಯವನ್ನು ತಿಳಿಸಲು ಬೇಗನೆ ಹೋದರು.

ಭಯಂಕರವಾಗಿ ಕಾಣುತ್ತಿದ್ದ ಕೆಲವು ರಾಕ್ಷಸಿಯರು ಪುನಃ ಸೀತೆಯ ಬಳಿಗೆ ಬಂದು ರಾವಣನನ್ನು ವರಿಸಬೇಕೆಂಬ ಒಂದೇ ಅಭಿಪ್ರಾಯದಿಂದ ಕೂಡಿದ್ದ, ಕ್ರೂರವಾದ ಮತ್ತು ಅನರ್ಥಕರವಾದ ಮಾತನ್ನು ಹೇಳಿದರು :

"ಅನಾರ್ಯಳೇ! ಪಾಪಬುದ್ಧಿಯವಳೇ! ರಾಕ್ಷಸಿಯರು ಈಗಲೇ ನಿನ್ನ ಶರೀರದಲ್ಲಿರುವ ಮಾಂಸವನ್ನು ಅನಾಯಾಸವಾಗಿ ಸುಖವಾಗಿ ತಿಂದು ಹಾಕುತ್ತಾರೆ."

ಅನಾರ್ಯೆಯರಾದ ಆ ರಾಕ್ಷಸಿಯರು ಸೀತೆಯನ್ನು ಹೀಗೆ ಭಯಪಡಿಸುತ್ತಿರುವುದನ್ನು ನೋಡಿ ಆಗ ತಾನೇ ನಿದ್ರೆಯಿಂದ ಎಚ್ಚೆತ್ತ ತ್ರಿಜಟಾ ಎಂಬ ರಾಕ್ಷಸಿಯು ಹೇಳಿದಳು :

"ಅನಾರ್ಯೆಯರಾದ ರಾಕ್ಷಸಿಯರೇ! ನೀವು ನನ್ನನ್ನಾದರೂ ಭಕ್ಷಿಸಿರಿ. ಆದರೆ ಜನಕನ ಪ್ರಿಯಪುತ್ರಿಯಾದ ದಶರಥನ ಸೊಸೆಯಾದ ಸೀತೆಯನ್ನು ಮಾತ್ರ ಭಕ್ಷಿಸಬೇಡಿರಿ.

ಈಗ ತಾನೇ ರಾಕ್ಷಸರ ಅಳಿವನ್ನೂ–ಈಕೆಯ ಪತಿಯಾದ ಶ್ರೀರಾಮನ ಅಭ್ಯುದಯವನ್ನೂ ಸೂಚಿಸುವ ಭಯಂಕರವಾದ ಮತ್ತು ರೋಮಾಂಚವನ್ನುಂಟುಮಾಡುವ ಕನಸೊಂದನ್ನು ಕಂಡೆನು."

ತ್ರಿಜಟೆಯು ಹೀಗೆ ಹೇಳಲು ಕ್ರೋಧಮೂರ್ಛಿತೆಯರಾಗಿದ್ದ ಎಲ್ಲ ರಾಕ್ಷಸಿಯರೂ ಭಯಗೊಂಡು ಹೇಳಿದರು :

"ತ್ರಿಜಟೇ! ರಾತ್ರಿಯಲ್ಲಿ ನೀನು ಕಂಡ ಸ್ವಪ್ನವು ಎಂತಹುದೆಂಬುದನ್ನು ಹೇಳು."

ರಾಕ್ಷಸಿಯರ ಮುಖದಿಂದ ಹೊರಬಂದ ಆ ಮಾತನ್ನು ಕೇಳಿ ತ್ರಿಜಟೆಯು ಬೆಳಗಿನಜಾವದಲ್ಲಿ ತನಗಾದ ಸ್ವಪ್ನದ ವಿಚಾರವನ್ನು ಹೇಳತೊಡಗಿದಳು :

"ರಾಕ್ಷಸಿಯರೇ! ಕೇಳಿರಿ. ಸ್ವಪ್ನದಲ್ಲಿ ನಾನು ರಾಮ-ಲಕ್ಷ್ಮಣರನ್ನು ನೋಡಿದೆನು. ಶ್ರೀರಾಮನು ಬಿಳುಪಾದ ಮಾಲೆಯಿಂದಲೂ ವಸ್ತ್ರಗಳಿಂದಲೂ ಸಮಲಂಕೃತನಾಗಿದ್ದನು. ಆನೆಯ ದಂತದಿಂದಲೇ ನಿರ್ಮಿಸಲ್ಪಟ್ಟಿದ್ದ, ಅಂತರಿಕ್ಷದಲ್ಲಿ ಪ್ರಯಾಣಮಾಡಲು ಸಮರ್ಥವಾಗಿದ್ದ, ಸಾವಿರ ಹಂಸಗಳಿಂದ ಅಲಂಕೃತವಾಗಿದ್ದ ಪಲ್ಲಕ್ಕಿಯಲ್ಲಿ ಲಕ್ಷ್ಮಣನೊಡನೆ ಕುಳಿತು ಇಲ್ಲಿಗ ಆಗಮಿಸಿದನು. ಈ ಸೀತೆಯು ಬಿಳಿಯ ವಸ್ತ್ರವನ್ನುಟ್ಟಿದ್ದಳು. ಸಮುದ್ರದಿಂದ ಸುತ್ತುವರಿಯಲ್ಪಟ್ಟಿದ್ದ ಶ್ವೇತಪರ್ವತದಲ್ಲಿ ಕುಳಿತಿದ್ದಳು. ಇಷ್ಟು ಮಾತ್ರವಲ್ಲ, ಸೂರ್ಯನೊಡನೆ ಪ್ರಭೆಯು ಸೇರುವಂತೆ–ಶ್ರೀರಾಮನನ್ನು ಇವಳು ಸೇರಿದಳು. ಮತ್ತೊಮ್ಮೆ ನಾನು ನಾಲ್ಕು ದಂತಗಳುಳ್ಳ ಪರ್ವತೋಪಮವಾದ ಮಹಾಗಜದ ಮೇಲೆ ಶ್ರೀರಾಮನು ಲಕ್ಷ್ಮಣಸಮೇತನಾಗಿ ಸಂಚರಿಸುತ್ತಿರುವುದನ್ನು ಕನಸಿನಲ್ಲಿ ಕಂಡೆನು. ತಮ್ಮ ತೇಜಸ್ಸಿನಿಂದ ಬೆಳಗುತ್ತಿದ್ದ, ಸೂರ್ಯಸದೃಶರಾಗಿದ್ದ, ಬಿಳಿಯ ಮಾಲೆಗಳನ್ನು ಧರಿಸಿದ್ದ ರಾಮ-ಲಕ್ಷ್ಮಣರು ಜಾನಕಿಯ ಬಳಿ ಕುಳಿತಿದ್ದರು.

ಶ್ವೇತಪರ್ವತದ ಶಿಖರದಲ್ಲಿ ಶ್ರೀರಾಮನು ಕುಳಿತಿದ್ದ ಆನೆಯ ಹೆಗಲನ್ನು ಆಶ್ರಯಿಸಿ ಸೀತಾದೇವಿಯು ಶ್ರೀರಾಮನ ತೊಡೆಯ ಮೇಲೆ ಕುಳಿತುಕೊಂಡಳು.*

---

* ಸ್ವಪ್ನಫಲ ಭಾಗದಲ್ಲಿ ಹೀಗೆ ಹೇಳಿದೆ : **ಆರೋಹಣಂ ಗೋವೃಷಕುಞ್ಜರಾಣಾಂ ಪ್ರಾಸಾದಶೈಲಾಗ್ರವನಸ್ಪತೀನಾಮ್ । ಧ್ರುವಮರ್ಥಲಾಭಮ್ ॥**

ತತಸ್ತಸ್ಯ ಎಂಬ ಪದಗಳಲ್ಲಿರುವ ಸ್ಯ ಎಂಬ ಅಕ್ಷರವು ಗಾಯತ್ರಿಯ ೧೩ನೆಯ ಅಕ್ಷರವೆಂದೂ–ಈ ಶ್ಲೋಕದವರೆಗೆ ೧೨ ಸಾವಿರ ಶ್ಲೋಕಗಳು ಮುಗಿದು ೧೩ನೆಯ ಸಾವಿರವು ಪ್ರಾರಂಭವಾಗುವುದೆಂದೂ ಒಬ್ಬ ವ್ಯಾಖ್ಯಾನಕಾರರು ಹೇಳಿದ್ದಾರೆ. ಆದರೆ ಪ್ರಸಿದ್ಧವಾಗಿರುವ ಗಾಯತ್ರೀರಾಮಾಯಣದಲ್ಲಿ ಹೇಳಿರುವಂತೆ **ಧನ್ಯಾಃ ದೇವಾಃ**

ಕಮಲದಂತೆ ವಿಶಾಲವಾದ ಕಣ್ಣುಗಳನ್ನು ಹೊಂದಿದ್ದ ಸೀತಾ ದೇವಿಯು ಪತಿಯ ತೊಡೆಯಿಂದ ಮೇಲಕ್ಕೆ ನೆಗೆದು ಆಕಾಶದಲ್ಲಿದ್ದ ಸೂರ್ಯ-ಚಂದ್ರರನ್ನು ಎರಡು ಕೈಗಳಿಂದಲೂ ಸವರುತ್ತಿದ್ದುದನ್ನು ನಾನು ಕನಸಿನಲ್ಲಿ ಕಂಡೆನು.[1] ಕುಮಾರರಾದ ರಾಮ-ಲಕ್ಷ್ಮಣರಿಬ್ಬರನ್ನೂ ಮತ್ತು ವಿಶಾಲಾಕ್ಷಿಯಾದ ಸೀತಾದೇವಿಯನ್ನೂ ಹೊತ್ತಿದ್ದ ಆ ಆನೆಯು ಲಂಕೆಯ ಮೇಲ್ಭಾಗದಲ್ಲಿದ್ದಿತು. ಬಿಳುಪಾದ ಎಂಟು ಎತ್ತುಗಳಿಂದ ಹೂಡಲ್ಪಟ್ಟಿದ್ದ ರಥದಲ್ಲಿ ಪತ್ನಿಯಾದ ಸೀತೆಯೊಡನೆ ಕುಳಿತು ಕಾಕುತ್ಸ್ಥನು ಇಲ್ಲಿಗೆ ಆಗಮಿಸಿದ ಮತ್ತೊಂದು ದೃಶ್ಯವನ್ನೂ ನಾನು ಕನಸಿನಲ್ಲಿ ಕಂಡೆನು.

ಸತ್ಯಪರಾಕ್ರಮನಾದ, ವೀರ್ಯವಂತನಾದ, ಪುರುಷಶ್ರೇಷ್ಠನಾದ ಶ್ರೀರಾಮನು ತಮ್ಮನಾದ ಲಕ್ಷ್ಮಣ ಮತ್ತು ಭಾರ್ಯೆಯಾದ ಸೀತಾದೇವಿಯ ರೊಡನೆ ಸೂರ್ಯಸದೃಶವಾದ ಪುಷ್ಪಕವಿಮಾನದಲ್ಲಿ ಕುಳಿತು ಉತ್ತರ ದಿಕ್ಕನ್ನು ನೋಡುತ್ತಾ ಪ್ರಯಾಣಮಾಡುತ್ತಿದ್ದನು.

ಹೀಗೆ ನಾನು ಸ್ವಪ್ನದಲ್ಲಿ ತಮ್ಮನಾದ ಲಕ್ಷ್ಮಣನೊಡನೆಯೂ ಪತ್ನಿ ಯಾದ ಜಾನಕಿಯೊಡನೆಯೂ ಇದ್ದ ವಿಷ್ಣುಸದೃಶಪರಾಕ್ರಮನಾದ ಶ್ರೀರಾಮ ನನ್ನು ನೋಡಿದೆನು.

ಸುರಾಸುರರಾಗಲೀ, ರಾಕ್ಷಸರಾಗಲೀ ಅಥವಾ ಬೇರೆ ಯಾರೇ ಆಗಲೀ–ಪಾಪಿಷ್ಠರಾಗಿದ್ದರೆ ಸ್ವರ್ಗವನ್ನು ಜಯಿಸಲಾರರು. ಹಾಗೆಯೇ ಸುರಾಸುರರಾಗಲೀ, ರಾಕ್ಷಸರಾಗಲೀ ಶ್ರೀರಾಮನನ್ನು ಜಯಿಸಲಾರರು.

ಅದೇ ಕನಸಿನಲ್ಲಿಯೇ ನಾನು ರಾಕ್ಷಸರಾಜನಾದ ರಾವಣನನ್ನೂ ನೋಡಿದೆನು. ಅವನು ತಲೆಯನ್ನು ಬೋಳಿಸಿಕೊಂಡು ಮೈಗೆಲ್ಲಾ ಎಣ್ಣೆ ಯನ್ನು ಹಚ್ಚಿಕೊಂಡಿದ್ದನು. ಕೆಂಪುಬಟ್ಟೆಯನ್ನುಟ್ಟಿದ್ದನು. ಸುರಾಪಾನ ಮಾಡುತ್ತಿದ್ದನು. ಮತ್ತನಾಗಿದ್ದನು. ಕೆಂಪುಕಣಗಿಲೆಹೂವಿನ ಹಾರವನ್ನು ಹಾಕಿ

---

ಸಗನ್ಧರ್ವಾಃ ಎಂಬ ೨೭ನೆಯ ಸರ್ಗದ ೩೦ನೆಯ ಶ್ಲೋಕದಿಂದ ೧೨ನೆಯ ಸಾವಿರವು ಪ್ರಾರಂಭವಾಗುತ್ತದೆ.

1 ಕನಸಿನಲ್ಲಿ ಸೂರ್ಯ-ಚಂದ್ರರನ್ನು ಹಿಡಿದುಕೊಂಡರೆ ಆಗುವ ಫಲವನ್ನು ಸ್ವಪ್ನ ನಿರ್ಣಯದಲ್ಲಿ ಹೀಗೆ ಹೇಳಿದೆ. ಆದಿತ್ಯಮಣ್ಡಲಂ ಚಾಪಿ ಚನ್ದ್ರಮಣ್ಡಲಮೇವ ವಾ । ಸ್ವಪ್ನೇ ಗೃಹ್ಣಾತಿ ಹಸ್ತಾಭ್ಯಾಂ ಮಹದ್ರಾಜ್ಯಂ ಸಮಾಪ್ನುಯಾತ್ ॥

ಕೊಂಡಿದ್ದನು. ಹೀಗಿದ್ದ ರಾವಣನು ಪುಷ್ಪಕವಿಮಾನದಿಂದ ಭೂಮಿಗೆ ಬಿದ್ದುಬಿಟ್ಟನು. ತಲೆಯನ್ನು ಬೋಳಿಸಿಕೊಂಡಿದ್ದ ರಾವಣನನ್ನು ಸ್ತ್ರೀಯರು ಅತ್ತಿಂದಿತ್ತ ಎಳೆದಾಡುತ್ತಿದ್ದರು. ಮೊದಲು ಕೆಂಪುವಸ್ತ್ರವನ್ನುಟ್ಟಿದ್ದ ರಾವಣನು ಮರುಕ್ಷಣದಲ್ಲಿಯೇ ಕಪ್ಪುವಸ್ತ್ರವನ್ನುಟ್ಟುಕೊಂಡನು. ಭ್ರಾಂತವಾದ ಮನಸ್ಸಿನಿಂದಲೂ, ವ್ಯಾಕುಲಿತವಾದ ಇಂದ್ರಿಯಗಳಿಂದಲೂ ಕೂಡಿದ್ದ ರಾವಣನು ಕೆಂಪುಮಾಲೆಯನ್ನು ಧರಿಸಿ ಕೆಂಪು ಗಂಧವನ್ನು ಬಳಿದುಕೊಂಡು ಎಣ್ಣೆಯನ್ನು ಕುಡಿಯುತ್ತಾ ನಗುತ್ತಾ ಕುಣಿದಾಡುತ್ತಾ ಕತ್ತೆಗಳು ಎಳೆಯುವ ರಥದಲ್ಲಿ ಕುಳಿತು ಬಹಳ ಶೀಘ್ರವಾಗಿ ದಕ್ಷಿಣದಿಕ್ಕಿನ ಕಡೆಗೆ ಹೊರಟುಹೋದನು. ಪುನಃ ರಾವಣನು ಭಯಭ್ರಾಂತನಾಗಿ ಕತ್ತೆಯ ಮೇಲಿಂದ ತಲೆಕೆಳಗಾಗಿ ಭೂಮಿಯ ಮೇಲೆ ಬಿದ್ದನು. ಹೀಗೆ ನೆಲದ ಮೇಲೆ ಬಿದ್ದ ರಾವಣನು ಭ್ರಾಂತನಾಗಿ ಭಯಪೀಡಿತನಾಗಿದ್ದನು. ಮದದಿಂದ ವಿಹ್ವಲನಾಗಿದ್ದನು. ಹುಚ್ಚನಂತೆ ಕಾಣುತ್ತಿದ್ದನು. ದಿಗಂಬರನಾಗಿದ್ದನು. ಕೆಟ್ಟ ಮಾತುಗಳನ್ನಾಡುತ್ತಿದ್ದನು. ಸಹಿಸಲು ಅಸಾಧ್ಯವಾದ ದುರ್ಗಂಧವು ಅವನ ಶರೀರದಿಂದ ಹೊರಸೂಸುತ್ತಿದ್ದಿತು. ಅವನು ಗಾಢಾಂಧಕಾರದಿಂದ ಕೂಡಿದ್ದ, ನರಕಸದೃಶವಾಗಿದ್ದ, ಮಲದ ಕೆಸರಿನಲ್ಲಿ ಬಿದ್ದು ಅಲ್ಲಿಯೇ ಮುಳುಗಿಹೋದ ಘೋರದೃಶ್ಯವನ್ನು ನಾನು ಕನಸಿನಲ್ಲಿ ಕಂಡೆನು.

ಆ ಸಮಯದಲ್ಲಿ ಕೆಂಪುವಸ್ತ್ರವನ್ನುಟ್ಟಿದ್ದ, ಕೆಸರುಬಳಿದ ಶರೀರದಿಂದ ಕೂಡಿದ್ದ, ಕಪ್ಪುಬಣ್ಣದ ಸ್ತ್ರೀಯೊಬ್ಬಳು ರಾವಣೇಶ್ವರನ ಕುತ್ತಿಗೆಯನ್ನು ಹಿಡಿದು ದಕ್ಷಿಣದಿಕ್ಕಿಗೆ ಸೆಳೆದುಕೊಂಡು ಹೋಗುತ್ತಿದ್ದಳು.

ಇದೇ ರೀತಿಯಲ್ಲಿ ನಾನು ಆ ಕನಸಿನಲ್ಲಿ ಮಹಾಬಲನಾದ ಕುಂಭಕರ್ಣನೂ, ರಾವಣನ ಎಲ್ಲ ಮಕ್ಕಳೂ ತಲೆಗಳನ್ನು ಬೋಳಿಸಿಕೊಂಡು ಎಣ್ಣೆಯನ್ನು ಹಚ್ಚಿಕೊಂಡಿದ್ದುದನ್ನು ನೋಡಿದೆನು.

ರಾವಣನು ಹಂದಿಯ ಮೇಲೂ, ಇಂದ್ರಜಿತುವು ಮೀನಿನ ಮೇಲೂ, ಕುಂಭಕರ್ಣನು ಒಂಟೆಯ ಮೇಲೂ ಕುಳಿತು ದಕ್ಷಿಣದಿಕ್ಕಿಗೆ ಪ್ರಯಾಣ ಮಾಡುತ್ತಿದ್ದರು. ಆದರೆ ವಿಭೀಷಣನೊಬ್ಬನು ಮಾತ್ರ ಶ್ವೇತಛತ್ರದ ನೆರಳಿನಲ್ಲಿ ಕುಳಿತಿರುವುದನ್ನು ಕಂಡೆನು. ಅವನು ಬಿಳಿಯ ಮಾಲೆಯನ್ನು ಧರಿಸಿ

ದ್ದನು. ಬಿಳಿಯ ಬಟ್ಟೆಯನ್ನು ತೊಟ್ಟು ಬಿಳಿಯ ಗಂಧವನ್ನು ಪೂಸಿಕೊಂಡಿ ದ್ದನು. ಅವನ ಸುತ್ತಲೂ ಶಂಖ-ದುಂದುಭಿಗಳು ಮೊಳಗುತ್ತಿದ್ದುವು. ನರ್ತನಗಳಾಗುತ್ತಿದ್ದುವು. ಗಾಯಕರು ಗಾನಮಾಡುತ್ತಿದ್ದರು. ಅಂತಹ ಪರಿವಾರದಿಂದ ಸಮಲಂಕೃತನಾಗಿದ್ದ ವಿಭೀಷಣನು ಶೈಲಸದೃಶವಾದ, ಮೇಘದ ಗರ್ಜನೆಗೆ ಸಮಾನವಾಗಿ ಘೀಳಿಡುತ್ತಿದ್ದ, ನಾಲ್ಕು ದಂತಗಳುಳ್ಳ, ದಿವ್ಯವಾದ ಆನೆಯ ಮೇಲೆ ಕುಳಿತು ನಾಲ್ಕು ಮಂದಿ ಸಚಿವರೊಡನೆ ಆಕಾಶದಲ್ಲಿ ಉಪಸ್ಥಿತನಾಗಿದ್ದನು.

ಗೀತ-ವಾದ್ಯಗಳ ಧ್ವನಿಗಳಿಂದ ಸಮಾವೃತರಾಗಿ ಸುರಾಪಾನಮಾಡುತ್ತಾ ಕೆಂಪುಮಾಲೆಗಳನ್ನು ಧರಿಸಿ ಕೆಂಪುವಸ್ತ್ರಗಳನ್ನುಟ್ಟಿದ್ದ ರಾಕ್ಷಸರ ಸಮಾಜವನ್ನು ನಾನು ಕನಸಿನಲ್ಲಿ ಕಂಡೆನು.

ರಥಾಶ್ವ-ಗಜಗಳಿಂದ ಸಂಪನ್ನವಾಗಿರುವ ಮತ್ತು ರಮ್ಯವಾಗಿರುವ ಈ ಲಂಕಾಪಟ್ಟಣದ ಗೋಪುರಗಳೂ ತೋರಣಗಳೂ ಭಗ್ನವಾಗಿ ಸಮುದ್ರದಲ್ಲಿ ಬಿದ್ದುಹೋದುದನ್ನೂ ನಾನು ನೋಡಿದೆನು.

ರಾವಣೇಶ್ವರನಿಂದ ಪರಿಪಾಲಿಸಲ್ಪಡುತ್ತಿರುವ ಈ ಪಟ್ಟಣವನ್ನು ಶ್ರೀರಾಮನ ದೂತನಾದ ವೇಗವಂತನಾದ ವಾನರನೊಬ್ಬನು ಭಸ್ಮಮಾಡು ತ್ತಿದ್ದುದನ್ನು ನೋಡಿದೆನು. ರಾಕ್ಷಸಸ್ತ್ರೀಯರು ಎಣ್ಣೆಯನ್ನು ಕುಡಿದು ಪ್ರಮತ್ತರಾಗಿ ಗಹಗಹಿಸಿ ನಗುತ್ತಾ ಗಟ್ಟಿಯಾಗಿ ಶಬ್ದಮಾಡುತ್ತಾ ಬೆಂದು ಭಸ್ಮವಾಗಿ ಹೋಗಿದ್ದ ಲಂಕಾಪಟ್ಟಣವನ್ನು ಪ್ರವೇಶಿಸುತ್ತಿದ್ದರು. ಕುಂಭ ಕರ್ಣನೇ ಮೊದಲಾದ ರಾಕ್ಷಸಶ್ರೇಷ್ಠರು ಕೆಂಪು ಬಟ್ಟೆಯನ್ನು ಉಟ್ಟು ಸಗಣಿಯ ಬಗ್ಗಡದಿಂದ ತುಂಬಿಹೋಗಿದ್ದ ಹೊಂಡವನ್ನು ಪ್ರವೇಶಿಸುತ್ತಿದ್ದು ದನ್ನು ನಾನು ಕನಸಿನಲ್ಲಿ ಕಂಡೆನು.

ರಾಕ್ಷಸಿಯರೇ! ಸೀತೆಯಿಂದ ಸರಿದು ನಿಲ್ಲಿರಿ. ಅವಳ ತಂಟೆಗೆ ಹೋಗ ಬೇಡಿರಿ. ಹಾಗೇನಾದರೂ ಹೋದರೆ ನಾಶವಾಗಿ ಹೋಗುವಿರಿ. ರಾಘವನು ಸೀತೆಯನ್ನು ಪಡೆದೇ ಪಡೆಯುತ್ತಾನೆ. ಒಂದು ವೇಳೆ ನೀವು ಸೀತೆಯನ್ನು ಹಿಂಸಿಸುತ್ತಲೇ ಇದ್ದರೆ ಕೋಪಿಷ್ಠನಾದ ರಾಘವನು ರಾಕ್ಷಸರೊಡನೆ ನಿಮ್ಮನ್ನೂ

ಧ್ವಂಸಮಾಡುವನು. ಪ್ರಿಯಳಾದ, ಸರ್ವಸಮ್ಮತಳಾದ, ತನ್ನನ್ನನುಸರಿಸಿ ಕಾಡಿಗೆ ಬಂದಿರುವ ಭಾರ್ಯೆಯನ್ನು ಹೆದರಿಸಿದರೆ, ಹಿಂಸಿಸಿದರೆ–ರಾಘವನು ಕ್ಷಮಿಸುವವನಲ್ಲ. ಸೀತೆಯೊಡನೆ ಕಠೋರವಾಗಿ ಮಾತನಾಡುವುದನ್ನು ಸಾಕುಮಾಡಿರಿ. ಅವಳೊಡನೆ ಒಳ್ಳೆಯ ಸಾಂತ್ವನದ ಮಾತುಗಳನ್ನೇ ಆಡಿರಿ. ಆಪತ್ಕಾಲದಲ್ಲಿ ರಕ್ಷಿಸುವಂತೆ ಅವಳನ್ನೇ ಪ್ರಾರ್ಥಿಸೋಣ. ಇದೇ ನನಗೆ ಉಚಿತವಾಗಿ ಕಾಣುತ್ತದೆ. ದುಃಖಿತಳಾಗಿರುವ ಯಾವಳ ವಿಷಯವಾಗಿ ಈ ವಿಧವಾದ ಸ್ವಪ್ನಗಳು ಬೀಳುತ್ತವೆಯೋ–ಅಂತಹವಳು ಬಹುಪ್ರಕಾರವಾದ ದುಃಖದಿಂದಲೂ ಬಿಡುಗಡೆ ಹೊಂದಿ ಸರ್ವಶ್ರೇಷ್ಠವಾದ ಸುಖವನ್ನೇ ಹೊಂದುವಳು.

ಗೆಳತಿಯರೇ! 'ಇದುವರೆಗೂ ಸೀತೆಯನ್ನು ಹೆದರಿಸಿ ಈಗ ಪ್ರಾರ್ಥಿಸ ಹೋದರೆ ಅವಳು ಕ್ಷಮಿಸುವಳೇ?' ಇದೇ ಮುಂತಾದ ಸಂಶಯಾತ್ಮಕವಾದ ವಿವೇಚನೆಯಿಂದ ಯಾವ ಪ್ರಯೋಜನವೂ ಇಲ್ಲ. ನಾವು ಇದುವರೆಗೂ ಇವಳನ್ನು ಬೆದರಿಸಿದೆವು. ಹಿಂಸಿಸಿದೆವು. ಈಗ ನಾವು ಇವಳ ಕ್ಷಮೆಯನ್ನು ಯಾಚಿಸೋಣ. ರಾಕ್ಷಸರಿಗೆ ರಾಘವನಿಂದ ಅತಿಘೋರವಾದ ಭಯವು ಸನ್ನಿಹತವಾಗಿರುವುದಂತೂ ನಿಶ್ಚಯ. ಕಾಲಿಗೆ ಬಿದ್ದು ಶರಣಾಗತರಾದರೆ ಜನಕನ ಮಗಳಾದ ಇವಳು ಪ್ರಸನ್ನಳಾಗುವಳು. ಮಹಾಭಯದಿಂದ ನಮ್ಮನ್ನು ಪಾರುಮಾಡಲು ಇವಳು ಸಮರ್ಥಳಾಗಿದ್ದಾಳೆ. ವಿಶಾಲಾಕ್ಷಿಯಾದ ಇವಳ ಅವಯವಗಳಲ್ಲಿ ನಾನು ಸೂಕ್ಷ್ಮವಾದ ಯಾವ ವಿರೂಪವನ್ನೂ ಕಾಣುತ್ತಿಲ್ಲ. ಈಗ ಇವಳಿಗೆ ಒದಗಿಬಂದಿರುವ ಸಂಕಟವು ಸ್ಥಿರವಾಗಿ ಉಳಿಯುವಂತಹ ಅಶುಭಲಕ್ಷಣದ ಲೇಶಮಾತ್ರವಾದರೂ ಇವಳಲ್ಲಿ ಕಾಣುತ್ತಿಲ್ಲ.

ಆಕಾಶದಲ್ಲಿ ವಿಮಾನದಲ್ಲಿ ಉಪಸ್ಥಿತಳಾಗಿದ್ದ ದುಃಖಾರ್ಹಳಲ್ಲದ ಈ ಸೀತಾದೇವಿಯ ಕಾಂತಿಯನ್ನು ಸ್ವಲ್ಪಮಟ್ಟಿಗೆ ಕುಂದಿಸುವಷ್ಟು ದುಃಖವು ಇವಳನ್ನೀಗ ಆವರಿಸಿರುವುದೆಂದು ನಾನು ಸಂದೇಹಿಸುತ್ತಿದ್ದೇನೆ. ರಾಹುವಿನ ಛಾಯೆಯಿಂದ ಚಂದ್ರನ ಕಾಂತಿಯು ಮಲಿನವಾಗುವಂತೆ–ಸೀತಾದೇವಿಯ ದುಃಖವು ಕೇವಲ ಪ್ರಾಸಂಗಿಕವಾಗಿದೆ. ಚಂದ್ರೋಪರಾಗದಂತೆ–ತಾತ್ಕಾಲಿಕವಾದುದು. ವೈದೇಹಿಗೆ ಇಷ್ಟಾರ್ಥಸಿದ್ಧಿಯ ಕಾಲವು ಸನ್ನಿಹಿತವಾಗಿರುವುದನ್ನೂ ನಾನು ಸ್ಪಷ್ಟವಾಗಿ ಕಾಣುತ್ತಿದ್ದೇನೆ. ಅಂತೆಯೇ ರಾಘವನ

ವಿಜಯವನ್ನೂ ರಾಕ್ಷಸೇಂದ್ರನ ಪರಾಭವವನ್ನೂ ಕಾಣುತ್ತಿದ್ದೇನೆ. ಕಮಲ ದಂತೆ ವಿಶಾಲವಾಗಿರುವ ಸೀತಾದೇವಿಯ ಎಡಗಣ್ಣು ಅದುರುತ್ತಿದೆ. ಅತ್ಯಲ್ಪ ಕಾಲದಲ್ಲಿಯೇ ಇವಳು ಅತ್ಯಂತಸಂತೋಷಕರವಾದ ವಾರ್ತೆಯನ್ನು ಕೇಳುವ ಳೆಂಬುದಕ್ಕೆ ಇದು ನಿಮಿತ್ತವಾಗಿದೆ. ಉದಾರಹೃದಯಳಾದ ವೈದೇಹಿಯ ಎಡತೋಳೊಂದೇ ಅಕಸ್ಮಾತ್ತಾಗಿ ರೋಮಾಂಚಗೊಂಡು ಸ್ವಲ್ಪಮಟ್ಟಿಗೆ ಕಂಪಿಸುತ್ತಿದೆ. ಇದು ಕೂಡ ಇವಳಿಗೆ ಶುಭವಾಗುವುದೆಂಬುದನ್ನು ಸೂಚಿಸು ತ್ತದೆ. ಹೆಣ್ಣಾನೆಯ ಸೊಂಡಿಲಿಗೆ ಸದೃಶವಾಗಿರುವ ಸೀತಾದೇವಿಯ ಎಡ ತೊಡೆಯೂ ಅದುರುತ್ತಿದ್ದು ಅತ್ಯಲ್ಪಕಾಲದಲ್ಲಿಯೇ ರಾಘವನು ಇವಳ ಮುಂದೆ ನಿಲ್ಲವನೆಂಬುದನ್ನೂ ಸೂಚಿಸುತ್ತಿದೆ.

ಅದೋ ಅಲ್ಲಿ ನೋಡಿರಿ! ಸಂತಸದಿಂದಿರುವ ಆ ಪಕ್ಷಿಯು ರೆಂಬೆ ಯಲ್ಲಿರುವ ತನ್ನ ಗೂಡನ್ನು ಸೇರಿಕೊಂಡು ಇಂಪಾದ ಸಾಂತ್ವನದ ಮಾತು ಗಳನ್ನು ಚಿಲಿ-ಪಿಲಿ ಶಬ್ದಗಳ ಮೂಲಕವಾಗಿ ಹೇಳುತ್ತಿದೆ. ಇದನ್ನು ನೋಡಿದರೆ ಬಂಧುಗಳು ಆಗಮಿಸುವರೆಂಬ ಶುಭವಾರ್ತೆಯನ್ನು ಹೇಳುತ್ತಾ ದುಃಖವನ್ನು ದೂರೀಕರಿಸುವಂತೆ ಸೀತಾದೇವಿಗೆ ಬಾರಿ-ಬಾರಿಗೂ ಹೇಳುತ್ತಿರುವುದೋ ಎಂಬಂತೆ ಕಾಣುತ್ತಿದೆ."

ಹೀಗೆ ತ್ರಿಜಟೆಯು ತನ್ನ ಸ್ವಪ್ನದ ವಿಷಯವನ್ನು ರಾಕ್ಷಸಿಯರಿಗೆ ಹೇಳಲು–ಲಜ್ಜಾವಿಶಿಷ್ಟಳಾದ ಜಾನಕಿಯು ಪತಿಗೆ ವಿಜಯವಾಗುವುದೆಂಬು ದನ್ನು ಕೇಳಿ ಹರ್ಷಿತಳಾಗಿ ರಾಕ್ಷಸಿಯರಿಗೆ ಹೇಳಿದಳು :

**ಅವೋಚದ್ಯದಿ ತತ್ತಥ್ಯಂ ಭವೇಯಂ ಶರಣಂ ಹಿ ವಃ ॥೫೨॥**

"ತ್ರಿಜಟೆಯು ಹೇಳುತ್ತಿರುವುದು ನಿಜವೇ ಆಗುವುದಾದರೆ–ನಾನು ನಿಮಗೆ ರಕ್ಷಕಳಾಗುವೆನು."

ಇ೭ನೆಯ ಸರ್ಗವು ಮುಗಿಯಿತು.

## ಸೀತಾದೇವಿಯು ಪ್ರಾಣತೊರೆಯಲು ಸಿದ್ಧಳಾದುದು

ಸಾ ರಾಕ್ಷಸೇನ್ದ್ರಸ್ಯ ವಚೋ ನಿಶಮ್ಯ
ತದ್ರಾವಣಸ್ಯಾಪ್ರಿಯಮಪ್ರಿಯಾರ್ತಾ ।
ಸೀತಾ ವಿತತ್ರಾಸ ಯಥಾ ವನಾನ್ತೇ
ಸಿಂಹಾಭಿಪನ್ನಾ ಗಜರಾಜಕನ್ಯಾ ॥೧॥

ಪ್ರಿಯನ ಸಂಪರ್ಕವಿಲ್ಲದೇ ವಿರಹಪೀಡಿತಳಾಗಿದ್ದ ಸೀತಾದೇವಿಯು, ರಾಕ್ಷಸೇಂದ್ರನಾದ ರಾವಣನ ಅಪ್ರಿಯವಾದ ಮಾತುಗಳನ್ನು ಪುನಃ ಸ್ಮರಿಸಿ ಕೊಂಡು ಅರಣ್ಯದ ಮಧ್ಯದಲ್ಲಿ ಸಿಂಹದ ಆಕ್ರಮಣಕ್ಕೊಳಗಾದ ಹೆಣ್ಣಾನೆ ಮರಿಯಂತೆ ಭಯಗೊಂಡಳು.

ರಾಕ್ಷಸಿಯರ ಮಧ್ಯದಲ್ಲಿದ್ದ, ಅತ್ಯಂತಕಠೋರವಾದ ಮಾತುಗಳ ಮೂಲಕವಾಗಿ ರಾವಣನಿಂದ ಭಯಗೊಳಿಸಲ್ಪಟ್ಟ ಸೀತಾದೇವಿಯು–ನಿರ್ಜನ ವಾದ ಕಾಡಿನ ಮಧ್ಯದಲ್ಲಿ ಬಂಧುಗಳಿಂದ ಪರಿತ್ಯಜಿಸಲ್ಪಟ್ಟ ಎಳೆಹುಡುಗಿ ಯಂತೆ–ರೋದನಮಾಡತೊಡಗಿದಳು.

ಸತ್ಯಂ ಬತೇದಂ ಪ್ರವದನ್ತಿ ಲೋಕೇ
ನಾಕಾಲಮೃತ್ಯುರ್ಭವತೀತಿ ಸನ್ತಃ ।
ಯತ್ರಾಹಮೇವಂ ಪರಿಭರ್ತ್ಸ್ಯಮಾನಾ
ಜೀವಾಮಿ ಯಸ್ಮಾತ್ಕ್ಷಣಮಪ್ಯಪುಣ್ಯಾ ॥೨॥

"ಮನುಷ್ಯರಿಗೆ ಅಕಾಲದಲ್ಲಿ ಮರಣವು ಸಂಭವಿಸುವುದಿಲ್ಲವೆಂದು ಸತ್ಪುರುಷರು ಹೇಳುತ್ತಾರೆ. ಈ ಮಾತು ಸತ್ಯವೇ ಆಗಿದೆ. ಏಕೆಂದರೆ : ಪುಣ್ಯರಹಿತಳಾದ ನಾನು ಈ ರಾಕ್ಷಸಿಯರಿಂದ ಇಷ್ಟೊಂದು ಭಯಗೊಳಿಸ ಲ್ಪಡುತ್ತಿದ್ದರೂ ಕ್ಷಣಕಾಲವಾದರೂ ಜೀವಿಸಿಯೇ ಇದ್ದೇನೆ.

ಸುಖದಿಂದ ವಂಚಿತವಾದ ಮತ್ತು ದುಃಖದಿಂದ ಪರಿಪೂರ್ಣವಾದ ಈ ನನ್ನ ಹೃದಯವು ವಜ್ರಾಯುಧದಿಂದ ಹೊಡೆಯಲ್ಪಟ್ಟ ಪರ್ವತಶಿಖರ ದಂತೆ ಸಾವಿರಾರು ಚೂರುಗಳಾಗಿ ಒಡೆದುಹೋಗದಿರುವುದನ್ನು ನೋಡಿದರೆ ಇದು ಪರ್ವತಶಿಖರಕ್ಕಿಂತಲೂ ಸುಸ್ಥಿರವಾದುದೆಂದೇ ಭಾಸವಾಗುತ್ತದೆ.

ನೈವಾಸ್ತಿ ದೋಷೋ ಮಮ ನೂನಮತ್ರ
ವಧ್ಯಾಹಮಸ್ಯಾಪ್ರಿಯದರ್ಶನಸ್ಯ ।
ಭಾವಂ ನ ಚಾಸ್ಯಾಹಮನುಪ್ರದಾತು-
ಮಲಂ ದ್ವಿಜೋ ಮನ್ತ್ರಮಿವಾದ್ವಿಜಾಯ ॥೫॥

ಈ ಸಮಯದಲ್ಲಿ ನಾನಾಗಿಯೇ ಸಾಯುವುದರಲ್ಲಿ ನನಗೆ ಆತ್ಮಹತ್ಯಾ ದೋಷವೇನೂ ಉಂಟಾಗುವುದಿಲ್ಲ. ಏಕೆಂದರೆ : ನಿಗದಿಯಾಗಿರುವ ಕಾಲವು ಮುಗಿದೊಡನೆಯೇ ಭಯಂಕರದರ್ಶನನಾದ ರಾವಣನು ನನ್ನನ್ನು ವಧಿಸುವುದಂತೂ ನಿಶ್ಚಯ. ರಾವಣನಿಗೆ ವಶಳಾಗಿ ಪ್ರಾಣಗಳನ್ನು ಉಳಿಸಿಕೊಳ್ಳಬಾರದೆ?–ಹಾಗೆಂದಿಗೂ ಸಾಧ್ಯವಾಗುವುದಿಲ್ಲ. ದ್ವಿಜನಲ್ಲದವನಿಗೆ ದ್ವಿಜನು ಮಂತ್ರೋಪದೇಶವನ್ನು ಮಾಡಲಾಗದಂತೆ–ನಾನು ನನ್ನ ಭಾವವನ್ನು ರಾವಣನಿಗೆ ಕೊಟ್ಟುಕೊಳ್ಳಲು ಖಂಡಿತವಾಗಿಯೂ ಸಮರ್ಥಳಲ್ಲ.

ಲೋಕನಾಥನಾದ ಶ್ರೀರಾಮನು ಎರಡು ಮಾಸಗಳ ಅವಧಿಯಲ್ಲಿ ಇಲ್ಲಿಗೆ ಬಾರದೆಯೇ ಇದ್ದರೆ ಅನಾರ್ಯನಾದ ರಾಕ್ಷಸೇಂದ್ರನಾದ ರಾವಣನು–ದಿತಿಯ ಗರ್ಭದಲ್ಲಿದ್ದ ಪವನನ ಅಂಗಗಳನ್ನು ಇಂದ್ರನು ಕತ್ತರಿಸಿದಂತೆ ಅಥವಾ ಗರ್ಭದಲ್ಲಿರುವ ಮೃತಶಿಶುವನ್ನು ವೈದ್ಯನು ಕತ್ತರಿಸಿಹಾಕುವಂತೆ–ನನ್ನ ಅಂಗಾಂಗಗಳನ್ನು ಬಹಳ ಬೇಗ ಶಸ್ತ್ರಗಳಿಂದ ಕತ್ತರಿಸಿಹಾಕುತ್ತಾನೆ. ರಾಜನಿಗೆ ಅಪರಾಧವನ್ನೆಸಗಿದ ಕಾರಣದಿಂದ ಬಂಧಿಸಲ್ಪಟ್ಟು ರಾತ್ರಿಯ ಕಡೆಯಲ್ಲಿ ಗಲ್ಲು ಶಿಕ್ಷೆಗೆ ಗುರಿಯಾದ ಕಳ್ಳನಿಗೆ ದುಃಖವು ಅಧಿಕವಾಗುವಂತೆ–ನನಗೂ ಈಗ ದುಃಖವು ಅಧಿಕವಾಗಿದೆ. ಅತ್ಯಂತ ದುಃಖಿತಳಾಗಿರುವ ನನಗೆ ಅವಧಿಗೊಳಿಸಿರುವ ಆ ಎರಡು ಮಾಸಗಳು ಬಹಳ ಬೇಗ ಮುಗಿಯುತ್ತಲೇ ಇಲ್ಲ. ನಿಶ್ಚಯವಾಗಿಯೂ ನಾನೀಗ ಎಂತಹ ದುಃಖವನ್ನನುಭವಿಸುತ್ತಿರುವೆನು!*

ಓ ರಾಮ! ಓ ಲಕ್ಷ್ಮಣ! ಓ ಸುಮಿತ್ರೇ! ಓ ಕೌಸಲ್ಯೇ! ಓ ನನ್ನ ತಾಯಿಯರೇ! ಅಲ್ಪಭಾಗ್ಯಳಾದ ನಾನು–ಸುಂಟರಗಾಳಿಗೆ ಸಿಕ್ಕಿದ ಸಮುದ್ರದ

* ಶ್ರೀರಾಮವಿಯೋಗದುಃಖವು ಸೀತಾದೇವಿಗೆ ಅನವರತವಾಗಿ ಇದ್ದೇ ಇದೆ. ಇದರ ಜೊತೆಗೆ ಎರಡು ತಿಂಗಳ ಅವಧಿಯಲ್ಲಿ ರಾಕ್ಷಸನಿಂದ ಮರಣವುಂಟಾಗುವುದೆಂಬ ದುಃಖವೂ ಸೇರಿಕೊಂಡಿದೆ. ಈ ಕಾರಣಗಳಿಂದ ಸೀತೆಯು ಪರಮದುಃಖಿತೆಯಾಗಿದ್ದಾಳೆ.

ಮಧ್ಯದಲ್ಲಿರುವ ಹಡಗಿನಂತೆ–ವಿನಾಶಹೊಂದುತ್ತಿದ್ದೇನೆ. ವೇಗವಂತರಾದ, ಮನುಜೇಂದ್ರನಾದ ದಶರಥಮಹಾರಾಜನ ಪುತ್ರರಾದ ರಾಮ-ಲಕ್ಷ್ಮಣರು ನನ್ನ ಸಲುವಾಗಿ–ಸಿಡಿಲಿನಿಂದ ಕೊಲ್ಲಲ್ಪಟ್ಟ ಎರಡು ಸಿಂಹಗಳಂತೆ–ಮೃಗ ರೂಪವನ್ನು ಧರಿಸಿದ್ದ ಆ ಪ್ರಾಣಿಯಿಂದ ಕೊಲ್ಲಲ್ಪಟ್ಟಿರುವುದು ನಿಶ್ಚಯ. ಆ ಸಮಯದಲ್ಲಿ ಯಮನೇ ಮೃಗರೂಪವನ್ನು ಧರಿಸಿ ಬಂದು ನನ್ನನ್ನು ಪ್ರಲೋಭಿಸಿರಬಹುದು. ಅದೇ ಸಮಯದಲ್ಲಿಯೇ ನಾನು ಲಕ್ಷ್ಮಣನನ್ನೂ ಮತ್ತು ರಾಮನನ್ನೂ ಅಗಲಿದೆನು.

ರಾಮ! ಸತ್ಯವ್ರತನೇ! ದೀರ್ಘಬಾಹುವೇ! ಪೂರ್ಣಚಂದ್ರಸದೃಶ ವಾದ ಮುಖವುಳ್ಳವನೇ! ಜೀವಲೋಕಕ್ಕೆ ಹಿತವನ್ನುಂಟುಮಾಡುವವನೇ ಮತ್ತು ಪ್ರಿಯನಾದವನೇ! ಎರಡು ತಿಂಗಳ ಅವಧಿಯು ಮುಗಿದೊಡನೆಯೇ ನನ್ನನ್ನು ರಾಕ್ಷಸರು ವಧಿಸುವರೆಂಬುದನ್ನು ನೀನರಿಯೆಯಾ?

**ಅನನ್ಯದೇವತ್ವಮಿಯಂ ಕ್ಷಮಾ ಚ**
**ಭೂಮೌ ಚ ಶಯ್ಯಾ ನಿಯಮಶ್ಚ ಧರ್ಮೇ ।**
**ಪತಿವ್ರತಾತ್ವಂ ವಿಫಲಂ ಮಮೇದಂ**
**ಕೃತಂ ಕೃತಘ್ನೇಷ್ವಿವ ಮಾನುಷಾಣಾಮ್ ॥೧೨॥**

'ಪತಿಯೇ ದೇವರು ; ಬೇರೊಬ್ಬ ದೇವನಿಲ್ಲ'–ಎಂಬ ಭಾವನೆ, ಕಷ್ಟ ಸಹಿಷ್ಣುತೆ, ನೆಲದ ಮೇಲೆ ಮಲಗುವುದು, ನಿಯಮಪೂರ್ವಕವಾಗಿ ಧರ್ಮವನ್ನು ಪರಿಪಾಲಿಸುವುದು–ಇವೆಲ್ಲವೂ ಕೃತಘ್ನರಾದ ಮನುಷ್ಯರಿಗೆ ಮಾಡಿದ ಉಪಕಾರದಂತೆ ನನ್ನ ವಿಷಯದಲ್ಲಿ ವಿಫಲವಾದುವು.

**ಮೋಘೋ ಹಿ ಧರ್ಮಶ್ಚರಿತೋ ಮಮಾಯಂ**
**ತಥೈಕಪತ್ನೀತ್ವಮಿದಂ ನಿರರ್ಥಮ್ ।**
**ಯಾ ತ್ವಾಂ ನ ಪಶ್ಯಾಮಿ ಕೃಶಾ ವಿವರ್ಣಾ**
**ಹೀನಾ ತ್ವಯಾ ಸಂಗಮನೇ ನಿರಾಶಾ ॥೧೩॥**

ನಾನು ಆಚರಿಸಿದ ಧರ್ಮವು ನಿಷ್ಫಲವಾಯಿತು. ಶ್ರೀರಾಮನ ಏಕಮಾತ್ರ ಪತ್ನಿಯಾಗಿದ್ದೇನೆಂಬ ಅಭಿಮಾನವು ನಿರರ್ಥಕವಾಯಿತು. ನಾನು ನಿನ್ನನ್ನು ಕಾಣದವಳಾಗಿದ್ದೇನೆ. ನಿನ್ನಿಂದ ವಿಹೀನಳಾಗಿದ್ದೇನೆ. ಈ ಕಾರಣ

ದಿಂದಲೇ ಕೃಶಳೂ ವಿವರ್ಣಳೂ ಆಗಿದ್ದೇನೆ. ಪುನಃ ನಿನ್ನನ್ನು ಸೇರುವೆನೆಂಬ ಆಸೆಯೂ ನನಗೀಗ ಇಲ್ಲವಾಗಿದೆ.

**ಪಿತುರ್ನಿದೇಶಂ ನಿಯಮೇನ ಕೃತ್ವಾ**
**ವನಾನ್ನಿವೃತ್ತಶ್ಚರಿತವ್ರತಶ್ಚ ।**
**ಸ್ತ್ರೀಭಿಸ್ತು ಮನ್ಯೇ ವಿಪುಲೇಕ್ಷಣಾಭಿ-**
**ಸ್ತ್ವಂ ರಂಸ್ಯಸೇ ವೀತಭಯಃ ಕೃತಾರ್ಥಃ ॥೧೪॥**

ತಂದೆಯ ಆಜ್ಞೆಯನ್ನು ನಿಯಮದಿಂದ ಪರಿಪಾಲಿಸಿ ಕೃತಕೃತ್ಯನಾಗಿ, ಮಾಡಬೇಕಾದ ವ್ರತಗಳೆಲ್ಲವನ್ನೂ ಮುಗಿಸಿ, ವನವಾಸಿಗಳಾದ ಋಷಿಗಳ ಭಯವನ್ನು ಹೋಗಲಾಡಿಸಿ, ಅರಣ್ಯದಿಂದ ಅಯೋಧ್ಯೆಗೆ ಹಿಂದಿರುಗಿ ವಿಶಾಲಾಕ್ಷಿಯರಾದ ಸ್ತ್ರೀಯರೊಡನೆ ನೀನು ರಮಿಸುವೆಯೆಂದು ನಾನು ಭಾವಿಸುತ್ತೇನೆ.*

**ಅಹಂ ತು ರಾಮ ತ್ವಯಿ ಜಾತಕಾಮಾ**
**ಚಿರಂ ವಿನಾಶಾಯ ನಿಬದ್ಧಭಾವಾ ।**
**ಮೋಘಂ ಚರಿತ್ವಾಥ ತಪೋ ವ್ರತಂ ಚ**
**ತ್ಯಕ್ಷ್ಯಾಮಿ ಧಿಗ್ಜೀವಿತಮಲ್ಪಭಾಗ್ಯಾ ॥೧೫॥**

ಪ್ರಿಯನೇ! ಶ್ರೀರಾಮ! ನಾನಾದರೋ ನಿನ್ನಲ್ಲಿಯೇ ಅನುರಾಗವುಳ್ಳವಳಾಗಿರುವೆನು. ವಿನಾಶಹೊಂದುವ ಸಲುವಾಗಿಯೇ ಬಹಳ ಕಾಲದಿಂದ ನಿನ್ನಲ್ಲಿಯೇ ನನ್ನ ಪ್ರೀತಿಯು ನಿಬದ್ಧವಾಗಿದೆ. ವಿನಾಶಹೊಂದಿದರೂ ಚಿಂತೆಯಿಲ್ಲ. ಪ್ರೀತಿಯ ಬಂಧನದಲ್ಲೇ ಇರುತ್ತೇನೆ. ನಿನ್ನನ್ನು ಸೇರಲು ತಪಸ್ಸನ್ನೂ ವ್ರತವನ್ನೂ ಮಾಡಿ ಎಲ್ಲವೂ ನಿರರ್ಥಕವಾದುದರಿಂದ ಅಲ್ಪಭಾಗ್ಯಳಾದ ನಾನು ಧಿಕ್ಕಾರಯೋಗ್ಯವಾದ ಈ ಜೀವಿತವನ್ನು ತ್ಯಾಗಮಾಡುತ್ತೇನೆ.

---

* ಏಕಪತ್ನೀತ್ವಂ ಇದಂ–ಎಂದು ಈ ಹಿಂದೆ ಹೇಳಿರುವುದರಿಂದ ಶ್ರೀರಾಮನು ಅಯೋಧ್ಯೆಗೆ ಹೋದನಂತರ ಪುನಃ ವಿವಾಹವಾಗಿ ನೂತನವಧುಗಳೊಡನೆ ರಮಿಸುವನೆಂದು ಇದರ ಅರ್ಥವೇ ಹೊರತು ಶ್ರೀರಾಮನಿಗೆ ಅನೇಕಪತ್ನಿಯರು ಇದ್ದರೆಂದು ಇದರ ಅರ್ಥವಲ್ಲ. ಆದರೆ ಶ್ರೀರಾಮನಿಗೆ ಅನೇಕಪತ್ನಿಯರಿದ್ದರೆಂದು ಪುರಾಣಾಂತರಗಳಲ್ಲಿ ಹೇಳಿದೆ. ಆದರೆ ವಾಲ್ಮೀಕಿರಾಮಾಯಣದ ಪ್ರಕಾರ ಶ್ರೀರಾಮನು ಏಕಪತ್ನೀವ್ರತಸ್ಥನೇ ಸರಿ. ವಿವರಗಳನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ.

ಸಾ ಜೀವಿತಂ ಕ್ಷಿಪ್ರಮಹಂ ತ್ಯಜೇಯಂ
ವಿಷೇಣ ಶಸ್ತ್ರೇಣ ಶಿತೇನ ವಾಪಿ ।
ವಿಷಸ್ಯ ದಾತಾ ನ ಹಿ ಮೇಽಸ್ತಿ ಕಶ್ಚಿ-
ಚ್ಛಸ್ತ್ರಸ್ಯ ವಾ ವೇಶ್ಮನಿ ರಾಕ್ಷಸಸ್ಯ ॥೧೬॥

ವಿಷಪ್ರಾಶನದಿಂದಾಗಲೀ, ಹರಿತವಾದ ಶಸ್ತ್ರದಿಂದಾಗಲೀ ನಾನು ಬಹಳ ಬೇಗ ನನ್ನ ಜೀವಿತವನ್ನು ಅಂತ್ಯಗೊಳಿಸಿಯೇನು. ಆದರೆ ಈ ರಾಕ್ಷಸನ ಮನೆಯಲ್ಲಿ ನನಗೆ ವಿಷವನ್ನು ಕೊಡುವವನಾಗಲೀ ತೀಕ್ಷ್ಣವಾದ ಶಸ್ತ್ರವನ್ನು ಕೊಡುವವನಾಗಲೀ ಯಾರೂ ಇಲ್ಲವಲ್ಲಾ?"

ಸೀತಾದೇವಿಯು ಹೀಗೆ ಬಹಳವಾಗಿ ವಿಲಪಿಸುತ್ತಿದ್ದಳು. ಸರ್ವಪ್ರಕಾರ ದಿಂದಲೂ ಶ್ರೀರಾಮನನ್ನೇ ಸ್ಮರಿಸುತ್ತಿದ್ದಳು. ರಾವಣನ ಮಾತನ್ನು ನೆನೆದು ಆಗಾಗ ನಡುಗುತ್ತಿದ್ದಳು. ಅವಳ ಮುಖವೂ ಬಾಡಿಹೋಗಿದ್ದಿತು. ಅನಂತರ ಅವಳು ಸುಪುಷ್ಪಿತವಾಗಿದ್ದ ಶಿಂಶುಪಾವೃಕ್ಷದ ಬುಡದಲ್ಲಿ ಕುಳಿತುಕೊಂಡಳು. ದುಃಖದಿಂದ ಬಹಳವಾಗಿ ಪರಿತಪಿಸುತ್ತಿದ್ದ ಸೀತಾದೇವಿಯು ದೀರ್ಘವಾಗಿ ಸಮಾಲೋಚಿಸಿ ಕಡೆಗೊಂದು ನಿರ್ಧಾರಕ್ಕೆ ಬಂದು ತಲೆಗೂದಲನ್ನು ಹಿಡಿದು ಕೊಂಡು–'ಈ ಕೇಶಪಾಶದಿಂದಲೇ ಉರುಲುಹಾಕಿಕೊಂಡು ಅತಿಶೀಘ್ರವಾಗಿ ಯಮನ ಸಮೀಪಕ್ಕೆ ಹೋಗುವೆನು'–ಎಂದು ನಿರ್ಧರಿಸಿದಳು. ಶಿಂಶುಪಾವೃಕ್ಷದ ರೆಂಬೆಯನ್ನು ಹಿಡಿದುಕೊಂಡು ನಿಂತಿದ್ದ–ಶ್ರೀರಾಮನನ್ನೂ, ಲಕ್ಷ್ಮಣನನ್ನೂ, ತನ್ನ ಕುಲವನ್ನೂ ಕುರಿತು ಯೋಚಿಸುತ್ತಿದ್ದ– ಮೃದುವಾದ ಅವಯವಗಳಿಂದ ಕೂಡಿದ್ದ ಸೀತಾದೇವಿಗೆ ಆ ಸಮಯದಲ್ಲಿ ಶೋಕವನ್ನು ದೂರಗೊಳಿಸುವ, ಧೈರ್ಯವನ್ನು ತುಂಬಿ ಕೊಡುವ, ಈ ಹಿಂದೆಯೂ ಕಾಣಿಸಿಕೊಂಡಿದ್ದ ಶ್ರೀರಾಮನ ಆಗಮನಸೂಚಕವಾದ ಶುಭಶಕುನಗಳು ಪುನಃ ಕಾಣಿಸಿಕೊಂಡುವು.

೨೮ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೨೯ನೆಯ ಸರ್ಗ

## ಸೀತಾದೇವಿಗಾದ ಶುಭಶಕುನಗಳು

**ತಥಾಗತಾಂ ತಾಂ ವ್ಯಥಿತಾಮನಿನ್ದಿತಾಂ**
**ವ್ಯತೀತಹರ್ಷಾಂ ಪರಿದೀನಮಾನಸಾಮ್ ।**
**ಶುಭಾಂ ನಿಮಿತ್ತಾನಿ ಶುಭಾನಿ ಭೇಜಿರೇ**
**ನರಂ ಶ್ರಿಯಾ ಜುಷ್ಟಮಿವೋಪಜೀವಿನಃ ॥೧॥**

ಹಾಗೆ ಶಿಂಶುಪಾವೃಕ್ಷದ ರೆಂಬೆಯನ್ನು ಹಿಡಿದು ನಿಂತಿದ್ದ, ವ್ಯಥೆ ಪಡುತ್ತಾ ಆನಂದರಹಿತಳಾಗಿದ್ದ, ದೀನಮನಸ್ಕಳಾಗಿದ್ದ, ನಿಷ್ಕಳಂಕಿನಿಯಾದ, ಶುಭಾಂಗಿಯಾದ ಸೀತಾದೇವಿಯನ್ನು–ಐಶ್ವರ್ಯದಿಂದ ಯುಕ್ತನಾದ ಮನುಷ್ಯನನ್ನು ಸೇವಕರು ಆಶ್ರಯಿಸುವಂತೆ–ಶುಭಶಕುನಗಳು ಸೇವಿಸ ತೊಡಗಿದುವು.

ಸುಂದರವಾದ ಕೇಶರಾಶಿಯನ್ನು ಹೊಂದಿದ್ದ ಸೀತಾದೇವಿಯ ಎಡ ಗಣ್ಣು–ಮೀನುಗಳಿಂದ ಅಳ್ಳಾಡಿಸಲ್ಪಟ್ಟ ಸುತ್ತಲೂ ಕೆಂಪಾಗಿರುವ ಕಮಲ ಪುಷ್ಪದಂತೆ–ಅದುರುತ್ತಿದ್ದಿತು. ಸೀತೆಯ ಆ ಎಡಗಣ್ಣು ಡೊಂಕಾದ ಮತ್ತು ಸುಂದರವಾದ ರೆಪ್ಪೆಯ ಕೂದಲಿನ ಸಾಲಿನಿಂದ ಆವೃತವಾಗಿದ್ದಿತು. ಮಧ್ಯದಲ್ಲಿ ಕಪ್ಪಾಗಿಯೂ ಸುತ್ತಲೂ ಬೆಳ್ಳಗೂ ಮತ್ತು ವಿಶಾಲವಾಗಿಯೂ ಇದ್ದಿತು. ಹಾಗೆಯೇ ಉತ್ತಮೋತ್ತಮನಾದ ಮತ್ತು ಪರಮಪ್ರಿಯನಾದ ಶ್ರೀರಾಮ ಚಂದ್ರನ ಸಂಪರ್ಕವನ್ನು ಬಹಳ ಕಾಲದಿಂದ ಹೊಂದಿದ್ದ ಸೀತಾದೇವಿಯ ಎಡಭುಜವೂ ಬಹಳ ಬೇಗ ಅದುರತೊಡಗಿತು. ಅವಳ ಆ ಎಡಭುಜವು ಸುಂದರವಾಗಿಯೂ, ಮನೋಹರವಾಗಿಯೂ ಇದ್ದಿತು. ದುಂಡಾಗಿಯೂ, ದಪ್ಪವಾಗಿಯೂ ಇದ್ದಿತು. ಬಹುಮೂಲ್ಯವಾದ ಕಾಲಾಗುರು-ಚಂದನಾದಿ ಸುಗಂಧದ್ರವ್ಯಗಳ ಅನುಲೇಪನಕ್ಕೆ ಅರ್ಹವಾಗಿದ್ದಿತು. ಹಾಗೆಯೇ ಸೀತಾ ದೇವಿಯ ಎಡತೊಡೆಯೂ ಅದುರುತ್ತಿದ್ದು ಶ್ರೀರಾಮನು ತನ್ನ ಎದುರಿನಲ್ಲೇ ನಿಲ್ಲುವನೆಂಬುದನ್ನು ಹೇಳುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಅವಳ ಆ ಎಡತೊಡೆಯು ಮದಿಸಿದ ಆನೆಯ ಸೊಂಡಿಲಿನಂತಿದ್ದು ದಪ್ಪವಾಗಿದ್ದಿತು. ಎರಡು ತೊಡೆಗಳೂ ಪರಸ್ಪರವಾಗಿ ಸಂಘರ್ಷಿಸುತ್ತಿದ್ದುವು. ಶಿಂಶುಪಾ

ವೃಕ್ಷದ ರೆಂಬೆಯನ್ನು ಹಿಡಿದು ನಿಂತಿದ್ದ ಸೀತಾದೇವಿಯು ಶಿಖರಾಗ್ರದಂತೆ* ದುಂಡಾದ ಹಲ್ಲುಗಳ ಸಾಲುಗಳಿಂದ ಸುಶೋಭಿತಳಾಗಿದ್ದಳು. ಸುಂದರವಾದ ಅಂಗಾಂಗಗಳಿಂದ ಕೂಡಿದ್ದಳು. ಶುಭ್ರವಾದ ಕಣ್ಣುಗಳಿಂದ ರಾರಾಜಿಸುತ್ತಿದ್ದಳು. ಎಡತೊಡೆಯ ಅದುರುವಿಕೆಯಿಂದಾಗಿ ಸೀತಾದೇವಿಯುಟ್ಟಿದ್ದ ಚಿನ್ನದ ಬಣ್ಣಕ್ಕೆ ಸಮಾನವಾದ ಬಣ್ಣದಿಂದ ಕೂಡಿದ್ದ ಮತ್ತು ಸ್ವಲ್ಪಮಟ್ಟಿಗೆ ಧೂಳಿನಿಂದ ಆವೃತವಾಗಿದ್ದ ವಸ್ತ್ರವು ಸ್ವಲ್ಪ ಕೆಳಕ್ಕೆ ಜಾರಿತು.

ಸುಂದರವಾದ ಹುಬ್ಬುಗಳಿಂದ ಕೂಡಿದ್ದ ಸೀತಾದೇವಿಯು ಇವೇ ಮುಂತಾದ ಮತ್ತು ಇನ್ನೂ ಅನೇಕವಿಧವಾದ ಶುಭಸೂಚಕವಾದ ಶಕುನಗಳಿಂದಲೂ, ಹಿಂದೆ ಸಾಧು-ಸತ್ಪುರುಷರು ಹೇಳಿದ್ದ ಮಾತುಗಳಿಂದಲೂ ಪ್ರೋತ್ಸಾಹಿತಳಾಗಿ–ಗಾಳಿಯಿಂದಲೂ, ಬಿಸಿಲಿನಿಂದಲೂ ಸೊರಗಿಹೋಗಿದ್ದ ಬೀಜವು ಮಳೆಗವೆಯುವಿಕೆಯಿಂದ ಮೊಳಕೆಯೊಡೆದು ಮೇಲಕ್ಕೆ ಬರುವಂತೆ ಬಹಳವಾಗಿ ಸಂತೋಷಗೊಂಡಳು.

ರಾಹುವಿನಿಂದ ಬಿಡಲ್ಪಟ್ಟ ಚಂದ್ರಬಿಂಬದಂತೆಯೇ ಕಾಣುತ್ತಿದ್ದ ಸೀತಾದೇವಿಯ ಮುಖವು ಆ ಸಮಯದಲ್ಲಿ ತೊಂಡೇಹಣ್ಣಿನಂತೆ ಕೆಂಪಾದ ತುಟಿಗಳಿಂದ ಪರಿಶೋಭಿಸುತ್ತಿದ್ದತು. ಸುಂದರವಾದ ಕಣ್ಣುಗಳಿಂದಲೂ, ಹುಬ್ಬುಗಳಿಂದಲೂ, ರೆಪ್ಪೆಗಳಿಂದಲೂ, ಮುಂಗುರುಳುಗಳಿಂದಲೂ ರಾರಾಜಿಸುತ್ತಿದ್ದಿತು. ಶುಭ್ರವಾಗಿಯೂ, ಬಿಳುಪಾಗಿಯೂ, ದಾಡಿಮೀಬೀಜದಂತೆಯೂ ಇದ್ದ ಹಲ್ಲುಗಳ ಸಾಲುಗಳಿಂದ ಸಮಲಂಕೃತವಾಗಿದ್ದಿತು. ಸೀತಾದೇವಿಯು ನಾನಾವಿಧವಾದ ಶುಭಶಕುನಗಳನ್ನು ಕಂಡು ಶ್ರೀರಾಮನು ಬಂದೇಬರುವನೆಂಬ ಭರವಸೆಯಿಂದ ಶೋಕರಹಿತಳಾದಳು. ಆಲಸ್ಯವನ್ನು ತೊರೆದು ಮನಸ್ಸಿನ ಸಂತಾಪವನ್ನು ದೂರಗೊಳಿಸಿ ಶಾಂತಳಾದಳು. ಆಕೆಯ ಚಿತ್ತವೃತ್ತಿಯು ಹರ್ಷದಿಂದ ವಿಕಾಸಗೊಂಡಿತು. ಶುಕ್ಲಪಕ್ಷದ ರಾತ್ರಿಯಲ್ಲಿ ಉದಯಿಸಿದ

---

* ಶಿಖರಾಗ್ರದನ್ತ್ಯಾಃ –ವೃತ್ತಾಗ್ರವಾದ ಹಲ್ಲುಗಳುಳ್ಳವಳು. ಶಿಖರಶಬ್ದಕ್ಕೆ ವೃತ್ತ ಅಥವಾ ದುಂಡು ಎಂಬ ಅರ್ಥವೂ ಇದೆ. ಶಿಖರಂ ನಿಸ್ತುಲಂ ವೃತ್ತಂ (ಉತ್ಪಲಮಾಲಾ) ಶಿಖರಶಬ್ದಕ್ಕೆ ದಾಡಿಮೀಬೀಜ ಎಂಬ ಅರ್ಥವೂ ಇದೆ. ಶಿಖರಂ ಶೈಲ ವೃಕ್ಷಾಗ್ರೇ ಕಕ್ಷಾಗ್ರಗೃಹಕೋಟಿಷು । ಪಕ್ವೇ ದಾಡಿಮಬೀಜೇ ಚ( ವಿಶ್ವಃ )

ಚಂದ್ರನಿಂದ ರಾತ್ರಿಯು ಶೋಭಾಯಮಾನವಾಗಿ ಕಾಣುವಂತೆ ಹರ್ಷಗೊಂಡ ಮುಖದಿಂದ ವೈದೇಹಿಯು ಕಂಗೊಳಿಸಿದಳು.

೨೯ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೩೦ನೆಯ ಸರ್ಗ

## ಸೀತೆಯೊಡನೆ ಹೇಗೆ ಮಾತನಾಡಬೇಕೆಂಬುದರ ಬಗೆಗೆ ಹನುಮಂತನ ವಿವೇಚನೆ

**ಹನುಮಾನಪಿ ವಿಕ್ರಾನ್ತಃ ಸರ್ವಂ ಶುಶ್ರಾವ ತತ್ತ್ವತಃ ।**
**ಸೀತಾಯಾಸ್ತ್ರಿಜಟಾಯಾಶ್ಚ ರಾಕ್ಷಸೀನಾಂ ಚ ತರ್ಜನಮ್ ॥೧॥**

ಮಹಾಪರಾಕ್ರಮಿಯಾದ ಹನುಮಂತನು ಸೀತಾದೇವಿಯ ವಿಲಾಪ ವನ್ನೂ, ತ್ರಿಜಟೆಯು ಹೇಳಿದ ಕನಸಿನ ವೃತ್ತಾಂತವನ್ನೂ ಮತ್ತು ರಾಕ್ಷಸಿಯರು ಸೀತಾದೇವಿಯನ್ನು ಭಯಪಡಿಸುತ್ತಾ ಘೋರವಾಗಿ ಗರ್ಜನೆಮಾಡು ತ್ತಿರುವುದನ್ನೂ ಯಥಾವತ್ತಾಗಿ ಕೇಳಿದನು.

ನಂದನವನದಲ್ಲಿ ದೇವತೆಯೊಬ್ಬಳು ಕುಳಿತಿರುವಂತೆಯೇ ಅಶೋಕ ವನದಲ್ಲಿ ಕುಳಿತಿದ್ದ ಸೀತಾದೇವಿಯನ್ನು ನೋಡುತ್ತಾ ವಾನರಶ್ರೇಷ್ಠನಾದ ಹನುಮಂತನು ಅನೇಕ ವಿಧವಾಗಿ ಚಿಂತಿಸತೊಡಗಿದನು :

"ಪ್ರಭುವಾದ ಸುಗ್ರೀವನಿಂದ ಚಾರನಾಗಿ ನಿಯೋಜಿಸಲ್ಪಟ್ಟಿರುವ ನಾನು ರೂಪವನ್ನು ಬದಲಾಯಿಸಿಕೊಂಡು ನಿಗೂಢವಾಗಿ ಸಂಚರಿಸುತ್ತಾ ಶತ್ರುವಿನ ಬಲವು ಎಷ್ಟಿರುವುದೆಂಬುದನ್ನು ಪರಿಶೀಲಿಸುತ್ತಾ ಕಡೆಗೆ ಈ ದೃಶ್ಯವನ್ನು ನೋಡಿದೆನು.

ರಾಕ್ಷಸರ ವೈಶಿಷ್ಟ್ಯ , ರಾಕ್ಷಸಾಧಿಪತಿಯಾದ ರಾವಣನ ಪ್ರಭಾವ ಮತ್ತು ಸುಂದರವಾದ ಈ ಲಂಕಾಪಟ್ಟಣ–ಇವೆಲ್ಲವನ್ನೂ ನಾನು ನೋಡಿದೆನು. ಅಪ್ರಮೇಯನಾದ, ಸರ್ವಪ್ರಾಣಿಗಳ ವಿಷಯದಲ್ಲಿಯೂ ದಯಾಪರನಾಗಿರುವ ಪತಿಯಾದ ಶ್ರೀರಾಮಚಂದ್ರನನ್ನು ನೋಡಬೇಕೆಂಬ ಆಕಾಂಕ್ಷೆಯಿಂದಿರುವ ಇವಳನ್ನು ನಾನೀಗ ಸಂತೈಸುವುದು ಯುಕ್ತವಾಗಿದೆ. ಪೂರ್ಣಚಂದ್ರಸದೃಶ ವಾದ ಮುಖದಿಂದ ಕೂಡಿರುವ, ಹಿಂದೆ ದುಃಖವೆಂಬುದನ್ನೇ ಕಾಣದಿದ್ದು

ಈಗ ದುಃಖದ ಕೊನೆಯನ್ನೇ ಕಾಣದಿರುವ ಇವಳನ್ನು ನಾನೀಗ ಸಂತೈಸಬೇಕಾಗಿದೆ. ಒಂದು ವೇಳೆ ನಾನೇನಾದರೂ ಶೋಕಾಭಿಭೂತಳಾಗಿರುವ ಈ ಪತಿವ್ರತಾಶಿರೋಮಣಿಯನ್ನು ಸಮಾಧಾನಗೊಳಿಸದೆಯೇ ಹೋಗಿಬಿಟ್ಟರೆ ಆಗ ಲಂಕಾಪಟ್ಟಣಕ್ಕೆ ನಾನು ಬಂದ ಪ್ರಯಾಣವೇ ದೋಷಯುಕ್ತವಾಗುತ್ತದೆ. ಯಶಸ್ವಿನಿಯಾದ ರಾಜಪುತ್ರಿಯಾದ ಸೀತೆಯನ್ನು ಸಮಾಧಾನಗೊಳಿಸದೇ ನಾನು ಸುಗ್ರೀವನಲ್ಲಿಗೆ ಹೊರಟುಹೋದನಾದರೆ–ಇವಳು ರಕ್ಷಕರನ್ನೇ ಕಾಣದೇ ಪ್ರಾಣಗಳನ್ನು ತೊರೆಯಲೂಬಹುದು. ಇವಳನ್ನು ನೋಡಲು ಉತ್ಸುಕನಾಗಿರುವ ಮಹಾಬಾಹುವಾದ ಪೂರ್ಣಚಂದ್ರಸದೃಶವಾದ ಮುಖವಿರುವ ಶ್ರೀರಾಮನನ್ನು ಸೀತಾದೇವಿಯ ಸಂದೇಶವನ್ನು ತಿಳಿಸುವುದರ ಮೂಲಕ ಸಮಾಧಾನಪಡಿಸುವುದು ನ್ಯಾಯವೂ ಸಮಯೋಚಿತವೂ ಆಗಿದೆ ಆದರೆ ರಾಕ್ಷಸಿಯರ ಎದುರಿನಲ್ಲಿ ಇವಳೊಡನೆ ಮಾತನಾಡುವುದು ಉಚಿತವಲ್ಲ. ಈಗ ನಾನು ನನ್ನ ಕರ್ತವ್ಯವನ್ನು ಹೇಗೆ ಪೂರೈಸಲಿ? ಕಷ್ಟದಲ್ಲಿ ನಾನೀಗ ಸಿಕ್ಕಿಬಿದ್ದಿದ್ದೇನೆ. ಈ ರಾತ್ರಿಯಲ್ಲಿ ಈಗ ಉಳಿದಿರುವ ಸಮಯದಲ್ಲಿಯೇ ನಾನೇನಾದರೂ ಇವಳನ್ನು ಸಮಾಧಾನಗೊಳಿಸದಿದ್ದರೆ ಸರ್ವಥಾ ಇವಳು ಪ್ರಾಣತ್ಯಾಗಮಾಡುತ್ತಾಳೆ. ಇದರಲ್ಲಿ ಸಂದೇಹವೇ ಇಲ್ಲ. ಸುಂದರವಾದ ನಡುವನ್ನು ಹೊಂದಿರುವ ಇವಳೊಡನೆ ನಾನು ಮಾತನಾಡದೆಯೇ ಶ್ರೀರಾಮನ ಬಳಿಗೆ ಹೋಗಿ ಸೀತಾದೇವಿಯು ಲಂಕಾಪಟ್ಟಣದಲ್ಲಿರುವಳೆಂಬ ವಾರ್ತೆಯನ್ನು ನಿವೇದಿಸಿದಾಗ ಅವನೇನಾದರೂ–'ಸೀತೆಯು ಏನು ಹೇಳಿದಳು?'–ಎಂದು ಪ್ರಶ್ನಿಸಿದರೆ ಏನೆಂದು ಉತ್ತರಿಸಲಿ? ಸೀತೆಯ ಸಂದೇಶವಿಲ್ಲದೇ ಅವಸರದಿಂದ ಅಲ್ಲಿಗೆ ಹೊರಟುಹೋದ ನನ್ನನ್ನು ನೋಡಿದೊಡನೆಯೇ ಕ್ರುದ್ಧನಾಗುವ ಕಾಕುತ್ಸ್ಥನು ತೀಕ್ಷ್ಣವಾದ ಕಣ್ಣುಗಳಿಂದ ನನ್ನನ್ನು ಸುಡಲೂಬಹುದು. ಒಂದು ವೇಳೆ ನಾನು ಶ್ರೀರಾಮನ ಸಲುವಾಗಿ ಸೀತೆಯನ್ನು ಬಿಡಿಸಿಕೊಂಡು ಬರಲು ರಾವಣನೊಡನೆ ಯುದ್ಧದಲ್ಲಿ ತೊಡಗುವಂತೆ ಸುಗ್ರೀವನನ್ನು ಪ್ರಚೋದಿಸಿ ಅವನೇನಾದರೂ ಸೈನ್ಯದೊಡನೆ ಇಲ್ಲಿಗೆ ಬಂದಲ್ಲಿ ಅವನ ಆಗಮನವೂ ವ್ಯರ್ಥವೇ ಆಗುತ್ತದೆ. ಏಕೆಂದರೆ : ಆ ವೇಳೆಗೆ ಸೀತೆಯು ಪ್ರಾಣಗಳನ್ನೇ ತೊರೆದಿರುತ್ತಾಳೆ. ಆದುದರಿಂದ ನಾನು ಇಲ್ಲಿಯೇ ಕುಳಿತಿದ್ದು ರಾಕ್ಷಸಿಯರು ಇಲ್ಲದೇ ಇರುವ ಸಮಯವನ್ನು ಕಾದಿದ್ದು ಬಹಳವಾಗಿ ಸಂತಾಪಪಡುತ್ತಿರುವ ಇವಳನ್ನು

ಮೆಲ್ಲ-ಮೆಲ್ಲಗೆ ಸಮಾಧಾನಗೊಳಿಸುತ್ತೇನೆ. ಅತಿಸೂಕ್ಷ್ಮವಾದ ಶರೀರವನ್ನು ಧರಿಸಿರುವ ಅದರಲ್ಲಿಯೂ ವಿಶೇಷವಾಗಿ ವಾನರನೂ ಆಗಿರುವ ನಾನು ಸಾಮಾನ್ಯಮನುಷ್ಯರಾಡುವ ಸಂಸ್ಕೃತದಲ್ಲೇ ಮಾತುಗಳನ್ನಾಡುತ್ತೇನೆ. ವಿದ್ವಾಂಸರಾದ ಬ್ರಾಹ್ಮಣರಾಡುವ ಸಂಸ್ಕೃತದಲ್ಲಿ ಸಂಭಾಷಿಸಿದರೆ ನನ್ನನ್ನು ರಾವಣನೆಂದೇ ಭಾವಿಸಿ ಇವಳು ಭಯಪಡಬಹುದು. ಆದರೂ ನಾನು ಇವಳೊಡನೆ ಅರ್ಥವತ್ತಾಗಿ ಸಾಮಾನ್ಯಮನುಷ್ಯರಾಡುವ ಮಾತುಗಳನ್ನೇ ಆಡಬೇಕು. ಹಾಗೆ ಮಾನವಸಹಜವಾದ ಮಾತುಗಳನ್ನು ಆಡುವುದರಿಂದಲೇ ನಾನಿವಳನ್ನು ಸಮಾಧಾನಗೊಳಿಸಬಹುದು. ನಿಷ್ಕಳಂಕಿನಿಯಾದ ಇವಳನ್ನು ಬೇರೆ ಯಾವ ರೀತಿಯಿಂದಲೂ ಸಮಾಧಾನಗೊಳಿಸಲು ಸಾಧ್ಯವಿಲ್ಲ. ರಾಕ್ಷಸಿಯರಿಂದ ಈ ಹಿಂದೆಯೇ ಭಯಗೊಳಿಸಲ್ಪಟ್ಟಿರುವ ಇವಳು ನನ್ನ ರೂಪ ವನ್ನು ನೋಡಿ ಮತ್ತು ಮಾತನ್ನು ಕೇಳಿ ಪುನಃ ಭಯಗೊಳ್ಳುತ್ತಾಳೆ. ನನ್ನನ್ನು ಕಾಮರೂಪಿಯಾದ ರಾವಣನೆಂದೇ ಭಾವಿಸಿ ಭಯಗೊಂಡು ಆರ್ತನಾದ ವನ್ನೂ ಮಾಡಬಹುದು. ಒಡನೆಯೇ ಯಮನಿಗೆ ಸಮಾನವಾದ, ಭಯಂಕರ ವಾದ ರಾಕ್ಷಸಿಯರ ಗುಂಪು ನಾನಾವಿಧವಾದ ಆಯುಧಗಳನ್ನು ಹಿಡಿದು ನನ್ನನ್ನು ಎದುರಿಸಲೂಬಹುದು. ವಿಕಾರವಾದ ಮುಖಗಳನ್ನು ಹೊಂದಿರುವ ಮಹಾಬಲಶಾಲಿನಿಯರಾದ ಅವರೆಲ್ಲರೂ ಎಲ್ಲ ಕಡೆಗಳಿಂದಲೂ ನನ್ನನ್ನು ಸುತ್ತುವರಿದು ವಧೆಮಾಡಲು ಅಥವಾ ಬಂಧಿಸಲೂ ಪ್ರಯತ್ನಿಸಬಹುದು. ರೆಂಬೆಗಳನ್ನೂ, ಚಿಕ್ಕಕೊಂಬೆಗಳನ್ನೂ, ದಪ್ಪವಾದ ಕೊಂಬೆಗಳಿರುವ ವೃಕ್ಷ ಗಳನ್ನೂ ಹಿಡಿದುಕೊಂಡು ಓಡುತ್ತಿರುವ ನನ್ನನ್ನು ನೋಡಿ ಸಂದೇಹಿಸಲೂ ಬಹುದು. ಅರಣ್ಯದಲ್ಲಿ ಸಂಚರಿಸುವಾಗ ನನ್ನ ಬೃಹದ್ರೂಪವನ್ನು ಕಂಡು ಭಯಭೀತರಾಗುವ ಅವರು ವಿಕಾರವಾದ ಧ್ವನಿಗಳಿಂದ ಕಿರುಚಿಕೊಳ್ಳ ಬಹುದು. ಬಳಿಕ ಅವರು, ರಾಕ್ಷಸೇಂದ್ರನಾದ ರಾವಣನ ಅರಮನೆಯಲ್ಲಿ ರಾವಣನಿಂದಲೇ ರಕ್ಷಣೆಯ ಸಲುವಾಗಿ ನಿಯುಕ್ತರಾಗಿರುವ ರಾಕ್ಷಸರನ್ನು ಆಹ್ವಾನಿಸಬಹುದು. ಆ ರಾಕ್ಷಸರು ರಾಕ್ಷಸಿಯರ ಘೋರನಿನಾದವನ್ನು ಕೇಳಿ ಉದ್ವಿಗ್ನರಾಗಿ ಶೂಲ-ಶಕ್ತಿ-ಕತ್ತಿಗಳೇ ಮೊದಲಾದ ಆಯುಧಗಳನ್ನೆತ್ತಿ ಕೊಂಡು ಕಾದಾಟದಲ್ಲಿ ಪಾಲ್ಗೊಳ್ಳಲು ವೇಗವಾಗಿ ಧುಮ್ಮಿಕ್ಕಬಹುದು. ಅವರೆಲ್ಲರೂ ಒಟ್ಟಾಗಿ ಬಂದು ನನ್ನನ್ನು ಸುತ್ತುಗಟ್ಟಿ ಯುದ್ಧಕ್ಕೆ ನಿಂತರೂ

ನಾನು ಆ ರಾಕ್ಷಸಸೈನ್ಯವನ್ನು ಧ್ವಂಸಮಾಡಬಲ್ಲೆನು. ಆದರೆ ಆ ಕಾದಾಟದಲ್ಲಿ ಸಿಕ್ಕಿಹಾಕಿಕೊಂಡರೆ ಮಹೋದಧಿಯ ಆಚೆಯ ದಡಕ್ಕೆ ಹೋಗಲು ನನಗೆ ಸಾಧ್ಯವಾಗದೇ ಇರಬಹುದು. ಕಾರ್ಯವನ್ನು ಅತಿಶೀಘ್ರವಾಗಿ ಮಾಡುವ ಸ್ವಭಾವವುಳ್ಳ ರಾಕ್ಷಸರು ನನ್ನನ್ನು ಸುತ್ತುವರಿದು ಬಂಧಿಸಲೂಬಹುದು. ಹಾಗೇನಾದರೂ ನನ್ನ ಬಂಧನವಾಗಿಬಿಟ್ಟರೆ ನಾನು ಬಂದಿರುವ ವಿಷಯವೇ ಇವಳಿಗೆ ತಿಳಿಯದಾಗುತ್ತದೆ. ಹಿಂಸೆಯಲ್ಲೇ ಅಭಿರುಚಿಯುಳ್ಳ ರಾಕ್ಷಸರು ಜನಕನ ಮಗಳಾದ ಇವಳನ್ನು ಇನ್ನೂ ಹೆಚ್ಚಾಗಿ ಹಿಂಸಿಸಬಹುದು. ಆಗ ರಾಮ-ಸುಗ್ರೀವರ ಸೀತಾನ್ವೇಷಣೆಯ ಕಾರ್ಯವೇ ಸಂಪೂರ್ಣವಾಗಿ ಹಾಳಾಗುತ್ತದೆ. ಇವಳಿರುವ ಈ ಸ್ಥಳಕ್ಕೆ ಬರಲು ಯಾವ ಮಾರ್ಗವೂ ಇಲ್ಲವಾಗಿದೆ. ಮೇಲಾಗಿ ರಾಕ್ಷಸರಿಂದ ಈ ಸ್ಥಳವು ಸುತ್ತುವರಿಯಲ್ಪಟ್ಟಿದೆ. ಸುತ್ತಲೂ ಸಮುದ್ರವಿದೆ. ಇಂತಹ ಗುಪ್ತವಾದ ಸ್ಥಳದಲ್ಲಿ ಈಗ ಜಾನಕಿಯಿದ್ದಾಳೆ. ನಾನು ರಾಕ್ಷಸರಿಂದ ಬಂಧಿಸಲ್ಪಟ್ಟರೆ ಇವಳ ಸುಳುವು ಯಾರಿಗೂ ಸಿಕ್ಕದಂತಾಗಿ ರಾಮ-ಸುಗ್ರೀವರ ಪ್ರಯತ್ನವೆಲ್ಲವೂ ನಿಷ್ಫಲವಾಗುತ್ತದೆ. ರಾಕ್ಷಸರೊಡನೆ ಯುದ್ಧಮಾಡುವಾಗ ನಾನೇನಾದರೂ ಹತನಾದರೆ ಅಥವಾ ಬಂಧಿತನಾದರೆ–ಶ್ರೀರಾಮನ ಕಾರ್ಯಸಿದ್ಧಿಗಾಗಿ ಸಹಾಯಮಾಡುವ ಬೇರೆ ಯಾರನ್ನೂ ನಾನು ಕಾಣುತ್ತಿಲ್ಲ. ನಾನೇನಾದರೂ ಹತನಾದರೆ ನೂರು ಯೋಜನ ವಿಸ್ತೀರ್ಣವಿರುವ ಈ ಮಹೋದಧಿಯನ್ನು ದಾಟಿಕೊಂಡು ಬರಲು ಸಮರ್ಥನಾದ ಬೇರೊಬ್ಬ ವಾನರನು ಎಷ್ಟೇ ವಿಮರ್ಶೆಮಾಡಿದರೂ ನನಗೆ ಕಾಣುತ್ತಿಲ್ಲ. ಸಾವಿರಾರು ರಾಕ್ಷಸರನ್ನು ಸಂಹರಿಸಲು ನಾನೇನೋ ಸಮರ್ಥನಾಗಿರುವೆನು. ಆದರೆ ಈ ರಾಕ್ಷಸರೊಡನೆ ಯುದ್ಧಮಾಡಿ ಬಹಳವಾಗಿ ಆಯಾಸಗೊಳ್ಳುವ ನನಗೆ ಪುನಃ ಮಹೋದಧಿಯ ಆಚೇ ದಡಕ್ಕೆ ಹೋಗಲು ಸಾಧ್ಯವಾಗುವುದಿಲ್ಲ.

**ಅಸತ್ಯಾನಿ ಚ ಯುದ್ಧಾನಿ ಸಂಶಯೋ ಮೇ ನ ರೋಚತೇ ।**
**ಕಶ್ಚ ನಿಃಸಂಶಯಂ ಕಾರ್ಯಂ ಕುರ್ಯಾತ್ಪ್ರಾಜ್ಞಃ ಸಸಂಶಯಮ್ ॥೩೫॥**

ಯುದ್ಧದಲ್ಲಿ ಜಯಾಪಜಯಗಳು ಅನಿಶ್ಚಯ. ಜಯವು ಯಾರಿಗೆ ಲಭಿಸುತ್ತದೆ ; ಯಾರು ಸೋಲುತ್ತಾರೆ–ಎಂಬುದನ್ನು ನಿರ್ಧರಿಸಲು ಸಾಧ್ಯ ವಾಗುವುದಿಲ್ಲ. ಸಂಶಯವಿರುವ ಕಾರ್ಯವನ್ನು ಮಾಡುವುದು ನನಗೆ ರುಚಿ

ಸುವುದಿಲ್ಲ. ಯುಕ್ತಾಯುಕ್ತವಿವೇಚನಾಶೀಲನಾದ ಯಾವನು ತಾನೇ ಸಂಶಯಾಸ್ಪದವಾದ ಕಾರ್ಯವನ್ನು ವಿಚಾರವಿಲ್ಲದೇ ನಿಸ್ಸಂಶಯವಾಗಿ ಮಾಡುವನು? ಸೀತೆಯೊಡನೆ ಮಾತನಾಡುವುದರಿಂದ ಈ ಒಂದು ಮಹತ್ತರವಾದ ದೋಷವೇ ಇದೆ. ಆದರೆ ಈ ಸಮಯದಲ್ಲಿ ನಾನಿವಳೊಡನೆ ಮಾತನಾಡದಿದ್ದರೆ ವೈದೇಹಿಯ ಪ್ರಾಣತ್ಯಾಗವೇ ಆಗಿಬಿಡುತ್ತದೆ.

**ಭೂತಾಶ್ಚಾರ್ಥಾ ವಿನಶ್ಯನ್ತಿ ದೇಶಕಾಲವಿರೋಧಿತಾಃ ।**
**ವಿಕ್ಲವಂ ದೂತಮಾಸಾದ್ಯ ತಮಃ ಸೂರ್ಯೋದಯೇ ಯಥಾ ॥**

ಸಿದ್ಧಿಹೊಂದಲಿರುವ ಕಾರ್ಯಗಳು ಕೂಡ ಅವಿವೇಕಿಯಾದ ದೂತನು ದೇಶ-ಕಾಲಗಳಿಗೆ ವಿರುದ್ಧವಾಗಿ ಕೈಗೊಂಡರೆ–ಸೂರ್ಯೋದಯವಾದೊಡನೆಯೇ ಕತ್ತಲೆಯು ವಿನಾಶಗೊಳ್ಳುವಂತೆ ನಿಷ್ಫಲವಾಗುತ್ತವೆ.

**ಅರ್ಥಾನರ್ಥಾನ್ತರೇ ಬುದ್ಧಿರ್ನಿಶ್ಚಿತಾಪಿ ನ ಶೋಭತೇ ।**
**ಘಾತಯನ್ತಿ ಹಿ ಕರ್ಮಾಣಿ ದೂತಾಃ ಪಣ್ಡಿತಮಾನಿನಃ ॥೩೮॥**

ಕಾರ್ಯಾಕಾರ್ಯಗಳ ವಿಷಯದಲ್ಲಿ ರಾಜನು ಮಂತ್ರಿಗಳೊಡನೆ ಸಮಾಲೋಚಿಸಿ ನಿಶ್ಚಯಿಸಿದ ಬುದ್ಧಿಯೂ (ನಿಶ್ಚಯಿಸಿ ಹೇಳಿದ ಬುದ್ಧಿವಾದವೂ) ಅವಿವೇಕಿಯಾದ ದೂತನಲ್ಲಿ ಶೋಭಿಸುವುದಿಲ್ಲ. ತಾವೇ ಪಂಡಿತರೆಂಬ ಅಹಂಕಾರವನ್ನು ಹೊಂದಿರುವ ದೂತರು ಕೆಲಸಗಳನ್ನು ನಾಶಗೊಳಿಸುತ್ತಾರೆ.

ಶ್ರೀರಾಮನ ಕಾರ್ಯವು ಹಾಳಾಗದೇ ಸಿದ್ಧಿಸುವುದು ಹೇಗೆ? ನನ್ನ ಈ ವ್ಯಥೆಯು ಹೇಗೆ ದೂರವಾದೀತು? ಸಮುದ್ರಲಂಘನವು ವ್ಯರ್ಥವಾಗದಿರುವುದು ಹೇಗೆ? ಸೀತೆಯು ಉದ್ವೇಗಗೊಳ್ಳದೇ ನನ್ನ ಮಾತನ್ನು ಕೇಳುವ ಬಗೆ ಹೇಗೆ?"

ಬುದ್ಧಿವಂತನಾದ ಹನುಮಂತನು ಹೀಗೆಲ್ಲಾ ಯೋಚಿಸಿ ತತ್ಕಾಲೋಚಿತವಾದ ಕರ್ತವ್ಯವನ್ನು ಮಾಡಲು ನಿರ್ಧರಿಸಿದನು.

**ರಾಮಮಕ್ಲಿಷ್ಟಕರ್ಮಾಣಂ ಸುಬನ್ಧುಮನುಕೀರ್ತಯನ್ ।**
**ನೈನಾಮುದ್ವೇಜಯಿಷ್ಯಾಮಿ ತದ್ಬನ್ಧುಗತಚೇತನಾಮ್ ॥೪೧॥**

"ಕ್ಲೇಶವಿಲ್ಲದೇ ಕಾರ್ಯಗಳನ್ನು ಮಾಡುವ, ಒಳ್ಳೆಯ ಬಂಧುವಾದ

ಶ್ರೀರಾಮನ ಕೀರ್ತನೆಯನ್ನು ಮಾಡುತ್ತಾ, ಅಂತಹ ಬಂಧುವಿನಲ್ಲಿಯೇ ನೆಟ್ಟ ಮನಸ್ಸುಳ್ಳ ಸೀತಾದೇವಿಯನ್ನು ಸಮಾಧಾನಗೊಳಿಸುತ್ತೇನೆ. ಬೇರೆ ಯಾವುದಾದರೂ ಮಾತುಗಳನ್ನಾಡಿ ಇವಳ ಮನಸ್ಸನ್ನು ಉದ್ವೇಗಗೊಳಿಸುವುದಿಲ್ಲ.

ಇಕ್ಷ್ವಾಕುಗಳಲ್ಲಿ ಶ್ರೇಷ್ಠನಾದ ಆತ್ಮವಿದನಾದ ಶ್ರೀರಾಮನ ಶುಭಕರವಾದ ಮತ್ತು ಧರ್ಮಯುಕ್ತವಾದ ಮಾತುಗಳನ್ನು ಹೇಳುತ್ತೇನೆ. ಸುಮಧುರವಾದ ವಾಣಿಯಿಂದ ಶ್ರೀರಾಮನ ಎಲ್ಲ ವಿಷಯಗಳೂ ಇವಳಿಗೆ ಕೇಳಿಸುವಂತೆ ಹೇಳುತ್ತೇನೆ. ಇವಳು ಯಾವ ರೀತಿಯಲ್ಲಿ ನನ್ನ ಮಾತಿನಲ್ಲಿ ವಿಶ್ವಾಸವನ್ನಿಡಬಹುದೋ–ಅದೇ ರೀತಿಯಲ್ಲಿ ಎಲ್ಲವನ್ನೂ ಮಾಡುತ್ತೇನೆ."

ಹೀಗೆ ಬಹಳವಾಗಿ ಯೋಚಿಸುತ್ತಿದ್ದ, ಮಹಾಪ್ರಭಾವನಾದ, ವೃಕ್ಷದ ಮಧ್ಯಭಾಗದಲ್ಲಿ ಕುಳಿತಿದ್ದ ಹನುಮಂತನು ಜಗತ್ಪತಿಯಾದ ಶ್ರೀರಾಮಚಂದ್ರನ ಭಾರ್ಯೆಯಾದ ಸೀತಾದೇವಿಯನ್ನು ನೋಡುತ್ತಾ ಸುಮಧುರವೂ, ಕರ್ಣಾನಂದಕರವೂ, ಮತ್ತು ಸತ್ಯವೂ ಆದ ಮಾತುಗಳನ್ನು ಹೇಳತೊಡಗಿದನು.

ಌ೦ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ಌ೧ನೆಯ ಸರ್ಗ

## ಹನುಮಂತನು ಸೀತಾದೇವಿಯು ಕೇಳುವಂತೆ ರಾಮಕಥೆಯನ್ನು ಸುಮಧುರವಾಗಿ ಹಾಡಿದುದು

**ಏವಂ ಬಹುವಿಧಾಂ ಚಿನ್ತಾಂ ಚಿನ್ತಯಿತ್ವಾ ಮಹಾಕಪಿಃ ।**
**ಸಂಶ್ರವೇ ಮಧುರಂ ವಾಕ್ಯಂ ವೈದೇಹ್ಯಾ ವ್ಯಾಜಹಾರ ಹ ॥೧॥**

ಮಹಾಮತಿಯಾದ ಹನುಮಂತನು ಸೀತೆಯೊಡನೆ ಮಾತನಾಡುವುದರಿಂದಾಗುವ ನಾನಾಪ್ರಕಾರವಾದ ಸಾಧಕ-ಬಾಧಕಗಳನ್ನು ಹೀಗೆ ಸಮಾಲೋಚಿಸಿ ವೈದೇಹಿಗೆ ಮಾತ್ರವೇ ಚೆನ್ನಾಗಿ ಕೇಳಿಸುವ ರೀತಿಯಲ್ಲಿ ಸುಮಧುರವಾದ ಮತ್ತು ಕರ್ಣಾನಂದಕರವಾದ ರಾಮಕಥೆಯನ್ನು ಹೇಳಲು ಉಪಕ್ರಮಿಸಿದನು.

"ಇಕ್ಷ್ವಾಕುವಂಶದಲ್ಲಿ ದಶರಥನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದ

ಪುಣ್ಯಾತ್ಮನಾದ ರಾಜನಿದ್ದನು. ಅವನು ಮಹಾಕೀರ್ತಿಶಾಲಿಯಾಗಿದ್ದನು. ಅವನಲ್ಲಿ ಹೇರಳವಾದ ಆನೆ-ಕುದುರೆ-ರಥಗಳಿದ್ದುವು. ರಾಜರ್ಷಿಗಳಲ್ಲಿರುವ ಶ್ರೇಷ್ಠವಾದ ಗುಣಗಳೆಲ್ಲವೂ ಅವನಲ್ಲಿದ್ದುವು. ತಪಸ್ಸುಮಾಡುವುದರಲ್ಲಿ ಋಷಿಗಳಿಗೆ ಸಮಾನನಾಗಿದ್ದನು. ಚಕ್ರವರ್ತಿಗಳ ಕುಲದಲ್ಲಿ ಹುಟ್ಟಿದ್ದ ಅವನು ಬಲದಲ್ಲಿ ಇಂದ್ರಸದೃಶನಾಗಿದ್ದನು. ಅಹಿಂಸಾಧರ್ಮದಲ್ಲಿ ಅವನಿಗೆ ವಿಶೇಷ ವಾದ ಆಸಕ್ತಿಯಿದ್ದಿತು. ಕ್ಷುದ್ರಜನರ ಸಹವಾಸವಿರಲಿಲ್ಲ. ಆತನು ದಯಾಳುವೂ ಸತ್ಯಪರಾಕ್ರಮಿಯೂ ಆಗಿದ್ದನು. ಶ್ರೇಷ್ಠವಾದ ಇಕ್ಷ್ವಾಕುವಂಶದ ಸೌಭಾಗ್ಯವನ್ನು ವೃದ್ಧಿಪಡಿಸಿ ತಾನೂ ಮಹಾಸೌಭಾಗ್ಯಶಾಲಿಯೇ ಆಗಿದ್ದನು. ರಾಜಶ್ರೇಷ್ಠನಾದ ಅವನು ಸಮಸ್ತರಾಜಚಿಹ್ನೆಗಳಿಂದಲೂ ಕೂಡಿದ್ದನು. ಅತ್ಯಂತಶೋಭಾಯಮಾನನಾಗಿದ್ದನು. ಚತುಃಸಮುದ್ರಪರ್ಯಂತವಾದ ಈ ಭೂಮಂಡಲದಲ್ಲಿ ಅವನು ಪ್ರಜೆಗಳಿಗೆ ಸುಖವನ್ನುಂಟುಮಾಡುವವನೆಂದೂ ಪರಮಸುಖಿಯೆಂದೂ ಪ್ರಸಿದ್ಧನಾಗಿದ್ದನು. ಆ ದಶರಥಮಹಾರಾಜನಿಗೆ ಚಂದ್ರನ ಮುಖಕ್ಕೆ ಸಮಾನವಾದ ಮುಖವಿರುವ ರಾಮನೆಂಬ ಹೆಸರಿನ ಅತ್ಯಂತ ಪ್ರಿಯನಾದ ಪುತ್ರನಿರುವನು. ಹಿರಿಯ ಮಗನಾದ ಆ ಶ್ರೀರಾಮನು ವಿಶೇಷವಾದ ತಿಳಿವಳಿಕೆಯುಳ್ಳವನು. ಧನುರ್ಧಾರಿಗಳಲ್ಲಿ ಶ್ರೇಷ್ಠನು. ಶತ್ರುತಾಪಕನಾದ ಅವನು ತನ್ನ ಚಾರಿತ್ರವನ್ನು ರಕ್ಷಿಸಿಕೊಂಡಿರತಕ್ಕವನು. ಬಂಧುಗಳನ್ನು ರಕ್ಷಿಸುವವನು. ಜೀವಲೋಕಕ್ಕೂ ರಕ್ಷಕನಾಗಿ ಧರ್ಮವನ್ನೂ ರಕ್ಷಿಸುತ್ತಿದ್ದಾನೆ. ಸತ್ಯಪ್ರತಿಜ್ಞನಾದ ಮತ್ತು ವೃದ್ಧನಾದ ತಂದೆಯ ಮಾತಿನಂತೆ ವೀರನಾದ ಶ್ರೀರಾಮನು ಭಾರ್ಯಾಸಮೇತನಾಗಿ ಲಕ್ಷ್ಮಣನೊಡನೆ ಕಾಡಿಗೆ ಬಂದನು. ಆ ಮಹಾರಣ್ಯದಲ್ಲಿ ಬೇಟೆಯಾಡುತ್ತಾ ಸಂಚರಿಸುತ್ತಿದ್ದಾಗ ಕಾಮರೂಪಿಗಳಾದ ಮತ್ತು ಶೂರರಾದ ಅನೇಕರಾಕ್ಷಸರನ್ನು ಸಂಹರಿಸಿದನು. ರಾಕ್ಷಸರ ನೆಲೆಯಾಗಿದ್ದ ಜನಸ್ಥಾನವನ್ನು ಧ್ವಂಸಮಾಡಿ ಖರ-ದೂಷಣರನ್ನು ಸಂಹರಿಸಿದನೆಂಬ ವಾರ್ತೆಯನ್ನು ಕೇಳಿ ರಾಕ್ಷಸರ ಅಧಿಪತಿಯಾದ ರಾವಣನು ಕ್ರುದ್ಧನಾಗಿ ಮೃಗರೂಪವಾದ ಮಾಯೆಯಿಂದ ಶ್ರೀರಾಮನನ್ನು ವಂಚಿಸಿ ಅವನ ಭಾರ್ಯೆಯಾದ ಜಾನಕಿಯನ್ನು ಅಪಹರಿಸಿದನು. ನಿಷ್ಕಳಂಕಳಾದ ಸೀತಾದೇವಿಯನ್ನು ಶ್ರೀರಾಮನು ಅರಣ್ಯದಲ್ಲಿ ಹುಡುಕುತ್ತಾ ಸುಗ್ರೀವನೆಂಬ

ವಾನರನನ್ನು ಸಂಧಿಸಿ ಅವನನ್ನು ಮಿತ್ರನನ್ನಾಗಿ ಮಾಡಿಕೊಂಡನು. ಬಳಿಕ ಪರಪುರಂಜಯನಾದ ಶ್ರೀರಾಮನು ವಾಲಿಯನ್ನು ಸಂಹರಿಸಿ ಕಪಿರಾಜ್ಯವನ್ನು ಮಹಾತ್ಮನಾದ ಸುಗ್ರೀವನಿಗೆ ವಹಿಸಿಕೊಟ್ಟನು. ಸುಗ್ರೀವನ ಆಜ್ಞೆಯಂತೆ ಕಾಮರೂಪಿಗಳಾದ ಸಾವಿರಾರು ವಾನರರು ಸೀತಾದೇವಿಯನ್ನು ಎಲ್ಲ ದಿಕ್ಕುಗಳಲ್ಲಿಯೂ ಹುಡುಕುತ್ತಿದ್ದಾರೆ. ನಾನಾದರೋ ಸಂಪಾತಿಯ ಮಾತಿನಂತೆ ವಿಶಾಲಾಕ್ಷಿಯಾದ ಸೀತೆಯನ್ನು ಹುಡುಕುವ ಸಲುವಾಗಿ ನೂರು ಯೋಜನಗಳಷ್ಟು ವಿಸ್ತಾರವಿರುವ ಸಮುದ್ರವನ್ನು ವೇಗವಾಗಿ ಹಾರಿದೆನು. ಸೀತೆಯು ಎಂತಹ ರೂಪವತಿಯೆಂದೂ, ಎಂತಹ ಬಣ್ಣದವಳೆಂದೂ, ಎಂತಹ ಚಿಹ್ನೆಗಳುಳ್ಳವಳೆಂದೂ ಶ್ರೀರಾಮನು ನನಗೆ ವರ್ಣಿಸಿ ಹೇಳಿದ್ದನೋ–ಅಂತಹುದೇ ರೂಪ-ವರ್ಣ-ಚಿಹ್ನೆಗಳುಳ್ಳ ದೇವಿಯ ಬಳಿಗೆ ನಾನೀಗ ಬಂದಿರುವೆನು.”

ವಾನರಶ್ರೇಷ್ಠನಾದ ಹನುಮಂತನು ಹೀಗೆ ಹೇಳಿ ಸುಮ್ಮನಾದನು.

ಸುಮಧುರವಾದ ಆ ಮಾತುಗಳನ್ನು ಕೇಳಿ ಸೀತಾದೇವಿಯು ಅತ್ಯಂತ ವಿಸ್ಮಿತಳಾದಳು. ಗುಂಗುರುಕೂದಲುಗಳಿಂದಲೂ ಸುಂದರವಾದ ಕೇಶರಾಶಿಯಿಂದಲೂ ಕೂಡಿದ್ದ ಭೀರುವಾದ ಸೀತಾದೇವಿಯು ಕೂದಲುಗಳಿಂದ ಸಮಾವೃತವಾಗಿದ್ದ ಮುಖವನ್ನು ಮೇಲೆತ್ತಿ ಶಿಂಶುಪಾವೃಕ್ಷದ ಕಡೆಗೆ ನೋಡಿದಳು. ಎಲ್ಲ ರೀತಿಯಲ್ಲಿಯೂ ಯಾವಾಗಲೂ ಶ್ರೀರಾಮನನ್ನೇ ಸ್ಮರಿಸುತ್ತಿದ್ದ ಅವಳು ಹನುಮಂತನ ಮಾತುಗಳನ್ನು ಕೇಳಿ ದಿಕ್ಕುಗಳನ್ನೂ-ಉಪದಿಕ್ಕುಗಳನ್ನೂ ನೋಡುತ್ತಾ ಪರಮಾನಂದವನ್ನು ಹೊಂದಿದಳು. ಶಿಂಶುಪಾವೃಕ್ಷದ ಪಾರ್ಶ್ವಗಳಲ್ಲಿಯೂ, ಮೇಲ್ಭಾಗದಲ್ಲಿಯೂ ಮತ್ತು ಕೆಳಭಾಗದಲ್ಲಿಯೂ ನೋಡುತ್ತಿದ್ದ ಸೀತಾದೇವಿಯು ಇತರರಿಂದ ಊಹಿಸಲು ಕೂಡ ಅಸಾಧ್ಯವಾದಷ್ಟು ಮಹಾಬುದ್ಧಿವಂತನಾಗಿದ್ದ, ಕಪಿರಾಜನಾದ ಸುಗ್ರೀವನಿಗೆ ಸಚಿವನಾಗಿದ್ದ, ಉದಯಪರ್ವತದಲ್ಲಿರುವ ಸೂರ್ಯನಂತೆಯೇ ತೇಜೋಮಯನಾಗಿದ್ದ, ವಾಯುಪುತ್ರನಾದ ಹನುಮಂತನನ್ನು ನೋಡಿದಳು.

೩೧ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೩೨ನೆಯ ಸರ್ಗ

## ಸೀತಾದೇವಿಯ ತರ್ಕ-ವಿತರ್ಕಗಳು

**ತತಃ ಶಾಖಾನ್ತರೇ ಲೀನಂ ದೃಷ್ಟ್ವಾ ಚಲಿತಮಾನಸಾ ।**
**ವೇಷ್ಟಿತಾರ್ಜುನವಸ್ತ್ರಂ ತಂ ವಿದ್ಯುತ್ಸಂಘಾತಪಿಙ್ಗಲಮ್ ॥೧॥**

**ಸಾ ದದರ್ಶ ಕಪಿಂ ತತ್ರ ಪ್ರಶ್ರಿತಂ ಪ್ರಿಯವಾದಿನಮ್ ।**
**ಫುಲ್ಲಾಶೋಕೋತ್ಕರಾಭಾಸಂ ತಪ್ತಚಾಮೀಕರೇಕ್ಷಣಮ್ ॥೨॥**

ಸೀತಾದೇವಿಯು ರೆಂಬೆಗಳ ಮಧ್ಯದಲ್ಲಿ ಅಡಗಿಕೊಂಡಿದ್ದ ಹನುಮಂತನನ್ನು ನೋಡಿದಳು. ಅವನು ಆ ಸಮಯದಲ್ಲಿ ಬಿಳುಪಾದ ವಸ್ತ್ರವನ್ನುಟ್ಟಿದ್ದನು. ಮಿಂಚಿನ ಸಮೂಹದಂತೆ ಪಿಂಗಳವರ್ಣದವನಾಗಿದ್ದನು. ವಿನಯಶೀಲನಾಗಿ ಪ್ರಿಯವಾದ ಮಾತುಗಳನ್ನಾಡುತ್ತಿದ್ದನು. ಪುಷ್ಪಭರಿತವಾದ ಅಶೋಕವೃಕ್ಷದಂತೆಯೇ ಶೋಭಾಯಮಾನನಾಗಿದ್ದನು. ಅವನ ಕಣ್ಣುಗಳು ಪುಟಕ್ಕೆ ಹಾಕಿದ ಚಿನ್ನದಂತೆ ಥಳಥಳಿಸುತ್ತಿದ್ದುವು. ಅಂತಹ ಸುಂದರಕಾಯನಾಗಿದ್ದ ಹನುಮಂತನನ್ನು ನೋಡಿದೊಡನೆಯೇ ಸೀತಾದೇವಿಯ ಮನಸ್ಸು ಚಂಚಲವಾಯಿತು. ವಿನೀತನಾಗಿರುವವನಂತೆ ತನ್ನ ಬಳಿಗೆ ಬಂದು ಮಾತನಾಡುತ್ತಿರುವ ಕಪಿಶ್ರೇಷ್ಠನಾದ ಹನುಮಂತನನ್ನು ನೋಡಿ ಸೀತಾದೇವಿಗೆ ವಿಸ್ಮಯವೂ ಆಯಿತು. ಪುನಃ ಅವಳು ಚಿಂತಿಸತೊಡಗಿದಳು :

"ಅಯ್ಯೋ! ಈ ವಾನರರೂಪದ ಪ್ರಾಣಿಯ ಶರೀರವು ಭಯಂಕರವಾಗಿದೆ. ಇದರ ತೇಜಸ್ಸು ಸಹಿಸಲು ಅಶಕ್ಯವಾಗಿದೆ. ನೋಡಲೂ ಅಸಾಧ್ಯವಾಗಿದೆ."-ಹೀಗೆ ಭಾವಿಸಿ ಸೀತಾದೇವಿಯು ಪುನಃ ವಿಮೋಹಿತಳಾದಳು. ಭಯಮೋಹಿತಳಾದ, ದುಃಖಪೀಡಿತಳಾದ ಅವಳು-'ಹಾ ರಾಮ! ಹಾ ಲಕ್ಷ್ಮಣ!'-ಎಂದು ಕೂಗಿಕೊಳ್ಳುತ್ತಾ ಗಟ್ಟಿಯಾಗಿ ಅಳತೊಡಗಿದಳು. ಮೆಲುದನಿಯಿಂದಲೇ ಬಹಳವಾಗಿ ಅತ್ತಳು. ವಿನೀತನಾಗಿರುವವನಂತೆ ತನ್ನ ಸಮೀಪದಲ್ಲಿಯೇ ಇರುವ ಹರಿಶ್ರೇಷ್ಠನಾದ ಹನುಮಂತನನ್ನು ನೋಡಿ 'ಇದೇನು ಸ್ವಪ್ನವಿರಬಹುದೇ?'-ಎಂದು ಚಿಂತಿಸತೊಡಗಿದಳು. ಹಾಗೆಯೇ ಚಿಂತಿಸುತ್ತಾ ಸೀತಾದೇವಿಯು-ವಜ್ರಾಯುಧಪ್ರಹಾರದಿಂದ ವಕ್ರವಾದ ಮುಖವುಳ್ಳವನಾಗಿದ್ದ, ಸುಗ್ರೀವನ ಆಜ್ಞೆಯನ್ನು ಯಥಾವತ್ತಾಗಿ ನಡೆಸುವವ

ನಾಗಿದ್ದ, ಅತ್ಯಂತಶ್ಲಾಘನೀಯನಾದ, ಬುದ್ಧಿವಂತರಲ್ಲಿ ಶ್ರೇಷ್ಠನಾದ, ವಾಯುಪುತ್ರನಾದ, ಕಪಿಶ್ರೇಷ್ಠನಾದ ಹನುಮಂತನನ್ನು ಪುನಃ ಪುನಃ ನೋಡಿದಳು. ನೋಡು-ನೋಡುತ್ತಿದ್ದಂತೆಯೇ ರಾವಣನೇ ಆ ವೇಷದಲ್ಲಿ ಬಂದಿರುವನೆಂದು ಭಾವಿಸಿ ಮೂರ್ಛೆಹೊಂದಿ ಮೃತಪ್ರಾಯಳೇ ಆದಳು. ಬಹಳ ಹೊತ್ತು ಕಳೆದ ನಂತರ ಪುನಃ ಎಚ್ಚರಗೊಂಡು ಚಿಂತಿಸಿದಳು. 'ಭಯಂಕರವಾದ ಸ್ವಪ್ನವನ್ನು ನಾನೀಗ ಕಾಣುತ್ತಿದ್ದೇನೆ. ಸ್ವಪ್ನಗಳಿಗೆ ಸಂಬಂಧಿಸಿದ ಅನೇಕ ಶಾಸ್ತ್ರಗಳಲ್ಲಿ ಸ್ವಪ್ನದಲ್ಲಿ ಕಪಿಯು ಕಾಣಕೂಡದೆಂದು ಹೇಳಿದೆ. ಆದರೆ ನಾನೀಗ ಸ್ವಪ್ನದಲ್ಲಿ ಕಪಿಯನ್ನೇ ಕಾಣುತ್ತಿದ್ದೇನೆ. ನನಗೆ ಅನಿಷ್ಟವಾಗಬಾರದು. ನನ್ನ ಕಡೆಯವರಿಗೂ ಅನಿಷ್ಟವಾಗಬಾರದು. ಲಕ್ಷ್ಮಣಸಹಿತನಾದ ಶ್ರೀರಾಮನಿಗೆ ಮಂಗಳವಾಗಲಿ. ನನ್ನ ತಂದೆಯಾದ ಜನಕಮಹಾರಾಜನಿಗೂ ಮಂಗಳವಾಗಲಿ.'

ಕ್ಷಣಕಾಲ ಯೋಚಿಸಿ ಪುನಃ ಸೀತೆಯು ಹೇಳಿಕೊಂಡಳು.

"ಇದು ಖಂಡಿತವಾಗಿಯೂ ಸ್ವಪ್ನವಲ್ಲ. ಏಕೆಂದರೆ ನಿದ್ರೆಬಂದರಲ್ಲವೇ ಸ್ವಪ್ನವು ಬೀಳುತ್ತದೆ? ಶೋಕ-ದುಃಖಪೀಡತಳಾಗಿರುವ ನನಗೆ ನಿದ್ರೆಯೆಲ್ಲಿಂದ ಬಂತು? ಪೂರ್ಣೇಂದುಸದೃಶವಾದ ಮುಖವುಳ್ಳ ಶ್ರೀರಾಮನಿಂದ ವಿಹೀನಳಾಗಿರುವ ನನಗೆ ಸುಖವೂ ಇಲ್ಲ ; ಇದರಿಂದಾಗಿ ನಿದ್ರೆಯೂ ಇಲ್ಲ.

ಸ್ವಪ್ನವಲ್ಲದಿದ್ದರೂ ಹೀಗೆ ಕಾಣುತ್ತಿರುವುದು ಬುದ್ಧಿಯ ವಿಕಾರದ ಪರಿಣಾಮವೇ ಆಗಿರಬಹುದು. 'ಹಾ ರಾಮ! ಪ್ರಿಯ ರಾಮ!' ಎಂದು ನಾನು ಸದಾ ಮನಸ್ಸಿನಲ್ಲಿ ಚಿಂತಿಸುತ್ತಲೇ ಇರುವೆನು. ಬಾಯಲ್ಲೂ ಹೇಳು ತ್ತಲೂ ಇರುವೆನು. ಅದಕ್ಕೆ ಅನುರೂಪವಾಗಿ ನಾನೀಗ ರಾಮನ ಕಥೆಯನ್ನು ಕೇಳುತ್ತಿರಬಹುದು. ಕಥೆಯ ಅರ್ಥವನ್ನೇ ನೋಡುತ್ತಿದ್ದೇನೆ. ಶ್ರೀರಾಮನಲ್ಲಿಯೇ ತನ್ಮಯಳಾಗಿರುವ ನನಗೆ ಅವನ ಕಥೆಯನ್ನು ಯಾರೋ ಹೇಳುತ್ತಿರುವಂತೆ ಭಾಸವಾಗುತ್ತಿದೆ. ಶ್ರೀರಾಮನಲ್ಲಿಯೇ ಸಮಸ್ತಭಾವನೆಗಳನ್ನೂ ಕೇಂದ್ರೀಕರಿಸಿರುವ ನಾನು ಅವನ ಸಲುವಾಗಿ ಮನ್ಮಥನಿಂದ ಪೀಡಿತಳಾಗಿದ್ದೇನೆ. ಸತತವಾಗಿ ಅವನನ್ನೇ ಚಿಂತಿಸುತ್ತಿರುವ ನಾನು ಅವನನ್ನೇ ನೋಡುತ್ತೇನೆ. ಅವನಿಗೆ ಸಂಬಂಧಿಸಿದ ಮಾತುಗಳನ್ನೇ ಹೇಳುತ್ತೇನೆ. ಇವೆಲ್ಲವೂ

ಮನಸ್ಸಿನ ಭ್ರಾಂತಿಯಿರಬಹುದೆಂದೇ ಒಮ್ಮೆ ಚಿಂತಿಸುತ್ತೇನೆ. ಹಾಗೂ ಬುದ್ಧಿಯ ಮೂಲಕವಾಗಿ ಅದನ್ನೇ ವಿತರ್ಕಮಾಡುತ್ತೇನೆ. ಮನೋರಥಕ್ಕೆ ರೂಪವೆಂಬುದೇ ಇಲ್ಲ. ಅದು ಕೇವಲ ಮಾನಸಿಕವಾದುದು. ಮೇಲಾಗಿ ಅದು ಶ್ರೀರಾಮನಿಗೆ ಸಂಬಂಧಿಸಿದುದು. ಶ್ರೀರಾಮನ ರೂಪವೇ ನನಗೆ ಸರ್ವತ್ರ ಕಾಣುತ್ತಿದ್ದರೆ ಅದನ್ನು ಭ್ರಮೆಯೆಂದೇ ಭಾವಿಸಬಹುದಾಗಿದ್ದಿತು. ಈಗ ನಾನು ಶ್ರೀರಾಮನ ರೂಪವನ್ನು ಕಾಣುತ್ತಿಲ್ಲ. ಸ್ಪಷ್ಟವಾದ ರೂಪವನ್ನು ಧರಿಸಿರುವ ಹಿಂದೆಂದೂ ನೋಡದ ರೂಪವನ್ನು ಧರಿಸಿರುವ ಈ ಕಪೀಶ್ವರನು ಶ್ರೀರಾಮನ ಕಥೆಯನ್ನು ನನಗೆ ಹೇಳುತ್ತಿದ್ದಾನೆ.

**ನಮೋಽಸ್ತು ವಾಚಸ್ಪತಯೇ ಸವಜ್ರಿಣೇ**
**ಸ್ವಯಂಭುವೇ ಚೈವ ಹುತಾಶನಾಯ ಚ ।**
**ಅನೇನ ಚೋಕ್ತಂ ಯದಿದಂ ಮಮಾಗ್ರತೋ**
**ವನೌಕಸಾ ತಚ್ಚ ತಥಾಸ್ತು ನಾನ್ಯಥಾ ॥೧೪॥**

ಇಂದ್ರಸಹಿತನಾದ ಬೃಹಸ್ಪತಿಗೆ, ಸ್ವಯಂಭೂಬ್ರಹ್ಮನಿಗೆ ಮತ್ತು ಯಜ್ಞೇಶ್ವರನಿಗೆ ನಮಸ್ಕರಿಸಿ ಪ್ರಾರ್ಥಿಸಿಕೊಳ್ಳುತ್ತೇನೆ. ವನಚರನಾದ ಕಪೀಶ್ವರನು ಈಗ ನನ್ನ ಮುಂದೆ ಏನು ಹೇಳಿರುವನೋ ಅದು ಹಾಗೆಯೇ ಆಗಲಿ. ಬೇರೆಯ ರೀತಿಯಲ್ಲಿ ಆಗುವುದು ಬೇಡ."

ಇ೨ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೩೩ನೆಯ ಸರ್ಗ

## ಸೀತೆಯು ಹನುಮಂತನಿಗೆ ತನ್ನ ಪರಿಚಯವನ್ನು ಮಾಡಿ ಕೊಡುತ್ತಾ ರಾವಣನು ಅಪಹರಿಸಿಕೊಂಡು ಬಂದ ವೃತ್ತಾಂತವನ್ನು ತಿಳಿಸಿದುದು

**ಸೋಽವತೀರ್ಯ ದ್ರುಮಾತ್ತಸ್ಮಾದ್ವಿದ್ರುಮಪ್ರತಿಮಾನನಃ ।**
**ವಿನೀತವೇಷಃ ಕೃಪಣಃ ಪ್ರಣಿಪತ್ಯೋಪಸೃತ್ಯ ಚ ॥೧॥**

**ತಾಮಬ್ರವೀನ್ಮಹಾತೇಜಾ ಹನೂಮಾನ್ಮಾರುತಾತ್ಮಜಃ ।**
**ಶಿರಸ್ಯಞ್ಜಲಿಮಾಧಾಯ ಸೀತಾಂ ಮಧುರಯಾ ಗಿರಾ ॥೨॥**

ಹವಳದಂತೆ ಕೆಂಪಾದ ಮುಖವುಳ್ಳವನಾಗಿದ್ದ, ದೀನನಾಗಿದ್ದ, ಮಹಾ ತೇಜಸ್ವಿಯಾದ, ವಾಯುಪುತ್ರನಾದ ಹನುಮಂತನು ಶಿಂಶುಪಾವೃಕ್ಷ ದಿಂದಿಳಿದು ಸೀತಾದೇವಿಯ ಬಳಿಗೆ ಬಂದು ವಿನೀತನಾಗಿ ಎರಡು ಕೈಗಳನ್ನೂ ತಲೆಯಮೇಲಿಟ್ಟುಕೊಂಡು ಕೈಮುಗಿಯುತ್ತಾ ಮಧುರವಾದ ಮಾತಿನಿಂದ ಹೇಳಿದನು :

"ನಿಷ್ಕಳಂಕಳೇ! ಪದ್ಮಪತ್ರದಂತೆ ವಿಶಾಲವಾದ ಕಣ್ಣುಗಳುಳ್ಳವಳೇ! ಮಲಿನವಾದ ರೇಷ್ಮೆಯ ವಸ್ತ್ರವನ್ನು ಉಟ್ಟಿರುವವಳೇ! ವೃಕ್ಷದ ರೆಂಬೆಯನ್ನು ಹಿಡಿದುಕೊಂಡು ನಿಂತಿರುವ ನೀನು ಯಾರು? ತಾವರೆಯ ಎಲೆಗಳಿಂದ ನೀರು ತೊಟ್ಟಿಕ್ಕುವಂತೆ ನಿನ್ನ ಕಣ್ಣುಗಳಿಂದ ದುಃಖದಿಂದ ಉಂಟಾದ ನೀರೇಕೆ ಹರಿಯುತ್ತಿದೆ? ಶೋಭನೆಯೇ! ದೇವಾಸುರ-ನಾಗ-ಗಂಧರ್ವ-ರಾಕ್ಷಸ-ಯಕ್ಷ-ಕಿನ್ನರರಲ್ಲಿ ನೀನು ಯಾರಾಗಿರುವೆ? ಸುಂದರಮುಖಿಯೇ! ಏಕಾದಶರುದ್ರರ ಪತ್ನಿಯರಲ್ಲಿ, ಸಪ್ತಮರುತ್ತರ ಪತ್ನಿಯರಲ್ಲಿ, ಅಷ್ಟವಸುಗಳ ಪತ್ನಿಯರಲ್ಲಿ ನೀನು ಯಾರಾಗಿರುವೆ? ರೂಪ-ಲಾವಣ್ಯಸಂಪನ್ನೆಯೇ! ನೀನೊಬ್ಬಳು ದೇವತೆಯೇ ಆಗಿರುವೆಯೆಂದು ನಾನು ಭಾವಿಸುತ್ತೇನೆ. ಶ್ರೇಷ್ಠವಾದ ಸರ್ವಗುಣಗಳಿಂದಲೂ ಕೂಡಿರುವ, ನಕ್ಷತ್ರಗಳಲ್ಲಿಯೇ ಶ್ರೇಷ್ಠಳಾಗಿರುವ ರೋಹಿಣಿಯೇ ನೀನಾಗಿರುವೆಯಾ? ಚಂದ್ರನಿಂದ ವಿಹೀನಳಾಗಿ ದೇವಲೋಕದಿಂದೇನಾದರೂ ಬಿದ್ದುಬಿಟ್ಟಿರುವೆಯಾ?

ಕಪ್ಪಾದ ಕಡೆಗಣ್ಣುಳ್ಳವಳೇ! ಕೋಪದಿಂದಲೋ, ಮೋಹದಿಂದಲೋ ಪತಿಗಳಾದ ವಸಿಷ್ಠರನ್ನು ಕೋಪಗೊಳಿಸಿ ಅವರಿಂದ ತಿರಸ್ಕೃತಳಾಗಿ ಬಂದಿರುವ ಮಂಗಳಮಯಿಯಾದ ಅರುಂಧತಿಯ ನೀನಲ್ಲವಷ್ಟೇ?

ಸುಂದರವಾದ ನಡುಪ್ರದೇಶದಿಂದ ಕೂಡಿರುವವಳೇ! ಮಗನಾಗಲೀ, ತಂದೆಯಾಗಲೀ, ಅಣ್ಣ-ತಮ್ಮಂದಿರಾಗಲೀ, ಪತಿಯಾಗಲೀ–ಈ ಲೋಕದಿಂದ ಪರಲೋಕಕ್ಕೆ ಹೋದುದಕ್ಕಾಗಿ ಅವರನ್ನು ಕುರಿತು ದುಃಖಿಸುತ್ತಿರುವೆಯಾ?

**ರೋದನಾದತಿನಿಃಶ್ವಾಸಾದ್ಭೂಮಿಸಂಸ್ಪರ್ಶನಾದಪಿ ।**
**ನ ತ್ವಾಂ ದೇವೀಮಹಂ ಮನ್ಯೇ ರಾಜ್ಞಃ ಸಂಜ್ಞಾವಧಾರಣಾತ್ ॥**

ಅಳುತ್ತಿರುವುದರಿಂದಲೂ, ಬಹಳವಾಗಿ ನಿಟ್ಟುಸಿರುಬಿಡುತ್ತಿರುವುದ

ರಿಂದಲೂ, ನೆಲವನ್ನು ಮುಟ್ಟಿ ಕುಳಿತಿರುವುದರಿಂದಲೂ, ಮಹಾರಾಣಿಯಲ್ಲಿರಬೇಕಾದ ಶುಭಚಿಹ್ನೆಗಳನ್ನು ಹೊಂದಿರುವುದರಿಂದಲೂ ನಿನ್ನನ್ನು ದೇವತೆಯೆಂದು ನಾನು ಭಾವಿಸುವುದಿಲ್ಲ.

ಉತ್ತಮಸ್ತ್ರೀತ್ವವನ್ನು ಸೂಚಿಸುವ ಶುಭಲಕ್ಷಣಗಳನ್ನು ನಾನು ನಿನ್ನಲ್ಲಿ ಕಾಣುತ್ತಿದ್ದೇನೆ. ಆದರಿಂದ ನೀನು ಭೂಪಾಲನೊಬ್ಬನ ಪಟ್ಟದರಸಿಯೆಂದೂ, ರಾಜಕನ್ಯೆಯೆಂದೂ ಭಾವಿಸಿದ್ದೇನೆ. ಜನಸ್ಥಾನದಲ್ಲಿ ರಾವಣನಿಂದ ಬಲಾತ್ಕಾರವಾಗಿ ಅಪಹರಿಸಲ್ಪಟ್ಟ ಸೀತಾದೇವಿಯೇ ನೀನಾಗಿದ್ದರೆ ನಿನಗೆ ಮಂಗಳವಾಗಲಿ. ನನ್ನ ಪ್ರಶ್ನೆಗಳಿಗೆ ಉತ್ತರಿಸುವ ಕೃಪೆಮಾಡು.

ನಿನ್ನ ಮುಖವು ದೈನ್ಯವನ್ನು ಹೊಂದಿದೆ. ರೂಪವು ಅಪ್ರತಿಮವಾಗಿದ್ದು ಅಮಾನುಷವಾಗಿದೆ. ನಿನ್ನ ವೇಷವು ತಾಪಸಿಗಳಿಗೆ ಅನುರೂಪವಾಗಿದೆ. ಆದುದರಿಂದ ನೀನು ನಿಶ್ಚಯವಾಗಿಯೂ ಶ್ರೀರಾಮನ ಪತ್ನಿಯೇ ಆಗಿರುವೆಯಲ್ಲವೇ?"

ಸೀತಾದೇವಿಯು ಹನುಮಂತನ ಮಾತುಗಳನ್ನು ಕೇಳಿ ಶ್ರೀರಾಮ ನಾಮಸಂಕೀರ್ತನದ ಶ್ರವಣದಿಂದ ಪರಮಹರ್ಷಿತಳಾಗಿ ಶಿಂಶುಪಾವೃಕ್ಷದ ಬುಡದಲ್ಲಿದ್ದ ಮಾರುತಿಗೆ ಹೇಳಿದಳು :

"ಪ್ರಪಂಚದಲ್ಲಿರುವ ರಾಜಶ್ರೇಷ್ಠರಲ್ಲಿ ಅಗ್ರಗಣ್ಯನಾಗಿದ್ದ, ಸುಪ್ರಸಿದ್ಧನಾಗಿದ್ದ, ಶತ್ರುಸೈನ್ಯವನ್ನು ಧ್ವಂಸಮಾಡುತ್ತಿದ್ದ ದಶರಥರಾಜನ ಸೊಸೆಯು ನಾನು. ವಿದೇಹಪತಿಯಾದ, ಮಹಾತ್ಮನಾದ ಜನಕನ ಮಗಳು. 'ಸೀತಾ' ಎಂಬ ಹೆಸರುಳ್ಳ ನಾನು ಶ್ರೀರಾಮನ ಭಾರ್ಯೆಯು.

**ಸಮಾ ದ್ವಾದಶ ತತ್ರಾಹಂ ರಾಘವಸ್ಯ ನಿವೇಶನೇ ।**
**ಭುಞ್ಜಾನಾ ಮಾನುಷಾನ್ಭೋಗಾನ್ಸರ್ವಕಾಮಸಮೃದ್ಧಿನೀ ॥೧೭॥**

ಶ್ರೀರಾಘವನ ಅರಮನೆಯಲ್ಲಿ ನಾನು ಹನ್ನೆರಡು ವರ್ಷಗಳ ಕಾಲ ಮನುಷ್ಯಸಂಬಂಧವಾದ ಭೋಗಗಳೆಲ್ಲವನ್ನೂ ಅನುಭವಿಸುತ್ತಾ ಸರ್ವಕಾಮನೆಗಳ ಸಮೃದ್ಧಿಯನ್ನು ಹೊಂದಿ ಸುಖವಾಗಿದ್ದೆನು.*

---

* ಉಷಿತ್ವಾ ವರ್ಷಮೇವೈಕಂ = ನಾನು ರಾಘವನ ಮನೆಯಲ್ಲಿ ಒಂದೇ ವರ್ಷ

**ತತಸ್ತ್ರಯೋದಶೇ ವರ್ಷೇ ರಾಜ್ಯೇನೇಕ್ಷ್ವಾಕುನನ್ದನಮ್ ।**
**ಅಭಿಷೇಚಯಿತುಂ ರಾಜಾ ಸೋಪಾಧ್ಯಾಯಃ ಪ್ರಚಕ್ರಮೇ ॥೧೮॥**

ಅನಂತರ ಹದಿಮೂರನೆಯ ವರ್ಷದಲ್ಲಿ ಇಕ್ಷ್ವಾಕುನಂದನನಾದ ಶ್ರೀರಾಮನಿಗೆ ಪಟ್ಟಾಭಿಷೇಕಮಾಡಲು ದಶರಥರಾಜನು ಕುಲಪುರೋಹಿತರೊಡನೆ ಸಮಾಲೋಚಿಸಲು ಪ್ರಾರಂಭಿಸಿದನು.[1]

ಶ್ರೀರಾಮನ ಪಟ್ಟಾಭಿಷೇಕದ ಸಲುವಾಗಿ ಅವನು ಸಾಮಗ್ರಿಗಳನ್ನು ಸಂಗ್ರಹಿಸುತ್ತಿರುವಾಗ–ಕೈಕೇಯೀ ಎಂಬ ಹೆಸರಿನ ದಶರಥನ ಪತ್ನಿಯು ಹೇಳಿದಳು :

**ನ ಪಿಬೇಯಂ ನ ಖಾದೇಯಂ ಪ್ರತ್ಯಹಂ ಮಮ ಭೋಜನಮ್ ।**
**ಏಷ ಮೇ ಜೀವಿತಸ್ಯಾನ್ತೋ ರಾಮೋ ಯದ್ಯಭಿಷಿಚ್ಯತೇ ॥೨೦॥**

**ಯತ್ತದುಕ್ತಂ ತ್ವಯಾ ವಾಕ್ಯಂ ಪ್ರೀತ್ಯಾ ನೃಪತಿಸತ್ತಮ ।**
**ತಚ್ಚೇನ್ನ ವಿತಥಂ ಕಾರ್ಯಂ ವನಂ ಗಚ್ಛತು ರಾಘವಃ ॥೨೧॥**

"ಮಹಾರಾಜ! ನೀನು ರಾಮನಿಗೇನಾದರೂ ಪಟ್ಟಾಭಿಷೇಕಮಾಡಿದ್ದೇ ಆದರೆ–ಇನ್ನು ಮುಂದೆ ನಾನು ಊಟವನ್ನೂ ಮಾಡುವುದಿಲ್ಲ ; ನೀರನ್ನೂ ಕುಡಿಯುವುದಿಲ್ಲ. ಇದರಿಂದಲೇ ನನ್ನ ಜೀವಿತದ ಕೊನೆಯೂ ಆಗುವುದು. ನೃಪತಿಶ್ರೇಷ್ಠನೇ! ಹಿಂದೆ ನೀನು ನನಗೆ ಪ್ರೀತಿಯಿಂದ ಕೊಟ್ಟಿದ್ದ ವರವು ಸುಳ್ಳಾಗದಿರಬೇಕಾದರೆ ರಾಮನು ಈಗಲೇ ಕಾಡಿಗೆ ಹೋಗಲಿ."

ಸತ್ಯವಂತನಾದ ಆ ದಶರಥರಾಜನು ಕೈಕೇಯಿಗೆ ತಾನು ಕೊಟ್ಟಿದ್ದ ವರವನ್ನು ಸ್ಮರಿಸಿಕೊಳ್ಳುತ್ತಾ ಅವಳ ಆಗಿನ ಅತಿಕ್ರೂರವೂ ಅಪ್ರಿಯವೂ ಆಗಿದ್ದ ಮಾತುಗಳನ್ನು ಕೇಳಿ ಮೂರ್ಛಿತನಾದನು. ಸತ್ಯ-ಧರ್ಮಗಳಲ್ಲಿಯೇ ನಿರತನಾಗಿದ್ದ, ವೃದ್ಧನಾಗಿದ್ದ ಆ ರಾಜನು ಅಳುತ್ತಳುತ್ತಾ ಭರತನಿಗೆ ರಾಜ್ಯವನ್ನು ಬಿಟ್ಟುಕೊಡುವಂತೆ ಯಶೋವಂತನಾದ ಶ್ರೀರಾಮನನ್ನು ಪ್ರಾರ್ಥಿಸಿದನು.

---

ವಿದ್ದೆನು ಎಂಬ ಪಾಠಾಂತರವೂ ಇದೆ. ಸೀತಾ-ರಾಮರ ವಯಸ್ಸಿನ ವಿಷಯವಾಗಿ ಈ ಹಿಂದೆಯೇ ಚರ್ಚಿಸಲಾಗಿದೆ.

1 **ತತಸ್ತ್ರಯೋದಶೇ ವರ್ಷೇ**–ಎಂಬುದಕ್ಕೆ ಬದಲಾಗಿ **ಉಷಿತ್ವಾ ವರ್ಷಮೇವೈಕಂ** ಎಂಬ ಪಾಠಕ್ಕೆ ಹೊಂದಿಕೊಳ್ಳುವಂತೆ **ತತಃ ಸಂವತ್ಸರಾದೂರ್ಧ್ವಂ**–ಎಂಬ ಪಾಠಾಂತರವಿದೆ.

ಶ್ರೀಮಂತನಾದ ಶ್ರೀರಾಮಚಂದ್ರನು ಅಭಿಷೇಕಕ್ಕಿಂತಲೂ ಪ್ರಿಯತರವಾದ ತಂದೆಯ ಮಾತನ್ನು ಮೊದಲು ಮನಸ್ಸಿನಿಂದ ಅಂಗೀಕರಿಸಿ ಅನಂತರ ಮಾತಿನಿಂದಲೂ ಅರಣ್ಯಕ್ಕೆ ಹೋಗುವುದಾಗಿ ಹೇಳಿದನು.

**ದದ್ಯಾನ್ನ ಪ್ರತಿಗೃಹ್ಣೀಯಾತ್ಸತ್ಯಂ ಬ್ರೂಯಾನ್ನ ಚಾನೃತಮ್ ।***
**ಅಪಿ ಜೀವಿತಹೇತೋರ್ವಾ ರಾಮಃ ಸತ್ಯಪರಾಕ್ರಮಃ ॥೨೫॥**

ಸತ್ಯಪರಾಕ್ರಮಿಯಾದ ನನ್ನ ಪತಿಯು ಯಾವಾಗಲೂ ದಾನಕೊಡತಕ್ಕ ವನೇ ಹೊರತು ಪ್ರತಿಗ್ರಹಿಸತಕ್ಕವನಲ್ಲ. ಸತ್ಯವನ್ನು ಹೇಳತಕ್ಕವನೇ ಹೊರತು ಪ್ರಾಣಹೋಗುವ ಸಂದರ್ಭವು ಒದಗಿಬಂದರೂ ಪ್ರಾಣಗಳನ್ನು ಉಳಿಸಿ ಕೊಳ್ಳಲು ಸಲುವಾಗಿ ಸುಳ್ಳುಹೇಳತಕ್ಕವನಲ್ಲ.

ಅನಂತರ ಮಹಾಯಶಸ್ವಿಯಾದ ಶ್ರೀರಾಮನು ಬಹುಮೂಲ್ಯವಾದ ಉತ್ತರೀಯಗಳನ್ನೂ ಪರಿತ್ಯಜಿಸಿ ರಾಜ್ಯವನ್ನು ಹೊಂದಬೇಕೆನ್ನುವ ಆಸೆ ಯನ್ನು ಮನಸ್ಸಿನಿಂದಲೂ ಪರಿತ್ಯಜಿಸಿ, ತಾಯಿಯಾದ ಕೌಸಲ್ಯಾದೇವಿಗೆ ನನ್ನನ್ನೊಪ್ಪಿಸಿದನು. ಆದರೆ ನಾನು ಮಾತ್ರ ಅಯೋಧ್ಯೆಯಲ್ಲಿರಲು ಇಷ್ಟ ಪಡದೇ ಅವನಿಗಿಂತಲೂ ಮೊದಲೇ ಅರಣ್ಯಕ್ಕೆ ಪ್ರಯಾಣಹೊರಟೆನು.

**ನ ಹಿ ಮೇ ತೇನ ಹೀನಾಯಾ ವಾಸಃ ಸ್ವರ್ಗೇಽಪಿ ರೋಚತೇ ॥೨೮॥**

ಅವನಿಲ್ಲದೇ ನನಗೆ ಸ್ವರ್ಗವಾಸವೂ ರುಚಿಸುವುದಿಲ್ಲ.

ಮಹಾಭಾಗ್ಯಶಾಲಿಯಾದ, ಮಿತ್ರರಿಗೆ ಸಂತೋಷವನ್ನುಂಟುಮಾಡುವ ಲಕ್ಷ್ಮಣನು ಅಣ್ಣನಾದ ಶ್ರೀರಾಮನನ್ನು ಅನುಸರಿಸಿ ಹೋಗುವ ಸಲುವಾಗಿ ಅವನಿಗಿಂತಲೂ ಮೊದಲೇ ದರ್ಭೆ ಮತ್ತು ನಾರುಮಡಿಗಳಿಂದ ಸಮಲಂಕೃತ ನಾಗಿ ಪ್ರಯಾಣಹೊರಟನು.

ಹೀಗೆ ದೃಢವ್ರತರಾದ ನಾವು ಮೂವರೂ ನಮ್ಮೆಲ್ಲರಿಗೂ ಸ್ವಾಮಿ ಯಾಗಿದ್ದ ದಶರಥಮಹಾರಾಜನ ಆದೇಶವನ್ನು ಗೌರವಿಸಿ ಹಿಂದೆಂದೂ ನೋಡದಿದ್ದ ಭಯಂಕರವಾದ ಅರಣ್ಯಕ್ಕೆ ಬಂದೆವು.

ದಂಡಕಾರಣ್ಯದಲ್ಲಿ ನಾವು ಮೂವರೂ ವಾಸಮಾಡುತ್ತಿದ್ದಾಗ ಮಹಾ

---

* ನ ಬ್ರೂಯಾತ್ಕಿಂಚಿದಪ್ರಿಯಮ್–ಎಂಬ ಪಾಠದ ಪ್ರಕಾರ 'ಅಪ್ರಿಯವಾದ ಮಾತನ್ನು ರಾಮನೆಂದಿಗೂ ಆಡುವವನಲ್ಲ.'

ಪರಾಕ್ರಮಿಯಾದ ಶ್ರೀರಾಮನ ಭಾರ್ಯೆಯಾದ ನನ್ನನ್ನು ದುರಾತ್ಮನಾದ ರಾವಣನು ಅಪಹರಿಸಿಕೊಂಡು ಬಂದು ಇಲ್ಲಿರಿಸಿರುವನು. ರಾವಣನು ನನಗೆ ಬದುಕಿರಲು ಎರಡು ಮಾಸಗಳ ಅವಧಿಯನ್ನು ಕೊಟ್ಟಿರುತ್ತಾನೆ. ಆ ಅವಧಿಯು ಕಳೆದೊಡನೆಯೇ ನಾನು ಈ ದೇಹವನ್ನು ಪರಿತ್ಯಜಿಸುವೆನು.”

ಒಒನೆಯ ಸರ್ಗವು ಮುಗಿಯಿತು.



## ಸೀತಾದೇವಿಯು ಹನುಮಂತನನ್ನು ಸಂದೇಹಿಸಿದುದು : ಹನುಮಂತನು ಸಮಾಧಾನಪಡಿಸುತ್ತಾ ಶ್ರೀರಾಮನ ಗುಣಗಳನ್ನು ವರ್ಣಿಸಿದುದು

**ತಸ್ಯಾಸ್ತದ್ವಚನಂ ಶ್ರುತ್ವಾ ಹನುಮಾನ್ಹರಿಪುಙ್ಗವಃ ।**
**ದುಃಖಾದ್ದುಃಖಾಭಿಭೂತಾಯಾಃ ಸಾನ್ತ್ವಮುತ್ತರಮಬ್ರವೀತ್ ॥**

ಸೀತಾದೇವಿಯು ಹೇಳಿದ ಆ ಮಾತುಗಳನ್ನು ಕೇಳಿ ಕಪಿಶ್ರೇಷ್ಠನಾದ ಹನುಮಂತನು ಅತ್ಯಂತಶೋಕಾವಿಷ್ಟಳಾಗಿದ್ದ ಸೀತಾದೇವಿಗೆ ಸಮಾಧಾನಕರ ವಾದ ಉತ್ತರವನ್ನು ಹೇಳಿದನು :

“ವೈದೇಹಿ! ಶ್ರೀರಾಮನು ಕುಶಲಿಯಾಗಿದ್ದಾನೆ ಮತ್ತು ನಿನ್ನ ಕುಶಲ ವನ್ನು ಕೇಳಿದ್ದಾನೆ. ಶ್ರೀರಾಮನ ಸಂದೇಶದಿಂದಲೇ ನಾನಿಲ್ಲಿಗೆ ಅವನ ದೂತನಾಗಿ ಬಂದಿರುವೆನು.

ಬ್ರಹ್ಮಾಸ್ತ್ರವನ್ನೂ ಸಕಲವೇದಗಳನ್ನೂ ತಿಳಿದಿರುವ, ವೇದವಿದರಲ್ಲಿ ಶ್ರೇಷ್ಠನಾದ ಶ್ರೀರಾಮನು ನಿನ್ನ ಕುಶಲವನ್ನು ಕೇಳಿದ್ದಾನೆ. ಮಹಾತೇಜಸ್ವಿ ಯಾದ, ನಿನ್ನ ಪತಿಗೆ ಅನುಚರನೂ ಪ್ರಿಯನೂ ಆಗಿರುವ, ನಿನ್ನ ಅಗಲುವಿಕೆ ಯಿಂದ ಶೋಕಸಂತಪ್ತನಾಗಿರುವ ಲಕ್ಷ್ಮಣನೂ ತಲೆಬಾಗಿ ನಿನಗೆ ಅಭಿವಾದನ ಮಾಡಿದ್ದಾನೆ.”

ನರಶ್ರೇಷ್ಠರಾದ ರಾಮ-ಲಕ್ಷ್ಮಣರು ಕುಶಲಿಗಳಾಗಿರುವರೆಂಬ ವಾರ್ತೆ ಯನ್ನು ಕೇಳಿ ಸೀತೆಯು ಹರ್ಷದಿಂದ ಸರ್ವಾಂಗಗಳಲ್ಲಿಯೂ ಪುಳಕಿತಳಾಗಿ ಹನುಮಂತನಿಗೆ ಹೇಳಿದಳು :

**ಕಲ್ಯಾಣೀ ಬತ ಗಾಥೇಯಂ ಲೌಕಿಕೀ ಪ್ರತಿಭಾತಿ ಮೇ ।**
**ಏತಿ ಜೀವನ್ತಮಾನನ್ದೋ ನರಂ ವರ್ಷಶತಾದಪಿ ॥೬॥**

'ಬದುಕಿರುವ ಮನುಷ್ಯನಿಗೆ ನೂರು ವರ್ಷಗಳು ಕಳೆದ ಮೇಲಾದರೂ ಆನಂದವು ಲಭಿಸಿಯೇ ತೀರುತ್ತದೆ'–ಎಂಬ ಶುಭಕರವಾದ ಲೋಕದ ಗಾದೆಯು ಸತ್ಯವೆಂದೇ ತೋರುತ್ತದೆ."

ಸೀತಾ-ಹನುಮಂತರ ಆ ಶುಭಸಮಾಗಮದಿಂದ ಅವರಿಬ್ಬರಲ್ಲಿ ಪರಸ್ಪರವಾಗಿ ಅದ್ಭುತವಾದ ಪ್ರೀತಿ-ವಿಶ್ವಾಸಗಳು ಮೂಡಿದುವು. ಪರಸ್ಪರ ವಾಗಿ ವಿಶ್ವಾಸವನ್ನು ಹೊಂದಿದ ಅವರಿಬ್ಬರೂ ಸಲ್ಲಾಪಿಸತೊಡಗಿದರು. ಸೀತೆಯು ಹೇಳಿದ ಮಾತನ್ನು ಕೇಳಿ ಅವಳಿಗೆ ತನ್ನ ವಿಷಯದಲ್ಲಿ ಮತ್ತು ತನ್ನ ಮಾತುಗಳಲ್ಲಿ ಸಂಪೂರ್ಣವಾದ ವಿಶ್ವಾಸವುಂಟಾಗಿರುವುದೆಂದು ಭಾವಿಸಿ ವಾಯುಪುತ್ರನಾದ ಹನುಮಂತನು ಶೋಕತಪ್ತಳಾಗಿದ್ದ ಸೀತಾದೇವಿಯ ಹತ್ತಿರಕ್ಕೆ ಹೋಗತೊಡಗಿದನು. ಹನುಮಂತನು ಸೀತೆಯ ಕಡೆಗೆ ಹೆಜ್ಜೆ ಗಳನ್ನಿಡುತ್ತಿದ್ದಂತೆಲ್ಲಾ ಸೀತಾದೇವಿಗೆ–'ಇವನೇನಾದರೂ ರಾವಣನೇ ಆಗಿರ ಬಹುದೇ?'–ಎಂಬ ಸಂಶಯವುಂಟಾಗುತ್ತಿದ್ದಿತು.

'ಅಯ್ಯೋ! ನಾನು ಇವನಿಗೆ ಎಲ್ಲ ವಿಷಯಗಳನ್ನೂ ಮರೆಮಾಚದೇ ಹೇಳಿ ಅನುಚಿತವಾದ ಕಾರ್ಯವನ್ನೇ ಮಾಡಿದಂತಾಯಿತು. ವೇಷವನ್ನು ಮರೆಸಿಕೊಂಡು ಆ ರಾವಣನೇ ಇಲ್ಲಿಗೆ ಆಗಮಿಸಿದ್ದಾನೆ.'

ದೋಷರಹಿತಳಾದ ಸೀತಾದೇವಿಯು ಹೀಗೆ ಭಾವಿಸಿ ಪುನಃ ಶೋಕ ಪೀಡಿತಳಾಗಿ ಶಿಂಶುಪಾವೃಕ್ಷದ ರೆಂಬೆಯನ್ನು ಬಿಟ್ಟು ನೆಲದ ಮೇಲೆ ಕುಳಿತಳು. ಮಹಾಬಾಹುವಾದ ಹನುಮಂತನು ಸೀತೆಯ ಸಮೀಪಕ್ಕೆ ಬಂದು ನಮಸ್ಕರಿ ಸಿದನು. ಆದರೆ ತನ್ನ ಸಮೀಪದಲ್ಲಿರುವವನು ಕಪಿವೇಷಧರನಾದ ರಾವಣ ನೆಂದೇ ಭಾವಿಸಿದ್ದ ಸೀತಾದೇವಿಯು ಭಯಭೀತಳಾಗಿ ಹನುಮಂತನನ್ನು ತಲೆಯೆತ್ತಿ ಪುನಃ ನೋಡಲೇ ಇಲ್ಲ. ಆದರೂ ತಲೆಬಾಗಿ ನಮಸ್ಕರಿಸುತ್ತಿದ್ದ ಹನುಮಂತನನ್ನು ನೋಡಿ ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಚಂದ್ರಮುಖಿ ಯಾದ ಮಧುರಕಂಠಧ್ವನಿಯುಳ್ಳವಳಾಗಿದ್ದ ಸೀತೆಯು ಹೇಳಿದಳು :

"ಒಂದು ವೇಳೆ ನೀನು ಮಾಯಾವಿಯಾದ ರಾವಣನೇ ಆಗಿರುವು

ದಾದರೆ–ಮಾಯಾವೇಷವನ್ನು ಧರಿಸಿ ನನ್ನನ್ನು ಸಂತಾಪಗೊಳಿಸಲೆಂದೇ ಬಂದಿರುವೆಯಾದರೆ–ಅದರಿಂದ ನಿನಗೆ ಖಂಡಿತವಾಗಿಯೂ ಒಳ್ಳೆಯದಾಗುವುದಿಲ್ಲ.

ನಿಜರೂಪವನ್ನು ಪರಿತ್ಯಜಿಸಿ ಪರಿವ್ರಾಜಕನ ರೂಪವನ್ನು ಧರಿಸಿ ಬಂದಿದ್ದ ಯಾವನನ್ನು ನಾನು ಜನಸ್ಥಾನದಲ್ಲಿ ಕಂಡಿದ್ದೆನೋ–ಆ ರಾವಣನೇ ನೀನು. ಮನಬಂದಂತೆ ರೂಪಗಳನ್ನು ಧರಿಸುವ ನಿಶಾಚರನೇ! ನಾನು ಉಪವಾಸದಿಂದ ಕೃಶಳಾಗಿರುವೆನು. ದೀನೆಯಾಗಿರುವೆನು. ಪತಿವಿರಹಶೋಕದಿಂದ ಸಂತಪ್ತಳಾಗಿರುವೆನು. ಇಂತಹ ನನ್ನನ್ನು ನೀನು ಪುನಃ ಸಂತಾಪಗೊಳಿಸುತ್ತಿರುವೆ. ಇದರಿಂದ ನಿನಗೆ ನಿಶ್ಚಯವಾಗಿಯೂ ಒಳ್ಳೆಯದಾಗುವುದಿಲ್ಲ.”

ಸೀತೆಯು ಕ್ಷಣಕಾಲ ಯೋಚಿಸಿ ಹೇಳಿದಳು :

“ಅಥವಾ ನಾನು ಹೀಗೆ ಸಂಶಯಿಸುತ್ತಿರುವುದು ಸರಿಯಿರಲಾರದು. ನೀನು ರಾವಣನಿರಲಾರೆ. ಏಕೆಂದರೆ : ನಿನ್ನ ದರ್ಶನದಿಂದ ನನ್ನ ಮನಸ್ಸಿನಲ್ಲಿ ಅನಿರ್ವಚನೀಯವಾದ ಪ್ರೀತಿಯು ಆವಿರ್ಭವಿಸಿದೆ. ಒಂದು ವೇಳೆ ನೀನು ನಿಜವಾಗಿಯೂ ಶ್ರೀರಾಮನ ದೂತನಾಗಿಯೇ ಬಂದಿರುವುದಾದರೆ ನಿನಗೆ ಮಂಗಳವಾಗಲಿ. ನಿನ್ನನ್ನು ಶ್ರೀರಾಮನ ವಿಷಯವಾಗಿ ಪ್ರಶ್ನಿಸುತ್ತೇನೆ. ಶ್ರೀರಾಮಕಥೆಯೇ ನನಗೆ ಅತ್ಯಂತಪ್ರಿಯವಾದುದು. ವಾನರನೇ! ಸೌಮ್ಯನೇ! ಪ್ರವಾಹದ ರಭಸವು ನದಿಯ ದಡಗಳನ್ನು ಕೊಚ್ಚಿಕೊಂಡು ಹೋಗುವಂತೆ–ನನ್ನ ಮನಸ್ಸನ್ನು ನೀನು ಅಪಹರಿಸಿಬಿಟ್ಟಿರುವೆ. ಪ್ರಿಯನಾದ ನನ್ನ ರಾಮನ ಗುಣಗಳನ್ನು ವರ್ಣಿಸಿ ಹೇಳು.

ಆಶ್ಚರ್ಯ! ನನಗಂತೂ ಈಗ ಸ್ವಪ್ನವೂ ಅತ್ಯಂತಸುಖಾವಹವೇ ಆಗಿದೆ. ರಾವಣನು ಬಹಳ ಹಿಂದೆಯೇ ನನ್ನನ್ನು ಅಪಹರಿಸಿಕೊಂಡು ಬಂದನು. ಅನೇಕದಿವಸಗಳು ಕಳೆದನಂತರ ಶ್ರೀರಾಮನು ಕಪಿಯೊಂದನ್ನು ನನ್ನ ಬಳಿಗೆ ಕಳುಹಿಸಿರುವುದನ್ನು ನಾನೀಗ ಕಾಣುತ್ತಿದ್ದೇನೆ. ಇದು ಸ್ವಪ್ನವೇ ಆಗಿದ್ದರೂ ಇದರಿಂದ ನನಗೆ ನೆಮ್ಮದಿಯುಂಟಾಗಿದೆ. ಇದೇ ಸ್ವಪ್ನದಲ್ಲಿಯೇ ನಾನು ಲಕ್ಷ್ಮಣಸಹಿತನಾದ ವೀರನಾದ ಶ್ರೀರಾಮನನ್ನು ನೋಡಿದೆನಾದರೆ ನಾನು ನನ್ನ ಜೀವಿತದಲ್ಲಿ ನಿರಾಶೆಯನ್ನು ಹೊಂದುವುದಿಲ್ಲ. ಆದರೆ ಸ್ವಪ್ನವೂ ನನ್ನ ವಿಷಯದಲ್ಲಿ ಮಾತ್ಸರ್ಯವನ್ನು ಹೊಂದಿದೆ. ಕಪಿಯನ್ನು ಕಾಣುತ್ತಿರುವಂತೆ ರಾಮ-ಲಕ್ಷ್ಮಣರನ್ನು ನಾನು ಕಾಣುತ್ತಿಲ್ಲ.

ಆದರೆ ನಾನೀಗ ಕಾಣುತ್ತಿರುವುದನ್ನು ಸ್ವಪ್ನವೆಂದೂ ಭಾವಿಸುವಂತಿಲ್ಲ. ಏಕೆಂದರೆ : ಕನಸಿನಲ್ಲಿ ಕಪಿಯನ್ನು ನೋಡಿದರೆ ಶ್ರೇಯಸ್ಸುಂಟಾಗುವುದಿಲ್ಲ. ಆದರೆ ನಾನೀಗ ಮನಃಪ್ರಸಾದರೂಪವಾದ ಅಭ್ಯುದಯವನ್ನು ಹೊಂದಿದ್ದೇನೆ."

ಪುನಃ ಭ್ರಾಂತಳಾಗಿ ಸೀತೆಯು ಹೇಳಿದಳು :

"ಈ ಆಂಜನೇಯನ ಸಮಾಗಮವೆಂಬುದು ನಿಜವಾಗಿಯೂ ಆಗಿರುವುದೇ? ಮನಸ್ಸಿನ ಭ್ರಾಂತಿಯಿಂದೇನಾದರೂ ನನಗೆ ಹೀಗೆ ಕಾಣುತ್ತಿರು ವುದೇ? ಪಿತ್ತಪ್ರಕೋಪದಿಂದೇನಾದರೂ ನನಗೆ ಈ ವಿಚಿತ್ರವಾದ ದೃಶ್ಯವು ಕಾಣುತ್ತಿರುವುದೇ? ಇದೂ ಒಂದು ಉನ್ಮಾದದ ವಿಕಾರವೇ? ಭೂತಾವೇಶ ವಾಗಿರುವುದೇ? ಬಿಸಿಲ್ಗುದುರೆಯಂತೆ ನಾನು ಈ ದೃಶ್ಯವನ್ನು ಕಾಣುತ್ತಿರುವೆನೇ?

ನನಗೆ ಚಿತ್ತಪಲ್ಲಟವಾಗಿರಲಾರದು. ತಬ್ಬಿಬ್ಬಾಗುವುದು ; ದಿಗ್ಭ್ರಮೆ ಗೊಳ್ಳುವುದು ಮುಂತಾದುವುಗಳು ಉನ್ಮಾದದ (ಚಿತ್ತಪಲ್ಲಟದ) ಲಕ್ಷಣಗಳಾಗಿರುತ್ತವೆ. ನನಗೆ ದೇಹದ ಮೇಲೆ ಪ್ರಜ್ಞೆಯು ಚೆನ್ನಾಗಿದೆ. ನಾನು ಶ್ರೀರಾಮನ ಭಾರ್ಯೆಯಾದ ಸೀತೆಯೆಂಬುದನ್ನು ಚೆನ್ನಾಗಿ ತಿಳಿಯುತ್ತಿದ್ದೇನೆ. ಉನ್ಮಾದ ದಲ್ಲಿ ತಾನಾರೆಂಬ ಅರಿವು ಇರುವುದಿಲ್ಲ. ಇವನನ್ನು ನಾನು ವನಚರನಾದ ಕಪಿಯೆಂದು ಗುರುತಿಸುತ್ತಿದ್ದೇನೆ."

ಹೀಗೆ ಸೀತಾದೇವಿಯು ತನ್ನ ಜಿಜ್ಞಾಸೆಯಲ್ಲಿ ಒಂದೊಂದಕ್ಕೂ ಇರುವ ಬಲಾಬಲಗಳನ್ನು ಸಂಪೂರ್ಣವಾಗಿ ವಿಚಾರಮಾಡಿದಳು. ರಾಕ್ಷಸರು ಇಚ್ಛೆ ಬಂದಂತೆ ರೂಪಗಳನ್ನು ಧರಿಸುವ ಸಾಮರ್ಥ್ಯವುಳ್ಳವರಾದುದರಿಂದ ರಾಮದೂತನಾದ ಹನುಮಂತನನ್ನು ರಾಕ್ಷಸರ ಅಧಿಪತಿಯಾದ ರಾವಣ ನೆಂದೇ ಭಾವಿಸಿದಳು. ತೆಳುವಾದ ಸೊಂಟದಿಂದ ಶೋಭಿಸುತ್ತಿದ್ದ, ಜನಕ ರಾಜಪುತ್ರಿಯು ಹೀಗೆ ನಿಶ್ಚಯಿಸಿ ವಾನರಶ್ರೇಷ್ಠನಾದ ಹನುಮಂತನೊಡನೆ ಯಾವ ಮಾತನ್ನೂ ಆಡಲಿಲ್ಲ.

ಸೀತೆಯು ತನ್ನನ್ನು ಮಾಯಾವಿಯಾದ ರಾಕ್ಷಸನೆಂದೇ ನಿಶ್ಚಯಿಸಿರುವ ಳೆಂಬುದನ್ನು ತಿಳಿದ ವಾಯುಪುತ್ರನಾದ ಹನುಮಂತನು ಕಿವಿಗಿಂಪಾಗುವ ಮಾತುಗಳಿಂದ ಸೀತಾದೇವಿಯನ್ನು ಹರ್ಷಗೊಳಿಸಿದನು :

“ಶ್ರೀರಾಮನು ಸೂರ್ಯನಂತೆ ಮಹಾತೇಜಸ್ವಿಯು. ಚಂದ್ರನಂತೆ ಲೋಕಕ್ಕೆ ಆಹ್ಲಾದವನ್ನುಂಟುಮಾಡುವವನು. ರಾಜಾಧಿರಾಜನಾದ ಕುಬೇರನಂತೆ ಸಕಲಲೋಕಗಳಿಗೂ ರಾಜನಾಗಲು ಅರ್ಹನಾಗಿರತಕ್ಕವನು. ಮಹಾಯಶಸ್ವಿಯಾದ ಶ್ರೀರಾಮನು ವಿಷ್ಣುವಿನಂತೆ ಪರಾಕ್ರಮಸಂಪನ್ನನು. ಸತ್ಯವಾದಿಯು. ದೇವಗುರುವಾದ ಬೃಹಸ್ಪತಿಯಂತೆ ಮಧುರವಾಗಿ ಮಾತನಾಡುವವನು. ರೂಪವಂತನು. ಸೌಭಾಗ್ಯಶಾಲಿಯು. ಶರೀರವನ್ನು ಧರಿಸಿರುವ ಮನ್ಮಥನಂತೆಯೇ ಸ್ಫುರದ್ರೂಪಿಯು. ಉಚಿತವಾದ ಸಮಯದಲ್ಲಿ ಕೋಪಗೊಳ್ಳುವವನು. ಸಮಯವರಿತು ಶತ್ರುಗಳನ್ನು ಸಂಹರಿಸುವವನು. ಲೋಕದಲ್ಲಿ ಸರ್ವಶ್ರೇಷ್ಠನಾದ ಮಹಾರಥನು. ಲೋಕವೇ ತನ್ನ ರಕ್ಷಣೆಗಾಗಿ ಮಹಾತ್ಮನಾದ ಶ್ರೀರಾಮನ ಬಾಹುಗಳ ಆಶ್ರಯವನ್ನು ಪಡೆದಿದೆ.

ರಾಘವನನ್ನು ಮಾಯಾಮೃಗದ ಮೂಲಕವಾಗಿ ಆಶ್ರಮದಿಂದ ಹೊರಹೋಗುವಂತೆ ಮಾಡಿ ಶೂನ್ಯವಾದ ಆಶ್ರಮದಲ್ಲಿದ್ದ ನಿನ್ನನ್ನು ಅಪಹರಿಸಿರುವವನ ದುಷ್ಕರ್ಮಕ್ಕೆ ಯಾವ ಫಲವು ಸಿಕ್ಕುವುದೆಂಬುದನ್ನು ನೀನೇ ಕಾಣಲಿರುವೆ. ಯುದ್ಧದಲ್ಲಿ ಕ್ರೋಧಪೂರ್ವಕವಾಗಿ ಬಿಡುವ ಅಗ್ನಿಸದೃಶವಾದ ಬಾಣಗಳಿಂದ ದುಷ್ಕರ್ಮಿಯಾದ ಆ ರಾವಣನನ್ನು ಯಾವ ಮಹಾವೀರನು ಅತಿಶೀಘ್ರವಾಗಿ ಸಂಹರಿಸುವನೋ–ಅಂತಹ ಶ್ರೀರಾಮನಿಂದಲೇ ಕಳುಹಿಸಲ್ಪಟ್ಟಿರುವ ನಾನು ಶ್ರೀರಾಮದೂತನಾಗಿ ನಿನ್ನ ಬಳಿಗೆ ಬಂದಿರುವೆನು.

ಪತ್ನಿಯ ವಿಯೋಗದಿಂದ ದುಃಖಪೀಡಿತನಾಗಿರುವ ಶ್ರೀರಾಮನು ನಿನ್ನ ಕುಶಲವನ್ನು ವಿಚಾರಿಸಿದ್ದಾನೆ. ಸುಮಿತ್ರಾನಂದವರ್ಧನನಾದ, ಮಹಾತೇಜಸ್ವಿಯಾದ, ಮಹಾಬಾಹುವಾದ ಲಕ್ಷ್ಮಣನೂ ನಿನಗೆ ಅಭಿವಾದನಮಾಡಿ ನಿನ್ನ ಕುಶಲವನ್ನು ವಿಚಾರಿಸಿದ್ದಾನೆ. ವಾನರಶ್ರೇಷ್ಠರಿಗೆ ರಾಜನಾದ ಸುಗ್ರೀವನೆಂಬ ವಾನರನು ಶ್ರೀರಾಮನ ಗೆಳೆಯ. ಅವನೂ ನಿನ್ನ ಕುಶಲವನ್ನು ವಿಚಾರಿಸಿದ್ದಾನೆ. ಲಕ್ಷ್ಮಣ-ಸುಗ್ರೀವರಿಂದ ಕೂಡಿರುವ ಶ್ರೀರಾಮನು ನಿತ್ಯವೂ ನಿನ್ನನ್ನು ನೆನಪುಮಾಡಿಕೊಳ್ಳುತ್ತಲೇ ಇರುವನು. ವೈದೇಹಿ! ನೀನು ರಾಕ್ಷಸಿಯರ ವಶದಲ್ಲಿದ್ದರೂ ಅದೃಷ್ಟವಿಶೇಷದಿಂದ ಇನ್ನೂ ಜೀವಿಸಿರುವೆ. ನೀನು ಬಹಳ ಶೀಘ್ರವಾಗಿಯೇ ಶ್ರೀರಾಮನನ್ನೂ ಮಹಾರಥನಾದ ಲಕ್ಷ್ಮಣನನ್ನೂ ಕಾಣಲಿರುವೆ. ಕೋಟಿ-ಕೋಟಿ ವಾನರರ ಮಧ್ಯದಲ್ಲಿರುವ ಓಜಸ್ವಿಯಾದ

ಸುಗ್ರೀವನನ್ನೂ ಕಾಣಲಿರುವೆ. ನಾನು ಹನುಮಂತನೆಂಬ ಹೆಸರಿನ ವಾನರನು. ಸುಗ್ರೀವನ ಮಂತ್ರಿಯು. ಮಹಾಸಾಗರವನ್ನು ದಾಟಿ ದುರಾತ್ಮನಾದ ರಾವಣನ ತಲೆಯನ್ನು ಮೆಟ್ಟಿ ಲಂಕಾಪಟ್ಟಣವನ್ನು ಪ್ರವೇಶಿಸಿದೆನು. ನನ್ನಲ್ಲಿರುವ ಪರಾಕ್ರಮದ ಮೇಲೆ ಭರವಸೆಯನ್ನಿಟ್ಟು ನಿನ್ನನ್ನು ನೋಡುವ ಸಲುವಾಗಿ ಇಲ್ಲಿಗೆ ಬಂದಿರುವೆನು. ನೀನು ಭಾವಿಸುತ್ತಿರುವಂತೆ ನಾನು ರಾವಣನಲ್ಲ. ಸಂದೇಹವನ್ನು ದೂರಮಾಡು. ನನ್ನ ಮಾತುಗಳಲ್ಲಿ ನಂಬಿಕೆಯನ್ನಿಡು."

ಮೂವತ್ತನಾಲ್ಕನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೩೫ನೆಯ ಸರ್ಗ

## ಸೀತಾದೇವಿಯ ಪ್ರಶ್ನೆಗಳಿಗೆ ಶ್ರೀರಾಮನ ಶರೀರದಲ್ಲಿದ್ದ ಶುಭಲಕ್ಷಣಗಳನ್ನು ಹನುಮಂತನು ವಿವರಿಸಿ ಹೇಳಿದುದು : ನರ-ವಾನರರ ಮೈತ್ರಿಯ ಪ್ರಸಂಗವನ್ನೂ ಕೇಳಿದನಂತರ ಸೀತಾದೇವಿಗೆ ಹನುಮಂತನ ಮಾತುಗಳಲ್ಲಿ ವಿಶ್ವಾಸವು ಹುಟ್ಟಿದುದು

**ತಾಂ ತು ರಾಮಕಥಾಂ ಶ್ರುತ್ವಾ ವೈದೇಹೀ ವಾನರರ್ಷಭಾತ್ ।**
**ಉವಾಚ ವಚನಂ ಸಾನ್ತ್ವಮಿದಂ ಮಧುರಯಾ ಗಿರಾ ॥೧॥**

ವೈದೇಹಿಯು ವಾನರಶ್ರೇಷ್ಠನಾದ ಹನುಮಂತನಿಂದ ಶ್ರೀರಾಮನ ಕಥೆಯನ್ನು ಕೇಳಿದನಂತರ ಮಧುರವಾದ ಧ್ವನಿಯಿಂದ ಸಮಾಧಾನಕರವಾದ ಮಾತನ್ನು ಹೇಳಿದಳು :

"ಹನುಮಂತನೇ! ಶ್ರೀರಾಮನೊಡನೆ ಸಮಾಗಮವು ನಿನಗೆಲ್ಲಾಯಿತು? ಲಕ್ಷ್ಮಣನ ಪರಿಚಯವು ನಿನಗೆ ಹೇಗಾಯಿತು? ನರ-ವಾನರರು ಸೇರಿಕೊಂಡಿದ್ದು ಹೇಗೆ? ಶ್ರೀರಾಮನ ಶರೀರದಲ್ಲಿ ಯಾವ ಯಾವ ಚಿಹ್ನೆಗಳಿವೆ? ಲಕ್ಷ್ಮಣನ ಶರೀರದಲ್ಲಿರುವ ಶುಭಚಿಹ್ನೆಗಳು ಯಾವುವು? ನೀನು ಈ ವಿಷಯವನ್ನು ವಿವರಿಸಿ ಹೇಳಿದರೆ ನೀನು ರಾಮದೂತನೆಂಬ ಪೂರ್ಣ ವಿಶ್ವಾಸವುಂಟಾಗಿ ನನ್ನ ಶೋಕವು ದೂರವಾದೀತು. ರಾಮ-ಲಕ್ಷ್ಮಣರ

ಅವಯವಸನ್ನಿವೇಶಗಳು ಹೇಗಿವೆ? ಅವರ ರೂಪ-ಲಕ್ಷಣಗಳು ಹೇಗಿವೆ? ಅವರ ತೊಡೆಗಳೂ ತೋಳುಗಳೂ ಹೇಗಿವೆ?–ಈ ಎಲ್ಲವನ್ನೂ ವಿವರಿಸಿ ಹೇಳು."

ವೈದೇಹಿಯ ಪ್ರಶ್ನೆಗಳಿಗೆ ವಾಯುಪುತ್ರನಾದ ಹನುಮಂತನು ಶ್ರೀರಾಮನ ರೂಪ-ಲಕ್ಷಣಗಳನ್ನು ಯಥಾವತ್ತಾಗಿ ವರ್ಣಿಸತೊಡಗಿದನು :

"ಕಮಲಪತ್ರಾಕ್ಷಿಯೇ! ವೈದೇಹಿ! ಸೌಭಾಗ್ಯವಶದಿಂದ ಪತಿಯ ಮತ್ತು ಲಕ್ಷ್ಮಣನ ಅವಯವಸನ್ನಿವೇಶಗಳನ್ನು ತಿಳಿದುಕೊಂಡಿರುವ ನೀನು ನನ್ನನ್ನು ರಾಮದೂತನೆಂಬುದನ್ನು ಖಚಿತಪಡಿಸಿಕೊಳ್ಳಲು ಈ ವಿಷಯವಾಗಿ ಪ್ರಶ್ನಿಸುತ್ತಿರುವೆ. ನೀನು ತಿಳಿದುಕೊಂಡಿರುವುದನ್ನೇ ನಾನು ನಿನಗೆ ಯಥಾ ವತ್ತಾಗಿ ಹೇಳಿದರೆ ನನ್ನ ವಿಷಯದಲ್ಲಿ ನಿನಗೆ ವಿಶ್ವಾಸ ಹುಟ್ಟುವುದು ಸಹಜ ವಾಗಿಯೇ ಇದೆ. ವಿಶಾಲಾಕ್ಷಿಯೇ! ನಾನು ಗಮನಿಸಿರುವಂತೆ ರಾಮ-ಲಕ್ಷ್ಮಣರ ಶರೀರಗಳಲ್ಲಿರುವ ಶುಭಚಿಹ್ನೆಗಳನ್ನು ಹೇಳುವೆನು ; ಕೇಳು.

ಜನಕಪುತ್ರಿಯೇ! ಶ್ರೀರಾಮನು ಕಮಲಪತ್ರಾಕ್ಷನು, ಪೂರ್ಣಚಂದ್ರ ಸದೃಶವಾದ ಮುಖವುಳ್ಳವನು, ರೂಪವಂತನು, ಸೌಜನ್ಯಸಂಪನ್ನನು. ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿರುವನು. ಕ್ಷಮೆಯಲ್ಲಿ ಪೃಥ್ವಿಗೆ ಸಮಾನನು. ಬುದ್ಧಿಯಲ್ಲಿ ಬೃಹಸ್ಪತಿಗೆ ಅನುರೂಪನು. ಇಂದ್ರನ ಯಶಸ್ಸಿಗೆ ಅನುರೂಪವಾದ ಯಶಸ್ಸುಳ್ಳವನು. ಪರಂತಪನಾದ ಶ್ರೀರಾಮನು ಜೀವಲೋಕಕ್ಕೇ ರಕ್ಷಕನು. ಆಶ್ರಿತರಾದ ಸ್ವಜನರ ರಕ್ಷಕನು. ತನ್ನ ಚಾರಿತ್ರ್ಯದ ರಕ್ಷಕನು. ಅಂತೆಯೇ ಧರ್ಮದ ರಕ್ಷಕನೂ ಆಗಿರುವನು. ಶ್ರೀರಾಮನು ಚಾತುರ್ವರ್ಣ್ಯಧರ್ಮಗಳ ರಕ್ಷಕನು. ನಾಲ್ಕು ವರ್ಣಗಳ ಲ್ಲಿಯೂ ಇರುವ ಪ್ರಜೆಗಳ ರಕ್ಷಕನು. ಲೋಕಮರ್ಯಾದೆಯನ್ನು ರಕ್ಷಿಸು ವವನು. ವರ್ಣಾಶ್ರಮಧರ್ಮಗಳಂತೆ ನಡೆದುಕೊಳ್ಳುವವನು. ಪ್ರಜೆಗಳನ್ನು ವರ್ಣಾಶ್ರಮಧರ್ಮಗಳಿಗೆ ಅನುಸಾರವಾಗಿ ನಡೆಯುವಂತೆ ಶಾಸನಮಾಡ ತಕ್ಕವನು. ತೇಜಸ್ವಿಯು. ಪ್ರಜೆಗಳಿಂದ ನಿತ್ಯವೂ ಪೂಜಿಸಲ್ಪಡತಕ್ಕವನು. ಬ್ರಹ್ಮಚರ್ಯವ್ರತದಲ್ಲಿರುವವನು.* ಸತ್ಪುರುಷರು ಮಾಡಿದ ಉಪಕಾರ

---

* ಬ್ರಹ್ಮಚರ್ಯವ್ರತೇ ಸ್ಥಿತಃ– ಗೃಹಸ್ಥನಾಗಿರುವಾಗ ' ಬ್ರಹ್ಮಚರ್ಯದಲ್ಲಿರುವುದು ಹೇಗೆ? ತನ್ನ ಪತ್ನಿಯಲ್ಲಿ ಮಾತ್ರವೇ ರತಿಯುಳ್ಳವನಾಗಿದ್ದು ಋತುಕಾಲಗಳಲ್ಲಿ ಮಾತ್ರವೇ

ವನ್ನು ಸದಾ ಸ್ಮರಿಸುವವನು. ಪ್ರಜೆಗಳ ಕ್ಷೇಮಾಭ್ಯುದಯಗಳಿಗಾಗಿ ಮಾಡಿದ ಕಾರ್ಯವನ್ನು ಯಾವಾಗ ಪ್ರಕಟಿಸಬೇಕೆಂಬುದನ್ನು ತಿಳಿದಿರತಕ್ಕವನು. ರಾಜನೀತಿಯಲ್ಲಿ ಚೆನ್ನಾಗಿ ಪಳಗಿರುವವನು. ಬ್ರಾಹ್ಮಣಸೇವಿಯು. ಜ್ಞಾನಿಯು. ಶೀಲಸಂಪನ್ನನು. ವಿನಯಶೀಲನು. ಶತ್ರುತಾಪಕನು. ಯಜುರ್ವೇದದಲ್ಲಿ ಸುಶಿಕ್ಷಿತನಾದವನು. ವೇದವಿದರಿಂದ ಪೂಜಿಸಲ್ಪಡುವವನು. ಧನುರ್ವೇದದಲ್ಲಿಯೂ, ಆಯುರ್ವೇದದಲ್ಲಿಯೂ, ಶಿಕ್ಷಾ-ವ್ಯಾಕರಣಾದಿ ವೇದಾಂಗಗಳಲ್ಲಿಯೂ ಪರಿಣತನು.

ರಾಮನೆಂಬ ಹೆಸರಿನಿಂದ ವಿಖ್ಯಾತನಾಗಿರುವ ನಿನ್ನ ಪತಿಯು ವಿಸ್ತಾರವಾದ ಹೆಗಲುಗಳುಳ್ಳವನು. ಮಹಾಬಾಹುವು. ಶಂಖದಂತೆ ಕುತ್ತಿಗೆಯುಳ್ಳವನು. ಕತ್ತಿನಲ್ಲಿ ಶಂಖದಂತೆ ಮೂರು ಗೆರೆಗಳುಳ್ಳವನು. ಸುಂದರವಾದ ಮುಖವುಳ್ಳವನು. ಮುಚ್ಚಿಹೋದ ಜತ್ರುವುಳ್ಳವನು.* ಅವನಿಗೆ ಸುಂದರವಾಗಿಯೂ ಮತ್ತು ಕೆಂಪಾಗಿಯೂ ಇರುವ ಕಣ್ಣುಗಳಿವೆ. ಅವನ ಕಂಠಧ್ವನಿಯು ದುಂದುಭಿಯ ಶಬ್ದದಂತೆ ಅತ್ಯಂತಗಂಭೀರವಾಗಿದೆ. ದೇಹದ ಕಾಂತಿಯು ಥಳಥಳಿಸುತ್ತಿದೆ. ಶ್ರೀರಾಮನು ಮಹಾಪ್ರತಾಪಶಾಲಿಯು.

---

ಭಾರ್ಯಾಸಮಾಗಮವನ್ನು ಮಾಡುತ್ತಿದ್ದರೆ ಅದು ಬ್ರಹ್ಮಚರ್ಯವೆನಿಸಿಕೊಳ್ಳುತ್ತದೆ. ಸ್ವದಾತುಷ್ಟಸ್ತ್ವೃತುಕಾಲಗಾಮೀ–ಮ. ಭಾ. ಶಾಂತಿಪರ್ವ. **ಷೋಡಶರ್ತುನಿಶಾಃ ಸ್ತ್ರೀಣಾಂ ತಸ್ಮಿನ್ಯುಗ್ಮಾಸು ಸಂವಿಶೇತ್ । ಬ್ರಹ್ಮಚಾರ್ಯೇವ ಪರ್ವಾದ್ಯಾಶ್ಚತಸ್ರಶ್ಚ ವಿವರ್ಜಯೇತ್ ॥** ಪರ್ವತಿಥಿಗಳನ್ನು ಬಿಟ್ಟು ಪತ್ನಿಯು ಋತುಸ್ನಾತೆಯಾದನಂತರ ಹದಿನಾರು ರಾತ್ರಿಗಳಲ್ಲಿ ಸಮಾಗಮಮಾಡಬಹುದು. ಸಮದಿನಗಳಲ್ಲಿ ಸಮಾಗಮಮಾಡಿದರೆ ಪುತ್ರಪ್ರಾಪ್ತಿಗೂ ವಿಷಮದಿನಗಳಲ್ಲಿ ಸಮಾಗಮಮಾಡಿದರೆ ಸ್ತ್ರೀಶಿಶುವಿನ ಪ್ರಾಪ್ತಿಗೂ ಸಹಾಯವಾಗುತ್ತದೆ. **ಗೃಹಸ್ಥಸ್ಯ ಬ್ರಹ್ಮಚರ್ಯಂ ನಾಮ ಋತೋರನ್ಯತ್ರ ಸ್ತ್ರೀಸಂಗಮತ್ಯಾಗಃ ॥** ಋತುಕಾಲವಲ್ಲದೇ ಅನ್ಯದಿವಸಗಳಲ್ಲಿ ಸ್ತ್ರೀಸಮಾಗಮ ಮಾಡದಿರುವುದೇ ಗೃಹಸ್ಥರಿಗೆ ಬ್ರಹ್ಮಚರ್ಯವ್ರತವಾಗಿದೆ. (೨) ಗೃಹಸ್ಥನಾಗಿದ್ದರೂ ಪುತ್ರಪ್ರಾಪ್ತಿಯ ನಂತರ ಅಸ್ಖಲಿತರೇತಸ್ಕನಾಗಿದ್ದರೆ ಅಂತಹವನು ಬ್ರಹ್ಮಚಾರೀ ಎನಿಸಿಕೊಳ್ಳುತ್ತಾನೆ. **ಗಾರ್ಹಸ್ಥ್ಯೇಽಪ್ಯಸ್ಖಲಿತರೇತಾಃ ।**

* ಜತ್ರುಃ = ಭುಜ-ಶಿರಸ್ಸುಗಳ ಸಂಧಿಸ್ಥಳ.

ಹೆಚ್ಚು-ಕಡಿಮೆಗಳಿಲ್ಲದೆ ಅತ್ಯಂತಸುಂದರವಾಗಿ ವಿಭಾಗಿಸಲ್ಪಟ್ಟ ಅವಯವಗಳುಳ್ಳವನು. ಶ್ಯಾಮಲವರ್ಣನು.

**ತ್ರಿಸ್ಥಿರಸ್ತ್ರಿಪ್ರಲಮ್ಬಶ್ಚ ತ್ರಿಸಮಸ್ತ್ರಿಷು ಚೋನ್ನತಃ ।**
**ತ್ರಿತಾಮ್ರಸ್ತ್ರಿಷು ಚ ಸ್ನಿಗ್ಧೋ ಗಮ್ಭೀರಸ್ತ್ರಿಷು ನಿತ್ಯಶಃ ॥೧೭॥**

ಮೂರು ಸ್ಥಾನಗಳಲ್ಲಿ ಸ್ಥಿರವಾಗಿರತಕ್ಕವನು. ದೀರ್ಘವಾದ ಮೂರು ಅಂಗಗಳುಳ್ಳವನು. ಸಮಾನವಾದ ಮೂರು ಅವಯವಗಳನ್ನೂ, ಎತ್ತರವಾದ ಮೂರು ಅವಯವಗಳನ್ನೂ, ಕೆಂಪಾದ ಮೂರು ಅವಯವಗಳನ್ನೂ, ನುಣುಪಾದ ಮೂರು ಅವಯವಗಳನ್ನೂ, ಗಂಭೀರವಾದ ಮೂರು ಅವಯವಗಳನ್ನೂ ಶ್ರೀರಾಮನು ಹೊಂದಿರುತ್ತಾನೆ.

(**ತ್ರಿಸ್ಥಿರಃ = ತ್ರಿಷು ಸ್ಥಾನೇಷು ಸ್ಥಿರಃ**–ಮೂರು ಸ್ಥಾನಗಳಲ್ಲಿ ಸ್ಥಿರವಾಗಿರುವವನು. **ಉರಶ್ಚ ಮಣಿಬನ್ಧಶ್ಚ ಮುಷ್ಟಿಶ್ಚ ನೃಪತೇಃ ಸ್ಥಿರಾಃ** ( ಸಾಮುದ್ರಿಕಶಾಸ್ತ್ರ ) ರಾಜನಾದವನಿಗೆ ಎದೆ, ಮಣಿಕಟ್ಟು ( ಹಸ್ತದ ಮೂಲಭಾಗ ) ಮತ್ತು ಮುಷ್ಟಿಗಳು ಸ್ಥಿರವಾಗಿರಬೇಕು. ಶ್ರೀರಾಮನಿಗೂ ಹಾಗೆಯೇ ಇದೆ.

**ತ್ರಿಪ್ರಲಮ್ಬಃ = ತ್ರಿಷು-ಪ್ರಲಮ್ಬಃ** –ದೀರ್ಘವಾದ ಮೂರು ಅಂಗಗಳನ್ನು ಹೊಂದಿರುವವನು. **ದೀರ್ಘಭ್ರೂಬಾಹುಮುಷ್ಕಸ್ತು ಚಿರಜೀವೀ ಧನೀ ನರಃ ॥** ನೀಳವಾದ ಹುಬ್ಬುಗಳು, ತೋಳುಗಳು ಮತ್ತು ಅಂಡಕೋಶಗಳುಳ್ಳವನು ಚಿರಂಜೀವಿಯೂ ಧನಿಕನೂ ಆಗುತ್ತಾನೆ. ( ಸಾಮುದ್ರಿಕಶಾಸ್ತ್ರ ) ಶ್ರೀರಾಮನಿಗೂ ಹುಬ್ಬುಗಳೂ, ತೋಳುಗಳೂ, ಅಂಡಕೋಶಗಳೂ ದೀರ್ಘವಾಗಿಯೇ ಇದ್ದುವು. **ತ್ರಯಶ್ಚ ಯಸ್ಯ ವಿದ್ಯನ್ತೇ ಪ್ರಲಮ್ಬಾ ಮೇಢ್ರಬಾಹವಃ**–ಪುರುಷನ ಜನನೇಂದ್ರಿಯ ಮತ್ತು ಎರಡು ತೋಳುಗಳು ಯಾವನಿಗೆ ನೀಳವಾಗಿರುವುವು ಅವನು ಧನಿಯೂ ಚಿರಂಜೀವಿಯೂ ಆಗುತ್ತಾನೆ. ಶ್ರೀರಾಮನಿಗೂ ಈ ಅವಯವಗಳು ದೀರ್ಘವಾಗಿಯೇ ಇದ್ದುವು.

**ತ್ರಿಸಮಃ = ತ್ರಿಷು ಸಮಃ** –ಮೂರು ಅವಯವಗಳಲ್ಲಿ ಸಮನಾಗಿರುವವನು. **ಕೇಶಾಗ್ರಂ ವೃಷಣಂ ಜಾನು ಸಮಾ ಯಸ್ಯ ಸ ಭೂಪತಿಃ** – ತಲೆಗೂದಲಿನ ಅಗ್ರಭಾಗಗಳು, ವೃಷಣ ಮತ್ತು ಮೊಣಕಾಲುಗಳು ಯಾವನಿಗೆ ಸಮವಾಗಿರುವುವೋ ಅವನು ಭೂಪತಿಯಾಗುತ್ತಾನೆ. ಶ್ರೀರಾಮನಿಗೆ ಈ ಮೂರೂ ಸಮನಾಗಿವೆ.

**ತ್ರಿಷು ಚೋನ್ನತಃ** = ಎತ್ತರವಾದ ಮೂರು ಅವಯವಗಳುಳ್ಳವನು. **ನಾಭ್ಯನ್ತಃ ಕುಕ್ಷಿವಕ್ಷೋಭಿರುನ್ನತೈಃ ಕ್ಷಿತಿಪೋ ಭವೇತ್ ।** ನಾಭಿ, ಹೊಟ್ಟೆ ಮತ್ತು ಎದೆ–ಇವುಗಳು ಉನ್ನತವಾಗಿದ್ದರೆ ಅಂತಹವನು ರಾಜನಾಗುತ್ತಾನೆ. ಶ್ರೀರಾಮನಿಗೂ ನಾಭಿ, ಹೊಟ್ಟೆ ಮತ್ತು ವಕ್ಷಸ್ಥಳಗಳು ಉನ್ನತವಾಗಿದ್ದುವು.

**ತ್ರಿತಾಮ್ರಃ = ತ್ರಿಷು ತಾಮ್ರಃ** –ಮೂರು ಅವಯವಗಳಲ್ಲಿ ಕೆಂಪುಬಣ್ಣವುಳ್ಳವನು. **ನೇತ್ರಾನ್ತನಖಪಾಣ್ಯಂಘ್ರಿತಲೈಸ್ತಾಮ್ರೈಸ್ತ್ರಿಭಿಃ ಸುಖೀ**–ನೇತ್ರಾಂತಗಳು, ಉಗುರುಗಳು ಮತ್ತು ಅಂಗೈ-ಅಂಗಾಲುಗಳು ಕೆಂಪಗಿದ್ದರೆ ಸುಖಿಯಾಗಿರುತ್ತಾನೆ. ಶ್ರೀರಾಮನಿಗೆ ಇವು ಕೆಂಪಾಗಿವೆ.

**ತ್ರಿಷು ಸ್ನಿಗ್ಧಃ** = ನುಣುಪಾದ (ಮನೋಹರವಾದ) ಮೂರು ಅಂಗಗಳುಳ್ಳವನು. **ಸ್ನಿಗ್ಧಾ ಭವನ್ತಿ ವೈ ಯೇಷಾಂ ಪಾದರೇಖಾಃ ಶಿರೋರುಹಾಃ। ತಥಾ ಲಿಙ್ಗಮಣಿಸ್ತೇಷಾಂ ಮಹಾಭಾಗ್ಯಂ ವಿನಿರ್ದಿಶೇತ್ ॥** ಪಾದದ ರೇಖೆಗಳು, ತಲೆಕೂದಲುಗಳು ಮತ್ತು ಲಿಂಗಮಣಿ–ಈ ಮೂರೂ ನುಣುಪಾಗಿರುವವರು ಮಹಾಭಾಗ್ಯಶಾಲಿಯಾಗುತ್ತಾರೆ. ಶ್ರೀರಾಮನಿಗೆ ಈ ಮೂರೂ ನುಣುಪಾಗಿವೆ.

**ತ್ರಿಷು ಗಮ್ಭೀರಃ** = ಮೂರರಲ್ಲಿ ಗಾಂಭೀರ್ಯವುಳ್ಳವನು. **ಸ್ವರೇ ಗತೌ ಚ ನಾಭೌ ಚ ಗಮ್ಭೀರಸ್ತ್ರಿಷು ಶಸ್ಯತೇ ॥** ಗಂಭೀರವಾದ ಧ್ವನಿ, ಗಂಭೀರವಾದ ನಡಿಗೆ ಮತ್ತು ಆಳವಾದ ನಾಭಿ ಈ ಮೂರೂ ಪ್ರಶಸ್ತವೆಂದು ಹೇಳುತ್ತಾರೆ. ಶ್ರೀರಾಮನೂ ಗಂಭೀರವಾದ ಧ್ವನಿಯುಳ್ಳವನು. ಗಂಭೀರವಾದ (ಆಕರ್ಷಕವಾದ) ನಡಿಗೆಯುಳ್ಳವನು. ಅವನ ನಾಭಿಯೂ ಆಳವಾಗಿದೆ.)

**ತ್ರಿವಲೀವಾಂಸ್ತ್ರ್ಯವನತಃ ಚತುರ್ವ್ಯಙ್ಗಸ್ತ್ರಿಶೀರ್ಷವಾನ್ ।**
**ಚತುಷ್ಕಲಶ್ಚತುರ್ಲೇಖಃಚತುಷ್ಕಿಷ್ಕುಶ್ಚತುಃಸಮಃ ॥೧೮॥**

ಶ್ರೀರಾಮನು ತ್ರಿವಳಿಗಳುಳ್ಳವನು. ಅವನಿಗೆ ಮೂರು ತಗ್ಗಾದ ಅಥವಾ ಬಗ್ಗಿರುವ ಅವಯವಗಳಿವೆ. ಹ್ರಸ್ವವಾದ ನಾಲ್ಕು ಅವಯವಗಳಿವೆ. ತಲೆಯಲ್ಲಿ ಮೂರು ಸುಳಿಗಳಿವೆ. ನಾಲ್ಕು ರೇಖೆಗಳಿವೆ. ಹಣೆಯಲ್ಲಿ ನಾಲ್ಕು ಗೆರೆಗಳಿವೆ. ಅವನು ನಾಲ್ಕು ಮೊಳಗಳ ಪ್ರಮಾಣವುಳ್ಳವನು. ಸಮಾನವಾದ ನಾಲ್ಕು ಅವಯವಗಳನ್ನು ಹೊಂದಿದ್ದಾನೆ.

(**ತ್ರಿವಲೀವಾನ್** = ಹೊಟ್ಟೆಯಲ್ಲಿ ಅಥವಾ ಕುತ್ತಿಗೆಯಲ್ಲಿ ಮೂರು ಗೆರೆಗಳುಳ್ಳವನು. ಗಾರ್ಗರು ತ್ರಿವಲಿಯ ಲಕ್ಷಣವನ್ನು ಹೀಗೆ ಹೇಳಿದ್ದಾರೆ : **ಸ್ಥಿರಾ ತ್ರಿರೇಖಾ ಸುಭಗೋಪಪನ್ನಾ ಸ್ನಿಗ್ಧಾ ಸುಮಾಂಸೋಪಚಿತಾ ಸುವೃತ್ತಾ। ನ ಚಾತಿದೀರ್ಘಾಚತುರಙ್ಗುಲಾ ಚ ಗ್ರೀವಾ ಸುದೀರ್ಘಾ ಭವತೀಹ ಧನ್ಯಾ ॥**

**ತ್ರ್ಯವನತಃ**ಮೂರು ಅವಯವಗಳು ಯಾವನಿಗೆ ತಗ್ಗಿರುವುವೋ ಅಥವಾ ಬಗ್ಗಿರು ವುವೋ ಅವನು. ಶ್ರೀರಾಮನ ಪಾದತಲಗಳು ತಗ್ಗಾಗಿವೆ. ಸ್ತನಗಳ ತೊಟ್ಟು ಕೆಳಕ್ಕೆ ಬಾಗಿಕೊಂಡಿದೆ. ಕಾಲಿನಲ್ಲಿರುವ ರೇಖೆಗಳು ಕೆಳಮುಖವಾಗಿವೆ. **ಪೀನೋಚಿತೈರ್ನಿಮ್ನೈಃ ಕ್ಷಿತಿಪತಯ ಶ್ಚೂಚುಕೈಃ ಸ್ತನೈಃ ಸುಖಿನಃ। ಸ್ನಿಗ್ಧಾ ನಿಮ್ನಾ ರೇಖಾ ಧನಿನಾಂ ತದ್ವ್ಯತ್ಯಯೇನ ನಿಃಸ್ವಾನಾಮ್ ॥**

**ಚತುರ್ವ್ಯಙ್ಗಃ** = ನಾಲ್ಕು ಹ್ರಸ್ವವಾದ ಅಂಗವುಳ್ಳವನು. ಶ್ರೀರಾಮನ ಕುತ್ತಿಗೆ, ಜನನೇಂದ್ರಿಯ, ಪೃಷ್ಠ ಮತ್ತು ಮೊಣಕಾಲುಗಳು ಹ್ರಸ್ವವಾಗಿವೆ. ಇದು ಮಹಾಪುರುಷನ ಲಕ್ಷಣ. **ಗ್ರೀವಾ ಪ್ರಜನನಂ ಪೃಷ್ಠಂ ಹ್ರಸ್ವಂ ಜಙ್ಘಾ ಚ ಪೂಜ್ಯತೇ ॥**

ತ್ರಿಶೀರ್ಷವಾನ್ ಮೂರು ಲಕ್ಷಣಗಳಿಂದ ( ಸುಳಿಗಳಿಂದ ) ಕೂಡಿರುವ ತಲೆಯುಳ್ಳವನು. **ಆವರ್ತತ್ರಯರುಚಿರಂ ಯಸ್ಯ ಶಿರಃ ಸ ಕ್ಷಿತಿಭೃತಾಂ ನೇತಾ ॥** ತಲೆಯಲ್ಲಿ ಮೂರು ಸುಳಿಗಳುಳ್ಳವನು. ಚಕ್ರವರ್ತಿಯಾಗುತ್ತಾನೆ. **ಸಮಾವೃತ್ತಶಿರಾಶ್ಚೈವ ಛತ್ರಾಕಾರಶಿರಾಸ್ತಥಾ । ಏಕಚ್ಛತ್ರಾಂ ಮಹೀಂ ಭುಙ್ಕ್ತೇ ದೀರ್ಘಮಾಯುಶ್ಚ ವಿನ್ದತಿ ॥** ದುಂಡಾಗಿರುವ ತಲೆಯಿಂದ ಕೂಡಿರುವವನೂ, ಛತ್ರಿಯ ಆಕಾರದ ತಲೆಯಿಂದ ಕೂಡಿರುವವನೂ ಏಕಚ್ಛತ್ರಾಧಿಪತಿಯಾಗಿ ಭೂಮಿಯನ್ನು ಅನುಭವಿಸುತ್ತಾನೆ. ದೀರ್ಘಾಯುಷ್ಯವನ್ನೂ ಹೊಂದುತ್ತಾನೆ. ಶ್ರೀರಾಮನ ತಲೆಯಲ್ಲಿ ಮೂರು ಸುಳಿಗಳಿವೆ. ಅವನ ತಲೆಯು ದುಂಡಾಗಿಯೂ ಛತ್ರಿಯ ಆಕಾರದಲ್ಲಿಯೂ ಇದೆ.

**ಚತುಷ್ಕಲಃ** = ಅಂಗುಷ್ಠದ ಮೂಲದಲ್ಲಿ ಚತುರ್ವೇದಪ್ರಾಪ್ತಿಲಕ್ಷಣವಾದ ನಾಲ್ಕು ಗೆರೆಗಳನ್ನು ಹೊಂದಿರುವವನು. **ಮೂಲೇಽಙ್ಗುಷ್ಠಸ್ಯ ವೇದಾನಾಂ ಚತಸ್ರಸ್ತಿಸ್ರ ಏವ ವಾ । ಏಕಾ ದ್ವೇ ವಾ ಯಥಾಯೋಗಂ ರೇಖಾ ಜ್ಞೇಯಾ ದ್ವಿಜಾತಿನಾಮ್ ॥** ಶ್ರೀರಾಮನಿಗೆ ಅಂಗುಷ್ಠದ ಮೂಲದಲ್ಲಿ ನಾಲ್ಕು ಗೆರೆಗಳಿವೆ.

**ಚತುರ್ಲೇಖಃ** = ಹಣೆಯಲ್ಲಿ, ಪಾದಗಳಲ್ಲಿ, ಕೈಗಳಲ್ಲಿ ನಾಲ್ಕು ಗೆರೆಗಳನ್ನು ಹೊಂದಿರುವವನು. **ಲಲಾಟೇ ಯಸ್ಯ ದೃಶ್ಯನ್ತೇ ಚತುಸ್ತ್ರಿದ್ವ್ಯೇಕರೇಖಕಾಃ । ಶತದ್ವಯಂ ಶತಂ ಷಷ್ಟಿಸ್ತಸ್ಯಾಯುರ್ವಿಂಶತಿಸ್ತಥಾ ॥** ಹಣೆಯಲ್ಲಿ ನಾಲ್ಕು ಗೆರೆಯುಳ್ಳವನ ಆಯುಷ್ಯವು ಇನ್ನೂರು. ಮೂರು ಗೆರೆಯುಳ್ಳವನ ಅಯುಷ್ಯವು ನೂರು. ಎರಡು ಗೆರೆಯುಳ್ಳವನ ಆಯುಷ್ಯವು ಅರುವತ್ತು. ಒಂದೇ ಗೆರೆ ಇರುವವನ ಆಯುಷ್ಯವು ಇಪ್ಪತ್ತು. ಶ್ರೀರಾಮನ ಹಣೆಯಲ್ಲಿ ನಾಲ್ಕು ರೇಖೆಗಳಿವೆ. **ಯಸ್ಯ ಪಾದತಲೇ ವಜ್ರಧ್ವಜಶಂಖಾಙ್ಕುಶೋಪಮಾಃ । ರೇಖಾಃಸಮ್ಯಕ್ಪ್ರಕಾಶನ್ತೇ ಮನುಜೇನ್ದ್ರಂ ತಮಾದಿಶೇತ್ ॥** ಯಾವನ ಅಂಗಾಲುಗಳಲ್ಲಿ ವಜ್ರ, ಧ್ವಜ, ಶಂಖ ಮತ್ತು ಅಂಕುಶಸದೃಶವಾದ ರೇಖೆಗಳು ಕಾಣುವುವೋ ಅಂತಹವನನ್ನು ಮನುಜೇಂದ್ರನೆಂದೇ ಕರೆಯಬೇಕು.

**ಚತುಷ್ಕಿಷ್ಕುಃ** = ನಾಲ್ಕು ಕಿಷ್ಕುಗಳ ಎತ್ತರವಿರುವವನು. ಹದಿನೆಂಟು ಅಂಗುಲಗಳ ಅಳತೆಗೆ ಕಿಷ್ಕು ಎಂದು ಹೆಸರು. ಒಂದು ಮೊಳ. ನಾಲ್ಕು ಕಿಷ್ಕುಗಳೆಂದರೆ ಆರು ಅಡಿ ಎತ್ತರದವನು. ವ್ಯಾಖ್ಯಾನಕಾರರು ಕಿಷ್ಕು ಎಂಬುದಕ್ಕೆ ಇಪ್ಪತ್ತನಾಲ್ಕು ಅಂಗುಲಗಳ ಹಸ್ತವೆಂದೂ, ನಾಲ್ಕು ಹಸ್ತಪ್ರಮಾಣವೆಂದರೆ ತೊಂಬತ್ತಾರು ಅಂಗುಲ ಅಥವಾ ಎಂಟು ಅಡಿಗಳ ಎತ್ತರದವನೆಂದೂ ಅರ್ಥಮಾಡಿರುತ್ತಾರೆ. ಬ್ರಹ್ಮಪುರಾಣದಲ್ಲಿ ತೊಂಬತ್ತಾರು ಅಂಗುಲಪ್ರಮಾಣದ ಮನುಷ್ಯನನ್ನು ದೇವಪುರುಷನೆಂದು ಹೇಳಿದೆ. **ಷಣ್ಣವತ್ಯಙ್ಗುಲೋತ್ಸೇಧೋ ಯಃ ಪುಮಾನ್ ಸ ದಿವೌಕಸಃ ।**

**ಚತುಃಸಮಃ** = ಸಮವಾದ ನಾಲ್ಕು ಅವಯವಗಳುಳ್ಳವನು. **ಬಾಹುಚಾನೂರು ಗಣ್ಡಾಶ್ಚ ಚತ್ವಾರ್ಯಥ ಸಮಾನಿ ಚ ॥)**

**ಚತುರ್ದಶಸಮದ್ವನ್ದ್ವಶ್ಚತುರ್ದಂಷ್ಟ್ರಶ್ಚತುರ್ಗತಿಃ ।**
**ಮಹೋಷ್ಠಹನುನಾಸಶ್ಚ ಪಞ್ಚಸ್ನಿಗ್ಧೋಽಷ್ಟವಂಶವಾನ್ ॥೧೯॥**

ಶ್ರೀರಾಮನ ಹದಿನಾಲ್ಕು ದ್ವಂದ್ವಾಂಗಗಳೂ ಸಮಾನವಾಗಿವೆ. ಅವನಿಗೆ ನಾಲ್ಕು ಲಕ್ಷಣಗಳುಳ್ಳ ಹಲ್ಲುಗಳಿವೆ. ನಾಲ್ಕು ಮಾದರಿಯ ನಡಿಗೆಗಳನ್ನಿಡುತ್ತಾನೆ. ಅವನಿಗೆ ಸ್ನೇಹಯುಕ್ತವಾದ (ಮೃದುವಾದ) ಪ್ರಶಂಸನೀಯವಾದ ತುಟಿ-ದವಡೆ ಮತ್ತು ಮೂಗುಗಳಿವೆ. ಮೃದುವಾದ ಐದು ಅಂಗಗಳಿವೆ. ಅವನು ಪ್ರಶಸ್ತವಾದ ಮತ್ತು ದೀರ್ಘವಾದ ಎಂಟು ಅವಯವಗಳನ್ನು ಹೊಂದಿದ್ದಾನೆ.

(**ಚತುರ್ದಶಸಮದ್ವನ್ದ್ವಃ**= ಹದಿನಾಲ್ಕು ದ್ವಂದ್ವಾಂಗಗಳು– **ಭ್ರುವೌ ನಾಸಾಪುಟೇ ನೇತ್ರೇ ಕರ್ಣಾವೋಷ್ಠೌ ಚ ಚೂಚುಕೇ । ಕೂರ್ಪರೌ ಮಣಿಬನ್ಧೌ ಚ ಜಾನುನೀ ವೃಷಣೌ ಕಟೀ । ಕರೌ ಪಾದೌ ಸ್ಫಿಚೌ ಯಸ್ಯ ಸಮೌ ಜ್ಞೇಯಃ ಸ ಭೂಪತಿಃ ॥** ಹುಬ್ಬುಗಳು, ಮೂಗುಹೊಳ್ಳೆಗಳು, ಕಣ್ಣುಗಳು, ಕಿವಿಗಳು, ತುಟಿಗಳು, ಮೊಲೆಯ ತೊಟ್ಟುಗಳು, ಮೊಣಕೈಗಳು, ಮಣಿಕಟ್ಟುಗಳು, ಮೊಣಕಾಲುಗಳು, ವೃಷಣಗಳು, ಪಿರ್ರೆಗಳು, ಕೈಗಳು, ಪಾದಗಳು, ಸ್ಫಿಚಗಳು (ಪಿರ್ರೆಗಳ ಮೇಲಿರುವ ಎತ್ತರವಾದ ಭಾಗಗಳು) ಈ ದ್ವಂದ್ವಗಳು ಒಂದಕ್ಕೊಂದು ಸಮವಾಗಿದ್ದರೆ ಅವನು ಭೂಪತಿಯೇ ಆಗಿರುತ್ತಾನೆ. ಶ್ರೀರಾಮನಿಗೂ ಸಮವಾದ ಈ ಹದಿನಾಲ್ಕು ದ್ವಂದ್ವಾಂಗಗಳಿವೆ.

**ಚತುರ್ದಂಷ್ಟ್ರಃ** = ನಾಲ್ಕು ಲಕ್ಷಣಗಳಿಂದ ಕೂಡಿದ ಮುಂಭಾಗದ ಹಲ್ಲುಗಳುಳ್ಳವನು. ವರಾಹಮಿಹಿರರು ಹಲ್ಲುಗಳ ನಾಲ್ಕು ಲಕ್ಷಣಗಳನ್ನು ಹೀಗೆ ಹೇಳಿದ್ದಾರೆ : **ಸ್ನಿಗ್ಧಾಃ ಘನಾಶ್ಚ ದಶನಾಃ ಸುತೀಕ್ಷ್ಣದಂಷ್ಟ್ರಾಃ ಸಮಾಶ್ಚ ಶುಭಾಃ** ಸುಂದರವಾಗಿಯೂ ನುಣುಪಾಗಿಯೂ ಇರಬೇಕು. ಗಟ್ಟಿಯಾಗಿರಬೇಕು. ತೀಕ್ಷ್ಣವಾಗಿರಬೇಕು ಮತ್ತು ಸಮವಾಗಿರಬೇಕು. ಹೀಗಿದ್ದರೆ ಶುಭಪ್ರದವು. ಶ್ರೀರಾಮನಿಗೂ ಇಂತಹ ಲಕ್ಷಣಗಳುಳ್ಳ ಹಲ್ಲುಗಳಿವೆ.

**ಚತುರ್ಗತಿಃ** = ನಾಲ್ಕು ಬಗೆಯಾದ ಗಮನವುಳ್ಳವನು. ಸಿಂಹ-ಶಾರ್ದೂಲ-ಗಜ-ವೃಷಭಗಳ ಗಮನವು ಶ್ರೇಷ್ಠವಾದುದೆಂದು ಹೇಳುತ್ತಾರೆ. ಶ್ರೀರಾಮನು ಅಂತಹ ನಡಿಗೆಯುಳ್ಳವನು. ಬಾಲಕಾಂಡದಲ್ಲಿಯೂ **ಗಜಸಿಂಹಗತೀ ವೀರೌ ಶಾರ್ದೂಲವೃಷಭೋಪಮೌ ॥** ಎಂಬುದಾಗಿ ಹೇಳಿದೆ.

**ಮಹೋಷ್ಠಹನುನಾಸಃ** = ಸುಂದರವಾದ ಕೆಂಪುದಾಸವಾಳದಂತಹ ಕೆಂಪಾದ ತುಟಿಗಳುಳ್ಳವನು. ಮಾಂಸಲವಾದ ದವಡೆಗಳುಳ್ಳವನು. (ಬಚ್ಚುಬಾಯಿಯವನಲ್ಲ.) ಎತ್ತರವಾದ ಮತ್ತು ನೀಳವಾದ ಮೂಗುಳ್ಳವನು. **ಬನ್ಧುಜೀವಕುಸುಮೋಪಮಾಧರೋ ಮಾಂಸಲೋ ರುಚಿರಬಿಂಬರೂಪಧೃತ್ । ಪೂರ್ಣಮಾಂಸಲಹನುಸ್ತು ಭೂಮಿಪಸ್ತುಙ್ಗತುಣ್ಡರುಚಿರಾಕೃತಿಸ್ತಥಾ ॥**

**ಪಞ್ಚಸ್ನಿಗ್ಧಃ** = ಜಿಡ್ಡಾದ ( ಮೃದುವಾದ ) ಐದು ಅವಯವಗಳನ್ನು ಹೊಂದಿರು ವವನು. ಮಾತು-ಮುಖ-ಉಗುರು-ಕೂದಲು ಮತ್ತು ಚರ್ಮ. ಇವು ಐದೂ ಜಿಡ್ಡಾಗಿರಬೇಕು. ( ಸ್ನೇಹಯುಕ್ತವಾಗಿರಬೇಕು. ) ಅಥವಾ ಕೂದಲು-ಕಣ್ಣುಗಳು. ಹಲ್ಲುಗಳು-ಚರ್ಮ-ಅಂಗಾಂಗಗಳು—ಈ ಐದು ಅವಯವಗಳು ಜಿಡ್ಡಾಗಿರಬೇಕು. ವರರುಚಿಗಳು ಇದರ ಫಲವನ್ನು ಹೀಗೆ ಹೇಳಿದ್ದಾರೆ. **ಚಕ್ಷುಸ್ನೇಹೇನ ಸೌಭಾಗ್ಯಂ ದನ್ತಸ್ನೇಹೇನ ಶೋಭನಮ್ । ತ್ವಚಃ ಸ್ನೇಹೇನ ಶಯನಮ್ ಪಾದಸ್ನೇಹೇನ ವಾಹನಮ್॥**

**ಅಷ್ಟವಂಶವಾನ್** ಎಂಟು ವಿಸ್ತಾರವಾದ ಅಥವಾ ದೀರ್ಘವಾದ ಅವಯವಗಳನ್ನು ಹೊಂದಿರುವವನು. **ಪೃಷ್ಠವಂಶಃ ಶರೀರಂ ಚ ಹಸ್ತಪಾದಾಙ್ಗುಲೀ ಕರೌ । ನಾಸಿಕಾ ಚಕ್ಷುಷೀ ಕರ್ಣೌ ಪ್ರಜನೋ ಯಸ್ಯ ಚಾಯತಾಃ ॥** ಪೃಷ್ಠವಂಶ, ಶರೀರ, ಕೈಬೆರಳುಗಳು, ಕಾಲ್ಬೆರಳುಗಳು, ಕೈಗಳು, ಮೂಗು, ಕಣ್ಣುಗಳು, ಕಿವಿಗಳು, ಜನನೇಂದ್ರಿಯ—ಇವು ದೀರ್ಘವಾಗಿರಬೇಕು. ಮತ್ತೊಬ್ಬರು ಅಷ್ಟವಂಶಗಳನ್ನು ಹೀಗೆ ಹೇಳಿದ್ದಾರೆ. **ಬಾಹೂ ಚ ನಲಕಾವೂರೂ ಜಂಘೇ ಚೇತ್ಯಷ್ಟವಂಶಕಾಃ ॥** ತೋಳುಗಳು, ಎರಡು ಕೈಗಳ ಬೆರಳು ಗಳು, ತೊಡೆಗಳು, ಮೊಳಕಾಲುಗಳು ಇವು ಎಂಟೂ ದೀರ್ಘವಾಗಿರಬೇಕು. ಶ್ರೀರಾಮನಿಗೆ ಈ ಅಷ್ಟವಂಶಗಳೂ ದೀರ್ಘವಾಗಿವೆ.)

**ದಶಪದ್ಮೋ ದಶಬೃಹತ್ತ್ರಿಭಿರ್ವ್ಯಾಪ್ತೋ ದ್ವಿಶುಕ್ಲವಾನ್ ।**
**ಷಡುನ್ನತೋ ನವತನುಸ್ತ್ರಿಭಿರ್ವ್ಯಾಪ್ನೋತಿ ರಾಘವಃ ॥೨೦॥**

ಶ್ರೀರಾಮನಿಗೆ ಪದ್ಮಾಕಾರದ ಹತ್ತು ಅವಯವಗಳಿವೆ. ಅವನು ಹತ್ತು ದೊಡ್ಡ ಅವಯವಗಳನ್ನು ಹೊಂದಿದ್ದಾನೆ. ಮೂರರಿಂದ ವ್ಯಾಪ್ತನಾಗಿದ್ದಾನೆ. ಬಿಳೀ ಬಣ್ಣದ ಎರಡು ಅವಯವಗಳನ್ನು ಹೊಂದಿದ್ದಾನೆ. ಉನ್ನತವಾದ ಆರು ಅವಯವಗಳನ್ನೂ ಸೂಕ್ಷ್ಮವಾದ ಒಂಬತ್ತು ಅವಯವಗಳನ್ನೂ ಹೊಂದಿ ದ್ದಾನೆ. ಶ್ರೀರಾಘವನು ತನ್ನ ಮೂರು ಕರ್ಮಗಳಿಂದ ಕಾಲವೆಲ್ಲವನ್ನೂ ವ್ಯಾಪಿಸಿಕೊಂಡಿದ್ದಾನೆ.

( **ದಶಪದ್ಮಃ** = ಪದ್ಮಾಕಾರದ ಹತ್ತು ಅವಯವಗಳುಳ್ಳವನು. **ಮುಖನೇತ್ರಾಸ್ಯ**

**ಜಿಹ್ವೋಷ್ಠತಾಲುಸ್ತನನಖಾಃ ಕರೌ । ಪಾದೌ ಚ ದಶ ಪದ್ಮಾನಿ ಪದ್ಮಾಕಾರಾಣಿ ಯಸ್ಯ ಚ ॥** ಮುಖ, ಕಣ್ಣುಗಳು, ಬಾಯಿ, ನಾಲಿಗೆ, ತುಟಿ, ದವಡೆ, ಸ್ತನಗಳು, ಉಗುರುಗಳು, ಕೈಗಳು, ಕಾಲುಗಳು–ಈ ಹತ್ತು ಅವಯವಗಳೂ ಶ್ರೀರಾಮನಿಗೆ ಪದ್ಮಾಕಾರದಲ್ಲಿವೆ.

**ದಶಬೃಹತ್** = ವಿಸ್ತಾರವಾಗಿರುವ ಹತ್ತು ಅವಯವಗಳುಳ್ಳವನು. ಸಾಮುದ್ರಿಕೆ ಶಾಸ್ತ್ರದಂತೆ **ಉರಃ ಶಿರೋ ಲಲಾಟಂ ಚ ಗ್ರೀವಾ ಬಾಹ್ವಂಸನಾಭಯಃ । ಪಾರ್ಶ್ವ ಪೃಷ್ಠಸ್ವರಾಶ್ಚೇತಿ ವಿಶಾಲಾಸ್ತೇ ಶುಭಪ್ರದಾಃ ॥** ವಕ್ಷಃಸ್ಥಳ, ತಲೆ, ಕುತ್ತಿಗೆ, ತೋಳುಗಳು, ಹೆಗಲು, ನಾಭಿ, ಪಾರ್ಶ್ವಗಳು, ಪೃಷ್ಠಗಳು, ಕಿವಿಗಳು ಶ್ರೀರಾಮನಿಗೆ ವಿಸ್ತಾರವಾಗಿವೆ. ಬ್ರಹ್ಮಪುರಾಣದಲ್ಲಿ ಹತ್ತು ಬೃಹದವಯವಗಳನ್ನು ಹೀಗೆ ಹೇಳಿದ್ದಾರೆ. **ಶಿರೋಲಲಾಟೇ ಶ್ರವಣೇ ಗ್ರೀವಾ ವಕ್ಷಶ್ಚ ಹೃತ್ತಥಾ । ಉದರಂ ಪಾಣಿಪಾದೌ ಚ ಪೃಷ್ಠಂ ದಶ ಬೃಹನ್ತಿ ಚ ॥**

**ತ್ರಿಭಿರ್ವ್ಯಾಪ್ತಃ** = ಮೂರರಿಂದ ವ್ಯಾಪ್ತನಾದವನು. **ತ್ರಿಭಿರ್ವ್ಯಾಪ್ತಿಶ್ಚ ಯಸ್ಯ ಸ್ಯಾತ್ತೇಜಸಾ ಯಶಸಾ ಶ್ರಿಯಾ ॥** ಎಂದು ಬ್ರಾಹ್ಮದಲ್ಲಿ ಹೇಳಿರುವಂತೆ ತೇಜಸ್ಸಿನಿಂದಲೂ, ಯಶಸ್ಸಿನಿಂದಲೂ, ಸಂಪತ್ತಿನಿಂದಲೂ ಶ್ರೀರಾಮನು ವ್ಯಾಪ್ತನಾಗಿರುವನು.

**ದ್ವಿಶುಕ್ಲವಾನ್** = ಶುಕ್ಲವರ್ಣದ ಎರಡು ಅವಯವಗಳುಳ್ಳವನು. ಬಿಳಿಯ ಹಲ್ಲುಗಳನ್ನೂ ಕಣ್ಣುಗಳನ್ನೂ ಹೊಂದಿರುವವನು. ಪರಿಶುದ್ಧವಾದ ಶುಭವಾದ ಮಾತೃವಂಶವನ್ನೂ ಪಿತೃವಂಶವನ್ನೂ ಹೊಂದಿರುವವನು.

**ಷಡುನ್ನತಃ** = ಆರು ಎತ್ತರವಾದ ಅವಯವಗಳನ್ನು ಹೊಂದಿರುವವನು. **ಕಕ್ಷಃ ಕುಕ್ಷಿಶ್ಚ ವಕ್ಷಶ್ಚ ಘ್ರಾಣಂ ಸ್ಕನ್ಧೋ ಲಲಾಟಕಾ । ಸರ್ವಭೂತೇಷು ನಿರ್ದಿಷ್ಟಾ ಉನ್ನತಾಙ್ಗಾಃ ಶುಭಪ್ರದಾಃ ॥** ಕಂಕುಳು, ಹೊಟ್ಟೆ, ವಕ್ಷಃಸ್ಥಳ, ಮೂಗು, ಹೆಗಲು ಮತ್ತು ಹಣೆ ಇವು ಎತ್ತರವಾಗಿದ್ದರೆ ಶುಭವನ್ನುಂಟುಮಾಡುತ್ತವೆ. ಶ್ರೀರಾಮನಿಗೆ ಆ ಅವಯವಗಳು ಎತ್ತರವಾಗಿವೆ.

**ನವತನುಃ** = ಒಂಬತ್ತು (ಸೂಕ್ಷ್ಮ) ಅವಯವಗಳುಳ್ಳವನು. **ಕೇಶಶ್ಮಶ್ರುನಖಲೋಮತ್ವಗಙ್ಗುಲಿಪರ್ವಶೇಫೋಬುದ್ಧಿದರ್ಶನಾನಿ ॥** ತಲೆಗೂದಲು, ಗಡ್ಡ-ಮೀಸೆಗಳು, ಉಗುರು, ಮೈಗೂದಲು, ಚರ್ಮ, ಬೆರಳುಗಳ ಗಿಣ್ಣುಗಳು, ಜನನೇಂದ್ರಿಯ, ಬುದ್ಧಿ, ದೃಷ್ಟಿ ಇವುಗಳು ಸೂಕ್ಷ್ಮವಾಗಿರಬೇಕು. ಶ್ರೀರಾಮನಿಗೆ ಈ ಒಂಬತ್ತು ಅವಯವಗಳೂ ಸೂಕ್ಷ್ಮವಾಗಿವೆ. ವರರುಚಿಯೂ ಆರು ಸೂಕ್ಷ್ಮಾವಯವಗಳನ್ನು ನಿರ್ದೇಶಿಸಿ ಹೇಳಿದ್ದಾನೆ. **ಸೂಕ್ಷ್ಮಾಣ್ಯಙ್ಗುಲಿಪರ್ವಾಣಿ ಕೇಶರೋಮನಖತ್ವಚಃ । ಶೇಫಶ್ಚ ಯೇಷಾಂ ಸೂಕ್ಷ್ಮಾಣಿ ತೇ ನರಾಃ ದೀರ್ಘಜೀವಿನಃ ॥** ಬೆರಳುಗಳ ಗಿಣ್ಣುಗಳು, ತಲೆಗೂದಲು,

ಮೈಗೂದಲು, ಉಗುರು, ಚರ್ಮ ಮತ್ತು ಜನನೇಂದ್ರಿಯ–ಇವು ಸೂಕ್ಷ್ಮವಾಗಿರುವವರು ದೀರ್ಘಜೀವಿಗಳಾಗಿರುತ್ತಾರೆ.

**ರಾಘವಃ ತ್ರಿಭಿಃ ವ್ಯಾಪ್ನೋತಿ** = ಧರ್ಮಾರ್ಥ-ಕಾಮಗಳೆಂಬ ಮೂರು ಪುರುಷಾರ್ಥಗಳಿಗೆ ಸಂಬಂಧಿಸಿದ ಕರ್ಮಗಳಿಂದ ಪೂರ್ವಾಹ್ಣ-ಮಧ್ಯಾಹ್ನ-ಅಪರಾಹ್ಣಗಳೆಂಬ ಎಲ್ಲ ಕಾಲವನ್ನೂ ವ್ಯಾಪಿಸಿದ್ದಾನೆ. ಪ್ರಾತಃಕಾಲದಲ್ಲಿ ಧರ್ಮಕ್ಕೆ ಸಂಬಂಧಿಸಿದ ಕರ್ಮಗಳಲ್ಲಿಯೂ, ಮಧ್ಯಾಹ್ನದಲ್ಲಿ ಅರ್ಥಕ್ಕೆ ಸಂಬಂಧಿಸಿದ ಕರ್ಮಗಳಲ್ಲಿಯೂ, ಸಾಯಂಕಾಲ ದಲ್ಲಿ ಕಾಮಕ್ಕೆ ಸಂಬಂಧಿಸಿದ ಕರ್ಮಗಳಲ್ಲಿಯೂ ತೊಡಗಿರುತ್ತಾನೆ. ಮತ್ತೊಬ್ಬ ವ್ಯಾಖ್ಯಾನಕಾರರ ಪ್ರಕಾರ ತ್ರಿಭಿಃ ಬ್ರಹ್ಮಾದಿತ್ರಿತಯಕೃತಿದ್ವಾರಾ ವ್ಯಾಪ್ನೋತಿ ಬ್ರಹ್ಮ-ವಿಷ್ಣು-ಮಹೇಶ್ವರ–ಈ ಮೂವರ ಕಾರ್ಯಗಳ ಮೂಲಕವಾಗಿ ಶ್ರೀರಾಮನು ವಿಶ್ವವನ್ನೇ ವ್ಯಾಪಿಸಿದ್ದಾನೆ.)

**ಸತ್ಯಧರ್ಮರತಃ ಶ್ರೀಮಾನ್ಸಂಗ್ರಹಾನುಗ್ರಹೇ ರತಃ ।**
**ದೇಶಕಾಲವಿಭಾಗಜ್ಞಃ ಸರ್ವಲೋಕಪ್ರಿಯಂವದಃ ॥೨೧॥**

ಶ್ರೀರಾಮನು ಸತ್ಯ ಮತ್ತು ಧರ್ಮಗಳಲ್ಲಿ ನಿರತನಾಗಿರತಕ್ಕವನು. ಶ್ರೀಮಂತನು. ಸಂಪಾದನೆಯಲ್ಲಿಯೂ ದಾನಮಾಡುವುದರಲ್ಲಿಯೂ ಸದಾ ನಿರತನಾಗಿರತಕ್ಕವನು. ದೇಶ-ಕಾಲಗಳ ವಿಭಾಗಗಳನ್ನು ತಿಳಿದಿರತಕ್ಕವನು. ಎಲ್ಲ ಪ್ರಜೆಗಳೊಡನೆಯೂ ಪ್ರಿಯವಾದ ಮಾತುಗಳನ್ನೇ ಆಡುವವನು.

ಶ್ರೀರಾಮನ ಬಲತಾಯಿಯ ಮಗನಾದ ಅಪರಾಜಿತನಾದ ಲಕ್ಷ್ಮಣನು ಅನುರಾಗ, ರೂಪ ಮತ್ತು ಗುಣಗಳಲ್ಲಿ ಶ್ರೀರಾಮನನ್ನೇ ಹೋಲುತ್ತಾನೆ.

ನರಶ್ರೇಷ್ಠರಾದ ಆ ರಾಮ-ಲಕ್ಷ್ಮಣರಿಬ್ಬರೂ ನಿನ್ನನ್ನು ನೋಡಬೇಕೆಂಬ ಉತ್ಸುಕತೆಯಿಂದ ಸಮಗ್ರವಾದ ಭೂಮಂಡಲದಲ್ಲಿ ಹುಡುಕುತ್ತಾ ಕಡೆಗೆ ನಮ್ಮ ಬಳಿಗೆ ಬಂದರು.

ನಿನ್ನನ್ನೇ ಹುಡುಕುತ್ತಾ ಭೂಮಂಡಲದ ಎಲ್ಲ ಕಡೆಗಳಲ್ಲಿಯೂ ರಾಮ-ಲಕ್ಷ್ಮಣರು ಸುತ್ತಾಡುತ್ತಿದ್ದಾಗ ಅಣ್ಣನಿಂದ ರಾಜ್ಯಭ್ರಂಶಗೊಳಿಸಲ್ಪಟ್ಟು ಅಣ್ಣನ ಭಯದಿಂದ ಪೀಡಿತನಾಗಿದ್ದ, ಮೃಗಪತಿಯಾದ, ಪ್ರಿಯದರ್ಶನನಾದ ಸುಗ್ರೀವನನ್ನು ಅನೇಕವೃಕ್ಷಗಳಿಂದ ನಿಬಿಡವಾಗಿದ್ದ ಋಷ್ಯಮೂಕ ಪರ್ವತದ ತಪ್ಪಲಿನಲ್ಲಿ ನೋಡಿದರು. ವಾಲಿಯಿಂದ ರಾಜ್ಯಭ್ರಷ್ಟನಾಗಿದ್ದ ಸತ್ಯನಿಷ್ಠನಾದ ಸುಗ್ರೀವನ ಸೇವೆಯನ್ನು ನಾವು ಮಾಡುತ್ತಿದ್ದೆವು. ಶ್ರೇಷ್ಠವಾದ

ಧನುಸ್ಸುಗಳನ್ನು ಧರಿಸಿ ನಾರುಬಟ್ಟೆಗಳನ್ನುಟ್ಟಿದ್ದ ಆ ಇಬ್ಬರೂ ಋಷ್ಯಮೂಕ ಪರ್ವತದ ರಮ್ಯವಾದ ತಪ್ಪಲುಪ್ರದೇಶಕ್ಕೆ ಆಗಮಿಸಿದರು. ಸುಗ್ರೀವನು ಧನುಷ್ಮಂತರಾದ ನರಶ್ರೇಷ್ಠರಾದ ರಾಮ-ಲಕ್ಷ್ಮಣರನ್ನು ನೋಡಿದೊಡನೆಯೇ ಅವರು ವಾಲಿಯ ಕಡೆಯವರೆಂದು ಭಾವಿಸಿ ಭಯದಿಂದ ವಿಮೋಹಿತನಾಗಿ ಋಷ್ಯಮೂಕಪರ್ವತದ ಶಿಖರಕ್ಕೆ ಹಾರಿದನು. ಆ ಶಿಖರದಲ್ಲಿ ಕುಳಿತು ವಾನರೇಂದ್ರನಾದ ಸುಗ್ರೀವನು ನನ್ನನ್ನು ರಾಮ-ಲಕ್ಷ್ಮಣರ ಸಮೀಪಕ್ಕೆ ಕಳುಹಿಸಿದನು. ಸುಗ್ರೀವನ ಆಜ್ಞಾನುಸಾರವಾಗಿ ನಾನು–ಪ್ರಭಾವಶಾಲಿ ಗಳಾದ, ಪುರುಷಶ್ರೇಷ್ಠರಾದ, ರೂಪ-ಲಕ್ಷಣಸಂಪನ್ನರಾದ ರಾಮ-ಲಕ್ಷ್ಮಣ ರನ್ನು ಸಂಧಿಸಿ ಕೈಜೋಡಿಸಿಕೊಂಡು ಅವರ ಸಮೀಪಕ್ಕೆ ಹೋದೆನು. ಸತ್ಯಸಂಗತಿಯನ್ನು ತಿಳಿದನಂತರ ಇಬ್ಬರೂ ಸುಪ್ರೀತರಾದರು. ಬಳಿಕ ನಾನು ಅವರಿಬ್ಬರನ್ನೂ ನನ್ನ ಬೆನ್ನಿನ ಮೇಲೆ ಕುಳ್ಳಿರಿಸಿಕೊಂಡು ಸುಗ್ರೀವನಿದ್ದೆಡೆಗೆ ಕರೆದೊಯ್ದನು. ಮಹಾತ್ಮನಾದ ಸುಗ್ರೀವನಿಗೆ ರಾಮ-ಲಕ್ಷ್ಮಣರ ವಿಷಯ ವನ್ನು ಯಥಾವತ್ತಾಗಿ ತಿಳಿಸಿದೆನು. ಪರಸ್ಪರಸಂಭಾಷಣೆಯಿಂದಾಗಿ ಇಬ್ಬರಲ್ಲೂ ಪ್ರೀತಿಯುಂಟಾಯಿತು. ಕೀರ್ತಿಸಂಪನ್ನರಾದ ಹರೀಶ್ವರ- ನರೇಶ್ವರರು ಹಿಂದಿನ ತಮ್ಮ ಕಷ್ಟ-ಸುಖಗಳ ವಿಚಾರವಿನಿಮಯದಿಂದ ಅನ್ಯೋನ್ಯವಾಗಿ ವಿಶ್ವಾಸವನ್ನು ಹೊಂದಿದರು. ಬಳಿಕ ಲಕ್ಷ್ಮಣಾಗ್ರಜನಾದ ಶ್ರೀರಾಮನು ಪತ್ನಿಯ ಕಾರಣದಿಂದಾಗಿ ಮಹಾತೇಜಸ್ವಿಯಾದ ವಾಲಿಯಿಂದ ರಾಜ್ಯಭ್ರಷ್ಟನಾಗಿ ಮಾಡಲ್ಪಟ್ಟಿದ್ದ ಸುಗ್ರೀವನನ್ನು ಬಹಳವಾಗಿ ಸಂತೈಸಿದನು. ಅಕ್ಲಿಷ್ಟಕರ್ಮನಾದ ಶ್ರೀರಾಮನಿಗೆ ನಿನ್ನ ಅಪಹರಣದಿಂದ ಉಂಟಾಗಿರುವ ಶೋಕವನ್ನು ಲಕ್ಷ್ಮಣನು ವಾನರೇಂದ್ರನಾದ ಸುಗ್ರೀವನಿಗೆ ಹೇಳಿದನು. ಲಕ್ಷ್ಮಣನು ಹೇಳಿದ ಮಾತನ್ನು ಕೇಳಿ ವಾನರೇಂದ್ರನಾದ ಸುಗ್ರೀವನು ರಾಹುಗ್ರಸ್ತನಾದ ಚಂದ್ರನಂತೆ ತೇಜೋಹೀನನಾದನು.

ರಾವಣರಾಕ್ಷಸನು ನಿನ್ನನ್ನು ಸೆಳೆದುಕೊಂಡು ಹೋಗುತ್ತಿರುವಾಗ ನಿನ್ನ ಅಂಗಾಂಗಗಳಿಗೆ ಶೋಭೆಯನ್ನುಂಟುಮಾಡುತ್ತಿದ್ದ, ನೀನು ಭೂಮಿಯಲ್ಲಿ ಹಾಕಿದ ಆಭರಣಗಳನ್ನು ನಾವು ಜೋಪಾನವಾಗಿ ತೆಗೆದಿರಿಸಿದ್ದೆವು. ಪರಮ ಹೃಷ್ಟರಾದ ಕಪಿನಾಯಕರು ಆ ಎಲ್ಲ ಆಭರಣಗಳನ್ನೂ ರಾಮ-ಲಕ್ಷ್ಮಣರಿಗೆ ತೋರಿಸಿದರು.

ಆದರೆ ನೀನಿರುವ ಸ್ಥಳವನ್ನು ಮಾತ್ರ ಅವರಿಂದ ತಿಳಿಸಲಾಗಲಿಲ್ಲ. ನಿನ್ನ ವಿಯೋಗದಿಂದ ಬುದ್ಧಿಗೆಟ್ಟಿದ್ದ ರಾಮನಿಗೆ ಕಪಿನಾಯಕರು ಕೊಟ್ಟ ಆಭರಣಗಳನ್ನು ನಾನೇ ಆರಿಸಿಕೊಂಡು ತಂದಿದ್ದೆನು. ಅವೆಲ್ಲವೂ ಥಳ-ಥಳಿಸುತ್ತಾ ಭೂಮಿಯ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು.

ದೇವಪ್ರಕಾಶನಾದ ದೇವದೇವನಾದ ಶ್ರೀರಾಮನು ದರ್ಶನೀಯವಾದ ಒಡವೆಗಳನ್ನು ತೊಡೆಯ ಮೇಲಿಟ್ಟುಕೊಂಡು ಬಹಳವಾಗಿ ಅತ್ತನು. ಎಲ್ಲವನ್ನೂ ಪುನಃ ಪುನಃ ತಿರುಗಿಸಿ ನೋಡುತ್ತಾ ವಿಲಪಿಸುತ್ತಾ ಪರಿತಪಿಸು ತ್ತಿದ್ದ ಶ್ರೀರಾಮನ ಶೋಕವೆಂಬ ಅಗ್ನಿಯು ಪ್ರಜ್ವಲಿಸತೊಡಗಿತು. ದುಃಖ ಪೀಡಿತನಾಗಿದ್ದ ಮಹಾತ್ಮನಾದ ಶ್ರೀರಾಮನು ಶೋಕವನ್ನು ತಾಳಲಾರದೇ ಭೂಮಿಯಲ್ಲಿ ಬಿದ್ದುಬಿಟ್ಟನು. ನಾನು ವಿಧ-ವಿಧವಾದ ಆಶ್ವಾಸನೆಯ ಮಾತು ಗಳನ್ನು ಹೇಳಿ ಸಂತೈಸುತ್ತಾ ಅವನನ್ನು ಬಹಳ ಕಷ್ಟದಿಂದ ಹಿಡಿದೆಬ್ಬಿಸಿದೆನು. ಸೌಮಿತ್ರಿಸಹಿತನಾದ ಶ್ರೀರಾಮನು ನಿನ್ನ ಆ ಮಹಾರ್ಹವಾದ ಆಭರಣಗಳನ್ನು ನೋಡುತ್ತಾ ನಮ್ಮೆಲ್ಲರಿಗೂ ಪುನಃ ಪುನಃ ತೋರಿಸುತ್ತಾ ನಿನ್ನನ್ನೇ ನೆನೆ-ನೆನೆದು ವಿಲಪಿಸುತ್ತಾ ಬಹಳ ಹೊತ್ತು ಕಳೆದನು. ಅನಂತರ ಆ ಎಲ್ಲ ಆಭರಣಗಳನ್ನೂ ಸುಗ್ರೀವನ ವಶಕ್ಕೊಪ್ಪಿಸಿದನು.

ಆರ್ಯಳೇ! ನಿನ್ನನ್ನು ಕಾಣದೇ ಇರುವುದರಿಂದ ರಾಘವನು–ಸತತ ವಾಗಿ ಪ್ರಜ್ವಲಿಸುತ್ತಿರುವ ಅಗ್ನಿಯಿಂದ ಪರ್ವತವು ಪರಿತಪಿಸುವಂತೆ–ಯಾವಾ ಗಲೂ ಪರಿತಪಿಸುತ್ತಿದ್ದಾನೆ. ದಕ್ಷಿಣಾಗ್ನಿ, ಗಾರ್ಹಪತ್ಯ ಮತ್ತು ಆಹವನೀಯ ಗಳೆಂಬ ಮೂರು ಅಗ್ನಿಗಳು ಅಗ್ನಿಗೃಹವನ್ನು ತಾಪನಗೊಳಿಸುವಂತೆ–ನಿನ್ನ ನಿಮಿತ್ತದಿಂದಾಗಿ ನಿದ್ರಾರಾಹಿತ್ಯ-ಶೋಕ ಮತ್ತು ಚಿಂತೆಗಳು ಮಹಾತ್ಮನಾದ ಶ್ರೀರಾಮನನ್ನು ಸಂತಾಪಗೊಳಿಸುತ್ತಿವೆ. ನಿನ್ನ ವಿರಹದಿಂದುಂಟಾದ ಶೋಕ ದಿಂದ ರಾಘವನು ದೊಡ್ಡದಾದ ಭೂಕಂಪದಿಂದ ಮಹಾಪರ್ವತವು ಅಲ್ಲಾಡುವಂತೆ ಕಂಪಿಸುತ್ತಿದ್ದಾನೆ. ರಾಜಕುಮಾರಿ! ನಿನ್ನನ್ನು ಕಾಣದಿರುವ ಶ್ರೀರಾಮನು ಸುರಮ್ಯವಾದ ವನಗಳಲ್ಲಿ, ನದೀತೀರಗಳಲ್ಲಿ, ಚಿಲುಮೆಗಳ ಸಮೀಪದಲ್ಲಿ ಸಂಚರಿಸುತ್ತಿದ್ದರೂ ಅವುಗಳ ಸೊಬಗನ್ನು ನೋಡಿ ಸಂತೋಷಪಡುವುದಿಲ್ಲ.

ಮನುಜಶ್ರೇಷ್ಠನಾದ ಶ್ರೀರಾಮನು ಬಂಧು-ಮಿತ್ರರಿಂದ ಕೂಡಿರುವ ರಾವಣನನ್ನು ಸಂಹರಿಸಿ ನಿನ್ನನ್ನು ಬಹಳ ಬೇಗ ಸೇರುತ್ತಾನೆ.

ರಾಮ-ಸುಗ್ರೀವರಿಬ್ಬರೂ ವಾಲಿಯನ್ನು ಸಂಹರಿಸುವುದಕ್ಕೂ ಮತ್ತು ನಿನ್ನನ್ನು ಹುಡುಕುವುದಕ್ಕೂ ಪರಸ್ಪರವಾಗಿ ಪ್ರತಿಜ್ಞೆಯನ್ನು ಮಾಡಿಕೊಂಡರು. ಕಪೀಶ್ವರನಾದ ಸುಗ್ರೀವನು ವೀರರಾಜಕುಮಾರರಾದ ರಾಮ-ಲಕ್ಷ್ಮಣರೊಡನೆ ಕಿಷ್ಕಿಂಧೆಗೆ ಹೋದನು. ಶ್ರೀರಾಮನ ಸಹಾಯದಿಂದ ಯುದ್ಧದಲ್ಲಿ ವಾಲಿಯು ಹತನಾದನು. ಹೀಗೆ ಶ್ರೀರಾಮನು ಬಹಳ ಶೀಘ್ರವಾಗಿ ಯುದ್ಧದಲ್ಲಿ ವಾಲಿಯನ್ನು ಸಂಹರಿಸಿ ಎಲ್ಲ ಕಪಿ-ಕರಡಿಗಳ ಸಮೂಹಕ್ಕೂ ಸುಗ್ರೀವನನ್ನು ರಾಜನನ್ನಾಗಿ ಮಾಡಿದನು. ದೇವಿ! ಹೀಗೆ ಶ್ರೀರಾಮ-ಸುಗ್ರೀವರ ಸಖ್ಯವೇರ್ಪಟ್ಟಿತು. ಆ ಇಬ್ಬರಿಗೂ ದೂತನಾಗಿ ಇಲ್ಲಿಗೆ ಬಂದಿರುವ ನನ್ನನ್ನು ಹನುಮಂತನೆಂದು ತಿಳಿ.

ಸುಗ್ರೀವನು ರಾಜ್ಯವನ್ನು ಪಡೆದುಕೊಂಡನಂತರ ತನ್ನ ಅನುಯಾಯಿಗಳಾದ ಮಹಾಬಲರಾದ ಕಪಿನಾಯಕರನ್ನು ಎಲ್ಲ ಕಡೆಗಳಿಂದಲೂ ಕರೆಯಿಸಿ ನಿನ್ನನ್ನು ಹುಡುಕುವ ಸಲುವಾಗಿ ಹತ್ತು ದಿಕ್ಕುಗಳಿಗೂ ಕಳುಹಿಸಿಕೊಟ್ಟಿರುವನು. ಮಹಾತೇಜಸ್ವಿಗಳಾಗಿಯೂ ಪರ್ವತಸದೃಶರಾಗಿಯೂ ಇರುವ ಕಪಿನಾಯಕರು ವಾನರೇಂದ್ರನಾದ ಸುಗ್ರೀವನಿಂದ ಆಜ್ಞಪ್ತರಾಗಿ ಭೂಮಿಯ ಎಲ್ಲ ಕಡೆಗಳಿಗೂ ನಿನ್ನನ್ನು ಹುಡುಕಲು ಹೋಗಿರುವರು. ಸುಗ್ರೀವನ ಕಠಿನವಾದ ಆಜ್ಞೆಯಿಂದ ಭಯಗೊಂಡ ನಾವು ಮತ್ತು ಇತರ ಕಪಿನಾಯಕರು ನಿನ್ನನ್ನು ಹುಡುಕುತ್ತಾ ಈ ಭೂಮಂಡಲದಲ್ಲೆಲ್ಲಾ ಸುತ್ತಾಡುತ್ತಿದ್ದೇವೆ. ಹಾಗೆ ನಾನಾದಿಕ್ಕುಗಳಿಗೆ ಹೊರಟವರಲ್ಲಿ ವಾಲಿಯ ಮಗನಾದ ಅಂಗದನೂ ಒಬ್ಬನು. ಶ್ರೀಸಂಪನ್ನನಾದ ಮಹಾಬಲಿಷ್ಠನಾದ ಅವನು ಸುಗ್ರೀವನ ಸೈನ್ಯದಲ್ಲಿ ಮೂರನೆಯ ಒಂದು ಭಾಗ ಸೈನ್ಯದಿಂದ ಪರಿವೃತನಾಗಿ ನಿನ್ನನ್ನು ಹುಡುಕಲು ಹೊರಟನು. ಅವನೊಡನೆ ಹೊರಟ ನಾವೆಲ್ಲರೂ ಶ್ರೇಷ್ಠವಾದ ವಿಂಧ್ಯಪರ್ವತದ ಬಿಲವೊಂದರಲ್ಲಿ ಸಿಕ್ಕಿಹಾಕಿಕೊಂಡು ವಿನಾಶದ ಹಾದಿಯಲ್ಲೇ ಇದ್ದೆವು. ಹಾಗೆ ಅಲ್ಲಿ ನಾವು ಅತ್ಯಂತದುಃಖಪೀಡತತರಾಗಿದ್ದಾಗಲೇ ಬಹಳ ದಿವಸಗಳು ಕಳೆದುಹೋದುವು. ಕಾರ್ಯಸಾಧನೆಯಾಗಲಿಲ್ಲವೆಂಬ ನಿರಾಶೆಯಿಂದಲೂ, ಸುಗ್ರೀವನು ವಿಧಿಸಿದ್ದ

ಗಡುವು ಮುಗಿದುಹೋಗಿದ್ದುದರಿಂದಲೂ, ಕಾರ್ಯವನ್ನು ಸಾಧಿಸದೇ ಹಿಂದಿರುಗಿದರೆ ಕಪಿರಾಜನು ದಂಡಿಸುವನೆಂಬ ಭಯದಿಂದಲೂ ನಾವೆಲ್ಲರೂ ಪ್ರಾಯೋಪವೇಶದ ಮೂಲಕ ಪ್ರಾಣತ್ಯಾಗಮಾಡಲು ನಿಶ್ಚಯಿಸಿದೆವು. ಗಿರಿ-ದುರ್ಗಗಳಲ್ಲಿಯೂ, ನದಿಗಳ ತೀರಪ್ರದೇಶಗಳಲ್ಲಿಯೂ, ಚಿಲುಮೆಗಳಿರುವ ಕಡೆಗಳಲ್ಲಿಯೂ ನಿನ್ನನ್ನು ಹುಡುಕಿದೆವು. ದೇವಿಯಿರುವ ಸ್ಥಾನವನ್ನೇ ಅರಿಯಲಾಗದೇ ಪ್ರಾಣತ್ಯಾಗಮಾಡಲು ನಿಶ್ಚಯಿಸಿದೆವು. ಅನಂತರ ಆ ಪರ್ವತದ ಶಿಖರದ ಮೇಲೆಯೇ ಪ್ರಾಯೋಪವೇಶವ್ರತವನ್ನು ಪ್ರಾರಂಭಿಸಿದೆವು. ಎಲ್ಲ ವಾನರರೂ ಪ್ರಾಯೋಪವೇಶವ್ರತದಲ್ಲಿ ತೊಡಗಿರುವುದನ್ನೂ, ನಿನ್ನ ಸುಳಿವೇ ಸಿಕ್ಕದಿರುವುದನ್ನೂ, ವಾಲಿಯ ವಧೆಯನ್ನೂ, ಜಟಾಯುವಿನ ಮರಣವನ್ನೂ ಸ್ಮರಿಸುತ್ತಾ ಅಂಗದನು ಶೋಕಸಮುದ್ರದಲ್ಲಿ ಮುಳುಗಿ ಗೋಳಾಡುತ್ತಿದ್ದನು. ರಾಜನು ನಿರ್ದೇಶಿಸಿದ್ದ ಕಾರ್ಯದ ಸಾಧನೆಯಲ್ಲಿ ನಾವೆಲ್ಲರೂ ಸಂಪೂರ್ಣವಾಗಿ ನಿರಾಶರಾಗಿದ್ದೆವು. ಆ ಕಾರಣದಿಂದಲೇ ಅಸು ನೀಗಲು ಸಿದ್ಧರಾಗಿದ್ದೆವು. ಆ ಸಮಯದಲ್ಲಿ ನಮ್ಮ ಕಾರ್ಯವನ್ನು ಸಾಧಿಸಿ ಕೊಡಲು ಆ ಸ್ಥಳಕ್ಕೆ ಮಹಾಬಲಶಾಲಿಯಾದ ಪಕ್ಷಿಯೊಂದು ಆಗಮಿಸಿತು. ಗೃಧ್ರರಾಜನಾದ ಜಟಾಯುವಿನ ಸಹೋದರನಾದ ಸಂಪಾತಿ ಎಂಬ ಹೆಸರಿನ ಆ ಗೃಧ್ರರಾಜನು ತನ್ನ ತಮ್ಮನು ಹತನಾದನೆಂಬ ವಾರ್ತೆಯನ್ನು ನಮ್ಮಿಂದ ಕೇಳಿ ಕೋಪಗೊಂಡು ಹೇಳಿದನು :

"ನನ್ನ ಕಿರಿಯ ಸೋದರನಾದ ಜಟಾಯುವು ಯಾರಿಂದ ಹತನಾದನು? ಎಲ್ಲಿ ಕೆಳಗುರುಳಿದನು? ವಾನರೋತ್ತಮರೇ! ಇದನ್ನು ನಿಮ್ಮಿಂದ ಕೇಳಲು ಬಯಸುತ್ತೇನೆ."

ವೈದೇಹಿ! ಸಂಪಾತಿಯು ಹೀಗೆ ಪ್ರಶ್ನಿಸಲು ಜನಸ್ಥಾನದಲ್ಲಿ ನಿನ್ನನ್ನು ರಕ್ಷಿಸುವ ಸಲುವಾಗಿ ಅಡ್ಡಗಟ್ಟಿನಿಂತ ಜಟಾಯುವನ್ನು ಮಹಾಭಯಂಕರ ನಾದ ರಾಕ್ಷಸರಾಜನು ಸಂಹರಿಸಿದ ವಿಷಯವನ್ನು ಅಂಗದನು ಸಂಪಾತಿಗೆ ವಿವರಿಸಿ ಹೇಳಿದನು. ಅರುಣನ ಮಗನಾದ ಸಂಪಾತಿಯು ಜಟಾಯುವಿನ ನಿಧನವಾರ್ತೆಯನ್ನು ಕೇಳಿ ಅತಿದುಃಖಿತನಾಗಿ ನೀನು ರಾವಣನ ಅರಮನೆ ಯಲ್ಲಿ ವಾಸಮಾಡುತ್ತಿರುವೆಯೆಂಬ ಶುಭವಾರ್ತೆಯನ್ನು ನಮಗೆ ಹೇಳಿದನು. ಅತ್ಯಂತ ಸಂತೋಷದಾಯಕವಾದ ಸಂಪಾತಿಯ ಆ ಮಾತನ್ನು ಕೇಳಿ ಅಂಗದ

ಪ್ರಮುಖರಾದ ನಾವೆಲ್ಲರೂ ಅಲ್ಲಿಂದ ಹೊರಟೆವು. ನಿನ್ನನ್ನು ಕಾಣುವುದರಲ್ಲಿಯೇ ವಿಶೇಷವಾದ ಉತ್ಸಾಹವುಳ್ಳವರಾಗಿದ್ದ, ಹೃಷ್ಟತುಷ್ಟರಾದ ನಾವೆಲ್ಲರೂ ವಿಂಧ್ಯಪರ್ವತದಿಂದ ಹೊರಟು ಶ್ರೇಷ್ಠವಾದ ಸಮುದ್ರತೀರಕ್ಕೆ ಬಂದೆವು. ನಿನ್ನ ದರ್ಶನದಲ್ಲಿಯೇ ವಿಶೇಷವಾದ ಉತ್ಸಾಹವುಳ್ಳವರಾಗಿದ್ದ ಅಂಗದಪ್ರಮುಖರಾದ ಕಪಿನಾಯಕರೆಲ್ಲರೂ ಸಮುದ್ರತೀರವನ್ನು ಸೇರಿದೊಡನೆಯೇ ಮತ್ತೊಂದು ಗಾಢವಾದ ಚಿಂತೆಯಲ್ಲಿ ಮಗ್ನರಾದರು. ಅಪಾರವಾದ ಸಮುದ್ರವನ್ನು ನೋಡಿದೊಡನೆಯೇ ಕುಸಿದುಹೋದ ಆ ಕಪಿಸೈನ್ಯದ ಮಹಾಭಯವನ್ನು ದೂರೀಕರಿಸುತ್ತಾ ನಾನು ನೂರು ಯೋಜನ ವಿಸ್ತೀರ್ಣದ ಮಹಾಸಾಗರವನ್ನು ಹಾರಿಕೊಂಡೇ ಇಲ್ಲಿಗೆ ಬಂದೆನು. ರಾಕ್ಷಸರಿಂದ ನಿಬಿಡವಾಗಿರುವ ಈ ಲಂಕಾಪಟ್ಟಣವನ್ನು ನಾನು ರಾತ್ರಿಯಲ್ಲಿ ಪ್ರವೇಶಿಸಿದೆನು. ಅನಂತರ ರಾವಣನನ್ನೂ ನೋಡಿದೆನು. ನಿನ್ನನ್ನು ಸಂದರ್ಶಿಸಿದೆನು.

ನಿಷ್ಕಳಂಕಳೇ! ನಡೆದುದೆಲ್ಲವನ್ನೂ ನಿನಗೆ ಯಥಾವತ್ತಾಗಿ ಹೇಳಿದ್ದೇನೆ. ನಾನು ನಿಶ್ಚಯವಾಗಿಯೂ ದಶರಥನ ಮಗನಾದ ಶ್ರೀರಾಮನ ದೂತನೇ ಆಗಿರುವೆನು. ಇನ್ನಾದರೂ ನನ್ನೊಡನೆ ಮಾತನಾಡು ; ದೇವಿ! ಶ್ರೀರಾಮನ ಕಾರ್ಯಸಾಧನೆಯೆಂಬ ಉದ್ಯೋಗವನ್ನು ಕೈಗೊಂಡು ನಿನ್ನನ್ನು ಕಾಣುವ ಸಲುವಾಗಿಯೇ ಇಲ್ಲಿಗೆ ಬಂದಿರುವ ನಾನು ಸುಗ್ರೀವನ ಮಂತ್ರಿಯೂ ವಾಯುವಿನ ಮಗನೂ ಆಗಿರುವೆನೆಂದು ತಿಳಿ.

ನಿನ್ನ ಪ್ರಿಯಪತಿಯಾದ, ಶಸ್ತ್ರಧಾರಿಗಳಲ್ಲಿಯೇ ಶ್ರೇಷ್ಠನಾದ ಶ್ರೀರಾಮನು ಕುಶಲಿಯಾಗಿದ್ದಾನೆ. ಶುಭಲಕ್ಷಣಗಳಿಂದ ಕೂಡಿರುವ, ಯಾವಾಗಲೂ ವೀರ್ಯವಂತನಾದ ನಿನ್ನ ಪತಿಯ ಮತ್ತು ತನ್ನ ಗುರುವಾದ ಶ್ರೀರಾಮನ ಹಿತದಲ್ಲಿಯೂ ಮತ್ತು ಸೇವೆಯಲ್ಲಿಯೂ ನಿರತನಾಗಿರುವ ಲಕ್ಷ್ಮಣನೂ ಕುಶಲಿಯಾಗಿದ್ದಾನೆ.

ಸುಗ್ರೀವನ ಆಜ್ಞೆಯಂತೆ ನಾನೊಬ್ಬನು ಮಾತ್ರ ಇಲ್ಲಿಗೆ ಬಂದಿರು ವೆನು. ಮನಸ್ಸಿಗೆ ಬಂದ ರೂಪಗಳನ್ನು ಧರಿಸಿ ಅಲ್ಲಲ್ಲಿ ತಿರುಗಾಡುತ್ತಿದ್ದ ಅಸಹಾಯನಾದ ನಾನು ನೀನಿರುವ ಸ್ಥಳವನ್ನು ತಿಳಿದುಕೊಳ್ಳಬೇಕೆಂಬ ಬಯಕೆಯಿಂದ ದಕ್ಷಿಣದಿಕ್ಕನ್ನು ಅನುಸರಿಸಿ ಇಲ್ಲಿಗೆ ಬಂದೆನು.

ನೀನು ವಿನಾಶಹೊಂದಿರುವೆಯೆಂದು ಭಾವಿಸಿ ಕಪಿನಾಯಕರೆಲ್ಲರೂ

ಬಹಳವಾಗಿ ದುಃಖಪಡುತ್ತಿದ್ದಾರೆ. ಸೌಭಾಗ್ಯವಶದಿಂದ ನಿನ್ನ ದರ್ಶನವಾದುದನ್ನು ಹೇಳುವುದರ ಮೂಲಕ ಅವರ ಸಂತಾಪವನ್ನು ಹೋಗಲಾಡಿಸುವೆನು. ದೇವಿ! ಸೌಭಾಗ್ಯವಶದಿಂದ ನಾನು ಸಮುದ್ರವನ್ನು ಲಂಘಿಸಿದುದು ವ್ಯರ್ಥವಾಗಲಿಲ್ಲ. ನಿನ್ನ ಸಂದರ್ಶನದಿಂದಾಗಿ ನಾನು ಮಹಾಯಶಸ್ಸನ್ನೇ ಗಳಿಸುವೆನು. ಪುತ್ರರಿಂದಲೂ ಬಂಧುಗಳಿಂದಲೂ ಕೂಡಿರುವ, ರಾಕ್ಷಸಾಧಿಪತಿಯಾದ ರಾವಣನನ್ನು ಶ್ರೀರಾಮನು ಬಹಳ ಬೇಗ ಸಂಹರಿಸಿ ನಿನ್ನನ್ನು ಸೇರುತ್ತಾನೆ.

ವೈದೇಹಿ! ಮಾಲ್ಯವಂತವು ಪರ್ವತಗಳಲ್ಲಿಯೇ ಶ್ರೇಷ್ಠವಾದ ಪರ್ವತ. ಕೇಸರೀ ಎಂಬ ಕಪೀಶ್ವರನು ಅಲ್ಲಿಂದ ಗೋಕರ್ಣಪರ್ವತಕ್ಕೆ ಹೋದನು. ಪುಣ್ಯಪ್ರದವಾದ ಗೋಕರ್ಣಕ್ಷೇತ್ರದಲ್ಲಿ ಯಾತ್ರಾರ್ಥಿಗಳಿಗೆ ತೊಂದರೆಯನ್ನುಂಟುಮಾಡುತ್ತಿದ್ದ ಶಂಬಸಾದನನೆಂಬ ರಾಕ್ಷಸನನ್ನು ಸಂಹರಿಸುವಂತೆ ಬ್ರಹ್ಮರ್ಷಿಗಳು ಕಪಿಶ್ರೇಷ್ಠನಾದ ಆ ನನ್ನ ತಂದೆಗೆ ಆಜ್ಞೆಮಾಡಿದರು. ಅವರ ಆಜ್ಞೆಯಂತೆ ನನ್ನ ತಂದೆಯು ಆ ರಾಕ್ಷಸನನ್ನು ಸಂಹರಿಸಿದನು. ಅಂತಹ ಮಹಾಪರಾಕ್ರಮಿಯಾದ ಕೇಸರಿಯ ಕ್ಷೇತ್ರದಲ್ಲಿ (ಅವನ ಪತ್ನಿಯಾದ ಅಂಜನಾದೇವಿಯಲ್ಲಿ) ನಾನು ವಾಯುವಿನಿಂದ ಹುಟ್ಟಿದೆನು. ನನ್ನ ಪರಾಕ್ರಮದಿಂದಲೇ ನಾನು ಲೋಕದಲ್ಲಿ ಹನುಮಂತ–ಎಂಬ ಹೆಸರಿನಿಂದ ಖ್ಯಾತನಾಗಿದ್ದೇನೆ. ನಿನಗೆ ವಿಶ್ವಾಸವುಂಟಾಗಲೆಂದು ನಾನು ನಿನ್ನ ಪತಿಯ ಗುಣಗಳೆಲ್ಲವನ್ನೂ ಹೇಳಿದ್ದೇನೆ. ರಾಘವನು ನಿಶ್ಚಯವಾಗಿಯೂ ಬಹಳ ಬೇಗ ನಿನ್ನನ್ನು ಇಲ್ಲಿಂದ ಕರೆದೊಯ್ಯುವನು.”

ಹೀಗೆ ಹನುಮಂತನು ನಾನಾವಿಧವಾದ ವಿಶ್ವಾಸಾರ್ಹವಾದ ಸಂಗತಿಗಳನ್ನು ಹೇಳಿ ಶೋಕಪೀಡಿತಳಾಗಿದ್ದ ಸೀತಾದೇವಿಯಲ್ಲಿ ವಿಶ್ವಾಸವನ್ನು ಮೂಡಿಸಿದನು. ಹನುಮಂತನು ಹೇಳಿದ ಶ್ರೀರಾಮನಲ್ಲಿದ್ದ ಸಹಜವಾದ ಗುರುತುಗಳಿಂದ ಅವನು ಶ್ರೀರಾಮನ ದೂತನೇ ಎಂದು ಸೀತೆಯು ದೃಢಪಡಿಸಿಕೊಂಡಳು.

ಅಪಾರವಾದ ಸಂತೋಷವನ್ನು ಹೊಂದಿದ ಜಾನಕಿಯು ಡೊಂಕಾದ ಹುಬ್ಬುಗಳುಳ್ಳ ಕಣ್ಣುಗಳಿಂದ ಹರ್ಷಾತಿರೇಕದ ಆನಂದಬಾಷ್ಪಗಳನ್ನು ಸುರಿಸಿದಳು. ಎಣ್ಣೆಗೆಂಪಾಗಿಯೂ, ಬಿಳುಪಾಗಿಯೂ, ವಿಶಾಲವಾಗಿಯೂ ಇದ್ದ

ಕಣ್ಣುಗಳಿಂದ ಕೂಡಿದ್ದ, ವಿಶಾಲಾಕ್ಷಿಯಾದ ಸೀತಾದೇವಿಯ ಸುಂದರವಾದ ಮುಖವು ರಾಹುವಿನಿಂದ ಮುಕ್ತನಾದ ಚಂದ್ರನಂತೆ ಕಂಗೊಳಿಸಿತು. ಆ ಸಮಯದಲ್ಲವಳು ಹನುಮಂತನನ್ನು ನಿಶ್ಚಯವಾಗಿಯೂ ವಾನರನೆಂದೇ ಭಾವಿಸಿದಳು. ಮಾಯಾಕಲ್ಪಿತವಾದ ಕಪಿಯಲ್ಲವೆಂದು ಅವಳಿಗೆ ದೃಢ ವಾಯಿತು. ಬಳಿಕ ಹನುಮಂತನು ಪ್ರಿಯದರ್ಶನಳಾದ ಸೀತಾದೇವಿಗೆ ಉತ್ತಮವಾದ ಈ ಮಾತನ್ನು ಹೇಳಿದನು :

"ಮೈಥಿಲಿ! ಎಲ್ಲ ವಿಷಯಗಳನ್ನೂ ನಿನಗೆ ಯಥಾವತ್ತಾಗಿ ಹೇಳಿರು ವೆನು. ಇನ್ನಾದರೂ ನೀನು ಸಮಾಧಾನವನ್ನು ಹೊಂದು. ನಾನು ಮುಂದೇನು ಮಾಡಲಿ? ಏನು ಮಾಡಬೇಕೆಂದು ನಿನಗನಿಸುತ್ತದೆ?–ಎಂಬುದನ್ನು ಹೇಳು. ನಿನ್ನ ಅನುಜ್ಞೆಯನ್ನು ಪಡೆದು ನಾನು ಶ್ರೀರಾಮನಲ್ಲಿಗೆ ಹಿಂದಿರುಗುವೆನು.

ಮಹರ್ಷಿಗಳ ಪ್ರೇರಣೆಯಂತೆ ಕಪಿಶ್ರೇಷ್ಠನಾದ ಕೇಸರಿಯು ಶಂಬ ಸಾದನನನ್ನು ಸಂಹರಿಸಿದನು. ಮಹರ್ಷಿಗಳ ಅನುಗ್ರಹದಿಂದಾಗಿ ನಾನು ವಾಯುವಿನಿಂದ ಜನ್ಮತಾಳಿದೆನು. ವಾಯುಪುತ್ರನಾದ ನಾನು ವಾಯುವಿನಷ್ಟೇ ಬಲಿಷ್ಠನೂ ಆಗಿರುವೆನು."

ಇ೫ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೩೬ನೆಯ ಸರ್ಗ

## ಹನುಮಂತನು ಸೀತಾದೇವಿಗೆ ಮುದ್ರೆಯುಂಗುರವನ್ನು ಕೊಟ್ಟುದು : ಶ್ರೀರಾಮನು ಯಾವಾಗ ತನ್ನನ್ನು ಉದ್ಧರಿಸುವನೆಂದು ಸೀತೆಯ ಉದ್ಗಾರ : ಶ್ರೀರಾಮನಿಗೆ ಸೀತೆಯಲ್ಲಿರುವ ಅನುರಾಗವನ್ನು ವರ್ಣಿಸಿ ಹೇಳಿ ಹನುಮಂತನು ಆಕೆಯನ್ನು ಸಮಾಧಾನಗೊಳಿಸಿದುದು

**ಭೂಯ ಏವ ಮಹಾತೇಜಾ ಹನುಮಾನ್ಪವನಾತ್ಮಜಃ ।**
**ಅಬ್ರವೀತ್ಪ್ರಶ್ರಿತಂ ವಾಕ್ಯಂ ಸೀತಾಪ್ರತ್ಯಯಕಾರಣಾತ್ ॥೧॥**

ಮಹಾತೇಜಸ್ವಿಯಾದ ವಾಯುವಿನ ಮಗನಾದ ಹನುಮಂತನು

ಸೀತಾದೇವಿಗೆ ಇನ್ನೂ ಹೆಚ್ಚಿನ ವಿಶ್ವಾಸಹುಟ್ಟುವಂತೆ ವಿನಯಪೂರ್ವಕವಾದ ಮಾತನ್ನು ಪುನಃ ಹೇಳತೊಡಗಿದನು :

"ಮಹಾಭಾಗಳೇ! ವಾನರನಾದ ನಾನು ಧೀಮಂತನಾದ ಶ್ರೀರಾಮನ ದೂತನು. ರಾಮನಾಮದ ಅಂಕಿತವಿರುವ ದಿವ್ಯವಾದ ಈ ಉಂಗುರವನ್ನು ನೋಡು. ಮಹಾತ್ಮನಾದ ಶ್ರೀರಾಮನು ಕೊಟ್ಟಿರುವ ಈ ಮುದ್ರೆಯುಂಗುರ ವನ್ನು ನಿನಗೆ ನಂಬಿಕೆಯನ್ನು ಹುಟ್ಟಿಸುವ ಸಲುವಾಗಿಯೇ ತಂದಿರುವೆನು. ನಿನಗೆ



ಮಂಗಳವಾಗಲಿ ; ಇನ್ನಾದರೂ ನೀನು ಸಮಾಧಾನದಿಂದಿರು. 'ಕ್ಷೀಣ-ದುಃಖಫಲಾ ಹ್ಯಸಿ'–ಇದುವರೆಗೂ ನೀನು ಯಾವ ದುಃಖದ ಫಲವನ್ನು ಅನುಭವಿಸುತ್ತಿದ್ದೆಯೋ–ಅದು ನಶಿಸಿಹೋಗಿದೆ. ಇನ್ನು ಮುಂದೆ ನೀನು ಆ ದುಷ್ಫಲವನ್ನು ಅನುಭವಿಸಬೇಕಾಗಿಲ್ಲ."

ಸೀತಾದೇವಿಯು ಪತಿಯ ಕೈಗೆ ಭೂಷಣಪ್ರಾಯವಾಗಿದ್ದ ಮುದ್ರೆ ಯುಂಗುರವನ್ನು ಹನುಮಂತನಿಂದ ಪಡೆದು ದಿಟ್ಟಿಸಿನೋಡಿದಳು. ಪತಿಯೇ ತನ್ನೆದುರಿಗೆ ಬಂದಿರುವನೆಂದು ಭಾವಿಸಿ ಆನಂದಪಟ್ಟಳು. ಎಣ್ಣೆಗೆಂಪಾಗಿಯೂ, ಬಿಳುಪಾಗಿಯೂ ಮತ್ತು ವಿಶಾಲವಾಗಿಯೂ ಇದ್ದ ಕಣ್ಣುಗಳಿಂದ ಕೂಡಿದ್ದ ಆಕೆಯ ಸುಂದರವಾದ ಮುಖವು ರಾಹುವಿನಿಂದ ಬಿಡುಗಡೆ ಹೊಂದಿದ ಚಂದ್ರನಂತೆ ಹರ್ಷದಿಂದ ಕಂಗೊಳಿಸಿತು. ಪತಿಯ ಸಂದೇಶದಿಂದ ಹರ್ಷಿತಳಾದ, ನಾಚುವ ಸ್ವಭಾವದಿಂದ ಕೂಡಿದ್ದ ಸೀತಾಬಾಲೆಯು ಆನಂದ ಭರಿತಳಾಗಿ ಮಹಾಕಪಿಯನ್ನು ಸಮ್ಮಾನಿಸಿ ಪ್ರಶಂಸಿಸುತ್ತಾ ಹೇಳಿದಳು :

"ವಾನರಶ್ರೇಷ್ಠನೇ! ನೀನು ಮಹಾಪರಾಕ್ರಮಿಯು. ಸಮರ್ಥನು. ದೇಶ-ಕಾಲೋಚಿತವಾಗಿ ಕಾರ್ಯಮಾಡುವುದರಲ್ಲಿ ಕುಶಲನು. ರಾಕ್ಷಸರ ಈ ನಿವಾಸಸ್ಥಾನವನ್ನು ನೀನೊಬ್ಬನೇ ಮೆಟ್ಟಿದೆಯಲ್ಲವೇ? ಶ್ಲಾಘ್ಯವಿಕ್ರಮನಾದ ನೀನು ದೊಡ್ಡ-ದೊಡ್ಡ ತಿಮಿ-ನಕ್ರ-ತಿಮಿಂಗಿಲಗಳಿಗೆ ವಾಸಸ್ಥಾನವಾಗಿರುವ ನೂರು ಯೋಜನಗಳಷ್ಟು ವಿಸ್ತಾರವಾಗಿರುವ ಸಾಗರವನ್ನು ಗೋಷ್ಪಾದವನ್ನು* ದಾಟುವಷ್ಟೇ ಸುಲಭವಾಗಿ ದಾಟಿಬಂದಿರುವೆ. ನಿನ್ನನ್ನು ಸಾಮಾನ್ಯ ಕಪಿಯೆಂದು ನಾನು ಭಾವಿಸುವುದಿಲ್ಲ. ನಿನಗೆ ರಾವಣನಿಂದಲೂ ಭಯವಾಗಲೀ ವ್ಯಾಕುಲತೆಯಾಗಲೀ ಇರುವುದಿಲ್ಲ. ಆತ್ಮವಿದನಾದ ಶ್ರೀರಾಮನೇ ನಿನ್ನನ್ನು ಕಳುಹಿಸಿರುವುದರಿಂದ ನನ್ನೊಡನೆ ಮಾತನಾಡಲು ನೀನು ಯೋಗ್ಯನಾಗಿರುವೆ. ದುರ್ಧರ್ಷನಾದ ಶ್ರೀರಾಮನು ನನ್ನ ಬಳಿಗೆ ಪರೀಕ್ಷಿಸದೇ ಯಾರನ್ನೂ ಕಳುಹಿಸುವುದಿಲ್ಲ. ಅದರಲ್ಲಿಯೂ ವಿಶೇಷವಾಗಿ ಅವನ ಪರಾಕ್ರಮವೆಷ್ಟಿರುವುದೆಂಬುದನ್ನು ತಿಳಿಯದೇ ಕಳುಹಿಸುವುದೇ ಇಲ್ಲ. ಸೌಭಾಗ್ಯದ ಕಾರಣದಿಂದ ಸತ್ಯನಿಷ್ಠನಾದ ಧರ್ಮಾತ್ಮನಾದ ಶ್ರೀರಾಮನು ಕುಶಲಿಯಾಗಿದ್ದಾನೆ. ಮಹಾತೇಜಸ್ವಿಯಾದ ಸುಮಿತ್ರಾದೇವಿಯ ಆನಂದವನ್ನು ಹೆಚ್ಚಿಸುವ ಲಕ್ಷ್ಮಣನೂ ಕುಶಲಿಯಾಗಿದ್ದಾನೆ. ಆದರೆ ಒಂದು ಸಂದೇಹವು ನನ್ನನ್ನು ಬಾಧಿಸುತ್ತಿದೆ. ಕಾಕುತ್ಸ್ಥನು ಕುಶಲಿಯಾಗಿದ್ದರೆ–ಯುಗಾಂತದಲ್ಲಿ ಉದ್ಭವಿಸುವ ಅಗ್ನಿಯಂತೆ

* **ಗೋಷ್ಪಾದ** = ಹಸುವಿನ ಹೆಜ್ಜೆಯಷ್ಟು ನೀರು ನಿಂತಿರುವ ಹಳ್ಳ.

ತನ್ನ ಕೋಪದಿಂದ ಸಾಗರಗಳಿಂದ ಸುತ್ತುವರಿಯಲ್ಪಟ್ಟ ಇಡೀ ಭೂಮಿ ಯನ್ನೇಕೆ ಇದುವರೆಗೂ ಸುಟ್ಟುಹಾಕಿಲ್ಲ? ರಾಮ-ಲಕ್ಷ್ಮಣರು ದೇವತೆಗಳ ನ್ನಾದರೂ ನಿಗ್ರಹಿಸುವ ಸಾಮರ್ಥ್ಯವುಳ್ಳವರು. ಆದರೆ ಅವರೆಷ್ಟೇ ಸಮರ್ಥ ರಾಗಿದ್ದರೂ ಸೀತಾಪಹಾರಕನನ್ನು ನಿಗ್ರಹಿಸದೇ ಇರುವುದಕ್ಕೆ ನನ್ನ ಪಾಪದ ಫಲವಿನ್ನೂ ಕಳೆಯದೇ ಇರುವುದೇ ಕಾರಣವಾಗಿರಬಹುದು. ಪುರುಷಶ್ರೇಷ್ಠ ನಾದ ರಾಮನು ನನಗಾಗಿ ವ್ಯಥೆಪಡುತ್ತಿಲ್ಲವೇ? ಪರಿತಪಿಸುತ್ತಿಲ್ಲವೇ? ಮುಂದೆ ತಾನು ಮಾಡಬೇಕಾಗಿರುವ ಕಾರ್ಯವನ್ನಾದರೂ ಮಾಡುವನೇ? ನನ್ನ ಪತಿಯು ದೀನನೂ ಭ್ರಾಂತನೂ ಆಗಿ ಮಾಡಬೇಕಾಗಿರುವ ಕರ್ತವ್ಯದಲ್ಲಿ ವಿಮೋಹಗೊಂಡಿಲ್ಲ ತಾನೇ? ಮಾಡಬೇಕಾಗಿರುವ ಎಲ್ಲ ಪುರುಷಪ್ರಯತ್ನಗಳನ್ನೂ ಮಾಡುತ್ತಿರುವನಲ್ಲವೇ? ಶತ್ರುತಾಪಕನಾದ ಶ್ರೀರಾಮನು ಮಿತ್ರರ ವಿಷಯದಲ್ಲಿ ಸ್ನೇಹಭಾವದಿಂದಿರುತ್ತಾ ಸಾಮ-ದಾನ ಗಳೆಂಬ ಎರಡು ಉಪಾಯಗಳನ್ನೇ ಆಶ್ರಯಿಸಿರುವನಲ್ಲವೇ? ಅಮಿತ್ರರ ವಿಷಯದಲ್ಲಿ ವಿಜಯಾಪೇಕ್ಷಿಯಾಗಿ ದಾನ-ಭೇದ-ದಂಡಗಳೆಂಬ ಮೂರು ಉಪಾಯಗಳನ್ನೂ ಪ್ರಯೋಗಿಸುವನಲ್ಲವೇ?

**ಕಚ್ಚಿನ್ಮಿತ್ರಾಣಿ ಲಭತೇ ಮಿತ್ರೈಶ್ಚಾಪ್ಯಭಿಗಮ್ಯತೇ ।**
**ಕಚ್ಚಿತ್ಕಲ್ಯಾಣಮಿತ್ರಶ್ಚ ಮಿತ್ರೈಶ್ಚಾಪಿ ಪುರಸ್ಕೃತಃ ॥೧೮॥**

ಶ್ರೀರಾಮನಿಗೆ ಸ್ನೇಹಿತರಿರುವರೇ? ಉಪಕಾರಹೊಂದಿದ ಅವನ ಮಿತ್ರರು ಪ್ರತ್ಯುಪಕಾರಮಾಡಲು ಪುನಃ ಅವನ ಬಳಿಗೆ ಬರುವರೇ? ಮಿತ್ರರು ಕಲ್ಯಾಣಗುಣಗಳಿಂದ ಸಂಪನ್ನರಾಗಿರುವರೇ? ಶ್ರೀರಾಮನು ಅಂತಹ ಮಿತ್ರರಿಂದ ಪುರಸ್ಕೃತನಾಗಿರುವನೇ?

**ಕಚ್ಚಿದಾಶಾಸ್ತಿ ದೇವಾನಾಂ ಪ್ರಸಾದಂ ಪಾರ್ಥಿವಾತ್ಮಜಃ ।**
**ಕಚ್ಚಿತ್ಪುರುಷಕಾರಂ ಚ ದೈವಂ ಚ ಪ್ರತಿಪದ್ಯತೇ ॥೧೯॥**

ದಾಶರಥಿಯು ದೇವತೆಗಳ ಅನುಗ್ರಹವನ್ನು ಬಯಸುತ್ತಿರುವನೇ? ಪುರುಷಪ್ರಯತ್ನವನ್ನು ಮಾಡಿ ಕಾರ್ಯಸಿದ್ಧಿಗಾಗಿ ದೈವಸಹಾಯವನ್ನು ಪಡೆಯುತ್ತಿರುವನೇ?

**ಕಚ್ಚಿನ್ನ ವಿಗತಸ್ನೇಹೋ ವಿವಾಸಾನ್ಮಯಿ ರಾಘವಃ ।**
**ಕಚ್ಚಿನ್ಮಾಂ ವ್ಯಸನಾದಸ್ಮಾನ್ಮೋಕ್ಷಯಿಷ್ಯತಿ ವಾನರ ॥೨೦॥**

ನಾನು ಬಹಳ ದೂರದಲ್ಲಿರುವುದರಿಂದ ಶ್ರೀರಾಮನು ನನ್ನ ಮೇಲಿನ ಪ್ರೀತಿಯನ್ನು ತ್ಯಜಿಸಿಲ್ಲ ತಾನೇ? ಈ ವ್ಯಸನದಿಂದ ನನ್ನನ್ನವನು ಮುಕ್ತಿಗೊಳಿಸುವನೇ?

ನಿತ್ಯವೂ ಸುಖವಾಗಿರಲು ಅರ್ಹನಾದ, ದುಃಖಪಡಲು ಅನರ್ಹನಾದ ಶ್ರೀರಾಮನು ಅತಿಯಾದ ದುಃಖವನ್ನು ಹೊಂದಿಯೂ ಖಿನ್ನನೂ ಕೃಶನೂ ಆಗಿಲ್ಲವಷ್ಟೇ? ಕೌಸಲ್ಯಾ-ಸುಮಿತ್ರೆಯರ ಮತ್ತು ಭರತನ ಕುಶಲಗಳನ್ನು ಆಗಿಂದಾಗ್ಗೆ ಕೇಳಿ ತಿಳಿಯುತ್ತಿರುವನಲ್ಲವೇ? ಮಾನಾರ್ಹನಾದ ರಾಘವನು ನನ್ನ ಸಲುವಾಗಿ ಶೋಕಪಡುತ್ತಿರುವನೇ? ಅನ್ಯಮನಸ್ಕನಾಗಿಲ್ಲವಲ್ಲವೇ? ನಿಶ್ಚಯವಾಗಿಯೂ ಅವನು ನನ್ನನ್ನು ಈ ದುಃಖದಿಂದ ಪಾರುಮಾಡುವನೇ? ಭ್ರಾತೃವತ್ಸಲನಾದ ಭರತನು ಮಂತ್ರಿಗಳಿಂದ ರಕ್ಷಿಸಲ್ಪಡುತ್ತಿರುವ ಭಯಂಕರವಾದ ಅಕ್ಷೌಹಿಣೀಸೈನ್ಯವನ್ನು ನನ್ನ ವಿಮುಕ್ತಿಗಾಗಿ ಕಳುಹಿಸುವನೇ? ವಾನರಾಧಿಪತಿಯಾದ, ಶ್ರೀಮಂತನಾದ ಸುಗ್ರೀವನು ನನ್ನ ಸಲುವಾಗಿ ಹಲ್ಲು ಮತ್ತು ಉಗುರುಗಳೇ ಆಯುಧವಾಗಿರುವ ಕಪಿಸೈನ್ಯದಿಂದ ಪರಿವೃತನಾಗಿ ಇಲ್ಲಿಗೆ ಆಗಮಿಸುವನೇ? ಸುಮಿತ್ರಾದೇವಿಯ ಆನಂದವನ್ನು ಹೆಚ್ಚಿಸುವ, ಶೂರನಾದ, ಸರ್ವಾಸ್ತ್ರವಿದನಾದ ಲಕ್ಷ್ಮಣನು ಬಾಣಗಳ ಸಮೂಹಗಳಿಂದ ರಾಕ್ಷಸರನ್ನು ಧ್ವಂಸಮಾಡುವನೇ? ಸುಹೃಜ್ಜನರಿಂದ ಕೂಡಿರುವ ರಾವಣನು ಅತ್ಯಲ್ಪಕಾಲದಲ್ಲಿಯೇ ಭಯಂಕರವಾದ ಅಸ್ತ್ರದ ಮೂಲಕವಾಗಿ ಶ್ರೀರಾಮನಿಂದ ಹತನಾಗುವುದನ್ನು ನಾನು ಕಾಣುವೆನೇ? ಚಿನ್ನದ ಬಣ್ಣಕ್ಕೆ ಸಮಾನ ವಾದ ಬಣ್ಣದಿಂದ ಶೋಭಿಸುತ್ತಿರುವ ಕಮಲದ ಸುವಾಸನೆಗೆ ಸಮಾನವಾದ ಸುವಾಸನೆಯಿಂದ ಕೂಡಿರುವ ಶ್ರೀರಾಮನ ಮುಖಕಮಲವು ನಾನಿಲ್ಲದ ಕಾರಣ ಬತ್ತಿಹೋದ ಸರೋವರದಲ್ಲಿರುವ ಕಮಲದಂತೆ ಬಾಡಿಹೋಗಿಲ್ಲವಲ್ಲವೇ? ಧರ್ಮಪಾಲನೆಗಾಗಿ ಸ್ವರಾಜ್ಯವನ್ನು ತ್ಯಜಿಸಿದ, ನನ್ನನ್ನು ಅರಣ್ಯಕ್ಕೆ ಕರೆತಂದ, ಪದಾತಿಯಾದ ಶ್ರೀರಾಮನಿಗೆ ಶೋಕವಾಗಲೀ, ವ್ಯಥೆಯಾಗಲೀ, ಭಯವಾಗಲೀ ಇರಲಿಲ್ಲ. ಅಂತಹ ನನ್ನ ಪತಿಯು ಈ ಸಮಯದಲ್ಲಿಯೂ ಧೈರ್ಯವನ್ನೇ ತಾಳಿರುವನಲ್ಲವೇ? ಶ್ರೀರಾಮನಿಗೆ ತಾಯಿಯಾಗಲೀ, ತಂದೆಯಾಗಲೀ, ಬೇರೆ ಯಾರೇ ಆಗಲಿ–ನನ್ನಷ್ಟು ಪ್ರಿಯರೂ, ನನಗಿಂತಲೂ ಹೆಚ್ಚಿನ ಪ್ರಿಯರೂ ಆಗಿರಲಿಲ್ಲ. ಆದುದರಿಂದ ನಾನು ಎಂದಿನವರೆಗೆ

ಶ್ರೀರಾಮನು ಕುಶಲಿಯಾಗಿರುವನೆಂಬ ವಾರ್ತೆಯನ್ನು ಕೇಳುತ್ತಿರುವೆನೋ ಅಂದಿನವರೆಗೂ ಜೀವಿಸಿರುವೆನು."

ಹೀಗೆ ಸೀತಾದೇವಿಯು ವಾನರೇಂದ್ರನಾದ ಹನುಮಂತನಿಗೆ ಮಧುರವಾದ ಮತ್ತು ಮಹತ್ತಾದ ಅರ್ಥದಿಂದ ಕೂಡಿದ್ದ ಮಾತುಗಳನ್ನು ಹೇಳಿ ಶ್ರೀರಾಮನನ್ನೇ ಮುಖ್ಯವಾಗಿ ಉದ್ದೇಶಿಸಿ ಹೇಳುವ ಮತ್ತು ಮನೋಹರವಾದ ಹನುಮಂತನ ಮಾತನ್ನು ಕೇಳುವ ಬಯಕೆಯಿಂದ ಸುಮ್ಮನಾದಳು.

ಭಯಂಕರಪರಾಕ್ರಮಿಯಾದ ಹನುಮಂತನು ಸೀತಾದೇವಿಯ ಮಾತನ್ನು ಕೇಳಿ ತಲೆಯ ಮೇಲೆ ಎರಡು ಕೈಗಳನ್ನೂ ಜೋಡಿಸಿಕೊಂಡು ಸೀತೆಯ ಪ್ರಶ್ನೆಗಳಿಗೆ ಉತ್ತರಿಸಲು ಉಪಕ್ರಮಿಸಿದನು :

"ತಾಯೇ! ಕಮಲಾಕ್ಷನಾದ ಶ್ರೀರಾಮನಿಗೆ ನೀನಿಲ್ಲಿರುವುದು ತಿಳಿಯದು. ಹಿಂದೆ ಅನುಹ್ಲಾದನು ಒಯ್ದಿದ್ದ ಶಚೀದೇವಿಯನ್ನು ಬೇಗನೆ ಕರೆತರಲು ಇಂದ್ರನಿಗೆ ಸಾಧ್ಯವಾಗಲಿಲ್ಲ. ಏಕೆಂದರೆ : ಅವಳೆಲ್ಲಿರುವಳೆಂಬುದು ಇಂದ್ರನಿಗೆ ಬೇಗ ತಿಳಿಯಲಿಲ್ಲ. ಅವಳಿರುವ ಸ್ಥಳವು ತಿಳಿದೊಡನೆಯೇ ಇಂದ್ರನು ಆಕೆಯನ್ನು ಕರೆತಂದನು. ಅಂತೆಯೇ ನೀನಿಲ್ಲಿರುವೆಯೆಂಬುದು ತಿಳಿಯದ ಕಾರಣ ನಿನ್ನನ್ನು ಬಹಳ ಬೇಗ ಇಲ್ಲಿಂದ ಕರೆದುಕೊಂಡು ಹೋಗಲು ಶ್ರೀರಾಮನಿಗೆ ಸಾಧ್ಯವಾಗಿಲ್ಲ. ಈಗ ನೀನಿಲ್ಲಿರುವುದು ಅವನಿಗೆ ತಿಳಿಯುತ್ತದೆ. ಕೂಡಲೇ ಶ್ರೀರಾಮನಿಲ್ಲಿಗೆ ಬಂದು ನಿನ್ನನ್ನು ಕರೆದುಕೊಂಡು ಹೋಗುವನು.

ನನ್ನ ಮಾತನ್ನು ಕೇಳುತ್ತಲೇ ಶ್ರೀರಾಮನು ಕಪಿ-ಕರಡಿಗಳಿಂದ ಕೂಡಿರುವ ಮಹಾಸೈನ್ಯದೊಡನೆ ಇಲ್ಲಿಗೆ ಬರುತ್ತಾನೆ. ಕದಲಿಸಲು ಅಶಕ್ಯವಾದ ಸಮುದ್ರವನ್ನು ಬಾಣಗಳ ಸಮೂಹಗಳಿಂದ ಸ್ತಂಭನಗೊಳಿಸಿ ಲಂಕಾಪಟ್ಟಣದಲ್ಲಿ ರಾಕ್ಷಸರ ಗಲಾಟೆಯನ್ನು ಸಂಪೂರ್ಣವಾಗಿ ತಪ್ಪಿಸುತ್ತಾನೆ. ಅವನು ಲಂಕಾಪಟ್ಟಣವನ್ನು ಧ್ವಂಸಮಾಡುತ್ತಿರುವಾಗ ಅವನನ್ನು ತಡೆಯಲು ಮೃತ್ಯುವಾಗಲೀ, ದೇವತೆಗಳಾಗಲೀ, ಮಹಾಸುರರೇ ಆಗಲೀ ಆಗಮಿಸಿದರೂ– ಅವರೆಲ್ಲರನ್ನೂ ಶ್ರೀರಾಮನು ಸಂಹರಿಸುತ್ತಾನೆ. ಆರ್ಯಳೇ! ನಿನ್ನನ್ನು ನೋಡದೇ ಇರುವುದರಿಂದ ಉಂಟಾಗಿರುವ ಶೋಕದಲ್ಲಿ ಮುಳುಗಿಹೋಗಿರುವ ಶ್ರೀರಾಮನು ಸಿಂಹಪೀಡಿತವಾದ ಆನೆಯಂತೆ ದುಃಖಪಡುತ್ತಿದ್ದಾನೆ.

ಅವನಿಗೆ ಸುಖವೆಂಬುದೇ ಇಲ್ಲವಾಗಿದೆ. ನಾನು ಸಂಚರಿಸುವ ಮಂದರ-ಮಲಯ-ಮೇರು-ದರ್ದರಪರ್ವತಗಳ ಮೇಲೆ ಮತ್ತು ನಾನು ತಿನ್ನುವ ಕಂದ-ಮೂಲ-ಫಲಗಳ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಚೆಲುವುಗಣ್ಣ ನಾದ, ಚೆಲುವಾಗಿಯೂ ತೊಂಡೇಹಣ್ಣಿನಂತೆಯೂ ಇರುವ ತುಟಿಗಳುಳ್ಳ, ಸುಂದರವಾದ ಕುಂಡಲಗಳಿಂದ ವಿಭೂಷಿತನಾಗಿರುವ, ಆಗತಾನೇ ಉದಯಿಸಿದ ಹುಣ್ಣಿಮೆಯ ಚಂದ್ರನಂತೆ ಆಹ್ಲಾದಕರನಾಗಿರುವ ಶ್ರೀರಾಮನ ಮುಖವನ್ನು ನೀನು ಖಂಡಿತವಾಗಿಯೂ ಕಾಣುವೆ. ಸ್ವರ್ಗಲೋಕದ ಮೇಲ್ಭಾಗದಲ್ಲಿ ಕುಳಿತಿರುವ ಇಂದ್ರನಂತೆ–ಪ್ರಸ್ರವಣಪರ್ವತದಲ್ಲಿರುವ ಶ್ರೀರಾಮನನ್ನು ನೀನು ಬಹಳ ಬೇಗ ಕಾಣಲಿರುವೆ.

ರಾಘವನೀಗ ಮಾಂಸವನ್ನು ತಿನ್ನುತ್ತಿಲ್ಲ. ಮಧುವನ್ನು ಕುಡಿಯುತ್ತಿಲ್ಲ. ಅರಣ್ಯದಲ್ಲಿ ತಿನ್ನಲು ಯೋಗ್ಯವಾದ ಕಂದ-ಮೂಲಗಳನ್ನು ಅನುದಿನವೂ ಐದನೆಯ ಕಾಲದಲ್ಲಿ (ರಾತ್ರಿಯ ಮೊದಲನೆಯ ಯಾಮದಲ್ಲಿ) ಮಾತ್ರ ತಿನ್ನುತ್ತಾನೆ. ಯಾವಾಗಲೂ ನಿನ್ನಲ್ಲಿಯೇ ನೆಟ್ಟಮನಸ್ಸುಳ್ಳವನಾಗಿರುವ ಅವನು ಮೈಮೇಲೆ ಕುಳಿತುಕೊಳ್ಳುವ ನೊಣಗಳನ್ನಾಗಲೀ, ಸೊಳ್ಳೆಗಳ ನ್ನಾಗಲೀ, ಕ್ರಿಮಿ-ಕೀಟಗಳನ್ನಾಗಲೀ ಓಡಿಸಲು ಕೂಡ ಯತ್ನಿಸುವುದಿಲ್ಲ. ಅವನು ನಿತ್ಯವೂ ನಿನ್ನ ಯೋಚನೆಯಲ್ಲಿಯೇ ಮಗ್ನನಾಗಿರುವನು. ನಿನ್ನ ವಿರಹಶೋಕದಲ್ಲಿಯೇ ಮುಳುಗಿಹೋಗಿರುವನು. ನಿನ್ನನ್ನು ಕಾಣಬೇಕೆಂಬ ಉತ್ಕಟವಾದ ಆಸೆಗೆ ವಶನಾಗಿರುವ ಶ್ರೀರಾಮನು ನಿನ್ನನ್ನು ಬಿಟ್ಟು ಬೇರೆ ಯಾವುದನ್ನೂ ಯೋಚಿಸುವುದೂ ಇಲ್ಲ. ಅವನು ನಿದ್ರೆಯನ್ನು ಮಾಡು ತ್ತಿಲ್ಲ. ಕೆಲವು ವೇಳೆ ಅವನಿಗೆ ನಿದ್ರೆಯ ಜೋಂಪು ಹಿಡಿದರೂ–'ಹಾ ಸೀತೇ! ಕ್ವಾಸಿ? ಸೀತೆಯೇ! ಎಲ್ಲಿರುವೆ?'–ಎಂದು ಮಧುರವಾದ ಧ್ವನಿ ಯಲ್ಲಿ ಹಂಬಲಿಸುತ್ತಾ ಎಚ್ಚರಗೊಳ್ಳುತ್ತಾನೆ. ಮನಸ್ಸನ್ನು ಅಪಹರಿಸುವ ಫಲವನ್ನಾಗಲೀ ಪುಷ್ಪವನ್ನಾಗಲೀ ನೋಡಿದರೆ ನೀನಲ್ಲಿಯೇ ಇರುವೆಯೆಂದು ಭ್ರಮಿಸಿ ದೀರ್ಘವಾಗಿ ನಿಟ್ಟುಸಿರುಬಿಡುತ್ತಾ–'ಪ್ರಿಯಳೇ! ಸೀತಾದೇವಿ!'–ಎಂದೆನ್ನುತ್ತಾ ಮಾತನಾಡಲು ಪ್ರಾರಂಭಿಸುತ್ತಾನೆ. ದೇವಿ! ಶ್ರೀರಾಮನು ನಿನ್ನ ವಿರಹವೇದನೆಯಿಂದ ನಿತ್ಯವೂ ಪರಿತಪಿಸುತ್ತಿದ್ದಾನೆ. ನೀನು ಅವನ

ಸಮೀಪದಲ್ಲಿಲ್ಲದಿದ್ದರೂ 'ಸೀತೇ! ಸೀತೇ!' ಎಂದು ಕೂಗಿಕೊಂಡು ಮಾತನಾಡುತ್ತಿರುತ್ತಾನೆ. ನಿನ್ನನ್ನು ಪಡೆದುಕೊಳ್ಳಲು ಅವನು ಸತತವಾಗಿ ಪ್ರಯತ್ನಿಸುತ್ತಲೇ ಇದ್ದಾನೆ."

ಹನುಮಂತನು ಹೀಗೆ ಶ್ರೀರಾಮನ ಸಂಕೀರ್ತನವನ್ನು ಮಾಡಲು ಶ್ರೀರಾಮನ ಶೋಕದಲ್ಲಿ ಸಮಾನಭಾಗಿನಿಯಾದ ಸೀತಾದೇವಿಯು ಶೋಕರಹಿತಳಾದಳು. ಶರತ್ಕಾಲದಲ್ಲಿ ಮೋಡಗಳಿಂದ ಕೂಡಿದ ಚಂದ್ರನಿರುವ ರಾತ್ರಿಯಂತೆಯೇ ಸೀತಾದೇವಿಯು ಕಾಣುತ್ತಿದ್ದಳು.*

ಇ೬ನೆಯ ಸರ್ಗವು ಮುಗಿಯಿತು.



## ಸೀತೆಯು ಹನುಮಂತನಿಗೆ ಶ್ರೀರಾಮನನ್ನು ಶೀಘ್ರವಾಗಿ ಕರೆತರಲು ಹೇಳಿದುದು : ಹನುಮಂತನು ಸೀತೆಯನ್ನು ತನ್ನ ಜೊತೆಯಲ್ಲೇ ಬರಲು ಹೇಳಿದುದು : ಸೀತೆಯ ಅಸಮ್ಮತಿ

**ಸೀತಾ ತದ್ವಚನಂ ಶ್ರುತ್ವಾ ಪೂರ್ಣಚನ್ದ್ರನಿಭಾನನಾ ।**
**ಹನೂಮನ್ತಮುವಾಚೇದಂ ಧರ್ಮಾರ್ಥಸಹಿತಂ ವಚಃ ॥೧॥**

ಚಂದ್ರಮುಖಿಯಾದ ಸೀತಾದೇವಿಯು ಹನುಮಂತನು ಹೇಳಿದ ಮಾತನ್ನು ಕೇಳಿ ಧರ್ಮಾರ್ಥಯುಕ್ತವಾದ ಮಾತುಗಳನ್ನು ಹೇಳಿದಳು :

"ಹನುಮಂತ! 'ಶ್ರೀರಾಮನು ಅನನ್ಯಚಿತ್ತನಾಗಿ ಯಾವಾಗಲೂ ನಿನ್ನನ್ನೇ ಧ್ಯಾನಿಸುತ್ತಿರುವನು'–ಎಂಬ ನಿನ್ನ ಮಾತು ಅಮೃತಕ್ಕೆ ಸಮಾನವಾಗಿದೆ. ಇದರಿಂದ ನನಗೆ ಅತ್ಯಾನಂದವಾಗಿದೆ. ಆದರೆ ಈ ಮಾತಿನ ಜೊತೆಯಲ್ಲಿಯೇ ನೀನು ಶ್ರೀರಾಮನು ಯಾವಾಗಲೂ ಶೋಕಪರಾಯಣನಾಗಿರುವನು–ಎಂದು ಹೇಳಿರುವ ಮಾತು ನಿಶ್ಚಯವಾಗಿಯೂ ವಿಷಕ್ಕೆ ಸಮಾನ

---

* ಶರತ್ಕಾಲದ ಬೆಳದಿಂದಗಳು ಸ್ವಚ್ಛವಾಗಿರುತ್ತದೆ. ಆ ಸಮಯದಲ್ಲಿಯೇ ಬಿಳಿಯ ಮೋಡಗಳೂ ಚಂದ್ರನನ್ನು ಆವರಿಸುತ್ತವೆ. ರಾತ್ರಿಯು ಒಮ್ಮೆ ಆಹ್ಲಾದಕರವಾದ ಬೆಳದಿಂಗಳಿನಿಂದ ಪ್ರಕಾಶಿಸುತ್ತದೆ. ಮರುಕ್ಷಣದಲ್ಲಿಯೇ ಮೋಡಗಳ ಆವರಣದಿಂದ ಮಸುಕಾಗುತ್ತದೆ. ಹೀಗೆ ಸೀತಾದೇವಿಗೆ ಸುಖ-ಶೋಕಗಳೆರಡೂ ಏಕಕಾಲದಲ್ಲಿ ಉಂಟಾದುವು.

ವಾಗಿದೆ. ಇದು ನನಗೆ ಅತ್ಯಂತದುಃಖವನ್ನುಂಟುಮಾಡಿದೆ. ಹೀಗೆ ನೀನು ವಿಷಮಿಶ್ರಿತವಾದ ಅಮೃತಕ್ಕೆ ಸಮಾನವಾದ ಮಾತುಗಳನ್ನು ಹೇಳಿರುವೆ.

**ಐಶ್ವರ್ಯೇ ವಾ ಸುವಿಸ್ತೀರ್ಣೇ ವ್ಯಸನೇ ವಾ ಸುದಾರುಣೇ ।**
**ರಜ್ಜ್ವೇವ ಪುರುಷಂ ಬದ್ಧ್ವಾ ಕೃತಾನ್ತಃ ಪರಿಕರ್ಷತಿ ॥೩॥**

ಮನುಷ್ಯನು ಅಪಾರವಾದ ಐಶ್ವರ್ಯದಲ್ಲಿಯೇ ಮುಳುಗಿಹೋಗಿರಲಿ; ಅತಿದಾರುಣವಾದ ವ್ಯಸನದಲ್ಲಿಯೇ ಸಿಲುಕಿರಲಿ–ದೈವವು ಮನುಷ್ಯ ನನ್ನು ಹಗ್ಗದಿಂದ ಬಂಧಿಸುವಂತೆ ಬಂಧಿಸಿ ಸೆಳೆದಾಡುತ್ತದೆ.*

**ವಿಧಿರ್ನೂನಮಸಂಹಾರ್ಯಃ ಪ್ರಾಣಿನಾಂ ಪ್ಲವಗೋತ್ತಮ ।**
**ಸೌಮಿತ್ರಿಂ ಮಾಂ ಚ ರಾಮಂ ಚ ವ್ಯಸನೈಃ ಪಶ್ಯ ಮೋಹಿತಾನ್ ॥**

ಕಪಿಪ್ರವರನೇ! ನಿಶ್ಚಯವಾಗಿಯೂ ಪ್ರಾಣಿಗಳಿಗೆ ವಿಧಿನಿಯಮವನ್ನು ಉಲ್ಲಂಘಿಸಲು ಸಾಧ್ಯವೇ ಇಲ್ಲ. ನಾನು ಮತ್ತು ರಾಮ-ಲಕ್ಷ್ಮಣರು ವಿಧಿಯ ಕೈಗೆ ಸಿಕ್ಕಿ ವಿಮೋಹಿತರಾಗಿರುವುದನ್ನಾದರೂ ನೋಡು. ಸಮುದ್ರದಲ್ಲಿ ನೌಕೆಯು ಭಗ್ನವಾಗಿ ಈಜಾಡುತ್ತಿರುವ ಮನುಷ್ಯನಂತೆ ಶೋಕಸಾಗರದಲ್ಲಿ ಈಜುತ್ತಾ ಬಹಳವಾಗಿ ಆಯಾಸಗೊಂಡಿರುವ ಶ್ರೀರಾಮನು ಯಾವಾಗ ದಡವನ್ನು ಸೇರುವನೋ?–ತಿಳಿಯದಾಗಿದೆ.

ರಾಕ್ಷಸರೆಲ್ಲರನ್ನೂ ಸಂಹರಿಸಿ ಲಂಕೆಯನ್ನು ಧ್ವಂಸಮಾಡಿ ರಾವಣನನ್ನು ವಿನಾಶಗೊಳಿಸಿ, ನನ್ನ ಪತಿಯು ಯಾವಾಗ ನನ್ನನ್ನು ನೋಡುವನು? ಕಪಿಶ್ರೇಷ್ಠನೇ! ನನ್ನ ವಿಮೋಚನೆಗೆ ತ್ವರೆಗೊಳ್ಳುವಂತೆ ನೀನು ಅವನಿಗೆ ಹೇಳಬೇಕು. ಈ ಸಂವತ್ಸರವು ಮುಗಿಯುವುದರೊಳಗಾಗಿ ನನ್ನ ವಿಮೋಚನೆ ಯಾಗಬೇಕು. ಏಕೆಂದರೆ : ಅಲ್ಲಿಯವರೆಗೆ ಮಾತ್ರವೇ ನನ್ನ ಪ್ರಾಣವುಳಿದಿರು ತ್ತದೆ. ಈಗ ಹತ್ತನೆಯ ಮಾಸವು ನಡೆಯುತ್ತಿದೆ. ಇನ್ನೆರಡು ಮಾಸಗಳು ಮಾತ್ರವೇ ಉಳಿದಿವೆ. ಕ್ರೂರಿಯಾದ ರಾವಣನು ಅಲ್ಲಿಯವರೆಗೆ ಮಾತ್ರವೇ ನನಗೆ ಅವಧಿಯನ್ನು ಕೊಟ್ಟಿರುವನು. ನನ್ನನ್ನು ರಾಮನಿಗೆ ಒಪ್ಪಿಸುವ ವಿಷಯದಲ್ಲಿ ರಾವಣನ ತಮ್ಮನಾದ ವಿಭೀಷಣನು ಅಣ್ಣನ ಮನಸ್ಸನ್ನು

---

* ದೈವಕ್ಕೆ ಬಡವ-ಬಲ್ಲಿದರಲ್ಲಾಗಲೀ ವ್ಯಸನಿ-ದುಃಖಿತರಲ್ಲಾಗಲೀ ಯಾವ ತಾರತಮ್ಯವೂ ಇಲ್ಲ. ಎಲ್ಲರನ್ನೂ ಕಾಲಪಾಶದಿಂದ ಬಿಗಿದು ಸೆಳೆದಾಡುತ್ತಿರುತ್ತದೆ.

ಒಲಿಸಲು ಬಹಳವಾಗಿ ಪ್ರಯತ್ನಿಸಿದನು. ಆದರೆ ರಾವಣನು ಅವನ ಮಾತಿಗೆ ಲಕ್ಷ್ಯಗೊಡಲಿಲ್ಲ. ಕಾಲವಶನಾಗಿ ಹೋಗಿರುವ ರಾವಣನನ್ನು ಯುದ್ಧರಂಗ ದಲ್ಲಿ ಮೃತ್ಯುವೇ ಹುಡುಕಾಡುತ್ತಿದೆ. ಆದುದರಿಂದಲೇ ನನ್ನನ್ನು ಶ್ರೀರಾಮನಿಗೆ ಒಪ್ಪಿಸಿಕೊಡುವ ವಿಷಯವು ರಾವಣನಿಗೆ ರುಚಿಸುತ್ತಿಲ್ಲ. ವಿಭೀಷಣನ ಹಿರಿಯ ಮಗಳಾದ ಅನಲಾ ಎಂಬುವಳು ನನಗೆ ಈ ವಿಷಯವನ್ನು ತಿಳಿಸಿದಳು. ಈ ವಿಷಯವನ್ನು ತಿಳಿಯಪಡಿಸಲು ಅವಳ ತಾಯಿಯೇ ಅನಲೆ ಯನ್ನು ನನ್ನ ಬಳಿಗೆ ಕಳುಹಿಸಿದ್ದಳು. ಮೇಧಾವಿಯಾದ, ವಿದ್ವಾಂಸನಾದ, ರಾಕ್ಷಸಶ್ರೇಷ್ಠನಾದ, ಬುದ್ಧಿವಂತನಾದ, ಶೀಲವಂತನಾದ, ರಾವಣನಿಗೂ ಸಮ್ಮತನಾದ ಅವಿಂಧ್ಯನೆಂಬ ರಾಕ್ಷಸನು–ರಾಕ್ಷಸರೆಲ್ಲರಿಗೂ ಶ್ರೀರಾಮನಿಂದ ವಿನಾಶವು ಸಂಭವಿಸಲಿರುವುದನ್ನು–ಹೇಳಿದನಂತೆ. ಆದರೆ ಅವನ ಆ ಹಿತಕರ ವಾದ ಮಾತನ್ನೂ ದುಷ್ಟಾತ್ಮನಾದ ರಾವಣನು ಕೇಳಲಿಲ್ಲ.

ಶ್ರೀರಾಮನಲ್ಲಿ ಅನೇಕಕಲ್ಯಾಣಗುಣಗಳಿವೆ. ನನ್ನ ಅಂತರಾತ್ಮವು ಪರಿ ಶುದ್ಧವಾಗಿದೆ. ಆ ನನ್ನ ಪತಿಯು ಬಹಳ ಬೇಗ ನನ್ನನ್ನು ಪಡೆದುಕೊಳ್ಳುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ. ಉತ್ಸಾಹ, ಪೌರುಷ, ಸತ್ತ್ವ, ದಯೆ, ಕೃತಜ್ಞತೆ, ಪರಾಕ್ರಮ ಮತ್ತು ಪ್ರಭಾವಗಳು ಶ್ರೀರಾಮನಲ್ಲಿ ಮೂರ್ತಿಮತ್ತಾಗಿ ನೆಲೆಸಿವೆ. ಜನಸ್ಥಾನದಲ್ಲಿ ತಮ್ಮನ ಸಹಾಯ-ಸಹಕಾರಗಳೂ ಇಲ್ಲದೇ ಹದಿನಾಲ್ಕು ಸಾವಿರ ರಾಕ್ಷಸರನ್ನು ಯಾವನೊಬ್ಬನೇ ಸಂಹರಿಸಿದನೋ–ಅಂತಹವನ ವಿಷಯದಲ್ಲಿ ಯಾವ ಶತ್ರುವು ತಾನೇ ಉದ್ವಿಗ್ನನಾಗುವುದಿಲ್ಲ? ಪುರುಷ ಶ್ರೇಷ್ಠನಾದ ಶ್ರೀರಾಮನ ಪರಾಕ್ರಮವನ್ನು ಈಗ ನಮಗೆ ವ್ಯಸನವನ್ನುಂಟು ಮಾಡುತ್ತಿರುವ ರಾಕ್ಷಸರು ತೂಗಲು ಸಮರ್ಥರಾಗಿಲ್ಲ. ರಾಕ್ಷಸರಿಗೆ ಅವನ ಸಾಮರ್ಥ್ಯವು ಎಷ್ಟೆಂಬುದು ತಿಳಿಯದು. ಶಚಿಯು ಇಂದ್ರನ ಪ್ರಭಾವವನ್ನು ತಿಳಿದಿರುವಂತೆ–ನಾನು ಶ್ರೀರಾಮನ ಪ್ರಭಾವವನ್ನು ಚೆನ್ನಾಗಿ ಬಲ್ಲೆನು. ಶೂರ ನಾದ ರಾಮನೆಂಬ ದಿವಾಕರನು ಬಾಣಗಳ ಸಮೂಹಗಳನ್ನೇ ಕಿರಣಗಳ ರೂಪ ದಲ್ಲಿ ಧರಿಸಿ ಶತ್ರುರೂಪವಾದ ರಾಕ್ಷಸರೆಂಬ ನೀರನ್ನು ಶೋಷಿಸಿಬಿಡುವನು."

ಹೀಗೆಲ್ಲಾ ಹೇಳಿಕೊಂಡು ಶ್ರೀರಾಮನ ಸಲುವಾಗಿ ದುಃಖಿಸುತ್ತಿದ್ದ ಕಂಬನಿದುಂಬಿದ ಮುಖವುಳ್ಳವಳಾಗಿದ್ದ ಸೀತಾದೇವಿಗೆ ಹನುಮಂತನು ಸಮಾಧಾನ ಹೇಳಿದನು :

"ತಾಯೇ! ದುಃಖಪಡಬೇಡ. ನನ್ನ ಮಾತನ್ನು ಕೇಳಿದೊಡನೆಯೇ ಶ್ರೀರಾಮನು ಕಪಿ-ಕರಡಿಗಳಿಂದ ಸಮಾಕುಲವಾದ ಮಹಾಸೈನ್ಯದೊಡನೆ ನಿನ್ನ ವಿಮುಕ್ತಿಗಾಗಿ ಬಹಳ ಬೇಗ ಇಲ್ಲಿಗೆ ಬರುವನು. ನೀನು ಬಯಸುವುದಾದರೆ ಈ ದುಃಖದಿಂದಲೂ ಮತ್ತು ರಾಕ್ಷಸನಿಂದಲೂ ನಿನ್ನನ್ನು ಈಗಲೇ ಮುಕ್ತಳ ನ್ನಾಗಿ ಮಾಡುತ್ತೇನೆ. ನನ್ನ ಬೆನ್ನನ್ನೇರಿ ಕುಳಿತುಕೋ. ನಿನ್ನನ್ನು ನನ್ನ ಬೆನ್ನಿನ ಮೇಲೆ ಕುಳ್ಳಿರಿಸಿಕೊಂಡು ಈ ಸಾಗರವನ್ನು ದಾಟುತ್ತೇನೆ. ನಿನ್ನನ್ನೇ ಏಕೆ? ರಾವಣನ ಸಂಗಡ ಈ ಲಂಕಾಪಟ್ಟಣವನ್ನೇ ಹೊತ್ತುಕೊಂಡು ಹೋಗುವ ಶಕ್ತಿಯೂ ನನಗಿದೆ. ಯಜ್ಞೇಶ್ವರನು ತನ್ನಲ್ಲಿ ಹೋಮಮಾಡಿದ ಹವಿಸ್ಸನ್ನು ಇಂದ್ರನಿಗೆ ಒಪ್ಪಿಸುವಂತೆ–ಪ್ರಸ್ರವಣಪರ್ವತದಲ್ಲಿರುವ ರಾಘವನಿಗೆ ಈಗಲೇ ನಿನ್ನನ್ನು ಒಪ್ಪಿಸಿಕೊಡುತ್ತೇನೆ. ದೈತ್ಯರ ವಧೆಯಲ್ಲಿ ಉತ್ಸುಕನಾಗಿರುವ ಮಹಾ ವಿಷ್ಣುವಿನಂತೆ ವಿರಾಜಮಾನನಾಗಿರುವ ಲಕ್ಷ್ಮಣಸಹಿತನಾದ ಶ್ರೀರಾಮನನ್ನು ಈಗಲೇ ನೀನು ಕಾಣುವೆ. ಐರಾವತದ ಮೇಲೆ ಕುಳಿತಿರುವ ಇಂದ್ರನಂತೆ ಪ್ರಸ್ರವಣಪರ್ವತದ ಆಶ್ರಮದಲ್ಲಿರುವ, ನಿನ್ನನ್ನು ನೋಡುವುದರಲ್ಲಿ ವಿಶೇಷ ವಾದ ಉತ್ಸಾಹವುಳ್ಳ, ಮಹಾಬಲಿಷ್ಠನಾದ ಶ್ರೀರಾಮನನ್ನು ಈಗಲೇ ನೋಡುವೆ. ಮಂಗಳೆಯೇ! ನನ್ನ ಬೆನ್ನಿನ ಮೇಲೆ ಕುಳಿತುಕೋ. ನನ್ನ ಮಾತನ್ನು ಉಪೇಕ್ಷಿಸಬೇಡ. ಚಂದ್ರನೊಡನೆ ರೋಹಿಣಿಯು ಸೇರುವಂತೆ ಶ್ರೀರಾಮನನ್ನು ಸೇರು. ನೀನು ನನ್ನೊಡನೆ ಮಾತನಾಡುತ್ತಿರುವಂತೆಯೇ ಶಚೀದೇವಿಯು ಇಂದ್ರನನ್ನು ಸೇರಿದಂತೆ–ಸುವರ್ಚಲೆಯು ಸೂರ್ಯನನ್ನು ಸೇರಿದಂತೆ–ಶ್ರೀರಾಮನನ್ನು ನೀನು ಸೇರುವೆ. ಅಷ್ಟು ಶೀಘ್ರವಾಗಿ ನಿನ್ನನ್ನಲ್ಲಿಗೆ ಕರೆದೊಯ್ಯುವೆನು. ನನ್ನ ಬೆನ್ನಿನ ಮೇಲೆ ಕುಳಿತು ಸಮುದ್ರಾಕಾಶಗಳನ್ನು ದಾಟುವವಳಾಗು. ನಾನು ನಿನ್ನನ್ನು ಎತ್ತಿಕೊಂಡು ಹೋಗುತ್ತಿರುವಾಗ ನನ್ನ ವೇಗವಾದ ಗಮನವನ್ನನುಸರಿಸಿ ಬರಲು ಈ ಲಂಕಾನಿವಾಸಿಗಳು ಅಸಮರ್ಥರು. ನಾನು ಇಲ್ಲಿಗೆ ಹೇಗೆ ಬಂದೆನೋ ಹಾಗೆಯೇ ನಿಸ್ಸಂದೇಹ ವಾಗಿ ನಿನ್ನನ್ನು ಎತ್ತಿಕೊಂಡು ಆಕಾಶದ ಮೂಲಕವಾಗಿ ಹೋಗುವುದನ್ನು ನೀನೇ ನೋಡುವೆ."

ಸೀತಾದೇವಿಗೆ ಕಪಿಶ್ರೇಷ್ಠನ ಅಂತಹ ಪರಮಾದ್ಭುತವಾದ ಮಾತನ್ನು ಕೇಳಿ ಅಂಗಾಂಗಗಳಲ್ಲಿ ಹರ್ಷವೂ ವಿಸ್ಮಯವೂ ಉಂಟಾಗಿ ಮಾರುತಿಗೆ ಹೇಳಿದಳು :

"ಹನುಮಂತ! ದಾಟಬೇಕಾದ ಮಾರ್ಗವು ಬಹಳ ದೀರ್ಘವಾಗಿದೆ. ಅಷ್ಟು ದೂರದವರೆಗೆ ನನ್ನನ್ನೆತ್ತಿಕೊಂಡು ಹೋಗಲು ಅಪೇಕ್ಷಿಸುತ್ತಿರುವೆ ಯಲ್ಲವೇ? ಈ ಅಪೇಕ್ಷೆಯು ನಿನ್ನ ಕಪಿತ್ವದ ಚಂಚಲಸ್ವಭಾವಕ್ಕೆ ದ್ಯೋತಕ ವಾಗಿರುವುದೆಂದು ನಾನು ಭಾವಿಸುತ್ತೇನೆ. ಅಲ್ಪಶರೀರನಾಗಿರುವ ನೀನು ಮಾನವೇಂದ್ರನಾದ ನನ್ನ ಪತಿಯ ಬಳಿಗೆ ಹೇಗೆ ತಾನೇ ನನ್ನನ್ನು ಎತ್ತಿಕೊಂಡು ಹೋಗುವೆ?"

ಸೀತಾದೇವಿಯ ಆ ಮಾತನ್ನು ಕೇಳಿ ಅವಳ ಮಾತಿನಿಂದ ತನಗೆ ಹೊಸ ಬಗೆಯ ಮುಖಭಂಗವಾಯಿತೆಂದು ವಾಯುಪುತ್ರನಾದ, ಶ್ರೀಮಂತನಾದ ಮಾರುತಿಯು ಭಾವಿಸಿದನು.

**ನ ಮೇ ಜಾನಾತಿ ಸತ್ತ್ವಂ ವಾ ಪ್ರಭಾವಂ ವಾಸಿತೇಕ್ಷಣಾ ।**
**ತಸ್ಮಾತ್ಪಶ್ಯತು ವೈದೇಹೀ ಯದ್ರೂಪಂ ಮಮ ಕಾಮತಃ ॥೩೪॥**

'ಅಸಿತೇಕ್ಷಣೆಯಾದ ಸೀತಾದೇವಿಯು ನನ್ನಲ್ಲಿರುವ ಸತ್ತ್ವವನ್ನಾಗಲೀ ಪ್ರಭಾವವನ್ನಾಗಲೀ ತಿಳಿದವಳಾಗಿಲ್ಲ. ನನ್ನ ಬೃಹತ್ತಾದ ರೂಪವನ್ನು ಇವಳು ಯಥೇಚ್ಛವಾಗಿ ನೋಡಲಿ.'

ಶತ್ರುಮರ್ದನನಾದ, ಕಪಿಶ್ರೇಷ್ಠನಾದ ಹನುಮಂತನು ಹೀಗೆ ಯೋಚಿಸಿ ತನ್ನ ನಿಜಸ್ವರೂಪವನ್ನು ಸೀತಾದೇವಿಗೆ ತೋರಿಸಿದನು. ತಾನು ಕುಳಿತಿದ್ದ ಶಿಂಶುಪಾವೃಕ್ಷದಿಂದಿಳಿದು ಸೀತೆಗೆ ತನ್ನ ಪರಾಕ್ರಮದ ವಿಷಯದಲ್ಲಿ ವಿಶ್ವಾಸವನ್ನು ಹುಟ್ಟಿಸುವ ಸಲುವಾಗಿ ತನ್ನ ಶರೀರವನ್ನು ವರ್ಧಿಸತೊಡ ಗಿದನು. ಪ್ರದೀಪ್ತವಾದ ಅಗ್ನಿಯ ಪ್ರಭೆಯಂತೆ ಪ್ರಭಾವಶಾಲಿಯಾಗಿದ್ದ ಹನುಮಂತನು ಮೇರು-ಮಂದರಪರ್ವತಗಳಂತೆ ಸೀತಾದೇವಿಯ ಮುಂಭಾಗದಲ್ಲಿ ನಿಂತುಕೊಂಡನು. ಆ ಸಮಯದಲ್ಲಿ ಹನುಮಂತನು ಪರ್ವತಸದೃಶವಾದ ಶರೀರವುಳ್ಳವನಾಗಿದ್ದನು. ಅವನ ಮುಖವು ಎಣ್ಣೆ ಗೆಂಪಾಗಿದ್ದಿತು. ಮಹಾಬಲಿಷ್ಠನಾಗಿದ್ದನು. ವಜ್ರಸದೃಶವಾದ ಹಲ್ಲುಗಳನ್ನೂ ಉಗುರುಗಳನ್ನೂ ಹೊಂದಿದ್ದನು. ಭಯಂಕರನಾಗಿ ಕಾಣುತ್ತಿದ್ದನು. ಅಂತಹ ಭವ್ಯಸ್ವರೂಪವನ್ನು ಧರಿಸಿದ ಹರಿಪುಂಗವನು ಸೀತಾದೇವಿಗೆ ಹೇಳಿದನು :

"ದೇವಿ! ಪರ್ವತಗಳಿಂದಲೂ, ವನಪ್ರದೇಶಗಳಿಂದಲೂ, ಉಪ್ಪರಿಗೆ

ಗಳಿಂದಲೂ, ಪ್ರಾಕಾರಗಳಿಂದಲೂ, ಬಹಿರ್ದ್ವಾರಗಳಿಂದಲೂ ಕೂಡಿರುವ ಈ ಲಂಕಾಪಟ್ಟಣವನ್ನು ರಾವಣನ ಸಮೇತವಾಗಿಯೇ ಎತ್ತಿಕೊಂಡು ಹೋಗುವಷ್ಟು ಶಕ್ತಿಯು ನನಗಿದೆ. ಆದುದರಿಂದ ನಾನು ನಿನ್ನನ್ನೊಯ್ಯಲು ಸಮರ್ಥನೆಂಬುದರ ಬಗೆಗೆ ನಿನ್ನ ಬುದ್ಧಿಯು ಸ್ಥಿರವಾಗಿರಲಿ. ಇನ್ನಾದರೂ ನಿನ್ನ ಸಂದೇಹವನ್ನು ದೂರಮಾಡು. ನನ್ನ ಬೆನ್ನನ್ನು ಹತ್ತಿಕುಳಿತು ರಾಮ-ಲಕ್ಷ್ಮಣರಿರುವೆಡೆಗೆ ಬಂದು ಅವರ ಶೋಕವನ್ನು ದೂರಮಾಡು."



ಪದ್ಮಪತ್ರವಿಶಾಲಾಕ್ಷಿಯಾದ ಜಾನಕಿಯು ಪರ್ವತೋಪಮನಾಗಿದ್ದ,

ವಾಯುವಿನ ಔರಸಪುತ್ರನಾದ ಹನುಮಂತನನ್ನು ನೋಡಿ ಅಚ್ಚರಿಗೊಂಡು ಹೇಳಿದಳು :

"ಮಹಾಕಪಿಯೇ! ನಿನ್ನ ಸತ್ತ್ವ ಮತ್ತು ಬಲಗಳು ಎಷ್ಟೆಂಬುದನ್ನು ತಿಳಿದೆನು. ನೀನು ವಾಯುವಿನಂತೆ ವೇಗಗಮನವುಳ್ಳವನೂ, ಅಗ್ನಿಯಂತೆ ಅದ್ಭುತತೇಜಸ್ವಿಯೂ ಆಗಿರುವೆ. ಅಪಾರವಾದ ಸಮುದ್ರದ ಈಚಿನ ದಡದಲ್ಲಿರುವ ರಾಕ್ಷಸರ ಭೂಮಿಗೆ ನೀನಲ್ಲದೇ ಸಾಮಾನ್ಯವಾದ ಬೇರೆ ಯಾವನು ತಾನೇ ಬರಲು ಸಮರ್ಥನು? ಸಮುದ್ರವನ್ನು ದಾಟುವ ಮತ್ತು ನನ್ನನ್ನು ಎತ್ತಿಕೊಂಡು ಹೋಗುವ ಪರಮಾದ್ಭುತವಾದ ಶಕ್ತಿಯು ನಿನಗಿರುವುದೆಂಬುದನ್ನು ನಾನು ತಿಳಿದಿರುವೆನು. ಆದರೂ ನಿನ್ನಂತೆ ನಾನು ಕೂಡ ಕಾರ್ಯ ಸಿದ್ಧಿಯ ವಿಷಯದಲ್ಲಿ ಚೆನ್ನಾಗಿ ವಿಚಾರಮಾಡಬೇಕಾಗಿದೆ.

ಈಗ ನಾನು ನಿನ್ನೊಡನೆ ಬರುವುದು ಯುಕ್ತವಲ್ಲವೆಂದೇ ಭಾವಿಸುತ್ತೇನೆ. ವಾಯುವೇಗಕ್ಕೆ ಸಮಾನವೇಗವುಳ್ಳ ನಿನ್ನ ಗಮನವು ನನ್ನನ್ನು ಎಚ್ಚರದಪ್ಪಿಸಬಹುದು. ಸಮುದ್ರದ ಮೇಲೆ ಹಾರಿಕೊಂಡು ಹೋಗುತ್ತಿರುವಾಗ ನಿನ್ನ ಬೆನ್ನಿನ ಮೇಲೆ ಕುಳಿತು ಆಕಾಶದಲ್ಲಿರುವ ನಾನು ಭಯಪಟ್ಟು ಕೆಳಕ್ಕೆ ಬಿದ್ದುಬಿಡಬಹುದು. ತಿಮಿಂಗಿಲ-ನಕ್ರ-ಮೀನುಗಳಿಂದ ತುಂಬಿರುವ ಸಮುದ್ರದಲ್ಲಿ ಬೀಳುವ ನಾನು ಪ್ರಜ್ಞೆಯನ್ನು ಕಳೆದುಕೊಂಡು ಅಲ್ಲಿರುವ ಪ್ರಾಣಿಗಳಿಗೆ ಉತ್ತಮವಾದ ಆಹಾರವಾಗುವೆನು. ಆದುದರಿಂದ, ಶತ್ರುನಾಶಕನೇ! ನಾನು ನಿನ್ನೊಡನೆ ಬರಲಾರೆನು. ಒಬ್ಬ ಸ್ತ್ರೀಯನ್ನು ನೀನು ಎತ್ತಿಕೊಂಡು ಹೋಗುತ್ತಿರುವುದನ್ನು ನೋಡಿದರೆ ನಿನ್ನ ವಿಷಯದಲ್ಲಿಯೂ ಸಂದೇಹವುಂಟಾಗುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ನೀನು ನನ್ನನ್ನು ಒಯ್ಯುತ್ತಿರುವುದನ್ನು ನೋಡಿ ರಾವಣನಿಂದ ಆಜ್ಞಪ್ತರಾದ, ದುರಾತ್ಮರಾದ, ಭಯಂಕರಪರಾಕ್ರಮಿಗಳಾದ ರಾಕ್ಷಸರು ನಿನ್ನನ್ನು ಬೆನ್ನಟ್ಟಿ ಬರಬಹುದು. ಶೂಲ-ಮುದ್ಗರಗಳೇ ಮೊದಲಾದ ಆಯುಧಗಳನ್ನು ಹಿಡಿದ ಶೂರರಾದ ಆ ರಾಕ್ಷಸರಿಂದ ಸುತ್ತುವರಿಯಲ್ಪಡುವ ನೀನು ಸ್ತ್ರೀಯೊಡನಿರುವ ಕಾರಣ ಸಂಕಟಕ್ಕೂ ಒಳಗಾಗುವೆ. ಆಕಾಶದಲ್ಲಿ ಆಯುಧಪಾಣಿಗಳಾದ ಅನೇಕರಾಕ್ಷಸರು ನಿನ್ನನ್ನು ಆಕ್ರಮಿಸುವರು. ಆ ಸಮಯದಲ್ಲಿ ನೀನು ನಿರಾಯುಧನೂ ಏಕಾಕಿಯೂ ಆಗಿರುವೆ.

ಅಂತಹ ಸಂದರ್ಭದಲ್ಲಿ ನಿನಗೆ ನನ್ನನ್ನು ರಕ್ಷಿಸಿಕೊಂಡು ಮುಂದೆ ಪ್ರಯಾಣ ಮಾಡಲು ಹೇಗೆ ಸಾಧ್ಯವಾಗುವುದು? ಕ್ರೂರಕರ್ಮಿಗಳಾದ ರಾಕ್ಷಸರಿಗೂ ನಿನಗೂ ಘೋರವಾದ ಯುದ್ಧವು ನಡೆಯುತ್ತಿರುವಾಗ ಭಯಪೀಡಿತ ಳಾಗುವ ನಾನು ನಿನ್ನ ಬೆನ್ನಿನಿಂದ ಕೆಳಕ್ಕೆ ಬಿದ್ದುಬಿಡಬಹುದು. ಭಯಂಕರ ರಾದ, ಮಹಾಕಾಯರಾದ, ಮಹಾಬಲಿಷ್ಠರಾದ ರಾಕ್ಷಸರು ಹೇಗಾದರೂ ಮಾಡಿ ನಿನ್ನನ್ನು ಜಯಿಸಲೂಬಹುದು. ಹಾಗಲ್ಲದೇ ರಾಕ್ಷಸರೊಡನೆ ಯುದ್ಧ ಮಾಡುತ್ತಾ ನನ್ನ ರಕ್ಷಣೆಯಿಂದ ವಿಮುಖನಾಗುವ ನಿನ್ನ ಬೆನ್ನಿನಿಂದ ನಾನು ಕೆಳಕ್ಕೆ ಬೀಳಲೂಬಹುದು. ಹಾಗೆ ಸಮುದ್ರದಲ್ಲಿ ಬೀಳುತ್ತಿರುವ ನನ್ನನ್ನು ಪಾಪಿಷ್ಠರಾದ ರಾಕ್ಷಸರು ಹಿಡಿದು ಪುನಃ ರಾವಣನ ಬಳಿಗೆ ಒಯ್ಯಲೂ ಬಹುದು. ನಿನ್ನ ಕೈಯಿಂದ ಅವರು ನನ್ನನ್ನಾದರೂ ಬಿಡಿಸಿಕೊಳ್ಳಬಹುದು. ಹಾಗೆ ಬಿಡಿಸಿಕೊಂಡು ನನ್ನನ್ನು ತುಂಡು-ತುಂಡುಗಳಾಗಿ ಕತ್ತರಿಸಿಹಾಕಬಹುದು.

**ಅವ್ಯವಸ್ಥೌ ಹಿ ದೃಶ್ಯೇತೇ ಯುದ್ಧೇ ಜಯಪರಾಜಯೌ ॥೫೫॥**

ಯುದ್ಧದಲ್ಲಿ ಜಯಾಪಜಯಗಳು ಯಾವಾಗಲೂ ಅನಿಶ್ಚಿತ. ರಾಕ್ಷಸ ರಿಂದ ಭಯಗೊಳಿಸಲ್ಪಡುವ ನಾನು ಪ್ರಾಣಗಳನ್ನು ತೊರೆಯಬಹುದು. ಹಾಗೇನಾದರೂ ಆದರೆ ನಿನ್ನ ಪ್ರಯತ್ನವು ಸಂಪೂರ್ಣವಾಗಿ ನಿಷ್ಫಲವೇ ಆಗಿಬಿಡುತ್ತದೆ.

ಕಪೀಶ್ವರನೇ! ಎಲ್ಲ ರಾಕ್ಷಸರನ್ನೂ ಸಂಹರಿಸಲು ನೀನೊಬ್ಬನೇ ಸಾಕು. ಹಾಗೇನಾದರೂ ನೀನೊಬ್ಬನೇ ಎಲ್ಲ ರಾಕ್ಷಸರನ್ನೂ ಸಂಹರಿಸಿಬಿಟ್ಟರೆ ರಾಘ ವನ ಯಶಸ್ಸು ಕುಂದಬಹುದು. ಅಥವಾ ರಾಕ್ಷಸರು ನಿನ್ನನ್ನು ಪರಾಜಯ ಗೊಳಿಸಿ ನನ್ನನ್ನು ಹಿಡಿದು ಯಾವ ಸ್ಥಳದಲ್ಲಿ ನನ್ನನ್ನಿರಿಸಿದರೆ ಕಪಿಗಳಾಗಲೀ, ರಾಮ-ಲಕ್ಷ್ಮಣರಾಗಲೀ ತಿಳಿಯುವುದಿಲ್ಲವೋ ಅಂತಹ ಗುಪ್ತವಾದ ಸ್ಥಳದಲ್ಲಿ ನನ್ನನ್ನು ಇರಿಸಬಹುದು. ಹಾಗೇನಾದರೂ ಆದರೆ ನನ್ನ ಬಿಡುಗಡೆಯ ಸಲುವಾಗಿ ನೀನು ಮಾಡಿರುವ ಪ್ರಯತ್ನವು ಸಂಪೂರ್ಣವಾಗಿ ವ್ಯರ್ಥವಾಗು ತ್ತದೆ. ಆದುದರಿಂದ ನಿನ್ನೊಡನೆ ಶ್ರೀರಾಮನಿಲ್ಲಿಗೆ ಬರುವುದೇ ಹೆಚ್ಚು ಸಮಂಜಸವಾಗಿದೆ. ಮಹಾಬಾಹುವೇ! ಮಹಾತೇಜಸ್ವಿಯಾದ ರಾಘವನ, ಅವನ ಅನುಜರಾದ ಲಕ್ಷ್ಮಣ-ಭರತ-ಶತ್ರುಘ್ನರ ಮತ್ತು ನಿನ್ನ ರಾಜನಾದ

ಸುಗ್ರೀವನ ಕುಲದ ಜೀವಿತವು ನನ್ನನ್ನೇ ಆಶ್ರಯಿಸಿ ನಿಂತಿದೆ. ಶೋಕ-ಸಂತಾಪಗಳಿಂದ ಸಂಕಟಪಡುತ್ತಿರುವ ರಾಮ-ಲಕ್ಷ್ಮಣರು ನನ್ನ ವಿಷಯದಲ್ಲಿ ನಿರಾಶರಾಗಿ ಎಲ್ಲ ಕಪಿ-ಕರಡಿಗಳ ನಾಯಕರೊಡನೆ ಪ್ರಾಣತ್ಯಾಗ ಮಾಡುತ್ತಾರೆ.

**ಭರ್ತೃಭಕ್ತಿಂ ಪುರಸ್ಕೃತ್ಯ ರಾಮಾದನ್ಯಸ್ಯ ವಾನರ ।**
**ನಾಹಂ ಸ್ಪ್ರಷ್ಟುಂ ಸ್ವತೋ ಗಾತ್ರಮಿಚ್ಛೇಯಂ ವಾನರೋತ್ತಮ ॥**

ವಾನರಶ್ರೇಷ್ಠನೇ! ನಿನ್ನೊಡನೆ ಬಾರದಿರಲು ಮುಖ್ಯವಾದ ಮತ್ತೊಂದು ಕಾರಣವೂ ಇದೆ. ಪತಿಭಕ್ತಿಯನ್ನೇ ಶ್ರೇಷ್ಠವೆಂದು ಭಾವಿಸಿರುವ ನಾನು ಶ್ರೀರಾಮನ ಹೊರತಾಗಿ ಬೇರೆ ಯಾವನ ಶರೀರವನ್ನೂ ನಾನಾಗಿಯೇ ಮುಟ್ಟಲು ಇಚ್ಛಿಪಡುವುದಿಲ್ಲ.

**ಯದಹಂ ಗಾತ್ರಸಂಸ್ಪರ್ಶಂ ರಾವಣಸ್ಯ ಗತಾ ಬಲಾತ್ ।**
**ಅನೀಶಾ ಕಿಂ ಕರಿಷ್ಯಾಮಿ ವಿನಾಥಾ ವಿವಶಾ ಸತೀ ॥೬೩॥**

ಬಲಾತ್ಕಾರದಿಂದಾಗಿ ರಾವಣನ ಶರೀರಸ್ಪರ್ಶವು ನನಗಾಯಿತು. ಆ ಸಮಯದಲ್ಲಿ ಪ್ರಾಣೇಶನಿಂದ ರಹಿತಳೂ, ರಕ್ಷಕರಿಲ್ಲದವಳೂ, ಅಸ್ವತಂತ್ರಳೂ ಆಗಿದ್ದ ನಾನು ಏನು ತಾನೇ ಮಾಡಲು ಸಾಧ್ಯವಿದ್ದಿತು? ಆದುದರಿಂದ ಶ್ರೀರಾಮನೇ ಇಲ್ಲಿಗೆ ಬಂದು ರಾಕ್ಷಸರ ಸಹಿತವಾಗಿ ರಾವಣ ನನ್ನು ಸಂಹರಿಸಿ ನನ್ನನ್ನು ಇಲ್ಲಿಂದ ಕರೆದುಕೊಂಡು ಹೋದುದಾದರೆ–ಅದು ಅವನ ಶೌರ್ಯ-ವೀರ್ಯಗಳಿಗೆ ಅನುರೂಪವಾದ ಕಾರ್ಯವಾಗುತ್ತದೆ.

ರಣಾಂಗಣದಲ್ಲಿ ಶತ್ರುಗಳನ್ನು ಮರ್ದಿಸುವ ಮಹಾತ್ಮನಾದ ಶ್ರೀರಾಮನ ಪರಾಕ್ರಮಗಳನ್ನು ನಾನು ಬಹಳವಾಗಿ ಕೇಳಿದ್ದೇನೆ ಮತ್ತು ಪ್ರತ್ಯಕ್ಷವಾಗಿಯೂ ನೋಡಿದ್ದೇನೆ. ಯುದ್ಧದಲ್ಲಿ ದೇವ-ಗಂಧರ್ವ-ಭುಜಂಗ- ರಾಕ್ಷಸರೂ ಶ್ರೀರಾಮನಿಗೆ ಸಾಟಿಯಾಗುವುದಿಲ್ಲ. ಚಿತ್ರವಾದ ಧನುಸ್ಸನ್ನು ಧರಿಸಿರುವ, ಮಹಾಬಲನಾದ, ಇಂದ್ರಸಮಾನವಿಕ್ರಮನಾದ, ಗಾಳಿಯಿಂದ ಪ್ರಚೋದಿತವಾಗಿ ದೇದೀಪ್ಯಮಾನವಾಗಿ ಪ್ರಕಾಶಿಸುವ ಅಗ್ನಿಯೋಪಾದಿಯಲ್ಲಿರುವ, ಲಕ್ಷ್ಮಣಸಹಿತನಾದ ರಾಘವನನ್ನು ನೋಡುವ ಯಾರು ತಾನೇ ಯುದ್ಧದಲ್ಲಿ ಅವನಿಗೆ ಎದುರಾಗಿ ನಿಲ್ಲಬಲ್ಲರು? ಲಕ್ಷ್ಮಣನಿಂದ ಒಡಗೂಡಿರುವ, ಯುದ್ಧದಲ್ಲಿ ಶತ್ರುಗಳನ್ನು ಮರ್ದನಮಾಡುವ, ಮದಿಸಿದ ದಿಗ್ಗಜದಂತೆ ನಿಂತಿ

ರುವ, ಯುಗಾಂತದ ಸೂರ್ಯನಿಗೆ ಸಮಾನವಾದ ಬಾಣಗಳನ್ನೇ ಜ್ವಾಲೆಗಳ ರೂಪದಲ್ಲಿ ಹೊಂದಿರುವ ಶ್ರೀರಾಮನ ಶರಪ್ರಹಾರವನ್ನು ಯುದ್ಧದಲ್ಲಿ ಯಾವನೂ ಸಹಿಸಿಕೊಳ್ಳಲಾರನು.

ಕಪಿಶ್ರೇಷ್ಠನೇ! ಲಕ್ಷ್ಮಣನ ಜೊತೆಯಲ್ಲಿರುವ ನನ್ನ ಪ್ರಿಯನಾದ ಶ್ರೀರಾಮನನ್ನು ಯೂಥಪತಿಯಾದ ಸುಗ್ರೀವನೊಡನೆ ಇಲ್ಲಿಗೆ ಕರೆದುಕೊಂಡು ಬಾ. ಬಹಳ ಕಾಲದಿಂದಲೂ ಪ್ರಿಯತಮನ ಸಲುವಾಗಿ ದುಃಖಪಡುತ್ತಾ ಕೃಶಳಾಗುತ್ತಿರುವ ನನಗೆ ಸಂತೋಷವನ್ನುಂಟುಮಾಡು."

ಇ೭ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೩೮ನೆಯ ಸರ್ಗ

## ಸೀತಾದೇವಿಯು ಹನುಮಂತನಿಗೆ ಗುರುತಿಗಾಗಿ ಕಾಕಾಸುರನ ವೃತ್ತಾಂತವನ್ನು ಹೇಳಿ ಚೂಡಾಮಣಿಯನ್ನು ಕೊಟ್ಟದು

**ತತಃ ಸ ಕಪಿಶಾರ್ದೂಲಸ್ತೇನ ವಾಕ್ಯೇನ ಹರ್ಷಿತಃ ।**
**ಸೀತಾಮುವಾಚ ತಚ್ಛ್ರುತ್ವಾ ವಾಕ್ಯಂ ವಾಕ್ಯವಿಶಾರದಃ ॥೧॥**

ಬಳಿಕ ಕಪಿಶ್ರೇಷ್ಠ ನಾದ, ವಾಕ್ಯವಿಶಾರದನಾದ ಹನುಮಂತನುಸೀತೆಯು ಹೇಳಿದ ಮಾತುಗಳಿಂದ ಬಹಳವಾಗಿ ಸಂತಸಗೊಂಡು ಹೇಳಿದನು :

"ಶುಭದರ್ಶನಳೇ! ದೇವಿ! ನೀನಾಡಿದ ಮಾತು ಸಮೀಚೀನವಾಗಿದೆ. ಸಾಧ್ವಿಯರ ವಿನಯಕ್ಕೂ ಸ್ತ್ರೀಯರ ಸ್ವಭಾವಕ್ಕೂ ಅನುಗುಣವಾಗಿದೆ. ನೀನು ಹೆಂಗಸಾಗಿರುವುದರಿಂದ ನನ್ನ ಬೆನ್ನಿನ ಮೇಲೆ ಕುಳಿತು ನೂರು ಯೋಜನ ಗಳಷ್ಟು ವಿಸ್ತಾರವಾಗಿರುವ ಸಾಗರವನ್ನು ದಾಟಲಾರೆ.

ವಿನಯಸಂಪನ್ನಳೇ! ನನ್ನೊಡನೆ ಬಾರದಿರಲು–'**ರಾಮಾದನ್ಯಸ್ಯ ಗಾತ್ರಂ ಸ್ವತಃ ಸ್ಪ್ರಷ್ಟುಂ ಅಹಂ ನೇಚ್ಛೇಯಂ**–ರಾಮನ ಶರೀರವನ್ನು ಬಿಟ್ಟು ಬೇರೆಯವರ ಶರೀರವನ್ನು ಮುಟ್ಟಲು ನಾನು ಇಚ್ಛಿಪಡುವುದಿಲ್ಲ'–ಎಂಬ ಎರಡನೆಯ ಕಾರಣವನ್ನು ಕೊಟ್ಟಿರುವುದೂ ಮಹಾತ್ಮನಾದ ಶ್ರೀರಾಮನ ಪತ್ನಿಯಾದ ನಿನಗೆ ಸಮುಚಿತವಾದ ಮಾತೇ ಆಗಿದೆ. ನಿನ್ನ ಹೊರತಾಗಿ ಬೇರೆ ಯಾವಳು ತಾನೇ ಇಂತಹ ಮಾತನ್ನು ಹೇಳುವಳು?

ಹಲವಾರು ಕಾರಣಗಳಿಂದಲೂ, ಶ್ರೀರಾಮನಿಗೆ ಪ್ರಿಯವನ್ನುಂಟು ಮಾಡುಬೇಕೆಂಬ ಇಚ್ಛೆಯಿಂದಲೂ, ಸ್ನೇಹದಿಂದ ಕರಗಿದ ಮನಸ್ಸಿನಿಂದಲೂ ನನ್ನ ಬೆನ್ನಿನಮೇಲೆ ಕುಳಿತು ಶ್ರೀರಾಮನ ಸಮೀಪಕ್ಕೆ ಬರುವಂತೆ ನಿನಗೆ ಹೇಳಿದೆನು. ಲಂಕೆಯು ಇತರರಿಂದ ಪ್ರವೇಶಿಸಲು ದುಸ್ಸಾಧ್ಯವಾಗಿರುವುದ ರಿಂದಲೂ, ಮಹಾಸಮುದ್ರವೂ ಸಾಮಾನ್ಯರಿಂದ ದಾಟಲು ಅಶಕ್ಯವಾಗಿರು ವುದರಿಂದಲೂ, ಪ್ರಕೃತದಲ್ಲಿ ನನ್ನ ಸಾಮರ್ಥ್ಯದ ಅರಿವಿನಿಂದಲೂ ರಘುವಂಶೀಯರಿಗೆ ಆನಂದವನ್ನುಂಟುಮಾಡುವ ಶ್ರೀರಾಮನ ಬಳಿಗೆ ಈಗಲೇ ನಿನ್ನನ್ನು ಕರೆದೊಯ್ಯಲು ಆಶಿಸಿದೆನು. ನಾನು ಹೀಗೆ ಹೇಳಲು ನನಗೆ ಶ್ರೀರಾಮನಲ್ಲಿರುವ ಅಪಾರವಾದ ಸ್ನೇಹವೂ, ಗೌರವವೂ ಮತ್ತು ಭಕ್ತಿಯೂ ಕಾರಣಗಳೇ ಹೊರತು ಬೇರೆ ಯಾವ ಕಾರಣವೂ ಇಲ್ಲ. ನನ್ನ ಸಂಗಡ ಬರಲು ಸಮ್ಮತ್ರವಿಲ್ಲವೆಂದಮೇಲೆ ಶ್ರೀರಾಮನು ಗುರುತಿಸಬಹುದಾದ ನಿನ್ನ ನೆನಪನ್ನುಂಟುಮಾಡುವ ಯಾವುದಾದರೂ ವಸುವನ್ನು ಕೊಡು."

ಹನುಮಂತನು ಹೀಗೆ ಹೇಳಲು ದೇವಕನ್ನಿಕೆಯಂತಿದ್ದ ಸೀತಾದೇವಿಯು ಬಿಕ್ಕಿ-ಬಿಕ್ಕಿ ಅಳುತ್ತಾ ಕಣ್ಣೀರುಸುರಿಸುತ್ತಿದ್ದುದರಿಂದ ತಡೆ-ತಡೆದು ಬರುತ್ತಿದ್ದ ಅಕ್ಷರಗಳಿಂದ ಕೂಡಿದ ಮಾತನ್ನು ನಿಧಾನವಾಗಿ ಹೇಳಿದಳು :

"ವಾಯುಪುತ್ರನೇ! ನನ್ನ ನೆನಪನ್ನು ತರುವ ಶ್ರೇಷ್ಠವಾದ ಈ ಸನ್ನಿವೇಶವನ್ನು ಶ್ರೀರಾಮನಿಗೆ ವಿವರಿಸಿ ಹೇಳು. ಚಿತ್ರಕೂಟಪರ್ವತದ ಈಶಾನ್ಯದಿಕ್ಕಿನ ತಪ್ಪಲಿನಲ್ಲಿರುವ, ಫಲ-ಮೂಲ-ಜಲಸಮೃದ್ಧವಾಗಿರುವ, ಸಿದ್ಧರಿಂದ ಆಶ್ರಯಿಸಲ್ಪಡುತ್ತಿರುವ, ಮಂದಾಕಿನೀನದಿಗೆ ಸಮೀಪದಲ್ಲಿರುವ ತಪಸ್ವಿಗಳ ಆಶ್ರಮದಲ್ಲಿ ವಾಸಮಾಡುತ್ತಿದ್ದಾಗ ಜರುಗಿದ ಈ ಘಟನೆಯನ್ನು ನನ್ನ ಪ್ರಿಯನಿಗೆ ಯಥಾವತ್ತಾಗಿ ಹೇಳು.

'ರಾಘವ! ನಾನಾವಿಧವಾದ ಪುಷ್ಪಗಳಿಂದ ಸುಗಂಧಿತವಾಗಿದ್ದ ಆ ಚಿತ್ರ ಕೂಟಪರ್ವತದ ಉಪವನಪ್ರದೇಶದಲ್ಲಿ ಬಹಳ ಹೊತ್ತಿನವರೆಗೆ ವಿಹರಿಸಿ ಬೆವರಿನಿಂದ ತೋಯ್ದುಹೋಗಿದ್ದ ನಾನು ನಿನ್ನ ತೊಡೆಯಲ್ಲಿ ಕುಳಿತು ಕೊಂಡೆನು. ಮಾಂಸಾಪೇಕ್ಷಿಯಾಗಿದ್ದ ಕಾಗೆಯೊಂದು ನನ್ನ ಸ್ತನಾಂತರದಲ್ಲಿ ಕೊಕ್ಕಿನಿಂದ ಕುಕ್ಕಿತು. ಆ ಸಮಯದಲ್ಲಿ ನಾನು ಅದನ್ನು ಹತ್ತಿರಕ್ಕೆ ಬರದಂತೆ ತಡೆಯಲು ಮಣ್ಣುಹೆಂಟೆಯನ್ನು ಅದರ ಕಡೆಗೆ ಎಸೆಯುತ್ತಾ ಓಡಿಸಲು

ಪ್ರಯತ್ನಿಸುತ್ತಿದ್ದೆನು. ನಾನೆಷ್ಟೇ ಪ್ರಯತ್ನಿಸಿದರೂ ಆ ಕಾಗೆಯು ಸ್ತನಾಂತರದಲ್ಲಿ ಕೊಕ್ಕಿನಿಂದ ಕುಕ್ಕುತ್ತಾ ಅಲ್ಲಿಯೇ ಹುದುಗಿಕೊಳ್ಳುತ್ತಿದ್ದಿತು. ಮಾಂಸ ಭಕ್ಷಣದಲ್ಲಿಯೇ ಆಸಕ್ತವಾಗಿದ್ದ ಅದು ಸ್ತನಾಂತರದಲ್ಲಿ ಕುಕ್ಕುವ ಕಾರ್ಯವನ್ನು ನಿಲ್ಲಿಸಲೇ ಇಲ್ಲ. ಆ ಸಮಯದಲ್ಲಿ ನಾನು ಆ ಕಾಗೆಯ ವಿಷಯದಲ್ಲಿ ಬಹಳವಾಗಿ ಕೋಪಗೊಂಡೆನು. ನನ್ನ ಸೀರೆಯು ಸಡಿಲವಾಗಿದ್ದಿತು. ಒಡ್ಯಾಣ ವನ್ನು ಮೇಲಕ್ಕೆಳೆದು ಸೀರೆಯನ್ನು ಬಿಗಿಗೊಳಿಸಲು ಎದ್ದೆನು. ಆ ಸಮಯ ದಲ್ಲಿ ನೀನು ನನ್ನನ್ನು ನೋಡಿ ಹಾಸ್ಯಮಾಡಿದೆ. ಅದರಿಂದ ನನಗೆ ಕೋಪವೂ–ನಾಚಿಕೆಯೂ ಆಯಿತು. ಮಾಂಸವನ್ನು ಭಕ್ಷಿಸುವುದರಲ್ಲಿಯೇ ಆಸಕ್ತವಾಗಿದ್ದ ಆ ಕಾಗೆಯು ನನ್ನನ್ನು ಬಹಳವಾಗಿ ಗಾಯಗೊಳಿಸಿದ್ದಿತು. ಕಾಗೆಯನ್ನು ಓಡಿಸುವ ಸಲುವಾಗಿ ಶ್ರಮಿಸಿ ಆಯಾಸಗೊಂಡಿದ್ದ ನಾನು ಪುನಃ ನಿನ್ನ ತೊಡೆಯ ಮೇಲೆ ಕುಳಿತೆನು. ಆಗಲೂ ನೀನು ನಗು-ನಗುತ್ತಾ ಕುಪಿತಳಾಗಿದ್ದ ನನ್ನನ್ನು ಹಾಸ್ಯಮಾಡುತ್ತಲೇ ಇದ್ದೆ. ಮರುಕ್ಷಣದಲ್ಲಿಯೇ ನೀನು ನನ್ನನ್ನು ಸಂತೈಸಿದೆ. ಕಾಗೆಯಿಂದ ಕುಕ್ಕಿಸಿಕೊಂಡು ಕೋಪಗೊಂಡಿದ್ದ ನನ್ನ ಮುಖವೆಲ್ಲವೂ ಕಣ್ಣೀರಿನಿಂದ ತೋಯ್ದುಹೋಗಿದ್ದಿತು. ಕಂಬನಿ ದುಂಬಿದ್ದ ಎರಡು ಕಣ್ಣುಗಳನ್ನೂ ನಾನು ಮೆಲ್ಲ-ಮೆಲ್ಲನೆ ಒರೆಸಿಕೊಳ್ಳುತ್ತಿದ್ದೆನು. ಅದನ್ನು ನೀನು ನೋಡಿದೆ. ಆಯಾಸದಿಂದಾಗಿ ನಾನು ಬಹಳ ಹೊತ್ತಿನವರೆಗೆ ನಿನ್ನ ತೊಡೆಯ ಮೇಲೆಯೇ ಮಲಗಿದ್ದೆನು. ನಾನು ಎಚ್ಚರಗೊಂಡನಂತರ ಭರತಾಗ್ರಜನಾದ ನೀನು ನನ್ನ ತೊಡೆಯ ಮೇಲೆ ಮಲಗಿದೆ. ಆ ವೇಳೆಗೆ ಸರಿಯಾಗಿ ಪುನಃ ಕಾಗೆಯು ಅಲ್ಲಿಗೆ ಹಾರಿಬಂದು ಕುಳಿತುಕೊಂಡಿತು. ಅಷ್ಟು ಮಾತ್ರವಲ್ಲ ; ನನ್ನ ಮೇಲೆ ಹಾರಿ ಕುಳಿತು ನನ್ನೆರಡು ಸ್ತನಗಳ ನಡುವೆ ಕಾಲುಗುರುಗಳಿಂದ ಪರಚಿ ಎದೆಯನ್ನು ಸೀಳಿಬಿಟ್ಟಿತು. ಮತ್ತೆ-ಮತ್ತೆ ಕುಕ್ಕುತ್ತಲೇ ಇದ್ದಿತು. ಇದರಿಂದಾಗಿ ನನ್ನ ಎದೆಯಿಂದ ಹೊರಹೊರಟ ರಕ್ತದ ತೊಟ್ಟುಗಳು ತೊಡೆಯ ಮೇಲೆ ಮಲಗಿದ್ದ ನಿನ್ನ ಮುಖದ ಮೇಲೆ ಬೀಳತೊಡಗಿದುವು. ಅದರಿಂದ ನೀನು ಒಡನೆಯೇ ಎಚ್ಚರಗೊಂಡೆ. ನನ್ನ ಸ್ತನಗಳ ಮಧ್ಯದಲ್ಲಿ ಕಾಗೆಯು ಕೊಕ್ಕಿನಿಂದ ಕುಕ್ಕುತ್ತಿದ್ದುದನ್ನು ನೋಡಿ ವಿಷಸರ್ಪದಂತೆ ಕೋಪಗೊಂಡು ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಹೇಳಿದೆ :

**ಕೇನ ತೇ ನಾಗನಾಸೋರು ವಿಕ್ಷತಂ ವೈ ಸ್ತನಾನ್ತರಮ್ ।**
**ಕಃ ಕ್ರೀಡತಿ ಸರೋಷೇಣ ಪಞ್ಚವಕ್ತ್ರೇಣ ಭೋಗಿನಾ ॥೨೫॥**

'ಆನೆಯ ಸೊಂಡಿಲಿನಂತೆ ತೊಡೆಗಳುಳ್ಳವಳೇ! ನಿನ್ನ ಸ್ತನಗಳ ನಡುವೆ ಗಾಯಗೊಳಿಸಿದವರು ಯಾರು? ಕೋಪಗೊಂಡಿರುವ ಐದು ಹೆಡೆಗಳ ಸರ್ಪದೊಡನೆ ಯಾವನು ಹೀಗೆ ಆಟವಾಡುತ್ತಿದ್ದಾನೆ?'

ಹೀಗೆ ಹೇಳಿ ನೀನು ಸುತ್ತಲೂ ಅಲ್ಲಿಲ್ಲಿ ನೋಡುತ್ತಿದ್ದಾಗ ನನ್ನ ಹೃದಯದ ರಕ್ತದಿಂದ ತೋಯ್ದುಹೋಗಿದ್ದ, ಅತಿಚೂಪಾದ ಉಗುರುಗಳಿರುವ ಕಾಗೆಯೊಂದು ನನಗೆದುರಾಗಿ ಕುಳಿತಿರುವುದನ್ನು ನೋಡಿದೆ. ಪಕ್ಷಿಗಳಲ್ಲಿ ಶ್ರೇಷ್ಠವೆನಿಸಿದ್ದ ಆ ಕಾಗೆಯು ಇಂದ್ರನ ಮಗನಂತೆ. ವಾಯುವೇಗಕ್ಕೆ ಸಮಾನವೇಗದಿಂದ ಕೂಡಿದ್ದ ಆ ಇಂದ್ರಪುತ್ರನು ವಿಹಾರಾರ್ಥವಾಗಿ ಭೂಮಿಗೆ ಬಂದಿದ್ದನಂತೆ. ಆ ಸಮಯದಲ್ಲಿ ಮಹಾಬಾಹುವಾದ ನಿನ್ನ ಕಣ್ಣುಗಳು ಕೋಪದಿಂದ ಗರ-ಗರನೆ ತಿರುಗುತ್ತಿವೆಯೋ ಎಂಬಂತೆ ಕಾಣುತ್ತಿದ್ದುವು. ಬುದ್ಧಿವಂತರಲ್ಲಿ ಶ್ರೇಷ್ಠನಾದ ನೀನು ಆ ಕಾಗೆಯ ವಿಷಯದಲ್ಲಿ ಕ್ರೂರವಾದ ನಿಶ್ಚಯವನ್ನೇ ಮಾಡಿದೆ. ಅಲ್ಲಿಯೇ ಹಾಸಿದ್ದ ದರ್ಭೆಯಲ್ಲಿ ಒಂದು ದರ್ಭೆಯನ್ನೆತ್ತಿಕೊಂಡು ಅದನ್ನು ಬ್ರಹ್ಮಾಸ್ತ್ರದ ಮಂತ್ರದಿಂದ ಅಭಿಮಂತ್ರಿಸಿದೆ. ಹಾಗೆ ಅಭಿಮಂತ್ರಿಸಿ ಪ್ರಯೋಗಿಸಿದ ಬ್ರಹ್ಮಾಸ್ತ್ರವು ಪ್ರಳಯಾಗ್ನಿಯೋಪಾದಿಯಲ್ಲಿ ಪ್ರಜ್ವಲಿಸುತ್ತಾ ಕಾಗೆಯನ್ನು ಎದುರಿಸಿ ನಿಂತಿತು. ಕಾಗೆಯು ಭಯಪಟ್ಟುಕೊಂಡು ವೇಗವಾಗಿ ಆಕಾಶದ ಕಡೆಗೆ ಹಾರಿಹೋಯಿತು. ನಿನ್ನಿಂದ ಪ್ರಮುಕ್ತವಾದ ದರ್ಭಾಸ್ತ್ರವೂ ಕಾಗೆಯನ್ನು ಎಡೆಬಿಡದೆ ಹಿಂಬಾಲಿಸಿತು. ಬ್ರಹ್ಮಾಸ್ತ್ರದಿಂದ ಹಿಂಬಾಲಿಸಲ್ಪಟ್ಟ ಆ ಕಾಗೆಯು ಹಲವು ಕಡೆಗಳಲ್ಲಿ ಹಾರಾಡಿತು. ತನ್ನನ್ನು ದರ್ಭಾಸ್ತ್ರದಿಂದ ರಕ್ಷಿಸಿಕೊಳ್ಳುವ ಸಲುವಾಗಿ ಭೂಲೋಕವೇ ಮೊದಲ್ಗೊಂಡು ಸತ್ಯಲೋಕದವರೆಗಿನ ಎಲ್ಲ ಲೋಕಗಳಲ್ಲಿಯೂ ಸುತ್ತಾಡಿತು. ರಕ್ಷಣೆ ಯನ್ನು ಪಡೆಯುವ ಸಲುವಾಗಿ ತಂದೆಯಾದ ಇಂದ್ರನ ಸಮೀಪಕ್ಕೂ ಹೋಯಿತು. ಆದರೆ ಇಂದ್ರನೂ ಅದನ್ನು ಪರಿತ್ಯಜಿಸಿದನು. ಹಿಂಬಾಲಿಸಿ ಬರುತ್ತಿದ್ದ ದರ್ಭಾಸ್ತ್ರದಿಂದ ಅದನ್ನು ಯಾರೂ ರಕ್ಷಿಸುವ ಧೈರ್ಯಮಾಡ ಲಿಲ್ಲ. ಅನಂತರ ಆ ಕಾಗೆಯು ಅನೇಕ ಋಷಿ-ಮಹರ್ಷಿಗಳ ಮೊರೆಹೊಕ್ಕಿತು.

ಅವರಾರೂ ಅದನ್ನು ರಕ್ಷಿಸಲು ಮುಂದೆ ಬರಲಿಲ್ಲ. ಮೂರು ಲೋಕಗಳನ್ನೂ ದಾಟಿಕೊಂಡು ಎಲ್ಲಿಯೂ ರಕ್ಷಣೆಯು ಸಿಕ್ಕದ ಕಾರಣ ಅದು ಪುನಃ ನಿನ್ನನ್ನೇ ಶರಣುಹೊಂದಿತು. ಶರಣಾಗತರಕ್ಷಕನಾದ ನೀನು ಶರಣಾಗತನಾಗಿ ನಿನ್ನ ಮುಂದೆ ಬಂದು ಬಿದ್ದಿದ್ದ ಕಾಗೆಯನ್ನು–ಅದು ವಧಿಸಲು ಅರ್ಹವೇ ಆಗಿದ್ದರೂ–ಸಂರಕ್ಷಿಸಿದೆ.

ಆ ಸಮಯದಲ್ಲಿ ಕಾಗೆಯು ಶಕ್ತಿಗುಂದಿದ್ದಿತು. ಅದರ ಮುಖವು ಬಾಡಿದ್ದಿತು. ಬ್ರಹ್ಮಾಸ್ತ್ರಪ್ರಹಾರದಿಂದ ಸತ್ತು ಕೆಳಗೆ ಬೀಳುವುದರಲ್ಲಿದ್ದ ಕಾಗೆಗೆ ನೀನು ಹೇಳಿದೆ :

"ಇಂದ್ರಪುತ್ರನೇ! ಬ್ರಹ್ಮಾಸ್ತ್ರವನ್ನು ವ್ಯರ್ಥಗೊಳಿಸಲಂತೂ ಸಾಧ್ಯವೇ ಇಲ್ಲ. ಅದು ವ್ಯರ್ಥವಾಗದ ರೀತಿಯಲ್ಲಿ ಏನು ಮಾಡಬೇಕೆಂಬುದನ್ನು ನೀನೇ ಹೇಳು."

ಅದಕ್ಕೆ ಕಾಗೆಯು ಹೇಳಿತು :

"ಶ್ರೀರಾಮ! ನಿನ್ನ ಈ ಬ್ರಹ್ಮಾಸ್ತ್ರವು ನನ್ನ ಬಲಗಣ್ಣನ್ನು ನಾಶಗೊಳಿಸಲಿ."

ಕಾಕಾಸುರನು ಬಲಗಣ್ಣನ್ನು ಬ್ರಹ್ಮಾಸ್ತ್ರಕ್ಕೆ ಬಲಿಗೊಡಲು ಒಪ್ಪಿದ ನಂತರ ಅವನನ್ನೇ ಹಿಂಬಾಲಿಸುತ್ತಿದ್ದ ಬ್ರಹ್ಮಾಸ್ತ್ರವು ನಿನ್ನ ಸಂಕಲ್ಪದಂತೆ ಕಾಗೆಯ ಬಲಗಣ್ಣನ್ನು ವಿನಾಶಗೊಳಿಸಿತು. ಬಲಗಣ್ಣನ್ನು ಬಲಿಕೊಟ್ಟು ಕಾಕಾಸುರನು ತನ್ನ ಪ್ರಾಣಗಳನ್ನು ಉಳಿಸಿಕೊಂಡನು.

ಅನಂತರ ಕಾಕಾಸುರನು ವೀರನಾದ ನಿನಗೂ ನಿನ್ನ ತಂದೆಯಾದ ದಶರಥರಾಜನಿಗೂ ನಮಸ್ಕರಿಸಿ, ನಿನ್ನ ಅಪ್ಪಣೆಯನ್ನು ಪಡೆದು ತನ್ನ ಭವನಕ್ಕೆ ಹೊರಟುಹೋದನು.

ಮಹೀಪತಿಯೇ! ರಾಮಚಂದ್ರ! ನನ್ನ ಸಲುವಾಗಿ ಕ್ಷುದ್ರವಾದ ಕಾಗೆಯೇ ಮೇಲೆಯೇ ನೀನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದೆ. ಹೀಗಿರುವಾಗ ನಿನ್ನ ಬಳಿಯಿಂದ ನನ್ನನ್ನು ಅಪಹರಿಸಿಕೊಂಡು ಬಂದಿರುವ ರಾಕ್ಷಸನ ವಿಷಯದಲ್ಲಿ ಕ್ಷಮೆಯನ್ನೇಕೆ ತಾಳಿರುವೆ? ಅತ್ಯಂತ ಉತ್ಸಾಹಯುಕ್ತ ವಾದ ಕೃಪೆಯನ್ನು ನನ್ನಲ್ಲಿ ತೋರು. ನಾಥನೇ! ನಿನ್ನಂತಹವನನ್ನು ನಾಥ

ನನ್ನಾಗಿ ಪಡೆದಿದ್ದರೂ ನಾನು ಅನಾಥಳಂತೆಯೇ ಕಾಣುತ್ತಿದ್ದೇನೆ. 'ಆನೃಶಂಸ್ಯಂ ಪರೋ ಧರ್ಮಃ' 'ದಯಾಪರತೆಯೇ ಶ್ರೇಷ್ಠವಾದ ಧರ್ಮ'– ಎಂಬ ಮಾತನ್ನು ನಿನ್ನಿಂದಲೇ ನಾನು ಹಲವಾರು ಬಾರಿ ಕೇಳಿರುವೆನು. ಆದುದರಿಂದ ನೀನು ನನ್ನ ವಿಷಯದಲ್ಲಿ ಕೃಪಾವಿಶಿಷ್ಟನಾಗಿರುವೆ ಎಂಬುದರಲ್ಲಿ ಸಂಶಯವೇ ಇಲ್ಲ. ನೀನು ಮಹಾವೀರ್ಯವಂತನು ; ಮಹೋತ್ಸಾಹ ಶಾಲಿಯು ; ಮಹಾಬಲಿಷ್ಠನು ; ಯಾವುದೇ ಸಂದರ್ಭದಲ್ಲಿಯೂ ಮನಸ್ಸಿನಲ್ಲಿ ಕ್ಷೋಭೆ ಹೊಂದದವನು ; ಗಾಂಭೀರ್ಯದಲ್ಲಿ ಸಾಗರಕ್ಕೆ ಸಮಾನನಾದವನು ; ನಾಲ್ಕು ಸಮುದ್ರಗಳಿಂದ ಪರಿವೃತವಾಗಿರುವ ಈ ಭೂಮಂಡಲಕ್ಕೆ ಇಂದ್ರನಂತೆ ಇರುವನು–ಎಂಬುದನ್ನು ನಾನು ತಿಳಿದಿರುವೆನು."

ಹನುಮಂತ! ಹೀಗೆಲ್ಲಾ ನಾನು ಹೇಳಿದೆನೆಂದು ಶ್ರೀರಾಮನಿಗೆಹೇಳು.

'ನೀನು ಸಕಲಗುಣಸಮುದ್ರನಾಗಿದ್ದು, ಅಸ್ತ್ರವಿದ್ಯೆಯನ್ನು ತಿಳಿದವರೆಲ್ಲರಿಗೂ ಶ್ರೇಷ್ಠನಾಗಿ ಬಲಿಷ್ಠನೂ ಸತ್ತ್ವವಂತನೂ ಆಗಿದ್ದರೂ ಯಾವ ಕಾರಣದಿಂದ ರಾಕ್ಷಸರ ಮೇಲೆ ಇದುವರೆಗೂ ಅಸ್ತ್ರಗಳನ್ನು ಪ್ರಯೋಗಿಸಿರು ವುದಿಲ್ಲ?' ನಾಗ-ಗಂಧರ್ವ-ರಾಕ್ಷಸರೇ ಆಗಲೀ ಮರುತ್ತುಗಳೇ ಆಗಲೀ–ಯುದ್ಧದಲ್ಲಿ ಶ್ರೀರಾಮನ ಅಸ್ತ್ರಗಳ ವೇಗವನ್ನು ತಡೆಯಲು ಶಕ್ತರಲ್ಲ. 'ಅಂತಹ ವೀರ್ಯವಂತನಾದ ನಿನಗೆ ನನ್ನ ವಿಷಯದಲ್ಲಿ ಸ್ವಲ್ಪವಾದರೂ ಆತುರವಿದ್ದುದಾದರೆ ತೀಕ್ಷ್ಣವಾದ ಬಾಣಗಳ ಪ್ರಯೋಗದಿಂದ ನನಗೆ ಉಪಟಳವನ್ನು ಕೊಡುತ್ತಿರುವ ರಾಕ್ಷಸರನ್ನು ಯಾವ ಕಾರಣದಿಂದ ನಿರ್ನಾಮಮಾಡುತ್ತಿಲ್ಲ?' ಮಹಾಬಲನಾದ, ವೀರನಾದ, ಶತ್ರುತಾಪಕನಾದ ಲಕ್ಷ್ಮಣನಾದರೂ ಯಾವ ಕಾರಣದಿಂದ ಅಣ್ಣನ ಅನುಜ್ಞೆಯನ್ನು ಪಡೆದು ನನ್ನ ರಕ್ಷಣೆಗಾಗಿ ಪ್ರಯತ್ನಿಸುತ್ತಿಲ್ಲ? ದೇವತೆಗಳಿಂದಲೂ ಎದುರಿಸಲು ಅಸಾಧ್ಯರಾದ, ಇಂದ್ರ-ವಾಯುಗಳ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕಂಗೊಳಿಸುತ್ತಿರುವ, ಪುರುಷಸಿಂಹರಾದ ಆ ರಾಜಕುಮಾರರು ನನ್ನನ್ನೇಕೆ ಉಪೇಕ್ಷಿಸುತ್ತಿದ್ದಾರೆ? ಶತ್ರುತಾಪಕರಾದ ರಾಮ-ಲಕ್ಷ್ಮಣರು ನನ್ನನ್ನು ರಕ್ಷಿಸಲು ಸಮರ್ಥರಾಗಿದ್ದರೂ ನನ್ನ ರಕ್ಷಣೆಯ ಕಡೆಗೆ ಗಮನಕೊಡದಿರುವುದಕ್ಕೆ ಹಿಂದೆ ನಾನು ಮಾಡಿರುವ ಪಾಪಕರ್ಮವೇ ಕಾರಣವಿರಬೇಕು. ಆ ಪಾಪವು ಮಹತ್ತಾಗಿಯೇ ಇರಬೇಕು. ಇದರಲ್ಲಿ ಸಂಶಯವೇ ಇಲ್ಲ."

ವೈದೇಹಿಯು ಕಣ್ಣೀರು ಸುರಿಸುತ್ತಾ ಕರುಣಾಜನಕವಾದ ರೀತಿಯಲ್ಲಿ ಹೇಳಿದ ಮಾತುಗಳನ್ನು ಕೇಳಿ ಕಪಿನಾಯಕನಾದ ಮಹಾತೇಜಸ್ವಿಯಾದ ಹನುಮಂತನು ಹೇಳಿದನು :

"ದೇವಿ! ನಿನ್ನ ವಿರಹಶೋಕದಿಂದಾಗಿ ಶ್ರೀರಾಮನು ಎಲ್ಲ ವಿಷಯ ಗಳಿಂದಲೂ ವಿಮುಖನಾಗಿದ್ದಾನೆ. ಈ ಮಾತನ್ನು ನಾನು ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ. ಶ್ರೀರಾಮನು ದುಃಖಪಡುತ್ತಿದ್ದರೆ ಲಕ್ಷ್ಮಣನೂ ಪರಿತಪಿಸುತ್ತಿರುತ್ತಾನೆ. ಹೇಗೋ ನೀನು ಕಾಣಸಿಕೊಂಡಿರುವೆ. ನೀನಿರುವ ಸ್ಥಳವು ತಿಳಿದುಹೋಗಿದೆ. ಆದುದರಿಂದ ದುಃಖಪಡಬೇಕಾದ ಕಾಲವಿದಲ್ಲ. ದುಃಖಿಸಬೇಕಾಗಿದ್ದ ಕಾಲವು ಕಳೆದುಹೋಯಿತು. ಈ ಕ್ಷಣದಲ್ಲಿಯೇ ನೀನು ನಿನ್ನ ದುಃಖಕ್ಕೆ ಕೊನೆಯನ್ನು ಕಾಣುವೆ. ನಿನ್ನನ್ನು ನೋಡುವುದರಲ್ಲಿಯೇ ಹೆಚ್ಚಿನ ಉತ್ಸಾಹವನ್ನು ಹೊಂದಿರುವ, ಮಹಾಬಲಿಷ್ಠರಾದ, ಪುರುಷ ಸಿಂಹರಾದ ರಾಮ-ಲಕ್ಷ್ಮಣರು ನಿನ್ನನ್ನು ಪಡೆಯುವ ಸಲುವಾಗಿ ಲಂಕೆಯನ್ನೇ ಸುಟ್ಟು ಬೂದಿಮಾಡಿಬಿಡುವರು. ಶ್ರೀರಾಘವನು ಸಮರದಲ್ಲಿ ಅತ್ಯಂತ ಕ್ರೂರಿಯಾದ ರಾವಣನನ್ನು ಬಂಧುಗಳ ಸಹಿತವಾಗಿ ಸಂಹರಿಸಿ ನಿನ್ನನ್ನು ಅಯೋಧ್ಯೆಗೆ ಕರೆದೊಯ್ಯುತ್ತಾನೆ. ನಾನು ಹಿಂದಿರುಗಿದನಂತರ ಶ್ರೀರಾಮನಿಗೆ ಏನು ಹೇಳಬೇಕೆಂಬುದನ್ನು ಹೇಳು. ಹಾಗೆಯೇ ಲಕ್ಷ್ಮಣನಿಗೂ, ತೇಜಸ್ವಿಯಾದ ಸುಗ್ರೀವನಿಗೂ, ನಿನ್ನನ್ನು ಹುಡುಕಲು ನನ್ನೊಡನೆ ಬಂದಿರುವ ವಾನರರಿಗೂ ಏನು ಹೇಳಬೇಕು? ನಿನ್ನ ಸಂದೇಶವೇನು?"

ಹನುಮಂತನು ಹೀಗೆ ಹೇಳಲು ಸೀತಾದೇವಿಯು ಪುನಃ ಹೇಳ ತೊಡಗಿದಳು :

"ಮನನಶೀಲಳಾದ ಕೌಸಲ್ಯೆಯು ಲೋಕಕ್ಕೇ ಒಡೆಯನಾದ ಯಾವ ನನ್ನು ಹಡೆದಳೋ–ಅಂತಹ ಶ್ರೀರಾಮನನ್ನು ನನ್ನ ಸಲುವಾಗಿ ಕುಶಲವನ್ನು ಪ್ರಶ್ನಿಸು. ನನ್ನ ಸಲುವಾಗಿ ತಲೆಬಾಗಿ ನಮಸ್ಕರಿಸು.

ದಿವ್ಯವಾದ ಮಾಲೆಗಳನ್ನೂ, ಸಮಸ್ತವಾದ ರತ್ನಗಳನ್ನೂ, ಪ್ರಿಯರಾದ ಶ್ರೇಷ್ಠಸ್ತ್ರೀಯರನ್ನೂ, ವಿಶಾಲವಾದ ಪೃಥ್ವಿಯಲ್ಲಿ ಮತ್ತೆಲ್ಲೂ ಸಿಕ್ಕದಿರುವ ಮಹೈಶ್ವರ್ಯವನ್ನೂ ಪರಿತ್ಯಜಿಸಿ, ತಂದೆ-ತಾಯಿಗಳನ್ನು ಗೌರವಿಸಿ ಮತ್ತು

ಪ್ರಸನ್ನಗೊಳಿಸಿ, ಸುಮಿತ್ರಾದೇವಿಯ ಸುಪುತ್ರನಾದ ಲಕ್ಷ್ಮಣನು ಶ್ರೀರಾಮ ನನ್ನು ಅನುಸರಿಸಿ ಅರಣ್ಯಕ್ಕೆ ಬಂದನು. ಧರ್ಮಾತ್ಮನಾದ ಲಕ್ಷ್ಮಣನು ಅರಮನೆಯ ಅನುಪಮವಾದ ಸುಖವನ್ನು ತೊರೆದು ಭಕ್ತಿಭಾವದಿಂದ ಅರಣ್ಯದಲ್ಲಿ ಶ್ರೀರಾಮನನ್ನು ರಕ್ಷಿಸುತ್ತಾ ಅವನನ್ನೇ ಅನುಸರಿಸಿ ಯಾವಾಗಲೂ ಹೋಗುತ್ತಿರುವನು. ಸಿಂಹದಂತೆ ಹೆಗಲುಳ್ಳ, ಮಹಾಬಾಹುವಾದ, ಬುದ್ಧಿವಂತನಾದ, ನೋಡಲು ಕಡುಚೆಲುವನಾದ ಲಕ್ಷ್ಮಣನು ಶ್ರೀರಾಮನ ವಿಷಯದಲ್ಲಿ ತಂದೆಯಂತೆ ನಡೆದುಕೊಳ್ಳುತ್ತಾನೆ. ನನ್ನ ವಿಷಯ ದಲ್ಲಿ ತಾಯಿಯಂತೆ ನಡೆದುಕೊಳ್ಳುತ್ತಾನೆ. ರಾವಣನು ನನ್ನನ್ನು ಸೆಳೆ ದೊಯ್ದುದು ಅವನಿಗೆ ತಿಳಿಯದು. ವೃದ್ಧಸೇವಿಯಾದ ಶ್ರೀಮಂತನಾದ ಲಕ್ಷ್ಮಣನು ಮಹಾಶಕ್ತನು. ಆದರೆ ಹೆಚ್ಚು ಮಾತನಾಡುವವನಲ್ಲ. ರಾಜಪುತ್ರನಾದ ಶ್ರೀರಾಮನಿಗೆ ಅತ್ಯಂತ ಪ್ರಿಯನಾದವನು. ನನ್ನ ಮಾವನಾದ ದಶರಥ ನಂತೆಯೇ ಗುಣಶ್ರೇಷ್ಠನು. ನನಗೂ ಅತ್ಯಂತಪ್ರಿಯನಾದವನು. ಯಾವು ದಾದರೂ ಕಾರ್ಯವನ್ನು ವಹಿಸಿಕೊಟ್ಟರೆ ಸ್ವಲ್ಪವಾದರೂ ಹಿಂಜರಿಯದೇ ವಹಿಸಿಕೊಂಡು ಅದನ್ನು ಸಾಧಿಸುತ್ತಾನೆ. ಈ ಕಾರಣದಿಂದಲೇ ಶ್ರೀರಾಮನು ತೀರಿಹೋದ ತನ್ನ ತಂದೆಯನ್ನೂ ಸ್ಮರಿಸುವುದಿಲ್ಲ.

ನನ್ನ ಮಾತಿನಂತೆ ನೀನು ನನ್ನ ಸಲುವಾಗಿ ಲಕ್ಷ್ಮಣನ ಕುಶಲವನ್ನು ಕೇಳಬೇಕು. ಅವನು ಮೃದುಸ್ವಭಾವದವನು. ಪರಿಶುದ್ಧನು. ದಕ್ಷನು. ಶ್ರೀರಾಮನಿಗೆ ಅತಿಪ್ರಿಯನಾದವನು. ಅವನು ನನ್ನ ದುಃಖವನ್ನು ಪರಿಹರಿಸುವ ಕಾರ್ಯದಲ್ಲಿ ತೊಡಗುವಂತೆ ಅವನಿಗೆ ನೀನು ಹೇಳಬೇಕು.

ವಾನರಶ್ರೇಷ್ಠನೇ! ನೀನು ಈ ಕಾರ್ಯನಿರ್ವಹಣೆಯಲ್ಲಿ ಪ್ರಮಾಣ ಭೂತನಾಗಿರುವೆ. ನಿನ್ನ ಪ್ರೇರಣೆಯಿಂದ ಶ್ರೀರಾಮನು ನನ್ನ ವಿಮೋಚನೆಗೆ ಪ್ರಯತ್ನಿಸಲಿ. ಶೂರನಾದ ಶ್ರೀರಾಮನಿಗೆ ನೀನು ಈ ಮಾತನ್ನು ಪದೇ ಪದೇ ಹೇಳುತ್ತಿರಬೇಕು.

**ಜೀವಿತಂ ಧಾರಯಿಷ್ಯಾಮಿ ಮಾಸಂ ದಶರಥಾತ್ಮಜ ।**
**ಊರ್ಧ್ವಂ ಮಾಸಾನ್ನ ಜೀವೇಯಂ ಸತ್ಯೇನಾಹಂ ಬ್ರವೀಮಿ ತೇ ॥**

‘ದಶರಥಪುತ್ರನೇ! ಇಂದಿನಿಂದ ಒಂದು ತಿಂಗಳವರೆಗೆ ಮಾತ್ರವೇ

ನಾನು ಜೀವವನ್ನು ಧರಿಸಿರುತ್ತೇನೆ. ಮಾಸವು ಮೀರಿತೆಂದರೆ ನಾನು ಜೀವಿಸಿರುವುದಿಲ್ಲ. ಈ ಮಾತನ್ನು ನಾನು ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ.

**ರಾವಣೇನೋಪರುದ್ಧಾಂ ಮಾಂ ನಿಕೃತ್ಯಾ ಪಾಪಕರ್ಮಣಾ ।**
**ತ್ರಾತುಮರ್ಹಸಿ ವೀರ ತ್ವಂ ಪಾತಾಲಾದಿವ ಕೌಶಿಕೀಮ್ ॥೬೬॥**

ಪಾಪಿಷ್ಠನಾದ ರಾವಣನು ವಂಚನೆಯಿಂದ ನನ್ನನ್ನು ಅಪಹರಿಸಿ ತಂದು ಇಲ್ಲಿ ಬಂಧನದಲ್ಲಿಟ್ಟಿದ್ದಾನೆ. ಪಾತಾಲದಲ್ಲಿ ಬಚ್ಚಿಡಲ್ಪಟ್ಟಿದ್ದ ಇಂದ್ರನ ಸಂಪತ್ತನ್ನು ಹೇಗೋ ಹಾಗೆ ನನ್ನನ್ನು ಉದ್ಧರಿಸುವುದು ನಿನಗೆ ಯೋಗ್ಯ ವಾಗಿದೆ.'*

ಹನುಮಂತ! ಈ ನನ್ನ ಮಾತನ್ನೇ ಶ್ರೀರಾಮನಿಗೆ ಯಥಾವತ್ತಾಗಿ ಹೇಳಬೇಕು."

ಸೀತಾದೇವಿಯು ಹನುಮಂತನಿಗೆ ಹೀಗೆ ಹೇಳಿ ಶುಭಾವಹವಾದ, ದಿವ್ಯವಾದ, ಸೀರೆಯ ಸೆರಗಿನಲ್ಲಿದ್ದ ಚೂಡಾಮಣಿಯನ್ನು ಹೊರತೆಗೆದು ಶ್ರೀರಾಮನಿಗದನ್ನು ಕೊಡಲು ಹೇಳಿ ಹನುಮಂತನಿಗೆ ಕೊಟ್ಟಳು. ವೀರನಾದ ಹನುಮಂತನು ಆ ಚೂಡಾಮಣಿಯನ್ನು ಬೆರಳಿನಲ್ಲಿಟ್ಟುಕೊಂಡನು. ಅವನ ಭುಜವು ಆ ಮಣಿಯನ್ನು ಧರಿಸಲು ಸಮರ್ಥವಾಗಲಿಲ್ಲ.[1]

ಕಪಿಶ್ರೇಷ್ಠನಾದ ಹನುಮಂತನು ಹೀಗೆ ಶ್ರೇಷ್ಠವಾದ ಆ ಚೂಡಾಮಣಿ ಯನ್ನು ಸೀತಾದೇವಿಯಿಂದ ಪಡೆದು ಅವಳಿಗೆ ಪ್ರದಕ್ಷಿಣ-ನಮಸ್ಕಾರಪೂರ್ವಕ ವಾಗಿ ಅಭಿವಾದನಮಾಡಿ ಅವಳ ಪಕ್ಕದಲ್ಲಿ ವಿನೀತನಾಗಿ ನಿಂತುಕೊಂಡನು.

---

* ಕೌಶಿಕೀ ಎಂಬುದಕ್ಕೆ ಭೂಮಿ ಎಂಬ ಅರ್ಥವಿಲ್ಲ. ಭೂಮಿಯು ಕೌಶಿಕ ಗೋತ್ರೋದ್ಭವಳೆಂಬುದಕ್ಕೆ ಆಧಾರವೂ ಕಂಡುಬರುವುದಿಲ್ಲ. ಭೂಮಿಯು ಅಪಹೃತಳಾಗಿ ಪಾತಾಳಕ್ಕೆ ಹೋಗಿದ್ದ ಕಾರಣ ಕೌಶಿಕೀ ಎಂಬ ಪದಕ್ಕೆ ಭೂಮಿಯೆಂದು ಸಾಮಾನ್ಯವಾಗಿ ಎಲ್ಲರೂ ವ್ಯಾಖ್ಯಾನಮಾಡಿರುತ್ತಾರೆ. ಮತ್ತೊಬ್ಬರು ಕೌಶಿಕೀ ಎಂಬುದಕ್ಕೆ ಕೌಶಿಕಃ –ಇಂದ್ರಃ, ತತ್ಸಂಬಂಧಿನೀ ಶ್ರೀಃ ಎಂದು ಅರ್ಥಮಾಡಿ ಹಿಂದೊಮ್ಮೆ ಇಂದ್ರನ ರಾಜ್ಯಲಕ್ಷ್ಮಿಯು ಪಾತಾಳದಲ್ಲಿ ಹುದುಗಿಕೊಂಡಿದ್ದು ಅವಳನ್ನು ನಾರಾಯಣನು ಕರೆತಂದ ಬ್ರಹ್ಮಪುರಾಣದ ಪ್ರಸಂಗವನ್ನು ಉದ್ಧರಿಸಿ ಹೇಳಿರುತ್ತಾರೆ.

1 ಚೂಡಾಮಣಿ ಎಂದರೆ ಜಡೆಬಿಲ್ಲೆ ಅಥವಾ ತಲೆಯಲ್ಲಿ ಧರಿಸುವ ರತ್ನಾಬವಣ. ಜಡೆಬಿಲ್ಲೆಯ ಹಿಂದೆ ಕೂದಲಿನೊಡನೆ ಸೇರಿಸಲು ಒಂದು ತೂಬಿರುತ್ತದೆ. ಅದು ಆಗಿನ

ಸೀತಾದೇವಿಯ ದರ್ಶನದಿಂದಾಗಿ ಹನುಮಂತನಿಗೆ ಅಪಾರವಾದ ಹರ್ಷ ವುಂಟಾಗಿದ್ದಿತು. ಅವನ ಶರೀರವು ಮಾತ್ರ ಅಲ್ಲಿದ್ದಿತು. ಮನಸ್ಸು ಆಗಲೇ



ರಾಮನ ಬಳಿಗೆ ಹೋಗಿದ್ದಿತು. ಜನಕನ ಮಗಳಾದ ಸೀತಾದೇವಿಯಿಂದ ಧರಿಸಲ್ಪಟ್ಟಿದ್ದ ಮಹಾಮೌಲ್ಯದ ಶ್ರೇಷ್ಠವಾದ ಆ ಚೂಡಾಮಣಿಯನ್ನು

---

ಕಾಲದಲ್ಲಿ ದೊಡ್ಡದಾಗಿದ್ದಿರಬಹುದು. ಅದನ್ನು ಬೆರಳಲ್ಲಿ ತೊಟ್ಟುಕೊಂಡ ಹನುಮಂತ–ಎಂಬ ಅಭಿಪ್ರಾಯವು ಈ ಶ್ಲೋಕದಲ್ಲಿ ಬರುತ್ತದೆ. ತೋಳ್ಬಕೆಯಂತೆ ಅದನ್ನು ಧರಿಸಲು ಸಾಧ್ಯವಾಗಲಿಲ್ಲ. ಆ ಸಮಯದಲ್ಲಿ ಹನುಮಂತನು ಚಿಕ್ಕದಾದ

ಪ್ರಭಾವವಿಶೇಷದಿಂದ ಪಡೆದು–ಎತ್ತರವಾದ ಪರ್ವತದ ಮೇಲ್ಭಾಗದಲ್ಲಿ ಬೀಸುವ ಬಿರುಗಾಳಿಯಿಂದ ಮುಕ್ತನಾದವನಂತೆ–ಅತ್ಯಂತಸಂತಸದ ಮನಸ್ಸನ್ನು ಹೊಂದಿ ಹಿಂದಿರುಗಲು ಅನುವಾದನು.

ಇ೮ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೩೯ನೆಯ ಸರ್ಗ

## ಚೂಡಾಮಣಿಯನ್ನು ಪಡೆದು ಹೊರಟ ಹನುಮಂತನಿಗೆ ಸೀತಾದೇವಿಯು ರಾಮ-ಲಕ್ಷ್ಮಣರೇ ಮೊದಲಾದವರು ತನ್ನ ಬಿಡುಗಡೆಗಾಗಿ ಹೊರಡಲು ಪ್ರೋತ್ಸಾಹಿಸುವಂತೆ ಹೇಳಿದುದು : ಸಮುದ್ರವನ್ನು ದಾಟಿಕೊಂಡು ಬರುವುದರಲ್ಲಿ ಸಂದೇಹಿಸಿದ ಸೀತಾದೇವಿಗೆ ಹನುಮಂತನು ವಾನರನಾಯಕರ ಪರಾಕ್ರಮವನ್ನು ವಿವರಿಸಿ ಹೇಳಿದುದು

**ಮಣಿಂ ದತ್ತ್ವಾ ತತಃ ಸೀತಾ ಹನುಮನ್ತಮಥಾಬ್ರವೀತ್ ।**
**ಅಭಿಜ್ಞಾನಮಭಿಜ್ಞಾತಮೇತದ್ರಾಮಸ್ಯ ತತ್ತ್ವತಃ ॥೧॥**

ಚೂಡಾಮಣಿಯನ್ನು ಕೊಟ್ಟ ಬಳಿಕ ಸೀತಾದೇವಿಯು ಹನುಮಂತನಿಗೆ ಹೇಳಿದಳು : "ಮಾರುತಿಯೇ! ನಾನೀಗ ಕೊಟ್ಟಿರುವ ಗುರುತು ಶ್ರೀರಾಮ ನಿಗೆ ಚೆನ್ನಾಗಿ ಗೊತ್ತಿದೆ.

ಈ ಚೂಡಾಮಣಿಯನ್ನು ಕೊಟ್ಟೊಡನೆಯೇ ವೀರನಾದ ಶ್ರೀರಾಮನು ನನ್ನನ್ನೂ, ನನ್ನ ತಾಯಿಯನ್ನೂ ಮತ್ತು ದಶರಥಮಹಾರಾಜನನ್ನೂ ಸ್ಮರಿಸಿ ಕೊಳ್ಳುವನು.*

---

ಆಕೃತಿಯನ್ನು ಧರಿಸಿದ್ದರೂ ಚೂಡಾಮಣಿಯನ್ನು ತೋಳ್ಬಳೆಯಂತೆ ಧರಿಸುವಷ್ಟು ಅವನ ತೋಳು ಚಿಕ್ಕದಾಗಿರಲಿಲ್ಲ. ಆದುದರಿಂದ ಚಂಚಲಚಿತ್ತನಾದ ಹನುಮಂತನು ತತ್ಕ್ಷಣದಲ್ಲಿ ಆ ದಿವ್ಯಾಭರಣವನ್ನು ಎಲ್ಲಿಟ್ಟುಕೊಳ್ಳಬೇಕೆಂಬುದನ್ನು ಯೋಚಿಸಹೋಗದೇ ಚೂಡಾ ಮಣಿಯ ಹಿಂಭಾಗವು ಉಂಗುರದಂತೆ ಇದ್ದುದರಿಂದ ಅದನ್ನು ಉಂಗುರದಂತೆಯೇ ಬೆರಳಲ್ಲಿ ಧರಿಸಿದನು–ಎಂದು ವಿವರಿಸಬಹುದಾಗಿದೆ.

* ಮುಂದೆ ಶ್ರೀರಾಮನು ೬೬ನೆಯ ಸರ್ಗದಲ್ಲಿ ಹನುಮಂತನು ಕೊಟ್ಟ ಮಣಿಯನ್ನು

ಹರಿಶ್ರೇಷ್ಠನೇ! ಒಳ್ಳೆಯ ಉತ್ಸಾಹದಿಂದ ಇಲ್ಲಿಗೆ ಬಂದಿರುವ ನೀನು ಮತ್ತೆ ಈ ಕಾರ್ಯವನ್ನು ಪೂರ್ಣವಾಗಿ ನೆರವೇರಿಸಬೇಕೆಂಬ ಉತ್ಸಾಹವನ್ನು ಹೊಂದಿ ಮುಂದೆ ಮಾಡಬೇಕಾದುದನ್ನು ಸಮಾಲೋಚಿಸು. ಈ ಕಾರ್ಯದ ವಿಷಯದಲ್ಲಿ ನೀನೇ ಪ್ರಮಾಣಭೂತನಾಗಿರುವೆ. ಯಾವ ರೀತಿಯಲ್ಲಿ ಪ್ರಯತ್ನಿಸಿದರೆ ನನ್ನ ದುಃಖವು ನಿವಾರಣೆಯಾಗುವುದೆಂಬುದನ್ನು ಸಮಾಲೋಚಿಸು. ಶ್ರೀರಾಮನು ನನ್ನ ವಿಮೋಚನೆಗೆ ಪ್ರಯತ್ನಶೀಲನಾಗುವಂತೆ ಮಾಡಿ ನನ್ನ ದುಃಖವನ್ನು ನಿವಾರಿಸು."

ಭಯಂಕರಪರಾಕ್ರಮಿಯಾದ ಹನುಮಂತನು ಹಾಗೆಯೇ ಮಾಡುವೆನೆಂದು ಪ್ರತಿಜ್ಞೆಮಾಡಿ ತಲೆಬಾಗಿ ನಮಸ್ಕರಿಸಿ ಪ್ರಯಾಣಕ್ಕೆ ಸಿದ್ಧನಾದನು. ವಾಯುಪುತ್ರನು ಹೊರಡುತ್ತಿರುವನೆಂದು ತಿಳಿದು ಸೀತಾದೇವಿಯು ಕಣ್ಣೀರು ತುಂಬಿದ ಗದ್ಗದಧ್ವನಿಯಿಂದ ಪುನಃ ಹೇಳಿದಳು :

"ಕಪಿಶ್ರೇಷ್ಠನೇ! ಯಾವಾಗಲೂ ಜೊತೆಯಲ್ಲಿಯೇ ಇರುವ ರಾಮ-ಲಕ್ಷ್ಮಣರಿಗೂ, ಅಮಾತ್ಯರಿಂದ ಸಹಿತನಾದ ಸುಗ್ರೀವನಿಗೂ, ಅಲ್ಲಿರುವ ಇತರ ವೃದ್ಧವಾನರರಿಗೂ ನನ್ನ ಕುಶಲವನ್ನು ಹೇಳು.

ಧರ್ಮಪುರಸ್ಸರವಾದ ಕುಶಲವನ್ನು ನೀನು ಶ್ರೀರಾಮನಿಗೆ ಹೇಳಬೇಕು. ನಿನ್ನ ಆ ಮಾತನ್ನು ಕೇಳಿದೊಡನೆಯೇ ಶ್ರೀರಾಮನು ನನ್ನನ್ನು ಇಲ್ಲಿಂದ ಪಾರುಮಾಡುವಂತಾಗಬೇಕು. ಹೀಗೆ ಮಾಡಿ ನೀನು ನನ್ನನ್ನು ಈ ದುಃಖಸಾಗರದಿಂದ ಉದ್ಧರಿಸು. ಕೀರ್ತವಂತನಾದ ಶ್ರೀರಾಮನು ನಾನಿನ್ನೂ

---

ನೋಡಿ–'ಮಣಿರತ್ನಮಿದಂ ದತ್ತಂ ವೈದೇಹ್ಯಾಃ ಶ್ವಶುರೇಣ ಮೇ–ಈ ಮಣಿರತ್ನವು ವೈದೇಹಿಗೆ ನನ್ನ ಮಾವನಿಂದ ಕೊಡಲ್ಪಟ್ಟಿತು'–ಎಂದು ಹೇಳುತ್ತಾನೆ. ಇಲ್ಲಿ ಸೀತಾದೇವಿಯು–'ನನ್ನ ತಾಯಿಯನ್ನು ಸ್ಮರಿಸುತ್ತಾನೆ'–ಎಂದು ಹೇಳಿದ್ದಾಳೆ. ಸೀತಾದೇವಿಗೆ ಸಾಕ್ಷಾತ್ತಾಗಿ ತಾಯಿಯಿಲ್ಲ. ಅವಳು ಅಯೋನಿಜೆ. ಆದುದರಿಂದ ಮಮ ಜನನೀ ಎಂದರೆ ಜನಕನೆಂದೇ ಕೆಲವರು ಅರ್ಥಮಾಡಿರುತ್ತಾರೆ. ಅಥವಾ ಜನಕನ ಪತ್ನಿಯು ಸೀತಾದೇವಿಯ ಸಾಕುತಾಯಿಯಾಗುತ್ತಾಳೆ. ಆ ಸಾಕುತಾಯಿಯು ಕೊಟ್ಟ ಚೂಡಾಮಣಿಯನ್ನು ದಶರಥನ ಸಮಕ್ಷದಲ್ಲಿ ಸೀತಾದೇವಿಯ ವಿವಾಹಕಾಲದಲ್ಲಿ ಶ್ರೀರಾಮನು ಪಾಣಿಗ್ರಹಣಮಾಡುತ್ತಿದ್ದಾಗ ಜನಕರಾಜನು ಸೀತೆಯ ತಲೆಗೆ ಮುಡಿಸಿದನೆಂದು ಅರ್ಥಮಾಡಬೇಕು.

ಜೀವಿಸಿರುವಾಗಲೇ ನನ್ನನ್ನು ಪಡೆದುಕೊಳ್ಳಲು ಸಮಾಲೋಚಿಸುವಂತೆ ಅವನಿಗೆ ಹೇಳಬೇಕು. ಅಂತಹ ಮಾತನ್ನು ಹೇಳುವುದರಿಂದ ನೀನು ಪುಣ್ಯಶಾಲಿಯಾಗುವೆ. ಅನವರತವಾಗಿ ಉತ್ಸಾಹಗೊಳಿಸುವಂತಹ ಈ ನನ್ನ ಮಾತುಗಳನ್ನು ಕೇಳುವುದರಿಂದ ನನ್ನನ್ನು ಹೊಂದುವ ಸಲುವಾಗಿ ಶ್ರೀರಾಮನ ಪೌರುಷವು ವರ್ಧಿಸುತ್ತದೆ. ಸಂದೇಶದಿಂದ ಯುಕ್ತವಾದ ನನ್ನ ಮಾತುಗಳನ್ನು ಕೇಳಿದೊಡನೆಯೇ ರಾಘವನು ಪರಾಕ್ರಮದ ಮೂಲಕವಾಗಿ ಕೆಲಸವನ್ನು ಸಾಧಿಸುವುದರಲ್ಲಿ ಬುದ್ಧಿಯನ್ನು ವಿಧಿವತ್ತಾಗಿ ಓಡಿಸುತ್ತಾನೆ."

ಸೀತಾದೇವಿಯು ಹೇಳಿದ ಆ ಮಾತುಗಳನ್ನು ಕೇಳಿದ ಹನುಮಂತನು ಜೋಡಿಸಿದ ಕೈಗಳನ್ನು ತಲೆಯ ಮೇಲಿಟ್ಟುಕೊಂಡು ಹೇಳಿದನು :

"ದೇವಿ! ಕಾಕುತ್ಸ್ಥನು ಕಪಿ-ಕರಡಿಗಳ ಪ್ರಮುಖರಿಂದ ಕೂಡಿ ಕೊಂಡು ಬಹಳ ಬೇಗ ಇಲ್ಲಿಗೆ ಬರುತ್ತಾನೆ ಮತ್ತು ಯುದ್ಧದಲ್ಲಿ ಶತ್ರುಗಳನ್ನು ಜಯಿಸಿ ನಿನ್ನ ಶೋಕವನ್ನು ಹೋಗಲಾಡಿಸುತ್ತಾನೆ. ಎಡೆಬಿಡದೇ ಬಾಣಗಳನ್ನು ಬಿಡುವ ಶ್ರೀರಾಮನನ್ನು ಎದುರಿಸಿ ನಿಲ್ಲಲು ಸಮರ್ಥರಾದ ವರು ದೇವಾಸುರ-ಮನುಷ್ಯರಲ್ಲಿ ಯಾರೂ ಇಲ್ಲ. ನಿನ್ನ ಸಲುವಾಗಿ ಸೂರ್ಯೇಂದ್ರ-ಯಮರನ್ನಾದರೂ ಎದುರಿಸಿ ನಿಲ್ಲಲು ಶ್ರೀರಾಮನು ಸಮರ್ಥನಾಗಿದ್ದಾನೆ. ಸಾಗರಪರ್ಯಂತವಾದ ಭೂಮಂಡಲವನ್ನು ಶಾಸನ ಮಾಡಲು ಅವನು ಸಮರ್ಥನು. ನಿನ್ನ ನಿಮಿತ್ತವಾಗಿ ಶ್ರೀರಾಮನಿಗೆ ವಿಜಯವು ಸಿದ್ಧಿಸಿಯೇ ತೀರುತ್ತದೆ."

ಜಾನಕಿಯು ಹನುಮಂತನ ಸತ್ಯವೂ ಸುಂದರವೂ ಆದ ನುಡಿಗಳನ್ನು ಚೆನ್ನಾಗಿ ಆಲಿಸಿ ಕೇಳಿದಳು. ಅವನ ವಿಷಯದಲ್ಲಿ ವಿಶೇಷವಾದ ಆದರವನ್ನು ಹೊಂದಿ ಪತಿಯ ಸ್ನೇಹದಿಂದ ಕೂಡಿದ್ದ ಹನುಮಂತನ ಆ ಮಾತುಗಳನ್ನು ಸೀತೆಯು ಸೌಹಾರ್ದದೊಡನೆ ಪುರಸ್ಕರಿಸಿದಳು. ಪ್ರಯಾಣಹೊರಟಿದ್ದ ಹನುಮಂತನನ್ನು ಪುನಃ ಪುನಃ ಅವಲೋಕಿಸುತ್ತಾ ಹೇಳಿದಳು :

"ವೀರನೇ! ಉಚಿತವೆಂದು ನೀನು ಭಾವಿಸುವೆಯಾದರೆ ಯಾವುದಾದರೂ ನಿಗೂಢವಾದ ಪ್ರದೇಶದಲ್ಲಿ ಇಂದು ವಿಶ್ರಾಂತಿಯನ್ನು ಪಡೆದು ನಾಳೆಯ ದಿನ ನೀನು ಪ್ರಯಾಣಮಾಡಬಹುದಾಗಿದೆ. ನಿನ್ನ ಈ ಸಾನ್ನಿಧ್ಯ

ದಿಂದಾಗಿ ಅಲ್ಪಭಾಗ್ಯಳಾದ ನನ್ನ ಈ ಅಪಾರವಾದ ದುಃಖವು ಮುಹೂರ್ತ ಕಾಲದವರೆಗಾದರೂ ಕಡಿಮೆಯಾದಂತಾಗುತ್ತದೆ. ನೀನಿಲ್ಲಿ ಇರುವವರೆ ಗಾದರೂ ನಾನೂ ಶೋಕವನ್ನು ಮರೆಯುತ್ತೇನೆ.

ವಾಯುಪುತ್ರನೇ! ನೀನಿಲ್ಲಿಂದ ಹೊರಟುಹೋದನಂತರ ಪುನಃ ನೀನಿಲ್ಲಿಗೆ ಬರುವ ವಿಷಯದಲ್ಲಿ ನನಗೆ ಸಂದೇಹವಿದ್ದೇ ಇದೆ. ಶ್ರೀರಾಮ ನೊಡನೆ ಪುನಃ ನೀನಿಲ್ಲಿಗೆ ಬರದಿದ್ದರೆ ನನ್ನ ಪ್ರಾಣಗಳು ಉಳಿದಿರುವ ವಿಷಯದಲ್ಲಿಯೂ ಸಂದೇಹವಿದೆ. ನಿನ್ನನ್ನು ಪುನಃ ಕಾಣದೇ ಇರುವುದರಿಂದ ನನಗುಂಟಾಗುವ ಶೋಕವು ಈ ಹಿಂದೆ ಇದ್ದ ಶೋಕಕ್ಕಿಂತಲೂ ಅಧಿಕವಾಗಿ ನನ್ನನ್ನು ದಹಿಸುತ್ತಾ ಸಂತಾಪಗೊಳಿಸುತ್ತದೆ.

ನಿನ್ನ ಸಹಾಯಭೂತರಾದ ವಾನರ-ಭಲ್ಲೂಕಗಳ ವಿಷಯವಾಗಿ ಒಂದು ದೊಡ್ಡ ಸಂದೇಹವು ನನಗಿದ್ದೇ ಇದೆ. ವಾನರ-ಭಲ್ಲೂಕ ಸೈನಿಕರಾಗಲೀ ರಾಮ-ಲಕ್ಷ್ಮಣರಾಗಲೀ ದಾಟಲು ದುಸ್ಸಾಧ್ಯವಾದ ಈ ಮಹಾಸಾಗರವನ್ನು ಹೇಗೆ ದಾಟುವರು?

**ತ್ರಯಾಣಾಮೇವ ಭೂತಾನಾಂ ಸಾಗರಸ್ಯಾಸ್ಯ ಲಙ್ಘನೇ ।**
**ಶಕ್ತಿಃ ಸ್ಯಾದ್ವೈನತೇಯಸ್ಯ ತವ ವಾ ಮಾರುತಸ್ಯ ವಾ ॥೨೫॥**

ಪ್ರಪಂಚದಲ್ಲಿರುವ ಪ್ರಾಣಿಗಳಲ್ಲಿ ನೀನು, ಗರುಡ ಮತ್ತು ವಾಯು– ಈ ಮೂವರಿಗೆ ಮಾತ್ರವೇ ಅಪಾರವಾದ ಈ ಸಮುದ್ರವನ್ನು ದಾಟಿಬರುವ ಸಾಮರ್ಥ್ಯವಿದೆ.

ನೀನಾದರೋ ಕಾರ್ಯಸಾಧನೆಯ ರಹಸ್ಯವನ್ನು ತಿಳಿದಿರುವವರಲ್ಲಿ ಅಗ್ರಗಣ್ಯನು. ಅತಿಕ್ರಮಿಸಲು ದುಃಸಾಧ್ಯವಾದ ಈ ಮಹಾಸಾಗರವು ಮಧ್ಯ ದಲ್ಲಿರುವಾಗ ಈ ಕಾರ್ಯದ ಸಾಧನೆಗಾಗಿ ಯಾವ ಉಪಾಯವನ್ನು ನೀನು ಕಂಡುಕೊಂಡಿರುವೆ? ನೀನೊಬ್ಬನೇ ಈ ಎಲ್ಲ ರಾಕ್ಷಸರನ್ನೂ ಸಂಹರಿಸಿ ನನ್ನನ್ನು ವಿಮೋಚನೆಗಳಿಸುವ ಕಾರ್ಯವನ್ನು ಸಾಧಿಸಲು ಸಮರ್ಥನಾಗಿ ರುವೆ. ಆದರೆ ಹೀಗೆ ಮಾಡುವುದರಿಂದ ವಿಜಯರೂಪವಾದ ಯಶಸ್ಸು ನಿನಗೆ ಬಂದಂತಾಗುತ್ತದೆ. ಶ್ರೀರಾಮನಿಗೆ ಲಭಿಸುವುದಿಲ್ಲ. ಹಾಗಾಗಬಾರದು. ಸಮಗ್ರವಾದ ಸೈನ್ಯವನ್ನೂ ಇಲ್ಲಿಗೆ ಕರೆತಂದು ಯುದ್ಧದಲ್ಲಿ ರಾವಣನನ್ನು

ಜಯಿಸಿ ವಿಜಯಿಯಾಗಿ ಶ್ರೀರಾಮನು ತನ್ನ ರಾಜ್ಯಕ್ಕೆ ನನ್ನನ್ನು ಕರೆದೊಯ್ಯ ಬೇಕು. ಇದು ಶ್ರೀರಾಮನಿಗೆ ಯಶಸ್ಕರವಾದ ಕಾರ್ಯವಾಗುತ್ತದೆ. ಶತ್ರುಬಲ ಮರ್ದನನಾದ ಅವನು ಲಂಕಾಪಟ್ಟಣವನ್ನು ಬಾಣಗಳಿಂದ ತುಂಬಿ ರಾವಣ ನನ್ನು ಸಂಹರಿಸಿ ನನ್ನನ್ನು ಒಯ್ದುದೇ ಆದರೆ–ಅದು ಅವನ ಪರಾಕ್ರಮಕ್ಕೆ ಅನುರೂಪವಾದ ಕಾರ್ಯವಾದಂತಾಗುತ್ತದೆ. ಯುದ್ಧದಲ್ಲಿ ಮಹಾಶೌರ್ಯ ವನ್ನು ತೋರುವ ಮಹಾತ್ಮನಾದ ಶ್ರೀರಾಮನ ಪರಾಕ್ರಮವು ಹೇಗೆ ಪ್ರಕಟ ವಾಗಬೇಕೋ ಹಾಗೆ ನೀನು ಉಪಾಯವನ್ನು ಮಾಡು."

ಅರ್ಥವತ್ತಾದ, ಸ್ನೇಹಯುಕ್ತವಾದ ಮತ್ತು ಯುಕ್ತಿಯುಕ್ತವಾದ ಸೀತಾದೇವಿಯ ಮಾತನ್ನು ಕೇಳಿ ಹನುಮಂತನು ಕಡೆಯದಾಗಿ ತನ್ನ ಮಾತನ್ನು ಹೇಳಿದನು :

"ದೇವಿ! ಕಪಿ-ಕರಡಿಗಳ ಸೈನ್ಯಕ್ಕೆ ಅಧಿಪತಿಯಾಗಿರುವ, ಹಾರುವ ವರಲ್ಲಿ ಶ್ರೇಷ್ಠನಾಗಿರುವ, ಸತ್ತ್ವಸಂಪನ್ನನಾದ ಸುಗ್ರೀವನು ನಿನ್ನ ವಿಮೋಚನೆಯ ಸಲುವಾಗಿ ದೃಢವಾದ ಪ್ರತಿಜ್ಞೆಯನ್ನೇ ಮಾಡಿರುವನು. ರಾಕ್ಷಸರ ವಿಧ್ವಂಸಕನಾದ ಅವನು ಕೋಟಿ. ಕೋಟಿ ವಾನರರಿಂದ ಕೂಡಿ ಬಹಳ ಬೇಗ ಇಲ್ಲಿಗೆ ಬರುತ್ತಾನೆ. ಪರಾಕ್ರಮಸಂಪನ್ನರಾದ, ಸತ್ತ್ವಶಾಲಿಗಳಾದ, ಮಹಾಬಲಿಷ್ಠರಾದ, ಸಂಕಲ್ಪಮಾತ್ರದಿಂದಲೇ ಎಲ್ಲಿಗೆಂದರಲ್ಲಿಗೆ ಹಾರಿಹೋಗಲು ಸಮರ್ಥರಾಗಿರುವ ಕೋಟಿ. ಕೋಟಿ ಕಪಿನಾಯಕರು ಆ ಸುಗ್ರೀವನ ಆಜ್ಞಾಧಾರಕರಾಗಿದ್ದಾರೆ. ಅವರ ಗಮನವನ್ನು ಆಕಾಶದಲ್ಲಾಗಲೀ, ಭೂಮಿಯಲ್ಲಾಗಲೀ, ಅಡ್ಡಲಾಗಿಯೇ ಆಗಲೀ–ತಡೆಯಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಅವರು ಸರ್ವತ್ರ ಅಡೆ-ತಡೆಗಳಿಲ್ಲದೇ ಸಂಚರಿಸಲು ಸಮರ್ಥರಾಗಿದ್ದಾರೆ. ಮಹಾತೇಜಸ್ವಿಗಳಾಗಿರುವ ಅವರು ಎಂತಹುದೇ ಮಹಾಕಾರ್ಯದ ಸಾಧನೆಯಲ್ಲಿಯೂ ವಿನಾಶಹೊಂದುವುದಿಲ್ಲ. ಯಾವ ಮಹಾಕಾರ್ಯವನ್ನಾದರೂ ಸಾಧಿಸಿಯೇ ತೀರುತ್ತಾರೆ. ಮಹೋತ್ಸಾಹಶಾಲಿ ಗಳಾದ, ವಾಯುಮಾರ್ಗವನ್ನೇ ಅನುಸರಿಸಿ ಸಂಚರಿಸುವ ಸಾಮರ್ಥ್ಯವುಳ್ಳ ಕಪಿಶ್ರೇಷ್ಠರು ಸಮುದ್ರ-ಪರ್ವತಗಳಿಂದ ಕೂಡಿರುವ ಈ ಭೂಮಂಡಲವನ್ನು ಹಲವಾರು ಬಾರಿ ಪ್ರದಕ್ಷಿಣೆಮಾಡುತ್ತಾರೆ.

**ಮದ್ವಿಶಿಷ್ಟಾಶ್ಚ ತುಲ್ಯಾಶ್ಚ ಸನ್ತಿ ತತ್ರ ವನೌಕಸಃ ।**
**ಮತ್ತಃ ಪ್ರತ್ಯವರಃ ಕಶ್ಚಿನ್ನಾಸ್ತಿ ಸುಗ್ರೀವಸಂನಿಧೌ ॥೩೭॥**

ಸುಗ್ರೀವನ ಬಳಿಯಲ್ಲಿ ನನ್ನ ಶಕ್ತಿಯನ್ನು ಮೀರಿಸಿರುವ ವಾನರ ನಾಯಕರೂ ಇದ್ದಾರೆ. ನನಗೆ ಸಮಾನಬಲರೂ ಇದ್ದಾರೆ. ಆದರೆ ನನ ಗಿಂತಲೂ ಕಡಿಮೆ ಬಲದವರು ಯಾರೂ ಇಲ್ಲ.

ನಾನೇ ಸಮುದ್ರವನ್ನು ಹಾರಿಕೊಂಡು ಇಲ್ಲಿ ಗೆ ಬಂದಿರುವೆನೆಂದಮೇಲೆ ಮಹಾಬಲರಾದ ಉಳಿದ ಕಪಿಶ್ರೇಷ್ಠರ ವಿಷಯವಾಗಿ ಹೇಳುವುದೇನಿದೆ?

**ನ ಹಿ ಪ್ರಕೃಷ್ಟಾಃ ಪ್ರೇಷ್ಯನ್ತೇ ಪ್ರೇಷ್ಯನ್ತೇ ಹೀತರೇ ಜನಾಃ ॥೩೮॥**

ಯಾವಾಗಲೂ ಇಂತಹ ಕಾರ್ಯಗಳಿಗೆ ಕಳುಹಿಸುವಾಗ ರಾಜರು ಸಾಮಾನ್ಯರನ್ನು ಕಳುಹಿಸುವರೇ ಹೊರತು ಶ್ರೇಷ್ಠರಾದವರನ್ನೆಂದಿಗೂ ಕಳುಹಿಸುವುದಿಲ್ಲ.

ಮಹಾಸತ್ತ್ವಶಾಲಿಗಳಾದ, ಪುರುಷಶ್ರೇಷ್ಠರಾದ, ಆಗತಾನೇ ಉದಯಿ ಸಿದ ಚಂದ್ರನಂತೆಯೂ ಮತ್ತು ಸೂರ್ಯನಂತೆಯೂ ಪ್ರಕಾಶಮಾನರಾಗಿ ರುವ ರಾಮ-ಲಕ್ಷ್ಮಣರು ನನ್ನ ಬೆನ್ನಿನ ಮೇಲೆ ಕುಳಿತು ನಿನ್ನ ಬಳಿಗೆ ಬರು ವರು. ವೀರರಾದ ಅವರು ಜೊತೆಗೂಡಿ ಬಂದು ಲಂಕಾಪಟ್ಟಣವನ್ನೇ ಧ್ವಂಸಮಾಡಿಬಿಡುವರು. ರಾಘವನು ಸೈನ್ಯಸಮೇತನಾಗಿ ಬಂದು ರಾವಣನನ್ನು ಸಂಹರಿಸಿ ನಿನ್ನನ್ನು ತನ್ನ ಪಟ್ಟಣಕ್ಕೆ ಕರೆದೊಯ್ಯುವನು. ದೇವಿ! ಸಮಾಧಾನವನ್ನು ಹೊಂದು. ನಿನಗೆ ಮಂಗಳವಾಗಲಿ. ಒಳ್ಳೆಯ ಕಾಲವನ್ನು ಪ್ರತೀಕ್ಷಿಸು. ಪ್ರಜ್ವಲಿಸುವ ಯಜ್ಞೇಶ್ವರನಂತೆಯೇ ಇರುವ ಶ್ರೀರಾಮನನ್ನು ನೀನು ಬಹಳ ಬೇಗ ಕಾಣಲಿರುವೆ. ರಾಕ್ಷಸೇಂದ್ರನಾದ ರಾವಣನು ಪುತ್ರಾಮಾತ್ಯ-ಬಂಧುಗಳೊಡನೆ ಹತನಾದೊಡನೆಯೇ ಚಂದ್ರನೊಡನೆ ರೋಹಿಣಿಯು ಸೇರುವಂತೆ ನೀನು ಶ್ರೀರಾಮನನ್ನು ಸೇರುವೆ. ನೀನು ಬಹಳ ಬೇಗ ಶೋಕದ ಕೊನೆಯನ್ನು ಕಾಣಲಿರುವೆ. ಬಲಪೂರ್ವಕವಾಗಿ ಶ್ರೀರಾಮ ನಿಂದ ಹತನಾಗುವ ರಾವಣನನ್ನೂ ನೋಡುವೆ."

ಹೀಗೆ ವಾಯುಪುತ್ರನಾದ ಹನುಮಂತನು ಸೀತೆಯನ್ನು ಸಮಾಧಾನ ಗೊಳಿಸಿ ಪ್ರಯಾಣಮಾಡಲು ಮನಸ್ಸುಮಾಡಿ ಪುನಃ ವೈದೇಹಿಗೆ ಹೇಳಿದನು :

"ವೈದೇಹಿ! ಶತ್ರುಹಂತಕನಾದ ಶುದ್ಧಾತ್ಮನಾದ ರಾಘವನನ್ನು ನೀನು ಬಹುಬೇಗ ಕಾಣುವೆ. ಬಿಲ್ಲನ್ನು ಹಿಡಿದು ಲಂಕಾಪಟ್ಟಣದ ಮಹಾದ್ವಾರಕ್ಕೆ ಆಗಮಿಸುವ ಲಕ್ಷ್ಮಣನನ್ನೂ ಕಾಣುವೆ. ಉಗುರು ಮತ್ತು ಕೋರೆದಾಡೆಗಳೇ ಆಯುಧಗಳಾಗಿರುವ, ಸಿಂಹ-ಶಾರ್ದೂಲಗಳ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವನ್ನು ಹೊಂದಿರುವ, ಸಲಗಗಳಂತಿರುವ ವಾನರಸೈನಿಕರೊಡನೆ ರಾಮ-ಲಕ್ಷ್ಮಣರು ಆಗಮಿಸುವುದನ್ನು ನೀನು ಶೀಘ್ರವಾಗಿಯೇ ನೋಡಲಿರುವೆ. ಲಂಕಾಪಟ್ಟಣದಲ್ಲಿರುವ ಮಲಯಪರ್ವತದ ತಪ್ಪಲುಪ್ರದೇಶಗಳಲ್ಲಿ ಪರ್ವತ ಮತ್ತು ಮೇಘಗಳಿಗೆ ಸಮಾನರಾಗಿ, ಘೋರವಾಗಿ ಗರ್ಜನೆ ಮಾಡುವ ಕಪಿಮುಖ್ಯರ ಹಲವಾರು ಗುಂಪುಗಳನ್ನು ನೀನು ಕ್ಷಿಪ್ರವಾಗಿ ಕಾಣಲಿರುವೆ. ಮನ್ಮಥನ ತೀಕ್ಷ್ಣವಾದ ಬಾಣಗಳಿಂದ ಮರ್ಮಸ್ಥಾನಗಳಲ್ಲಿ ಭೇದಿಸಲ್ಪಟ್ಟು ವಿರಹವೇದನೆಯನ್ನನುಭವಿಸುತ್ತಿರುವ ಶ್ರೀರಾಮನು ಸಿಂಹದಿಂದ ಪೀಡಿಸಲ್ಪಡುವ ಆನೆಯಂತೆ ಸ್ವಲ್ಪವಾದರೂ ಸುಖವನ್ನು ಅನುಭವಿಸುತ್ತಿಲ್ಲ. ಅಳಬೇಡ ; ದೇವಿ! ನಿನ್ನ ಮನಸ್ಸಿಗೆ ಯಾವ ವಿಧವಾದ ಖೇದವೂ ಆಗದಿರಲಿ. ಹಿಂದೊಮ್ಮೆ ಇಂದ್ರನಿಂದ ಬೇರ್ಪಟ್ಟಿದ್ದ ಶಚೀದೇವಿಯು ಕಾಲವು ಸನ್ನಿಹಿತವಾದೊಡನೆಯೇ ಪುನಃ ಅವನನ್ನು ಸೇರಿದಂತೆ–ನೀನೂ ಶ್ರೀರಾಮನನ್ನು ಸೇರುವೆ. ಆರ್ಯಳೇ! ಶ್ರೀರಾಮನನ್ನು ಮೀರಿಸುವ ಪರಾಕ್ರಮಿಯು ಯಾವನಿದ್ದಾನೆ? ಅಂತೆಯೇ ಲಕ್ಷ್ಮಣನ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವುಳ್ಳವರು ತಾನೇ ಯಾರಿದ್ದಾರೆ? ನಿನಗೆ ಆಶ್ರಯಭೂತರಾಗಿರುವ ಆ ಸಹೋದರರಿಬ್ಬರೂ ವಾಯು-ಅಗ್ನಿಗಳಿಗೆ ಸಮಾನರು. ರಾಕ್ಷಸರಿಗೆ ವಾಸಸ್ಥಾನವಾಗಿರುವ ಮತ್ತು ಮಹಾಭಯಂಕರವಾಗಿರುವ ಈ ಸ್ಥಳದಲ್ಲಿ ನೀನು ಹೆಚ್ಚು ಕಾಲವಿರಲಾರೆ. ನಿನ್ನ ಪ್ರಿಯನಾದ ಶ್ರೀರಾಮನ ಆಗಮನಕ್ಕೆ ಬಹಳ ಕಾಲವೂ ಬೇಕಾಗುವುದಿಲ್ಲ. ನಾನು ಶ್ರೀರಾಮನ ಬಳಿಗೆ ಹೋಗುವಷ್ಟು ಕಾಲ ಸೈರಣೆಯಿಂದಿರು. ಶ್ರೀರಾಮನನ್ನು ಸಂದರ್ಶಿಸಿ ನಿನ್ನ ಸಂದೇಶವಾರ್ತೆಯನ್ನು ಅರುಹಿದೊಡನೆಯೇ ಅವನಿಲ್ಲಿಗೆ ಸಪರಿವಾರನಾಗಿ ಬಂದುಬಿಡುವನು."

೩೯ನೆಯ ಸರ್ಗವು ಮುಗಿಯಿತು.

## ಸೀತಾದೇವಿಯು ಶ್ರೀರಾಮನಿಗೆ ಪುನಃ ಸಂದೇಶವನ್ನು ನೀಡಿದುದು : ಹನುಮಂತನು ಅವಳಿಗೆ ಆಶ್ವಾಸನೆಯನ್ನಿತ್ತು ಉತ್ತರದಿಕ್ಕಿನ ಕಡೆಗೆ ಪ್ರಯಾಣಮಾಡಿದುದು

**ಶ್ರುತ್ವಾ ತು ವಚನಂ ತಸ್ಯ ವಾಯುಸೂನೋರ್ಮಹಾತ್ಮನಃ ।**
**ಉವಾಚಾತ್ಮಹಿತಂ ವಾಕ್ಯಂ ಸೀತಾ ಸುರಸುತೋಪಮಾ ॥೧॥**

ದೇವಕನ್ಯೆಯಂತೆಯೇ ಕಾಣುತ್ತಿದ್ದ ಸೀತಾದೇವಿಯು ಮಹಾತ್ಮನಾದ ವಾಯುಪುತ್ರನ ಆ ಮಾತನ್ನು ಕೇಳಿ ತನಗೆ ಹಿತಕರವಾಗುವ ಮಾತನ್ನು ಹೇಳಿದಳು :

"ವಾನರನೇ! ಪ್ರಿಯವಾದ ಮಾತುಗಳನ್ನೇ ಯಾವಾಗಲೂ ಆಡುವ ನಿನ್ನನ್ನು ನೋಡುತ್ತಿದ್ದಂತೆಲ್ಲಾ–ಭೂಮಿಯಲ್ಲಿ ಮೊಳಕೆಯೊಡೆದು ಬಾಡಿ ಹೋಗುತ್ತಿರುವ ಸಸ್ಯವು ಮಳೆಯಿಂದ ಕಿಸ-ಕಿಸನೆ ಚಿಗುರಿಕೊಳ್ಳುವಂತೆ– ನಾನು ಸಂತೋಷಪಡುತ್ತೇನೆ. ಪುರುಷಶ್ರೇಷ್ಠನಾದ ಶ್ರೀರಾಮನನ್ನು ವಿರಹ ಶೋಕದಿಂದ ಕೃಶವಾಗಿರುವ ನನ್ನ ಈ ಅವಯವಗಳಿಂದ ಮುಟ್ಟಿ ಸೇವಿಸು ವಂತಾಗಬೇಕು. ವಾಯುಪುತ್ರನೇ! ನನ್ನ ಈ ಕಾಮನೆಯು ಪೂರ್ಣಗೊಳ್ಳು ವಂತೆ ಕಾರ್ಯಮಾಡು. ನನ್ನ ಮೇಲೆ ದಯೆ ತೋರು. ನನ್ನನ್ನು ಸ್ಮರಿಸಿಕೊಳ್ಳು ವಂತೆ ಮಾಡುವ ಈ ಚೂಡಾಮಣಿಯನ್ನು ಶ್ರೀರಾಮನಿಗೆ ಕೊಡು. ನನ್ನ ಸಲುವಾಗಿ ಐಷೀಕಬ್ರಹ್ಮಾಸ್ತ್ರವನ್ನು ಕಾಕಾಸುರನ ಮೇಲೆ ಪ್ರಯೋಗಿಸಿ ಅವನ ಒಂದು ಕಣ್ಣನ್ನು ನಾಶಗೊಳಿಸಿದ ವಿಷಯವನ್ನೂ ಶ್ರೀರಾಮನಿಗೆ ತಿಳಿಸು.

**ಮನಃಶಿಲಾಯಾಸ್ತಿಲಕೋ ಗಣ್ಡಪಾರ್ಶ್ವೇ ನಿವೇಶಿತಃ ।**
**ತ್ವಯಾ ಪ್ರಣಷ್ಟೇ ತಿಲಕೇ ತಂ ಕಿಲ ಸ್ಮರ್ತುಮರ್ಹಸಿ ॥೫॥**

'ರಾಮಭದ್ರ! ಒಮ್ಮೆ ನನ್ನ ಹಣೆಯಲ್ಲಿದ್ದ ತಿಲಕವು ಅಳಿಸಿಹೋಗಿ ದ್ದಾಗ ನೀನು ಮಣಿಶಿಲೆಯ ತಿಲಕವನ್ನು ನನ್ನ ಕೆನ್ನೆಯ ಮೇಲೆ ತಿದ್ದಿದ್ದೆ. ಆ ವಿಷಯವನ್ನು ನೀನು ಜ್ಞಾಪಿಸಿಕೋ.

**ಸ ವೀರ್ಯವಾನ್ಕಥಂ ಸೀತಾಂ ಹೃತಾಂ ಸಮನುಮನ್ಯಸೇ ।**
**ವಸನ್ತೀಂ ರಕ್ಷಸಾಂ ಮಧ್ಯೇ ಮಹೇನ್ದ್ರವರುಣೋಪಮಃ ॥೬॥**

ವೀರ್ಯವಂತನಾದ, ಮಹೇಂದ್ರ-ವರುಣರಿಗೆ ಸದೃಶನಾದ ನೀನು ಸೀತೆಯ ಅಪಹರಣವನ್ನೂ ಮತ್ತು ಅವಳೀಗ ರಾಕ್ಷಸರ ಮಧ್ಯದಲ್ಲಿ ವಾಸ ಮಾಡಿಕೊಂಡಿರುವುದನ್ನೂ ಹೇಗೆ ತಾನೇ ಸಹಿಸಿಕೊಂಡಿರುವೆ?

**ಏಷ ಚೂಡಾಮಣಿರ್ದಿವ್ಯೋ ಮಯಾ ಸುಪರಿರಕ್ಷಿತಃ ।**
**ಏತಂ ದೃಷ್ಟ್ವಾ ಪ್ರಹೃಷ್ಯಾಮಿ ವ್ಯಸನೇ ತ್ವಾಮಿವಾನಘ ॥೭॥**

ನಾನೀಗ ಗುರುತಿಗಾಗಿ ಕಳುಹಿಸಿರುವ ಈ ಚೂಡಾಮಣಿಯು ದಿವ್ಯ ವಾದುದು. ನಾನಿದನ್ನು ಬಹಳ ಜಾಗರೂಕತೆಯಿಂದ ಕಾಪಾಡಿಕೊಂಡಿರು ವೆನು. ನಾನು ವ್ಯಸನದಲ್ಲಿಯೂ ಈ ಮಣಿಯನ್ನು ನೋಡುತ್ತಾ ನಿನ್ನನ್ನು ನೋಡಿದಂತೆಯೇ ಸಂತೋಷಪಡುತ್ತಿರುವೆನು.

**ಏಷ ನಿರ್ಯಾತಿತಃ ಶ್ರೀಮಾನ್ಮಯಾ ತೇ ವಾರಿಸಂಭವಃ ।**
**ಅತಃ ಪರಂ ನ ಶಕ್ಷ್ಯಾಮಿ ಜೀವಿತುಂ ಶೋಕಲಾಲಸಾ ॥೮॥**

ಸಮುದ್ರದಲ್ಲಿ ಹುಟ್ಟಿರುವ ಕಾಂತಿಯುಕ್ತವಾದ ಈ ಮಣಿಯನ್ನು ನಿನಗೆ ಕಳುಹಿಸುತ್ತಿದ್ದೇನೆ. ಇನ್ನು ಮುಂದೆ ಈ ಮಣಿಯನ್ನಾದರೂ ನೋಡಿಕೊಂಡು ಸಂತೋಷಪಡುವ ಅದೃಷ್ಟವೂ ನನಗಿಲ್ಲ. ಆದುದರಿಂದ ಯಾವಾಗಲೂ ಶೋಕಮಗ್ನಳಾಗಿಯೇ ಇರುವ ನನಗೆ ಇನ್ನು ಮುಂದೆ ಜೀವಿಸಿರಲೂ ಶಕ್ಯವಿಲ್ಲ.

**ಅಸಹ್ಯಾನಿ ಚ ದುಃಖಾನಿ ವಾಚಶ್ಚ ಹೃದಯಚ್ಛಿದಃ ।**
**ರಾಕ್ಷಸೀನಾಂ ಸುಘೋರಾಣಾಂ ತ್ವತ್ಕೃತೇ ಮರ್ಷಯಾಮ್ಯಹಮ್ ॥೯॥**

ಸಹಿಸಲು ಅಸಾಧ್ಯವಾದ ದುಃಖಗಳನ್ನೂ, ಘೋರರೂಪಿಣಿಯರಾದ ರಾಕ್ಷಸಿಯರ ಎದೆಯೊಡೆದು ಹೋಗುವಂತಹ ಮಾತುಗಳನ್ನೂ ನಿನ್ನ ಸಲುವಾಗಿ ಸಹಿಸುತ್ತಿದ್ದೇನೆ.

**ಧಾರಯಿಷ್ಯಾಮಿ ಮಾಸಂ ತು ಜೀವಿತಂ ಶತ್ರುಸೂದನ ।**
**ಮಾಸಾದೂರ್ಧ್ವಂ ನ ಜೀವಿಷ್ಯೇ ತ್ವಯಾ ಹೀನಾ ನೃಪಾತ್ಮಜ ॥೧೦॥**

ರಾಜಕುಮಾರನೇ! ಶತ್ರುಸೂದನನೇ! ಒಂದು ಮಾಸದವರೆಗೆ ಮಾತ್ರ

ನಾನು ಪ್ರಾಣಗಳನ್ನು ಉಳಿಸಿಕೊಂಡಿರುತ್ತೇನೆ. ನಿನ್ನಿಂದ ಅಗಲಿರುವ ನಾನು ಮಾಸವು ಕಳೆದನಂತರ ಖಂಡಿತವಾಗಿಯೂ ಜೀವಿಸಿರುವುದಿಲ್ಲ.

**ಘೋರೋ ರಾಕ್ಷಸರಾಜೋಽಯಂ ದೃಷ್ಟಿಶ್ಚ ನ ಸುಖಾ ಮಯಿ ।**
**ತ್ವಾಂ ಚ ಶ್ರುತ್ವಾ ವಿಷಜ್ಜನ್ತಂ ನ ಜೀವೇಯಮಪಿ ಕ್ಷಣಮ್ ॥**

ಈ ರಾಕ್ಷಸರಾಜನಾದರೋ ಬಹುಭಯಂಕರನು. ಮೇಲಾಗಿ ಇವನ ನೋಟವೂ ಸುಖಕರವಲ್ಲ. ಇಂತಹ ಸಂದರ್ಭದಲ್ಲಿ ನೀನು ಕೂಡ ವಿಳಂಬಮಾಡುತ್ತಿರುವೆಯೆಂಬುದನ್ನು ತಿಳಿದೆನಾದರೆ ಕ್ಷಣಮಾತ್ರವಾದರೂ ನಾನು ಜೀವಿಸಿರುವುದಿಲ್ಲ.'

ವಾಯುಪುತ್ರನೇ! ನನ್ನ ಈ ಎಲ್ಲ ಮಾತುಗಳನ್ನೂ ನೀನು ಯಥಾವತ್ತಾಗಿ ಶ್ರೀರಾಮನಿಗೆ ಹೇಳಬೇಕು."

ಹೀಗೆ ವೈದೇಹಿಯು ಕಣ್ಣೀರಿಡುತ್ತಾ ಕರುಣಾಜನಕವಾದ ರೀತಿಯಲ್ಲಿ ಹೇಳಿದ ಮಾತುಗಳನ್ನು ಕೇಳಿ ಮಹಾತೇಜಸ್ವಿಯಾದ ವಾಯುಪುತ್ರನು ಹೇಳಿದನು :

"ತಾಯೇ! ಸತ್ಯವಾಗಿ ಹೇಳುತ್ತಿದ್ದೇನೆ. ನಿನ್ನ ಶೋಕದಿಂದಾಗಿ ಶ್ರೀರಾಮನು ಉಳಿದೆಲ್ಲ ಕಾರ್ಯಗಳಿಂದಲೂ ವಿಮುಖನಾಗಿದ್ದಾನೆ. ಶ್ರೀರಾಮನು ಶೋಕಮಗ್ನನಾಗಿರಲು ಲಕ್ಷ್ಮಣನೂ ಪರಿತಪಿಸುತ್ತಾನೆ. ಹೇಗೋ ದೈವದ ಕೃಪೆಯಿಂದ ನಾನು ನಿನ್ನನ್ನು ಕಂಡೆನು. ಆದುದರಿಂದ ಶೋಕಪಡಬೇಕಾದ ಕಾಲವಿನ್ನಿಲ್ಲ. ಈ ಮುಹೂರ್ತದಲ್ಲಿಯೇ ನೀನು ಎಲ್ಲ ದುಃಖಗಳ ಕೊನೆಯನ್ನೂ ಕಾಣುವೆ.

ನಿಷ್ಠುರರಾದ, ಪುರುಷಶ್ರೇಷ್ಠರಾದ, ನಿನ್ನನ್ನು ನೋಡಬೇಕೆಂಬ ಉತ್ಸಾಹದಿಂದಿರುವ ಇಬ್ಬರು ರಾಜಪುತ್ರರೂ ನಿನ್ನ ಸಲುವಾಗಿ ಲಂಕೆಯನ್ನೇ ಸುಟ್ಟು ಬೂದಿಮಾಡಿಬಿಡುತ್ತಾರೆ. ರಾಮ-ಲಕ್ಷ್ಮಣರು ಕ್ರೂರನಾದ ರಾವಣ ನನ್ನು ಅವನ ಬಂಧುಗಳೊಡನೆ ಯುದ್ಧದಲ್ಲಿ ಸಂಹರಿಸಿ ನಿನ್ನನ್ನು ತಮ್ಮ ಪಟ್ಟಣಕ್ಕೆ ಕರೆದೊಯ್ಯುತ್ತಾರೆ. ಅನಿಂದ್ಯಳೇ! ಶ್ರೀರಾಮನು ಹಿಂದಿನ ನೆನಪನ್ನುಂಟುಮಾಡುವ ಯಾವ ಗುರುತಿನ ವಸ್ತುವನ್ನು ತಿಳಿದಿರುವನೋ ಮತ್ತು ಯಾವುದನ್ನು ನೋಡಿದರೆ ಅವನಿಗೆ ಅತ್ಯಂತಪ್ರೀತಿಯುಂಟಾಗುವುದೋ ಅಂತಹ ಅಮೋಘವಾದ ಗುರುತಿನ ವಸ್ತುವನ್ನು ದಯಪಾಲಿಸು."

ಹನುಮಂತನ ಆ ಪ್ರಾರ್ಥನೆಗೆ ಉತ್ತರವಾಗಿ ಸೀತೆಯು ಹೇಳಿದಳು :

"ವೀರನೇ! ಅಂತಹ ಅಪೂರ್ವವಾದ ಅಭಿಜ್ಞಾನವನ್ನು ನಾನೀ ಗಾಗಲೇ ನಿನಗೆ ಕೊಟ್ಟಾಗಿದೆ. ನನ್ನ ಕೇಶಭೂಷಣವಾದ ಈ ಚೂಡಾಮಣಿ ಯನ್ನು ಶ್ರೀರಾಮನು ನೋಡಿದೊಡನೆಯೇ ನೀನು ಹೇಳುವ ಮಾತುಗಳಲ್ಲಿ ಅವನಿಗೆ ವಿಶ್ವಾಸವು ಹುಟ್ಟುತ್ತದೆ."

ಸೀತಾದೇವಿಯು ಹೀಗೆ ಹೇಳಲು ಕಪಿಶ್ರೇಷ್ಠನಾದ ಹನುಮಂತನು ಶ್ರೇಷ್ಠವಾದ ಆ ಮಣಿರತ್ನವನ್ನು ತೆಗೆದುಕೊಂಡು ಸೀತಾದೇವಿಗೆ ತಲೆಬಾಗಿ ನಮಸ್ಕರಿಸಿ ಹೊರಡಲನುವಾದನು. ಸಮುದ್ರವನ್ನು ಲಂಘಿಸುವ ಉತ್ಸಾಹ ದಿಂದ ಎತ್ತರವಾಗಿ ಬೆಳೆಯುತ್ತಿದ್ದ ಮಹಾವೇಗಶಾಲಿಯಾದ ಹನುಮಂತ ನನ್ನು ನೋಡಿ ಕಂಬನಿದುಂಬಿದ ಮುಖವುಳ್ಳವಳಾಗಿದ್ದ ದೀನಳಾಗಿದ್ದ ಜಾನಕಿಯು ಕಣ್ಣೀರಿಡುತ್ತಾ ಗದ್ಗದಧ್ವನಿಯಿಂದ ಹೇಳಿದಳು :

"ವಾಯುಪುತ್ರನೇ! ಸಿಂಹಸದೃಶರಾದ ಸಹೋದರರಾದ ರಾಮ-ಲಕ್ಷ್ಮಣರ, ಸುಗ್ರೀವನ ಮತ್ತು ಅಲ್ಲಿರುವವರೆಲ್ಲರ ಕುಶಲಗಳನ್ನೂ ನನ್ನ ಪರವಾಗಿ ಕೇಳಬೇಕು. ನನ್ನನ್ನು ಈ ದುಃಖಸಾಗರದಿಂದ ಪಾರುಮಾಡುವಂತೆ ಮಹಾಬಾಹುವಾದ ಶ್ರೀರಾಮನನ್ನು ತೊಡಗಿಸುವ ಕಾರ್ಯಭಾರವು ನಿನ್ನದಾಗಿದೆ. ಶ್ರೀರಾಮನ ಬಳಿಗೆ ಹೋದನಂತರ ನೀನು ಈ ನನ್ನ ಶೋಕದ ಆವೇಗವನ್ನೂ ಮತ್ತು ಈ ರಾಕ್ಷಸಿಯರು ನನ್ನನ್ನು ಭಯಪಡಿಸುವ ಸಲು ವಾಗಿ ಅನುದಿನವೂ ಆಡುವ ಮಾತುಗಳನ್ನೂ ನೀನು ಅವನಿಗೆ ಹೇಳಬೇಕು. ಕಪಿಶ್ರೇಷ್ಠನೇ! ನಿನ್ನ ಪ್ರಯಾಣವು ಮಂಗಳಮಯವಾಗಲಿ."

ರಾಜಪುತ್ರಿಯಾದ ಸೀತಾದೇವಿಯ ಅಭಿಪ್ರಾಯವನ್ನು ಸಂಪೂರ್ಣ ವಾಗಿ ತಿಳಿದು ಕೃತಕೃತ್ಯನಾದ ಮತ್ತು ಪರಮಹೃಷ್ಟನಾದ ಮಾರುತಿಯು, ತನ್ನ ಕಾರ್ಯವು ಸ್ವಲ್ಪಮಾತ್ರವೇ ಉಳಿದಿರುವುದೆಂಬುದನ್ನು ನಿಶ್ಚಯಿಸಿ ಉತ್ತರ ದಿಕ್ಕಿನ ಕಡೆಗೆ ಹೋಗಲು ಮನಸ್ಸುಮಾಡಿದನು.

ಳ೦ನೆಯ ಸರ್ಗವು ಮುಗಿಯಿತು.

## ಹನುಮಂತನು ಪ್ರಮದಾವನವನ್ನು ಧ್ವಂಸಮಾಡಿದುದು

**ಸ ಚ ವಾಗ್ಭಿಃ ಪ್ರಶಸ್ತಾಭಿರ್ಗಮಿಷ್ಯನ್ಪೂಜಿತಸ್ತಯಾ ।**
**ತಸ್ಮಾದ್ದೇಶಾದಪಕ್ರಮ್ಯ ಚಿನ್ತಯಾಮಾಸ ವಾನರಃ ॥೧॥**

ಸೀತಾದೇವಿಯು ಹನುಮಂತನನ್ನು ಪ್ರಶಸ್ತವಾದ ಮಾತುಗಳಿಂದ ಆದರಿಸಿದಳು. ಬಳಿಕ ಅವಳಿದ್ದ ಸ್ಥಳದಿಂದ ಸ್ವಲ್ಪದೂರ ಹೋದನಂತರ ಹನುಮಂತನು ಯೋಚಿಸತೊಡಗಿದನು :

'ಅಸಿತೇಕ್ಷಣೆಯಾದ ಸೀತಾದೇವಿಯನ್ನು ನೋಡಿದ್ದಾಯಿತು. ಮಾಡ ಬೇಕಾಗಿದ್ದ ಕಾರ್ಯದಲ್ಲಿ ಸ್ವಲ್ಪಭಾಗವು ಮಾತ್ರವೇ ಉಳಿದಿದೆ. ಅದು ರಾವಣನ ಬಲಾಬಲವನ್ನು ಪರೀಕ್ಷಿಸುವ ಕಾರ್ಯ. ಅದನ್ನು ನಾನು ತಿಳಿದೇ ಹೋಗಬೇಕು. ಅದನ್ನು ತಿಳಿಯಲು ಸಾಮ-ದಾನ-ಭೇದೋಪಾಯಗಳಿಂದ ಸಾಧ್ಯವಿಲ್ಲ. ದಂಡೋಪಾಯದಿಂದ ಮಾತ್ರವೇ ನಾನು ರಾವಣನಲ್ಲಿರುವ ಶಕ್ತಿಯನ್ನು ತಿಳಿದುಕೊಳ್ಳಬಹುದಾಗಿದೆ. 'ನ ಸಾಮ ರಕ್ಷಃಸು ಗುಣಾಯ ಕಲ್ಪತೇ'–ರಾಕ್ಷಸರ ವಿಷಯದಲ್ಲಿ ಸಾಮೋಪಾಯವನ್ನು ಆಶ್ರಯಿಸಿ ಕೆಲಸ ಮಾಡುವುದರಿಂದ ಯಾವ ಫಲವೂ ಸಿಕ್ಕುವುದಿಲ್ಲ. ಧನಾಢ್ಯರಾಗಿರುವ ರಾಕ್ಷಸರಲ್ಲಿ ದಾನೋಪಾಯವೂ ಫಲಿಸುವುದಿಲ್ಲ. ಪ್ರಜೆಗಳೆಲ್ಲರೂ ಬಲ ದಿಂದಲೇ ದರ್ಪಿಷ್ಠರಾಗಿರುವುದರಿಂದ ಭೇದೋಪಾಯವೂ ಫಲಿಸುವುದಿಲ್ಲ.* ಆದುದರಿಂದ ಕಡೆಯದಾದ ಪರಾಕ್ರಮಸಾಧ್ಯವಾದ ದಂಡೋಪಾಯವೇ ರಾಕ್ಷಸರ ವಿಷಯದಲ್ಲಿ ಉಚಿತವಾಗಿ ಕಾಣುತ್ತದೆ. ಪರಾಕ್ರಮವನ್ನು ತೋರದಿದ್ದರೆ ಇವರ ಸತ್ತ್ವವೆಷ್ಟೆಂಬುದು ನಮಗೆ ತಿಳಿಯುವುದಿಲ್ಲ. ಯುದ್ಧಶೂರರಾದ ಹಲವಾರು ರಾಕ್ಷಸರೇನಾದರೂ ಹತರಾದರೆ ಆಗ ಇವರು ಮೃದುತ್ವವನ್ನು ಹೊಂದಬಹುದು.

---

* ರಾಜನಲ್ಲಿ ಅಥವಾ ಜನರಲ್ಲಿ ಪರಸ್ಪರವಾಗಿ ವೈಷಮ್ಯವಿದ್ದರೆ ಭೇದೋಪಾಯವು ಫಲಿಸುತ್ತದೆ. ಪರಸ್ಪರಂ ತು ಯೇ ದುಷ್ಟಾಃ ಕ್ರುದ್ಧಾ ಭೀತಾವಮಾನಿತಾಃ । ತೇಷಾಂ ಭೇದಂ ಪ್ರಯುಞ್ಜೀತ ಭೇದಸಾಧ್ಯಾ ಹಿ ತೇ ಮತಾಃ ॥ ದುಷ್ಟರೂ, ರಾಜನ ವಿಷಯದಲ್ಲಿ ಕೋಪಗೊಂಡವರೂ, ರಾಜನಿಗೆ ಭಯಪಡುವವರೂ, ರಾಜನಿಂದ ಅವಮಾನಿತ

**ಕಾರ್ಯೇ ಕರ್ಮಣಿ ನಿರ್ವೃತ್ತೇ ಯೋ ಬಹೂನ್ಯಪಿ ಸಾಧಯೇತ್ ।**
**ಪೂರ್ವಕಾರ್ಯಾವಿರೋಧೇನ ಸ ಕಾರ್ಯಂ ಕರ್ತುಮರ್ಹತಿ ॥೫॥**

ಒಡೆಯನು ಹೇಳಿದ ಕಾರ್ಯವು ಮುಗಿದನಂತರ, ಮೊದಲು ಮಾಡಿದ ಕಾರ್ಯಕ್ಕೆ ವಿರೋಧವಿಲ್ಲದಂತೆ ಯಾವನು ಹಲವಾರು ಕಾರ್ಯಗಳನ್ನು ಸಾಧಿಸುವನೋ–ಅಂತಹವನೇ ಯಾವುದೇ ಮಹಾಕಾರ್ಯವನ್ನಾದರೂ ಸಾಧಿಸಬಲ್ಲವನಾಗುತ್ತಾನೆ.

**ನ ಹ್ಯೇಕಃ ಸಾಧಕೋ ಹೇತುಃ ಸ್ವಲ್ಪಸ್ಯಾಪೀಹ ಕರ್ಮಣಃ ।**
**ಯೋ ಹ್ಯರ್ಥಂ ಬಹುಧಾ ವೇದ ಸ ಸಮರ್ಥೋಽರ್ಥಸಾಧನೇ ॥೬॥**

ಸಣ್ಣ-ಪುಟ್ಟ ಕಾರ್ಯಗಳ ಸಿದ್ಧಿಗೇ ಆದರೂ ಒಂದೇ ಉಪಾಯವು ಸಾಧಕವಾಗುವುದಿಲ್ಲ. ಯಾವನು ತನ್ನ ಕಾರ್ಯಸಿದ್ಧಿಗಾಗಿ ವಿವಿಧೋಪಾಯ ಗಳನ್ನು ತಿಳಿದಿರುವನೋ–ಅಂತಹವನೇ ಕಾರ್ಯಸಾಧನೆಗೆ ಸಮರ್ಥನು.*

ಶತ್ರುಗಳಿಗೂ ನನಗೂ ಯುದ್ಧವಾದರೆ ಮುಂದಿನ ಯುದ್ಧದಲ್ಲಿ ವಿಶಿಷ್ಟರು ಯಾರಾಗುವರೆಂಬ ರಹಸ್ಯವನ್ನು ತಿಳಿಯುವೆನು. ರಾಕ್ಷಸರೊಡನೆ ಸಂಘರ್ಷಣೆಯ ಮೂಲಕವಾಗಿ ಶತ್ರುವಿನಲ್ಲಿರುವ ಬಲವನ್ನು ನಿಶ್ಚಯಿಸಿ ಕೊಂಡು ಕಿಷ್ಕಿಂಧೆಗೆ ಹೋದೆನಾದರೆ ನನ್ನ ಒಡೆಯನ ಆಜ್ಞೆಯನ್ನು ಪೂರ್ಣ ಗೊಳಿಸಿದಂತಾಗುತ್ತದೆ. ಆದರೆ ರಾಕ್ಷಸರೊಡನೆ ಬಲಪೂರ್ವಕವಾದ ಯುದ್ಧವು ಅನಾಯಾಸವಾಗಿ ಹೇಗೆ ಸಂಭವಿಸುತ್ತದೆ? ಸಾರವತ್ತಾದ ನನ್ನ ಪರಾಕ್ರಮವನ್ನು ಶತ್ರುಗಳಿಗೆ ಹೇಗೆ ತೋರಿಸಲಿ? ಯುದ್ಧದಲ್ಲಿ ನನ್ನಪರಾಕ್ರಮ ವನ್ನು ನೋಡಿದ ರಾವಣನು ಕೂಡ ನನ್ನನ್ನು ಸಮ್ಮಾನಿಸುವಂತಾಗಬೇಕು. ಅದು ಹೇಗೆ ಸಾಧ್ಯ? ಇದನ್ನು ನಾನು ಹೇಗಾದರೂ ಸಾಧಿಸಲೇಬೇಕು. ಮಂತ್ರಿ-ಸೇನಾಪತಿಗಳೊಡನೆ ಬರುವ ರಾವಣನನ್ನು ಯುದ್ಧದಲ್ಲಿ ಸಂಧಿಸಿ

---

ರಾದವರೂ ಇದ್ದರೆ ಭೇದೋಪಾಯದಿಂದ ಅವರನ್ನು ಬೇರ್ಪಡಿಸಿ ರಾಜನಿಗೆ ವಿರುದ್ಧವಾಗಿ ನಿಲ್ಲಿಸಬಹುದು. ಆದರೆ ಲಂಕೆಯಲ್ಲಿ ತಮ್ಮ ರಾಜನ ವಿಷಯವಾಗಿ ಅಭಿಮಾನದಿಂದ ಎಲ್ಲರೂ ದರ್ಪಿಷ್ಠರಾಗಿದ್ದರು ಮತ್ತು ಎಲ್ಲರೂ ಬಲಿಷ್ಠರಾಗಿಯೂ ಇದ್ದರು. ಆದುದರಿಂದ ಭೇದೋಪಾಯವೂ ಅಲ್ಲಿ ಸಾಗುವುದಿಲ್ಲ.

* ಯಾವನು ಅತ್ಯಲ್ಪಕಾರ್ಯವನ್ನು ಅತಿಶಯವಾದ ಪ್ರಯತ್ನದಿಂದ ಸಿದ್ಧಮಾಡಿ ಕೊಳ್ಳುವನೋ–ಅಂತಹವನು ಕಾರ್ಯಸಾಧಕನೆನಿಸಿಕೊಳ್ಳುವುದಿಲ್ಲ. ಅದಕ್ಕೆ ಪ್ರತಿಯಾಗಿ

ಮನಸ್ಸಿನಲ್ಲಿರುವ ಅಭಿಪ್ರಾಯವನ್ನೂ ಅವನ ಶಕ್ತಿ-ಪರಾಕ್ರಮಗಳನ್ನೂ ತಿಳಿದ ನಂತರವೇ ನಾನು ಇಲ್ಲಿಂದ ಸುಖವಾಗಿ ಪ್ರಯಾಣಮಾಡುವೆನು. ಕಣ್ಣುಗಳಿಗೂ–ಮನಸ್ಸಿಗೂ ಆನಂದವನ್ನುಂಟುಮಾಡುವ, ನಂದನವನದಂತೆಯೇ ಇರುವ, ನಾನಾವಿಧವಾದ ವೃಕ್ಷಗಳಿಂದಲೂ ಲತೆಗಳಿಂದಲೂ ನಿಬಿಡವಾಗಿರುವ ರಾವಣನ ಈ ಅಶೋಕವನವನ್ನು–ಒಣಗಿದ ಅರಣ್ಯವನ್ನು ಅಗ್ನಿಯು ಸುಟ್ಟುಭಸ್ಮಮಾಡಿಬಿಡುವಂತೆ–ಧ್ವಂಸಮಾಡುತ್ತೇನೆ. ಈ ವನವು ನಾಶವಾಗಿ ಹೋಯಿತೆಂಬುದನ್ನು ಕೇಳಿದೊಡನೆಯೇ ರಾಕ್ಷಸೇಶ್ವರನು ಕೋಪಗೊಳ್ಳುವನು. ಒಡನೆಯೇ ಅವನು ತ್ರಿಶೂಲ, ಕಬ್ಬಿಣದ ಹಾರೆಗಳು, ಪಟ್ಟಾಕತ್ತಿಗಳು–ಇವೇ ಮುಂತಾದ ಆಯುಧಗಳನ್ನು ಹೊಂದಿರುವ ಅಶ್ವ-ಮಹಾರಥ-ಮಹಾಗಜಗಳಿಂದ ಯುಕ್ತವಾದ ಸೈನ್ಯವನ್ನು ನನ್ನೊಡನೆ ಯುದ್ಧಮಾಡಲು ಕರೆತರುವನು. ಅನಂತರ ನನಗೂ ಮತ್ತು ರಾಕ್ಷಸಸೈನ್ಯಕ್ಕೂ ಘೋರವಾದ ಯುದ್ಧವಾಗುತ್ತದೆ. ಶತ್ರುಗಳು ಸಹಿಸಿಕೊಳ್ಳಲು ಸಾಧ್ಯವಾಗದಷ್ಟು ಪರಾಕ್ರಮವನ್ನು ಹೊಂದಿರುವ ನಾನು ಪ್ರಚಂಡಪರಾಕ್ರಮಿಗಳಾದ ರಾಕ್ಷಸಸೈನಿಕರೊಡನೆ ಯುದ್ಧಮಾಡಿ ರಾವಣರಾಕ್ಷಸನಿಂದ ಪ್ರಚೋದಿತವಾದ ರಾಕ್ಷಸಸೈನ್ಯಗಳನ್ನು ಸಂಪೂರ್ಣವಾಗಿ ವಿನಾಶಗೊಳಿಸಿ ಹರೀಶ್ವರನ ಪಟ್ಟಣವಾದ ಕಿಷ್ಕಿಂಧೆಗೆ ಸುಖವಾಗಿ ಹೋಗುತ್ತೇನೆ."

ಬಳಿಕ ಭಯಂಕರಪರಾಕ್ರಮಿಯಾದ ಮಾರುತಿಯು ಪರಮಕ್ರುದ್ಧನಾಗಿ ಮಹತ್ತರವಾದ ತೊಡೆಯ ವೇಗದಿಂದ ಆ ಅಶೋಕವನದಲ್ಲಿದ್ದ ವೃಕ್ಷಗಳನ್ನು ಬಿರುಗಾಳಿಯಂತೆ ಒಂದೊಂದನ್ನಾಗಿ ಉರುಳಿಸಲು ಉಪಕ್ರಮಿಸಿದನು. ಮದಿಸಿದ ಪಕ್ಷಿಗಳಿಂದ ಶಬ್ದಾಯಮಾನವಾಗಿದ್ದ, ನಾನಾವಿಧವಾದ ವೃಕ್ಷಗಳಿಂದಲೂ–ಲತೆಗಳಿಂದಲೂ ಸಮಾಕುಲವಾಗಿದ್ದ , ಅಂತಃಪುರದ ಸ್ತ್ರೀಯರ ವಿಹಾರಕ್ಕಾಗಿಯೇ ನಿರ್ಮಿಸಿದ್ದ ಪ್ರಮದಾವನವನ್ನು ಧ್ವಂಸಮಾಡಿದನು.

---

ಯಾವನು ಅಲ್ಪಪ್ರಯತ್ನದಿಂದ ಹೆಚ್ಚು ಕಾರ್ಯಗಳನ್ನು ಸಾಧಿಸುವ ಉಪಾಯವನ್ನು ತಿಳಿದಿರುವನೋ–ಅಂತಹವನೇ ಅರ್ಥಸಾಧನಸಮರ್ಥನೆಂದು ಕೀರ್ತಿತನಾಗುತ್ತಾನೆ. ಹೀಗೆ ಒಬ್ಬರು ವ್ಯಾಖ್ಯಾನಿಸಿದ್ದಾರೆ. ರಾಮಕಾರ್ಯಸಾಧನೆಗೆ ಸೀತಾಪ್ರಾಪ್ತಿಯೊಂದೇ ಕಾರಣವಲ್ಲ. ರಾಕ್ಷಸರ ಬಲಾಬಲಪರೀಕ್ಷೆಯೂ ಸಾಧಕವಾಗುತ್ತದೆ.

ಮಾರುತಿಯು ಅಲ್ಲಿದ್ದ ವೃಕ್ಷಗಳನ್ನು ಕಿತ್ತುಹಾಕಿದನು. ಜಲಾಶಯಗಳನ್ನು ಒಡೆದುಹಾಕಿದನು. ಪರ್ವತದ ಕೋಡುಗಲ್ಲುಗಳನ್ನು ನುಚ್ಚುನೂರು ಮಾಡಿದನು. ಅದರಿಂದಾಗಿ ನೋಡಲು ಬಹಳ ರಮಣೀಯವಾಗಿದ್ದ ಆ ವನವು ಅಪ್ರಿಯವಾಗಿಯೂ, ಅಸಹ್ಯವಾಗಿಯೂ ಕಾಣುತ್ತಿದ್ದಿತು. ನಾನಾವಿಧ



ವಾದ ಪಕ್ಷಿಗಳ ದಾರುಣಧ್ವನಿಗಳಿಂದಲೂ, ಒಡೆದುಹೋದ ಜಲಾಶಯಗಳಿಂದಲೂ, ಕೆಂಪಾದ ಮತ್ತು ಬಾಡಿಹೋದ ಚಿಗುರುಗಳಿಂದಲೂ, ಮರಬಳ್ಳಿಗಳಿಂದಲೂ ಸಮಾಕುಲವಾಗಿದ್ದ ಆ ಪ್ರಮದಾವನವು ಕಾಳ್ಗಿಚ್ಚಿನಿಂದ ಸುಡಲ್ಪಟ್ಟಂತೆ ಸ್ವಲ್ಪವೂ ಶೋಭೆಯಿಲ್ಲದಂತಾಯಿತು. ಆಧಾರಭೂತವಾಗಿದ್ದ ವೃಕ್ಷಗಳಿಂದ ಹೊರಬಿದ್ದಿದ್ದ ಬಳ್ಳಿಗಳು ಪುರುಷರಿಲ್ಲದೆ ಕಳವಳಗೊಳ್ಳುತ್ತಿರುವ ಸ್ತ್ರೀಯರಂತೆಯೇ ಕಾಣುತ್ತಿದ್ದುವು. ಮಾರುತಿಯ ದಾಂಧಲೆಯಿಂದಾಗಿ

ಆ ಪ್ರಮದಾವನವು ತನ್ನ ಸೌಂದರ್ಯವನ್ನು ಸಂಪೂರ್ಣವಾಗಿ ಕಳೆದು ಕೊಂಡಿತು. ಲತಾಗೃಹಗಳೂ, ಚಿತ್ರಗೃಹಗಳೂ ವಿಕಾರವಾಗಿ ಕಾಣುತ್ತಿದ್ದುವು. ಪಕ್ಷಿಗಳೂ, ವಿಷಜಂತುಗಳೂ ಮತ್ತು ಮೃಗಗಳೂ ಆರ್ತಧ್ವನಿಗಳನ್ನು ಮಾಡುತ್ತಿದ್ದುವು. ಶಿಲಾಗೃಹಗಳನ್ನೂ ಮತ್ತು ಇತರ ಗೃಹಗಳನ್ನೂ ಮಾರುತಿಯು ಕಿತ್ತೆಸೆದಿದ್ದನು. ರಾವಣಾಸುರನ ಭಾರ್ಯೆಯರಿಗೆ ರಕ್ಷಕ ವಾಗಿದ್ದ, ಅಂತಃಪುರಸ್ತ್ರೀಯರ ವಿಹಾರಪ್ರದೇಶವಾಗಿದ್ದ, ಅಶೋಕಲತೆಗಳಿಂದ ಶೋಭಾಯಮಾನವಾಗಿದ್ದ ಆ ಪ್ರಮದಾವನವು ಹನುಮಂತನ ಬಲದ ಕಾರಣದಿಂದಾಗಿ ವಿಹ್ವಲಗೊಂಡು ಬಾಡಿಹೋದ ಲತೆಗಳ ಸಮೂಹದಿಂದ ಕೂಡಿದ ವನಪ್ರದೇಶವಾಗಿ ಪರಿಣಮಿಸಿತು. ಹೀಗೆ ಹನುಮಂತನು ಮಹಾತ್ಮ ನಾದ ಜಗತೀಪತಿಯಾದ ರಾವಣನ ಮನಸ್ಸಿಗೆ ಅಪ್ರಿಯವಾಗುವಂತಹ ಕಾರ್ಯವನ್ನು ಮಾಡಿ, ಏಕಾಕಿಯಾಗಿ ಹಲವಾರು ಮಂತ್ರಿ ರಾಕ್ಷಸರೊಡನೆ ಯುದ್ಧಮಾಡುವ ಬಯಕೆಯಿಂದ ಕಾಂತಿಯಿಂದ ಪ್ರಜ್ವಲಿಸುತ್ತಾ ಅಶೋಕ ವನದ ಹೊರಬಾಗಿಲಿಗೆ ಬಂದು ನಿಂತನು.

೪೧ನೆಯ ಸರ್ಗವು ಮುಗಿಯಿತು.



## ರಾಕ್ಷಸಿಯರು ಪ್ರಮದಾವನದ ನಾಶವನ್ನು ರಾವಣನಿಗೆ ತಿಳಿಸಿದುದು : ಒಡನೆಯೇ ರಾವಣನು ಕಿಂಕರರೆಂಬ ರಾಕ್ಷಸರನ್ನು ಕಳುಹಿಸಿಕೊಟ್ಟುದು : ಮಾರುತಿಯಿಂದ ಅವರ ಸಂಹಾರ

**ತತಃ ಪಕ್ಷಿನಿನಾದೇನ ವೃಕ್ಷಭಙ್ಗಸ್ವನೇನ ಚ ।**
**ಬಭೂವುಸ್ತ್ರಾಸಸಂಭ್ರಾನ್ತಾಃ ಸರ್ವೇ ಲಙ್ಕಾನಿವಾಸಿನಃ ॥೧॥**

ಬಳಿಕ ಪಕ್ಷಿಗಳ ಆರ್ತನಾದಗಳನ್ನೂ, ವೃಕ್ಷಗಳ ಮುರಿಯುವಿಕೆ ಯಿಂದಾದ ಛಟ-ಛಟಾ ಶಬ್ದಗಳನ್ನೂ ಕೇಳಿ ಲಂಕಾಪಟ್ಟಣದ ನಿವಾಸಿ ಗಳೆಲ್ಲರೂ ಭಯಭ್ರಾಂತರಾದರು.

ಭಯದಿಂದ ಗಾಬರಿಗೊಂಡು ದಿಕ್ಕುಗಾಣದೇ ಓಡುತ್ತಿದ್ದ ಮೃಗ-ಪಕ್ಷಿ ಗಳು ಅರಚಿಕೊಳ್ಳುತ್ತಿದ್ದುವು. ರಾಕ್ಷಸರಿಗೆ ಕ್ರೂರವಾದ ಅಪಶಕುನಗಳು

ಕಾಣಿಸಿಕೊಂಡುವು. ಸುತ್ತಲೂ ಕೇಳಿ ಬರುತ್ತಿದ್ದ ಘೋರವಾದ ಶಬ್ದಗಳಿಂದ ಭ್ರಾಂತರಾಗಿ ನಿದ್ರೆಯಿಂದ ಎಚ್ಚೆತ್ತ ವಿಕೃತವದನೆಯರಾದ ರಾಕ್ಷಸಿಯರು ಹಾಳಾಗಿಹೋಗಿದ್ದ ಪ್ರಮದಾವನವನ್ನೂ ಮತ್ತು ವೀರನಾದ ಮಹಾಕಪಿಯನ್ನೂ ನೋಡಿದರು. ಮಹಾಬಲನಾದ, ಮಹಾಸತ್ತ್ವನಾದ, ಮಹಾಬಾಹುವಾದ ಹನುಮಂತನು ಆ ರಾಕ್ಷಸಿಯರನ್ನು ಕಂಡೊಡನೆಯೇ ಅವರಿಗೆ ಮತ್ತಷ್ಟು ಭಯವನ್ನುಂಟುಮಾಡಲು ಮಹಾಘೋರವಾದ ರೂಪವನ್ನು ತಾಳಿದನು. ಪರ್ವತಾಕಾರನಾಗಿ ಕಾಣುತ್ತಿದ್ದ, ಮಹಾಕಾಯನಾದ ಮತ್ತು ಮಹಾಬಲನಾದ ವಾನರನನ್ನು ನೋಡಿ ರಾಕ್ಷಸಿಯರು ಜಾನಕಿಯನ್ನು ಪ್ರಶ್ನಿಸಿದರು :

**ಕೋಽಯಂ ಕಸ್ಯ ಕುತೋ ವಾಯಂ ಕಿಂನಿಮಿತ್ತಮಿಹಾಗತಃ ।**
**ಕಥಂ ತ್ವಯಾ ಸಹಾನೇನ ಸಂವಾದಃ ಕೃತ ಇತ್ಯುತ ॥೬॥**

"ಸೀತೆ! ಈ ವಾನರನು ಯಾರು? ಎಲ್ಲಿಂದ ಬಂದನು? ಏತಕ್ಕಾಗಿ ಬಂದಿರುವನು? ನೀನು ಇವನೊಡನೆ ಏನು ಮಾತನಾಡಿದೆ?

**ಆಚಕ್ಷ್ವ ನೋ ವಿಶಾಲಾಕ್ಷಿ ಮಾ ಭೂತ್ತೇ ಸುಭಗೇ ಭಯಮ್ ।**
**ಸಂವಾದಮಸಿತಾಪಾಙ್ಗೇ ತ್ವಯಾ ಕಿಂ ಕೃತವಾನಯಮ್ ॥೭॥**

ವಿಶಾಲಾಕ್ಷಿಯೇ! ಸೌಭಾಗ್ಯವತಿಯೇ! ಅಸಿತೇಕ್ಷಣಳೇ! ಈ ವಾನರನು ನಿನ್ನೊಡನೆ ಯಾವ ಮಾತನಾಡಿದನೆಂಬುದನ್ನು ನಮ್ಮೊಡನೆ ಹೇಳು. ನೀನು ಭಯಪಡುವ ಕಾರಣವಿಲ್ಲ."

ಸರ್ವಾಂಗಶೋಭನೆಯಾದ, ಶುಭಾಂಗಿಯಾದ, ಸಾಧ್ವಿಯಾದ ಸೀತಾದೇವಿಯು ರಾಕ್ಷಸಿಯರಿಗೆ ಹೇಳಿದಳು :

**ರಕ್ಷಸಾಂ ಕಾಮರೂಪಾಣಾಂ ವಿಜ್ಞಾನೇ ಕಾ ಗತಿರ್ಮಮ ॥೮॥**

"ಕಾಮರೂಪಿಗಳಾದ ರಾಕ್ಷಸರ ವ್ಯವಹಾರಗಳನ್ನು ತಿಳಿಯಲು ನನಗಾದರೂ ಯಾವ ಮಾರ್ಗವಿದೆ?

**ಯೂಯಮೇವಾಭಿಜಾನೀತ ಯೋಽಯಂ ಯದ್ವಾ ಕರಿಷ್ಯತಿ ।**
**ಅಹಿರೇವ ಹ್ಯಹೇಃ ಪಾದಾನ್ವಿಜಾನಾತಿ ನ ಸಂಶಯಃ ॥೯॥**

**ಅಹಮಪ್ಯಸ್ಯ ಭೀತಾಸ್ಮಿ ನೈನಂ ಜಾನಾಮಿ ಕೋ ನ್ವಯಮ್ ।**
**ವೇದ್ಮಿ ರಾಕ್ಷಸಮೇವೈನಂ ಕಾಮರೂಪಿಣಮಾಗತಮ್ ॥೧೦॥**

ಇವನಾರು? ಏನು ಮಾಡುವನು?–ಎಂಬುದೆಲ್ಲವನ್ನೂ ನೀವೇ ಬಲ್ಲಿರಿ. ಹಾವಿನ ಜಾಡನ್ನು ಹಾವೇ ತಿಳಿಯಬಲ್ಲುದು. ಇದರಲ್ಲಿ ಸಂಶಯವೇ ಇಲ್ಲ. ಇವನನ್ನು ನೋಡಿ ನಾನೂ ಬಹಳ ಭಯಗೊಂಡಿರುವೆನು. ಸ್ವೇಚ್ಛಾ ರೂಪಿಯಾದ ರಾಕ್ಷಸನೇ ಇವನಿರಬಹುದೆಂದು ನನಗೆ ತೋರುತ್ತದೆ."*

ವೈದೇಹಿಯ ಮಾತನ್ನು ಕೇಳಿ ರಾಕ್ಷಸಿಯರು ದಿಕ್ಕಾಪಾಲಾಗಿ ಓಡಿ ಹೋದರು. ಕೆಲವರು ಸೀತೆಯ ಬಳಿಯಲ್ಲೇ ಉಳಿದರು. ಮತ್ತೆ ಕೆಲವರು ರಾವಣನಿಗೆ ವಿಷಯವನ್ನು ತಿಳಿಸಲು ಧಾವಿಸಿದರು. ವಿಕಾರವಾದ ಮುಖ ಗಳನ್ನು ಹೊಂದಿದ್ದ ಆ ರಾಕ್ಷಸಿಯರು ರಾವಣನ ಸಮೀಪಕ್ಕೆ ಹೋಗಿ ವಿರೂಪನಾದ ಮತ್ತು ಘೋರರೂಪನಾದ ವಾನರನ ವಿಷಯವನ್ನು ಹೇಳತೊಡಗಿದರು :

"ಮಹಾರಾಜ! ಅಶೋಕವನದ ಮಧ್ಯದಲ್ಲಿ ಭಯಂಕರವಾದ ಶರೀರ ವನ್ನು ಹೊಂದಿರುವ ಮಹಾಪರಾಕ್ರಮಿಯಾದ ವಾನರನೊಬ್ಬನು ಸೀತೆ ಯೊಡನೆ ಮಾತನಾಡುತ್ತಿದ್ದನು. ಅವನೀಗ ಅಲ್ಲಿಯೇ ಇದ್ದಾನೆ. ಅವನಾರೆಂದು ನಾವು ಸೀತೆಯನ್ನು ಬಹಳವಾಗಿ ಪ್ರಶ್ನಿಸಿದರೂ ಅವಳು ನಮಗೆ ಏನನ್ನೂ ಹೇಳುತ್ತಿಲ್ಲ. ರಾವಣೇಶ್ವರ! ಅವನು ಇಂದ್ರನ ದೂತನಾಗಿರ ಬಹುದು. ಕುಬೇರನ ದೂತನಾಗಿರಬಹುದು ಅಥವಾ ಸೀತಾದೇವಿಯನ್ನು ಹುಡುಕುವ ಸಲುವಾಗಿ ಶ್ರೀರಾಮನಿಂದ ಕಳುಹಿಸಲ್ಪಟ್ಟಿರುವ ದೂತನಾದರೂ ಆಗಿರಬಹುದು.

ಅದ್ಭುತವಾದ ರೂಪವನ್ನು ಹೊಂದಿರುವ ಆ ವಾನರನು ನಾನಾಮೃಗ

---

* ಸೀತೆಯು ರಾಕ್ಷಸಿಯರಿಗೆ ಸುಳ್ಳು ಹೇಳಿದಳೇ? ಸುಳ್ಳು ಹೇಳಬಹುದೇ?–ಎಂಬ ಪ್ರಶ್ನೆಗೆ ಒಬ್ಬ ವ್ಯಾಖ್ಯಾನಕಾರರು ಸುಳ್ಳು ಹೇಳಿದಳೆಂದೇ ಭಾವಿಸಿ ಧರ್ಮಶಾಸ್ತ್ರದ ವಾಕ್ಯವನ್ನು ಉದ್ಧರಿಸಿದ್ದಾರೆ. ವಿವಾಹಕಾಲೇ ರತಿಸಂಪ್ರಯೋಗೇ ಪ್ರಾಣಾತ್ಯಯೇ ಸರ್ವಧನಾಪಹಾರೇ। ಮಿತ್ರಸ್ಯ ಚಾರ್ಥೇಽಪ್ಯನೃತಂ ವದೇಯುಃ ಪಞ್ಚಾನೃತಾನ್ಯಾಹುರಪಾತಕಾನಿ ॥ ವಿವಾಹ ಕಾಲ, ರತಿಸಮಯ, ಪ್ರಾಣಾಪತ್ತು, ಧನಾಪಹಾರ, ಮಿತ್ರನ ಸಲುವಾಗಿ–ಈ ಐದು ಸಂದರ್ಭಗಳಲ್ಲಿ ಸುಳ್ಳುಹೇಳುವುದು ಪಾಪವಲ್ಲ. ಸೀತಾದೇವಿಗೆ ಇದು ಆಪತ್ಕಾಲವಾಗಿ ದ್ದಿತು. ಆದುದರಿಂದ ಅವಳು ಸುಳ್ಳುಹೇಳಿದಳು. ಆದರೆ ಇದು ಪಾಪಕರವಲ್ಲ. ಮತ್ತೊಬ್ಬರ

ಗಳ ಸಮೂಹಗಳಿಂದ ವ್ಯಾಪ್ತವಾಗಿದ್ದ, ನಯನಮನೋಹರವಾಗಿದ್ದ ನಿನ್ನ ಪ್ರಮದಾವನವನ್ನು ವಿನಾಶಗೊಳಿಸಿರುವನು. ಅಲ್ಲವನು ವಿನಾಶಗೊಳಿಸದಿರುವ ಪ್ರದೇಶವೇ ಇಲ್ಲ. ಆದರೆ ಸೀತೆಯಿರುವ ಸ್ಥಳವನ್ನು ಮಾತ್ರ ಅವನು ವಿನಾಶಗೊಳಿಸಿಲ್ಲ. ಜಾನಕಿಯನ್ನು ರಕ್ಷಿಸುವ ಸಲುವಾಗಿಯೇ ಅವನು ಆ ಪ್ರದೇಶವನ್ನು ಹಾಳುಮಾಡದೇ ಇರಬಹುದು. ಅಥವಾ ಬಳಲಿಕೆಯಿಂದಾದರೂ ಆ ಸ್ಥಳವನ್ನು ಬಿಟ್ಟಿರಬಹುದು. ಇಲ್ಲ, ಮಹಾರಾಜ! ಆ ವಾನರನಿಗೆ ಬಳಲಿಕೆಯಾದರೂ ಎಲ್ಲಿಯದು? ಜಾನಕಿಯನ್ನು ರಕ್ಷಿಸುವ ಸಲುವಾಗಿಯೇ ಅವನು ಆ ಪ್ರದೇಶವನ್ನು ಹಾಳುಮಾಡಿರುವುದಿಲ್ಲ. ಮನೋಹರವಾದ ಚಿಗುರುಗಳಿಂದಲೂ, ಎಲೆಗಳಿಂದಲೂ ಕೂಡಿ ಚೆನ್ನಾಗಿ ಬೆಳೆದಿರುವ, ಸೀತೆಯಿಂದ ಆಶ್ರಯಿಸಲ್ಪಟ್ಟಿರುವ ಆ ಶಿಂಶುಪಾವೃಕ್ಷವನ್ನು ಮಾತ್ರ ವಾನರನು ಉರುಳಿಸದೇ ರಕ್ಷಿಸಿರುವನು. ಭಯಂಕರರೂಪನಾಗಿರುವ ಅವನಿಗೆ ಉಗ್ರವಾದ ಶಿಕ್ಷೆಯನ್ನು ವಿಧಿಸಬೇಕು. ಈ ಸಮಯದಲ್ಲವನು ಎರಡು ವಿಧವಾದ ಅಪರಾಧಗಳನ್ನು ಮಾಡಿದ್ದಾನೆ. ಮೊದಲನೆಯದಾಗಿ ನಿನ್ನ ಅನುಮತಿಯಿಲ್ಲದೇ ಸೀತೆಯೊಡನೆ ಮಾತನಾಡಿದ್ದಾನೆ. ಎರಡನೆಯದಾಗಿ ನಿನಗೆ ಅತಿಪ್ರಿಯವಾಗಿದ್ದ ಪ್ರಮದಾವನವನ್ನು ವಿನಾಶಗೊಳಿಸಿದ್ದಾನೆ.

ರಾಕ್ಷಸೇಶ್ವರನೇ! ನೀನು ಸೀತಾದೇವಿಯನ್ನು ಈಗಾಗಲೇ ಮನಸ್ಸಿನಿಂದ

---

ಅಭಿಪ್ರಾಯದಂತೆ–ಸೀತಾದೇವಿಗೆ ತನ್ನನ್ನು ಸಂಧಿಸಿದ ಹನುಮಂತನೇ ಈ ವಿಧ್ವಂಸಕ್ರಿಯೆಯನ್ನು ಮಾಡಿರುವನೆಂಬುದು ನಿಶ್ಚಯವಾಗಿಯೂ ತಿಳಿಯದು. ಏಕೆಂದರೆ ಹನುಮಂತನು ಸೀತೆಯನ್ನು ಬಿಟ್ಟು ಹೊರಡುವಾಗ ಕಿಷ್ಕಿಂಧೆಗೆ ಹೋಗುವುದಾಗಿ ಹೇಳಿದನೇ ಹೊರತು ಪ್ರಮದಾವನವನ್ನು ಧ್ವಂಸಮಾಡುವ ವಿಷಯವನ್ನು ಹೇಳಿಲ್ಲ. ಹನುಮಂತನ ವಿಷಯದಲ್ಲಿ ಸೀತೆಗೆ ಸಂಶಯವುಂಟಾಗಲು ಯಾವ ಕಾರಣವೂ ಇಲ್ಲ. ಆದುದರಿಂದ ಅವಳು ಹನುಮಂತನು ಕಿಷ್ಕಿಂಧೆಗೆ ಹೋಗಿರುವನೆಂದೇ ಭಾವಿಸಿದ್ದಳು. ಸೀತೆಯು ಹನುಮಂತನೊಡನೆ ಮಾತನಾಡಿದ್ದು ನಿಶ್ಚಯವಾದರೂ ಅವನೇ ಇವನೆಂದು ಸೀತಾದೇವಿಗೆ ಊಹಿಸಲು ಕೂಡ ಸಾಧ್ಯವಾಗಲಿಲ್ಲ. ಇಲ್ಲಿಯೂ ಕೂಡ ಅವಳು ಪ್ರಮದಾವನವನ್ನು ಧ್ವಂಸಮಾಡಿದವನು ಯಾರೆಂಬುದು ತಿಳಿಯದೆಂದು ಹೇಳಿದಳೇ ಹೊರತು–'ನಾನು ಕಪಿಯೊಡನೆ ಮಾತನಾಡಲಿಲ್ಲ'–ಎಂದು ಹೇಳಿಲ್ಲ. ಆದುದರಿಂದ ಈ ಪ್ರಕರಣದಲ್ಲಿ ಸೀತೆಯು ನಿಜಾಂಶವನ್ನು ಹೇಳಿರುವಳೇ ಹೊರತು ಸುಳ್ಳು ಹೇಳಿಲ್ಲ. ಈ ಅಭಿಪ್ರಾಯವೇ ಸಮಂಜಸವಾಗಿ ಕಾಣುತ್ತದೆ.

ಪರಿಗ್ರಹಿಸಿರುವೆ. ಅಂತಹವಳೊಡನೆ ಮಾತನಾಡಬೇಕಾದರೆ ಅವನು ಜೀವನದ ಹಂಗನ್ನೇ ತೊರೆದವನಾಗಿರಬೇಕು. ಜೀವದ ಮೇಲೆ ಆಸೆಯಿರುವ ಯಾವನು ತಾನೇ ನೀನು ಕಾಮಿಸಿರುವವಳೊಡನೆ ಮಾತನಾಡಬಲ್ಲನು?"

ರಾಕ್ಷಸಿಯರ ಮಾತುಗಳನ್ನು ಕೇಳಿದೊಡನೆಯೇ ರಾಕ್ಷಸೇಶ್ವರನು ಕೋಪದಿಂದ ಕಣ್ಣುಗುಡ್ಡೆಗಳನ್ನು ತಿರುಗಿಸುತ್ತಾ ಪ್ರಜ್ವಲಿಸುವ ಚಿತಾಗ್ನಿಯಂತೆ ಉರಿದುಹೋದನು. ಉರಿಯುತ್ತಿರುವ ದೀವಟಿಗೆಗಳಿಂದ ಕಾದ ಎಣ್ಣೆಯು ತೊಟ್ಟಿಕ್ಕುವಂತೆ ಕ್ರುದ್ಧನಾದ ರಾವಣನ ಕಣ್ಣುಗಳಿಂದ ಕಾದಕಂಬನಿಗಳು ತೊಟ್ಟಿಕ್ಕತೊಡಗಿದುವು. ಒಡನೆಯೇ ಮಹಾತೇಜಸ್ವಿಯಾದ ರಾವಣೇಶ್ವರನು ತನ್ನಂತೆಯೇ ಅತುಲಪರಾಕ್ರಮಿಗಳಾಗಿದ್ದ ಕಿಂಕರರೆಂಬ ಹೆಸರಿನ ರಾಕ್ಷಸರನ್ನು ಹನುಮಂತನನ್ನು ನಿಗ್ರಹಿಸುವ ಸಲುವಾಗಿ ಕಳುಹಿಸಿದನು. ವೇಗವಂತರಾದ ಎಂಬತ್ತು ಸಾವಿರ ಕಿಂಕರಸೈನಿಕರು ಕೂಟ-ಮುದ್ಗರಗಳೇ ಮೊದಲಾದ ಆಯುಧಗಳನ್ನು ಹಿಡಿದು ರಾವಣನ ಅರಮನೆಯಿಂದ ಹನುಮಂತನನ್ನು ನಿಗ್ರಹಿಸಲು ಹೊರಟರು.

ಅವರೆಲ್ಲರಿಗೂ ದೊಡ್ಡದಾದ ಹೊಟ್ಟೆಗಳಿದ್ದುವು. ದೊಡ್ಡದಾದ ಕೋರೆ ದಾಡೆಗಳಿದ್ದುವು. ಎಲ್ಲರೂ ಭಯಂಕರವಾದ ರೂಪವುಳ್ಳವರಾಗಿದ್ದರು. ಮಹಾಬಲಿಷ್ಠರಾಗಿದ್ದರು. ಯುದ್ಧಾಕಾಂಕ್ಷಿಗಳಾದ ಅವರೆಲ್ಲರೂ ಹನುಮಂತನನ್ನು ಸೆರೆಹಿಡಿಯುವುದರಲ್ಲಿ ಆಸಕ್ತರಾಗಿದ್ದರು. ಮಹಾವೇಗಶಾಲಿಗಳಾದ ಅವರೆಲ್ಲರೂ ಅಶೋಕವನದ ಹೊರಬಾಗಿಲಿನಲ್ಲಿ ಕುಳಿತಿದ್ದ ಹನುಮಂತನ ಬಳಿಗೆ ಹೋಗಿ–ಮಿಡತೆಹುಳುಗಳು ರಭಸದಿಂದ ಬೆಂಕಿಯಲ್ಲಿ ಬೀಳುವಂತೆ–ಹನುಮಂತನ ಮೇಲೆ ರಭಸದಿಂದ ಬಿದ್ದರು. ಆ ಕಿಂಕರರಾಕ್ಷಸರು ವಿಚಿತ್ರವಾದ ಗದೆಗಳಿಂದಲೂ, ಚಿನ್ನದ ಪಟ್ಟಿಗಳಿಂದ ಸಮಲಂಕೃತವಾಗಿದ್ದ ಪರಿಘಾಯುಧಗಳಿಂದಲೂ, ಸೂರ್ಯಸದೃಶವಾದ ಬಾಣಗಳಿಂದಲೂ ವಾನರಶ್ರೇಷ್ಠನನ್ನು ಹಿಂಸಿಸತೊಡಗಿದರು. ಮುದ್ಗರಗಳಿಂದಲೂ, ಪಟ್ಟಿಶಗಳಿಂದಲೂ, ಶೂಲಗಳಿಂದಲೂ, ಪ್ರಾಸ-ತೋಮರ-ಶಕ್ತ್ಯಾಯುಧಗಳಿಂದಲೂ ಹನುಮಂತನನ್ನು ಸುತ್ತುಗಟ್ಟಿ ಅವನಿಗೆದುರಾಗಿ ನಿಂತುಕೊಂಡರು. ತೇಜಸ್ವಿಯಾದ, ಅತುಲವಾದ ಕಾಂತಿಯಿಂದ ಸಂಪನ್ನನಾಗಿದ್ದ, ಪರ್ವತದಂತೆಯೇ ಮಹಾಕಾಯನಾಗಿ ಕಾಣುತ್ತಿದ್ದ ಹನುಮಂತನು ತನ್ನ ಬಾಲವನ್ನೊಮ್ಮೆ ನೆಲಕ್ಕೆ ಅಪ್ಪಳಿಸಿ

ಗಟ್ಟಿಯಾಗಿ ಸಿಂಹನಾದಮಾಡಿದನು. ಘೋರವಾದ ನಿನಾದದಿಂದ ಲಂಕಾ ಪಟ್ಟಣವನ್ನೇ ತುಂಬುತ್ತಿರುವನೋ ಎಂಬಂತೆ ಬಾಲವನ್ನು ಪುನಃ ಅಪ್ಪಳಿಸಿ ದನು. ಮಹತ್ತರವಾದ ಆ ಆಸ್ಫೋಟನಶಬ್ದದಿಂದ ಆಕಾಶದಲ್ಲಿ ಹಾರಾಡುತ್ತಿದ್ದ ಪಕ್ಷಿಗಳು ಭ್ರಮಿಸಿ ಕೆಳಗುರುಳಿದುವು. ಬಳಿಕ ಹನುಮಂತನು ಗಟ್ಟಿಯಾಗಿ ಉದ್ಘೋಷಿಸಿದನು :

**ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ ।**
**ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥೩೩॥**

**ದಾಸೋಽಹಂ ಕೋಸಲೇನ್ದ್ರಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।**
**ಹನುಮಾನ್ ಶತ್ರುಸೈನ್ಯಾನಾಂ ನಿಹನ್ತಾ ಮಾರುತಾತ್ಮಜಃ ॥೩೪॥**

**ನ ರಾವಣಸಹಸ್ರಂ ಮೇ ಯುದ್ಧೇ ಪ್ರತಿಬಲಂ ಭವೇತ್ ।**
**ಶಿಲಾಭಿಶ್ಚ ಪ್ರಹರತಃ ಪಾದಪೈಶ್ಚ ಸಹಸ್ರಶಃ ॥೩೫॥**

**ಅರ್ದಯಿತ್ವಾ ಪುರೀಂ ಲಙ್ಕಾಮಭಿವಾದ್ಯ ಚ ಮೈಥಿಲೀಮ್ ।**
**ಸಮೃದ್ಧಾರ್ಥೋ ಗಮಿಷ್ಯಾಮಿ ಮಿಷತಾಂ ಸರ್ವರಕ್ಷಸಾಮ್ ॥೩೬॥**

"ಅತಿಬಲಿಷ್ಠನಾದ ಶ್ರೀರಾಮನು ವಿಜಯಿಯಾಗುತ್ತಾನೆ. ಮಹಾಬಲ ನಾದ ಲಕ್ಷ್ಮಣನೂ ವಿಜಯಿಯಾಗುತ್ತಾನೆ. ರಾಘವನಿಂದ ಪರಿಪಾಲಿಸಲ್ಪಡು ತ್ತಿರುವ ರಾಜಾ ಸುಗ್ರೀವನೂ ಜಯಶಾಲಿಯಾಗುತ್ತಾನೆ. ಕಷ್ಟಕರವಾದ ಕಾರ್ಯಗಳನ್ನೂ ಬಹಳ ಸುಲಭವಾಗಿ ಮಾಡುವ ಕೋಸಲೇಂದ್ರನಾದ ಶ್ರೀರಾಮನ ದಾಸನು ನಾನು. ವಾಯುಪುತ್ರನಾದ ಹನುಮಂತನೆಂಬ ನಾಮಧೇಯವುಳ್ಳ ನಾನು ಶತ್ರುಸೈನ್ಯವೆಲ್ಲವನ್ನೂ ಸಂಪೂರ್ಣವಾಗಿ ಧ್ವಂಸ ಮಾಡುತ್ತೇನೆ. ಬಂಡೆಗಳಿಂದಲೂ ವೃಕ್ಷಗಳಿಂದಲೂ ಸಾವಿರಾರು ಬಾರಿ ಅನವರತವಾಗಿ ಪ್ರಹರಿಸುವ ನನಗೆ ಯುದ್ಧದಲ್ಲಿ ಸಾವಿರ ರಾವಣರೂ ಸಾಟಿ ಯಾಗಲಾರರು. ಲಂಕಾಪಟ್ಟಣವನ್ನು ಧ್ವಂಸಮಾಡಿ ಮೈಥಿಲಿಗೆ ಅಭಿವಾದನ ಮಾಡಿ ಎಲ್ಲ ರಾಕ್ಷಸರೂ ನೋಡುತ್ತಿರುವಂತೆಯೇ ಸಮೃದ್ಧವಾದ ಪ್ರಯೋಜನವನ್ನು ಪಡೆದು ಇಲ್ಲಿಂದ ಹೊರಟುಹೋಗುತ್ತೇನೆ."

ಹನುಮಂತನ ಘೋರನಿನಾದದಿಂದಲೂ ಮತ್ತು ಘೋಷಣೆ ಯಿಂದಲೂ ಕಿಂಕರರಾಕ್ಷಸರು ಭಯಗೊಂಡು ಜಯಗಳಿಸುವುದರಲ್ಲಿ

ಸಂದೇಹಗೊಂಡರು. ಸಂಧ್ಯಾಕಾಲದ ಮೇಘದಂತೆ ಉನ್ನತನಾಗಿದ್ದ ಹನುಮಂತನನ್ನು ಪುನಃ ಪುನಃ ನೋಡಿದರು. ಸ್ವಾಮಿಯಾದ ರಾವಣೇಶ್ವರನ ಆಜ್ಞೆಯಿಂದ ನಿರ್ಭೀತರಾಗಿ ವಿಚಿತ್ರವಾದ ಮತ್ತು ಭಯಂಕರವಾದ ಆಯುಧಗಳಿಂದ ಹನುಮಂತನನ್ನು ಆಕ್ರಮಿಸಿದರು.



ಸುತ್ತಲೂ ಕಿಂಕರರಾಕ್ಷಸರಿಂದ ಪರಿವೃತನಾಗಿದ್ದ, ಮಹಾಬಲನಾದ, ಶೂರನಾದ ಹನುಮಂತನು ಹೊರಬಾಗಿಲಿನಲ್ಲಿದ್ದ ಕಬ್ಬಿಣದ ಲಾಳ ಮುಂಡಿಗೆಯ ಬಳಿಗೆ ಹೋಗಿ–ಗರುಡನು ಸರ್ಪವನ್ನು ಹಿಡಿಯುವಂತೆ–ಬಾಗಿಲಿನಲ್ಲಿ ಹೊಳೆಯುತ್ತಿದ್ದ ಅಗಳಿಯನ್ನೆತ್ತಿಕೊಂಡು ರಾಕ್ಷಸರೆಲ್ಲರನ್ನೂ ಸದೆಬಡಿದನು. ಬಳಿಕ ಅದೇ ಪರಿಘವನ್ನೆತ್ತಿಕೊಂಡು ಆಕಾಶದಲ್ಲಿಯೇ

ಸಂಚರಿಸತೊಡಗಿದನು. ಇಂದ್ರನು ವಜ್ರಾಯುಧದಿಂದ ದೈತ್ಯರನ್ನು ಸಂಹರಿಸಿ ದಂತೆ ಪರಿಘಾಯುಧದಿಂದ ರಾಕ್ಷಸರೆಲ್ಲರನ್ನೂ ಧ್ವಂಸಮಾಡಿದನು. ಹೀಗೆ ಕಿಂಕರರಾಕ್ಷಸರೆಲ್ಲರನ್ನೂ ಸಂಹರಿಸಿ ಪುನಃ ರಾಕ್ಷಸರೊಡನೆ ಯುದ್ಧಮಾಡುವ ಇಚ್ಛೆಯಿಂದ ಹೊರಬಾಗಿಲಿನಲ್ಲಿಯೇ ಕುಳಿತುಕೊಂಡನು. ಹನುಮಂತನ ಭಯದಿಂದಾಗಿ ರಣರಂಗದಿಂದ ಪಲಾಯನಮಾಡಿದ್ದ ಕೆಲವು ರಾಕ್ಷಸರು ರಾವಣನ ಬಳಿಗೆ ಹೋಗಿ ಕಿಂಕರರಾಕ್ಷಸರೆಲ್ಲರೂ ಹನುಮಂತನಿಂದ ವಿನಾಶ ಹೊಂದಿದರೆಂಬ ವಾರ್ತೆಯನ್ನು ತಿಳಿಸಿದರು.

ರಾಕ್ಷಸರ ಮಹಾಸೈನ್ಯವು ಹನುಮಂತನಿಂದ ವಿನಾಶಗೊಳಿಸಲ್ಪಟ್ಟಿತೆಂಬುದನ್ನು ಕೇಳಿದ ರಾವಣನು ಪರಮಕ್ರುದ್ಧನಾಗಿ ಕಣ್ಣುಗಳನ್ನು ಗರ-ಗರನೆ ತಿರುಗಿಸುತ್ತಾ ಪರಾಕ್ರಮದಲ್ಲಿ ಅಪ್ರತಿಮನೆನಿಸಿದ, ಯುದ್ಧದಲ್ಲಿ ಜಯಿಸಲು ಅಸಾಧ್ಯನಾಗಿದ್ದ, ಪ್ರಹಸ್ತನೆಂಬ ಮಂತ್ರಿಯ ಮಗನನ್ನು ಹನುಮಂತನೊಡನೆ ಯುದ್ಧಕ್ಕೆ ಹೋಗಲು ಆಜ್ಞಾಪಿಸಿದನು.

ಳ೨ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೪೩ನೆಯ ಸರ್ಗ

## ಹನುಮಂತನು ಚೈತ್ಯಪ್ರಾಸಾದವನ್ನು ವಿನಾಶಗೊಳಿಸಿ ಅಲ್ಲಿದ್ದ ರಾಕ್ಷಸರನ್ನು ಸಂಹರಿಸಿದುದು

**ತತಃ ಸ ಕಿಂಕರಾನ್ಹತ್ವಾ ಹನೂಮಾನ್ ಸ್ಥಾನಮಾಶ್ರಿತಃ ।**
**ವನಂ ಭಗ್ನಂ ಮಯಾ ಚೈತ್ಯಪ್ರಾಸಾದೋ ನ ವಿನಾಶಿತಃ ॥೧॥**

ಕಿಂಕರರಾಕ್ಷಸರನ್ನು ಸಂಹರಿಸಿದನಂತರ ಕಪಿಶ್ರೇಷ್ಠನಾದ, ವಾಯುಪುತ್ರನಾದ ಹನುಮಂತನು ವನದ ಹೊರಬಾಗಿಲಿನಲ್ಲಿ ಕುಳಿತು ಯೋಚಿಸತೊಡಗಿದನು :

“ನಾನೇನೋ ಈ ವನವನ್ನು ಸಂಪೂರ್ಣವಾಗಿ ಧ್ವಂಸಮಾಡಿದೆನು. ಆದರೆ ಈ ಚೈತ್ಯಪ್ರಾಸಾದವನ್ನು (ರಾಕ್ಷಸರ ಕುಲದೇವತೆಯ ದೇವಾಲಯವನ್ನು) ಕೆಡಹಲಿಲ್ಲ. ಅದನ್ನೂ ಈಗಲೇ ಧ್ವಂಸಮಾಡಿಬಿಡುವೆನು.”

ಹನುಮಂತನು ಹೀಗೆ ಯೋಚಿಸಿ ತನ್ನ ಬಲವೆಷ್ಟೆಂಬುದನ್ನು ರಾಕ್ಷಸರಿಗೆ

ತೋರ್ಪಡಿಸುತ್ತಾ ಮೇರುಶಿಖರದಂತೆ ಎತ್ತರವಾಗಿದ್ದ ಚೈತ್ಯಪ್ರಾಸಾದದ ಕಡೆಗೆ ಹಾರಿ ಮೇಲೆ ಕುಳಿತನು.

ಪರ್ವತಸದೃಶವಾದ ಚೈತ್ಯಪ್ರಾಸಾದವನ್ನು ಹತ್ತಿ ಕುಳಿತಿದ್ದ ಮಹಾ ತೇಜಸ್ವಿಯಾದ ಹನುಮಂತನು ಆಗ ತಾನೇ ಉದಯಿಸಿದ ಮತ್ತೊಬ್ಬ ಸೂರ್ಯನಂತೆಯೇ ಪ್ರಕಾಶಿಸುತ್ತಿದ್ದನು. ಎದುರಿಸಲು ಅಸಾಧ್ಯವಾದ ಪ್ರಜ್ವಲಿಸುವ ತೇಜಸ್ಸಿನಿಂದ ಬೆಳಗುತ್ತಿದ್ದ ಹನುಮಂತನು ಕ್ಷಣಮಾತ್ರದಲ್ಲಿ ಎತ್ತರವಾಗಿದ್ದ ಚೈತ್ಯಪ್ರಾಸಾದವನ್ನು ಧ್ವಂಸಮಾಡಿ ಸಪ್ತಪರ್ವತಗಳ ಲ್ಲೊಂದಾದ ಪಾರಿಯಾತ್ರಪರ್ವತದಂತೆಯೇ ಪ್ರಕಾಶಿಸುತ್ತಿದ್ದನು. ತನ್ನ ಪ್ರಭಾವದಿಂದ ದೊಡ್ಡದಾದ ಶರೀರವನ್ನು ಧರಿಸಿ ಭಯರಹಿತನಾಗಿ ಲಂಕಾಪಟ್ಟಣವನ್ನು ಶಬ್ದಗಳಿಂದ ತುಂಬುತ್ತಿರುವನೋ ಎಂಬಂತೆ ಎರಡು ಭುಜಗಳನ್ನೂ ಬಲವಾಗಿ ಅಪ್ಪಳಿಸಿಕೊಂಡನು. ಕಿವಿಯ ತಮಟೆಯನ್ನೇ ಒಡೆದು ಹಾಕುವಂತಹ ಮಹತ್ತರವಾದ ಆ ಆಸ್ಫೋಟನೆಯ ಶಬ್ದದಿಂದಾಗಿ ಹಾರಾಡುತ್ತಿದ್ದ ಪಕ್ಷಿಗಳು ತೊಪ-ತೊಪನೆ ಕೆಳಕ್ಕೆ ಬಿದ್ದುವು. ಚೈತ್ಯಪ್ರಾಸಾದವನ್ನು ರಕ್ಷಿಸುತ್ತಿದ್ದ ರಾಕ್ಷಸರೂ ಮೂರ್ಛೆಹೊಂದಿದರು. ಬಳಿಕ ಹನುಮಂತನು ಜಯಕಾರಪೂರ್ವಕವಾಗಿ ಪುನಃ ಹೇಳಿದನು :

"ಅನೇಕಾನೇಕ ಅಸ್ತ್ರಗಳನ್ನು ತಿಳಿದಿರುವ ಶ್ರೀರಾಮನು ವಿಜಯಿ ಯಾಗಲಿ! ಮಹಾಬಲನಾದ ಲಕ್ಷ್ಮಣನು ವಿಜಯಿಯಾಗಲಿ! ರಾಘವನಿಂದ ರಕ್ಷಿಸಲ್ಪಡುತ್ತಿರುವ ಸುಗ್ರೀವರಾಜನು ನಿಶ್ಚಯವಾಗಿಯೂ ಜಯಗಳಿಸುತ್ತಾನೆ. ಕ್ಲಿಷ್ಟವಾದ ಕಾರ್ಯಗಳನ್ನೂ ಆಯಾಸವಿಲ್ಲದೇ ಮಾಡುವ ಕೋಸಲೇಂದ್ರನಾದ ಶ್ರೀರಾಮನ ದೂತನು ನಾನು. ವಾಯುವಿನ ಮಗನಾದ ಹನುಮಂತನು. ಶತ್ರುಸೈನ್ಯಸಂಹಾರಕನು. ಯುದ್ಧದಲ್ಲಿ ಬಂಡೆಗಳಿಂದಲೂ ವೃಕ್ಷಗಳಿಂದಲೂ ಸಾವಿರಾರು ಬಾರಿ ಅನವರತವಾಗಿ ಶತ್ರುಗಳನ್ನು ಪ್ರಹರಿ ಸುವ ಪರಾಕ್ರಮವುಳ್ಳ ನನಗೆ ಸಾವಿರ ರಾವಣರೂ ಸಾಟಿಯಾಗಲಾರರು. ಲಂಕೆಯನ್ನು ನಾಶಗೊಳಿಸಿ ನನ್ನ ಪರಾಕ್ರಮವನ್ನು ಪ್ರದರ್ಶಿಸಿ, ಸೀತಾದೇವಿಗೆ ಅಭಿವಾದನಮಾಡಿ ಕೃತಕೃತ್ಯನಾಗಿ, ಎಲ್ಲ ರಾಕ್ಷಸರೂ ನೋಡುತ್ತಿರುವಂತೆಯೇ ನಾನಿಲ್ಲಿಂದ ಹೊರಟುಹೋಗುವೆನು."

ಭಗ್ನಾವಶೇಷವಾಗಿದ್ದ ಚೈತ್ಯಪ್ರಾಸಾದದ ಮೇಲೆ ಕುಳಿತಿದ್ದ, ಮಹಾ

ಕಾಯನಾಗಿದ್ದ, ಕಪಿನಾಯಕನು ಹೀಗೆ ಘೋಷಿಸಿ ರಾಕ್ಷಸರಿಗೆ ಭಯವನ್ನುಂಟುಮಾಡುತ್ತಾ ಗಟ್ಟಿಯಾಗಿ ಗರ್ಜಿಸಿದನು. ಆ ಮಹಾನಾದವನ್ನು ಕೇಳಿದೊಡನೆಯೇ ಚೈತ್ಯಪ್ರಾಸಾದವನ್ನು ರಕ್ಷಿಸುತ್ತಿದ್ದ ನೂರಾರು ರಾಕ್ಷಸರು ವಿಧ-ವಿಧವಾದ ಅಸ್ತ್ರಗಳನ್ನೂ, ಖಡ್ಗಗಳನ್ನೂ, ಗಂಡುಗೊಡಲಿಗಳನ್ನೂ ಹಿಡಿದುಕೊಂಡು ಮಾರುತಿಯ ಮೇಲೆ ಪ್ರಯೋಗಿಸುತ್ತಾ ಅವನನ್ನು ಸುತ್ತುವರಿದು ನಿಂತರು. ವಿಚಿತ್ರವಾದ ಗದೆಗಳಿಂದಲೂ, ಸುವರ್ಣಮಯವಾದ ಹೊರಪಟ್ಟಿಗಳಿಂದಲೂ ಕೂಡಿದ್ದ ಪರಿಘಾಯುಧಗಳಿಂದಲೂ, ಸೂರ್ಯಸದೃಶವಾದ ಬಾಣಗಳಿಂದಲೂ ವಾನರಶ್ರೇಷ್ಠನಾದ ಹನುಮಂತನನ್ನು ಆ ರಾಕ್ಷಸರು ಪ್ರಹರಿಸಿದರು. ಮಾರುತಿಯನ್ನು ಸುತ್ತುವರಿದು ನಿಂತಿದ್ದ ಆ ರಾಕ್ಷಸ ಸಮೂಹವು ಗಂಗಾನದಿಯಲ್ಲಿರುವ ದೊಡ್ಡದಾದ ಸುಳಿಯಂತೆಯೇ ಕಾಣುತ್ತಿದ್ದಿತು.

ಬಳಿಕ ಭಯಂಕರರೂಪವನ್ನು ಧರಿಸಿದ ಮಾರುತಿಯು ಚೈತ್ಯಪ್ರಾಸಾದದಲ್ಲಿ ಭಗ್ನಾವಶೇಷವಾಗಿ ಉಳಿದಿದ್ದ ಎತ್ತರವಾಗಿದ್ದ, ಸುವರ್ಣಭೂಷಿತವಾಗಿದ್ದ ಮತ್ತು ನೂರಾರು ಪದರಗಳಿಂದ ಕೂಡಿದ್ದ ಕಂಬವನ್ನು ಕಿತ್ತು ವೇಗವಾಗಿ ತಿರುಗಿಸತೊಡಗಿದನು. ಕಂಬ ಮತ್ತು ಗಾಳಿಯ ಘರ್ಷಣೆಯ ಬಿರುಸಿನಿಂದ ಹುಟ್ಟಿದ ಬೆಂಕಿಯಿಂದ ಮೊದಲೇ ಹಾಳಾಗಿಹೋಗಿದ್ದ ಪ್ರಾಸಾದವು ಸಂಪೂರ್ಣವಾಗಿ ಸುಟ್ಟುಹೋಯಿತು. ಹೊತ್ತಿಕೊಂಡು ಉರಿಯುತ್ತಿದ್ದ ಚೈತ್ಯಪ್ರಾಸಾದವನ್ನು ನೋಡಿ ಉತ್ಸಾಹಿತನಾದ ಹನುಮಂತನು–ವಜ್ರಾಯುಧದಿಂದ ಇಂದ್ರನು ರಾಕ್ಷಸರನ್ನು ಸಂಹರಿಸಿದಂತೆ–ಸ್ತಂಭದಿಂದಲೇ ನೂರಾರು ಮಂದಿ ಪ್ರಾಸಾದದ ರಕ್ಷಕರನ್ನು ಕ್ಷಣಮಾತ್ರದಲ್ಲಿ ಸಂಹರಿಸಿದನು. ಮರುಕ್ಷಣದಲ್ಲಿಯೇ ಆಕಾಶಕ್ಕೆ ಹಾರಿ ಅಲ್ಲಿಯೇ ನಿಂತು ರಾಕ್ಷಸರಿಗೆ ಹೇಳಿದನು :

"ಎಲ್ಲರೂ ನನ್ನ ಈ ಮಾತುಗಳನ್ನು ಕೇಳಿರಿ! ಸುಗ್ರೀವನು ತನ್ನ ಆಜ್ಞಾಧಾರಕರಾದ, ಮಹಾತ್ಮರಾದ ಮತ್ತು ಮಹಾಬಲಿಷ್ಠರಾದ ನನ್ನಂತಹ ಸಾವಿರಾರು ಮಂದಿ ಕಪಿಶ್ರೇಷ್ಠರನ್ನು ಸೀತಾದೇವಿಯನ್ನು ಹುಡುಕಲು ಎಲ್ಲ ಕಡೆಗಳಿಗೂ ಕಳುಹಿಸಿಕೊಟ್ಟಿರುವನು. ಹಲ್ಲು ಮತ್ತು ಉಗುರುಗಳನ್ನೇ ಪ್ರಧಾನವಾದ ಆಯುಧಗಳನ್ನಾಗಿ ಹೊಂದಿರುವ ಅವರಲ್ಲಿ ಕೆಲವರು ಹತ್ತು

ಆನೆಗಳ ಬಲವುಳ್ಳವರು. ಕೆಲವರು ನೂರು ಆನೆಗಳ ಬಲಕ್ಕೆ ಸಮಾನವಾದ ಬಲವುಳ್ಳವರು. ಕೆಲವರಿಗೆ ಸಾವಿರ ಆನೆಗಳಿಗೆ ಇರುವ ಬಲವಿದೆ. ಕೆಲವರು ಸಾಮೂಹಿಕವಾಗಿ ತಮ್ಮ ಬಲವನ್ನು ಪ್ರದರ್ಶಿಸುತ್ತಾರೆ. ಕೆಲವರು ವಾಯುವಿನ ಬಲಕ್ಕೆ ಸಮಾನವಾದ ಬಲವುಳ್ಳವರು. ಕೆಲವರ ಬಲವನ್ನು ಅಳೆಯಲು ಸಾಧ್ಯವೇ ಆಗುವುದಿಲ್ಲ. ನೂರು-ಸಾವಿರ-ಲಕ್ಷ-ಕೋಟಿ ಸಂಖ್ಯೆಯುಳ್ಳ ಅವರು ಅದಕ್ಕಾಗಿ ಭೂಮಿಯಲ್ಲಿ ಅಲೆದಾಡುತ್ತಿದ್ದಾರೆ. ಕಪಿಸೈನ್ಯದಿಂದ ಸಮಾವೃತನಾಗಿ ನಮ್ಮ ರಾಜನಾದ ಸುಗ್ರೀವನು ಇಲ್ಲಿಗೆ ಬರುವನು. ಅವನು ನಿಮ್ಮೆಲ್ಲರ ವಿನಾಶಕನಾಗುವನು. ಅನಂತರ ಈ ಲಂಕೆಯೂ ಉಳಿಯುವುದಿಲ್ಲ. ನೀವೂ ಉಳಿಯುವುದಿಲ್ಲ. ಮಹಾತ್ಮನಾದ ಶ್ರೀರಾಮನೊಡನೆ ವೈರವನ್ನು ಕಟ್ಟಿಕೊಂಡಿರುವ ನಿಮ್ಮ ರಾಜನಾದ ರಾವಣನೂ ಉಳಿಯುವುದಿಲ್ಲ.”

ಳ೩ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೪೪ನೆಯ ಸರ್ಗ

## ಪ್ರಹಸ್ತನ ಮಗ ಜಂಬುಮಾಲಿಯ ಸಂಹಾರ

**ಸಂದಿಷ್ಟೋ ರಾಕ್ಷಸೇನ್ದ್ರೇಣ ಪ್ರಹಸ್ತಸ್ಯ ಸುತೋ ಬಲೀ ।**
**ಜಮ್ಬುಮಾಲೀ ಮಹಾದಂಷ್ಟ್ರೋ ನಿರ್ಜಗಾಮ ಧನುರ್ಧರಃ ॥೧॥**

ಹಿಂದೆ ಹೇಳಿದಂತೆ ರಾಕ್ಷಸೇಂದ್ರನಾದ ರಾವಣನಿಂದ ಆಜ್ಞಪ್ತನಾದ, ಬಲಿಷ್ಠನಾದ, ಉದ್ದವಾದ ಕೋರೆದಾಡೆಗಳನ್ನು ಹೊಂದಿದ್ದ, ಪ್ರಹಸ್ತನ ಮಗನಾದ ಜಂಬುಮಾಲಿಯು ಧನುಸ್ಸನ್ನು ಹಿಡಿದು ಹನುಮಂತನನ್ನು ಎದುರಿಸಲು ಹೊರಟನು.

ಆ ರಾಕ್ಷಸನು ಕೆಂಪುಹೂವುಗಳ ಮಾಲೆಯನ್ನು ಧರಿಸಿ ಕೆಂಪುವಸ್ತ್ರ ವನ್ನುಟ್ಟು ಚಿನ್ನದ ಹಾರವನ್ನು ಹಾಕಿಕೊಂಡಿದ್ದನು. ಅವನ ಕಣ್ಣುಗಳು ಅಗಲವಾಗಿದ್ದುವು. ನೋಡಲು ಬಹಳ ಉಗ್ರನಾಗಿ ಕಾಣುತ್ತಿದ್ದನು. ಯುದ್ಧ ದಲ್ಲವನು ಶತ್ರುಗಳಿಂದ ಜಯಿಸಲು ಅಸಾಧ್ಯನಾಗಿದ್ದನು. ವಜ್ರಾಯುಧ ಮತ್ತು ಸಿಡಿಲುಗಳಿಗೆ ಸಮಾನವಾಗಿ ಧ್ವನಿಮಾಡುತ್ತಿದ್ದನು. ಇಂದ್ರನ

ಧನುಸ್ಸಿಗೆ ಅನುರೂಪವಾಗಿದ್ದ, ಅತಿಸುಂದರವಾದ ಬಾಣಗಳಿಂದ ಯುಕ್ತ ವಾಗಿದ್ದ ಧನುಸ್ಸನ್ನು ಟಂಕಾರಮಾಡುತ್ತಾ ಜಂಬುಮಾಲಿಯು ಹನುಮಂತನ ಬಳಿಗೆ ಧಾವಿಸಿದನು. ಅವನ ಧನುಸ್ಸಿನ ಟಂಕಾರಶಬ್ದದಿಂದ ದಿಕ್ಕುಗಳೂ, ಉಪದಿಕ್ಕುಗಳೂ, ಆಕಾಶವೂ ತುಂಬಿಹೋದುವು. ಹೀಗೆ ಧನುಸ್ಸನ್ನು ಟಂಕಾರಮಾಡುತ್ತಾ ಹೇಸರಗತ್ತೆಗಳಿಂದ ಎಳೆಯಲ್ಪಡುತ್ತಿದ್ದ ರಥದಲ್ಲಿ ಕುಳಿತು ತನ್ನೊಡನೆ ಯುದ್ಧಕ್ಕೆ ಬಂದ ಜಂಬುಮಾಲಿಯನ್ನು ನೋಡಿ ಬಲ ಸಂಪನ್ನನಾದ ಹನುಮಂತನು ಸಂತೋಷದಿಂದ ಸಿಂಹನಾದಮಾಡಿದನು. ಮಹಾತೇಜಸ್ವಿಯಾದ ಜಂಬುಮಾಲಿಯು ಚೈತ್ಯಪ್ರಾಸಾದದ ಮಹಾದ್ವಾರದ ಮೇಲ್ಭಾಗದಲ್ಲಿ ಕುಳಿತಿದ್ದ ಮಹಾಕಪಿಯಾದ ಹನುಮಂತನನ್ನು ನಿಶಿತವಾದ ಬಾಣಗಳಿಂದ ಪ್ರಹರಿಸಿದನು. ಅರ್ಧಚಂದ್ರವೆಂಬ ಬಾಣವನ್ನು ಹನುಮಂತನ ಮುಖದಲ್ಲಿಯೂ, ಕರ್ಣೀ ಎಂಬ ಬಾಣವನ್ನು ಕುತ್ತಿಗೆಯಲ್ಲಿಯೂ, ನಾರಾಚಗಳೆಂಬ ಹತ್ತು ಬಾಣಗಳನ್ನು ಕಪೀಶ್ವರನ ಬಾಹುಗಳಲ್ಲಿಯೂ ಪ್ರಹರಿಸಿದನು. ಜಂಬುಮಲಿಯು ಪ್ರಯೋಗಿಸಿದ ಬಾಣಗಳಿಂದ ಯುಕ್ತವಾಗಿದ್ದ ಹನುಮಂತನ ಕೆಂಪಾದ ಮುಖವು ಶರತ್ಕಾಲದ ಸೂರ್ಯರಶ್ಮಿಯಿಂದ ವಿಕಸಿತವಾದ ಕೆಂದಾವರೆಯಂತೆ ಕಾಣುತ್ತಿದ್ದಿತು. ಸ್ವಾಭಾವಿಕವಾಗಿಯೇ ಕೆಂಪಾಗಿದ್ದ ಹನುಮಂತನ ಮುಖವು ಬಾಣಪ್ರಹಾರದಿಂದ ಹೊರಚೆಲ್ಲಿದ ರಕ್ತದಿಂದ ಮತ್ತೂ ಕೆಂಪಾಗಿ ರಕ್ತಚಂದನದ ಬಿಂದುಗಳಿಂದ ನೆನೆಸಲ್ಪಟ್ಟಿರುವ ಮಹಾಕಮಲದಂತೆ ಚೈತ್ಯಪ್ರಾಸಾದದ ಮೇಲ್ಭಾಗದಲ್ಲಿ ಪ್ರಕಾಶಿಸುತ್ತಿದ್ದಿತು.

ರಾಕ್ಷಸನ ಬಾಣಗಳಿಂದ ಪ್ರಹೃತನಾದ ಮಹಾಕಪಿಯು ಬಹಳ ಕೋಪಗೊಂಡು ಪಕ್ಕದಲ್ಲಿಯೇ ಇದ್ದ ಅತಿದೊಡ್ಡದಾದ ಬಂಡೆಯೊಂದನ್ನು ನೋಡಿದನು. ಮರುಕ್ಷಣದಲ್ಲಿಯೇ ಬಲಿಷ್ಠನಾದ ಹನುಮಂತನು ಆ ಬಂಡೆಯನ್ನು ಕಿತ್ತು ಜಂಬುಮಾಲಿಯ ಮೇಲೆ ರಭಸದಿಂದೆಸೆದನು. ಅದರಿಂದ ಕ್ರುದ್ಧನಾದ ರಾಕ್ಷಸನು ಹತ್ತು ಬಾಣಗಳನ್ನು ಪ್ರಯೋಗಿಸಿ ತನಗೆ ಎದುರಾಗಿಬರುತ್ತಿದ್ದ ಬಂಡೆಯನ್ನು ಪುಡಿ-ಪುಡಿಮಾಡಿಬಿಟ್ಟನು. ಪ್ರಚಂಡವಿಕ್ರಮನಾದ ಹನುಮಂತನು ತಾನೆಸೆದ ಬಂಡೆಯು ವ್ಯರ್ಥವಾದುದನ್ನು ಕಂಡು ದೊಡ್ಡದಾದ ಸಾಲವೃಕ್ಷವೊಂದನ್ನು ಬುಡಸಹಿತವಾಗಿ ಕಿತ್ತು ವೇಗವಾಗಿ ತಿರುಗಿಸತೊಡಗಿದನು. ಸಾಲವೃಕ್ಷವನ್ನು ತನ್ನ ಮೇಲೆ ಪ್ರಯೋಗಿಸಲು ತಿರುಗಿಸುತ್ತಿರುವ

ಹನುಮಂತನನ್ನು ನೋಡಿ ಮಹಾಬಲನಾದ ಜಂಬುಮಾಲಿಯು ಅನೇಕ ಬಾಣಗಳನ್ನು ಹನುಮಂತನ ಮೇಲೆ ಪ್ರಯೋಗಿಸಿದನು. ನಾಲ್ಕು ಬಾಣಗಳಿಂದ ಸಾಲವೃಕ್ಷವನ್ನು ತುಂಡರಿಸಿ, ಪುನಃ ಒಂದು ಬಾಣವನ್ನು ತಲೆಗೆ ಸರಿಯಾಗಿ ಗುರಿಯಿಟ್ಟು ಹೊಡೆದು ಪುನಃ ಹತ್ತು ಬಾಣಗಳನ್ನು ಹನುಮಂತನ ಹೃದಯಕ್ಕೆ ಪ್ರಯೋಗಿಸಿದನು. ಹನುಮಂತನ ಶರೀರವೆಲ್ಲವೂ ಜಂಬು ಮಾಲಿಯ ಬಾಣಗಳಿಂದ ತುಂಬಿಹೋಯಿತು. ಅದರಿಂದ ಕ್ರುದ್ಧನಾದ ವಾಯುಪುತ್ರನು ಹಿಂದೆ ಕಿಂಕರರೆಂಬ ರಾಕ್ಷಸರನ್ನು ಸಂಹರಿಸಲು ಉಪಯೋಗಿಸಿದ್ದ ಕಬ್ಬಿಣದ ಲಾಳಮುಂಡಿಗೆಯನ್ನೇ ಪುನಃ ಎತ್ತಿಕೊಂಡು ರಭಸದಿಂದ ತಿರುಗಿಸತೊಡಗಿದನು. ಬಲೋದ್ಧತನಾದ ಮತ್ತು ವೇಗಶಾಲಿಯಾದ ಹನುಮಂತನು ಅಗಳಿಯನ್ನು ರಭಸದಿಂದ ತಿರುಗಿಸುತ್ತಾ ವಿಶಾಲವಾಗಿದ್ದ ಜಂಬುಮಾಲಿಯ ಎದೆಯಲ್ಲಿ ಪ್ರಹರಿಸಿದನು. ಮರುಕ್ಷಣದಲ್ಲಿಯೇ ಎದುರಿಗಿದ್ದ ರಾಕ್ಷಸನ ತಲೆಯೂ ಕಾಣಲಿಲ್ಲ ; ತೋಳುಗಳೂ ಕಾಣಲಿಲ್ಲ ; ಮಂಡಿ-ತೊಡೆ-ಮೊಣಕಾಲುಗಳೂ ಕಾಣಲಿಲ್ಲ ; ಧನುರ್ಬಾಣಗಳಾಗಲೀ ರಥ ಮತ್ತು ಕುದುರೆಗಳಾಗಲೀ ಕಾಣಲಿಲ್ಲ. ಅಗಳಿಯಿಂದ ಬಹಳ ವೇಗವಾಗಿ ಪ್ರಹರಿಸಲ್ಪಟ್ಟ ಮಹಾರಥನಾದ ಜಂಬುಮಾಲಿಯ ಅಂಗಾಂಗಗಳೆಲ್ಲವೂ ಪುಡಿ-ಪುಡಿಯಾದುವು. ಅವನು ಬುಡಸಹಿತವಾಗಿ ಬಿದ್ದ ವೃಕ್ಷದೋಪಾದಿ ಯಲ್ಲಿ ರಥಾಶ್ವ-ಧನುರ್ಬಾಣಗಳ ಸಮೇತನಾಗಿ ಕೆಳಗುರುಳಿದನು.

ಮಹಾಬಲರಾದ ಕಿಂಕರರೂ ಮಹಾಬಲಿಷ್ಠನಾಗಿದ್ದ ಜಂಬು ಮಾಲಿಯೂ ಹತರಾದರೆಂಬುದನ್ನು ಕೇಳಿ ರಾವಣನು ಬಹಳವಾಗಿ ಕೋಪ ಗೊಂಡನು. ಅವನ ಕಣ್ಣುಗಳು ಕ್ರೋಧದಿಂದ ಕೆಂಡದಂತಾಗಿ ತಿರುಗ ತೊಡಗಿದುವು. ಅನಂತರ ಅವನು ಮಹಾವೀರ್ಯರಾದ ಮತ್ತು ಅತುಲ ಪರಾಕ್ರಮಿಗಳಾದ ಅಮಾತ್ಯಪುತ್ರರನ್ನು ಹನುಮಂತನೊಡನೆ ಯುದ್ಧ ಮಾಡಲು ಕಳುಹಿಸಿದನು.

ನಲವತ್ತನಾಲ್ಕನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೪೫ನೆಯ ಸರ್ಗ

## ಅಮಾತ್ಯಪುತ್ರರ ಸಂಹಾರ

**ತತಸ್ತೇ ರಾಕ್ಷಸೇನ್ದ್ರೇಣ ಚೋದಿತಾ ಮನ್ತ್ರಿಣಃ ಸುತಾಃ ।**
**ನಿರ್ಯಯುರ್ಭವನಾತ್ತಸ್ಮಾತ್ಸಪ್ತ ಸಪ್ತಾರ್ಚಿವರ್ಚಸಃ ॥೧॥**

ರಾವಣೇಶ್ವರನಿಂದ ಪ್ರೇರಿತರಾದ, ಏಳು ಜ್ವಾಲೆಗಳ ಯಜ್ಞೇಶ್ವರನಂತೆ ಮಹಾತೇಜಸ್ವಿಗಳಾದ ಏಳು ಮಂದಿ ಮಂತ್ರಿಯ ಮಕ್ಕಳು ರಾವಣನ ಅರಮನೆಯಿಂದ ಹೊರಟರು.

ಮಹಾಬಲಿಷ್ಠರೂ ಧನುರ್ಧಾರಿಗಳೂ ಆಗಿದ್ದ ಅಮಾತ್ಯಪುತ್ರರು ದೊಡ್ಡ ಸೈನ್ಯದಿಂದ ಪರಿವೃತರಾಗಿದ್ದರು. ಮಹಾಸ್ತ್ರಗಳನ್ನು ತಿಳಿದವರಲ್ಲಿ ಶ್ರೇಷ್ಠ ರಾಗಿದ್ದರು. ಹನುಮಂತನನ್ನು ಜಯಿಸಬೇಕೆಂಬುದರಲ್ಲಿ ಪರಸ್ಪರವಾಗಿ ಸ್ಪರ್ಧಿಸುತ್ತಿದ್ದರು. ಮಹಾರಥಗಳಲ್ಲಿ ಕುಳಿತು ಆಂಜನೇಯನೊಡನೆ ಯುದ್ಧಮಾಡಲು ತೆರಳಿದರು. ಅವರ ಆ ರಥಗಳು ಸುವರ್ಣಮಯವಾದ ಜಾಲರಿಗಳಿಂದ ಸಮಾವೃತವಾಗಿದ್ದುವು. ಧ್ವಜ-ಪತಾಕೆಗಳನ್ನೊಳಗೊಂಡಿ ದ್ದುವು. ಮೇಘದೋಪಾದಿಯಲ್ಲಿ ಧ್ವನಿಮಾಡುತ್ತಿದ್ದುವು. ಶ್ರೇಷ್ಠವಾದ ಕುದುರೆಗಳಿಂದ ಕೂಡಿದ್ದುವು. ಮಿಂಚುಗಳನ್ನೊಳಗೊಂಡ ಮೇಘಗಳು ಗರ್ಜನೆಮಾಡುವಂತೆ ಗರ್ಜಿಸುತ್ತಿದ್ದ, ಪರಮಸಂತುಷ್ಟರಾಗಿದ್ದ, ಮಹಾ ಪರಾಕ್ರಮಿಗಳಾಗಿದ್ದ, ಮಂತ್ರಿಕುಮಾರರು ಪುಟಕ್ಕೆ ಹಾಕಿದ ಚಿನ್ನದಂತೆ ಪ್ರಕಾಶ ಮಾನವಾಗಿದ್ದ ಮತ್ತು ವಿಚಿತ್ರತರವಾಗಿದ್ದ ಧನುಸ್ಸುಗಳನ್ನು ಟಂಕಾರ ಮಾಡುತ್ತಾ ಯುದ್ಧಕ್ಕೆ ತೆರಳಿದರು.

ಇತ್ತಲಾಗಿ ಕಿಂಕರರಾಕ್ಷಸರ ತಾಯಂದಿರು–ತಮ್ಮ ಮಕ್ಕಳೆಲ್ಲರೂ ಕಪಿ ಯೊಂದರಿಂದ ಹತರಾದರೆಂಬ ವಾರ್ತೆಯನ್ನು ಕೇಳಿ ಸಂಭ್ರಾಂತರಾಗಿ ಬಂಧು ಮಿತ್ರರೊಡನೆ ಶೋಕಿಸತೊಡಗಿದರು.

ರಾವಣಪ್ರೇಷಿತರಾಗಿ, ಪುಟಕ್ಕೆ ಹಾಕಿದ ಚಿನ್ನದಿಂದ ಮಾಡಲ್ಪಟ್ಟಿದ್ದ ಆಭರಣಗಳನ್ನು ಧರಿಸಿದ್ದ ಮಂತ್ರಿಕುಮಾರರು–'ನಾಮುಂದು-ತಾಮುಂದು'– ಎಂದು ಪರಸ್ಪರವಾಗಿ ಸಂಘರ್ಷಿಸುತ್ತಾ ಮಹಾದ್ವಾರದ ಮೇಲೆ ಕುಳಿತಿದ್ದ ಹನುಮಂತನಿಗೆ ಮುತ್ತಿಗೆ ಹಾಕಿದರು.

ರಥಚಕ್ರಗಳ ಗಡ-ಗಡಾರೂಪದಲ್ಲಿ ಗರ್ಜನೆಮಾಡುತ್ತಿದ್ದ ರಾಕ್ಷಸ ರೂಪದ ಮೇಘಗಳು ವರ್ಷಾಕಾಲದಲ್ಲಿನ ಮೇಘಗಳಂತೆ ಬಾಣಗಳ ರೂಪವಾದ ವೃಷ್ಟಿಯನ್ನು ಸುರಿಸುತ್ತಾ ಸಂಚರಿಸುತ್ತಿದ್ದುವು. ಹನುಮಂತನು ಬಾಣರೂಪವಾದ ಆ ಮಳೆಯಿಂದ ಸಮಾವೃತನಾಗಿ ಮಳೆಯಿಂದ ಮುಚ್ಚಿಹೋದ ಪರ್ವತರಾಜನಂತೆಯೇ ಪ್ರಕಾಶಿಸಿದನು. ಕಪೀಶ್ವರನಾದ ಹನುಮಂತನು ಆಕಾಶದಲ್ಲಿ ಸಂಚರಿಸುತ್ತಾ ರಾಕ್ಷಸವೀರರ ರಥಗಳ ವೇಗವನ್ನೂ ಮತ್ತು ಬಾಣಗಳನ್ನೂ ವ್ಯರ್ಥಗೊಳಿಸಿದನು. ಕಾಮನ ಬಿಲ್ಲಿ ನಿಂದ ಕೂಡಿರುವ ಮೇಘಗಳೊಡನೆ ವಾಯುದೇವನು ಕ್ರೀಡಿಸುವಂತೆ ಹನುಮಂತನು ಧನುಷ್ಮಂತರಾದ ಮಂತ್ರಿಕುಮಾರರೊಡನೆ ಆಟವಾಡುತ್ತಾ ಆಕಾಶದಲ್ಲಿ ಸಂಚರಿಸುತ್ತಿದ್ದನು. ಬಳಿಕ ವೀರ್ಯವಂತನಾದ ಮಾರುತಿಯು ಘೋರವಾದ ಗರ್ಜನೆಯನ್ನು ಮಾಡಿ ರಾಕ್ಷಸರ ಮಹಾಸೈನ್ಯವನ್ನು ಭಯ ಗೊಳಿಸುತ್ತಾ ಅವರ ಮೇಲೆ ಹೆಚ್ಚು ಬಲಪ್ರಯೋಗಮಾಡಲು ಪ್ರಾರಂಭಿಸಿದನು. ಕೆಲವರನ್ನು ಅಂಗಾಲುಗಳಿಂದಲೂ, ಅಂಗೈಗಳಿಂದಲೂ ಬಡಿದು ಪ್ರಹರಿಸಿದನು. ಕೆಲವರನ್ನು ಪಾದಗಳಿಂದಲೇ ಒದೆದು ಸಂಹರಿಸಿದನು. ಕೆಲವರನ್ನು ಮುಷ್ಟಿಯಿಂದ ಪ್ರಹರಿಸಿ ಸಂಹರಿಸಿದನು. ಕೆಲವರನ್ನು ಉಗುರು ಗಳಿಂದಲೇ ಸೀಳಿಹಾಕಿದನು. ಕೆಲವರನ್ನು ಎದೆಯಿಂದಲೂ, ಕೆಲವರನ್ನು ತೊಡೆಗಳಿಂದಲೂ ಸಂಹರಿಸಿದನು. ಕೆಲವು ರಾಕ್ಷಸರು ಅವನ ವೀರಗರ್ಜನೆ ಯನ್ನು ಕೇಳಿಯೇ ಅಸುನೀಗಿದರು. ಹೀಗೆ ಬಹುಮಂದಿ ಅಸುನೀಗಿ ಭೂಮಿ ಯಲ್ಲಿ ಬೀಳಲಾಗಿ ಅಳಿದುಳಿದ ರಾಕ್ಷಸಸೈನಿಕರು ಭಯಗೊಂಡು ಪ್ರಾಣವುಳಿಸಿ ಕೊಳ್ಳುವ ಸಲುವಾಗಿ ದಿಕ್ಕಾಪಾಲಾಗಿ ಓಡಿಹೋದರು. ಆನೆಗಳು ಅಪಸ್ವರ ದಲ್ಲಿ ಘೀಳಿಡುತ್ತಿದ್ದುವು. ಕುದುರೆಗಳು ಭೂಮಿಯ ಮೇಲೆ ಬಿದ್ದು ಹೊರಳಾಡುತ್ತಿದ್ದುವು. ಭಗ್ನವಾಗಿ ಹೋದ ಆಸನ-ಧ್ವಜ-ಛತ್ರಗಳಿಂದ ಕೂಡಿದ್ದ ರಥಗಳಿಂದ ಯುದ್ಧಭೂಮಿಯು ತುಂಬಿಹೋಯಿತು.

ಒಸರುತ್ತಿದ್ದ ರಕ್ತವು ಕೋಡಿಯಾಗಿ ಹರಿಯತೊಡಗಿತು. ಪರಿ-ಪರಿ ಯಾದ ಆರ್ತನಾದಗಳಿಂದ ಕೂಡಿದ್ದ ಲಂಕಾಪಟ್ಟಣವು ಆ ಸಮಯದಲ್ಲಿ ವಿಕಾರವಾಗಿ ಕೂಗಿಕೊಳ್ಳುತ್ತಿರುವಂತೆ ಭಾಸವಾಗುತ್ತಿದ್ದಿತು.

ಮಹಾಬಲನಾದ ಚಂಡವಿಕ್ರಮನಾದ ಕಪೀಶ್ವರನು ಎಲ್ಲ ರಾಕ್ಷಸರನ್ನೂ

ಸಂಹರಿಸಿ ಇತರ ರಾಕ್ಷಸರೊಡನೆಯೂ ಯುದ್ಧಮಾಡಬೇಕೆನ್ನುವ ಅಪೇಕ್ಷೆಯಿಂದ ಪುನಃ ಹೊರಬಾಗಿಲಿನ ಕಡೆಗೇ ಧಾವಿಸಿದನು.

ಳಿಜನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೪೬ನೆಯ ಸರ್ಗ

## ರಾವಣನ ಐವರು ಸೇನಾಪತಿಗಳ ಸಂಹಾರ

**ಹತಾನ್ಮನ್ತ್ರಿಸುತಾನ್ಬುದ್ಧ್ವಾ ವಾನರೇಣ ಮಹಾತ್ಮನಾ ।**
**ರಾವಣಃ ಸಂವೃತಾಕಾರಶ್ಚಕಾರ ಮತಿಮುತ್ತಮಾಮ್ ॥೧॥**

ಮಹಾತ್ಮನಾದ ವಾನರನು ಸೈನ್ಯಸಮೇತರಾದ ಅಮಾತ್ಯಪುತ್ರರನ್ನೂ ಸಂಹರಿಸಿದನೆಂಬ ವಾರ್ತೆಯನ್ನು ಕೇಳಿ ರಾವಣನ ಮನಸ್ಸಿನಲ್ಲಿ ಭಯವುಂಟಾಯಿತು. ಆದರೆ ಅದನ್ನು ಬಹಿರಂಗಪಡಿಸದೇ ಉತ್ತಮವಾದ ಬುದ್ಧಿಯನ್ನು ಆಶ್ರಯಿಸಿ ಮುಂದೆ ಮಾಡಬೇಕಾದ ಕರ್ತವ್ಯದ ಬಗೆಗೆ ನಿಶ್ಚಯಿಸಿದನು.

ಯುದ್ಧದಲ್ಲಿ ವಾಯುವೇಗಕ್ಕೆ ಸಮಾನವಾದ ವೇಗವುಳ್ಳ, ನೀತಿವಿಶಾರದರಾದ, ವೀರರಾದ, ಹನುಮಂತನನ್ನು ಸೆರೆಹಿಡಿಯುವುದರಲ್ಲಿ ಹೆಚ್ಚು ಆಸಕ್ತರಾಗಿದ್ದ ವಿರೂಪಾಕ್ಷ, ಯೂಪಾಕ್ಷ, ದುರ್ಧರ, ಪ್ರಘಸ ಮತ್ತು ಭಾಸಕರ್ಣರೆಂಬ ಐವರು ಸೇನಾನಾಯಕರಿಗೆ ಹನುಮಂತನೊಡನೆ ಯುದ್ಧಕ್ಕೆ ಹೋಗಲು ಆದೇಶವನ್ನೀಯುತ್ತಾ ಹೇಳಿದನು :

“ಸೇನಾಪತಿಗಳೇ! ಗಜಾಶ್ವ-ರಥ-ಪದಾತಿಗಳಿಂದ ಕೂಡಿರುವ ಮಹಾಸೈನ್ಯದೊಡನೆ ಪ್ರಯಾಣಮಾಡಿ ಆ ಕಪಿಯನ್ನು ಈಗಲೇ ನಿಗ್ರಹಿಸಿರಿ. ಅರಣ್ಯವಾಸಿಯಾದ ಕಪಿಯನ್ನು ಪ್ರಯತ್ನಪೂರ್ವಕವಾಗಿ ಎದುರಿಸಿ ಮಾಡಬೇಕಾಗಿರುವ ಕಾರ್ಯವನ್ನು ಅಗತ್ಯವಾಗಿ ಮಾಡಲೇಬೇಕು. ದೇಶ-ಕಾಲಗಳಿಗೆ ವಿರೋಧವಿಲ್ಲದಂತೆ ಕಾರ್ಯವನ್ನು ಸಾಧಿಸಬೇಕು. ಆ ಕಪಿಯು ಮಾಡಿರುವ ಊಹಿಸಲೂ ಅಸದಳವಾದ ಕಾರ್ಯದಿಂದ ನಾನು ಅದನ್ನು ಸಾಮಾನ್ಯಕಪಿಯೆಂದು ಭಾವಿಸುವುದಿಲ್ಲ. ಸರ್ವಥಾ ಅದೊಂದು ಹೆಚ್ಚು ಬಲಿಷ್ಠವಾದ ಮಹಾಭೂತವೇ ಆಗಿರಬೇಕು. ಅದು ಕಪಿಯೆಂದು ತಿಳಿದ ಮೇಲಂತೂ ನನ್ನ ಮನಸ್ಸು ಹೆಚ್ಚು ಕಳವಳಗೊಂಡಿದೆ. ನನಗೆ ತಿಳಿದುಬಂದಿರುವ ವಿವರಣೆಯಂತೆ ಅದು ಸಾಮಾನ್ಯವಾದ ಕಪಿಯಿರಲಾರದು. ಇಂದ್ರನೇನಾದರೂ ತನ್ನ

ತಪೋಬಲದಿಂದ ಇಂತಹ ಮಹಾಪ್ರಾಣಿಯೊಂದನ್ನು ಸೃಷ್ಟಿಸಿ ನನ್ನ ವಿನಾಶಕ್ಕಾಗಿ ಕಳುಹಿಸಿರಬಹುದು. ಹಿಂದೆ ನಾನು ನಿಮ್ಮೆಲ್ಲರ ಜೊತೆಯಲ್ಲಿ ದೇವತೆಗಳೊಡನೆ ಯುದ್ಧಕ್ಕೆ ಹೋಗಿ ಗಂಧರ್ವ-ಯಕ್ಷ-ದೇವಾಸುರ-ಮಹರ್ಷಿಗಳನ್ನು ಪರಾಜಯಗೊಳಿಸಿದೆನು. ಈಗ ಅವರೆಲ್ಲರೂ ಸೇರಿ ನಮಗೆ ಸ್ವಲ್ಪವಾದರೂ ಅಪ್ರಿಯವಾಗುವಂತಹ ಕಾರ್ಯವನ್ನು ಅವಶ್ಯವಾಗಿ ಮಾಡಿರಲೇಬೇಕು. ಅವರು ಹಾಗೆಯೇ ಮಾಡಿದ್ದಾರೆ. ನನ್ನನ್ನು ಅವಮಾನಗೊಳಿಸಲೆಂದು ಅವರೇ ಈ ಕಪಿಯನ್ನು ಕಳುಹಿಸಿದ್ದಾರೆ. ಈ ವಿಷಯದಲ್ಲಿ ನನಗೆ ಸಂಶಯವೇ ಇಲ್ಲ. ಆದುದರಿಂದ ನೀವೆಲ್ಲರೂ ಈಗಲೇ ಹೋಗಿ ಆ ಕಪಿಯನ್ನು ಬಲಪ್ರಯೋಗದಿಂದ ಬಂಧಿಸಿರಿ.

ಧೀರಪರಾಕ್ರಮಿಯಾದ ಆ ವಾನರನನ್ನು ನೀವು ಅವಮಾನಿಸಬಾರದು. ಹಿಂದೆ ನಾನು ಅತುಲಪರಾಕ್ರಮಿಗಳಾದ ಅನೇಕವಾನರರನ್ನು ನೋಡಿದ್ದೇನೆ. ಸುಗ್ರೀವಸಹಿತನಾದ ವಾಲೀ, ಮಹಾಬಲನಾದ ಜಾಂಬವಂತ, ಸೇನಾಪತಿಯಾದ ನೀಲ, ದ್ವಿವಿದ–ಇವರೇ ಮೊದಲಾದ ಹಲವಾರು ಕಪಿಶ್ರೇಷ್ಠರನ್ನು ನೋಡಿದ್ದೇನೆ. ಆದರೆ ಅವರ ಗಮನವು ಇಷ್ಟು ಭಯಂಕರವಾಗಿರಲಿಲ್ಲ. ಅವರ ತೇಜಸ್ಸಾಗಲೀ ಪರಾಕ್ರಮವಾಗಲೀ ಈ ಕಪಿಯ ತೇಜಸ್ಸು-ಪರಾಕ್ರಮಗಳಿಗೆ ಸಮಾನವಾಗಿರಲಿಲ್ಲ. ಇದಕ್ಕಿರುವ ಬುದ್ಧಿಯಾಗಲೀ, ಬಲವಾಗಲೀ, ಉತ್ಸಾಹವಾಗಲೀ ಅವರಲ್ಲಿರಲಿಲ್ಲ. ಈ ಕಪಿಯಂತೆ ಬೇಕು-ಬೇಕಾದ ರೂಪಗಳನ್ನು ಧರಿಸುವ ಸಾಮರ್ಥ್ಯವೂ ಅವರಿಗಿರಲಿಲ್ಲ. ಆದುದರಿಂದ ಕಪಿಯ ರೂಪವನ್ನು ಧರಿಸಿ ಬಂದಿರುವ ಮಹಾಭೂತವೆಂದೇ ನಾವಿದನ್ನು ತಿಳಿಯಬೇಕಾಗಿದೆ. ಮಹಾಪ್ರಯತ್ನದಿಂದಾದರೂ ನೀವು ಈ ಕಪಿಯನ್ನು ನಿಗ್ರಹಿಸಿರಿ. ಇಂದ್ರಸಹಿತರಾದ ಸುರಾಸುರ-ಮಾನವರಾಗಲೀ ಮೂರು ಲೋಕಗಳೇ ಆಗಲೀ ಯುದ್ಧದಲ್ಲಿ ನಿಮಗೆದುರಾಗಿ ನಿಲ್ಲಲು ಸಮರ್ಥರಲ್ಲ. ಹಾಗಿದ್ದರೂ ಯುದ್ಧನೀತಿಯನ್ನು ತಿಳಿದವನು ಮತ್ತು ವಿಜಯಾಕಾಂಕ್ಷಿಯು ಪ್ರಯತ್ನಪೂರ್ವಕವಾಗಿ ತನ್ನನ್ನು ಕಾಪಾಡಿಕೊಳ್ಳಬೇಕು. **ಯುದ್ಧಸಿದ್ಧಿರ್ಹಿ ಚಂಚಲಾ**–ಯುದ್ಧದಲ್ಲಿ ಜಯವು ಅನಿಶ್ಚಿತವಲ್ಲವೇ!"

ರಾವಣೇಶ್ವರನು ಹೀಗೆ ಹೇಳುತ್ತಲೇ ಯಜ್ಞೇಶ್ವರನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಆ ಸೇನಾನಾಯಕರೆಲ್ಲರೂ ಒಡೆಯನ ಆಜ್ಞೆ

ಯನ್ನು ಶಿರಸಾಧರಿಸಿ ಮದಿಸಿದ ಆನೆಗಳ ಮೇಲೂ ಮಹಾವೇಗಯುಕ್ತವಾದ ಕುದುರೆಗಳ ಮೇಲೂ ಕುಳಿತು ನಿಶಿತವಾದ ಮತ್ತು ತೀಕ್ಷ್ಣವಾದ ಆಯುಧ ಗಳನ್ನು ಧರಿಸಿ ಸಕಲಯುದ್ಧಸಾಮಗ್ರಿಗಳಿಂದಲೂ ಸಂಪನ್ನವಾಗಿದ್ದ ಸೈನ್ಯ ದೊಡನೆ ಹನುಮಂತನಿದ್ದೆಡೆಗೆ ಧಾವಿಸಿದರು. ಹೊರಬಾಗಿಲಿನಲ್ಲಿ ನಿಂತಿದ್ದ, ಉದಯಿಸುತ್ತಿರುವ ಸೂರ್ಯನಂತೆಯೇ ಕಾಣುತ್ತಿದ್ದ, ತನ್ನ ತೇಜೋವಿಶೇಷ ದಿಂದ ಸೂರ್ಯರೂಪನೇ ಆಗಿದ್ದ, ಮಹಾವೇಗಶಾಲಿಯಾದ, ಮಹಾಸತ್ತ್ವ ನಾದ, ಮಹಾಬಲನಾದ, ಮಹಾಮತಿಯಾದ, ಮಹೋತ್ಸಾಹಿಯಾದ, ಮಹಾಕಾಯನಾದ, ಮಹಾಭುಜನಾದ, ದೇದೀಪ್ಯಮಾನನಾಗಿ ಬೆಳಗುತ್ತಿದ್ದ ವಾನರೇಶ್ವರನನ್ನು ನೋಡಿದರು. ಎಲ್ಲ ದಿಕ್ಕುಗಳಿಂದಲೂ ಸುತ್ತುವರಿದು ನಿಂತಿದ್ದ ಆ ರಾಕ್ಷಸನಾಯಕರು ಹನುಮಂತನನ್ನು ಕಂಡೊಡನೆಯೇ ಭಯಂಕರವಾದ ಆಯುಧಗಳಿಂದ ತಾವು ನಿಂತಿದ್ದ ಸ್ಥಳದಿಂದಲೇ ಪ್ರಹರಿಸಿದರು.

ದುರ್ಧರನೆಂಬ ರಾಕ್ಷಸನಾಯಕನು ಹರಿತವಾಗಿದ್ದ, ಹೊಂಬಣ್ಣದ ರೆಕ್ಕೆಗಳಿಂದ ಕೂಡಿದ್ದ, ಲೋಹಮಯವಾದ, ಕನ್ನೈದಿಲೆಯ ದಳಗಳಂತಿದ್ದ ಐದು ಬಾಣಗಳನ್ನು ಹನುಮಂತನ ಶಿರಸ್ಸಿನಲ್ಲಿ ಪ್ರಹರಿಸಿದನು. ಹಾಗೆ ಪ್ರಹರಿಸಲ್ಪಟ್ಟ ವಾನರನು ಗಟ್ಟಿಯಾಗಿ ಸಿಂಹನಾದ ಮಾಡುತ್ತ ಹತ್ತು ದಿಕ್ಕು ಗಳನ್ನೂ ಗರ್ಜನೆಯಿಂದ ಪ್ರತಿಧ್ವನಿಗೊಳಿಸುತ್ತಾ ಆಕಾಶಕ್ಕೆ ಹಾರಿದನು. ರಥದಲ್ಲಿ ಕುಳಿತಿದ್ದ ಮಹಾಬಲನಾದ ದುರ್ಧರನು ಧನುಸ್ಸನ್ನು ಸಜ್ಜುಗೊಳಿಸಿ ಪುನಃ ನೂರಾರು ಬಾಣಗಳನ್ನು ಹನುಮಂತನ ಮೇಲೆ ಪ್ರಯೋಗಿಸುತ್ತಾ ಆಕ್ರಮಿಸಿದನು. ವರ್ಷಾಕಾಲದ ಕಡೆಯಲ್ಲಿ ಮಳೆಗರೆಯುವ ಮೇಘಗಳನ್ನು ವಾಯುವು ಚೆದುರಿಸುವಂತೆ–ತನ್ನ ಮೇಲೆ ಬೀಳುತ್ತಿದ್ದ ಶರವರ್ಷವನ್ನು ಮಾರುತಿಯು ನಿವಾರಿಸಿಕೊಳ್ಳುತ್ತಿದ್ದನು.

ಎದುರಿಸಲು ಅಶಕ್ಯವಾದ ದುರ್ಧರನ ಶರವರ್ಷದಿಂದ ಮರ್ದಿಸ ಲ್ಪಡುತ್ತಿದ್ದ ವೀರ್ಯವಂತನಾದ ವಾಯುಪುತ್ರನು ಪುನಃ ಗಟ್ಟಿಯಾಗಿ ಗರ್ಜಿ ಸುತ್ತಾ ಮತ್ತಷ್ಟು ಎತ್ತರವಾಗಿ ಬೆಳೆದನು. ಬಳಿಕ ಬಹಳ ಎತ್ತರಕ್ಕೆ ಹಾರಿ ಮಿಂಚುಗಳ ರಾಶಿಯು ಪರ್ವತದ ಮೇಲೆ ಬೀಳುವಂತೆ ದುರ್ಧರ ರಾಕ್ಷಸನ ರಥದ ಮೇಲೆ ಬಿದ್ದನು. ಮರುಕ್ಷಣದಲ್ಲಿಯೇ ಆ ರಥಕ್ಕೆ ಕಟ್ಟಿದ್ದ ಎಂಟು ಕುದುರೆಗಳೂ ಧ್ವಂಸವಾದುವು. ಅಚ್ಚುಮರ-ಮೂಕಿ ಮರಗಳೂ ಮುರಿದು

ಹೋಗಿ ರಥವೂ ನಾಶವಾಯಿತು. ದುರ್ಧರನು ಅಸುನೀಗಿ ಭಗ್ನವಾದ ರಥದಿಂದ ಕೆಳಕ್ಕೆ ಬಿದ್ದನು. ಅದನ್ನು ನೋಡಿ ಶತ್ರುಹಂತಕರಾದ ಎದುರಿಸಲು ಅಸಾಧ್ಯರಾದ ವಿರೂಪಾಕ್ಷ-ಯೂಪಾಕ್ಷರು ಕೋಪಗೊಂಡು ಮೇಲಕ್ಕೆ ಹಾರಿ ನಿರ್ಮಲವಾದ ಆಕಾಶದಲ್ಲಿ ನಿಂತಿದ್ದ ಮಹಾಬಾಹುವಾದ ಹನುಮಂತನ ವಕ್ಷಃಸ್ಥಳವನ್ನು ಮುದ್ಗರಾಯುಧಗಳಿಂದ ಪ್ರಹರಿಸಿದರು. ಮಹಾಬಲಶಾಲಿಗಳಾದ ಅವರಿಬ್ಬರ ಪ್ರಹಾರಗಳನ್ನು ಮಹಾಬಲನಾದ ಹನುಮಂತನು ನಿಷ್ಫಲಗೊಳಿಸುತ್ತಾ ಗರುಡನಂತೆಯೇ ವೇಗವಾಗಿ ಭೂಮಿಗೆ ಧುಮುಕಿದನು. ಬಳಿಕ ಅವನು ಸಾಲವೃಕ್ಷಗಳ ಸಮೀಪಕ್ಕೆ ಹೋಗಿ ಒಂದು ವೃಕ್ಷವನ್ನು ಬೇರುಸಹಿತವಾಗಿ ಕಿತ್ತು ಅದರಿಂದಲೇ ಆ ಇಬ್ಬರು ರಾಕ್ಷಸಸೇನಾಪತಿಗಳನ್ನೂ ಸಂಹರಿಸಿದನು. ವೇಗವಂತನಾದ ಹನುಮಂತನು ದುರ್ಧರನೇ ಮೊದಲಾದ ಮೂವರು ರಾಕ್ಷಸರನ್ನೂ ಸಂಹರಿಸಿದನೆಂಬುದನ್ನು ತಿಳಿದು ಬಲಿಷ್ಠನಾದ ಮಹಾವೇಗವಂತನಾದ ಪ್ರಘಸನು ಅಟ್ಟಹಾಸದಿಂದ ನಗುತ್ತಾ ಹನುಮಂತನ ಬಳಿಗೆ ಹೋದನು. ಮತ್ತೊಂದು ಕಡೆಯಿಂದ ವೀರ್ಯವಂತನಾದ ಭಾಸಕರ್ಣನೂ ಪರಮಕ್ರುದ್ಧನಾಗಿ ಕಪಿಶಾರ್ದೂಲನಾದ ಹನುಮಂತನ ಬಳಿಗೆ ಹೋದನು. ಹೀಗೆ ಯಶಸ್ವಿಗಳಾದ ಪ್ರಘಸ-ಭಾಸಕರ್ಣರಿಬ್ಬರೂ ಮಾರುತಿಯನ್ನು ಆಕ್ರಮಿಸಿದರು. ಹರಿತವಾದ ಅಗ್ರಭಾಗದಿಂದ ಕೂಡಿದ್ದ ಪಟ್ಟಿಶವೆಂಬ ಆಯುಧದಿಂದ ಪ್ರಘಸನು ಹನುಮಂತನನ್ನು ಪ್ರಹರಿಸಿದನು. ಮತ್ತೊಂದು ಕಡೆಯಿಂದ ಭಾಸಕರ್ಣನೂ ಶೂಲದಿಂದ ತಿವಿದನು. ಹೀಗೆ ಆ ಇಬ್ಬರು ರಾಕ್ಷಸರ ಪ್ರಹಾರಗಳಿಂದ ಗಾಯಗೊಂಡ ಹನುಮಂತನ ಅಂಗಾಂಗಗಳಿಂದಲೂ ರಕ್ತವು ಹೊರಚಿಮ್ಮಿ ಮೈಮೇಲಿದ್ದ ಕೂದಲುಗಳು ತೋಯ್ದು ಹೋದುವು. ಅದರಿಂದಾಗಿ ಬಾಲಸೂರ್ಯನ ಪ್ರಭೆಗೆ ಸಮಾನವಾದ ಪ್ರಭೆಯಿಂದ ಪ್ರಕಾಶಿಸುತ್ತಿದ್ದ ಹನುಮಂತನು ಪರಮಕ್ರುದ್ಧನಾಗಿ ಮೃಗಗಳಿಂದಲೂ, ವಿಷಜಂತುಗಳಿಂದಲೂ ಮತ್ತು ವೃಕ್ಷಗಳಿಂದಲೂ ನಿಬಿಡವಾಗಿದ್ದ ಪರ್ವತದ ಶಿಖರವನ್ನೇ ಕಿತ್ತು ಆ ಇಬ್ಬರು ರಾಕ್ಷಸರನ್ನೂ ಪ್ರಹರಿಸಿದನು. ಪರ್ವತಶಿಖರದಿಂದ ಅರೆಯಲ್ಪಟ್ಟ ಆ ಇಬ್ಬರು ರಾಕ್ಷಸರೂ ಎಳ್ಳಿನ ಹಿಂಡಿಯಂತಾದರು. ಹೀಗೆ ಹನುಮಂತನು ಐವರು ರಾಕ್ಷಸಸೇನಾಪತಿಗಳನ್ನೂ ಸಂಹರಿಸಿದನಂತರ ಕಡೆಯಲ್ಲಿ ಅಳಿದುಳಿದಿದ್ದ ಎಲ್ಲ ರಾಕ್ಷಸರನ್ನೂ

ಸಂಹರಿಸಿದನು. ಕುದುರೆಗಳನ್ನೇ ಎತ್ತಿಕೊಂಡು ಪ್ರಹರಿಸುತ್ತಾ ಅಶ್ವಸೈನ್ಯವನ್ನು ಧ್ವಂಸಮಾಡಿದನು. ಆನೆಗಳನ್ನೇ ಆಯುಧವನ್ನಾಗಿ ಮಾಡಿಕೊಂಡು ಗಜಸೈನ್ಯ ವನ್ನು ನಿರ್ಮೂಲಮಾಡಿದನು. ರಥಗಳ ಮೂಲಕವಾಗಿಯೇ ರಥಸೈನ್ಯವನ್ನು ವಿನಾಶಗೊಳಿಸಿದನು. ಪದಾತಿಗಳನ್ನೇ ಎತ್ತಿಹಿಡಿದು ಪ್ರಹರಿಸುತ್ತಾ ಪದಾತಿ ಸೈನ್ಯವನ್ನು ಸಂಹರಿಸಿದನು. ಹೀಗೆ ಹನುಮಂತನು ಇಂದ್ರನು ಅಸುರರನ್ನು ವಿನಾಶಗೊಳಿಸಿದಂತೆ ಐವರು ಸೇನಾಪತಿಗಳನ್ನು ಅನುಸರಿಸಿ ಬಂದಿದ್ದ ಸಮಸ್ತಸೈನ್ಯವನ್ನೂ ಧ್ವಂಸಮಾಡಿದನು. ಸತ್ತುಹೋಗಿದ್ದ ಆನೆ-ಕುದುರೆ-ಕಾಲಾಳುಗಳಿಂದಲೂ, ಮುರಿದುಹೋಗಿದ್ದ ಅಚ್ಚುಮರಗಳಿದ್ದ ರಥ ಗಳಿಂದಲೂ, ಅಸುನೀಗಿ ಬಿದ್ದಿದ್ದ ಸಾವಿರಾರು ರಾಕ್ಷಸರಿಂದಲೂ ವ್ಯಾಪ್ತ ವಾಗಿದ್ದ ಆ ಪ್ರದೇಶದ ಎಲ್ಲ ಮಾರ್ಗಗಳೂ ನಿರುದ್ಧವಾದುವು. ಜನ ಸಂಚಾರಕ್ಕೆ ಅಯೋಗ್ಯವಾದುವು. ಹೀಗೆ ಹನುಮಂತನು ಸೈನ್ಯ-ವಾಹನಗಳಿಂದ ಯುಕ್ತರಾಗಿದ್ದ ವೀರರಾದ ಐವರು ಸೇನಾಪತಿಗಳನ್ನೂ ಸಂಹರಿಸಿ ಸಮಯವನ್ನು ನಿರೀಕ್ಷಣೆಮಾಡುತ್ತಾ ಪ್ರಳಯಕಾಲದ ಯಮನೋಪಾದಿ ಯಲ್ಲಿ ಬಹಿರ್ದ್ವಾರವನ್ನು ಆಶ್ರಯಿಸಿ ಕುಳಿತನು.

ಳ೬ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೪೭ನೆಯ ಸರ್ಗ

## ರಾವಣನ ಮಗನಾದ ಅಕ್ಷಕುಮಾರನ ಪರಾಕ್ರಮ ವರ್ಣನೆ : ಹನುಮಂತನಿಂದ ಅವನ ಸಂಹಾರ

**ಸೇನಾಪತೀನ್ಪಞ್ಚ ಸ ತು ಪ್ರಮಾಪಿತಾ-**
**ನ್ಹನೂಮತಾ ಸಾನುಚರಾನ್ಸವಾಹನಾನ್ ।**
**ನಿಶಮ್ಯ ರಾಜಾ ಸಮರೋದ್ಧತೋನ್ಮುಖಂ**
**ಕುಮಾರಮಕ್ಷಂ ಪ್ರಸಮೈಕ್ಷತಾಗ್ರತಃ ॥೧॥**

ಅನುಚರರಿಂದೊಡಗೂಡಿದ್ದ, ವಾಹನಗಳಿಂದ ಯುಕ್ತರಾಗಿದ್ದ ಐವರು ಸೇನಾಪತಿಗಳನ್ನೂ ಹನುಮಂತನು ಸಂಹರಿಸಿದನೆಂಬ ವಾರ್ತೆಯನ್ನು ಕೇಳಿ ರಾವಣನು–ಯುದ್ಧಕ್ಕೆ ಹೋಗಲು ಸಜ್ಜಾಗಿ ತನ್ನ ಮುಂದೆ ನಿಂತಿದ್ದ ಅಕ್ಷಕುಮಾರನನ್ನು ನೋಡಿದನು.

ರಾವಣನ ದೃಷ್ಟಿಪ್ರಸರಣದಿಂದಲೇ ಪ್ರಚೋದಿತನಾದ, ಪ್ರತಾಪವಂತನಾದ, ಸುವರ್ಣದಿಂದ ಚಿತ್ರಿತವಾಗಿದ್ದ ಧನುಸ್ಸನ್ನು ಧರಿಸಿದ್ದ ಅಕ್ಷಕುಮಾರನು–ಯಜ್ಞಶಾಲೆಯಲ್ಲಿ ಬ್ರಾಹ್ಮಣಮುಖ್ಯರು ಅರ್ಪಿಸುವ ಹವಿಸ್ಸಿನಿಂದ ಊರ್ಧ್ವಮುಖನಾಗಿ ಪ್ರಜ್ವಲಿಸುವ ಯಜ್ಞೇಶ್ವರನಂತೆ–ಮಹಾಸಭೆಯಲ್ಲಿ ಎದ್ದು ನಿಂತನು. ಬಳಿಕ ರಾಜಕುಮಾರನು ಬಾಲಸೂರ್ಯನಂತೆ ಮಹಾಪ್ರಭೆಯಿಂದ ಕೂಡಿದ್ದ, ಪುಟಕ್ಕೆ ಹಾಕಿದ ಚಿನ್ನದ ಜಾಲರಿಗಳಿಂದ ಸಮಾವೃತವಾಗಿದ್ದ ರಥದಲ್ಲಿ ಕುಳಿತು ಮಹಾಕಪಿಯ ಬಳಿಗೆ ಹೋದನು.

ಅಕ್ಷಕುಮಾರನು ತಪಸ್ಸನ್ನು ಮಾಡಿ ಆ ರಥವನ್ನು ಪಡೆದು ಕೊಂಡಿದ್ದನು. ಅದು ಪುಟಕ್ಕೆ ಹಾಕಿದ ಚಿನ್ನದ ಬಲೆಯ ಆವರಣದಿಂದಾಗಿ ವಿಚಿತ್ರವಾಗಿ ಕಾಣುತ್ತಿದ್ದಿತು. ಪತಾಕೆಯಿಂದಲೂ, ರತ್ನಗಳಿಂದ ಸಮಲಂಕೃತವಾದ ಧ್ವಜದಿಂದಲೂ ಶೋಭಿಸುತ್ತಿದ್ದಿತು. ಮನೋವೇಗಕ್ಕೆ ಸಮಾನವಾದ ವೇಗವುಳ್ಳ ಎಂಟು ಕುದುರೆಗಳನ್ನು ಆ ರಥಕ್ಕೆ ಹೂಡಿದ್ದರು. ದೇವ-ದಾನವರಿಂದಲೂ ಅದು ಎದುರಿಸಲು ಅಸಾಧ್ಯವಾಗಿದ್ದಿತು. ಭೂಮಿಯ ಸಂಪರ್ಕವೇ ಇಲ್ಲದೇ ಸಂಚರಿಸುತ್ತಿದ್ದಿತು. ಮಿಂಚಿನ ಕಾಂತಿಯಿಂದ ಕಂಗೊಳಿಸುತ್ತಾ ಆಕಾಶದಲ್ಲಿಯೂ ಸಂಚರಿಸುತ್ತಾ ಬೇಕಾದ ಸ್ಥಳದಲ್ಲಿ ಸುಸ್ಥಿರವಾಗಿ ನಿಂತಿರುತ್ತಿದ್ದಿತು. ರಥದಲ್ಲಿ ಅನೇಕ ಬತ್ತಳಿಕೆಗಳಿದ್ದುವು. ಮೂಕಿ ಕಂಬಕ್ಕೆ ಎಂಟು ಕತ್ತಿಗಳನ್ನು ಕಟ್ಟಿದ್ದರು. ಶಕ್ತಿ-ತೋಮರಗಳನ್ನು ಅನುಕ್ರಮವಾಗಿ ರಥದಲ್ಲಿ ಇರಿಸಿದ್ದರು. ಸಮಸ್ತವಾದ ಯುದ್ಧಸಾಮಗ್ರಿಗಳಿಂದಲೂ ಅದು ಸಂಪನ್ನವಾಗಿದ್ದಿತು. ಸುವರ್ಣಮಯವಾದ ಹಗ್ಗಗಳಿಂದ ವಿರಾಜಿಸುತ್ತಿದ್ದಿತು. ಚಂದ್ರ-ಸೂರ್ಯರ ಕಾಂತಿಯಂತೆ ಪ್ರಕಾಶಮಾನವಾಗಿದ್ದಿತು. ಸೂರ್ಯನಂತೆ ಆಕಾಶದಲ್ಲಿಯೇ ಸಂಚರಿಸುತ್ತಿದ್ದಿತು. ಇಂತಹ ಅನುಪಮವಾದ ರಥದಲ್ಲಿ ಕುಳಿತು ದೇವಸದೃಶಪರಾಕ್ರಮನಾದ ಅಕ್ಷಕುಮಾರನು ಯುದ್ಧಕ್ಕೆ ಹೊರ ಟನು. ತನ್ನೊಡನೆ ಒಯ್ಯುತ್ತಿದ್ದ ಆನೆ-ಕುದುರೆ ಮತ್ತು ಮಹಾರಥಗಳ ಸಂಚಲನದ ಧ್ವನಿಯಿಂದ ಆಕಾಶವನ್ನೂ ಮತ್ತು ಪರ್ವತಗಳಿಂದ ಸಹಿತವಾದ ಭೂಮಿಯನ್ನೂ ತುಂಬುತ್ತಾ ಹೊರಬಾಗಿಲಿನ ಬಳಿಯಲ್ಲಿದ್ದ ಸಮರ್ಥನಾದ ಹನುಮಂತನ ಸಮೀಪಕ್ಕೆ ಧಾವಿಸಿದನು. ಸಿಂಹದ ದೃಷ್ಟಿಯಂತೆ ದೃಷ್ಟಿಯುಳ್ಳವನಾಗಿದ್ದ ಅವನು ಪ್ರಳಯಕಾಲದಲ್ಲಿ ಪ್ರಜೆಗಳ ವಿನಾಶಕ್ಕಾಗಿ ಹುಟ್ಟುವ

ಕಾಲಾಗ್ನಿಯಂತೆಯೇ ಕಾಣುತ್ತಿದ್ದು ಬಾಗಿಲಿನ ಬಳಿ ನಿಂತಿದ್ದ ಹನುಮಂತನನ್ನು ನೋಡಿ ವಿಸ್ಮಿತನೂ, ಭ್ರಾಂತನೂ ಆಗಿ ಅಭಿಮಾನಯುಕ್ತವಾದ ದೃಷ್ಟಿಯಿಂದಲೇ ಅವನನ್ನು ನೋಡಿದನು. ಆ ಹಿಂದೆ ಹನುಮಂತನು ಶತ್ರುಗಳ ವಿಷಯದಲ್ಲಿ ತೋರಿದ ಪರಾಕ್ರಮವನ್ನೂ ಅವನ ಅಪಾರಬಲವನ್ನೂ ತನ್ನ ಬಲದೊಡನೆ ಹೋಲಿಸಿಕೊಳ್ಳುತ್ತಾ ಪ್ರಳಯಕಾಲದ ಸೂರ್ಯನಂತೆಯೇ ವೃದ್ಧಿಹೊಂದಿದನು. ಹನುಮಂತನ ವಿನಾಶದಲ್ಲಿಯೇ ಏಕಾಗ್ರಚಿತ್ತನಾಗಿದ್ದ ಅಕ್ಷಕುಮಾರನು ಅತ್ಯಂತಕ್ರುದ್ಧನಾಗಿ ಮಹಾಪರಾಕ್ರಮಿಯಾದ, ಯುದ್ಧ ಮಾಡಲು ಸುಸ್ಥಿರನಾಗಿ ನಿಂತಿದ್ದ, ನಿವಾರಿಸಲು ಅಸಾಧ್ಯನಾಗಿದ್ದ ಹನುಮಂತನನ್ನು ತೀಕ್ಷ್ಣವಾದ ಮೂರು ಬಾಣಗಳಿಂದ ಪ್ರಹರಿಸಿ ಯುದ್ಧಕ್ಕೆ ಪ್ರಚೋದಿಸಿದನು. ಆದರೆ ಹನುಮಂತನಿಗೆ ಆ ಮೂರು ಬಾಣಗಳ ಪ್ರಹಾರದಿಂದ ಯಾವ ಆಯಾಸವೂ ಆದಂತೆ ಕಾಣಲಿಲ್ಲ. ಅವನ ಮನಸ್ಸು ಅತ್ಯುತ್ಸಾಹಗೊಂಡಿರುವಂತಿದ್ದಿತು. ಶತ್ರುಗಳನ್ನು ಪರಾಜಯಗೊಳಿಸಲು ಅತ್ಯಂತ ಸಮರ್ಥನಾಗಿರುವಂತೆ ಅವನು ಕಾಣುತ್ತಿದ್ದನು. ಆ ಕಾರಣದಿಂದಲೇ ಹನುಮಂತನು ಅತಿಗರ್ವಿತನೂ ಆಗಿದ್ದನು. ಧನುರ್ಬಾಣಗಳನ್ನು ಹಿಡಿದಿದ್ದ ಅಕ್ಷಕುಮಾರನು ಎದುರಾಳಿಯನ್ನು ಪುನಃ ಪುನಃ ವೀಕ್ಷಿಸುತ್ತಿದ್ದನು. ವಕ್ಷಃಸ್ಥಳ ದಲ್ಲಿ ಪದಕವನ್ನೂ ತೋಳುಗಳಲ್ಲಿ ಅಂಗದಗಳನ್ನೂ ತೊಟ್ಟುಕೊಂಡಿದ್ದ, ಸುಂದರವಾದ ಕುಂಡಲಗಳನ್ನು ಧರಿಸಿದ್ದ, ವೇಗವಿಕ್ರಮನಾದ ಅಕ್ಷನು ಹನುಮಂತನನ್ನು ಎದುರಿಸಿದನು. ಅವರ ಸಮಾಗಮವು ಅಪ್ರತಿಮವಾಗಿದ್ದು ದೇವ-ದಾನವರಿಗೂ ಕುತೂಹಲವನ್ನುಂಟುಮಾಡುವುದಾಗಿದ್ದಿತು. ವಾನರ-ರಾಕ್ಷಸರ ಅದ್ಭುತವಾದ ಯುದ್ಧವನ್ನು ನೋಡಿ ಭೂಮಿಯು ನಡುಗಿತು. ಸೂರ್ಯನು ಕಾಂತಿಹೀನನಾದನು. ಗಾಳಿಯು ಸ್ತಬ್ಧವಾಯಿತು. ಆಕಾಶದಲ್ಲಿ ಘೋರವಾದ ಶಬ್ದವಾಯಿತು. ಸಮುದ್ರವು ಕ್ಷೋಭೆಗೊಂಡಿತು. ಗುರಿಯಿಡುವುದರಲ್ಲಿ, ಬಾಣವನ್ನು ಹೂಡುವುದರಲ್ಲಿ ಮತ್ತು ಬಾಣಪ್ರಯೋಗದಲ್ಲಿ ಪ್ರಾವೀಣ್ಯವನ್ನು ಹೊಂದಿದ್ದ ರಾವಣಿಯು ಸುಂದರವಾದ ಅಗ್ರಭಾಗಗಳನ್ನು ಹೊಂದಿದ್ದ, ಚಿನ್ನದ ರೆಕ್ಕೆಗಳಿಂದ ಕೂಡಿದ್ದ, ವಿಷಸರ್ಪಗಳಂತಿದ್ದ ಮೂರು ಬಾಣಗಳನ್ನು ಹನುಮಂತನ ತಲೆಗೆ ಗುರಿಯಿಟ್ಟು ಹೊಡೆದನು. ಆ ಮೂರು ಬಾಣಗಳೂ ಏಕಕಾಲದಲ್ಲಿ ಮಾರುತಿಯ ತಲೆಯನ್ನು ಹೊಕ್ಕುವು. ಅವನ

ಕಣ್ಣುಗುಡ್ಡೆಗಳು ರಕ್ತದಿಂದ ನೆನೆದು ತಿರುಗತೊಡಗಿದುವು. ಆಗ ತಾನೇ ಹುಟ್ಟಿದ ಸೂರ್ಯನಂತಿದ್ದ ಹನುಮಂತನು ತಲೆಯಲ್ಲಿ ಬಾಣರೂಪವಾದ ಕಿರಣಗಳನ್ನು ಧರಿಸಿ ಅಂಶುಮಾಲಿಯಾದ ಸೂರ್ಯನಂತೆಯೇ ಪ್ರಕಾಶಿಸಿದನು. ವಾನರಾಧಿಪತಿಯಾದ ಸುಗ್ರೀವನ ಅಮಾತ್ಯಶ್ರೇಷ್ಠನಾದ ಹನುಮಂತನು ಚಿತ್ರವಾದ ಆಯುಧಗಳನ್ನೂ ವಿಚಿತ್ರವಾದ ಧನುಸ್ಸನ್ನು ಧರಿಸಿದ್ದ ರಾಜಶ್ರೇಷ್ಠನಾದ ರಾವಣನ ಮಗನನ್ನು ನೋಡಿ ಸಂತೋಷಗೊಂಡು ಉಬ್ಬಿಹೋಗಿ ಅವನೊಡನೆ ಯುದ್ಧಕ್ಕೆ ಸಿದ್ಧನಾದನು. ಬಲ-ವೀರ್ಯಗಳಿಂದ ಸಂಪನ್ನನಾಗಿದ್ದ, ಮಂದರಪರ್ವತದ ಅಗ್ರಭಾಗಕ್ಕೆ ಬಂದ ಮಧ್ಯಾಹ್ನದ ಸೂರ್ಯನಂತಿದ್ದ, ವೃದ್ಧಿಹೊಂದಿದ ಕೋಪದಿಂದ ಧಗ-ಧಗಿಸುತ್ತಿದ್ದ ಹನುಮಂತನು ಕಣ್ಣುಗಳಿಂದ ಹುಟ್ಟಿದ ಅಗ್ನಿಯ ಜ್ವಾಲೆಗಳಿಂದ ಬಲ-ವಾಹನ ಗಳಿಂದ ಯುಕ್ತನಾಗಿದ್ದ ಅಕ್ಷಕುಮಾರನನ್ನು ಸುಟ್ಟುಬಿಡುವನೋ ಎಂಬಂತೆ ಕಾಣುತ್ತಿದ್ದನು.

ಅಕ್ಷಕುಮಾರನ ವಿಚಿತ್ರವಾದ ಧನುಸ್ಸು ಕಾಮನಬಿಲ್ಲಿನ ರೂಪದಲ್ಲಿದ್ದಿತು. ಬಾಣಗಳೇ ಮಳೆಯ ರೂಪದಲ್ಲಿದ್ದುವು. ರಾಕ್ಷಸನು ಮೇಘದ ರೂಪ ದಲ್ಲಿದ್ದನು. ಮೇಘವು ಉನ್ನತವಾದ ಪರ್ವತಗಳ ಮೇಲೆ ಮಳೆಗರೆಯುವಂತೆ ಕಪಿರೂಪದ ಪರ್ವತದ ಮೇಲೆ ಮೇಘರೂಪನಾದ ರಾಕ್ಷಸನು ಬಾಣಗಳ ವೃಷ್ಟಿಯನ್ನೇ ಸುರಿಸಿದನು. ಮೇಘದ ಗರ್ಜನೆಗೆ ಸಮಾನವಾಗಿ ಗರ್ಜನೆ ಮಾಡುತ್ತಿದ್ದ ಕಪೀಶ್ವರನು ರಣಚಂಡವಿಕ್ರಮನಾದ, ಅಧಿಕವಾದ ತೇಜೋ-ಬಲವೀರ್ಯಗಳಿಂದ ಕೂಡಿದ್ದ, ಬಾಣಗಳಿಂದ ಸಂಪನ್ನನಾಗಿದ್ದ ಅಕ್ಷಕುಮಾರ ನನ್ನು ನೋಡಿ ಸಿಂಹನಾದಮಾಡಿದನು. ಬಾಲ್ಯಚಾಪಲ್ಯದಿಂದ ಕೂಡಿದ್ದ ಅಕ್ಷನು ಅಲ್ಪವೀರ್ಯನಾಗಿದ್ದರೂ ಬಹಳ ದರ್ಪಿಷ್ಠನಾಗಿದ್ದನು. ಅಧಿಕವಾದ ಕೋಪ ದಿಂದ ಕೆಂಪಾದ ಕಣ್ಣುಗಳನ್ನು ಹೊಂದಿದ್ದ ಆ ರಾಕ್ಷಸಪುತ್ರನು–ಆನೆಯೊಂದು ಹುಲ್ಲು ಮುಚ್ಚಿರುವ ಬಾವಿಯ ಬಳಿಗೆ ವೇಗವಾಗಿ ಧಾವಿಸುವಂತೆ–ಅಪ್ರತಿಮಪರಾಕ್ರಮಿಯಾದ ಹನುಮಂತನ ಬಳಿಗೆ ಯುದ್ಧಮಾಡಲು ಧಾವಿಸಿ ದನು. ರಾವಣಿಯು ಧಾರ್ಷ್ಟ್ಯದಿಂದ ಹನುಮಂತನ ಮೇಲೆ ಸತತವಾಗಿ ಬಾಣಗಳ ಮಳೆಗರೆಯುತ್ತಿದ್ದನು. ಅವನ ತೋಳುಗಳಲ್ಲಿ ಮತ್ತು ಭುಜಗಳಲ್ಲಿ ಗಾಯಗಳಾದುವು. ಒಡನೆಯೇ ಮೇಘನಾದನಾದ ಮಾರುತಿಯು ಭಯಂಕರ

ವಾದ ಆಕಾರವನ್ನು ಹೊಂದಿ ಆಕಾಶಕ್ಕೆ ಹಾರಿದನು. ಕಾರ್ಮುಗಿಲು ಕಲ್ಲು ಮಳೆಯಿಂದ ಪರ್ವತವನ್ನು ತುಂಬಿಬಿಡುವಂತೆ–ಆಕಾಶಕ್ಕೆ ಹಾರಿದ ಹನುಮಂತನನ್ನು ರಾಕ್ಷಸಶ್ರೇಷ್ಠನಾದ, ಪ್ರತಾಪವಂತನಾದ, ರಥಿಗಳಲ್ಲಿ ಶ್ರೇಷ್ಠ ತಮನಾದ, ಮಹಾಬಲಿಷ್ಠನಾದ ಅಕ್ಷನು ಬಾಣಗಳ ವರ್ಷದಿಂದ ಮುಚ್ಚುತ್ತಾ ಹಿಂಬಾಲಿಸಿ ಹೋದನು. ವಾನರ-ರಾಕ್ಷಸರ ಆ ಮಹಾಸಂಗ್ರಾಮದಲ್ಲಿ ಭಯಂಕರವಿಕ್ರಮನಾದ, ವೀರನಾದ ಮಾರುತಿಯು ಅಕ್ಷನು ಬಿಡುತ್ತಿದ್ದ ಬಾಣಗಳ ಸಮೂಹದ ಮಧ್ಯದಲ್ಲಿಯೇ ಗಾಳಿಯಂತೆ ನುಸುಳಿಹೋಗುತ್ತಾ ಆ ಎಲ್ಲ ಬಾಣಗಳನ್ನೂ ವ್ಯರ್ಥಗೊಳಿಸಿದನು. ಯುದ್ಧೋತ್ಸುಕನಾಗಿ ಧನುಸ್ಸನ್ನು ಹಿಡಿದು ನಾನಾವಿಧವಾದ ಶ್ರೇಷ್ಠವಾದ ಬಾಣಗಳಿಂದ ಆಕಾಶವನ್ನೇ ಮುಚ್ಚುತ್ತಿದ್ದ ಅಕ್ಷಕುಮಾರನನ್ನು ಹನುಮಂತನು ಗೌರವಭಾವದಿಂದಲೇ ಈಕ್ಷಿಸುತ್ತಾ ಅವನನ್ನು ಹೇಗೆ ಸಂಹರಿಸಬೇಕೆಂಬುದರ ಬಗೆಗೆ ಕ್ಷಣಕಾಲ ಚಿಂತಿಸಿದನು. ಮಹಾತ್ಮನಾದ, ವೀರನಾದ ಅಕ್ಷಕುಮಾರನ ನಿಶಿತವಾದ ಬಾಣಗಳ ಮೂಲಕ ಪೀಡಿತನಾದ ಮಹಾಭುಜನಾದ ಮಾರುತಿಯು ತಾನು ಬಂದಿರುವ ಕಾರ್ಯವಿಶೇಷದ ರಹಸ್ಯವನ್ನು ಮನಗಂಡು ಗಟ್ಟಿಯಾಗಿ ಗರ್ಜನೆಮಾಡುತ್ತಾ ಯುದ್ಧದಲ್ಲಿ ಅಕ್ಷನ ಪರಾಕ್ರಮದ ಬಗೆಗೆ ಪುನಃ ಪುನಃ ಚಿಂತಿಸಿದನು :

"ಬಾಲಸೂರ್ಯನಂತೆ ಮಹಾತೇಜಸ್ಸಿನಿಂದ ಬೆಳಗುತ್ತಿರುವ ಮಹಾಬಲನಾದ ಈ ರಾಜಕುಮಾರನು ಪ್ರೌಢನಂತೆ ಮಹಾಸಾಹಸಕಾರ್ಯವನ್ನೇ ಮಾಡುತ್ತಿರುವನು. ಸಮಸ್ತವಾದ ಯುದ್ಧಪ್ರಕ್ರಿಯೆಗಳನ್ನೂ ತಿಳಿದಿರುವ ಇವನನ್ನು ಸಂಹರಿಸಲು ನನಗೆ ಮನಸ್ಸೇ ಬರುತ್ತಿಲ್ಲ. ಇವನು ಮಹಾವೀರ್ಯನು. ಏಕಾಗ್ರಚಿತ್ತನು. ಯುದ್ಧಗಳಲ್ಲಿ ಎದುರಾಳಿಯ ಪ್ರಹಾರವನ್ನು ಸಹಿಸಿಕೊಳ್ಳುವ ಸಾಮರ್ಥ್ಯವುಳ್ಳವನು. ಬಾಣಗಳ ಆದಾನ-ಸಂಧಾನ-ವಿಮೋಕ್ಷಣಾದಿಗಳಲ್ಲಿ ಮಹಾಚತುರನಾಗಿರುವ ಇವನು ನಾಗ-ಯಕ್ಷ-ಮುನಿಗಳ ಗೌರವಕ್ಕೂ ಪಾತ್ರನಾಗಿದ್ದಾನೆ. ಇದರಲ್ಲಿ ಸಂಶಯವೇ ಇಲ್ಲ. ಪರಾಕ್ರಮದಿಂದಲೂ ಮತ್ತು ಉತ್ಸಾಹದಿಂದಲೂ ಉತ್ತೇಜಿತವಾದ ಮನಸ್ಸಿನಿಂದ ಕೂಡಿರುವ ಇವನು ನನ್ನೆದುರಾಗಿ ನಿಂತು ನನ್ನನ್ನೇ ತೀಕ್ಷ್ಣದೃಷ್ಟಿಯಿಂದ ನೋಡುತ್ತಿರುವನು. ಬಾಣಗಳನ್ನು ಶೀಘ್ರವಾಗಿ ಬಿಡುವುದರಲ್ಲಿ ನಿಪುಣನಾದ ಇವನ ಪರಾಕ್ರಮವು ದೇವಾಸುರರ ಮನಸ್ಸುಗಳನ್ನೂ ನಡುಗಿಸುವುದಾಗಿದೆ.

ನಾನಿವನನ್ನು ಬಾಲಕನೆಂದು ಉಪೇಕ್ಷಿಸುವುದರಿಂದ ಇವನೇ ನನ್ನನ್ನು ಪರಾಜಯಗೊಳಿಸುವಂತಾಗಬಾರದು. ಮೇಲಾಗಿ ಯುದ್ಧದಲ್ಲಿ ಇವನ ಪರಾಕ್ರಮವು ಕ್ಷಣ-ಕ್ಷಣಕ್ಕೂ ಹೆಚ್ಚುತ್ತಲೇ ಇದೆ. ಸುತ್ತಲೂ ಹರಡುತ್ತಿರುವ ಅಗ್ನಿಯಂತಿರುವ ಇವನನ್ನು ಉಪೇಕ್ಷಿಸಬಾರದು. ಆದುದರಿಂದ ಮನಸ್ಸಿಲ್ಲದಿದ್ದರೂ ಈ ಸಮಯದಲ್ಲಿ ಇವನನ್ನು ವಧಿಸುವುದೇ ಸೂಕ್ತವಾಗಿದೆ."

ಹೀಗೆ ಮಹಾಬಲಶಾಲಿಯಾದ ಹನುಮಂತನು ಶತ್ರುವಿನಲ್ಲಿರುವ ಸಾಮರ್ಥ್ಯವನ್ನು ತರ್ಕಿಸುತ್ತಾ ತಾನು ಮಾಡಬೇಕಾಗಿರುವ ಕಾರ್ಯವನ್ನೂ ನಿರ್ಧರಿಸಿ ಅಕ್ಷನನ್ನು ಸಂಹರಿಸುವುದೇ ಯೋಗ್ಯವೆಂದು ಪುನಃ ನಿಶ್ಚಯಿಸಿ ರಭಸದಿಂದ ಹೊರಟನು. ಅನೇಕಪ್ರಕಾರವಾದ ಮಂಡಲಸಂಚಲನಗಳಲ್ಲಿ ಸುಶಿಕ್ಷಿತವಾಗಿದ್ದ, ಮಹಾಭಾರವನ್ನು ಹೊತ್ತು ನಡೆಯಲು ಸಮರ್ಥವಾಗಿದ್ದ, ಅಕ್ಷಕುಮಾರನ ರಥಕ್ಕೆ ಹೂಡಿದ್ದ ಎಂಟು ಶ್ರೇಷ್ಠವಾದ ಕುದುರೆಗಳನ್ನು ಅಂಗೈ ಹೊಡೆತಗಳಿಂದಲೇ ಸಂಹರಿಸಿದನು. ಮರುಕ್ಷಣದಲ್ಲಿಯೇ ಮಹಾರಥನಾದ ಅಕ್ಷನನ್ನೂ ಅಂಗೈಯಿಂದ ಪ್ರಹರಿಸಿದನು.

ಅವನು ಕುಳಿತಿದ್ದ ರಥವೂ ಪುಡಿ-ಪುಡಿಯಾಯಿತು. ರಥದ ಮೂಕಿಯೂ ತಲೆಕೆಳಗಾಯಿತು. ಕುದುರೆಗಳೂ ಸತ್ತುಹೋದುವು. ಆಕಾಶದಲ್ಲಿದ್ದ ಅಕ್ಷಕುಮಾರನು ಭೂಮಿಯ ಮೇಲೆ ಬಿದ್ದನು. ಆಗ ಅವನು ನುಚ್ಚುನೂರಾಗಿದ್ದ ರಥವನ್ನು ಪರಿತ್ಯಜಿಸಿ ಧನುರ್ಧರನಾಗಿ ಕೈಯಲ್ಲಿ ಕತ್ತಿಯನ್ನು ಝಳಪಿಸುತ್ತಾ-ತಪೋವೀರ್ಯಸಂಪನ್ನನಾದ ಋಷಿಯು ದೇಹವನ್ನು ತ್ಯಜಿಸಿ ದೇವತೆಗಳ ಲೋಕಕ್ಕೆ ಹೋಗುವಂತೆ–ಅಂತರಿಕ್ಷಕ್ಕೆ ಹಾರಿದನು. ಪಕ್ಷಿಗಳ ರಾಜನಾದ ಗರುಡನಿಂದಲೂ, ವಾಯು ಮತ್ತು ಸಿದ್ಧರಿಂದಲೂ ಸೇವಿಸಲ್ಪಡುತ್ತಿದ್ದ ಆಕಾಶದಲ್ಲಿ ಸಂಚರಿಸುತ್ತಿದ್ದ ಅಕ್ಷಕುಮಾರನನ್ನು ವಾಯುಸಮಾನಪರಾಕ್ರಮನಾದ ಹನುಮಂತನು ಹಿಂಬಾಲಿಸಿ ಅವನ ಕಾಲುಗಳನ್ನು ಬಲವಾಗಿ ಹಿಡಿದು ಸಾವಿರಾರು ಬಾರಿ ವೇಗವಾಗಿ ತಿರುಗಿಸಿ ಗರುಡನು ಮಹಾಸರ್ಪವನ್ನು ಹಿಡಿದು ಎತ್ತರದಿಂದ ಕೆಳಕ್ಕೆ ಕುಕ್ಕುವಂತೆ ನೆಲದ ಮೇಲೆ ಅಪ್ಪಳಿಸಿದನು. ಒಡನೆಯೇ ಅಕ್ಷಕುಮಾರನ ತೋಳು-ತೊಡೆ-ಸೊಂಟ-ಕುತ್ತಿಗೆಗಳೆಲ್ಲವೂ ಜಜ್ಜಿಹೋದುವು. ಶರೀರದ ಎಲ್ಲ ಕಡೆಗಳಿಂದಲೂ ರಕ್ತವು ಪ್ರವಾಹರೂಪವಾಗಿ ಹರಿಯತೊಡಗಿತು. ಮೂಳೆಗಳು ನುಚ್ಚು

ನೂರಾದುವು. ಕಣ್ಣುಗುಡ್ಡೆಗಳು ಹೊರಚಾಚಿಕೊಂಡುವು. ತೋಳು-ಕಾಲುಗಳಲ್ಲಿದ್ದ ಎಲ್ಲ ಕೀಲುಗಳೂ ಭಗ್ನವಾಗಿಹೋದುವು. ಸೊಂಟಪಟ್ಟಿ-ಅಂಗದ-ಕೇಯೂರ-ಕವಚಗಳು ಬಿಚ್ಚಿಹೋಗಿ ಚೆಲ್ಲಾ-ಪಿಲ್ಲಿಯಾಗಿ ಭೂಮಿಯ ಮೇಲೆ ಬಿದ್ದುವು. ಹೀಗೆ ಅಕ್ಷಕುಮಾರನು ವಾಯುಪುತ್ರನಾದ ಹನುಮಂತನಿಂದ ಹತನಾಗಿ ನೆಲದ ಮೇಲೆ ಬಿದ್ದನಂತರವೂ ಹನುಮಂತನು ಅಕ್ಷನನ್ನು ಚೆನ್ನಾಗಿ ತುಳಿದು ರಾಕ್ಷಸರ ಅಧಿಪತಿಯಾದ ರಾವಣನಿಗೆ ಮಹಾಭಯವನ್ನುಂಟುಮಾಡಿದನು. ವಾನರ-ರಾಕ್ಷಸರ ಯುದ್ಧವನ್ನು ವೀಕ್ಷಿಸಲು ಅಂತರಿಕ್ಷದಲ್ಲಿ ಉಪಸ್ಥಿತರಾಗಿದ್ದ ಮಹರ್ಷಿಗಳೂ, ಭೂತ-ಗಣಗಳೂ, ಪನ್ನಗರೂ, ಇಂದ್ರಸಹಿತರಾದ ದೇವತೆಗಳೂ ಹನುಮಂತನ ಅದ್ಭುತವಾದ ಸಾಹಸಕಾರ್ಯವನ್ನು ಕಂಡು ಅಚ್ಚರಿಗೊಂಡವರಾಗಿ ಅಭಿಮಾನಪೂರ್ವಕವಾದ ದೃಷ್ಟಿಯಿಂದ ನೋಡಿದರು.

ಹನುಮಂತನು, ಇಂದ್ರತನಯನ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿದ್ದ, ರಕ್ತಾಕ್ಷನಾಗಿದ್ದ ಅಕ್ಷಕುಮಾರನನ್ನು ಸಂಹರಿಸಿ–ಪ್ರಳಯ ಕಾಲದಲ್ಲಿ ಸಮಯವನ್ನು ನಿರೀಕ್ಷಿಸುತ್ತಾ ಕುಳಿತಿರುವ ಯಮನಂತೆ–ಹೊರಬಾಗಿಲ ಬಳಿಗೆ ಹೋಗಿ ಹಿಂದಿನಂತೆಯೇ ನಿಂತುಕೊಂಡನು.

ಳ೭ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೪೮ನೆಯ ಸರ್ಗ

## ಇಂದ್ರಜಿತು–ಹನುಮಂತರ ಯುದ್ಧ: ಇಂದ್ರಜಿತುವು ಮಾರುತಿಯನ್ನು ಬ್ರಹ್ಮಾಸ್ತ್ರದಿಂದ ಬಂಧಿಸಿ ರಾವಣನ ಬಳಿಗೆ ಒಯ್ದುದು

**ತತಸ್ತು ರಕ್ಷೋಧಿಪತಿರ್ಮಹಾತ್ಮಾ**
**ಹನೂಮತಾಕ್ಷೇ ನಿಹತೇ ಕುಮಾರೇ ।**
**ಮನಃ ಸಮಾಧಾಯ ತದೇನ್ದ್ರಕಲ್ಪಂ**
**ಸಮಾದಿದೇಶೇನ್ದ್ರಜಿತಂ ಸ ರೋಷಾತ್ ॥೧॥**

ಅಕ್ಷಕುಮಾರನೂ ಮರಣಹೊಂದಲಾಗಿ ಮಹಾತ್ಮನಾದ ರಾಕ್ಷಸೇಶ್ವರ

ನಾದ ರಾವಣನು ಬಹಳ ಕಷ್ಟದಿಂದ ಮನಸ್ಸಿಗೆ ಸಮಾಧಾನವನ್ನು ತಂದು ಕೊಂಡು ಕೋಪಾವಿಷ್ಟನಾಗಿ ಇಂದ್ರನಿಗೆ ಸಮಾನನಾಗಿದ್ದ ಇಂದ್ರಜಿತನನ್ನು ಕರೆಯಿಸಿ ಹೇಳಿದನು :

"ಮೇಘನಾದನೇ! ನೀನು ಬ್ರಹ್ಮನನ್ನೇ ಆರಾಧಿಸಿ ಬ್ರಹ್ಮಾಸ್ತ್ರವನ್ನು ಪಡೆದುಕೊಂಡಿರುವೆ. ಸಕಲವಿಧವಾದ ಅಸ್ತ್ರಗಳನ್ನೂ ತಿಳಿದವನಾಗಿರುವೆ. ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾಗಿರುವೆ. ಶತ್ರುಗಳಾದ ದೇವ-ದಾನವರಿಗೆ ನಿನ್ನ ಪರಾಕ್ರಮದಿಂದ ಶೋಕವನ್ನುಂಟುಮಾಡಿರುವೆ. ಇಂದ್ರಸಹಿತರಾದ ದೇವತೆ ಗಳೂ ನಿನ್ನ ವೀರೋಚಿತವಾದ ಕರ್ಮಗಳನ್ನು ನೋಡಿರುತ್ತಾರೆ. ಸುರೇಶ್ವರ ನಾದ ಇಂದ್ರನನ್ನು ಆಶ್ರಯಿಸಿರುವ ದೇವತೆಗಳೇ ಆಗಲೀ, ಮರುದ್ಗಣಗಳೇ ಆಗಲಿ–ಯುದ್ಧದಲ್ಲಿ ನಿನ್ನ ಅಸ್ತ್ರಬಲವನ್ನು ಎದುರಿಸಿ ನಿಲ್ಲಲಾರರು. ನಿನ್ನೊಡನೆ ಯುದ್ಧಮಾಡಿ ಆಯಾಸಗೊಳ್ಳದವನು ಈ ಮೂಜಗದಲ್ಲೇ ಯಾವನೂ ಇಲ್ಲ. ನಿನ್ನ ಭುಜಬಲ-ಪರಾಕ್ರಮಗಳಿಂದಲೇ ನೀನು ರಕ್ಷಿತನಾಗಿರುವೆ. ದೇಶ-ಕಾಲಗಳ ವಿಭಾಗವನ್ನು ತಿಳಿದಿರುವೆ. ಯಾವ ಸಮಯದಲ್ಲೇ ಯಾವ ಸ್ಥಳದಲ್ಲಿ ಯಾವ ಕಾರ್ಯವನ್ನು ಮಾಡಬೇಕೆಂಬುದನ್ನು ಅರಿತಿರುವೆ. ಮಹಾಬುದ್ಧಿಶಾಲಿಯಾಗಿರುವೆ. ಪರಾಕ್ರಮದಿಂದ ನೀನು ಸಾಧಿಸದೇ ಇರು ವುದು ಯಾವುದೂ ಇಲ್ಲ. ವಿವೇಕಪೂರ್ವವಾಗಿ ವಿಚಾರಮಾಡಿದಲ್ಲಿ ನಿನಗೆ ತಿಳಿಯದಿರುವ ಕಾರ್ಯವು ಯಾವುದೂ ಇಲ್ಲ. ಮೂರು ಲೋಕಗಳಲ್ಲಿಯೂ ನಿನ್ನ ಅಸ್ತ್ರಬಲವನ್ನಾಗಲೀ ಭುಜಬಲವನ್ನಾಗಲೀ ತಿಳಿಯದವನು ಯಾವನೂ ಇಲ್ಲ. ತಪಸ್ಸು, ಪರಾಕ್ರಮ, ಅಸ್ತ್ರಬಲ–ಇವೆಲ್ಲವೂ ನನ್ನಲ್ಲಿರುವಂತೆಯೇ ನಿನ್ನಲ್ಲಿಯೂ ಇವೆ. ಹೀಗೆ ವಿಜಯದಲ್ಲಿ ನಿಶ್ಚಯವುಳ್ಳ ನಿನ್ನನ್ನು ಹೊಂದಿರುವುದರಿಂದ ರಣಸಂಕಟವನ್ನೆದುರಿಸುವುದರಲ್ಲಿ ನನ್ನ ಮನಸ್ಸಿಗೆ ಯಾವ ವಿಧವಾದ ಆತಂಕವೂ ಇಲ್ಲವಾಗಿದೆ.

ವಾನರನೊಬ್ಬನಿಂದ ಕಿಂಕರರೆಲ್ಲರೂ ಹತರಾದರು. ರಾಕ್ಷಸಶ್ರೇಷ್ಠನಾದ ಜಂಬುಮಾಲಿಯೂ ಹತನಾದನು. ವೀರಸೇನಾನಾಯಕರಾದ ಐವರು ಅಮಾತ್ಯಪುತ್ರರೂ ಹತರಾದರು. ಗಜಾಶ್ವ-ರಥಗಳಿಂದ ಸಮೃದ್ಧವಾಗಿದ್ದ ನಮ್ಮ ಸೈನ್ಯಗಳೂ ವಿನಾಶಹೊಂದಿದುವು. ನಿನ್ನ ಪ್ರೀತಿಯ ಸೋದರನಾದ ಅಕ್ಷಕುಮಾರನೂ ಹತನಾದನು. ಆದರೆ ಅವರಾರಲ್ಲಿಯೂ ನನಗೆ ನಿನ್ನಲ್ಲಿರು

ವಷ್ಟು ನಂಬಿಕೆಯಿರಲಿಲ್ಲ. ಕುಮಾರ! ನಮ್ಮ ಕಡೆಯ ಮಹಾಸೈನ್ಯವೂ ಮತ್ತು ಮಹಾನಾಯಕರೂ ಹತರಾಗಿರುವುದನ್ನೂ, ಇದರಿಂದ ಆ ಕಪಿಯ ಪರಾಕ್ರಮ-ಪ್ರಭಾವಗಳೆಷ್ಟಿರಬಹುದೆಂಬುದನ್ನೂ ನಿಶ್ಚಯಿಸಿಕೊಳ್ಳಬೇಕು. ಇದರೊಂದಿಗೆ ನಿನ್ನಲ್ಲಿರುವ ಪರಾಕ್ರಮವನ್ನೂ ತೂಗಬೇಕು. ಅನಂತರ ನೀನು ನಿನ್ನ ಬಲಕ್ಕೆ ಅನುರೂಪವಾದ ಪರಾಕ್ರಮವನ್ನು ತೋರು.

ಶಸ್ತ್ರಧಾರಿಗಳಲ್ಲಿ ವರಿಷ್ಠನಾದವನೇ! ಆತ್ಮಬಲವನ್ನೂ ಶತ್ರುವಿನ ಬಲ ವನ್ನೂ ಸಮತೋಲನಮಾಡಿ ಶತ್ರುವನ್ನು ಶಾಂತಗೊಳಿಸುವ ಸಾಮರ್ಥ್ಯವನ್ನು ಹೊಂದಿರುವ ನೀನು ಕಪಿಯ ಬಳಿಗೆ ಹೋಗಿ ಮುಂದೆ ನಮ್ಮ ಸೈನ್ಯದ ಅವಸಾನವಾಗದಂತೆ ಯುದ್ಧಕ್ರಿಯೆಯನ್ನು ಆರಂಭಿಸು.

**ನ ವೀರ ಸೇನಾ ಗಣಶೋಚ್ಯವನ್ತಿ**
**ನ ವಜ್ರಮಾದಾಯ ವಿಶಾಲಸಾರಮ್ ।**
**ನ ಮಾರುತಸ್ಯಾಸ್ತಿ ಗತಿಪ್ರಮಾಣಂ**
**ನ ಚಾಗ್ನಿಕಲ್ಪಃ ಕರಣೇನ ಹನ್ತುಮ್ ॥೧೧॥**

ವೀರನೇ! ಸೈನ್ಯಗಳು ಅವನ ವಿಷಯದಲ್ಲಿ ಪ್ರಯೋಜನಕ್ಕೆ ಬರು ವುದಿಲ್ಲ. ಸೇನಾಗಣಗಳೇ ಅವನಿಂದ ಪಲಾಯನಮಾಡುತ್ತವೆ. ವಿಶಾಲವಾದ ಸತ್ತ್ವವುಳ್ಳ ವಜ್ರಾಯುಧವನ್ನು ತೆಗೆದುಕೊಂಡು ಹೋದರೂ ಪ್ರಯೋಜನವಿಲ್ಲ. ಆ ಕಪಿಯ ವೇಗವು ವಾಯುವಿಗೂ ಇಲ್ಲ. ಅಗ್ನಿಸದೃಶನಾಗಿರುವ ಅವನನ್ನು ಮುಷ್ಟಿಯೇ ಮೊದಲಾದುವುಗಳಿಂದ ಪ್ರಹರಿಸಲೂ ಸಾಧ್ಯವಿಲ್ಲ.

ಕುಮಾರ! ನನ್ನ ಈ ಅಭಿಪ್ರಾಯವನ್ನು ಚೆನ್ನಾಗಿ ವಿಮರ್ಶಿಸಿ ಸ್ವಕಾರ್ಯದ ಸಿದ್ಧಿಗಾಗಿ ಏಕಾಗ್ರವಾದ ಬುದ್ಧಿಯಿಂದ ನಿನ್ನ ಧನುಸ್ಸಿನ ಸಾಮರ್ಥ್ಯವನ್ನು ಸ್ಮರಿಸುತ್ತಾ ಹನುಮಂತನಿರುವೆಡೆಗೆ ಹೋಗು. ಶತ್ರುಘ್ನನಾದ ನೀನು ಗಾಯಗೊಳ್ಳದಂತೆ ಎಚ್ಚರಿಕೆಯನ್ನು ವಹಿಸಿ ಕಾರ್ಯಮಾಡು. ನಾನೀಗ ಬಾಲಕನಾದ ನಿನ್ನನ್ನು ಯುದ್ಧಕ್ಕೆ ಕಳುಹಿಸುತ್ತಿದ್ದೇನೆ. ಇದು ಉತ್ತಮ ಬುದ್ಧಿಯ ಕೆಲಸವಲ್ಲ. ಆದರೂ ಹೀಗೆ ಮಾಡಬೇಕೆಂಬುದು ರಾಜಧರ್ಮಗಳ ಅಭಿಮತವಾಗಿದೆ. ಇದು ಕ್ಷತ್ರಿಯನ ಕರ್ತವ್ಯವೂ ಆಗಿದೆ. ತನ್ನ ಕಡೆಯವರು ಇರುವಾಗ ರಾಜನೇ ನೇರವಾಗಿ ಯುದ್ಧಕ್ಕೆ ಹೋಗಬಾರದೆಂದು ರಾಜಧರ್ಮವು

ಹೇಳುತ್ತದೆ. ಯುದ್ಧಸಮಯದಲ್ಲಿ ನಾನಾವಿಧವಾದ ಶಸ್ತ್ರಪ್ರಯೋಗಗಳ ನೈಪುಣ್ಯವು ಅವಶ್ಯ. ವಿಜಯದ ಕಾಮನೆಯಿಂದಲೂ ಯುದ್ಧಮಾಡಬೇಕು."

**ತತಃ ಪಿತುಸ್ತದ್ವಚನಂ ನಿಶಮ್ಯ**
**ಪ್ರದಕ್ಷಿಣಂ ದಕ್ಷಸುತಪ್ರಭಾವಃ ।***
**ಚಕಾರ ಭರ್ತಾರಮದೀನಸತ್ತ್ವೋ**
**ರಣಾಯ ವೀರಃ ಪ್ರತಿಪನ್ನಬುದ್ಧಿಃ ॥೧೫॥**

ದೇವತೆಗಳಂತೆ ಅತ್ಯಂತಪ್ರಭಾವಶಾಲಿಯಾಗಿದ್ದ ವೀರನಾದ ಇಂದ್ರಜಿತುವು ತಂದೆಯು ಹೇಳಿದ ಮಾತುಗಳನ್ನು ಕೇಳಿ, ಅವನು ನಿರ್ದೇಶಿಸಿದ ಕಾರ್ಯವನ್ನು ಬುದ್ಧಿಪೂರ್ವಕವಾಗಿ ಅಂಗೀಕರಿಸಿ, ಸ್ವಾಮಿಯಾದ ರಾವಣೇಶ್ವರನಿಗೆ ಪ್ರದಕ್ಷಿಣೆಮಾಡಿ ಅತ್ಯವಸರದಿಂದಲೇ ಯುದ್ಧಕ್ಕೆ ಹೊರಟನು. ಯುದ್ಧಗರ್ವಿತನಾದ ರಾವಣಿಯು ಇಷ್ಟರಾದವರಿಂದಲೂ ತನ್ನ ಅಧೀನದಲ್ಲಿದ್ದ ರಾಕ್ಷಸರಿಂದಲೂ ಸತ್ಕೃತನಾಗಿ ಅತ್ಯುತ್ಸಾಹದಿಂದಲೇ ಧಾವಿಸಿದನು.

ಶ್ರೀಮಂತನಾದ, ತಾವರೆಯ ಎಲೆಯಂತೆ ವಿಶಾಲವಾದ ಕಣ್ಣುಳ್ಳಿರುವ, ರಾಕ್ಷಸೇಶ್ವರನ ಪುತ್ರನಾದ, ಮಹಾತೇಜಸ್ವಿಯಾದ ಇಂದ್ರಜಿತುವು–ಪರ್ವಕಾಲದಲ್ಲಿ ಸಮುದ್ರವು ಭೋರ್ಗರೆಯುತ್ತಾ ಉಕ್ಕೇರಿ ಬರುವಂತೆ–ಉಕ್ಕಿ ಬರುತ್ತಿದ್ದ ಉತ್ಸಾಹದೊಡನೆ ಆರ್ಭಟದಿಂದ ಯುದ್ಧಕ್ಕೆ ಹೊರಟನು. ಶತ್ರುಗಳಿಂದ ಸಹಿಸಲಾಗದಷ್ಟು ವೇಗವಂತನಾದ ರಾವಣಿಯು–ಪಕ್ಷಿರಾಜನಾದ ಗರುಡನ ವೇಗಕ್ಕೆ ಸಮಾನವೇಗವುಳ್ಳ, ತೀಕ್ಷ್ಣವಾದ ಕೋರೆದಾಡೆಗಳಿದ್ದ ನಾಲ್ಕು ಸಿಂಹಗಳಿಂದ ಹೂಡಲ್ಪಟ್ಟಿದ್ದ ರಥದಲ್ಲಿ ಕುಳಿತನು. ಧನುಷ್ಮಂತರಲ್ಲಿ ಶ್ರೇಷ್ಠನಾದ, ಶಸ್ತ್ರಗಳ ರಹಸ್ಯವನ್ನು ಸಂಪೂರ್ಣವಾಗಿ ತಿಳಿದಿದ್ದ, ಅಸ್ತ್ರವಿದರಲ್ಲಿ ಶ್ರೇಷ್ಠನಾದ ರಾಕ್ಷಸನು ರಥದಲ್ಲಿ ಕುಳಿತು ಹನುಮಂತನಿದ್ದೆಡೆಗೆ ವೇಗವಾಗಿ ಹೊರಟನು. ವೀರನಾದ ಹನುಮಂತನು ರಾಕ್ಷಸರಾಜಕುಮಾರನ ರಥದ ಗಡ-ಗಡಾ ಶಬ್ದವನ್ನೂ ಧನುಸ್ಸಿನ ಟಂಕಾರವನ್ನೂ ಕೇಳಿ ಆನಂದಿಸಿದನು. ಯುದ್ಧವಿಶಾರದನಾದ ರಾವಣಿಯು ಧನುಸ್ಸನ್ನೂ ತೀಕ್ಷ್ಣಾಗ್ರಗಳುಳ್ಳ

* ದಕ್ಷಸುತಾಃ = ದೇವತೆಗಳು. ವಿಷ್ಣುಪುರಾಣದಲ್ಲಿ ದಕ್ಷನು ದೇವತೆಗಳನ್ನೂ ಸೃಷ್ಟಿಸಿದನೆಂದಿದೆ. ಮನಸಾ ತ್ವೇವ ಭೂತಾನಿ ಪೂರ್ವಂ ದಕ್ಷೋಽಸೃಜತ್ತದಾ । ದೇವಾನೃಷೀನ್ಸಗನ್ಧರ್ವಾನುರಗಾನ್ಪಕ್ಷಿಣಸ್ತಥಾ ॥

ಬಾಣಗಳನ್ನೂ ಹಿಡಿದುಕೊಂಡು ಹನುಮಂತನಿಗೆ ಅಭಿಮುಖವಾಗಿ ಹೋದನು. ಹೀಗೆ ರಾವಣಿಯು ಧನುಷ್ಪಾಣಿಯಾಗಿ ಸಂತಸದಿಂದ ಯುದ್ಧಕ್ಕೆ ಹೋಗುತ್ತಿರಲು ಎಲ್ಲ ದಿಕ್ಕುಗಳೂ ಕಲುಷಿತವಾದುವು. ಭಯಂಕರವಾದ ಮೃಗಗಳು ವಿಕಾರವಾಗಿ ಕೂಗಿಕೊಂಡುವು. ಯುದ್ಧವು ನಡೆಯಲಿದ್ದ ಸ್ಥಳಕ್ಕೆ ನಾಗ-ಯಕ್ಷರೂ, ಮಹರ್ಷಿಗಳೂ, ಸಂಚಾರಿಗಳಾದ ಸಿದ್ಧರೂ ಆಗಮಿಸಿದರು. ಪಕ್ಷಿಗಳು ಹೆಚ್ಚಿನ ಸಂತೋಷದಿಂದ ಆಕಾಶವನ್ನಾವರಿಸಿಕೊಂಡು ಗಟ್ಟಿಯಾಗಿ ಧ್ವನಿಮಾಡುತ್ತಿದ್ದುವು. ರಥದಲ್ಲಿ ಕುಳಿತು ವೇಗವಾಗಿ ತನ್ನ ಕಡೆಗೆ ಬರುತ್ತಿದ್ದ ಇಂದ್ರಧ್ವಜನಾದ ಇಂದ್ರಜಿತುವನ್ನು ಕಂಡು ವೇಗವಂತನಾದ ಕಪೀಶ್ವರನು ಗಟ್ಟಿಯಾಗಿ ಗರ್ಜನೆಮಾಡುತ್ತಾ ಎತ್ತರವಾಗಿ ಬೆಳೆದು ನಿಂತನು. ಚಿತ್ರಧನುಸ್ಸನ್ನು ಹಿಡಿದಿದ್ದ ಇಂದ್ರಜಿತುವು ಆರ್ಭಟಿಸುವ ಸಿಡಿಲಿನ ಧ್ವನಿಯಂತೆ ಧನುಸ್ಸನ್ನು ಟಂಕಾರಮಾಡಿದನು. ಅತ್ಯಂತತೀಕ್ಷ್ಣವಾದ ವೇಗವುಳ್ಳ, ಮಹಾಬಲಿಷ್ಠರಾದ, ಯುದ್ಧದಲ್ಲಿ ಭಯರಹಿತರಾಗಿದ್ದ ವಾನರ-ರಾಕ್ಷಸರು ದೇವೇಂದ್ರ-ರಾಕ್ಷಸೇಂದ್ರರಂತೆ ಬದ್ಧವೈರಿಗಳಾಗಿ ಪರಸ್ಪರವಾಗಿ ಸಂಘರ್ಷಿಸಿದರು. ಎತ್ತರವಾಗಿ ಬೆಳೆದು ನಿಂತಿದ್ದ ಹನುಮಂತನು ತಂದೆಯಾದ ವಾಯುವಿನ ಮಾರ್ಗದಲ್ಲಿ ಸಂಚರಿಸುತ್ತಾ–ವೀರನಾದ, ಮಹಾರಥನಾದ, ಧನುಷ್ಪಾಣಿಯಾದ, ಯುದ್ಧಸಮ್ಮತನಾದ ಇಂದ್ರಜಿತುವಿನ ಬಾಣಗಳ ವೇಗವನ್ನು ತಡೆದು ನಿಲ್ಲಿಸಿದನು. ಶತ್ರುವೀರರನ್ನು ಸಂಹರಿಸುವ ಸಾಮರ್ಥ್ಯದಿಂದ ಕೂಡಿದ್ದ ವೀರನಾದ ಇಂದ್ರಜಿತುವು ಚೆನ್ನಾಗಿ ಬಗ್ಗಿದ್ದ ಬಾಣಗಳಿಂದ ಹನುಮಂತನನ್ನು ಪ್ರಹರಿಸಿದನು.

ಆ ಬಾಣಗಳು ವಜ್ರಾಯುಧದ ವೇಗಕ್ಕೆ ಸಮಾನವಾದ ವೇಗವಾಗಿದ್ದುವು. ಸುಂದರವಾದ ರೆಕ್ಕೆಗಳಿಂದ ಕೂಡಿದ್ದುವು. ಅವುಗಳ ಮೂಲಭಾಗವು ಸುವರ್ಣದಿಂದ ಚಿತ್ರಿತವಾಗಿದ್ದಿತು. ಬಾಣಗಳಲ್ಲಿ ಉದ್ದವಾಗಿಯೂ ಮೊನಚಾಗಿಯೂ ಇದ್ದ ಮುಳ್ಳುಗಳಿದ್ದುವು. ರಥದ ಗಡ-ಗಡಾ ಶಬ್ದವನ್ನೂ, ಇಂದ್ರಜಿತುವಿನ ಕಡೆಯ ಸೈನಿಕರು ಮಾಡುತ್ತಿದ್ದ ಮೃದಂಗ-ಭೇರೀ-ನಗಾರಿಗಳ ಧ್ವನಿಯನ್ನೂ, ಇಂದ್ರಜಿತುವು ಧನುಸ್ಸನ್ನು ಸೆಳೆಯುತ್ತಿದ್ದಾಗ ಉಂಟಾಗುತ್ತಿದ್ದ ಶಬ್ದವನ್ನೂ ಕೇಳಿ ಹನುಮಂತನು ಪುನಃ ಮೇಲಕ್ಕೆ ಹಾರಿದನು. ಲಕ್ಷ್ಯಭೇದನದಲ್ಲಿ ನಿಪುಣನಾದ ರಾವಣಿಯ ಹಲವಾರು ಗುರಿಗಳನ್ನು ವಿಫಲ

ಗೊಳಿಸುತ್ತಾ ಅವನು ಪ್ರಯೋಗಿಸುತ್ತಿದ್ದ ಬಾಣಗಳ ಮಧ್ಯದಲ್ಲಿಯೇ ಸಂಚರಿಸುತ್ತಿದ್ದನು. ಕೆಲವೊಮ್ಮೆ ಇಂದ್ರಜಿತುವು ಬಿಡುತ್ತಿದ್ದ ಬಾಣಗಳಿಗೆ ಎದುರಾಗಿಯೇ ನಿಂತಿರುತ್ತಿದ್ದನು. ಬಾಣಗಳ ಲಕ್ಷ್ಯಕ್ಕೆ ಗುರಿಯಾದನೆಂದು ರಾವಣಿಯು ಭಾವಿಸುವಷ್ಟರಲ್ಲಿಯೇ ಮಾರುತಿಯು ತನ್ನೆರಡು ಕೈಗಳನ್ನೂ ಮುಂದಕ್ಕೆ ಚಾಚಿ ಆಕಾಶಕ್ಕೆ ಹಾರಿಬಿಡುತ್ತಿದ್ದನು. ವೇಗವಂತರಾದ, ಯುದ್ಧಪ್ರಕ್ರಿಯೆಗಳಲ್ಲಿ ವಿಶಾರದರಾದ ವಾನರ-ರಾಕ್ಷಸರಿಬ್ಬರೂ ಎಲ್ಲ ಪ್ರಾಣಿ ಗಳ ಮನಸ್ಸುಗಳನ್ನೂ ಸೆಳೆಯುವ, ಅದ್ಭುತವಾಗಿ ಮತ್ತು ಉತ್ತಮೋತ್ತಮ ವಾಗಿ ಯುದ್ಧವನ್ನು ಮಾಡುತ್ತಿದ್ದರು.

ಇಂದ್ರಜಿತುವಿಗೆ ಹನುಮಂತನನ್ನು ಹೇಗೆ ಪ್ರಹರಿಸಬೇಕೆನ್ನುವುದೇ ತಿಳಿಯದಾಯಿತು. ಹಾಗೆಯೇ ಹನುಮಂತನಿಗೂ ಇಂದ್ರಜಿತುವನ್ನು ಹೇಗೆ ಭೂಮಿಗೆ ಬೀಳಿಸಬೇಕೆಂಬುದರ ಬಗೆಗೆ ಅರಿವುಂಟಾಗಲಿಲ್ಲ. ಚಲನ-ವಲನ ಗಳಲ್ಲಿ ನ್ಯೂನತೆಯನ್ನು ಕಂಡುಹಿಡಿದು ಪ್ರಹರಿಸಲು ಇಬ್ಬರಿಗೂ ಸಾಧ್ಯವಾಗ ಲಿಲ್ಲ. ದೇವಸಮಾನಪರಾಕ್ರಮಿಗಳಾದ ಇಬ್ಬರೂ ಯುದ್ಧಮಾಡುತ್ತಿದ್ದು ಒಬ್ಬರು ಮತ್ತೊಬ್ಬರಿಗೆ ಸಹಿಸಿಕೊಳ್ಳಲು ಅಸಾಧ್ಯರಾಗಿ ಕಾಣುತ್ತಿದ್ದರು. ಅಮೋಘವಾದ ಬಾಣಗಳು ಅನುಸ್ಯೂತವಾಗಿ ಇಂದ್ರಜಿತುವಿನ ಧನುಸ್ಸಿನಿಂದ ಹೊರಬರುತ್ತಿದ್ದರೂ ಲಕ್ಷ್ಯಭೂತನಾದ ಹನುಮಂತನನ್ನು ಭೇದಿಸಲಾಗಲಿಲ್ಲ. ಲಕ್ಷ್ಯವನ್ನು ಸಾಧಿಸುವುದರಲ್ಲಿ ಏಕಾಗ್ರಚಿತ್ತನಾಗಿದ್ದ ಮಹಾತ್ಮನಾದ ಇಂದ್ರಜಿತುವು ಚಿಂತಿಸತೊಡಗಿದನು. ಹನುಮಂತನು ಅವಧ್ಯನೆಂಬುದನ್ನು ಮನಗಂಡು ಅವನ ಉಪದ್ರವವನ್ನು ತಡೆಯುವ ಸಲುವಾಗಿ ಅವನನ್ನು ಬಂಧಿಸುವುದು ಹೇಗೆಂಬುದರ ಬಗೆಗೆ ವಿಚಾರಮಾಡತೊಡಗಿದನು. ಸ್ವಲ್ಪ ಹೊತ್ತು ವಿಚಾರಮಾಡಿದ ಬಳಿಕ ಅಸ್ತ್ರವಿದರಲ್ಲಿ ಶ್ರೇಷ್ಠನಾದ, ಮಹಾತೇಜಸ್ವಿ ಯಾದ, ವೀರನಾದ ಇಂದ್ರಜಿತುವು ಹನುಮಂತನನ್ನು ಅನುಲಕ್ಷಿಸಿ ಬ್ರಹ್ಮಾಸ್ತ್ರ ವನ್ನು ಅನುಸಂಧಾನಮಾಡಿದನು. ಅಸ್ತ್ರಗಳ ರಹಸ್ಯವನ್ನು ತಿಳಿದಿದ್ದ ಇಂದ್ರ ಜಿತುವು ಮಹಾಬಾಹುವಾದ ಹನುಮಂತನು ಅವಧ್ಯನೆಂಬುದನ್ನು ನಿರ್ಧರಿಸಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಅವನನ್ನು ಬಂಧಿಸಿದನು. ಬ್ರಹ್ಮಾಸ್ತ್ರದಿಂದ ಬಂಧಿಸಲ್ಪಟ್ಟ ಹನುಮಂತನು ನಿಶ್ಚೇಷ್ಟನಾಗಿ ಭೂಮಿಯ ಮೇಲೆ ಬಿದ್ದನು. ಮಾರುತಿಗೆ ತಾನು ಬ್ರಹ್ಮಾಸ್ತ್ರದಿಂದ ಬಂಧಿಸಲ್ಪಟ್ಟಿರುವೆನೆಂಬ ಅರಿವಾಯಿತು.

ಪ್ರಭುವಾದ ಚತುರ್ಮುಖನ ಪ್ರಭಾವದಿಂದ ಅವನ ಬಲವು ಕುಗ್ಗಿದ್ದಿತು. ಬ್ರಹ್ಮಾಸ್ತ್ರವು ತನ್ನ ಮೇಲೆ ಮುಹೂರ್ತಕಾಲ ಪರಿಣಾಮವನ್ನುಂಟುಮಾಡುವುದೆಂದು ಚತುರ್ಮುಖನು ಅನುಗ್ರಹಿಸಿದ್ದುದನ್ನು ಮಾರುತಿಯು ಸ್ಮರಣೆಗೆ ತಂದುಕೊಂಡನು. ಸ್ವಾಯಂಭುವಮಂತ್ರಗಳಿಂದ ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸಿ ಇಂದ್ರಜಿತುವು ತನ್ನ ಮೇಲೆ ಪ್ರಯೋಗಿಸಿರುವನೆಂಬುದನ್ನು ತಿಳಿದು ಬ್ರಹ್ಮನು ತನಗಿತ್ತಿದ್ದ ವರದ ವಿಷಯವಾಗಿ ಚಿಂತಿಸಿದನು :

**ನ ಮೇಽಸ್ತ್ರಬನ್ಧಸ್ಯ ಚ ಶಕ್ತಿರಸ್ತಿ**
**ವಿಮೋಕ್ಷಣೇ ಲೋಕಗುರೋಃ ಪ್ರಭಾವಾತ್ ।**
**ಇತ್ಯೇವ ಮತ್ವಾ ವಿಹಿತೋಽಸ್ತ್ರಬನ್ಧೋ**
**ಮಯಾತ್ಮಯೋನೇರನುವರ್ತಿತವ್ಯಃ ॥೪೧॥**

"ಲೋಕಗುರುವಾದ ಚತುರ್ಮುಖನ ಪ್ರಭಾವವಿರುವ ಈ ಅಸ್ತ್ರದ ಬಂಧನವನ್ನು ಬಿಡಿಸಿಕೊಳ್ಳಲು ನಾನು ಶಕ್ತನಲ್ಲ. ಆದುದರಿಂದ ಆತ್ಮಯೋನಿಯಾದ ಬ್ರಹ್ಮನ ಅಸ್ತ್ರಬಂಧನಕ್ಕೊಳಪಟ್ಟು ನಾನು ನಡೆದುಕೊಳ್ಳಬೇಕು."

ಹೀಗೆ ಕಪೀಶ್ವರನು ಅಸ್ತ್ರದ ಶಕ್ತಿಯನ್ನೂ, ಪಿತಾಮಹನು ಹಿಂದೆ ಅನುಗ್ರಹಮಾಡಿರುವುದನ್ನೂ, ಅಸ್ತ್ರದಿಂದ ಬಿಡಿಸಿಕೊಳ್ಳಲು ತನಗಿರುವ ಶಕ್ತಿಯನ್ನೂ ಸಮಾಲೋಚಿಸಿ ಪಿತಾಮಹನ ಆಜ್ಞೆಯಂತೆ ಮುಹೂರ್ತ ಕಾಲದವರೆಗೆ ಬ್ರಹ್ಮಾಸ್ತ್ರದ ಅಧೀನಕ್ಕೊಳಪಟ್ಟಿದ್ದನು. ಬ್ರಹ್ಮಾಸ್ತ್ರದಿಂದ ಬಂಧಿತನಾಗಿದ್ದರೂ ಆಗಿನ ತನ್ನ ಸ್ಥಿತಿಯನ್ನು ಗಮನಿಸಿ ಅಚ್ಚರಿಗೊಂಡು ಉದ್ಗರಿಸಿದನು:

**ಅಸ್ತ್ರೇಣಾಪಿ ಹಿ ಬದ್ಧಸ್ಯ ಭಯಂ ಮಮ ನ ಜಾಯತೇ ।**
**ಪಿತಾಮಹಮಹೇನ್ದ್ರಾಭ್ಯಾಂ ರಕ್ಷಿತಸ್ಯಾನಿಲೇನ ಚ ॥೪೩॥**

"ಪಿತಾಮಹ-ಮಹೇಂದ್ರರಿಂದಲೂ ಮತ್ತು ನನ್ನ ತಂದೆಯಾದ ವಾಯುವಿನಿಂದಲೂ ಸದಾ ರಕ್ಷಿಸಲ್ಪಡುತ್ತಿರುವ ನನಗೆ ಬ್ರಹ್ಮಾಸ್ತ್ರದಿಂದಲೇ ಬಂಧಿತನಾಗಿದ್ದರೂ ಸ್ವಲ್ಪವೂ ಭಯವೇ ಆಗುತ್ತಿಲ್ಲ.

ರಾಕ್ಷಸರು ನನ್ನನ್ನು ಬಂಧಿಸಿ ಸೆಳೆದುಕೊಂಡು ಹೋಗುತ್ತಿರುವುದೂ ಒಂದು ರೀತಿಯಲ್ಲಿ ಒಳ್ಳೆಯದೆಂದೇ ನಾನೀಗ ಭಾವಿಸುತ್ತಿದ್ದೇನೆ. ಇದರಿಂದ

ನನಗೆ ರಾಕ್ಷಸೇಂದ್ರನೊಡನೆ ಮಾತನಾಡಲು ಒಳ್ಳೆಯ ಅವಕಾಶವು ಸಿಕ್ಕಿದಂತಾಗುವುದು. ಆದುದರಿಂದ ರಾಕ್ಷಸರು ನನ್ನನ್ನು ಕರೆದೊಯ್ಯಲಿ."



ಶತ್ರುವೀರಹಂತಕನಾದ, ಎಲ್ಲ ಕಾರ್ಯಗಳನ್ನೂ ಚೆನ್ನಾಗಿ ಯೋಚಿಸಿ ಮಾಡುವ ಸ್ವಭಾವವುಳ್ಳ ಹನುಮಂತನು ಹೀಗೆ ನಿಶ್ಚಯಿಸಿ ಬಿಡಿಸಿಕೊಳ್ಳಲು ಮಾಡಬೇಕಾಗಿದ್ದ ಚೇಷ್ಟೆಗಳನ್ನೆಲ್ಲಾ ಸಂಪೂರ್ಣವಾಗಿ ನಿಲ್ಲಿಸಿಬಿಟ್ಟನು.

ಶತ್ರುಗಳು ಅವನನ್ನು ಬಲಾತ್ಕಾರಪೂರ್ವಕವಾಗಿ ಸೆಳೆದೊಯ್ಯುತ್ತಾ ಭಯಪಡಿಸುತ್ತಿದ್ದಾಗ ಹನುಮಂತನು ಗಟ್ಟಿಯಾಗಿ ಕಿರುಚಿಕೊಳ್ಳುತ್ತಿದ್ದನು. ತಾವೆಳೆದ ಕಡೆಗೆ ಹನುಮಂತನು ಬರುತ್ತಿರುವುದನ್ನೂ ಅವನಿಂದ ಯಾವ ವಿಧವಾದ ಪ್ರತಿಕ್ರಿಯೆಯೂ ಇಲ್ಲದಿರುವುದನ್ನೂ ಗಮನಿಸಿದ ರಾಕ್ಷಸರು

ಅವನನ್ನು ಸೆಣಬಿನ ಹಗ್ಗಗಳಿಂದಲೂ ನಾರುಗಳಿಂದಲೂ ಬಲವಾಗಿ ಕಟ್ಟಿ ಹಾಕಿದರು. ಶತ್ರುಗಳು ತನ್ನನ್ನು ಬಂಧಿಸಿ ಬಲಾತ್ಕಾರಪೂರ್ವಕವಾಗಿ ಸೆಳೆದೊಯ್ಯುತ್ತಿದ್ದುದು ಹನುಮಂತನಿಗೆ ಇಷ್ಟವೇ ಆಯಿತು. ಏಕೆಂದರೆ : ರಾಕ್ಷಸೇಂದ್ರನಾದ ರಾವಣನು ಕುತೂಹಲದಿಂದಾದರೂ ತನ್ನನ್ನು ನೋಡಲು ಪ್ರಯತ್ನಿಸುವನೆಂಬುದು ಹನುಮಂತನ ನಿಶ್ಚಯವಾಗಿದ್ದಿತು. ರಾಕ್ಷಸರು ಹಗ್ಗಗಳಿಂದಲೂ ನಾರುಗಳಿಂದಲೂ ಬಿಗಿದೊಡನೆಯೇ ಮಾರುತಿಯು ಬ್ರಹ್ಮಾಸ್ತ್ರದಿಂದ ಬಿಡುಗಡೆ ಹೊಂದಿದನು. ಏಕೆಂದರೆ : **ಅಸ್ತ್ರಬನ್ಧಃ ಸ ಚಾನ್ಯಂ ಹಿ ನ ಬನ್ಧಮನುವರ್ತತೇ ||** ಬ್ರಹ್ಮಾಸ್ತ್ರದ ಬಂಧನವು ಇತರ ಯಾವುದೇ ಬಂಧನಗಳನ್ನೂ ಆಶ್ರಯಿಸಿಕೊಳ್ಳುವುದಿಲ್ಲ. ಅನಂತರ ವೀರನಾದ ಇಂದ್ರಜಿತುವು, ತನ್ನ ಅನುಯಾಯಿಗಳು ಹನುಮಂತನನ್ನು ಹಗ್ಗದಿಂದ ಕಟ್ಟಿದ ಬಗೆಗೆ ಅದರ ಆಗು-ಹೋಗುಗಳನ್ನು ಕುರಿತು ವಿಚಾರಮಾಡಿದನು. ಅದರ ಪರಿಣಾಮವಾಗಿ ಹನುಮಂತನು ಬ್ರಹ್ಮಾಸ್ತ್ರದ ಬಂಧನದಿಂದ ವಿಮುಕ್ತನಾಗಿರುವನೆಂಬ ವಿಷಯವೂ ಅವನಿಗೆ ತಿಳಿಯಿತು. ಆದರೂ ಅಸ್ತ್ರದಿಂದ ಬಂಧಿಸಲ್ಪಟ್ಟವನಂತೆಯೇ ಹನುಮಂತನು ರಾಕ್ಷಸರನ್ನು ಅನುಸರಿಸಿ ಹೋಗುತ್ತಿದ್ದನು. ಅದು ಇಂದ್ರಜಿತುವಿನ ಚಿಂತೆಗೆ ಕಾರಣವಾಯಿತು.

**ಅಹೋ ಮಹತ್ಕರ್ಮ ಕೃತಂ ನಿರರ್ಥಂ**
**ನ ರಾಕ್ಷಸೈರ್ಮನ್ತ್ರಗತಿರ್ವಿಮೃಷ್ಟಾ ।**
**ಪುನಶ್ಚ ನಾಸ್ತ್ರೇ ವಿಹತೇಽಸ್ತ್ರಮನ್ಯ-**
**ತ್ಪ್ರವರ್ತತೇ ಸಂಶಯಿತಾಃ ಸ್ಮ ಸರ್ವೇ ||೫೦||**

"ಅಯ್ಯೋ! ಮಹಾಕಾರ್ಯವೂ ನಿರರ್ಥಕವಾಗಿಹೋಯಿತು. ರಾಕ್ಷಸರು ಬ್ರಹ್ಮಾಸ್ತ್ರಮಂತ್ರದ ರೀತಿ-ನೀತಿಗಳನ್ನು ವಿಮರ್ಶೆಮಾಡಲಿಲ್ಲ. ಬ್ರಹ್ಮಾಸ್ತ್ರವು ಹಿಂದಿರುಗಿದ ನಂತರ ಪುನಃ ಬೇರೆ ಯಾವ ಅಸ್ತ್ರವನ್ನೂ ಅಭಿಮಂತ್ರಿಸಿ ಬಿಡಲೂ ಸಾಧ್ಯವಾಗುವುದಿಲ್ಲ. ಆದುದರಿಂದ ಈಗ ನಾವೆಲ್ಲರೂ ಮಹಾಸಂಕಟಕ್ಕೆ ಈಡಾಗಿದ್ದೇವೆ."

ಇಂದ್ರಜಿತುವು ಹೀಗೆ ಚಿಂತಿಸುತ್ತಿದ್ದರೂ ಬ್ರಹ್ಮಾಸ್ತ್ರದಿಂದ ಮುಕ್ತನಾಗಿದ್ದ ಹನುಮಂತನು ತಾನು ಮುಕ್ತನಾಗಿರುವೆನೆಂಬುದನ್ನು ತೋರ್ಪಡಿಸಿಕೊಳ್ಳಲಿಲ್ಲ. ರಾಕ್ಷಸರು ಅವನನ್ನು ಇಲ್ಲಿಂದಲ್ಲಿಗೆ ಸೆಳೆದಾಡುತ್ತಲೇ ಇದ್ದರು.

ಹಗ್ಗಗಳಿಂದ ಬಿಗಿದು ಪೀಡಿಸುತ್ತಲೂ ಇದ್ದರು. ದೊಣ್ಣೆಗಳಿಂದಲೂ ಮುಷ್ಟಿಗಳಿಂದಲೂ ಪ್ರಹರಿಸುತ್ತಾ ರಾಕ್ಷಸೇಂದ್ರನಾದ ರಾವಣನ ಬಳಿಗೆ ಸೆಳೆದುಕೊಂಡು ಹೋದರು. ಬಳಿಕ ಇಂದ್ರಜಿತುವು ಬ್ರಹ್ಮಾಸ್ತ್ರದಿಂದ ಮುಕ್ತನಾಗಿದ್ದ, ಹಗ್ಗಗಳಿಂದ ಬಿಗಿಯಲ್ಪಟ್ಟಿದ್ದ, ಮಹಾಬಲನಾದ, ಕಪಿಶ್ರೇಷ್ಠನಾದ ಹನುಮಂತನನ್ನು ಪರಿವಾರದೊಡನೆ ಕುಳಿತಿದ್ದ ತನ್ನ ತಂದೆಗೆ ತೋರಿಸಿದನು.

ಮದಿಸಿದ ಆನೆಯಂತಿದ್ದ, ಹಗ್ಗಗಳಿಂದ ಬಂಧಿಸಲ್ಪಟ್ಟಿದ್ದ ಕಪಿಶ್ರೇಷ್ಠನಾದ ಹನುಮಂತನು ಬಂದಿರುವುದನ್ನು ರಾಕ್ಷಸಸೇವಕರು ರಾವಣೇಶ್ವರನಿಗೆ ನಿವೇದಿಸಿದರು.

**ಕೋಽಯಂ ಕಸ್ಯ ಕುತೋ ವಾತ್ರ**
**ಕಿಂ ಕಾರ್ಯಂ ಕೋ ವ್ಯಪಾಶ್ರಯಃ ॥೫೫॥**

'ಇವನಾರು? ಎಲ್ಲಿಂದ ಬಂದಿರುವನು? ಇಲ್ಲಿ ಇವನಿಗೇನು ಕೆಲಸವಿದೆ? ಇವನಿಗೆ ಆಶ್ರಯದಾತರು ಯಾರು?'–ಇವೇ ಮುಂತಾಗಿ ಅಲ್ಲಿ ನೆರೆದಿದ್ದ ರಾಕ್ಷಸರು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದರು.

ಹನುಮಂತನನ್ನು ನೋಡಿ ಕ್ರುದ್ಧರಾದ ಕೆಲವರು ರಾಕ್ಷಸರು–'ಈ ಕಪಿಯನ್ನು ಕೊಂದುಹಾಕಿರಿ ; ಸುಟ್ಟು ಹಾಕಿರಿ ; ತಿಂದು ಹಾಕಿರಿ'–ಎಂದು ಹೇಳಿಕೊಂಡು ಕೂಗಾಡುತ್ತಿದ್ದರು. ಮಾರ್ಗವನ್ನು ದಾಟಿ ಮುಂದೆ ಹೋದನಂತರ ಹನುಮಂತನು ರಾಕ್ಷಸೇಶ್ವರನ ಪದತಲದಲ್ಲಿ ಕುಳಿತಿದ್ದ ವೃದ್ಧರಾದ ಪರಿಚಾರಕರನ್ನೂ–ಮಹಾರತ್ನಗಳಿಂದ ವಿಭೂಷಿತವಾಗಿದ್ದ ಸಭಾಭವನವನ್ನೂ ನೋಡಿದನು.

ಮಹಾತೇಜಸ್ವಿಯಾದ ರಾವಣನು ವಿಕಾರವಾದ ಆಕಾರಗಳನ್ನು ಹೊಂದಿದ್ದ ರಾಕ್ಷಸರಿಂದ ಸೆಳೆದಾಡಲ್ಪಡುತ್ತಿದ್ದ ಕಪಿಶ್ರೇಷ್ಠನಾದ ಹನುಮಂತನನ್ನು ನೋಡಿದನು. ಹನುಮಂತನೂ ತೇಜಸ್ಸಿನಿಂದಲೂ ಬಲದಿಂದಲೂ ಸಂಪನ್ನನಾಗಿದ್ದ ಸೂರ್ಯನಂತೆಯೇ ಶತ್ರುಗಳಿಗೆ ತಾಪದಾಯಕನಾಗಿದ್ದ ರಾಕ್ಷಸೇಶ್ವರನನ್ನು ನೋಡಿದನು.

ಕ್ರುದ್ಧನಾಗಿದ್ದ ರಾಕ್ಷಸನ ಕಣ್ಣುಗಳು ಕೆಂಡದಂತೆ ಕೆಂಪಾಗಿ ಸುತ್ತುತ್ತಿದ್ದುವು. ಕಪಿಯನ್ನೊಮ್ಮೆ ನೋಡಿ ರಾವಣನು ತನ್ನ ಸುತ್ತಲೂ

ಕುಳಿತಿದ್ದ, ಸತ್ಕುಲಪ್ರಸೂತರಾದ, ಶೀಲವಂತರಾದ, ವೃದ್ಧರಾದ ಮಂತ್ರಿ ಮುಖ್ಯರಿಗೆ ಹನುಮಂತನನ್ನು ಯಥೋಚಿತವಾಗಿ ಪ್ರಶ್ನಿಸುವಂತೆ ಆದೇಶ ವನ್ನಿತ್ತನು. ರಾವಣನ ಆಜ್ಞೆಯಂತೆ ಮಂತ್ರಿಮಹೋದಯರು ಹನುಮಂತ ನನ್ನು ಅನುಕ್ರಮವಾಗಿ ಪ್ರಶ್ನಿಸಲು ಉಪಕ್ರಮಿಸಿದರು. 'ನೀನಾರು? ಇಲ್ಲಿಗೇಕೆ ಬಂದೆ? ಯಾವ ಕಾರ್ಯವನ್ನು ಸಾಧಿಸಲು ಬಂದಿರುವೆ?' ಅವರ ಆ ಪ್ರಶ್ನೆಗಳಿಗೆ ಹನುಮಂತನು–**'ದೂತೋऽಹಂ ಹರೀಶ್ವರಸ್ಯ ಸಕಾಶಾ-ದಾಗತೋऽಸ್ಮಿ ।'** 'ಸುಗ್ರೀವನ ಬಳಿಯಿಂದ ನಾನಿಲ್ಲಿಗೆ ದೂತನಾಗಿ ಆಗಮಿ ಸಿದ್ದೇನೆ'–ಎಂದು ಉತ್ತರಿಸಿದನು.

ಳಲನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೪೯ನೆಯ ಸರ್ಗ

## ರಾವಣನ ಪ್ರಭೆಯಿಂದ ಕೂಡಿದ ಮುಖವನ್ನು ನೋಡಿ ಹನುಮಂತನು ನಾನಾಪ್ರಕಾರವಾಗಿ ಯೋಚಿಸಿದುದು

**ತತಃ ಸ ಕರ್ಮಣಾ ತಸ್ಯ ವಿಸ್ಮಿತೋ ಭೀಮವಿಕ್ರಮಃ ।**
**ಹನುಮಾನ್ಕ್ರೋಧತಾಮ್ರಾಕ್ಷೋ ರಕ್ಷೋಧಿಪಮವೈಕ್ಷತ ॥೧॥**

ಭಯಂಕರಪರಾಕ್ರಮಿಯಾದ ಹನುಮಂತನು ರಾವಣನ ಪರಾಕ್ರಮದ ಕಾರ್ಯವನ್ನು ಯೋಚಿಸಿ ವಿಸ್ಮಿತನೂ ಅಂತೆಯೇ ಅವನ ಕುತ್ಸಿತವಾದ ಸೀತಾಪಹರಣದ ಕಾರ್ಯವನ್ನು ನೆನೆದು ಕ್ರುದ್ಧನೂ ಆದನು. ಕೆಂಪಾದ ಕಣ್ಣು ಗಳಿಂದ ಕೂಡಿದ್ದ ಹನುಮಂತನು ರಾವಣನನ್ನು ನೋಡುತ್ತಲೇ ಇದ್ದನು.

ಆ ಸಮಯದಲ್ಲಿ ರಾವಣನು ಅತಿಶಯವಾದ ಕಾಂತಿಯಿಂದ ಬೆಳಗು ತ್ತಿದ್ದನು. ಮಹಾಮೌಲ್ಯದ, ಸುವರ್ಣಮಯವಾದ, ಮುತ್ತುಗಳ ಗೊಂಚಲು ಗಳಿಂದ ಸಮಾವೃತವಾಗಿದ್ದ ಕಿರೀಟವನ್ನು ಧರಿಸಿದ್ದನು. ಸುವರ್ಣಮಯವಾದ ಆಭರಣಗಳನ್ನು ತೊಟ್ಟಿದ್ದನು. ಆ ಆಭರಣಗಳಲ್ಲಿ ಕೆಲವು ವಜ್ರಗಳಿಂದಲೂ, ಕೆಲವು ಮಹಾಮೌಲ್ಯದ ಮಣಿಗಳಿಂದಲೂ, ಕೆಲವು ಬರೀ ಚಿನ್ನದಿಂದಲೂ ಮಾಡಲ್ಪಟ್ಟಿದ್ದುವು. ಎಲ್ಲವೂ ಮನಸ್ಸಿನ ಸಂಕಲ್ಪಮಾತ್ರದಿಂದಲೇ ನಿರ್ಮಿಸ ಲ್ಪಟ್ಟಿವೆಯೋ ಎಂಬಂತೆ ಅತ್ಯಂತಸುಂದರವಾಗಿ ಕಾಣುತ್ತಿದ್ದುವು. ರಾವಣನು

ಬಹುಮೌಲ್ಯದ ದುಕೂಲವನ್ನುಟ್ಟಿದ್ದನು. ರಕ್ತಚಂದನವನ್ನು ಪೂಸಿಕೊಂಡಿದ್ದನು. ವಿಚಿತ್ರವಾದ, ವಿಧ-ವಿಧವಾದ, ಆನಂದದಾಯಕವಾದ ಕಸ್ತೂರೀ-ಗೋರೋಚನಾದಿ ಸುಗಂಧದ್ರವ್ಯಗಳಿಂದಲೂ ಸುವಾಸಿತನಾಗಿದ್ದನು. ಭಯಂಕರವಾಗಿ ಕಾಣುತ್ತಿದ್ದ ಸುಂದರವಾದ ಮತ್ತು ಕೆಂಪಾದ ಕಣ್ಣುಗಳಿಂದ ವಿಚಿತ್ರವಾಗಿ ಕಾಣುತ್ತಿದ್ದನು. ಅವನ ಕೋರೆದಾಡೆಗಳು ಪ್ರಕಾಶಮಾನವಾಗಿ ತೀಕ್ಷ್ಣವಾಗಿ ಹೊಳೆಯುತ್ತಿದ್ದುವು. ತುಟಿಗಳು ಜೋಲಾಡುತ್ತಿದ್ದುವು. ಬಗೆ-ಬಗೆಯ ದುಷ್ಟಮೃಗಗಳಿಂದ ವ್ಯಾಪ್ತವಾದ ಶಿಖರಗಳಿಂದ ಕೂಡಿರುವ ಮಂದರಪರ್ವತದಂತೆ ಮಹಾತೇಜಸ್ವಿಯಾದ ರಾವಣನು ಹತ್ತು ತಲೆಗಳಿಂದ ಪ್ರಕಾಶಿಸುತ್ತಿದ್ದನು. ಅವನ ಶರೀರವು ಕಾಡಿಗೆಯ ಸಮೂಹದಂತೆ ಕಪ್ಪಾಗಿದ್ದಿತು. ವಕ್ಷಃಸ್ಥಳದಲ್ಲಿ ಹಾರವು ವಿರಾಜಿಸುತ್ತಿದ್ದಿತು. ಮುಖವು ಪೂರ್ಣಚಂದ್ರನಂತೆಯೇ ಕಾಂತಿಯುಕ್ತವಾಗಿದ್ದಿತು. ಕಪ್ಪಾದ ಶರೀರದಿಂದಲೂ ಥಳ-ಥಳಿಸುತ್ತಿದ್ದ ಹಾರದಿಂದಲೂ ಯುಕ್ತನಾಗಿದ್ದ ರಾವಣೇಶ್ವರನು ಮೋಡದ ಮಧ್ಯದಲ್ಲಿರುವ ಬಾಲಸೂರ್ಯನಂತೆಯೇ ಪ್ರಕಾಶಿಸುತ್ತಿದ್ದನು. ಅವನ ತೋಳುಗಳು ಭುಜಕೀರ್ತಿಗಳಿಂದ ಸಮಲಂಕೃತವಾಗಿದ್ದು ಉತ್ತಮವಾದ ಚಂದನದಿಂದ ಲೇಪಿತವಾಗಿದ್ದುವು. ಜಾಜ್ವಲ್ಯಮಾನವಾದ ತೋಳುಬಂದಿಗಳಿಂದ ಯುಕ್ತವಾಗಿದ್ದ ರಾವಣನ ದಪ್ಪವಾದ ತೋಳುಗಳು ಐದು ಹೆಡೆಗಳಿರುವ ಹಾವುಗಳಂತೆಯೇ ಕಾಣುತ್ತಿದ್ದುವು. ಆ ಸಮಯದಲ್ಲಿ ರಾವಣನು ಶ್ರೇಷ್ಠವಾದ ಸಿಂಹಾಸನದಲ್ಲಿ ಕುಳಿತಿದ್ದನು. ಅದು ಸ್ಫಟಿಕಮಯವಾಗಿದ್ದಿತು. ರತ್ನಗಳಿಂದ ಚಿತ್ರಿತವಾಗಿದ್ದು ಆಶ್ಚರ್ಯಕರವಾಗಿದ್ದಿತು. ಆ ಸಿಂಹಾಸನಕ್ಕೆ ಉತ್ತಮವಾದ ರತ್ನಗಂಬಳಿಯ ಮೇಲು ಹೊದ್ದಿಕೆಯಿದ್ದಿತು. ಅತಿಶಯವಾಗಿ ಅಲಂಕರಿಸಿಕೊಂಡಿದ್ದ ಪ್ರಮದೆಯರು ಚಾಮರಗಳನ್ನು ಹಿಡಿದು ರಾವಣನ ಸಮೀಪದಲ್ಲಿ ನಿಂತು ಬೀಸುತ್ತಿದ್ದರು. ಅವನ ಸುತ್ತಲೂ ರಾಜತತ್ತ್ವವನ್ನು ತಿಳಿದಿದ್ದ ದುರ್ಧರ, ಪ್ರಹಸ್ತ, ಮಹಾಪಾರ್ಶ್ವ, ನಿಕುಂಭ ಎಂಬ ನಾಲ್ವರು ಮಂತ್ರಿಗಳು ಕುಳಿತಿದ್ದರು. ಸಮಸ್ತಲೋಕವೂ ನಾಲ್ಕು ಸಮುದ್ರಗಳಿಂದ ಪರಿವೃತವಾಗಿರುವಂತೆ–ನಾಲ್ವರು ಮಂತ್ರಿಗಳಿಂದ ಪರಿವೃತನಾಗಿ ಕುಳಿತಿದ್ದ ಬಲದರ್ಪಿತನಾಗಿದ್ದ ರಾವಣನು ಸಿಂಹಾಸನದಲ್ಲಿ ಕುಳಿತಿರುವುದನ್ನು ಹನುಮಂತನು ನೋಡಿದನು. ಇಂದ್ರನನ್ನನುಸರಿಸಿ

ದೇವತೆಗಳಿರುವಂತೆ ರಾವಣನನ್ನನುಸರಿಸಿ ಮಂತ್ರತತ್ತ್ವಜ್ಞರಾದ ಒಳ್ಳೆಯ ಮನಸ್ಸಿನಿಂದ ಕೂಡಿರುವ ಮಂತ್ರಿಗಳು ಕುಳಿತಿದ್ದರು. ಮೇರುಪರ್ವತದ ಶಿಖರದಲ್ಲಿ ದಟ್ಟವಾಗಿ ಕವಿದಿರುವ, ನೀರಿನಿಂದ ಪೂರ್ಣವಾದ ಕಾರ್ಮುಗಿಲಿನಂತೆ ಕಾಣುತ್ತಿದ್ದ ಮಹಾತೇಜಸ್ವಿಯಾದ ರಾಕ್ಷಸೇಶ್ವರನನ್ನು ಹನುಮಂತನು ನೋಡಿದನು. ಆ ಸಮಯದಲ್ಲಿ ಭಯಂಕರಪರಾಕ್ರಮಿಗಳಾದ ರಾಕ್ಷಸರು ಎಡೆಬಿಡದೇ ಬಹಳವಾಗಿ ಪೀಡಿಸುತ್ತಿದ್ದರೂ ಹನುಮಂತನು ರಾವಣೇಶ್ವರನನ್ನು ಎವೆಯಿಕ್ಕದೇ ನೋಡುತ್ತಲೇ ಇದ್ದನು. ಜಾಜ್ವಲ್ಯಮಾನನಾಗಿ ಪ್ರಕಾಶಿಸುತ್ತಿದ್ದ ರಾಕ್ಷಸೇಶ್ವರನನ್ನು ನೋಡುತ್ತಾ ಅವನ ತೇಜಸ್ಸಿನಿಂದ ವಿಮೋಹಿತನಾಗಿ ಮನಸ್ಸಿನಲ್ಲಿಯೇ ಚಿಂತಿಸಿದನು :

**ಅಹೋ ರೂಪಮಹೋ ಧೈರ್ಯಮಹೋ ಸತ್ತ್ವಮಹೋ ದ್ಯುತಿಃ ।**
**ಅಹೋ ರಾಕ್ಷಸರಾಜಸ್ಯ ಸರ್ವಲಕ್ಷಣಯುಕ್ತತಾ ॥೧೭॥**

"ಆಶ್ಚರ್ಯ! ಎಂತಹ ರೂಪವಿದು! ಎಂತಹ ಧೈರ್ಯ! ಎಂತಹ ಸತ್ತ್ವ! ಎಂತಹ ಕಾಂತಿ! ನಿಶ್ಚಯವಾಗಿಯೂ ಈ ರಾಕ್ಷಸನು ಸರ್ವಲಕ್ಷಣ ಸಂಪನ್ನನಾಗಿರುವನು.

**ಯದ್ಯಧರ್ಮೋ ನ ಬಲವಾನ್ಸ್ಯಾದಯಂ ರಾಕ್ಷಸೇಶ್ವರಃ ।**
**ಸ್ಯಾದಯಂ ಸುರಲೋಕಸ್ಯ ಸಶಕ್ರಸ್ಯಾಪಿ ರಕ್ಷಿತಾ ॥೧೮॥**

ಈ ರಾಕ್ಷಸೇಶ್ವರನಲ್ಲಿ ಅಧರ್ಮಾಚರಣೆಯು ಪ್ರಬಲವಾಗಿರದಿದ್ದರೆ ಇವನು ನಿಶ್ಚಯವಾಗಿಯೂ ದೇವೇಂದ್ರಸಹಿತವಾದ ದೇವಲೋಕವನ್ನೂ ರಕ್ಷಿಸುವ ಸಾಮರ್ಥ್ಯವನ್ನು ಹೊಂದಿರುವನು.

**ಅಸ್ಯ ಕ್ರೂರೈರ್ನೃಶಂಸೈಶ್ಚ ಕರ್ಮಭಿರ್ಲೋಕಕುತ್ಸಿತೈಃ ।**
**ತೇನ ಬಿಭ್ಯತಿ ಖಲ್ವಸ್ಮಾಲ್ಲೋಕಾಃ ಸಾಮರದಾನವಾಃ ।**
**ಅಯಂ ಹ್ಯುತ್ಸಹತೇ ಕ್ರುದ್ಧಃ ಕರ್ತುಮೇಕಾರ್ಣವಂ ಜಗತ್ ॥**

ಆದರೆ ಕ್ರೂರವಾದ, ಕುತ್ಸಿತವಾದ ಮತ್ತು ನಿರ್ದಯೆಯಿಂದ ಕೂಡಿರುವ ಇವನ ಕರ್ಮಗಳಿಂದ ಇವನಿಗೆ ದೇವ-ದಾನವರಾದಿಯಾಗಿ ಸರ್ವರೂ ಭಯಪಡುತ್ತಾರೆ. ಕ್ರುದ್ಧನಾದ ಇವನಿಗೆ ಜಗತ್ತನ್ನೆಲ್ಲಾ ಒಂದೇ ಸಮುದ್ರವನ್ನಾಗಿ ಪರಿವರ್ತಿಸಲೂ (ಮುಳುಗಿಸಿಬಿಡಲೂ) ಶಕ್ತಿಯಿದೆ."

ಮಹಾತೇಜಸ್ವಿಯಾದ ರಾಕ್ಷಸರಾಜನ ಪ್ರಭಾವವನ್ನು ನೋಡಿ ಬುದ್ಧಿ ಶಾಲಿಯಾದ ಹನುಮಂತನು ಹೀಗೆ ಚಿಂತಿಸಿದನು.

೪೯ನೆಯ ಸರ್ಗವು ಮುಗಿಯಿತು.



## ರಾವಣನು ಪ್ರಹಸ್ತನ ಮೂಲಕ ಹನುಮಂತನು ಲಂಕೆಗೆ ಬಂದುದರ ಕಾರಣವನ್ನು ಪ್ರಶ್ನಿಸಿದುದು : ತಾನು ಶ್ರೀರಾಮನ ದೂತನೆಂದು ಹನುಮಂತನು ಹೇಳಿದುದು

**ತಮುದ್ವೀಕ್ಷ್ಯ ಮಹಾಬಾಹುಃ ಪಿಙ್ಗಾಕ್ಷಂ ಪುರತಃ ಸ್ಥಿತಮ್ ।**
**ರೋಷೇಣ ಮಹತಾವಿಷ್ಟೋ ರಾವಣೋ ಲೋಕರಾವಣಃ ।**
**ಶಙ್ಕಾಹತಾತ್ಮಾ ದಧ್ಯೌ ಸ ಕಪೀನ್ದ್ರಂ ತೇಜಸಾವೃತಮ್ ॥೧॥**

ತನ್ನ ಮುಂಭಾಗದಲ್ಲಿಯೇ ನಿಂತಿದ್ದ ಕಂದುಬಣ್ಣದ ಕಣ್ಣುಗಳಿಂದ ಕೂಡಿದ್ದ ಹನುಮಂತನನ್ನು ನೋಡಿ, ಮಹಾಬಾಹುವಾದ ಲೋಕ ಭಯಂಕರನಾದ ರಾವಣನು ಕುಪಿತನಾಗಿ, ತೇಜಸ್ಸಿನಿಂದ ಆವರಿಸಲ್ಪಟ್ಟ ಕಪೀಂದ್ರನ ವಿಷಯದಲ್ಲಿ ಸಂಶಯಗೊಂಡು ಯೋಚಿಸತೊಡಗಿದನು :

"ಹಿಂದೊಮ್ಮೆ ನಾನು ಕೈಲಾಸಪರ್ವತವನ್ನು ಕದಲಿಸಿದಾಗ ನಂದಿಯನ್ನು ಕಪಿಮುಖನೆಂದು ಹಾಸ್ಯಮಾಡಿದ್ದೆನು. ಆಗ ನಂದಿಯು ಕುಪಿತನಾಗಿ 'ಕಪಿಗಳಿಂದಲೇ ನೀನು ವಿನಾಶಹೊಂದುವೆ'–ಎಂದು ಶಾಪವನ್ನಿತ್ತಿದ್ದನು. ಈಗ ಆ ನಂದಿಯೇ ತಾನಿತ್ತ ಶಾಪವನ್ನು ಸತ್ಯವನ್ನಾಗಿ ಮಾಡಲು ಕೋತಿಯ ರೂಪದಲ್ಲಿ ಬಂದಿರುವನೇ? ಅಥವಾ ಬಾಣಾಸುರನೇನಾದರೂ ಕಪಿರೂಪ ವನ್ನು ಧರಿಸಿ ಬಂದಿರುವನೇ?"

ಇವೇ ಮುಂತಾಗಿ ಯೋಚಿಸುತ್ತಿದ್ದ ಕೋಪದಿಂದ ಕೆಂಗಣ್ಣನಾಗಿದ್ದ ರಾಕ್ಷಸರಾಜನು ಅಮಾತ್ಯಶ್ರೇಷ್ಠನಾದ ಪ್ರಹಸ್ತನಿಗೆ ಸಮಯಕ್ಕೆ ಉಚಿತವಾದ ಮತ್ತು ಅನೇಕಾರ್ಥಗಳುಳ್ಳ ಮಾತನ್ನು ಹೇಳಿದನು :

**ದುರಾತ್ಮಾ ಪೃಚ್ಛ್ಯತಾಮೇಷ ಕುತಃ ಕಿಂ ವಾಸ್ಯ ಕಾರಣಮ್ ।**
**ವನಭಙ್ಗೇ ಚ ಕೋಽಸ್ಯಾರ್ಥೋ ರಾಕ್ಷಸೀನಾಂ ಚ ತರ್ಜನೇ ॥**

**ಮತ್ಪುರೀಮಪ್ರಧೃಷ್ಯಾಂ ವೈ ಗಮನೇ ಕಿಂ ಪ್ರಯೋಜನಮ್ ।**
**ಆಯೋಧನೇ ವಾ ಕಿಂ ಕಾರ್ಯಂ ಪೃಚ್ಛ್ಯತಾಮೇಷ ದುರ್ಮತಿಃ ॥**

"ಮಹಾಮಾತ್ಯನೇ! 'ನೀನು ಬಂದುದೆಲ್ಲಿಂದ? ಇಲ್ಲಿಗೆ ಬರಲು ಕಾರಣವೇನು? ಉದ್ಯಾನವನವನ್ನು ನಾಶಮಾಡಿದ್ದು ಯಾವ ಪ್ರಯೋಜನಕ್ಕಾಗಿ? ರಾಕ್ಷಸಿಯರನ್ನು ಭಯಗೊಳಿಸಿದುದೇಕೆ? ಯಾರಿಂದಲೂ ಎದುರಿಸಲು ಅಸಾಧ್ಯವಾದ ದುರ್ಭೇದ್ಯವಾದ ನನ್ನ ಪಟ್ಟಣಕ್ಕೆ ಬಂದುದೇಕೆ? ಕಿಂಕರಾದಿ ರಾಕ್ಷಸರೊಡನೆ ಯುದ್ಧಮಾಡಿದ ಉದ್ದೇಶವಾದರೂ ಏನು?' ಇವೇ ಮುಂತಾಗಿ ದುರಾತ್ಮನಾದ, ದುರ್ಮತಿಯಾದ ಈ ವಾನರನನ್ನು ಪ್ರಶ್ನಿಸು."

ರಾವಣನ ಮಾತನ್ನು ಕೇಳಿ ಪ್ರಹಸ್ತನು ವಾನರನಿಗೆ ಹೇಳಿದನು :

**ಸಮಾಶ್ವಸಿಹಿ ಭದ್ರಂ ತೇ ನ ಭೀಃ ಕಾರ್ಯಾ ತ್ವಯಾ ಕಪೇ ॥೭॥**

"ಕಪೀಶ್ವರನೇ! ನಿನಗೆ ಮಂಗಳವಾಗಲಿ. ನೀನಿಲ್ಲಿ ಭಯಗೊಳ್ಳುವ ಕಾರಣವಿಲ್ಲ. ನಮ್ಮಲ್ಲಿ ವಿಶ್ವಾಸವನ್ನಿಡು.

ನಿಜವನ್ನು ಹೇಳು. ಇಂದ್ರನಿಂದ ಕಳುಹಿಸಲ್ಪಟ್ಟು ನೀನಿಲ್ಲಿಗೆ ಬಂದಿರುವೆಯಾ? ಭಯಪಡುವ ಕಾರಣವಿಲ್ಲ. ನಿಜಹೇಳಿದರೆ ಬಿಡುಗಡೆಹೊಂದುವೆ. ಕುಬೇರನ, ಯಮನ ಅಥವಾ ವರುಣನ ಆಜ್ಞಾಧಾರಕನಾಗಿ ಸುಂದರವಾದ ರೂಪವನ್ನು ಧರಿಸಿ ಇಲ್ಲಿಗೆ ಬಂದಿರುವೆಯಾ? ವಿಜಯಾಕಾಂಕ್ಷಿಯಾದ ವಿಷ್ಣುವೇನಾದರೂ ನಿನ್ನನ್ನು ದೂತನನ್ನಾಗಿ ಇಲ್ಲಿಗೆ ಕಳುಹಿಸಿರುವನೇ? ನೀನು ಆಕಾರದಿಂದ ಕಪಿಯಾಗಿರುವೆಯೇ ಹೊರತು ನಿನ್ನ ತೇಜಸ್ಸು ಕಪಿಯದಲ್ಲ. ಸಾಧಾರಣಕಪಿಯಂತೆ ಅಲ್ಪವೀರ್ಯನು ನೀನಲ್ಲ. ಆದುದರಿಂದ ವಿಷಯವೇನೆಂಬುದನ್ನು ಯಥಾವತ್ತಾಗಿ ತಿಳಿಸಿದರೆ ಕೂಡಲೇ ಬಂಧನದಿಂದ ಬಿಡುಗಡೆಯನ್ನು ಹೊಂದುವೆ. ನೀನೇನಾದರೂ ಸುಳ್ಳನ್ನು ಹೇಳಿದೆಯಾದರೆ ನಿನ್ನ ಜೀವವು ಉಳಿಯಲಾರದು. ಆದುದರಿಂದ ರಾವಣನ ಅರಮನೆಗೆ ಏತಕ್ಕಾಗಿ ಬಂದಿರುವೆಯೆಂಬುದನ್ನು ನಿಜವಾಗಿ ಹೇಳು."

ಪ್ರಹಸ್ತನು ಹೀಗೆ ಹೇಳಲು ಹನುಮಂತನು ನೇರವಾಗಿ ರಕ್ಷೋಗಣೇಶ್ವರನಾದ ರಾವಣನನ್ನೇ ಉದ್ದೇಶಿಸಿ ಹೀಗೆಂದನು :

"ರಾವಣೇಶ್ವರ! ನಾನು ಇಂದ್ರನ ದೂತನೂ ಅಲ್ಲ; ಯಮನ

ದೂತನೂ ಅಲ್ಲ ; ವರುಣನ ದೂತನೂ ಅಲ್ಲ. ಧನದನಾದ ಕುಬೇರನೊಡನೆಯೂ ನನಗೆ ಸಖ್ಯವಿಲ್ಲ. ವಿಷ್ಣುವಿನ ಪ್ರೇರಣೆಯಿಂದಲೂ ನಾನಿಲ್ಲಿಗೆ ಬಂದಿಲ್ಲ. ವೇಷವನ್ನು ಬದಲಾಯಿಸಿಕೊಂಡೂ ಬಂದಿಲ್ಲ. ಹುಟ್ಟಿನಿಂದಲೇ ವಾನರನು ನಾನು. ಅದೇ ನಿಜರೂಪದಲ್ಲಿಯೇ ಇಲ್ಲಿಗೆ ಬಂದಿರುವೆನು. ರಾಕ್ಷಸರಾಜನಾದ ನಿನ್ನ ದರ್ಶನವು ಬಹಳ ಕಷ್ಟಕರವಾದುದರಿಂದ ನಾನು ಹೀಗೆ ಮಾಡಬೇಕಾಯಿತು. ನಿನ್ನನ್ನು ನೋಡುವ ಸಲುವಾಗಿಯೇ ನಾನು ಉದ್ಯಾನವನವನ್ನು ಧ್ವಂಸಮಾಡಿದೆನು. ಆ ಸಮಯದಲ್ಲಿ ಯುದ್ಧಾಕಾಂಕ್ಷಿಗಳಾದ ರಾಕ್ಷಸರು ನನ್ನೊಡನೆ ಯುದ್ಧಮಾಡಲು ಬಂದರು. ಆತ್ಮರಕ್ಷಣೆಗಾಗಿ ನಾನವರೊಡನೆ ಯುದ್ಧಮಾಡಬೇಕಾಯಿತು. ದೇವಾಸುರರು ಒಟ್ಟಾಗಿ ಬಂದರೂ ಯಾವುದೇ ಅಸ್ತ್ರಗಳಿಂದಾಗಲೀ ಪಾಶಗಳಿಂದಾಗಲೀ ನನ್ನನ್ನು ಬಂಧಿಸಲು ಶಕ್ಯವಿಲ್ಲ. ಪಿತಾಮಹನಾದ ಬ್ರಹ್ಮನೇ ನನಗೆ ಈ ವರವನ್ನು ಕೊಟ್ಟಿರುವನು. ರಾಕ್ಷಸರಾಜನನ್ನು ನೋಡುವ ಆಶಯದಿಂದಲೇ ನಾನು ಬ್ರಹ್ಮಾಸ್ತ್ರದ ಬಂಧನವನ್ನು ಪುರಸ್ಕರಿಸಿದೆನು. ಬ್ರಹ್ಮಾಸ್ತ್ರದಿಂದ ವಿಮುಕ್ತನಾಗಿದ್ದರೂ ನನ್ನನ್ನು ಈ ರಾಕ್ಷಸರು ಪೀಡಿಸುತ್ತಿದ್ದಾರೆ. ನಿನ್ನನ್ನು ಕಾಣುವ ಉದ್ದೇಶದಿಂದಲೇ ನಾನು ಅವರು ಕೊಡುತ್ತಿರುವ ಉಪಟಳಗಳನ್ನು ಸಹಿಸಿಕೊಂಡಿದ್ದೇನೆ. ಶ್ರೀರಾಮನ ಒಂದು ಕಾರ್ಯದ ಸಲುವಾಗಿ ನಾನಿಲ್ಲಿಗೆ ಬಂದಿರುವೆನು. ಪ್ರಭುವೇ! ಮಹಾತೇಜಸ್ವಿಯಾದ ಶ್ರೀರಾಮನ ದೂತನು ನಾನೆಂಬುದನ್ನು ತಿಳಿದು ನನ್ನ ಈ ಹಿತವಚನವನ್ನು ಕೇಳು.”

ಐ೦ನೆಯ ಸರ್ಗವು ಮುಗಿಯಿತು.



## ಹನುಮಂತನು ಶ್ರೀರಾಮನ ಪ್ರಭಾವವನ್ನು ವರ್ಣಿಸುತ್ತಾ ರಾವಣನಿಗೆ ಹಿತೋಪದೇಶವನ್ನು ಮಾಡಿದುದು

**ತಾಂ ಸಮೀಕ್ಷ್ಯ ಮಹಾಸತ್ತ್ವಂ ಸತ್ತ್ವವಾನ್ಹರಿಸತ್ತಮಃ ।**
**ವಾಕ್ಯಮರ್ಥವದವ್ಯಗ್ರಸ್ತಮುವಾಚ ದಶಾನನಮ್ ॥೧॥**

ಮಹಾಸತ್ತ್ವನಾದ ಕಪಿಶ್ರೇಷ್ಠನಾದ ಹನುಮಂತನು ಮಹಾಬಲಿಷ್ಠ

ನಾದ ದಶಗ್ರೀವನನ್ನು ಉದ್ದೇಶಿಸಿ ಸಂಶಯಕ್ಕೆಡೆಕೊಡದ ಮತ್ತು ಅರ್ಥವತ್ತಾದ ಮಾತುಗಳನ್ನು ಹೇಳತೊಡಗಿದನು :

"ರಾಕ್ಷಸೇಶ್ವರನೇ! ನಾನು ನನ್ನೊಡೆಯನಾದ ಸುಗ್ರೀವನ ಸಂದೇಶವನ್ನು ಹೊತ್ತು ನಿನ್ನ ಬಳಿಗೆ ಬಂದಿರುವೆನು. ನಿನಗೆ ಸಹೋದರನಂತಿರುವ ಸುಗ್ರೀವನು ನಿನ್ನ ಕುಶಲವನ್ನು ಕೇಳಿದ್ದಾನೆ. ನಿನ್ನ ಸಹೋದರನಿಗೆ ಸಮಾನನಾದ, ಮಹಾತ್ಮನಾದ ಸುಗ್ರೀವನ ಸಂದೇಶವನ್ನು ಕೇಳು. ಈ ಸಂದೇಶವು ಧರ್ಮಾರ್ಥಯುಕ್ತವಾಗಿದೆ. ಇಹ-ಪರಗಳೆರಡರ ಸುಖಕ್ಕೂ ಸಾಧನಭೂತವಾಗಿದೆ.

ದಶರಥನೆಂಬ ರಾಜನು ಬಹುಸಂಖ್ಯಾತವಾದ ಆನೆಗಳನ್ನೂ ಕುದುರೆಗಳನ್ನೂ ರಥಗಳನ್ನೂ ಹೊಂದಿದ್ದನು. ಅವನು ಜನರಿಗೆ ತಂದೆಯೋಪಾದಿಯಲ್ಲಿ ಪ್ರಿಯಬಂಧುವಾಗಿದ್ದನು. ಇಂದ್ರನ ಕಾಂತಿಗೆ ಸಮಾನವಾದ ಕಾಂತಿಯುಳ್ಳವನಾಗಿದ್ದನು. ಅವನ ಹಿರಿಯ ಮಗನಾದ, ಮಹಾಬಾಹುವಾದ, ತಂದೆಗೆ ಪ್ರಿಯತಮನಾದ, ಪ್ರಭುವಾದ, ಮಹಾತೇಜಸ್ವಿಯಾದ ಶ್ರೀರಾಮನು ಧರ್ಮಮಾರ್ಗವನ್ನಾಶ್ರಯಿಸಿ ತಂದೆಯ ಆದೇಶದಂತೆ ತಮ್ಮನಾದ ಲಕ್ಷ್ಮಣನೊಡನೆಯೂ, ಭಾರ್ಯೆಯಾದ ಸೀತೆಯೊಡನೆಯೂ ದಂಡಕಾರಣ್ಯಕ್ಕೆ ಬಂದನು. ಪತಿಯನ್ನೇ ಅನುಸರಿಸಿ ಹೋಗುತ್ತಿದ್ದ, ಮಹಾತ್ಮನಾದ ಜನಕನ ಮಗಳಾದ, ಶ್ರೀರಾಮನ ಭಾರ್ಯೆಯಾದ ಸೀತಾದೇವಿಯು ಅರಣ್ಯದಲ್ಲಿ ಕಳೆದುಹೋದಳು. ಶ್ರೀರಾಮನು ತಮ್ಮನೊಡನೆ ಸೀತಾದೇವಿಯನ್ನು ಹುಡುಕುತ್ತಾ ಋಷ್ಯಮೂಕಪರ್ವತಕ್ಕೆ ಬಂದು ಅಲ್ಲಿ ಸುಗ್ರೀವನೊಡನೆ ಗೆಳೆತನ ಮಾಡಿಕೊಂಡನು. ಅದರ ಫಲವಾಗಿ ಸುಗ್ರೀವನು ಸೀತಾದೇವಿಯನ್ನು ಹುಡುಕಿಕೊಡುವುದಾಗಿ ಶ್ರೀರಾಮನ ಸಮ್ಮುಖದಲ್ಲಿ ಪ್ರತಿಜ್ಞೆಮಾಡಿದನು. ರಾಮನು ಕೂಡ ಸುಗ್ರೀವನಿಗೆ ಕಿಷ್ಕಿಂಧಾರಾಜ್ಯವನ್ನು ಕೊಡಿಸಿಕೊಡುವುದಾಗಿ ಪ್ರತಿಜ್ಞೆಮಾಡಿದನು. ಶ್ರೀರಾಮನು ತನ್ನ ಪ್ರತಿಜ್ಞೆಯಂತೆ ಯುದ್ಧದಲ್ಲಿ ವಾಲಿಯನ್ನು ಸಂಹರಿಸಿ ಸುಗ್ರೀವನನ್ನು ಕಪಿ-ಕರಡಿಗಳ ಸಮೂಹಕ್ಕೆ ರಾಜನನ್ನಾಗಿ ಮಾಡಿದನು. ರಾವಣೇಶ್ವರ! ವಾಲಿಯು ಯಾರೆಂಬುದೂ ಅವನ ಪರಾಕ್ರಮವೆಷ್ಟೆಂಬುದೂ ನಿನಗೆ ತಿಳಿದೇ ಇದೆ. ಅಂತಹ ಮಹಾಬಲಿಷ್ಠನಾದ ವಾಲಿಯನ್ನು

ಶ್ರೀರಾಮನು ಒಂದೇ ಬಾಣದಿಂದ ಸಂಹರಿಸಿದನು. ಸೀತೆಯನ್ನು ಹುಡುಕು ವುದರಲ್ಲಿಯೇ ಆಸಕ್ತನಾಗಿದ್ದ ಸತ್ಯಪ್ರತಿಜ್ಞನಾದ ಸುಗ್ರೀವನು ಅವಳನ್ನು ಹುಡುಕುವ ಸಲುವಾಗಿ ಎಲ್ಲ ದಿಕ್ಕುಗಳಿಗೂ ವಾನರರನ್ನು ಕಳುಹಿಸಿರುವನು. ಅವನ ಆಜ್ಞೆಯಂತೆ ಸಾವಿರ-ಸಾವಿರ ಲಕ್ಷ-ಲಕ್ಷ ಕಪೀಶ್ವರರು ಎಲ್ಲ ದಿಕ್ಕುಗಳ ಲ್ಲಿಯೂ, ಅಂತರಿಕ್ಷದಲ್ಲಿಯೂ, ಭೂಮಿಯಲ್ಲಿಯೂ, ಪಾತಾಲದಲ್ಲಿಯೂ ಸೀತಾದೇವಿಯನ್ನು ಹುಡುಕುತ್ತಿದ್ದಾರೆ. ಅವರಲ್ಲಿ ಕೆಲವರು ಪರಾಕ್ರಮದಲ್ಲಿ ಗರುಡನಿಗೆ ಸಮಾನರು. ಕೆಲವರು ವಾಯುವಿಗೆ ಸಮಾನರು. ಕೆಲವರು ಯಾವ ಆಲಂಬನವೂ ಇಲ್ಲದೆ ಆಕಾಶದಲ್ಲೇ ಸಂಚರಿಸುತ್ತಿರುವರು. ಕೆಲವರು ಶೀಘ್ರಗಾಮಿಗಳು. ಹೀಗೆ ಸೀತೆಯನ್ನು ಹುಡುಕಲು ಹೊರಟಿರುವ ಕಪೀಶ್ವರ ರೆಲ್ಲರೂ ಮಹಾಬಲಶಾಲಿಗಳು. ಹಾಗೆ ಸೀತೆಯನ್ನು ಹುಡುಕಲು ಹೊರಟ ವರಲ್ಲಿ ನಾನೂ ಒಬ್ಬನು. ನನ್ನ ಹೆಸರು ಹನುಮಂತ. ನಾನು ವಾಯು ದೇವನ ಮಗನು. ಸೀತಾದೇವಿಯನ್ನು ಹುಡುಕುವ ಸಲುವಾಗಿಯೂ, ನಿನ್ನನ್ನು ಕಾಣುವ ಸಲುವಾಗಿಯೂ ನೂರು ಯೋಜನಗಳಷ್ಟು ವಿಸ್ತಾರವಿರುವ ಸಮುದ್ರವನ್ನು ದಾಟಿಕೊಂಡು ಇಲ್ಲಿಗೆ ಬಂದೆನು. ಇಲ್ಲಿ ಸುತ್ತಾಡುತ್ತಿರುವಾಗ ನಿನ್ನ ಪ್ರಮದಾವನದಲ್ಲಿ ನಾನು ಅವಳನ್ನು ಕಂಡೆನು.

ರಾವಣೇಶ್ವರನೇ! ನೀನಾದರೋ ಶಾಸ್ತ್ರಗಳ ಮೂಲಕ ಧರ್ಮಾರ್ಥ ಗಳನ್ನು ಚೆನ್ನಾಗಿ ತಿಳಿದಿರುವೆ. ತಪಸ್ಸಿನಿಂದಲೇ ಎಲ್ಲವನ್ನೂ ಸಾಧಿಸಿಕೊಂಡಿ ರುವೆ. ಇಂತಹ ಮಹಾತ್ಮನಾದ ನಿನಗೆ ಪರಸ್ತ್ರೀಯನ್ನು ಬಂಧಿಸಿಟ್ಟಿರುವುದು ಯೋಗ್ಯವೆನಿಸುವುದಿಲ್ಲ. ಧರ್ಮಕ್ಕೆ ವಿರುದ್ಧವಾದ, ಅಪಾಯದಿಂದ ಕೂಡಿ ರುವ, ವಂಶವನ್ನೇ ತೊಡೆದುಹಾಕುವ ಇಂತಹ ಕುತ್ಸಿತವಾದ ಕಾರ್ಯಗಳಲ್ಲಿ ನಿನ್ನಂತಹ ಬುದ್ಧಿವಂತರು ಖಂಡಿತವಾಗಿಯೂ ತೊಡಗಬಾರದು.

ಲಕ್ಷ್ಮಣನು ಬಿಡುವ ಮತ್ತು ಶ್ರೀರಾಮನ ಕೋಪವನ್ನನುಸರಿಸಿ ಧನುಸ್ಸಿ ನಿಂದ ಹೊರಚಿಮ್ಮುವ ಬಾಣಗಳ ಮುಂದೆ ನಿಲ್ಲುವ ಶಕ್ತಿಯು ದೇವಾಸುರ ರಲ್ಲಿ ಯಾರಿಗಿದೆ? ಶ್ರೀರಾಮನಿಗೆ ಅಪರಾಧವನ್ನು ಮಾಡಿ ಸುಖವಾಗಿರ ತಕ್ಕವನು ಈ ಮೂರು ಲೋಕಗಳಲ್ಲಿ ಯಾವೊಬ್ಬನೂ ಇಲ್ಲ. ರಾಕ್ಷಸೇಶ್ವರ! ನಾನೀಗ ಹೇಳಲಿರುವ ಮಾತುಗಳು ಮೂರು ಕಾಲಗಳಲ್ಲಿಯೂ

ಹಿತಕರವೆಂದೂ ಧರ್ಮಾರ್ಥಸಾಧನೆಗೆ ಅನುಕೂಲಕರವೆಂದೂ ಭಾವಿಸು. ನರದೇವನಾದ ಶ್ರೀರಾಮನಿಗೆ ಸೀತಾದೇವಿಯನ್ನು ಒಪ್ಪಿಸಿಬಿಡು. ರಾವಣೇಶ್ವರ! ಸೀತಾದೇವಿಯನ್ನು ನಾನು ಸಂದರ್ಶಿಸಿದೆನು. ಇತರರಿಗೆ ಸುದುರ್ಲಭವಾದ ಸೀತಾದರ್ಶನವು ನನಗೆ ಲಭಿಸಿತು. ಉಳಿದಿರುವ ಕಾರ್ಯ ವೆಂದರೆ ಸೀತೆಯನ್ನು ಇಲ್ಲಿಂದ ಕರೆದುಕೊಂಡು ಹೋಗುವುದು. ಇದಕ್ಕೆ ರಾಮನೇ ಕಾರಣನಾಗುತ್ತಾನೆ. ಅವನೇ ಬಂದು ಸೀತೆಯನ್ನು ಕರೆದೊಯ್ಯು ತ್ತಾನೆ. ರಾಕ್ಷಸೇಶ್ವರ! ಶೋಕಪರಾಯಣೆಯಾಗಿರುವ ಸೀತಾದೇವಿಯನ್ನು ನಾನು ಲಕ್ಷಿಸಿ ನೋಡಿದೆನು. ಐದು ಹೆಡೆಗಳುಳ್ಳ ಸರ್ಪಿಣಿಯಂತೆ ಅವಳು ನಿನ್ನ ಮನೆಯಲ್ಲಿರುವಳೆಂಬುದನ್ನು ನೀನು ತಿಳಿದಿಲ್ಲ. ಒಬ್ಬನಿಗೆ ಎಷ್ಟೇ ಬಲವಿರಬಹುದು. ಆದರೂ ಹೆಚ್ಚು ವಿಷವಿರುವ ಅನ್ನವನ್ನು ತಿಂದು ಜೀರ್ಣಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಂತೆಯೇ ರಾಕ್ಷಸರಿಂದಾಗಲೀ ದೇವತೆಗಳಿಂದಾಗಲೀ ಸೀತಾದೇವಿಯನ್ನು ವಶಪಡಿಸಿಕೊಳ್ಳುವ ಸಾಧ್ಯತೆ ಯಿಲ್ಲ. ಕಷ್ಟಪಟ್ಟು ತಪಸ್ಸನ್ನು ಮಾಡಿ ನೀನು ಧರ್ಮವನ್ನು ಸಂಪಾದಿಸಿರುವೆ. ಆತ್ಮರಕ್ಷಣೆಯನ್ನೂ ಪಡೆದಿರುವೆ. ಅದನ್ನು ನೀನು ಸೀತಾಪಹರಣರೂಪವಾದ ಅಧರ್ಮದಿಂದ ಹಾಳುಮಾಡಿಕೊಳ್ಳುವುದು ನ್ಯಾಯವಲ್ಲ. ನೀನು ತಪಸ್ಸು ಗಳನ್ನು ಮಾಡಿ ಅಸುರರಿಂದಲೂ ದೇವತೆಗಳಿಂದಲೂ ವಧಿಸಲ್ಪಡಬಾರ ದೆಂಬ ವರವನ್ನು ಪಡೆದಿರುವುದೇನೋ ನಿಜ. ಈ ಕಾರಣದಿಂದಲೇ ನೀನು ಅವಧ್ಯನೆಂದು ಭಾವಿಸಿಕೊಂಡಿರುವೆ. ಇದೇ ನಿನ್ನ ದುರ್ವರ್ತನೆಗೆ ದೊಡ್ಡ ಕಾರಣವಾಗಿದೆ. ನಮ್ಮ ಒಡೆಯನಾದ ಸುಗ್ರೀವನು ದೇವತೆಯೂ ಅಲ್ಲ; ಯಕ್ಷನೂ ಅಲ್ಲ; ರಾಕ್ಷಸನೂ ಅಲ್ಲ. ಅವನೊಬ್ಬ ವಾನರಶ್ರೇಷ್ಠನು. ಶ್ರೀರಾಮನೂ ಮಾನವನು. ಇವರಿಬ್ಬರೊಡನೆಯೂ ನೀನು ಹಗೆತನವನ್ನು ಬೆಳೆಸಿಕೊಂಡಿರುವಾಗ ಪ್ರಾಣಗಳನ್ನು ಹೇಗೆ ತಾನೇ ರಕ್ಷಿಸಿಕೊಳ್ಳುವೆ?

**ನ ತು ಧರ್ಮೋಪಸಂಹಾರಮಧರ್ಮಫಲಸಂಹಿತಮ್ ।**
**ತದೇವ ಫಲಮನ್ವೇತಿ ಧರ್ಮಶ್ಚಾಧರ್ಮನಾಶನಃ ॥೨೮॥**

ಧರ್ಮಸಂಗ್ರಹವು ಅಧರ್ಮಫಲದಿಂದ ಕೂಡಿರುವುದಿಲ್ಲ. ಧರ್ಮ ವನ್ನು ಸಂಗ್ರಹಿಸಿದವನು ಶುಭಫಲವನ್ನೇ ಅನುಭವಿಸುತ್ತಾನೆ. ಧರ್ಮವು

ಹೆಚ್ಚಾಗಿದ್ದರೆ ಅಧರ್ಮವನ್ನು ನಾಶಗೊಳಿಸುತ್ತದೆ. ಅಧರ್ಮವೇ ಹೆಚ್ಚಾಗಿದ್ದರೆ ಅಲ್ಪ-ಸ್ವಲ್ಪ ಧರ್ಮವನ್ನೂ ನಾಶಗೊಳಿಸುತ್ತದೆ.*

ನೀನು ಮಾಡಿರುವ ಧರ್ಮದ ಫಲವನ್ನು ಈಗಾಗಲೇ ಸುಖೋಪ ಭೋಗಗಳ ಮೂಲಕವಾಗಿ ಅನುಭವಿಸಿರುವೆ. ನೀನು ಮಾಡಿರುವ ಅಧರ್ಮ ಕಾರ್ಯದ ಫಲವನ್ನು ಶೀಘ್ರವಾಗಿಯೇ ಅನುಭವಿಸಲಿರುವೆ.

ರಾವಣೇಶ್ವರ! ಜನಸ್ಥಾನದಲ್ಲಾದ ರಾಕ್ಷಸರ ವಧೆಯನ್ನೂ ನೀನು ಅರಿತಿರುವೆ. ಮಹಾಬಲಿಷ್ಠನಾದ ವಾಲಿಯನ್ನು ಶ್ರೀರಾಮನು ಸಂಹರಿಸಿದ ನೆಂಬ ವಾರ್ತೆಯನ್ನೂ, ರಾಮ-ಸುಗ್ರೀವರಿಗೆ ಸ್ನೇಹಸಂಬಂಧವೇರ್ಪಟ್ಟಿರುವ ಸಮಾಚಾರವನ್ನೂ ಈಗ ಹೇಳಿರುವೆನು. ಈ ಸಮಯದಲ್ಲಿ ನಿನಗೆ ಹಿತವಾವು ದೆಂಬುದನ್ನು ನೀನೇ ತಿಳಿದುಕೊಳ್ಳಬಹುದಾಗಿದೆ. ಅಶ್ವ-ಗಜ-ರಥಗಳಿಂದ ನಿಬಿಡವಾಗಿರುವ ಈ ಲಂಕಾಪಟ್ಟಣವನ್ನು ಏಕಾಕಿಯಾಗಿ ವಿನಾಶಮಾಡುವ ಶಕ್ತಿಯು ನನಗಿದೆ. ಆದರೆ ಶ್ರೀರಾಮನ ನಿಶ್ಚಿತವಾದ ಅಭಿಪ್ರಾಯವು ಹೀಗಿರು ವುದಿಲ್ಲ. ಅವನು ನನಗೆ ಲಂಕೆಯನ್ನು ವಿನಾಶಗೊಳಿಸುವಂತೆ ಆಜ್ಞೆಮಾಡಿಲ್ಲ. ಸೀತಾದೇವಿಯನ್ನು ಹುಡುಕಿಕೊಂಡು ಬರಲು ಮಾತ್ರವೇ ಆಜ್ಞೆಮಾಡಿರು ವನು. ಶ್ರೀರಾಮನು ಕಪಿ-ಕರಡಿಗಳ ನಾಯಕರ ಸಮ್ಮುಖದಲ್ಲಿ ಸೀತಾದೇವಿ ಯನ್ನು ಹಿಂಸಿಸಿದ ಶತ್ರುಗಳನ್ನು ಮೂಲೋತ್ಪಾಟನಮಾಡುವುದಾಗಿ ಪ್ರತಿಜ್ಞೆ ಮಾಡಿರುವನು. ಅವನಿಗೆ ಅಪಕಾರಮಾಡಿದವನು ಇಂದ್ರನೇ ಆಗಿದ್ದರೂ ಸುಖವಾಗಿರಲಾರನು. ಹೀಗಿರುವಾಗ ನಿನ್ನಂತಹವರ ವಿಷಯದಲ್ಲಿ ಹೇಳು ವುದೇನಿದೆ? ಯಾವಳು ನಿನ್ನ ಮನೆಯಲ್ಲಿರುವಳೋ–ಯಾವಳನ್ನು ನೀನು ಸೀತೆಯೆಂದು ಭಾವಿಸಿ ಕಾಮಮೋಹಿತನಾಗಿರುವೆಯೋ–ಅವಳನ್ನು ಈ ಲಂಕಾಪಟ್ಟಣವನ್ನೇ ಸಂಪೂರ್ಣವಾಗಿ ವಿನಾಶಗೊಳಿಸುವ ಕಾಳರಾತ್ರಿಯೆಂದು ಭಾವಿಸು. ಸೀತಾವಿಗ್ರಹರೂಪವಾಗಿರುವ ಕಾಲಪಾಶದಿಂದ ನೇಣುಹಾಕಿ ಕೊಳ್ಳುವುದನ್ನು ಸಾಕುಮಾಡು. ಆತ್ಮಕ್ಷೇಮವನ್ನು ಚಿಂತಿಸು. ಎತ್ತರವಾದ

---

* ಈ ಶ್ಲೋಕಕ್ಕೆ ಹೀಗೂ ಅರ್ಥಮಾಡಬಹುದಾಗಿದೆ. ಧರ್ಮವನ್ನು ಕಡೆಗಾಣಿಸಿದವನನ್ನು ಯಾವ ತಪಸ್ಸೂ ರಕ್ಷಿಸುವುದಿಲ್ಲ. ಧರ್ಮವನ್ನು ದೂರೀಕರಿಸಿದವನು ಅದಕ್ಕೆ ತಕ್ಕುದಾದ ಅಶುಭಫಲವನ್ನೇ ಹೊಂದುತ್ತಾನೆ. ಧರ್ಮವು ಹೆಚ್ಚಾಗಿದ್ದರೆ ಮಾತ್ರವೇ ಅಲ್ಪವಾದ ಅಧರ್ಮದ ನಾಶವಾಗುತ್ತದೆ.

ಉಪ್ಪರಿಗೆ ಮನೆಗಳಿಂದಲೂ–ಬೀದಿಗಳಿಂದಲೂ ಶೋಭಿಸುತ್ತಿರುವ ಈ ಲಂಕಾಪಟ್ಟಣವು ಈಗಾಗಲೇ ಸೀತಾದೇವಿಯ ತೇಜಸ್ಸಿನಿಂದ ದಗ್ಧವಾಗಿ ಹೋಗಿದೆ. ಶ್ರೀರಾಮನ ಕೋಪದಿಂದ ಪೀಡಿತವಾಗಿದೆ. ಇದನ್ನು ನೀನು ಈಗಲೇ ಗಮನಿಸು. ನಿನ್ನೊಬ್ಬನ ಅಪರಾಧದಿಂದಾಗಿ ನಿನ್ನ ಮಿತ್ರರನ್ನೂ, ಮಂತ್ರಿಗಳನ್ನೂ, ಜ್ಞಾತಿ-ಸಹೋದರರನ್ನೂ, ಮಡದಿ-ಮಕ್ಕಳನ್ನೂ, ಹಿತಚಿಂತಕರನ್ನೂ, ಭೋಗೈಶ್ವರ್ಯಗಳನ್ನೂ, ಲಂಕೆಯನ್ನೂ ಬಲಿಗೊಡ ಬೇಡ. ರಾಮದಾಸನಾದ, ಸುಗ್ರೀವನ ದೂತನಾದ, ಅದರಲ್ಲಿಯೂ ವಿಶೇಷ ವಾಗಿ ವಾನರನಾದ ನನ್ನ ಈ ಸತ್ಯವಚನವನ್ನು ಕೇಳು :

**ಸರ್ವಾನ್ ಲೋಕಾನ್ಸುಸಂಹೃತ್ಯ ಸಭೂತಾನ್ಸಚರಾಚರಾನ್ ।**
**ಪುನರೇವ ತಥಾ ಸ್ರಷ್ಟುಂ ಶಕ್ತೋ ರಾಮೋ ಮಹಾಯಶಾಃ ॥**

ಮಹಾಯಶಸ್ವಿಯಾದ ಶ್ರೀರಾಮನು ಚರಾಚರಪ್ರಾಣಿಗಳಿಂದ ಕೂಡಿ ರುವ ಸಮಸ್ತಲೋಕಗಳನ್ನೂ ಸಂಹರಿಸಿ ಮತ್ತೊಮ್ಮೆ ಹಿಂದೆ ಇದ್ದಂತೆಯೇ ಪುನಃ ಸೃಷ್ಟಿಸಲು ಸಮರ್ಥನಾಗಿರುವನು. ಅಂತಹ ಮಹಾಮಹಿಮನಾದ, ವಿಷ್ಣುವಿನಂತೆ ಪರಾಕ್ರಮಶಾಲಿಯಾದ ಶ್ರೀರಾಮನನ್ನು ಪ್ರತಿಭಟಿಸಿ ಯುದ್ಧಮಾಡುವವನು ದೇವಾಸುರ-ಮನುಷ್ಯರಲ್ಲಾಗಲೀ, ಯಕ್ಷ-ರಾಕ್ಷಸರ ಸಮೂಹದಲ್ಲಾಗಲೀ, ವಿದ್ಯಾಧರ-ಪನ್ನಗರಲ್ಲಾಗಲೀ, ಗಂಧರ್ವರಲ್ಲಾಗಲೀ, ಮೃಗಗಳಲ್ಲಾಗಲೀ, ಸಿದ್ಧರಲ್ಲಾಗಲೀ, ಕಿನ್ನರರಲ್ಲಾಗಲೀ, ಪಕ್ಷಿಗಳಲ್ಲಾಗಲೀ, ಸಮಸ್ತವಾದ ಪ್ರಾಣಿಗಳಲ್ಲೇ ಆಗಲೀ–ಯಾವುದೇ ಕಾಲದಲ್ಲಿಯೂ ಎಲ್ಲಿಯೂ ಇರಲು ಸಾಧ್ಯವಿಲ್ಲ.

ಸರ್ವಲೋಕೇಶ್ವರನಾದ ರಾಜಸಿಂಹನಾದ ಶ್ರೀರಾಮನಿಗೆ ಇಂತಹ ಅಪರಾಧಮಾಡಿರುವ ನಿನ್ನ ಜೀವವುಳಿಯುವುದು ದುರ್ಲಭವೇ ಸರಿ. ದೇವ-ದೈತ್ಯರಾಗಲೀ, ಗಂಧರ್ವ-ವಿದ್ಯಾಧರ-ನಾಗ-ಯಕ್ಷರಾಗಲೀ, ಪ್ರತ್ಯೇಕ-ಪ್ರತ್ಯೇಕವಾಗಿಯೇ ಆಗಲೀ, ಒಟ್ಟಾಗಿಯೇ ಆಗಲೀ–ಲೋಕತ್ರಯನಾಯಕ ನಾದ ಶ್ರೀರಾಮನ ಮುಂದೆ ಯುದ್ಧದಲ್ಲಿ ನಿಲ್ಲಲು ಖಂಡಿತವಾಗಿಯೂ ಸಮರ್ಥರಲ್ಲ.

ಬ್ರಹ್ಮಾ ಸ್ವಯಂಭೂಶ್ಚತುರಾನನೋ ವಾ
ರುದ್ರಸ್ತ್ರಿಣೇತ್ರಸ್ತ್ರಿಪುರಾನ್ತಕೋ ವಾ ।

**ಇನ್ದ್ರೋ ಮಹೇನ್ದ್ರಃ ಸುರನಾಯಕೋ ವಾ**
**ತ್ರಾತುಂ ನ ಶಕ್ತಾ ಯುಧಿ ರಾಮವಧ್ಯಮ್ ॥೪೪॥**

ಸ್ವಯಂಭುವಾದ, ಚತುರ್ಮುಖನಾದ ಬ್ರಹ್ಮನಾಗಲೀ–ಮುಕ್ಕಣ್ಣನಾದ ತ್ರಿಪುರಾಂತಕನಾದ ರುದ್ರನಾಗಲೀ–ಮಹೇಂದ್ರನಾದ ಸುರನಾಯಕನಾದ ಇಂದ್ರನಾಗಲೀ–ಅಥವಾ ಯಾರೇ ಆಗಲೀ ; ಯುದ್ಧದಲ್ಲಿ ಶ್ರೀರಾಮನಿಂದ ವಧ್ಯನಾಗುವವನನ್ನು ಕಾಪಾಡಲು ಶಕ್ತರಲ್ಲ."*

ಹನುಮಂತನ ಮಾತಿನಲ್ಲಿ ಸೌಷ್ಠವವಿದ್ದಿತು. ದೀನತೆಯಿರಲಿಲ್ಲ. ಕಪೀಶ್ವರನ ಅಂತಹ ಅಪ್ರಿಯವಾದ ಮಾತುಗಳನ್ನು ಕೇಳಿ ಅಪ್ರತಿಮ ಪರಾಕ್ರಮಿಯಾದ ರಾವಣನು ಕೋಪದಿಂದ ಕಣ್ಣುಗಳನ್ನು ತಿರುಗಿಸುತ್ತಾ ಮಹಾಕಪಿಯ ವಧೆಗೆ ಒಡನೆಯೇ ಆಜ್ಞೆಮಾಡಿದನು.

ಐ೧ನೆಯ ಸರ್ಗವು ಮುಗಿಯಿತು.



## ವಿಭೀಷಣನು ದೂತನ ವಧೆಯು ನಿಷಿದ್ಧವೆಂದೂ ಬೇರೆ ಯಾವುದಾದರೂ ಶಿಕ್ಷೆಯನ್ನು ಕೊಡಬಹುದೆಂದೂ ರಾವಣನಿಗೆ ಸಲಹೆಮಾಡಿದುದು : ರಾವಣನ ಅನುಮೋದನೆ

**ತಸ್ಯ ತದ್ವಚನಂ ಶ್ರುತ್ವಾ ವಾನರಸ್ಯ ಮಹಾತ್ಮನಃ ।**
**ಆಜ್ಞಾಪಯದ್ವಧಂ ತಸ್ಯ ರಾವಣಃ ಕ್ರೋಧಮೂರ್ಛಿತಃ ॥೧॥**

ಹನುಮಂತನು ಹೇಳಿದ ಮಾತುಗಳನ್ನು ಕೇಳಿ ಕೋಪದಿಂದ ಕಿಡಿ-ಕಿಡಿಯಾದ ರಾವಣೇಶ್ವರನು ಹನುಮಂತನ ವಧೆಗೆ ಆಜ್ಞೆಮಾಡಿದನು.

---

* ಈ ಶ್ಲೋಕದಲ್ಲಿ ಬಂದಿರುವ ಬ್ರಹ್ಮಾ-ಸ್ವಯಂಭೂಃ ಮತ್ತು ಚತುರಾನನಃ ಇವು ಪರ್ಯಾಯಪದಗಳು. ಹಾಗೆಯೇ ರುದ್ರಃ, ತ್ರಿಣೇತ್ರಃ ಮತ್ತು ತ್ರಿಪುರಾಂತಕಃ–ಎಂಬ ಶಬ್ದಗಳೂ ಪರ್ಯಾಯಪದಗಳು. ಇಂದ್ರಃ–ಮಹೇಂದ್ರಃ–ಸುರನಾಯಕಃ ಎಂಬ ಪದಗಳೂ ಪರ್ಯಾಯಪದಗಳು. ಒಂದೇ ಪದವನ್ನು ಹೇಳಿದರೂ ಇದೇ ಅರ್ಥಬರುವಾಗ ಮೂರು ಮೂರು ಪದಪ್ರಯೋಗಗಳ ಕಾರಣವನ್ನು ಒಬ್ಬ ವ್ಯಾಖ್ಯಾನಕಾರರು ವಿವರಿಸಿರುತ್ತಾರೆ. ಅವರು ಇಂದ್ರ-ರುದ್ರ-ಬ್ರಹ್ಮ ಮುಂತಾದ ಪದಗಳಿಗೆ ಈ ಕ್ರಮದಲ್ಲಿ ವಿವರಿಸುತ್ತಾರೆ :

ಇಂದ್ರಃ-ಪರಮೈಶ್ವರ್ಯವಂತ. ತ್ರಿಲೋಕಾಧಿಪತಿ. ಅವನಿಗೂ ಯುದ್ಧದಲ್ಲಿ

ಹೀಗೆ ದುರಾತ್ಮನಾದ ರಾವಣನು ಮಾರುತಿಯ ವಧೆಗೆ ಆಜ್ಞೆಮಾಡಿದಾಗ–ದೂತನಾಗಿ ಬಂದು ವಿಷಯವನ್ನು ತಿಳಿಯಪಡಿಸಿದ ಹನುಮಂತನ ವಧೆಗೆ ಅವನ ತಮ್ಮನಾದ ವಿಭೀಷಣನು ಅನುಮತಿಸಲಿಲ್ಲ. ರಾಕ್ಷಸೇಶ್ವರನಾದ ರಾವಣನು ಕೋಪಗೊಂಡಿರುವುದನ್ನೂ ದೂತನ ವಧೆಗೆ ಆಜ್ಞೆಮಾಡಿರುವುದನ್ನೂ ಮನಗಂಡು, ಕಾರ್ಯವಿಧಾನದಲ್ಲಿ ನಿಶ್ಚಿತವಾದ ಅಭಿಪ್ರಾಯವುಳ್ಳ ವಿಭೀಷಣನು ಮುಂದೆ ತಾನು ಮಾಡಬೇಕಾಗಿರುವ ಕಾರ್ಯದ ವಿಷಯವಾಗಿ ಚಿಂತಿಸತೊಡಗಿದನು.

ವಾಕ್ಯವಿಶಾರದನಾಗಿ ಶತ್ರುಗಳನ್ನು ಜಯಿಸುವ ಸಾಮರ್ಥ್ಯವನ್ನು ಹೊಂದಿದ್ದ ವಿಭೀಷಣನು ತನ್ನ ಮುಂದಿನ ಕರ್ತವ್ಯವನ್ನು ನಿಶ್ಚಯಿಸಿ ಪೂಜ್ಯನಾದ ಅಗ್ರಜನಿಗೆ ಅತ್ಯಂತಹಿತಕರವಾದ ಈ ಮಾತುಗಳನ್ನು ಮೃದುವಾಗಿ ಹೇಳಿದನು :

**ಕ್ಷಮಸ್ವ ರೋಷಂ ತ್ಯಜ ರಾಕ್ಷಸೇನ್ದ್ರ**
**ಪ್ರಸೀದ ಮೇ ವಾಕ್ಯಮಿದಂ ಶೃಣುಷ್ವ ।**
**ವಧಂ ನ ಕುರ್ವನ್ತಿ ಪರಾವರಜ್ಞಾ**
**ದೂತಸ್ಯ ಸನ್ತೋ ವಸುಧಾಧಿಪೇನ್ದ್ರಾಃ ॥೫॥**

---

ರಾಮನಿಗೆ ಎದುರಾಗಿ ನಿಲ್ಲಲು ಸಾಧ್ಯವಿಲ್ಲ. **ಮಹೇಂದ್ರಃ**–ಪರ್ಯಾಯವಾಗಿ ಇಂದ್ರ ಎಂದೇ ಅರ್ಥವಾದರೂ ಮಹೇಂದ್ರಶಬ್ದಕ್ಕೇ ವಿಶೇಷಾರ್ಥ ವೃತ್ರಾಸುರನನ್ನು ಸಂಹರಿಸಿದನು ಎಂದು. ಆದುದರಿಂದಲೇ ಅವನಿಗೆ ಮಹೇಂದ್ರ–ಎಂಬ ಹೆಸರಾಯಿತು. '**ಯೋ ವೃತ್ರಮವಧೀದಿತೀ ನ್ದ್ರತನ್ಮಹಸ್ಯ ಮಹೇನ್ದ್ರತ್ವಂ ।**' ಅಂತಹ ವೃತ್ರಹಂತಕನಿಗೂ ರಾಮನೊಡನೆ ಯುದ್ಧಮಾಡಲು ಸಾಧ್ಯವಿಲ್ಲ. **ಸುರನಾಯಕಃ** –ಈ ಪದವು ಇನ್ನೂ ಹೆಚ್ಚಿನ ಮಹತ್ವಸೂಚಕವಾಗಿದೆ. ತನಗೆ ಸಮಾನಬಲರಾದ ಮೂವತ್ತು ಮೂರು ಕೋಟಿ ದೇವತೆಗಳ ನಾಯಕ ಇಂದ್ರ. ಆ ದೇವತೆಗಳ ಬೆಂಬಲವನ್ನು ಪಡೆದುಕೊಂಡು ಬಂದರೂ ಶ್ರೀರಾಮನನ್ನು ಎದುರಿಸಲಾರನು. **ರುದ್ರಃ** –**ಸಂಹಾರಕಾಲೇ ಪ್ರಜಾಃ ರೋದಯತೀತಿ ರುದ್ರಃ** –ಪ್ರಳಯಕಾಲದಲ್ಲಿ ಪ್ರಜೆಗಳನ್ನು ಅಳುವಂತೆ ಮಾಡುವವನು. ಅಂತಹವನಿಗೂ ಶ್ರೀರಾಮನನ್ನು ಯುದ್ಧದಲ್ಲಿ ಎದುರಿಸುವ ಸಾಮರ್ಥ್ಯವಿಲ್ಲ. **ತ್ರಿಣೇತ್ರಃ** –ಮುಕ್ಕಣ್ಣನು. ಮೂರನೆಯ ಕಣ್ಣಿನಿಂದ ಮನ್ಮಥನನ್ನು ಸುಟ್ಟವನು. ಕಣ್ಣಿನಿಂದಲೇ ಎದುರಾಳಿಯನ್ನು ಸುಡುವ ಶಕ್ತಿಯುಳ್ಳವನು. **ತ್ರಿಪುರಾನ್ತಕಃ** – ಅತ್ಯಂತಪ್ರಬಲರಾದ ತ್ರಿಪುರಾಸುರರನ್ನು ಸಂಹಾರಮಾಡಿದವನು. ಆ ಸಮಯದಲ್ಲಿ

"ರಾಜೇಂದ್ರನೇ! ಕೋಪವನ್ನು ದೂರೀಕರಿಸು. ದೂತನನ್ನು ಕ್ಷಮಿಸಿ ಬಿಡು. ಈ ನನ್ನ ಮಾತನ್ನು ಕೇಳು. ಯುಕ್ತಾಯುಕ್ತವಿಷಯಗಳ ವಿವೇಕವನ್ನು ತಿಳಿದಿರುವ ಸತ್ಪುರುಷರಾದ ರಾಜರು ದೂತನನ್ನು ವಧಿಸುವುದಿಲ್ಲ.

**ರಾಜಧರ್ಮವಿರುದ್ಧಂ ಚ ಲೋಕವೃತ್ತೇಶ್ಚ ಗರ್ಹಿತಮ್ ।**
**ತವ ಚಾಸದೃಶಂ ವೀರ ಕಪೇರಸ್ಯ ಪ್ರಮಾಪಣಮ್ ॥೬॥**

ಮಹಾರಾಜ! ದೂತನಾಗಿ ಬಂದಿರುವ ಈ ಕಪಿಯನ್ನು ವಧಿಸುವುದು ಧರ್ಮಕ್ಕೆ ವಿರುದ್ಧವಾಗಿದೆ. ಲೋಕದ ನಡವಳಿಕೆಗೂ ನಿಂದ್ಯವಾಗಿದೆ ಮತ್ತು ನಿನ್ನ ಘನತೆಗೂ ತಕ್ಕುದಾಗಿಲ್ಲ.

ನೀನು ಧರ್ಮಜ್ಞನು ; ಕೃತಜ್ಞನು ; ರಾಜಧರ್ಮವಿಶಾರದನು. ಪ್ರಾಣಿಗಳ ಹಿಂದು-ಮುಂದಿನ ಸ್ಥಿತಿಗಳನ್ನರಿತವನು. ಪರಮಾರ್ಥವನ್ನು ತಿಳಿದವನು. ನಿನ್ನಂತಹ ವಿದ್ವಾಂಸರೂ ಕೋಪಕ್ಕೆ ಒಳಗಾಗುವುದಾದರೆ ಶಾಸ್ತ್ರಜ್ಞಾನವು ನಿಶ್ಚಯವಾಗಿಯೂ ವ್ಯರ್ಥಪ್ರಯಾಸವೇ ಸರಿ. ಆದುದರಿಂದ ಈ ಸಮಯದಲ್ಲಿ ಮೋಹಗೊಳ್ಳುವುದು ಉಚಿತವಲ್ಲ. ಪ್ರಸನ್ನನಾಗು. ಉದ್ಧತನಾದ ದೂತನಿಗೆ ಯಾವ ಶಿಕ್ಷೆಯು ಉಚಿತವೆಂಬುದನ್ನು ನಿಶ್ಚಯಿಸಿ ಅಂತಹ ಶಿಕ್ಷೆಯನ್ನು ವಿಧಿಸು."

ರಾಕ್ಷಸೇಶ್ವರನಾದ ರಾವಣನು ವಿಭೀಷಣನ ಮಾತನ್ನು ಕೇಳಿ ಪರಮ ಕ್ರುದ್ಧನಾಗಿ ಉತ್ತರಿಸಿದನು :

**ನ ಪಾಪಾನಾಂ ವಧೇ ಪಾಪಂ ವಿದ್ಯತೇ ಶತ್ರುಸೂದನ ।**
**ತಸ್ಮಾದೇನಂ ವಧಿಷ್ಯಾಮಿ ವಾನರಂ ಪಾಪಕಾರಿಣಮ್ ॥೧೧॥**

"ಶತ್ರುಹಂತಕನೇ! ಪಾಪಿಷ್ಠರನ್ನು ವಧಿಸುವುದರಿಂದ ಯಾವ

---

ವಿಷ್ಣುವನ್ನೇ ಬಾಣವನ್ನಾಗಿ ಹೊಂದಿದ್ದವನು. ಬ್ರಹ್ಮಾ = ಇವನು ರುದ್ರನ ತಂದೆ. ಬ್ರಹ್ಮಣಃ ಪುತ್ರಾಯ ಜ್ಯೇಷ್ಠಾಯ ಶ್ರೇಷ್ಠಾಯ ಎಂಬ ಶ್ರುತ್ಯುಕ್ತಿಯಂತೆ ಬ್ರಹ್ಮನು ರುದ್ರನ ತಂದೆ. ಸ್ವಯಂಭೂಃ – ಇವನ ಹುಟ್ಟಿಗೆ ಬೇರೊಬ್ಬರು ಕಾರಣರಲ್ಲ ; ತಾನೇ ಹುಟ್ಟಿದವನು. ಸ್ವಯಂಭವತೀತಿ ಸ್ವಯಂಭೂಃ । ಚತುರಾನನಃ –ನಾಲ್ಕು ಮುಖವಿರುವವನು. ಆದರೆ ಇವರಿಗೂ ಕೂಡ ಶ್ರೀರಾಮನಿಗೆ ಯಾವನು ವಧ್ಯನಾಗಿರುವನೋ ಅವನನ್ನು ರಕ್ಷಿಸಲು ಸಾಧ್ಯವಿಲ್ಲ. ಈ ಶ್ಲೋಕದಲ್ಲಿ ಶ್ರೀರಾಮನು ಮಹಾವಿಷ್ಣುವೇ–ಎಂಬುದು ಪ್ರತಿಪಾದಿತ ವಾಗಿರುವುದೆಂದು ಈ ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ.

ಪಾಪವೂ ಸೋಂಕದು. ಆದುದರಿಂದ ಪಾಪಕರ್ಮಿಯಾದ ಈ ವಾನರನನ್ನು ವಧಿಸುತ್ತೇನೆ."

ಅಧರ್ಮಕ್ಕೆ ಮೂಲಭೂತವಾದ, ಅನೇಕದೋಷಗಳಿಂದ ಕೂಡಿರುವ, ಕ್ಷುದ್ರಜನರಿಗೆ ಉಚಿತವಾದ ರಾವಣೇಶ್ವರನ ಆ ಮಾತನ್ನು ಕೇಳಿ ಬುದ್ಧಿವಂತರಲ್ಲಿ ಶ್ರೇಷ್ಠನಾದ ವಿಭೀಷಣನು ಪರಮಾರ್ಥತತ್ತ್ವರೂಪವಾದ ಈ ಮಾತನ್ನು ಹೇಳಿದನು :

**ಪ್ರಸೀದ ಲಙ್ಕೇಶ್ವರ ರಾಕ್ಷಸೇನ್ದ್ರ**
**ಧರ್ಮಾರ್ಥಯುಕ್ತಂ ವಚನಂ ಶೃಣುಷ್ವ ।**
**ದೂತಾನವಧ್ಯಾನ್ಸಮಯೇಷು ರಾಜನ್**
**ಸರ್ವೇಷು ಸರ್ವತ್ರ ವದನ್ತಿ ಸನ್ತಃ ॥೧೩॥**

"ಲಂಕೇಶ್ವರ! ರಾಕ್ಷಸೇಂದ್ರ! ಪ್ರಸನ್ನನಾಗು ಧರ್ಮಾರ್ಥತತ್ತ್ವದಿಂದ ಕೂಡಿರುವ ಈ ನನ್ನ ಮಾತನ್ನು ಕೇಳು. ಸ್ವಾಮಿಯ ಸಂದೇಶವನ್ನು ತಿಳಿಸಲು ಬಂದ ದೂತರನ್ನು ಯಾವುದೇ ಕಾರಣದಿಂದಲೂ ಯಾವುದೇ ಕಾಲದಲ್ಲಿಯೂ ವಧಿಸಬಾರದೆಂದು ಸತ್ಪುರುಷರು ಹೇಳುತ್ತಾರೆ.

ಊಹಿಸಲೂ ಅಸಾಧ್ಯವಾದಷ್ಟು ಅಪ್ರಿಯವಾದ ಕಾರ್ಯವನ್ನೇ ಇವನು ಮಾಡಿರಬಹುದು. ಆದುದರಿಂದ ನಮಗೆ ಇವನು ಪ್ರಬಲವಾದ ಶತ್ರುವೆಂಬುದರಲ್ಲಿ ಸಂದೇಹವೇ ಇಲ್ಲ. ಆದರೂ ಇವನು ಇಲ್ಲಿಗೆ ದೂತನಾಗಿ ಬಂದಿರುವನು. ದೂತವಧೆಯನ್ನು ಸತ್ಪುರುಷರು ಉಚಿತವೆಂದು ಭಾವಿಸುವುದಿಲ್ಲ. ವಧೆಯನ್ನು ಬಿಟ್ಟು ದೂತರಿಗೆ ವಿಧಿಸಬಹುದಾದ ಹಲವು ಬಗೆಯ ಶಿಕ್ಷೆಗಳಿವೆ.

**ವೈರೂಪ್ಯಮಙ್ಗೇಷು ಕಶಾಭಿಘಾತೋ**
**ಮೌಣ್ಡ್ಯಂ ತಥಾ ಲಕ್ಷಣಸಂನಿಪಾತಃ ।**
**ಏತಾನ್ಹಿ ದೂತೇ ಪ್ರವದನ್ತಿ ದಣ್ಡಾ-**
**ನ್ವಧಸ್ತು ದೂತಸ್ಯ ನ ನಃ ಶ್ರುತೋಽಸ್ತಿ ॥೧೫॥**

ಅವಯವಗಳಲ್ಲಿ ವಿರೂಪವನ್ನುಂಟುಮಾಡುವುದು, ಚಾವಟಿಯಿಂದ ಪ್ರಹರಿಸುವುದು, ತಲೆಬೋಳಿಸುವುದು, ಅವಲಕ್ಷಣಗೊಳಿಸುವುದು–ಇಂತಹ ಶಿಕ್ಷೆಗಳು ದೂತನಿಗೆ ಯುಕ್ತವೆಂದು ರಾಜನೀತಿಜ್ಞರು ಹೇಳುತ್ತಾರೆ. ಆದರೆ

ದೂತನಿಗೆ ಮರಣದಂಡನೆಯ ಶಿಕ್ಷೆಯನ್ನು ನಾವು ಇದುವರೆಗೂ ಕೇಳಿಯೇ ಇಲ್ಲ.

ಧರ್ಮಾರ್ಥಗಳ ವಿಷಯದಲ್ಲಿ ವಿನೀತವಾದ ಬುದ್ಧಿಯುಳ್ಳ, ಒಳ್ಳೆಯದು ಯಾವುದು? ಕೆಟ್ಟುದು ಯಾವುದು?–ಎಂಬ ವಿಷಯದಲ್ಲಿ ನಿಶ್ಚಿತವಾದ ಬುದ್ಧಿಯನ್ನು ಹೊಂದಿರುವ ನಿನ್ನಂತಹವನು ಹೇಗೆ ತಾನೇ ಕೋಪಕ್ಕೆ ವಶನಾಗುವನು? **'ಕೋಪಂ ನಿಯಚ್ಛನ್ತಿ ಹಿ ಸತ್ತ್ವವನ್ತಃ।'** ವೀರ್ಯವಂತರು ಯಾವಾಗಲೂ ಕೋಪವನ್ನು ನಿಗ್ರಹಿಸುವರಲ್ಲವೇ? ಧರ್ಮವನ್ನು ಪ್ರತಿಪಾದಿಸುವುದರಲ್ಲಿ, ಲೌಕಿಕಾಚಾರದಲ್ಲಿ, ಶಾಸ್ತ್ರಜ್ಞಾನದಲ್ಲಿ ಮತ್ತು ಧಾರಣೆಯಲ್ಲಿ ನಿನಗೆ ಸಮಾನರಾದವರು ಯಾರೂ ಇಲ್ಲ. ಸಮಸ್ತಸುರಾಸುರರಿಗಿಂತಲೂ ನೀನು ಈ ವಿಷಯಗಳಲ್ಲಿ ಶ್ರೇಷ್ಠನಾಗಿರುವೆ. ಮಹಾತ್ಮರಾಗಿರುವ ಸುರಾಸುರರೂ ಪರಾಕ್ರಮದಿಂದಲೂ ಮತ್ತು ಉತ್ಸಾಹದಿಂದಲೂ ನಿನ್ನನ್ನು ಜಯಿಸಲಾರರು. ಅಪರಾಧಮಾಡಿದ್ದರೂ ಅಪ್ರಮೇಯವಾದ ಬಲವುಳ್ಳ ನೀನು ಅನೇಕ ರಾಜರನ್ನೂ ದೇವತೆಗಳನ್ನೂ ಹಲವಾರು ಬಾರಿ ಪರಾಜಯಗೊಳಿಸಿರುವೆ. ದೇವ-ದಾನವರಿಗೆ ಶತ್ರುವಾದ, ಶೂರನಾದ, ವೀರನಾದ, ಅಜೇಯನಾದ ನಿನ್ನ ವಿಷಯದಲ್ಲಿ ಅನೇಕ ವೀರರು ಮನಸ್ಸನಿಂದಲೇ ಆದರೂ ಅಪರಾಧ ಗಳನ್ನು ಮಾಡಿರುವರು. ಆದರೆ ಅವರಾರನ್ನೂ ನೀನು ಸಂಹರಿಸಿರುವುದಿಲ್ಲ.

**ನ ಚಾಪ್ಯಸ್ಯ ಕಪೇರ್ಘಾತೇ ಕಂಚಿತ್ಪಶ್ಯಾಮ್ಯಹಂ ಗುಣಮ್ ।**
**ತೇಷ್ವಯಂ ಪಾತ್ಯತಾಂ ದಣ್ಡೋ ಯೈರಯಂ ಪ್ರೇಷಿತಃ ಕಪಿಃ ॥**

ಈ ಕಪಿಯನ್ನು ವಧಿಸುವುದರಿಂದ ನಾನು ಯಾವ ಪ್ರಯೋಜನವನ್ನೂ ಕಾಣುತ್ತಿಲ್ಲ. ಇದನ್ನು ಯಾರು ಇಲ್ಲಿಗೆ ಕಳುಹಿಸಿಕೊಟ್ಟಿರುವರೋ ಅವರ ಮೇಲೆ ನೀನು ದಂಡವನ್ನು ಪ್ರಯೋಗಿಸು. ಅದು ತಾನೇ ಒಳ್ಳೆಯದು!

**ಸಾಧುರ್ವಾ ಯದಿ ವಾಸಾಧುಃ ಪರೈರೇಷ ಸಮರ್ಪಿತಃ ।**
**ಬ್ರುವನ್ಪರಾರ್ಥಂ ಪರವಾನ್ನ ದೂತೋ ವಧಮರ್ಹತಿ ॥೨೧॥**

ಇವನು ದುಷ್ಟನೇ ಆಗಿರಲಿ ; ಒಳ್ಳೆಯವನೇ ಆಗಿರಲಿ–ಬೇರೆಯವರಿಂದ ಕಳುಹಿಸಲ್ಪಟ್ಟು ಇವನು ಇಲ್ಲಿಗೆ ಬಂದಿರುವನು. ದೂತನು ಯಾವಾಗಲೂ ಇತರರ ಪ್ರಯೋಜನವನ್ನೇ ಕುರಿತು ಮಾತನಾಡುತ್ತಾನೆ. ಇತರರಿಗೆ ಅಧೀನನಾಗಿರುತ್ತಾನೆ. ಅವನನ್ನು ವಧಿಸುವುದು ಯೋಗ್ಯವಲ್ಲ.

**ಅಪಿ ಚಾಸ್ಮಿನ್ಹತೇ ನಾನ್ಯಂ ರಾಜನ್ಪಶ್ಯಾಮಿ ಖೇಚರಮ್ ।**
**ಇಹ ಯಃ ಪುನರಾಗಚ್ಛೇತ್ಪರಂ ಪಾರಂ ಮಹೋದಧೇಃ ॥೨೨॥**

ಇವನು ಹತನಾದರೆ ಆಕಾಶದಲ್ಲಿ ಹಾರಿಕೊಂಡು ಮಹೋದಧಿಯ ದಕ್ಷಿಣತೀರದ ಈ ಲಂಕೆಗೆ ಬರುವ ಮತ್ತ್ಯಾರನ್ನೂ ನಾನು ಕಾಣೆನು.*

**ತಸ್ಮಾನ್ನಾಸ್ಯ ವಧೇ ಯತ್ನಃ ಕಾರ್ಯಃ ಪರಪುರಂಜಯ ।**
**ಭವಾನ್ಸೇನ್ದ್ರೇಷು ದೇವೇಷು ಯತ್ನಮಾಸ್ಥಾತುಮರ್ಹತಿ ॥೨೩॥**

ಶತ್ರುಗಳ ಪಟ್ಟಣಗಳನ್ನು ಜಯಿಸುವ ಸಾಮರ್ಥ್ಯವುಳ್ಳವನೇ! ನಾನು ಹೇಳಿರುವ ಈ ಕಾರಣಗಳಿಂದ ನೀನು ಇವನ ವಧೆಗೆ ಯತ್ನಿಸಬೇಡ. ಅದೇ ನೀನು ನಿನ್ನ ಪರಮಶತ್ರುಗಳಾದ ಇಂದ್ರಸಹಿತರಾದ ದೇವತೆಗಳನ್ನು ಸಂಹರಿಸುವ ಕಾರ್ಯದಲ್ಲಿ ಉದ್ಯುಕ್ತನಾಗು.

ಯುದ್ಧಪ್ರಿಯನೇ! ಇವನೇನಾದರೂ ಹತನಾಗಿಬಿಟ್ಟರೆ–ನಿನ್ನ ವಿಷಯದಲ್ಲಿ ಅವಿಧೇಯರಾಗಿರುವ, ನಿನಗೆ ಅತ್ಯಂತ ವಿರೋಧಿಗಳಾಗಿರುವ, ಮಾನವ ರಾಜಕುಮಾರರನ್ನು ನಿನ್ನೊಡನೆ ಯುದ್ಧಮಾಡಲು ಬೇರೆ ಯಾವನು ತಾನೇ ಉತ್ತೇಜಿಸುತ್ತಾನೆ?*

ರಾಕ್ಷಸರ ಮನಸ್ಸನ್ನು ಸಂತೋಷಗೊಳಿಸುವವನೇ! ಸುರಾಸುರರಿಗೂ ಅಜೇಯನಾಗಿರುವ ನೀನೇ ಪರಾಕ್ರಮ ಮತ್ತು ಉತ್ಸಾಹಗಳಲ್ಲಿ ಮನಸ್ವಿ ಗಳಾದ ರಾಕ್ಷಸರ ಯುದ್ಧಮಾರ್ಗವನ್ನು ನಾಶಗೊಳಿಸುವುದು ಯುಕ್ತವಾಗಿ ಕಾಣುವುದಿಲ್ಲ. ನಿನ್ನ ಕಡೆಯ ಸೈನಿಕರು ಯಾವಾಗಲೂ ನಿನ್ನ ಹಿತವನ್ನೇ ಬಯಸುವವರು–ಶೂರರು, ಸಂತುಷ್ಟರು ; ಮಹಾಗುಣಯುಕ್ತವಾದ ಕುಲದಲ್ಲಿ ಹುಟ್ಟಿರುವವರು; ಒಳ್ಳೆಯ ಮನಸ್ಸುಳ್ಳವರು ; ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾ

---

* 'ಹನುಮಂತನನ್ನು ವಧಿಸಿಬಿಟ್ಟರೆ ರಾಮ-ಲಕ್ಷ್ಮಣರಿಗೆ ವಿಷಯವೇ ತಿಳಿಯುವುದಿಲ್ಲ. ಅವರು ಇಲ್ಲಿಗೆ ಬರಲಾರರು. ಅವರು ಬಾರದಿದ್ದರೆ ಶತ್ರುಗಳ ನಾಶವಾಗುವುದಿಲ್ಲ. ಹನುಮಂತನು ಇಲ್ಲಿಯ ವಾರ್ತೆಯನ್ನು ತಿಳಿದು ಪುನಃ ನಿರ್ಗಮಿಸುವಂತಾದರೆ ನಿನ್ನ ಶತ್ರುಗಳು ತಾವಾಗಿಯೇ ನಿನ್ನ ಬಳಿಗೆ ಬರುವರು. ಅವರನ್ನು ನೀನಿಲ್ಲಿಯೇ ನಿಗ್ರಹಿಸಬಹುದು. ಶತ್ರುವಿನಾಶಕ್ಕಾಗಿ ನೀನು ಈ ದೂತನನ್ನು ವಧಿಸಬಾರದು.' ಇದು ವಿಭೀಷಣನ ಯುಕ್ತಿಯುಕ್ತವಾದ ಮಾತಾಗಿದೆ.

* ಹನುಮಂತನು ಹತನಾದರೆ ನಿನ್ನ ಶತ್ರುಗಳನ್ನು ಯುದ್ಧಕ್ಕೆ ಪ್ರೋತ್ಸಾಹಿಸು

ದವರು ; ಕೋಟಿಯನ್ನೂ ಮೀರಿದ ಸಂಖ್ಯೆಯಲ್ಲಿರತಕ್ಕವರು. ನಿನ್ನಿಂದ ಚೆನ್ನಾಗಿ ಪೋಷಿಸಲ್ಪಡುತ್ತಿರುವವರು. ಈ ನಿನ್ನ ಮಹಾಸೈನ್ಯದಲ್ಲಿ ಕೆಲವರು ಮಾತ್ರವೇ ನಿನ್ನ ಆದೇಶವನ್ನು ಪಡೆದು ಆ ರಾಜಪುತ್ರರನ್ನು ಬಂಧಿಸಲು ಮತ್ತು ಶತ್ರುಗಳಲ್ಲಿ ನಿನ್ನ ಪ್ರಭಾವವೆಷ್ಟೆಂಬುದನ್ನು ಪ್ರಕಟಿಸಲು ಪ್ರಯಾಣ ಮಾಡಲಿ."

ರಾಕ್ಷಸರಿಗೆ ಅಧಿಪತಿಯಾದ, ಸುರಲೋಕಶತ್ರುವಾದ, ರಾಕ್ಷಸರಾಜ ಮುಖ್ಯನಾದ ರಾವಣೇಶ್ವರನಿಗೆ ತಮ್ಮನಾದ ವಿಭೀಷಣನ ಉತ್ತಮವೂ ಇಷ್ಟವೂ ಆದ ಆ ಮಾತುಗಳು ಮನವರಿಕೆಯಾದುವು.

ಕ೨ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ಕ೩ನೆಯ ಸರ್ಗ

## ರಾಕ್ಷಸರು ಹನುಮಂತನ ಬಾಲಕ್ಕೆ ಬೆಂಕಿಯನ್ನು ಹಚ್ಚಿ ನಗರದಲ್ಲಿ ಮೆರವಣಿಗೆ ಮಾಡಿದುದು

**ತಸ್ಯ ತದ್ವಚನಂ ಶ್ರುತ್ವಾ ದಶಗ್ರೀವೋ ಮಹಾತ್ಮನಃ ।**
**ದೇಶಕಾಲಹಿತಂ ವಾಕ್ಯಂ ಭ್ರಾತುರುತ್ತರಮಬ್ರವೀತ್ ॥೧॥**

ಮಹಾತ್ಮನಾದ ಮತ್ತು ಅನುಜನಾದ ವಿಭೀಷಣನ ದೇಶ-ಕಾಲೋಚಿತವಾದ ಮತ್ತು ಹಿತವಾದ ಮಾತನ್ನು ಕೇಳಿ ರಾವಣನು ಹೀಗೆ ಉತ್ತರಿಸಿದನು :

**ಸಮ್ಯಗುಕ್ತಂ ಹಿ ಭವತಾ ದೂತವಧ್ಯಾ ವಿಗರ್ಹಿತಾ ।**
**ಅವಶ್ಯಂ ತು ವಧಾದನ್ಯಃ ಕ್ರಿಯತಾಮಸ್ಯ ನಿಗ್ರಹಃ ॥೨॥**

"ವಿಭೀಷಣ! ನೀನು ಉಚಿತವಾದುದನ್ನೇ ಹೇಳಿರುವೆ. ದೂತನ ವಧೆಯು ನಿಂದ್ಯವೇ ಸರಿ. ವಧೆಯನ್ನು ಬಿಟ್ಟು ಬೇರೆಯ ರೀತಿಯಲ್ಲಿ ಇವನಿಗೆ ಶಿಕ್ಷೆಯಾಗಲಿ. ಕಪಿಗಳಿಗೆ ಬಾಲವು ಇಷ್ಟವಾಗಿರುತ್ತದೆ. ಭೂಷಣವೂ ಆಗಿರುತ್ತದೆ. ಆದುದರಿಂದ ಈ ಕಪಿಯ ಬಾಲವನ್ನು ಸುಟ್ಟುಹಾಕಿರಿ. ಸುಟ್ಟುಹೋದ ಬಾಲದೊಡನೆ ಇವನು ಹಿಂದಿರುಗಲಿ. ದೀನನಾಗುವ ಮತ್ತು ಶರೀರದ

---

ವವರೇ ಇಲ್ಲದಂತಾಗಿ ಅವರು ನಿನ್ನೊಡನೆ ಯುದ್ಧಮಾಡಲು ಬರುವುದೇ ಇಲ್ಲ. ಶತ್ರುಗಳ ವಿನಾಶವಾಗಬೇಕಾದರೆ ಈ ದೂತನು ಹೋಗಲೇಬೇಕು. ರಾಮ-ಲಕ್ಷ್ಮಣರನ್ನು ಯುದ್ಧಕ್ಕೆ ಪ್ರಚೋದಿಸಲೇಬೇಕು.

ಒಂದು ಅಂಗವನ್ನೇ ಕಳೆದುಕೊಂಡು ದುಃಖಿತನಾಗುವ ಈ ವಾನರನನ್ನು ನಮ್ಮ ಒಳ್ಳೆಯ ಮಿತ್ರರೂ, ಎಲ್ಲ ಜ್ಞಾತಿಗಳೂ, ಬಂಧುಗಳೂ, ಸುಹೃಜ್ಜನರೂ ನೋಡಲಿ. ಈ ಕೂಡಲೇ ಈ ವಾನರನ ಬಾಲಕ್ಕೆ ಬೆಂಕಿಯನ್ನು ಹೊತ್ತಿಸಿ ಇವನನ್ನು ಚೌಕಗಳಿಂದ ಕೂಡಿದ ನಗರದ ಎಲ್ಲ ಭಾಗಗಳಿಗೂ ರಾಕ್ಷಸರು ಒಯ್ಯಲಿ."

ರಾವಣನ ಆ ಮಾತನ್ನು ಕೇಳಿ ಕೋಪದಿಂದ ಕರ್ಕಶರಾಗಿದ್ದ ರಾಕ್ಷಸರು ಹಳೆಯ ಬಟ್ಟೆಗಳನ್ನು ಹನುಮಂತನ ಬಾಲಕ್ಕೆ ಸುತ್ತಲು ಪ್ರಾರಂಭಿಸಿದರು. ಹೀಗೆ ರಾಕ್ಷಸರು ಬಟ್ಟೆಗಳನ್ನು ಬಾಲಕ್ಕೆ ಸುತ್ತುತ್ತಿರಲು—ಒಣಗಿಹೋದ ಕಟ್ಟಿಗೆಯಲ್ಲಿರುವ ಬೆಂಕಿಯು ಕ್ಷಣ-ಕ್ಷಣಕ್ಕೂ ವರ್ಧಿಸುವಂತೆ—ಮಹಾಕಪಿಯಾದ ಹನುಮಂತನು ಬೆಳೆಯತೊಡಗಿದನು. ಅವನ ಬಾಲವೂ ಹಾಗೆಯೇ ಬೆಳೆಯಿತು. ಅನಂತರ ರಾಕ್ಷಸರು ರಾವಣೇಶ್ವರನ ಆಜ್ಞೆಯಂತೆ ವಸ್ತ್ರದಿಂದ ಸುತ್ತಲ್ಪಟ್ಟಿದ್ದ ಹನುಮಂತನ, ಬಾಲವನ್ನು ಎಣ್ಣೆಯಲ್ಲಿ ನೆನಸಿ ಬೆಂಕಿಯನ್ನು ಹೊತ್ತಿಸಿದರು.

ರೋಷಾವಿಷ್ಟನಾಗಿ ಬಾಲಸೂರ್ಯನಂತೆಯೇ ಕಾಣುತ್ತಿದ್ದ ಹನುಮಂತನು ಧಗ-ಧಗನೆ ಉರಿಯುತ್ತಿದ್ದ ತನ್ನ ಬಾಲದಿಂದಲೇ ಸುತ್ತಲೂ ಇದ್ದ ರಾಕ್ಷಸರನ್ನು ಪ್ರಹರಿಸಿದನು. ಪುನಃ ಕ್ರೂರಿಗಳಾದ ಆ ರಾಕ್ಷಸರು ಕಪಿಶ್ರೇಷ್ಠನಾದ ಹನುಮಂತನನ್ನು ಸುತ್ತುವರಿದು ನಿಂತರು. ಮಾರುತಿಗೆ ಕೊಟ್ಟ ಆ ಶಿಕ್ಷೆಯಿಂದ ಸುಪ್ರೀತರಾದ ರಾಕ್ಷಸರು ಸ್ತ್ರೀ ಬಾಲ-ವೃದ್ಧರೊಡನೆ ಹನುಮಂತ ನಿದ್ದ ಸ್ಥಳಕ್ಕೆ ಧಾವಿಸಿದರು. ಬಂಧಿಸಲ್ಪಟ್ಟಿದ್ದ ಹನುಮಂತನು ಸಮಯೋ ಚಿತವಾಗಿ ಹೀಗೆ ಆಲೋಚಿಸಿದನು :

"ನಾನು ಬಂಧಿಸಲ್ಪಟ್ಟಿದ್ದರೂ ರಾಕ್ಷಸರು ನನ್ನನ್ನು ಏನೂ ಮಾಡಲಾರರು. ನನಗೆ ತೊಂದರೆಮಾಡುವ ಶಕ್ತಿಯು ಇವರಿಗಿಲ್ಲ. ಕಟ್ಟಿರುವ ಹಗ್ಗಗಳನ್ನೂ ಕ್ಷಣಮಾತ್ರದಲ್ಲಿ ಕತ್ತರಿಸಿ ಮೇಲಕ್ಕೆ ಹಾರಿ ಇವರೆಲ್ಲರನ್ನೂ ಸಂಹರಿಸಿಬಿಡುವೆನು. ಸ್ವಾಮಿಯ ಹಿತಕ್ಕಾಗಿ ಸಂಚರಿಸುತ್ತಿದ್ದ ನನ್ನನ್ನು ಈ ರಾಕ್ಷಸರು ತಮ್ಮ ಒಡೆಯನಾದ ರಾವಣನ ಆದೇಶದಂತೆ ಬಂಧಿಸಿರುವರು. ಇದರಿಂದ ಇವರು ನನಗೇನೂ ಪ್ರತೀಕಾರಮಾಡಿದಂತಾಗಲಿಲ್ಲ. ಯುದ್ಧದಲ್ಲಿ ಎಲ್ಲ ರಾಕ್ಷಸರನ್ನೂ ಎದುರಿಸಲು ನಾನೊಬ್ಬನೇ ಸಾಕು. ಆದರೆ ಶ್ರೀರಾಮನ

ಪ್ರೀತ್ಯರ್ಥವಾಗಿ ನಾನು ಈ ಬಂಧನವನ್ನು ಇದುವರೆಗೂ ಸಹಿಸಿಕೊಂಡಿರುವೆನು. ನಾನು ಪುನಃ ಲಂಕೆಯಲ್ಲಿ ಸುತ್ತಾಡಬೇಕಾಗಿದೆ. ಏಕೆಂದರೆ : ನಾನು ಈ ಹಿಂದೆ ರಾತ್ರಿಯಲ್ಲಿ ಸುತ್ತಾಡಿದೆನು. ಇಲ್ಲಿಯ ದುರ್ಗದ ಕಾರ್ಯವಿಧಾನವನ್ನು ಪರಿಶೀಲಿಸಲು ಸಾಧ್ಯವಾಗಲಿಲ್ಲ. ರಾತ್ರಿಯ ಕೊನೆಯಲ್ಲಿ ನಾನು ಈ ಲಂಕಾಪಟ್ಟಣವನ್ನು ಅವಶ್ಯವಾಗಿ ನೋಡಲೇಬೇಕು. ಆದುದರಿಂದ ಈ ರಾಕ್ಷಸರು ಬಾಲವನ್ನು ಹೊತ್ತಿಸುವುದರ ಮೂಲಕ ತಮಗೆ ಇಚ್ಛೆಬಂದಂತೆ ಎಷ್ಟಾದರೂ ಪೀಡಿಸಲಿ. ಇದರಿಂದ ನನಗೆ ಯಾವ ಆಯಾಸವೂ ಆಗುವುದಿಲ್ಲ."

ಹನುಮಂತನು ಹೀಗೆ ನಿಶ್ಚಯಿಸಿ ರಾಕ್ಷಸರು ಬಾಲವನ್ನು ಹೊತ್ತಿಸುತ್ತಿದ್ದರೂ ಯಾವುದೇ ಪ್ರತಿಕ್ರಿಯೆಯನ್ನೂ ತೋರದೇ ಅವರ ಜೊತೆಯಲ್ಲೇ ಹೋಗುತ್ತಿದ್ದನು. ಅದರಿಂದ ರಾಕ್ಷಸರು ಪರಮಹೃಷ್ಟರಾಗಿ ನಿಗೂಢವಾದ ಆಕಾರವುಳ್ಳವನಾಗಿದ್ದ, ಮಹಾವೀರ್ಯವಂತನಾದ, ಕಪಿಶ್ರೇಷ್ಠನಾದ ಹನುಮಂತನನ್ನು ಹಿಡಿದುಕೊಂಡು ಹೊರಟರು.

ಕ್ರೂರಕರ್ಮಿಗಳಾದ ರಾಕ್ಷಸರು ಶಂಖ-ಭೇರೀನಿನಾದಗಳಿಂದಲೂ, ಚಪ್ಪಾಳೆಗಳಿಂದಲೂ, ಸಿಂಹನಾದಗಳಿಂದಲೂ ಶಬ್ದಮಾಡುತ್ತಾ ಹನುಮಂತನನ್ನು ಲಂಕಾಪಟ್ಟಣದ ಎಲ್ಲ ಕಡೆಗಳಲ್ಲಿಯೂ ಸುತ್ತಾಡಿಸಿದರು. ಶತ್ರುಗಳನ್ನು ದಮನಮಾಡುವ ಸಾಮರ್ಥ್ಯವನ್ನು ಹೊಂದಿದ್ದ ಹನುಮಂತನು, ರಾಕ್ಷಸರಿಂದ ಅನುಸರಿಸಲ್ಪಟ್ಟ ಮಹಾಪಟ್ಟಣವಾದ ಲಂಕೆಯನ್ನು ಶ್ರಮವಿಲ್ಲದೇ ಸುಖವಾಗಿ ಪರಿಶೀಲಿಸಿದನು. ಲಂಕಾಪಟ್ಟಣದಲ್ಲಿದ್ದ ವಿಚಿತ್ರವಾದ ಏಳು ಅಂತಸ್ತುಗಳ ಉಪ್ಪರಿಗೆಮನೆಗಳನ್ನೂ, ನಿಗೂಢವಾದ ಭೂಪ್ರದೇಶಗಳನ್ನೂ, ಚೆನ್ನಾಗಿ ವಿಭಾಗಿಸಲ್ಪಟ್ಟಿದ್ದ ಚೌಕಗಳನ್ನೂ, ವೀಥಿಗಳನ್ನೂ, ಮನೆಗಳ ಸಮೂಹಗಳನ್ನೂ, ರಾಜಮಾರ್ಗಗಳನ್ನೂ, ಕಾಲುದಾರಿಗಳನ್ನೂ, ಸಣ್ಣ-ಸಣ್ಣ ಮನೆಗಳನ್ನೂ, ಅಂಗಳಗಳನ್ನೂ ನೋಡಿದನು. ಎಲ್ಲ ರಾಕ್ಷಸರೂ ಹನು ಮಂತನನ್ನು ಕುರಿತು–'ಗೂಢಚಾರನು ಸಿಕ್ಕಿಬಿದ್ದನು! ಎಲ್ಲರೂ ನೋಡಿರಿ!'– ಎಂದು ಘೋಷಣೆಮಾಡುತ್ತಿದ್ದರು. ಪ್ರಜ್ವಲಿಸುತ್ತಿದ್ದ ಬಾಲದಿಂದ ಕೂಡಿದ್ದ ಹನುಮಂತನನ್ನು ನೋಡುವ ಕುತೂಹಲದಿಂದ ಲಂಕಾಪಟ್ಟಣದ ಸ್ತ್ರೀ-ಬಾಲ-ವೃದ್ಧರೆಲ್ಲರೂ ಬೀದಿಗೆ ಧಾವಿಸಿಬಂದರು. ಹನುಮಂತನ ಬಾಲದ ತುದಿಯು ಹೊತ್ತಿಕೊಂಡು ಉರಿಯುತ್ತಿರುವಾಗ ಸೀತಾದೇವಿಯ ಸುತ್ತಲೂ

ಕುಳಿತಿದ್ದ ವಿರೂಪವಾದ ಕಣ್ಣುಗಳಿದ್ದ ರಾಕ್ಷಸಿಯರು ಅಪ್ರಿಯವಾದ ಈ ವಿಷಯವನ್ನು ಅವಳಿಗೆ ಹೇಳಿದರು :

**ಯಸ್ತ್ವಯಾ ಕೃತಸಂವಾದಃ ಸೀತೇ ತಾಮ್ರಮುಖಃ ಕಪಿಃ ।**
**ಲಾಙ್ಗೂಲೇನ ಪ್ರದೀಪ್ತೇನ ಸ ಏಷ ಪರಿಣೀಯತೇ ॥೨೬॥**

"ಸೀತೇ! ಕೆಂಪುಮೂತಿಯ ಕಪಿಯೊಂದು ನಿನ್ನೊಡನೆ ಮಾತನಾಡುತ್ತಿದ್ದಿತಲ್ಲವೇ! ಆ ಕಪಿಯ ಬಾಲವು ಈಗ ಧಗ-ಧಗನೆ ಉರಿಯುತ್ತಿದೆ. ರಾಕ್ಷಸನಾಯಕರು ಅದನ್ನು ಲಂಕಾಪಟ್ಟಣದಲ್ಲೆಲ್ಲಾ ಸುತ್ತಾಡಿಸುತ್ತಿದ್ದಾರೆ."

ತನ್ನ ಸಾವಿಗೆ ಸಮಾನವಾದ, ಕರ್ಣಕಠೋರವಾದ ರಾಕ್ಷಸಿಯರ ಆ ಮಾತನ್ನು ಕೇಳಿ ಶೋಕದಿಂದ ಪರಿತಪಿಸುತ್ತಿದ್ದ ವೈದೇಹಿಯು ಯಜ್ಞೇಶ್ವರನನ್ನು ಮನಸ್ಸಿನಲ್ಲಿಯೇ ಧ್ಯಾನಿಸಿದಳು. ಆ ಸಮಯದಲ್ಲವಳು ಮಹಾಕಪಿಯಾದ ಹನುಮಂತನ ಶ್ರೇಯಸ್ಸನ್ನೇ ಕೋರುತ್ತಿದ್ದಳು. ವಿನೀತಳಾಗಿ ಅಗ್ನಿಯನ್ನು ಹೀಗೆ ಪ್ರಾರ್ಥಿಸಿದಳು :

**ಯದ್ಯಸ್ತಿ ಪತಿಶುಶ್ರೂಷಾ ಯದ್ಯಸ್ತಿ ಚರಿತಂ ತಪಃ ।**
**ಯದಿ ಚಾಸ್ತ್ಯೇಕಪತ್ನೀತ್ವಂ ಶೀತೋ ಭವ ಹನೂಮತಃ ॥೨೭॥**

"ಯಜ್ಞೇಶ್ವರ! ನಾನೇನಾದರೂ ಪತಿಶುಶ್ರೂಷೆಯನ್ನು ಮಾಡಿದ್ದರೆ–ತಪಸ್ಸನ್ನು ಮಾಡಿದ್ದರೆ–ನನ್ನಲ್ಲಿ ಪಾತಿವ್ರತ್ಯವಿರುವುದಾದರೆ–ನೀನು ಹನುಮಂತನ ವಿಷಯದಲ್ಲಿ ಶೀತಲನಾಗು.

**ಯದಿ ಕಶ್ಚಿದನುಕ್ರೋಶಸ್ತಸ್ಯ ಮಯ್ಯಸ್ತಿ ಧೀಮತಃ ।**
**ಯದಿ ವಾ ಭಾಗ್ಯಶೇಷೋ ಮೇ ಶೀತೋ ಭವ ಹನೂಮತಃ ॥೨೮॥**

ಬುದ್ಧಿವಂತನಾದ ನನ್ನ ಪತಿಗೆ ನನ್ನ ವಿಷಯದಲ್ಲಿ ಸ್ವಲ್ಪವಾದರೂ ಕರುಣೆಯಿರುವುದಾದರೆ–ನನ್ನಲ್ಲಿ ಭಾಗ್ಯವೇನಾದರೂ ಉಳಿದಿದ್ದರೆ–ಹನುಮಂತನ ವಿಷಯದಲ್ಲಿ ಶೀತಲನಾಗು.

**ಯದಿ ಮಾಂ ವೃತ್ತಸಂಪನ್ನಾಂ ತತ್ಸಮಾಗಮಲಾಲಸಾಮ್ ।**
**ಸ ವಿಜಾನಾತಿ ಧರ್ಮಾತ್ಮಾ ಶೀತೋ ಭವ ಹನೂಮತಃ ॥೨೯॥**

ಧರ್ಮಾತ್ಮನಾದ ಶ್ರೀರಾಮನು ನನ್ನನ್ನು ಸದಾಚಾರಸಂಪನ್ನಳೆಂದೂ

ತನ್ನೊಡನೆ ಸಮಾಗಮಹೊಂದುವ ಆಕಾಂಕ್ಷೆಯುಳ್ಳವಳೆಂದೂ ತಿಳಿದಿರುವುದಾದರೆ ನೀನು ಹನುಮಂತನ ವಿಷಯದಲ್ಲಿ ಶೀತಲನಾಗು.

**ಯದಿ ಮಾಂ ತಾರಯೇದಾರ್ಯಃ ಸುಗ್ರೀವಃ ಸತ್ಯಸಂಗರಃ ।**
**ಅಸ್ಮಾದ್ದುಃಖಾಮ್ಬುಸಂರೋಧಾಚ್ಛೀತೋ ಭವ ಹನೂಮತಃ ॥**

ಪೂಜ್ಯನಾದ, ಸತ್ಯಸಂಧನಾದ ಸುಗ್ರೀವನು ನನ್ನನ್ನು ಈ ದುಃಖ ಸಾಗರದಿಂದ ಪಾರುಮಾಡುವುದು ಸತ್ಯವಾದರೆ–ಹನುಮಂತನ ವಿಷಯದಲ್ಲಿ ಶೀತಲನಾಗು."

ಸೀತಾದೇವಿಯು ಹೀಗೆ ಪ್ರಾರ್ಥಿಸಲಾಗಿ ತೀಕ್ಷ್ಣವಾದ ಜ್ವಾಲೆಗಳುಳ್ಳ ಅಗ್ನಿದೇವನು, ಜಿಂಕೆಯ ಕಣ್ಣುಗಳಂತೆ ಚಂಚಲವಾದ ಕಣ್ಣುಗಳನ್ನು ಹೊಂದಿದ್ದ ಆಕೆಗೆ ಕಪಿಯು ಸೌಖ್ಯವಾಗಿರುವನೆಂಬುದನ್ನು ಸೂಚಿಸುತ್ತಿರುವನೋ ಎಂಬಂತೆ ಶಾಂತನಾದನು ಮತ್ತು ಅವನ ಜ್ವಾಲೆಗಳು ಪ್ರದಕ್ಷಿಣಾಕಾರವಾಗಿ ತಿರುಗಿದುವು. ಹನುಮಂತನ ತಂದೆಯಾದ ವಾಯುದೇವನು ಮಗನ ಬಾಲದಲ್ಲಿ ಬೆಂಕಿಯೊಡನೆ ಸೇರಿಕೊಂಡು ಹಿಮವತ್ಪರ್ವತದಲ್ಲಿ ಬೀಸುವ ಶೀತಲವಾದ ವಾಯುವಿನಷ್ಟು ತಂಪಾಗಿ ಬೀಸುತ್ತಾ ಸೀತಾದೇವಿಯ ಮನಸ್ಸಿಗೆ ಸಮಾಧಾನವನ್ನುಂಟುಮಾಡಿದನು.

ಇತ್ತಲಾಗಿ ಧಗ-ಧಗನೆ ಬಾಲವು ಉರಿಯುತ್ತಿರುವಾಗ ಹನುಮಂತನು ಚಿಂತಿಸತೊಡಗಿದನು :

**ದೃಶ್ಯತೇ ಚ ಮಹಾಜ್ವಾಲಃ ಕರೋತಿ ಚ ನ ಮೇ ರುಜಮ್ ।**
**ಶಿಶಿರಸ್ಯೇವ ಸಂಪಾತೋ ಲಾಙ್ಗೂಲಾಗ್ರೇ ಪ್ರತಿಷ್ಠಿತಃ ॥೩೩॥**

"ನನ್ನ ಬಾಲದಲ್ಲಿರುವ ಬೆಂಕಿಯೇನೋ ಧಗ-ಧಗನೆ ಉರಿಯುತ್ತಿದೆ. ಆದರೆ ಇದು ನನಗೆ ಸ್ವಲ್ಪವಾದರೂ ಯಾತನೆಯನ್ನುಂಟುಮಾಡುತ್ತಿಲ್ಲ. ಬಾಲದ ತುದಿಯಲ್ಲಿ ಮಂಜುಗಡ್ಡೆಯನ್ನಿಟ್ಟಿರುವಂತೆ ಭಾಸವಾಗುತ್ತಿದೆ.

**ಅಥವಾ ತದಿದಂ ವ್ಯಕ್ತಂ ಯದ್ದೃಷ್ಟಂ ಪ್ಲವತಾ ಮಯಾ ।**
**ರಾಮಪ್ರಭಾವಾದಾಶ್ಚರ್ಯಂ ಪರ್ವತಃ ಸರಿತಾಂ ಪತೌ ॥೩೪॥**

ಅಥವಾ ಶ್ರೀರಾಮನ ಪ್ರಭಾವದಿಂದ ಬೆಂಕಿಯು ನನ್ನ ವಿಷಯದಲ್ಲಿ ಶೀತಲವಾಗಿ ಪರಿಣಮಿಸಿರಬಹುದು. ಏಕೆಂದರೆ : ಈ ಹಿಂದೆ ನಾನು ಸಮುದ್ರ

ವನ್ನು ಹಾರಿಕೊಂಡು ಬರುವ ಸಮಯದಲ್ಲಿ ಸಮುದ್ರದಿಂದ ಪರ್ವತವು ಮೇಲೆದ್ದು ಬಂದ ಆಶ್ಚರ್ಯಕರವಾದ ದೃಶ್ಯವನ್ನು ನೋಡಿದೆನಲ್ಲವೇ!

**ಯದಿ ತಾವತ್ಸಮುದ್ರಸ್ಯ ಮೈನಾಕಸ್ಯ ಚ ಧೀಮತಃ ।**
**ರಾಮಾರ್ಥಂ ಸಂಭ್ರಮಸ್ತಾದೃಕ್ಕಿಮಗ್ನಿರ್ನ ಕರಿಷ್ಯತಿ ॥೩೫॥**

ಮೈನಾಕನಿಗೂ ಸಮುದ್ರನಿಗೂ ಶ್ರೀರಾಮನ ವಿಷಯದಲ್ಲಿ ಅಷ್ಟೊಂದು ತವಕವಿರುವುದಾರೆ ಅಗ್ನಿಗೇಕೆ ಅಂತಹ ಸಂಭ್ರಮವಿರಬಾರದು?

**ಸೀತಾಯಾಶ್ಚಾನೃಶಂಸ್ಯೇನ ತೇಜಸಾ ರಾಘವಸ್ಯ ಚ ।**
**ಪಿತುಶ್ಚ ಮಮ ಸಖ್ಯೇನ ನ ಮಾಂ ದಹತಿ ಪಾವಕಃ ॥೩೬॥**

ಸೀತಾದೇವಿಯ ದಯಾಪರತೆಯಿಂದಲೂ, ಶ್ರೀರಾಮನ ಪ್ರಭಾವ ದಿಂದಲೂ, ಅಗ್ನಿಗೂ ಮತ್ತು ನನ್ನ ತಂದೆಗೂ ಇರುವ ಗೆಳೆತನದಿಂದಲೂ ಅಗ್ನಿಯು ನನ್ನನ್ನು ಸುಡುತ್ತಿಲ್ಲ."

ಹನುಮಂತನು ಹೀಗೆ ಅಗ್ನಿಯು ಸುಡದಿರುವುದಕ್ಕೆ ನಾನಾಕಾರಣ ಗಳನ್ನು ಯೋಚಿಸುತ್ತಾ ಪುನಃ ತನ್ನ ಮುಂದಿನ ಕರ್ತವ್ಯದ ವಿಷಯವಾಗಿ ಸಮಾಲೋಚಿಸತೊಡಗಿದನು :

**ಕಥಮಸ್ಮದ್ವಿಧಸ್ಯೇಹ ಬನ್ಧನಂ ರಾಕ್ಷಸಾಧಮೈಃ ।**
**ಪ್ರತಿಕ್ರಿಯಾಸ್ಯ ಯುಕ್ತಾ ಸ್ಯಾತ್ಸತಿ ಮಹ್ಯಂ ಪರಾಕ್ರಮೇ ॥೩೭॥**

"ಶ್ರೀರಾಮನ ಸಂಪೂರ್ಣವಾದ ಅನುಗ್ರಹವನ್ನು ಪಡೆದಿರುವ ನನ್ನನ್ನು ಈ ರಾಕ್ಷಸರು ಹೇಗೆ ತಾನೇ ಬಂಧಿಸಿದರು? ನನ್ನಲ್ಲಿ ಪರಾಕ್ರಮವಿದ್ದುದಾದರೆ ನಾನು ಈ ಬಂಧನಕ್ಕೆ ತಕ್ಕುದಾದ ಪ್ರತೀಕಾರವನ್ನು ಮಾಡುವುದು ಯುಕ್ತವಾಗಿಯೇ ಇದೆ."

ಹೀಗೆ ನಿಶ್ಚಯಿಸಿದ ಹನುಮಂತನು ಮರುಕ್ಷಣದಲ್ಲಿಯೇ ತನ್ನನ್ನು ಬಂಧಿಸಿದ್ದ ಹಗ್ಗಗಳನ್ನು ಕ್ಷಣಮಾತ್ರದಲ್ಲಿ ಕತ್ತರಿಸಿ ವೇಗವಾಗಿ ಮೇಲಕ್ಕೆ ಹಾರಿ ಸಿಂಹನಾದಮಾಡಿದನು. ಬಳಿಕ ಶ್ರೀಮಂತನಾದ ಆತನು ಪರ್ವತಶಿಖರದಂತೆ ಎತ್ತರವಾಗಿ ಬೆಳೆದು ಗುಂಪು-ಗುಂಪಾದ ರಾಕ್ಷಸರ ತಂಡಗಳಿಂದ ನಿಬಿಡ

ವಾಗಿದ್ದ ಪಟ್ಟಣದ ಮಹಾದ್ವಾರಕ್ಕೆ ಹೋದನು. ಮರುಕ್ಷಣದಲ್ಲಿಯೇ ದೇಹ ವನ್ನು ಸಣ್ಣದಾಗಿಸಿಕೊಂಡು ಬಿಗಿದಿದ್ದ ಕಟ್ಟುಗಳನ್ನು ಬಿಡಿಸಿಕೊಂಡನು. ಬಂಧನದಿಂದ ಮುಕ್ತನಾದೊಡನೆಯೇ ಪುನಃ ಪುರ್ವತೋಪಮನಾದನು. ಎಲ್ಲೆಡೆಗಳಲ್ಲಿಯೂ ಕುತೂಹಲದಿಂದ ವೀಕ್ಷಿಸುತ್ತಾ ಮಹಾದ್ವಾರದಲ್ಲಿದ್ದ ಕಬ್ಬಿಣದ ಅಗಳಿಯನ್ನು ನೋಡಿದನು. ಅದನ್ನೆತ್ತಿಕೊಂಡು ಪುರದ್ವಾರವನ್ನು ರಕ್ಷಿಸುತ್ತಿದ್ದ ರಾಕ್ಷಸರೆಲ್ಲರನ್ನೂ ಸದೆಬಡಿದನು. ಯುದ್ಧದಲ್ಲಿ ಕಡುಗಲಿಯಾದ ಹನುಮಂತನು ಪುರದ್ವಾರದ ರಕ್ಷಕರೆಲ್ಲರನ್ನೂ ಸಂಹರಿಸಿ, ಪುನಃ ಲಂಕಾ ಪಟ್ಟಣವನ್ನೇ ನೋಡುತ್ತಿದ್ದನು. ಧಗ-ಧಗನೆ ಉರಿಯುತ್ತಿದ್ದ ಬಾಲವು ಅವನ ಸುತ್ತಲೂ ಕಿರಣಗಳ ಮಾಲೆಯಂತೆಯೇ ಕಾಣುತ್ತಿದ್ದಿತು. ಆ ಸಮಯದಲ್ಲ ವನು ಕಿರಣಗಳ ಮಾಲೆಯಿಂದ ಪ್ರಕಾಶಿಸುವ ಸೂರ್ಯನಂತೆಯೇ ಕಾಣು ತ್ತಿದ್ದನು.

೫೩ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೫೪ನೆಯ ಸರ್ಗ

## ಲಂಕಾಪುರಿಯ ದಹನ : ರಾಕ್ಷಸರ ವಿಲಾಪ

**ವೀಕ್ಷಮಾಣಸ್ತತೋ ಲಙ್ಕಾಂ ಕಪಿಃ ಕೃತಮನೋರಥಃ ।**
**ವರ್ಧಮಾನಸಮುತ್ಸಾಹಃ ಕಾರ್ಯಶೇಷಮಚಿನ್ತಯತ್ ॥೧॥**

ಇಷ್ಟಾರ್ಥವನ್ನು ಪೂರೈಸಿಕೊಂಡ, ಹೆಚ್ಚುತ್ತಿರುವ ಉತ್ಸಾಹದಿಂದ ಕೂಡಿದ್ದ ಮಾರುತಿಯು ಲಂಕಾಪಟ್ಟಣವನ್ನು ನೋಡುತ್ತಾ ಉಳಿದಿರುವ ಕಾರ್ಯದ ವಿಷಯವಾಗಿ ಚಿಂತಿಸತೊಡಗಿದನು :

"ಈ ಸಮಯದಲ್ಲಿ ನಾನು ಮಾಡಬೇಕಾಗಿರುವ ಯಾವ ಕಾರ್ಯವು ಉಳಿದಿದೆ? ಇಲ್ಲಿರುವ ರಾಕ್ಷಸರಿಗೆ ಮತ್ತಷ್ಟು ದುಃಖವನ್ನುಂಟುಮಾಡುವ ಯಾವ ಕಾರ್ಯವನ್ನು ನಾನೀಗ ಮಾಡಲಿ? ಅಶೋಕವನವನ್ನು ಹಾಳು ಮಾಡಿದ್ದಾಯಿತು. ಬಲಿಷ್ಠರಾದ ರಾಕ್ಷಸರನ್ನು ಕೊಂದದ್ದೂ ಆಯಿತು. ರಾಕ್ಷಸ ಸೈನ್ಯದ ಒಂದು ಭಾಗವನ್ನೂ ನಾಶಗೊಳಿಸಿಯಾಯಿತು. ಉಳಿದಿರುವ ಕಾರ್ಯ ವೆಂದರೆ ದುರ್ಗದ ವಿನಾಶ. ದುರ್ಗವನ್ನು ವಿನಾಶಗೊಳಿಸಿಬಿಟ್ಟರೆ ನನ್ನ ಪರಿಶ್ರಮವು ಸುಖದಲ್ಲಿ ಮುಕ್ತಾಯಗೊಂಡಂತಾಗುತ್ತದೆ. ಅಲ್ಪಪ್ರಯತ್ನದ

ಈ ನನ್ನ ಕಾರ್ಯದಲ್ಲಿ ಶ್ರಮವು ಹೆಚ್ಚು ಫಲದಾಯಕವಾಗುತ್ತದೆ. ನನ್ನ ಬಾಲದಲ್ಲಿ ದೇದೀಪ್ಯಮಾನನಾಗಿ ಬೆಳಗುತ್ತಿರುವ ಯಜ್ಞೇಶ್ವರನಿಗೆ ಇಲ್ಲಿರುವ ಶ್ರೇಷ್ಠವಾದ ಸೌಧಗಳನ್ನು ಆಹುತಿಗಳನ್ನಾಗಿಸಿ ಆತನನ್ನು ತೃಪ್ತಿಗೊಳಿಸುವುದು ನ್ಯಾಯವಾಗಿ ಕಾಣುತ್ತದೆ." ಹೀಗೆ ಯೋಚಿಸಿ ಹನುಮಂತನು ದುರ್ಗಕ್ಕೆ ಬೆಂಕಿಯಿಟ್ಟು ವಿನಾಶಗೊಳಿಸಲು ನಿಶ್ಚಯಿಸಿದನು.



ಮಿಂಚಿನಿಂದ ಕೂಡಿದ ಮೇಘದಂತೆ ಬೆಳಗುತ್ತಿದ್ದ ಬಾಲದಿಂದ ಪ್ರಕಾಶಿಸುತ್ತಿದ್ದ ಮಹಾಕಪಿಯು ಲಂಕಾಪಟ್ಟಣದ ಸೌಧಗಳ ಮೇಲ್ಭಾಗಗಳಲ್ಲಿ ಸಂಚರಿಸತೊಡಗಿದನು. ಒಬ್ಬ ರಾಕ್ಷಸನ ಮನೆಯಿಂದ ಮತ್ತೊಬ್ಬ ರಾಕ್ಷಸನ ಮನೆಗೂ, ಒಂದು ಕೈದೋಟದಿಂದ ಮತ್ತೊಂದು ಕೈದೋಟಕ್ಕೂ ಹೋಗುತ್ತಾ

ರಾಕ್ಷಸರ ಉಪ್ಪರಿಗೆ ಮನೆಗಳನ್ನು ನೋಡುತ್ತಾ ಸ್ವಲ್ಪವೂ ಬಳಲಿಕೆಯೇ ಇಲ್ಲದೇ ಆತನು ಸಂಚರಿಸುತ್ತಿದ್ದನು. ಮಹಾವೇಗವಂತನಾದ ಮಾರುತಿಯು ಛಂಗನೆ ಹಾರಿ ಪ್ರಹಸ್ತನ ಮನೆಗೆ ಹೋಗಿ ಅದನ್ನು ಬಾಲದ ಬೆಂಕಿಯಿಂದ ಹೊತ್ತಿಸಿ ಮುಂದೆ ಹೋದನು. ಪ್ರಳಯಕಾಲದ ಅಗ್ನಿಯ ಜ್ವಾಲೆಗಳಂತಿದ್ದ ಬಾಲದ ಅಗ್ನಿಯ ಜ್ವಾಲೆಗಳಿಂದ ಮಹಾಪಾರ್ಶ್ವರಾಕ್ಷಸನ ಮನೆಯನ್ನು ಹೊತ್ತಿಸಿ ವಜ್ರದಂಷ್ಟ್ರನ ಮನೆಗೆ ಹಾರಿದನು. ಅವನ ಮನೆಯನ್ನೂ ಬಾಲದಲ್ಲಿದ್ದ ಬೆಂಕಿಯಿಂದ ಹೊತ್ತಿಸಿದ ನಂತರ ಮಹಾತೇಜಸ್ವಿಯಾದ ಹನುಮಂತನು ಶುಕ-ಸಾರಣ-ಇಂದ್ರಜಿತು-ಇವರ ಮನೆಗಳನ್ನೂ ಜಂಬುಮಾಲಿ-ಸುಮಾಲಿಗಳ ಮನೆಗಳನ್ನೂ ಅನುಕ್ರಮವಾಗಿ ಸುಟ್ಟುಹಾಕಿದನು. ಬಳಿಕ ಮುಂದು-ಮುಂದಕ್ಕೆ ಹಾರಿಕೊಂಡು ಹೋಗುತ್ತಾ ರಶ್ಮಿಕೇತು, ಸೂರ್ಯ ಶತ್ರು, ಹ್ರಸ್ವಕರ್ಣ, ದಂಷ್ಟ್ರ, ರೋಮಶ, ಯುದ್ಧೋನ್ಮತ್ತನಾದ ಮತ್ತ, ಧ್ವಜಗ್ರೀವ, ವಿದ್ಯುಜ್ಜಿಹ್ವ, ಘೋರ, ಹಸ್ತಿಮುಖ, ಕರಾಲ, ಪಿಶಾಚ, ಶೋಣಿತಾಕ್ಷ, ಕುಂಭಕರ್ಣ, ಮಕರಾಕ್ಷ, ನರಾಂತಕ, ಕುಂಭ, ದುರಾತ್ಮನಾದ ನಿಕುಂಭ, ಯಜ್ಞಶತ್ರು, ಬ್ರಹ್ಮಶತ್ರು–ಇವರುಗಳ ಸೌಧಗಳನ್ನೂ ಅನುಕ್ರಮವಾಗಿ ಸುಟ್ಟುಹಾಕಿದನು. ವಿಭೀಷಣನ ಮನೆಯೊಂದನ್ನು ಬಿಟ್ಟು ಹನುಮಂತನು ಎಲ್ಲ ರಾಕ್ಷಸರ ಮನೆಗಳನ್ನೂ ಸುಟ್ಟುಹಾಕಿದನು. ಮಹಾಕೀರ್ತಿಶಾಲಿಯಾದ ಹನುಮಂತನು ಬಹುಮೂಲ್ಯವಾದ ಆ ಭವನಗಳಲ್ಲೂ ಮತ್ತು ಐಶ್ವರ್ಯಸಂಪನ್ನರಾದ ಇತರ ರಾಕ್ಷಸರ ಗೃಹಗಳಲ್ಲೂ ಇದ್ದ ರತ್ನ-ಸುವರ್ಣಾದಿ ಸಂಪತ್ತೆಲ್ಲವನ್ನೂ ಭಸ್ಮಮಾಡಿಬಿಟ್ಟನು. ವೀರ್ಯವಂತನಾದ ಮತ್ತು ತೇಜಸ್ವಿಯಾದ ಮಾರುತಿಯು ರಾಕ್ಷಸರೆಲ್ಲರ ಮನೆಗಳನ್ನೂ ಸುಟ್ಟ ನಂತರ ರಾವಣನ ಅರಮನೆಗೂ ಹೋದನು. ನಾನಾವಿಧವಾದ ರತ್ನಗಳಿಂದ ವಿಭೂಷಿತವಾಗಿದ್ದ, ಮೇರು-ಮಂದರಪರ್ವತಗಳಿಗೆ ಸಮಾನವಾಗಿ ಕಾಣುತ್ತಿದ್ದ, ನಾನಾವಿಧವಾದ ಮಂಗಳದ್ರವ್ಯಗಳಿಂದ ಸುಶೋಭಿಸುತ್ತಿದ್ದ, ಪ್ರಧಾನಭೂತವಾಗಿದ್ದ ರಾವಣನ ಅರಮನೆಯಲ್ಲಿ ಬಾಲದಲ್ಲಿ ಪ್ರದೀಪ್ತವಾಗಿದ್ದ ಅಗ್ನಿಯನ್ನು ಇರಿಸಿ ಪ್ರಳಯಕಾಲದಲ್ಲಿನ ಮೇಘದಂತೆ ಗರ್ಜನೆ ಮಾಡಿದನು.

ವೇಗವಂತನಾದ ಮತ್ತು ಮಹಾಬಲಿಷ್ಠನಾದ ಯಜ್ಞೇಶ್ವರನು ಗಾಳಿಯ

ಸಹಯೋಗದಿಂದ ಪ್ರಳಯಕಾಲದ ಅಗ್ನಿಯಂತೆ ಪ್ರಜ್ವಲಿಸುತ್ತಾ ಎಲ್ಲ ಕಡೆಗಳಲ್ಲಿಯೂ ಹರಡಿಕೊಂಡನು.

ರಾಕ್ಷಸರ ಮನೆಗಳಲ್ಲಿ ಪ್ರಜ್ವಲಿಸುತ್ತಿದ್ದ ಅಗ್ನಿಯನ್ನು ವಾಯುವು ತನ್ನ ಪ್ರಭಾವದಿಂದ ಸರ್ವತ್ರ ಹರಡುತ್ತಿರಲು ಸುವರ್ಣಮಯವಾದ ಬಲೆಗಳಿಂದಲೂ, ಮುಕ್ತಾಮಣಿಗಳಿಂದಲೂ, ರತ್ನರಾಶಿಗಳಿಂದಲೂ ಸಮೃದ್ಧವಾಗಿದ್ದ ಎಲ್ಲ ಮಹಾಸೌಧಗಳನ್ನೂ ಅಗ್ನಿಯು ವಿನಾಶಗೊಳಿಸಿದನು. ಪುಣ್ಯವು ಕ್ಷಯಿಸಿದ ನಂತರ ಆಕಾಶದಿಂದ ಸಿದ್ಧರ ಭವ್ಯಭವನಗಳು ಕೆಳಕ್ಕೆ ಬೀಳುವಂತೆ–ಭಗ್ನವಾದ ಉಪ್ಪರಿಗೆಗಳಿಂದ ಕೂಡಿದ್ದ ಆ ಭವ್ಯಭವನಗಳು ಭಗ್ನವಾಗಿ ಕೆಳಗುರುಳಿದುವು. ಮನೆಗಳನ್ನು ರಕ್ಷಿಸಿಕೊಳ್ಳುವುದರಲ್ಲಿ ಉತ್ಸಾಹವನ್ನು ತೊರೆದಿದ್ದ ಮತ್ತು ಕಂಗೆಟ್ಟಿದ್ದ, ದಿಕ್ಕುಕಾಣದೇ ಓಡಿಹೋಗುತ್ತಿದ್ದ ರಾಕ್ಷಸರ ವಿಕಾರಧ್ವನಿಗಳು ಸರ್ವತ್ರ ಕೇಳಿಬರುತ್ತಿದ್ದುವು.

"ಅಯ್ಯೋ! ಕಪಿಯ ರೂಪವನ್ನು ಧರಿಸಿ ಯಜ್ಞೇಶ್ವರನೇ ನಮ್ಮೆಲ್ಲರನ್ನೂ ಸುಟ್ಟುಹಾಕಲು ಬರುತ್ತಿದ್ದಾನೆ"–ಮುಂತಾಗಿ ಕೂಗಿಕೊಂಡು ರೋದನಮಾಡುತ್ತಾ ಮಕ್ಕಳನ್ನೆತ್ತಿಕೊಂಡಿದ್ದ ಸ್ತ್ರೀಯರು ಕೆಳಗುರುಳಿದರು. ಅಗ್ನಿಯಿಂದ ಸಮಾವೃತರಾದ ಕೆಲವರು ಸ್ತ್ರೀಯರು ಕೂದಲುಗಳನ್ನು ಕೆದರಿಕೊಂಡು ಎತ್ತರವಾದ ಉಪ್ಪರಿಗೆಗಳಿಂದ ಕೆಳಕ್ಕೆ ಬೀಳುತ್ತಾ ಆಕಾಶದಿಂದ ಕೆಳಕ್ಕೆ ಬೀಳುವ ಮಿಂಚಿನಂತೆಯೇ ಪ್ರಕಾಶಿಸುತ್ತಿದ್ದರು. ವಜ್ರ-ಹವಳ-ವೈಡೂರ್ಯ-ಮುತ್ತು-ಬೆಳ್ಳಿ–ಇವೇ ಮುಂತಾದುವುಗಳಿಂದ ಸಮೃದ್ಧವಾಗಿದ್ದ ವಿಚಿತ್ರವಾದ ಭವನಗಳು ಅಗ್ನಿಗೆ ಆಹುತಿಯಾಗುತ್ತಿರುವುದನ್ನೂ ಕರಗಿನೀರಾಗಿ ಹರಿಯುತ್ತಿರುವ ಸುವರ್ಣವೇ ಮೊದಲಾದ ಧಾತುಗಳನ್ನೂ ಹನುಮಂತನು ನೋಡಿದನು. ಅಗ್ನಿಯು ಕಟ್ಟಿಗೆಗಳಿಂದಾಗಲೀ ಹುಲ್ಲುಗಳಿಂದಾಗಲೀ ತೃಪ್ತನಾಗದಿರುವಂತೆ–ಹನುಮಂತನು ರಾಕ್ಷಸಶ್ರೇಷ್ಠರ ಸಂಹಾರದಿಂದ ತೃಪ್ತನಾಗಲಿಲ್ಲ. ಹನುಮಂತನಿಂದ ಸಂಹೃತರಾದ ರಾಕ್ಷಸರಿಂದ ಭೂಮಿಯೂ ತೃಪ್ತಿಗೊಳ್ಳಲಿಲ್ಲ. ತ್ರಿಪುರಾಸುರರ ಪಟ್ಟಣವನ್ನು ರುದ್ರನು ಧ್ವಂಸಮಾಡಿದಂತೆ– ವೇಗವಂತನಾದ ಹನುಮಂತನು ಲಂಕೆಯನ್ನು ಸುಟ್ಟುಹಾಕಿದನು. ಲಂಕಾಪಟ್ಟಣಕ್ಕೆ ಆಧಾರಭೂತವಾದ ತ್ರಿಕೂಟಪರ್ವತಶಿಖರದಲ್ಲಿ ಹುಟ್ಟಿದ ಭಯಂಕರಪರಾಕ್ರಮವುಳ್ಳ ಅಗ್ನಿಯು ( ಜ್ವಾಲಾಮುಖಿಯು ) ಜ್ವಾಲೆಯ

ಪರಿಸರವನ್ನು ಹೆಚ್ಚಿಸಿಕೊಳ್ಳುತ್ತಾ ಹನುಮಂತನ ಮೂಲಕವಾಗಿ ರಾಕ್ಷಸರ ಮನೆಗಳಲ್ಲಿ ಪ್ರತಿಷ್ಠಿತವಾಗುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಧೂಮರಹಿತವಾದ ಜ್ವಾಲೆಗಳಿಂದ ಕೂಡಿದ್ದ ರಾಕ್ಷಸರ ಶರೀರಗಳೆಂಬ ತುಪ್ಪ ದಿಂದ ತೃಪ್ತಿಗೊಳ್ಳುತ್ತಿದ್ದ ಅಗ್ನಿಯು ಪ್ರಳಯಕಾಲದ ಅಗ್ನಿಗೆ ಸಮಾನವಾಗಿದ್ದು ಗಾಳಿಯ ಸಹಾಯದಿಂದ ಕ್ಷಣ-ಕ್ಷಣಕ್ಕೂ ವೃದ್ಧಿಹೊಂದುತ್ತಾ ಜ್ವಾಲೆಗಳ ಮೂಲಕವಾಗಿ ಆಕಾಶವನ್ನು ಮುಟ್ಟುತ್ತಿದ್ದಿತು. ಆ ಮಹಾಗ್ನಿಯು ಕೋಟಿ ಸೂರ್ಯರ ತೇಜಸ್ಸಿಗೆ ಸಮಾನವಾದ ತೇಜಸ್ಸನ್ನು ಹೊಂದಿ ಸಮಗ್ರವಾದ ಲಂಕಾಪಟ್ಟಣವನ್ನೇ ವ್ಯಾಪಿಸಿದ್ದಿತು. ಸಿಡಿಲಿನ ಶಬ್ದದಂತೆ ಭಯಂಕರವಾಗಿ ಶಬ್ದಮಾಡುತ್ತಾ ಬ್ರಹ್ಮಾಂಡವನ್ನೇ ಭೇದಿಸುತ್ತಿರುವುದೋ ಎಂಬಂತೆ ಕಾಣು ತ್ತಿದ್ದಿತು. ಕ್ರೂರವಾದ ಪ್ರಭೆಯುಳ್ಳ ಮುತ್ತುಗದ ಹೂಗಳನ್ನು ತಲೆಯಲ್ಲಿ ಧರಿಸಿರುವುದೋ ಎಂಬಂತೆ ಕಾಣುತ್ತಿದ್ದ ಅಗ್ನಿಯು ಆಕಾಶದವರೆಗೂ ವ್ಯಾಪಿಸಿಬಿಟ್ಟಿತು. ಬೆಂಕಿಯು ಆರಿಹೋದನಂತರ ಹುಟ್ಟಿದ ಹೊಗೆಯ ಸಾಲು ಗಳಿಂದ ಸಮಾವೃತವಾದ ಮೇಘಗಳು ಕನ್ನೈದಿಲೇ ಹೂಗಳಂತೆ ಕಾಂತಿ ಯಿಂದ ಕಂಗೊಳಿಸುತ್ತಿದ್ದುವು. ಹನುಮಂತನ ಬಾಲದಲ್ಲಿದ್ದ ಬೆಂಕಿಯಿಂದ ಮನೆ-ಮಠಗಳನ್ನು ಕಳೆದುಕೊಂಡಿದ್ದ ರಾಕ್ಷಸರು ಗೋಳಾಡುತ್ತಿದ್ದರು. "ಇವನು ತ್ರಿದಶೇಶ್ವರನಾದ, ವಜ್ರಪಾಣಿಯಾದ ಇಂದ್ರನೇ ಆಗಿರಬೇಕು. ಅಥವಾ ಸಾಕ್ಷಾತ್ ಯಮಧರ್ಮನಾಗಿರಬೇಕು. ಅಥವಾ ವರುಣನಾಗಿರ ಬೇಕು. ಅಥವಾ ವಾಯು, ರುದ್ರ, ಅಗ್ನಿ, ಸೂರ್ಯ, ಕುಬೇರ, ಸೋಮ ಇವರಲ್ಲಿ ಯಾವನಾದರೂ ಒಬ್ಬನಾಗಿರಬೇಕು. ಇವನು ನಮ್ಮ ಕಣ್ಣಿಗೆ ಕಾಣುತ್ತಿರುವಂತೆ ಖಂಡಿತವಾಗಿಯೂ ವಾನರನಲ್ಲ. ಇವನು ಸಾಕ್ಷಾತ್ ಕಾಲನೇ ಆಗಿದ್ದಾನೆ. ಸರ್ವರಿಗೂ ಪಿತಾಮಹನಾದ, ಚತುರ್ಮುಖನಾದ, ಲೋಕರಕ್ಷಕನಾದ ಬ್ರಹ್ಮನ ರಾಕ್ಷಸಸಂಹಾರಕವಾದ ಕೋಪವೇನಾದರೂ ವಾನರರೂಪವನ್ನು ಧರಿಸಿ ಇಲ್ಲಿಗೆ ಆಗಮಿಸಿರಬಹುದೇ? ಚಿಂತಿಸಲು ಅಶಕ್ಯವಾದ, ಅವ್ಯಕ್ತವಾದ, ಅನಂತವಾದ, ಅದ್ವಿತೀಯವಾದ ವೈಷ್ಣವಮಹಾತೇಜಸ್ಸೇನಾದರೂ ತನ್ನ ಮಾಯೆಯಿಂದ ಕಪಿರೂಪವನ್ನು ಧರಿಸಿ ರಾಕ್ಷಸರ ಸಂಹಾರಕ್ಕಾಗಿಯೇ ಇಲ್ಲಿಗೆ ಬಂದಿರಬಹುದೇ?"

ಪ್ರಾಣಿ-ವೃಕ್ಷ-ಸೌಧಗಳ ಸಮೇತವಾಗಿ ಹನುಮಂತನ ಬಾಲದ ಅಗ್ನಿ ಯಿಂದ ಸುಟ್ಟು ಭಸ್ಮವಾಗಿ ಹೋಗಿದ್ದ ಲಂಕಾಪಟ್ಟಣವನ್ನು ನೋಡಿ ರಾಕ್ಷಸ

ರೆಲ್ಲರೂ ಒಟ್ಟಾಗಿ ಸೇರಿಕೊಂಡು ಹಲವುಬಗೆಗಳಲ್ಲಿ ತಮ್ಮ-ತಮ್ಮಲ್ಲಿಯೇ ಆಡಿಕೊಳ್ಳುತ್ತಿದ್ದರು. ರಾಕ್ಷಸರು, ಕುದುರೆಗಳು, ರಥಗಳು, ಆನೆಗಳು, ಪ್ರಾಣಿಗಳ ಸಮೂಹಗಳು, ಪಕ್ಷಿಗಳು, ವೃಕ್ಷಗಳು ಇವುಗಳೆಲ್ಲದರೊಡನೆ ಭಸ್ಮವಾಗಿ ಹೋಗಿದ್ದ ಲಂಕೆಯು ಧೀನಭಾವದಿಂದ ಗಟ್ಟಿಯಾಗಿ ಅಳತೊಡಗಿತು.

"ಅಯ್ಯೋ! ತಂದೆಯೇ! ಅಯ್ಯೋ ಮಗನೇ! ಅಯ್ಯೋ ಪತಿಯೇ! ಅಯ್ಯೋ ಮಿತ್ರನೇ! ಅಯ್ಯೋ ಪ್ರಾಣಕಾಂತನೇ! ಪುಣ್ಯವೆಲ್ಲವೂ ಕಳೆದು ಹೋಯಿತು. ನಾವೆಲ್ಲರೂ ವಿನಾಶಹೊಂದಿದೆವು. ನೀನಿಲ್ಲದೇ ನಾವು ಬದುಕಿರುವುದಾದರೂ ಹೇಗೆ? ಕಪಿರೂಪನಾದ ಕಾಲನು ಎಲ್ಲವನ್ನೂ ಭಸ್ಮ ಮಾಡಿಬಿಟ್ಟನಲ್ಲವೇ? ಅಯ್ಯೋ!" ಇದೇ ಮುಂತಾಗಿ ರಾಕ್ಷಸರು ರೋದನ ಮಾಡುತ್ತಾ ಬಹುಭಯಂಕರವಾಗಿ ಕೂಗಿಕೊಳ್ಳುತ್ತಿದ್ದರು.

ಹನುಮಂತನ ಪ್ರಬಲವಾದ ಕೋಪದಿಂದ ತಿರಸ್ಕೃತವಾದ, ಯಜ್ಞೇಶ್ವರನ ಜ್ವಾಲೆಗಳಿಂದ ಸಮಾವೃತವಾದ, ಅನೇಕಯೋಧರನ್ನು ಕಳೆದುಕೊಂಡ, ಹಿಮ್ಮೆಟ್ಟಿದ ಅನೇಕಯೋಧರಿಂದ ಕೂಡಿದ್ದ ಆ ಲಂಕಾಪಟ್ಟಣವು–ಮಹಾತ್ಮನೊಬ್ಬನ ಶಾಪದಿಂದ ವಿನಾಶಹೊಂದಿತೋ–ಎಂಬಂತೆ ಕಾಣುತ್ತಿದ್ದಿತು. ಭಯದಿಂದ ವಿಹ್ವಲರಾಗಿ ವಿಷಣ್ಣವದನರಾಗಿದ್ದ ರಾಕ್ಷಸರಿಂದ ಪರಿವೃತವಾಗಿದ್ದ, ಊರ್ಧ್ವಮುಖವಾಗಿ ಉರಿಯುತ್ತಿದ್ದ ಜ್ವಾಲೆಗಳುಳ್ಳ ಬೆಂಕಿಯ ಸುಟ್ಟ ಗುರುತಿನಿಂದ ವ್ಯಾಪ್ತವಾಗಿದ್ದ, ಬ್ರಹ್ಮನ ಕೋಪದಿಂದ ವಿನಾಶಹೊಂದಿದ ಭೂಮಿಯಂತೆ ಕಾಣುತ್ತಿದ್ದ ಲಂಕಾಪಟ್ಟಣವನ್ನು ಮಹಾತ್ಮನಾದ ಹನುಮಂತನು ನೋಡಿದನು. ಹೀಗೆ ಮಾರುತಿಯು ಅಶೋಕವನವನ್ನು ಧ್ವಂಸ ಮಾಡಿ ಮಹಾ-ಮಹಾರಾಕ್ಷಸರನ್ನು ಯುದ್ಧದಲ್ಲಿ ಸಂಹರಿಸಿ ಶ್ರೇಷ್ಠವಾದ ಮನೆಗಳ ಸಾಲುಗಳಿಂದ ಸಮಲಂಕೃತವಾಗಿದ್ದ ಲಂಕಾಪಟ್ಟಣವನ್ನು ಸುಟ್ಟು ಹಾಕಿ ಸ್ವಸ್ಥನಾದನು. ಆ ಸಮಯದಲ್ಲಿ ವಾನರಶ್ರೇಷ್ಠನಾದ ಹನುಮಂತನು ವಿಚಿತ್ರವಾದ ತ್ರಿಕೂಟಪರ್ವತಶಿಖರದ ಅಗ್ರಭಾಗದಲ್ಲಿ ಸುಪ್ರತಿಷ್ಠಿತನಾಗಿ ನಿಂತಿದ್ದನು. ಪ್ರದೀಪ್ತವಾಗಿದ್ದ ಅಗ್ನಿಯ ಜ್ವಾಲೆಗಳೆಂಬ ಮಾಲೆಯನ್ನು ಧರಿಸಿದ್ದ ಅವನು ಅಂಶುಮಾಲಿಯಾದ ಸೂರ್ಯನಂತೆಯೇ ಪ್ರಕಾಶಿಸುತ್ತಿದ್ದನು. ಅನೇಕರಾಕ್ಷಸರನ್ನು ಸಂಹರಿಸಿ ಅನೇಕವೃಕ್ಷಗಳಿಂದ ನಿಬಿಡವಾಗಿದ್ದ ಅಶೋಕ ವನವನ್ನೂ ಧ್ವಂಸಮಾಡಿ, ರಾಕ್ಷಸರ ಮನೆಗಳಿಗೆ ಬೆಂಕಿಯನ್ನಿಟ್ಟು ಶ್ರೀರಾಮನನ್ನು

ಮನಸ್ಸಿನಲ್ಲಿ ಸ್ಮರಿಸಿಕೊಂಡನು. ವಾನರವೀರರಲ್ಲಿ ಪ್ರಮುಖನಾದ, ಮಹಾಬಲನಾದ, ವಾಯುಸಮಾನವೇಗನಾದ, ಮಹಾಮತಿಯಾದ, ವಾಯುಪುತ್ರನನ್ನು ಎಲ್ಲ ದೇವತೆಗಳೂ ಸ್ತೋತ್ರಮಾಡಿದರು. ಎಲ್ಲ ದೇವತೆಗಳೂ, ಮುನಿಶ್ರೇಷ್ಠರೂ, ಗಂಧರ್ವ-ವಿದ್ಯಾಧರ-ಪನ್ನಗರೂ, ಸಮಸ್ತಪ್ರಾಣಿಗಳೂ ಹನುಮಂತನ ವಿಷಯದಲ್ಲಿ–ಅವನು ಮಾಡಿದ ಆ ಅದ್ಭುತಕಾರ್ಯಕ್ಕಾಗಿ–ಎಣೆಯಿಲ್ಲದ ಪ್ರೀತಿಯನ್ನು ಹೊಂದಿದರು. ಮಹಾತೇಜಸ್ವಿಯಾದ ಹನುಮಂತನು ವನವನ್ನು ಧ್ವಂಸಮಾಡಿ ಯುದ್ಧದಲ್ಲಿ ರಾಕ್ಷಸರನ್ನು ಕೊಂದು ಸುಂದರವಾದ ಲಂಕಾಪಟ್ಟಣವನ್ನು ಸುಟ್ಟು ಬಹಳವಾಗಿ ವಿರಾಜಿಸಿದನು. ಬಳಿಕ ಅವನು ಲಂಕೆಯನ್ನು ಸಮಗ್ರವಾಗಿ ಸುಟ್ಟನಂತರ ಸಮುದ್ರದ ಬಳಿಗೆ ಹೋಗಿ ಬಾಲವನ್ನು ಸಮುದ್ರದಲ್ಲಿ ಅದ್ದಿ ಅಗ್ನಿಯನ್ನು ಶಮನಗೊಳಿಸಿದನು. ದೇವ-ಗಂಧರ್ವ-ಮಹರ್ಷಿಗಳು ಸುಟ್ಟುಹೋಗಿದ್ದ ಲಂಕೆಯನ್ನು ನೋಡಿ ಬಹಳವಾಗಿ ವಿಸ್ಮಯಗೊಂಡರು. ಸರ್ವಪ್ರಾಣಿಗಳೂ ವಾನರಶ್ರೇಷ್ಠನಾದ ಹನುಮಂತನನ್ನು ನೋಡಿ ಅವನನ್ನು ಪ್ರಳಯಕಾಲದ ದಾವಾಗ್ನಿಯೆಂದೇ ಭಾವಿಸಿ ಭಯಗೊಂಡುವು.

ಐವತ್ತನಾಲ್ಕನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೫೫ನೆಯ ಸರ್ಗ

## ಹನುಮಂತನು ಸೀತಾದೇವಿಯ ವಿಷಯವಾಗಿ ಚಿಂತಿಸಿದುದು : ಚಿಂತೆಯ ಪರಿಹಾರ

**ಸಂದೀಪ್ಯಮಾನಾಂ ವಿಧ್ವಸ್ತಾಂ ತ್ರಸ್ತರಕ್ಷೋಗಣಾಂ ಪುರೀಮ್ ।**
**ಅವೇಕ್ಷ್ಯ ಹನುಮಾನ್ ಲಙ್ಕಾಂ ಚಿನ್ತಯಾಮಾಸ ವಾನರಃ ॥೧॥**

ಬೆಂಕಿಯನ್ನು ಹಚ್ಚಿ ಸಂಪೂರ್ಣವಾಗಿ ವಿನಾಶಗೊಳಿಸಲ್ಪಟ್ಟು, ಭಯಗೊಂಡ ರಾಕ್ಷಸರಿಂದ ಕೂಡಿದ್ದ ಲಂಕಾಪಟ್ಟಣವನ್ನು ನೋಡಿ ಹನುಮಂತನು ಚಿಂತಿಸತೊಡಗಿದನು.

ಹಾಗೆ ಯೋಚಿಸುತ್ತಿದ್ದ ಹನುಮಂತನ ಮನಸ್ಸಿನಲ್ಲಿ ಸಂದೇಹವೊಂದು ಮೂಡಿ ಬಂದು ಬಹಳ ಸಂಕಟಕ್ಕೂ ಕಾರಣವಾಯಿತು. ತಾನು ಮಾಡಿದ ಕಾರ್ಯದ ವಿಷಯದಲ್ಲಿ ಜುಗುಪ್ಸೆಯೂ ಅವನಿಗೆ ಉಂಟಾಯಿತು.

“ಲಂಕೆಯನ್ನು ಭಸ್ಮಮಾಡಿ ನಾನು ಎಂತಹ ಕುತ್ಸಿತವಾದ ಕಾರ್ಯ ವನ್ನು ಮಾಡಿಬಿಟ್ಟೆನು?

ಧನ್ಯಾಸ್ತೇ ಪುರುಷಶ್ರೇಷ್ಠಾ
ಯೇ ಬುದ್ಧ್ಯಾ ಕೋಪಮುತ್ಥಿತಮ್ ।
ನಿರುನ್ಧನ್ತಿ ಮಹಾತ್ಮನೋ
ದೀಪ್ತಮಗ್ನಿಮಿವಾಮ್ಭಸಾ ॥೩॥

ಉರಿಯುತ್ತಿರುವ ಬೆಂಕಿಯನ್ನು ನೀರಿನಿಂದ ಆರಿಸುವಂತೆ–ಹೃದಯಾಂತರಾಳದಿಂದ ಉಕ್ಕಿಬರುವ ಕೋಪವನ್ನು ಬುದ್ಧಿಪೂರ್ವಕವಾಗಿ ತಡೆಯುವ ಮಹಾತ್ಮರೇ ಧನ್ಯರು.

ಕ್ರುದ್ಧಃ ಪಾಪಂ ನ ಕುರ್ಯಾತ್ಕಃ ಕ್ರುದ್ಧೋ ಹನ್ಯಾದ್ಗುರೂನಪಿ ।
ಕ್ರುದ್ಧಃ ಪರುಷಯಾ ವಾಚಾ ನರಃ ಸಾಧೂನಧಿಕ್ಷಿಪೇತ್ ॥೪॥

ವಾಚ್ಯಾವಾಚ್ಯಂ ಪ್ರಕುಪಿತೋ ನ ವಿಜಾನಾತಿ ಕರ್ಹಿಚಿತ್ ।
ನಾಕಾರ್ಯಮಸ್ತಿ ಕ್ರುದ್ಧಸ್ಯ ನಾವಾಚ್ಯಂ ವಿದ್ಯತೇ ಕ್ವಚಿತ್ ॥೫॥

ಯಃ ಸಮುತ್ಪತಿತಂ ಕ್ರೋಧಂ ಕ್ಷಮಯೈವ ನಿರಸ್ಯತಿ ।
ಯಥೋರಗಸ್ತ್ವಚಂ ಜೀರ್ಣಾಂ ಸ ವೈ ಪುರುಷ ಉಚ್ಯತೇ ॥೬॥

ಕೋಪಗೊಂಡ ಯಾವನು ತಾನೇ ಪಾಪವನ್ನು ಮಾಡುವುದಿಲ್ಲ? ಕೋಪಗೊಂಡವನು ಕಾರ್ಯಾಕಾರ್ಯಗಳ ವಿವೇಚನೆಯೇ ಇಲ್ಲದೇ ಗುರುಜನರನ್ನೂ ಸಂಹರಿಸುತ್ತಾನೆ. ಸತ್ಪುರುಷರನ್ನೂ ಕ್ರೂರವಾದ ಮಾತುಗಳಿಂದ ಹೀಯಾಳಿಸುತ್ತಾನೆ. ಕೋಪಗೊಂಡವನಿಗೆ ಯಾವ ಮಾತನ್ನು ಹೇಳಬೇಕು ; ಯಾವ ಮಾತನ್ನು ಹೇಳಬಾರದು–ಎಂಬ ಪರಿಜ್ಞಾನವೇ ಇರುವುದಿಲ್ಲ. ಅವನು ಮಾಡಬಾರದೆನ್ನುವ ಕಾರ್ಯವಿಲ್ಲ ; ಆಡಬಾರದೆನ್ನುವ ಮಾತಿಲ್ಲ. ಮಾಡಬಾರದುದನ್ನು ಮಾಡುತ್ತಾನೆ ; ಆಡಬಾರದುದನ್ನು ಆಡುತ್ತಾನೆ. ಯಾವನು ಹೃದಯಾಂತರಾಳದಿಂದ ಹುಟ್ಟಿಬಂದ ಕೋಪವನ್ನು–ಹಾವು ತನ್ನ ಪೊರೆಯನ್ನು ಕಳಚಿಹಾಕುವಂತೆ–ಕ್ಷಮೆಯನ್ನಾಶ್ರಯಿಸಿ ತೊರೆಯುವನೋ ಅಂತಹವನೇ ಪುರುಷನೆನಿಸಿಕೊಳ್ಳುವನು.

**ಧಿಗಸ್ತು ಮಾಂ ಸುದುರ್ಬುದ್ಧಿಂ ನಿರ್ಲಜ್ಜಂ ಪಾಪಕೃತ್ತಮಮ್ ।**
**ಅಚಿನ್ತಯಿತ್ವಾ ತಾಂ ಸೀತಾಮಗ್ನಿದಂ ಸ್ವಾಮಿಘಾತಕಮ್ ॥೭॥**

ಅತ್ಯಂತಮೂಢಬುದ್ಧಿಯಿಂದ ಕೂಡಿರುವ, ನಾಚಿಕೆಯಿಲ್ಲದ, ಮಹಾ ಪಾಪಿಯಾದ, ಸ್ವಾಮಿದ್ರೋಹಿಯಾದ–ಈ ಲಂಕಾಪಟ್ಟಣದಲ್ಲಿ ಸೀತೆಯಿರುವ ಳೆಂಬುದನ್ನು ಯೋಚಿಸದೆಯೇ–ಇದನ್ನು ಸುಟ್ಟುಹಾಕಿದ ನನಗೆ ಧಿಕ್ಕಾರ ವಿರಲಿ.

**ಯದಿ ದಗ್ಧಾ ತ್ವಿಯಂ ಲಙ್ಕಾ ನೂನಮಾರ್ಯಾಪಿ ಜಾನಕೀ ।**
**ದಗ್ಧಾ ತೇನ ಮಯಾ ಭರ್ತುರ್ಹತಂ ಕಾರ್ಯಮಜಾನತಾ ॥೮॥**

ಈ ಲಂಕೆಯೆಲ್ಲವೂ ಸಂಪೂರ್ಣವಾಗಿ ಸುಟ್ಟುಹೋಗಿರುವಾಗ ಜಾನಕಿಯೂ ನಿಜವಾಗಿಯೂ ಇದರಲ್ಲಿಯೇ ಬೆಂದುಹೋಗಿದ್ದಾಳೆ. ಇದ ರಿಂದಾಗಿ ನಾನೇ ನನ್ನ ಸ್ವಾಮಿಯ ಕಾರ್ಯವನ್ನು ಹಾಳುಮಾಡಿದಂತಾಯಿತು.

**ಯದರ್ಥಮಯಮಾರಮ್ಭಸ್ತತ್ಕಾರ್ಯಮವಸಾದಿತಮ್ ।**
**ಮಯಾ ಹಿ ದಹತಾ ಲಙ್ಕಾಂ ನ ಸೀತಾ ಪರಿರಕ್ಷಿತಾ ॥೯॥**

ನಾನು ಲಂಕಾಪಟ್ಟಣವನ್ನು ದಹಿಸುವಾಗ ಸೀತಾದೇವಿಯನ್ನು ರಕ್ಷಿಸುವ ಯೋಚನೆಯನ್ನೇ ಮಾಡಲಿಲ್ಲ. ಯಾವ ಕಾರ್ಯದ ಸಿದ್ಧಿಗಾಗಿ ನಾನು ಈ ಕಾರ್ಯವನ್ನು ಮಾಡಿದೆನೋ ಮೂಲಭೂತವಾದ ಆ ಕಾರ್ಯಸಿದ್ಧಿಯನ್ನೇ ಹಾಳುಮಾಡಿದಂತಾಯಿತು. ಸೀತಾದೇವಿಯನ್ನು ಸಂದರ್ಶಿಸಿದ ವಿಷಯವನ್ನು ಶ್ರೀರಾಮನಿಗೆ ನಿವೇದಿಸುವ ಸಣ್ಣ ಕಾರ್ಯವೊಂದು ಉಳಿದಿದ್ದಿತು. ಆದರೆ ಕೋಪಾವಿಷ್ಟನಾದ ನಾನು ಮಾಡಬಾರದುದನ್ನು ಮಾಡಿ ಮೂಲವನ್ನೇ ವಿನಾಶಗೊಳಿಸಿಬಿಟ್ಟೆನು. ಇದರಲ್ಲಿ ಸಂಶಯವೇ ಇಲ್ಲ. ಲಂಕಾಪಟ್ಟಣದಲ್ಲಿ ಸುಟ್ಟು ಭಸ್ಮವಾಗದೇ ಇರುವ ಯಾವ ಒಂದು ಪ್ರದೇಶವೂ ಕಾಣುತ್ತಿಲ್ಲ. ಇಡೀ ಪಟ್ಟಣವೇ ಸಂಪೂರ್ಣವಾಗಿ ಭಸ್ಮವಾಗಿದೆ. ಈ ಕಾರಣದಿಂದಾಗಿ ಸೀತಾದೇವಿಯೂ ವಿನಾಶಹೊಂದಿರುವಳೆಂಬುದು ಸ್ಪಷ್ಟವಾಗಿಯೇ ಇದೆ.

ಹೀಗೆ ನಾನು ಪ್ರಾರಂಭಿಸಿದ್ದ ಕಾರ್ಯವನ್ನು ಬುದ್ಧಿಯ ವಿಪರ್ಯಾಸ ದಿಂದ ನಾನೇ ಹಾಳುಮಾಡಿಬಿಟ್ಟೆನು. ಆದುದರಿಂದ ಇಲ್ಲಿಯೇ ಪ್ರಾಣತ್ಯಾಗ ಮಾಡುವುದು ಉಚಿತವಾಗಿ ಕಾಣುತ್ತದೆ.

**ಕಿಮಗ್ನೌ ನಿಪತಾಮ್ಯದ್ಯ ಆಹೋಸ್ವಿದ್ವಡವಾಮುಖೇ ।**
**ಶರೀರಮಾಹೋ ಸತ್ತ್ವಾನಾಂ ದದ್ಮಿ ಸಾಗರವಾಸಿನಾಮ್ ॥೧೩॥**

ಅಯ್ಯೋ! ನಾನೀಗ ಏನು ಮಾಡಲಿ? ಬೆಂಕಿಯಲ್ಲಿ ಬೀಳಲೇ? ಸಮುದ್ರದ ಬಡಬಾಗ್ನಿಯಲ್ಲಿ ಬಿದ್ದು ಪ್ರಾಣತೊರೆಯಲೇ? ನನ್ನೀ ಶರೀರವನ್ನು ತುಂಡು-ತುಂಡುಗಳನ್ನಾಗಿ ಕತ್ತರಿಸಿ ಈ ಸಮುದ್ರದಲ್ಲಿರುವ ಪ್ರಾಣಿಗಳಿಗೆ ತಿನ್ನಲು ಹಂಚಿಕೊಡಲೇ?

ಸಮಸ್ತಕಾರ್ಯಗಳನ್ನೂ ಹಾಳುಮಾಡಿರುವ ನಾನು ಜೀವಸಹಿತವಾಗಿ ಹರೀಶ್ವರನಾದ ಸುಗ್ರೀವನನ್ನು ಹೇಗೆ ನೋಡಲಿ? ಪುರುಷಸಿಂಹರಾದ ರಾಮ-ಲಕ್ಷ್ಮಣರನ್ನಾದರೂ ಹೇಗೆ ನೋಡಲಿ?

**ಮಯಾ ಖಲು ತದೇವೇದಂ ರೋಷದೋಷಾತ್ಪ್ರದರ್ಶಿತಮ್ ।**
**ಪ್ರಥಿತಂ ತ್ರಿಷು ಲೋಕೇಷು ಕಪಿತ್ವಮನವಸ್ಥಿತಮ್ ॥೧೫॥**

ಕೋಪದ ದೋಷದಿಂದಾಗಿ ಮೂರು ಲೋಕಗಳಲ್ಲಿ ಪ್ರಸಿದ್ಧವಾಗಿ ರುವ ಕಪಿತ್ವದ ಚಂಚಲತ್ವವನ್ನೇ ಪ್ರಸಿದ್ಧಪಡಿಸಿದೆನು. (ಅದಕ್ಕೆ ನಾನೂ ಹೊರತಾಗಿ ನಡೆದುಕೊಳ್ಳಲಿಲ್ಲ.)

**ಧಿಗಸ್ತು ರಾಜಸಂ ಭಾವಮನೀಶಮನವಸ್ಥಿತಮ್ ।**
**ಈಶ್ವರೇಣಾಪಿ ಯದ್ರಾಗಾನ್ಮಯಾ ಸೀತಾ ನ ರಕ್ಷಿತಾ ॥೧೬॥**

ಹಿಡಿತಕ್ಕೊಳಪಡದ ಅಸ್ಥಿರತೆಯ ರಾಜಸಭಾವಕ್ಕೆ ಧಿಕ್ಕಾರವಿರಲಿ. ನಾನು ಜಿತೇಂದ್ರಿಯನಾಗಿ ಸಮರ್ಥನಾಗಿದ್ದರೂ ರಾಜಸಭಾವಕ್ಕೆ ವಶನಾಗಿ ಬುದ್ಧಿಗೆಟ್ಟು ಸೀತಾದೇವಿಯನ್ನು ರಕ್ಷಿಸದೇ ಹೋದೆನಲ್ಲಾ?

ಸೀತಾದೇವಿಯ ವಿನಾಶದಿಂದಾಗಿ ರಾಮ-ಲಕ್ಷ್ಮಣರಿಬ್ಬರೂ ವಿನಾಶ ಹೊಂದುವರು. ರಾಜಕುಮಾರರ ವಿನಾಶದಿಂದ ಸುಗ್ರೀವನೂ ಬಂಧುಗಳೊ ಡನೆ ವಿನಾಶಹೊಂದುವನು. ಸೀತಾದೇವಿಯೂ, ರಾಮ-ಲಕ್ಷ್ಮಣರೂ, ಬಂಧುಗಳೊಡನೆ ಸುಗ್ರೀವನೂ ವಿನಾಶಹೊಂದಿದರೆಂಬ ದಾರುಣವಾರ್ತೆ ಯನ್ನು ಕೇಳಿ ಭ್ರಾತೃವತ್ಸಲನಾದ ಧರ್ಮಾತ್ಮನಾದ ಭರತನೂ ಶತ್ರುಘ್ನ ನೊಡನೆ ವಿನಾಶಹೊಂದುತ್ತಾನೆ. ಈ ಪರಿಯಾಗಿ ಧರ್ಮಸಂಪನ್ನವಾದ ಇಕ್ಷ್ವಾಕುವಂಶವೇ ಸಂಪೂರ್ಣವಾಗಿ ವಿನಾಶಹೊಂದಿದನಂತರ ಎಲ್ಲ ಪ್ರಜೆ

ಗಳೂ ಶೋಕ-ಸಂತಾಪಗಳಿಂದ ಪೀಡಿತರಾಗುತ್ತಾರೆ. ನಿಶ್ಚಯವಾಗಿಯೂ ನಿರ್ಭಾಗ್ಯನಾದ ನಾನೇ ಇವೆಲ್ಲಕ್ಕೂ ಕಾರಣನು. ಧರ್ಮಾರ್ಥಗಳ ತಿಳಿವಳಿಕೆಯಿಂದ ಹೀನನಾದವನು. ರೋಷವೆಂಬ ದೋಷದಿಂದ ಅಭಿಭೂತನಾಗಿರತಕ್ಕವನು. ಇದರಿಂದ ನಾನೇ ಲೋಕವಿನಾಶಕನೆಂಬುದು ಸ್ಪಷ್ಟವಾದಂತಾಯಿತು."

ಹೀಗೆ ಅನೇಕಪ್ರಕಾರವಾಗಿ ಯೋಚಿಸುತ್ತಿದ್ದ ಹನುಮಂತನಿಗೆ ಹಿಂದೆ ಕಾಣಿಸಿದ್ದಂತೆ ಅನೇಕ ಶುಭಶಕುನಗಳು ಸಾಕ್ಷಾತ್ತಾಗಿ ಕಾಣಿಸಿಕೊಂಡುವು. ಅವುಗಳನ್ನು ನೋಡಿ ಪುನಃ ಹನುಮಂತನು ಬೇರೆಯ ರೀತಿಯಲ್ಲಿ ಯೋಚಿಸತೊಡಗಿದನು :

**ಅಥವಾ ಚಾರುಸರ್ವಾಙ್ಗೀ ರಕ್ಷಿತಾ ಸ್ವೇನ ತೇಜಸಾ ।**
**ನ ನಶಿಷ್ಯತಿ ಕಲ್ಯಾಣೀ ನಾಗ್ನಿರಗ್ನೌ ಪ್ರವರ್ತತೇ ॥೨೨॥**

"ಒಂದು ವೇಳೆ ಸರ್ವಾಂಗಸುಂದರಿಯಾದ ಸೀತಾದೇವಿಯು ಅಪರಿಮಿತವಾದ ತನ್ನ ತೇಜಸ್ಸಿನಿಂದಲೇ ತನ್ನನ್ನು ರಕ್ಷಿಸಿಕೊಂಡಿರಬಹುದೇ? ಮಂಗಳಮಯಿಯಾದ ಅವಳು ವಿನಾಶಹೊಂದಿರಲಾರಳು. ಏಕೆಂದರೆ : ಒಂದು ಅಗ್ನಿಯು ಮತ್ತೊಂದು ಅಗ್ನಿಯಲ್ಲಿ ಪ್ರವರ್ತಿಸಲಾರದು. ಬೆಂಕಿಯು ಬೆಂಕಿಯನ್ನು ಎಲ್ಲಾದರೂ ಸುಡುವುದೇ?

**ನ ಹಿ ಧರ್ಮಾತ್ಮನಸ್ತಸ್ಯ ಭಾರ್ಯಾಮಮಿತತೇಜಸಃ ।**
**ಸ್ವಚಾರಿತ್ರಾಭಿಗುಪ್ತಾಂ ತಾಂ ಸ್ಪ್ರಷ್ಟುಮರ್ಹತಿ ಪಾವಕಃ ॥೨೩॥**

ಮಹಾತೇಜಸ್ವಿಯಾದ ಮತ್ತು ಧರ್ಮಾತ್ಮನಾದ ಶ್ರೀರಾಮನ ಭಾರ್ಯೆಯಾದ, ತನ್ನ ಸಚ್ಚಾರಿತ್ರದಿಂದಲೇ ತನ್ನನ್ನು ರಕ್ಷಿಸಿಕೊಳ್ಳಲು ಸಮರ್ಥಳಾಗಿ ರುವ ಸೀತಾದೇವಿಯನ್ನು ಮುಟ್ಟಲೂ ಕೂಡ ಅಗ್ನಿಯು ಸಮರ್ಥನಲ್ಲ.

**ನೂನಂ ರಾಮಪ್ರಭಾವೇಣ ವೈದೇಹ್ಯಾಃ ಸುಕೃತೇನ ಚ ।**
**ಯನ್ಮಾಂ ದಹನಕರ್ಮಾಯಂ ನಾದಹದ್ಧವ್ಯವಾಹನಃ ॥೨೪॥**

ನಿಜವಾಗಿಯೂ ಶ್ರೀರಾಮನ ಪ್ರಭಾವದಿಂದಲೂ ಮತ್ತು ವೈದೇಹಿಯ ಸುಕೃತದಿಂದಲೂ ದಹಿಸುವ ಸ್ವಭಾವವಿರುವ ಈ ಯಜ್ಞೇಶ್ವರನು ನನ್ನನ್ನೇ ಸುಡಲಿಲ್ಲ. ಹೀಗಿರುವಾಗ ವೈದೇಹಿಯನ್ನು ಹೇಗೆ ತಾನೇ ಮುಟ್ಟುವನು?

ಭರತ-ಶತ್ರುಘ್ನ-ಲಕ್ಷ್ಮಣರಿಗೆ ದೇವತಾಸ್ವರೂಪಳಾಗಿರುವ, ಶ್ರೀರಾಮನ ಮನಸ್ಸನ್ನು ಉಲ್ಲಾಸಗೊಳಿಸುವ ಸೀತಾದೇವಿಯು ಹೇಗೆ ತಾನೇ ವಿನಾಶ ಹೊಂದುವಳು?

**ಯದ್ವಾ ದಹನಕರ್ಮಾಯಂ ಸರ್ವತ್ರ ಪ್ರಭುರವ್ಯಯಃ ।**
**ನ ಮೇ ದಹತಿ ಲಾಙ್ಗೂಲಂ ಕಥಮಾರ್ಯಾಂ ಪ್ರಧಕ್ಷ್ಯತಿ ॥೨೮॥**

ಸುಡುವ ಸ್ವಭಾವವುಳ್ಳ, ಪ್ರಭುವಾದ ಮತ್ತು ಅವ್ಯಯನಾದ ಈ ಯಜ್ಞೇಶ್ವರನು ನನ್ನ ಬಾಲವನ್ನೇ ಸುಡದಿರುವಾಗ ಆರ್ಯೆಯಾದ ಸೀತಾದೇವಿಯನ್ನು ದಹಿಸುವನೇ? ಎಂದಿಗೂ ಇಲ್ಲ."

ಆ ಸಮಯದಲ್ಲಿ ಹನುಮಂತನು ಹಿಂದೆ ನಡೆದುದೆಲ್ಲವನ್ನೂ ಪುನಃ ಜ್ಞಾಪಿಸಿಕೊಂಡು ಸಮುದ್ರವನ್ನು ಹಾರುತ್ತಿದ್ದಾಗ ಮೈನಾಕಪರ್ವತವು ತನ್ನನ್ನು ಸ್ವಾಗತಿಸುವುದಕ್ಕಾಗಿ ಸಮುದ್ರದಿಂದ ಮೇಲಕ್ಕೆದ್ದು ಬಂದುದು ಸ್ಮರಣೆಗೆ ಬಂದಿತು. ಶ್ರೀರಾಮನ ಸಹಾಯಾರ್ಥವಾಗಿ ಪರ್ವತವೇ ಮೇಲೆದ್ದು ಬಂದುದು ಪರಮಾಶ್ಚರ್ಯವೇ ಸರಿ. ಆ ಸನ್ನಿವೇಶದ ಸ್ಮರಣೆಯಿಂದ ವಿಸ್ಮಿತ ನಾದ ಮಾರುತಿಯು ಪುನಃ ಹೀಗೆ ಯೋಚಿಸಿದನು :

**ತಪಸಾ ಸತ್ಯವಾಕ್ಯೇನ ಅನನ್ಯತ್ವಾಚ್ಚ ಭರ್ತರಿ ।**
**ಅಪಿ ಸಾ ನಿರ್ದಹೇದಗ್ನಿಂ ನ ತಾಮಗ್ನಿಃ ಪ್ರಧಕ್ಷ್ಯತಿ ॥೨೯॥**

"ತಪಸ್ಸಿನಿಂದಲೂ, ಸತ್ಯನಿಷ್ಠೆಯಿಂದಲೂ, ಪತಿಯ ವಿಷಯದಲ್ಲಿ ಅನನ್ಯವಾದ ಭಾವವಿರುವುದರಿಂದಲೂ ಸೀತಾದೇವಿಯು ಅಗ್ನಿಯನ್ನು ಕೂಡ ದಹಿಸಲು ಸಮರ್ಥಳಾಗಿರುವಳು. ಆದರ ಅಗ್ನಿಯೆಂದಿಗೂ ಅವಳನ್ನು ದಹಿಸ ಲಾರದು."

ಸೀತಾದೇವಿಯ ಧರ್ಮತತ್ಪರತೆಯನ್ನು ಹನುಮಂತನು ಹೀಗೆ ಚಿಂತಿಸುತ್ತಿದ್ದಾಗ ಆಕಾಶದಲ್ಲಿ ಮಹಾತ್ಮರಾದ ಚಾರಣರು ಆಡಿಕೊಂಡು ಹೋಗುತ್ತಿದ್ದ ಮಾತುಗಳನ್ನು ಕೇಳಿದನು :

**ಅಹೋ ಖಲು ಕೃತಂ ಕರ್ಮ ದುಷ್ಕರಂ ಹಿ ಹನೂಮತಾ ।**
**ಅಗ್ನಿಂ ವಿಸೃಜತಾಭೀಕ್ಷ್ಣಂ ಭೀಮಂ ರಾಕ್ಷಸಸದ್ಮನಿ ॥೩೦॥**

**ಪ್ರಪಲಾಯಿತರಕ್ಷಃಸ್ತ್ರೀಬಾಲವೃದ್ಧಸಮಾಕುಲಾ ।**
**ಜನಕೋಲಾಹಲಾಧ್ಮಾತಾ ಕ್ರನ್ದನ್ತೀವಾದ್ರಿಕನ್ದರೇ ॥೩೧॥**

**ದಗ್ಧೇಯಂ ನಗರೀ ಲಙ್ಕಾ ಸಾಟ್ಟಪ್ರಾಕಾರತೋರಣಾ ।**
**ಜಾನಕೀ ನ ಚ ದಗ್ಧೇತಿ ವಿಸ್ಮಯೋಽದ್ಭುತ ಏವ ನಃ ॥೩೨॥**

"ಅತ್ಯಾಶ್ಚರ್ಯ! ಹನುಮಂತನು ರಾಕ್ಷಸರ ಮನೆಗಳಲ್ಲಿ ಸತತವಾಗಿ ಭಯಂಕರವಾದ ಬೆಂಕಿಯನ್ನಿಡುತ್ತಾ ಇತರರಿಂದ ಊಹಿಸಲೂ ಸಾಧ್ಯವಾಗದ ಅತ್ಯಂತದುಷ್ಕರವಾದ ಘೋರಕಾರ್ಯವನ್ನು ಮಾಡಿರುವನು. ಪಲಾಯನ ಮಾಡುತ್ತಿರುವ ರಾಕ್ಷಸಸ್ತ್ರೀಯರಿಂದಲೂ, ಬಾಲಕರಿಂದಲೂ, ವೃದ್ಧರಿಂದಲೂ ತುಂಬಿರುವ–ಪರ್ವತದ ಗುಹೆಗಳಲ್ಲಿ ರೋದನಮಾಡುತ್ತಿರುವಂತೆ ಜನರ ಕೋಲಾಹಲದಿಂದ ಶಬ್ದಾಯಮಾನವಾಗಿರುವ–ಉಪ್ಪರಿಗೆ ಮನೆಗಳಿಂದಲೂ, ಪ್ರಾಕಾರಗಳಿಂದಲೂ, ಹೆಬ್ಬಾಗಿಲುಗಳಿಂದಲೂ ಕೂಡಿರುವ ಈ ಲಂಕಾ ಪಟ್ಟಣವು ಸಂಪೂರ್ಣವಾಗಿ ಸುಟ್ಟುಹೋಯಿತು. ಆದರೆ ಅಶೋಕವನದಲ್ಲಿ ರುವ ಸೀತಾದೇವಿಯು ಮಾತ್ರ ಸುಡಲಿಲ್ಲವೆಂಬುದು ನಮ್ಮೆಲ್ಲರಿಗೂ ಅದ್ಭುತ ವಾಗಿ ಕಾಣುತ್ತಿದೆ. ಇದು ಅತ್ಯಾಶ್ಚರ್ಯಕರವೇ ಆಗಿದೆ."

ಹೀಗೆ ಚಾರಣರ ಅಮೃತಪ್ರಾಯವಾದ ಮಾತುಗಳನ್ನು ಹನು ಮಂತನು ಕೇಳಿದನು. ಅತ್ಯಂತಸಂಕಟಸಮಯದಲ್ಲಿದ್ದಾಗ ಕೇಳಿ ಬಂದ ಆ ಮಾತುಗಳು ಹನುಮಂತನ ಮನಸ್ಸಿಗೆ ಅತಿಯಾದ ಹರ್ಷವನ್ನುಂಟು ಮಾಡಿದುವು. ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದ ಶುಭಫಲಪ್ರದವಾದ ಶಕುನಗಳಿಂದಲೂ, ಸೀತೆಯ ಪಾತಿವ್ರತ್ಯ, ಶ್ರೀರಾಮನ ಪ್ರಭಾವ–ಇವೇ ಮೊದಲಾದ ಕಾರಣಗಳಿಂದಲೂ, ಚಾರಣರ ಮಾತುಗಳಿಂದಲೂ ಹನುಮಂತನ ಮನಸ್ಸು ಪ್ರಸನ್ನವಾಯಿತು.

ಯಜ್ಞೇಶ್ವರನಿಂದ ರಾಜಪುತ್ರಿಗೆ ಯಾವುದೇ ತೊಂದರೆಯೂ ಆಗಿಲ್ಲ ವೆಂಬುದನ್ನರಿತು ತನ್ನ ಇಷ್ಟಾರ್ಥವನ್ನು ನೆರವೇರಿಸಿಕೊಂಡ ಹನುಮಂತನು ಪುನಃ ಸೀತೆಯನ್ನು ಸಂದರ್ಶಿಸಿ ಕಿಷ್ಕಿಂಧೆಗೆ ಹಿಂದಿರುಗಲು ನಿಶ್ಚಯಿಸಿದನು.

ಐಐನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೫೬ನೆಯ ಸರ್ಗ

# ಹನುಮಂತನು ಸೀತೆಯನ್ನು ಸಂದರ್ಶಿಸಿ ಕಿಷ್ಕಿಂಧೆಗೆ ಹಿಂದಿರುಗಿದುದು

**ತತಸ್ತು ಶಿಂಶುಪಾಮೂಲೇ ಜಾನಕೀಂ ಪರ್ಯವಸ್ಥಿತಾಮ್ ।**
**ಅಭಿವಾದ್ಯಾಬ್ರವೀದ್ದಿಷ್ಟ್ಯಾ ಪಶ್ಯಾಮಿ ತ್ವಾಮಿಹಾಕ್ಷತಾಮ್ ॥೧॥**

ಬಳಿಕ ಹನುಮಂತನು ಶಿಂಶುಪಾವೃಕ್ಷದ ಬುಡದಲ್ಲಿ ಕುಳಿತಿದ್ದ ಜಾನಕಿಯ ಬಳಿಗೆ ಬಂದು ನಮಸ್ಕರಿಸಿ ಹೇಳಿದನು : "ತಾಯೇ! ಸ್ವಲ್ಪ ವಾದರೂ ಗಾಯಗೊಳ್ಳದ ನಿನ್ನನ್ನು ಅದೃಷ್ಟವಶದಿಂದ ನೋಡುತ್ತಿರು ವೆನು"–ಎಂದು ಹೇಳಿ ಹೊರಡಲನುವಾದನು.

ಹಾಗೆ ಹೊರಟ ಹನುಮಂತನನ್ನು ಸೀತೆಯು ವಾತ್ಸಲ್ಯಪೂರ್ಣವಾದ ದೃಷ್ಟಿಯಿಂದ ಅಡಿಗಡಿಗೂ ನೋಡುತ್ತಾ ಪತಿಪ್ರೇಮಸೂಚಕವಾದ ಈ ಮಾತನ್ನು ಹೇಳಿದಳು :

"ವೀರನೇ! ಉಚಿತವೆಂದು ಭಾವಿಸುವೆಯಾದರೆ ಯಾವುದಾದರೂ ನಿಗೂಢವಾದ ಪ್ರದೇಶದಲ್ಲಿ ಇಂದು ವಿಶ್ರಾಂತಿಯನ್ನು ಪಡೆದು ನಾಳೆ ನೀನು ಪ್ರಯಾಣಮಾಡಬಹುದು. ನಿನ್ನ ಸಾನ್ನಿಧ್ಯದಿಂದಾಗಿ ಅಲ್ಪಭಾಗ್ಯಳಾದ ನನ್ನ ಈ ಅಪಾರವಾದ ದುಃಖವು ಮುಹೂರ್ತಕಾಲದವಾದರೂ ಕಡಿಮೆಯಾಗ ಬಹುದು. ವಾನರಪುಂಗವನೇ! ನೀನು ಹೊರಟುಹೋದನಂತರ ಶ್ರೀರಾಮ ನೊಡನೆ ನೀನು ಪುನಃ ಇಲ್ಲಿಗೆ ಬರುವವರೆಗೂ ನನ್ನ ಪ್ರಾಣಗಳು ಉಳಿದಿರುವ ವಿಷಯದಲ್ಲಿ ನನಗೆ ವಿಶ್ವಾಸವಿಲ್ಲ. ವೀರನೇ! ನನಗೆ ದುಃಖದ ಮೇಲೆ ದುಃಖಗಳು ಬಂದೊದಗುತ್ತಿವೆ. ಮನಸ್ಸಿನ ಶೋಕದಿಂದಾಗಿ ನಾನು ದಿನ-ದಿನಕ್ಕೂ ಕೃಶಳಾಗುತ್ತಿದ್ದೇನೆ. ಇನ್ನು ಮುಂದೆ ನಿನ್ನ ದರ್ಶನವೂ ಇಲ್ಲದಾದ ಮೇಲೆ ನನ್ನ ಹೃದಯವು ಸೀಳಿಯೇ ಹೋಗುತ್ತದೆ. ಮಹಾಬಲನೇ! ನಿನ್ನ ಸಹಾಯಭೂತರಾದ ವಾನರ-ಭಲ್ಲೂಕಗಳ ವಿಷಯವಾಗಿ ಒಂದು ದೊಡ್ಡ ಸಂದೇಹವೇ ನನ್ನೆದುರು ನಿಂತಿದೆ. ವಾನರ-ಭಲ್ಲೂ ಕಸೈನ್ಯವಾಗಲೀ,ರಾಜಪುತ್ರ ರಾದ ರಾಮ-ಲಕ್ಷ್ಮಣರಾಗಲೀ ದಾಟಲು ದುಸ್ಸಾಧ್ಯವಾದ ಈ ಮಹಾಸಮುದ್ರ ವನ್ನು ದಾಟಲು ಹೇಗೆ ತಾನೇ ಸಮರ್ಥರಾಗುವರು? ಪ್ರಪಂಚದಲ್ಲಿರುವ

ಪ್ರಾಣಿಗಳಲ್ಲಿ ಗರುಡ, ವಾಯು ಮತ್ತು ನೀನು–ಈ ಮೂವರಿಗೆ ಮಾತ್ರವೇ ಈ ಸಮುದ್ರವನ್ನು ದಾಟುವ ಶಕ್ತಿಯಿದೆ. ಕಪೀಶ್ವರನೇ! ನೀನು ಕಾರ್ಯ ವಿಶಾರದನು. ನೀನು ಪ್ರಾರಂಭಿಸಿರುವ ಕಾರ್ಯಕ್ಕೆ ಎದುರಿಸಲು ಅಸಾಧ್ಯ ವಾದ ಸಮುದ್ರರೂಪವಾದ ತಡೆಯಿರುವಾಗ ಈ ಕಾರ್ಯಸಾಧನೆಗಾಗಿ ಯಾವ ಉಪಾಯವನ್ನು ಕೈಗೊಳ್ಳುವೆ? ನೀನೊಬ್ಬನೇ ಈ ಎಲ್ಲ ರಾಕ್ಷಸರನ್ನೂ ಸಂಹ ರಿಸಿ ನನ್ನನ್ನು ವಿಮೋಚನೆಗೊಳಿಸುವ ಕಾರ್ಯವನ್ನು ಸಾಧಿಸಲು ಸಮರ್ಥ ನಾಗಿರುವೆ. ಆದರೆ ವಿಜಯರೂಪವಾದ ಫಲವನ್ನು ನೀನು ಪಡೆಯುವುದ ರಿಂದ ಆ ಯಶಸ್ಸು ನಿನಗೇ ಲಭಿಸುತ್ತದೆ. ಶ್ರೀರಾಮನಿಗೆ ಲಭಿಸುವುದಿಲ್ಲ. ಶತ್ರುಗಳ ಬಲವನ್ನು ಮುರಿದುಹಾಕುವ ಸಾಮರ್ಥ್ಯವನ್ನು ಹೊಂದಿರುವ ಶ್ರೀರಾಮನು ಲಂಕೆಯನ್ನು ಸೈನ್ಯಗಳಿಂದ ತುಂಬಿಸಿ ರಾವಣನನ್ನು ಪರಾಜಯ ಗೊಳಿಸಿ ನನ್ನನ್ನು ತನ್ನ ರಾಜ್ಯಕ್ಕೆ ಕರೆದೊಯ್ದರೆ–ಆಗ ಅದು ಮಹಾವೀರನಾದ ಶ್ರೀರಾಮನಿಗೆ ತಕ್ಕುದಾದ ಕಾರ್ಯವಾಗುವುದು. ಯುದ್ಧದಲ್ಲಿ ಮಹಾಶೌರ್ಯ ವನ್ನು ತೋರುವ ಮಹಾತ್ಮನಾದ ಶ್ರೀರಾಮನಿಗೆ ಅನುರೂಪವಾದ ಪರಾ ಕ್ರಮವು ಹೇಗೆ ಪ್ರಕಟವಾಗಬೇಕೋ ಹಾಗೆ ನೀನು ಉಪಾಯವನ್ನು ಮಾಡು."

ಅರ್ಥವತ್ತಾದ, ಸ್ನೇಹಯುಕ್ತವಾದ ಮತ್ತು ಯುಕ್ತಿಯುಕ್ತವಾದ ಸೀತಾದೇವಿಯ ಮಾತುಗಳನ್ನು ಕೇಳಿ ಹನುಮಂತನು ಸಮಾಧಾನಕರವಾಗಿ ಉತ್ತರಿಸಿದನು :

"ತಾಯೇ! ಕಪಿ-ಕರಡಿಗಳ ಸೈನ್ಯಕ್ಕೆ ಅಧಿಪತಿಯಾಗಿರುವ, ಹಾರುವವರಲ್ಲಿ ಶ್ರೇಷ್ಠನಾಗಿರುವ, ಸತ್ತ್ವಸಂಪನ್ನನಾದ ಸುಗ್ರೀವನು ನಿನ್ನ ವಿಮೋಚನೆಯ ಸಲುವಾಗಿ ದೃಢವಾದ ಪ್ರತಿಜ್ಞೆಯನ್ನೇ ಮಾಡಿರುವನು. ರಾಕ್ಷಸರ ವಿಧ್ವಂಸಕನಾದ ಸುಗ್ರೀವನು ಕೋಟಿ-ಕೋಟಿ ವಾನರರಿಂದ ಸಮಾ ವೃತನಾಗಿ ಬಹಳ ಬೇಗ ಇಲ್ಲಿಗೆ ಬರುವನು. ವೀರರಾದ, ನರಶ್ರೇಷ್ಠರಾದ ರಾಮ-ಲಕ್ಷ್ಮಣರೂ ಜೊತೆಗೂಡಿಬಂದು ಲಂಕಾಪಟ್ಟಣವನ್ನೇ ಧ್ವಂಸ ಮಾಡಿಬಿಡುವರು. ರಾಘವನು ಸೈನ್ಯಸಮೇತನಾದ ರಾವಣನನ್ನು ಸಂಹರಿಸಿ ನಿನ್ನನ್ನು ತನ್ನ ಪಟ್ಟಣಕ್ಕೆ ಕರೆದೊಯ್ಯುವನು. ಸಮಾಧಾನವನ್ನು ಹೊಂದು, ದೇವಿ! ನಿನಗೆ ಮಂಗಳವಾಗಲಿ. ಒಳ್ಳೆಯ ಕಾಲವನ್ನು ನಿರೀಕ್ಷಿ ಸುತ್ತಿರು. ಶ್ರೀರಾಮನಿಂದ ರಾವಣನು ಹತನಾಗುವುದನ್ನು ಬಹಳ ಬೇಗ

ಕಾಣಲಿರುವೆ. ಪುತ್ರಾಮಾತ್ಯ-ಬಂಧುಗಳಿಂದೊಡಗೂಡಿದ ರಾಕ್ಷಸೇಂದ್ರನಾದ ರಾವಣನು ಹತನಾದೊಡನೆಯೇ ರೋಹಿಣಿಯು ಚಂದ್ರನೊಡನೆ ಸೇರು ವಂತೆ ನೀನು ಶ್ರೀರಾಮನನ್ನು ಸೇರುವೆ. ಕಪಿ-ಕರಡಿಗಳ ಸೈನ್ಯದೊಡನೆ ಶ್ರೀರಾಮನು ಇಲ್ಲಿಗೆ ಬಹಳ ಬೇಗ ಬಂದು ಯುದ್ಧದಲ್ಲಿ ಶತ್ರುಗಳನ್ನು ಜಯಿಸಿ ನಿನ್ನ ಶೋಕವನ್ನು ಹೋಗಲಾಡಿಸುತ್ತಾನೆ."

ವಾಯುಪುತ್ರನಾದ ಹನುಮಂತನು ಹೀಗೆ ಹೇಳಿ ವೈದೇಹಿಯನ್ನು ಸಮಾಧಾನಗೊಳಿಸಿ ಹೊರಡಲು ಸಿದ್ಧನಾಗಿ ಪುನಃ ಸೀತೆಗೆ ಅಭಿವಾದನ ಮಾಡಿದನು.

ರಾಕ್ಷಸಶ್ರೇಷ್ಠರನ್ನು ಸಂಹರಿಸಿ, ತಾನಾರೆಂಬುದನ್ನು ಪ್ರಸಿದ್ಧಪಡಿಸಿ, ವೈದೇಹಿಯನ್ನು ಸಮಾಧಾನಗೊಳಿಸಿ, ಶತ್ರುಗಳ ಸೈನ್ಯದ ಬಲವೆಷ್ಟೆಂಬು ದನ್ನರಿತು, ಲಂಕಾಪಟ್ಟಣವನ್ನು ಅಲ್ಲೋಲ-ಕಲ್ಲೋಲಗೊಳಿಸಿ, ರಾವಣೇಶ್ವರ ನನ್ನು ವಂಚಿಸಿ, ಭಯಂಕರವಾದ ಬಲವನ್ನು ಪ್ರದರ್ಶಿಸಿ, ವೈದೇಹಿಗೆ ಅಭಿವಾದನಮಾಡಿ ಸ್ವಾಮಿಯ ಸಂದರ್ಶನದಲ್ಲಿ ಉತ್ಸುಕನಾಗಿದ್ದ ಹನು ಮಂತನು ಪುನಃ ಸಮುದ್ರದ ಮೇಲ್ಭಾಗದಿಂದ ಹಿಂದಿರುಗಲು ನಿಶ್ಚಯಿಸಿದನು. ಬಳಿಕ ಅವನು ಅರಿಷ್ಟವೆಂಬ ಪರ್ವತವನ್ನು ಹತ್ತಿದನು. ಎತ್ತರವಾದ ಪದ್ಮ ವರ್ಣದ ವೃಕ್ಷಗಳಿಂದ ವ್ಯಾಪ್ತವಾಗಿದ್ದ ಮತ್ತು ನೀಲವರ್ಣದ ವನಗಳ ಸಾಲು ಗಳಿಂದ ಕೂಡಿದ್ದ ಆ ಪರ್ವತವು ಧೋತ್ರವನ್ನುಟ್ಟಿರುವಂತೆಯೂ ಶಿಖರಗಳ ಮಧ್ಯದಲ್ಲಿ ಜೋಲಾಡುತ್ತಿದ್ದ ಮೇಘಗಳಿಂದ ವ್ಯಾಪ್ತವಾಗಿದ್ದು ಉತ್ತರೀಯ ವನ್ನು ಹೊದ್ದಿರುವಂತೆಯೂ ಕಾಣುತ್ತಿದ್ದಿತು. ಆ ಪರ್ವತದಲ್ಲಿ ಗೈರಿಕಾದಿ ಧಾತುಗಳಿದ್ದು ಅವುಗಳ ಮೇಲೆ ಸೂರ್ಯನ ಕಿರಣಗಳು ಬಿದ್ದಿರುವುದನ್ನು ನೋಡಿದರೆ–ಸೂರ್ಯನು ತನ್ನ ಶುಭಕರವಾದ ಕಿರಣಗಳೆಂಬ ಕೈಗಳ ಮೂಲಕವಾಗಿ ಪರ್ವತವನ್ನು ಎಚ್ಚರಗೊಳಿಸುತ್ತಿರುವಂತೆಯೂ, ಪರ್ವತವು ಗೈರಿಕಾದಿ ಧಾತುಗಳೆಂಬ ಕಣ್ಣುಗಳಿಂದ ಎಚ್ಚೆತ್ತು ನೋಡುತ್ತಿರುವಂತೆಯೂ ಭಾಸವಾಗುತ್ತಿದ್ದಿತು. ಆ ಪರ್ವತದಲ್ಲಿ ಅನೇಕ ನದಿಗಳಿದ್ದು ಅವುಗಳಿಂದ ಹೊರಬರುತ್ತಿದ್ದ ಧ್ವನಿಯನ್ನು ಕೇಳುತ್ತಿದ್ದರೆ ಪರ್ವತವೇನಾದರೂ ವೇದಾ ಧ್ಯಯನವನ್ನು ಮಾಡುತ್ತಿರುವುದೋ ಎಂಬಂತೆ ಭಾಸವಾಗುತ್ತಿದ್ದಿತು. ಅಲ್ಲಿ

ನೂರಾರು ಚಿಲುಮೆಗಳಿದ್ದು ಅವುಗಳಿಂದ ಹೊರಬರುತ್ತಿದ್ದ ಇಂಪಾದ ನಿನಾದವನ್ನು ಕೇಳುತ್ತಿದ್ದರೆ ಪರ್ವತವೇನಾದರೂ ಗಾನಮಾಡುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಅಲ್ಲಿ ಎತ್ತರವಾದ ದೇವದಾರುವೃಕ್ಷಗಳಿದ್ದು ಪರ್ವತವೇನಾದರೂ ಕೈಗಳನ್ನೆತ್ತಿಕೊಂಡು ತಪಸ್ಸನ್ನು ಮಾಡುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಅಲ್ಲಿದ್ದ ದೊಡ್ಡ-ದೊಡ್ಡ ಜಲಪಾತಗಳ ಭೋರ್ಗರೆಯುವ ಶಬ್ದವನ್ನು ಕೇಳುತ್ತಿದ್ದರೆ ಪರ್ವತವೇನಾದರೂ ಭಯಂಕರವಾಗಿ ಆಕ್ರೋಶಮಾಡುತ್ತಿರುವುದೋ ಎಂಬಂತೆ ಭಾಸವಾಗುತ್ತಿದ್ದಿತು. ಪರ್ವತದ ಸುತ್ತಲೂ ಬಳುಕಾಡುವ ಏಳೆಲೆ ಬಾಳೇಗಿಡಗಳಿಂದ ಕೂಡಿದ, ಶ್ಯಾಮಲವರ್ಣದ, ಶರತ್ಕಾಲದಲ್ಲಿ ಸೊಂಪಾಗಿ ಕಾಣುವ ವನಗಳಿದ್ದುವು. ಆ ವನಗಳಲ್ಲಿ ಬಳುಕಾಡುತ್ತಿದ್ದ ಬಾಳೆಯೇ ಮೊದಲಾದ ಗಿಡಗಳನ್ನು ನೋಡಿದರೆ ಪರ್ವತವೇ ಕಂಪಿಸುತ್ತಿರುವುದೋ ಎಂಬಂತೆ ಭಾಸವಾಗುತ್ತಿದ್ದಿತು. ಪರ್ವತದ ಸುತ್ತಲೂ ಬಿದುರಿನ ಮೆಳೆಗಳಿದ್ದು ಟೊಳ್ಳಾದ ಬಿದುರುಗಳಲ್ಲಿ ಗಾಳಿಯು ತುಂಬಿಕೊಂಡು ಶಬ್ದವಾಗುತ್ತಿದ್ದಿತು. ಅದನ್ನು ನೋಡಿದರೆ ಪರ್ವತವೇನಾದರೂ ಅಸ್ಪಷ್ಟವಾದ ಸುಮಧುರವಾದ ಧ್ವನಿಯನ್ನು ಮಾಡುತ್ತಿರುವುದೋ ಎಂಬಂತೆ ಭಾಸವಾಗುತ್ತಿದ್ದಿತು. ಅಲ್ಲಲ್ಲಿ ಘೋರವಾದ ಸರ್ಪಗಳಿದ್ದು ಅವು ಬುಸುಗುಟ್ಟುತ್ತಿರುವುದನ್ನು ನೋಡಿದರೆ ಪರ್ವತವೇನಾದರೂ ನಿಟ್ಟುಸಿರುಬಿಡುತ್ತಿರುವುದೋ ಎಂಬಂತೆ ಭಾಸವಾಗುತ್ತಿದ್ದಿತು. ಅಲ್ಲಿದ್ದ ಗುಹೆಗಳೆಲ್ಲವೂ ಮಂಜು ತುಂಬಿಕೊಂಡು ಗೂಢವಾಗಿದ್ದುವು. ಅದನ್ನು ನೋಡಿದರೆ ಪರ್ವತವೇನಾದರೂ ಧ್ಯಾನಮಾಡುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಮೇಘಗಳ ಖಂಡಗಳಂತೆ (ಸಣ್ಣ-ಸಣ್ಣ ಮೇಘಗಳಂತೆ) ಕಾಣುತ್ತಿದ್ದ ಸಣ್ಣ-ಸಣ್ಣ ಗುಡ್ಡಗಳಿಂದ ಆವೃತವಾಗಿದ್ದ ಆ ಪರ್ವತವು ಪ್ರಯಾಣ ಹೊರಟಿರುವಂತೆಯೇ ಕಾಣುತ್ತಿದ್ದಿತು. ಮೇಘಗಳನ್ನೇ ಮಾಲೆಗಳಂತೆ ಧರಿಸಿದ್ದ ಶಿಖರಗಳಿಂದ ಕೂಡಿದ್ದ ಆ ಪರ್ವತವು ಆಕಳಿಸುತ್ತಾ ಮೈಮುರಿ ಯುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು.

ಆ ಪರ್ವತವು ಅನೇಕ ಶಿಖರಗಳಿಂದ ಸಮಲಂಕೃತವಾಗಿದ್ದಿತು. ಗುಹೆಗಳಿಂದ ಶೋಭಿಸುತ್ತಿದ್ದಿತು. ಹಲವಾರು ಸಾಲವೃಕ್ಷಗಳಿಂದಲೂ, ತಾಳೇಮರಗಳಿಂದಲೂ, ಬಿಳೀಮತ್ತೀಮರಗಳಿಂದಲೂ, ಬಿದಿರುಮೆಳೆಗಳಿಂದಲೂ ವ್ಯಾಪ್ತವಾಗಿದ್ದಿತು. ಸರ್ವತ್ರ ವ್ಯಾಪ್ತವಾಗಿದ್ದ ಪುಷ್ಪಲತೆಗಳಿಂದ ಸಮಲಂಕೃತ

ವಾಗಿದ್ದಿತು. ನಾನಾವಿಧವಾದ ಮೃಗಗಳು ಅಲ್ಲಿದ್ದುವು. ಗೈರಿಕಾದಿ ಧಾತು ಗಳನ್ನು ಸುರಿಸುತ್ತಾ ಪರ್ವತವು ಅತ್ಯಂತಶೋಭಾಯಮಾನವಾಗಿ ಕಾಣು ತ್ತಿದ್ದಿತು.

ಅಲ್ಲಿ ಹಲವಾರು ಚಿಲುಮೆಗಳಿದ್ದು ಅದು ಮಹರ್ಷಿ-ಯಕ್ಷ-ಗಂಧರ್ವ-ಕಿನ್ನರ ಮತ್ತು ಉರಗಗಳಿಂದ ಸೇವಿಸಲ್ಪಡುತ್ತಿದ್ದಿತು. ಅದು ಲತೆಗಳಿಂದಲೂ, ವೃಕ್ಷಗಳಿಂದಲೂ ನಿಬಿಡವಾಗಿದ್ದಿತು. ಆ ಪರ್ವತದಲ್ಲಿ ಸಿಂಹಗಳು ವಾಸ ಮಾಡುತ್ತಿದ್ದ ಗುಹೆಗಳು ಅನೇಕವಿದ್ದುವು. ವ್ಯಾಘ್ರವೇ ಮೊದಲಾದ ದುಷ್ಟಮೃಗ ಗಳಿದ್ದುವು. ರುಚಿಕರವಾದ ಗೆಡ್ಡೆ-ಗೆಣಸುಗಳೂ, ಫಲವೃಕ್ಷಗಳೂ ಇದ್ದುವು. ಶ್ರೀರಾಮನನ್ನು ನೋಡಬೇಕೆಂಬ ಆತುರದಿಂದಲೂ ಮತ್ತು ಸೀತೆಯನ್ನು ದರ್ಶನಮಾಡಿದ ಹರ್ಷದಿಂದಲೂ ಉತ್ಸಾಹಿತನಾಗಿದ್ದ ಕಪಿಶ್ರೇಷ್ಠನಾದ ಹನುಮಂತನು ಮನೋಹರವಾಗಿದ್ದ ಆ ಪರ್ವತವನ್ನು ಹತ್ತಿದನು. ರಮ್ಯ ವಾದ ಆ ಪರ್ವತದ ತಪ್ಪಲುಪ್ರದೇಶಗಳಲ್ಲಿದ್ದ ಕಲ್ಲುಬಂಡೆಗಳು ಹನುಮಂತನು ಕಾಲಿಟ್ಟೊಡನೆಯೇ ಘೋರಶಬ್ದದೊಡನೆ ನುಚ್ಚುನೂರಾಗಿ ಹೋದುವು. ಸಮುದ್ರದ ದಕ್ಷಿಣದ ತೀರದಿಂದ ಉತ್ತರದ ತೀರಕ್ಕೆ ಹೋಗುವ ಅಭಿಲಾಷೆ ಯಿಂದ ಹನುಮಂತನು ಅರಿಷ್ಟಪರ್ವತವನ್ನು ಹತ್ತಿದ ನಂತರ ಎತ್ತರವಾಗಿ ಬೆಳೆದನು. ಮೀನು ಮತ್ತು ಸರ್ಪಗಳಿಗೆ ಆವಾಸಸ್ಥಾನವಾಗಿದ್ದ ಭಯಂಕರ ವಾದ ಮಹಾಸಮುದ್ರವನ್ನು ನೋಡುತ್ತಾ ಉತ್ತರತೀರಕ್ಕೆ ಹೋಗಲು ವಾಯುಪುತ್ರನು ಯಾವ ವಿಶೇಷಪ್ರಯತ್ನವೂ ಇಲ್ಲದೇ ವಾಯುವಿನಂತೆಯೇ ಆಕಾಶಕ್ಕೆ ಹಾರಿದನು. ಆ ಸಮಯದಲ್ಲಿ ಹನುಮಂತನ ಪಾದಾಘಾತಗಳಿಂದ ಪೀಡಿತವಾದ ಪರ್ವತವು–ಅಲ್ಲಿ ವಾಸಮಾಡುತ್ತಿದ್ದ ವಿಧ-ವಿಧವಾದ ಪ್ರಾಣಿ ಗಳೊಡನೆಯೂ, ಅಳ್ಳಾಡುತ್ತಿದ್ದ ಶಿಖರಗಳೊಡನೆಯೂ, ಬುಡಮೇಲಾಗಿ ಬೀಳುತ್ತಿದ್ದ ವೃಕ್ಷಗಳೊಡನೆಯೂ ಗಟ್ಟಿಯಾಗಿ ಶಬ್ದಮಾಡುತ್ತಾ ಭೂಮಿ ಯೊಳಕ್ಕೆ ಕುಸಿಯಿತು. ಹನುಮಂತನ ತೊಡೆಯ ವೇಗದಿಂದ ವಿನಾಶಗೊಳಿಸ ಲ್ಪಟ್ಟ ಪುಷ್ಪಯುಕ್ತವಾದ ವೃಕ್ಷಗಳು ಇಂದ್ರನ ವಜ್ರಾಯುಧದಿಂದ ತುಂಡರಿಸ ಲ್ಪಟ್ಟ ಪರ್ವತಗಳಂತೆ ಭಗ್ನವಾಗಿ ಕೆಳಗುರುಳಿದುವು. ಗುಹೆಗಳಲ್ಲಿ ವಾಸ ಮಾಡುತ್ತಿದ್ದ ಮಹಾಪರಾಕ್ರಮವುಳ್ಳ ಸಿಂಹಗಳೂ ಹನುಮಂತನ ಪದತಲ ಸಂಘಟ್ಟನದಿಂದ ಪೀಡಿಸಲ್ಪಟ್ಟು ಮಾಡಿದ ಘೋರನಿನಾದವು ಆಕಾಶವನ್ನೇ

ಸೀಳಿಬಿಡುವುದೋ ಎಂಬಂತೆ ಕೇಳಿಸುತ್ತಿದ್ದಿತು. ಅಂತಹ ಸುಘೋರವಾದ ಶಬ್ದದಿಂದ ಭಯಗೊಂಡು ಅಸ್ತವ್ಯಸ್ತವಾದ ವಸ್ತ್ರಗಳುಳ್ಳವರಾಗಿಯೂ ಚದುರಿ ಹೋದ ಆಭರಣಗಳುಳ್ಳವರಾಗಿಯೂ ಇದ್ದ ವಿದ್ಯಾಧರಸ್ತ್ರೀಯರು ಒಡ ನೆಯೇ ಪರ್ವತದಿಂದ ಮೇಲಕ್ಕೆ ಹಾರಿದರು. ದೊಡ್ಡವುಗಳಾಗಿಯೂ ಬಲಿಷ್ಠ ವಾಗಿಯೂ ಇದ್ದ, ಥಳಥಳಿಸುತ್ತಿದ್ದ ನಾಲಿಗೆಗಳನ್ನೂ ಮಹಾವಿಷವನ್ನೂ ಹೊಂದಿದ್ದ ಮಹಾಸರ್ಪಗಳು ಜಜ್ಜಿಹೋದ ತಲೆಗಳಿಂದಲೂ, ಕುತ್ತಿಗೆ ಗಳಿಂದಲೂ ಕೂಡಿ ಸಂಕಟದಿಂದ ಹೊರಳಾಡುತ್ತಿದ್ದುವು. ಅಲ್ಲಿ ವಾಸಮಾಡು ತ್ತಿದ್ದ ಕಿನ್ನರೋರಗ-ಗಂಧರ್ವ-ಯಕ್ಷ-ವಿದ್ಯಾಧರರೆಲ್ಲರೂ ಹನುಮಂತನ ಹೆಜ್ಜೆಯ ತುಳಿತದಿಂದ ಪೀಡಿಸಲ್ಪಟ್ಟ ಆ ಪರ್ವತವನ್ನು ತ್ಯಜಿಸಿ ಆಕಾಶಕ್ಕೆ ಹೋದರು. ಅತ್ಯಂತ ಕಾಂತಿಯುಕ್ತವಾಗಿದ್ದ ಆ ಪರ್ವತವು ಹನುಮಂತನಿಂದ ಪೀಡಿಸಲ್ಪಟ್ಟು ವೃಕ್ಷಗಳೊಡನೆಯೂ ಶ್ರೇಷ್ಠವಾದ ಶಿಖರಗಳೊಡನೆಯೂ ಪಾತಾಳವನ್ನು ಪ್ರವೇಶಿಸಿತು. ಹತ್ತು ಯೋಜನಗಳಷ್ಟು ಅಗಲವಾಗಿಯೂ, ಮೂವತ್ತು ಯೋಜನಗಳಷ್ಟು ಎತ್ತರವಾಗಿಯೂ ಇದ್ದ ಆ ಅರಿಷ್ಟಪರ್ವತವು ಪಾತಾಳಕ್ಕೆ ಕುಸಿದು ನೆಲಸಮವಾಯಿತು. ಹೀಗೆ ಹನುಮಂತನು ಅಲೆಗಳಿಂದ ಸತತವಾಗಿ ಬಡಿಯಲ್ಪಟ್ಟ ತೀರಪ್ರದೇಶವುಳ್ಳ ಭಯಂಕರವಾದ ಲವಣ ಸಮುದ್ರವನ್ನು ಲೀಲೆಯಿಂದ ದಾಟಲಪೇಕ್ಷಿಸಿ ಆಕಾಶಕ್ಕೆ ಹಾರಿದನು.

ಐ೬ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೫೭ನೆಯ ಸರ್ಗ

## ಸಮುದ್ರವನ್ನು ದಾಟಿಬಂದ ಹನುಮಂತನು ಜಾಂಬವಾದಿಗಳೊಡನೆ ಸೇರಿದುದು

**ಆಪ್ಲುತ್ಯ ಚ ಮಹಾವೇಗಃ ಪಕ್ಷವಾನಿವ ಪರ್ವತಃ ।**
**ಭುಜಂಗಯಕ್ಷಗನ್ಧರ್ವಪ್ರಬುದ್ಧಕಮಲೋತ್ಪಲಮ್ ॥೧॥**

**ಸಚನ್ದ್ರಕುಮುದಂ ರಮ್ಯಂ ಸಾರ್ಕಕಾರಣ್ಡವಂ ಶುಭಮ್ ।**
**ತಿಷ್ಯಶ್ರವಣಕಾದಮ್ಬಮಭ್ರಶೈವಾಲಶಾದ್ವಲಮ್ ॥೨॥**

**ಪುನರ್ವಸುಮಹಾಮೀನಂ ಲೋಹಿತಾಙ್ಗಮಹಾಗ್ರಹಮ್ ।**
**ಐರಾವತಮಹಾದ್ವೀಪಂ ಸ್ವಾತೀಹಂಸವಿಲಾಸಿತಮ್ ॥೩॥**

**ವಾತಸಂಘಾತಜಾತೋರ್ಮಿಚನ್ದ್ರಾಂಶುಶಿಶಿರಾಮ್ಬುಮತ್ ।**
**ಹನುಮಾನ್ಮಾರುತಗತಿರ್ಮಹಾನೌರಿವ ಸಾಗರಮ್ ।**
**ಅಪಾರಮಪರಿಶ್ರಾನ್ತಃ ಪುಪ್ಲುವೇ ಗಗನಾರ್ಣವಮ್ ॥೪॥**

ಸಮುದ್ರದಂತೆಯೇ ಇದ್ದ ಆಕಾಶಸಾಗರವನ್ನು ಹನುಮಂತನು ರೆಕ್ಕೆಗಳಿರುವ ಪರ್ವತದಂತೆ ದಾಟಿದನು. ಆ ಆಕಾಶಸಾಗರದಲ್ಲಿ ಸರ್ಪ-ಯಕ್ಷ-ಗಂಧರ್ವರೇ ಅರಳಿದ ಕಮಲ-ಕನ್ನೈದಿಲೆಗಳಂತಿದ್ದರು. ಚಂದ್ರನೇ ಬಿಳಿಯ ನೈದಿಲೆಯಾಗಿದ್ದನು. ಸೂರ್ಯನು ನೀರುಕೋಳಿಯ ರೂಪದಲ್ಲಿದ್ದನು. ಪುಷ್ಯ-ಶ್ರವಣನಕ್ಷತ್ರಗಳು ಕಲಹಂಸಗಳ ರೂಪದಲ್ಲಿದ್ದುವು. ಮೋಡಗಳು ಪಾಚಿ ಮತ್ತು ಹುಲ್ಲಿನ ರೂಪದಲ್ಲಿದ್ದುವು. ಪುನರ್ವಸೂನಕ್ಷತ್ರವು ತಿಮಿಂಗಿಲದ ರೂಪದಲ್ಲಿದ್ದಿತು. ಅಂಗಾರಕನು ದೊಡ್ಡ ಮೊಸಳೆಯ ರೂಪದಲ್ಲಿದ್ದನು. ಐರಾವತವು ಆಕಾಶಸಾಗರದ ಮಧ್ಯದಲ್ಲಿ ಮಹಾದ್ವೀಪದಂತಿದ್ದಿತು. ಸ್ವಾತೀನಕ್ಷತ್ರವು ವಿಲಾಸದಿಂದ ಕೂಡಿದ ರಾಜಹಂಸದಂತಿದ್ದಿತು. ಅಲ್ಲಿ ಬೀಸುತ್ತಿದ್ದ ಬಿರುಗಾಳಿಯು ಸಾಗರದ ತೆರೆಗಳ ರೂಪದಲ್ಲಿದ್ದಿತು. ಚಂದ್ರನ ಕಿರಣಗಳು ಶೀತಲವಾದ ನೀರಿನಂತಿದ್ದುವು. ಅಂತಹ ಅಪಾರವಾದ ಆಕಾಶಸಾಗರವನ್ನು ಮಹಾವೇಗವಂತನಾದ ಹನುಮಂತನು ಸಮುದ್ರವನ್ನು ದಾಟುವ ದೊಡ್ಡ ಹಡಗಿನಂತೆ ಸ್ವಲ್ಪವಾದರೂ ಆಯಾಸವೇ ಇಲ್ಲದೇ ದಾಟಿದನು.

ಹನುಮಂತನು ಹಾಗೆ ಹಾರಿಕೊಂಡು ಬರುತ್ತಿದ್ದಾಗ ಆಕಾಶವನ್ನೇ ನುಂಗಿಬಿಡುವನೋ ಎಂಬಂತೆಯೂ, ಚಂದ್ರಮಂಡಲವನ್ನೇ ಉಗುರಿನಿಂದ ಪರಚುತ್ತಿರುವನೋ ಎಂಬಂತೆಯೂ, ನಕ್ಷತ್ರಮಂಡಲದಿಂದಲೂ ಸೂರ್ಯಮಂಡಲದಿಂದಲೂ ಕೂಡಿರುವ ಆಕಾಶವನ್ನೇ ಅಪಹರಿಸುತ್ತಿರುವನೋ ಎಂಬಂತೆಯೂ ಅಪಾರವಾದ ಸಮುದ್ರವನ್ನು ಸ್ವಲ್ಪವಾದರೂ ಶ್ರಮವೇ ಇಲ್ಲದೇ ಹಾರಿದನು. ಹಾಗೆ ಹಾರಿಕೊಂಡು ದಾಟುವಾಗ ಮೇಘಗಳ ಸಮೂಹವನ್ನೇ ಸೆಳೆದುಕೊಂಡು ಹೋಗುತ್ತಿರುವನೋ ಎಂಬಂತೆ ಅತ್ಯಂತರಭಸದಿಂದ ಹೋಗುತ್ತಿದ್ದನು.

ಆ ಸಮಯದಲ್ಲಿ ಮಹಾಮೇಘಗಳು ಬಿಳುಪು-ಎಣ್ಣೆಗೆಂಪು-ಕಪ್ಪು-ಕೆಂಪು-ಹಸಿರು ಇವೇ ಮುಂತಾದ ಬಣ್ಣಗಳಿಂದ ಪ್ರಕಾಶಿಸುತ್ತಿದ್ದುವು. ಹನು

ಮಂತನು ಆಕಾಶಮಾರ್ಗದಲ್ಲಿ ಹಾರಿಕೊಂಡು ಬರುತ್ತಿರುವಾಗ ಒಮ್ಮೆ ಮೇಘಗಳ ಸಮೂಹಗಳನ್ನು ಪ್ರವೇಶಿಸುತ್ತಲೂ ಮತ್ತೊಮ್ಮೆ ಅವುಗಳಿಂದ ಹೊರಬರುತ್ತಲೂ ಇದ್ದು ಮೇಘಮಂಡಲಗಳಿಂದ ಆವೃತನಾದಾಗ ಮಂಕಾಗಿಯೂ ಹೊರಬಂದಾಗ ಪ್ರಕಾಶಮಾನನಾಗಿಯೂ ಕಾಣುತ್ತಿದ್ದನು. ವಾಯುಪುತ್ರನಾದ ಹನುಮಂತನು ಆಕಾಶದಲ್ಲಿ ಹಾರಾಡುವ ಗರುಡ ನಂತೆಯೇ ಮೇಘಗಳ ಸಮೂಹಗಳನ್ನು ಸೀಳಿಕೊಂಡು ಒಳನುಗ್ಗುತ್ತಾ ಪುನಃ ಪುನಃ ಹೊರಬರುತ್ತಾ ಹಾರಿಕೊಂಡು ಬರುತ್ತಿದ್ದನು.

ಮೇಘನಿನಾದದಂತೆ ಮಹಾಧ್ವನಿಯನ್ನು ಮಾಡುತ್ತಿದ್ದ ಮಹಾ ತೇಜಸ್ವಿಯಾದ ಮಾರುತಿಯು ಘೋರನಿನಾದಮಾಡುತ್ತಾ ರಾಕ್ಷಸಶ್ರೇಷ್ಠ ರೆಲ್ಲರನ್ನೂ ಸಂಹರಿಸಿ, ತಾನಾರೆಂಬುದನ್ನು ಪ್ರಸಿದ್ಧಪಡಿಸಿ, ಲಂಕಾಪಟ್ಟಣ ವನ್ನು ಭ್ರಾಂತಿಗೊಳಿಸಿ, ರಾವಣನಿಗೂ ವ್ಯಥೆಯನ್ನುಂಟುಮಾಡಿ, ಮಹಾ- ಮಹಾ ರಾಕ್ಷಸವೀರರನ್ನು ಧ್ವಂಸಮಾಡಿ, ಸೀತೆಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ, ಪರ್ವತೇಂದ್ರನಾದ ಸುನಾಭನನ್ನು (ಮೈನಾಕನನ್ನು) ಸ್ಪರ್ಶಿಸಿ, ಸಮುದ್ರದ ಮಧ್ಯಭಾಗದಿಂದ ನಾಣೆಂದ ಹೊರಬಂದ ಬಾಣದಂತೆ ವೇಗವಾಗಿ ಸಮುದ್ರದ ಉತ್ತರತೀರಕ್ಕೆ ಆಗಮಿಸಿದನು. ಮೈನಾಕಪರ್ವತ ವನ್ನು ಸ್ಪರ್ಶಿಸಿ ಸ್ವಲ್ಪ ಮುಂದೆ ಬಂದನಂತರ ಮಹಾಕಪಿಯಾದ ಹನುಮಂತನು ಮೇಘಸದೃಶವಾದ ಮಹೇಂದ್ರವೆಂಬ ಪರ್ವತವನ್ನು ನೋಡಿ ಗಟ್ಟಿಯಾಗಿ ಗರ್ಜಿಸಿದನು. ಮೇಘದ ಧ್ವನಿಯಂತೆ ಗಟ್ಟಿಯಾಗಿ ಗರ್ಜಿಸುವ ಸ್ವಭಾವವುಳ್ಳ ಹನುಮಂತನು ಘೋರವಾದ ಧ್ವನಿಯಿಂದ ಗರ್ಜನೆ ಮಾಡುತ್ತಾ ಸುತ್ತಲೂ ಇದ್ದ ಹತ್ತು ದಿಕ್ಕುಗಳನ್ನೂ ತನ್ನ ಗರ್ಜನೆಯಿಂದಲೇ ತುಂಬಿಬಿಟ್ಟನು. ಅಂಗದನೇ ಮೊದಲಾದ ಮಿತ್ರರನ್ನು ನೋಡುವ ಲಾಲಸೆಯಿಂದಿದ್ದ ಹನುಮಂತನು ಅವರಿದ್ದ ಸ್ಥಳದ ಸಮೀಪಕ್ಕೆ ಬಂದು ಗಟ್ಟಿಯಾಗಿ ಗರ್ಜಿಸುತ್ತಾ ಬಾಲವನ್ನು ಅಳ್ಳಾಡಿಸಿದನು. ಗರುಡನು ಸಂಚರಿಸುವ ಮಾರ್ಗದಲ್ಲಿ ನಿಂತು ನಿನಾದಮಾಡುತ್ತಿದ್ದ ಹನುಮಂತನ ಮುಖದಿಂದ ಹೊರಟ ಗರ್ಜನೆಯು ಸೂರ್ಯಮಂಡಲದಿಂದ ಕೂಡಿರುವ ಆಕಾಶವನ್ನೇ ಸೀಳಿಬಿಡುವುದೋ ಎಂಬಂತೆ ಕಾಣುತ್ತಿದ್ದಿತು.

ಸಮುದ್ರದ ಉತ್ತರದಿಕ್ಕಿನ ತೀರದಲ್ಲಿ ವಾಯುಪುತ್ರನನ್ನು ನೋಡುವ

ಆಕಾಂಕ್ಷೆಯಿಂದ ಅವನು ಹೊರಟಾಗಿನಿಂದಲೂ ಅಲ್ಲಿಯೇ ಕುಳಿತು ಕಾಯು ತ್ತಿದ್ದ ಮಹಾಬಲಿಷ್ಠರಾದ ಕಪಿನಾಯಕರು ಗಾಳಿಯಿಂದ ಪ್ರೇರಿತವಾದ ಮಹಾ ಮೇಘಗಳ ಗರ್ಜನೆಯಂತಿದ್ದ ಹನುಮಂತನ ತೊಡೆಗಳ ವೇಗದಿಂದುಂಟಾದ ಮಹಾಶಬ್ದವನ್ನು ಕೇಳಿದರು. ದೀನವಾದ ಮನಸ್ಸಿನಿಂದ ಕೂಡಿದ್ದ ಕಪಿನಾಯಕ ರೆಲ್ಲರೂ ಮೇಘದ ಗರ್ಜನೆಯಂತೆಯೇ ಇದ್ದ ಹನುಮಂತನ ಗರ್ಜನೆಯನ್ನು



ಕೇಳಿ ಉತ್ಸಾಹಿತರಾದರು. ಕಪಿಶ್ರೇಷ್ಠನಾದ ಜಾಂಬವಂತನು ಸಂತೋಷದಿಂದ ಅರಳಿದ ಮನಸ್ಸಿನಿಂದ ಕೂಡಿದವನಾಗಿ ಕಪಿನಾಯಕರೆಲ್ಲರನ್ನೂ ಸಂಬೋಧಿಸಿ ಹೇಳಿದನು :

"ಸುಹೃದರೇ! ಹನುಮಂತನು ಕೃತಕೃತ್ಯನಾಗಿಯೇ ಹಿಂದಿರುಗು

ತ್ತಿರುವನು. ಇದರಲ್ಲಿ ಸಂಶಯವೇ ಇಲ್ಲ. ಕಾರ್ಯವನ್ನು ಸಾಧಿಸದಿದ್ದಿದ್ದರೆ ಈ ವಿಧವಾದ ಗರ್ಜನೆಯನ್ನು ಅವನು ಮಾಡುತ್ತಿರಲಿಲ್ಲ."

ಹನುಮಂತನ ತೋಳುಗಳ ವೇಗದ ಶಬ್ದವನ್ನೂ ತೊಡೆಗಳ ವೇಗದ ಶಬ್ದವನ್ನೂ ಕೇಳಿ ಸಂತುಷ್ಟರಾದ ಕಪಿನಾಯಕರು ಅಲ್ಲಲ್ಲಿಯೇ ಕುಣಿದಾಡಿದರು. ಪ್ರಹೃಷ್ಟರಾದ ಕಪಿನಾಯಕರು ಒಂದು ಮರದ ತುದಿಯಿಂದ ಮತ್ತೊಂದು ಮರದ ತುದಿಗೂ-ಒಂದು ಪರ್ವತಶಿಖರದಿಂದ ಮತ್ತೊಂದು ಪರ್ವತಶಿಖರಕ್ಕೂ ಹಾರಾಡುತ್ತಾ ಕಡೆಗೆ ಹನುಮಂತನನ್ನು ನೋಡುವ ಲಾಲಸೆಯಿಂದ ಎಲ್ಲರೂ ಒಂದೆಡೆಯಲ್ಲಿ ಸೇರಿದರು. ಸಂತುಷ್ಟರಾದ ಆ ಕಪಿಶ್ರೇಷ್ಠರು ಹನುಮಂತನನ್ನು ನೋಡುವ ಸಲುವಾಗಿ ವೃಕ್ಷಗಳ ತುದಿಗಳಲ್ಲಿದ್ದ ರೆಂಬೆಗಳನ್ನು ಹಿಡಿದು ನಿಂತರು. ಬಿಳಿಯ ವಸ್ತ್ರಗಳನ್ನು ಬೀಸುತ್ತಾ ದೂರದಲ್ಲಿರುವವರನ್ನು ಆಹ್ವಾನಿಸುವಂತೆ–ಕಪಿನಾಯಕರು ದೂರದಲ್ಲಿದ್ದ ಕಪಿಮುಖ್ಯರನ್ನು ಆಹ್ವಾನಿಸುವ ಸಲುವಾಗಿ ವೃಕ್ಷಗಳ ಅಗ್ರಭಾಗಗಳನ್ನು ಅಲ್ಲಾಡಿಸುತ್ತಿದ್ದರು. ಪರ್ವತದ ಗುಹೆಯಲ್ಲಿ ಅಡಗಿರುವ ಬಿರುಗಾಳಿಯು ಗರ್ಜಿಸುವಂತೆ ಬಲಿಷ್ಠನಾದ ಹನುಮಂತನು ಗಟ್ಟಿಯಾಗಿ ಗರ್ಜಿಸಿದನು. ದಟ್ಟವಾದ ಮೇಘಗಳ ಸಮೂಹದಂತಿದ್ದ, ಆಕಾಶದಿಂದ ಕೆಳಕ್ಕೆ ಬರುತ್ತಿದ್ದ, ಮಹಾಕಪಿಯಾದ ಹನುಮಂತನನ್ನು ಕಂಡು ಎಲ್ಲ ವಾನರರೂ ಕೈಜೋಡಿಸಿಕೊಂಡು ಸಾಲಾಗಿ ನಿಂತರು. ಬಳಿಕ ವೇಗವಂತನಾದ, ವೀರನಾದ, ಪರ್ವತಸದೃಶನಾದ ಹನುಮಂತನು, ವೃಕ್ಷಗಳಿಂದ ನಿಬಿಡವಾಗಿದ್ದ ಆ ಮಹೇಂದ್ರಪರ್ವತದ ಶಿಖರದಲ್ಲಿ ಇಳಿದನು. ಹರ್ಷದಿಂದ ಉಬ್ಬಿಹೋದ ಹೃದಯವುಳ್ಳವನಾಗಿದ್ದ ಮಾರುತಿಯು ಪರ್ವತದ ರಮ್ಯವಾದ ಝರಿಗಳಿದ್ದ ಪ್ರದೇಶದಲ್ಲಿ–ರೆಕ್ಕೆಗಳು ಕತ್ತರಿಸಿದ ಪರ್ವತದಂತೆ–ಪರ್ವತದ ಶಿಖರದಲ್ಲಿ ಎರಗಿದನು. ಸುಪ್ರೀತವಾದ ಮನಸ್ಸಿನಿಂದ ಕೂಡಿದ್ದ ಆ ಎಲ್ಲ ವಾನರ ಶ್ರೇಷ್ಠರೂ ಹನುಮಂತನನ್ನು ಸುತ್ತುವರಿದು ಕುಳಿತರು. ಹನುಮಂತನ ವಿಷಯದಲ್ಲಿ ಅವರೆಲ್ಲರಿಗೂ ಅಪಾರವಾದ ಪ್ರೀತಿಯುಂಟಾಯಿತು. ನೀರೋಗದೃಢಕಾಯನಾಗಿ ಆಗಮಿಸಿದ ಹನುಮಂತನನ್ನು ನೋಡಿ ಎಲ್ಲರ ಮುಖಗಳೂ ಅರಳಿದುವು. ಫಲ-ಮೂಲಗಳನ್ನು ಕಾಣಿಕೆಯಾಗಿ ತಂದು ಹನುಮಂತನನ್ನು ಯಥೋಚಿತವಾಗಿ ಸತ್ಕರಿಸಿದರು. ಅನಂತರ ಸಂತೋಷದ ಆಧಿಕ್ಯದಿಂದ ಕೆಲವು ವಾನರರು ಜಯಘೋಷಗಳನ್ನು ಮಾಡಿ

ದರು. ಕೆಲವರು ಕಿಲ-ಕಿಲಾಶಬ್ದಗಳನ್ನು ಮಾಡಿದರು. ಕೆಲವರು ಹನು ಮಂತನು ಕುಳಿತುಕೊಳ್ಳಲು ಮರಗಳ ರೆಂಬೆಗಳನ್ನೇ ಮುರಿದು ತಂದರು.

ಮಹಾಕಪಿಯಾದ ಹನುಮಂತನು ಜಾಂಬವಂತನೇ ಮೊದಲಾದ ಗುರುಜನರನ್ನೂ, ವೃದ್ಧರನ್ನೂ, ರಾಜಕುಮಾರನಾದ ಅಂಗದನನ್ನೂ ಅಭಿವಂದಿಸಿದನು. ಪೂಜ್ಯನಾದ ಮಹಾಪರಾಕ್ರಮಿಯಾದ ಹನುಮಂತನನ್ನು ಜಾಂಬವಂತ, ಅಂಗದ ಇಬ್ಬರೂ ಪೂಜಿಸಿ ಗೌರವಿಸಿದರು. ಉಳಿದ ಕಪಿ ನಾಯಕರು ಜಯಕಾರಮಾಡುತ್ತಾ ಹನುಮಂತನನ್ನು ಪ್ರಸನ್ನಗೊಳಿಸಿದರು. ಬಳಿಕ ಹನುಮಂತನು–'ದೃಷ್ಟಾ ಸೀತಾ' 'ಸೀತಾದೇವಿಯು ನನ್ನಿಂದ ನೋಡಲ್ಪಟ್ಟಳು'–(ಸೀತೆಯನ್ನು ಕಂಡೆನು) ಎಂದು ಸಂಕ್ಷೇಪವಾಗಿ ಸಮುದ್ರಲಂಘನದ ಫಲಿತಾಂಶವನ್ನು ಹೇಳಿದನು.

ಹನುಮಂತನು ವಾಲಿಯ ಮಗನಾದ ಅಂಗದನ ಕೈಹಿಡಿದುಕೊಂಡು ಮಹೇಂದ್ರಪರ್ವತದಲ್ಲಿದ್ದ ರಮಣೀಯವಾದ ವನಪ್ರದೇಶದಲ್ಲಿ ಕುಳಿತು ಕೊಂಡನು. ಲಂಕೆಗೆ ಹೋದ ಕಾರ್ಯವೇನಾಯಿತೆಂದು ಕಪಿನಾಯಕರೆಲ್ಲರೂ ಕುತೂಹಲಾವಿಷ್ಟರಾಗಿ ಕೇಳಿದರು. ಅಶೋಕವನದಲ್ಲಿದ್ದ ಜನಕನ ಮಗಳಾದ ಸೀತೆಯನ್ನು ನಾನು ನೋಡಿದೆನೆಂದು ಹನುಮಂತನು ಉತ್ತರಿಸಿದನು.

"ಒಂದೇ ಜಡೆಯನ್ನು ಧರಿಸಿ ಶ್ರೀರಾಮನ ದರ್ಶನದಲ್ಲಿಯೇ ಆಸಕ್ತ ಳಾಗಿರುವ, ಕೃಶಳಾಗಿರುವ, ಜಡೆಗಟ್ಟಿದ ಕೂದಲುಗಳಿಂದ ಕೂಡಿರುವ, ಮಲಿನವಸ್ತ್ರವನ್ನು ಧರಿಸಿರುವ, ಉಪವಾಸ-ವ್ರತಗಳಿಂದ ಬಹಳವಾಗಿ ಬಳಲಿ ರುವ, ಘೋರರೂಪಿಣಿಯರಾದ ರಾಕ್ಷಸಿಯರಿಂದ ರಕ್ಷಿಸಲ್ಪಡುತ್ತಿರುವ, ಅನಿಂದ್ಯಳಾದ ಸೀತಾದೇವಿಯನ್ನು ನಾನು ಅಶೋಕವನದಲ್ಲಿ ನೋಡಿದೆನು." 'ದೃಷ್ಟಾದೇವೀ' ಎಂಬ ಮಹಾರ್ಥವತ್ತಾದ ಮತ್ತು ಅಮೃತೋಪಮವಾದ ಹನುಮಂತನ ಮಾತನ್ನು ಕೇಳಿದೊಡನೆಯೇ ಎಲ್ಲ ಕಪಿನಾಯಕರೂ ಸಂತೋಷಭರಿತರಾದರು. ಅತ್ಯಂತಸಂತಸದ ವಾರ್ತೆಯನ್ನು ಕೇಳಿ ಕೆಲವರು ಸಿಂಹನಾದಗಳನ್ನು ಮಾಡಿದರು. ಕೆಲವರು ಜಯಕಾರಗಳನ್ನು ಮಾಡುತ್ತಾ ಕೂಗಾಡಿದರು. ಮಹಾಬಲಿಷ್ಠರಾಗಿದ್ದ ಕೆಲವರು ಗರ್ಜಿಸಿದರು. ಕೆಲವರು ಕಲ-ಕಲ ನಿನಾದಗಳನ್ನು ಮಾಡಿದರು. ಕೆಲವರು ಗರ್ಜನೆಗೆ ಪ್ರತಿಗರ್ಜನೆ ಮಾಡಿದರು. ಕೆಲವರು ಬಾಲಗಳನ್ನು ಮೇಲಕ್ಕೆತ್ತಿಕೊಂಡು ಸಂತೋಷದಿಂದ

ಕುಣಿದಾಡಿದರು. ಕೆಲವರು ದಪ್ಪವಾಗಿಯೂ, ಉದ್ದವಾಗಿಯೂ ಇದ್ದ ತಮ್ಮ ಬಾಲಗಳನ್ನೇ ಮೇಲೆತ್ತಿ ನೆಲಕ್ಕೆ ಅಪ್ಪಳಿಸಿದರು. ಕೆಲವರು ಕಪಿಶ್ರೇಷ್ಠರು ಪರ್ವತಶಿಖರಗಳಿಂದ ನೆಗೆದು ಹರ್ಷಿತರಾಗಿ ಕಾಂತಿಮಂತನಾದ ವಾನರ ಶ್ರೇಷ್ಠನಾದ ಹನುಮಂತನನ್ನು ಅಪ್ಪಿಕೊಂಡರು. ಎಲ್ಲ ಕಪಿನಾಯಕರ ಮಧ್ಯದಲ್ಲಿ–'ದೃಷ್ಟ್ವಾ ಸೀತಾ'–ಎಂದು ಹೇಳಿದ ಹನುಮಂತನನ್ನು ಕುರಿತು ಅಂಗದನು ಉತ್ತಮೋತ್ತಮವಾದ ಈ ಮಾತನ್ನು ಹೇಳಿದನು :

**ಸತ್ತ್ವೇ ವೀರ್ಯೇ ನ ತೇ ಕಶ್ಚಿತ್ಸಮೋ ವಾನರ ವಿದ್ಯತೇ ।**
**ಯದವಪ್ಲುತ್ಯ ವಿಸ್ತೀರ್ಣಂ ಸಾಗರಂ ಪುನರಾಗತಃ ॥೪೫॥**

"ವಾನರಶ್ರೇಷ್ಠನೇ! ಸತ್ತ್ವದಲ್ಲಿ, ವೀರ್ಯದಲ್ಲಿ ನಿನಗೆ ಸಮಾನರಾದ ವರು ಬೇರೆ ಯಾರೂ ಇಲ್ಲ. ನೂರು ಯೋಜನಗಳ ವಿಸ್ತೀರ್ಣವಿರುವ ಈ ಮಹಾಸಾಗರವನ್ನು ಹಾರಿಕೊಂಡು ಲಂಕೆಗೆ ಹೋಗಿ ಹಿಂದಿರುಗಿರುವೆ ಯಲ್ಲವೇ ?

ನೀನೊಬ್ಬನೇ ನಮಗೆ ಜೀವದಾನವನ್ನು ಮಾಡಿರುವವನು. ನಿನ್ನ ಅನುಗ್ರಹದಿಂದಾಗಿ ಕೃತಕೃತ್ಯರಾಗಿರುವ ನಾವು ಈಗಲೇ ರಾಮನ ಬಳಿಗೆ ಹೋಗೋಣ. ನಿನ್ನಲ್ಲಿರುವ ಸ್ವಾಮಿಭಕ್ತಿಯು ಅತ್ಯಮೋಘವಾದುದು. ನಿನ್ನಲ್ಲಿರುವ ವೀರ್ಯ-ಧೈರ್ಯ-ಪರಾಕ್ರಮಗಳೂ ಅಚಿಂತ್ಯವಾದುವು. ಶ್ರೀರಾಮನ ಪತ್ನಿಯಾದ, ಯಶೋವತಿಯಾದ ಸೀತಾದೇವಿಯನ್ನು ನೋಡಿ ಬಂದಿರುವುದು ನಮ್ಮೆಲ್ಲರ ಸೌಭಾಗ್ಯವೇ ಸರಿ. ಸೌಭಾಗ್ಯವಶದಿಂದ ರಾಘವನು ಅಮೃತೋಪಮವಾಗಿರುವ ಈ ವಾರ್ತೆಯನ್ನು ಕೇಳಿ ಸೀತೆಯ ವಿಯೋಗ ದಿಂದ ಉಂಟಾಗಿರುವ ದುಃಖವನ್ನು ಪರಿತ್ಯಜಿಸುವನು."

ಅಂಗದನು ಹೀಗೆ ಹೇಳಲು ಪ್ರಮುದಿತರಾದ ವಾನರನಾಯಕರು ಹನುಮಂತನನ್ನೂ, ಜಾಂಬವಂತನನ್ನೂ ಮತ್ತು ಅಂಗದನನ್ನೂ ಸುತ್ತುವರಿದು ದೊಡ್ಡ-ದೊಡ್ಡ ಬಂಡೆಗಳ ಬಳಿಗೆ ಕರೆದೊಯ್ದರು. ಸಮುದ್ರದ ಲಂಘನವನ್ನೂ–ಲಂಕೆಯ, ಸೀತೆಯ ಮತ್ತು ರಾವಣನ ದರ್ಶನವು ಹೇಗಾ ಯಿತೆಂಬುದನ್ನೂ ಕೇಳುವ ಇಚ್ಛೆಯಿಂದ ವಿಸ್ತಾರವಾಗಿದ್ದ ಆ ಬಂಡೆಗಳ ಮೇಲೆ ವಾನರಶ್ರೇಷ್ಠರೆಲ್ಲರೂ ಕುಳಿತುಕೊಂಡರು. ಎಲ್ಲ ಕಪಿನಾಯಕರೂ ಭಕ್ತಿಭಾವದಿಂದ ಕೈಮುಗಿದುಕೊಂಡು ಹನುಮಂತನಿಗೆ ಎದುರಾಗಿ ಕುಳಿತು

ಕೊಂಡರು. ಸ್ವರ್ಗದಲ್ಲಿ ದೇವತೆಗಳಿಂದ ಸೇವಿಸಲ್ಪಡುವ ಇಂದ್ರನಂತೆ–ಕಾಂತಿ ಯುಕ್ತನಾಗಿದ್ದ ಅಂಗದನು ಕಪಿನಾಯಕರಿಂದ ಸಮಾವೃತವಾಗಿ ರಾರಾಜಿಸು ತ್ತಿದ್ದನು.

ಕೀರ್ತಿಮಂತನಾದ ಹನುಮಂತನಿಂದಲೂ ಯಶಸ್ವಿಯಾದ ಮತ್ತು ಭುಜಗಳಲ್ಲಿ ತೋಳುಬಂದಿಗಳನ್ನು ಧರಿಸಿದ್ದ ಅಂಗದನಿಂದಲೂ ಸಂತಸ ದೊಡನೆ ಆಶ್ರಯಿಸಲ್ಪಟ್ಟಿದ್ದ ಆ ಮಹೇಂದ್ರಪರ್ವತದ ಶಿಖರವು ಅನುಪಮ ವಾದ ಕಾಂತಿಯಿಂದ ಬೆಳಗುತ್ತಿದ್ದಿತು.

ಷ೭ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೫೮ನೆಯ ಸರ್ಗ

## ಜಾಂಬವಂತನ ಪ್ರಶ್ನೆಗಳಿಗೆ ಹನುಮಂತನು ಲಂಕೆಯ ಯಾತ್ರೆಯನ್ನು ಸಮಗ್ರವಾಗಿ ವರ್ಣಿಸಿದುದು

**ತತಸ್ತಸ್ಯ ಗಿರೇಃ ಶೃಙ್ಗಂ ಮಹೇನ್ದ್ರಸ್ಯ ಮಹಾಬಲಾಃ ।**
**ಹನುಮತ್ಪ್ರಮುಖಾಃ ಪ್ರೀತಿಂ ಹರಯೋ ಜಗ್ಮುರುತ್ತಮಾಮ್ ॥**

ಅನಂತರ ಮಹೇಂದ್ರಪರ್ವತದ ಶಿಖರಕ್ಕೆ ತೆರಳಿದ ಮಹಾಬಲಿಷ್ಠರಾದ ಹನುಮಂತನೇ ಮೊದಲಾದ ವಾನರಶ್ರೇಷ್ಠರು ಪರಮಸಂತೋಷವನ್ನು ಹೊಂದಿದರು. ಸಂತೋಷಭರಿತರಾದ ಮಹಾತ್ಮರಾದ ಅವರೆಲ್ಲರೂ ಕುಳಿತು ಕೊಂಡನಂತರ ಹನುಮಂತನ ವಿಷಯದಲ್ಲಿ ಪರಮಸಂತುಷ್ಟನಾಗಿದ್ದ ಜಾಂಬವಂತನು ಮಹಾಕಪಿಯಾದ ಹನುಮಂತನನ್ನು ಸಂತೋಷದಾಯಕ ವಾದ ಶ್ರೀರಾಮನ ಕಾರ್ಯದ ವಿಷಯವಾಗಿ ಪ್ರಶ್ನಿಸಿದನು :

"ವಾಯುಪುತ್ರನೇ! ನೀನು ಸೀತಾದೇವಿಯನ್ನು ಹೇಗೆ ಕಂಡೆ? ಅವಳು ಅಲ್ಲಿ ಹೇಗಿದ್ದಾಳೆ? ಅವಳ ವಿಷಯದಲ್ಲಿ ಕ್ರೂರಕರ್ಮಿಯಾದ ರಾವಣನು ಹೇಗೆ ನಡೆದುಕೊಳ್ಳುತ್ತಿರುವನು? ನೀನು ಅವಳನ್ನು ಹೇಗೆ ಹುಡುಕಿದೆ? ಅವಳು ನಿನ್ನೊಡನೆ ಯಾವ ಮಾತನ್ನಾಡಿದಳು?–ಈ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ನಮಗೆ ಹೇಳು. ಎಲ್ಲ ವಿಷಯಗಳನ್ನೂ ನಿನ್ನಿಂದ ಕೇಳಿ ತಿಳಿದ ನಂತರ ನಾವೆಲ್ಲರೂ ಪುನಃ ಸಮಾಲೋಚಿಸಿ ಮುಂದೆ ಯಾವ ಕಾರ್ಯವನ್ನು ಮಾಡಬೇಕೆಂಬುದರ ಬಗೆಗೆ ನಿಶ್ಚಯಿಸೋಣ. ಇಲ್ಲಿಂದ ಶ್ರೀರಾಮನ ಬಳಿಗೆ

ಹೋಗುವ ನಾವು ಅವನಿಗೆ ಯಾವ ವಿಷಯವನ್ನು ಹೇಳಬೇಕು ಮತ್ತು ಯಾವ ವಿಷಯವನ್ನು ನಮ್ಮಲ್ಲಿಯೇ ಗುಟ್ಟಾಗಿಟ್ಟುಕೊಳ್ಳಬೇಕು–ಎಂಬುದೆಲ್ಲವನ್ನೂ ಬುದ್ಧಿವಂತನಾದ ನೀನೇ ನಮಗೆ ವಿವರಿಸಿ ಹೇಳಬೇಕು."

ಜಾಂಬವಂತನಿಂದ ಹೇಗೆ ನಿರ್ದೇಶಿತನಾದ ಹನುಮಂತನು ಲಂಕಾ ಪಟ್ಟಣದಲ್ಲಿ ತನಗಾದ ಅನುಭವವನ್ನು ಸ್ಮರಿಸಿ ಪುಳಕಿತನಾಗಿ ಸೀತಾದೇವಿಗೆ ತಲೆಬಾಗಿ ನಮಸ್ಕರಿಸಿ ಮಾತನಾಡಲು ಉಪಕ್ರಮಿಸಿದನು :

"ಕಪಿಶ್ರೇಷ್ಠರೇ! ಸಮುದ್ರದ ದಕ್ಷಿಣತೀರಕ್ಕೆ ಹೋಗಬೇಕೆಂಬ ಆಕಾಂಕ್ಷೆಯಿಂದ ನಿಮ್ಮೆದುರಿನಲ್ಲಿಯೇ ನಾನು ಏಕಾಗ್ರಚಿತ್ತನಾಗಿ ಮಹೇಂದ್ರ ಪರ್ವತದ ಶಿಖರದಿಂದ ಆಕಾಶದ ಕಡೆಗೆ ಹಾರಿದುದು ಸರಿಯಷ್ಟೆ. ಹಾಗೆ ನಾನು ಆಕಾಶಮಾರ್ಗದಲ್ಲಿ ದಕ್ಷಿಣದಿಕ್ಕಿನ ಕಡೆಗೆ ಹಾರಿಕೊಂಡು ಹೋಗು ತ್ತಿದ್ದಾಗ ಸಮುದ್ರಮಧ್ಯದಿಂದ ಹೊರಬಂದ ಅತ್ಯಂತಮನೋಹರವಾಗಿದ್ದ ದಿವ್ಯವಾದ ಸುವರ್ಣಶಿಖರವನ್ನು ಕಂಡೆನು. ಆಗ ಘೋರವಾದ ವಿಘ್ನವು ಒದಗಿಬಂದಂತೆ ನನಗೆ ಭಾಸವಾಯಿತು. ಹಾದಿಯನ್ನು ಅಡ್ಡಗಟ್ಟಿ ನಿಂತಿದ್ದ ಆ ಪರ್ವತವನ್ನು ನಾನು ವಿಘ್ನವನ್ನುಂಟುಮಾಡಲು ಬಂದಿರುವುದಾಗಿಯೇ ಭಾವಿಸಿದೆನು. ದಿವ್ಯವಾದ ಆ ಸುವರ್ಣಶಿಖರದ ಬಳಿಗೆ ಹೋದೊಡನೆಯೇ ಅದನ್ನು ಭೇದಿಸಿಬಿಡಬೇಕೆಂದೂ ನಿಶ್ಚಯಿಸಿದೆನು. ಮರುಕ್ಷಣದಲ್ಲಿಯೇ ನಾನು ಬಾಲದಿಂದ ಆ ಪರ್ವತದ ಶಿಖರವನ್ನು ಅಪ್ಪಳಿಸಿದೆನು. ಒಡನೆಯೇ ಸೂರ್ಯಸದೃಶವಾಗಿದ್ದ ಆ ಪರ್ವತಶಿಖರವು ಸಾವಿರ ಚೂರುಗಳಾಗಿ ಒಡೆದುಹೋಯಿತು. ನಾನು ತೋರಿದ ಸಾಹಸಕಾರ್ಯವನ್ನು ನೋಡಿ ಮನಸ್ಸನ್ನು ಆಹ್ಲಾದಗೊಳಿಸುತ್ತಿರುವನೋ ಎಂಬಂತೆ ಆ ಪರ್ವತನು ನನ್ನನ್ನು–'ಪುತ್ರ!' ಎಂದು ಸಂಬೋಧಿಸುತ್ತಾ ಹೇಳಿದನು :

"ಪುತ್ರ! ವಾಯುವಿನ ಸ್ನೇಹಿತನಾದ ನನ್ನನ್ನು ನಿನ್ನ ಚಿಕ್ಕಪ್ಪನೆಂದು ತಿಳಿ. ನಾನು ಮೈನಾಕ–ಎಂಬ ಹೆಸರಿನಿಂದ ಪ್ರಸಿದ್ಧನಾಗಿರುವೆನು. ಸಮುದ್ರ ದಲ್ಲಿಯೇ ನಾನು ವಾಸಮಾಡುತ್ತಿರುವೆನು. ಹಿಂದೆ ಪರ್ವತಗಳಿಗೆ ರೆಕ್ಕೆಗಳಿ ದ್ದುವು. ಅವು ಎಲ್ಲ ಪ್ರಾಣಿಗಳನ್ನೂ ಬಾಧೆಪಡಿಸುತ್ತಾ ಸ್ವೇಚ್ಛೆಯಿಂದ ಭೂಮಂಡಲದ ಸುತ್ತಲೂ ಹಾರಾಡುತ್ತಿದ್ದುವು. ಪರ್ವತಗಳ ಆ ಉಪಟಳ

ವನ್ನು ತಪ್ಪಿಸುವ ಸಲುವಾಗಿ ಪಾಕಾಸುರನನ್ನು ಸಂಹರಿಸಿದ ಮಹೇಂದ್ರನು ವಜ್ರಾಯುಧದಿಂದ ಸಾವಿರಾರು ಪರ್ವತಗಳ ರೆಕ್ಕೆಗಳನ್ನು ಕತ್ತರಿಸಿಹಾಕಿದನು. ಆದರೆ ನಾನು ಮಾತ್ರ ಮಹಾತ್ಮನಾದ ನಿನ್ನ ತಂದೆಯ ಸಹಾಯದಿಂದ ವಜ್ರಾಯುಧದ ಪ್ರಹಾರದಿಂದ ಪಾರಾದೆನು. ಆ ವಾಯುದೇವನು ನನ್ನನ್ನು ಹಾರಿಸಿಕೊಂಡು ಬಂದು ಸಮುದ್ರದಲ್ಲಿ ಹಾಕಿಬಿಟ್ಟನು. ಅಂದು ನಿನ್ನ ತಂದೆಯು ಮಾಡಿದ ಉಪಕಾರವನ್ನು ಸ್ಮರಿಸಿಕೊಂಡು ಇಂದು ನಾನು ನಿನಗೆ ಉಪಕಾರಮಾಡಲು ಬಂದಿರುವೆನು. ಮೇಲಾಗಿ ನಾನು ಶ್ರೀರಾಮನ ವಿಷಯ ದಲ್ಲಿಯೂ ಸಹಾಯಮಾಡುವ ಮನೋಭಾವನೆಯನ್ನೇ ಇಟ್ಟುಕೊಳ್ಳಬೇಕು. ಏಕೆಂದರೆ : ಶ್ರೀರಾಮನು ಧರ್ಮಾತ್ಮರಲ್ಲಿ ಶ್ರೇಷ್ಠನಾದವನು. ದೇವೇಂದ್ರನಿಗೆ ಸದೃಶವಾದ ಪರಾಕ್ರಮವುಳ್ಳವನು."

ವಾನರರೇ! ಮಹಾತ್ಮನಾದ ಮೈನಾಕನು ಹೇಳಿದ ಆ ಮಾತುಗಳನ್ನು ಕೇಳಿ ನಾನು ತೊಡಗಿರುವ ಕಾರ್ಯವನ್ನು ಅವನಿಗೆ ತಿಳಿಯಪಡಿಸಿ ಮುಂದೆ ಹೋಗಲು ಅವನ ಅನುಮತಿಯನ್ನು ಪಡೆದುಕೊಂಡೆನು. ಸುಂದರವಾದ ಮನುಷ್ಯನ ಶರೀರವನ್ನು ಧರಿಸಿ ಬಂದಿದ್ದ ಮೈನಾಕನು ಪುನಃ ಬಂಡೆಗಳ ಶರೀರವನ್ನೇ ಧರಿಸಿ ಮಹಾಶೈಲವಾಗಿ ಸಮುದ್ರದಲ್ಲಿ ಮರೆಯಾದನು.

ಉಳಿದಿದ್ದ ಮಾರ್ಗವನ್ನು ದಾಟಲು ಸಿದ್ಧನಾಗಿದ್ದ ನಾನು ಅತಿಶಯ ವಾದ ವೇಗವನ್ನು ಆಶ್ರಯಿಸಿ ಬಹಳ ಹೊತ್ತಿನವರೆಗೆ ಹೆಚ್ಚಿನ ವೇಗದಿಂದಲೇ ಪ್ರಯಾಣಮಾಡಿದೆನು. ಹಾಗೆ ಪ್ರಯಾಣಮಾಡುತ್ತಿದ್ದಾಗ ಸರ್ಪಗಳ ತಾಯಿ ಯಾದ ಸುರಸಾದೇವಿಯನ್ನು ಸಮುದ್ರದ ಮಧ್ಯದಲ್ಲಿ ಕಂಡೆನು. ಅವಳು ನನಗೆ ಹೇಳಿದಳು :

**ಮಮ ಭಕ್ಷಃ ಪ್ರದಿಷ್ಟಸ್ತ್ವಮಮರೈರ್ಹರಿಸತ್ತಮ ।**
**ಅತಸ್ತ್ವಾಂ ಭಕ್ಷಯಿಷ್ಯಾಮಿ ವಿಹಿತಸ್ತ್ವಂ ಚಿರಸ್ಯ ಮೇ ॥೨೨॥**

"ಹರಿಶ್ರೇಷ್ಠನೇ! ದೇವತೆಗಳು ನಿನ್ನನ್ನು ನನಗೆ ಆಹಾರವನ್ನಾಗಿ ಕಲ್ಪಿಸಿದ್ದಾರೆ. ಆದುದರಿಂದ ನಿನ್ನನ್ನು ನಾನೀಗಲೇ ಭಕ್ಷಿಸುತ್ತೇನೆ. ಬಹಳ ಕಾಲದಿಂದಲೂ ನಿನ್ನನ್ನೇ ನಾನು ನಿರೀಕ್ಷಿಸುತ್ತಿದ್ದೆನು. ಈಗ ದೇವತೆಗಳೇ ನಿನ್ನನ್ನು ನನ್ನ ಆಹಾರವಾಗಿ ನಿಯತಗೊಳಿಸಿದ್ದಾರೆ."

ಸುರಸೆಯು ಹೀಗೆ ಹೇಳಲು ಅವಳ ಮುಂದೆ ಕೈಮುಗಿದುಕೊಂಡು ನಿಂತಿದ್ದ ನಾನು ಕುಂದಿದ ಮುಖಭಾವದಿಂದ ಹೇಳಿದೆನು :

"ತಾಯೇ! ದಶರಥನ ಮಗನಾದ, ಶತ್ರುಗಳನ್ನು ಸಂತಾಪಗೊಳಿಸುವ ಶ್ರೀರಾಮನು ತಮ್ಮನಾದ ಲಕ್ಷ್ಮಣನೊಡನೆಯೂ, ಪತ್ನಿಯಾದ ಸೀತೆಯೊಡನೆಯೂ ದಂಡಕಾರಣ್ಯಕ್ಕೆ ಬಂದನು. ದುರಾತ್ಮನಾದ ರಾವಣನು ಶ್ರೀರಾಮನ ಭಾರ್ಯೆಯಾದ ಸೀತಾದೇವಿಯನ್ನು ಅಪಹರಿಸಿದನು. ಶ್ರೀರಾಮನ ದೂತನಾದ ನಾನು ಅವನ ಆಜ್ಞೆಯಂತೆ ಸೀತೆಯ ಬಳಿಗೆ ಹೋಗುತ್ತಿರುವೆನು. ಶ್ರೀರಾಮನ ರಾಜ್ಯದಲ್ಲಿಯೇ ಇರುವ ನೀನು ಅವನಿಗೆ ಈ ಸಮಯದಲ್ಲಿ ಸಹಾಯಮಾಡುವುದು ಉಚಿತವಾಗಿದೆ. ಒಂದು ವೇಳೆ ನೀನು ನನ್ನನ್ನು ಭಕ್ಷಿಸಲೇಬೇಕೆನ್ನುವುದಾದರೆ ಲಂಕಾಪಟ್ಟಣಕ್ಕೆ ಹೋಗಿ ಮೈಥಿಲಿಯನ್ನು ನೋಡಿ ಅನಂತರ ಅಕ್ಲಿಷ್ಟಕರ್ಮನಾದ ಶ್ರೀರಾಮನಿಗೆ ಸೀತಾವೃತ್ತಾಂತವನ್ನು ತಿಳಿಸಿ ನಿನ್ನ ಬಾಯಲ್ಲಿ ಬಂದುಬೀಳುತ್ತೇನೆ. ಸತ್ಯದ ಮೇಲೆ ಆಣೆಯಿಟ್ಟು ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ಮಾತನ್ನು ನಂಬು."

ನಾನು ಹೀಗೆ ಹೇಳಲು ಕಾಮರೂಪಿಣಿಯಾದ ಸುರಸೆಯು ನನ್ನ ಮಾತಿಗೊಪ್ಪದೇ ಹೇಳಿದಳು :

"ನನ್ನ ಬಳಿಗೆ ಬಂದ ಯಾವುದೇ ಪ್ರಾಣಿಯಾದರೂ ನನ್ನನ್ನು ಅತಿಕ್ರಮಿಸಿ ಹೋಗುವಂತಿಲ್ಲ. ಇದು ನನಗೆ ದೇವತೆಗಳೇ ಕೊಟ್ಟಿರುವ ವರವಾಗಿದೆ"–ಹೀಗೆ ಹೇಳಿ ಸುರಸೆಯು ತನ್ನ ಬಾಯನ್ನು ಅಗಲವಾಗಿ ತೆರೆದಳು.

ಆ ಸಮಯದಲ್ಲಿ ಹತ್ತು ಯೋಜನಗಳಷ್ಟು ಗಾತ್ರವಿದ್ದ ನಾನು ಹದಿನೈದು ಯೋಜನಗಳಷ್ಟು ದೊಡ್ಡದಾಗಿ ನನ್ನ ಗಾತ್ರವನ್ನು ಹೆಚ್ಚಿಸಿ ಕೊಂಡೆನು. ನಾನಿದ್ದ ಗಾತ್ರಕ್ಕಿಂತಲೂ ಅಗಲವಾಗಿ ಸುರಸೆಯು ಬಾಯ್ದೆರೆದು ಕೊಂಡಳು. ಆಗ ನಾನು ಐದು ಯೋಜನಗಳಷ್ಟು ರೂಪವನ್ನು ತಾಳಿದೆನು. ಕೂಡಲೇ ಪುನಃ ಹೆಬ್ಬೆರಳಿನಷ್ಟು ಗಾತ್ರದ ಆಕಾರವನ್ನು ಹೊಂದಿದೆನು. ಮರುಕ್ಷಣದಲ್ಲಿಯೇ ನಾನು ಅವಳ ಬಾಯನ್ನು ಹೊಕ್ಕು ಕ್ಷಣಮಾತ್ರದಲ್ಲಿ ಹೊರಕ್ಕೆ ಬಂದುಬಿಟ್ಟೆನು. ಆ ಸಮಯದಲ್ಲಿ ಸುರಸೆಯು ತನ್ನ ನಿಜರೂಪವನ್ನು ತಾಳಿ ಹೇಳಿದಳು :

**ಅರ್ಥಸಿದ್ಧ್ಯೈ ಹರಿಶ್ರೇಷ್ಠ ಗಚ್ಛ ಸೌಮ್ಯ ಯಥಾಸುಖಮ್ ।**
**ಸಮಾನಯ ಚ ವೈದೇಹೀಂ ರಾಘವೇಣ ಮಹಾತ್ಮನಾ ।**
**ಸುಖೀ ಭವ ಮಹಾಬಾಹೋ ಪ್ರೀತಾಸ್ಮಿ ತವ ವಾನರ ॥೩೨॥**

"ಸೌಮ್ಯನೇ! ಶ್ರೀರಾಮನ ಕಾರ್ಯಸಿದ್ಧಿಯ ಸಲುವಾಗಿ ಸುಖವಾಗಿ ಹೋಗಿ ಬಾ. ಮಹಾತ್ಮನಾದ ಶ್ರೀರಾಮನೊಡನೆ ಸೀತಾದೇವಿಯ ಸಮಾಗಮವನ್ನುಂಟುಮಾಡು. ನಿನ್ನ ವಿಷಯದಲ್ಲಿ ನಾನು ಸುಪ್ರೀತಳಾದೆನು. ಸುಖಿಯಾಗಿರು."

ಆ ಸಮಯದಲ್ಲಿ ಎಲ್ಲ ಪ್ರಾಣಿಗಳೂ ನನ್ನನ್ನು 'ಸಾಧು! ವಾಯು ಪುತ್ರ! ಸಾಧು!' ಎಂದೆನ್ನುತ್ತಾ ಪ್ರಶಂಸೆಮಾಡಿದುವು.

ಅನಂತರ ನಾನು ವಿಶಾಲವಾದ ಆಕಾಶದಲ್ಲಿ ಗರುಡನಂತೆ ಹಾರುತ್ತಾ ಮುಂದೆ ಹೋಗುತ್ತಿದ್ದೆನು. ಸ್ವಲ್ಪ ದೂರ ಹೋದನಂತರ ಸಮುದ್ರದ ಮೇಲೆ ಬಿದ್ದಿದ್ದ ನನ್ನ ನೆರಳನ್ನು ಯಾರೋ ತಡೆದಂತಾಯಿತು. ಆದರೆ ಅಲ್ಲಿ ನನಗೆ ಬೇರೆ ಯಾರೂ ಕಾಣಲಿಲ್ಲ. ನೆರಳಿನ ನಿಗ್ರಹದಿಂದಾಗಿ ನನ್ನ ವೇಗವು ಕುಂಠಿತವಾಯಿತು. ಹತ್ತು ದಿಕ್ಕುಗಳಿಗೂ ದೃಷ್ಟಿಯನ್ನು ಹಾಯಿಸಿದೆನು. ಎಲ್ಲೂ ನನಗೆ ಏನೂ ಕಾಣಲಿಲ್ಲ. ನನ್ನ ವೇಗವನ್ನು ತಡೆದವರು ಯಾರೆಂಬುದೇ ತಿಳಿಯಲಿಲ್ಲ. 'ಅಂತರಿಕ್ಷದಲ್ಲಿ ನನಗೆ ಇಂತಹ ವಿಘ್ನವೇಕುಂಟಾಯಿತು? ನನಗೆ ವಿಘ್ನವನ್ನುಂಟುಮಾಡುತ್ತಿರುವವರ ಆಕಾರವೇ ಕಾಣುತ್ತಿಲ್ಲವಲ್ಲ?'–ಎಂಬುದಾಗಿ ಯೋಚಿಸತೊಡಗಿದೆನು. ಹೀಗೆ ಯೋಚಿಸುತ್ತಿದ್ದ ನಾನು ಕೆಳಭಾಗದಲ್ಲಿದ್ದ ಸಮುದ್ರದ ಕಡೆಗೆ ನನ್ನ ದೃಷ್ಟಿಯನ್ನು ಹರಿಸಿದೆನು. ಅಲ್ಲಿ ನಾನು ನೀರಿನಲ್ಲಿ ಮಲಗಿದ್ದ ಭಯಂಕರಾಕಾರದ ಒಬ್ಬ ರಾಕ್ಷಸಿಯನ್ನು ಕಂಡೆನು. ಅವಳು ನನ್ನನ್ನು ನೋಡಿ ಅಟ್ಟಹಾಸದಿಂದ ನಗುತ್ತಾ ಗಟ್ಟಿಯಾಗಿ ಗರ್ಜಿಸಿದಳು. ಭಯಂಕರಾಕಾರ ಳಾಗಿದ್ದ ಅವಳು ಸ್ವಲ್ಪವಾದರೂ ಭ್ರಾಂತಿಗೊಳ್ಳದೇ ಸ್ಥಿರವಾಗಿ ನಿಂತಿದ್ದ ನನಗೆ ಅಶುಭಕರವಾದ ಈ ಮಾತನ್ನು ಹೇಳಿದಳು :

**ಕ್ವಾಸಿ ಗನ್ತಾ ಮಹಾಕಾಯ ಕ್ಷುಧಿತಾಯಾ ಮಮೇಪ್ಸಿತಃ ।**
**ಭಕ್ಷಃ ಪ್ರೀಣಯ ಮೇ ದೇಹಂ ಚಿರಮಾಹಾರವರ್ಜಿತಮ್ ॥೩೯॥**

"ಮಹಾಕಾಯನೇ! ಎಲ್ಲಿಗೆ ಹೋಗುತ್ತಿರುವೆ? ಹಸಿದಿರುವ ನಾನು ನಿನ್ನನ್ನೇ ಬಯಸುತ್ತಿರುವೆನು. ಬಹಳ ದಿವಸಗಳಿಂದಲೂ ಆಹಾರವೇ ಇಲ್ಲದಿರುವ ನನ್ನ ದೇಹಕ್ಕೆ ಭಕ್ಷ್ಯವಾಗಿ ತೃಪ್ತಿಗೊಳಿಸು."

ಹಾಗೆಯೇ ಆಗಲೆಂದು ಹೇಳಿ ನಾನು ಆ ರಾಕ್ಷಸಿಯ ಮಾತನ್ನು ಅಂಗೀಕರಿಸಿದೆನು. ಅವಳ ಪ್ರಮಾಣಕ್ಕಿಂತಲೂ ದೊಡ್ಡದಾಗಿ ಬೆಳೆದು ಅವಳ ಶರೀರವನ್ನೆಲ್ಲಾ ವ್ಯಾಪಿಸಿಬಿಟ್ಟೆನು. ನನ್ನನ್ನು ಭಕ್ಷಿಸುತ್ತಿದ್ದಂತೆ ಭಯಂಕರವಾದ ಅವಳ ಮುಖವೂ ದೊಡ್ಡದಾಗುತ್ತಿದ್ದತು. ನಾನು ಕಾಮರೂಪನೆಂದಾಗಲೀ ವಿಕೃತವಾದ ಆಕಾರವಿರುವ ಶರೀರವನ್ನು ಧರಿಸಬಲ್ಲವನೆಂದಾಗಲೀ ಅವಳಿಗೆ ತಿಳಿಯದೇ ಹೋಯಿತು. ಬಳಿಕ ನಾನು ಎವೆಯಿಕ್ಕುವುರೊಳಗಾಗಿ ನನ್ನ ದೊಡ್ಡರೂಪವನ್ನು ಸಣ್ಣದಾಗಿಸಿಕೊಂಡು ಅವಳ ಹೃದಯವನ್ನು ಭೇದಿಸಿ ಆಕಾಶಕ್ಕೆ ಹಾರಿದೆನು.

ಬಳಿಕ ಪರ್ವತಸದೃಶಳಾಗಿದ್ದ, ಭಯಂಕರಳಾಗಿದ್ದ ಆ ರಾಕ್ಷಸಿಯು ತೋಳುಗಳನ್ನು ಚಾಚಿಕೊಂಡು ಉಪ್ಪುನೀರಿನ ಸಮುದ್ರದಲ್ಲಿ ಬಿದ್ದು ಬಿಟ್ಟಳು. ಆ ಸಮಯದಲ್ಲಿ ನಾನು ಆಕಾಶದಲ್ಲಿ ಸಂಚರಿಸುತ್ತಿದ್ದ ಮಹಾತ್ಮರ ಸುಮಧುರವಾದ–**ರಾಕ್ಷಸೀ ಸಿಂಹಿಕಾ ಭೀಮಾ ಕ್ಷಿಪ್ರಂ ಹನುಮತಾ ಹತಾ ||೪೪||** 'ಹನುಮಂತನು ಭಯಂಕರಳಾಗಿದ್ದ ಸಿಂಹಿಕಾ ರಾಕ್ಷಸಿಯನ್ನು ಕ್ಷಣಮಾತ್ರದಲ್ಲಿ ಸಂಹರಿಸಿದನು'–ಎಂಬ ಮಾತನ್ನು ಕೇಳಿದೆನು.

ಹೀಗೆ ನಾನು ಅವಳನ್ನು ಸಂಹರಿಸಿ ಅವಶ್ಯವಾಗಿ ಮತ್ತು ಅತಿಶೀಘ್ರ ವಾಗಿ ಮಾಡಬೇಕಾದ ಕಾರ್ಯವನ್ನೂ ಮತ್ತು ಆ ಕಾರ್ಯವು ಬಹಳ ವಿಳಂಬವಾಗುತ್ತಿರುವುದನ್ನೂ ಸ್ಮರಿಸಿದೆನು. ಮುಂದೆ ನಾನು ಬಹಳ ದೂರದ ವರೆಗೆ ಬೇಗನೆ ಪ್ರಯಾಣಮಾಡುತ್ತಾ ಪರ್ವತಗಳಿಂದ ಸಮಲಂಕೃತವಾಗಿದ್ದ ಲಂಕಾಪಟ್ಟಣವಿದ್ದ ಸಮುದ್ರದ ದಕ್ಷಿಣದ ತೀರವನ್ನು ನೋಡಿದೆನು. ಸೂರ್ಯನು ಮುಳುಗಿದನಂತರ ಮಹಾಪರಾಕ್ರಮಿಗಳಾದ ರಾಕ್ಷಸರಿಗೂ ತಿಳಿ ಯದ ರೀತಿಯಲ್ಲಿ ನಾನು ಅವರ ವಾಸಸ್ಥಾನವನಾದ ಲಂಕೆಯನ್ನು ಪ್ರವೇಶಿಸಿ ದೆನು. ಲಂಕಾಪಟ್ಟಣವನ್ನು ಪ್ರವೇಶಿಸುತ್ತಿದ್ದಂತೆಯೇ ಪ್ರಳಯಕಾಲದ ಮೇಘಕ್ಕೆ ಸಮಾನಳಾಗಿದ್ದ ಹೆಂಗಸೊಬ್ಬಳು ಅಟ್ಟಹಾಸವನ್ನು ಬೀರುತ್ತಾ

ನನ್ನ ಮುಂದೆಯೇ ಬಂದು ನಿಂತಳು. ನನ್ನನ್ನು ಸಂಹರಿಸಲು ಬಯಸಿದ್ದ, ಪ್ರಜ್ವಲಿಸುವ ಅಗ್ನಿಯಂತೆಯೇ ಇದ್ದ ತಲೆಗೂದಲುಗಳನ್ನು ಹೊಂದಿದ್ದ, ಮಹಾಭಯಂಕರಳಾಗಿದ್ದ ಅವಳನ್ನು ನಾನು ಮುಷ್ಟಿಪ್ರಹಾರದಿಂದಲೇ ಪರಾಜಯಗೊಳಿಸಿ ಪ್ರದೋಷಕಾಲದಲ್ಲಿ ಲಂಕಾಪಟ್ಟಣವನ್ನು ಪ್ರವೇಶಿಸಿದೆನು. ಆಗ ಹೆದರಿದ ಆ ರಾಕ್ಷಸಿಯು ಹೇಳಿದಳು :

**ಅಹಂ ಲಙ್ಕಾಪುರೀ ವೀರ ನಿರ್ಜಿತಾ ವಿಕ್ರಮೇಣ ತೇ ।**
**ಯಸ್ಮಾತ್ತಸ್ಮಾದ್ವಿಜೇತಾಸಿ ಸರ್ವರಕ್ಷಾಂಸ್ಯಶೇಷತಃ ॥೪೯॥**

"ವೀರನೇ! ನಾನು ಲಂಕಾಪಟ್ಟಣದ ಅಧಿದೇವತೆಯು. ಭುಜಬಲ-ಪರಾಕ್ರಮಗಳಿಂದ ನೀನು ನನ್ನನ್ನು ಜಯಿಸಿರುವೆ. ಈ ಪಟ್ಟಣಕ್ಕೆ ಅಧಿದೇವತೆಯಾದ ನನ್ನನ್ನೇ ನೀನು ಜಯಿಸಿರುವೆಯಾದ ಕಾರಣ ಇಲ್ಲಿರುವ ಎಲ್ಲ ರಾಕ್ಷಸರನ್ನೂ ನೀನು ನಿಃಶೇಷವಾಗಿ ಜಯಿಸುವೆ."

ಅವಳು ಹೀಗೆ ಹೇಳಿ ಲಂಕಾಪಟ್ಟಣದೊಳಕ್ಕೆ ಪ್ರವೇಶಿಸಲು ಅವಕಾಶವಿತ್ತನಂತರ ನಾನು ಇಡೀ ರಾತ್ರಿ ಸೀತಾದೇವಿಯನ್ನು ಹುಡುಕುತ್ತಾ ರಾವಣನ ಅಂತಃಪುರಕ್ಕೂ ಹೋದೆನು. ಅಲ್ಲಿ ನಾನು ಸುಂದರವಾದ ನಡುವುಳ್ಳ ಜನಕನ ಮಗಳನ್ನು ಕಾಣಲಿಲ್ಲ. ರಾವಣನ ಅರಮನೆಯಲ್ಲಿಯೂ ಸೀತೆಯನ್ನು ಕಾಣದೇ ಶೋಕಸಮುದ್ರದಲ್ಲಿ ಮುಳುಗಿದ ನನಗೆ ಪಾರವೇ ಸಿಕ್ಕಲಿಲ್ಲ. ಹಾಗೆ ಸೀತಾದೇವಿಯನ್ನು ಕಾಣದೇ ದುಃಖಪಡುತ್ತಿದ್ದ ನಾನು ಸುವರ್ಣಮಯ ವಾದ, ಎತ್ತರವಾದ ಪ್ರಾಕಾರದಿಂದ ಸುತ್ತುವರಿಯಲ್ಪಟ್ಟಿದ್ದ ಶ್ರೇಷ್ಠವಾದ ಉದ್ಯಾನವನವನ್ನು ನೋಡಿದೆನು. ಪ್ರಾಕಾರವನ್ನು ಹಾರಿ ಒಳಕ್ಕೆ ಹೋಗಿ ಅಲ್ಲಿ ಅನೇಕವೃಕ್ಷಗಳಿಂದ ತುಂಬಿದ ಉದ್ಯಾನವನವನ್ನು ಕಂಡೆನು. ಅದೇ ಅಶೋಕವನವಾಗಿದ್ದಿತು. ಅದರ ಮಧ್ಯದಲ್ಲೊಂದು ದೊಡ್ಡದಾದ ಶಿಂಶುಪಾ ವೃಕ್ಷವಿದ್ದಿತು. ಆ ಮರವನ್ನು ಹತ್ತಿ ಅತ್ತಿತ್ತ ನೋಡುತ್ತಿದ್ದಾಗ ಸುವರ್ಣಮಯವಾದ ಬಾಳೆಯ ತೋಟವು ಕಾಣಿಸಿತು. ಶಿಂಶುಪಾವೃಕ್ಷದ ಸಮೀಪದಲ್ಲಿಯೇ ನಾನು ವರವರ್ಣಿನಿಯಾದ ಸೀತಾದೇವಿಯನ್ನೂ ನೋಡಿದೆನು. ಸೀತಾದೇವಿಯು ಹರೆಯಪ್ರಾಯದವಳಂತೆ ಕಾಣುತ್ತಿದ್ದಳು. ಅವಳ ಕಣ್ಣುಗಳು

ಕಮಲದಳಗಳಂತೆ ವಿಶಾಲವಾಗಿದ್ದುವು. ಆಕೆಯು ನಿರಂತರವಾದ ಉಪವಾಸ ದಿಂದಾಗಿ ಕೃಶಳಾಗಿದ್ದಳು. ಮುಖವು ಬಾಡಿದ್ದಿತು. ಒಂದೇ ವಸ್ತ್ರವನ್ನುಟ್ಟಿ ದ್ದಳು. ಆಕೆಯ ತಲೆಗೂದಲು ಧೂಳಿನಿಂದ ಧೂಸರಿತವಾಗಿದ್ದಿತು. ಅವ ಯವಗಳೆಲ್ಲವೂ ಶೋಕ-ಸಂತಾಪಗಳಿಂದ ಕುಗ್ಗಿಹೋಗಿದ್ದುವು. ಪತಿಯ ಹಿತಚಿಂತನೆಯಲ್ಲಿಯೇ ಆಸಕ್ತಳಾಗಿದ್ದ ಸೀತಾದೇವಿಯನ್ನು ನಾನಲ್ಲಿ ಕಂಡೆನು. ರಕ್ತಮಾಂಸಾಹಾರಿಗಳಾದ ಹೆಣ್ಣು ಹುಲಿಗಳ ಮಧ್ಯದಲ್ಲಿರುವ ಜಿಂಕೆಯಂತೆ– ಸೀತಾದೇವಿಯು ವಿಕಾರವಾದ ರೂಪವುಳ್ಳ ಅತ್ಯಂತಕ್ರೂರಿಗಳಾದ ರಾಕ್ಷಸಿಯರ ಮಧ್ಯದಲ್ಲಿದ್ದುದನ್ನು ನಾನು ನೋಡಿದೆನು. ತಮ್ಮ ಮಧ್ಯದಲ್ಲಿದ್ದ ಅವಳನ್ನು ಕ್ರೂರ ರಾಕ್ಷಸಿಯರು ಪದೇ-ಪದೇ ಹೆದರಿಸುತ್ತಿದ್ದರು. ಅಂತಹ ಭಯಂಕರವಾತಾವರಣದಲ್ಲಿದ್ದ ಸೀತಾದೇವಿಯನ್ನು ನಾನು ನೋಡಿದೆನು. ತಲೆಗೂದಲನ್ನವಳು ಒಂದೇ ಹೊತ್ತೆಯನ್ನಾಗಿ ಮಾಡಿಕೊಂಡಿದ್ದಳು. ದೀನ ಳಾಗಿದ್ದಳು. ಪತಿಯ ಚಿಂತೆಯಲ್ಲಿಯೇ ಮುಳುಗಿಹೋಗಿದ್ದಳು. ಬರಿಯ ನೆಲದ ಮೇಲೆ ಮಲಗುತ್ತಿದ್ದಳು. ಹಿಮಗಾಲದಲ್ಲಿ ಉದುರಿಹೋದ ದಳ ಗಳುಳ್ಳ ಕಮಲದಂತೆ ಅವಳ ಅಂಗಗಳು ಕಾಂತಿಹೀನವಾಗಿದ್ದುವು. ರಾವಣ ನಿಂದ ವಿನಾಶಗೊಳಿಸಲ್ಪಟ್ಟ ಸರ್ವಪ್ರಯೋಜನವುಳ್ಳ, ಸಾಯಬೇಕೆಂದೇ ನಿಶ್ಚಯಿಸಿಬಿಟ್ಟಿದ್ದ, ಜಿಂಕೆಮರಿಯಂತೆ ಚಂಚಲವಾದ ಕಣ್ಣುಗಳನ್ನು ಹೊಂದಿದ್ದ ಸೀತಾದೇವಿಯನ್ನು ನಾನು ಬಹಳ ಪ್ರಯಾಸದಿಂದ ಸಂಧಿಸಿದೆನು. ಯಶಸ್ವಿನಿಯಾದ ಶ್ರೀರಾಮನ ಭಾರ್ಯೆಯನ್ನು ಕಂಡು ಆ ಶಿಂಶುಪಾವೃಕ್ಷ ದಲ್ಲಿಯೇ ಅವಳ ಚರ್ಯೆಗಳನ್ನು ವೀಕ್ಷಿಸುತ್ತಾ ಕುಳಿತೆನು. ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ರಾವಣನ ಪತ್ನಿಯರೂ ಮತ್ತು ರಾವಣನೂ ಸೀತೆಯಿದ್ದ ಸ್ಥಳಕ್ಕೆ ಬಂದರು. ಸುಂದರವಾದ ನಿತಂಬಪ್ರದೇಶದಿಂದ ಕೂಡಿದ್ದ ಸೀತಾ ದೇವಿಯು ರಾಕ್ಷಸೇಶ್ವರನಾದ ರಾವಣನನ್ನು ನೋಡುತ್ತಲೇ ತೊಡೆಗಳೆರ ಡನ್ನೂ ಮುದುಡಿಕೊಂಡು ಪುಷ್ಟವಾಗಿದ್ದ ಸ್ತನಗಳನ್ನು ಎರಡು ತೋಳು ಗಳಿಂದಲೂ ಮುಚ್ಚಿಕೊಂಡು ಕುಳಿತಳು. ಆ ಸಮಯದಲ್ಲಿ ಸೀತಾದೇವಿಯು ಬಹಳ ಭೀತಳಾಗಿದ್ದಳು. ಉದ್ವಿಗ್ನಳಾಗಿದ್ದಳು. ಯಾರಾದರೂ ತನ್ನ ರಕ್ಷಣೆಗೆ ಬರುವರೇ–ಎಂಬ ಕಾತರದಿಂದ ಅತ್ತಲಿತ್ತ ನೋಡುತ್ತಿದ್ದಳು. ರಕ್ಷಕರಾರನ್ನೂ ಕಾಣದೇ ತಪಸ್ವಿನಿಯಾದ ಸೀತಾದೇವಿಯು ನಡುಗಿಹೋದಳು.

ಅಂತಹ ಪರಿಸ್ಥಿತಿಯಲ್ಲಿದ್ದ, ಅತ್ಯಂತದುಃಖಿತೆಯಾಗಿದ್ದ ಸೀತಾದೇವಿಯನ್ನು ರಾವಣನು ಸಮಾಧಾನಪಡಿಸಲು ಕಾಲಿಗೆ ಬಿದ್ದು ತಲೆಬಾಗಿ 'ಮಾಂ ಬಹುಮನ್ಯಸ್ವ ನನ್ನನ್ನು ಗೌರವಿಸು'–ಎಂದು ಪ್ರಾರ್ಥಿಸಿಕೊಂಡನು. ಹೀಗೆ ವಿನೀತನಾಗಿ ಪ್ರಾರ್ಥಿಸಿದರೂ ಸೀತೆಯು ರಾವಣನನ್ನು ಸಂಪೂರ್ಣವಾಗಿ ತಿರಸ್ಕರಿಸಿದಳು. ಅದರಿಂದ ಕುಪಿತನಾದ ರಾವಣನು ಹೇಳಿದನು :

**ಯದಿ ಚೇತ್ತ್ವಂ ತು ಮಾಂ ದರ್ಪಾನ್ನಾಭಿನನ್ದಸಿ ಗರ್ವಿತೇ ।**
**ದ್ವೌ ಮಾಸಾವನ್ತರಂ ಸೀತೇ ಪಾಸ್ಯಾಮಿ ರುಧಿರಂ ತವ ॥೬೭॥**

"ಗರ್ವಿಷ್ಠಳೇ! ನಿನಗೆ ಎರಡು ತಿಂಗಳ ಅವಧಿಯನ್ನು ಕೊಟ್ಟಿರುವೆನು. ಅಷ್ಟರೊಳಗೆ ನೀನೇನಾದರೂ ದರ್ಪದಿಂದ ನನ್ನನ್ನು ಗೌರವಿಸದೇ ಹೋದರೆ ಎರಡು ತಿಂಗಳು ಕಳೆದೊಡನೆಯೇ ನಿನ್ನ ರಕ್ತವನ್ನು ಕುಡಿದುಬಿಡುವೆನು."

ದುರಾತ್ಮನಾದ ರಾವಣನ ಆ ಮಾತನ್ನು ಕೇಳಿ ಪರಮಕ್ರುದ್ಧಳಾದ ಸೀತಾದೇವಿಯು ಉತ್ತಮೋತ್ತಮವಾದ ಮತ್ತು ತನಗೆ ಅನುರೂಪವಾದ ಈ ಮಾತನ್ನು ಹೇಳಿದಳು :

**ರಾಕ್ಷಸಾಧಮ ರಾಮಸ್ಯ ಭಾರ್ಯಾಮಮಿತತೇಜಸಃ ।**
**ಇಕ್ಷ್ವಾಕುವಂಶನಾಥಸ್ಯ ಸ್ನುಷಾಂ ದಶರಥಸ್ಯ ಚ ।**
**ಅವಾಚ್ಯಂ ವದತೋ ಜಿಹ್ವಾ ಕಥಂ ನ ಪತಿತಾ ತವ ॥೬೯॥**

"ರಾಕ್ಷಸಾಧಮನೇ! ಮಹಾತೇಜಸ್ವಿಯಾದ ಶ್ರೀರಾಮನ ಭಾರ್ಯೆಯೂ ಮತ್ತು ಇಕ್ಷ್ವಾಕುವಂಶಕ್ಕೆ ಒಡೆಯನಾದ ದಶರಥನ ಸೊಸೆಯೂ ಆಗಿರುವ ನನ್ನ ವಿಷಯದಲ್ಲಿ ಆಡಬಾರದ ಮಾತುಗಳನ್ನಾಡುತ್ತಿರುವ ನಿನ್ನ ನಾಲಿಗೆಯೇಕೆ ಕಳಚಿ ಕೆಳಗೆ ಬೀಳುತ್ತಿಲ್ಲ?

**ಕಿಂಸ್ವಿದ್ವೀರ್ಯಂ ತವಾನಾರ್ಯ ಯೋ ಮಾಂ ಭರ್ತುರಸನ್ನಿಧೌ ।**
**ಅಪಹೃತ್ಯಾಗತಃ ಪಾಪ ತೇನಾದೃಷ್ಟೋ ಮಹಾತ್ಮನಾ ॥೭೦॥**

ಅನಾರ್ಯನೇ! ನಿನ್ನ ಪರಾಕ್ರಮವಾದರೂ ಎಷ್ಟರದು? ಅದು ಅತ್ಯಂತನಿಕೃಷ್ಟವಾದುದೆಂದು ನಾನು ಭಾವಿಸುತ್ತೇನೆ. ಏಕೆಂದರೆ : ನನ್ನ ಪತಿಯಿಲ್ಲದಿರುವಾಗ ಮಹಾತ್ಮನಾದ ಅವನ ಕಣ್ಣಿಗೆ ಬೀಳದಂತೆ ನನ್ನನ್ನು ಅಪಹರಿಸಿಕೊಂಡು ಇಲ್ಲಿಗೆ ಕರೆತಂದಿರುವೆ.

**ನ ತ್ವಂ ರಾಮಸ್ಯ ಸದೃಶೋ ದಾಸ್ಯೇಽಪ್ಯಸ್ಯ ನ ಯುಜ್ಯಸೇ ।**
**ಯಜ್ಞೀಯಃ ಸತ್ಯವಾದೀ ಚ ರಣಶ್ಲಾಘೀ ಚ ರಾಘವಃ ॥೭೧॥**

ನೀನು ಶ್ರೀರಾಮನಿಗೆ ಖಂಡಿತವಾಗಿಯೂ ಸಾಟಿಯಾಗಲಾರೆ. ಅದಂತಿರಲಿ ; ಅವನ ದಾಸನಾಗಲೂ ನೀನು ಅಯೋಗ್ಯನೇ ಸರಿ. ರಾಘವನಾದರೋ ಯಾಗದೀಕ್ಷಿತನು. ಸತ್ಯವಾದಿಯು. ಶೂರನು. ಮೇಲಾಗಿ ರಣಶ್ಲಾಘಿಯು."

ವಾನರಶ್ರೇಷ್ಠರೇ! ಜಾನಕಿಯು ಹೀಗೆ ಅತ್ಯಂತಕಠೋರವಾದ ಮಾತುಗಳನ್ನಾಡಲು ರಾವಣನು ಕೋಪದಿಂದ ಚಿತೆಯಲ್ಲಿರುವ ಅಗ್ನಿಯಂತೆ ಉರಿದುಹೋದನು. ಕ್ರೂರವಾದ ಎರಡು ಕಣ್ಣುಗಳನ್ನೂ ಹಿಗ್ಗಿಸಿಕೊಂಡು ಬಲಮುಷ್ಟಿಯನ್ನು ಮೇಲೆತ್ತಿ ಸೀತಾದೇವಿಯನ್ನು ಕೊಲ್ಲಲು ಹೋದನು. ಅದನ್ನು ನೋಡಿದೊಡನೆಯೇ ರಾವಣನ ಸುತ್ತಲೂ ಇದ್ದ ಹೆಂಗಸರೆಲ್ಲರೂ ಹಾಹಾಕಾರ ಮಾಡಿದರು. ಆಗ ರಾವಣನ ಪತ್ನಿಯಾದ ಮಂಡೋದರಿಯು ಸ್ತ್ರೀಯರ ಸಮೂಹದಿಂದ ಮುಂದೆ ಬಂದು ರಾವಣೇಶ್ವರನನ್ನು ತಡೆದು ಮನ್ಮಥಪೀಡಿತನಾಗಿದ್ದ ಅವನಿಗೆ ಹೇಳಿದಳು :

**ಸೀತಯಾ ತವ ಕಿಂ ಕಾರ್ಯಂ ಮಹೇನ್ದ್ರಸಮವಿಕ್ರಮ ।**
**ಮಯಾ ಸಹ ರಮಸ್ವಾದ್ಯ ಮದ್ವಿಶಿಷ್ಟಾ ನ ಜಾನಕೀ ॥೭೫॥**

**ದೇವಗನ್ಧರ್ವಕನ್ಯಾಭಿರ್ಯಕ್ಷಕನ್ಯಾಭಿರೇವ ಚ ।**
**ಸಾರ್ಧಂ ಪ್ರಭೋ ರಮಸ್ವೇಹ ಸೀತಯಾ ಕಿಂ ಕರಿಷ್ಯಸಿ ॥೭೬॥**

"ಮಹೇಂದ್ರಸದೃಶಪರಾಕ್ರಮಿಯೇ! ಸೀತೆಯಿಂದ ನಿನಗೇನಾಗಬೇಕಾಗಿದೆ? ನನ್ನೊಡನೆ ವಿಹರಿಸು. ರೂಪದಲ್ಲಾಗಲೀ ಲಾವಣ್ಯದಲ್ಲಾಗಲೀ ಸೀತೆಯು ನನಗಿಂತಲೂ ಸುಂದರಿಯೇನಲ್ಲ. ಹಾಗಿಲ್ಲದಿದ್ದರೆ ದೇವ-ಗಂಧರ್ವ-ಯಕ್ಷಕನ್ಯೆಯರೊಡನೆಯಾದರೂ ವಿಹರಿಸು. ಒಲ್ಲದ ಸೀತೆಯನ್ನು ಕಟ್ಟಿಕೊಂಡು ಏನು ಮಾಡುವೆ?"

ಮಂಡೋದರಿಯು ಹೀಗೆ ಹೇಳಿದನಂತರ ಅವನ ಪತ್ನಿಯರೆಲ್ಲರೂ ಮಹಾಬಲಿಷ್ಠನಾದ ರಾವಣನನ್ನು ನಯ-ವಿನಯಯುಕ್ತವಾದ ಮಾತು ಗಳಿಂದ ಸಮಾಧಾನಗೊಳಿಸಿ ಅರಮನೆಗೆ ಕರೆದೊಯ್ದರು.

ರಾವಣನು ರಾಣೀವಾಸದ ಸ್ತ್ರೀಯರೊಡನೆ ಹೊರಟುಹೋಗಲು, ವಿಕಾರವಾದ ಮುಖಗಳನ್ನು ಹೊಂದಿದ್ದ ರಾಕ್ಷಸಿಯರು ಕ್ರೂರವಾದ ಮತ್ತು ಅತ್ಯಂತ ದಾರುಣವಾದ ಮಾತುಗಳಿಂದ ಸೀತಾದೇವಿಯನ್ನು ಭಯಪಡಿಸಲು ಪ್ರಾರಂಭಿಸಿದರು. ಅವರ ಮಾತುಗಳನ್ನು ಸೀತೆಯು ಹುಲ್ಲುಕಡ್ಡಿಯಂತೆ ನಿಕೃಷ್ಟವಾಗಿ ಕಂಡಳು. ಯಾರ ಮಾತನ್ನೂ ಲೆಕ್ಕಿಸಲಿಲ್ಲ. ಅವರು ಮಾಡುತ್ತಿದ್ದ ಗರ್ಜನೆಯೂ ಸೀತಾದೇವಿಯಲ್ಲಿ ಯಾವ ಪರಿಣಾಮವನ್ನೂ ಉಂಟುಮಾಡ ಲಿಲ್ಲ. ಮಾಂಸಾಶಿನಿಯರಾದ ಆ ರಾಕ್ಷಸಿಯರು ಬಹಳ ಹೊತ್ತಿನವರೆಗೆ ಗರ್ಜಿಸುತ್ತಿದ್ದು ಪ್ರಯೋಜನವನ್ನೇ ಕಾಣದೇ ಗರ್ಜಿಸುವುದನ್ನು ನಿಲ್ಲಿಸಿ ಸೀತಾದೇವಿಯ ಚರ್ಯೆಯನ್ನು ರಾವಣನಿಗೆ ತಿಳಿಸಿದರು. ರಾವಣನನ್ನು ವರಿಸುವಂತೆ ಸೀತಾದೇವಿಯನ್ನು ಒಪ್ಪಿಸುವ ವಿಷಯದಲ್ಲಿ ಭಗ್ನಮನೋರಥ ರಾದ ಆ ರಾಕ್ಷಸಿಯರೆಲ್ಲರೂ ಪ್ರಯತ್ನವನ್ನೇ ನಿಲ್ಲಿಸಿ ಸೀತೆಯ ಸುತ್ತಲೂ ಮಲಗಿ ನಿದ್ರಿಸಿದರು. ಅವರೆಲ್ಲರೂ ಮಲಗಿದನಂತರ ಪತಿಯ ಹಿತದಲ್ಲಿಯೇ ಆಸಕ್ತಳಾಗಿದ್ದ, ಅತ್ಯಂತದುಃಖಿತೆಯಾಗಿದ್ದ ಸೀತಾದೇವಿಯು ಕರುಣಾಜನಕ ವಾದ ರೀತಿಯಲ್ಲಿ ಗೋಳಾಡುತ್ತಾ ಶೋಕಿಸಿದಳು.

ಆ ರಾಕ್ಷಸಿಯರ ಮಧ್ಯದಿಂದ ತ್ರಿಜಟಾ ಎಂಬ ರಾಕ್ಷಸಿಯು ಎದ್ದು ಕುಳಿತು ಹೇಳಿದಳು :

**ಆತ್ಮಾನಂ ಖಾದತ ಕ್ಷಿಪ್ರಂ ನ ಸೀತಾ ವಿನಶಿಷ್ಯತಿ ।**
**ಜನಕಸ್ಯಾತ್ಮಜಾ ಸಾಧ್ವೀ ಸ್ನುಷಾ ದಶರಥಸ್ಯ ಚ ॥೮೩॥**

"ರಾಕ್ಷಸಿಯರೇ! ಬೇಕಾದರೆ ನಿಮ್ಮನ್ನೇ ನೀವು ತಿಂದುಹಾಕಿಕೊಳ್ಳಿರಿ. ಆದರೆ ಜನಕನ ಮಗಳಾದ, ದಶರಥನ ಸೊಸೆಯಾದ, ಸಾಧ್ವಿಯಾದ ಸೀತೆಯು ಮಾತ್ರ ಯಾವುದೇ ಕಾರಣದಿಂದಲೂ ನಾಶಹೊಂದುವುದಿಲ್ಲ.

ಭಯಂಕರವೂ ಮತ್ತು ರೋಮಾಂಚಕಾರಕವೂ ಆದ ಸ್ವಪ್ನವನ್ನು ನಾನು ಈಗತಾನೇ ಕಂಡೆನು. ಇವಳ ಪತಿಯು ರಾಕ್ಷಸರ ವಿನಾಶಕ್ಕೂ ಮತ್ತು ಯುದ್ಧದಲ್ಲಿ ರಾವಣನನ್ನು ಜಯಿಸುವುದಕ್ಕೂ ಇಲ್ಲಿಗೆ ಆಗಮಿಸು ವನು. ಹಾಗೆ ನಾನು ಕನಸನ್ನು ಕಂಡೆನು. ಸೀತಾದೇವಿಗೆ ಸತತವಾಗಿ ಉಪಟಳವನ್ನು ಕೊಡುತ್ತಿರುವ ಈ ನಮ್ಮ ರಾಕ್ಷಸಿಯರ ಸಮೂಹವನ್ನು

ರಾಘವನಿಂದ ಸಂರಕ್ಷಿಸಲು ಸೀತಾದೇವಿಯು ಮಾತ್ರವೇ ಸಮರ್ಥಳಾಗಿರುವಳು. ಆದುದರಿಂದ ನಾವೀಗಲೇ ಪ್ರಾಣರಕ್ಷಣೆಗಾಗಿ ವೈದೇಹಿಯನ್ನು ಪ್ರಾರ್ಥಿಸುವುದೇ ಉಚಿತವೆಂದು ನನಗೆ ತೋರುತ್ತಿದೆ.

**ಯಸ್ಯಾ ಹ್ಯೇವಂವಿಧಃ ಸ್ವಪ್ನೋ ದುಃಖಿತಾಯಾಃ ಪ್ರದೃಶ್ಯತೇ ।**
**ಸಾ ದುಃಖೈರ್ವಿವಿಧೈರ್ಮುಕ್ತಾ ಸುಖಮಾಪ್ನೋತ್ಯನುತ್ತಮಮ್ ॥**

ದುಃಖಿತಳಾದವಳೊಬ್ಬಳ ಸಂಬಂಧವಾಗಿ ಈ ವಿಧವಾದ ಕನಸು ಬಿದ್ದಲ್ಲಿ ಅವಳು ದುಃಖದಿಂದ ಬಿಡುಗಡೆಹೊಂದಿ ಉತ್ತಮವಾದ ಸುಖವನ್ನು ಪಡೆಯುತ್ತಾಳೆ.

ನನ್ನ ಅಭಿಪ್ರಾಯದಂತೆ ಕಾಲಿಗೆ ಬೀಳುವುದರಿಂದ ಜನಕನ ಮಗಳಾದ ಸೀತೆಯು ಪ್ರಸನ್ನಳಾಗುವಳು. ಈ ಸಮಯದಲ್ಲಿ ಸೀತೆಯೊಬ್ಬಳೇ ಮಹಾ ಭಯದಿಂದ ನಮ್ಮನ್ನು ರಕ್ಷಿಸಲು ಸಮರ್ಥಳು."

ತ್ರಿಜಟೆಯು ಹೀಗೆ ಸ್ವಪ್ನದ ವೃತ್ತಾಂತವನ್ನು ಹೇಳಲು ಮಾತಿಗೆ ವಿಜಯವಾಗುವುದೆಂಬ ಕನಸಿನ ವಿಷಯವನ್ನು ಕೇಳಿದ ಮಾತ್ರದಿಂದಲೇ ಅತಿಹರ್ಷಿತಳಾದ ಸೀತೆಯು ಲಜ್ಜಾನ್ವಿತೆಯಾಗಿ ಹೇಳಿದಳು :

**ಅವೋಚದ್ಯದಿ ತತ್ತಥ್ಯಂ ಭವೇಯಂ ಶರಣಂ ಹಿ ವಃ ॥೮೮॥**

"ನೀನು ಹೇಳುತ್ತಿರುವುದು ನಿಜವೇ ಆಗುವುದಾದರೆ ನಾನು ನಿಮಗೆ ರಕ್ಷಕಿಯಾಗುವೆನು."

ಅಂತಹ ಅತಿದಾರುಣವಾದ ಪರಿಸ್ಥಿತಿಯಲ್ಲಿದ್ದ ಸೀತಾದೇವಿಯನ್ನು ನೋಡಿ ನಾನು ಚಿಂತಿಸತೊಡಗಿದೆನು. ಆ ಸಮಯದಲ್ಲಿ ನನ್ನ ಮನಸ್ಸಿಗೆ ಸುಖವೂ ಇರಲಿಲ್ಲ ; ವಿಶ್ರಾಂತಿಯೂ ಇರಲಿಲ್ಲ. ಸೀತೆಯೊಡನೆ ಸಂಭಾಷಿಸುವ ಸಲುವಾಗಿ ನಾನಾವಿಧವಾದ ಮಾರ್ಗಗಳನ್ನು ಯೋಚಿಸಿದೆನು. ಅನಂತರ ನಾನು ಇಕ್ಷ್ವಾಕುವಂಶದರಸರ ಸ್ತುತಿಯೊಡನೆ ಸಂಭಾಷಣೆಯನ್ನು ಪ್ರಾರಂಭಿಸಿದೆನು. ರಾಜರ್ಷಿಗಳ ಸ್ತುತಿಯಿಂದ ಕೂಡಿದ್ದ ನನ್ನ ಮಾತುಗಳನ್ನು ಕೇಳಿ ಸೀತೆಯು ಕಂಬನಿದುಂಬಿದ ಕಣ್ಣುಗಳಿಂದ ಕೂಡಿ ನನ್ನನ್ನು ಪ್ರಶ್ನಿಸಿದಳು:

**ಕಸ್ತ್ವಂ ಕೇನ ಕಥಂ ಚೇಹ ಪ್ರಾಪ್ತೋ ವಾನರಪುಙ್ಗವ ।**
**ಕಾ ಚ ರಾಮೇಣ ತೇ ಪ್ರೀತಿಸ್ತನ್ಮೇ ಶಂಸಿತುಮರ್ಹಸಿ ॥೯೨॥**

"ವಾನರಶ್ರೇಷ್ಠನೇ! ನೀನು ಯಾರು? ಯಾರು ನಿನ್ನನ್ನು ಇಲ್ಲಿಗೆ ಕಳುಹಿಸಿದರು? ಇಲ್ಲಿಗೆ ಹೇಗೆ ಬಂದೆ? ಶ್ರೀರಾಮನ ವಿಷಯದಲ್ಲಿ ನಿನಗಿರುವ ಪ್ರೀತಿಯು ಎಂತಹುದು? ಈ ಎಲ್ಲ ವಿಷಯಗಳನ್ನೂ ಹೇಳುವುದು ನಿನಗೆ ಯೋಗ್ಯವಾಗಿದೆ."

ಸೀತಾದೇವಿಯ ಆ ಮಾತನ್ನು ಕೇಳಿ ನಾನು ಕೂಡ ಅವಳ ಪ್ರಶ್ನೆಗೆ ಅನುರೂಪವಾಗಿಯೇ ಉತ್ತರಿಸಿದೆನು :

"ದೇವಿ! ವಾನರರಿಗೆ ರಾಜನಾದ, ಮಹಾಬಲಿಷ್ಠನಾದ, ಮಹಾ ಪರಾಕ್ರಮಿಯಾದ, ಭಯಂಕರವಾದ ಶೌರ್ಯವುಳ್ಳ ಸುಗ್ರೀವನು ನಿನ್ನ ಪತಿಯಾದ ಶ್ರೀರಾಮನಿಗೆ ಸಹಾಯಕನು. ಇಲ್ಲಿಗೆ ಆಗಮಿಸಿರುವ ನನ್ನನ್ನು ಹನುಮಂತನೆಂಬ ಹೆಸರಿನ ಸುಗ್ರೀವನ ಸೇವಕನೆಂದು ತಿಳಿ. ಯಾವುದೇ ಕಾರ್ಯವನ್ನೂ ಸುಲಭವಾಗಿ ಮಾಡುವ ನಿನ್ನ ಪತಿಯಾದ ಶ್ರೀರಾಮನೇ ನನ್ನನ್ನು ನಿನ್ನ ಬಳಿಗೆ ಕಳುಹಿಸಿರುವನು. ಅವನ ನೆನಪನ್ನು ಉಂಟುಮಾಡುವಂತಹ ಈ ಮುದ್ರೆಯುಂಗುರವನ್ನು ಪುರುಷವ್ಯಾಘ್ರನಾದ ಶ್ರೀರಾಮನೇ ನಿನಗೆ ಕೊಡಲು ಹೇಳಿ ಕೊಟ್ಟಿರುವನು. ಇದನ್ನು ಸ್ವೀಕರಿಸು. ಈಗ ನಿನ್ನ ಆಜ್ಞೆಯನ್ನು ನಾನು ಪ್ರತೀಕ್ಷಿಸುತ್ತೇನೆ. ನಾನು ನಿನಗೆ ಯಾವ ಕಾರ್ಯವನ್ನು ಮಾಡಿಕೊಡಲಿ? ರಾಮ-ಲಕ್ಷ್ಮಣರ ಸಮೀಪಕ್ಕೆ ಈಗಲೇ ನಿನ್ನನ್ನು ಒಯ್ದುಬಿಡುವೆನು. ಇದಕ್ಕೆ ನಿನ್ನ ಉತ್ತರವೇನು? ಹೇಳು ತಾಯೇ!"

ನನ್ನ ಈ ಮಾತನ್ನು ಕೇಳಿ ನನ್ನಲ್ಲಿರುವ ಪರಾಕ್ರಮವನ್ನೂ ಗಮನಿಸಿ ಸೀತೆಯು ಹೇಳಿದಳು : **'ರಾವಣಮುತ್ಸಾದ್ಯ ರಾಘವೋ ಮಾಂ ನಯತು'**–'ರಾಘವನು ರಾವಣನನ್ನು ಧ್ವಂಸಮಾಡಿ ಅನಂತರ ನನ್ನನ್ನು ಕರೆದೊಯ್ಯಲಿ.'

ಆಗ ನಾನು ಆರ್ಯೆಯಾದ ಅನಿಂದಿತೆಯಾದ ಸೀತಾದೇವಿಗೆ ತಲೆ ಬಾಗಿ ನಮಸ್ಕರಿಸಿ ಶ್ರೀರಾಮನ ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಗುರುತೊಂದನ್ನು ಕೊಡುವಂತೆ ಪ್ರಾರ್ಥಿಸಿದೆನು. ನನ್ನ ಪ್ರಾರ್ಥನೆಯನ್ನು ಅಂಗೀಕರಿಸುತ್ತಾ ಸೀತಾದೇವಿಯು ಹೇಳಿದಳು : **ಗೃಹ್ಯತಾಂ ಮಣಿರುತ್ತಮಃ ।**

**ಮಣಿರ್ಯೇನ ಮಹಾಬಾಹೂ ರಾಮಸ್ತ್ವಾಂ ಬಹುಮನ್ಯತೇ ॥**

'ವಾನರಶ್ರೇಷ್ಠನೇ! ಶ್ರೇಷ್ಠವಾದ ಈ ಚೂಡಾಮಣಿಯನ್ನು ತೆಗೆದುಕೋ. ನೀನು ಈ ಚೂಡಾಮಣಿಯನ್ನು ಶ್ರೀರಾಮನಿಗೆ ಕೊಟ್ಟಲ್ಲಿ ಅವರು ನಿನ್ನನ್ನು ಬಹುವಾಗಿ ಮೆಚ್ಚಿಕೊಳ್ಳುವನು.'

ಹೀಗೆ ಹೇಳಿ ಸುಂದರಾಂಗಿಯಾದ ಸೀತಾದೇವಿಯು ಅತ್ಯಾಶ್ಚರ್ಯಕರವಾದ ಚೂಡಾಮಣಿಯನ್ನು ನನಗೆ ಕೊಟ್ಟಳು. ಅನಂತರ ಉದ್ವಿಗ್ನಳಾಗಿ ಶ್ರೀರಾಮನಿಗೆ ಮಾತ್ರವೇ ತಿಳಿದಿದ್ದ ಅನೇಕವಿಷಯಗಳನ್ನು ನನ್ನೊಡನೆ ಹೇಳಿದಳು. ಬಳಿಕ ನಾನು ಸಮಾಧಾನಚಿತ್ತನಾಗಿ ರಾಜಪುತ್ರಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಹಿಂದಿರುಗಲು ಮನಸ್ಸುಮಾಡಿದೆನು. ಆ ಸಮಯದಲ್ಲಿ ಪುನಃ ಸೀತಾದೇವಿಯು ಏನನ್ನೋ ಹೇಳಲು ನಿಶ್ಚಯಿಸಿ ಹೇಳಿದಳು :

"ಹನುಮಂತ! ರಾಘವನಿಗೆ ಇಲ್ಲಿಯ ನನ್ನ ಸಮಾಚಾರವನ್ನು ಯಥಾವತ್ತಾಗಿ ಹೇಳು. ನಿನ್ನ ಮಾತನ್ನು ಕೇಳಿದೊಡನೆಯೇ ವೀರರಾದ ರಾಮ-ಲಕ್ಷ್ಮಣರು ಸುಗ್ರೀವನೊಡನೆ ಇಲ್ಲಿಗೆ ಬರುವಂತಾಗಬೇಕು. ಹಾಗೆ ನೀನು ಅವನಿಗೆ ನನ್ನ ದುಃಖವು ಮನದಟ್ಟಾಗುವಂತೆ ಹೇಳಬೇಕು. ಒಂದು ವೇಳೆ ಅವರು ಬರದಿದ್ದರೆ ನನ್ನ ಜೀವಿತವು ಇನ್ನು ಕೇವಲ ಎರಡು ಮಾಸಗಳು ಮಾತ್ರವಿರುತ್ತದೆ. ಅನಂತರ ನಾನು ಅನಾಥೆಯಂತೆ ಪ್ರಾಣತ್ಯಾಗಮಾಡುವೆನು. ಎರಡು ತಿಂಗಳ ಅವಧಿಯು ಕಳೆದನಂತರ ಇಲ್ಲಿಗೆ ಬಂದರೂ ರಾಘವನು ನನ್ನನ್ನು ನೋಡಲಾರನು."

ವಾನರರೇ! ಸೀತಾದೇವಿಯ ದೈನ್ಯಪೂರ್ಣವಾದ ಈ ಮಾತುಗಳನ್ನು ಕೇಳಿ ರಾವಣನ ವಿಷಯದಲ್ಲಿ ನಾನು ಕ್ರುದ್ಧನಾದೆನು. ಲಂಕಾಪಟ್ಟಣದಲ್ಲಿ ಮಾಡಲು ಉಳಿದಿರುವ ಕಾರ್ಯದ ವಿಷಯವಾಗಿ ವಿಚಾರಮಾಡಿದೆನು. ನನ್ನ ಶರೀರವು ಪರ್ವತೋಪಮವಾಗಿ ಬೆಳೆಯಿತು. ರಾಕ್ಷಸರೊಡನೆ ಯುದ್ಧವನ್ನು ಬಯಸಿದ ನಾನು ಆ ಅಶೋಕವನವನ್ನೇ ವಿನಾಶಗೊಳಿಸಲು ಪ್ರಾರಂಭಿಸಿದೆನು. ಕ್ಷಣಮಾತ್ರದಲ್ಲಿ ಆ ವನಪ್ರದೇಶವು ಭಗ್ನವಾಯಿತು. ಮೃಗ-ಪಕ್ಷಿಗಳೂ ಭ್ರಾಂತವಾದುವು. ವಿಕಾರವಾದ ಮುಖಗಳಿಂದ ಕೂಡಿದ್ದ ರಾಕ್ಷಸಿಯರು ಎಚ್ಚರಗೊಂಡು ದುರುಗುಟ್ಟಿಕೊಂಡು ನೋಡುತ್ತಿದ್ದರು. ಆ ಅಶೋಕವನ

ದಲ್ಲಿದ್ದ ರಾಕ್ಷಸಿಯರೆಲ್ಲರೂ ಗುಂಪಾಗಿ ಸೇರಿ ನಾನು ಆ ವನವನ್ನು ಧ್ವಂಸ ಮಾಡುತ್ತಿದ್ದುದನ್ನು ನೋಡಿ ಒಡನೆಯೇ ರಾವಣನಿಗೆ ದೂರಿತ್ತರು.

**ರಾಜನ್ವನಮಿದಂ ದುರ್ಗಂ ತವ ಭಗ್ನಂ ದುರಾತ್ಮನಾ ।**
**ವಾನರೇಣ ಹ್ಯವಿಜ್ಞಾಯ ತವ ವೀರ್ಯಂ ಮಹಾಬಲ ॥೧೧೦॥**

"ಮಹಾಬಲನೇ! ಮಹಾರಾಜ! ನಿನ್ನ ಬಲಪರಾಕ್ರಮವನ್ನು ಅರಿ ಯದ ದುರಾತ್ಮನಾದ ವಾನರನೊಬ್ಬನು ದುರ್ಗಮವಾಗಿದ್ದ ನಿನ್ನ ಅಶೋಕ ವನವನ್ನು ಹಾಳುಮಾಡಿಬಿಟ್ಟಿದ್ದಾನೆ.

**ದುರ್ಬುದ್ಧೇಸ್ತಸ್ಯ ರಾಜೇನ್ದ್ರ ತವ ವಿಪ್ರಿಯಕಾರಿಣಃ ।**
**ವಧಮಾಜ್ಞಾಪಯ ಕ್ಷಿಪ್ರಂ ಯಥಾಸೌ ವಿಲಯಂ ವ್ರಜೇತ್ ॥**

ನಿಶ್ಚಯವಾಗಿಯೂ ಇದು ಅವನ ದುರ್ಬುದ್ಧಿಯ ದ್ಯೋತಕವಾಗಿದೆ. ನಿನಗೆ ಅಪ್ರಿಯವಾದ ಕಾರ್ಯವನ್ನು ಮಾಡಿರುವ ಅವನು ಪುನಃ ಜೀವಸಹಿತವಾಗಿ ಹಿಂದಿರುಗಿ ಹೋಗದ ರೀತಿಯಲ್ಲಿ ಈಗಲೇ ಅವನ ವಧೆಯಾಗುವಂತೆ ಆಜ್ಞಾಪಿಸು."

ರಾಕ್ಷಸಿಯರ ಆ ಮಾತನ್ನು ಕೇಳುತ್ತಲೇ ರಾವಣೇಶ್ವರನು ಅತ್ಯಂತ ದುರ್ಜಯರೆನಿಸಿದ್ದ, ತನ್ನ ಮನಸ್ಸಿಗೆ ಅನುಗುಣವಾಗಿ ನಡೆದುಕೊಳ್ಳುತ್ತಿದ್ದ, ಕಿಂಕರರೆಂಬ ರಾಕ್ಷಸರನ್ನು ನನ್ನನ್ನು ವಧಿಸುವ ಸಲುವಾಗಿ ಕಳುಹಿಸಿದನು. ಶೂಲ-ಮುದ್ಗರಗಳೇ ಮೊದಲಾದ ಆಯುಧಗಳನ್ನು ಹಿಡಿದಿದ್ದ ಆ ಎಂಬತ್ತು ಸಾವಿರ ಕಿಂಕರರಾಕ್ಷಸರನ್ನೂ ನಾನು ಆ ವನಪ್ರದೇಶದ ಹೆಬ್ಬಾಗಿಲಿನಲ್ಲಿದ್ದ ಲಾಳಮುಂಡಿಗೆಯಿಂದಲೇ ಸಂಹರಿಸಿದೆನು. ಅವರಲ್ಲಿ ಅಳಿದುಳಿದಿದ್ದ ಅಲ್ಪ ಬಲರಾದ ಕೆಲವು ರಾಕ್ಷಸರು ರಾವಣನ ಬಳಿಗೆ ಓಡಿಹೋಗಿ ಸೈನ್ಯವೆಲ್ಲವೂ ವಾನರನಿಂದ ವಿನಾಶಹೊಂದಿತೆಂಬ ವಾರ್ತೆಯನ್ನು ತಿಳಿಸಿದರು. ಅನಂತರ ನನಗೆ ಉತ್ತಮೋತ್ತಮವಾಗಿದ್ದ ಚೈತ್ಯಪ್ರಾಸಾದವನ್ನು ವಿನಾಶಗೊಳಿಸುವ ಮನಸ್ಸಾಯಿತು. ಒಡನೆಯೇ ನಾನು ಪ್ರಾಸಾದವನ್ನು ಕಾಯುತ್ತಿದ್ದ ನೂರು ರಾಕ್ಷಸರನ್ನು ಚೈತ್ಯಪ್ರಾಸಾದದಲ್ಲಿದ್ದ ಕಂಬದಿಂದಲೇ ಪ್ರಹರಿಸಿ ಸಂಹರಿಸಿದೆನು. ಹೀಗೆ ಅತ್ಯಂತಕುಪಿತನಾಗಿದ್ದ ನಾನು ಲಂಕೆಗೆ ತಿಲಕಪ್ರಾಯವಾಗಿದ್ದ ಆ ಚೈತ್ಯಪ್ರಾಸಾದವನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡಿದೆನು.

ಬಳಿಕ ರಾವಣನು ಘೋರರೂಪಿಗಳೂ ಭಯವನ್ನುಂಟುಮಾಡುವವರೂ ಆಗಿದ್ದ ಅನೇಕ ರಾಕ್ಷಸರೊಡನೆ ಪ್ರಹಸ್ತನ ಮಗನಾದ ಜಂಬುಮಾಲಿಯನ್ನು ನನ್ನೊಡನೆ ಯುದ್ಧಮಾಡಲು ಕಳುಹಿಸಿದನು. ಬಲಸಂಪನ್ನನಾಗಿದ್ದ ರಣಕೋವಿದನಾಗಿದ್ದ ಜಂಬುಮಾಲಿಯನ್ನು ಅವನ ಅನುಯಾಯಿ ಗಳ ಸಹಿತವಾಗಿ ಅತಿಘೋರವಾಗಿದ್ದ ಪರಿಘಾಯುಧದಿಂದ ಕ್ಷಣಮಾತ್ರದಲ್ಲಿ ಸಂಹರಿಸಿಬಿಟ್ಟೆನು. ಪ್ರಹಸ್ತನ ಮಗನಾದ ಜಂಬುಮಾಲಿಯೂ ಹತನಾದನೆಂಬ ವಾರ್ತೆಯನ್ನು ಕೇಳಿ ರಾವಣನು ಪದಾತಿಸೈನ್ಯದಿಂದ ಸಂಪನ್ನರಾಗಿದ್ದ ಮಹಾಬಲಶಾಲಿಗಳಾದ ಮಂತ್ರಿಪುತ್ರರನ್ನು ನನ್ನೊಡನೆ ಯುದ್ಧಮಾಡಲು ಕಳುಹಿಸಿದನು. ಅವರೆಲ್ಲರನ್ನೂ ನಾನು ಲಾಳಮುಂಡಿಗೆಯಿಂದಲೇ ಪ್ರಹರಿಸಿ ಯಮಾಲಯಕ್ಕೆ ಕಳುಹಿಸಿಬಿಟ್ಟೆನು. ಶೀಘ್ರಪರಾಕ್ರಮಿಗಳಾದ ಮಂತ್ರಿ ಪುತ್ರರೂ ಹತರಾದರೆಂಬ ವಾರ್ತೆಯನ್ನು ಕೇಳಿ ರಾವಣನು ಶೂರರಾದ ಐವರು ಸೇನಾನಾಯಕರನ್ನು ನನ್ನೊಡನೆ ಯುದ್ಧಮಾಡುವ ಸಲುವಾಗಿ ಕಳುಹಿಸಿದನು. ಸೇನೆಗಳೊಡನೆ ಯುದ್ಧಕ್ಕೆ ಬಂದಿದ್ದ ಆ ಐವರು ಸೇನಾನಾಯಕ ರನ್ನೂ ನಾನು ಏಕಕಾಲದಲ್ಲಿ ಸಂಹರಿಸಿದೆನು. ಬಳಿಕ ರಾವಣನು ಅನೇಕ ರಾಕ್ಷಸರೊಡನೆ ಮಗನಾದ ಅಕ್ಷಕುಮಾರನನ್ನೇ ಯುದ್ಧಕ್ಕೆ ಕಳುಹಿಸಿದನು. ಮಂಡೋದರಿಯ ಮಗನಾದ, ರಣಕೋವಿದನಾದ, ಆಕಾಶದ ಕಡೆಗೆ ಉತ್ಸಾಹದಿಂದ ನೆಗೆಯುತ್ತಿದ್ದ ಆ ಅಕ್ಷಕುಮಾರನ ಎರಡು ಕಾಲುಗಳನ್ನೂ ಹಿಡಿದು ನೂರಾರು ಬಾರಿ ರಭಸದಿಂದ ತಿರುಗಿಸಿ ನೆಲಕ್ಕೆ ಅಪ್ಪಳಿಸಿ ಅವನ ಶರೀರವನ್ನು ಒಂದು ದೊಡ್ಡ ಮುದ್ದೆಯನ್ನಾಗಿ ಮಾಡಿಬಿಟ್ಟೆನು. ಅಕ್ಷಕುಮಾರನು ನಿಧನ ಹೊಂದಿದನೆಂಬ ವಾರ್ತೆಯನ್ನು ಕೇಳಿ ಪರಮಕ್ರುದ್ಧನಾದ ರಾವಣನು ಮಹಾ ಬಲಿಷ್ಠನಾದ, ಯುದ್ಧದುರ್ಮದನಾದ ಇಂದ್ರಜಿತುವೆಂಬ ತನ್ನ ಎರಡನೆಯ ಮಗನನ್ನು ಯುದ್ಧಕ್ಕೆ ಕಳುಹಿಸಿದನು. ಅವನೊಡನೆ ಬಂದಿದ್ದ ಮಹಾಸೈನ್ಯ ವನ್ನೂ ಇಂದ್ರಜಿತುವನ್ನೂ ಯುದ್ಧದಲ್ಲಿ ನಿಸ್ತೇಜರನ್ನಾಗಿ ಮಾಡಿ ನಾನು ಅತ್ಯಂತಹರ್ಷಿತನಾದೆನು. ಜಯಿಸಿಯೇ ತೀರುವೆನೆಂಬ ಪರಮವಿಶ್ವಾಸದಿಂದ ಮದೋತ್ಕಟರಾದ ರಾಕ್ಷಸಸೈನಿಕರೊಡನೆ ರಾವಣನಿಂದ ಕಳುಹಿಸಲ್ಪಟ್ಟಿದ್ದ ಮಹಾಬಾಹುವಾದ ಇಂದ್ರಜಿತುವು ತನ್ನ ಸೈನ್ಯವು ಸಂಪೂರ್ಣವಾಗಿ ಭಗ್ನವಾದುದನ್ನು ಕಂಡು, ನಾನು ಎದುರಿಸಲು ಅಸಾಧ್ಯನೆಂದು ಭಾವಿಸಿ

ಅತ್ಯಂತಶೀಘ್ರವಾಗಿ ಬ್ರಹ್ಮಾಸ್ತ್ರದಿಂದ ನನ್ನನ್ನು ಬಂಧಿಸಿದನು. ಅಲ್ಲಿದ್ದ ರಾಕ್ಷಸರು ಬ್ರಹ್ಮಾಸ್ತ್ರದಿಂದ ಬಂಧಿಸಲ್ಪಟ್ಟಿದ್ದ ನನ್ನನ್ನು ಹಗ್ಗಗಳಿಂದ ಬಿಗಿದು ರಾವಣನ ಬಳಿಗೆ ಸೆಳೆದುಕೊಂಡು ಹೋದರು. ಭವ್ಯವಾಗಿದ್ದ ಆ ಸಭಾಮಂಟಪದಲ್ಲಿ ಸಿಂಹಾಸನಾರೂಢನಾಗಿ ಕುಳಿತಿದ್ದ ದುರಾತ್ಮನಾದ ರಾವಣನನ್ನು ನೋಡಿ ಅವನೊಡನೆ ಮಾತನಾಡಿದೆನು. ರಾವಣನು ಲಂಕೆಗೆ ಬಂದುದರ ಮತ್ತು ರಾಕ್ಷಸರನ್ನು ಸಂಹರಿಸಿದ ಕಾರಣವನ್ನು ಪ್ರಶ್ನಿಸಿದನು. ಸೀತೆಯ ಸಲುವಾಗಿ ನಾನು ಈ ಎಲ್ಲ ಕಾರ್ಯಗಳನ್ನೂ ಮಾಡಿದೆನೆಂದು ರಾವಣನಿಗೆ ಸ್ಪಷ್ಟಪಡಿಸಿದೆನು.

**ಅಸ್ಯಾಹಂ ದರ್ಶನಾಕಾಂಕ್ಷೀ ಪ್ರಾಪ್ತಸ್ತದ್ಭವನಂ ವಿಭೋ ।**
**ಮಾರುತಸ್ಯೌರಸಃ ಪುತ್ರೋ ವಾನರೋ ಹನುಮಾನಹಮ್ ॥**

"ರಾವಣೇಶ್ವರ! ವಾಯುದೇವನ ಔರಸಪುತ್ರನಾದ ಹನುಮಂತನೆಂಬ ಹೆಸರಿನ ನಾನು ಸೀತಾದೇವಿಯನ್ನು ಸಂದರ್ಶಿಸುವ ಇಚ್ಛೆಯಿಂದಲೇ ನಿನ್ನ ಅರಮನೆಗೆ ಬಂದೆನು.

**ರಾಮದೂತಂ ಚ ಮಾಂ ವಿದ್ಧಿ ಸುಗ್ರೀವಸಚಿವಂ ಕಪಿಮ್ ।**
**ಸೋಽಹಂ ದೌತ್ಯೇನ ರಾಮಸ್ಯ ತ್ವತ್ಸಕಾಶಮಿಹಾಗತಃ ॥೧೩೨॥**

ನನ್ನನ್ನು ಶ್ರೀರಾಮನ ದೂತನೆಂದೂ ಸುಗ್ರೀವನ ಮಂತ್ರಿಯೆಂದೂ ತಿಳಿ. ಶ್ರೀರಾಮನ ರಾಯಭಾರಿಯಾಗಿ ನಾನು ನಿನ್ನಲ್ಲಿಗೆ ಬಂದಿರುವೆನು.

ನಾನು ಅವನಿಂದ ತಂದಿರುವ ಸಂದೇಶವನ್ನು ನಿನಗೆ ಹೇಳುವೆನು, ಕೇಳು ರಾವಣೇಶ್ವರ! ಕಪೀಶ್ವರನಾದ ಸುಗ್ರೀವನು ನಿನ್ನ ಕುಶಲವನ್ನು ಕೇಳುವಂತೆ ಹೇಳಿ ಧರ್ಮಾರ್ಥಯುಕ್ತವೂ ಹಿತಕರವೂ ಆದ ಈ ಸಂದೇಶವನ್ನು ಕಳುಹಿಸಿದ್ದಾನೆ.

"ಅಸಂಖ್ಯಾತವಾದ ವೃಕ್ಷಗಳಿಂದ ನಿಬಿಡವಾಗಿರುವ ಋಷ್ಯಮೂಕ ಪರ್ವತದಲ್ಲಿ ನಾನು ವಾಸಿಸುತ್ತಿರಲಾಗಿ ರಣವಿಕ್ರಾಂತನಾದ ರಾಘವನು ನಮ್ಮೊಡನೆ ಮೈತ್ರಿಯನ್ನು ಬೆಳೆಸಿದನು. ರಾಕ್ಷಸನೊಬ್ಬನು ತನ್ನ ಭಾರ್ಯೆಯನ್ನು ಅಪಹರಿಸಿರುವುದಾಗಿ ಶ್ರೀರಾಮನು ನಮ್ಮೊಡನೆ ತಿಳಿಸಿ ಸೀತಾನ್ವೇಷಣೆಯಲ್ಲಿ ಸಂಪೂರ್ಣವಾಗಿ ಮನಸ್ಸನ್ನಿಟ್ಟು ಸಹಾಯಮಾಡಬೇಕೆಂದೂ ಹೇಳಿದನು. ಆಗ

ನಾನು ಅವನಿಗೆ ವಾಲಿಯನ್ನು ವಧಿಸಬೇಕಾಗಿರುವ ವಿಷಯವನ್ನು ಹೇಳಿದೆನು. ಹೀಗೆ ಪರಸ್ಪರವಾಗಿ ಸಹಾಯಮಾಡುವ ಸಲುವಾಗಿಯೇ ಇಬ್ಬರೂ ಪ್ರತಿಜ್ಞೆಯನ್ನು ಮಾಡಬೇಕೆಂದು ನಾನು ಶ್ರೀರಾಮನಿಗೆ ಹೇಳಿದೆನು."

ರಾವಣೇಶ್ವರ! ವಾಲಿಯಿಂದ ರಾಜ್ಯವನ್ನು ಕಳೆದುಕೊಂಡಿದ್ದ ಸುಗ್ರೀವನು ಲಕ್ಷ್ಮಣಸಮೇತನಾದ ಶ್ರೀರಾಮನೊಡನೆ ಅಗ್ನಿಸಾಕ್ಷಿಯಾಗಿ ಸಖ್ಯ ಮಾಡಿಕೊಂಡನು. ಶ್ರೀರಾಮನು ಯುದ್ಧದಲ್ಲಿ ಒಂದೇ ಬಾಣದಿಂದ ವಾಲಿಯನ್ನು ಸಂಹರಿಸಿ ಸುಗ್ರೀವನನ್ನು ವಾನರರಿಗೆ ರಾಜನನ್ನಾಗಿ ಮಾಡಿದನು.

ಅಂತಹ ಮಹಾತ್ಮನಾದ ಶ್ರೀರಾಮನಿಗೆ ನಾವೆಲ್ಲರೂ ಎಲ್ಲ ರೀತಿಗಳಲ್ಲಿಯೂ ಸಹಾಯವನ್ನು ಅವಶ್ಯವಾಗಿ ಮಾಡಲೇಬೇಕು. ಈ ಕಾರಣದಿಂದಲೇ ನಾನು ನಿನ್ನ ಬಳಿಗೆ ರಾಜಧರ್ಮಾನುಸಾರವಾಗಿ ಸುಗ್ರೀವನಿಂದ ಕಳುಹಿಸಲ್ಪಟ್ಟಿರುವೆನು. ರಾವಣೇಶ್ವರ! ಕಪಿಶ್ರೇಷ್ಠರು ನಿನ್ನ ಸೈನ್ಯವನ್ನು ಧ್ವಂಸ ಮಾಡುವ ಮೊದಲೇ ನೀನು ಸೀತೆಯನ್ನು ಕರೆತಂದು ರಾಮನಿಗೊಪ್ಪಿಸುವುದು ಯೋಗ್ಯವಾಗಿದೆ. ನಾನೀಗ ತೋರಿರುವುದು ಎಲ್ಲ ವಾನರರಿಗೂ ಇರುವ ಪರಾಕ್ರಮವೇ ಆಗಿದೆ. ವಾನರರಿಗೆ ಇಂತಹ ಪರಾಕ್ರಮವಿರುವು ದೆಂದು ಇದುವರೆಗೆ ಯಾರಿಗೂ ತಿಳಿದಿರಲಿಲ್ಲ. ಅತುಲಪರಾಕ್ರಮಿಗಳಾದ ವಾನರರು ಆಹ್ವಾನಿತರಾದರೆ ದೇವತೆಗಳಿಗೂ ಸಹಾಯಕರಾಗಿ ಹೋಗಬಲ್ಲರು. ವಾನರರಾಜನಾದ ಸುಗ್ರೀವನು ನಿನಗೆ ಇದನ್ನೇ ಹೇಳಿಕಳುಹಿಸಿರುವನು."

ಅಂಗದಪ್ರಮುಖವಾನರರೇ! ಹೀಗೆ ನಾನು ರಾವಣನಿಗೆ ಹೇಳಿದೆನು. ಒಡನೆಯೇ ರಾವಣನು ಅತ್ಯಂತಕ್ರುದ್ಧನಾಗಿ ನನ್ನನ್ನು ದಹಿಸಿಬಿಡುವನೋ ಎಂಬಂತೆ ಅತಿಕ್ರೂರವಾದ ದೃಷ್ಟಿಯಿಂದ ನೋಡಿದನು. ದುರಾತ್ಮನಾದ ಕ್ರೂರಧರ್ಮನಾದ ರಾವಣನು ನನ್ನ ಪ್ರಭಾವವೆಷ್ಟೆಂಬುದನ್ನರಿಯದೇ ನನ್ನನ್ನು ವಧಿಸಲು ಆಜ್ಞೆಮಾಡಿದನು. ಮಹಾಬುದ್ಧಿವಂತನಾದ ವಿಭೀಷಣನೆಂಬ ಹೆಸರಿನ ರಾವಣನ ತಮ್ಮನು ಆ ಸಮಯದಲ್ಲಿ ಅಲ್ಲಿಯೇ ಇದ್ದನು. ಅವನು ನನ್ನ ರಕ್ಷಣೆಯ ಸಲುವಾಗಿ ರಾಕ್ಷಸರಾಜನನ್ನು ಪ್ರಾರ್ಥಿಸಿದನು.

**ನೈವಂ ರಾಕ್ಷಸಶಾರ್ದೂಲ ತ್ಯಜ್ಯತಾಮೇಷ ನಿಶ್ಚಯಃ ।**
**ರಾಜಶಾಸ್ತ್ರವ್ಯಪೇತೋ ಹಿ ಮಾರ್ಗಃ ಸಂಸೇವ್ಯತೇ ತ್ವಯಾ ॥೧೪೬॥**

"ರಾಕ್ಷಸಶ್ರೇಷ್ಠನೇ! ಹೀಗೆಂದೂ ಮಾಡಬಾರದು. ದೂತನಾಗಿ ಬಂದಿರುವವನನ್ನು ವಧಿಸಬೇಕೆಂಬ ನಿನ್ನ ಈ ನಿಶ್ಚಯವನ್ನು ಪರಿತ್ಯಜಿಸು. ನೀನು ಅನುಸರಿಸುತ್ತಿರುವ ಈ ಮಾರ್ಗವು ರಾಜಧರ್ಮಕ್ಕೆ ವಿರುದ್ಧವಾದುದೆಂದು ನನಗೆ ತೋರುತ್ತದೆ.

**ದೂತವಧ್ಯಾ ನ ದೃಷ್ಟಾ ಹಿ ರಾಜಶಾಸ್ತ್ರೇಷು ರಾಕ್ಷಸ ।**
**ದೂತೇನ ವೇದಿತವ್ಯಂ ಚ ಯಥಾರ್ಥಂ ಹಿತವಾದಿನಾ ॥೧೪೭॥**

**ಸುಮಹತ್ಯಪರಾಧೇಽಪಿ ದೂತಸ್ಯಾತುಲವಿಕ್ರಮ ।**
**ವಿರೂಪಕರಣಂ ದೃಷ್ಟಂ ನ ವಧೋಽಸ್ತಿ ಹಿ ಶಾಸ್ತ್ರತಃ ॥೧೪೮॥**

ಅತುಲಪರಾಕ್ರಮಿಯೇ! ರಾವಣೇಶ್ವರ! ರಾಜಶಾಸ್ತ್ರಗಳಲ್ಲಿ ದೂತನನ್ನು ವಧಿಸಬೇಕೆಂಬ ವಿಧಿಯು ಎಲ್ಲಿಯೂ ಕಂಡುಬರುವುದಿಲ್ಲ. ಒಡೆಯನು ಹೇಳಿಕಳುಹಿಸಿರುವಂತೆ ಹೇಳಲು ಬಂದಿರುವ ದೂತನಿಂದ ಶತ್ರುಪಕ್ಷದವರ ಅಭಿಪ್ರಾಯವೇನೆಂಬುದನ್ನು ತಿಳಿದುಕೊಳ್ಳಬೇಕು. ದೂತನಾದವನು ಎಂತಹುದೇ ಮಹತ್ತರವಾದ ಅಪರಾಧವನ್ನೆಸಗಿದ್ದರೂ ಅವನ ಆಕಾರವನ್ನು ವಿರೂಪಗೊಳಿಸಬಹುದೆನ್ನುವ ವಿಷಯವು ಶಾಸ್ತ್ರಗಳಲ್ಲಿ ಕಂಡುಬರುತ್ತದೆ. ಆದರೆ ದೂತನ ವಧೆಯು ಎಲ್ಲಿಯೂ ಹೇಳಿಲ್ಲ."

ಕಪಿಶ್ರೇಷ್ಠರೇ! ವಿಭೀಷಣನು ಹೀಗೆ ಹೇಳಲು ರಾವಣನು ತನ್ನ ಅನುಚರರಾದ ರಾಕ್ಷಸರಿಗೆ ನನ್ನ ಬಾಲವನ್ನು ಸುಟ್ಟುಬಿಡುವಂತೆ ಆಜ್ಞಾಪಿಸಿದನು.

ರಾವಣೇಶ್ವರನ ಆಜ್ಞೆಯನ್ನು ಕೇಳಿದೊಡನೆಯೇ ರಾಕ್ಷಸರು ಸೆಣಬಿನ ನಾರುಗಳನ್ನೂ ಹತ್ತಿಯ ಬಟ್ಟೆಗಳನ್ನೂ ನನ್ನ ಬಾಲಕ್ಕೆ ಸುತ್ತಿದರು. ಉಗ್ರಪರಾಕ್ರಮಿಗಳಾಗಿದ್ದ ರಾಕ್ಷಸರು ನನ್ನನ್ನು ವಿರೂಪಗೊಳಿಸಲು ಹೀಗೆ ಸನ್ನಾಹಮಾಡಿ ನನ್ನ ಬಾಲಕ್ಕೆ ಬೆಂಕಿಯನ್ನು ಹೊತ್ತಿಸಿ ದೊಣ್ಣೆಗಳಿಂದ ನನ್ನನ್ನು ಪ್ರಹರಿಸತೊಡಗಿದರು. ರಾಕ್ಷಸರು ನನ್ನನ್ನು ಹಗ್ಗಗಳಿಂದ ಬಲವಾಗಿ ಬಂಧಿಸಿದರೂ ಹಗಲಿನಲ್ಲಿ ಲಂಕಾಪಟ್ಟಣವನ್ನು ನೋಡಲು ಬಯಸಿದ್ದ ನನಗೆ ಯಾವ ವಿಧವಾದ ಪೀಡೆಯೂ ಆಗಲಿಲ್ಲ. ಬಳಿಕ ಶೂರರಾಗಿದ್ದ ಆ ರಾಕ್ಷಸರು ಬಂಧಿತನಾಗಿ ಅಗ್ನಿಯಿಂದ ಸುತ್ತುವರಿಯಲ್ಪಟ್ಟಿದ್ದ ನನ್ನನ್ನು ನಗರದ

ಬಾಗಿಲ ಬಳಿಗೆ ಕರೆತಂದು ರಾಜಮಾರ್ಗದಲ್ಲಿ ನಿಲ್ಲಿಸಿ–'ಬಾಲದಲ್ಲಿ ಬೆಂಕಿಯಿರುವ ಈ ಕಪಿಯನ್ನು ಎಲ್ಲರೂ ನೋಡಿರಿ'–ಎಂದು ಸಾರಿದರು.

ಅನಂತರ ನಾನು ನನ್ನ ಬೃಹದಾಕಾರವನ್ನು ಸಂಕೋಚಪಡಿಸಿಕೊಂಡೆನು. ನನ್ನನ್ನು ಬಂಧಿಸಿದ್ದ ಕಟ್ಟುಗಳೆಲ್ಲವೂ ಕಳಚಿಬಿದ್ದುವು. ಹೀಗೆ ಆ ಕಟ್ಟುಗಳಿಂದ ಬಿಡಿಸಿಕೊಂಡನಂತರ ನಾನು ಪುನಃ ಹಿಂದಿನ ರೂಪವನ್ನೇ ತಾಳಿದೆನು. ಮರುಕ್ಷಣದಲ್ಲಿಯೇ ನಾನು ಕಬ್ಬಿಣದ ಅಗಳಿಯನ್ನೆತ್ತಿಕೊಂಡು ನನ್ನ ಸುತ್ತಲೂ ಇದ್ದ ಎಲ್ಲ ರಾಕ್ಷಸರನ್ನೂ ಸಂಹರಿಸಿ ಮಹಾದ್ವಾರದ ಕಡೆಗೆ ಹಾರಿದೆನು. ಉಪ್ಪರಿಗೆಗಳಿಂದಲೂ ಗೋಪುರಗಳಿಂದಲೂ ಕೂಡಿದ್ದ ಆ ಲಂಕಾಪಟ್ಟಣವನ್ನು ಧಗ-ಧಗನೆ ಉರಿಯುತ್ತಿದ್ದ ಬಾಲದ ಬೆಂಕಿಯಿಂದ ಹೊತ್ತಿಸಿ ಪ್ರಳಯಕಾಲದಲ್ಲಿ ಅಗ್ನಿಯು ಪ್ರಜೆಗಳನ್ನು ಸುಟ್ಟುಹಾಕುವಂತೆ, ಸ್ವಲ್ಪವೂ ಭ್ರಾಂತನಾಗದೇ ಭಸ್ಮಮಾಡಿದೆನು. ಆ ಸಮಯದಲ್ಲಿ ಲಂಕಾಪಟ್ಟಣ ದಲ್ಲಿ ಸುಟ್ಟುಹೋಗದಿದ್ದ ಜಾಗವೇ ಯಾವುದೂ ಇರಲಿಲ್ಲ. ಪಟ್ಟಣವೆಲ್ಲವೂ ಸಂಪೂರ್ಣವಾಗಿ ಬೂದಿಯಾಯಿತು. ಅದರಿಂದಾಗಿ ಸೀತೆಯೂ ವಿನಾಶ ಹೊಂದಿರಬಹುದೆಂದು ನಾನು ಭಾವಿಸಿದೆನು.

**ದಹತಾ ಚ ಮಯಾ ಲಙ್ಕಾಂ ದಗ್ಧಾ ಸೀತಾ ನ ಸಂಶಯಃ ।**
**ರಾಮಸ್ಯ ಹಿ ಮಹತ್ಕಾರ್ಯಂ ಮಯೇದಂ ವಿತಥೀಕೃತಮ್ ॥**

'ನಾನು ಲಂಕೆಯನ್ನು ಸುಡುವಾಗ ಸೀತೆಯೂ ಸುಟ್ಟುಹೋಗಿರುವಳು. ಇದರಲ್ಲಿ ಸಂಶಯವೇ ಇಲ್ಲ. ಶ್ರೀರಾಮನ ಮಹಾಕಾರ್ಯವನ್ನು ನಾನೇ ಹಾಳುಮಾಡಿಬಿಟ್ಟೆನು.'

ಹೀಗೆ ಯೋಚಿಸಿ ನಾನು ಶೋಕಸಾಗರದಲ್ಲಿ ಮುಳುಗಿಹೋದೆನು. ಆ ವೇಳೆಗೆ ಸರಿಯಾಗಿ ಆಕಾಶದಲ್ಲಿ ಚಾರಣರು ಹೇಳುತ್ತಿದ್ದ ಶುಭವಾಕ್ಯಗಳು ಕೇಳಿಬಂದುವು. ವಿಸ್ಮಯದಿಂದ ಉತ್ಸಾಹಿತರಾಗಿ ಮಾತನಾಡುತ್ತಿದ್ದ ಚಾರಣರ 'ಜಾನಕಿಯು ಸುಟ್ಟುಹೋಗದಿರುವುದೇ ಪರಮಾಶ್ಚರ್ಯ' ಎಂಬ ಮಾತನ್ನು ಕೇಳಿ ಸೀತೆಯು ದಗ್ಧಳಾಗಿ ಹೋಗಿಲ್ಲವೆಂಬ ಬುದ್ಧಿಯು ನನ್ನಲ್ಲಿ ಮೂಡಿತು. ಆ ಸಮಯದಲ್ಲಿ ಕಂಡುಬಂದ ನಿಮಿತ್ತಗಳೂ ಜಾನಕಿಯು ಸುಟ್ಟುಹೋಗಿಲ್ಲವೆಂಬುದನ್ನೇ ಸೂಚಿಸುತ್ತಿದ್ದುವು. ಮೇಲಾಗಿ ನನ್ನ ಬಾಲವು ಹೊತ್ತಿಕೊಂಡು

ಉರಿಯುತ್ತಿದ್ದರೂ ಅಗ್ನಿದೇವನು ನನ್ನನ್ನೇ ಸುಡಲಿಲ್ಲ. ಹೀಗಿರುವಾಗ ಅವನು ಸೀತೆಯನ್ನು ಮುಟ್ಟಿರಲಾರನು ಎಂಬ ವಿಶ್ವಾಸವುಂಟಾಯಿತು. ಆ ಸಮಯದಲ್ಲಿ ಬೀಸುತ್ತಿದ್ದ ಗಾಳಿಯು ಸುಮನೋಹರವಾದ ಗಂಧವನ್ನು ಹೊರಸೂಸುತ್ತಿದ್ದಿತು. ಪ್ರತ್ಯಕ್ಷವಾಗಿಯೇ ಕಾಣುತ್ತಿದ್ದ ಶುಭಶಕುನಗಳಿಂದಲೂ ನನ್ನ ಹೃದಯವು ಪ್ರಸನ್ನವಾಯಿತು. ಅನಂತರ ನಾನು ವೈದೇಹಿಯನ್ನು ಸಂದರ್ಶಿಸಿ ಅವಳಿಂದ ಬೀಳ್ಕೊಂಡು ಅರಿಷ್ಟಪರ್ವತಕ್ಕೆ ಬಂದು ನಿಮ್ಮನ್ನು ಕಾಣುವ ಇಚ್ಛೆಯಿಂದ ಹಿಂದಕ್ಕೆ ಹಾರಿದೆನು. ವಾಯುದೇವನಿಂದಲೂ, ಸೂರ್ಯ-ಚಂದ್ರರಿಂದಲೂ, ಸಿದ್ಧ-ಗಂಧರ್ವರಿಂದಲೂ ಸಂಸೇವಿತವಾದ ಮಾರ್ಗವನ್ನು ಅತಿಕ್ರಮಿಸಿ ಈ ಉತ್ತರತೀರದಲ್ಲಿ ನಿಮ್ಮನ್ನು ಕಂಡೆನು.

**ರಾಘವಸ್ಯ ಪ್ರಭಾವೇಣ ಭವತಾಂ ಚೈವ ತೇಜಸಾ ।**
**ಸುಗ್ರೀವಸ್ಯ ಚ ಕಾರ್ಯಾರ್ಥಂ ಮಯಾ ಸರ್ವಮನುಷ್ಠಿತಮ್ ॥**

ಶ್ರೀರಾಮನ ಪ್ರಭಾವದಿಂದಲೂ ನಿಮ್ಮೆಲ್ಲರ ಅನುಗ್ರಹದಿಂದಲೂ ಸುಗ್ರೀವನ ಕಾರ್ಯಸಿದ್ಧಿಯ ಸಲುವಾಗಿ ನಾನು ಈ ಎಲ್ಲವನ್ನೂ ಮಾಡಿದೆನು.

ವಾನರಶ್ರೇಷ್ಠನೇ! ಲಂಕಾಪಟ್ಟಣದಲ್ಲಿ ನಡೆದ ಎಲ್ಲ ವಿಷಯಗಳನ್ನೂ ನಾನು ಯಥಾವತ್ತಾಗಿ ಹೇಳಿರುವೆನು. ಅಲ್ಲಿ ನಾನು ಮಾಡದೇ ಉಳಿದಿರುವ ಕಾರ್ಯವನ್ನು ನೀವೆಲ್ಲರೂ ಮಾಡಿರಿ."

ಅರನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೬೯ನೆಯ ಸರ್ಗ

## ಹನುಮಂತನು ಸೀತೆಯ ದುರವಸ್ಥೆಯನ್ನು ತಿಳಿಸುತ್ತಾ ಲಂಕೆಯ ಆಕ್ರಮಣಕ್ಕಾಗಿ ವಾನರರನ್ನು ಉತ್ತೇಜಿಸಿದುದು

**ಏತದಾಖ್ಯಾಯ ತತ್ಸರ್ವಂ ಹನುಮಾನ್ಮಾರುತಾತ್ಮಜಃ ।**
**ಭೂಯಃ ಸಮುಪಚಕ್ರಾಮ ವಚನಂ ವಕ್ತುಮುತ್ತರಮ್ ॥೧॥**

ವಾಯುಪುತ್ರನಾದ ಹನುಮಂತನು ಹೀಗೆ ಎಲ್ಲ ವಿಷಯಗಳನ್ನೂ ಕಪಿನಾಯಕರಿಗೆ ಹೇಳಿ, ಅವರ ಪ್ರಶ್ನೆಗೆ ಉತ್ತರರೂಪವಾಗಿ ಇನ್ನೂ ಕೆಲವು ಮಾತುಗಳನ್ನು ಹೇಳಲು ಉಪಕ್ರಮಿಸಿದನು :

"ವಾನರಶ್ರೇಷ್ಠರೇ! ಸೀತಾದೇವಿಯ ಪಾತಿವ್ರತ್ಯವನ್ನು ತಿಳಿದು ನನ್ನ ಮನಸ್ಸು ಪ್ರಸನ್ನವಾಯಿತು. ಶ್ರೀರಾಮನ ಪ್ರಯತ್ನವೂ ಮತ್ತು ಸುಗ್ರೀವನ ಉತ್ಸಾಹವೂ ಫಲಿಸಿತು.

**ಆರ್ಯಾಯಾಃ ಸದೃಶಂ ಶೀಲಂ ಸೀತಾಯಾಃ ಪ್ಲವಗರ್ಷಭಾಃ ।**
**ತಪಸಾ ಧಾರಯೇಲ್ಲೋಕಾನು ದ್ಧಾ ವಾ ನಿರ್ದಹೇದಪಿ ॥೩॥**

ಆರ್ಯೆಯಾದ ಸೀತಾದೇವಿಯ ಶುದ್ಧಚಾರಿತ್ರ್ಯಕ್ಕೆ ಸದೃಶವಾದ ಚಾರಿತ್ರ್ಯವು ಬೇರೆ ಯಾರಲ್ಲೂ ಇರಲು ಸಾಧ್ಯವೇ ಇಲ್ಲ. ಅವಳು ತನ್ನ ತಪಸ್ಸಿನ ಪ್ರಭಾವದಿಂದ ಮೂರು ಲೋಕಗಳನ್ನಾದರೂ ಧರಿಸಬಲ್ಲಳು. ಕೋಪಗೊಂಡಳೆಂದರೆ ಮೂರು ಲೋಕಗಳನ್ನೂ ದಹಿಸಬಲ್ಲಳು.

**ಸರ್ವಥಾತಿಪ್ರವೃದ್ಧೋಽಸೌ ರಾವಣೋ ರಾಕ್ಷಸೇಶ್ವರಃ ।**
**ತಸ್ಯ ತಾಂ ಸ್ಪೃಶತೋ ಗಾತ್ರಂ ತಪಸಾ ನ ವಿನಾಶಿತಮ್ ॥೪॥**

ರಾಕ್ಷಸೇಶ್ವರನಾದ ರಾವಣನು ಕೂಡ ನಿಜವಾಗಿಯೂ ಮಹಾತಪಸ್ವಿನಿಂದ ಸಂಪನ್ನನಾದವನೇ. ಸೀತಾದೇವಿಯ ಶರೀರವನ್ನು ಮುಟ್ಟಿಯೂ ಅವನ ಶರೀರವು ಅವಳ ತಪಃಪ್ರಭಾವದಿಂದ ವಿನಾಶಹೊಂದಲಿಲ್ಲ.

**ನ ತದಗ್ನಿಶಿಖಾ ಕುರ್ಯಾತ್ಸಂಸ್ಪೃಷ್ಟಾ ಪಾಣಿನಾ ಸತೀ ।**
**ಜನಕಸ್ಯಾತ್ಮಜಾ ಕುರ್ಯಾದ್ಯತೊ ೀಧ'ಕಲುಷೀಕೃತಾ ॥೫॥**

ಜಾನಕಿಯು ಕ್ರೋಧದಿಂದ ಉದ್ದೀಪ್ತವಾದ ಮನಸ್ಸಿನಿಂದ ಯಾವ ವಿನಾಶಕಾರ್ಯವನ್ನು ಮಾಡಬಲ್ಲಳೋ ಅಂತಹ ವಿನಾಶಕಾರ್ಯವನ್ನು ಕೈಯಿಂದ ಮುಟ್ಟುವ ಅಗ್ನಿಯ ಜ್ವಾಲೆಯೂ ಮಾಡಲಾರದು. ಅಗ್ನಿಯ ಜ್ವಾಲೆಗಿಂತಲೂ ಸೀತಾದೇವಿಯ ಕೋಪವು ವಿಶಿಷ್ಟವಾದುದು.

ನಿಮ್ಮೆಲ್ಲರಿಗೂ ನಿವೇದಿಸಿದಂತೆ ನಾವು ಕೈಗೊಂಡ ಸೀತಾನ್ವೇಷಣೆಯ ಕಾರ್ಯವು ಈ ಪರಿಸ್ಥಿತಿಯಲ್ಲಿರುವಾಗ ನಾವೆಲ್ಲರೂ ಜಾಂಬವಂತನೇ ಮೊದಲಾದ ಕಪಿನಾಯಕರ ಅನುಮತಿಯನ್ನು ಪಡೆದು ಲಂಕೆಗೆ ಹೋಗಿ ಪರಿವಾರ ಸಮೇತನಾದ ರಾವಣನನ್ನು ಸಂಹರಿಸಿ ಸೀತಾದೇವಿಯನ್ನು ಕರೆತಂದು ಅವಳೊಡನೆಯೇ ನಾವು ರಾಜಕುಮಾರರಾದ ರಾಮ-ಲಕ್ಷ್ಮಣರನ್ನು ಸಂದರ್ಶಿಸುವುದು ನ್ಯಾಯವಾಗಿ ಕಾಣುತ್ತದೆ. ರಾಕ್ಷಸರ ಸಮೂಹದಿಂದ ವ್ಯಾಪ್ತವಾ

ಗಿರುವ ಆ ಲಂಕಾಪಟ್ಟಣವನ್ನು ಧ್ವಂಸಮಾಡಲು ಮತ್ತು ಮಹಾಬಲಿಷ್ಠನಾದ ರಾವಣನನ್ನು ಸಂಹರಿಸಲು ನಾನೊಬ್ಬನೇ ಸಾಕು. ಹೀಗಿರುವಾಗ ವಿಜಯೇಚ್ಛುಗಳಾದ, ವೀರರಾದ, ಬಲಿಷ್ಠರಾದ, ಜಿತೇಂದ್ರಿಯರಾದ, ಅಸ್ತ್ರವಿಶಾರದರಾದ, ಮಹಾಶಕ್ತಿಶಾಲಿಗಳಾದ ನಿಮ್ಮೊಡನೆ ಹೋದರೆ ಹೇಳುವುದೇನಿದೆ? ಕ್ಷಣಮಾತ್ರದಲ್ಲಿ ರಾವಣನನ್ನು ಸಂಹರಿಸಿ ಸೀತಾದೇವಿಯನ್ನು ಕರೆತರಬಹುದು. ಸೈನ್ಯದಿಂದ ಕೂಡಿರುವ, ಅಂಗರಕ್ಷಕರೊಡನಿರುವ, ಪುತ್ರರಿಂದಲೂ ಸಹೋದರರಿಂದಲೂ ಯುಕ್ತನಾದ ರಾವಣನನ್ನು ನಾನೊಬ್ಬನೇ ಸಂಹರಿಸುತ್ತೇನೆ. ರಾವಣನ ಮಗನಾದ ಇಂದ್ರಜಿತುವು ಯುದ್ಧದಲ್ಲಿ ಸಾಮಾನ್ಯರಿಂದ ನೋಡಲೂ ಅಶಕ್ಯವಾದ ಬ್ರಹ್ಮಾಸ್ತ್ರ, ಐಂದ್ರಾಸ್ತ್ರ, ರೌದ್ರಾಸ್ತ್ರ, ವಾಯವ್ಯಾಸ್ತ್ರ, ವಾರುಣಾಸ್ತ್ರ–ಮುಂತಾದ ದೊಡ್ಡ-ದೊಡ್ಡ ಅಸ್ತ್ರಗಳನ್ನು ಪ್ರಯೋಗಿಸಿದರೂ ಅವೆಲ್ಲವನ್ನೂ ನಾನು ವಿನಾಶಗೊಳಿಸಿ ಎಲ್ಲ ರಾಕ್ಷಸರನ್ನೂ ಧ್ವಂಸಮಾಡುವೆನು. ನಿಮ್ಮ ಅಪ್ಪಣೆಯನ್ನು ಪಡೆದು ನಾನಲ್ಲಿಗೆ ಹೋದೆನಾದರೆ ನನ್ನ ಪರಾಕ್ರಮವು ರಾವಣನನ್ನು ತಡೆದು ನಿಲ್ಲಿಸಲು ಸಮರ್ಥವಾಗುತ್ತದೆ. ನಾನು ನಿರಂತರವಾಗಿ ಸುರಿಸುವ ಕಲ್ಲುಗಳ ಮಳೆಯು ದೇವತೆಗಳನ್ನೂ ಸಂಹರಿಸಬಲ್ಲುದು. ರಾಕ್ಷಸರ ವಿಷಯದಲ್ಲಿ ಹೇಳಲೇನಿದೆ? ನಿಮ್ಮ ಅನುಜ್ಞೆಯನ್ನು ಪಡೆಯದೇ ನನ್ನ ಪರಾಕ್ರಮವು ನನ್ನನ್ನು ಮುನ್ನುಗ್ಗಿಹೋಗಲು ತಡೆಮಾಡುತ್ತಿದೆ.

ಸಮುದ್ರವಾದರೂ ಎಲ್ಲೆಯನ್ನು ಮೀರಿಹೋಗಬಹುದು. ಮಂದರ ಪರ್ವತವಾದರೂ ಚಲಿಸಬಹುದು. ಆದರೆ ಯುದ್ಧದಲ್ಲಿ ಜಾಂಬವಂತನನ್ನು ಮಾತ್ರ ಶತ್ರುಸೈನ್ಯವು ವಿಚಲಗೊಳಿಸಲಾರದು. ಎಲ್ಲ ರಾಕ್ಷಸಸಮೂಹಗಳಿಗೂ ಪೂರ್ವಜರಾದ ಯಾವ ರಾಕ್ಷಸರುಂಟೋ–ಅವರೆಲ್ಲರನ್ನೂ ವಾಲಿಯ ಮಗನಾದ ಅಂಗದನೊಬ್ಬನೇ ವಿನಾಶಗೊಳಿಸಬಲ್ಲನು. ಮಹಾತ್ಮನಾದ ಪನಸ-ನೀಲರ ತೊಡೆಗಳ ವೇಗದಿಂದ ಮಂದರಪರ್ವತವೇ ಸೀಳಿಹೋಗುವುದು. ಹೀಗಿರುವಾಗ ಯುದ್ಧದಲ್ಲಿ ಪನಸ-ನೀಲರಿಗೆ ರಾಕ್ಷಸರು ಎಷ್ಟು ಮಾತ್ರದವರು? ದೇವಾಸುರರಲ್ಲಾಗಲೀ, ಯಕ್ಷ-ಗಂಧರ್ವರಲ್ಲಾಗಲೀ, ಸರ್ಪ-ಪಕ್ಷಿಗಳಲ್ಲಾಗಲೀ, ಮೈಂದ-ದ್ವಿವಿದರನ್ನು ಎದುರಿಸಿ ಯುದ್ಧಮಾಡುವವರು

ಯಾರಿದ್ದಾರೆಂಬುದನ್ನು ಹೇಳಿರಿ. ಅಶ್ವಿನೀದೇವತೆಗಳ ಪುತ್ರರಾದ, ಮಹಾ ವೇಗವಂತರಾದ, ಕಪಿಶ್ರೇಷ್ಠರಾದ ಇವರನ್ನು ರಣರಂಗದಲ್ಲಿ ಎದುರಿಸಿ ನಿಂತು ಯುದ್ಧಮಾಡುವ ಯೋಧನನ್ನೇ ನಾನು ಕಾಣೆನಾಗಿದ್ದೇನೆ. ಪಿತಾಮಹನು ಕೊಟ್ಟಿರುವ ವರದಿಂದ ಅತ್ಯಂತದರ್ಪಿಷ್ಠರಾಗಿರುವ, ಅಮೃತವನ್ನು ಪ್ರಾಶನ ಮಾಡಿರುವ, ಸರ್ವವಾನರರಿಗೂ ಶ್ರೇಷ್ಠರಾಗಿರುವ ಮೈಂದ-ದ್ವಿವಿದರು ಎಲ್ಲ ರಾಕ್ಷಸರನ್ನೂ ಎದುರಿಸಲು ಸಮರ್ಥರಾಗಿರುವರು. ಅಶ್ವಿನೀದೇವತೆಗಳನ್ನು ಗೌರವಿಸುವ ಸಲುವಾಗಿ ಹಿಂದೆ ಸರ್ವಲೋಕಪಿತಾಮಹನಾದ ಬ್ರಹ್ಮನು ಯಾರಿಂದಲೂ ವಧಿಸಲ್ಪಡದಿರುವ ವರವನ್ನು ಇವರಿಗೆ ದಯಪಾಲಿಸಿರುವನು. ಶ್ರೇಷ್ಠವಾದ ಆ ವರದಿಂದ ದರ್ಪಿಷ್ಠರಾದ ಇವರು ದೇವತೆಗಳ ಮಹಾ ಸೈನ್ಯವನ್ನೂ ಧ್ವಂಸಮಾಡಿ ಅಮೃತಪ್ರಾಶನಮಾಡಿದರು. ಇವರೇನಾದರೂ ಕ್ರುದ್ಧರಾದರೆ ರಥಾಶ್ವ-ಗಜ-ಪದಾತಿಗಳಿಂದ ಸಂಪನ್ನವಾಗಿರುವ ಲಂಕೆಯನ್ನೇ ವಿನಾಶಗೊಳಿಸಬಲ್ಲರು. ಇವರಿಬ್ಬರೇ ಸಾಕು. ವಾನರರೆಲ್ಲರೂ ಇಲ್ಲಿಯೇ ಇದ್ದುಬಿಡಬಹುದು. ಈಗಾಗಲೇ ಆ ಲಂಕಾಪಟ್ಟಣವನ್ನು ನಾನೇ ಸುಟ್ಟು ಭಸ್ಮಮಾಡಿಬಿಟ್ಟಿರುವೆನು. ಎಲ್ಲ ರಾಜಮಾರ್ಗಗಳಲ್ಲಿಯೂ ನಾನಾರೆಂಬು ದನ್ನು ಸಾರಿಬಂದಿರುವೆನು.

**ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ ।**
**ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥೨೩॥**

**ಅಹಂ ಕೋಸಲರಾಜಸ್ಯ ದಾಸಃ ಪವನಸಂಭವಃ ।**
**ಹನುಮಾನಿತಿ ಸರ್ವತ್ರ ನಾಮ ವಿಶ್ರಾವಿತಂ ಮಯಾ ॥೨೪॥**

'ಅತಿಬಲಿಷ್ಠನಾದ ಶ್ರೀರಾಮನು ವಿಜಯಿಯಾಗುತ್ತಾನೆ. ಮಹಾ ಬಲಿಷ್ಠನಾದ ಲಕ್ಷ್ಮಣನೂ ವಿಜಯಿಯಾಗುತ್ತಾನೆ. ರಾಘವನಿಂದ ಪರಿಪಾಲಿಸಲ್ಪಡುತ್ತಿರುವ ಸುಗ್ರೀವನೂ ವಿಜಯಿಯಾಗುತ್ತಾನೆ. ವಾಯುಪುತ್ರನಾದ ನಾನಾದರೋ ಕೋಸಲರಾಜಕುಮಾರನಾದ ಶ್ರೀರಾಮನ ದಾಸನು. ಹನುಮಂತನೆಂದು ನನ್ನ ಹೆಸರು'–ಹೀಗೆ ನಾನು ಸರ್ವತ್ರ ನಾನಾರೆಂಬುದನ್ನು ಆ ರಾಕ್ಷಸರಿಗೆ ತಿಳಿಸಿ ಬಂದಿರುವೆನು.

ದುರಾತ್ಮನಾದ ರಾವಣನ ಅಶೋಕವನದ ಮಧ್ಯದಲ್ಲಿ ಶಿಂಶುಪಾ ವೃಕ್ಷದ ಕೆಳಭಾಗದಲ್ಲಿ ಸಾಧ್ವಿಯಾದ ಸೀತಾದೇವಿಯು ದೀನಳಾಗಿ ಶೋಕ-

ಸಂತಾಪಗಳಿಂದ ಪೀಡಿತಳಾಗಿ ರಾಕ್ಷಸಿಯರಿಂದ ಪರಿವೃತಳಾಗಿ ಕುಳಿತಿದ್ದಾಳೆ. ಅವಳೀಗ ಮೇಘಗಳ ಸಾಲುಗಳಿಂದ ಆವೃತವಾದ ಚಂದ್ರರೇಖೆಯಂತೆ ಕಾಂತಿ ಹೀನಳಾಗಿದ್ದಾಳೆ. ಬಲದರ್ಪಿತನಾದ ರಾವಣನನ್ನು ವೈದೇಹಿಯು ಲೆಕ್ಕಿಸು ತ್ತಲೇ ಇಲ್ಲ. ಈ ಕಾರಣದಿಂದಲೇ ಪತಿವ್ರತೆಯಾದ, ಸುಂದರವಾದ ಕಟಿಪ್ರದೇಶವುಳ್ಳ ವೈದೇಹಿಯು ರಾಕ್ಷಸಿಯರ ಮಧ್ಯದಲ್ಲಿ ಬಂಧಿತಳಾಗಿದ್ದಾಳೆ. ಶೋಭನಳಾದ ಅವಳು ಶ್ರೀರಾಮನಲ್ಲಿಯೇ ಅನುರಕ್ತಳಾಗಿರುವಳು. ಶಚೀ ದೇವಿಯು ಇಂದ್ರನಲ್ಲಿಯೇ ಯಾವಾಗಲೂ ನೆಟ್ಟಮನಸ್ಸುಳ್ಳವಳಾಗಿರುವಂತೆ ಸೀತಾದೇವಿಯು ಯಾವಾಗಲೂ ಶ್ರೀರಾಮನಲ್ಲಿಯೇ ನೆಟ್ಟಮನಸ್ಸುಳ್ಳವಳಾಗಿ ದ್ದಾಳೆ. ಅವನನ್ನೇ ಧ್ಯಾನಿಸುತ್ತಿರುತ್ತಾಳೆ. ಒಂದೇ ವಸ್ತ್ರವನ್ನುಟ್ಟಿರುವ, ಧೂಳಿನಿಂದ ಧೂಸರಿತಳಾಗಿರುವ, ಪತಿಯ ಹಿತದಲ್ಲಿಯೇ ಸರ್ವದಾ ನಿರತ ಳಾಗಿರುವ ಜಾನಕಿಯ ಅಂಗಾಂಗಗಳೆಲ್ಲವೂ ಕೃಶವಾಗಿ ಹೋಗಿವೆ. ವಿರೂಪಿಣಿ ಯರಾದ ರಾಕ್ಷಸಿಯರು ಅವಳನ್ನು ಬಾರಿ-ಬಾರಿಗೂ ಗದರಿಸುತ್ತಿರುತ್ತಾರೆ. ಇಂತಹ ಸ್ಥಿತಿಯಲ್ಲಿರುವ ಸೀತಾದೇವಿಯನ್ನು ನಾನು ಪ್ರಮದಾವನದಲ್ಲಿ ನೋಡಿದೆನು. ಸೀತಾದೇವಿಯು ತಲೆಯನ್ನು ಬಾಚಿಕೊಂಡಿರಲಿಲ್ಲ. ಜಡೆ ಯನ್ನು ಹೆಣೆದುಕೊಂಡಿರಲಿಲ್ಲ. ದೀನಳಾಗಿದ್ದಳು. ಯಾವಾಗಲೂ ಪತಿ ಯನ್ನೇ ಕುರಿತು ಯೋಚಿಸುತ್ತಿದ್ದಳು. ನೆಲದ ಮೇಲೆ ಮಲಗುವಳು. ಅವಳ ಅಂಗಾಂಗಗಳೆಲ್ಲವೂ ಹಿಮಗಾಲದ ಕಮಲದಂತೆ ಕಾಂತಿಹೀನವಾಗಿದ್ದುವು. ರಾವಣನ ದೆಸೆಯಿಂದಾಗಿ ಅವಳು ತನ್ನ ಆಶೋತ್ತರಗಳನ್ನೆಲ್ಲಾ ಸಂಪೂರ್ಣ ವಾಗಿ ಕಳೆದುಕೊಂಡಿರುವಳು. ಇಂತಹ ಪರಿಸ್ಥಿತಿಯಲ್ಲಿದ್ದ ಅವಳು ಸತ್ತು ಹೋಗಬೇಕೆಂದೇ ನಿಶ್ಚಯಮಾಡಿಬಿಟ್ಟಿದ್ದಳು. ಅತಿಪ್ರಯಾಸದಿಂದ ಅವಳು ನನ್ನ ಮೇಲೆ ವಿಶ್ವಾಸವನ್ನಿಟ್ಟಳು. ನನ್ನೊಡನೆ ಮಾತನಾಡಿದಳು. ತನ್ನ ಮನಸ್ಸಿನ ಅಭಿಲಾಷೆಗಳೆಲ್ಲವನ್ನೂ ವ್ಯಕ್ತಪಡಿಸಿದಳು. ಶ್ರೀರಾಮನಿಗೂ ಸುಗ್ರೀವನಿಗೂ ಸಖ್ಯವಾಗಿರುವುದೆಂಬುದನ್ನು ತಿಳಿದು ಪ್ರಸನ್ನಳಾದಳು.

**ನಿಯತಃ ಸಮುದಾಚಾರೋ ಭಕ್ತಿರ್ಭರ್ತರಿ ಚೋತ್ತಮಾ ।**
**ಯನ್ನ ಹನ್ತಿ ದಶಗ್ರೀವಂ ಸ ಮಹಾತ್ಮಾ ಕೃತಾಗಸಮ್ ।**
**ನಿಮಿತ್ತಮಾತ್ರಂ ರಾಮಸ್ತು ವಧೇ ತಸ್ಯ ಭವಿಷ್ಯತಿ ॥೩೪॥**

ಸಚ್ಚಾರಿತ್ರವು ಅವಳಲ್ಲಿ ನಿಯತವಾಗಿದೆ. ಪತಿಭಕ್ತಿಯಂತೂ ಅವಳಲ್ಲಿ

ಉತ್ತಮರೀತಿಯದಾಗಿದೆ. ಹಾಗಿದ್ದೂ ಸೀತಾದೇವಿಯು ತನ್ನ ಪಾತಿವ್ರತ್ಯದ ಪ್ರಭಾವದಿಂದ ಅಪರಾಧಿಯಾದ ರಾವಣನನ್ನೇಕೆ ಕೊಲ್ಲಲಿಲ್ಲವೆಂದರೆ ರಾವಣನು ತಪಸ್ಸಿನಿಂದ ಮಹಾತ್ಮನಾಗಿದ್ದಾನೆ. ಈ ಕಾರಣದಿಂದ ಅವಳು ಅವನನ್ನು ಕೊಲ್ಲಲು ಮನಸ್ಸು ಮಾಡಲಿಲ್ಲ. ಆದರೂ ತಾನು ಮಾಡಿದ ಪಾಪದಿಂದಲೇ ಅವನೀಗ ಮೃತಪ್ರಾಯನಾಗಿದ್ದಾನೆ. ಅವನ ವಧೆಯಲ್ಲಿ ಶ್ರೀರಾಮನು ನಿಮಿತ್ತಮಾತ್ರನಾಗುತ್ತಾನೆ.

ಸೀತಾದೇವಿಯು ಸ್ವಾಭಾವಿಕವಾಗಿಯೇ ಕೃಶಾಂಗಿಯು. ಮೇಲಾಗಿ ಶ್ರೀರಾಮನ ವಿಯೋಗದುಃಖದಿಂದ ಮತ್ತೂ ಕೃಶಳಾಗಿದ್ದಾಳೆ. ಪಾಡ್ಯಮಿಯಲ್ಲಿ ಅಧ್ಯಯನಮಾಡುವವರ ವಿದ್ಯೆಯು ನಶಿಸಿಹೋಗುವಂತೆ ಸೀತಾದೇವಿಯು ನಶಿಸಿಹೋಗುತ್ತಿದ್ದಾಳೆ.* ಹೀಗೆ ಮಹಾಭಾಗೆಯಾದ ಸೀತಾದೇವಿಯು ಸದಾ ಶೋಕಪರಾಯಣೆಯಾಗಿದ್ದಾಳೆ. ಆದುದರಿಂದ ಈ ಸಮಯದಲ್ಲಿ ಯಾವ ಪ್ರತೀಕಾರವನ್ನು ಮಾಡಬೇಕಾಗಿರುವುದೋ ಅದನ್ನು ನೀವೆಲ್ಲರೂ ಸೇರಿ ನಿಶ್ಚಯಿಸಿರಿ."

೫೯ನೆಯ ಸರ್ಗವು ಮುಗಿಯಿತು.



## ಲಂಕೆಯನ್ನು ಜಯಿಸಿ ಸೀತೆಯನ್ನು ಕರೆತರುವುದರಲ್ಲಿ ಅಂಗದನ ಉತ್ಸಾಹ : ಜಾಂಬವಂತನ ಅಸಮ್ಮತಿ

**ತಸ್ಯ ತದ್ವಚನಂ ಶ್ರುತ್ವಾ ವಾಲಿಸೂನುರಭಾಷತ ।**
**ಅಯುಕ್ತಂ ತು ವಿನಾ ದೇವೀಂ ದೃಷ್ಟವದ್ಭಿಶ್ಚ ವಾನರಾಃ ।**
**ಸಮೀಪಂ ಗನ್ತುಮಸ್ಮಾಭೀ ರಾಘವಸ್ಯ ಮಹಾತ್ಮನಃ ॥೧॥**

ಹನುಮಂತನ ಮಾತುಗಳನ್ನು ಕೇಳಿ ವಾಲಿಯ ಮಗನಾದ ಅಂಗದನು ಹೇಳಿದನು :

"ವಾನರಶ್ರೇಷ್ಠನೇ! ಸೀತಾದೇವಿಯನ್ನು ಕಂಡಿರುವ ನಾವು ಅವಳಿಲ್ಲ

---

* ವೇದಾಧ್ಯಯನದಲ್ಲಿ ಈ ನಿಯಮವಿದೆ : ಅಮಾವಾಸ್ಯಾ ಗುರುಂ ಹನ್ತಿ ಶಿಷ್ಯಂ ಹನ್ತಿ ಚತುರ್ದಶೀ । ಉಭಾವಷ್ಟಾಷ್ಟಮೀ ಹನ್ತಿ ಪ್ರತಿಪತ್ಪಾಠನಾಶಿನೀ ॥ ಅಮಾವಾಸ್ಯೆಯ ದಿನ ಅಧ್ಯಯನ ಮಾಡಿದರೆ ಗುರುವು ನಾಶಹೊಂದುತ್ತಾನೆ. ಚತುರ್ದಶಿಯ

ದೆಯೇ ಮಹಾತ್ಮನಾದ ಶ್ರೀರಾಮನ ಬಳಿಗೆ ಹೋಗುವುದು ಸೂಕ್ತವಾಗಿ ಕಾಣುವುದಿಲ್ಲ. ಹನುಮಂತನು ಹೇಳಿದಂತೆ ಮಹಾವೇಗವಂತರಾದ, ಮಹಾಬಲಿಷ್ಠರಾದ, ಕಪಿಶ್ರೇಷ್ಠರಾದ ಮೈಂದ-ದ್ವಿವಿದರು ಪಿತಾಮಹನ ವರದ ಕಾರಣದಿಂದ ಮಹಾದರ್ಪಿಷ್ಠರಾಗಿದ್ದಾರೆ. ಸರ್ವಲೋಕಗಳಿಗೂ ಪಿತಾಮಹ ನಾದ ಬ್ರಹ್ಮನು ಅಶ್ವಿನೀದೇವತೆಗಳನ್ನು ಸಮ್ಮಾನಿಸುವ ಸಲುವಾಗಿ ಅವರ ಮಕ್ಕಳಾದ ಇವರಿಗೆ ಯಾರಿಂದಲೂ ವಧಿಸಲಾಗದಂತಹ ವಿಶೇಷವಾದ ವರವನ್ನು ದಯಪಾಲಿಸಿದ್ದಾನೆ. ವರದ ಉತ್ಕರ್ಷದಿಂದ ಪ್ರಮತ್ತರಾಗಿರುವ, ಮಹಾವೀರರಾದ ಮತ್ತು ಮಹಾಬಲಿಷ್ಠರಾದ ಇವರು ದೇವತೆಗಳ ಮಹಾ ಸೈನ್ಯವನ್ನು ಧ್ವಂಸಮಾಡಿ ಅಮೃತವನ್ನು ಕುಡಿದರು. ಕುಪಿತರಾದರೆಂದರೆ ಈ ಇಬ್ಬರೇ ಅಶ್ವ-ರಥ-ಗಜ-ಪದಾತಿಗಳಿಂದ ಕೂಡಿರುವ ಲಂಕೆಯನ್ನೇ ಸಂಪೂರ್ಣವಾಗಿ ನಾಶಮಾಡಲು ಸಮರ್ಥರಾಗಿದ್ದಾರೆ. ಇವರು ಆ ಕಾರ್ಯ ವನ್ನು ಕೈಗೊಂಡರೆ ನೀವೆಲ್ಲ ರೂ ಇಲ್ಲಿ ಯೇ ಇರಬಹುದು. ರಾಕ್ಷಸಊಮೂಹ ದಿಂದ ಕೂಡಿರುವ ಲಂಕೆಯನ್ನು ಧ್ವಂಸಮಾಡುವುದಕ್ಕೂ ಮಹಾಬಲಿಷ್ಠ ನಾದ ರಾವಣನನ್ನು ಸಂಹರಿಸುವುದಕ್ಕೂ ನಾನೊಬ್ಬನೇ ಸಾಕು. ಹೀಗಿರುವಾಗ ಹಿತೈಷಿಗಳಾದ, ಶಕ್ತಿವಂತರಾದ ಮತ್ತು ಬಲಿಷ್ಠರಾದ ನಿಮ್ಮೊಡನೆ ಹೋದರೆ ಹೇಳುವುದೇನಿದೆ? ಕ್ಷಣಮಾತ್ರದಲ್ಲಿ ನಾವು ವಿಜಯಿಗಳಾಗುವೆವು. ವಾಯು ಪುತ್ರನಾದ ಹನುಮಂತನ ಪರಾಕ್ರಮದಿಂದಲೇ ಲಂಕೆಯೆಲ್ಲವೂ ಸುಟ್ಟು ಹೋಗಿರುವುದೆಂದೂ ನಾವು ಕೇಳಿದ್ದೇವೆ. ಅಲ್ಲಿ ಈಗ ನಮ್ಮ ಕರ್ತವ್ಯವು ಅತ್ಯಲ್ಪದ್ದಾಗಿದೆ. ವಿಖ್ಯಾತಪೌರುಷರಾದ ನೀವು 'ದೃಷ್ಟಾದೇವೀ ನ ಚಾನೀತಾ' 'ದೇವಿಯನ್ನು ನೋಡಿದೆವು ; ಆದರೆ ಕರೆತರಲಿಲ್ಲ'–ಎಂದು ಶ್ರೀರಾಮನಿಗೆ ಹೇಳುವುದು ಯುಕ್ತವಲ್ಲವೆಂಬುದು ನನ್ನ ಭಾವನೆಯಾಗಿದೆ. ಹಾರುವುದರಲ್ಲಾಗಲೀ, ಪರಾಕ್ರಮದಲ್ಲಾಗಲೀ ನಮಗೆ ಸಮಾನರಾದವರು ದೇವ-ದಾನವರಲ್ಲಿ ಕೂಡ ಯಾರೂ ಇರುವುದಿಲ್ಲ. ಆದುದರಿಂದ ನಾವೀ ಗಲೇ ಲಂಕೆಗೆ ಹೋಗಿ ರಾಕ್ಷಸರ ಸಮೂಹಗಳಿಂದ ತುಂಬಿರುವ ಲಂಕೆಯನ್ನು

---

ದಿನ ಅಧ್ಯಯನಮಾಡಿದರೆ ಶಿಷ್ಯನು ವಿನಾಶಹೊಂದುತ್ತಾನೆ. ಅಷ್ಟಮಿಯ ದಿನ ಅಧ್ಯಯನಮಾಡಿದರೆ ಗುರು-ಶಿಷ್ಯರಿಬ್ಬರೂ ವಿನಾಶಹೊಂದುತ್ತಾರೆ. ಪಾಡ್ಯದಂದು ಅಧ್ಯಯನಮಾಡಿದರೆ ವಿದ್ಯೆಯು ನಾಶವಾಗುತ್ತದೆ.

ಜಯಿಸಿ ಯುದ್ಧದಲ್ಲಿ ರಾವಣನನ್ನು ಸಂಹರಿಸಿ ಕೃತಕೃತ್ಯರಾಗಿ ಸಂತುಷ್ಟವಾದ ಮನಸ್ಸಿನಿಂದ ಸೀತೆಯನ್ನು ಕರೆದುಕೊಂಡು ರಾಮನ ಬಳಿಗೆ ಹೋಗೋಣ. ಹನುಮಂತನೇ ಆ ಮಹಾವೀರರೆಲ್ಲರನ್ನೂ ಸಂಹರಿಸಿರುವಾಗ ನಮಗಲ್ಲಿ ಬೇರೆ ಯಾವ ಕೆಲಸವಿದೆ? ನಾವೆಲ್ಲರೂ ಹೋಗಿ ಸೀತೆಯನ್ನು ಕರೆತರೋಣ. ರಾಮ-ಲಕ್ಷ್ಮಣರ ಮಧ್ಯದಲ್ಲಿ ಸೀತಾದೇವಿಯನ್ನು ನಿಲ್ಲಿಸೋಣ. ಸೀತೆಯನ್ನು ಕರೆತರಲಿಲ್ಲವೆಂಬ ನಿಂದೆಗೆ ಎಲ್ಲ ವಾನರಶ್ರೇಷ್ಠರನ್ನೂ ಏಕೆ ಗುರಿಮಾಡ ಬೇಕು? ನಾವೇ ಲಂಕಾಪಟ್ಟಣಕ್ಕೆ ಹೋಗಿ ರಾಕ್ಷಸರೆಲ್ಲರನ್ನೂ ಸಂಹರಿಸಿ ಸೀತಾದೇವಿಯನ್ನು ಕರೆದುಕೊಂಡು ಲಕ್ಷ್ಮಣಸಮೇತನಾದ ಶ್ರೀರಾಮನನ್ನೂ ನಮ್ಮ ರಾಜನಾದ ಸುಗ್ರೀವನನ್ನೂ ನೋಡುವುದು ಯುಕ್ತವಾಗಿ ಕಾಣುತ್ತದೆ."

ಹೀಗೆ ಲಂಕಾಪಟ್ಟಣಕ್ಕೆ ಹೋಗಿ ರಾಕ್ಷಸರನ್ನು ಸಂಹರಿಸಿ ಸೀತೆಯನ್ನು ಕರೆತರಲು ಸಂಕಲ್ಪಮಾಡಿದ ಅಂಗದನ ವಿಷಯದಲ್ಲಿ ಪರಮಪ್ರೀತನಾದ, ಅರ್ಥಶಾಸ್ತ್ರವಿಶಾರದನಾದ, ಹರಿಶ್ರೇಷ್ಠನಾದ ಜಾಂಬವಂತನು ಅರ್ಥವತ್ತಾದ ಮಾತನ್ನು ಹೇಳಿದನು :

**ನೈಷಾ ಬುದ್ಧಿರ್ಮಹಾಬುದ್ಧೇ ಯದ್ಬ್ರವೀಷಿ ಮಹಾಕಪೇ ।**
**ವಿಚೇತುಂ ವಯಮಾಜ್ಞಪ್ತಾ ದಕ್ಷಿಣಾಂ ದಿಶಮುತ್ತಮಾಮ್ ॥**

**ನಾನೇತುಂ ಕಪಿರಾಜೇನ ನೈವ ರಾಮೇಣ ಧೀಮತಾ ।**
**ಕಥಂಚಿನ್ನಿರ್ಜಿತಾಂ ಸೀತಾಮಸ್ಮಾಭಿರ್ನಾಭಿರೋಚಯೇತ್ ॥**

"ಮಹಾಬುದ್ಧಿವಂತನಾದ ಮಹಾವಾನರನೇ! ನೀನು ಹೇಳುತ್ತಿರು ವುದು ಬುದ್ಧಿವಂತಿಕೆಯ ಮಾತುಗಳಲ್ಲ. ನಾವು ದಕ್ಷಿಣದಿಕ್ಕಿನಲ್ಲಿ ಸೀತೆಯನ್ನು ಹುಡುಕಲು ಮಾತ್ರವೇ ಆಜ್ಞಪ್ತರಾಗಿರುವೆವು. ಅವಳನ್ನು ಕರೆತರಲು ನಮಗೆ ಶ್ರೀರಾಮನಾಗಲೀ, ಸುಗ್ರೀವನಾಗಲೀ ಆಜ್ಞೆಮಾಡಿರುವುದಿಲ್ಲ. ಮೇಲಾಗಿ ನಾವು ರಾಕ್ಷಸರನ್ನು ಜಯಿಸಿ ಸೀತೆಯನ್ನು ಕರೆತರುವುದು ಶ್ರೀರಾಮನಿಗೆ ರುಚಿಸುವುದೂ ಇಲ್ಲ.

**ರಾಘವೋ ನೃಪಶಾರ್ದೂಲಃ ಕುಲಂ ವ್ಯಪದಿಶನ್ಸ್ವಕಮ್ ।**
**ಪ್ರತಿಜ್ಞಾಯ ಸ್ವಯಂ ರಾಜಾ ಸೀತಾವಿಜಯಮಗ್ರತಃ ॥೧೮॥**

**ಸರ್ವೇಷಾಂ ಕಪಿಮುಖ್ಯಾನಾಂ ಕಥಂ ಮಿಥ್ಯಾ ಕರಿಷ್ಯತಿ ।**

**ವಿಫಲಂ ಕರ್ಮ ಚ ಕೃತಂ ಭವೇತ್ತುಷ್ಟಿರ್ನ ತಸ್ಯ ಚ ।**
**ವೃಥಾ ಚ ದರ್ಶಿತಂ ವೀರ್ಯಂ ಭವೇದ್ವಾನರಪುಙ್ಗವಾಃ ॥೧೯॥**

ನೃಪಶ್ರೇಷ್ಠನಾದ ಶ್ರೀರಾಮನು ತನ್ನ ವಂಶವನ್ನು ನಿರ್ದೇಶಿಸುತ್ತಾ ಎಲ್ಲ ಕಪಿಶ್ರೇಷ್ಠರ ಸಮ್ಮುಖದಲ್ಲಿ ಶತ್ರುವನ್ನು ಜಯಿಸಿ ಸೀತೆಯನ್ನು ಕರೆತರುವುದಾಗಿ ಪ್ರತಿಜ್ಞೆಮಾಡಿರುವನು. ಅಂತಹ ಪ್ರತಿಜ್ಞೆಯನ್ನು ಅವನು ಹೇಗೆ ತಾನೇ ಸುಳ್ಳುಮಾಡುವನು? ಆದುದರಿಂದ ನೀನು ಹೇಳಿದಂತೆ ನಾವು ಮಾಡಿದಲ್ಲಿ ಮಾಡಿದ ಕಾರ್ಯವೂ ವ್ಯರ್ಥವಾಗುತ್ತದೆ. ಅದರಿಂದ ಶ್ರೀರಾಮನಿಗೆ ಸಂತೋಷವೂ ಆಗುವುದಿಲ್ಲ. ನಾವು ಪರಾಕ್ರಮವನ್ನು ತೋರಿಸಿದ್ದೂ ವ್ಯರ್ಥ ವಾಗುತ್ತದೆ.

ಆದುದರಿಂದ ಇದುವರೆಗೆ ನಾವು ಮಾಡಿರುವ ಕಾರ್ಯವನ್ನು ನಿವೇದಿಸುವುದಕ್ಕಾಗಿ ರಾಮ-ಲಕ್ಷ್ಮಣ-ಸುಗ್ರೀವರು ಇರುವ ಕಡೆಗೆ ಹೊರಟು ಬಿಡೋಣ. ಅಂಗದ! ನಿನ್ನ ವಿಚಾರದೃಷ್ಟಿಗೆ ಮತ್ತು ನಿನ್ನ ಆಲೋಚನೆಗೆ ಇವೆಲ್ಲವೂ ಯೋಗ್ಯವಾಗಿಯೇ ಇವೆ. ನೀನು ಹೇಳಿದುದನ್ನು ನಾವು ಮಾಡಕೂಡದೆಂದೇನೂ ಇಲ್ಲ. ಆದರೆ ನಾವು ಈ ಸಮಯದಲ್ಲಿ ಶ್ರೀರಾಮನ ಅಭಿಪ್ರಾಯವು ಹೇಗಿರುವುದೆಂಬುದನ್ನು ತಿಳಿದು ಕಾರ್ಯಮಾಡಬೇಕಾಗಿದೆ. ಅವನ ಅಭಿಪ್ರಾಯಕ್ಕೆ ಅನುಸಾರವಾಗಿ ಕಾರ್ಯಸಿದ್ಧಿಯಾಗುವುದು ಹೇಗೆಂಬು ದನ್ನು ನೀನು ಸಮಾಲೋಚಿಸು."

೬೦ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೬೧ನೆಯ ಸರ್ಗ

## ವಾನರರೆಲ್ಲರೂ ಮಧುವನಕ್ಕೆ ಹೋಗಿ ಯಥೇಚ್ಛವಾಗಿ ಮಧುಪಾನಮಾಡಿ ಫಲಗಳನ್ನು ಭಕ್ಷಿಸಿದುದು : ವನದ ರಕ್ಷಕರಿಂದ ತಡೆ

**ತತೋ ಜಾಮ್ಬವತೋ ವಾಕ್ಯಮಗೃಹ್ಣನ್ತ ವನೌಕಸಃ ।**
**ಅಙ್ಗದಪ್ರಮುಖಾ ವೀರಾ ಹನುಮಾಂಶ್ಚ ಮಹಾಕಪಿಃ ॥೧॥**

ಬಳಿಕ ಅಂಗದನೇ ಮೊದಲಾದ ಕಪಿವೀರರೂ ಮಹಾಕಪಿಯಾದ ಹನುಮಂತನೂ ಜಾಂಬವಂತನು ಹೇಳಿದ ಮಾತನ್ನು ಅಂಗೀಕರಿಸಿದರು.

ಕಪಿಶ್ರೇಷ್ಠರೆಲ್ಲರೂ ಅತ್ಯಂತಸಂತೋಷದಿಂದ ವಾಯುಪುತ್ರನಾದ ಹನುಮಂತನನ್ನು ಮುಂದೆಮಾಡಿಕೊಂಡು ಮಹೇಂದ್ರಪರ್ವತವನ್ನು ಬಿಟ್ಟು ಮೇಲಕ್ಕೆ ಹಾರಿದರು. ಮಹಾಕಾಯರಾದ, ಮಹಾಬಲಿಷ್ಠರಾದ, ಮೇರು-ಮಂದರಪರ್ವತಗಳಂತೆಯೇ ಕಾಣುತ್ತಿದ್ದ, ಮದಿಸಿದ ಸಲಗಗಳಂತಿದ್ದ ಕಪಿವೀರರು ಆಕಾಶವನ್ನೇ ಮುಚ್ಚಿಬಿಡುವರೋ ಎಂಬಂತೆ ಹಾರಿಕೊಂಡು ಹೋಗುತ್ತಿದ್ದರು. ಸಿದ್ಧ-ಚಾರಣರೇ ಮೊದಲಾದ ಭೂತಗಣಗಳಿಂದ ಪ್ರಶಂಸಿಸಲ್ಪಡುತ್ತಿದ್ದ, ಧೈರ್ಯಶಾಲಿಯಾದ, ಮಹಾಬಲಿಷ್ಠನಾದ, ಮಹಾವೇಗವಂತನಾದ ಹನುಮಂತನನ್ನೇ ದಿಟ್ಟಿಸಿನೋಡುತ್ತಾ ಕಪಿಶ್ರೇಷ್ಠರು ರೆಪ್ಪೆಮುಚ್ಚದ ನೋಟಗಳಿಂದಲೇ ಅವನನ್ನು ಒಯ್ಯುತ್ತಿರುವರೋ ಎಂಬಂತೆ ಆಕಾಶದಲ್ಲಿ ಹಾರಿಕೊಂಡುಹೋಗುತ್ತಿದ್ದರು. ಸೀತಾದರ್ಶನವೆಂಬ ಸಮೃದ್ಧವಾದ ಪ್ರಯೋಜನವನ್ನು ಪಡೆದಿದ್ದ, ಸೀತಾದರ್ಶನವೆಂಬ ಕರ್ಮಸಿದ್ಧಿಯಿಂದಲೇ ಇತರ ವಾನರರಿಗಿಂತಲೂ ವಿಶಿಷ್ಟನಾಗಿದ್ದ, ಹನುಮಂತನ ಜೊತೆಯಲ್ಲಿದ್ದ ಕಪಿಶ್ರೇಷ್ಠರು ಶ್ರೀರಾಮನ ಕಾರ್ಯವು ಸಿದ್ಧಿಸುವಂತೆ ಮತ್ತು ಅವನಿಗೆ ಶ್ರೇಷ್ಠವಾದ ಯಶಸ್ಸು ಲಭಿಸುವಂತೆ ಮಾಡಲು ನಿಶ್ಚಯಿಸಿ, ಈ ಪ್ರಿಯವಾರ್ತೆಯನ್ನು ಹೇಳಲು ಎಲ್ಲರೂ ನಾಮುಂದು-ತಾಮುಂದೆಂದು ಆಕಾಶದಲ್ಲಿ ಹಾರಿಹೋಗುತ್ತಿದ್ದರು. ಎಲ್ಲರೂ ಶತ್ರುಗಳ ನಿಗ್ರಹಕ್ಕೆ ಯುದ್ಧವನ್ನೇ ಪ್ರಶಂಸೆಮಾಡುವವರಾಗಿದ್ದರು. ಬುದ್ಧಿಶಾಲಿಗಳಾದ ಆ ಕಪಿಶ್ರೇಷ್ಠರೆಲ್ಲರೂ ಶ್ರೀರಾಮನ ಮುಖ್ಯಕರ್ತವ್ಯವಾದ ರಾವಣನಿಗ್ರಹರೂಪವಾದ ಪ್ರತೀಕಾರವನ್ನು ಮಾಡುವುದರಲ್ಲಿ ನಿಶ್ಚಿತವಾದ ಅಭಿಪ್ರಾಯವುಳ್ಳವರಾಗಿದ್ದರು. ಎಲ್ಲರೂ ಹಾರಿಕೊಂಡು ನಂದನವನದಂತೆಯೇ ಇದ್ದ ಮರ-ಗಿಡ- ಬಳ್ಳಿಗಳಿಂದ ಸಮೃದ್ಧವಾಗಿದ್ದ ಮಧುವನಕ್ಕೆ ಆಗಮಿಸಿದರು. ಯಾವುದೇ ಪ್ರಾಣಿಯಾಗಲೀ ಪ್ರವೇಶಿಸಲು ದುಃಸಾಧ್ಯವಾಗಿದ್ದ ಸಕಲಪ್ರಾಣಿಗಳ ಮನಸ್ಸನ್ನೂ ಆಕರ್ಷಿಸುತ್ತಿದ್ದ ಮಧುವನವೆಂಬ ಆ ಉದ್ಯಾನವನವು ಬಲಿಷ್ಠರಾದ ವಾನರರಿಂದ ರಕ್ಷಿಸಲ್ಪಡುತ್ತಿದ್ದಿತು. ಮಹಾತ್ಮನಾದ, ಕಪಿಪ್ರಮುಖನಾದ, ಸುಗ್ರೀವನ ಸೋದರಮಾವನಾದ ದಧಿಮುಖನೆಂಬ ಮಹಾವೀರನಾದ ವಾನರನು ಆ ವನವನ್ನು ರಕ್ಷಿಸುತ್ತಿದ್ದನು. ಮನಸ್ಸನ್ನು ಆಕರ್ಷಿಸುತ್ತಿದ್ದ ವಾನರೇಂದ್ರನ ಆ ಸುಂದರವಾದ ವನದ ಬಳಿಗೆ ಬಂದೊಡನೆಯೇ ವಾನರರೆಲ್ಲರೂ ಅದರಲ್ಲಿದ್ದ ಮಧುವನ್ನು ಪಾನಮಾಡಲು

ಉತ್ಸುಕರಾದರು. ಮಧುವಿನಂತೆ ಪಿಂಗಲವರ್ಣದವರಾಗಿದ್ದ ಆ ವಾನರರೆಲ್ಲರೂ ಮಧುವನವನ್ನು ನೋಡಿ ಪರಮಹೃಷ್ಟರಾಗಿ ಅಂಗದಕುಮಾರನನ್ನು ಮಧುವಿಗಾಗಿ ಪ್ರಾರ್ಥಿಸಿದರು. ಯುವರಾಜನಾದ ಅಂಗದನು ಜಾಂಬವಂತನೇ ಮೊದಲಾದ ಕಪಿಮುಖ್ಯರೊಡನೆ ಸಮಾಲೋಚಿಸಿ ಮಧುವನ್ನು ಪಾನಮಾಡಲು ಆ ವಾನರರಿಗೆ ಅನುಮತಿಯನ್ನಿತ್ತನು. ಬುದ್ಧಿವಂತನಾದ



ವಾಲಿಪುತ್ರನಿಂದ ಪ್ರೋತ್ಸಾಹಿತರಾದ ವಾನರರು ಜೇನುಗೂಡುಗಳಿಂದ ತುಂಬಿಹೋಗಿದ್ದ ಮರಗಳನ್ನು ಹತ್ತಿದರು. ಸುಗಂಧಯುಕ್ತವಾದ ಗೆಡ್ಡೆ-ಗೆಣಸುಗಳನ್ನೂ ಹಣ್ಣುಗಳನ್ನೂ ಯಥೇಚ್ಛವಾಗಿ ತಿನ್ನುತ್ತಾ ಅವರೆಲ್ಲರೂ ಪರಮಸಂತುಷ್ಟರಾಗಿ ಮಧುಪಾನಮಾಡಿ ಮದೋತ್ಕಟರೂ ಆದರು. ಯುವರಾಜ

ಕುಮಾರನ ಅನುಮತಿಯನ್ನು ಪಡೆದಿದ್ದ ಆ ಎಲ್ಲ ಕಪೀಶ್ವರರೂ ಅತ್ಯಂತ ಸಂತುಷ್ಟರಾಗಿ ಆನಂದೋತ್ಸಾಹದಿಂದ ನೃತ್ಯವಾಡತೊಡಗಿದರು. ಕಪಿ ನಾಯಕರಲ್ಲಿ ಕೆಲವರು ಹಾಡುತ್ತಿದ್ದರು. ಕೆಲವರು ಕಿಲ-ಕಿಲನೆ ನಗುತ್ತಿದ್ದರು. ಕೆಲವರು ಕೈಮುಗಿಯುತ್ತಿದ್ದರು. ಕೆಲವರು ಮೇಲಿಂದ ಕೆಳಕ್ಕೆ ಧುಮುಕು ತ್ತಿದ್ದರು. ಕೆಲವರು ಅಲ್ಲಲ್ಲಿ ತಿರುಗಾಡುತ್ತಿದ್ದರು. ಕೆಲವರು ನೆಗೆದಾಡು ತ್ತಿದ್ದರು. ಕೆಲವರು ಮನಬಂದಂತೆ ರಗಳುತ್ತಿದ್ದರು. ಒಬ್ಬರಿಗೊಬ್ಬರು ತಟ್ಟಿ ಕೊಳ್ಳುತ್ತಿದ್ದರು. ಕೆಲವರು ಅತಿಯಾಗಿ ಮಾತನಾಡುತ್ತಿದ್ದರು. ಕೆಲವರು ಮರ ದಿಂದ ಮರಕ್ಕೆ ಜಿಗಿಯುತ್ತಿದ್ದರು. ಕೆಲವರು ಮರಗಳ ತುದಿಯಿಂದ ಕೆಳಕ್ಕೆ ಬೀಳುತ್ತಿದ್ದರು. ಮಹಾವೇಗವಂತರಾದ ಕೆಲವು ಕಪಿನಾಯಕರು ನೆಲದಿಂದ ಮರಗಳ ತುದಿಗೆ ಹಾರುತ್ತಿದ್ದರು. ಒಬ್ಬ ವಾನರನು ಗಾನಮಾಡುತ್ತಿದ್ದರೆ ಮತ್ತೊಬ್ಬ ವಾನರನು ಹಾಸ್ಯಮಾಡುತ್ತಾ ಅವನ ಬಳಿಗೆ ಹೋಗುತ್ತಿದ್ದನು. ಒಬ್ಬ ವಾನರನು ನಗುತ್ತಾ ಹೋಗುತ್ತಿದ್ದರೆ ಮತ್ತೊಬ್ಬ ವಾನರನು ಅವನ ಬಳಿಗೆ ಅಳುತ್ತಾ ಹೋಗುತ್ತಿದ್ದನು. ಅಳುತ್ತಿರುವ ವಾನರನನ್ನು ಮತ್ತೊಬ್ಬ ವಾನರನು ತಿವಿಯುತ್ತಿದ್ದನು. ಹಣ್ಣು-ಹಂಪಲುಗಳನ್ನು ತಿನ್ನಲು ಪ್ರೇರಿಸು ತ್ತಿರುವ ವಾನರನ ಬಳಿಗೆ ಮತ್ತೊಬ್ಬ ವಾನರನು ಕೂಗಿಕೊಂಡು ಹೋಗುತ್ತಿದ್ದನು.

ಹೀಗೆ ಅಲ್ಲಿ ಸೇರಿದ್ದ ಕಪಿಸೈನ್ಯವು ಅತಿಯಾದ ಮಧುಪಾನದಿಂದ ಸತ್ತ್ವಶಾಲಿಯೂ ನಾನಾಪ್ರಕಾರವಾದ ಚೇಷ್ಟೆಯುಳ್ಳದ್ದೂ ಆಯಿತು. ಆ ಕಪಿ ಗಳ ಸಮೂಹದಲ್ಲಿ ಮಧುಪಾನಮಾಡಿ ಮತ್ತನಾಗದೇ ಇದ್ದವನು ಯಾರೂ ಇರಲಿಲ್ಲ. ಕುಡಿದು-ಕುಡಿದು ಕೊಬ್ಬದೇ ಇದ್ದವನೂ ಯಾರೂ ಇರಲಿಲ್ಲ. ಹೀಗೆ ಆ ಮಧುವನದಲ್ಲಿದ್ದ ಹಣ್ಣು-ಹಂಪಲುಗಳನ್ನು ತಿನ್ನುತ್ತಾ, ಮಧುವನ್ನು ಯಥೇಚ್ಛವಾಗಿ ಕುಡಿಯುತ್ತಾ, ಮದದಿಂದ ಕೊಬ್ಬಿ ವೃಕ್ಷಗಳಲ್ಲಿದ್ದ ಎಲೆ ಗಳನ್ನೂ ಹೂಗಳನ್ನೂ ಕಿತ್ತುಹಾಕುತ್ತಾ ದಾಂಧಲೆಮಾಡುತ್ತಿದ್ದ ಕಪಿನಾಯಕ ರನ್ನು ನೋಡಿ ಕೋಪಗೊಂಡ ದಧಿಮುಖನು ಎಲ್ಲ ಕಪಿನಾಯಕರನ್ನೂ ಹೊರಗಟ್ಟಲು ಪ್ರಯತ್ನಿಸಿದನು. ಆದರೆ ಮಹಾಬಲಿಷ್ಠರಾಗಿದ್ದ ಕಪಿನಾಯಕರು ಅವನ ಮೇಲೆಯೇ ಹಲ್ಲೆಮಾಡತೊಡಗಿದರು. ತೀಕ್ಷ್ಣಪರಾಕ್ರಮಿಯಾದ, ವೃದ್ಧನಾದ ದಧಿಮುಖನು ಅವರೆಲ್ಲರನ್ನೂ ಎದುರಿಸಿ ವಾನರರಿಂದ ಮಧುವನವನನು ರಕ್ಷಿಸಲು ಪುನಃ ಪ್ರಯತ್ನಿಸಿದನು. ಕೆಲವರೊಡನೆ ಧಾರ್ಷ್ಟ್ಯ

ದಿಂದ ಕಠೋರವಾಗಿಯೇ ಮಾತನಾಡಿದನು. ಮತ್ತೆ ಕೆಲವರನ್ನು ಅಂಗೈಗಳಿಂದ ಗೊತ್ತುಗುರಿಯಿಲ್ಲದೇ ಚೆಚ್ಚಿಬಿಟ್ಟನು. ಕೆಲವರೊಡನೆ ಜಗಳವಾಡಿ ದನು. ಕೆಲವರೊಡನೆ ಒಳ್ಳೆಯ ಮಾತುಗಳನ್ನೂ ಆಡಿದನು. ಹೀಗೆ ದಧಿಮುಖನು ಉದ್ಯಾನವನವನ್ನು ಧ್ವಂಸಮಾಡದಂತೆ ಕಪಿನಾಯಕರನ್ನು ಬಾರಿ-ಬಾರಿಗೂ ತಡೆಯುತ್ತಿದ್ದನು. ಆದರೆ ಮಧುಪಾನಮಾಡಿ ಮದಿಸಿದ್ದ ಅವರನ್ನು ಹೆಚ್ಚುಕಾಲ ತಡೆಯಲು ಅವನಿಗೆ ಸಾಧ್ಯವಾಗಲಿಲ್ಲ. ಮೇಲಾಗಿ ಅಂಗದನೇ ಅನುಮತಿಯನ್ನಿತ್ತಿದ್ದ ಕಾರಣ ದಧಿಮುಖನ ಜೊತೆಯಲ್ಲಿ ಜಗಳವಾಡಲು ಅವರಿಗೆ ಯಾವ ವಿಧವಾದ ಭಯವೂ ಇರಲಿಲ್ಲ. ತಾವು ಮಾಡುತ್ತಿರುವ ಅಪರಾಧಕ್ಕೆ ರಾಜದಂಡನೆಯಾಗುವುದೆಂಬುದನ್ನೂ ಅವರು ಅಲಕ್ಷಿಸಿದ್ದರು. ಅವರೆಲ್ಲರೂ ಒಟ್ಟಾಗಿ ಸೇರಿ ದಧಿಮುಖನನ್ನು ಹಿಡಿದು ಅತ್ತಿತ್ತ ಎಳೆದಾಡತೊಡಗಿದರು. ಮದಿಸಿದ್ದ ವಾನರರಲ್ಲಿ ಕೆಲವರು ದಧಿಮುಖನನ್ನು ಮಧ್ಯದಲ್ಲಿ ಸೇರಿಸಿಕೊಂಡು ಪರಚುತ್ತಿದ್ದರು. ಕೆಲವರು ಹಲ್ಲುಗಳಿಂದ ಅವನ ಅಂಗಾಂಗಗಳನ್ನು ಕಚ್ಚುತ್ತಿದ್ದರು. ಕೆಲವರು ಅಂಗೈಗಳಿಂದಲೂ ಕಾಲುಗಳಿಂದಲೂ ಪ್ರಹರಿಸುತ್ತಿದ್ದರು. ಹಾಗೆಯೇ ಅವರು ಸುಂದರವಾಗಿದ್ದ ಆ ಮಧುವನವನ್ನು ಹೂವು-ಹಣ್ಣು-ಮಧುಗಳಿಂದ ರಹಿತವನ್ನಾಗಿ ಮಾಡಿಬಿಟ್ಟರು.

ಅರವತ್ತೊಂದನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೬೨ನೆಯ ಸರ್ಗ

## ವಾನರಶ್ರೇಷ್ಠರು ಮಧುವನದ ರಕ್ಷಕರನ್ನೂ ದಧಿಮುಖನನ್ನೂ ಪರಾಭವಗೊಳಿಸಿದುದು : ದಧಿಮುಖನು ಸೇವಕರೊಡನೆ ದೂರುಕೊಡಲು ಸುಗ್ರೀವನ ಬಳಿಗೆ ಹೋದುದು

**ತಾನುವಾಚ ಹರಿಶ್ರೇಷ್ಠೋ ಹನುಮಾನ್ವಾನರರ್ಷಭಃ ।**
**ಅವ್ಯಗ್ರಮನಸೋ ಯೂಯಂ ಮಧು ಸೇವತ ವಾನರಾಃ ।**
**ಅಹಮಾವಾರಯಿಷ್ಯಾಮಿ ಯುಷ್ಮಾಕಂ ಪರಿಪನ್ಥಿನಃ ॥೧॥**

ದಧಿಮುಖನು ತಡೆಯನ್ನುಂಟುಮಾಡುತ್ತಿದ್ದರೂ ವಾನರಶ್ರೇಷ್ಠನಾದ ಹನುಮಂತನು ತನ್ನ ಸಂಗಾತಿಗಳಿಗೆ ಹೇಳಿದನು :

"ವಾನರಶ್ರೇಷ್ಠರೇ! ನೀವು ಏಕಾಗ್ರವಾದ ಮನಸ್ಸಿನಿಂದ ಮಧುವನ್ನು ಪಾನಮಾಡಿರಿ. ನಿಮ್ಮನ್ನು ತಡೆಯಲು ಬರುವ ಶತ್ರುಗಳನ್ನು ನಾನು ನಿವಾರಿಸುವೆನು."

ಹನುಮಂತನ ಆ ಮಾತನ್ನು ಕೇಳಿ ಕಪಿಶ್ರೇಷ್ಠನಾದ ಅಂಗದನು ಪ್ರಸನ್ನವಾದ ಮನಸ್ಸಿನಿಂದ ಹೇಳಿದನು :

"ಕಪಿನಾಯಕರು ತಮಗೆ ಬೇಕಾದಷ್ಟು ಮಧುವನ್ನು ಪಾನಮಾಡಲಿ. ಕಾರ್ಯವನ್ನು ಯಶಸ್ವಿಯಾಗಿ ಮುಗಿಸಿಕೊಂಡುಬಂದಿರುವ ಹನುಮಂತನ ಮಾತಿನಂತೆ ನಡೆದುಕೊಳ್ಳುವುದು ನನ್ನ ಕರ್ತವ್ಯವಾಗಿದೆ. ಹನುಮಂತನು ಮಾಡಬಾರದ ಕಾರ್ಯವನ್ನು ಹೇಳಿದ್ದರೂ ಅದರಂತೆಯೇ ನಡೆದುಕೊಳ್ಳುವುದು ನನ್ನ ಕರ್ತವ್ಯವಾಗಿದ್ದಿತು. ಹೀಗಿರುವಾಗ ಸರ್ವಸುಖಾವಹವಾದ ಈ ಕಾರ್ಯಕ್ಕೆ ಅನುಮತಿಸುವ ವಿಷಯದಲ್ಲಿ ಹೇಳಬೇಕಾದ್ದೇನಿದೆ?"

ಯುವರಾಜನಾದ ಅಂಗದನ ಮುಖದಿಂದ ಹೊರಟ ಆ ಮಾತನ್ನು ಕೇಳಿ ವಾನರಶಿರೋಮಣಿಗಳೆಲ್ಲರೂ–'ಅಂಗದನಿಗೆ ಜಯವಾಗಲಿ! ನಮ್ಮ ಯುವರಾಜನು ಹೇಳಿದುದು ಸಾಧುವಾಗಿದೆ'–ಎಂದೆನ್ನುತ್ತಾ ವಾಲಿಪುತ್ರನನ್ನು ಅಭಿನಂದಿಸಿದರು. ಅಂಗದನನ್ನು ಹೀಗೆ ಶ್ಲಾಘಿಸಿ ನದಿಯ ವೇಗದಂತೆ ಮುನ್ನುಗ್ಗಿ ಮಧುವನವಿದ್ದ ಕಡೆಗೆ ರಭಸದಿಂದ ಧಾವಿಸಿದರು.

ಹನುಮಂತನು ಸೀತೆಯನ್ನು ನೋಡಿ ಬಂದಿದ್ದನು. ಆ ಶುಭವಾರ್ತೆಯನ್ನು ಸಮರ್ಥರಾದ ಕಪಿನಾಯಕರು ಕೇಳಿ ಸಂತೋಷಭರಿತರಾಗಿದ್ದರು. ಅವರಿಗೆ ಮಧುಪಾನಮಾಡಲು ಯುವರಾಜನಾದ ಅಂಗದನ ಅನುಮತಿಯೂ ಸಿಕ್ಕಿದ್ದಿತು. ಈ ಕಾರಣಗಳಿಂದ ಉತ್ಸಾಹಿತರಾಗಿದ್ದ ವಾನರರು ಮಧುವನವನ್ನು ಪ್ರವೇಶಿಸಿ ತಮ್ಮನ್ನು ತಡೆಯಲು ಬಂದ ಕಾವಲುಗಾರರನ್ನು ಆಕ್ರಮಿಸಿ ಬಂಧಿಸಿ ಯಥೇಚ್ಛವಾಗಿ ಮಧುವನ್ನು ಪಾನಮಾಡಿದರು. ವೃಕ್ಷಗಳಿಂದ ರಸವತ್ತಾದ ಹಣ್ಣುಗಳನ್ನು ಕಿತ್ತು ತಿನ್ನುತ್ತಿದ್ದರು. ಮಧುವನದ ರಕ್ಷಣೆಯಲ್ಲಿ ನಿರತರಾಗಿದ್ದ , ವನವನ್ನು ಕಪಿಗಳ ದಾಂಧಲೆಯಿಂದ ರಕ್ಷಿಸಲು ಮುಂದೆಬಂದ ವನಪಾಲಕರ ಮೇಲೆ ವಾನರನಾಯಕರು ಹಾರಿ ನೂರಾರು ಏಟುಗಳನ್ನು ಕೊಟ್ಟರು. ಕೆಲವು ವಾನರರು ಒಟ್ಟಾಗಿ ಸೇರಿ ಜೇನುಗೂಡುಗಳನ್ನು ತೋಳು

ಗಳಿಂದಲೇ ತಬ್ಬಿಕೊಂಡು ಕೊಳಗಗಟ್ಟಲೆ ಜೇನುತುಪ್ಪವನ್ನು ಕುಡಿಯು ತ್ತಿದ್ದರು. ನಂತರ ಆ ಗೂಡುಗಳನ್ನು ಮನಬಂದಲ್ಲಿಗೆ ಎಸೆಯುತ್ತಿದ್ದರು. ಕೆಲವರು ಯಥೇಚ್ಛವಾಗಿ ಹಣ್ಣುಗಳನ್ನು ಕಿತ್ತು ತಿನ್ನುತ್ತಿದ್ದರು. ಜೇನಿನಂತೆ ಪಿಂಗಲವರ್ಣವುಳ್ಳ ಕೆಲವರು ಹೆಚ್ಚುಕುಡಿಯಲಾರದೇ ಮಧುವನ್ನು ಚೆಲ್ಲು ತ್ತಿದ್ದರು. ಮದೋತ್ಕಟರಾದ ಕೆಲವರು ಜೇನುಗೂಡುಗಳಿಂದಲೇ ಪರಸ್ಪರ ವಾಗಿ ಹೊಡೆದಾಡುತ್ತಿದ್ದರು. ಕೆಲವರು ಮರಗಳ ಬುಡದಲ್ಲಿ ರೆಂಬೆಗಳನ್ನು ಹಿಡಿದು ನಿಂತಿದ್ದರು. ಮಿತಿಮೀರಿ ಮಧುಪಾನಮಾಡಿದ್ದ ಕೆಲವರು ಎಲೆ ಗಳನ್ನು ಹಾಸಿ ನಿದ್ದೆಹೋದರು. ಮಧುವನ್ನು ಕುಡಿದು ಮತ್ತರಾಗಿದ್ದ, ಹುಚ್ಚ ರಂತೆಯೇ ಕಾಣುತ್ತಿದ್ದ ಕೆಲವು ವಾನರರು ಒಬ್ಬರು ಮತ್ತೊಬ್ಬರನ್ನೆತ್ತಿ ಬಹಳ ದೂರದವರೆಗೆ ಎಸೆಯುತ್ತಿದ್ದರು. ಸುಮ್ಮನೆ ನಿಂತಿದ್ದವರನ್ನು ಹಿಂಬದಿಯಲ್ಲಿ ಹೋಗಿ ತಳ್ಳಿಬಿಡುತ್ತಿದ್ದರು. ಕೆಲವರು ಮದೋನ್ಮತ್ತರಾಗಿ ತತ್ತರಿಸಿ ಬೀಳು ತ್ತಿದ್ದರು. ಕೆಲವರು ಸಿಂಹದಂತೆ ಗರ್ಜನೆಗಳನ್ನು ಮಾಡುತ್ತಿದ್ದರು. ಕೆಲವರು ಸಂತುಷ್ಟರಾದವರಂತೆ ಕೇಕೆಹಾಕುತ್ತಿದ್ದರು. ಮಧುಪಾನದಿಂದ ಮತ್ತರಾದ ಕೆಲವರು ನೆಲದ ಮೇಲೆಯೇ ಮಲಗಿಬಿಟ್ಟರು. ಲಜ್ಜೆಯಿಲ್ಲದ ಕೆಲವರು ಹೇಳಬಾರದ ಕೆಲಸಮಾಡಿ ನಗುತ್ತಿದ್ದರು. ಮತ್ತೆ ಕೆಲವರು ಕುಣಿಯುವುದು–ನಗುವುದು ಇವೇ ಮೊದಲಾದ ಅನೇಕವಿಧವಾದ ಚೇಷ್ಟೆಗಳನ್ನು ಮಾಡು ತ್ತಿದ್ದರು. ಮಧುಪಾನಮಾಡಿ ಮತ್ತರಾಗಿದ್ದ, ಕೆಲವರು ತಮಗಾದ ಆನಂದ ವನ್ನು ಇತರರಿಗೆ ವಿವರಿಸಿ ಹೇಳುತ್ತಿದ್ದರು. ಕೆಲವರು ಅದರ ರುಚಿ ಎಷ್ಟೆಂಬುದನ್ನು ಸವಿದು ತಿಳಿದುಕೊಳ್ಳುತ್ತಿದ್ದರು.

ಮಧುವನವನ್ನು ರಕ್ಷಿಸುತ್ತಿದ್ದ ದಧಿಮುಖನ ಸೇವಕರೆಲ್ಲರೂ ಭಯಂಕರರಾಗಿ ಕಾಣುತ್ತಿದ್ದ ಅಂಗದಪ್ರಮುಖರಾದ ಕಪಿನಾಯಕರಿಂದ ತಡೆಯಲ್ಪಟ್ಟವರಾಗಿ ಪ್ರಾಣಭಯದಿಂದ ದಿಕ್ಕಾಪಾಲಾಗಿ ಓಡಿಹೋದರು. ಅಂಗದನ ಕೆಲವರು ಅನುಯಾಯಿಗಳು ದಧಿಮುಖನ ಸೇವಕರನ್ನು ಮಂಡಿಗಳಿಂದಲೇ ಪ್ರಹರಿಸುತ್ತಿದ್ದರು. ಅವರಲ್ಲಿ ಕೆಲವರನ್ನು ಆಕಾಶಕ್ಕೂ ಎಸೆದರು. ಹೀಗೆ ನಾನಾಪ್ರಕಾರವಾಗಿ ಪೆಟ್ಟುತಿಂದ ದಧಿಮುಖನ ಸೇವಕರು ಭಯಗೊಂಡು ತಮ್ಮ ಒಡೆಯನಿಗೆ ಹೇಳಿದರು :

**ಹನೂಮತಾ ದತ್ತವರೈರ್ಹತಂ ಮಧುವನಂ ಬಲಾತ್ ।**
**ವಯಂ ಚ ಜಾನುಭಿಃ ಕೃಷ್ಟಾ ದೇವಮಾರ್ಗಂ ಚ ದರ್ಶಿತಾಃ ॥**

"ಸ್ವಾಮಿಯೇ! ಹನುಮಂತನ ಅನುಜ್ಞೆಯನ್ನು ಪಡೆದು ಅವನ ಅನುಯಾಯಿಗಳು ಮಧುವನವನ್ನೇ ಧ್ವಂಸಮಾಡಿಬಿಟ್ಟರು. ನಮ್ಮನ್ನು ಮಂಡಿಗಳಿಂದಲೇ ಪ್ರಹರಿಸಿದರು. ನಮ್ಮನ್ನೆತ್ತಿ ಆಕಾಶಕ್ಕೂ ಒಗೆದರು. ಮೊಣ ಕಾಲುಗಳ ಕೆಳಗೆ ತಲೆಯನ್ನು ತೂರಿಸಿ ಗುದದ್ವಾರವು ಕಾಣುವಂತೆ ಮಾಡಿ ಅವಮಾನಗೊಳಿಸಿದರು."

ಮಧುವನದ ಮುಖ್ಯರಕ್ಷಕನಾಗಿದ್ದ ದಧಿಮುಖನು ಅವರ ಮಾತನ್ನು ಕೇಳಿ ಪರಮಕ್ರುದ್ಧನಾದನು. ಪೆಟ್ಟುತಿಂದು ಬಂದಿದ್ದ ಸೇವಕರನ್ನು ಸವಿಮಾತು ಗಳಿಂದ ಸಮಾಧಾನಗೊಳಿಸುತ್ತಾ ಹೇಳಿದನು :

"ಬನ್ನಿರಿ! ಅಲ್ಲಿಗೇ ನಾವು ಹೋಗೋಣ. ಸರ್ವೋತ್ತಮವಾದ ಮಧು ವನವನ್ನು ಧ್ವಂಸಮಾಡಿರುವ ಮತ್ತು ಬಲದಿಂದ ಕೊಬ್ಬಿರುವ ವಾನರರನ್ನು ನಮ್ಮ ಬಲಪ್ರದರ್ಶನದಿಂದ ಹಿಮ್ಮೆಟ್ಟಿಸೋಣ."

ದಧಿಮುಖನ ಆ ಮಾತುಗಳನ್ನು ಕೇಳಿ ವೀರರಾದ ಕಪಿಶ್ರೇಷ್ಠರು ಪುನಃ ತಮ್ಮ ಒಡೆಯನೊಡನೆ ಮಧುವನಕ್ಕೆ ಹೋದರು.

ಸೇವಕರ ಮಧ್ಯದಲ್ಲಿದ್ದ ದಧಿಮುಖನು ಹಾದಿಯಲ್ಲಿ ಸಿಕ್ಕಿದ ವೃಕ್ಷ ವೊಂದನ್ನು ಕಿತ್ತು ಬಹಳ ವೇಗದಿಂದ ಮಧುವನದ ಕಡೆಗೆ ಧಾವಿಸಿದನು. ಅವನ ಸೇವಕರೂ ಹಾಗೆಯೇ ವೃಕ್ಷಗಳನ್ನೆತ್ತಿಕೊಂಡು ಧಾವಿಸಿದರು. ಕೆಲವರು ಕಲ್ಲುಗಳನ್ನೂ ಬಂಡೆಗಳನ್ನೂ ಎತ್ತಿಕೊಂಡು ವೇಗವಾಗಿ ಅಂಗದಾದಿಗಳಿದ್ದೆ ಡೆಗೆ ತೆರಳಿದರು. ಆ ವೀರರೆಲ್ಲರೂ ತಮ್ಮ ಸ್ವಾಮಿಯಾದ ದಧಿಮುಖನು ಹೇಳಿದ್ದ ಮಾತುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮಧುವನ ಧ್ವಂಸಕರನ್ನು ಶಿಕ್ಷಿಸುವ ಸಲುವಾಗಿ ಸಾಲ-ತಾಲವೃಕ್ಷಗಳನ್ನೂ, ಬಂಡೆಗಳನ್ನೂ ಆಯುಧಗಳ ನ್ನಾಗಿ ಮಾಡಿಕೊಂಡು ವೇಗವಾಗಿ ಹೋದರು. ಸಾವಿರಾರು ಸಂಖ್ಯೆಯಲ್ಲಿದ್ದ ಆ ವನಪಾಲಕರು ಮರಗಳ ಮೇಲೆ ಕುಳಿತಿದ್ದ, ನೆಲದ ಮೇಲೆ ಮಲಗಿದ್ದ, ಬಲದರ್ಪಿತರಾಗಿದ್ದ ಅಂಗದನೇ ಮೊದಲಾದ ವಾನರರನ್ನು ಏಕಕಾಲದಲ್ಲಿ ಆಕ್ರಮಿಸಿದರು. ದಧಿಮುಖನ ಸೇವಕರು ಪರಮಕ್ರುದ್ಧರಾಗಿ ಅವುಡುಗಳನ್ನು

ಕಚ್ಚುತ್ತಿದ್ದರು. ಅಂಗದಪ್ರಮುಖರಾದ ಕಪಿಗಳನ್ನು ಬಾರಿಬಾರಿಗೂ ಭಯ ಪಡಿಸುತ್ತಿದ್ದರು. ಬಲಾತ್ಕಾರವಾಗಿ ಅವರನ್ನು ಹಿಂದಕ್ಕಟ್ಟುತ್ತಿದ್ದರು. ಹೀಗೆ ದಧಿಮುಖಪ್ರಮುಖರಾದ ವಾನರರೂ ಅಂಗದಪ್ರಮುಖರಾದ ವಾನರರೂ ಎದುರು-ಬದುರಾಗಿ ಕದನಕ್ಕೆ ನಿಂತರು. ಮಧುವನದ ಮುಖ್ಯರಕ್ಷಕನಾದ ದಧಿಮುಖನು ಕ್ರುದ್ಧನಾಗಿ ಬಂದಿರುವುದನ್ನು ನೋಡಿ ಹನುಮಂತನೇ ಮೊದಲಾದ ವಾನರಶ್ರೇಷ್ಠರು ಅವನನ್ನು ಎದುರಿಸಲು ಹೋದರು. ಮಹಾ ಬಲಿಷ್ಠನಾದ, ಮಹಾಬಾಹುವಾದ, ವೃಕ್ಷಗಳನ್ನೆತ್ತಿಕೊಂಡು ತಮ್ಮನ್ನು ಆಕ್ರಮಿ ಸಲು ಬರುತ್ತಿದ್ದ ವೇಗವಂತನಾದ ದಧಿಮುಖನನ್ನು ಕುಪಿತನಾದ ಅಂಗದನು ತೋಳುಗಳಿಂದ ಬಲವಾಗಿ ಪ್ರಹರಿಸಿದನು. ಮಧುವನ್ನು ಕುಡಿದು ಮದಾಂಧ ನಾಗಿದ್ದ ಅಂಗದನಿಗೆ ದಧಿಮುಖನು ತನ್ನ ಹಿರಿಯ ಬಂಧುವೆಂಬುದೂ ತಿಳಿಯಲಿಲ್ಲ. ದಧಿಮುಖನನ್ನು ನೆಲದ ಮೇಲೆ ಹಾಕಿ ಅರೆದುಬಿಟ್ಟನು. ದಧಿಮುಖನ ತೋಳುಗಳಿಗೂ ಸೊಂಟಕ್ಕೂ ಬಲವಾದ ಪೆಟ್ಟುಬಿದ್ದಿತು. ರಕ್ತವು ಹೊರಚಿಮ್ಮಿ ಅವನು ಆ ರಕ್ತದಲ್ಲಿಯೇ ಮುಳುಗಿಹೋದನು. ಅದರಿಂದ ಅತ್ಯಂತ ವಿಹ್ವಲನಾದ ದಧಿಮುಖನು ಮುಹೂರ್ತಕಾಲದವರೆಗೆ ಮೂರ್ಛಿತನಾಗಿಯೇ ಬಿದ್ದಿದ್ದನು. ಸ್ವಲ್ಪಹೊತ್ತಿನಲ್ಲಿಯೇ ರಾಜಮಾತುಲನಾದ ದಧಿಮುಖನು ಚೇತರಿಸಿಕೊಂಡು ಮತ್ತೂ ಕುಪಿತನಾಗಿ ಮಧುಪಾನದಿಂದ ಮತ್ತರಾಗಿದ್ದ ಕಪಿನಾಯಕರನ್ನು ದಂಡದಿಂದ ಪುನಃ ಹಿಂದಕ್ಕಟ್ಟಿದನು. ಆದರೂ ಮುನ್ನುಗ್ಗಿಬರುತ್ತಿದ್ದ ಅಂಗದಾದಿಗಳಿಂದ ಬಹಳ ಪ್ರಯಾಸದಿಂದ ತಪ್ಪಿಸಿಕೊಂಡು ಏಕಾಂತಸ್ಥಳಕ್ಕೆ ಹೋಗಿ ತನ್ನ ಅನುಯಾಯಿಗಳಾದ ವಾನರರಿಗೆ ಹೇಳಿದನು :

"ಅಂಗದಾದಿಗಳು ಇಲ್ಲಿಯೇ ಇರಲಿ. ಶ್ರೀರಾಮನೊಡನಿರುವ ನಮ್ಮ ಸ್ವಾಮಿಯಾದ, ವಿಶಾಲವಾದ ಕುತ್ತಿ ಗೆಯುಳ್ಳ ಸುಗ್ರೀವನಿರುವೆಡೆಗೆನಾವೆಲ್ಲರೂ ಹೋಗೋಣ. ಅಂಗದನು ಮಾಡಿರುವ ಅಪರಾಧಗಳೆಲ್ಲವನ್ನೂ ರಾಜನಿಗೆ ಹೇಳೋಣ. ಕೋಪಿಷ್ಟನಾಗುವ ನಮ್ಮ ದೊರೆಯು ನಮ್ಮ ಮಾತನ್ನು ಕೇಳಿ ದೊಡನೆಯೇ ಇವರೆಲ್ಲರನ್ನೂ ಉಗ್ರವಾಗಿ ಶಿಕ್ಷಿಸುವನು. ವಂಶಪಾರಂಪರ್ಯ ವಾಗಿ ಬಂದಿರುವ ಈ ಮಧುವನವು ಸುಗ್ರೀವನಿಗೆ ಅತ್ಯಂತಪ್ರಿಯವಾದುದು. ದಿವ್ಯವಾದ ಈ ವನವು ದೇವತೆಗಳಿಂದಲೂ ಪ್ರವೇಶಿಸಲು ದುಸ್ಸಾಧ್ಯ ವಾದುದು. ಪ್ರಾಣಕ್ಕಿಂತಲೂ ಮಧುವಿನಲ್ಲಿಯೇ ಹೆಚ್ಚಾದ ಪ್ರೀತಿಯನ್ನಿಟ್ಟು,

ಆಯುಸ್ಸು ಮುಗಿದಿರುವ ಸುಹೃದರೊಡನೆ ಕೂಡಿರುವ, ರಾಜಾಜ್ಞೆಯನ್ನು ವಿರೋಧಿಸಿರುವ ಈ ಎಲ್ಲ ವಾನರರನ್ನೂ ನಮ್ಮ ರಾಜನು ಬಂಧಿಸಿ ಶಿಕ್ಷಿಸುವನು. ಇವರ ಕುತ್ಸಿತವಾದ ಕೃತ್ಯವನ್ನು ಸಹಿಸಲಾಗದೇ ನನಗುಂಟಾಗಿರುವ ಕೋಪವು ಆಗಲಾದರೂ ಶಾಂತವಾಗುತ್ತದೆ. ರಾಜಾಜ್ಞೆಯನ್ನು ತಿರಸ್ಕರಿಸಿರುವ ದುರಾತ್ಮರಾದ ಇವರೆಲ್ಲರೂ ವಧಾರ್ಹರೇ ಸರಿ."

ದಧಿಮುಖನು ವನಪಾಲಕರಿಗೆ ಹೀಗೆ ಹೇಳಿ ಅವರೊಡನೆ ಹಾರುತ್ತಲೇ ಸುಗ್ರೀವನ ಬಳಿಗೆ ಹೋದರು. ವನಚಾರಿಯಾದ ದಧಿಮುಖನು ರೆಪ್ಪೆಹಾರಿಸುವಷ್ಟು ಅಲ್ಪಸಮಯದಲ್ಲಿ ಸೂರ್ಯಪುತ್ರನಾದ ಧೀಮಂತನಾದ ಸುಗ್ರೀವನಿದ್ದೆಡೆಗೆ ಹೋದನು. ಅವನು ಮೇಲಿಂದಲೇ ರಾಮ-ಲಕ್ಷ್ಮಣ-ಸುಗ್ರೀವರನ್ನು ನೋಡಿ ಸಮತಲವಾಗಿದ್ದ ಆ ಭೂಮಿಯ ಮೇಲೆ ಆಕಾಶದಿಂದ ಇಳಿದನು. ಮಹಾವೀರರಾದ ಮಧುವನದ ಪಾಲಕರಿಗೆ ನಾಯಕನಾದ ದಧಿಮುಖನು ಮೇಲಿನಿಂದ ಕೆಳಕ್ಕೆ ನೆಗೆದು ಸೇವಕರಿಂದ ಪರಿವೃತನಾಗಿ, ದೀನವದನನಾಗಿ, ಕೈಮುಗಿದುಕೊಂಡು ರಾಜನಾದ ಸುಗ್ರೀವನ ಎರಡು ಪಾದಗಳನ್ನೂ ತಲೆಯಿಂದ ಸ್ಪರ್ಶಿಸಿದನು.

೬೨ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೬೩ನೆಯ ಸರ್ಗ

## ಅಂಗದಾದಿಗಳು ಮಧುವನವನ್ನು ಧ್ವಂಸಮಾಡಿದ ವಾರ್ತೆಯನ್ನು ದಧಿಮುಖನು ಸುಗ್ರೀವನಿಗೆ ಹೇಳಿದುದು : ಅದರಿಂದ ಅಂಗದಾದಿಗಳು ಕೃತಕೃತ್ಯರಾಗಿ ಬಂದಿರುವರೆಂದು ಸುಗ್ರೀವನು ಊಹಿಸಿದುದು

**ತತೋ ಮೂರ್ಧ್ನಾ ನಿಪತಿತಂ ವಾನರಂ ವಾನರರ್ಷಭಃ |**
**ದೃಷ್ಟ್ವೈವೋದ್ವಿಗ್ನಹೃದಯೋ ವಾಕ್ಯಮೇತದುವಾಚ ಹ ||೧||**

ದಧಿಮುಖನು ತಲೆಬಾಗಿ ನಮಸ್ಕರಿಸುತ್ತಿರುವುದನ್ನು ನೋಡುತ್ತಲೇ ವಾನರಶ್ರೇಷ್ಠನಾದ ಸುಗ್ರೀವನು ಉದ್ವಿಗ್ನಚಿತ್ತನಾಗಿ ಹೇಳಿದನು :

**ಉತ್ತಿಷ್ಠೋತ್ತಿಷ್ಠ ಕಸ್ಮಾತ್ತ್ವಂ ಪಾದಯೋಃ ಪತಿತೋ ಮಮ |**
**ಅಭಯಂ ತೇ ಪ್ರದಾಸ್ಯಾಮಿ ಸರ್ವಮೇವಾಭಿಧೀಯತಾಮ್ ||೨||**

"ದಧಿಮುಖನೇ! ಏಳು! ಎದ್ದೇಳು! ಹಿರಿಯನಾದ ನೀನು ನನ್ನ ಕಾಲುಗಳಿಗೇಕೆ ನಮಸ್ಕರಿಸುವೆ? ನಿನಗೆ ಅಭಯವನ್ನಿತ್ತಿದ್ದೇನೆ. ಸತ್ಯವನ್ನೇ ಹೇಳು. ಎಲ್ಲವನ್ನೂ ಸಮಗ್ರವಾಗಿ ಹೇಳು. ಮಧುವನದಲ್ಲಿ ಎಲ್ಲವೂ ಸುವ್ಯವಸ್ಥೆಯಿಂದಲೇ ಇರುವುದಲ್ಲವೇ? ಈ ಎಲ್ಲ ವಿಷಯಗಳನ್ನೂ ನಾನು ನಿನ್ನಿಂದ ಕೇಳಬಯಸುತ್ತೇನೆ."

ಮಹಾತ್ಮನಾದ ಸುಗ್ರೀವನು ಹೀಗೆ ಆಶ್ವಾಸನೆಯನ್ನಿತ್ತ ನಂತರ ಮಹಾಪ್ರಾಜ್ಞನಾದ ದಧಿಮುಖನು ಹೇಳತೊಡಗಿದನು :

"ಸುಗ್ರೀವ! ಯಾವ ಮಧುವನವನ್ನು ನಿಮ್ಮ ತಂದೆಯಾದ ಋಕ್ಷ ರಜಸನಾಗಲೀ, ನೀನಾಗಲೀ, ವಾಲಿಯಾಗಲೀ ಇತರರು ಉಪಭೋಗಿಸಲು ಅವಕಾಶಕೊಟ್ಟಿರಲಿಲ್ಲವೋ–ಆ ಮಧುವನವನ್ನಿಂದು ವಾನರರು ಧ್ವಂಸ ಮಾಡಿಬಿಟ್ಟರು. ನಾನು ನನ್ನ ಈ ಸೇವಕರೊಡನೆ ಅವರನ್ನು ತಡೆಯಲು ಬಹಳವಾಗಿ ಪ್ರಯತ್ನಿಸಿದೆನು. ಆದರೆ ಅವರು ನನ್ನನ್ನೂ ಲೆಕ್ಕಿಸದೇ ವನ ದಲ್ಲಿದ್ದ ಮಧುವನ್ನೆಲ್ಲಾ ಕುಡಿದುಬಿಟ್ಟರು. ಹಣ್ಣುಗಳನ್ನೆಲ್ಲಾ ತಿಂದುಬಿಟ್ಟರು. ಈ ನನ್ನ ಸೇವಕರು ಅವರನ್ನು ತಡೆಯಲು ಹಲವಾರು ಬಾರಿ ಪ್ರಯತ್ನಿಸಿದರೂ ಇವರು ಯಾರನ್ನೂ ಲೆಕ್ಕಿಸದೇ ನನ್ನನ್ನೂ ಪರಿಗಣಿಸದೇ ಮಧುವನದಲ್ಲಿದ್ದ ಹಣ್ಣುಗ್ಗಳೆಲ್ಲವನ್ನೂ ಕಿತ್ತು ತಿಂದರು. ಕೆಲವರು ಮಧುವನ್ನು ಕುಡಿದರು. ಕೆಲವರು ಚೆಲ್ಲಿದರು. ತಡೆಯಲು ಹೋದೆವೆಂದರೆ ಗಂಟಿಕ್ಕಿದ ಹುಬ್ಬುಗಳನ್ನು ತೋರಿಸುತ್ತಿದ್ದರು. ಅವರ ಈ ಹೀನಕಾರ್ಯದಿಂದ ಕೋಪಗೊಂಡ ನಮ್ಮ ಕಾವಲುಗಾರರು ಅವರೊಡನೆ ಸಂಘರ್ಷಿಸಿದರು. ಕ್ರುದ್ಧರಾಗಿದ್ದ ಅವರೆಲ್ಲರೂ ಈ ನನ್ನ ಸೇವಕರನ್ನು ಮಧುವನದಿಂದಲೇ ಹೊರಗಟ್ಟಿದರು. ನಮ್ಮ ಕಡೆಯ ವಾನರರೂ ಕ್ರುದ್ಧರಾಗಿ ಅವರನ್ನು ಮಧುವನದಿಂದ ಓಡಿಸಲು ಪುನಃ ಪುನಃ ಪ್ರಯತ್ನಿಸುತ್ತಲೇ ಇದ್ದರು. ಆದರೂ ಪ್ರಯೋಜನವಾಗಲಿಲ್ಲ. ಬಹುಸಂಖ್ಯಾತರಾಗಿದ್ದ ಮತ್ತು ಕೋಪದಿಂದ ಕೆಂಗಣ್ಣರಾಗಿದ್ದ ಅವರು ಅಲ್ಪಸಂಖ್ಯಾತರಾಗಿದ್ದ ಈ ನನ್ನ ಅನುಯಾಯಿಗಳನ್ನು ಬಹಳವಾಗಿ ಹಿಂಸಿ ಸಿದರು. ಅವರು ನಮ್ಮ ಸೇವಕರನ್ನು ಕೈಗಳಿಂದಲೇ ಪ್ರಹರಿಸುತ್ತಿದ್ದರು. ಮೊಣ ಕಾಲುಗಳಿಂದ ಗುದ್ದುತ್ತಿದ್ದರು. ಅತ್ತಲಿತ್ತ ಎಳೆದಾಡುತ್ತಿದ್ದರು. ಮೇಲಕ್ಕೆಸೆದು

ಆಕಾಶಮಾರ್ಗವನ್ನು ತೋರಿಸುತ್ತಿದ್ದರು. ತಮ್ಮ ಮೊಣಕಾಲುಗಳ ಸಂದಿಗಳಲ್ಲಿ ನಮ್ಮ ಕಡೆಯವರ ತಲೆಗಳನ್ನು ಸಿಕ್ಕಿಸಿಕೊಂಡು ಗುದದ್ವಾರವನ್ನು ತೋರಿಸುತ್ತಿದ್ದರು. ನಿನ್ನಂತಹ ಒಡೆಯನಿರುವಾಗಲೂ ಶೂರರಾದ ನಮ್ಮ ಅನುಯಾಯಿಗಳಲ್ಲಿ ಅನೇಕರು ಅಸುನೀಗಿದರು. ಮಧುವನದಲ್ಲಿರುವ ಸಮಗ್ರವಾದ ಮಧುವನ್ನು ಅವರು ಈಗಲೂ ಕುಡಿಯುತ್ತಲೇ ಇದ್ದಾರೆ ; ಹಣ್ಣುಗಳನ್ನು ತಿನ್ನುತ್ತಲೇ ಇದ್ದಾರೆ."

ದಧಿಮುಖನು ಸುಗ್ರೀವರಾಜನ ಮುಂದೆ ಹೀಗೆ ವಿಜ್ಞಾಪಿಸಿಕೊಳ್ಳುತ್ತಿದ್ದಾಗ ಶತ್ರುಹಂತಕನಾದ ಮಹಾಪ್ರಾಜ್ಞನಾದ ಲಕ್ಷ್ಮಣನು ಕಪಿರಾಜನನ್ನು ಪ್ರಶ್ನಿಸಿದನು :

"ಸುಗ್ರೀವ! ವನಪಾಲಕನಾದ ವಾನರನೇಕೆ ಇಲ್ಲಿಗೆ ಬಂದಿದ್ದಾನೆ? ಯಾವ ಕಾರಣದಿಂದಾಗಿ ಇವನು ಹೀಗೆ ದುಃಖದಿಂದ ಮಾತನಾಡು ತ್ತಿದ್ದಾನೆ?"

ಮಹಾತ್ಮನಾದ ಲಕ್ಷ್ಮಣನ ಪ್ರಶ್ನೆಗೆ ವಾಕ್ಯವಿಶಾರದನಾದ ಸುಗ್ರೀವನು ಹೇಳಿದನು :

"ಆರ್ಯನೇ! ಸೀತೆಯನ್ನು ಹುಡುಕಲು ದಕ್ಷಿಣದಿಕ್ಕಿಗೆ ಹೋಗಿದ್ದು ಹಿಂದಿರುಗಿರುವ ಅಂಗದನೇ ಮೊದಲಾದ ವೀರರು ಮಧುವನದಲ್ಲಿದ್ದ ಮಧುವನ್ನು ಪಾನಮಾಡಿದರೆಂದೂ ಫಲಗಳನ್ನು ಭಕ್ಷಿಸಿದರೆಂದೂ ದಧಿಮುಖನು ಹೇಳುತ್ತಿದ್ದಾನೆ.

**ನೈಷಾಮಕೃತಕಾರ್ಯಾಣಾಮೀದೃಶಃ ಸ್ಯಾದ್ವ್ಯತಿಕ್ರಮಃ ।**
**ವನಂ ಯದಭಿಪನ್ನಾಸ್ತೇ ಸಾಧಿತಂ ಕರ್ಮ ತದ್ಧ್ರುವಮ್ ॥೧೭॥**

ಕಾರ್ಯವನ್ನು ಸಾಧಿಸದೇ ಇದ್ದರೆ ಅವರು ಹೀಗೆ ಅತಿಕ್ರಮಣವನ್ನು ಎಂದಿಗೂ ಮಾಡುತ್ತಿರಲಿಲ್ಲ. ನನಗೆ ಪರಮಪ್ರಿಯವಾಗಿದ್ದ ಮಧುವನವನ್ನೇ ಅವರು ಹಾಳುಮಾಡಿರುವರೆಂದರೆ ಅವರು ಕಾರ್ಯವನ್ನು ಸಾಧಿಸಿರುವುದಂತೂ ನಿಜ. ಅವರನ್ನು ತಡೆಯಲು ಹೋದ ಕಾವಲುಗಾರರನ್ನು ಮೊಣಕಾಲುಗಳಿಂದಲೇ ಪ್ರಹರಿಸಿದ್ದಾರೆ. ಮಹಾಬಲಿಷ್ಠನಾದ ದಧಿಮುಖನನ್ನೂ ಅವರು ಗಣನೆಗೆ ತೆಗೆದುಕೊಂಡಿಲ್ಲ. ಇವನನ್ನು ಮಧುವನಕ್ಕೆ ಮುಖ್ಯರಕ್ಷಕ

ನನ್ನಾಗಿ ನಾವೇ ನಿಯಮಿಸಿದ್ದೆವು. ಹೀಗಿದ್ದರೂ ಅವರು ಮಧುವನವನ್ನು ಆಕ್ರಮಿಸಿರುವರೆಂದರೆ ನಿಶ್ಚಯವಾಗಿಯೂ ಅವರು ಸೀತೆಯನ್ನು ನೋಡಿಯೇ ಬಂದಿರಬೇಕು. ಇದರಲ್ಲಿ ಸಂದೇಹವೇ ಇಲ್ಲ. ಹನುಮಂತನಲ್ಲದೇ ಬೇರೆ ಯಾರೂ ಸೀತಾದೇವಿಯನ್ನು ಕಂಡಿಲ್ಲ. ಸೀತಾನ್ವೇಷಣೆಯ ಕಾರ್ಯವನ್ನು ಸಾಧಿಸಿರುವವನು ಹನುಮಂತನಲ್ಲದೇ ಬೇರೆ ಯಾವನೂ ಇರಲಾರನು.

**ಕಾರ್ಯಸಿದ್ಧಿರ್ಹನುಮತಿ ಮತಿಶ್ಚ ಹರಿಪುಙ್ಗವೇ ।**
**ವ್ಯವಸಾಯಶ್ಚ ವೀರ್ಯಂ ಚ ಶ್ರುತಂ ಚಾಪಿ ಪ್ರತಿಷ್ಠಿತಮ್ ॥೨೦॥**

ಹನುಮಂತನಲ್ಲಿ ವಿಜಯವನ್ನು ಸಾಧಿಸುವ ಛಲವೂ ಇದೆ. ಅದಕ್ಕೆ ತಕ್ಕುದಾದ ಬುದ್ಧಿಯೂ ಇದೆ. ಪ್ರಯತ್ನ, ಪರಾಕ್ರಮ ಮತ್ತು ವಿದ್ಯೆ–ಈ ಮೂರೂ ಅವನೊಬ್ಬನಲ್ಲಿಯೇ ಪ್ರತಿಷ್ಠಿತವಾಗಿದೆ.

**ಜಾಮ್ಬವಾನ್ಯತ್ರ ನೇತಾ ಸ್ಯಾದಙ್ಗದಶ್ಚ ಮಹಾಬಲಃ ।**
**ಹನುಮಾಂಶ್ಚಾಪ್ಯಧಿಷ್ಠಾತಾ ನ ತಸ್ಯ ಗತಿರನ್ಯಥಾ ॥೨೧॥**

ಜಾಂಬವಂತನು ಯಾವ ಸೈನ್ಯಕ್ಕೆ ನೇತಾರನಾಗಿರುವನೋ, ಅಂಗದನು ನಾಯಕನಾಗಿರುವನೋ, ಹನುಮಂತನು ಕಾರ್ಯನಿರ್ವಾಹಕನಾಗಿರುವನೋ–ಅಂತಹ ಸೈನ್ಯಕ್ಕೆ ವಿಜಯದ ಹೊರತು ಬೇರೇನೂ ಆಗಲು ಸಾಧ್ಯವೇ ಇಲ್ಲ.

ದಕ್ಷಿಣದಿಕ್ಕಿಗೆ ಸೀತಾದೇವಿಯನ್ನು ಹುಡುಕಿಕೊಂಡು ಹೋಗಿದ್ದ ಅಂಗದಪ್ರಮುಖರಾದ ವೀರರಾದ ವಾನರಶ್ರೇಷ್ಠರಿಂದ ಮಧುವನವು ಹಾಳಾಯಿತಲ್ಲವೇ! ಹೀಗವರು ಮಧುವನವನ್ನು ಹಾಳುಮಾಡಬೇಕಾದರೆ ಸೀತೆಯನ್ನು ನೋಡಿಯೇ ಬಂದಿರಬೇಕು. ಸೀತೆಯನ್ನು ನೋಡಿ ಹೃಷ್ಟರಾಗಿ ಬಂದಿರುವ ಆ ಕಪಿಶ್ರೇಷ್ಠರು ಮಧುವನವನ್ನು ಆಕ್ರಮಿಸಿ ಅದರಲ್ಲಿದ್ದ ಭೋಗ್ಯವಸ್ತುಗಳನ್ನು ಉಪಭೋಗಿಸಿದ್ದಾರೆ. ತಡೆಯಲು ಹೋದ ವನ ಪಾಲಕರನ್ನು ಕೆಳಕ್ಕೆ ಕೆಡವಿ ಮೊಣಕಾಲುಗಳಿಂದ ಪ್ರಹರಿಸಿದ್ದಾರೆ. ಮಧುರವಾಗಿ ಮಾತನಾಡುವ ದಧಿಮುಖನೆಂಬ ಹೆಸರಿನಿಂದ ವಿಖ್ಯಾತನಾಗಿರುವ ಈ ವಾನರನು ಈ ವಿಷಯವನ್ನು ತಿಳಿಸಲೆಂದೇ ಇಲ್ಲಿಗೆ ಬಂದಿದ್ದಾನೆ.

ಮಹಾಬಾಹುವೇ! ಲಕ್ಷ್ಮಣ! ಅವರು ಸೀತೆಯನ್ನು ನೋಡಿಯೇ ಬಂದಿದ್ದಾರೆ. ಅವರು ಕಾರ್ಯದ ಸಾಧನೆಯನ್ನು ಮಾಡಿಕೊಂಡು ಬಂದಿರು

ವುದರಿಂದಲೇ ಭಯವಿಲ್ಲದೇ ಮಧುವನ್ನೆಲ್ಲಾ ಕುಡಿದುಬಿಟ್ಟಿದ್ದಾರೆ. ಸುವಿಖ್ಯಾತರಾದ ಆ ವಾನರಶ್ರೇಷ್ಠರು ಸೀತಾದೇವಿಯನ್ನು ನೋಡದೆಯೇ ಬಂದಿದ್ದರೆ ಬ್ರಹ್ಮನಿಂದ ವರದ ರೂಪದಲ್ಲಿ ಕೊಡಲ್ಪಟ್ಟಿರುವ ಆ ಮಧುವನವನ್ನು ಖಂಡಿತವಾಗಿಯೂ ಹಾಳುಮಾಡುತ್ತಿರಲಿಲ್ಲ."

ಶ್ರೀರಾಮನೊಡನಿದ್ದ ಧರ್ಮಾತ್ಮನಾದ ಲಕ್ಷ್ಮಣನು ಸುಗ್ರೀವನ ಮುಖಾರವಿಂದದಿಂದ ಹೊರಟ ಕರ್ಣಾನಂದಕರವಾದ ಮಾತನ್ನು ಕೇಳಿ ಸಂತುಷ್ಟನಾದನು. ದಧಿಮುಖನಿಂದ ಕಾರ್ಯಸಾಧನೆಯ ಸೂಚಕವಾದ ಮಾತನ್ನು ಕೇಳಿ ರಾಮ-ಲಕ್ಷ್ಮಣರು ಸಂತಸಗೊಂಡರು. ಅನಂತರ ಪರಮ ಸಂತುಷ್ಟನಾದ ಸುಗ್ರೀವನು ವನರಕ್ಷಕನಾದ ದಧಿಮುಖನಿಗೆ ಹೇಳಿದನು :

"ದಧಿಮುಖನೇ! ಕಾರ್ಯವನ್ನು ಸಾಧಿಸಿಕೊಂಡು ಬಂದಿರುವ ಅಂಗದಪ್ರಮುಖರಾದ ವಾನರರು ಮಧುವನ್ನು ಪಾನಮಾಡಿದುದಕ್ಕಾಗಿ ನಾನು ಪ್ರೀತನಾಗಿದ್ದೇನೆ. ಕಾರ್ಯಸಿದ್ಧಿಯನ್ನು ಪಡೆದು ಬಂದಿರುವ ಅವರು ನಮ್ಮ ವಿಷಯದಲ್ಲಿ ತೋರಿರುವ ಅವಿನಯವನ್ನೂ ಮಧುವನದ ವಿನಾಶ ವನ್ನೂ ನಾವು ಕ್ಷಮಿಸಲೇಬೇಕು. ಆದುದರಿಂದ ಮಧುವನಕ್ಕೆ ನೀನು ಈಗಲೇ ಹೋಗು. ಹಿಂದಿನಂತೆಯೇ ವನವನ್ನು ರಕ್ಷಿಸಿಕೊಂಡಿರು. ಹನುಮಂತನೇ ಮುಂದಾಳಾಗಿರುವ ಎಲ್ಲ ಕಪಿನಾಯಕರನ್ನೂ ಈಗಲೇ ಇಲ್ಲಿಗೆ ಕಳುಹಿಸಿಕೊಡು. ಕಾರ್ಯವನ್ನು ಸಾಧಿಸಿ–ಮೃಗಗಳಿಗೆ ರಾಜರಾದ ಸಿಂಹಗಳಂತೆ–ದರ್ಪಿಷ್ಠರಾಗಿರುವ ಹನುಮಂತನೇ ಮೊದಲಾದ ಕಪಿಶ್ರೇಷ್ಠರನ್ನು ಶೀಘ್ರವಾಗಿ ನೋಡಲು ಬಯಸುತ್ತೇನೆ. ಸೀತೆಯನ್ನು ಕಾಣಲು ಅವರು ಮಾಡಿರುವ ಪ್ರಯತ್ನವನ್ನು ರಾಮ-ಲಕ್ಷ್ಮಣರೊಡನೆ ಕೇಳಬೇಕೆಂಬ ಕುತೂಹಲವುಳ್ಳವನಾಗಿದ್ದೇನೆ."

ಹೀಗೆ ಹೇಳಿ ಸುಗ್ರೀವನ ದಧಿಮುಖನನ್ನು ಕಳುಹಿಸಿಕೊಟ್ಟನು.

ರಾಮ-ಲಕ್ಷ್ಮಣರಿಬ್ಬರೂ ಒಳ್ಳೆಯ ಸಮಾಚಾರವನ್ನು ಕೇಳಿ ತಮ್ಮ ಮನೋರಥವು ಫಲಿಸಿತೆಂದು ಸಂತೋಷದಿಂದ ಪುಲಕಿತರಾದರು. ಅವರ ಕಣ್ಣುಗಳು ಅರಳಿದ್ದುವು. ಅಂತಹ ರಾಮ-ಲಕ್ಷ್ಮಣರನ್ನು ನೋಡಿ ಸುಗ್ರೀವನ ಅಂಗಾಂಗಗಳೆಲ್ಲವೂ ಸಂತುಷ್ಟವಾಗಿರುವಂತೆ ಕಾಣುತ್ತಿದ್ದುವು. ಅದರಿಂದ

ಸುಗ್ರೀವನು ಕಾರ್ಯದ ಸಿದ್ಧಿಯಾಗಿರುವುದೆಂದೂ ಮತ್ತು ವಿಜಯವು ಹಸ್ತಗತವಾಯಿತೆಂದೂ ಭಾವಿಸಿ ಆನಂದಪಟ್ಟನು.

೬೩ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೬೪ನೆಯ ಸರ್ಗ

## ದಧಿಮುಖನು ಸುಗ್ರೀವನ ಸಂದೇಶವನ್ನು ತಿಳಿಸಿ ಅಂಗದನೇ ಮುಂತಾದವರನ್ನು ಕಿಷ್ಕಿಂಧೆಗೆ ಕಳುಹಿಸಿಕೊಟ್ಟುದು : ಹನುಮಂತನು ಶ್ರೀರಾಮನಿಗೆ ಪ್ರಣಾಮಮಾಡಿ ಸೀತಾದರ್ಶನದ ಸಮಾಚಾರವನ್ನು ತಿಳಿಸಿದುದು

**ಸುಗ್ರೀವೇಣೈವಮುಕ್ತಸ್ತು ಹೃಷ್ಟೋ ದಧಿಮುಖಃ ಕಪಿಃ ।**
**ರಾಘವಂ ಲಕ್ಷ್ಮಣಂ ಚೈವ ಸುಗ್ರೀವಂ ಚಾಭ್ಯವಾದಯತ್ ॥೧॥**

ಸುಗ್ರೀವನಿಂದ ಹೀಗೆ ನಿರ್ದೇಶಿಸಲ್ಪಟ್ಟ ದಧಿಮುಖನು ಪರಮಸಂತುಷ್ಟನಾಗಿ ರಾಮ-ಲಕ್ಷ್ಮಣರಿಗೂ ಸುಗ್ರೀವನಿಗೂ ಅಭಿವಾದನಮಾಡಿದನು.

ಬಳಿಕ ಶೂರರರಾದ ವಾನರರೊಡನೆ ಆಕಾಶಕ್ಕೆ ಹಾರಿದನು. ಹಿಂದವನು ಹೇಗೆ ಬಂದಿದ್ದನೋ ಹಾಗೆಯೇ ತ್ವರಿತವಾಗಿ ಹಾರಿಹೋಗಿ ಕೆಳಕ್ಕಿಳಿದು ಸುಪ್ರಸಿದ್ಧವಾದ ಆ ಮಧುವನವನ್ನು ಪ್ರವೇಶಿಸಿದನು. ಆ ವೇಳೆಗೆ ಕಪಿನಾಯಕರು ಕುಡಿದಿದ್ದ ಮಧುವನ್ನು ಮೂತ್ರದ ಮೂಲಕ ವಿಸರ್ಜಿಸುತ್ತಿದ್ದರು. ಎಲ್ಲರ ಮತ್ತೂ ಇಳಿದುಹೋಗಿದ್ದಿತು. ಹಾಗೆ ಸ್ವಸ್ಥಚಿತ್ತರಾಗಿದ್ದ ಅವರನ್ನು ದಧಿಮುಖನು ನೋಡಿದನು. ಬಳಿಕ ಕೈಗಳೆರಡನ್ನೂ ಜೋಡಿಸಿಕೊಂಡೇ ಕಪಿನಾಯಕರ ಬಳಿಗೆ ಹೋದನು. ಅತ್ಯಂತಸಂತಸದ ಮುಖಭಾವದಿಂದ ದಧಿಮುಖನು ಅಂಗದನಿಗೆ ಹೇಳಿದನು :

“ಸೌಮ್ಯನೇ! ಅಜ್ಞಾನದ ಕಾರಣದಿಂದಾಗಿ ಈ ಮಧುವನದ ರಕ್ಷಕರು ಕೋಪಗೊಂಡು ನಿಮ್ಮೆಲ್ಲರನ್ನೂ ತಡೆಯಲು ಪ್ರಯತ್ನಿಸಿದರು. ಹೀಗೆ ಅವರು ತಿಳಿಯದೇ ನಿಮ್ಮನ್ನು ತಡೆಯಲು ಪ್ರಯತ್ನಿಸಿದುದಕ್ಕಾಗಿ ನೀನು ನನ್ನ ಮೇಲಾಗಲೀ ಇವರ ಮೇಲಾಗಲೀ ಕೋಪಗೊಳ್ಳಬಾರದು. ಬಹಳ ದೂರ ಪ್ರಯಾಣಮಾಡಿದ ಕಾರಣದಿಂದ ನೀನು ಬಹಳವಾಗಿ ಬಳಲಿರುವೆ. ನೀನೇ ಈ ಮಧುವನಕ್ಕೆ ಯುವರಾಜನೂ ಒಡೆಯನೂ ಆಗಿರುವೆ. ಆದುದರಿಂದ

ನಿನ್ನದೇ ಆಗಿರುವ ಮಧುವನ್ನು ನೀನು ಯಥೇಚ್ಛವಾಗಿ ಕುಡಿಯಬಹುದು. ನಾನು ಕೇವಲ ಮೂರ್ಖತನದಿಂದ ನಿನ್ನ ಮೇಲೆ ಕೋಪಗೊಂಡೆನು. ಅದನ್ನು ನೀನು ಕ್ಷಮಿಸುವುದು ಉಚಿತವಾಗಿದೆ. ಹಿಂದೆ ಕಪಿಗಳ ಸಮೂಹಕ್ಕೆ ಸ್ವಾಮಿಯಾಗಿದ್ದ ವಾಲಿಯು ಹೇಗೆ ನನ್ನ ಸ್ವಾಮಿಯೂ ಆಗಿದ್ದನೋ ಹಾಗೆಯೇ ನೀನೂ ನನಗೆ ಸ್ವಾಮಿಯಾಗಿರುವೆ. ಸುಗ್ರೀವನೂ ನನ್ನ ಸ್ವಾಮಿಯಾಗಿರುವನು. ನಿಮ್ಮಿಬ್ಬರಿಗಿಂತಲೂ ಬೇರೆಯ ನಾಯಕರು ನನಗಿರುವುದಿಲ್ಲ. ನಾನು ನಿನ್ನ ಚಿಕ್ಕಪ್ಪನ ಬಳಿಗೆ ಹೋಗಿ ನೀವೆಲ್ಲರೂ ಇಲ್ಲಿಗೆ ಬಂದಿರುವುದನ್ನು ಹೇಳಿದೆನು. ಈ ವಾರ್ತೆಯನ್ನು ಕೇಳಿ ನಮ್ಮ ರಾಜನು ಸಂತಸಗೊಂಡನು. ನೀವು ಈ ಮಧುವನವನ್ನು ಹಾಳುಮಾಡಿರುವ ವಾರ್ತೆಯನ್ನು ಕೇಳಿಯೂ ಅವನು ನಿಮ್ಮ ವಿಷಯದಲ್ಲಿ ಕೋಪಗೊಳ್ಳಲಿಲ್ಲ. ನೀವು ಬಂದಿರುವ ವಾರ್ತೆಯನ್ನು ಕೇಳಿ ನಿಮ್ಮ ಚಿಕ್ಕಪ್ಪನು ಸಂತುಷ್ಟನಾಗಿ–'ಶೀಘ್ರಂ ಪ್ರೇಷಯ ಸರ್ವಾಂಸ್ತಾನ್' 'ಅವರೆಲ್ಲರನ್ನೂ ಬೇಗನೆ ಇಲ್ಲಿಗೆ ಕಳುಹಿಸು'–ಎಂದು ನನಗೆ ಆಜ್ಞಾಪಿಸಿರುವನು."

ದಧಿಮುಖನ ಮೃದುವಾದ ಆ ಮಾತನ್ನು ಕೇಳಿ ವಾಕ್ಯವಿಶಾರದನಾದ ಅಂಗದನು ಎಲ್ಲ ಕಪಿನಾಯಕರಿಗೂ ಹೇಳಿದನು :

"ಕಪಿನಾಯಕರೇ! ಸೀತೆಯನ್ನು ಕಂಡುಬಂದಿರುವ ವೃತ್ತಾಂತವು ಶ್ರೀರಾಮನಿಗೂ ತಿಳಿದಂತಿದೆ. ಏಕೆಂದರೆ : ಈ ದಧಿಮುಖನೂ ಅತ್ಯಂತ ಪ್ರಹೃಷ್ಟನಾಗಿ ನಮ್ಮೊಡನೆ ಮಾತನಾಡುತ್ತಿದ್ದಾನೆ. ಈ ಕಾರಣದಿಂದ ಶ್ರೀರಾಮನೂ ಈ ವಾರ್ತೆಯನ್ನು ಕೇಳಿರಬಹುದೆಂದು ನಾನು ಊಹಿಸು ತ್ತೇನೆ. ಕಾರ್ಯವು ಮುಗಿದನಂತರ ನಾವು ಇಲ್ಲಿಯೇ ನಿಲ್ಲುವುದು ಯೋಗ್ಯ ವಾಗಿ ಕಾಣುವುದಿಲ್ಲ. ಕಪಿಗಳೆಲ್ಲರೂ ಮಧುವನ್ನು ಯಥೇಚ್ಛವಾಗಿ ಪಾನ ಮಾಡಿ ವಿಶ್ರಾಂತಿಯನ್ನೂ ಪಡೆದಿರುವರು. ನಮ್ಮ ರಾಜನಾದ ಸುಗ್ರೀವ ನಿದ್ದೆಡೆಗೆ ಹೋಗಬೇಕಾದ ಕಾರ್ಯವು ಮಾತ್ರ ಉಳಿದಿದೆ. ನೀವೆಲ್ಲರೂ ಒಟ್ಟಾಗಿ ಈಗ ಹೇಗೆ ಹೇಳುವಿರೋ ಹಾಗೆಯೇ ನಾನು ನಡೆದುಕೊಳ್ಳುವೆನು. ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ನಿಮ್ಮ ಅಧೀನನಾಗಿದ್ದು ನೀವು ಹೇಳಿ ದಂತೆ ಮಾಡುವೆನು. ನಾನು ಯುವರಾಜನೇ ಆಗಿದ್ದರೂ ನಿಮಗೆ ಆಜ್ಞೆ ಯನ್ನು ನೀಡುವಷ್ಟು ಸ್ವತಂತ್ರನಲ್ಲ. ಮೇಲಾಗಿ ನಿಯೋಜಿಸಿದ ಕಾರ್ಯದಲ್ಲಿ

ಕೃತಕೃತ್ಯರಾಗಿರುವ ನಿಮ್ಮನ್ನು–'ಹೀಗೆಯೇ ನಡೆದುಕೊಳ್ಳಬೇಕು'–ಎಂದು ಬಲಾತ್ಕರಿಸುವುದೂ ಸರಿಯಲ್ಲ."

ಅಂಗದನ ಉತ್ತಮೋತ್ತಮವಾದ ಮಾತನ್ನ ಕೇಳಿ ಕಪಿನಾಯಕರೆಲ್ಲರೂ ಪರಮಹೃಷ್ಟರಾಗಿ ಹೇಳಿದರು :

"ಯುವರಾಜ! ಈ ಮಾತುಗಳು ನಿನಗೆ ಅನುರೂಪವಾಗಿಯೇ ಇವೆ. ಪ್ರಭುವಾಗಿದ್ದುಕೊಂಡು ಯಾವನೊಬ್ಬನೂ ಇಂತಹ ಮಾತುಗಳನ್ನು ಹೇಳುವುದಿಲ್ಲ. ಐಶ್ವರ್ಯಮದದ ಮತ್ತಿನಿಂದ–ಎಲ್ಲವೂ ನನ್ನಿಂದಲೇ–ಎಂದು ಭಾವಿಸುತ್ತಾನೆ. ಈ ನಿನ್ನ ವಿನಯವು ಮುಂದೆ ನಿನಗೆ ಶುಭೋದಯವು ಬರಲಿರುವುದನ್ನು ಸೂಚಿಸುತ್ತದೆ. ಕಪಿಶ್ರೇಷ್ಠರಿಗೆ ಒಡೆಯನಾದ ಅವ್ಯಯನಾದ ಸುಗ್ರೀವನಿರುವಲ್ಲಿಗೆ ಹೋಗಲು ನಾವೆಲ್ಲರೂ ಉತ್ಸುಕರಾಗಿದ್ದೇವೆ. ಆದರೆ ನಿನ್ನ ಅಪ್ಪಣೆಯಿಲ್ಲದೆ ಕಪಿನಾಯಕರಾರಿಗೂ ಒಂದು ಹೆಜ್ಜೆಯನ್ನು ಮುಂದಿಡಲು ಕೂಡ ಸಾಧ್ಯವಾಗುವುದಿಲ್ಲ. ಇದನ್ನು ನಾವು ಸತ್ಯವಾಗಿ ಹೇಳುತ್ತಿದ್ದೇವೆ."

ಹೀಗೆ ಅವರೆಲ್ಲರೂ ಒಕ್ಕೊರಲಿನಿಂದ ಹೇಳಲು ಅಂಗದನು–'**ಸಾಧು ಗಚ್ಛಾಮಃ** ' 'ಒಳ್ಳೆಯದ ; ನಾವಿನ್ನು ಹೊರಡೋಣ'–ಎಂದು ಅವರೆಲ್ಲರಿಗೂ ಸುಗ್ರೀವನ ಬಳಿಗೆ ಹೋಗಲು ಅನುಮತಿಯನ್ನಿತ್ತನು. ಒಡನೆಯೇ ಮಹಾಬಲಿಷ್ಠರಾದ ಕಪಿನಾಯಕರೆಲ್ಲರೂ ಆಕಾಶಕ್ಕೆ ಹಾರಿದರು. ಮೊದಲೊಬ್ಬನು ಹಾರುತ್ತಲೇ ಅವನನ್ನನುಸರಿಸಿ ಎಲ್ಲ ವಾನರರೂ ಹಾರಿದರು. ಯಂತ್ರದಿಂದ ಚಿಮ್ಮಲ್ಪಟ್ಟ ಕಲ್ಲುಬಂಡೆಗಳಂತೆ ಆ ಕಪಿನಾಯಕರು ಅವಕಾಶವೇ ಇಲ್ಲದ ರೀತಿಯಲ್ಲಿ ಆಕಾಶವನ್ನು ತುಂಬಿಬಿಟ್ಟರು. ವೇಗವಂತರಾದ ಅವರು ಅಂಗದನನ್ನೂ ಮತ್ತು ಹನುಮಂತನನ್ನೂ ಮುಂದೆಮಾಡಿಕೊಂಡು ವಾಯುವಿನಿಂದ ಪ್ರೇರಿತವಾದ ಮೇಘಗಳಂತೆ ಗಟ್ಟಿಯಾಗಿ ಶಬ್ದ ಮಾಡುತ್ತಾ ಸುಗ್ರೀವನ ಬಳಿಗೆ ಸಾರಿದರು. ಅಂಗದನು ಆಕಾಶದಲ್ಲಿ ಕಪಿನಾಯಕರೊಡನೆ ಆಗಮಿಸುತ್ತಿರಲು ವಾನರೇಶ್ವರನಾದ ಸುಗ್ರೀವನು ಸೀತಾವಿರಹಶೋಕದಿಂದ ಪರಿತಪಿಸುತ್ತಿದ್ದ ಕಮಲಾಕ್ಷನಾದ ಶ್ರೀರಾಮನಿಗೆ ಹೇಳಿದನು :

"ರಾಘವ! ಸಮಾಧಾನವನ್ನು ಹೊಂದು. ನಿನಗೆ ಮಂಗಳವಾಗಲಿ.

ಈಗ ಇಲ್ಲಿಗೆ ಆಗಮಿಸುತ್ತಿರುವ ಕಪಿನಾಯಕರು ಸೀತೆಯನ್ನು ನೋಡಿ ಕೊಂಡು ಬಂದಿರುವರೆಂಬುದರಲ್ಲಿ ಸಂಶಯವೇ ಇಲ್ಲ. ಅವರೇನಾದರೂ ಸೀತೆಯನ್ನು ಕಾಣದೆಯೇ ಇದ್ದಿದ್ದರೆ ನಿರ್ದಿಷ್ಟವಾಗಿದ್ದ ಸಮಯವನ್ನು ಮೀರಿ ಅವರಿಲ್ಲಿಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ಅಂಗದನ ಪ್ರಹರ್ಷಸೂಚಕವಾದ ಮುಖಭಾವದಿಂದಲೂ ಅವರು ಕೃತಕೃತ್ಯರಾಗಿಯೇ ಬಂದಿರುವರೆಂದು ನಾನು ತಿಳಿಯುತ್ತೇನೆ. ಕಾರ್ಯವೇನಾದರೂ ಕೆಟ್ಟುಹೋಗಿದ್ದರೆ ಅಥವಾ ಅವರು ಕೃತಕೃತ್ಯರಾಗದಿದ್ದರೆ ಅವರಿಲ್ಲಿಗೆ ಖಂಡಿತವಾಗಿಯೂ ಬರುತ್ತಿರಲಿಲ್ಲ. ಮಹಾಬಾಹುವಾದ, ಯುವರಾಜನಾದ ಅಂಗದನು ಹಾರುವವರಲ್ಲಿ ಶ್ರೇಷ್ಠನು. ವಾನರರೇನಾದರೂ ಕೃತಕೃತ್ಯರಾಗದೇ ಇದ್ದಿದ್ದರೆ ಹೀಗೆ ಅವರು ಅಟ್ಟಹಾಸದಿಂದ ಬರಲು ಸಾಧ್ಯವಾಗುತ್ತಿರಲಿಲ್ಲ. ಆಗ ಅಂಗದನು ದೈನ್ಯವಾದ ಮುಖಭಾವವುಳ್ಳವನಾಗಿ, ಭ್ರಾಂತವೂ–ಚಂಚಲವೂ ಆದ ಮನಸ್ಸಿನಿಂದ ಕೂಡಿರುತ್ತಿದ್ದನು. ಅವರೇನಾದರೂ ಸೀತೆಯನ್ನು ಕಾಣದೇ ಇಲ್ಲಿಗೆ ಬಂದಿದ್ದರೆ ಪಿತೃ-ಪಿತಾಮಹಸಂಬಂಧವಾದ, ಹಿಂದಿನವರಿಂದಲೂ ಅನುಕ್ರಮವಾಗಿ ರಕ್ಷಿಸಲ್ಪಡುತ್ತಿರುವ ಮಧುವನವನ್ನು ಅವರು ಹೀಗೆ ಧ್ವಂಸಮಾಡುತ್ತಿರಲಿಲ್ಲ.

ಸುವ್ರತನೇ! ನಿನ್ನನ್ನು ಹಡೆದ ಕೌಸಲ್ಯಾದೇವಿಯು ನಿಶ್ಚಯವಾಗಿಯೂ ಸುಪುತ್ರವತಿಯೇ ಆಗಿದ್ದಾಳೆ. ಸಮಾಧಾನವನ್ನು ಹೊಂದು. ಅಂಗದಾದಿಗಳು ಸೀತಾದೇವಿಯನ್ನು ಕಂಡುಬಂದಿರುವುದರಲ್ಲಿ ಸಂದೇಹವೇ ಇಲ್ಲ ಹನುಮಂತನಲ್ಲದೇ ಬೇರೆ ಯಾರೂ ಸೀತಾದೇವಿಯನ್ನು ಕಂಡಿಲ್ಲ. ಈ ಕಾರ್ಯಸಾಧನೆಯಲ್ಲಿ ಹನುಮಂತನಿಗಿಂತಲೂ ಬೇರೆಯವನು ಕಾರಣನಾಗಲಾರನು. ಏಕೆಂದರೆ : ಹನುಮಂತನಲ್ಲಿ ಕಾರ್ಯಸಿದ್ಧಿಯ ಸಾಮರ್ಥ್ಯವು ಇದೆ ಮತ್ತು ಕಾರ್ಯಸಿದ್ಧಿಗೆ ಬೇಕಾಗುವ ಉತ್ತಮವಾದ ಬುದ್ಧಿಯೂ ಇದೆ. ಸತತ ಪ್ರಯತ್ನ, ಶೌರ್ಯ ಮತ್ತು ವಿದ್ಯೆ–ಇವೆಲ್ಲವೂ ಹನುಮಂತನಲ್ಲಿಯೇ ಪ್ರತಿಷ್ಠಿತವಾಗಿವೆ. ಯಾವ ಕಾರ್ಯಸಾಧನೆಯಲ್ಲಿ ಜಾಂಬವಂತನು ನೇತಾರನೂ, ಅಂಗದನು ಸೇನಾನಾಯಕನೂ, ಹನುಮಂತನು ಕಾರ್ಯಸಾಧಕನೂ ಆಗಿರುವರೋ–ಅಂತಹ ಕಾರ್ಯವು ಸಿದ್ಧಿಸಲೇಬೇಕು. ಸಿದ್ಧಿಸದಿರುವ ಸಾಧ್ಯತೆಯೇ ಇಲ್ಲ. ಇನ್ನಾದರೂ ನೀನು ಚಿಂತಿಸಬೇಡ. ಹೆಚ್ಚಿನ ದರ್ಪದಿಂದ ಕೂಡಿ ಕಪಿನಾಯಕರು ಇಲ್ಲಿಗೆ ಒಟ್ಟಾಗಿ ಬರುತ್ತಿರುವರು. ಅವರು ಕೃತಕೃತ್ಯರಾಗಿರದಿದ್ದರೆ

ಹೀಗೆ ದರ್ಪಿಷ್ಠರಾಗಿ ಕೋಲಾಹಲಮಾಡುತ್ತಾ ಬರುತ್ತಿರಲಿಲ್ಲ. ಅವರು ಮಾಡಿರುವ ಮಧುವನದ ವಿನಾಶದಿಂದಲೂ ಮತ್ತು ಮಧುಪಾನದಿಂದಲೂ ಅವರು ಕೃತಕೃತ್ಯರಾಗಿರುವರೆಂದೇ ನಾನು ತಿಳಿಯುತ್ತೇನೆ.”

ಸುಗ್ರೀವನು ಶ್ರೀರಾಮನಿಗೆ ಹೀಗೆ ಸಮಾಧಾನವನ್ನು ಹೇಳುತ್ತಿರುವಾಗಲೇ ಕಾರ್ಯವು ಸಿದ್ಧಿಸಿತೆಂಬುದನ್ನು ಹೇಳುತ್ತಿರುವರೋ ಎಂಬಂತೆ ಗರ್ಜನೆಮಾಡಿಕೊಂಡು ಕಿಷ್ಕಿಂಧಾಪಟ್ಟಣದ ಕಡೆಗೆ ಬರುತ್ತಿದ್ದ ಕಪಿನಾಯಕರ ಕಿಲ-ಕಿಲಾಶಬ್ದಗಳನ್ನು ಸುಗ್ರೀವನು ಹತ್ತಿರದಿಂದಲೇ ಕೇಳಿದನು. ಕಪಿಶ್ರೇಷ್ಠರ ನಿನಾದವನ್ನು ಕೇಳಿ ಸುಗ್ರೀವನ ಮನಸ್ಸು ಪರಮಸಂತೋಷಗೊಂಡಿತು. ಆತನ ಬಾಲವು ಉದ್ದವಾಗಿ ನಿಮಿರಿ ನಿಂತು ತುದಿಯಲ್ಲಿ ಬಗ್ಗಿಕೊಂಡಿದ್ದಿತು. ಶ್ರೀರಾಮನ ದರ್ಶನಾಕಾಂಕ್ಷಿಗಳಾಗಿದ್ದ ಆ ಎಲ್ಲ ಕಪಿನಾಯಕರೂ ಅಂಗದನನ್ನೂ ಹನುಮಂತನನ್ನೂ ಮುಂದೆಮಾಡಿಕೊಂಡು ಆಗಮಿಸಿದರು. ಸಂತೋಷಭರಿತರಾಗಿದ್ದ ಎಲ್ಲರೂ ಶ್ರೀರಾಮನ ಮತ್ತು ಕಪಿರಾಜನಾದ ಸುಗ್ರೀವನ ಬಳಿ ಬಂದಿಳಿದರು. ಮಹಾಬಾಹುವಾದ ಹನುಮಂತನು ಶ್ರೀರಾಮನಿಗೂ ಸುಗ್ರೀವನಿಗೂ ತಲೆಬಾಗಿ ನಮಸ್ಕರಿಸಿ ಸೀತಾದೇವಿಯು ಪಾತಿವ್ರತ್ಯನಿಷ್ಠಳಾಗಿದ್ದಾಳೆಂದು ಶ್ರೀರಾಮನಿಗೆ ಹೇಳಿದನು. ಹನುಮಂತನ ಮುಖಾರವಿಂದದಿಂದ–'**ದೃಷ್ಟಾ ದೇವೀ**' 'ಸೀತಾದೇವಿಯನ್ನು ಕಂಡೆನು'– ಎಂಬ ಅಮೃತೋಪಮವಾದ ಮಾತನ್ನು ಕೇಳಿ ರಾಮ-ಲಕ್ಷ್ಮಣರಿಬ್ಬರೂ ಪರಮಸಂತುಷ್ಟರಾದರು. ಹನುಮಂತನ ವಿಷಯದಲ್ಲಿ ನಿಶ್ಚಿತವಾದ ಅಭಿಪ್ರಾಯವನ್ನು ಹೊಂದಿದ್ದ ಮತ್ತು ಅವನ ಕಾರ್ಯದಿಂದ ಸುಪ್ರೀತ ನಾಗಿದ್ದ ಸುಗ್ರೀವನನ್ನು ಲಕ್ಷ್ಮಣನು ಅತ್ಯಂತಗೌರವಭಾವನೆಯಿಂದ ಕಂಡನು. ಶತ್ರುಹಂತಕನಾದ ಶ್ರೀರಾಮನು ಹನುಮಂತನ ವಿಷಯದಲ್ಲಿ ಅಪಾರವಾದ ಪ್ರೀತಿಯನ್ನು ಹೊಂದಿ ಅವನನ್ನು ಅತ್ಯಂತಗೌರವಭಾವದಿಂದ ವೀಕ್ಷಿಸಿದನು.

ಅರವತ್ತನಾಲ್ಕನೆಯ ಸರ್ಗವು ಮುಗಿಯಿತು.

## ಹನುಮಂತನು ಶ್ರೀರಾಮನಿಗೆ ಸೀತೆಯ ಸಮಾಚಾರವನ್ನು ತಿಳಿಸಿದುದು

**ತತಃ ಪ್ರಸ್ರವಣಂ ಶೈಲಂ ತೇ ಗತ್ವಾ ಚಿತ್ರಕಾನನಮ್ ।**
**ಪ್ರಣಮ್ಯ ಶಿರಸಾ ರಾಮಂ ಲಕ್ಷ್ಮಣಂ ಚ ಮಹಾಬಲಮ್ ॥೧॥**

**ಯುವರಾಜಂ ಪುರಸ್ಕೃತ್ಯ ಸುಗ್ರೀವಮಭಿವಾದ್ಯ ಚ ।**
**ಪ್ರವೃತ್ತಿಮಥ ಸೀತಾಯಾಃ ಪ್ರವಕ್ತುಮುಪಚಕ್ರಮುಃ ॥೨॥**

ಬಳಿಕ ಕಪಿನಾಯಕರು ಚಿತ್ರತರವಾದ ಕಾಡುಗಳಿಂದ ಕೂಡಿದ್ದ ಪ್ರಸ್ರವಣಪರ್ವತಕ್ಕೆ ಯುವರಾಜನಾದ ಅಂಗದನನ್ನು ಮುಂದೆಮಾಡಿ ಕೊಂಡು ಹೋಗಿ, ಶ್ರೀರಾಮನಿಗೂ ಮಹಾಬಲನಾದ ಲಕ್ಷ್ಮಣನಿಗೂ ತಲೆಬಾಗಿ ನಮಸ್ಕರಿಸಿ ರಾಜನಾದ ಸುಗ್ರೀವನಿಗೂ ಅಭಿವಾದನಮಾಡಿ ಸೀತೆಯ ವಾರ್ತೆಯನ್ನು ಹೇಳಲು ಉಪಕ್ರಮಿಸಿದರು :

ರಾವಣನ ಅಂತಃಪುರಕ್ಕೆ ಸೇರಿದ ಅಶೋಕವನದಲ್ಲಿ ಸೀತೆಯನ್ನು ಬಂಧಿಸಿಟ್ಟಿರುವುದು ; ಅಲ್ಲಿ ಅವಳನ್ನು ರಾಕ್ಷಸಿಯರು ಸುತ್ತುವರಿದು ಭಯಪಡಿಸುತ್ತಿರುವುದು ; ಸೀತೆಗೆ ಶ್ರೀರಾಮನ ಮೇಲಿರುವ ಅನುರಾಗ ; ತನ್ನ ವಶ ಳಾಗಲು ಸೀತೆಗೆ ರಾವಣನು ಕೊಟ್ಟಿರುವ ಕಾಲದ ಗಡುವು–ಈ ಎಲ್ಲವನ್ನೂ ಕಪಿನಾಯಕರು ಶ್ರೀರಾಮನ ಸನ್ನಿಧಿಯಲ್ಲಿ ಅರಿಕೆಮಾಡಿಕೊಂಡರು. ವೈದೇಹಿಯು ಕುಶಲಳಾಗಿರುವಳೆಂಬುದನ್ನು ಕೇಳಿ ಶ್ರೀರಾಮನು ಪ್ರಶ್ನಿಸಿದನು:

**ಕ್ವ ಸೀತಾ ವರ್ತತೇ ದೇವೀ ಕಥಂ ಚ ಮಯಿ ವರ್ತತೇ ।**
**ಏತನ್ಮೇ ಸರ್ವಮಾಖ್ಯಾತ ವೈದೇಹೀಂ ಪ್ರತಿ ವಾನರಾಃ ॥೩॥**

"ವಾನರಶ್ರೇಷ್ಠರೇ! ಸೀತಾದೇವಿಯು ಎಲ್ಲಿದ್ದಾಳೆ? ನನ್ನ ವಿಷಯ ದಲ್ಲಿ ಹೇಗಿದ್ದಾಳೆ? ಯಾವ ಭಾವನೆಯನ್ನು ಹೊಂದಿದ್ದಾಳೆ? ವೈದೇಹಿಯ ಸಂಬಂಧವಾಗಿ ಈ ಎಲ್ಲ ವಿಷಯಗಳನ್ನೂ ವಿಶದವಾಗಿ ಹೇಳಿರಿ."

ಶ್ರೀರಾಮನ ಸನ್ನಿಧಿಯಲ್ಲಿದ್ದ ಕಪಿನಾಯಕರು ಸೀತಾದೇವಿಯ ವೃತ್ತಾಂತವನ್ನು ಚೆನ್ನಾಗಿ ತಿಳಿದಿದ್ದ ಹನುಮಂತನನ್ನು ಶ್ರೀರಾಮನ ಪ್ರಶ್ನೆಗಳಿಗೆ ಉತ್ತರಿಸುವಂತೆ ಪ್ರಚೋದಿಸಿದರು.

ವಾಕ್ಯಜ್ಞನಾದ, ವಾಯುಪುತ್ರನಾದ ಹನುಮಂತನು–ಕಪಿನಾಯಕರು ಹೇಳಿದುದನ್ನು ಕೇಳಿ, ಸೀತಾದೇವಿಗೂ ಅವಳಿದ್ದ ದಕ್ಷಿಣದಿಕ್ಕಿಗೂ ತಲೆಬಾಗಿ ನಮಸ್ಕರಿಸಿ ಸೀತೆಯ ದರ್ಶನವು ತನಗೆ ಹೇಗಾಯಿತೆಂಬುದನ್ನು ಹೇಳ ತೊಡಗಿದನು.

ಸೀತೆಯು ಗುರುತಿಗಾಗಿ ಕೊಟ್ಟಿದ್ದ ಪ್ರಕಾಶಮಾನವಾಗಿ ಬೆಳಗುತ್ತಿದ್ದ ಸುವರ್ಣಮಯವಾದ ಚೂಡಾಮಣಿಯನ್ನು ಶ್ರೀರಾಮನಿಗೆ ಸಮರ್ಪಿಸಿ ಕೈಮುಗಿದು ನಿಂತಿದ್ದ ಹನುಮಂತನು ಸೀತಾನ್ವೇಷಣೆಯ ಸಂಗತಿಯನ್ನು ಮೊದಲಿನಿಂದಲೂ ಹೇಳತೊಡಗಿದನು.

"ಪ್ರಭುವೇ! ನಾನು ನೂರು ಯೋಜನಗಳಷ್ಟು ವಿಸ್ತಾರವಾಗಿದ್ದ ದಕ್ಷಿಣಸಮುದ್ರವನ್ನು ದಾಟಿ ಸಮುದ್ರದ ಆಚೆಯ ತೀರಕ್ಕೆ ಹೋದೆನು. ಸೀತಾದೇವಿಯನ್ನು ನೋಡುವ ಆಕಾಂಕ್ಷೆಯಿಂದ ಅವಳನ್ನು ಎಲ್ಲ ಕಡೆಗಳಲ್ಲೂ ಹುಡುಕುತ್ತಲೇ ಹೋಗುತ್ತಿದ್ದೆನು. ದಕ್ಷಿಣಸಮುದ್ರದ ದಕ್ಷಿಣತೀರದಲ್ಲಿ ದುರಾತ್ಮನಾದ ರಾವಣನ ಆಡಳಿತಕ್ಕೆ ಒಳಪಟ್ಟಿರುವ ಲಂಕಾ ಎಂಬ ಹೆಸರಿನ ಪಟ್ಟಣವಿದೆ. ಅಲ್ಲಿ ರಾವಣನ ಅಂತಃಪುರಕ್ಕೆ ಸೇರಿದ ಅಶೋಕವನದಲ್ಲಿದ್ದ ಸಾಧ್ವಿಯಾದ ಸೀತಾದೇವಿಯನ್ನು ನಾನು ಕಂಡೆನು. ಸೀತಾದೇವಿಯು ತನ್ನ ಮನೋರಥಗಳೆಲ್ಲವನ್ನೂ ನಿನ್ನಲ್ಲಿಯೇ ಮುಡುಪಾಗಿಟ್ಟು ಪ್ರಾಣಗಳನ್ನು ಧರಿಸಿರುವಳು. ನಾನು ನೋಡಿದ ಸಮಯದಲ್ಲಿ ಸೀತಾದೇವಿಯು ರಾಕ್ಷಸಿ ಯರ ಮಧ್ಯದಲ್ಲಿದ್ದಳು. ಪ್ರಮದಾವನದಲ್ಲಿ ಸುತ್ತುವರಿದು ಕುಳಿತಿದ್ದ ಘೋರ ರೂಪಿಣಿಯರಾದ ಆ ರಾಕ್ಷಸಿಯರು ಸೀತಾದೇವಿಯನ್ನು ರಕ್ಷಿಸುತ್ತಾ ಬಾರಿ-ಬಾರಿಗೂ ಭಯಪಡಿಸುತ್ತಿದ್ದರು. ಸುಖವಾಗಿರಲು ಯೋಗ್ಯಳಾದ ಅವಳು ನಿನ್ನ ವಿಯೋಗದಿಂದಾಗಿ ಅತ್ಯಂತದುಃಖಿತೆಯಾಗಿರುವಳು. ರಾವಣನ ಅಂತಃ ಪುರದಲ್ಲಿ ಬಂದಿಯಾಗಿರುವ ಅವಳನ್ನು ರಾಕ್ಷಸಿಯರು ಪಹರೆಕಾಯುತ್ತಿದ್ದಾರೆ.

ಸೀತಾದೇವಿಯು ಜಡೆಯನ್ನೂ ಹೆಣೆದುಕೊಳ್ಳದೇ ತಲೆಗೂದಲನ್ನು ನೀಳವಾಗಿ ಬಿಟ್ಟುಕೊಂಡಿರುವಳು. ದೀನೆಯಾಗಿರುವಳು. ನಿನ್ನನ್ನೇ ಯಾವಾ ಗಲೂ ಚಿಂತಿಸುತ್ತಿರುವಳು. ನೆಲದ ಮೇಲೆ ಮಲಗುವಳು. ಹಿಮಗಾಲದ ಕಮಲದಂತೆ ಕಾಂತಿಹೀನವಾದ ಅಂಗಗಳಿಂದ ಕೂಡಿರುವಳು. ರಾವಣನ ದೆಸೆ ಯಿಂದಾಗಿ ನಿನ್ನ ಸೇವೆಯನ್ನು ಮಾಡಲಾಗದ ಅವಳು ಸತ್ತುಹೋಗಬೇಕೆಂದೇ

ನಿಶ್ಚಯಿಸಿಬಿಟ್ಟಿದ್ದಳು. ನಿನ್ನಲ್ಲಿಯೇ ನೆಟ್ಟಮನಸ್ಸುಳ್ಳ ಅವಳನ್ನು ನಾನು ಅತಿಪ್ರಯಾಸದಿಂದ ಹುಡುಕಿದೆನು. ಅವಳಿಗೆ ನನ್ನ ವಿಷಯದಲ್ಲಿ ವಿಶ್ವಾಸವು ಹುಟ್ಟಲು ಇಕ್ಷ್ವಾಕುವಂಶದ ಖ್ಯಾತಿಯನ್ನು ಅವಳಿಗೆ ಕೇಳಿಸುವಂತೆ ಮೆಲ್ಲ-ಮೆಲ್ಲಗೆ ಹೇಳಿದೆನು. ಅದರಿಂದ ಅವಳಿಗೆ ವಿಶ್ವಾಸವು ಮೂಡಿತು. ನಂತರ ನಾನು ಅವಳೊಡನೆ ಮಾತನಾಡಿದೆನು. ಸುಗ್ರೀವಸಖ್ಯವೇ ಮೊದಲಾದ ಎಲ್ಲ ವಿಷಯಗಳನ್ನೂ ಅವಳಿಗೆ ತಿಳಿಸಿದೆನು. ನಿನಗೂ ಮತ್ತು ಸುಗ್ರೀವನಿಗೂ ಸಖ್ಯವಾದುದನ್ನು ಕೇಳಿ ಸೀತೆಯು ಹರ್ಷಗೊಂಡಳು. ಪರಪುರುಷನನ್ನು ಮನಸ್ಸಿನಿಂದಲಾದರೂ ಚಿಂತಿಸದಿರುವ ಸದಾಚಾರ ಮತ್ತು ನಿನ್ನಲ್ಲಿ ಅನನ್ಯ ಭಕ್ತಿ ಈ ಶ್ರೇಷ್ಠಗುಣಗಳು ಸೀತಾದೇವಿಯಲ್ಲಿ ಸುಪ್ರತಿಷ್ಠಿತವಾಗಿವೆ. ನಿನ್ನಲ್ಲಿ ಅತ್ಯಂತಭಕ್ತಿಭಾವದಿಂದಿರುವ ಮತ್ತು ನಿನ್ನ ಪ್ರಾಪ್ತಿಗಾಗಿ ಉಗ್ರವಾದ ತಪಸ್ಸನ್ನು ಆಚರಿಸುತ್ತಿರುವ ಸೀತಾದೇವಿಯನ್ನು ನಾನು ನೋಡಿದೆನು. ಅವಳು ಚಿತ್ರಕೂಟಪರ್ವತದಲ್ಲಿ ನಿನ್ನೊಡನಿರುವಾಗ ಕಾಕಾಸುರನ ಸಂಬಂಧವಾಗಿ ನಡೆದ ವೃತ್ತಾಂತವನ್ನು ನೆನಪಿಗಾಗಿ ನನ್ನೊಡನೆ ಹೇಳಿರುವಳು. 'ನೀನಿಲ್ಲಿ ನೋಡಿರುವುದೆಲ್ಲವನ್ನೂ ಯಥಾವತ್ತಾಗಿ ನರವ್ಯಾಘ್ರನಾದ ಆರ್ಯಪುತ್ರನಿಗೆ ಹೇಳಬೇಕು'–ಎಂದೂ ಅವಳು ಹೇಳಿದಳು.

'ಸುಗ್ರೀವನು ಕೇಳಿಸಿಕೊಳ್ಳುವಂತೆಯೇ ನೀನು ಈ ಎಲ್ಲ ಮಾತು ಗಳನ್ನೂ ಹೇಳಬೇಕು ಮತ್ತು ಬಹಳ ಪ್ರಯತ್ನದಿಂದ ರಕ್ಷಿಸಿಕೊಂಡಿರುವ ಚೂಡಾಮಣಿಯನ್ನು ಶ್ರೀರಾಮನಿಗೆ ಕೊಡಬೇಕು'–ಎಂದೂ ಹೇಳಿದಳು. ಮುಂದಿನ ಮಾತುಗಳನ್ನು ಅವಳ ಮಾತಿನಲ್ಲೇ ಹೇಳುವೆನು, ಪ್ರಭೋ!

**ಏಷಾ ಚೂಡಾಮಣಿಃ ಶ್ರೀಮಾನ್ಮಯಾ ತೇ ಯತ್ನರಕ್ಷಿತಃ ।**
**ಮನಃಶಿಲಾಯಾಸ್ತಿಲಕೋ ಗಣ್ಡಪಾರ್ಶ್ವೇ ನಿವೇಶಿತಃ ।**
**........................................ ತಂ ಕಿಲ ಸ್ಮರ್ತುಮರ್ಹಸಿ ॥೨೩॥**

"ಪ್ರಭುವೇ! ಥಳಥಳಿಸುತ್ತಿರುವ ಈ ಚೂಡಾಮಣಿಯನ್ನು ನಾನು ನಿನಗೆ ಕಳುಹಿಸಲೆಂದೇ ಬಹಳ ಪ್ರಯತ್ನದಿಂದ ರಕ್ಷಿಸಿಕೊಂಡಿರುವೆನು. ಇದನ್ನು ನೋಡಿದೊಡನೆಯೇ ನಿನಗೆ ನನ್ನ ಸ್ಮರಣೆಯುಂಟಾಗುತ್ತದೆ. ಮಣಿಶಿಲೆಯಿಂದ ನನ್ನ ಕಪೋಲಪ್ರದೇಶಗಳಲ್ಲಿ ತಿದ್ದಿದ ತಿಲಕವನ್ನೂ ಹಾಗೆಯೇ ನೀನು ಸ್ಮರಿಸಿಕೋ.

**ಏಷ ನಿರ್ಯಾತಿತಃ ಶ್ರೀಮಾನ್ಮಯಾ ತೇ ವಾರಿಸಂಭವಃ ।**
**ಏತಂ ದೃಷ್ಟ್ವಾ ಪ್ರಮೋದಿಷ್ಯೇ ವ್ಯಸನೇ ತ್ವಾಮಿವಾನಘ ॥೨೪॥**

ಸಮುದ್ರದಲ್ಲಿ ಹುಟ್ಟಿರುವ ಕಾಂತಿಯುಕ್ತವಾದ ಈ ಮಣಿಯನ್ನು ನನ್ನ ಗುರುತಿಗಾಗಿ ಕಳುಹಿಸಿದ್ದೇನೆ. ನೀನು ಕಳುಹಿಸಿರುವ ಉಂಗುರವನ್ನು ನೋಡಿ ಇಂತಹ ವ್ಯಸನದ ಸನ್ನಿವೇಶದಲ್ಲಿಯೂ ಸಂತೋಷಪಡುತ್ತಿದ್ದೇನೆ. ಈ ಉಂಗುರವನ್ನು ನೋಡಿದುದರಿಂದ ನಿನ್ನನ್ನು ನೋಡಿದಷ್ಟು ಸಂತೋಷವೇ ನನಗಾಗಿದೆ.

**ಜೀವಿತಂ ಧಾರಯಿಷ್ಯಾಮಿ ಮಾಸಂ ದಶರಥಾತ್ಮಜ ।**
**ಊರ್ಧ್ವಂ ಮಾಸಾನ್ನ ಜೀವೇಯಂ ರಕ್ಷಸಾಂ ವಶಮಾಗತಾ ॥೨೫॥**

ದಶರಥಪುತ್ರನೇ! ನಾನಿನ್ನು ಒಂದು ತಿಂಗಳು ಮಾತ್ರವೇ ಜೀವಿಸಿರುವೆನು. ಮಾಸವು ಕಳೆಯಿತೆಂದರೆ ರಾಕ್ಷಸರ ವಶದಲ್ಲಿರುವ ನಾನು ಜೀವಿಸಿರಲಾರೆನು."

ರಾಘವ! ಕೃಶಾಂಗಿಯಾದ, ಧರ್ಮಚಾರಿಣಿಯಾದ, ಹೆಣ್ಣುಜಿಂಕೆಯ ಕಣ್ಣುಗಳಂತೆ ಅರಳಿದ ಕಣ್ಣುಗಳಿಂದ ಕೂಡಿದ್ದ, ರಾವಣನ ಅಂತಃಪುರದಲ್ಲಿ ಬಂದಿಯಾಗಿರುವ ಸೀತಾದೇವಿಯು ಈ ಮಾತನ್ನು ನಿನಗೆ ಹೇಳಿಕಳುಹಿಸಿರುವಳು.

ರಾಮಚಂದ್ರ! ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ನಿನಗೆ ಹೇಳಿರುವೆನು. ಸಮುದ್ರವನ್ನು ದಾಟಿ ಲಂಕೆಗೆ ಹೋಗುವ ಉಪಾಯವನ್ನು ನೀನೀಗಲೇ ಸರ್ವಪ್ರಕಾರದಿಂದಲೂ ಸಮಾಲೋಚಿಸು."

ರಾಜಪುತ್ರರಾದ ರಾಮ-ಲಕ್ಷ್ಮಣರಿಬ್ಬರಿಗೂ ತನ್ನ ಮಾತಿನಲ್ಲಿ ವಿಶ್ವಾಸ ವುಂಟಾಗಿದೆಯೆಂಬುದನ್ನು ಹನುಮಂತನು ತಿಳಿದುಕೊಂಡನು. ಅಭಿಜ್ಞಾನ ರೂಪವಾದ ಚೂಡಾಮಣಿಯನ್ನು ಶ್ರೀರಾಮನಿಗೆ ಸಮರ್ಪಿಸಿದನು. ಸೀತಾದೇವಿಯು ಹೇಳಿದ್ದುದನ್ನು ಮೊದಲಿನಿಂದ ಕಡೆಯವರೆಗೂ ಸಂಪೂರ್ಣವಾಗಿ ಶ್ರೀರಾಮನಿಗೆ ಅರುಹಿದನು.

ಅರವತ್ತೈದನೆಯ ಸರ್ಗವು ಮುಗಿಯಿತು.

## ಚೂಡಾಮಣಿಯನ್ನು ನೋಡಿ ಮತ್ತು ಸೀತೆಯ ಮಾತನ್ನು ಕೇಳಿ ಶ್ರೀರಾಮನು ವಿಲಪಿಸಿದುದು

**ಏವಮುಕ್ತೋ ಹನುಮತಾ ರಾಮೋ ದಶರಥಾತ್ಮಜಃ ।**
**ತಂ ಮಣಿಂ ಹೃದಯೇ ಕೃತ್ವಾ ಪ್ರುರುರೋದ ಸಲಕ್ಷ್ಮಣಃ ॥೧॥**

ಹನುಮಂತನು ಹೀಗೆ ಹೇಳಲು ಶ್ರೀರಾಮನು ಚೂಡಾಮಣಿಯನ್ನು ಎದೆಗಪ್ಪಿಕೊಂಡು ಲಕ್ಷ್ಮಣನೊಡನೆ ಅಳತೊಡಗಿದನು.

ಶೋಕಪೀಡಿತನಾದ ಶ್ರೀರಾಮನು ಉತ್ತಮೋತ್ತಮವಾದ ಆ ಚೂಡಾ ಮಣಿಯನ್ನು ನೋಡಿ ಕಂಬನಿಗರೆಯುತ್ತಾ ಸುಗ್ರೀವನಿಗೆ ಹೇಳಿದನು :

**ಯಥೈವ ಧೇನುಃ ಸ್ರವತಿ ಸ್ನೇಹಾದ್ವತ್ಸಸ್ಯ ವತ್ಸಲಾ ।**
**ತಥಾ ಮಮಾಪಿ ಹೃದಯಂ ಮಣಿರತ್ನಸ್ಯ ದರ್ಶನಾತ್ ॥೩॥**

“ಕರುವಿನ ವಿಷಯದಲ್ಲಿ ಹೆಚ್ಚಿನ ಅಕ್ಕರೆಯುಳ್ಳ ಹಸುವಿನ ಕೆಚ್ಚಲಲ್ಲಿ ಕರುವನ್ನು ಕಂಡೊಡನೆಯೇ ಹಾಲು ಸ್ರವಿಸುವಂತೆ–ಉತ್ತಮೋತ್ತಮವಾದ ಈ ಚೂಡಾಮಣಿಯನ್ನು ಕಂಡೊಡನೆಯೇ ನನ್ನ ಹೃದಯದಲ್ಲಿ ಕರುಣರಸವು ಸ್ರವಿಸುತ್ತಿದೆ.

ಈ ಮಣಿರತ್ನವನ್ನು ನನ್ನ ಮಾವನು ವೈದೇಹಿಗೆ ಕೊಟ್ಟಿದ್ದನು. ವಿವಾಹಕಾಲದಲ್ಲಿ ಅವಳ ಮುಡಿಯಲ್ಲಿ ಮುಡಿಸಲ್ಪಟ್ಟ ಈ ರತ್ನವು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಸಮುದ್ರದಲ್ಲಿ ಹುಟ್ಟಿರುವ ಈ ಚೂಡಾಮಣಿಯನ್ನು ಶ್ರೇಷ್ಠರಾದ ದೇವತೆಗಳೂ ಪೂಜಿಸುತ್ತಿದ್ದರು. ಜನಕನು ಮಾಡಿದ ಯಜ್ಞದಿಂದ ಪರಿತುಷ್ಟನಾದ ಇಂದ್ರನು ಈ ಮಣಿಯನ್ನು ಜನಕನಿಗೆ ಕೊಟ್ಟಿದ್ದನು. ಇದನ್ನು ನೋಡಿದೊಡನೆಯೇ ನನಗೆ ನನ್ನ ತಂದೆಯ ದರ್ಶನವಾದಂತಾಗಿದೆ. ಹಾಗೆಯೇ ವಿಭುವಾದ ಜನಕನ ದರ್ಶನ ವಾದಂತೆಯೂ ಆಗಿದೆ. ಈ ಚೂಡಾಮಣಿಯು ನನ್ನ ಪ್ರೇಯಸಿಯಾದ ಸೀತಾದೇವಿಯ ತಲೆಯಲ್ಲಿ ಅತ್ಯಂತಶೋಭಾಯಮಾನವಾಗಿ ಕಾಣುತ್ತಿದ್ದಿತು. ಇದರ ದರ್ಶನದಿಂದ ನಾನು ಸೀತಾದೇವಿಯನ್ನು ಪುನಃ ಪಡೆದೆನೆಂದೇ ಭಾವಿಸುತ್ತೇನೆ.

ಸೌಮ್ಯನೇ! ಹನುಮಂತ! ಮೂರ್ಛಿತನಾದವನ ಮೇಲೆ ನೀರನ್ನು ಚಿಮುಕಿಸುವಂತೆ–ವಿರಹವೇದನೆಯನ್ನು ಅನುಭವಿಸುತ್ತಿರುವ ನನ್ನ ಮೇಲೆ ಪ್ರಿಯವಾಕ್ಯವೆಂಬ ನೀರನ್ನು ಚಿಮುಕಿಸುತ್ತಾ ವೈದೇಹಿಯು ಮತ್ತೇನು ಹೇಳಿದಳು?"

ಶ್ರೀರಾಮನು ಲಕ್ಷ್ಮಣನ ಕಡೆಗೆ ತಿರುಗಿ ಹೇಳಿದನು :



"ಲಕ್ಷ್ಮಣ! ವೈದೇಹಿಯಿಲ್ಲದೇ ಈ ಮಣಿಯನ್ನು ಮಾತ್ರವೇ ನಾನು ನೋಡುತ್ತಿರುವೆನಲ್ಲವೇ? ಇದಕ್ಕಿಂತಲೂ ದುಃಖಕರವಾದುದು ಬೇರೇನಿದೆ?

ಒಂದು ತಿಂಗಳವರೆಗೆ ವೈದೇಹಿಯು ಬದುಕಿದ್ದ ರೆ ಅವಳುಚಿರಜೀವಿನಿ ಯಾಗಿಯೇ ಉಳಿದುಕೊಳ್ಳುತ್ತಾಳೆ. ಅಷ್ಟರೊಳಗಾಗಿ ನಾನು ಅವಳನ್ನು ಕರೆ

ತರುವುದು ನಿಶ್ಚಯ. ಅವಳಿಲ್ಲದೇ ನಾನು ಕ್ಷಣಮಾತ್ರವಾದರೂ ಬದುಕಿರಲಾರೆನು. ಸೀತೆಯ ವೃತ್ತಾಂತವು ತಿಳಿದ ಮೇಲೆ ಕ್ಷಣಮಾತ್ರವಾದರೂ ನಾನಿಲ್ಲಿರಲಾರೆನು. ಹನುಮಂತ! ಅವಳನ್ನು ನೀನು ಎಲ್ಲಿ ಕಂಡೆಯೋ ಅಲ್ಲಿಗೇ ನನ್ನನ್ನು ಕರೆದುಕೊಂಡು ಹೋಗು. ಸುಂದರವಾದ ಕಟಿಪ್ರದೇಶವನ್ನು ಹೊಂದಿರುವ ಭೀರುವಾದ ನನ್ನ ಪ್ರೇಯಸಿಯು ಭಯಂಕರಸ್ವರೂಪರಾದ ಆ ರಾಕ್ಷಸರ ಮಧ್ಯದಲ್ಲಿ ಹೇಗೆ ತಾನೇ ಜೀವಿಸಿದ್ದಾಳೆ? ಕತ್ತಲೆಯಿಂದ ಮುಕ್ತನಾಗಿ ಮೋಡಗಳಿಂದ ಆವೃತನಾದ ಶರತ್ಕಾಲದ ಚಂದ್ರನಂತೆ ರಾಕ್ಷಸರಿಂದ ಆವೃತಳಾಗಿರುವ ಸೀತಾದೇವಿಯ ಮುಖವು ಈಗ ಖಂಡಿತವಾಗಿಯೂ ರಾರಾಜಿಸುತ್ತಿಲ್ಲ. ಮಾರುತಿಯೇ! ಸೀತೆಯು ಏನು ಹೇಳಿದಳೆಂಬುದನ್ನಾದರೂ ಹೇಳು. ರೋಗಿಯಾದವನು ಔಷಧಿಯಿಂದ ಜೀವಿಸುವಂತೆ ನಾನು ಅವಳು ಹೇಳಿದ ಮಾತುಗಳನ್ನಾದರೂ ಕೇಳಿಕೊಂಡು ಜೀವಿಸಿರುತ್ತೇನೆ. ನನ್ನಿಂದ ಅಗಲಿರುವ, ಸುಂದರವಾದ ಶರೀರವುಳ್ಳ, ಮಧುರಸ್ವಭಾವದ, ಮಧುರವಾಗಿ ಮಾತುಗಳನ್ನಾಡುವ ಆ ನನ್ನ ಪ್ರೇಯಸಿಯು ಏನು ಹೇಳಿದಳು? ಅತ್ಯಂತದುಃಖಕ್ಕೀಡಾಗಿರುವ ಅವಳು ಹೇಗೆ ಜೀವಿಸಿರುವಳು? ಈ ಎಲ್ಲ ವಿಷಯಗಳನ್ನೂ ವಿಶದವಾಗಿ ಹೇಳು."

೬೬ನೆಯ ಸರ್ಗವು ಮುಗಿಯಿತು.

ಸುಂದರಕಾಂಡ ೬೭ನೆಯ ಸರ್ಗ

## ಪುನಃ ಹನುಮಂತನು ಸೀತೆಯ ಸಂದೇಶವನ್ನು ಶ್ರೀರಾಮನಿಗೆ ಹೇಳಿದುದು

**ಏವಮುಕ್ತಸ್ತು ಹನುಮಾನ್ರಾಘವೇಣ ಮಹಾತ್ಮನಾ ।**
**ಸೀತಾಯಾ ಭಾಷಿತಂ ಸರ್ವಂ ನ್ಯವೇದಯತ ರಾಘವೇ ॥೧॥**

ಶ್ರೀರಾಮನು ಹೀಗೆ ಹೇಳಲು ಹನುಮಂತನು ಸೀತಾದೇವಿಯಾಡಿದ ಎಲ್ಲ ಮಾತುಗಳನ್ನೂ ಶ್ರೀರಾಮನಿಗೆ ಹೇಳತೊಡಗಿದನು :

"ಪುರುಷಶ್ರೇಷ್ಠನೇ! ಹಿಂದೆ ನೀನು ಚಿತ್ರಕೂಟದಲ್ಲಿದ್ದಾಗ ನಡೆದ ಈ ವೃತ್ತಾಂತವನ್ನು ಸೀತೆಯು ನೆನಪಿಗಾಗಿ ಹೇಳಿದಳು :

ಒಮ್ಮೆ ನಿನ್ನೊಡನೆ ಸುಖವಾಗಿ ಮಲಗಿದ್ದ ಜಾನಕಿಯು ನೀನು ಏಳುವುದಕ್ಕಿಂತಲೂ ಮೊದಲೇ ಎದ್ದುಬಿಟ್ಟಳು. ಆ ಸಮಯದಲ್ಲಿ ಒಂದು ಕಾಗೆಯು ಅನಿರೀಕ್ಷಿತವಾಗಿ ಹಾರಿಬಂದು ಸೀತಾದೇವಿಯ ಸ್ತನಗಳ ಮಧ್ಯದಲ್ಲಿ ಕೊಕ್ಕಿನಿಂದ ಗಾಯಗೊಳಿಸಿತು. ಭರತಾಗ್ರಜನೇ! ಪರ್ಯಾಯವಾಗಿ ಮಲಗುವ ಈ ಕ್ರಮವನ್ನು ಅನುಸರಿಸಿ ನೀನು ಸೀತಾದೇವಿಯ ತೊಡೆಯ ಮೇಲೆ ಮಲಗಿದ್ದೆ.* ಕಾಗೆಯು ಪುನಃ ಸ್ತನಗಳ ಮಧ್ಯವನ್ನು ಕುಕ್ಕಿ ಬಾಧೆಪಡಿಸಿತು. ಮತ್ತೆ ಮತ್ತೆ ಬಂದು ಕುಕ್ಕುತ್ತಲೇ ಇತ್ತು. ಆ ಸಮಯದಲ್ಲಿ ಗಾಯದಿಂದ ಹೊರಚೆಲ್ಲಿದ ರಕ್ತದಿಂದ ತೊಯ್ದುಹೋದ ನೀನು ಎಚ್ಚರಗೊಂಡೆ. ಸೀತೆಯು ಕೂಡ ನೋವನ್ನು ತಾಳಲಾರದೇ ಸುಖವಾಗಿ ಮಲಗಿದ್ದ ನಿನ್ನನ್ನು ಎಚ್ಚರಗೊಳಿಸಿದಳು. ಸ್ತನಗಳ ಮಧ್ಯದಲ್ಲಿ ಕಾಗೆಯಿಂದ ಗಾಯಗೊಳಿಸಲ್ಪಟ್ಟಿದ್ದ ಸೀತಾದೇವಿಯನ್ನು ನೋಡಿ ವಿಷಸರ್ಪದಂತೆ ಪರಮಕ್ರುದ್ಧನಾಗಿ ನೀನು ಹೀಗೆ ಹೇಳಿದೆಯಂತೆ :

**ನಖಾಗ್ರೈಃ ಕೇನ ತೇ ಭೀರು ದಾರಿತಂ ತು ಸ್ತನಾನ್ತರಮ್ ।**
**ಕಃ ಕ್ರೀಡತಿ ಸರೋಷೇಣ ಪಞ್ಚವಕ್ತ್ರೇಣ ಭೋಗಿನಾ ॥೮॥**

"ಭಯಶೀಲಳೇ! ನಖಾಗ್ರಗಳಿಂದ ನಿನ್ನ ಸ್ತನಗಳ ಮಧ್ಯಭಾಗವನ್ನು ಸೀಳಿದವರಾರು? ಕೋಪಗೊಂಡ ಐದು ಹೆಡೆಗಳುಳ್ಳ ಸರ್ಪದೊಡನೆ ಯಾವನು ಆಟವಾಡುತ್ತಿದ್ದಾನೆ?"

ಹೀಗೆ ಹೇಳಿ ಸುತ್ತಲೂ ನೋಡಿದ ನೀನು ಆ ಕಾಗೆಯನ್ನು ಕಂಡೆಯಂತೆ. ತೀಕ್ಷ್ಣವಾದ ಮತ್ತು ರಕ್ತದಿಂದ ತೊಯ್ದಿದ್ದ ಕಾಲುಗುರುಗಳಿಂದ ಕೂಡಿದ್ದ ಆ ಕಾಗೆಯು ಸೀತಾದೇವಿಗೆ ಅಭಿಮುಖವಾಗಿಯೇ ಕುಳಿತಿದ್ದಿತು. ಅದು ಇಂದ್ರನ ಮಗನಂತೆ. ಓಡುವುದರಲ್ಲಿ ವಾಯುವೇಗಕ್ಕೆ ಸಮಾನವಾದ ವೇಗದಿಂದ ಓಡುತ್ತಿದ್ದಿತು. ನಿನ್ನನ್ನು ನೋಡಿದೊಡನೆಯೇ ಪಕ್ಷಿಗಳಲ್ಲಿ ಶ್ರೇಷ್ಠ

* ಸೀತಾದೇವಿಯ ತೊಡೆಯ ಮೇಲೆ ಶ್ರೀರಾಮನು ಮಲಗಿ ನಿದ್ರಿಸುವುದು. ಶ್ರೀರಾಮನು ಎಚ್ಚೆತ್ತನಂತರ ಸೀತಾದೇವಿಯು ಶ್ರೀರಾಮನ ತೊಡೆಯ ಮೇಲೆ ಮಲಗುವುದು–ಇದು ಕ್ರಮವಾಗಿತ್ತು.

ವೆನಿಸಿದ್ದ ವಾಯಸವು ದೇಶಾಂತರಕ್ಕೆ ಹಾರಿಹೋಯಿತು. ಆ ಸಮಯದಲ್ಲಿ ನಿನ್ನ ಕಣ್ಣುಗಳು ಕೋಪದಿಂದ ತಿರುಗುತ್ತಿದ್ದುವು. ಸೀತಾದೇವಿಗೆ ಅಪಕಾರ ವೆಸಗಿದ ಆ ಕಾಗೆಯ ಮೇಲೆ ನೀನು ಅತ್ಯುಗ್ರವಾದ ಬುದ್ಧಿಯನ್ನೇ ತಾಳಿದೆ. ಮಲಗಿದ್ದ ಹಾಸಿಗೆಯಿಂದಲೇ ದರ್ಭೆಯೊಂದನ್ನು ತೆಗೆದುಕೊಂಡು ಬ್ರಹ್ಮಾಸ್ತ್ರ ವನ್ನು ಅದರಲ್ಲಿ ಆವಾಹಿಸಿದೆ. ಒಡನೆಯೇ ಆ ದರ್ಭಾಸ್ತ್ರವು ಪಕ್ಷಿಯು ಹೋದ ಕಡೆಗೆ ತಿರುಗಿ ನಿಂತು ದೇದೀಪ್ಯಮಾನವಾಗಿ ಕಾಲಾಗ್ನಿಯಂತೆ ಉರಿಯ ತೊಡಗಿತು.

ಪ್ರಜ್ವಲಿಸುತ್ತಿದ್ದ ಆ ದರ್ಭಾಸ್ತ್ರವನ್ನು ನೀನು ವಾಯಸದ ಮೇಲೆ ಪ್ರಯೋಗಿಸಿದೆ. ಅದು ಕಾಗೆಯನ್ನು ಅನುಸರಿಸಿ ಹೊರಟಿತು. ಹಿಂಬಾಲಿ ಸುತ್ತಿದ್ದ ದರ್ಭಾಸ್ತ್ರವನ್ನು ನೋಡಿ ಭಯಗೊಂಡ ಎಲ್ಲ ದೇವತೆಗಳೂ ಮಹರ್ಷಿಗಳೂ ಕಾಗೆಗೆ ಆಶ್ರಯವನ್ನು ಕೊಡದೆ ಹೊರದಬ್ಬಿದರು. ತಂದೆ ಯಿಂದಲೂ ಅದು ಪರಿತ್ಯಕ್ತವಾಯಿತು. ಮೂರು ಲೋಕಗಳಲ್ಲಿ ಹಾರಾಡಿ ದರೂ ಅದನ್ನು ರಕ್ಷಿಸುವವರೇ ಯಾರೂ ಸಿಕ್ಕಲಿಲ್ಲ. ಆಗ ಆ ಕಾಗೆಯು ಪುನಃ ನಿನ್ನ ಬಳಿಗೇ ಬಂದಿತು. ಶರಣಾಗತನಾಗಿ ಬಂದು ಭೂಮಿಯಲ್ಲಿ ಬಿದ್ದ ಆ ಕಾಗೆಯು ವಧೆಗೆ ಯೋಗ್ಯವಾಗಿದ್ದರೂ ಕೃಪೆಯಿಂದ ನೀನದನ್ನು ರಕ್ಷಿಸಿದೆ. ಬಿಟ್ಟ ಅಸ್ತ್ರವನ್ನು ನಿಷ್ಫಲವಾಗಿಸಲು ಸಾಧ್ಯವಿಲ್ಲವೆಂದೂ ನೀನು ಆ ಕಾಗೆಗೆ ಹೇಳಿದೆ. ಅನಂತರ ನೀನು ಆ ಕಾಗೆಯ ಬಲಗಣ್ಣನ್ನು ದರ್ಭಾಸ್ತ್ರದಿಂದ ವಿನಾಶಗೊಳಿಸಿದೆ. ಬಳಿಕ ಕಾಗೆಯು ನಿನಗೂ ಮತ್ತು ದಶರಥರಾಜನಿಗೂ ನಮಸ್ಕರಿಸಿ ನಿನ್ನ ಅನುಮತಿಯನ್ನು ಪಡೆದು ತನ್ನ ವಾಸಸ್ಥಾನಕ್ಕೆ ಹೊರಟುಹೋಯಿತು.

ರಾಘವ! ಸೀತಾದೇವಿಯು ನೆನಪಿಗಾಗಿ ಈ ಕಥೆಯನ್ನು ಹೇಳಿ ನನ್ನನ್ನು ಹೀಗೆ ಪ್ರಶ್ನಿಸಿದಳು :

**ಏವಮಸ್ತ್ರವಿದಾಂ ಶ್ರೇಷ್ಠಃ ಸತ್ತ್ವವಾನ್ ಶೀಲವಾನಪಿ ।**
**ಕಿಮರ್ಥಮಸ್ತ್ರಂ ರಕ್ಷಃಸು ನ ಯೋಜಯತಿ ರಾಘವಃ ॥೧೮॥**

'ಹನುಮಂತ! ಹೀಗೆ ಶ್ರೀರಾಮನು ಅಸ್ತ್ರವಿದ್ಯೆಯನ್ನು ತಿಳಿದವರಲ್ಲಿ ಶ್ರೇಷ್ಠನಾದವನು. ದರ್ಭೆಯನ್ನು ಬ್ರಹ್ಮಾಸ್ತ್ರವನ್ನಾಗಿ ಬಳಸುವ ಸಾಮರ್ಥ್ಯವು ಅವನಿಗಿದೆ. ಅವನು ಸತ್ತ್ವವಂತನೂ ಶೀಲವಂತನೂ ಆಗಿದ್ದಾನೆ. ಹೀಗಿರು

ವಾಗ ನನಗೆ ಅಪರಾಧವನ್ನೆಸರಿಗುವ ಈ ರಾಕ್ಷಸರ ಮೇಲೆ ಇದುವರೆಗೂ ರಾಘವನು ಯಾವ ಕಾರಣದಿಂದ ಬಾಣಪ್ರಯೋಗ ಮಾಡಲಿಲ್ಲ? ದಾನವರಾಗಲೀ, ಗಂಧರ್ವರಾಗಲೀ, ಅಸುರರಾಗಲೀ, ಮರುದ್ಗಣಗಳೇ ಆಗಲೀ ಅಥವಾ ಇವರೆಲ್ಲರೂ ಸೇರಿಯೇ ಆಗಲೀ–ಯುದ್ಧದಲ್ಲಿ ಶ್ರೀರಾಮನಿಗೆ ಎದುರಾಗಿ ನಿಲ್ಲಲಾರರು. ವೀರ್ಯವಂತನಾದ ಅವನಿಗೆ ನನ್ನ ವಿಷಯದಲ್ಲಿ ಸ್ವಲ್ಪವಾದರೂ ಆತುರವಿದ್ದುದಾದರೆ ನಿಶಿತವಾದ ಬಾಣಗಳಿಂದ ಈಗಲೇ ರಾವಣನನ್ನು ಸಂಹರಿಸಲಿ.

ಶತ್ರುತಾಪಕನಾದ ನರಶ್ರೇಷ್ಠನಾದ ಲಕ್ಷ್ಮಣನಾದರೂ ಅಣ್ಣನ ಅಪ್ಪಣೆಯನ್ನು ಪಡೆದು ಯಾವ ಕಾರಣದಿಂದ ನನ್ನನ್ನು ರಕ್ಷಿಸಲು ಬರುತ್ತಿಲ್ಲ? ಪುರುಷಶ್ರೇಷ್ಠರಾದ, ಶಕ್ತಿವಂತರಾದ, ವಾಯು ಮತ್ತು ಅಗ್ನಿಗಳ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಯುಕ್ತರಾಗಿರುವ, ದೇವತೆಗಳಿಂದಲೂ ಎದುರಿಸಲು ಅಸಾಧ್ಯರಾದ ರಾಮ-ಲಕ್ಷ್ಮಣರು ನನ್ನನ್ನೇಕೆ ಉಪೇಕ್ಷಿಸುತ್ತಿದ್ದಾರೆ?

**ಮಮೈವ ದುಷ್ಕೃತಂ ಕಿಂಚಿನ್ಮಹದಸ್ತಿ ನ ಸಂಶಯಃ ।**
**ಸಮರ್ಥಾವಪಿ ತೌ ಯನ್ಮಾಂ ನಾವೇಕ್ಷೇತೇ ಪರಂತಪೌ ॥೨೩॥**

ನನ್ನ ಅಪಾರವಾದ ದುಷ್ಕೃತಿಯ ಫಲವೇ ಈ ನನ್ನ ದುಃಸ್ಥಿತಿಗೆ ಕಾರಣವಾಗಿರಬೇಕು. ಇದರಲ್ಲಿ ಸಂಶಯವೇ ಇಲ್ಲ. ಆದುದರಿಂದಲೇ ಶತ್ರುತಾಪಕರಾದ ರಾಮ-ಲಕ್ಷ್ಮಣರು ನನ್ನನ್ನು ರಕ್ಷಿಸಲು ಸಮರ್ಥರಾಗಿದ್ದರೂ ಉದಾಸೀನರಾಗಿದ್ದಾರೆ.'

ರಾಘವ! ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ ವೈದೇಹಿಯ ಕರುಣಾಜನಕವಾದ ಈ ಮಾತುಗಳನ್ನು ಕೇಳಿ ಆರ್ಯೆಗೆ ಹೀಗೆ ಹೇಳಿದೆನು :

'ದೇವಿ! ನಾನು ನಿನಗೆ ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನಿನ್ನ ವಿರಹಶೋಕದಿಂದಾಗಿ ಶ್ರೀರಾಮನು ನಿದ್ರಾಹಾರಗಳಿಂದಲೂ ವಿಮುಖನಾಗಿದ್ದಾನೆ. ಅವನು ದುಃಖಿಸುತ್ತಿದ್ದರೆ ಲಕ್ಷ್ಮಣನೂ ದುಃಖದಿಂದ ಪರಿತಪಿಸುತ್ತಾನೆ. ಹೇಗೋ ದೈವಯೋಗದಿಂದ ನಾನು ನಿನ್ನನ್ನು ನೋಡಿದೆನು. ಆದುದರಿಂದ ದುಃಖಪಡಲು ಇದು ಸಮಯವಲ್ಲ. ಈ ಮುಹೂರ್ತದಲ್ಲಿಯೇ ನೀನು ಈ ಎಲ್ಲ ವಿಧವಾದ ದುಃಖಗಳ ಕೊನೆಯನ್ನು ಕಾಣುವೆ. ನರಶ್ರೇಷ್ಠ

ರಾದ ಶತ್ರುತಾಪಕರಾದ ರಾಜಪುತ್ರರಿಬ್ಬರು ನಿನ್ನನ್ನು ನೋಡಬೇಕೆಂಬ ಆಕಾಂಕ್ಷೆಯಿಂದ ಹುಟ್ಟುವ ಉತ್ಸಾಹದಿಂದ ಲಂಕಾಪಟ್ಟಣವನ್ನೇ ಸುಟ್ಟುಹಾಕಿ ಬಿಡುತ್ತಾರೆ. ಶ್ರೀರಾಮನು ಯುದ್ಧದಲ್ಲಿ ಭಯಂಕರನಾದ ರಾವಣನನ್ನು ಅವನ ಬಂಧುಮಿತ್ರರೊಡನೆ ಸಂಹರಿಸಿ ನಿನ್ನನ್ನು ಅಯೋಧ್ಯೆಗೆ ಕರೆದೊಯ್ಯುತ್ತಾನೆ. ಇದು ಸತ್ಯ. ನಾನು ನಿನ್ನನ್ನು ಸಂದರ್ಶಿಸಿ ಬಂದಿರುವೆನೆಂಬುದನ್ನು ಖಚಿತಪಡಿಸಲು ಸಾಧ್ಯವಾಗುವಂತೆ ಅವನಿಗೆ ಪ್ರೀತಿಯನ್ನುಂಟುಮಾಡುವ ಮತ್ತು ನೆನಪನ್ನುಂಟುಮಾಡುವ ಯಾವುದಾದರೂ ವಸ್ತುವನ್ನು ಕೊಡು.'

ರಾಘವ! ನಾನು ಹೀಗೆ ಪ್ರಾರ್ಥಿಸಲು ಸೀತಾದೇವಿಯು ಸುತ್ತಲೂ ಕಣ್ಣುಹಾಯಿಸಿ ಜಡೆಯಲ್ಲಿ ಮುಡಿದುಕೊಳ್ಳಲು ಯೋಗ್ಯವಾಗಿದ್ದ ಈ ಮಣಿಯನ್ನು ಸೆರಗಿನಲ್ಲಿದ್ದ ಗಂಟಿನಿಂದ ಹೊರತೆಗೆದು ನನಗೆ ಕೊಟ್ಟಳು. ನಾನು ಈ ದಿವ್ಯಮಣಿಯನ್ನು ನಿನ್ನ ಸಲುವಾಗಿ ಪ್ರತಿಗ್ರಹಿಸಿ ಸೀತಾದೇವಿಗೆ ತಲೆಬಾಗಿ ನಮಸ್ಕರಿಸಿ ಅಲ್ಲಿಂದ ಹೊರಡಲು ಅವಸರಪಟ್ಟೆನು. ವರವರ್ಣಿನಿಯಾದ ಸೀತಾದೇವಿಯು ಪ್ರಯಾಣ ಹೊರಡಲು ಉತ್ಸುಕನಾಗಿದ್ದ ಮತ್ತು ಸಮುದ್ರವನ್ನು ದಾಟಲು ದೇಹವನ್ನು ದೊಡ್ಡದಾಗಿ ಬೆಳೆಸಿಕೊಳ್ಳುತ್ತಿದ್ದ ನನ್ನನ್ನು ನೋಡಿ ಹೇಳಿದಳು : ಆ ಸಮಯದಲ್ಲಿ ಸೀತಾದೇವಿಯ ಕಣ್ಣುಗಳಲ್ಲಿ ನೀರು ತುಂಬಿಕೊಂಡಿದ್ದಿತು. ಆಕೆಯು ದೀನಳಾಗಿದ್ದಳು. ಕಣ್ಣೀರು ಸುರಿಸುತ್ತಿದ್ದುದರಿಂದ ಅವಳ ಮಾತು ಗದ್ಗದವಾಗಿದ್ದಿತು. ನಾನು ಹೊರಟುಬಿಡುವನೆಂದು ಭ್ರಾಂತಳಾಗಿ ಅತಿಯಾದ ಶೋಕದಿಂದ ಪರಿತಪಿಸುತ್ತಿದ್ದಳು. ಅವಳು ನನ್ನೊಡನೆ ಹೀಗೆ ಹೇಳಿದಳು :

'ಕಪೀಶ್ವರನೇ! ನೀನೇ ಭಾಗ್ಯಶಾಲಿಯು. ಮಹಾಬಾಹುವಾದ, ಕಮಲಾಕ್ಷನಾದ ರಾಮನನ್ನೂ ಮಹಾಬಾಹುವಾದ ನನ್ನ ಮೈದುನನಾದ ಲಕ್ಷ್ಮಣನನ್ನೂ ನೀನು ಬಹಳ ಬೇಗ ಕಾಣಲಿರುವೆ. ಆ ಭಾಗ್ಯವು ನನಗಿಲ್ಲ.'

ಹೀಗೆ ಹೇಳಿದ ಸೀತೆಗೆ ನಾನು ಉತ್ತರಿಸಿದೆನು :

**ಪೃಷ್ಠಮಾರೋಹ ಮೇ ದೇವಿ ಕ್ಷಿಪ್ರಂ ಜನಕನನ್ದಿನಿ ।**
**ಯಾವತ್ತೇ ದರ್ಶಯಾಮ್ಯದ್ಯ ಸಸುಗ್ರೀವಂ ಸಲಕ್ಷ್ಮಣಮ್ ।**
**ರಾಘವಂ ಚ ಮಹಾಭಾಗೇ ಭರ್ತಾರಮಸಿತೇಕ್ಷಣೇ ॥೩೬॥**

‘ದೇವಿ! ಶೀಘ್ರವಾಗಿ ನನ್ನ ಬೆನ್ನಿನ ಮೇಲೆ ಕುಳಿತುಕೋ. ಮಹಾಭಾಗಳೇ! ಕಪ್ಪಾದ ಕಡೆಗಣ್ಣುಗಳುಳ್ಳವಳೇ! ಈಗಲೇ ನಾನು ನಿನಗೆ ಶ್ರೀರಾಮನನ್ನೂ ಲಕ್ಷ್ಮಣಸಹಿತನಾದ ಸುಗ್ರೀವನನ್ನೂ ತೋರಿಸುತ್ತೇನೆ.”

ನನ್ನ ಮಾತನ್ನ ಕೇಳಿ ಅಸಮ್ಮತಿಯಿಂದ ಸೀತೆಯು ಹೇಳಿದಳು :

‘ಹರಿಪುಂಗವನೇ! ನಾನಾಗಿಯೇ ನಿನ್ನ ಬೆನ್ನಿನ ಮೇಲೆ ಕುಳಿತು ಬರುವುದು ಧರ್ಮವಾಗುವುದಿಲ್ಲ. ಹಿಂದೇನೋ ರಾವಣರಾಕ್ಷಸನು ನನ್ನ ಶರೀರವನ್ನು ಮುಟ್ಟಿದ್ದು ನಿಜ. ಆದರೆ ಆಗ ನಾನೇನು ಮಾಡಲು ಸಾಧ್ಯವಿದ್ದಿತು? ಆಗ ನಾನು ಪರಾಧೀನೆಯಾಗಿದ್ದೆನು. ಕಾಲಕರ್ಮಸಂಯೋಗದಿಂದಾಗಿ ಪರಪುರುಷನಿಂದ ಪೀಡಿತಳಾಗಿದ್ದೆನು. ಆದುದರಿಂದ ಈಗ ನೀನೊಬ್ಬನೇ ರಾಜಪುತ್ರರಿರುವೆಡೆಗೆ ಶೀಘ್ರವಾಗಿ ಹೋಗು. ಸಿಂಹಸದೃಶರಾದ ರಾಜಕುಮಾರರಿಗೂ ಅಮಾತ್ಯರಿಂದ ಕೂಡಿದ ಸುಗ್ರೀವನಿಗೂ ನನ್ನ ಕ್ಷೇಮವನ್ನು ತಿಳಿಸು. ಶ್ರೀರಾಮನು ನನ್ನನ್ನು ಈ ದುಃಖಸಾಗರದಿಂದ ಸಾಧ್ಯವಾದಷ್ಟು ಬೇಗ ಪಾರುಮಾಡುವ ರೀತಿಯಲ್ಲಿ ನೀನು ನನ್ನ ವಿಷಯಗಳನ್ನು ಅವನಿಗೆ ಹೇಳಿ ಸಮಾಧಾನಗೊಳಿಸು. ಮಾರುತಿಯೇ! ನಿನ್ನ ಪ್ರಯಾಣವು ಮಂಗಳಮಯವಾಗಲಿ. ನೀನು ಶ್ರೀರಾಮನ ಬಳಿಗೆ ಹೋದ ಕೂಡಲೇ ನನ್ನ ಈ ತೀವ್ರವಾದ ಶೋಕವನ್ನೂ ಈ ರಾಕ್ಷಸಿಯರು ನನ್ನನ್ನು ಪದೇ-ಪದೇ ಭಯಪಡಿಸುತ್ತಿರುವುದನ್ನೂ ಅವನಿಗೆ ಹೇಳಬೇಕು.”

ರಾಜಶ್ರೇಷ್ಠನೇ! ರಾಘವ! ರಾವಣನಿಂದ ಅಶೋಕವನದಲ್ಲಿ ಬಂಧಿಸಲ್ಪಟ್ಟಿರುವ ಪೂಜ್ಯಳಾದ ಸೀತಾದೇವಿಯು ಈ ಎಲ್ಲ ವಿಷಯಗಳನ್ನೂ ವಿಷಾದದಿಂದ ನನ್ನೊಡನೆ ಹೇಳಿದಳು. ನಾನು ಹೇಳಿರುವುದೆಲ್ಲವನ್ನೂ ಗಮನಿಸಿ ಸೀತಾದೇವಿಯು ಕುಶಲಳಾಗಿರುವಳೆಂಬ ವಿಷಯದಲ್ಲಿ ವಿಶ್ವಾಸವನ್ನಿಡು.”

ಅರವತ್ತೇಳನೆಯ ಸರ್ಗವು ಮುಗಿಯಿತು.

## ಸೀತೆಯ ಸಂದೇಹವನ್ನು ನಿವಾರಿಸಿದ ಬಗೆಯನ್ನು ಹನುಮಂತನು ಶ್ರೀರಾಮನಿಗೆ ಹೇಳಿದುದು

**ಅಥಾಹಮುತ್ತರಂ ದೇವ್ಯಾ ಪುನರುಕ್ತಃ ಸಸಂಭ್ರಮಃ ।**
**ತವ ಸ್ನೇಹಾನ್ನರವ್ಯಾಘ್ರ ಸೌಹಾರ್ದಾದನುಮಾನ್ಯ ವೈ ॥೧॥**

ಹನುಮಂತನು ಶ್ರೀರಾಮನಿಗೆ ಹೇಳುತ್ತಾನೆ :

"ನರಶ್ರೇಷ್ಠನೇ! ನಿನಗೆ ನನ್ನಲ್ಲಿರುವ ಸ್ನೇಹವನ್ನೂ ಮತ್ತು ಸೌಹಾರ್ದವನ್ನೂ ಗೌರವಿಸುತ್ತಾ ಸೀತಾದೇವಿಯು ಅವಸರದಿಂದ ಹೊರಟಿದ್ದ ನನಗೆ ಪುನಃ ಹೇಳಿದಳು :

'ಹನುಮಂತ! ಹೀಗೆ ನೀನು ಅನೇಕಪ್ರಕಾರವಾಗಿ ಶ್ರೀರಾಮನಿಗೆ ಹೇಳಿ ಅವನು ಬಹಳ ಬೇಗ ರಾವಣನನ್ನು ಸಂಹರಿಸಿ ನನ್ನನ್ನು ಕರೆದೊಯ್ಯುವಂತೆ ಮಾಡಬೇಕು. ನೀನು ಉಚಿತವೆಂದು ಭಾವಿಸುವೆಯಾದರೆ ಒಂದು ದಿವಸದ ಮಟ್ಟಿಗಾದರೂ ಇಲ್ಲಿಯೇ ಇರು. ಯಾವುದಾದರೊಂದು ಏಕಾಂತಸ್ಥಳದಲ್ಲಿ ವಿಶ್ರಮಿಸಿದ್ದು ನಾಳೆ ಪ್ರಯಾಣಮಾಡು. ಹತಭಾಗ್ಯಳಾಗಿರುವ ನನಗೂ ಕೂಡ ನಿನ್ನ ಸಾನ್ನಿಧ್ಯದಿಂದಾಗಿ ಮುಹೂರ್ತಕಾಲವಾದರೂ ಈ ಶೋಕವಿಪಾಕದಿಂದ ಬಿಡುಗಡೆಯಾದೀತು. ಪುನಃ ನೀನಿಲ್ಲಿಗೆ ಶ್ರೀರಾಮನೊಡನೆ ಬರಲು ಇಲ್ಲಿಂದ ಹೊರಟುಹೋದೆಯಾದರೆ ನೀನು ಬರುವವರೆಗೂ ನನ್ನ ಪ್ರಾಣಗಳು ಉಳಿದಿರುವುವೋ ಇಲ್ಲವೋ ಎಂಬ ಸಂದೇಹವಿದ್ದೇ ಇದೆ. ದುಃಖಗಳ ಪರಂಪರೆಯನ್ನೇ ಅನುಭವಿಸುತ್ತಿರುವ, ದುರ್ದಶೆಗೆ ಒಳಗಾಗಿ ರುವ, ದುಃಖಕ್ಕೆ ಈಡಾಗಿರುವ ನನ್ನನ್ನು–ನಿನ್ನನ್ನು ನೋಡದೇ ಇರುವುದರಿಂದ ಉಂಟಾಗುವ ಶೋಕವೂ ಪುನಃ ಮತ್ತಷ್ಟು ಸಂತಾಪಗೊಳಿಸಬಹುದು. ನಿನ್ನ ಸಹಾಯಭೂತರಾದ ಕಪಿ-ಕರಡಿಗಳ ವಿಷಯದಲ್ಲಿಯೂ ಒಂದು ದೊಡ್ಡ ಸಂದೇಹವೇ ಭೂತಾಕಾರವಾಗಿ ನನ್ನ ಮುಂದೆ ನಿಂತಿದೆ. ವಾನರ-ಭಲ್ಲೂಕ ಸೈನ್ಯವಾಗಲೀ, ರಾಜಪುತ್ರರಾದ ರಾಮ-ಲಕ್ಷ್ಮಣರಾಗಲೀ, ದಾಟಲು ದುಸ್ಸಾಧ್ಯವಾದ ಈ ಮಹಾಸಮುದ್ರವನ್ನು ಹೇಗೆ ದಾಟುವರು? ಪ್ರಪಂಚ ದಲ್ಲಿರುವ ಪ್ರಾಣಿಗಳಲ್ಲಿ ಗರುಡ, ವಾಯು ಮತ್ತು ನೀನು–ಈ ಮೂವರಿಗೆ

ಮಾತ್ರವೇ ಈ ಮಹಾಸಮುದ್ರವನ್ನು ಹಾರುವ ಶಕ್ತಿಯಿರುವುದೆಂದು ನಾನು ಭಾವಿಸುತ್ತೇನೆ.

ಕಾರ್ಯಮಾಡುವ ವಿಧಾನವನ್ನು ತಿಳಿದಿರುವವರಲ್ಲಿ ಶ್ರೇಷ್ಠನಾದವನೇ! ದುಷ್ಕರವಾದ ಈ ಕಾರ್ಯಸಾಧನೆಗಾಗಿ ನೀನು ಯಾವ ಉಪಾಯ ವನ್ನು ಕಂಡುಕೊಂಡಿರುವೆ? ಈ ಎಲ್ಲ ರಾಕ್ಷಸರನ್ನೂ ಸಂಹರಿಸಿ ನನ್ನನ್ನು ವಿಮೋಚನೆಗೊಳಿಸುವ ಕಾರ್ಯವನ್ನು ಸಾಧಿಸಲು ನೀನೊಬ್ಬನೇ ಸಾಕು. ಆದರೆ ನಿನ್ನ ಈ ಬಲಪ್ರದರ್ಶನವು ನಿನ್ನ ಯಶಸ್ಸಿಗೆ ಕಾರಣವಾಗುತ್ತದೆ. ಶ್ರೀರಾಮನಿಗೆ ಇದರಿಂದ ಯಶಸ್ಸು ಲಭಿಸುವುದಿಲ್ಲ. ಶ್ರೀರಾಮನು ಸಮಸ್ತ ವಾದ ಬಲದಿಂದಲೂ ಕೂಡಿ ಇಲ್ಲಿಗೆ ಬಂದು ಯುದ್ಧದಲ್ಲಿ ರಾವಣನನ್ನು ಸಂಹರಿಸಿ ವಿಜಯಿಯಾಗಿ ನನ್ನನ್ನು ತನ್ನ ಪಟ್ಟಣಕ್ಕೆ ಕರೆದೊಯ್ದನಾದರೆ–ಅದು ಅವನಿಗೆ ಯಶಸ್ಕರವು. ವೀರನಾದ ಶ್ರೀರಾಮನ ಭಯದಿಂದಾಗಿ ರಾವಣನು ಅರಣ್ಯದಲ್ಲಿದ್ದ ನನ್ನನ್ನು ವಂಚನೆಯಿಂದ ಕರೆತಂದನು. ಹಾಗೆ ರಾಮನು ಮಾಡಕೂಡದು. ಶತ್ರುಗಳ ಬಲವನ್ನು ನುಚ್ಚುನೂರು ಮಾಡುವಷ್ಟು ಸಾಮರ್ಥ್ಯವನ್ನು ಹೊಂದಿರುವ ಶ್ರೀರಾಮನು ಲಂಕೆಯನ್ನು ಸೈನ್ಯಗಳಿಂದ ತುಂಬಿ ರಾವಣನನ್ನು ಪರಾಜಯಗೊಳಿಸಿ ನನ್ನನ್ನು ತನ್ನ ರಾಜ್ಯಕ್ಕೆ ಕರೆದೊಯ್ಯಬೇಕು. ಅದು ಶ್ರೀರಾಮನ ಶಕ್ತಿ-ಸಾಮರ್ಥ್ಯಗಳಿಗೆ ಅನುರೂಪವಾದ ಕಾರ್ಯವಾಗುವುದು. ಯುದ್ಧದಲ್ಲಿ ಮಹಾಶೌರ್ಯವನ್ನು ತೋರುವ ಮಹಾತ್ಮನಾದ ಶ್ರೀರಾಮನ ಪರಾಕ್ರಮವು ಅವನ ಶೌರ್ಯಕ್ಕೆ ಅನುಗುಣವಾಗಿ ಪ್ರಕಟಿತವಾಗುವಂತೆ ನೀನು ಉಪಾಯವನ್ನು ಮಾಡಬೇಕು.'

ರಾಘವ! ಅರ್ಥವತ್ತಾದ ಮತ್ತು ಯುಕ್ತಿಯುಕ್ತವಾದ ಸೀತಾದೇವಿಯ ಆ ಮಾತನ್ನು ಕೇಳಿ ನಾನು ಕೊನೆಯದಾಗಿ ಉತ್ತರಿಸಿದೆನು :

'ದೇವಿ! ಕಪಿ-ಕರಡಿಗಳ ಸೈನ್ಯಕ್ಕೆ ಅಧಿಪನಾಗಿರುವ, ಹಾರುವವರಲ್ಲಿ ಶ್ರೇಷ್ಠನಾದ, ಸತ್ತ್ವಸಂಪನ್ನನಾದ ಸುಗ್ರೀವನು ನಿನ್ನ ವಿಮೋಚನೆಯ ಸಲುವಾಗಿ ದೃಢವಾದ ಪ್ರತಿಜ್ಞೆಯನ್ನೇ ಮಾಡಿರುವನು. ಶೌರ್ಯಸಂಪನ್ನರಾದ, ಸತ್ತ್ವವಂತರಾದ, ಮಹಾಬಲಿಷ್ಠರಾದ, ಮನಸ್ಸಿನ ಸಂಕಲ್ಪದಂತೆ ಹಾರುವ ಸಾಮರ್ಥ್ಯವಿರುವ ಸಾವಿರಾರು ಕಪೀಶ್ವರರು ರಾಜನಾದ ಸುಗ್ರೀವನ ಆಜ್ಞಾ ಧಾರಕರಾಗಿರುವರು. ಅವರ ಸಂಚಾರವು ಭೂಮಿಯಲ್ಲಾಗಲೀ, ಅಂತರಿಕ್ಷ

ದಲ್ಲಾಗಲೀ, ಅಡ್ಡಲಾಗಿಯೇ ಆಗಲೀ–ಕುಂಠಿತವಾಗುವುದಿಲ್ಲ. ಎಲ್ಲಿಗೆಂದರಲ್ಲಿಗೆ ಹೋಗಲು ಅವರೆಲ್ಲರೂ ಸಮರ್ಥರಾಗಿರುವರು. ಮಹಾತೇಜಸ್ವಿಗಳಾದ ಕಪೀಶ್ವರರು ಯಾವುದೇ ಮಹಾಕಾರ್ಯಗಳಲ್ಲಿ ತೊಡಗಿದರೂ ಆಯಾಸಗೊಳ್ಳುವುದಿಲ್ಲ. ಮಹಾಬಲಿಷ್ಠರಾದ, ಮಹಾಭಾಗ್ಯಶಾಲಿಗಳಾದ, ವಾಯುಮಾರ್ಗಾನುಸಾರಿಗಳಾದ, ಬಲದಿಂದ ಕೊಬ್ಬಿರುವ ವಾನರರು ಈ ಭೂಮಂಡಲವನ್ನು ಹಲವಾರು ಬಾರಿ ಸುತ್ತಿಬಂದಿರುವರು.

**ಮದ್ವಿಶಿಷ್ಟಾಶ್ಚ ತುಲ್ಯಾಶ್ಚ ಸನ್ತಿ ತತ್ರ ವನೌಕಸಃ ।**
**ಮತ್ತಃ ಪ್ರತ್ಯವರಃ ಕಶ್ಚಿನ್ನಾಸ್ತಿ ಸುಗ್ರೀವಸಂನಿಧೌ ॥೨೧॥**

ನನಗಿಂತಲೂ ಅಧಿಕಪರಾಕ್ರಮಿಗಳೂ ಮತ್ತು ನನಗೆ ಸಮಾನರಾದವರೂ ಸುಗ್ರೀವನ ಬಳಿಯಲ್ಲಿದ್ದಾರೆ. ಆದರೆ ಪರಾಕ್ರಮದಲ್ಲಿ ನನಗಿಂತಲೂ ಕೀಳಾದವರು ಯಾರೂ ಇಲ್ಲ.

**ಅಹಂ ತಾವದಿಹ ಪ್ರಾಪ್ತಃ ಕಿಂ ಪುನಸ್ತೇ ಮಹಾಬಲಾಃ ।**
**ನ ಹಿ ಪ್ರಕೃಷ್ಟಾಃ ಪ್ರೇಷ್ಯನ್ತೇ ಪ್ರೇಷ್ಯನ್ತೇ ಹೀತರೇ ಜನಾಃ ॥೨೨॥**

ಕಡಿಮೆ ಬಲವಿರುವ ನಾನೇ ಇಲ್ಲಿಗೆ ಬಂದಿರುವಾಗ ಮಹಾಬಲಿಷ್ಠರಾದ ಕಪಿಶ್ರೇಷ್ಠರ ವಿಷಯವಾಗಿ ಹೇಳುವುದೇನಿದೆ? ಇಂತಹ ಸಾಮಾನ್ಯವಾದ ಕಾರ್ಯಗಳಿಗೆ ರಾಜರು ಶ್ರೇಷ್ಠರಾದವರನ್ನು ಯಾವಾಗಲೂ ಕಳುಹಿಸುವುದಿಲ್ಲ. ಸಾಮಾನ್ಯಜನರನ್ನೇ ಕಳುಹಿಸುತ್ತಾರೆ.

ದೇವಿ! ಪರಿತಾಪವನ್ನು ಇನ್ನಾದರೂ ಸಾಕುಮಾಡು. ನಿನ್ನ ದೈನ್ಯವು ದೂರಸರಿಯಲಿ. ಕಪಿನಾಯಕರೆಲ್ಲರೂ ಒಂದೇ ನೆಗೆತಕ್ಕೆ ಲಂಕೆಗೆ ಬರುತ್ತಾರೆ. ಮಹಾಭಾಗ್ಯಶಾಲಿನಿಯೇ! ನರಪುಂಗವರಾದ, ಉದಯಿಸಿದ ಸೂರ್ಯ-ಚಂದ್ರರಂತೆ ಪ್ರಕಾಶಮಾನರಾಗಿರುವ ರಾಮ-ಲಕ್ಷ್ಮಣರು ನನ್ನ ಬೆನ್ನಿನ ಮೇಲೆ ಕುಳಿತು ಬಹಳ ಬೇಗ ನಿನ್ನ ಬಳಿಗೆ ಬರುತ್ತಾರೆ.

ಶತ್ರುಸಂಹಾರಕನಾದ ಸಿಂಹಸದೃಶನಾದ ಶ್ರೀರಾಘವನನ್ನು ನೀನು ಬಹಳ ಬೇಗ ಕಾಣಲಿರುವೆ. ಅಂತೆಯೇ ಲಂಕಾಪಟ್ಟಣದ ಮಹಾದ್ವಾರದಲ್ಲಿ ಧನುಸ್ಸನ್ನು ಹಿಡಿದು ನಿಲ್ಲುವ ಲಕ್ಷ್ಮಣನನ್ನೂ ಕಾಣುವೆ. ಉಗುರು ಮತ್ತು ಕೋರೆದಾಡೆಗಳೇ ಆಯುಧಗಳಾಗಿರುವ, ಸಿಂಹ-ವ್ಯಾಘ್ರಗಳಿಗೆ ಅನುರೂಪವಾದ

ಪರಾಕ್ರಮವುಳ್ಳ, ಗಜೇಂದ್ರಸದೃಶರಾದ, ಮಹಾವೀರರಾದ, ಗುಂಪುಗೂಡಿ ಬರುವ ವಾನರಶ್ರೇಷ್ಠರನ್ನೂ ನೀನು ಬಹುಬೇಗ ಕಾಣುವೆ. ಪರ್ವತ ಸದೃಶರಾದ ಮತ್ತು ಮೇಘಸದೃಶರಾದ ಕಪಿಶ್ರೇಷ್ಠರು ಲಂಕಾದ್ವೀಪದಲ್ಲಿರುವ ಮಲಯಪರ್ವತದ ತಪ್ಪಲುಗಳಲ್ಲಿ ಮಾಡುವ ಗರ್ಜನೆಯನ್ನು ನೀನು ಬಹಳ ಬೇಗ ಕೇಳಲಿರುವೆ. ವನವಾಸವನ್ನು ಮುಗಿಸಿ ಅಯೋಧ್ಯೆಯಲ್ಲಿ ನಿನ್ನೊಡನೆ ಪಟ್ಟಾಭಿಷಿಕ್ತನಾಗುವ, ಶತ್ರುವರ್ದನನಾದ ಶ್ರೀರಾಮನನ್ನು ನೀನು ಕ್ಷಿಪ್ರವಾಗಿ ಸಂದರ್ಶಿಸುವೆ.'

ರಾಘವ! ನಾನು ಹೀಗೆ ಹೇಳಲು ನಿನ್ನ ವಿರಹಶೋಕದಿಂದ ಅತ್ಯಂತ ಪೀಡಿತಳಾಗಿದ್ದರೂ ಸೀತೆಯು ವೀರ್ಯವತ್ತಾಗಿ ಮಾತನಾಡುವ ನನ್ನ ಮಂಗಳಕರವಾದ ಮತ್ತು ಇಷ್ಟವಾದ ಮಾತುಗಳಿಂದ ಸಮಾಧಾನವನ್ನು ಹೊಂದಿದಳು."

೬೮ನೆಯ ಸರ್ಗವು ಮುಗಿಯಿತು.

## ಸುಂದರಕಾಂಡವು ಮುಗಿಯಿತು.

---

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

**ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।**
**ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥**
**ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।**
**ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥**
**ಚರಿತಂ ರಘುನಾಥಸ್ಯ ಶತಕೋಟಿಪ್ರವಿಸ್ತರಮ್ ।**
**ಏಕೈಕಮಕ್ಷರಂ ಪ್ರೋಕ್ತಂ ಮಹಾಪಾತಕನಾಶನಮ್ ॥**
**ಶೃಣ್ವನ್ರಾಮಾಯಣಂ ಭಕ್ತ್ಯಾ ಯಃ ಪಾದಂ ಪದಮೇವ ವಾ ।**
**ಸ ಯಾತಿ ಬ್ರಹ್ಮಣಃ ಸ್ಥಾನಂ ಬ್ರಹ್ಮಣಾ ಪೂಜ್ಯತೇ ಸದಾ ॥**

ರಾಮಾಯ ರಾಮಭದ್ರಾಯ ರಾಮಚನ್ದ್ರಾಯ ವೇಧಸೇ ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥

ಮಙ್ಗಲಂ ಕೋಸಲೇನ್ದ್ರಾಯ ಮಹನೀಯಗುಣಾತ್ಮನೇ ।
ಚಕ್ರವರ್ತಿತನೂಜಾಯ ಸಾರ್ವಭೌಮಾಯ ಮಙ್ಗಲಮ್ ॥

ಯನ್ಮಙ್ಗಲಂ ಸಹಸ್ರಾಕ್ಷೇ ಸರ್ವದೇವನಮಸ್ಕೃತೇ ।
ವೃತ್ರನಾಶೇ ಸಮಭವತ್ತತ್ತೇ ಭವತು ಮಙ್ಗಲಮ್ ॥

ಯನ್ಮಙ್ಗಲಂ ಸುಪರ್ಣಸ್ಯ ವಿನತಾ ಕಲ್ಪಯತ್ಪುರಾ ।
ಅಮೃತಂ ಪ್ರಾರ್ಥಯಾನಸ್ಯ ತತ್ತೇ ಭವತು ಮಙ್ಗಲಮ್ ॥

ಅಮೃತೋತ್ಪಾದನೇ ದೈತ್ಯಾನ್ಘ್ನತೋ ವಜ್ರಧರಸ್ಯ ಯತ್ ।
ಅದಿತಿರ್ಮಙ್ಗಲಂ ಪ್ರಾದಾತ್ತತ್ತೇ ಭವತು ಮಙ್ಗಲಮ್ ॥

ತ್ರೀನ್ವಿಕ್ರಮಾನ್ಪ್ರಕ್ರಮತೋ ವಿಷ್ಣೋರಮಿತತೇಜಸಃ ।
ಯದಾಸೀನ್ಮಙ್ಗಲಂ ರಾಮ ತತ್ತೇ ಭವತು ಮಙ್ಗಲಮ್ ॥

ಋತವಃ ಸಾಗರಾ ದ್ವೀಪಾ ವೇದಾ ಲೋಕಾ ದಿಶಶ್ಚ ತೇ ।
ಮಙ್ಗಲಾನಿ ಮಹಾಬಾಹೋ ದಿಶನ್ತು ತವ ಸರ್ವದಾ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಶ್ರೀ ಕೃಷ್ಣಾರ್ಪಣಮಸ್ತು ಶ್ರೀ ಸದ್ಗುರುಚರಣಾರವನ್ದಾರ್ಪಣಮಸ್ತು
ಓಂ ತತ್ಸತ್

ಶ್ರೀಮಹಾಗಣಪತಯೇ ನಮಃ ಶ್ರೀಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

**ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।**
**ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥**

# ಶ್ರೀಮದ್ವಾಲ್ಮೀಕಿರಾಮಾಯಣ-ಯುದ್ಧಕಾಂಡ



## ಶ್ರೀರಾಮನಿಂದ ಹನುಮಂತನ ಪ್ರಶಂಸೆ : ಶ್ರೀರಾಮನು ಪ್ರೀತಿಯಿಂದ ಹನುಮಂತನನ್ನು ಆಲಿಂಗಿಸಿಕೊಂಡುದು : ಸಮುದ್ರವನ್ನು ದಾಟುವ ವಿಷಯದಲ್ಲಿ ಶ್ರೀರಾಮನ ಚಿಂತೆ

**ಶ್ರುತ್ವಾ ಹನುಮತೋ ವಾಕ್ಯಂ ಯಥಾವದನುಭಾಷಿತಮ್ ।**
**ರಾಮಃ ಪ್ರೀತಿಸಮಾಯುಕ್ತೋ ವಾಕ್ಯಮುತ್ತರಮಬ್ರವೀತ್ ॥೧॥**

ಹನುಮಂತನು ಯಥಾವತ್ತಾಗಿ ಹೇಳಿದ ಸೀತಾವೃತ್ತಾಂತವನ್ನು ಕೇಳಿ ಶ್ರೀರಾಮನು ಪ್ರಸನ್ನನಾಗಿ ಉತ್ತ ಮೋತ್ತ ಮವಾದ ಈ ಮಾತನ್ನು ಹೇಳಿದನು

**ಕೃತಂ ಹನುಮತಾ ಕಾರ್ಯಂ ಸುಮಹದ್ಭುವಿ ದುಷ್ಕರಮ್ ।**
**ಮನಸಾಪಿ ಯದನ್ಯೇನ ನ ಶಕ್ಯಂ ಧರಣೀತಲೇ ॥೨॥**

"ಭೂಮಂಡಲದಲ್ಲಿಯೇ ಯಾರೂ ಮಾಡಲಾಗದ, ದುಷ್ಕರವಾದ ಕಾರ್ಯವನ್ನು ಹನುಮಂತನು ಮಾಡಿದ್ದಾನೆ. ಈ ಪ್ರಪಂಚದಲ್ಲಿ ಬೇರೆಯವರಿಗೆ ಹನುಮಂತನು ಮಾಡಿರುವ ಇಂತಹ ಕಾರ್ಯವನ್ನು ಮಾಡುವೆನೆಂದು ಮನಸ್ಸಿನಲ್ಲಿ ಕೂಡ ಚಿಂತಿಸಲು ಸಾಧ್ಯವಿಲ್ಲ. ಅಂತಹ ಪರಮಾದ್ಭುತವಾದ ಕಾರ್ಯವನ್ನು ಮಾರುತಿಯು ಮಾಡಿರುವನು.*

---

* ಪ್ರತ್ಯಕ್ಷೇ ಗುರವಃ ಸ್ತುತ್ಯಾಃ ಪರೋಕ್ಷೇ ಮಿತ್ರಬಾನ್ಧವಾಃ । ಕರ್ಮಾನ್ತೇ ದಾಸಭೃತ್ಯಾಶ್ಚ ನ ಕದಾಚನ ಪುತ್ರಕಾಃ –ಗುರುಗಳನ್ನು ಪ್ರತ್ಯಕ್ಷವಾಗಿಯೇ ಸ್ತೋತ್ರ ಮಾಡಬೇಕು. ಮಿತ್ರರನ್ನೂ–ಬಂಧುಗಳನ್ನೂ ಪರೋಕ್ಷವಾಗಿ ಹೊಗಳಬೇಕು. ಕಾರ್ಯ

**ನ ಹಿ ತಂ ಪರಿಪಶ್ಯಾಮಿ ಯಸ್ತರೇತ ಮಹೋದಧಿಮ್ ।**
**ಅನ್ಯತ್ರ ಗರುಡಾದ್ವಾಯೋರನ್ಯತ್ರ ಚ ಹನೂಮತಃ ॥೩॥**

ಗರುಡ, ವಾಯು ಮತ್ತು ಹನುಮಂತ–ಈ ಮೂವರನ್ನು ಬಿಟ್ಟು ಮಹೋದಧಿಯನ್ನು ದಾಟಲು ಸಮರ್ಥರಾದ ಮತ್ತೊಬ್ಬರನ್ನು ನಾನು ಕಾಣೆನು.

**ದೇವದಾನವಯಕ್ಷಾಣಾಂ ಗನ್ಧರ್ವೋರಗರಕ್ಷಸಾಮ್ ।**
**ಅಪ್ರಧೃಷ್ಯಾಂ ಪುರೀಂ ಲಙ್ಕಾಂ ರಾವಣೇನ ಸುರಕ್ಷಿತಾಮ್ ॥೪॥**

**ಯೋ ವೀರ್ಯಬಲಸಂಪನ್ನೋ ದ್ವಿಷದ್ಭಿರನಿವಾರಿತಃ ।**
**ಪ್ರವಿಷ್ಟಃ ಸತ್ತ್ವಮಾಶ್ರಿತ್ಯ ಶ್ವಸನ್ಕೋ ನಾಮ ನಿಷ ಮೇತ್ ॥೫॥**

ರಾವಣನಿಂದ ರಕ್ಷಿಸಲ್ಪಡುತ್ತಿರುವ ಲಂಕಾಪಟ್ಟಣವನ್ನು ದೇವ-ದಾನವ-ಯಕ್ಷರಿಂದಾಗಲೀ ಗಂಧರ್ವೋರಗ-ರಾಕ್ಷಸರಿಂದಾಗಲೀ ಆಕ್ರಮಿಸಲು ಸಾಧ್ಯವಿಲ್ಲ. ಹಾಗಿರುವಾಗ ತನ್ನ ಬಲವನ್ನು ಆಶ್ರಯಿಸಿ ಲಂಕೆಯನ್ನು ಪ್ರವೇಶಿಸಿ ಶತ್ರುಗಳಿಂದ ತಡೆಯಲ್ಪಡದೆ ಪುನಃ ಅಲ್ಲಿಂದ ಜೀವಸಹಿತವಾಗಿ ನಿರ್ಗಮಿಸಲು ಹನುಮಂತನೊಬ್ಬನನ್ನು ಬಿಟ್ಟು ಬೇರೆ ಯಾರಿಂದ ತಾನೇ ಸಾಧ್ಯವಾದೀತು?

**ಕೋ ವಿಶೇತ್ಸುದುರಾಧರ್ಷಾಂ ರಾಕ್ಷಸೈಶ್ಚ ಸುರಕ್ಷಿತಾಮ್ ।**
**ಯೋ ವೀರ್ಯಬಲಸಂಪನ್ನೋ ನ ಸಮಃ ಸ್ಯಾದ್ಧನೂಮತಃ ॥೬॥**

ರಾಕ್ಷಸರಿಂದ ರಕ್ಷಿಸಲ್ಪಡುತ್ತಿರುವ, ಆಕ್ರಮಿಸಲು ಅಸಾಧ್ಯವಾದ ಲಂಕೆಯನ್ನು ವೀರ್ಯ-ಬಲಗಳಲ್ಲಿ ಹನುಮಂತನಿಗೆ ಸಮಾನನಲ್ಲದ ಯಾವನು ತಾನೇ ಪ್ರವೇಶಿಸುವನು?

**ಭೃತ್ಯಕಾರ್ಯಂ ಹನುಮತಾ ಸುಗ್ರೀವಸ್ಯ ಕೃತಂ ಮಹತ್ ।**
**ಏವಂ ವಿಧಾಯ ಸ್ವಬಲಂ ಸದೃಶಂ ವಿಕ್ರಮಸ್ಯ ಚ ॥೭॥**

ಹನುಮಂತನು ಸಮುದ್ರಲಂಘನ, ಲಂಕಾಪ್ರವೇಶ–ಇವೇ ಮೊದ

---

ದನಂತರ ದಾಸರನ್ನೂ ಸೇವಕರನ್ನೂ ಹೊಗಳಬೇಕು. ಮಕ್ಕಳನ್ನು ಯಾವುದೇ ಕಾರಣದಿಂದಲೂ ಯಾವಾಗಲೂ ಹೊಗಳಬಾರದು–ಎಂಬ ಆರ್ಯೋಕ್ತಿಯಂತೆ ಶ್ರೀರಾಮನು ಕಾರ್ಯದ ಅನಂತರದಲ್ಲಿ ದಾಸನಾದ ಹನುಮಂತನನ್ನು ಪ್ರಶಂಸೆಮಾಡುತ್ತಾನೆ.

ಲಾದುವುಗಳ ಮೂಲಕ ತನ್ನ ಪರಾಕ್ರಮಕ್ಕೆ ಅನುರೂಪವಾದ ಬಲವನ್ನು ಪ್ರಕಟಿಸಿ ಸುಗ್ರೀವನಿಗೆ ಮಹತ್ತ್ವಪೂರ್ಣವಾದ ಸೇವಾಕಾರ್ಯವನ್ನು ಮಾಡಿರುವನು.

**ಯೋ ಹಿ ಭೃತ್ಯೋ ನಿಯುಕ್ತಃ ಸನ್ಭರ್ತ್ರಾ ಕರ್ಮಣಿ ದುಷ್ಕರೇ ।**
**ಕುರ್ಯಾತ್ತದನುರಾಗೇಣ ತಮಾಹುಃ ಪುರುಷೋತ್ತಮಮ್ ॥೮॥**

ಯಜಮಾನನಿಂದ ದುಷ್ಕರವಾದ ಕಾರ್ಯದಲ್ಲಿ ನಿಯುಕ್ತನಾದ ಯಾವ ಸೇವಕನು ಆ ಕಾರ್ಯವನ್ನು ಪೂರ್ಣಗೊಳಿಸಿ ಮುಖ್ಯಕಾರ್ಯಕ್ಕೆ ವಿರೋಧ ವಲ್ಲದ–ಮುಖ್ಯಕಾರ್ಯಕ್ಕೆ ಪೂರಕವಾದ ಇನ್ನೂ ಅನೇಕಕಾರ್ಯಗಳನ್ನು ಸಾಧಿಸಿಕೊಂಡು ಬರುವನೋ–ಅಂತಹವನನ್ನು ಸೇವಕಪುರುಷರಲ್ಲಿ ಶ್ರೇಷ್ಠ ನಾದವನೆಂದು ಹೇಳುತ್ತಾರೆ.

**ಭೃತ್ಯಸ್ತು ಯಃ ಪರಂ ಕಾರ್ಯಂ**
**ನ ಕುರ್ಯಾನ್ನೃಪತೇಃ ಪ್ರಿಯಮ್ ।**
**ಭೃತ್ಯೋ ಯುಕ್ತಃ ಸಮರ್ಥಶ್ಚ**
**ತಮಾಹುರ್ಮಧ್ಯಮಂ ನರಮ್ ॥೯॥**

ಒಂದು ಕಾರ್ಯಕ್ಕೆ ನಿಯುಕ್ತನಾದ ಸೇವಕನು ಯೋಗ್ಯತೆಯಿಂದ ಕೂಡಿದ್ದರೂ ಮತ್ತು ಸಮರ್ಥನಾಗಿದ್ದರೂ ಹೇಳಿದ ಕಾರ್ಯವೊಂದನ್ನು ನಿರ್ವಹಿಸಿ ರಾಜನಿಗೆ ಪ್ರಿಯವಾಗುವಂತಹ ಬೇರೆ ಯಾವ ಕಾರ್ಯವನ್ನೂ ಮಾಡುವುದಿಲ್ಲವೋ–ಅಂತಹ ಸೇವಕನನ್ನು ಮಧ್ಯಮವರ್ಗದ ಸೇವಕನೆಂದು ಹೇಳುತ್ತಾರೆ.

**ನಿಯುಕ್ತೋ ನೃಪತೇಃ ಕಾರ್ಯಂ ನ ಕುರ್ಯಾದ್ಯಃ ಸಮಾಹಿತಃ ।**
**ಭೃತ್ಯೋ ಯುಕ್ತಃ ಸಮರ್ಥಶ್ಚ ತಮಾಹುಃ ಪುರುಷಾಧಮಮ್ ॥**

ರಾಜನ ಒಂದು ಕಾರ್ಯದಲ್ಲಿ ನಿಯುಕ್ತನಾದ ಸೇವಕನು ಆ ಕಾರ್ಯ ವನ್ನು ಸಾಧಿಸುವ ಯೋಗ್ಯತೆ ಮತ್ತು ಸಾಮರ್ಥ್ಯಗಳಿದ್ದರೂ ಏಕಾಗ್ರಚಿತ್ತನಾಗಿ ಸ್ವಾಮಿಯು ಹೇಳಿದ ಕಾರ್ಯವನ್ನು ಸಾಧಿಸದಿದ್ದರೆ–ಅಂತಹವನನ್ನು ಪುರುಷಾಧಮನೆಂದು ಹೇಳುತ್ತಾರೆ.

ಹನುಮಂತನಿಗೆ ಸುಗ್ರೀವನು ಸೀತೆಯನ್ನು ಹುಡುಕುವ ಒಂದೇ ಕಾರ್ಯವನ್ನು ಹೇಳಿದ್ದರೂ ಅವನು ಅವಳನ್ನು ಹುಡುಕಿದುದರ ಜೊತೆಗೆ

ಇನ್ನೂ ಅನೇಕ ಮಹತ್ತ್ವಪೂರ್ಣವಾದ ಕಾರ್ಯಗಳನ್ನೂ ಸಾಧಿಸಿಕೊಂಡು ಬಂದಿರುವನು. ಇಂತಹ ಕಾರ್ಯಗಳನ್ನು ಸಾಧಿಸುವಾಗ ಅವನು ಅವಮಾನಿತನಾಗಲಿಲ್ಲ. ವಿಜಯ ಗಳಿಸಿದ್ದಾನೆ. ಇದರಿಂದ ಸುಗ್ರೀವನೂ ಅತ್ಯಂತ ಸಂತುಷ್ಟನಾಗಿದ್ದಾನೆ. ಹನುಮಂತನು ವೈದೇಹಿಯನ್ನು ಹುಡುಕಿ ಸಂದರ್ಶಿಸಿ ಬಂದು ನನ್ನನ್ನೂ, ಮಹಾಬಲನಾದ ಲಕ್ಷ್ಮಣನನ್ನೂ ಮತ್ತು ರಘುವಂಶವನ್ನೂ ಧರ್ಮತಃ ಸಂರಕ್ಷಿಸಿದ್ದಾನೆ. ನನಗೆ ಇಂತಹ ಅತ್ಯಾನಂದಕರ ವಾದ ವಾರ್ತೆಯನ್ನು ಹೇಳಿದ ಹನುಮಂತನಿಗೆ ಪ್ರಿಯವಾದ ವಸ್ತುವೊಂದನ್ನು ಕೊಡಲು ನಾನೀಗ ಅಸಮರ್ಥನಾಗಿದ್ದೇನೆ. ದೀನನಾಗಿರುವ ನನ್ನ ಮನಸ್ಸಿಗೆ ಇದು ಬಹಳ ಖೇದವನ್ನುಂಟುಮಾಡಿದೆ.

**ಏಷ ಸರ್ವಸ್ವಭೂತಸ್ತು ಪರಿಷ್ವಙ್ಗೋ ಹನೂಮತಃ ।**
**ಮಯಾ ಕಾಲಮಿಮಂ ಪ್ರಾಪ್ಯ ದತ್ತಶ್ಚಾಸ್ತು ಮಹಾತ್ಮನಃ ॥೧೪॥**

ಯಾವುದೇ ಪ್ರಿಯವಸ್ತುವನ್ನು ಕೊಡಲಾಗದಿದ್ದರೂ ಈ ಸಮಯದಲ್ಲಿ ಮಹಾತ್ಮನಾದ ಹನುಮಂತನಿಗೆ ಗಾಢವಾದ ಆಲಿಂಗನಸುಖವನ್ನು ದಯ ಪಾಲಿಸುತ್ತೇನೆ. ಇದೇ ನನ್ನ ಸರ್ವಸ್ವವೂ ಆಗಿದೆ.”*

ಹೀಗೆ ಹೇಳಿ ಶ್ರೀರಾಮನು–ಪ್ರೀತಿಯಿಂದ ಪುಳಕಿತವಾದ ಅಂಗ ಗಳಿಂದ, ಹೇಳಿದ ಕಾರ್ಯವನ್ನು ಮುಗಿಸಿಕೊಂಡು ಬಂದ ಪವಿತ್ರಾತ್ಮನಾದ ಹನುಮಂತನನ್ನು ಗಾಢವಾಗಿ ಆಲಿಂಗಿಸಿಕೊಂಡನು. ಬಳಿಕ ರಘುಶ್ರೇಷ್ಠನಾದ ಶ್ರೀರಾಮನು ಸ್ವಲ್ಪಹೊತ್ತು ಚಿಂತಿಸುತ್ತಿದ್ದು ಕಪೀಶ್ವರನಾದ ಸುಗ್ರೀವನು ಕೇಳಿಸಿಕೊಳ್ಳುತ್ತಿರುವಂತೆ ಈ ಮಾತನ್ನು ಹೇಳಿದನು :

“ಹನುಮಂತ! ಸೀತೆಯ ಅನ್ವೇಷಣವು ಯಾವ ವಿಧವಾದ ಅಡ ಚಣೆಯೂ ಇಲ್ಲದೇ ಒಳ್ಳೆಯ ರೀತಿಯಲ್ಲಿಯೇ ಆಯಿತು. ಆದರೆ ದಾಟಲು ಅಸಾಧ್ಯವಾದ ಈ ಸಮುದ್ರವನ್ನು ನೆನೆದೊಡನೆಯೇ ನನ್ನ ಮನಸ್ಸಿನ ಉತ್ಸಾ

---

* ಶ್ರೀರಾಮನು ಹನುಮಂತನನ್ನು ಆಲಿಂಗಿಸಿ ಅವನಿಗೆ ಬ್ರಹ್ಮಾನಂದವನ್ನೇ ದಯ ಪಾಲಿಸಿದನು. ಬ್ರಹ್ಮಾಂಡಪುರಾಣದಲ್ಲಿ ಇದು ಸ್ಪಷ್ಟವಾಗಿಯೇ ಇದೆ. ಶ್ರೀರಾಮನ ಸರ್ವಸ್ವವೆಂದರೆ ಆನಂದವೇ ಆಗಿದೆ. ಗೀತಾಭಾಷ್ಯದಲ್ಲಿ ಶಂಕರಭಗವತ್ಪಾದರು ಇದನ್ನೇ ಹೇಳಿದ್ದಾರೆ. **ಆನನ್ದ ಏವ ಹಿ ಭಗವತಃ ಸರ್ವಸ್ವಂ । ಆನನ್ದ ಏವ ಹಿ ಮಾಯಯಾ ರಾಮಾದಿ ದೇಹತ್ವೇನ ಭಾಸತೇ ।**

ಹವೇ ಹಾಳಾಗುತ್ತದೆ. ಮಹಾಜಲರಾಶಿಯಿಂದ ಪೂರ್ಣವಾಗಿರುವ ವಿಸ್ತಾರ ವಾದ ಈ ಸಮುದ್ರವನ್ನು ದಾಟಲು ಹೇಗೆ ತಾನೇ ಸಾಧ್ಯವಾಗುತ್ತದೆ?

ಒಟ್ಟಾಗಿ ಸೇರಿದ ವಾನರರು ಸಮುದ್ರದ ದಕ್ಷಿಣತೀರಕ್ಕೆ ಹೋಗುವ ಬಗೆ ಹೇಗೆ? ವೈದೇಹಿಯು ಈ ವಿಷಯದಲ್ಲೇ ಸಂದೇಹಿಸಿದ್ದಾಳೆ. ಈ ಸಮಾಚಾರವನ್ನು ನಾನು ಈಗ ತಾನೇ ನಿನ್ನಿಂದ ಕೇಳಿದ್ದೇನೆ. ಈ ವಾನರರು ಸಮುದ್ರವನ್ನು ಹೇಗೆ ದಾಟುವರೆಂಬ ಪ್ರಶ್ನೆಗೆ ಉತ್ತರವಾದರೂ ಏನು?"

ಹನುಮಂತನಿಗೆ ಹೀಗೆ ಹೇಳಿ ಶತ್ರುನಾಶಕನಾದ, ಮಹಾಬಾಹುವಾದ ಶ್ರೀರಾಮನು ಶೋಕಾಕುಲನಾಗಿ ಚಿಂತೆಯಲ್ಲಿ ಮಗ್ನನಾದನು.

ಂನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೨ನೆಯ ಸರ್ಗ

## ಸುಗ್ರೀವನು ಶ್ರೀರಾಮನನ್ನು ಪ್ರೋತ್ಸಾಹಿಸಿದುದು

**ತಂ ತು ಶೋಕಪರಿದ್ಯೂನಂ ರಾಮಂ ದಶರಥಾತ್ಮಜಮ್ ।**
**ಉವಾಚ ವಚನಂ ಶ್ರೀಮಾನ್ಸುಗ್ರೀವಃ ಶೋಕನಾಶನಮ್ ॥೧॥**

ಹೀಗೆ ಶೋಕತಪ್ತನಾಗಿದ್ದ ದಶರಥನಂದನನಾದ ಶ್ರೀರಾಮನಿಗೆ ಶ್ರೀಮಂತನಾದ ಸುಗ್ರೀವನು ಶೋಕವನ್ನು ನಿವಾರಿಸುವ ಈ ಮಾತನ್ನು ಹೇಳಿದನು :

"ವೀರವರನೇ! ಸಾಧಾರಣಮಾನವನಂತೆ ನೀನೇಕೆ ಹೀಗೆ ಶೋಕಿಸು ತ್ತಿರುವೆ? ಹೀಗೆ ನೀನು ಚಿಂತೆಯಲ್ಲಿ ಮಗ್ನನಾಗಬೇಡ. ಕೃತಘ್ನನು ಸ್ನೇಹಿತ ನನ್ನು ಪರಿತ್ಯಜಿಸುವಂತೆ ನೀನು ಈ ಸಂತಾಪವನ್ನು ಪರಿತ್ಯಜಿಸು. ಸೀತೆಯ ಸಮಾಚಾರವು ತಿಳಿದಿದೆ. ಶತ್ರುವು ಎಲ್ಲಿರುವನೆಂಬುದೂ ತಿಳಿದಿದೆ. ಹೀಗಿರುವಾಗ ನಿನ್ನ ಸಂತಾಪಕ್ಕೆ ಕಾರಣವೇನೆಂಬುದನ್ನೇ ನಾನು ಕಾಣುತ್ತಿಲ್ಲ.

*** ಮತಿಮಾನ್ ಶಾಸ್ತ್ರವಿತ್ಪ್ರಾಜ್ಞಃ ಪಣ್ಡಿತಶ್ಚಾಸಿ ರಾಘವ ।**
**ತ್ಯಜೇಮಾಂ ಪಾಪಿಕಾಂ ಬುದ್ಧಿಂ ಕೃತಾತ್ಮೇವಾತ್ಮದೂಷಣಮ್ ॥೪॥**

---

* ಈ ಶ್ಲೋಕದಲ್ಲಿ ಬಂದಿರುವ ಮತಿಮಾನ್, ಶಾಸ್ತ್ರವಿತ್, ಪ್ರಾಜ್ಞ, ಪಣ್ಡಿತ–ಈ ಪದಗಳಿಗೆ ವ್ಯಾಖ್ಯಾನಕಾರರು ಪ್ರತ್ಯೇಕವಾದ ಅರ್ಥಗಳನ್ನೇ ಹೇಳಿದ್ದಾರೆ. ಮತಿಮಾನ್

ರಾಘವ! ನೀನು ಬುದ್ಧಿವಂತ. ಶಾಸ್ತ್ರಗಳನ್ನು ತಿಳಿದಿರುವೆ. ವಿಚಾರ ಕುಶಲನು. ಒಳ್ಳೆಯ ಜ್ಞಾನಸಂಪನ್ನನೂ ಆಗಿರುವೆ. ಅರ್ಥಸಿದ್ಧಿಯನ್ನು ಪಡೆದ ನಿಶ್ಚಿತಬುದ್ಧಿಯುಳ್ಳ ಮಹಾಪುರುಷನಂತೆ–ಆತ್ಮನಿಂದಾರೂಪವಾದ ಪಾಪಿಷ್ಠವಾದ ಈ ಬುದ್ಧಿಯನ್ನು ತ್ಯಜಿಸು.

ದೊಡ್ಡ-ದೊಡ್ಡ ಮೊಸಳೆಗಳಿಂದ ತುಂಬಿರುವ ಸಮುದ್ರವನ್ನೂ ದಾಟಿ ನಾವೆಲ್ಲರೂ ಲಂಕೆಯನ್ನು ಆಕ್ರಮಿಸೋಣ ಮತ್ತು ನಿನ್ನ ಶತ್ರುವನ್ನು ಸಂಹರಿಸೋಣ.

**ನಿರುತ್ಸಾಹಸ್ಯ ದೀನಸ್ಯ ಶೋಕಪರ್ಯಾಕುಲಾತ್ಮನಃ ।**
**ಸರ್ವಾರ್ಥಾ ವ್ಯವಸೀದನ್ತಿ ವ್ಯಸನಂ ಚಾಧಿಗಚ್ಛತಿ ॥೬॥**

ಉತ್ಸಾಹಶೂನ್ಯನಾಗಿ, ದೀನನಾಗಿ, ಯಾವಾಗಲೂ ಶೋಕಾಕುಲನಾಗಿರುವ ಮನುಷ್ಯನ ಎಲ್ಲ ಕಾರ್ಯಗಳೂ ಕೆಟ್ಟುಹೋಗುತ್ತವೆ ಮತ್ತು ಅವನು ವಿಪತ್ತಿಗೀಡಾಗುತ್ತಾನೆ.

ರಾಘವ! ಈ ವಾನರಸಮೂಹದ ಅಧಿಪತಿಗಳು ಎಲ್ಲ ಪ್ರಕಾರಗಳಿಂದಲೂ ಸಮರ್ಥರಾಗಿದ್ದಾರೆ. ಮಹಾಶೂರರಾಗಿದ್ದಾರೆ. ನಿನಗೆ ಪ್ರಿಯವಾದುದನ್ನು ಮಾಡಲು ಇವರಿಗೆ ವಿಶೇಷವಾದ ಉತ್ಸಾಹವಿದೆ. ಇವರು ನಿನ್ನ ಸಲುವಾಗಿ ಅಗ್ನಿಪ್ರವೇಶಮಾಡಲೂ ಸಿದ್ಧರಾಗಿದ್ದಾರೆ. ಸಮುದ್ರಲಂಘನ ಮತ್ತು ರಾವಣನ ಸಂಹಾರ–ಈ ವಿಷಯಗಳನ್ನು ಕೇಳಿದ ಇವರ ಮುಖಗಳು ಹರ್ಷದಿಂದ ವಿಕಸಿತವಾಗಿವೆ. ನನ್ನ ಈ ಊಹೆಯು ಸುದೃಢವಾದುದು. ಪರಾಕ್ರಮದಿಂದ ಶತ್ರುವಾದ ಪಾಪಕರ್ಮನಾದ ರಾವಣನನ್ನು ಸಂಹರಿಸಿ ಸೀತೆಯನ್ನು ಇಲ್ಲಿಗೆ ಕರೆತರುವಂತೆ ನಮ್ಮನ್ನು ಹುರಿದುಂಬಿಸು. ಈ ಸಮುದ್ರದ ಮೇಲೆ

---

**ಆಗಾಮಿಗೋಚರ ಜ್ಞಾನವಾನ್** = ಮುಂದಾಗುವುದನ್ನು ತಿಳಿಯುವ ಜ್ಞಾನವಿರುವವನು. **ಶಾಸ್ತ್ರವಿತ್** = ನೀತಿಶಾಸ್ತ್ರಜ್ಞ, ನೀತಿಶಾಸ್ತ್ರವನ್ನು ತಿಳಿದವನು. **ಪ್ರಾಜ್ಞಃ** = ಊಹಾಪೋಹಜ್ಞಃ = ಅನುಮಾನ ಮತ್ತು ಅನುಮಾನಪರಿಚ್ಛೇದ ಇದು ಊಹಾಪೋಹ. **ಪಣ್ಡಾ** = ನಿರ್ಣಯಾತ್ಮಕಂ ಜ್ಞಾನಂ ಸಾಸ್ಯ ಸಂಜಾತೇತಿ ಪಂಡಿತಃ ನಿರ್ಣಯಾತ್ಮಕವಾದ ಜ್ಞಾನವು ಯಾವನಲ್ಲಿ ಹುಟ್ಟಿರುವುದೋ ಅವನು ಪಂಡಿತ. **ಕೃತಾತ್ಮ** = ನಿಶ್ಚಿತಬುದ್ಧಿಯುಳ್ಳವನು. **ಆತ್ಮದೂಷಣ** = ಆತ್ಮನಿಂದೆ. ಆತ್ಮನಿಂದೆಯು ಮಹಾಪಾತಕ. 'ನಾತ್ಮಾನಮವಮನ್ಯೇತ'.

ಸೇತುವೆಯನ್ನು ಹೇಗೆ ಕಟ್ಟಬೇಕು? ಆ ರಾಕ್ಷಸನ ಪಟ್ಟಣವಾದ ಲಂಕೆಯನ್ನು ಹೇಗೆ ನೋಡಬೇಕು? ಎಂಬುದರ ಬಗೆಗೆ ಉಪಾಯವನ್ನು ಯೋಚಿಸು. ತ್ರಿಕೂಟಪರ್ವತದ ಶಿಖರದಲ್ಲಿರುವ ಆ ಲಂಕಾಪಟ್ಟಣವನ್ನು ಒಮ್ಮೆ ನೋಡಿದೆವೆಂದರೆ ಅದರ ದರ್ಶನಮಾತ್ರದಿಂದಲೇ ಯುದ್ಧದಲ್ಲಿ ರಾವಣನು ಹತನಾದನೆಂದು ಭಾವಿಸು. ಭಯಂಕರವಾದ, ವರುಣನ ಆಲಯವಾದ ಸಮುದ್ರದ ಮೇಲೆ ಸೇತುವೆಯನ್ನು ಕಟ್ಟದಿದ್ದರೆ ಇಂದ್ರಸಹಿತರಾದ ದೇವತೆಗಳಿಂದಲೂ ಲಂಕೆಯನ್ನು ವಿನಾಶಗೊಳಿಸಲು ಸಾಧ್ಯವಾಗುವುದಿಲ್ಲ. ಲಂಕಾಪಟ್ಟಣದ ಹತ್ತಿರದವರೆಗೂ ಸಮುದ್ರದ ಮೇಲೆ ಸೇತುವೆಯನ್ನು ಕಟ್ಟಲೇಬೇಕು. ಆ ಸೇತುವೆಯ ಮೂಲಕ ಸಮುದ್ರವನ್ನು ದಾಟಿ ಹೋಗುವ ನನ್ನ ಸೈನಿಕರು ಖಂಡಿತವಾಗಿಯೂ ಜಯಗಳಿಸುತ್ತಾರೆ. ಇಚ್ಛಾನುಸಾರವಾಗಿ ರೂಪಗಳನ್ನು ಧರಿಸುವ ಈ ವಾನರಸೈನಿಕರು ಯುದ್ಧಮಾಡುವುದರಲ್ಲಿ ಮಹಾವೀರರೂ ಶೂರರೂ ಆಗಿದ್ದಾರೆ. ರಾಮಚಂದ್ರ! ವ್ಯಾಕುಲಿತವಾದ ಬುದ್ಧಿಯನ್ನು ಆಶ್ರಯಿಸಬೇಡ. ಇಂತಹ ಬುದ್ಧಿಯು ಸಮಸ್ತಪುರುಷಾರ್ಥಗಳನ್ನೂ ಹಾಳುಮಾಡಿಬಿಡುತ್ತದೆ.

**ಪುರುಷಸ್ಯ ಹಿ ಲೋಕೇಽಸ್ಮಿನ್ ಶೋಕಃ ಶೌರ್ಯಾಪಕರ್ಷಣಃ ॥**

ಈ ಲೋಕದಲ್ಲಿ ಶೋಕವೆಂಬುದು ಮನುಷ್ಯನ ವೀರ್ಯ-ಶೌರ್ಯಗಳನ್ನೇ ಹಾಳುಮಾಡಿಬಿಡುತ್ತದೆ.

**ತನ್ನ ಕಾರ್ಯಂ ಮನುಷ್ಯೇಣ ಶೌಣ್ಡೀರ್ಯಮವಲಮ್ಬತಾ ।**
**ಅಸ್ಮಿನ್ಕಾಲೇ ಮಹಾಪ್ರಾಜ್ಞ ಸತ್ತ್ವಮಾತಿಷ್ಠ ತೇಜಸಾ ॥೧೫॥**

ಶೂರನಾದ ಮನುಷ್ಯನು ಅದಕ್ಕೆ ಎಡೆಗೊಡಬಾರದು. ಮಹಾಪ್ರಾಜ್ಞನೇ! ರಾಮ! ಈ ಸಮಯದಲ್ಲಿ ನೀನು ತೇಜಸ್ಸಿನೊಡನೆ ಧೈರ್ಯ ವನ್ನೂ ಆಶ್ರಯಿಸು.

**ಶೂರಾಣಾಂ ಹಿ ಮನುಷ್ಯಾಣಾಂ ತ್ವದ್ವಿಧಾನಾಂ ಮಹಾತ್ಮನಾಮ್ ।**
**ವಿನಷ್ಟೇ ವಾ ಪ್ರಣಷ್ಟೇ ವಾ ಕ್ಷಮಂ ನ ಹ್ಯನುಶೋಚಿತುಮ್ ॥**

ಯಾವುದೇ ವಸ್ತುವು ಕಳೆದುಹೋಗಿರಲಿ ; ಅಥವಾ ನಾಶಹೊಂದಿರಲಿ ; ನಿನ್ನಂತಹ ಮಹಾತ್ಮರಾದ ಶೂರಪುರುಷರು ಶೋಕಿಸುವುದು ಸರಿಯಲ್ಲ.

ನೀನಾದರೋ ಬುದ್ಧಿವಂತರಲ್ಲಿ ಶ್ರೇಷ್ಠನಾದವನು ; ಸಕಲಶಾಸ್ತ್ರಗಳ ಗೂಢಾರ್ಥಗಳನ್ನೂ ತಿಳಿದಿರತಕ್ಕವನು. ಅಂತಹ ನೀನು ನನ್ನಂತಹ ಮಂತ್ರಿಗಳೊಡನೆ ಸೇರಿ ಶತ್ರುವನ್ನು ಜಯಿಸಲು ಸಮರ್ಥನಾಗಿರುವೆ. ರಣಭೂಮಿಯಲ್ಲಿ ಧನುಸ್ಸನ್ನು ಹಿಡಿದು ನಿಲ್ಲುವ, ನಿನ್ನೆದುರಾಗಿ ನಿಂತು ಯುದ್ಧಮಾಡುವ ಸಾಮರ್ಥ್ಯವಿರುವವನನ್ನು ಈ ಮೂರು ಲೋಕಗಳಲ್ಲಿಯೂ ನಾನು ಕಾಣುತ್ತಿಲ್ಲ. ಕಾರ್ಯಸಾಧನೆಯ ಭಾರವನ್ನು ವಾನರರ ಮೇಲೆ ಹೊರೆಸಿರುವಾಗ ನಿನ್ನ ಕಾರ್ಯವು ಖಂಡಿತವಾಗಿಯೂ ಹಾಳಾಗುವುದಿಲ್ಲ. ನೀನು ಅತಿಶೀಘ್ರವಾಗಿಯೇ ಸಮುದ್ರವನ್ನು ದಾಟಿ ಸೀತಾದೇವಿಯನ್ನು ನೋಡುವೆ.

ಭೂಪತಿಯೇ! ಇದುವರೆಗೂ ಶೋಕಕ್ಕೆ ಆಶ್ರಯವಿತ್ತಿದ್ದು ಸಾಕು. ಈಗ ನೀನು ಕ್ರೋಧವನ್ನವಲಂಬಿಸು.

ನಿಶ್ಚೇಷ್ಟಾಃ ಕ್ಷತ್ರಿಯಾ ಮನ್ದಾಃ ಸರ್ವೇ ಚಣ್ಡಸ್ಯ ಬಿಭ್ಯತಿ ॥೨೧॥

ಕೆಲಸಮಾಡದೇ ಇರುವ ಕ್ಷತ್ರಿಯರು ಮೂರ್ಖರು. ಕೋಪಿಷ್ಠನಾದ ಕ್ಷತ್ರಿಯನಿಗೆ ಎಲ್ಲರೂ ಭಯಪಡುತ್ತಾರೆ.

ರಾಘವ! ನೀನು ಅತಿಸೂಕ್ಷ್ಮಬುದ್ಧಿಯವನು. ನದಿಗಳಿಗೆ ಅಧಿಪತಿಯಾದ, ಘೋರರೂಪವಾದ ಸಮುದ್ರವನ್ನು ದಾಟಲು ನಮ್ಮೊಡನೆ ಸೇರಿ ವಿಚಾರಮಾಡು. ನಮ್ಮ ಸೈನಿಕರು ಸಮುದ್ರವನ್ನು ದಾಟಿದರೆಂದರೆ ನಾವು ಜಯಿಸಿದವೆಂದೇ ನಿಶ್ಚಯಿಸು. ನಮ್ಮ ಸಮಸ್ತಸೈನ್ಯವೂ ಸಮುದ್ರದ ಆಚೆಯ ದಡಕ್ಕೆ ಹೋಗಿ ಬಿಟ್ಟರೆ ವಿಜಯವು ನಮ್ಮದೇ ಎಂದು ತಿಳಿ. ಇಚ್ಛಾನುಸಾರವಾಗಿ ರೂಪಗಳನ್ನು ಧರಿಸುವ ಈ ಕಪಿವೀರರು ಯುದ್ಧದಲ್ಲಿ ಬಂಡೆಗಳ ಮತ್ತು ವೃಕ್ಷಗಳ ವೃಷ್ಟಿಯಿಂದ ನಮ್ಮ ಶತ್ರುಗಳನ್ನು ಧ್ವಂಸಮಾಡಿಬಿಡುತ್ತಾರೆ.

ಶತ್ರುನಾಶಕನೇ! ಶ್ರೀರಾಮ! ಯಾವುದಾದರೂ ಉಪಾಯದಿಂದ ನಮ್ಮ ವಾನರಸೈನಿಕರು ಈ ಸಮುದ್ರವನ್ನು ದಾಟಿ ಹೋಗುವುದನ್ನು ಕಂಡೆನಾದರೆ ಯುದ್ಧದಲ್ಲಿ ರಾವಣನು ಹತನಾದನೆಂದೇ ನಾನು ಭಾವಿಸುತ್ತೇನೆ.

ರಾಘವ! ಹೆಚ್ಚು ಮಾತನಾಡುವುದರಿಂದ ಪ್ರಯೋಜನವೇನಿದೆ? ನೀನು ಸರ್ವಥಾ ವಿಜಯವನ್ನು ಗಳಿಸುವೆ. ನಿನ್ನ ವಿಜಯವನ್ನು ಸೂಚಿಸುವ ಶುಭಶಕುನಗಳನ್ನು ನಾನು ಕಾಣುತ್ತಿದ್ದೇನೆ. ನನ್ನ ಮನಸ್ಸು ಕೂಡ ಹರ್ಷೋತ್ಸಾಹಗಳಿಂದ ಉಬ್ಬುತ್ತಿದೆ."

೨ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೩ನೆಯ ಸರ್ಗ

## ಹನುಮಂತನು ಲಂಕೆಯಲ್ಲಿರುವ ದುರ್ಗಗಳು, ಹೆಬ್ಬಾಗಿಲುಗಳು ಸೇನಾವಿಭಾಗಗಳು ಮುಂತಾದುವನ್ನು ವರ್ಣಿಸಿ ಹೇಳಿದುದು : ಸೈನಿಕರು ಪ್ರಯಾಣಕ್ಕೆ ಸಿದ್ಧರಾಗಲು ಆಜ್ಞಾಪಿಸುವಂತೆ ಶ್ರೀರಾಮನನ್ನು ಪ್ರಾರ್ಥಿಸಿದುದು

**ಸುಗ್ರೀವಸ್ಯ ವಚಃ ಶ್ರುತ್ವಾ ಹೇತುಮತ್ಪರಮಾರ್ಥವತ್ ।**
**ಪ್ರತಿಜಗ್ರಾಹ ಕಾಕುತ್ಸ್ಥೋ ಹನುಮನ್ತಮಥಾಬ್ರವೀತ್ ॥೧॥**

ಸುಗ್ರೀವನ ಯುಕ್ತಿಯುಕ್ತವಾದ ಮತ್ತು ಒಳ್ಳೆಯ ಅಭಿಪ್ರಾಯದಿಂದ ಕೂಡಿದ ಮಾತನ್ನು ಶ್ರೀರಾಮನು ಅಂಗೀಕರಿಸಿ ಹನುಮಂತನಿಗೆ ಹೀಗೆ ಹೇಳಿದನು :

**ತಪಸಾ ಸೇತುಬನ್ಧೇನ ಸಾಗರೋಚ್ಛೋಷಣೇನ ವಾ ।**
**ಸರ್ವಥಾಪಿ ಸುಸಮರ್ಥೋಽಸ್ಮಿ ಸಾಗರಸ್ಯಾಸ್ಯ ಲಙ್ಘನೇ ॥೨॥**

"ಹನುಮಂತ! ನಾನು ತಪಃಪ್ರಭಾವದಿಂದಾಗಲೀ, ಬಾಣಗಳಿಂದಲೇ ಸಮುದ್ರಕ್ಕೆ ಸೇತುವೆಯನ್ನು ಕಟ್ಟುವುದರಿಂದಾಗಲೀ, ಬಾಣಪ್ರಯೋಗ ದಿಂದಲೇ ಸಮುದ್ರವನ್ನು ಬತ್ತಿಸುವುದರಿಂದಾಗಲೀ–ಹೇಗೋ ಈ ಸಾಗರ ವನ್ನು ದಾಟಲು ಸರ್ವಪ್ರಕಾರದಿಂದಲೂ ಸಮರ್ಥನಾಗಿದ್ದೇನೆ. ಈ ವಿಷಯ ದಲ್ಲಿ ನನಗೆ ಯಾವ ಚಿಂತೆಯೂ ಇಲ್ಲ.

ದುರ್ಗಮವಾಗಿರುವ ಲಂಕೆಯಲ್ಲಿ ಎಷ್ಟು ದುರ್ಗಗಳಿವೆಯೆಂಬುದನ್ನು

ಹೇಳು. ನನ್ನ ಕಣ್ಣಿಗೆ ಕಟ್ಟುವಂತೆ ನೀನು ಎಲ್ಲವನ್ನೂ ನನಗೆ ಹೇಳಬೇಕು. ಅದನ್ನು ತಿಳಿದುಕೊಳ್ಳಲು ನಾನು ಅಪೇಕ್ಷಿಸುತ್ತೇನೆ.

ನೀನು ನನಗೆ ರಾವಣನ ಸೇನೆಯ ಪರಿಮಾಣವೆಷ್ಟೆಂಬುದನ್ನು ಹೇಳಬೇಕು. ಪಟ್ಟಣದ ಮಹಾದ್ವಾರಗಳನ್ನು ಅಭೇದ್ಯವನ್ನಾಗಿಮಾಡಲು ಅವರು ಉಪಯೋಗಿಸಿರುವ ಸಾಧನ-ಸಂಪತ್ತುಗಳು, ಲಂಕೆಯನ್ನು ರಕ್ಷಿಸಲು ಅವರು ಕೈಗೊಂಡಿರುವ ಉಪಾಯ, ರಾಕ್ಷಸರ ಭವನಗಳು–ಈ ಎಲ್ಲವನ್ನೂ ನೀನಲ್ಲಿ ಯಥಾವತ್ತಾಗಿ ಯಾವ ನಿರ್ಬಂಧವೂ ಇಲ್ಲದೆ ನೋಡಿರುವೆ. ಆದುದರಿಂದ ಈ ಎಲ್ಲವನ್ನೂ ನೀನು ಯಥಾವತ್ತಾಗಿ ವರ್ಣಿಸಿ ಹೇಳು. ನೀನು ಸರ್ವಥಾ ಅತ್ಯಂತಕುಶಲನಾಗಿರುವೆ. ಆದುದರಿಂದ ನೀನು ಇವೆಲ್ಲವನ್ನೂ ಯಥಾವತ್ತಾಗಿ ಹೇಳಬಲ್ಲೆ."

ವಾಕ್ಯವಿಶಾರದನಾದ ವಾಯುಪುತ್ರನಾದ ಹನುಮಂತನು ಈ ಮಾತನ್ನು ಕೇಳಿ ಶ್ರೀರಾಮನಿಗೆ ಹೇಳಿದನು :

"ರಾಮಭದ್ರ! ಲಂಕೆಯಲ್ಲಿನ ದುರ್ಗಗಳನ್ನು ಯಾವ ವಿಧಾನದಿಂದ ನಿರ್ಮಿಸಿದ್ದಾರೆ? ಯಾವ ರೀತಿಯಲ್ಲಿ ಲಂಕಾಪಟ್ಟಣದ ರಕ್ಷಣಾವ್ಯವಸ್ಥೆಯನ್ನು ಮಾಡಿದ್ದಾರೆ? ಆ ಪಟ್ಟಣವು ಸೈನಿಕರಿಂದ ಹೇಗೆ ಸುರಕ್ಷಿತವಾಗಿದೆ? ರಾವಣನ ತೇಜಸ್ಸಿನಿಂದ ಪ್ರಭಾವಿತರಾಗಿರುವ ರಾಕ್ಷಸರು ಅವನಲ್ಲಿ ಎಂತಹ ಸ್ನೇಹಭಾವವನ್ನು ಹೊಂದಿದ್ದಾರೆ? ಲಂಕೆಯು ಎಷ್ಟು ಸಮೃದ್ಧಿಯಿಂದ ಕೂಡಿದೆ? ಅಲ್ಲಿ ಎಷ್ಟು ಪದಾತಿ ಸೈನಿಕರಿದ್ದಾರೆ? ಎಷ್ಟು ವಾಹನಗಳಲ್ಲಿವೆ? ಈ ಎಲ್ಲವನ್ನೂ ವಿಶದವಾಗಿ ಹೇಳುತ್ತೇನೆ."

ಹೀಗೆ ಹೇಳಿ ಹನುಮಂತನು ಲಂಕೆಯ ಆಂತರಿಕವಿಷಯವನ್ನು ಯಥಾವತ್ತಾಗಿ ಹೇಳತೊಡಗಿದನು :

"ಪ್ರಭುವೇ! ರಾಮಚಂದ್ರ! ಲಂಕಾಪಟ್ಟಣವು ಹರ್ಷಾಮೋದ ಪ್ರಮೋದಗಳಿಂದ ಪೂರ್ಣವಾಗಿದೆ. ವಿಶಾಲವಾಗಿರುವ ಅದು ಮದಿಸಿದ ಆನೆಗಳಿಂದ ವ್ಯಾಪ್ತವಾಗಿದೆ. ಅಸಂಖ್ಯಾತವಾದ ರಥಗಳಿಂದ ತುಂಬಿಹೋಗಿದೆ. ರಾಕ್ಷಸರು ಆ ಪಟ್ಟಣದಲ್ಲಿ ವಾಸಮಾಡುತ್ತಿದ್ದಾರೆ. ಆ ಪಟ್ಟಣಕ್ಕೆ ನಾಲ್ಕು ಮಹಾದ್ವಾರಗಳಿವೆ. ಅವು ಎತ್ತರವಾಗಿಯೂ, ಅಗಲವಾಗಿಯೂ ಇವೆ.

ಅವುಗಳಿಗೆ ದೃಢವಾಗಿಯೂ, ಭದ್ರವಾಗಿಯೂ ಇರುವ ಬಾಗಿಲುಗಳಿವೆ. ಆ ಬಾಗಿಲುಗಳಿಗೆ ದೊಡ್ಡ-ದೊಡ್ಡ ಲಾಳಮುಂಡಿಗೆಗಳಿವೆ. ಆ ಮಹಾದ್ವಾರಗಳ ಮೇಲೆ ವಿಶಾಲವಾದ ಮತ್ತು ಪ್ರಬಲವಾದ ಯಂತ್ರಗಳಿವೆ. ಆ ಯಂತ್ರಗಳು ಕಲ್ಲುಗುಂಡುಗಳನ್ನೂ ಬಾಣಗಳನ್ನೂ ಹೊರಗಿನಿಂದ ಮುತ್ತಿಗೆ ಹಾಕಲು ಬರುವ ಶತ್ರುಸೈನ್ಯದ ಮೇಲೆ ಸುರಿಸಿ ಅದನ್ನು ಹಿಮ್ಮೆಟ್ಟುವಂತೆ ಮಾಡ ಬಲ್ಲವು. ಕಬ್ಬಿಣದಿಂದ ಮಾಡಿದ, ಅತ್ಯಂತ ತೀಕ್ಷ್ಣವಾಗಿರುವ, ಭಯಂಕರ ವಾದ ಮತ್ತು ಸಜ್ಜುಗೊಳಿಸಿದ, ವೀರರಾದ ರಾಕ್ಷಸರು ತಯಾರಿಸಿದ ನೂರಾರು ಶತಘ್ನಿಗಳೆಂಬ ಆಯುಧವಿಶೇಷಗಳನ್ನು ಮಹಾದ್ವಾರಗಳಲ್ಲಿಟ್ಟಿ ದ್ದಾರೆ. ಅವು ಅತಿತೀಕ್ಷ್ಣವಾಗಿಯೂ, ಭಯಂಕರವಾಗಿಯೂ ಚೆನ್ನಾಗಿ ಪರೀಕ್ಷಿಸಲ್ಪಟ್ಟುದಾಗಿಯೂ ಇವೆ. ಲಂಕಾಪಟ್ಟಣದ ನಾಲ್ಕು ಕಡೆಗಳಲ್ಲಿಯೂ ಎತ್ತರವಾದ, ದಾಟಿಕೊಂಡು ಬರಲು ಅಸಾಧ್ಯವಾದ, ಸುವರ್ಣಮಯವಾದ ಪ್ರಾಕಾರಗಳಿವೆ. ಅವುಗಳು ಮಣಿ, ವೈಡೂರ್ಯ, ಹವಳ, ಮುತ್ತುಗಳಿಂದ ಸಮಲಂಕೃತವಾಗಿವೆ. ಆ ಪ್ರಾಕಾರಗಳ ಸುತ್ತಲೂ ಶೀತಲವಾದ ನೀರುಳ್ಳ, ಶತ್ರುಗಳಿಗೆ ಅಮಂಗಲಕರವಾದ, ಅತ್ಯಂತ ಆಳವಾಗಿರುವ, ಮೊಸಳೆ ಗಳಿಂದಲೂ ಮೀನುಗಳಿಂದಲೂ, ತುಂಬಿರುವ, ಭಯಂಕರವಾದ ಕಂದಕ ಗಳಿವೆ. ನಾಲ್ಕು ಮಹಾದ್ವಾರಗಳ ಸಮೀಪದಲ್ಲಿರುವ ಕಂದಕಗಳ ಮಧ್ಯದಲ್ಲಿ ಅತ್ಯಂತವಿಶಾಲವಾದ ಯಂತ್ರಗಳಿಂದ ಯುಕ್ತವಾದ ಮರದ ಸೇತುವೆಗಳಿವೆ. ಮಹಾದ್ವಾರಗಳ ಸಮೀಪದಲ್ಲಿಯೇ ಸೈನಿಕರು ವಾಸಮಾಡುವ ಮನೆಗಳ ಸಾಲುಗಳಿವೆ. ಶತ್ರುಸೈನ್ಯವೇನಾದರೂ ಲಂಕಾಪಟ್ಟಣವನ್ನು ಆಕ್ರಮಿಸಲು ಬಂದರೆ ಯಂತ್ರಗಳ ಮೂಲಕವಾಗಿ ಆ ಮರದ ಸೇತುವೆಗಳೇ ಪಟ್ಟಣವನ್ನು ರಕ್ಷಿಸುತ್ತವೆ. ಅವುಗಳಲ್ಲಿರುವ ಯಂತ್ರಗಳಿಂದ ಕಂದಕದ ಸುತ್ತಲೂ ಕಲ್ಲು ಗುಂಡುಗಳ ಮಳೆಗರೆಯುತ್ತಾರೆ. ಆ ಮರದ ಸೇತುವೆಗಳಲ್ಲಿ ಒಂದು ಸೇತುವೆಯು ಅತ್ಯಂತ ಬಲಿಷ್ಠವಾಗಿಯೂ, ಸುದೃಢವಾಗಿಯೂ ಇದೆ. ಅದರ ಮೇಲೆ ಎಷ್ಟೇ ಭಾರಬಿದ್ದರೂ ಅಲ್ಲಾಡುವುದಿಲ್ಲ. ಸುವರ್ಣಮಯವಾದ ಸ್ತಂಭಗಳಿಂದಲೂ ಮತ್ತು ವೇದಿಕೆಗಳಿಂದಲೂ ಅದು ಶೋಭಿತವಾಗಿದೆ.

ರಾವಣನು ಯುದ್ಧದಲ್ಲಿ ಉತ್ಸಾಹಿಯಾದರೂ ಯಾವಾಗಲೂ ಕ್ಷೋಭೆ ಗೊಳ್ಳುವವನಲ್ಲ. ಸ್ವಸ್ಥನಾಗಿಯೂ, ಧೀರನಾಗಿಯೂ ಇರತಕ್ಕವನು. ಸೈನ್ಯ

ಗಳನ್ನು ನೋಡಿಕೊಳ್ಳುವುದರಲ್ಲಿ ಅವನು ಜಾಗರೂಕನು. ಮೈಮರೆಯುವವನಲ್ಲ. ಲಂಕೆಯನ್ನು ಆಕ್ರಮಿಸಲು ಯಾವ ಅವಲಂಬನೆಯೂ ಶತ್ರುಗಳಿಗೆ ಸಿಕ್ಕುವುದಿಲ್ಲ. ಅದು ದೇವತೆಗಳಿಗೂ ದುರ್ಗಮವಾದ ಪಟ್ಟಣವಾಗಿದೆ. ಅತ್ಯಂತಭಯಂಕರವಾಗಿದೆ. ಅದರ ಸುತ್ತಲೂ ನದಿಗೆ ಸಂಬಂಧಿಸಿದಂತೆ ಪರ್ವತಕ್ಕೆ ಸಂಬಂಧಿಸಿದಂತೆ, ಅರಣ್ಯಕ್ಕೆ ಸಂಬಂಧಿಸಿದಂತೆ ಮತ್ತು ಕೃತ್ರಿಮವಾಗಿರುವ ನಾಲ್ಕು ಬಗೆಯ ದುರ್ಗಗಳಿವೆ. ಆ ಪಟ್ಟಣವು ಬಹಳ ದೂರದವರೆಗೂ ಹರಡಿಕೊಂಡಿರುವ ಸಮುದ್ರದ ದಕ್ಷಿಣದ ತೀರದಲ್ಲಿದೆ. ಅಲ್ಲಿಗೆ ಹೋಗಲು ನೌಕಾಮಾರ್ಗವೂ ಇಲ್ಲ. ಆದುದರಿಂದ ಅಲ್ಲಿಗೆ ವಾರ್ತಾ ಸಂಚಾರವೂ ಇರುವುದಿಲ್ಲ. ಆ ದುರ್ಗಮವಾದ ಲಂಕಾಪಟ್ಟಣವು ತ್ರಿಕೂಟ ಪರ್ವತದ ಶಿಖರದಲ್ಲಿದೆ. ದೇವತೆಗಳ ಪಟ್ಟಣದಂತೆಯೇ ಸುಂದರವಾಗಿದೆ. ಆನೆ, ಕುದುರೆಗಳಿಂದ ಸಮೃದ್ಧವಾಗಿರುವ ಆ ಪಟ್ಟಣವು ಅತ್ಯಂತ ದುರ್ಜಯವಾಗಿದೆ. ದುರಾತ್ಮನಾದ ರಾವಣನ ಲಂಕಾಪಟ್ಟಣವನ್ನು ಕಂದಕಗಳೂ, ಶತಘ್ನಿಗಳೂ ವಿಧ-ವಿಧವಾದ ಯಂತ್ರಗಳೂ ಶೋಭಾಯಮಾನಗೊಳಿಸುತ್ತಿವೆ. ಲಂಕಾಪಟ್ಟಣದ ಪೂರ್ವದಿಕ್ಕಿನ ಬಾಗಿಲಿನಲ್ಲಿ ಶೂಲಪಾಣಿಗಳಾದ ಮತ್ತು ಎದುರಿಸಲು ಅಸಾಧ್ಯರಾದ ಹತ್ತು ಸಾವಿರ ರಾಕ್ಷಸಯೋಧರಿದ್ದಾರೆ. ಅವರೆಲ್ಲರೂ ಕತ್ತಿಗಳಿಂದ ಯುದ್ಧಮಾಡುವವರು.

ಲಂಕೆಯ ದಕ್ಷಿಣದಿಕ್ಕಿನ ಮಹಾದ್ವಾರದಲ್ಲಿ ಚತುರಂಗಬಲಸಮೇತರಾಗಿ ಒಂದು ಲಕ್ಷ ರಾಕ್ಷಸಯೋಧರಿದ್ದಾರೆ. ಅವರೆಲ್ಲರೂ ಯೋಧಶ್ರೇಷ್ಠರೆಂದು ಪರಿಗಣಿತರಾಗಿದ್ದಾರೆ. ಲಂಕೆಯ ಪಶ್ಚಿಮಮಹಾದ್ವಾರದಲ್ಲಿ ಕತ್ತಿ ಮತ್ತು ಗುರಾಣಿಗಳನ್ನು ಹಿಡಿದಿರುವ ಹತ್ತ ಲಕ್ಷ ರಾಕ್ಷಸಯೋಧರಿದ್ದಾರೆ. ಅವರೆಲ್ಲರೂ ಸಕಲವಿಧವಾದ ಅಸ್ತ್ರಗಳಲ್ಲಿಯೂ ಪರಿಣತರು. ಲಂಕೆಯ ಉತ್ತರದಿಕ್ಕಿನ ಮಹಾದ್ವಾರದಲ್ಲಿ ಹತ್ತುಕೋಟಿ ರಾಕ್ಷಸಯೋಧರಿದ್ದಾರೆ. ಅವರಲ್ಲಿ ಕೆಲವರು ರಥಸೈನಿಕರು. ಕೆಲವರು ಅಶ್ವಸೈನಿಕರು. ಅವರೆಲ್ಲರೂ ಸತ್ಕುಲಪ್ರಸೂತರಾಗಿದ್ದು ರಾಕ್ಷಸರಾಜನ ಆದರ-ಗೌರವಗಳಿಗೆ ಪಾತ್ರರಾಗಿದ್ದಾರೆ. ಲಂಕಾಪಟ್ಟಣದ ಮಧ್ಯದಲ್ಲಿರುವ ಸೇನೆಯಪಾಳಯದಲ್ಲಿ ನೂರಾರು-ಸಾವಿರಾರು ರಾಕ್ಷಸಯೋಧರಿದ್ದಾರೆ. ಅವರ ಸಂಖ್ಯೆಯು ಕೋಟಿಗಿಂತಲೂ ಅಧಿಕವಾಗಿದೆ. ನಾನಾದರೋ ಆ ಸೇತುವೆಗಳನ್ನು ಮುರಿದುಹಾಕಿದೆನು. ಕಂದಕ

ಗಳನ್ನು ಕಲ್ಲುಗಳಿಂದಲೂ, ಮುರಿದ ಸೇತುವೆಗಳಿಂದಲೂ ತುಂಬಿಬಿಟ್ಟೆನು. ಪ್ರಾಕಾರಗಳನ್ನು ನೆಲಸಮ ಮಾಡಿದೆನು. ಲಂಕೆಯನ್ನು ಸುಟ್ಟುಹಾಕಿದೆನು. ಮಹಾತ್ಮರಾದ ರಾಕ್ಷಸರ ಸೈನ್ಯದಲ್ಲಿ ನಾಲ್ಕನೆಯ ಒಂದು ಭಾಗವನ್ನು ಧ್ವಂಸ ಮಾಡಿರುವೆನು.

ರಾಘವ! ನಾವು ಯಾವುದಾದರೂ ಮಾರ್ಗದಿಂದ ಅಥವಾ ಯಾವುದಾದರೂ ಉಪಾಯದಿಂದ ಸಮುದ್ರವನ್ನು ದಾಟೋಣ. ಒಮ್ಮೆ ಸಮುದ್ರವನ್ನು ದಾಟಿ ಹೋದೆವೆಂದರೆ ವಾನರರಿಂದ ಲಂಕಾಪಟ್ಟಣವು ಧ್ವಂಸ ವಾದಂತೆಯೇ ಸರಿ. ಲಂಕಾಪಟ್ಟಣದಲ್ಲಿ ವಿಜಯವನ್ನು ಗಳಿಸಲು ಅಂಗದ, ದ್ವಿವಿದ, ಮೈಂದ, ಜಾಂಬವಂತ, ಪನಸ, ನೀಲ, ಸೇನಾಪತಿಯಾದ ನಲ ಇವರೇ ಸಾಕು. ಉಳಿದ ವಾನರರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಏನು ತಾನೇ ಮಾಡಬೇಕಾಗಿದೆ? ಅಂಗದನೇ ಮೊದಲಾದ ವೀರವಾನರರು ಆಕಾಶದ ಮೂಲಕವಾಗಿ ಹಾರಿಕೊಂಡು ಹೋಗಿ ರಾವಣನ ಮಹಾಪಟ್ಟಣ ವಾದ ಲಂಕೆಯನ್ನು ಪ್ರವೇಶಿಸಿ ಪರ್ವತ-ವನ-ಕಂದಕ-ಮಹಾದ್ವಾರ-ಪ್ರಾಕಾರ-ಭವನಗಳಿಂದ ಕೂಡಿದ ಲಂಕೆಯನ್ನು ಧ್ವಂಸಮಾಡಿ ಸೀತಾದೇವಿ ಯನ್ನು ಕರೆತರುತ್ತಾರೆ.

ಆದುದರಿಂದ ನೀನೀಗಲೇ ಸೈನಿಕರಿಗೆ ಯುದ್ಧಕ್ಕೆ ಬೇಕಾಗುವ ವಸ್ತು ಗಳನ್ನು ಸಂಗ್ರಹಿಸಲು ಆಜ್ಞಾಪಿಸು. ಅಂತೆಯೇ ಯಾತ್ರೆಗೆ ಯೋಗ್ಯವಾದ ಮುಹೂರ್ತದಲ್ಲಿ ಜೈತ್ರಯಾತ್ರೆಗಾಗಿ ಪ್ರಯಾಣಮಾಡು.”

ಃನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೪ನೆಯ ಸರ್ಗ

## ಶ್ರೀರಾಮನೊಡನೆ ವಾನರಸೈನ್ಯದ ಪ್ರಸ್ಥಾನ : ಸಮುದ್ರತೀರದಲ್ಲಿ ನಿವಾಸ

**ಶ್ರುತ್ವಾ ಹನುಮತೋ ವಾಕ್ಯಂ ಯಥಾವದನುಪೂರ್ವಶಃ ।**
**ತತೋಽಬ್ರವೀನ್ಮಹಾತೇಜಾ ರಾಮಃ ಸತ್ಯಪರಾಕ್ರಮಃ ॥೧॥**

ಯಥಾನುಕ್ರಮವಾಗಿ ಹನುಮಂತನ ಮಾತನ್ನು ಕೇಳಿ ಮಹಾತೇಜಸ್ವಿ ಯಾದ ಸತ್ಯಪರಾಕ್ರಮನಾದ ಶ್ರೀರಾಮನು ಹೇಳಿದನು :

**ಯಾಂ ನಿವೇದಯಸೇ ಲಙ್ಕಾಂ ಪುರೀಂ ಭೀಮಸ್ಯ ರಕ್ಷಸಃ ।**
**ಕ್ಷಿಪ್ರಮೇನಾಂ ಮಥಿಷ್ಯಾಮಿ ಸತ್ಯಮೇತದ್ಬ್ರವೀಮಿ ತೇ ॥೨॥**

"ಹನುಮಂತ! ಭಯಂಕರರಾಕ್ಷಸನ ಲಂಕಾಪಟ್ಟಣವು ಅತ್ಯಂತ ದುರ್ಗಮವಾಗಿರುವುದೆಂದು ಹೇಳಿದೆಯಲ್ಲವೇ! ಬಹಳ ಬೇಗ ಆ ಲಂಕಾ ಪಟ್ಟಣವನ್ನು ನಾನು ಧ್ವಂಸಮಾಡುತ್ತೇನೆ. ಈ ಮಾತನ್ನು ನಾನು ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ.

ಸುಗ್ರೀವ! ಇದೇ ಮುಹೂರ್ತದಲ್ಲೇ ನೀನು ಪ್ರಯಾಣಕ್ಕೆ ಸೈನಿಕರನ್ನು ಸಜ್ಜುಗೊಳಿಸು. ಸೂರ್ಯನು ದಿನದ ಮಧ್ಯಭಾಗಕ್ಕೆ ಬಂದಿದ್ದಾನೆ. ಆದುದ ರಿಂದ ಈ ವಿಜಯನಾಮಕಮುಹೂರ್ತದಲ್ಲಿ ನಮ್ಮ ಪ್ರಸ್ಥಾನವು ವಿಜಯ ಪ್ರದವಾಗುತ್ತದೆ.* ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋಗಲಿ ; ಆದರೆ ಅವನು ಜೀವಸಹಿತನಾಗಿ ಎಲ್ಲಿಗೆ ಹೋದಾನು? ನಾನು ಯುದ್ಧಕ್ಕಾಗಿ ಪ್ರಸ್ಥಾನಮಾಡಿರುವನೆಂಬುದನ್ನು ತಿಳಿದಳಾದರೆ ಸೀತೆಯು ಜೀವಿತದಲ್ಲಿ ಆಸೆಯನ್ನಿಟ್ಟುಕೊಳ್ಳುವಳು.

**ಜೀವಿತಾನ್ತೇಽಮೃತಂ ಸ್ಪೃಷ್ಟ್ವಾ ಪೀತ್ವಾ ವಿಷಮಿವಾತುರಃ ॥೫॥**

ವಿಷವನ್ನು ಕುಡಿದ ರೋಗಿಯು ಜೀವಹೋಗಿಬಿಡುವ ಕಾಲದಲ್ಲಿ ಅಮೃತವನ್ನು ಮುಟ್ಟಿದಮಾತ್ರದಿಂದಲೇ ಜೀವಂತನಾಗುವಂತೆ–ನಾನು ವಿಜಯಯಾತ್ರೆಗೆ ಹೊರಟಿರುವೆನೆಂಬ ಅಮೃತರೂಪವಾದ ಮಾತನ್ನು ಕೇಳಿಯೇ ಸೀತೆಯು ಚಿರಕಾಲ ಜೀವಿಸಿರುತ್ತಾಳೆ.

---

* ಯುಕ್ತೋ ಮುಹೂರ್ತೇ ವಿಜಯೇ ಪ್ರಾಪ್ತೇ ಮಧ್ಯಂ ದಿವಾಕರೇ । ಸೂರ್ಯನು ನೆತ್ತಿಯ ಮೇಲೆ ಬಂದಾಗ ಹನ್ನೆರಡು ಘಂಟೆಯ ಸಮಯದಲ್ಲಿ ಅಭಿಜಿನ್ಮಹೂರ್ತವಿರುತ್ತದೆ. ಇದಕ್ಕೆ ವಿಜಯಮುಹೂರ್ತವೆಂದೂ ಹೆಸರು. ಇದು ಎಲ್ಲ ಕಾರ್ಯಗಳಿಗೂ ಶುಭಕರವಾದ ಮುಹೂರ್ತವೆಂದು ಪ್ರಸಿದ್ಧವಾಗಿದೆ. ಆದರೆ ಜ್ಯೋತಿಷ ರತ್ನಾಕರವೆಂಬ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ : ಭುಕ್ತೌ ದಕ್ಷಿಣಯಾತ್ರಾಯಾಂ ಪ್ರತಿಷ್ಠಾಯಾಂ ದ್ವಿಜನ್ಮನಿ । ಆಧಾನೇಚ ಧ್ವಜಾರೋಹೋ ಮೃತ್ಯುದಃ ಸ್ಯಾತ್ಸದಾಭಿಜಿತ್ ॥ ಅರ್ಥಾತ್ ಅಭಿಜಿನ್ಮುಹೂರ್ತದಲ್ಲಿ ದಕ್ಷಿಣದಿಕ್ಕಿಗೆ ಯಾತ್ರೆ ಹೊರಡಬಾರದು ಎಂದು ಹೇಳಿರುತ್ತಾರೆ. ಇದಕ್ಕೆ ವ್ಯಾಖ್ಯಾನಕಾರರು ಸಮಾಧಾನ ಹೇಳುತ್ತಾ ಕಿಷ್ಕಿಂಧೆಗೆ ಲಂಕೆಯು ವಾಯವ್ಯದಿಕ್ಕಿನಲ್ಲಿರುವುದರಿಂದ ಈ ದೋಷವಿಲ್ಲವೆಂದು ಹೇಳಿದ್ದಾರೆ.

**ಉತ್ತರಾಫಲ್ಗುನೀ ಹ್ಯದ್ಯ ಶ್ವಸ್ತು ಹಸ್ತೇನ ಯೋಕ್ಷ್ಯತೇ ।**
**ಅಭಿಪ್ರಯಾಮ ಸುಗ್ರೀವ ಸರ್ವಾನೀಕಸಮಾವೃತಾಃ ॥೬॥**

ಸುಗ್ರೀವ! ಇಂದು ಉತ್ತರಫಲ್ಗುನೀನಕ್ಷತ್ರವಿದೆ. ನಾಳೆ ಚಂದ್ರನಿಗೆ ಹಸ್ತನಕ್ಷತ್ರದ ಯೋಗವುಂಟಾಗುತ್ತದೆ. ಆದುದರಿಂದ ನಾವೆಲ್ಲರೂ ಇಂದಿನ ದಿನವೇ ಸಮಸ್ತಸೈನ್ಯದೊಡನೆ ಪ್ರಯಾಣಮಾಡೋಣ.*

ಈ ಸಮಯದಲ್ಲಿ ಪ್ರಕಟವಾಗುತ್ತಿರುವ ಶಕುನಗಳನ್ನೂ ನೋಡುತ್ತಿದ್ದೇನೆ. ಈ ಶುಭಶಕುನಗಳು, ನಾನು ರಾವಣನನ್ನು ಸಂಹರಿಸಿ ಸೀತೆಯನ್ನು ಕರೆತರುವೆನೆಂಬುದನ್ನು ಸೂಚಿಸುತ್ತಿವೆ.

**ಉಪರಿಷ್ಟಾದ್ಧಿ ನಯನಂ ಸ್ಫುರಮಾಣಮಿಮಂ ಮಮ ।**
**ವಿಜಯಂ ಸಮನುಪ್ರಾಪ್ತಂ ಶಂಸತೀವ ಮನೋರಥಮ್ ॥೭॥**

ನನ್ನ ಬಲಗಣ್ಣಿನ ಮೇಲ್ಭಾಗವು ಅದುರುತ್ತಿದೆ. ಇದೂ ಕೂಡ ನನ್ನ ವಿಜಯದ ಪ್ರಾಪ್ತಿಯನ್ನೂ, ನನ್ನ ಮನೋರಥದ ಸಿದ್ಧಿಯನ್ನೂ ಸೂಚಿಸುತ್ತದೆ.”

ಶ್ರೀರಾಮನ ಈ ಮಾತನ್ನು ಕೇಳಿ ವನರಾಜನಾದ ಸುಗ್ರೀವನೂ ಲಕ್ಷ್ಮಣನೂ ಅವನನ್ನು ಬಹಳವಾಗಿ ಆದರಿಸಿ ಸತ್ಕರಿಸಿದರು. ಅನಂತರ ನೀತಿಶಾಸ್ತ್ರಜ್ಞನಾದ ಶ್ರೀರಾಮನು ಪುನಃ ಹೇಳಿದನು :

“ವೇಗವಂತರಾದ ಒಂದು ಲಕ್ಷ ವಾನರಸೈನ್ಯದೊಡನೆ ನೀಲನು–ಪ್ರಯಾಣಮಾಡುವ ಮಾರ್ಗವು ಸುಗಮವಾಗಿರುವುದೇ–ಎಂಬುದನ್ನು ವೀಕ್ಷಿಸಲು ಮುಂಭಾಗದಲ್ಲಿ ಪ್ರಯಾಣಮಾಡಲಿ.

ಸೇನಾಪತಿಯೇ! ನೀಲ! ಫಲ-ಮೂಲಗಳು ಅಧಿಕವಾಗಿರುವ, ತಂಪಾದ ನೆರಳಿನಿಂದ ಕೂಡಿದ ಅರಣ್ಯಗಳುಳ್ಳ, ನೀರು ಸಿಕ್ಕುವ ಮತ್ತು ಜೇನುತುಪ್ಪವೂ ಸಿಕ್ಕುವ ಮಾರ್ಗದಲ್ಲಿ ನಮ್ಮ ಸೈನ್ಯವನ್ನು ಕರೆದುಕೊಂಡು ಹೋಗಬೇಕು.

---

* ಶ್ರೀರಾಮನದು ಪುನರ್ವಸೂನಕ್ಷತ್ರ. ಉತ್ತರಾನಕ್ಷತ್ರದಂದು ಅವನಿಗೆ ಸಾಧನತಾರೆಯಾಗುತ್ತದೆ. ಸಾಧನತಾರೆಯಲ್ಲಿ ಹೊರಟರೆ ಕಾರ್ಯಸಾಧನೆಯಾಗುತ್ತದೆ. ಹಸ್ತನಕ್ಷತ್ರದಂದು ಶ್ರೀರಾಮನಿಗೆ ನೈಧನತಾರೆಯಾಗುತ್ತದೆ. ಅಂದು ಪ್ರಯಾಣಮಾಡುವುದು ಶುಭಕರವಲ್ಲ.

**ದೂಷಯೇಯುರ್ದುರಾತ್ಮಾನಃ ಪಥಿ ಮೂಲಫಲೋದಕಮ್ ।**
**ರಾಕ್ಷಸಾಃ ಪಥಿ ರಕ್ಷೇಥಾಸ್ತೇಭ್ಯಸ್ತ್ವಂ ನಿತ್ಯಮುದ್ಯತಃ ॥೧೨॥**

ದುರಾತ್ಮರಾದ ರಾಕ್ಷಸರು ಮಾರ್ಗದಲ್ಲಿರುವ ಫಲ-ಮೂಲಾದಿಗಳಿಗೂ ನೀರಿಗೂ ವಿಷವನ್ನು ಬೆರೆಸಿ ಎಲ್ಲವೂ ದೂಷಿತವಾಗುವಂತೆ ಮಾಡುವ ಸಂಭವವೂ ಇದೆ. ಆದುದರಿಂದ ನೀನು ಜಾಗರೂಕನಾಗಿದ್ದು ಫಲ-ಮೂಲ-ಜಲಗಳನ್ನು ರಾಕ್ಷಸರ ಉಪಟಳದಿಂದ ರಕ್ಷಿಸಬೇಕು.

ತಗ್ಗಾದ ಪ್ರದೇಶಗಳಲ್ಲಿಯೂ, ವನಗಳಲ್ಲಿಯೂ, ದುರ್ಗಮವಾದ ವನಪ್ರದೇಶಗಳಲ್ಲಿಯೂ ನಮ್ಮ ವಾನರಸೈನಿಕರು ಹಾರಾಡುತ್ತಾ ನೆಗೆದಾಡುತ್ತಾ, ಶತ್ರುಸೈನಿಕರೇನಾದರೂ ಆ ಸ್ಥಳಗಳಲ್ಲಿ ಅಡಗಿಕೊಂಡಿರುವರೋ ಎಂಬುದನ್ನು ಗಮನಿಸುತ್ತಾ ಪ್ರಯಾಣಮಾಡಬೇಕು. ನಮ್ಮ ಸೈನ್ಯದಲ್ಲಿ ದುರ್ಬಲರು ಯಾರಾದರೂ ಇದ್ದರೆ ಅವರು ಕಿಷ್ಕಿಂಧೆಯಲ್ಲಿಯೇ ಇರಲಿ. ಏಕೆಂದರೆ : ನಮ್ಮ ಈ ಯುದ್ಧರೂಪವಾದ ಕಾರ್ಯವು ಅತಿಭಯಂಕರ ವಾದುದು. ಆದುದರಿಂದ ಬಲ-ವಿಕ್ರಮಸಂಪನ್ನರಾದ ಸೈನಿಕರು ಮಾತ್ರವೇ ಪ್ರಯಾಣಮಾಡಲಿ. ನೂರಾರು-ಸಾವಿರಾರು ಮಹಾಬಲಿಷ್ಠರಾದ ಕಪಿಕೇಸರಿ ಗಳು–ಮಹಾಸಾಗರಕ್ಕೆ ಸಮಾನವಾಗಿರುವ, ಮಹಾಭಯಂಕರವಾಗಿರುವ ಈ ಕಪಿಸೈನ್ಯವನ್ನು ತಮ್ಮೊಡನೆ ಕರೆದುಕೊಂಡು ಮುನ್ನಡೆಯಲಿ. ಪರ್ವತದಂತೆ ವಿಶಾಲಕಾಯನಾದ ಗಜನೂ, ಮಹಾಬಲಿಷ್ಠನಾದ ಗವಯನೂ, ಮದಿಸಿದ ಹೋರಿಯಂತಿರುವ, ಪರಾಕ್ರಮಿಯಾದ ಗವಾಕ್ಷನೂ ಮುಂಭಾಗದಲ್ಲಿ ಹೋಗಲಿ.

ವಾನರಶ್ರೇಷ್ಠನಾದ, ನೆಗೆಯುವವರಿಗೂ ಹಾರುವವರಿಗೂ ಒಡೆಯ ನಾದ ಋಷಭನು ವಾನರಸೈನ್ಯದ ದಕ್ಷಿಣಭಾಗವನ್ನು ರಕ್ಷಿಸುತ್ತಾ ಪ್ರಯಾಣ ಮಾಡಲಿ. *ಗಂಧಹಸ್ತಿಯಂತೆ (ಮದಿಸಿದ ಆನೆಯಂತೆ) ದುರ್ಜಯನಾದ, ವೇಗವಂತನಾದ ಗಂಧಮಾದನನು ವಾನರಸೈನ್ಯದ ಎಡಭಾಗದಲ್ಲಿದ್ದು ಅದನ್ನು ರಕ್ಷಿಸುತ್ತಾ ಪ್ರಯಾಣಮಾಡಲಿ. ದೇವರಾಜನಾದ ಇಂದ್ರನು ಐರಾವತದ ಮೇಲೆ

---

* ಗಂಧಹಸ್ತಿ : ಯಾವುದರ ವಾಸನೆ ಬಂದೊಡನೆಯೇ ಪ್ರತಿಸ್ಪರ್ಧಿಗಜಗಳು ಓಡಿ ಹೋಗುತ್ತವೆಯೋ ಅಂತಹ ಗಂಧದ ಸಲಗ.

ಕುಳಿತು ಹೋಗುವಂತೆ ನಾನು ಹನುಮಂತನ ಹೆಗಲಮೇಲೆ ಕುಳಿತು ಎಲ್ಲ ಸೈನಿಕರಿಗೂ ಸಂತೋಷವನ್ನುಂಟುಮಾಡುತ್ತಾ ಸೈನ್ಯದ ಮಧ್ಯದಲ್ಲಿ ಪ್ರಯಾಣ ಮಾಡುತ್ತೇನೆ. ಧನಾಧ್ಯಕ್ಷನಾದ ಕುಬೇರನು ಸಾರ್ವಭೌಮವೆಂಬ ಹೆಸರಿನ ದಿಗ್ಗಜದ ಮೇಲೆ ಕುಳಿತು ಹೋಗುವಂತೆ ಅಂತಕೋಪಮನಾದ ಲಕ್ಷ್ಮಣನು ಅಂಗದನ ಹೆಗಲಮೇಲೆ ಕುಳಿತು ಪ್ರಯಾಣಮಾಡುತ್ತಾನೆ. ಮಹಾಬಾಹು ವಾದ ಋಕ್ಷರಾಜನಾದ ಜಾಂಬವಂತ, ಸುಷೇಣ ಮತ್ತು ವೇಗದರ್ಶೀ–ಈ ಮೂವರು ವಾನರನಾಯಕರು ವಾನರಮಹಾಸೈನ್ಯದ ಹಿಂಭಾಗವನ್ನು ರಕ್ಷಿಸುತ್ತಾ ಪ್ರಯಾಣಮಾಡಲಿ."

ರಾಘವನ ಆ ಮಾತನ್ನ ಕೇಳಿ ಮಹಾಪರಾಕ್ರಮಿಯಾದ ವಾನರಶ್ರೇಷ್ಠ ನಾದ, ಸೇನಾಪತಿಯಾದ ಸುಗ್ರೀವನು ಸೈನಿಕರೆಲ್ಲರಿಗೂ ಯಥೋಚಿತವಾಗಿ ಆಜ್ಞಾಪಿಸಿದನು.

ಅನಂತರ ಮಹಾಬಲಿಷ್ಠವಾದ ವಾನರಸಮೂಹಗಳು ತಾವುಗಳಿದ್ದ ಗುಹೆಗಳಿಂದಲೂ ಪರ್ವತಶಿಖರಗಳಿಂದಲೂ ಹಾರುತ್ತಾ-ನೆಗೆಯುತ್ತಾ ಹೊರ ಬಂದು ಪ್ರಯಾಣಹೊರಟುವು. ವಾನರರಾಜನಾದ ಸುಗ್ರೀವನಿಂದಲೂ, ಲಕ್ಷ್ಮಣನಿಂದಲೂ ಸಂಪೂಜಿತನಾದ ಧರ್ಮಾತ್ಮನಾದ ಶ್ರೀರಾಮನು ಕಪಿಸೈನ್ಯದೊಡನೆ ದಕ್ಷಿಣದಿಕ್ಕಿಗೆ ಹೊರಟನು. ಆ ಸಮಯದಲ್ಲಿ ಆನೆಯಂತೆ ವಿಶಾಲಕಾಯರಾಗಿದ್ದ ನೂರಾರು-ಸಾವಿರಾರು ಲಕ್ಷ-ಕೋಟಿ ಕಪಿಸೈನಿಕ ರೊಡನೆ ಶ್ರೀರಾಮನು ಹೊರಟನು. ಜೈತ್ರಯಾತ್ರೆಗೆ ಹೋಗುತ್ತಿದ್ದ ಶ್ರೀರಾಮ ನನ್ನು ಅನುಸರಿಸಿ ವಿಶಾಲವಾದ ಆ ವಾನರಸೈನ್ಯವು ಪ್ರಯಾಣಮಾಡು ತ್ತಿದ್ದಿತು. ಸುಗ್ರೀವನಿಂದ ಪರಿಪಾಲಿಸಲ್ಪಡುತ್ತಿದ್ದ ಆ ಎಲ್ಲ ಕಪಿಸೈನಿಕರೂ ಹೃಷ್ಟರಾಗಿಯೂ, ಪುಷ್ಟರಾಗಿಯೂ, ಸಂತೋಷಭರಿತರಾಗಿಯೂ ಇದ್ದರು. ಮಹಾಸೈನ್ಯದಲ್ಲಿದ್ದ ವಾನರರು ಮೇಲಕ್ಕೆ ಹಾರುತ್ತಲೂ, ಕುದುರೆಯಂತೆ ನೆಗೆಯುತ್ತಲೂ, ಮೇಘದಂತೆ ಗರ್ಜಿಸುತ್ತಲೂ, ಸಿಂಹನಾದಮಾಡುತ್ತಲೂ, ಅಸ್ಪಷ್ಟವಾದ ರೀತಿಯಲ್ಲಿ ಧ್ವನಿಮಾಡುತ್ತಲೂ ದಕ್ಷಿಣದಿಕ್ಕಿಗೆ ಪ್ರಯಾಣ ಮಾಡಿದರು. ಮಾರ್ಗದಲ್ಲಿ ಸುಗಂಧಯುಕ್ತವಾದ ಜೇನುತುಪ್ಪವನ್ನು ಪಾನ ಮಾಡುತ್ತಾ, ರುಚಿಕರವಾದ ಹಣ್ಣುಗಳನ್ನು ತಿನ್ನುತ್ತಾ, ಹೂವಿನಗೊಂಚಲು ಗಳಿಂದ ಕೂಡಿದ್ದ ಮಹಾವೃಕ್ಷಗಳನ್ನು ಕಿತ್ತು ಹೆಗಲಮೇಲೆ ಹೊತ್ತುಕೊಂಡು

ಹೋಗುತ್ತಿದ್ದರು. ಮದಿಸಿದ್ದ ಕೆಲವು ವಾನರರು ಪರಸ್ಪರವಾಗಿ ಒಬ್ಬರನ್ನು ಮತ್ತೊಬ್ಬರು ಎತ್ತಿಕೊಂಡು ಹೋಗುತ್ತಿದ್ದರು. ಸ್ವಲ್ಪದೂರದವರೆಗೆ ಹೋದ ನಂತರ ಅವನನ್ನು ಬಹಳ ದೂರಕ್ಕೆ ಎಸೆದುಬಿಡುತ್ತಿದ್ದರು. ಕೆಲವು ವಾನರರು ವೃಕ್ಷಗಳ ಮೇಲೂ ಶಿಖರಗಳ ಮೇಲೂ ಹತ್ತಿ ಕೆಳಕ್ಕೆ ಬೀಳುತ್ತಿದ್ದರು. ಪುನಃ ಮೇಲಕ್ಕೆ ಹಾರುತ್ತಿದ್ದರು. ಮತ್ತೆ ಕೆಲವರು ತಮ್ಮ ಜೊತೆಯಲ್ಲಿರುತ್ತಿದ್ದ ವಾನರರನ್ನು ವೃಕ್ಷಗಳ ಅಥವಾ ಶಿಖರಗಳ ಮೇಲಿಂದ ಕೆಳಕ್ಕೆ ನೂಕಿಬಿಡುತ್ತಿದ್ದರು. ಹೀಗೆ ನಾನಾಪ್ರಕಾರವಾಗಿ ಕಪಿಚೇಷ್ಟೆಗಳನ್ನು ಮಾಡುತ್ತಾ ದಕ್ಷಿಣ ದಿಕ್ಕಿಗೆ ಪ್ರಯಾಣಮಾಡುತ್ತಿದ್ದರು.

**ರಾವಣೋ ನೋ ನಿಹನ್ತವ್ಯಃ ಸರ್ವೇ ಚ ರಜನೀಚರಾ ।**
**ಇತಿ ಗರ್ಜನ್ತಿ ಹರಯೋ ರಾಘವಸ್ಯ ಸಮೀಪತಃ ॥೩೦॥**

'ನಾವು ರಾವಣನನ್ನೂ ಸಮಸ್ತರಾಕ್ಷಸರನ್ನೂ ಸಂಹಾರಮಾಡಲೇಬೇಕು'–ಎಂಬುದಾಗಿ ಶ್ರೀರಾಮನ ಸುತ್ತಲೂ ಇದ್ದ ಕಪಿನಾಯಕರು ಘೋಷಣೆಗಳನ್ನು ಮಾಡುತ್ತಿದ್ದರು.

ಮಹಾಸೈನ್ಯದ ಮುಂಭಾಗದಲ್ಲಿ ಋಷಭ, ನೀಲ ಮತ್ತು ವೀರನಾದ ಕುಮುದ–ಈ ಮೂವರೂ ಬಹುಸಂಖ್ಯಾತರಾದ ವಾನರರೊಡನೆ ಮಾರ್ಗವನ್ನು ಸರಿಪಡಿಸುತ್ತಾ ಹೋಗುತ್ತಿದ್ದರು. ಸೈನ್ಯದ ಮಧ್ಯಭಾಗದಲ್ಲಿ ರಾಜನಾದ ಸುಗ್ರೀವನೂ ರಾಮ-ಲಕ್ಷ್ಮಣರೂ ಬಲಶಾಲಿಗಳಾದ, ಭಯಂಕರರಾದ ವಾನರರಿಂದ ಸಮಾವೃತರಾಗಿ ಪ್ರಯಾಣಮಾಡುತ್ತಿದ್ದರು. ಶತಬಲೀ ಎಂಬ ವೀರವಾನರನು ಹತ್ತು ಕೋಟಿ ವಾನರರೊಡನೆ ಪ್ರಯಾಣಮಾಡುತ್ತಿದ್ದನು. ಅವನೊಬ್ಬನೇ ಏಕಾಕಿಯಾಗಿ ಸಮಗ್ರವಾದ ಸೈನ್ಯವನ್ನೂ ನಿಯಂತ್ರಿಸುತ್ತಾ ಅದನ್ನು ರಕ್ಷಿಸಿಕೊಂಡು ಹೋಗುತ್ತಿದ್ದನು. ನೂರು ಕೋಟಿ ವಾನರರಿಂದ ಪರಿವೃತರಾಗಿದ್ದ ಕೇಸರೀ ಮತ್ತು ಪನಸರು ಸೈನ್ಯದ ಬಲಭಾಗವನ್ನು ರಕ್ಷಿಸುತ್ತಿದ್ದರು. ಹಾಗೆಯೇ ಅಪಾರವಾದ ವಾನರಸೈನ್ಯದಿಂದ ಪರಿವೃತರಾಗಿದ್ದ ಗಜ ಮತ್ತು ಅರ್ಕ–ಎಂಬ ಕಪಿನಾಯಕರು ಸೈನ್ಯದ ಎಡಭಾಗವನ್ನು ರಕ್ಷಿಸುತ್ತಿದ್ದರು. ಬಹುಸಂಖ್ಯಾತರಾದ ಕರಡಿಸೈನಿಕರಿಂದ ಪರಿವೃತರಾಗಿದ್ದ ಸುಷೇಣ ಮತ್ತು ಜಾಂಬವಂತರು ಸುಗ್ರೀವನನ್ನು ಮುಂದೆ ಮಾಡಿಕೊಂಡು ಸೈನ್ಯದ ಹಿಂಭಾಗವನ್ನು ರಕ್ಷಿಸುತ್ತಿದ್ದರು. ಆ ಎಲ್ಲ ಕಪಿಸೈನ್ಯಕ್ಕೂ ದಂಡ

ನಾಯಕನಾದ, ವಾನರಶಿರೋಮಣಿಯಾದ, ವೀರಶ್ರೇಷ್ಠನಾದ ನೀಲನು ಎಲ್ಲ ಕಡೆಗಳಿಂದಲೂ ಸೈನ್ಯವನ್ನು ರಕ್ಷಿಸುತ್ತಾ ನಿಯಂತ್ರಿಸುತ್ತಿದ್ದನು. ದರೀಮುಖ, ಪ್ರಜಂಘ, ರಂಭ ಮತ್ತು ರಭಸರು ಎಲ್ಲ ಕಡೆಗಳಿಂದಲೂ ಸೈನಿಕರಿಗೆ ಶೀಘ್ರ ವಾಗಿ ಮುಂದೆ ಹೋಗುವಂತೆ ಪ್ರೋತ್ಸಾಹಿಸುತ್ತಾ ಪ್ರಯಾಣಮಾಡುತ್ತಿದ್ದರು.

ಹೀಗೆ ಬಲದರ್ಪಿತರಾಗಿದ್ದ ಆ ಕಪಿಶ್ರೇಷ್ಠರು ಮುಂದೆ ಮುಂದೆ ಪ್ರಯಾಣಮಾಡುತ್ತಾ ನೂರಾರು ಸಣ್ಣ-ಸಣ್ಣ ಪರ್ವತಗಳಿಂದ ಸಮಾವೃತ ವಾಗಿದ್ದ ಶ್ರೇಷ್ಠವಾದ ಸಹ್ಯಪರ್ವತವನ್ನು ನೋಡಿದರು. ಮಾರ್ಗದಲ್ಲವರು ಸುಂದರವಾದ ಸರೋವರಗಳನ್ನೂ, ತಟಾಕಗಳನ್ನೂ ನೋಡುತ್ತಾ ಹೋಗು ತ್ತಿದ್ದರು. ಅವುಗಳಲ್ಲಿ ನಯನಮನೋಹರವಾದ ವಿಕಸಿತವಾದ ಕಮಲಗಳು ಕಂಗೊಳಿಸುತ್ತಿದ್ದುವು.

ಆದರೆ ಮಾರ್ಗದಲ್ಲಿ ಯಾವುದೇ ವಿಧವಾದ ಉಪದ್ರವವನ್ನೂ ಸೈನಿಕರು ಯಾರಿಗೂ ಕೊಡಬಾರದೆಂದು ಶ್ರೀರಾಮನ ಆಜ್ಞೆಯಾಗಿದ್ದಿತು. ಭಯಂಕರಕೋಪನಾದ ಶ್ರೀರಾಮನ ಈ ಆಜ್ಞೆಯನ್ನು ನೆನೆದು, ಭಯ ಗೊಂಡಿರುವುದೋ ಎಂಬಂತೆ ಸಾಗರಗಳ ಸಮೂಹಗಳಂತೆಯೇ ಕಾಣು ತ್ತಿದ್ದ, ಭಯಂಕರವಾಗಿದ್ದ, ವಿಶಾಲವಾದ ಆ ವಾನರಸೈನ್ಯವು ಮಾರ್ಗದ ಪಕ್ಕದಲ್ಲಿರುತ್ತಿದ್ದ ಹಳ್ಳಿಗಳ, ನಗರಗಳ, ಸರೋವರಗಳ ಗೊಡವೆಗೆ ಹೋಗದೇ ಪ್ರಯಾಣಮಾಡುತ್ತಿದ್ದಿತು. ಆ ಸಮಯದಲ್ಲಿ ಆ ಮಹಾಸೈನ್ಯವು ಭಯಂಕರವಾಗಿ ಗರ್ಜಿಸುತ್ತಿದ್ದುದರಿಂದ ಭಯಂಕರವಾದ ಶಬ್ದವುಳ್ಳ ಸಮುದ್ರದಂತೆಯೇ ಮಹಾಘೋರವಾಗಿ ಕಾಣುತ್ತಿದ್ದಿತು. ಚಾವಟಿಯಿಂದ ಪ್ರಚೋದಿತವಾದ ಒಳ್ಳೆಯ ಕುದುರೆಗಳಂತೆ ಶೂರರಾದ ಕಪಿಶ್ರೇಷ್ಠರು ಶ್ರೀರಾಮನ ಪಕ್ಕದಲ್ಲಿ ಹಾರುತ್ತಾ ನೆಗೆಯುತ್ತಾ ಹೋಗುತ್ತಿದ್ದರು. ಹನುಮಂತ ಮತ್ತು ಅಂಗದರಿಂದ ಒಯ್ಯಲ್ಪಡುತ್ತಿದ್ದ ನರಶ್ರೇಷ್ಠರಾದ ರಾಮ-ಲಕ್ಷ್ಮಣರು ಮಹಾಗ್ರಹಗಳಾದ ಶುಕ್ರ-ಬೃಹಸ್ಪತಿಗಳಿಂದ ಯುಕ್ತರಾದ ಚಂದ್ರ-ಸೂರ್ಯರಂತೆಯೇ ಪ್ರಕಾಶಿಸುತ್ತಿದ್ದರು. ಆ ಸಮಯದಲ್ಲಿ ವಾನರರಾಜನಾದ ಸುಗ್ರೀವನಿಂದಲೂ ಲಕ್ಷ್ಮಣನಿಂದಲೂ ಸಂಪೂಜಿತನಾದ ಶ್ರೀರಾಮನು ಸೈನ್ಯದೊಡನೆ ದಕ್ಷಿಣದಿಕ್ಕಿನ ಕಡೆಗೆ ಪ್ರಯಾಣಮಾಡುತ್ತಿದ್ದನು. ಶುಭಶಕುನಗಳ ಮೂಲಕ ಕಾರ್ಯಸಿದ್ಧಿಯಾಗುವುದೆಂಬುದನ್ನು ಅರಿತಿದ್ದ,

ಅಂಗದನ ಹೆಗಲಮೇಲೆ ಕುಳಿತಿದ್ದ, ಸ್ಮೃತಿಶೀಲನಾದ ಲಕ್ಷ್ಮಣನು ಪೂರ್ಣ ಕಾಮನಾದ ಶ್ರೀರಾಮನೊಡನೆ ಮಂಗಳಮಯವಾದ ಈ ಮಾತನ್ನು ಹೇಳಿದನು :

**ಅನುವಾತಿ ಶುಭೋ ವಾಯುಃ ಸೇನಾಂ ಮೃದುಹಿತಃ ಸುಖಃ ।**
**ಪೂರ್ಣವಲ್ಗುಸ್ವರಾಶ್ಚೇಮೇ ಪ್ರವದನ್ತಿ ಮೃಗದ್ವಿಜಾಃ ।**
**ಪ್ರಸನ್ನಾಶ್ಚ ದಿಶಃ ಸರ್ವಾ ವಿಮಲಶ್ಚ ದಿವಾಕರಃ ॥೪೮॥**

**ಉಶನಾಶ್ಚ ಪ್ರಸನ್ನಾರ್ಚಿರನು ತ್ವಾಂ ಭಾರ್ಗವೋ ಗತಃ ।**
**ಬ್ರಹ್ಮರಾಶಿರ್ವಿಶುದ್ಧಶ್ಚ ಶುದ್ಧಾಶ್ಚ ಪರಮರ್ಷಯಃ ।**
**ಅರ್ಚಿಷ್ಮನ್ತಃ ಪ್ರಕಾಶನ್ತೇ ಧ್ರುವಂ ಸರ್ವೇ ಪ್ರದಕ್ಷಿಣಮ್ ॥೪೯॥**

“ರಾಘವ! ನಾನೀಗ ಭೂಮಿಯಲ್ಲಿಯೂ ಮತ್ತು ಆಕಾಶದಲ್ಲಿಯೂ ಅತ್ಯಂತಶುಭದಾಯಕವಾದ ಶಕುನಗಳನ್ನು ನೋಡುತ್ತಿದ್ದೇನೆ. ಇವೆಲ್ಲವೂ ನಿನ್ನ ಮನೋರಥವು ಸಿದ್ಧಿಸುವುದೆಂಬುದನ್ನು ಸೂಚಿಸುತ್ತವೆ. ಶೀಘ್ರವಾಗಿ ರಾವಣನನ್ನು ಸಂಹರಿಸಿ ಸೀತೆಯನ್ನು ಪಡೆದುಕೊಂಡು ಸಫಲಮನೋರಥ ನಾಗಿ ಸಮೃದ್ಧಿಶಾಲಿನಿಯಾದ ಅಯೋಧ್ಯೆಗೆ ಹೋಗುವೆಯೆಂಬುದು ಇದ ರಿಂದ ಸ್ಪಷ್ಟವಾಗಿದೆ.

ಅಣ್ಣ! ಅತ್ತ ಗಮನಿಸು. ಸೈನ್ಯದ ಹಿಂದೆ ಶೀತಲವಾದ, ಮಂದವಾದ, ಹಿತಕರವಾದ ಮತ್ತು ಸುಖಮಯವಾದ ಗಾಳಿಯು ಬೀಸುತ್ತಿದೆ. ಸುಮಧುರ ಸ್ವರಯುಕ್ತವಾದ ಈ ಮೃಗ-ಪಕ್ಷಿಗಳು ಪರಸ್ಪರವಾಗಿ ಸತತವಾಗಿ ಮಾತನಾಡಿ ಕೊಳ್ಳುತ್ತಿವೆ.

ದಿಕ್ಕುಗಳು ಪ್ರಸನ್ನವಾಗಿವೆ. ಸೂರ್ಯದೇವನು ನಿರ್ಮಲನಾಗಿ ಕಾಣು ತ್ತಿದ್ದಾನೆ. ಭೃಗುಪುತ್ರನಾದ ಶುಕ್ರನು ತನ್ನ ಉಜ್ಜ್ವಲವಾದ ಪ್ರಭೆಯಿಂದ ಪ್ರಕಾಶಿಸುತ್ತಾ ನಿನ್ನ ಹಿಂದಿನ ದಿಕ್ಕಿನಲ್ಲಿ ವಿರಾಜಮಾನನಾಗಿದ್ದಾನೆ. ಸಪ್ತರ್ಷಿ ಗಳ ಸಮುದಾಯವು ಪ್ರಕಾಶಿಸುತ್ತಿರುವ ಕಡೆಯಲ್ಲಿ ಧ್ರುವತಾರೆಯೂ ನಿರ್ಮಲವಾಗಿ ಪ್ರಕಾಶಿಸುತ್ತಿದೆ. ಶುದ್ಧರೂ ಪ್ರಕಾಶಮಾನರೂ ಆಗಿರುವ ಸಪ್ತರ್ಷಿಗಳು ಧ್ರುವನಕ್ಷತ್ರವನ್ನು ತಮ್ಮ ಬಲಭಾಗಕ್ಕೆ ಬಿಟ್ಟುಕೊಂಡು ಪ್ರದಕ್ಷಿಣೆಮಾಡುತ್ತಿದ್ದಾರೆ.

**ತ್ರಿಶಙ್ಕುರ್ವಿಮಲೋ ಭಾತಿ ರಾಜರ್ಷಿಃ ಸಪುರೋಹಿತಃ ।**
**ಪಿತಾಮಹಃ ಪುರೋಽಸ್ಮಾಕಮಿಕ್ಷ್ವಾಕೂಣಾಂ ಮಹಾತ್ಮನಾಮ್ ॥**

ಮಹಾತ್ಮರಾದ, ಇಕ್ಷ್ವಾಕುವಂಶೀಯರಾದ ನಮಗೆ ಶ್ರೇಷ್ಠಪಿತಾಮಹನಾದ, ರಾಜರ್ಷಿಯಾದ ತ್ರಿಶಂಕುವು ತನ್ನ ಪುರೋಹಿತರಾದ ವಸಿಷ್ಠರೊಡನೆ ಆಕಾಶದಲ್ಲಿ ತನ್ನ ನಿರ್ಮಲವಾದ ಕಾಂತಿಯಿಂದ ರಾರಾಜಿಸುತ್ತಿದ್ದಾನೆ.

**ವಿಮಲೇ ಚ ಪ್ರಕಾಶೇತೇ ವಿಶಾಖೇ ನಿರುಪದ್ರವೇ ।**
**ನಕ್ಷತ್ರವರಮಸ್ಮಾಕಮಿಕ್ಷ್ವಾಕೂಣಾಂ ಮಹಾತ್ಮನಾಮ್ ॥೫೧॥**

ಮಹಾತ್ಮರಾದ ಇಕ್ಷ್ವಾಕುವಂಶೀಯರ ಉತ್ತಮೋತ್ತಮನಕ್ಷತ್ರವಾದ ವಿಶಾಖಾಯುಗ್ಮವು ನಿರ್ಮಲವಾಗಿ ಉಪದ್ರವದಿಂದ ರಹಿತವಾಗಿ ಆಕಾಶದಲ್ಲಿ ಪ್ರಕಾಶಿಸುತ್ತಿದೆ.

**ನೈರ್ಋತಂ ನೈರ್ಋತಾನಾಂ ಚ ನಕ್ಷತ್ರಮಭಿಪೀಡ್ಯತೇ ।**
**ಮೂಲೋ ಮೂಲವತಾಂ ಸ್ಪೃಷ್ಟೋ ಧೂಪ್ಯತೇ ಧೂಮಕೇತುನಾ ॥**

ರಾಕ್ಷಸರ ನಕ್ಷತ್ರವಾದ ನಿರ್ಋತಿದೇವತಾತ್ಮಕವಾದ ಮೂಲವು ಬಹಳವಾಗಿ ಪೀಡಿಸಲ್ಪಡುತ್ತಿದೆ. ಆ ಮೂಲಾನಕ್ಷತ್ರದ ನಿಯಾಮಕನು ಧೂಮಕೇತುವಿನಿಂದ ಆಕ್ರಮಿಸಲ್ಪಟ್ಟು ಪರಿತಪಿಸುತ್ತಿದ್ದಾನೆ.

ಇವೆಲ್ಲವೂ ರಾಕ್ಷಸರ ವಿನಾಶಕ್ಕಾಗಿಯೇ ಇಂತಹ ಸ್ಥಳಗಳಲ್ಲಿ ಉಪಸ್ಥಿತವಾಗಿವೆ.

**ಕಾಲೇ ಕಾಲಗೃಹೀತಾನಾಂ ನಕ್ಷತ್ರಂ ಗ್ರಹಪೀಡಿತಮ್ ॥೫೩॥**

ಕಾಲಪಾಶದಿಂದ ಯಾರು ಬಂಧಿಸಲ್ಪಟ್ಟಿರುವರೋ ಅಂತಹವರ ನಕ್ಷತ್ರಗಳು ಸಮಯಾನುಸಾರವಾಗಿ ಗ್ರಹಗಳಿಂದ ಪೀಡಿಸಲ್ಪಡುತ್ತವೆ.

**ಪ್ರಸನ್ನಾಃ ಸುರಸಾಶ್ಚಾಪೋ ವನಾನಿ ಫಲವನ್ತಿ ಚ ।**
**ಪ್ರವಾನ್ತ್ಯಭ್ಯಧಿಕಂ ಗನ್ಧಾನ್ಯಥರ್ತುಕುಸುಮಾ ದ್ರುಮಾಃ ॥೫೪॥**

ಜಲವು ಸ್ವಚ್ಛವಾಗಿಯೂ ಉತ್ತಮರಸದಿಂದ ಕೂಡಿಯೂ ಇದೆ. ಅರಣ್ಯದ ವೃಕ್ಷಗಳು ಫಲವತ್ತಾಗಿವೆ. ಸುಗಂಧಯುಕ್ತವಾದ ವಾಯುವು ತೀವ್ರಗತಿಯಿಂದ ಬೀಸುತ್ತಿದೆ. ವೃಕ್ಷಗಳಲ್ಲಿ ಋತುಧರ್ಮಕ್ಕೆ ಅನುಸಾರವಾಗಿ ಫಲಗಳು ಬಿಡುತ್ತಿವೆ.

ತಾರಕಾಮಯಸಂಗ್ರಾಮದ ಸಮಯದಲ್ಲಿ ದೇವಸೈನ್ಯವು ಉತ್ಸಾಹ ಯುಕ್ತವಾಗಿ ಪ್ರಕಾಶಿಸುತ್ತಿದ್ದಂತೆ ವ್ಯೂಹಬದ್ಧವಾಗಿರುವ ಕಪಿಸೈನ್ಯವು ಉತ್ಸಾಹದಿಂದಲೂ, ಸಂತೋಷದಿಂದಲೂ ಕೂಡಿದ್ದು ಅಧಿಕವಾಗಿ ಪ್ರಕಾಶಿಸುತ್ತಿದೆ. ಆರ್ಯನೇ! ಇಂತಹ ಶುಭನಿಮಿತ್ತಗಳನ್ನು ಗಮನಿಸಿ ಪ್ರಸನ್ನನಾಗು."*

ಹೀಗೆ ಲಕ್ಷ್ಮಣನು ಅಣ್ಣನನ್ನು ಸಮಾಧಾನಪಡಿಸುತ್ತಿರಲಾಗಿ ವಾನರ ಸೇನೆಯು ಸಮಗ್ರವಾದ ಭೂಮಿಯನ್ನೂ ಆವರಿಸಿಕೊಂಡು ಮುನ್ನಡೆಯು ತ್ತಿದ್ದಿತು. ಆ ಸೈನ್ಯದಲ್ಲಿ ಸಿಂಹಕ್ಕೆ ಸಮಾನವಾದ ಪರಾಕ್ರಮವುಳ್ಳ ವಾನರರೂ, ಕರಡಿಗಳೂ ಇದ್ದುವು. ಅವುಗಳೆಲ್ಲಕ್ಕೂ ಉಗುರುಗಳು ಕೋರೆದಾಡೆಗಳೇ ಆಯುಧಗಳಾಗಿದ್ದುವು. ಕಪಿ-ಕರಡಿಸೈನಿಕರು ನಡೆದು ಹೋಗುತ್ತಿದ್ದಾಗ ಆ ಸೈನಿಕರ ಕೈಗಳ ಅಗ್ರಭಾಗಗಳಿಂದಲೂ, ಕಾಲುಗಳ ಅಗ್ರಭಾಗಗಳಿಂದಲೂ ಅಪಾರವಾದ ಧೂಳಿಯೆದ್ದಿತು. ಹಾಗೆದ್ದ ಭಯಂಕರವಾದ ಧೂಳಿಯು ಸೂರ್ಯನ ಪ್ರಭೆಯನ್ನು ಮಸುಕುಗೊಳಿಸಿತು. ಮೇಘಗಳ ಸಮೂಹವು ಆಕಾಶವನ್ನೇ ಮುಚ್ಚಿಬಿಡುವಂತೆ ಭಯಂಕರವಾದ ಆ ಧೂಳಿಯು ಪರ್ವತ-ವನಗಳಿಂದ ಕೂಡಿದ್ದ ದಕ್ಷಿಣದಿಕ್ಕನ್ನೇ ಮುಚ್ಚಿಬಿಟ್ಟಿತು. ಅಂತಹ ಭಯಂಕರ ವಾದ ಧೂಳಿಯನ್ನೆಬ್ಬಿಸುತ್ತಾ ಭಯಂಕರವಾದ ವಾನರ-ಭಲ್ಲೂಕಸೈನ್ಯವು ಮುನ್ನೆಡೆಯುತ್ತಿದ್ದಿತು.

ವಾನರ-ಭಲ್ಲೂಕಸೈನ್ಯಗಳು ಯಾವುದಾದರೂ ನದಿಯನ್ನು ದಾಟು ತ್ತಿರಲಾಗಿ ಆ ನದಿಯ ಸಮಸ್ತಪ್ರವಾಹಗಳೂ ಅನೇಕಯೋಜನಗಳವರೆಗೆ

---

* ಉಷನಾಶ್ಚ ಪ್ರಸನ್ನಾರ್ಚಿರನು ತ್ವಾಂ ಭಾರ್ಗವೋ ಗತಃ –ಪ್ರಸನ್ನವಾದ ಪ್ರಕಾಶವುಳ್ಳ ಶುಕ್ರನು ನಿನ್ನನ್ನು ಅನುಸರಿಸಿಕೊಂಡು ಬರುತ್ತಿದ್ದಾನೆ. ಅರ್ಥಾತ್ ಹಿಂಭಾಗದಲ್ಲಿ ಬರು ತ್ತಿದ್ದಾನೆ. ಜೈತ್ರಯಾತ್ರೆಯನ್ನು ಹೊರಟವರಿಗೆ ಶುಕ್ರನು ಯಾವಾಗಲೂ ಹಿಂಭಾಗದಲ್ಲಿಯೇ ಇರಬೇಕು. ಎದುರಾಗಿದ್ದರೆ ರಾಜನು ಸೈನ್ಯವನ್ನು ಕಳೆದುಕೊಂಡು ಪರಾಜಿತನಾಗಿ ಹಿಂದಿರು ಗುತ್ತಾನೆಂದು ಜ್ಯೋತಿಷಶಾಸ್ತ್ರವು ಹೇಳುತ್ತದೆ. ಪ್ರತಿಶುಕ್ರಂ ಪ್ರತಿಬುಧಂ ಪ್ರತಿಭೌಮಂ ಗತೋ ನೃಪಃ । ಅಪಿ ಶಕ್ರೇಣ ಸದೃಶೋ ಹತಸೈನ್ಯೋ ನಿವರ್ತತೇ ॥

ಮತ್ತೊಬ್ಬ ವ್ಯಾಖ್ಯಾನಕಾರರು ಪ್ರಸನ್ನಾರ್ಚಿಸ್ತ್ವಾಂ ಅನುಗತೋಽಸ್ತಿ ಎಂಬುದಕ್ಕೆ ಶುಕ್ರಮೌಢ್ಯಂ ನಾಸ್ತಿ ಶುಕ್ರಾಸ್ತನಾಗಿರಲಿಲ್ಲ–ಎಂದು ಅರ್ಥಮಾಡಿರುತ್ತಾರೆ. ಏಕೆಂದರೆ ದಕ್ಷಿಣೋತ್ತರಗನ್ತೄಣಾಂ ಕದಾಪಿ ಪುರಃ ಶುಕ್ರ ಪ್ರಸಕ್ತೇರಭಾವಾತ್

ಹಿಮ್ಮುಖವಾಗಿ ಹೋಗುತ್ತಿದ್ದುವು. ಆ ವಿಶಾಲವಾದ ಸೈನ್ಯವು ನಿರ್ಮಲವಾದ ನೀರುಳ್ಳ ಸರೋವರಗಳ ಪ್ರದೇಶಗಳನ್ನೂ, ವೃಕ್ಷಗಳಿಂದ ಸಮಾವೃತವಾದ ಪರ್ವತಪ್ರದೇಶಗಳನ್ನೂ, ಫಲಭರಿತವಾದ ಅರಣ್ಯಪ್ರದೇಶಗಳನ್ನೂ, ಸಮ ತಿಟ್ಟಾದ ಪ್ರದೇಶಗಳ ಮಧ್ಯದಲ್ಲಿಯೂ, ಮೇಲೆ-ಕೆಳಗೆ ಮತ್ತು ಅಕ್ಕ-ಪಕ್ಕಗಳ ಲ್ಲಿದ್ದ ಭೂಮಿಯನ್ನೂ ಆಕ್ರಮಿಸಿಕೊಂಡು ಪ್ರಯಾಣಮಾಡುತ್ತಿದ್ದಿತು.

ಸೈನ್ಯದಲ್ಲಿದ್ದ ಎಲ್ಲ ವಾನರ-ಭಲ್ಲೂಕರೂ ಪ್ರಸನ್ನಮುಖರಾಗಿದ್ದರು. ವಾಯುವಿನಂತೆ ವೇಗವುಳ್ಳವರಾಗಿದ್ದರು. ವೃದ್ಧಿಹೊಂದಿದ ಪರಾಕ್ರಮದಿಂದ ಕೂಡಿದ್ದ ಆ ವಾನರರು ಶ್ರೀರಾಮನ ಸಲುವಾಗಿ ದಕ್ಷಿಣದಿಕ್ಕಿಗೆ ಪ್ರಯಾಣ ಮಾಡುತ್ತಿದ್ದರು. ಆ ವಾನರಸೈನಿಕರು ಯೌವನದ ಹುಮ್ಮಸ್ಸಿನಿಂದಲೂ, ದರ್ಪದಿಂದಲೂ ಮಾರ್ಗದಲ್ಲಿ ಪರಸ್ಪರವಾಗಿ ಹರ್ಷ-ವೀರ್ಯ-ಬಲೋತ್ಸಾಹ ಗಳನ್ನು ನಾನಾ ಬಗೆಯ ಚೇಷ್ಟೆಗಳ ಮೂಲಕವಾಗಿ ತೋರ್ಪಡಿಸುತ್ತಿದ್ದರು. ಅವರಲ್ಲಿ ಕೆಲವರು ಬೇಗ-ಬೇಗ ನಡೆದುಹೋಗುತ್ತಿದ್ದರು. ಕೆಲವರು ಆಕಾಶ ದಲ್ಲೇ ಹಾರಿಕೊಂಡು ಹೋಗುತ್ತಿದ್ದರು. ಅರಣ್ಯವಾಸಿಗಳಾದ ಕೆಲವು ವಾನ ರರು ಕಿಲ-ಕಿಲಾಶಬ್ದಗಳನ್ನು ಮಾಡುತ್ತಿದ್ದರು. ಕೆಲವರು ತಮ್ಮ ಬಾಲಗಳಿಂದ ನೆಲವನ್ನೂ ಕಾಲುಗಳನ್ನೂ ಬಡಿಯುತ್ತಿದ್ದರು. ಕೆಲವು ವಾನರರು ಕೈಗಳನ್ನು ಮೇಲಕ್ಕೆ ಚಾಚಿ ಪರ್ವತಶಿಖರಗಳನ್ನು ಉರುಳಿಸುತ್ತಿದ್ದರು. ವೃಕ್ಷಗಳನ್ನು ಮುರಿದುಹಾಕುತ್ತಿದ್ದರು. ಪರ್ವತಚಾರಿಗಳಾದ ಕೆಲವು ವಾನರರು ಪರ್ವತಗಳ ಶಿಖರಗಳ ಮೇಲೆ ಹತ್ತುತ್ತಿದ್ದರು. ಕೆಲವರು ಗಟ್ಟಿಯಾಗಿ ಗರ್ಜಿಸುತ್ತಿದ್ದರು.

---

ದಕ್ಷಿಣೋತ್ತರದಿಕ್ಕುಗಳ ಕಡೆಗೆ ಪ್ರಯಾಣಮಾಡುವವರಿಗೆ ಶುಕ್ರನು ಎದುರಾಗಿ ಬರುವ ಪ್ರಸಂಗವೇ ಇಲ್ಲ–ಎಂಬುದು ಇವರ ಅಭಿಪ್ರಾಯವಾಗಿದೆ.

ತ್ರಿಶಙ್ಕುಃ ಸಪುರೋಹಿತಃ ಭಾತಿ–ಇಲ್ಲಿ ಪುರೋಹಿತರೆಂದರೆ ವಿಶ್ವಾಮಿತ್ರರೂ ಆಗಬಹುದು. ವಸಿಷ್ಠರೂ ಆಗಬಹುದು. ತ್ರಿಶಂಕುವಿಗೆ ನೂತನಸ್ವರ್ಗವನ್ನು ತಪಶ್ಶಕ್ತಿಯ ಮೂಲಕ ಕಲ್ಪಿಸಿಕೊಟ್ಟವರು ವಿಶ್ವಾಮಿತ್ರರೇ. ಆ ಸಮಯದಲ್ಲಿ ವಿಶ್ವಾಮಿತ್ರರು ದಕ್ಷಿಣದಲ್ಲಿ ಬೇರೊಂದು ಸಪ್ತರ್ಷಿಮಂಡಲವನ್ನು ಸೃಷ್ಟಿಸಿದರು. ಆ ಸಪ್ತರ್ಷಿಗಳಲ್ಲಿ ವಸಿಷ್ಠ-ವಿಶ್ವಾಮಿತ್ರ ರಿಬ್ಬರೂ ಇದ್ದಾರೆ. ಆದುದರಿಂದ ಸಪುರೋಹಿತಃ–ಎಂದರೆ ಸಪ್ತರ್ಷಿಗಳ ಮಧ್ಯದಲ್ಲಿರುವ ವಸಿಷ್ಠರೊಡನೆ ಅಥವಾ ವಿಶ್ವಾಮಿತ್ರರೊಡನೆ–ಎಂದು ಅರ್ಥವಾಗುತ್ತದೆ. ತ್ರಿಶಂಕುನಕ್ಷತ್ರದ ಸಮೀಪದಲ್ಲಿಯೇ ಸಪ್ತರ್ಷಿಮಂಡಲವೂ ಇದೆ.

ಕೆಲವರು ಸಿಂಹನಾದಗಳನ್ನು ಮಾಡುತ್ತಿದ್ದರು. ತೊಡೆಗಳ ವೇಗದಿಂದ ಅನೇಕಾನೇಕಬಳ್ಳಿಗಳ ಸಮೂಹಗಳನ್ನೇ ಧ್ವಂಸಮಾಡುತ್ತಿದ್ದರು. ಮಹಾ ಪರಾಕ್ರಮಿಗಳಾಗಿದ್ದ ವಾನರರು ಬಾಯಿಗಳನ್ನು ತೆರೆದುಕೊಂಡು ಕಲ್ಲುಬಂಡೆ ಗಳಿಂದಲೂ, ವೃಕ್ಷಗಳಿಂದಲೂ ಆಟವಾಡುತ್ತಿದ್ದರು. ನೂರಾರು-ಸಾವಿರಾರು, ಲಕ್ಷ-ಲಕ್ಷ, ಕೋಟಿ-ಕೋಟಿ ಮಹಾಭಯಂಕರರಾದ ವಾನರರಿಂದ ತುಂಬಿ ಹೋಗಿದ್ದ ಆ ಭೂಭಾಗವು ಅತ್ಯಂತಶೋಭಾಯಮಾನವಾಗಿ ಕಾಣುತ್ತಿದ್ದಿತು. ಹೀಗೆ ವಿಶಾಲವಾಗಿದ್ದ ಆ ವಾನರಸೈನ್ಯವು ಹಗಲು-ರಾತ್ರಿಗಳೆಂಬ ವ್ಯತ್ಯಾಸವಿಲ್ಲದೆ ಸತತವಾಗಿ ಪ್ರಯಾಣಮಾಡುತ್ತಲೇ ಇದ್ದಿತು. ಸುಗ್ರೀವನಿಂದ ರಕ್ಷಿಸಲ್ಪಡುತ್ತಿದ್ದ ಎಲ್ಲ ವಾನರರೂ ಹೃಷ್ಟರಾಗಿಯೂ, ಪುಷ್ಟರಾಗಿಯೂ, ಪ್ರಸನ್ನರಾಗಿಯೂ ಇದ್ದು ಅತ್ಯಂತತ್ವರೆಯಿಂದ ಪ್ರಯಾಣಮಾಡುತ್ತಿದ್ದರು. ಎಲ್ಲರೂ ಯುದ್ಧಪ್ರೇಮಿಗಳಾಗಿದ್ದು ಸೀತೆಯನ್ನು ಬಿಡಿಸಿಕೊಂಡು ಬರಬೇಕೆಂಬ ಆಕಾಂಕ್ಷೆಯಿಂದಿದ್ದರು. ಈ ಕಾರಣದಿಂದಲೇ ಅವರು ಮುಹೂರ್ತ ಕಾಲವಾದರೂ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿರಲಿಲ್ಲ. ಹೀಗೆಯೇ ಪ್ರಯಾಣಮಾಡುತ್ತಾ ಅವರು ದಟ್ಟವಾಗಿದ್ದ ಅನೇಕ ವೃಕ್ಷಗಳಿಂದಲೂ, ಅರಣ್ಯಗಳಿಂದಲೂ ವ್ಯಾಪ್ತವಾಗಿದ್ದ ಸಹ್ಯಪರ್ವತದ ಬಳಿಗೆ ಬಂದು ಆ ಪರ್ವತವನ್ನು ಹತ್ತಿದರು.

ಶ್ರೀರಾಮನು ಸಹ್ಯ ಮತ್ತು ಮಲಯಪರ್ವತಗಳಲ್ಲಿದ್ದ ವಿಚಿತ್ರವಾದ ಅರಣ್ಯಗಳನ್ನೂ, ನದಿಗಳನ್ನೂ, ಚಿಲುಮೆಗಳನ್ನೂ ನೋಡುತ್ತಾ ಪ್ರಯಾಣ ಮಾಡುತ್ತಿದ್ದನು. ವಾನರಸೈನಿಕರು ಮಾರ್ಗದಲ್ಲಿರುತ್ತಿದ್ದ ತಿಲಕ, ಮಾವು, ಅಶೋಕ, ಸಿಂಧುವಾರ (ಲಕ್ಕಿಗಿಡ), ತಿನಿಶ (ನೆರ್ಮೆ), ಕರವೀರ(ಗನ್ನೇರಳೆ), ಚಂಪಾ (ಸಂಪಿಗೆ), ಅಂಕೋಲ, ಕರಂಜ (ಹೊಂಗೆ), ಪ್ಲಕ್ಷ (ಅರಳಿ), ನ್ಯಗ್ರೋಧ (ಆಲ), ನೇರಳೆ, ನೆಲ್ಲಿ, ಈಚಲು–ಇವೇ ಮುಂತಾದ ವೃಕ್ಷಗಳನ್ನು ಧ್ವಂಸಮಾಡುತ್ತಾ ಹೋಗುತ್ತಿದ್ದರು. ಸುಂದರವಾದ ಬಂಡೆಗಳ ಮಧ್ಯದಲ್ಲಿ ಹುಟ್ಟಿದ್ದ ವಿಧ-ವಿಧವಾದ ಅರಣ್ಯದ ವೃಕ್ಷಗಳು ವೇಗವಾದ ಗಾಳಿಯ ಬಡಿತದಿಂದ ಅಲ್ಲಾಡುತ್ತಾ ತಮ್ಮಲ್ಲಿದ್ದ ಪುಷ್ಪಗಳನ್ನು ವಾನರಸೈನಿಕರ ಮೇಲೆ ಸುರಿಸುತ್ತಿದ್ದುವು. ಮಧುವಿನಿಂದ ಸುಗಂಧಿತವಾದ ಅರಣ್ಯಗಳಲ್ಲಿ ದುಂಬಿಗಳ ಶಬ್ದದೊಡನೆ ಚಂದ್ರನಂತೆ ಶೀತಲವಾದ ಸ್ಪರ್ಶಸುಖವನ್ನುಂಟುಮಾಡುತ್ತಿದ್ದ, ಸುಗಂಧಯುಕ್ತವಾದ ವಾಯುವು ಮೆಲ್ಲ-ಮೆಲ್ಲನೆ ಬೀಸುತ್ತಿದ್ದಿತು. ಆ

ಸಹ್ಯಪರ್ವತವು ಗೈರಿಕಾಧಾತುಗಳಿಂದ ವಿಭೂಷಿತವಾಗಿ ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದಿತು. ವಾಯುವಿನ ಬಡಿತದಿಂದ ಮೇಲೆದ್ದ ಗೈರಿಕಾಧಾತುಗಳ ಮೇಲಿನ ಧೂಳು ಆ ದೊಡ್ಡದಾದ ವಾನರ ಸೈನ್ಯವನ್ನು ಎಲ್ಲ ಕಡೆಗಳಿಂದಲೂ ಮುಚ್ಚಿಬಿಟ್ಟಿತು. ರಮಣೀಯವಾದ ಪರ್ವತದ ತಪ್ಪಲು ಪ್ರದೇಶಗಳಲ್ಲಿ ಹೂವಿನಿಂದ ಕೂಡಿದ ಕೇದಗೆ, ಸಿಂಧು ವಾರ, ವಾಸಂತೀ ಇವೇ ಮೊದಲಾದ ಲತೆಗಳು ಬಹಳ ರಮಣೀಯವಾಗಿ ಕಾಣುತ್ತಿದ್ದುವು. ಮಾಧವೀಲತೆಗಳೂ (ಕಾಡಿರುವಂತಿಗೆ), ಹೂಗಳಿಂದ ಕೂಡಿದ್ದ ಕುಂದಲತೆಯ ಪೊದರುಗಳೂ (ಕೋಲುಮಲ್ಲಿಗೆ) ಸುಗಂಧ ಪೂರ್ಣವಾಗಿದ್ದುವು. ಚಿರಬಿಲ್ವ, ಮಧೂಕ, ವಂಜುಲ, ವಕುಲ, ರಂಜಕ, ತಿಲಕ ಮತ್ತು ನಾಗಕೇಸರವೃಕ್ಷಗಳೂ ಸುಪುಷ್ಪಿತವಾಗಿದ್ದುವು. ಆಮ್ರ, ಪಾಟಲಿಕ, ಕೋವಿದಾರ, ಮುಚುಲಿಂದ, ಅರ್ಜುನ, ಶಿಂಶುಪ, ಕುಟಜ, ಹಿಂತಾಲ, ತಿನಿಶ, ಚೂರ್ಣಕ, ಕದಂಬ, ನೀಲಾಶೋಕ, ಸರಲ, ಅಂಕೋಲ, ಪದ್ಮಕವೃಕ್ಷಗಳೂ ಪುಷ್ಪಗಳಿಂದ ಸುಶೋಭಿಸುತ್ತಿದ್ದುವು. ಪ್ರಸನ್ನಚಿತ್ತರಾಗಿದ್ದ ಆ ಎಲ್ಲ ವಾನರರೂ ಪುಷ್ಪಿತವಾಗಿದ್ದ ಆ ವೃಕ್ಷಗಳಲ್ಲಿ ತುಂಬಿಕೊಂಡಿದ್ದರು. ಆ ಪರ್ವತದಲ್ಲಿ ರಮ್ಯವಾದ ಬಾವಿಗಳೂ, ಚಿಕ್ಕ-ಚಿಕ್ಕ ಜಲಾಶಯಗಳೂ ಇದ್ದುವು. ಆ ಜಲಾಶಯಗಳಲ್ಲಿ ಚಕ್ರವಾಕಗಳು ಸಂಚರಿಸುತ್ತಿದ್ದುವು. ಜಲಕುಕ್ಕುಟಗಳು ಅಲ್ಲಿ ನಿವಾಸಮಾಡಿಕೊಂಡಿದ್ದುವು. ಜಲಕಾರಕಗಳಿಂದಲೂ, ಕ್ರೌಂಚಪಕ್ಷಿಗಳಿಂದಲೂ ಆ ಜಲಾಶಯಗಳು ವ್ಯಾಪ್ತವಾಗಿದ್ದುವು. ಹಂದಿ-ಜಿಂಕೆ ಇವೇ ಮೊದಲಾದ ಮೃಗಗಳು ಅಲ್ಲಿ ನೀರು ಕುಡಿಯುತ್ತಿದ್ದುವು. ಕರಡಿಗಳಿಂದಲೂ, ಕಿರುಬಗಳಿಂದಲೂ, ಸಿಂಹ-ಶಾರ್ದೂಲಗಳಿಂದಲೂ, ಭಯಂಕರವಾದ ದೊಡ್ಡದಾಗಿದ್ದ ಆನೆಗಳಿಂದಲೂ ಆ ಜಲಾಶಯಗಳು ಸೇವಿಸಲ್ಪಡುತ್ತಿದ್ದುವು. ವಿಕಸಿತವಾದ ಮತ್ತು ಸುಗಂಧಿತವಾದ ಕಮಲಗಳಿಂದಲೂ, ಕುಮುದಗಳಿಂದಲೂ, ಕನ್ನೈದಿಲೆಗಳಿಂದಲೂ, ನೀರಿನಲ್ಲಿ ಹುಟ್ಟಿ ಬೆಳೆಯುವ ವಿಧ-ವಿಧವಾದ ಇತರ ಪುಷ್ಪಗಳಿಂದಲೂ ಆ ಜಲಾಶಯಗಳು ರಮಣೀಯವಾಗಿ ಕಾಣುತ್ತಿದ್ದುವು. ಪರ್ವತದ ತಪ್ಪಲು ಪ್ರದೇಶಗಳಲ್ಲಿ ನಾನಾವಿಧವಾದ ಪಕ್ಷಿಗಳು ಕಲರವಗಳನ್ನು ಮಾಡುತ್ತಿದ್ದುವು. ವಾನರಸೈನಿಕರು ಆ ಜಲಾಶಯಗಳಲ್ಲಿ ಸ್ನಾನಮಾಡುತ್ತಿದ್ದರು. ನೀರು ಕುಡಿಯುತ್ತಿದ್ದರು. ಸ್ವಲ್ಪಕಾಲ ಆಟವನ್ನೂ ಆಡುತ್ತಿದ್ದರು. ಆ ವಾನರಸೈನಿಕರು

ಜಲಾಶಯಗಳಲ್ಲಿ ಪರಸ್ಪರವಾಗಿ ಒಬ್ಬರು ಮತ್ತೊಬ್ಬರ ಮೇಲೆ ನೀರೆರಚು ತ್ತಿದ್ದರು. ಮದೋತ್ಕಟರಾದ ಕೆಲವು ವಾನರರು ಪರ್ವತದ ಶಿಖರದ ಮೇಲೇರಿ ಅಲ್ಲಿಯ ವೃಕ್ಷಗಳಲ್ಲಿರುತ್ತಿದ್ದ, ಅಮೃತದಂತೆ ಸಿಹಿಯಾದ ಹಣ್ಣು ಗಳನ್ನೂ ಪುಷ್ಪಗಳನ್ನೂ ನೆಲದಲ್ಲಿದ್ದ ಗೆಡ್ಡೆ-ಗೆಣಸುಗಳನ್ನೂ ಕಿತ್ತುಹಾಕು ತ್ತಿದ್ದರು. ಜೇನಿನ ಬಣ್ಣವುಳ್ಳವರಾಗಿದ್ದ ಮತ್ತು ಮದೋನ್ಮತ್ತರಾಗಿದ್ದ ಕೆಲವು ವಾನರರು ವೃಕ್ಷಗಳಲ್ಲಿ ತೂಗಾಡುತ್ತಿದ್ದ ದ್ರೋಣ (ಕೊಳಗ) ಪ್ರಮಾಣದ ಜೇನುಗೂಡುಗಳನ್ನು ಕಿತ್ತು ಜೇನು ಕುಡಿದು ಸಂತುಷ್ಟರಾಗಿ ಮುಂದೆ ಪ್ರಯಾಣಮಾಡುತ್ತಿದ್ದರು. ವೃಕ್ಷಗಳನ್ನು ಮುರಿದುಹಾಕುತ್ತಾ ಲತೆಗಳನ್ನು ಕಿತ್ತುಹಾಕುತ್ತಾ ದೊಡ್ಡ-ದೊಡ್ಡ ಪರ್ವತಗಳನ್ನು ಪುಡಿ-ಪುಡಿಮಾಡುತ್ತಾ ವಾನರಸೈನಿಕರು ಮುಂದೆ ಹೋಗುತ್ತಿದ್ದರು. ಮಧುವನ್ನು ಕುಡಿದು ದರ್ಪಿತ ರಾದ ಕೆಲವು ವಾನರರು ಗರ್ಜನೆಮಾಡುತ್ತಾ ವೃಕ್ಷಗಳಿಂದ ಇಳಿಯುತ್ತಿದ್ದರು. ಮತ್ತೆ ಕೆಲವರು ಮಧುವನ್ನು ಕುಡಿಯಲು ಮರಗಳನ್ನು ಹತ್ತುತ್ತಿದ್ದರು. ಕೆಲವರು ವೃಕ್ಷಗಳಲ್ಲಿ ಮಧುಪಾನಮಾಡುತ್ತಿದ್ದರು. ಆ ಸಮಯದಲ್ಲಿ ತೆನೆಯಾಗಿ ಬೆಳೆದು ನಿಂತಿರುವ ಭತ್ತದ ಗದ್ದೆಗಳುಳ್ಳ ಭೂಮಿಯಂತೆ ವಾನರಶ್ರೇಷ್ಠರಿಂದ ವ್ಯಾಪ್ತವಾಗಿದ್ದ ಆ ಭೂಭಾಗವು ಕಂಗೊಳಿಸುತ್ತಿದ್ದಿತು.

ಬಳಿಕ ಕಮಲನಯನನಾದ ಶ್ರೀರಾಮನು ಮಹೇಂದ್ರಪರ್ವತದ ಬಳಿಗೆ ಹೋಗಿ, ವೃಕ್ಷಗಳಿಂದ ಶೋಭಾಯಮಾನವಾಗಿ ಕಾಣುತ್ತಿದ್ದ ಅದರ ಶಿಖರವನ್ನು ಹತ್ತಿದನು. ಅಲ್ಲಿಂದ ಅವನು ಆಮೆಗಳಿಂದಲೂ, ಮೀನು ಗಳಿಂದಲೂ ಸಮಾಕುಲವಾಗಿದ್ದ ಅಗಾಧವಾದ ಸಮುದ್ರವನ್ನು ನೋಡಿದನು.

ಹೀಗೆ ಶ್ರೀರಾಮಪ್ರಮುಖರಾದ ಕಪಿಸೈನಿಕರು ಅನುಕ್ರಮವಾಗಿ ಸಹ್ಯ ಪರ್ವತವನ್ನೂ, ಮಲಯಪರ್ವತವನ್ನೂ, ಮಹೇಂದ್ರಪರ್ವತವನ್ನೂ ದಾಟಿ ಭಯಂಕರವಾಗಿ ಶಬ್ದಮಾಡುತ್ತಿದ್ದ ದಕ್ಷಿಣಸಮುದ್ರದ ತೀರವನ್ನು ಸೇರಿದರು. ಮಹೇಂದ್ರಪರ್ವತದಿಂದಿಳಿದು ಮಿತ್ರರನ್ನು ಸಂತೋಷಗೊಳಿಸುವವರಲ್ಲಿ ಶ್ರೇಷ್ಠನಾದ ಶ್ರೀರಾಮನು ಲಕ್ಷ್ಮಣ-ಸುಗ್ರೀವರೊಡನೆ ಸಮುದ್ರದ ತೀರ ಪ್ರದೇಶದಲ್ಲಿದ್ದ ಉತ್ತಮೋತ್ತಮವಾದ ಉದ್ಯಾನವನಕ್ಕೆ ಹೋದನು. ಬೇಗ-ಬೇಗನೆ ಮೇಲೆದ್ದು ಬರುತ್ತಿದ್ದ, ಅಲೆಗಳಿಂದ ತೋಯ್ದುಹೋದ ಬಂಡೆ

ಗಳುಳ್ಳ ವಿಶಾಲವಾದ ಸಮುದ್ರದ ತೀರವನ್ನು ಸೇರಿ ಶ್ರೀರಾಮನು ಈ ಮಾತನ್ನು ಹೇಳಿದನು :

"ಸುಗ್ರೀವ! ಈಗ ನಾವೆಲ್ಲರೂ ದಕ್ಷಿಣಸಮುದ್ರದ ತೀರಕ್ಕೆ ಬಂದಿರುವೆವು. ಸಮುದ್ರವನ್ನು ದಾಟುವ ವಿಷಯದಲ್ಲಿ ಹಿಂದಿದ್ದ ಚಿಂತೆಯೇ ಈಗ ಪುನಃ ಉಂಟಾಗಿದೆ. ಇಲ್ಲಿಂದ ಮುಂದಕ್ಕೆ ಪಾರವೇ ಕಾಣದಿರುವ ನದಿಗಳಿಗೊಡೆಯನಾದ ಸಮುದ್ರನಿದ್ದಾನೆ. ಯಾವುದಾದರೂ ಉಪಾಯವಿಲ್ಲದೇ ಈ ಸಮುದ್ರವನ್ನು ದಾಟಲು ಶಕ್ಯವಿಲ್ಲ. ನಮ್ಮ ಸೈನ್ಯವೆಲ್ಲವೂ ಇಲ್ಲಿಯೇ ತಂಗಲಿ. ನಾವೆಲ್ಲರೂ ಕುಳಿತು ಈ ಅಪಾರ ವಾನರಸೈನ್ಯವು ಸಮುದ್ರದ ಆಚೆಯ ದಡವನ್ನು ಹೇಗೆ ಸೇರಬೇಕೆಂಬುದರ ಬಗೆಗೆ ಸಮಾಲೋಚನೆಯನ್ನು ಪ್ರಾರಂಭಿಸೋಣ."

ಹೀಗೆ ಸೀತಾಪಹರಣದ ವ್ಯಸನದಿಂದ ಅತಿಕೃಶನಾಗಿದ್ದ, ಮಹಾಬಾಹುವಾದ ಶ್ರೀರಾಮನು ಸಮುದ್ರದ ತೀರಕ್ಕೆ ಬಂದು ಅಲ್ಲಿಯೇ ಬೀಡುಮಾಡಬೇಕೆಂದು ಸೈನಿಕರಿಗೆ ಆಜ್ಞಾಪಿಸುತ್ತಾ ಸುಗ್ರೀವನನ್ನು ಕುರಿತು ಹೇಳಿದನು :

"ಹರಿಶ್ರೇಷ್ಠನೇ! ನಮ್ಮ ಸಮಸ್ತಸೈನ್ಯಗಳೂ ಸಮುದ್ರದ ತೀರದಲ್ಲಿ ಬೀಡುಬಿಡಲಿ. ಸಮುದ್ರವನ್ನು ದಾಟಲು ಸಮಾಲೋಚಿಸಬೇಕಾದ ಕಾಲ ವೀಗ ಬಂದಿದೆ. ಈ ಸಮಯದಲ್ಲಿ ಸೇನಾಪತಿಗಳು ಯಾವುದೇ ಕಾರಣ ದಿಂದಲೂ ತಮ್ಮ ಸೈನ್ಯವನ್ನು ತ್ಯಜಿಸಿ ಬೇರೆಯ ಕಡೆಗೆ ಹೋಗಬಾರದು. ಎಲ್ಲ ಶೂರ-ವೀರ ಸೇನಾಪತಿಗಳೂ ಸೈನ್ಯವನ್ನು ರಕ್ಷಿಸುವ ಸಲುವಾಗಿ ತಮ್ಮ-ತಮ್ಮ ವಿಭಾಗಗಳಿರುವ ಕಡೆಗೆ ಹೋಗಲಿ. ಈ ವಿಷಯವನ್ನು ಎಲ್ಲರೂ ತಿಳಿದಿರಬೇಕಾಗಿದೆ. ರಾಕ್ಷಸರು ನಮ್ಮನ್ನು ಗುಪ್ತವಾದ ರೀತಿಯಲ್ಲಿ ಮಾಯೆಯಿಂದ ಆಕ್ರಮಿಸಬಹುದು. ಈ ಭಯವು ನಮಗಿದೆ. ಆದುದರಿಂದ ಎಲ್ಲರೂ ಜಾಗರೂಕರಾಗಿರಬೇಕು."

ಶ್ರೀರಾಮನ ಆ ಮಾತನ್ನು ಕೇಳಿ ಲಕ್ಷ್ಮಣಸಮೇತನಾದ ಸುಗ್ರೀವನು ವೃಕ್ಷಗಳಿಂದ ನಿಬಿಡವಾಗಿದ್ದ ಸಾಗರದ ತೀರದಲ್ಲಿ ಸೈನ್ಯವನ್ನು ನಿಲ್ಲಿಸಿದನು. ಸಮುದ್ರದ ತೀರದಲ್ಲಿ ಬೀಡುಮಾಡಿದ್ದ ಪಿಂಗಳವರ್ಣದ ಆ ಕಪಿಸೇನೆಯು, ಪಿಂಗಳವರ್ಣದ ನೀರಿನಿಂದ ಕೂಡಿದ ಮತ್ತೊಂದು ಅಗಾಧವಾದ ಸಮುದ್ರ

ದಂತೆಯೇ ಕಾಣುತ್ತಿದ್ದಿತು. ಸಮುದ್ರದ ತೀರದಲ್ಲಿದ್ದ ವನಪ್ರದೇಶಕ್ಕೆ ಆಗಮಿಸಿದ ಆ ವಾನರಶ್ರೇಷ್ಠರು ಸಮುದ್ರದ ಆಚೆಯ ದಡಕ್ಕೆ ಹೋಗುವ ಆಕಾಂಕ್ಷೆಯಿಂದ ಅಲ್ಲಿಯೇ ಕುಳಿತರು. ಅಲ್ಲಿ ಉಳಿದುಕೊಳ್ಳಲು ಸೈನಿಕರು ಡೇರೆಗಳನ್ನು ಹಾಕುತ್ತಿದ್ದಾಗ ಆಗುತ್ತಿದ್ದ ಮಹಾಧ್ವನಿಯು ಸಮುದ್ರದ ಭೋರ್ಗರೆಯುವ ಶಬ್ದವನ್ನು ಅಡಗಿಸಿ ಕೇಳಿಬರುತ್ತಿದ್ದಿತು. ಸುಗ್ರೀವನಿಂದ ಸಂರಕ್ಷಿಸಲ್ಪಡುತ್ತಿದ್ದ ಆ ವಾನರರ ಮಹಾಸೈನ್ಯವು ಶ್ರೀರಾಮಚಂದ್ರನ ಕಾರ್ಯವನ್ನು ಸಾಧಿಸುವುದರಲ್ಲಿ ನಿರತವಾಗಿದ್ದು ಮೂರು ವಿಭಾಗಗಳಾಗಿ ವಿಂಗಡಿಸಲ್ಪಟ್ಟಿತು. ಮಹಾಸಾಗರದ ತೀರಕ್ಕೆ ಬಂದನಂತರ ಆ ವಾನರಸೈನ್ಯವು ವಾಯುವೇಗದಿಂದ ಕಂಪಿಸುತ್ತಿದ್ದ ಸಮುದ್ರವನ್ನು ನೋಡುತ್ತಾ ಪರಮಾನಂದವನ್ನು ಹೊಂದಿತು. ಬಹುದೂರದಲ್ಲಿ ರಾಕ್ಷಸರಿಂದ ಆಶ್ರಯಿಸಲ್ಪಟ್ಟ ಮತ್ತೊಂದು ತೀರಪ್ರದೇಶವಿದ್ದ, ದಾಟಿಹೋಗಲು ಯಾವ ಆಶ್ರಯವೂ ಇಲ್ಲದಿದ್ದ, ವರುಣನ ಆವಾಸಸ್ಥಾನವಾದ ಸಮುದ್ರವನ್ನು ನೋಡುತ್ತಾ ಕಪಿನಾಯಕರು ಕುಳಿತರು.

ಭಯಂಕರವಾದ ಮೊಸಳೆಗಳಿದ್ದು ಅದರಿಂದಲೇ ಮಹಾಘೋರವಾಗಿ ಕಾಣುತ್ತಿದ್ದ, ದಿವಸದ ಕಡೆಯಲ್ಲಿಯೂ ಮತ್ತು ರಾತ್ರಿಯ ಪ್ರಾರಂಭದಲ್ಲಿಯೂ ಅಲೆಗಳ ಮೂಲಕವಾಗಿ ನೃತ್ಯಮಾಡುತ್ತಿರುವಂತೆಯೂ ಮತ್ತು ಅಲೆಗಳಿಂದ ಹುಟ್ಟಿದ ನೊರೆಗಳ ಮೂಲಕವಾಗಿ ನಗುತ್ತಿರುವಂತೆಯೂ ಕಾಣುತ್ತಿದ್ದ, ಚಂದ್ರೋದಯ ಸಮಯದಲ್ಲಿ ವೃದ್ಧಿಯನ್ನು ಹೊಂದಿ ಸಾವಿರಾರು ಚಂದ್ರನ ಪ್ರತಿಬಿಂಬಗಳೊಡನೆ ಸಮಾಕುಲವಾಗಿದ್ದ, ಚಂಡಮಾರು ತಕ್ಕೆ ಸಮಾನವಾದ ದೊಡ್ಡ-ದೊಡ್ಡ ಮೊಸಳೆಗಳಿಂದಲೂ ತಿಮಿ-ತಿಮಿಂಗಿಲಗಳಿಂದಲೂ ಸಮಾಕುಲವಾಗಿದ್ದ ಸಮುದ್ರವನ್ನು ಕಪಿನಾಯಕರು ನೋಡಿದರು. ಪ್ರದೀಪ್ತವಾದ ಹೆಡೆಗಳುಳ್ಳ ಸರ್ಪಗಳಿಂದಲೂ, ದೊಡ್ಡ-ದೊಡ್ಡ ಶರೀರಗಳನ್ನು ಹೊಂದಿದ್ದ ಪ್ರಾಣಿಗಳಿಂದಲೂ, ನಾನಾಪರ್ವತಗಳಿಂದಲೂ ಸಮಾಕುಲವಾಗಿದ್ದ ಸಮುದ್ರವನ್ನು ಕಪಿನಾಯಕರು ನೋಡಿದರು. ರಾಕ್ಷಸರ ವಾಸಸ್ಥಾನವಾಗಿದ್ದ ಅಗಾಧವಾಗಿದ್ದ ಆ ಮಹಾಸಾಗರವು ಅತ್ಯಂತ ದುರ್ಗಮವಾಗಿದ್ದಿತು. ಅದನ್ನು ದಾಟಲು ಯಾವುದೇ ಮಾರ್ಗವಾಗಲೀ ಸಾಧನವಾಗಲೀ ಇರಲಿಲ್ಲ. ವಾಯುವಿನಿಂದ ಎಬ್ಬಿಸಲ್ಪಟ್ಟ ಚಂಚಲವಾದ ಅಲೆಗಳುಳ್ಳ ಜಲರಾಶಿಗಳು ಮೊಸಳೆಗಳಿಂದಲೂ, ನೀರಾನೆಗಳಿಂದಲೂ, ದೊಡ್ಡ-ದೊಡ್ಡ

ಹೆಡೆಗಳುಳ್ಳ ಸರ್ಪಗಳಿಂದಲೂ ವ್ಯಾಪ್ತವಾಗಿದ್ದು ಉಲ್ಲಾಸದಿಂದ ಮೇಲಕ್ಕೆ ಹಾರುತ್ತಲೂ ಕೆಳಕ್ಕೆ ಬೀಳುತ್ತಲೂ ಇದ್ದುವು.

ಸಮುದ್ರವು ಆಕಾಶದಂತೆಯೂ ಆಕಾಶವು ಸಮುದ್ರದಂತೆಯೂ ಕಾಣುತ್ತಿದ್ದಿತು. ಒಂದಕ್ಕೊಂದಕ್ಕೆ ಯಾವ ವ್ಯತ್ಯಾಸವೂ ಕಾಣುತ್ತಿರಲಿಲ್ಲ. ಸಮುದ್ರದಲ್ಲಿದ್ದ ತರಂಗಗಳ ಮೂಲಕವಾಗಿ ಕಂಡುಬರುತ್ತಿದ್ದ ಜಲಬಿಂದುಗಳು ಅಗ್ನಿಕಣಗಳಂತೆ ಕಾಣುತ್ತಿದ್ದುವು. ಅಂತಹ ಅಗ್ನಿಕಣಗಳಿಂದ ಸಮುದ್ರವು ವ್ಯಾಪ್ತವಾಗಿದ್ದಿತು. ಆಕಾಶವು ಮಿಣಿ-ಮಿಣಿಗುಟ್ಟುವ ನಕ್ಷತ್ರಗಳಿಂದ ವ್ಯಾಪ್ತ ವಾಗಿದ್ದು ಆಕಾಶವೂ ಸಮುದ್ರದಂತೆಯೇ ಕಾಣುತ್ತಿದ್ದಿತು. ಸಮುದ್ರದಲ್ಲಿ ದೊಡ್ಡ-ದೊಡ್ಡ ಪರ್ವತಗಳಿದ್ದುವು. ಆಕಾಶದಲ್ಲಿಯೂ ಸರ್ಪಾಕಾರದ ರಾಹುಗ್ರಹವಿದ್ದಿತು. ಸಮುದ್ರವು ದೇವಶತ್ರುಗಳಾದ ದೈತ್ಯರಿಗೂ ರಾಕ್ಷಸರಿಗೂ ಆವಾಸಸ್ಥಾನವಾಗಿದ್ದಿತು. ಅಂತೆಯೇ ಆಕಾಶವು ದೈತ್ಯರಿಗೂ ರಾಕ್ಷಸರಿಗೂ ಸಂಚಾರಸ್ಥಾನವಾಗಿದ್ದಿತು. ಎರಡೂ ನೋಡಲು ಬಹಳ ಭಯಂಕರವಾಗಿ ಕಾಣುತ್ತಿದ್ದುವು. ಪಾತಾಳದಂತೆ ಗಂಭೀರವಾಗಿದ್ದುವು. ಹೀಗೆ ಸಮುದ್ರವು ಆಕಾಶದಂತೆಯೂ ಆಕಾಶವು ಸಮುದ್ರದಂತೆಯೂ ಕಾಣುತ್ತಿದ್ದಿತು. ಸಮುದ್ರದ ನೀರು ಆಕಾಶದೊಡನೆ ನಿತ್ಯಸಂಬಂಧವನ್ನು ಹೊಂದಿದ್ದಿತು. ಅಂತೆಯೇ ಆಕಾಶವು ನೀರಿನೊಡನೆ (ಸಮುದ್ರದೊಡನೆ) ನಿತ್ಯ ಸಂಬಂಧವನ್ನು ಹೊಂದಿದ್ದಿತು. ಆಕಾಶವು ತಾರೆಗಳೆಂಬ ರತ್ನಗಳಿಂದ ಸಮಾಕುಲವಾಗಿದ್ದಿತು. ಸಮುದ್ರವು ರತ್ನಾಕರವೇ ಆಗಿದೆ. ಆದುದರಿಂದ ಆಕಾಶ-ಸಮುದ್ರಗಳೆರಡೂ ಒಂದೇ ರೀತಿಯಲ್ಲಿ ಕಾಣುತ್ತಿದ್ದುವು. ಆಕಾಶವನ್ನು ಮೇಘದ ಮಾಲೆಗಳೂ ಸಮುದ್ರವನ್ನು ತರಂಗದ ಮಾಲೆಗಳೂ ಆವರಿಸಿ ಕೊಂಡಿದ್ದುವು. ಆದುದರಿಂದ ಆಕಾಶಕ್ಕೂ ಸಮುದ್ರಕ್ಕೂ ವಿಶೇಷವಾದ ಅಂತರವೇನೂ ಕಾಣುತ್ತಿರಲಿಲ್ಲ. ಪರಸ್ಪರವಾಗಿ ಸಂಘರ್ಷಿಸುತ್ತಿದ್ದ ಮತ್ತು ಒಂದಕ್ಕೊಂದು ಸೇರಿಕೊಳ್ಳುತ್ತಿದ್ದ ಸಿಂಧುರಾಜನ ಅಲೆಗಳು-ಆಕಾಶದಲ್ಲಿ ಬಾರಿಸುವ ದೇವತೆಗಳ ದೊಡ್ಡ ಭೇರೀ-ಮೃದಂಗಗಳಂತೆ–ಭಯಂಕರವಾಗಿ ಶಬ್ದಮಾಡುತ್ತಿದ್ದುವು. ವಾಯುವಿ ನಿಂದ ಕೂಡಿ ರತ್ನಗಳನ್ನು ಹೊರತರುವ, ಅಲೆಗಳ ಶಬ್ದದಿಂದ ಕೂಡಿರುವ, ಜಲಜಂತುಗಳಿಂದ ಸಮಾಕುಲವಾಗಿರುವ ಸಮುದ್ರವು ಕೋಪಗೊಂಡಿರು ವುದೋ–ಎಂಬಂತೆ ಅಲೆಗಳ ಮೂಲಕವಾಗಿ ಹಾರಿ ಹಾರಿ ಬೀಳುತ್ತಿದ್ದಿತು.

ವಾಯುವಿನಿಂದ ಮೇಲಕ್ಕೆಸೆಯಲ್ಪಟ್ಟು ಆಕಾಶದಲ್ಲಿ ಅಲೆಗಳ ಮೂಲಕವಾಗಿ ನೃತ್ಯಮಾಡುತ್ತಿರುವ ವಾಯುವಿನಿಂದ ವ್ಯಾಪ್ತವಾದ ಸಮುದ್ರವನ್ನು ಮಹಾತ್ಮರಾದ ವಾನರಸೈನಿಕರು ನೋಡಿದರು. ತಿರುಗುತ್ತಿದ್ದ ಅಲೆಗಳ ಸಮೂಹಗಳಿಂದ ಉಂಟಾಗುತ್ತಿದ್ದ ಶಬ್ದವುಳ್ಳ ಮಹಾಸಮುದ್ರವು ಅತ್ಯಂತ ಚಂಚಲವಾಗಿರುವುದೋ ಎಂಬಂತೆ ಕಾಣುತ್ತಿದ್ದಿತು. ಅಲ್ಲಿದ್ದ ವಾನರಸೈನಿಕರು ಅಂತಹ ಸಮುದ್ರವನ್ನು ನೋಡಿ ವಿಸ್ಮಿತರಾದರು.

೪ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೫ನೆಯ ಸರ್ಗ

## ಶ್ರೀರಾಮನು ಸೀತೆಯ ಸಲುವಾಗಿ ದುಃಖಿಸಿದುದು

**ಸಾ ತು ನೀಲೇನ ವಿಧಿವತ್ಸ್ವಾರಕ್ಷಾ ಸುಸಮಾಹಿತಾ ।**
**ಸಾಗರಸ್ಯೋತ್ತರೇ ತೀರೇ ಸಾಧು ಸೇನಾ ನಿವೇಶಿತಾ ॥೧॥**

ದಂಡನಾಯಕನಾದ ನೀಲನಿಂದ ಸಮಗ್ರವಾಗಿ ರಕ್ಷಿಸಲ್ಪಡುತ್ತಿದ್ದ ಮತ್ತು ಚೆನ್ನಾಗಿ ರಕ್ಷಿಸಲ್ಪಟ್ಟಿದ್ದ ಆ ವಾನರಸೈನ್ಯವು ಸಮುದ್ರದ ಉತ್ತರತೀರದಲ್ಲಿ ಸುವ್ಯವಸ್ಥಿತವಾಗಿ ನೆಲೆಗೊಳಿಸಲ್ಪಟ್ಟಿತು.

ವಾನರಶ್ರೇಷ್ಠರಾದ ಮೈಂದ-ದ್ವಿವಿದರಿಬ್ಬರೂ ಆ ಮಹಾಸೈನ್ಯದ ರಕ್ಷಣಾರ್ಥವಾಗಿ ಎಲ್ಲ ದಿಕ್ಕುಗಳಲ್ಲಿಯೂ ಸುತ್ತಾಡುತ್ತಿದ್ದರು. ಸಮುದ್ರದ ದಡದಲ್ಲಿ ಸೈನ್ಯವನ್ನು ನೆಲೆಗೊಳಿಸಿದನಂತರ ಪಕ್ಕದಲ್ಲಿದ್ದ ಲಕ್ಷ್ಮಣನನ್ನು ನೋಡಿ ಶ್ರೀರಾಮನು ಹೇಳಿದನು :

**ಶೋಕಶ್ಚ ಕಿಲ ಕಾಲೇನ ಗಚ್ಛತಾ ಹ್ಯಪಗಚ್ಛತಿ ।**
**ಮಮ ಚಾಪಶ್ಯತಃ ಕಾನ್ತಾಮಹನ್ಯಹನಿ ವರ್ಧತೇ ॥೨॥**

“ಲಕ್ಷ್ಮಣ! ಸಾಮಾನ್ಯವಾಗಿ ಶೋಕವೆಂಬುದು ಕಾಲವು ಕಳೆದು ಹೋದಂತೆ ದೂರವಾಗುತ್ತದೆ. ಆದರೆ ಪತ್ನಿಯನ್ನು ನೋಡದಿರುವ ನನ್ನ ಶೋಕವಾದರೋ ದಿನ-ದಿನಕ್ಕೂ ಹೆಚ್ಚುತ್ತಲೇ ಇದೆ.

**ನ ಮೇ ದುಃಖಂ ಪ್ರಿಯಾ ದೂರೇ ನ ಮೇ ದುಃಖಂ ಹೃತೇತಿ ವಾ ।**
**ಏತದೇವಾನುಶೋಚಾಮಿ ವಯೋಽಸ್ಯಾ ಹ್ಯತಿವರ್ತತೇ ॥೩॥**

ನನ್ನ ಪ್ರೇಯಸಿಯು ದೂರದಲ್ಲಿರುವಳೆಂದೂ ನಾನು ದುಃಖಪಡುತ್ತಿಲ್ಲ. ಅವಳು ಅಪಹೃತಳಾದಳೆಂದೂ ನನಗೆ ದುಃಖವಿಲ್ಲ. ಆದರೆ ಅವಳ ಮನಸ್ಸು ಬಹಳ ಬೇಗ ಕಳೆದುಹೋಗುತ್ತಿರುವುದಕ್ಕಾಗಿ ನಾನು ದುಃಖಿಸುತ್ತೇನೆ.*

**ವಾಹಿ ವಾತ ಯತಃ ಕಾನ್ತಾ ತಾಂ ಸ್ಪೃಷ್ಟ್ವಾ ಮಾಮಪಿ ಸ್ಪೃಶ ।**
**ತ್ವಯಿ ಮೇ ಗಾತ್ರಸಂಸ್ಪರ್ಶಶ್ಚನ್ದ್ರೇ ದೃಷ್ಟಿಸಮಾಗಮಃ ॥೬॥**

ವಾಯುದೇವನೇ! ನನ್ನ ಪ್ರೇಯಸಿಯಿರುವೆಡೆಯಲ್ಲಿ ನೀನು ಬೀಸಿ ಅವಳನ್ನು ಸ್ಪರ್ಶಿಸಿ ಅನಂತರ ಅವಳ ಶರೀರಸುಗಂಧದೊಡನೆ ನನ್ನನ್ನು ಸ್ಪರ್ಶಿಸು. ಹಾಗೆ ನೀನು ನನ್ನ ಅಂಗಾಂಗಗಳನ್ನು ಸ್ಪರ್ಶಿಸಿದ್ದೇ ಆದರೆ ಅವಳ ಸ್ಪರ್ಶಸುಖವನ್ನು ಹೊಂದಿದಂತೆಯೇ ಆಗುತ್ತದೆ. ಚಂದ್ರನ ಮೂಲಕವಾಗಿ ನಮ್ಮಿಬ್ಬರ ದೃಷ್ಟಿಸಮಾಗಮವಾಗಲಿ. (ಸೀತೆಯೂ ಚಂದ್ರನನ್ನು ನೋಡುತ್ತಾಳೆ; ನಾನೂ ನೋಡುತ್ತೇನೆ–ಇಬ್ಬರೂ ಬೇರೆ-ಬೇರೆ ಸ್ಥಳಗಳಿಂದ ಒಬ್ಬನೇ ಚಂದ್ರನನ್ನು ನೋಡಿದರೆ ಪರಸ್ಪರರು ನೋಡಿದಂತೆಯೇ.)

**ತನ್ಮೇ ದಹತಿ ಗಾತ್ರಾಣಿ ವಿಷಂ ಪೀತಮಿವಾಶಯೇ ।**
**ಹಾ ನಾಥೇತಿ ಪ್ರಿಯಾ ಸಾ ಮಾಂ ಹ್ರಿಯಮಾಣಾ ಯದಬ್ರವೀತ್ ॥**

ರಾವಣರಾಕ್ಷಸನು ನನ್ನ ಪ್ರೇಯಸಿಯನ್ನು ಸೆಳೆದುಕೊಂಡು ಹೋಗುತ್ತಿದ್ದಾಗ ಅವಳು–'ಹಾ ನಾಥ!'–ಎಂದು ಕೂಗಿಕೊಂಡಳು. ಆ ಒಂದು

---

* ಉಪಭೋಗಯೋಗ್ಯವಾದ ವಯಸ್ಸು ಕಳೆದುಹೋಗುತ್ತಿದೆ–ಎಂಬ ಭಾವನೆಯಿಂದ ಶ್ರೀರಾಮನು ಹೇಳಿದ ಮಾತೆಂದು ಒಬ್ಬರು ವ್ಯಾಖ್ಯಾನಕಾರರು ಹೇಳಿದ್ದಾರೆ. ಉಪಭೋಗಯೋಗ್ಯಸ್ಯ ಪ್ರಿಯಾವಯಸಃ ವೈಕಲ್ಯಾನುಸ್ಮರಣಾತ್ ಇತ್ಯಾಹ– **ವಯೋಽತಿವರ್ತತೇ ವ್ಯರ್ಥತಯಾ** = ವ್ಯರ್ಥವಾಗಿ ವಯಸ್ಸು ಕಳೆದುಹೋಗುತ್ತಿದೆ. ಮಾನುಷಭಾವಾನುಸಾರೇಣ ಚೇದಂ ವಚನಂ = ಮಾನುಷಭಾವದ ಅನುಸಾರವಾಗಿ ಶ್ರೀರಾಮನು ಈ ಮಾತನ್ನು ಹೇಳಿದ್ದಾನೆ–ಎಂದವರು ಹೇಳಿದ್ದಾರೆ. ಆದರೆ ಇವಳ ವಯಸ್ಸು (ಆಯಸ್ಸು) ಕಳೆದುಹೋಗುತ್ತಿದೆ ಎಂಬ ಅರ್ಥವು ಸಮಂಜಸವಾಗಿ ಕಾಣುತ್ತದೆ. ಏಕೆಂದರೆ : ಸೀತೆಯ ಜೀವಕ್ಕೆ ಎರಡು ತಿಂಗಳು ಮಾತ್ರವೇ ಅವಧಿಯಿದೆ. ಈಗಾಗಲೇ ದಿನಗಳು ಕಳೆದುಹೋಗಿವೆ. ಸ್ವಲ್ಪ ದಿವಸಗಳು ಮಾತ್ರವೇ ಅವಳ ಆಯುಷ್ಯವು ಉಳಿದಿದೆ–ಎಂಬ ಭಾವನೆಯಿಂದ ಹೀಗೆ ಹೇಳಿದ್ದಾನೆ. ವಯಃ = ಜೀವಿತದ ಕಾಲ.

ಮಾತು–ಕುಡಿದನಂತರ ಹೊಟ್ಟೆಗೆ ಸೇರಿದ ವಿಷವು ಅಂಗಾಂಗಗಳೆಲ್ಲವನ್ನೂ ಸುಟ್ಟುಹಾಕುವಂತೆ–ನನ್ನನ್ನು ದಹಿಸುತ್ತಿದೆ.

**ತದ್ವಿಯೋಗೇನ್ಧನವತಾ ತಚ್ಚಿನ್ತಾವಿಪುಲಾರ್ಚಿಷಾ ।**
**ರಾತ್ರಿಂದಿವಂ ಶರೀರಂ ಮೇ ದಹ್ಯತೇ ಮದನಾಗ್ನಿನಾ ॥೮॥**

ಮದನಾಗ್ನಿಗೆ ನನ್ನ ಪ್ರೇಯಸಿಯ ವಿಯೋಗವೆಂಬುದೇ ಕಟ್ಟಿಗೆ ಯಾಗಿದೆ. ಅವಳ ಸಲುವಾಗಿ ಮಾಡುತ್ತಿರುವ ಚಿಂತೆಯೇ ವಿಪುಲವಾದ ಜ್ವಾಲೆಯಾಗಿದೆ. ಅಂತಹ ವಿರಹಾಗ್ನಿಯು ನನ್ನ ಶರೀರವನ್ನು ಹಗಲು-ರಾತ್ರಿ ಸುಟ್ಟುಹಾಕುತ್ತಿದೆ.

**ಅವಗಾಹ್ಯಾರ್ಣವಂ ಸ್ವಪ್ಸ್ಯೇ ಸೌಮಿತ್ರೇ ಭವತಾ ವಿನಾ ।**
**ಕಥಂಚಿತ್ಪ್ರಜ್ವಲನ್ಕಾಮಃ ನ ಮಾಂ ಸುಪ್ತಂ ಜಲೇ ದಹೇತ್ ॥೯॥**

ಲಕ್ಷ್ಮಣ! ನೀನು ಇಲ್ಲಿಯೇ ಇರು. ನಾನು ನಿನ್ನನ್ನು ಇಲ್ಲಿಯೇ ಬಿಟ್ಟು ಸಮುದ್ರದಲ್ಲಿ ಮುಳುಗಿ ಅಲ್ಲಿಯಾದರೂ ಮಲಗುತ್ತೇನೆ. ಹೀಗೆ ಸಮುದ್ರದ ನೀರಿನಲ್ಲಿ ಮಲಗಿದ ಮೇಲಾದರೂ ಕಾಮಾಗ್ನಿಯು ನನ್ನನ್ನು ಸುಡದಿರ ಬಹುದು.

**ಬಹ್ವೇತತ್ಕಾಮಯಾನಸ್ಯ ಶಕ್ಯಮೇತೇನ ಜೀವಿತುಮ್ ।**
**ಯದಹಂ ಸಾ ಚ ವಾಮೋರೂರೇಕಾಂ ಧರಣಿಮಾಶ್ರಿತೌ ॥೧೦॥**

ನಾನು ಮತ್ತು ಸುಂದರಾಂಗಿಯಾದ ಸೀತೆಯು ಒಂದೇ ಭೂಮಿಯನ್ನು ಆಶ್ರಯಿಸಿದ್ದೇವೆ. ಅವಳೂ ಭೂಮಿಯ ಮೇಲಿದ್ದಾಳೆ. ನಾನೂ ಭೂಮಿಯ ಮೇಲಿದ್ದೇನೆ. ಪ್ರಿಯತಮೆಯನ್ನು ಸೇರಲು ಇಚ್ಛಿಸಿರುವ ನನಗೆ ಇದೇ ಒಂದು ದೊಡ್ಡ ವರವಾಗಿದೆ. ಇದರಿಂದಲೇ ನಾನು ಜೀವಿಸಿರಲು ಸಾಧ್ಯವಾಗಿದೆ.

**ಕೇದಾರಸ್ಯೇವ ಕೇದಾರಃ ಸೋದಕಸ್ಯ ನಿರೂದಕಃ ।**
**ಉಪಸ್ನೇಹೇನ ಜೀವಾಮಿ ಜೀವನ್ತೀಂ ಯಚ್ಛೃಣೋಮಿ ತಾಮ್ ॥**

ನೀರಿರುವ ಗದ್ದೆಯ ಸಂಪರ್ಕದಿಂದ ನೀರಿಲ್ಲದಿರುವ ಗದ್ದೆಯೂ ಒಣಗಿ

ಹೋಗದಂತೆ–ನನ್ನ ಪ್ರೇಯಸಿಯು ಜೀವಂತಳಾಗಿರುವಳೆಂಬ ವಾರ್ತೆಯನ್ನು ಕೇಳುತ್ತಿರುವುದರಿಂದಲೇ ನಾನಿನ್ನೂ ಜೀವಿಸಿದ್ದೇನೆ.*

**ಕದಾ ನು ಖಲು ಸುಶ್ರೋಣೀಂ ಶತಪತ್ರಾಯತೇಕ್ಷಣಾಮ್ ।**
**ವಿಜಿತ್ಯ ಶತ್ರೂನ್ದ್ರಕ್ಷ್ಯಾಮಿ ಸೀತಾಂ ಸ್ಫೀತಾಮಿವ ಶ್ರಿಯಮ್ ॥**

ಶತ್ರುಗಳನ್ನು ಜಯಿಸಿ ಸಮೃದ್ಧಶಾಲಿನಿಯಾಗಿರುವ, ರಾಜಲಕ್ಷ್ಮಿಗೆ ಸಮಾನಳಾಗಿರುವ, ಕಮಲಲೋಚನೆಯಾದ, ಸುಮಧ್ಯಮೆಯಾದ ನನ್ನ ಸೀತೆಯನ್ನು ನಾನು ಯಾವಾಗ ನೋಡುವೆನು?

**ಕದಾ ಚಾರುಸುದನ್ತೋಷ್ಠಂ ತಸ್ಯಾಃ ಪದ್ಮಮಿವಾನನಮ್ ।**
**ಈಷದುನ್ನಾಮ್ಯ ಪಾಸ್ಯಾಮಿ ರಸಾಯನಮಿವಾತುರಃ ॥೧೩॥**

ಸುಂದರವಾದ ಹಲ್ಲುಗಳಿಂದಲೂ ತುಟಿಗಳಿಂದಲೂ ಕೂಡಿರುವ ಆಕೆಯ ಕಮಲದಂತಿರುವ ಮುಖವನ್ನು ಸ್ವಲ್ಪ ಮೇಲೆತ್ತಿ– ರೋಗಿಯು ರಸಾಯನವನ್ನು ಪಾನಮಾಡುವಂತೆ–ಅವಳ ಅಧರಾಮೃತವನ್ನು ಯಾವಾಗ ನಾನು ಪಾನಮಾಡುವೆನು?

**ತಸ್ಯಾಸ್ತು ಸಂಹತೌ ಪೀನೌ ಸ್ತನೌ ತಾಲಫಲೋಪಮೌ ।**
**ಕದಾ ನು ಖಲು ಸೋತ್ಕಮ್ಪೌ ಶ್ಲಿಷ್ಯನ್ತ್ಯಾ ಮಾಂ ಭಜಿಷ್ಯತಃ ॥**

ನನ್ನನ್ನು ಆಲಿಂಗಿಸಿಕೊಳ್ಳುವ ಸೀತೆಯ ಪರಸ್ಪರವಾಗಿ ಸೇರಿಕೊಂಡಂತಿರುವ, ತಾಲಫಲಗಳಂತೆ ದುಂಡಾಗಿಯೂ ಸ್ಥೂಲವಾಗಿಯೂ ಇರುವ ಸ್ತನಗಳು ಕಂಪನದೊಡನೆ ನನ್ನನ್ನು ಯಾವಾಗ ಸ್ಪರ್ಶಿಸುತ್ತವೆ?

---

* ಸೋದಕಸ್ ಕೇದಾರಸ್ಯ ಉಪಸ್ನೇಹೇನ ನಿರೂದಕಃ ಕೇದಾರ ಇವ–ನೀರು ತುಂಬಿದ ಗದ್ದೆಯ ಸಂಪರ್ಕದಿಂದ ನೀರಿಲ್ಲದ ಗದ್ದೆಯು ಒಣಗಿಹೋಗದಂತೆ–ಎಂದು ಇದರ ನೇರವಾದ ಅರ್ಥ. ನೀರಿರುವ ಗದ್ದೆಯೊಡನೆ ನೀರಿಲ್ಲದ ಗದ್ದೆಯ ಸಂಪರ್ಕ ವಾದರೆ ಇದರ ನೀರನ್ನು ಅದಕ್ಕೂ ಹಾಯಿಸಬೇಕು. ಒಂದು ಗದ್ದೆಯಲ್ಲಿ ನೀರೇ ಇಲ್ಲದಿದ್ದರೆ ಕೇವಲ ಸಂಪರ್ಕವಿರುವುದರಿಂದ ಅದು ಒಣಗಿಹೋಗದೇ ಇರುವುದಿಲ್ಲ. ಆದುದರಿಂದ ವ್ಯಾಖ್ಯಾನಕಾರರು ಅಧ್ಯಾಹಾರಮಾಡಿಕೊಂಡು ಅರ್ಥಮಾಡಿರುತ್ತಾರೆ. ಸೋದಕಸ್ಯ ಕೇದಾರಸ್ಯೋಪಸ್ನೇಹೇನ ಸಂಬನ್ಧೇನ ನಿರೂದಕೋಽಪಿ ಕೇದಾರಃ ತತ್ಸ್ಥಂ ಧಾನ್ಯಂ ಜೀವತಿ ನ ಶುಷ್ಯತಿ–ನೀರುತುಂಬಿರುವ ಗದ್ದೆಯ ಸಂಬಂಧದಿಂದ ನೀರಿನ

**ಸಾ ನೂನಮಸಿತಾಪಾಙ್ಗೀ ರಕ್ಷೋಮಧ್ಯಗತಾ ಸತೀ ।**
**ಮನ್ನಾಥಾ ನಾಥಹೀನೇವ ತ್ರಾತಾರಂ ನಾಧಿಗಚ್ಛತಿ ॥೧೫॥**

ಕಪ್ಪಾದ ಕಡೆಗಣ್ಣುಗಳಿಂದ ಕೂಡಿರುವ, ನನ್ನನ್ನೇ ನಾಥನೆಂದು ಭಾವಿಸಿರುವ, ರಾಕ್ಷಸರ ಮಧ್ಯದಲ್ಲಿರುವ ಸೀತಾದೇವಿಯು ಅನಾಥಳೋ ಎಂಬಂತೆ ಇಂದು ರಕ್ಷಕರೇ ಇಲ್ಲದವಳಾಗಿದ್ದಾಳೆ.

**ಕಥಂ ಜನಕರಾಜಸ್ಯ ದುಹಿತಾ ಸಾ ಮಮ ಪ್ರಿಯಾ ।**
**ರಾಕ್ಷಸೀಮಧ್ಯಗಾ ಶೇತೇ ಸ್ನುಷಾ ದಶರಥಸ್ಯ ಚ ॥೧೬॥**

ಜನಕರಾಜನ ಮಗಳಾಗಿರುವ, ನನ್ನ ಪ್ರೇಯಸಿಯಾಗಿರುವ, ದಶರಥರಾಜನ ಸೊಸೆಯಾಗಿರುವ ಆ ಸೀತೆಯಿಂದು ರಾಕ್ಷಸಿಯರ ಮಧ್ಯದಲ್ಲಿ ಹೇಗೆ ಮಲಗಿದ್ದಾಳೆ?

**ಕದಾ ವಿಕ್ಷೋಭ್ಯ ರಕ್ಷಾಂಸಿ ಸಾ ವಿಧೂಯೋತ್ಪತಿಷ್ಯತಿ ।**
**ವಿಧೂಯ ಜಲದಾನ್ನೀಲಾನ್ ಶಶಿರೇಖಾ ಶರತ್ಸ್ವಿವ ॥೧೭॥**

ದುರ್ಧರ್ಷರಾದ ರಾಕ್ಷಸರನ್ನು ನನ್ನ ಮೂಲಕವಾಗಿ ನಿರ್ಮೂಲನಗೊಳಿಸಿ–ಶರತ್ಕಾಲದಲ್ಲಿ ನೀಲಮೇಘಗಳನ್ನು ದೂರೀಕರಿಸಿ ಹೊರಬರುವ ಚಂದ್ರರೇಖೆಯಂತೆ–ನನ್ನ ಸೀತೆಯು ಯಾವಾಗ ಬಂಧನದಿಂದ ಹೊರಬರುತ್ತಾಳೆ?

**ಸ್ವಭಾವತನುಕಾ ನೂನಂ ಶೋಕೇನಾನಶನೇನ ಚ ।**
**ಭೂಯಸ್ತನುತರಾ ಸೀತಾ ದೇಶಕಾಲವಿಪರ್ಯಯಾತ್ ॥೧೮॥**

ಸ್ವಾಭಾವಿಕವಾಗಿಯೇ ಸೀತೆಯು ತೆಳುವಾದ ಶರೀರವುಳ್ಳವಳು. ಈಗ

---

ಸಂಬಂಧವಿಲ್ಲದಿದ್ದರೂ ಬತ್ತವು ಒಣಗಿಹೋಗದಂತೆ–ಎಂದು ಅರ್ಥಮಾಡಿರುತ್ತಾರೆ. ಮತ್ತೊಬ್ಬರು ನಿರೂದಕಃ ಕೇದಾರಃ ಎಂಬುದಕ್ಕೆ ವಪ್ರಂ ಎಂದು ಅರ್ಥಮಾಡಿರುತ್ತಾರೆ. ನೀರಿಲ್ಲದ ಗದ್ದೆಯ ಬದುವಿನ ಮೇಲೆ ನೀರಿರದಿದ್ದರೂ ಗದ್ದೆಯಲ್ಲಿರುವ ನೀರಿನ ಸಂಪರ್ಕದಿಂದ ಬದುವಿನಲ್ಲಿ ಬೆಳೆಯುವ ಹುಲ್ಲು ಹಚ್ಚಹಸಿರಾಗಿರುತ್ತದೆ. ಗದ್ದೆಯಲ್ಲಿ ಎಷ್ಟೇ ನೀರಿದ್ದರೂ ಕಾಲಾನುಗುಣವಾಗಿ ಭತ್ತವು ಒಣಗಿಹೋಗುತ್ತದೆ. ಹಾಗೆ ಒಣಗದಿದ್ದರೆ ಅದನ್ನು ಬಿಡಿಸಲು ಸಾಧ್ಯವಾಗುವುದೇ ಇಲ್ಲ. ಆದುದರಿಂದ ಕೇದಾರಃ ಎಂಬುದಕ್ಕೆ ಧಾನ್ಯ–ಎಂಬ ಅರ್ಥಕ್ಕಿಂತಲೂ ವಪ್ರ= ಬದು ಎಂಬುದೇ ಹೊಂದಿಕೊಳ್ಳುತ್ತದೆ.

ಲಾದರೋ ದೇಶ-ಕಾಲಗಳ ವೈಪರೀತ್ಯದಿಂದಾಗಿ ಶೋಕದಿಂದಲೂ ಉಪವಾಸದಿಂದಲೂ ಅತ್ಯಂತಕೃಶಳಾಗಿಬಿಟ್ಟಿರುವಳು.

**ಕದಾ ನು ರಾಕ್ಷಸೇನ್ದ್ರಸ್ಯ ನಿಧಾಯೋರಸಿ ಸಾಯಕಾನ್ ।**
**ಸೀತಾಂ ಪ್ರತ್ಯಾಹರಿಷ್ಯಾಮಿ ಶೋಕಮುತ್ಸೃಜ್ಯ ಮಾನಸಮ್ ॥**

ರಾಕ್ಷಸೇಂದ್ರನಾದ ರಾವಣನ ವಕ್ಷಃಸ್ಥಳದಲ್ಲಿ ಬಾಣಗಳನ್ನು ಪ್ರಯೋಗಿಸಿ ಅವನನ್ನು ಸಂಹರಿಸಿ ಮಾನಸಿಕವಾಗಿ ನನಗುಂಟಾಗಿರುವ ಶೋಕವನ್ನು ದೂರೀಕರಿಸಿ ಸೀತೆಯನ್ನು ಯಾವಾಗ ಕರೆತರುವೆನು?

**ಕದಾ ನು ಖಲು ಮಾಂ ಸಾಧ್ವೀ ಸೀತಾ ಸುರಸುತೋಪಮಾ ।**
**ಸೋತ್ಕಣ್ಠಾ ಕಣ್ಠಮಾಲಮ್ಬ್ಯ ಮೋಕ್ಷ್ಯತ್ಯಾನನ್ದಜಂ ಪಯಃ ॥೨೦॥**

ದೇವಕನ್ಯೆಗೆ ಅನುರೂಪಳಾಗಿರುವ ಸಾಧ್ವಿಯಾದ ನನ್ನ ಸೀತೆಯು ತವಕದಿಂದ ನನ್ನ ಕಂಠವನ್ನಾಲಿಂಗಿಸಿಕೊಂಡು ಆನಂದಾಶ್ರುವನ್ನು ಯಾವಾಗ ಸುರಿಸುವಳು?

**ಕದಾ ಶೋಕಮಿಮಂ ಘೋರಂ ಮೈಥಿಲೀವಿಪ್ರಯೋಗಜಮ್ ।**
**ಸಹಸಾ ವಿಪ್ರಮೋಕ್ಷ್ಯಾಮಿ ವಾಸಃ ಶುಕ್ಲೇತರಂ ಯಥಾ ॥೨೧॥**

ಮೈಥಿಲಿಯ ವಿಯೋಗದಿಂದ ಉಂಟಾಗಿರುವ ಘೋರವಾದ ಈ ಶೋಕವನ್ನು ಮಲಿನವಸ್ತ್ರವನ್ನು ಪರಿತ್ಯಜಿಸುವಂತೆ ಯಾವಾಗ ನಾನು ಪರಿತ್ಯಜಿಸುವೆನು?"

ಬುದ್ಧಿವಂತನಾದ ಶ್ರೀರಾಮನು ಹೀಗೆ ವಿಲಪಿಸುತ್ತಿದ್ದಂತೆಯೇ ಹಗಲು ಕಳೆದು ಮಂದರಶ್ಮಿಯಾದ ಸೂರ್ಯನು ಅಸ್ತಾಚಲವನ್ನು ಸೇರಿದನು.

ಕಮಲನೇತ್ರೆಯಾದ ಸೀತಾದೇವಿಯನ್ನು ಸ್ಮರಿಸುತ್ತಾ ಶ್ರೀರಾಮನು ಶೋಕಾಭಿಭೂತನಾಗಿದ್ದನು. ಆ ಸಮಯದಲ್ಲಿ ಲಕ್ಷ್ಮಣನಿಂದ ಸಮಾಧಾನ ಗೊಳಿಸಲ್ಪಟ್ಟ ಅವನು ಸಂಧ್ಯಾಕಾರ್ಯವನ್ನು ಮಾಡಿದನು.

೫ನೆಯ ಸರ್ಗವು ಮುಗಿಯಿತು.

## ರಾವಣನು ತನ್ನ ಕರ್ತವ್ಯವೇನೆಂಬುದನ್ನು ನಿರ್ಣಯಿಸಲು ಸಲಹೆನೀಡುವಂತೆ ತನ್ನ ಮಂತ್ರಿಗಳಿಗೆ ಆದೇಶವನ್ನಿತ್ತುದು

**ಲಙ್ಕಾಯಾಂ ತು ಕೃತಂ ಕರ್ಮ ಘೋರಂ ದೃಷ್ಟ್ವಾ ಭಯಾವಹಮ್ ।**
**ರಾಕ್ಷಸೇನ್ದ್ರೋ ಹನುಮತಾ ಶಕ್ರೇಣೇವ ಮಹಾತ್ಮನಾ ।**
**ಅಬ್ರವೀದ್ರಾಕ್ಷಸಾನ್ಸರ್ವಾನ್ ಹ್ರಿಯಾ ಕಿಂಚಿದವಾಙ್ಮುಖಃ ॥೧॥**

ಇತ್ತಲಾಗಿ ಇಂದ್ರತುಲ್ಯಪರಾಕ್ರಮನಾದ ಮಹಾತ್ಮನಾದ ಹನುಮಂತನು ಲಂಕೆಯಲ್ಲಿ ಅತ್ಯಂತಭಯವನ್ನುಂಟುಮಾಡುವ ಮತ್ತು ಘೋರವಾದ ಕಾರ್ಯಮಾಡಿದುದನ್ನು ಕಂಡು ರಾಕ್ಷಸೇಂದ್ರನಾದ ರಾವಣನು ನಾಚಿಕೆಯಿಂದ ತಲೆಯನ್ನು ಸ್ವಲ್ಪ ತಗ್ಗಿಸಿಕೊಂಡು ತನ್ನ ಅನುಯಾಯಿಗಳಾದ ರಾಕ್ಷಸರಿಗೆ ಹೇಳಿದನು :

"ನಿಶಾಚರರೇ! ಕೇವಲ ವಾನರನಾಗಿರುವ ಆ ಹನುಮಂತನು ಏಕಾಕಿಯಾಗಿ ಯಾರಿಂದಲೂ ಎದುರಿಸಲು ಅಸಾಧ್ಯವಾಗಿದ್ದ ಲಂಕಾಪಟ್ಟಣವನ್ನೂ ಪ್ರವೇಶಿಸಿ ಇದನ್ನು ಧ್ವಂಸಮಾಡಿರುವನು ಮತ್ತು ಸೀತೆಯನ್ನೂ ನೋಡಿಕೊಂಡು ಹೋಗಿರುವನು. ಇಷ್ಟು ಮಾತ್ರವಲ್ಲ. ಚೈತ್ಯಪ್ರಾಸಾದವನ್ನು ನೆಲಸಮಮಾಡಿದನು. ಹಲವಾರು ಮಂದಿ ರಾಕ್ಷಸಶ್ರೇಷ್ಠರು ಹತರಾದರು. ಲಂಕಾಪಟ್ಟಣವೇ ಕ್ಷೋಭೆಗೊಂಡಿತು. ಈ ಎಲ್ಲವನ್ನೂ ಏಕಾಕಿಯಾದ ಹನುಮಂತನೊಬ್ಬನೇ ಮಾಡಿದನು.

ರಾಕ್ಷಸಶ್ರೇಷ್ಠರೇ! ನಿಮಗೆ ಮಂಗಳವಾಗಲಿ. ಈ ವಿಷಯದಲ್ಲಿ ನೀವೆಲ್ಲರೂ ಸಮಾಲೋಚಿಸಿ ಸಲಹೆಯನ್ನು ನೀಡಿರಿ. ಈಗ ನಾನೇನು ಮಾಡಲಿ? ಈ ಸಮಯದಲ್ಲಿ ಯಾವ ಕಾರ್ಯವನ್ನು ಮಾಡುವುದು ಉಚಿತವಾಗಿದೆ ಮತ್ತು ಸಾಧುವಾಗಿದೆ? ಯಾವ ಕಾರ್ಯವನ್ನು ಮಾಡುವುದರಿಂದ ಒಳ್ಳೆಯ ಪರಿಣಾಮವುಂಟಾಗುತ್ತದೆ?

**ಮನ್ತ್ರಮೂಲಂ ಹಿ ವಿಜಯಂ ಪ್ರಾಹುರಾರ್ಯಾ ಮನಸ್ವಿನಃ ।**
**ತಸ್ಮಾದ್ವೈ ರೋಚಯೇ ಮನ್ತ್ರಂ ರಾಮಂ ಪ್ರತಿ ಮಹಾಬಲಾಃ ॥೫॥**

ಮಹಾಬಲರೇ! ಮಹಾತ್ಮರಾದವರು ವಿಜಯಕ್ಕೆ ಮಂತ್ರಿಗಳು ನೀಡುವ ಒಳ್ಳೆಯ ಸಲಹೆಗಳೇ ಮುಖ್ಯಕಾರಣವೆಂದು ಹೇಳುತ್ತಾರೆ. ಆದುದರಿಂದ ರಾಮನ ವಿಷಯದಲ್ಲಿ ನಿಮ್ಮ ಸಲಹೆಯನ್ನು ಪಡೆಯುವುದು ಉಚಿತವೆಂದು ಭಾವಿಸುತ್ತೇನೆ.

**ತ್ರಿವಿಧಾಃ ಪುರುಷಾ ಲೋಕೇ ಉತ್ತಮಾಧಮಮಧ್ಯಮಾಃ ।**
**ತೇಷಾಂ ತು ಸಮವೇತಾನಾಂ ಗುಣದೋಷೌ ವದಾಮ್ಯಹಮ್ ॥**

ಪ್ರಪಂಚದಲ್ಲಿ ಉತ್ತಮ-ಅಧಮ-ಮಧ್ಯಮರೆಂಬ ಮೂರು ಬಗೆಯ ಮನುಷ್ಯರಿದ್ದಾರೆ. ಆ ಮೂರೂ ವಿಧದ ಮನುಷ್ಯರ ಗುಣ-ದೋಷಗಳನ್ನು ನಾನೀಗ ನಿಮಗೆ ಹೇಳುತ್ತೇನೆ.

**ಮನ್ತ್ರಿಭಿರ್ಹಿತಸಂಯುಕ್ತೈಃ ಸಮರ್ಥೈರ್ಮನ್ತ್ರನಿರ್ಣಯೇ ।**
**ಮಿತ್ರೈರ್ವಾಪಿ ಸಮಾನಾರ್ಥೈರ್ಬಾನ್ಧವೈರ್ವಾ ಸಮಾಹಿತೈಃ ॥೭॥**

**ಸಹಿತೋ ಮನ್ತ್ರಯಿತ್ವಾ ಯಃ ಕರ್ಮಾರಮ್ಭಾನ್ಪ್ರವರ್ತಯೇತ್ ।**
**ದೈವೇ ಚ ಕುರುತೇ ಯತ್ನಂ ತಮಾಹುಃ ಪುರುಷೋತ್ತಮಮ್ ॥**

ಯಾವ ಮನುಷ್ಯನು ಮಂತ್ರನಿರ್ಣಯದಲ್ಲಿ ಸಮರ್ಥರಾದ ಮಿತ್ರರಿಂದಲೂ, ಸುಖ-ದುಃಖಗಳಲ್ಲಿ ಸಮಾನರಾಗಿರುವ ಬಂಧುಗಳಿಂದಲೂಮತ್ತು ಅವರಿಗಿಂತಲೂ ಅಧಿಕರಾದ ಆಪ್ತಜನರಿಂದಲೂ ಕೂಡಿ ಸಮಾಲೋಚಿಸಿ ಕಾರ್ಯವನ್ನು ಆರಂಭಿಸುವನೋ ಮತ್ತು ದೈವದ ಸಹಾಯವನ್ನೂ ಪಡೆಯಲು ಪ್ರಯತ್ನಿಸುವನೋ–ಅಂತಹವನನ್ನು ಪುರುಷಶ್ರೇಷ್ಠನೆಂದು ಕರೆಯುತ್ತಾರೆ.

**ಏಕೋಽರ್ಥಂ ವಿಮೃಶೇದೇಕೋ ಧರ್ಮೇ ಪ್ರಕುರುತೇ ಮನಃ ।**
**ಏಕಃ ಕಾರ್ಯಾಣಿ ಕುರುತೇ ತಮಾಹುರ್ಮಧ್ಯಮಂ ನರಮ್ ॥೯॥**

ಯಾವನು ತಾನೊಬ್ಬನೇ ತನ್ನ ಕರ್ತವ್ಯದ ವಿಷಯವಾಗಿ ಚಿಂತಿಸುವನೋ ದೈವದ ಸಹಾಯವನ್ನು ಪಡೆಯಲು ಒಬ್ಬನೇ ಪ್ರಯತ್ನಿಸುವನೋ ಮತ್ತು ಎಲ್ಲ ಕಾರ್ಯಗಳನ್ನೂ ಒಬ್ಬನೇ ಮಾಡುವನೋ–ಅಂತಹವನನ್ನು ಮಧ್ಯಮವರ್ಗದ ಮನುಷ್ಯನೆಂದು ಹೇಳುತ್ತಾರೆ.

**ಗುಣದೋಷಾವನಿಶ್ಚಿತ್ಯ ತ್ಯಕ್ತ್ವಾ ಧರ್ಮವ್ಯಪಾಶ್ರಯಮ್ ।**
**ಕರಿಷ್ಯಾಮೀತಿ ಯಃ ಕಾರ್ಯಮುಪೇಕ್ಷೇತ್ಸ ನರಾಧಮಃ ॥೧೦॥**

ತಾನು ಮಾಡಲಿರುವ ಕಾರ್ಯದ ಗುಣ-ದೋಷಗಳನ್ನು ವಿಚಾರ ಮಾಡದೇ, ದೈವದ ಸಹಾಯವನ್ನೂ ಅಪೇಕ್ಷಿಸದೇ–'ನಾನು ಈ ಕಾರ್ಯ ವನ್ನು ಮಾಡಿಯೇ ಮಾಡುತ್ತೇನೆ'–ಎಂಬ ಭಾವನೆಯಿಂದ ಕಾರ್ಯವನ್ನು ಪ್ರಾರಂಭಿಸಿ ಹಾಗೆ ಪ್ರಾರಂಭಿಸಿದ ಕಾರ್ಯವನ್ನು ಯಾವನು ಉಪೇಕ್ಷಿಸು ವನೋ ಅಂತಹವನನ್ನು ನರಾಧಮನೆಂದು ಹೇಳುತ್ತಾರೆ.

ಕಾರ್ಯವನ್ನು ಆರಂಭಿಸುವವರು ಉತ್ತಮ-ಅಧಮ-ಮಧ್ಯಮರೆಂದು ಹೇಗೆ ವಿಭಾಗಿಸಲ್ಪಡುವರೋ ಹಾಗೆಯೇ ಸಲಹೆ ನೀಡುವವರೂ ಉತ್ತಮ-ಅಧಮ-ಮಧ್ಯಮರೆಂಬ ಮೂರು ಪ್ರಕಾರರಾಗಿದ್ದಾರೆ.

**ಐಕಮತ್ಯಮುಪಾಗಮ್ಯ ಶಾಸ್ತ್ರದೃಷ್ಟೇನ ಚಕ್ಷುಷಾ ।**
**ಮನ್ತ್ರಿಣೋ ಯತ್ರ ನಿರತಾಸ್ತಮಾಹುರ್ಮನ್ತ್ರಮುತ್ತಮಮ್ ॥**

ಮಂತ್ರಿಗಳೆಲ್ಲರೂ ಐಕಮತ್ಯದಿಂದ ಶಾಸ್ತ್ರದ ದೃಷ್ಟಿಯನ್ನಿಟ್ಟುಕೊಂಡು ಯಾವ ಸಲಹೆಯನ್ನು ಕೊಡಲು ನಿರತರಾಗುವರೋ ಅದು ಉತ್ತಮ ಮಂತ್ರಾಲೋಚನೆಯೆನಿಸುತ್ತದೆ.

**ಬಹ್ವ್ಯೋಽಪಿ ಮತಯೋ ಭೂತ್ವಾ ಮನ್ತ್ರಿಣಾಮರ್ಥನಿರ್ಣಯೇ ।**
**ಪುನರ್ಯತ್ರೈಕತಾಂ ಪ್ರಾಪ್ತಾಃ ಸ ಮನ್ತ್ರೋ ಮಧ್ಯಮಃ ಸ್ಮೃತಃ ॥**

ಪ್ರಾರಂಭದಲ್ಲಿ ಅನೇಕಪ್ರಕಾರವಾದ ಮತಭೇದಗಳಿದ್ದರೂ ಕಡೆಯಲ್ಲಿ ಎಲ್ಲ ಮಂತ್ರಿಗಳೂ ಸೇರಿ ಕರ್ತವ್ಯವಿಷಯದ ನಿರ್ಣಯವನ್ನು ಐಕಮತ್ಯದಿಂದ ಮಾಡುವರೋ–ಅದು ಮಧ್ಯಮಮಂತ್ರಾಲೋಚನೆಯೆನಿಸುತ್ತದೆ.

**ಅನ್ಯೋನ್ಯಂ ಮತಿಮಾಸ್ಥಾಯ ಯತ್ರ ಸಂಪ್ರತಿಭಾಷ್ಯತೇ ।**
**ನ ಚೈಕಮತ್ಯೇ ಶ್ರೇಯೋಽಸ್ತಿ ಮನ್ತ್ರಃ ಸೋಽಧಮ ಉಚ್ಯತೇ ॥**

ಭಿನ್ನ-ಭಿನ್ನವಾದ ಬುದ್ಧಿಯನ್ನು ಆಶ್ರಯಿಸಿ ಸ್ಪರ್ಧಾಪೂರ್ವಕವಾದ ಮಾತುಗಳನ್ನಾಡುವರೋ, ಕಡೆಯಲ್ಲಿ ಐಕಮತ್ಯವೇರ್ಪಟ್ಟರೂ ಮಂಗಳಕರ ವಾದ ಅಭಿಪ್ರಾಯವಿರುವುದಿಲ್ಲವೋ–ಅಂತಹ ಸಲಹೆಯನ್ನು ಅಧಮ ಮಂತ್ರಾಲೋಚನೆಯೆಂದು ಹೇಳುತ್ತಾರೆ.

ರಾಕ್ಷಸೋತ್ತಮರೇ! ನೀವೆಲ್ಲರೂ ಅತ್ಯಂತಬುದ್ಧಿಶಾಲಿಗಳಾಗಿರುವಿರಿ.

ಆದುದರಿಂದ ಒಳ್ಳೆಯ ಸಲಹೆಯನ್ನು ನೀಡಿ ಈ ಸಮಯದಲ್ಲಿ ಮಾಡಬೇಕಾದ ಕಾರ್ಯವನ್ನು ನಿಶ್ಚಯಿಸಿರಿ. ನಿಮ್ಮ ಸಲಹೆಯಂತೆ ನಡೆಯುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ.

ರಾಮನು ಅನೇಕ ಸಾವಿರ ಧೀರರಾದ ವಾನರರಿಂದ ಸಮಾವೃತನಾಗಿ ನಮ್ಮ ಲಂಕಾಪಟ್ಟಣವನ್ನು ಆಕ್ರಮಿಸಲು ಇಲ್ಲಿಗೆ ಬರುತ್ತಾನೆ. ಸಮುಚಿತವಾದ ಬಲದಿಂದ ರಾಘವನು ಅನುಜನಿಂದಲೂ, ಸೇವಕರಿಂದಲೂ, ಸೈನ್ಯದಿಂದಲೂ ಕೂಡಿ ಈ ಸಮುದ್ರವನ್ನು ಸುಖವಾಗಿ ದಾಟುವನೆಂಬುದು ಸ್ಪಷ್ಟವಾಗಿ ಕಾಣುತ್ತಿದೆ. ಅವನು ಇಲ್ಲಿಗೆ ಬರಲು ಸಮುದ್ರವನ್ನಾದರೂ ಶೋಷಿಸಬಹುದು. ಅಥವಾ ತನ್ನ ಪರಾಕ್ರಮದಿಂದ ಬೇರೆ ಯಾವುದಾದರೂ ಉಪಾಯವನ್ನು ಆಶ್ರಯಿಸಬಹುದು. ಸಸೈನ್ಯನಾಗಿ ಇಲ್ಲಿಗೆ ಬರುವುದಂತೂ ನಿಶ್ಚಯ. ವಾನರರೊಡನೆ ವಿರೋಧವುಂಟಾಗಿರುವ ಈ ಪರಿಸ್ಥಿತಿಯಲ್ಲಿ ಪುರಕ್ಕೂ ಮತ್ತು ನಮ್ಮ ಸೈನ್ಯಕ್ಕೂ ಹಿತವುಂಟಾಗಲು ನಾವು ಏನು ಮಾಡಬೇಕೆಂಬುದನ್ನು ನೀವೆಲ್ಲರೂ ಸಮಾಲೋಚಿಸಿ ಹೇಳಿರಿ."

ಆನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೭ನೆಯ ಸರ್ಗ

## ರಾಕ್ಷಸಮಂತ್ರಿಗಳು ರಾವಣನ ಮತ್ತು ಇಂದ್ರಜಿತುವಿನ ಪರಾಕ್ರಮವನ್ನು ವರ್ಣಿಸುತ್ತಾ ರಾಮನನ್ನು ಜಯಿಸುವ ವಿಶ್ವಾಸವನ್ನು ರಾವಣನಲ್ಲಿ ಹುಟ್ಟಿಸಿದುದು

**ಇತ್ಯುಕ್ತಾ ರಾಕ್ಷಸೇನ್ದ್ರೇಣ ರಾಕ್ಷಸಾಸ್ತೇ ಮಹಾಬಲಾಃ ।**
**ಊಚುಃ ಪ್ರಾಞ್ಜಲಯಃ ಸರ್ವೇ ರಾವಣಂ ರಾಕ್ಷಸೇಶ್ವರಮ್ ।**
**ದ್ವಿಷತ್ಪಕ್ಷಮವಿಜ್ಞಾಯ ನೀತಿಬಾಹ್ಯಾಸ್ತ್ವಬುದ್ಧಯಃ ॥೧॥**

ರಾವಣನು ಹೀಗೆ ಹೇಳಲು ಶತ್ರುಪಕ್ಷದ ಬಲವೆಷ್ಟೆಂಬುದನ್ನು ತಿಳಿಯದಿದ್ದ, ನೀತಿಶಾಸ್ತ್ರದ ಜ್ಞಾನವೇ ಇಲ್ಲದ, ಮಂದಬುದ್ಧಿಯುಳ್ಳವರಾಗಿದ್ದ, ಮಹಾಬಲಿಷ್ಠರಾಗಿದ್ದ ರಾಕ್ಷಸರು ಕೈಮುಗಿದುಕೊಂಡು ರಾಕ್ಷಸೇಶ್ವರನಾದ ರಾವಣನಿಗೆ ಹೇಳಿದರು :

"ಮಹಾರಾಜ! ನಮ್ಮಲ್ಲಿ ಪರಿಘ, ಶಕ್ತಿ, ಋಷ್ಟಿ, ಶೂಲ, ಪಟ್ಟಿಶ, ಹಲ–ಇವೇ ಮುಂತಾದ ಆಯುಧಗಳನ್ನು ಹೊಂದಿರುವ ಮಹಾಸೈನ್ಯವೇ ಇದೆ. ಹೀಗಿದ್ದರೂ ನೀನು ವಿಷಾದಿಸುತ್ತಿರುವುದೇಕೆ? ನೀನು ಭೋಗವತೀ ಪಟ್ಟಣಕ್ಕೆ ಹೋಗಿ ನಾಗರಾಜರೊಡನೆ ಯುದ್ಧಮಾಡಿ ಅವರನ್ನೂ ಪರಾಜಯ ಗೊಳಿಸಿರುವೆ. ಬಹುಸಂಖ್ಯಾತರಾದ ಯಕ್ಷರಿಂದ ಸಮಾವೃತನಾದ, ಕೈಲಾಸ ಶಿಖರದಲ್ಲಿ ವಾಸಮಾಡುವ ಕುಬೇರನೊಡನೆ ನೀನು ಭಯಂಕರವಾದ ಯುದ್ಧವನ್ನು ಮಾಡಿ ಅವನನ್ನೂ ಪರಾಜಯಗೊಳಿಸಿ ನಿನಗೆ ಅಧೀನನನ್ನಾಗಿ ಮಾಡಿಕೊಂಡಿರುವೆ. ಮಹಾಬಲಿಷ್ಠನೂ ಲೋಕಪಾಲನೂ ಆದ ಕುಬೇರನು ಮಹೇಶ್ವರನೊಡನೆ ತನಗೆ ಸಖ್ಯವಿದ್ದುದರಿಂದ ನಿನ್ನೊಡನೆ ಸ್ಪರ್ಧಿಸುತ್ತಿದ್ದನು. ಅಂತಹವನನ್ನೂ ನೀನು ಕ್ರುದ್ಧನಾಗಿ ರಣರಂಗದಲ್ಲಿ ಪರಾಜಯಗೊಳಿಸಿದೆ. ಯಕ್ಷಸೈನ್ಯದಲ್ಲಿ ನೀನು ಕೆಲವರನ್ನು ಸೆರಹಿಡಿದೆ. ಕೆಲವರನ್ನು ನೆಲದ ಮೇಲೆ ಬೀಳಿಸಿದೆ. ಕೆಲವರನ್ನು ಕ್ಷೋಭೆಗೊಳಿಸಿದೆ. ಹೀಗೆ ಅವರೆಲ್ಲರನ್ನೂ ಪರಾಜಯಗೊಳಿಸಿ ಕೈಲಾಸಪರ್ವತದಿಂದ ಅವನ ಈ ಪುಷ್ಪಕವಿಮಾನವನ್ನೂ ತಂದಿರುವೆ.

ರಾಕ್ಷಸಶಿರೋಮಣಿಯೇ! ದಾನವರಾಜನಾದ ಮಯನು ನಿನಗೆ ಭಯಗೊಂಡು ನಿನ್ನೊಡನೆ ಸಖ್ಯವನ್ನು ಬೆಳೆಸುವ ಆಶಯದಿಂದ ತನ್ನ ಮಗಳನ್ನೇ ನಿನಗೆ ಮದುವೆಮಾಡಿಕೊಟ್ಟನು. ದಾನವೇಂದ್ರನಾದ, ಪರಾಕ್ರಮ ದಿಂದ ದೃಪ್ತನಾಗಿದ್ದ, ಎದುರಿಸಲು ಅಸಾಧ್ಯನಾಗಿದ್ದ ದಾನವರಾಜನಾದ ಮಧುವು ನಿನ್ನ ತಂಗಿಯಾದ ಕುಂಭೀನಸಿಗೆ ಸುಖದಾಯಕನಾದ ಪತಿಯು. ಅವನನ್ನೂ ನೀನು ಯುದ್ಧದಲ್ಲಿ ಪರಾಜಯಗೊಳಿಸಿ ನಿನ್ನ ವಶನನ್ನಾಗಿ ಮಾಡಿ ಕೊಂಡೆ. ನೀನು ರಸಾತಲಕ್ಕೂ ಮುತ್ತಿಗೆ ಹಾಕಿ ಅಲ್ಲಿದ್ದ ವಾಸುಕಿ, ತಕ್ಷಕ, ಶಂಖ, ಜಟೀ–ಇವರೇ ಮೊದಲಾದ ನಾಗರಾಜರನ್ನು ಯುದ್ಧದಲ್ಲಿ ಜಯಿಸಿ ನಿನ್ನ ಅಧೀನರನ್ನಾಗಿ ಮಾಡಿಕೊಂಡೆ. ದಾನವರಿಗೆ ಕ್ಷಯವೆಂಬುದೇ ಇರಲಿಲ್ಲ. ಅವರು ಮಹಾಬಲಿಷ್ಠರೂ ಶೂರರೂ ಆಗಿದ್ದರು. ಮೇಲಾಗಿ ತಪಸ್ಸುಗಳನ್ನು ಮಾಡಿ ವರಗಳನ್ನೂ ಪಡೆದುಕೊಂಡಿದ್ದರು. ಅಂತಹವರೊಡನೆ ನೀನು ನಿನ್ನ ಬಾಹುಬಲವನ್ನಾಶ್ರಯಿಸಿ ಒಂದು ವರ್ಷ ಪರ್ಯಂತವಾಗಿ ಯುದ್ಧಮಾಡಿ ಅವರನ್ನು ಪರಾಜಯಗೊಳಿಸಿ ನಿನಗೆ ಅಧೀನರನ್ನಾಗಿ ಮಾಡಿಕೊಂಡೆ. ಇಷ್ಟು

ಮಾತ್ರವಲ್ಲ ; ಅವರಿಂದ ನೀನು ಅನೇಕವಿಧವಾದ ಮಾಯೆಗಳನ್ನೂ ಪಡೆದು ಕೊಂಡೆ. ವರುಣನ ಮಕ್ಕಳು ಶೂರರೂ ಬಲಿಷ್ಠರೂ ಆಗಿದ್ದರು. ಚತುರಂಗ ಬಲವೂ ಅವರಲ್ಲಿದ್ದಿತು. ಅಂತಹವನನ್ನೂ ನೀನು ಯುದ್ಧದಲ್ಲಿ ಪರಾಜಯ ಗೊಳಿಸಿದೆ.

ರಾವಣೇಶ್ವರ! ಮೃತ್ಯುದಂಡವೇ ಮಹಾಮೊಸಳೆಯ ರೂಪದಲ್ಲಿ ರುವ, ಶಾಲ್ಮಲೀ ಎಂಬ ಯಮಲೋಕದ ನರಕವೇ ಶಾಲ್ಮಲೀ ಎಂಬ ವೃಕ್ಷ ರೂಪವಾಗಿ ಸಾಗರವನ್ನು ಅಲಂಕರಿಸಿರುವ, ಕಾಲಪಾಶವೇ ಅಲೆಗಳ ರೂಪ ದಲ್ಲಿರುವ, ಯಮಕಿಂಕರರೇ ಸರ್ಪಗಳ ರೂಪದಲ್ಲಿರುವ, ರುದ್ರನ ಕೋಪಾಗ್ನಿಯಿಂದ ಹುಟ್ಟಿದ ಮಹಾಜ್ವರದ ಉಪಸ್ಥಿತಿಯಿಂದ ಎದುರಿಸಲು ಅಸಾಧ್ಯವಾದ, ಯಮಲೋಕರೂಪವಾದ ಮಹಾಸಾಗರದಲ್ಲಿ ನೀನು ಮುಳುಗಿ ಯಮರಾಜನ ಸಾಗರರೂಪವಾದ ಸೈನ್ಯವನ್ನು ಧ್ವಂಸಮಾಡಿ ಮೃತ್ಯುವನ್ನು ಪ್ರತಿರೋಧಿಸಿ ಮಹಾವಿಜಯವನ್ನು ಸಾಧಿಸಿದೆ. ನೀನು ಮಾಡಿದ ಚಾತುರ್ಯದ ಯುದ್ಧವನ್ನು ನೋಡಿ ಸಮಸ್ತಲೋಕಗಳೂ ಸಂತೋಷಪಟ್ಟುವು.

ಹಿಂದೆ ಈ ಭೂಮಂಡಲವು ಮಹಾವೃಕ್ಷಗಳಿಂದ ಪೂರ್ಣವಾಗಿರು ವಂತೆ, ಇಂದ್ರತುಲ್ಯಪರಾಕ್ರಮರಾದ ಬಹುಸಂಖ್ಯಾತರಾದ ಕ್ಷತ್ರಿಯರಿಂದಲೂ ಪೂರ್ಣವಾಗಿದ್ದಿತು. ಅವರ ಗುಣ-ಉತ್ಸಾಹ ಮತ್ತು ಪರಾಕ್ರಮಗಳಿಗೆ ಹೋಲಿಸಿದರೆ ರಾಘವನು ಯುದ್ಧದಲ್ಲಿ ಖಂಡಿತವಾಗಿಯೂ ಅವರಿಗೆ ಸಮನಾಗುವುದಿಲ್ಲ. ಸಮರದಲ್ಲಿ ದುರ್ಜಯರಾಗಿದ್ದ ಅಂತಹ ರಾಜರನ್ನೇ ನೀನು ಬಲಪೂರ್ವಕವಾಗಿ ಸಂಹರಿಸಿದೆ. ಹೀಗಿರುವಾಗ ರಾಘವನೊಡನೆ ಯುದ್ಧಮಾಡಿ ಜಯಗಳಿಸುವುದರಲ್ಲಿ ಯಾವ ಸಂಶಯವಿದೆ?

ಮಹಾರಾಜ! ನೀನು ಹೀಗಾದರೂ ಮಾಡು. ನೀನಿಲ್ಲಿಯೇ ಇದ್ದು ಬಿಡು. ನಿನಗೆ ಶತ್ರುವಿನಾಶಕ್ಕಾಗಿ ಶ್ರಮಿಸುವ ಆವಶ್ಯಕತೆಯಾದರೂ ಎಲ್ಲಿದೆ? ಮಹಾಬಾಹುವಾದ ಈ ಒಬ್ಬ ಇಂದ್ರಜಿತುವೇ ಸಮಸ್ತವಾನರರನ್ನೂ ಸಂಹರಿಸುತ್ತಾನೆ. ಇವನು ಪರಮೋತ್ಕೃಷ್ಟವಾದ ಮಹೇಶ್ವರನಿಗೆ ಸಂಬಂಧಿಸಿದ ಯಜ್ಞವನ್ನು ಮಾಡಿ ಲೋಕದಲ್ಲಿ ಇತರರಿಂದ ಪಡೆಯಲು ಸುದುರ್ಲಭ ವಾದ ವರವನ್ನು ಪಡೆದುಕೊಂಡಿದ್ದಾನೆ.

ದೇವತೆಗಳ ಸೈನ್ಯವು ಸಮುದ್ರಕ್ಕೆ ಸಮಾನವಾದುದು. ಶಕ್ತಿ-ತೋಮರ ಗಳೇ ದೇವಸೇನಾಸಾಗರದಲ್ಲಿರುವ ಮೀನುಗಳು. ಗಾಯಗೊಂಡ ಯೋಧನ ಶರೀರದಿಂದ ಹೊರಬಂದಿರುವ ನರಗಳೇ ಸಮುದ್ರದ ಪಾಚಿಗಳು. ಗಜಗಳೇ ಅದರ ಆಮೆಗಳು. ಕುದುರೆಗಳೇ ಕಪ್ಪೆಗಳು. ರುದ್ರಾದಿತ್ಯಗಣಗಳೇ ಸೇನಾ ರೂಪದ ಆ ಮಹಾಸಮುದ್ರದ ದೊಡ್ಡ-ದೊಡ್ಡ ಮೊಸಳೆಗಳು. ಮರುದ್ಗಣ-ವಸುಗಣಗಳೇ ಆ ಸಮುದ್ರದ ಮಹಾಸರ್ಪಗಳು. ರಥ-ಗಜಾಶ್ವಗಳೇ ಜಲ ರಾಶಿಗಳು. ಪದಾತಿಗಳೇ ಸಮುದ್ರತೀರದಲ್ಲಿರುವ ಮರಳು. ಇಂತಹ ದೇವ ಸೇನಾಸಾಗರದಲ್ಲಿ ಮುಳುಗಿ ಮಹಾಪರಾಕ್ರಮಿಯಾದ ಈ ಇಂದ್ರಜಿತುವು ದೇವಪತಿಯಾದ ಇಂದ್ರನನ್ನು ಬಂಧಿಸಿ ಲಂಕೆಗೆ ಕರೆತಂದನು. ಅನಂತರ ಪಿತಾಮಹನ ಆದೇಶದಿಂದ ಶಂಬರ-ವೃತ್ರಸಂಹಾರಕನಾದ, ಸರ್ವದೇವ ನಮಸತನಾದ ಆ ಇಂದ್ರನನ್ನು ಇಂದ್ರಜಿತುವು ಮುಕ್ತಗೊಳಿಸಿದನು. ಅನಂತರವೇ ಅವನು ಪುನಃ ಸ್ವರ್ಗಕ್ಕೆ ಹೋದನು. ಆದುದರಿಂದ ಮಹಾರಾಜ! ಈ ಕಾರ್ಯಕ್ಕಾಗಿ ನೀನು ರಾಜಕುಮಾರನಾದ ಇಂದ್ರಜಿತುವನ್ನೇ ಕಳುಹಿಸು. ರಾಮನಿಂದ ಸಹಿತವಾದ ವಾನರಸೈನ್ಯವನ್ನು ಇವನೊಬ್ಬನೇ ಸಂಹರಿಸುತ್ತಾನೆ. ಸಾಧಾರಣಮನುಷ್ಯರಿಂದಲೂ ಮತ್ತು ವಾನರರಿಂದಲೂ ಒದಗಿಬಂದಿರುವ ಈ ಆಪತ್ತಿನ ವಿಷಯವಾಗಿ ಚಿಂತಿಸುವುದು ನಿನಗೆ ಯುಕ್ತವಾಗಿ ಕಾಣುವುದಿಲ್ಲ. ಇದನ್ನು ನೀನು ಮನಸ್ಸಿಗೆ ಹಚ್ಚಿಕೊಳ್ಳಲೇಬೇಡ. ನೀನು ಖಂಡಿತವಾಗಿಯೂ ರಾಮನನ್ನು ಸಂಹರಿಸುವೆ."

೭ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೮ನೆಯ ಸರ್ಗ

## ಪ್ರಹಸ್ತ-ದುರ್ಮುಖ-ವಜ್ರದಂಷ್ಟ್ರ-ನಿಕುಂಭ-ವಜ್ರಹನು ಇವರು ರಾವಣನ ಮುಂದೆ ಶತ್ರುಸೈನ್ಯವನ್ನು ಸಂಹರಿಸಲು ಉತ್ಸಾಹವನ್ನು ತೋರಿದುದು

**ತತೋ ನೀಲಾಮ್ಬುದನಿಭಃ ಪ್ರಹಸ್ತೋ ನಾಮ ರಾಕ್ಷಸಃ ।**
**ಅಬ್ರವೀತ್ಪ್ರಾಞ್ಜಲಿರ್ವಾಕ್ಯಂ ಶೂರಃ ಸೇನಾಪತಿಸ್ತದಾ ॥೧॥**

ಅನಂತರ ನೀಲಮೇಘದಂತೆ ಶ್ಯಾಮಲವರ್ಣದವನಾಗಿದ್ದ, ಶೂರನಾದ, ಸೇನಾಪತಿಯಾದ ಪ್ರಹಸ್ತನೆಂಬ ರಾಕ್ಷಸನು ಹೇಳಿದನು :

"ಮಹಾರಾಜ! ನಾವು ದೇವ-ದಾನವ-ಗಂಧರ್ವರನ್ನೂ, ಪಿಶಾಚ-ಪಕ್ಷಿ-ಸರ್ಪಗಳನ್ನೂ ಪರಾಜಯಗೊಳಿಸಲು ಸಮರ್ಥರಾಗಿದ್ದೇವೆ. ಹೀಗಿರುವಾಗ ಈ ವಾನರರು ನಮಗೆ ಎಷ್ಟು ಮಾತ್ರದವರು? ಈ ಹಿಂದೆ ನಾವೆಲ್ಲರೂ ಅಜಾಗರೂಕತೆಯಿಂದಿದ್ದೆವು. ನಮ್ಮ ಮನಸ್ಸಿನಲ್ಲಿ ಶತ್ರುವಿನ ಸಂಬಂಧವಾದ ಆತಂಕವೇ ಇರಲಿಲ್ಲ. ಆದುದರಿಂದ ನಾವೆಲ್ಲರೂ ನಿಶ್ಚಿಂತರಾಗಿಬಿಟ್ಟಿದ್ದೆವು. ಅಂತಹ ಸಂದರ್ಭದಲ್ಲಿ ಹನುಮಂತನು ನಮ್ಮನ್ನು ವಂಚಿಸಿದನು. ಹಾಗಿಲ್ಲದಿದ್ದರೆ ನಾನು ಜೀವಿಸಿರುವಾಗ ಆ ಕಪಿಯು ಜೀವಸಹಿತವಾಗಿ ಹೋಗುವ ಸಾಧ್ಯತೆಯೇ ಇರಲಿಲ್ಲ. ರಾವಣೇಶ್ವರ! ನೀನೀಗಲೇ ಆಜ್ಞಾಪಿಸು. ಶೈಲ-ವನ-ಕಾನನಗಳಿಂದ ಕೂಡಿರುವ ಸಾಗರ ಪರ್ಯಂತವಾದ ಈ ಭೂಮಿಯನ್ನು ವಾನರರಿಂದ ರಹಿತವನ್ನಾಗಿಯೇ ಮಾಡಿಬಿಡುತ್ತೇನೆ. ವಾನರರಿಂದ ಯಾವ ವಿಧವಾದ ತೊಂದರೆಯೂ ಆಗದಂತೆ ನಾನು ನಿನಗೆ ರಕ್ಷಣೆಯ ವ್ಯವಸ್ಥೆಯನ್ನು ಮಾಡುತ್ತೇನೆ. ಸೀತಾಪಹರಣವೆಂಬ ಯಾವುದೋ ಸಣ್ಣ ಅಪರಾಧಕ್ಕಾಗಿ ಯಾವ ಕಷ್ಟವೂ ನಿನಗೆ ಬರುವುದಿಲ್ಲ." ಪ್ರಹಸ್ತನು ಹೀಗೆ ಹೇಳಿದ ನಂತರ ಕ್ರುದ್ಧನಾದ ದುರ್ಮುಖನೆಂಬ ರಾಕ್ಷಸನು ಹೇಳಿದನು :

"ನಮ್ಮ ಮೇಲಿನ ಈ ದುರಾಕ್ರಮಣವು ಖಂಡಿತವಾಗಿಯೂ ಅಕ್ಷಮ್ಯವಾಗಿದೆ. ನಮಗೆ ಮಾಡಿರುವ ಈ ಅವಮಾನವು ಲಂಕಾಪಟ್ಟಣಕ್ಕೆ, ಅಂತಃಪುರಕ್ಕೆ ಮತ್ತು ಶ್ರೀಮಂತನಾದ ರಾವಣೇಶ್ವರನಿಗೆ ಮಾಡಿರುವ ಅವಮಾನವೇ ಆಗಿದೆ. ನಾನು ಇದೇ ಮುಹೂರ್ತದಲ್ಲಿಯೇ ಏಕಾಕಿಯಾಗಿ ಹೋಗಿ ಆ ವಾನರರು ಸಮುದ್ರವನ್ನೇ ಹೊಕ್ಕಿರಲಿ, ಆಕಾಶವನ್ನೇ ಹೊಕ್ಕಿರಲಿ, ಪಾತಾಳವನ್ನೇ ಹೊಕ್ಕಿರಲಿ ಎಲ್ಲಿದ್ದರೂ ಅವರನ್ನು ಸಂಹರಿಸಿ ಅವರು ಮಾಡಿರುವುದಕ್ಕೆ ತಕ್ಕ ಪ್ರತೀಕಾರಮಾಡುತ್ತೇನೆ."

ದುರ್ಮುಖನು ಹೀಗೆ ಹೇಳಿದನಂತರ ಮಹಾಬಲನಾದ ವಜ್ರದಂಷ್ಟ್ರನೆಂಬ ರಾಕ್ಷಸನು ಪರಮಕ್ರುದ್ಧನಾಗಿ ರಕ್ತದಿಂದಲೂ, ಮಾಂಸದಿಂದಲೂ ಬಳಿಯಲ್ಪಟ್ಟಿದ್ದ ಭಯಂಕರವಾದ ಪರಿಘಾಯುಧವನ್ನು ಹಿಡಿದು ಹೇಳಿದನು :

"ಮಹಾರಾಜ! ದುರ್ಜಯನಾದ ರಾಮನೂ, ಅವನ ತಮ್ಮ ಲಕ್ಷ್ಮಣನೂ, ಸುಗ್ರೀವನೂ ಇರುವಾಗ ಆ ಬಡಪಾಯಿಯಾದ, ದುರಾತ್ಮನಾದ ಹನುಮಂತನನ್ನು ಕಟ್ಟಿಕೊಂಡು ನಾನೇನು ಮಾಡಲಿ? ಈಗಲೇ ನಾನು ಏಕಾಕಿಯಾಗಿ ಹೋಗಿ ವಾನರಸೈನ್ಯವನ್ನು ಅಲ್ಲೋಲಕಲ್ಲೋಲಗೊಳಿಸಿ ಈ ಪರಿಘಾಯುಧದಿಂದ ರಾಮ-ಲಕ್ಷ್ಮಣ-ಸುಗ್ರೀವರನ್ನು ಸಂಹರಿಸಿ ಆಗಮಿಸುತ್ತೇನೆ. ರಾವಣೇಶ್ವರ! ನಿನಗೆ ಅಪೇಕ್ಷೆಯಿರುವುದಾದರೆ ನನ್ನ ಈ ಒಂದು ಮಾತನ್ನು ಕೇಳು.

**ಉಪಾಯಕುಶಲೋ ಹ್ಯೇವಂ ಜಯೇಚ್ಛತ್ರೂನತನ್ದ್ರಿತಃ ॥೧೨॥**

ಉಪಾಯಕುಶಲನಾದವನು ಆಲಸಿಕೆಯಿಲ್ಲದೇ ಪ್ರಯತ್ನಿಸಿದರೆ ಮಾತ್ರ ಶತ್ರುಗಳನ್ನು ಜಯಿಸಬಲ್ಲನು.

ನಾನು ಯೋಚಿಸಿರುವ ಉಪಾಯವು ಹೀಗಿದೆ : ಇಚ್ಛಾನುಸಾರವಾಗಿ ರೂಪಗಳನ್ನು ಧರಿಸುವ ಸಾಮರ್ಥ್ಯವುಳ್ಳ, ಭಯಂಕರರಾದ, ಭಯಂಕರ ವಾದ ದೃಷ್ಟಿಗಳನ್ನು ಹೊಂದಿರುವ ಸಾವಿರಾರು ರಾಕ್ಷಸರು ಒಂದು ನಿಶ್ಚಯಕ್ಕೆ ಬಂದು ಮನುಷ್ಯರೂಪವನ್ನು ಧರಿಸಿ ರಾಮನ ಬಳಿಗೆ ಹೋಗಬೇಕು. ಗಾಬರಿಪಟ್ಟುಕೊಳ್ಳದೆ ರಾಘವನಿಗೆ ಈ ಮಾತನ್ನು ಹೇಳಬೇಕು :

**ಪ್ರೇಷಿತಾ ಭರತೇನ ಸ್ಮ ತವ ಭ್ರಾತ್ರಾ ಯವೀಯಸಾ ।**

'ನಿನ್ನ ತಮ್ಮನಾದ ಭರತನೇ ನಮ್ಮನ್ನು ನಿನ್ನ ಬಳಿಗೆ ಕಳುಹಿಸಿರುತ್ತಾನೆ.' ಹೀಗೆ ಹೇಳಿದೊಡನೆಯೇ ರಾಮನು ವಾನರಸೈನ್ಯದೊಡನೆ ಬಹಳಬೇಗ ಇಲ್ಲಿಗೆ ಬರುತ್ತಾನೆ. ಒಡನೆಯೇ ನಾವೆಲ್ಲರೂ ಶೂಲ-ಶಕ್ತಿ-ಗದೆ-ಧನುಸ್ಸು-ಬಾಣ-ಖಡ್ಗ–ಇವೇ ಮುಂತಾದ ಆಯುಧಗಳನ್ನು ಹಿಡಿದು ಇಲ್ಲಿಂದ ಹೊರಟುಹೋಗೋಣ. ಆಕಾಶದಲ್ಲಿಯೇ ನಾವು ವ್ಯೂಹಗಳನ್ನು ರಚಿಸಿ ಕಲ್ಲು ಮತ್ತು ಶಸ್ತ್ರಗಳ ಮಹಾವೃಷ್ಟಿಯಿಂದ ಕಪಿಸೈನ್ಯವೆಲ್ಲವನ್ನೂ ಯಮ ಲೋಕಕ್ಕೆ ಕಳುಹಿಸಿಬಿಡೋಣ. ರಾಮ-ಲಕ್ಷ್ಮಣರೇನಾದರೂ ಈ ನಮ್ಮ ವಂಚನೆಗೆ ಸಿಕ್ಕಿಬಿದ್ದರೆ ಈ ನಮ್ಮ ತಂತ್ರಜಾಲದೊಳಗೆ ದೂಡಲ್ಪಟ್ಟ ಅವರು ಜೀವಿತವನ್ನು ತೊರೆಯುತ್ತಾರೆ." ವಜ್ರದಂಷ್ಟ್ರನು ಹೀಗೆ ತನ್ನ ಅಭಿಪ್ರಾಯವನ್ನು ರಾವಣರಾಜನಿಗೆ ವಿಜ್ಞಾಪಿಸಿಕೊಂಡನಂತರ ಕುಂಭಕರ್ಣನ ಮಗನಾದ ವೀರನಾದ ನಿಕುಂಭನೆಂಬ ರಾಕ್ಷಸನು ಪರಮಕ್ರುದ್ಧನಾಗಿ ಲೋಕವೆಲ್ಲವೂ ಭಯ

ದಿಂದ ಕೂಗಿಕೊಳ್ಳುವಂತೆ ಮಾಡುವ ಸಾಮರ್ಥ್ಯವುಳ್ಳ ರಾವಣನಿಗೂ ರಾಕ್ಷಸ ಶ್ರೇಷ್ಠರಿಗೂ ಹೇಳಿದನು :

"ಭೋ ರಾಕ್ಷಸಶ್ರೇಷ್ಠರೇ! ನಾನು ಹೇಳುವುದನ್ನು ಕೇಳಿರಿ : ನೀವೆಲ್ಲರೂ ರಾವಣಮಹಾರಾಜನೊಡನೆ ಇಲ್ಲಿಯೇ ಇರಿ. ನಾನೊಬ್ಬನೇ ಶತ್ರುಗಳ ಬಳಿಗೆ ಹೋಗಿ ಲಕ್ಷ್ಮಣಸಹಿತನಾದ ರಾಮನನ್ನೂ, ಹನುಮಂತ ಸಹಿತನಾದ ಸುಗ್ರೀವನನ್ನೂ, ಸಮಸ್ತವಾನರಸೈನ್ಯವನ್ನೂ ಸಂಹರಿಸಿ ಬರುತ್ತೇನೆ."

ಬಳಿಕ ಪರ್ವತಸದೃಶನಾಗಿದ್ದ ವಜ್ರಹನುವೆಂಬ ರಾಕ್ಷಸನು ಪರಮ ಕ್ರುದ್ಧನಾಗಿ ನಾಲಿಗೆಯಿಂದ ಕಟವಾಯಿಗಳನ್ನು ನೆಕ್ಕುತ್ತಾ ಈ ಮಾತನ್ನು ಹೇಳಿದನು :

"ರಾಕ್ಷಸೋತ್ತಮರೇ! ನೀವೆಲ್ಲರೂ ನಿಶ್ಚಿಂತರಾಗಿ ನಿಮ್ಮ ನಿಮ್ಮ ಕಾರ್ಯಗಳನ್ನು ನೋಡಿಕೊಳ್ಳಿರಿ. ನಾನೊಬ್ಬನೇ ಹೋಗಿ ಆ ಎಲ್ಲ ವಾನರ ಸೈನಿಕರನ್ನೂ ನುಂಗಿಹಾಕಿಬಿಡುತ್ತೇನೆ. ನೀವೆಲ್ಲರೂ ಯಾವ ವಿಧವಾದ ಆತಂಕವೂ ಇಲ್ಲದೇ ನಿಶ್ಚಿಂತರಾಗಿ ಸ್ವೇಚ್ಛೆಯಿಂದ ಆಟವಾಡಿರಿ. ಬೇಕು-ಬೇಕಾದಷ್ಟು ವಾರುಣೀಮದ್ಯವನ್ನು ಕುಡಿಯಿರಿ. ನಾನೊಬ್ಬನೇ ಹೋಗಿ ಲಕ್ಷ್ಮಣ ಸಹಿತನಾದ ಸುಗ್ರೀವನನ್ನೂ, ಅಂಗದ-ಹನುಮಂತರನ್ನೂ ಮತ್ತು ರಣಕುಂಜರನಾದ ಶ್ರೀರಾಮನನ್ನೂ ಸಂಹರಿಸುತ್ತೇನೆ."

೮ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೯ನೆಯ ಸರ್ಗ

## ವಿಭೀಷಣನು ಶ್ರೀರಾಮನ ಅಜೇಯತ್ವವನ್ನು ಹೇಳುತ್ತಾ ಸೀತೆಯನ್ನು ಶ್ರೀರಾಮನಿಗೆ ಒಪ್ಪಿಸುವಂತೆ ರಾವಣನಿಗೆ ಹೇಳಿದುದು

**ತತೋ ನಿಕುಮ್ಭೋ ರಭಸಃ ಸೂರ್ಯಶತ್ರುರ್ಮಹಾಬಲಃ ।**
**ಸುಪ್ತಘ್ನೋ ಯಜ್ಞಹಾ ರಕ್ಷೋ ಮಹಾಪಾರ್ಶ್ವೋ ಮಹೋದರಃ ॥೧॥**

**ಅಗ್ನಿಕೇತುಶ್ಚ ದುರ್ಧರ್ಷೋ ರಶ್ಮಿಕೇತುಶ್ಚ ವೀರ್ಯವಾನ್ ।**
**ಇನ್ದ್ರಜಿಚ್ಚ ಮಹಾತೇಜಾ ಬಲವಾನ್ರಾವಣಾತ್ಮಜಃ ॥೨॥**

**ಪ್ರಹಸ್ತೋಽಥ ವಿರೂಪಾಕ್ಷೋ ವಜ್ರದಂಷ್ಟ್ರೋ ಮಹಾಬಲಃ ।**
**ಧೂಮ್ರಾಕ್ಷಶ್ಚಾತಿಕಾಯಶ್ಚ ದುರ್ಮುಖಶ್ಚೈವ ರಾಕ್ಷಸಃ ॥೩॥**

**ಪರಿಘಾನ್ಪಟ್ಟಿಶಾನ್ಪ್ರಾಸಾನ್ ಶಕ್ತಿಶೂಲಪರಶ್ವಧಾನ್ ।**
**ಚಾಪಾನಿ ಚ ಸ ಬಾಣಾನಿ ಖಡ್ಗಾಂಶ್ಚ ವಿಪುಲಾನ್ ಶಿತಾನ್ ॥೪॥**

**ಪ್ರಗೃಹ್ಯ ಪರಮಕ್ರುದ್ಧಾಃ ಸಮುತ್ಪತ್ಯ ಚ ರಾಕ್ಷಸಾಃ ।**
**ಅಬ್ರುವನ್ರಾವಣಂ ಸರ್ವೇ ಪ್ರದೀಪ್ತಾ ಇವ ತೇಜಸಾ ॥೫॥**

ಹಲವಾರು ರಾಕ್ಷಸನಾಯಕರು ತಮ್ಮ-ತಮ್ಮ ಅಭಿಪ್ರಾಯಗಳನ್ನು ಹೇಳಿದ ನಂತರ ನಿಕುಂಭ, ರಭಸ, ಮಹಾಬಲಿಷ್ಠನಾದ ಸೂರ್ಯಶತ್ರು, ಸುಪ್ತಘ್ನ, ಯಜ್ಞಹಂತೃ, ಮಹಾಪಾರ್ಶ್ವ, ಮಹೋದರ, ಎದುರಿಸಲು ಅಸಾಧ್ಯನಾದ ಅಗ್ನಿಕೇತು, ರಶ್ಮಿಕೇತು, ಮಹಾತೇಜಸ್ವಿಯೂ ಮಹಾ ಬಲಿಷ್ಠನೂ ಆದ ರಾವಣನ ಮಗ ಇಂದ್ರಜಿತು, ಪ್ರಹಸ್ತ, ವಿರೂಪಾಕ್ಷ, ಮಹಾಬಲಿಷ್ಠನಾದ ವಜ್ರದಂಷ್ಟ್ರ, ಧೂಮ್ರಾಕ್ಷ, ಅತಿಕಾಯ, ನಿಶಾಚರನಾದ ದುರ್ಮುಖ–ಈ ಎಲ್ಲ ರಾಕ್ಷಸರೂ ಅತ್ಯಂತಕುಪಿತರಾಗಿ ಪರಿಘ-ಪಟ್ಟಿಶ- ಶೂಲ-ಪ್ರಾಸ-ಶಕ್ತಿ-ಪರಶ್ವಧಗಳನ್ನೂ, ಧನುರ್ಬಾಣಗಳನ್ನೂ, ಒಳ್ಳೆಯ ಅಲುಗುಳ್ಳ ದೊಡ್ಡ-ದೊಡ್ಡ ಕತ್ತಿಗಳನ್ನೂ ಹಿಡಿದು ಎದ್ದುನಿಂತು ರಾವಣನಿಗೆ ಹೇಳಿದರು. ಅವರೆಲ್ಲರೂ ತೇಜಸ್ಸಿನಿಂದ ಧಗ-ಧಗಿಸುತ್ತಿರುವರೋ ಎಂಬಂತೆ ಕಾಣುತ್ತಿದ್ದರು.

"ಈಗಲೇ ನಾವು ರಾಮನನ್ನೂ, ಲಕ್ಷ್ಮಣಸಹಿತನಾದ ಸುಗ್ರೀವನನ್ನೂ, ಲಂಕಾಪಟ್ಟಣವನ್ನು ವಂಚನೆಯಿಂದ ಸುಟ್ಟುಹಾಕಿದ ಹೇಡಿಯಾದ ಹನುಮಂತನನ್ನೂ ಸಂಹರಿಸೋಣ."

ಕೈಗಳಲ್ಲಿ ಆಯುಧಗಳನ್ನು ಹಿಡಿದು ಯುದ್ಧಕ್ಕೆ ಹೊರಡಲು ಸಿದ್ಧರಾಗಿ ನಿಂತಿದ್ದ ರಾಕ್ಷಸನಾಯಕರನ್ನು ತಡೆಯುತ್ತಾ ಪುನಃ ಅವರನ್ನು ಅವರವರ ಸ್ಥಾನಗಳಲ್ಲಿ ಕುಳ್ಳಿರಿಸಿ ವಿಭೀಷಣನು ಕೈಮುಗಿದುಕೊಂಡು ರಾವಣನಿಗೆ ಹೇಳಿದನು :

**ಅಪ್ಯುಪಾಯೈಸ್ತ್ರಿಭಿಸ್ತಾತ ಯೋಽರ್ಥಃ ಪ್ರಾಪ್ತುಂ ನ ಶಕ್ಯತೇ ।**
**ತಸ್ಯ ವಿಕ್ರಮಕಾಲಾಂಸ್ತಾನ್ಯುಕ್ತಾನಾಹುರ್ಮನೀಷಿಣಃ ॥೭॥**

“ಅಣ್ಣ! ನಾವು ಉದ್ದೇಶಿಸಿದ ಪ್ರಯೋಜನವು ಸಾಮ-ದಾನ-ಭೇದ ಈ ಮೂರು ಉಪಾಯಗಳಿಂದ ಪಡೆಯಲು ಸಾಧ್ಯವಾಗದಿದ್ದರೆ ಆಗ ಪರಾಕ್ರಮದ ಮೂಲಕವಾಗಿ ಅದನ್ನು ಪಡೆದುಕೊಳ್ಳಲು ಪ್ರಯತ್ನಿಸಬಹುದೆಂದು ನೀತಿಶಾಸ್ತ್ರದ ವಿದ್ವಾಂಸರು ಹೇಳುತ್ತಾರೆ.*

**ಪ್ರಮತ್ತೇಷ್ವಭಿಯುಕ್ತೇಷು ದೈವೇನ ಪ್ರಹತೇಷು ಚ ।**
**ವಿಕ್ರಮಾಸ್ತಾತ ಸಿದ್ಧ್ಯನ್ತಿ ಪರೀಕ್ಷ್ಯ ವಿಧಿನಾ ಕೃತಃ ॥೯॥**

‘ಯಾವ ಶತ್ರುವು ಅಜಾಗರೂಕನಾಗಿರುವನೋ, ಇತರ ಶತ್ರುಗಳಿಂದಲೂ ಆಕ್ರಮಿಸಲ್ಪಟ್ಟಿರುವನೋ, ದೈವಿಕವಾದ ಆಪತ್ತುಗಳಿಗೂ ಒಳಗಾಗಿರುವನೋ ಅಂತಹವನ ಮೇಲೆ ಚೆನ್ನಾಗಿ ಸಮಾಲೋಚಿಸಿ ನೀತಿಶಾಸ್ತ್ರಾನುಸಾರವಾಗಿ ತೋರಿಸುವ ಪರಾಕ್ರಮವು ಸಫಲವಾಗುತ್ತದೆ.’[1]

**ಅಪ್ರಮತ್ತಂ ಕಥಂ ತಂ ತು ವಿಜಿಗೀಷುಂ ಬಲೇ ಸ್ಥಿತಮ್ ।**
**ಜಿತರೋಷಂ ದುರಾಧರ್ಷಂ ಪ್ರಧರ್ಷಯಿತುಮಿಚ್ಛಥ ॥೧೦॥**

ಈಗ ನಮಗೆ ಶತ್ರುವಾಗಿರುವ ರಾಮನು ಅಜಾಗರೂಕನಲ್ಲ. ವಿಜಯಗಳಿಸುವ ಆಸೆಯಿಂದಲೇ ಇಲ್ಲಿಗೆ ಬರುತ್ತಿದ್ದಾನೆ ಮತ್ತು ಅವನಲ್ಲಿ ಸೈನ್ಯವೂ ಇದೆ. ಅವನು ಕ್ರೋಧವನ್ನು ಸರ್ವಥಾ ಜಯಿಸಿರತಕ್ಕವನು. ಆದುದರಿಂದಲೇ ಅವನು ದುರ್ಜಯನು. ಅಂತಹ ಅಜೇಯನಾದ ವೀರನನ್ನು ನೀವು ಪರಾಜಯಗೊಳಿಸಲು ಅಪೇಕ್ಷಿಸಿರುವಿರಿ.

---

* ಸಾಮ ದಾನ-ಭೋದೋಪಾಯಗಳನ್ನು ಮೊದಲು ಮಾಡಬೇಕೆಂಬುದರ ವಿಷಯದಲ್ಲಿ ಕಾಮಂದಕನು ಹೀಗೆ ಹೇಳಿದ್ದಾರೆ : **ಸಾಮಾದೀನಾಮುಪಾಯಾನಾಂ ತ್ರಯಾಣಾಂ ವಿಫಲೇ ನಯೇ । ವಿನಯೇನ್ನಯಸಂಪನ್ನೋ ದಣ್ಡಂ ದಣ್ಡ್ಯೇಷು ದಣ್ಡಭೃತ್ ॥** ಸಾಮ-ದಾನ-ಭೇದ ಈ ಮೂರು ಉಪಾಯಗಳೂ ವಿಫಲವಾದರೆ ನೀತಿಸಂಪನ್ನನಾದ ರಾಜನು ದಂಡಿಸಬೇಕಾದವರಲ್ಲಿ ನಾಲ್ಕನೆಯದಾದ ದಂಡೋಪಾಯವನ್ನೇ ಪ್ರಯೋಗಿಸಬೇಕು.

1 ಯಾರೊಡನೆ ಸಾಮ-ದಾನ-ಭೇದೋಪಾಯಗಳು ಸಲ್ಲವೆಂಬುದಕ್ಕೆ ಕಾಮಂದಕನ ನೀತಿವಾಕ್ಯವು ಹೀಗಿದೆ : **ಬಾಲೋ ವೃದ್ಧೋ ದೀರ್ಘರೋಗೀ ತಥಾ ಜ್ಞಾತಿಬಹಿಷ್ಕೃತಃ। ಭೀರುಕೋ ಭೀರುಕಜನೋ ಲುಬ್ಧೋ ಲುಬ್ಧಜನಸ್ತಥಾ ॥ ವಿರಕ್ತಪ್ರಕೃತಿಶ್ಚೈವ ವಿಷಯೇಷ್ವತಿಸಕ್ತಿಮಾನ್ । ಅನೇನ ಚಿತ್ತಮನ್ತ್ರಶ್ಚ ದೇವಬ್ರಾಹ್ಮಣ**

ನದೀ-ನದಗಳಿಗೆ ಪತಿಯಾದ ಘೋರವಾದ ಸಮುದ್ರವನ್ನೂ ಹನುಮಂತನು ದಾಟಿಕೊಂಡು ಬರುವನೆಂದು ಲೋಕದಲ್ಲಿ ಯಾವನಿಗೆ ತಿಳಿದಿದ್ದಿತು? ಯಾವನು ಇದನ್ನು ಊಹಿಸಿಯಾದರೂ ಇದ್ದನು? ನಿಶಾಚರರೇ! ಶತ್ರುವಿನ ಬಳಿಯಲ್ಲಿ ಅಪಾರವಾದ ಸೈನ್ಯವಿದೆ. ಆ ಸೈನಿಕರಲ್ಲಿ ಅಪಾರವಾದ ಬಲವೂ ಪರಾಕ್ರಮವೂ ಇದೆ. ಇತರರ ಶಕ್ತಿ-ಪರಾಕ್ರಮಗಳನ್ನು ಯಾವುದೇ ಕಾರಣದಿಂದಲೂ ಅವಹೇಳನಮಾಡುವುದು ಸರಿಯಲ್ಲ. ಎರಡನೆಯದಾಗಿ ಜನಸ್ಥಾನದಿಂದ ಯಶೋವಂತನಾದ ಯಾವನ ಭಾರ್ಯೆಯನ್ನು ರಾವಣನು ಅಪಹರಿಸಿತಂದನೋ ಆ ರಾಮಚಂದ್ರನು ರಾವಣನಿಗೆ ಹಿಂದೆ ಯಾವ ಅಪರಾಧವನ್ನು ಮಾಡಿದ್ದನು? ನಮ್ಮ ದಾಯಾದನಾದ ಖರನನ್ನು ರಾಮನು ಸಂಹರಿಸಿದನೆಂದು ಆಪಾದಿಸುವುದಾದರೆ ಅದೂ ಸರಿಯಲ್ಲ. ಏಕೆಂದರೆ : ಖರನು ಅತ್ಯಾಚಾರಿಯಾಗಿದ್ದನು. ಶ್ರೀರಾಮನನ್ನು ಸಂಹರಿಸಲೆಂದೇ ಖರನು ಅವನನ್ನು ಆಕ್ರಮಿಸಿದನು. ಯುದ್ಧರಂಗದಲ್ಲಿ ಶ್ರೀರಾಮನು ಖರನನ್ನು ಸಂಹರಿಸಿದನು. **ಅವಶ್ಯಂ ಪ್ರಾಣಿನಾಂ ಪ್ರಾಣಾ ರಕ್ಷಿತವ್ಯಾ ಯಥಾಬಲಮ್ ॥೧೪॥** ಪ್ರತಿಯೊಂದು ಪ್ರಾಣಿಯೂ ತನ್ನ ಬಲಕ್ಕೆ ಅನುಸಾರವಾಗಿ ತನ್ನ ಪ್ರಾಣವನ್ನು ರಕ್ಷಿಸಿಕೊಳ್ಳಬೇಕು.

---

**ನಿನ್ದಕಃ । ದೈವೋಪಹತಕಶ್ಚೈವ ದೈವಚಿಹ್ನಕ ಏವ ಚ ॥ ದುರ್ಭಿಕ್ಷ ವ್ಯಸನೋಪೇತೋ ಬಲವ್ಯಸನಸಂಯುತಃ । ಅದೇಶಸ್ಥೋ ಬಹುರಿಪುರ್ಯುಕ್ತೋ ಕಾಲೇನ ಯಶ್ಚ ಸಃ । ಸತ್ಯಧರ್ಮ ವ್ಯಪೇತಶ್ಚ ವಿಂಶತಿಃ ಪುರುಷಾ ಅಮೀ ॥ ಏತೈಃ ಸನ್ಧಿಂ ನ ಕುರ್ವೀತ ನಿಗೃಹ್ಣೀಯಾತ್ತು ಕೇವಲಮ್ ॥** ಬಾಲಕ, ವೃದ್ಧ, ಬಹಳ ಕಾಲದಿಂದ ರೋಗದಲ್ಲಿ ನರಳುತ್ತಿರುವವನು, ಜ್ಞಾತಿಗಳಿಂದ ಬಹಿಷ್ಕೃತನಾದವನು, ಹೇಡಿ, ಹೇಡಿಜನರೊಡನೆ ಇರುವವನು, ಲುಬ್ಧ, ಜಿಪುಣರ ಜೊತೆಯಲ್ಲಿರುವವನು, ವಿರಕ್ತಸ್ವಭಾವದವನು, ಹೆಚ್ಚಿನ ವಿಷಯಾಸಕ್ತಿಯುಳ್ಳವನು, ನಾನಾವಿಧ ಚಿಂತಕನು ಅಥವಾ ಬಹುಜನರ ಸಲಹೆಯನ್ನು ಕೇಳುವವನು, ದೇವ-ಬ್ರಾಹ್ಮಣರನ್ನು ನಿಂದಿಸುವವನು, ದೈವಾನುಕೂಲ್ಯವಿಲ್ಲದವನು, ಸದಾ ವಿಧಿಯನ್ನೇ ಕುರಿತು ಚಿಂತಿಸುವವನು, ದುರ್ಭಿಕ್ಷದ ವ್ಯಸನದಲ್ಲಿರುವವನು, ಸೈನ್ಯದ ವ್ಯಸನದಲ್ಲಿರುವವನು, ಸ್ವದೇಶದಲ್ಲಿ ಯಾವಾಗಲೂ ಇಲ್ಲದವನು, ಬಹುಶತ್ರುಗಳುಳ್ಳವನು, ಕಾಲವಶನಾಗಿರುವವನು, ಸತ್ಯ-ಧರ್ಮಗಳಿಂದ ವಿಮುಖನಾಗಿರುವವನು–ಈ ಇಪ್ಪತ್ತು ಪುರುಷರೊಡನೆ ಸಂಧಿಯನ್ನು ಯಾವುದೇ ಕಾರಣದಿಂದಲೂ ಮಾಡಿಕೊಳ್ಳಬಾರದು. ಅಂತಹವರನ್ನು ಎದುರಿಸಿ ವಶಪಡಿಸಿಕೊಳ್ಳಬೇಕು.

**ಅಯಶಸ್ಯಮನಾಯುಷ್ಯಂ ಪರದಾರಾಭಿಮರ್ಷನಮ್ ।**
**ಅರ್ಥಕ್ಷಯಕರಂ ಘೋರಂ ಪಾಪಸ್ಯ ಚ ಪುನರ್ಭವಮ್ ॥೧೫॥**

ಪರಸ್ತ್ರೀಯರನ್ನು ಸ್ಪರ್ಶಿಸುವುದು ಕೂಡ ಅಯಶಸ್ಕರ. ಆಯುಷ್ಯ ವಿನಾಶಕ. ಧನಹಾನಿಕರ. ಅತ್ಯಂತ ಭಯಂಕರ ಮತ್ತು ಪಾಪಹೇತು.

**ಏತನ್ನಿಮಿತ್ತಂ ವೈದೇಹೀ ಭಯಂ ನಃ ಸುಮಹದ್ಭವೇತ್ ।**
**ಆಹೃತಾ ಸಾ ಪರಿತ್ಯಾಜ್ಯಾ ಕಲಹಾರ್ಥೇನ ಕೃತೇನ ಕಿಮ್ ॥೧೬॥**

ಇದೇ ಒಂದು ಕಾರಣಕ್ಕಾಗಿ ವೈದೇಹಿಯನ್ನು ಅಪಹರಿಸಿ ತಂದಿರುವುದಾದರೆ ಅವಳನ್ನು ಬಹಳಬೇಗ ಹಿಂದಕ್ಕೆ ಕಳುಹಿಸುವುದು ಯುಕ್ತವಾಗಿದೆ. ಏಕೆಂದರೆ : ಇದರಿಂದ ನಮಗೆ ಅತಿಭಯಂಕರವಾದ ಪರಿಸ್ಥಿತಿಯು ಒದಗಿ ಬರಲಿದೆ. ಯಾವ ಕಾರ್ಯದ ಫಲವು ಕೇವಲ ಕಲಹವೇ ಆಗಿರುವುದೋ ಅಂತಹ ಕಾರ್ಯವನ್ನು ಮಾಡುವುದರಿಂದ ಯಾವ ಲಾಭವಿದೆ?

**ನ ನಃ ಕ್ಷಮಂ ವೀರ್ಯವತಾ ತೇನ ಧರ್ಮಾನುವರ್ತಿನಾ ।**
**ವೈರಂ ನಿರರ್ಥಕಂ ಕರ್ತುಂ ದೀಯತಾಮಸ್ಯ ಮೈಥಿಲೀ ॥೧೭॥**

ಶ್ರೀರಾಮನು ಧರ್ಮಾತ್ಮನೂ ಮಹಾಪರಾಕ್ರಮಿಯೂ ಆಗಿದ್ದಾನೆ. ಅವನೊಡನೆ ವೈರಕಟ್ಟಿಕೊಳ್ಳುವುದೂ ನಿರರ್ಥಕವಾದುದು. ಅದರಿಂದ ಯಾವ ಪ್ರಯೋಜನವೂ ಇಲ್ಲ. ಆದುದರಿಂದ ಸೀತೆಯನ್ನು ಶ್ರೀರಾಮನ ಬಳಿಗೆ ಕಳುಹಿಸಿಬಿಡು.

**ಯಾವನ್ನ ಸಗಜಾಂ ಸಾಶ್ವಾಂ ಬಹುರತ್ನಸಮಾಕುಲಾಮ್ ।**
**ಪುರೀಂ ದಾರಯತೇ ಬಾಣೈರ್ದೀಯತಾಮಸ್ಯ ಮೈಥಿಲೀ ॥೧೮॥**

ಆನೆಗಳಿಂದಲೂ, ಕುದುರೆಗಳಿಂದಲೂ ಕೂಡಿರುವ, ಅಪಾರರತ್ನಗಳಿಂದ ತುಂಬಿತುಳುಕುತ್ತಿರುವ ಲಂಕಾಪಟ್ಟಣವನ್ನು ಬಾಣಗಳಿಂದ ಶ್ರೀರಾಮನು ಧ್ವಂಸಮಾಡುವುದರೊಳಗಾಗಿ ಸೀತಾದೇವಿಯನ್ನು ಅವನ ಬಳಿಗೆ ಕಳುಹಿಸಿಬಿಡು.

**ಯಾವತ್ಸುಘೋರಾ ಮಹತೀ ದುರ್ಧರ್ಷಾ ಹರಿವಾಹಿನೀ ।**
**ನಾವಸ್ಕನ್ದತಿ ನೋ ಲಙ್ಕಾಂ ದೀಯತಾಮಸ್ಯ ಮೈಥಿಲೀ ॥೧೯॥**

ಅತ್ಯಂತ ಭಯಂಕರವಾದ, ಅಪಾರವಾದ, ಎದುರಿಸಲು ಅಸಾಧ್ಯವಾದ

ವಾನರಸೈನ್ಯವು ಲಂಕೆಯನ್ನು ವಿನಾಶಗೊಳಿಸುವುದರೊಳಗಾಗಿ ಸೀತಾದೇವಿಯನ್ನು ಶ್ರೀರಾಮನ ಬಳಿಗೆ ಕಳುಹಿಸಿಕೊಡು.

ನಾವಾಗಿಯೇ ಶ್ರೀರಾಮನ ಪ್ರೇಯಸಿಯಾದ ಸೀತಾದೇವಿಯನ್ನು ಶ್ರೀರಾಮನ ಬಳಿಗೆ ಕಳುಹಿಸದಿದ್ದರೆ ಲಂಕಾಪಟ್ಟಣದ ವಿನಾಶವಾಗುತ್ತದೆ. ಶೂರರಾದ ಎಲ್ಲ ರಾಕ್ಷಸರೂ ವಿನಾಶಹೊಂದುತ್ತಾರೆ. ನೀನು ನನ್ನ ಅಣ್ಣನಾಗಿರುವುದರಿಂದ ವಿನಯಪೂರ್ವಕವಾಗಿ ನಿನ್ನನ್ನು ಪ್ರಸನ್ನಗೊಳಿಸಲು ಅಪೇಕ್ಷಿಸುತ್ತೇನೆ. ನಾನು ಹೇಳಿದಂತೆ ಮಾಡು. ನಿನಗೆ ಹಿತವಾದುದನ್ನೂ ಸತ್ಯಸಂಗತಿಯನ್ನೂ ನಿನಗೆ ಹೇಳುತ್ತಿದ್ದೇನೆ. ಮೈಥಿಲಿಯನ್ನು ಶ್ರೀರಾಮನಿಗೆ ಒಪ್ಪಿಸಿಕೊಡು.

ಪುರಾ ಶರಾತ್ಸೂರ್ಯಮರೀಚಿಸನ್ನಿಭಾ-
ನ್ನವಾನ್ಸುಪುಙ್ಖಾನ್ಸುದೃಢಾನ್ನೃಪಾತ್ಮಜಃ ।
ಸೃಜತ್ಯಮೋಘಾನ್ವಿಶಿಖಾನ್ವಧಾಯ ತೇ
ಪ್ರದೀಯತಾಂ ದಾಶರಥಾಯ ಮೈಥಿಲೀ ॥೨೨॥

ರಾಜಕುಮಾರನಾದ ಶ್ರೀರಾಮನು ಶರತ್ಕಾಲದ ಸೂರ್ಯನ ಕಿರಣಗಳಿಗೆ ಸಮಾನವಾದ, ಉಜ್ಜ್ವಲವಾದ ಅಗ್ರಭಾಗಗಳಿಂದಲೂ, ರೆಕ್ಕೆಗಳಿಂದಲೂ ಕೂಡಿರುವ, ಸದೃಢವಾದ, ಅಮೋಘವಾದ ಬಾಣಗಳನ್ನು ನಿನ್ನ ವಧೆಗೆ ಪ್ರಯೋಗಿಸುವುದರೊಳಗಾಗಿ ಮೈಥಿಲಿಯನ್ನು ಶ್ರೀರಾಮನಿಗೆ ಕೊಟ್ಟುಬಿಡು.

ತ್ಯಜಸ್ವ ಕೋಪಂ ಸುಖಧರ್ಮನಾಶನಂ
ಭಜಸ್ವ ಧರ್ಮಂ ರತಿಕೀರ್ತಿವರ್ಧನಮ್ ।
ಪ್ರಸೀದ ಜೀವೇಮ ಸಪುತ್ರಬಾನ್ಧವಾಃ
ಪ್ರದೀಯತಾಂ ದಾಶರಥಾಯ ಮೈಥಿಲೀ ॥೨೩॥

ಅಣ್ಣ! ಜಾಗ್ರತೆಯಾಗಿ ನಿನ್ನ ಕೋಪವನ್ನು ಪರಿತ್ಯಜಿಸು. ಏಕೆಂದರೆ : ಕೋಪವೆಂಬುದು ಸುಖವನ್ನೂ ಧರ್ಮವನ್ನೂ ವಿನಾಶಗೊಳಿಸತಕ್ಕುದು. ಧರ್ಮವನ್ನೇ ಸೇವಿಸು. ಧರ್ಮಮಾರ್ಗದಲ್ಲಿರು. ಏಕೆಂದರೆ : ಧರ್ಮಾವಲಂಬನೆಯು ಸುಖವನ್ನೂ ಕೀರ್ತಿಯನ್ನೂ ಹೆಚ್ಚಿಸುತ್ತದೆ. ಪ್ರಸನ್ನನಾಗಣ್ಣ! ಪುತ್ರ-ಬಾಂಧವರೊಡನೆ ಇನ್ನೂ ಚಿರಕಾಲ ಬದುಕಿರೋಣ. ಮೈಥಿಲಿಯನ್ನು ಶ್ರೀರಾಮನ ಬಳಿಗೆ ಕಳುಹಿಸಿಬಿಡು.”

ರಾಕ್ಷಸೇಂದ್ರನಾದ ರಾವಣನು ವಿಭೀಷಣನ ಮಾತನ್ನು ಕೇಳಿ ಸಭಾಸದರೆಲ್ಲರನ್ನೂ ಕಳುಹಿಸಿಕೊಟ್ಟು ತಾನು ಅಂತಃಪುರವನ್ನು ಪ್ರವೇಶಿಸಿದನು.

೯ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೦ನೆಯ ಸರ್ಗ

## ವಿಭೀಷಣನು ರಾವಣನ ಅರಮನೆಗೆ ಹೋಗಿ ನಗರದಲ್ಲಾಗುತ್ತಿರುವ ಅಪಶಕುನಗಳನ್ನು ವರ್ಣಿಸಿ ಹೇಳುತ್ತಾ ಸೀತೆಯನ್ನು ಶ್ರೀರಾಮನ ಬಳಿಗೆ ಕಳುಹಿಸಲು ಪುನಃ ಸಲಹೆಯಿತ್ತುದು : ರಾವಣನ ತಿರಸ್ಕಾರ

**ತತಃ ಪ್ರತ್ಯುಷಸಿ ಪ್ರಾಪ್ತೇ ಪ್ರಾಪ್ತ ಧರ್ಮಾರ್ಥನಿಶ್ಚಯಃ ।**
**ರಾಕ್ಷಸಾಧಿಪತೇರ್ವೇಶ್ಮ ಭೀಮಕರ್ಮಾ ವಿಭೀಷಣಃ ॥೧॥**

ಮರುದಿನ ಬೆಳಗಾದೊಡನೆಯೇ ಧರ್ಮ ಮತ್ತು ಅರ್ಥದ ತತ್ತ್ವವನ್ನು ಚೆನ್ನಾಗಿ ತಿಳಿದಿದ್ದ ಭಯಂಕರಕರ್ಮನಾದ ವಿಭೀಷಣನು ರಾಕ್ಷಸಾಧಿಪತಿಯಾದ ರಾವಣನ ಅರಮನೆಗೆ ತೆರಳಿದನು.

ಅರಮನೆಯ ಸುತ್ತಲೂ ಅನೇಕಪ್ರಾಕಾರಗಳಿದ್ದು ಅವೆಲ್ಲವೂ ಪರ್ವತ ಸಮೂಹಗಳ ಶಿಖರಗಳಂತೆ ಕಾಣುತ್ತಿದ್ದುವು. ಅವೆಲ್ಲವೂ ಪರ್ವತಗಳ ಶಿಖರಗಳಂತೆ ಎತ್ತರವಾಗಿಯೂ ಇದ್ದುವು. ಆ ಅರಮನೆಯಲ್ಲಿ ಚೆನ್ನಾಗಿ ವಿಭಾಗಿಸಲ್ಪಟ್ಟಿದ್ದ ಕೊಠಡಿಗಳಿದ್ದುವು. ನೂರಾರು ಮಹಾಜನರು ಅನುದಿನವೂ ಅಲ್ಲಿಗೆ ಬಂದು ಹೋಗುತ್ತಿದ್ದರು. ಆ ಅರಮನೆಯ ಒಂದು ಭಾಗದಲ್ಲಿ ಮಹಾಬುದ್ಧಿಶಾಲಿಗಳಾದ, ರಾವಣನಲ್ಲಿ ವಿಶೇಷ ಅನುರಾಗವುಳ್ಳವರಾಗಿದ್ದ ಮಹಾಮಾತ್ಯರು ವಾಸಮಾಡುತ್ತಿದ್ದರು. ವಿಶ್ವಸನೀಯರಾದ, ಹಿತೈಷಿಗಳಾದ, ಕಾರ್ಯಸಾಧನೆಯಲ್ಲಿ ಕುಶಲರಾದ, ಬಹುಸಂಖ್ಯಾತರಾದ ರಾಕ್ಷಸರು ಎಲ್ಲ ಕಡೆಗಳಿಂದಲೂ ಆ ಅರಮನೆಯನ್ನು ರಕ್ಷಿಸುತ್ತಿದ್ದರು. ಅಲ್ಲಿ ಬೀಸುತ್ತಿದ್ದ ಗಾಳಿಯು ಮದಿಸಿದ ಆನೆಗಳ ನಿಃಶ್ವಾಸದೊಡನೆ ಮಿಲಿತವಾಗಿದ್ದು ಸುಂಟರಗಾಳಿಯೇನಾದರೂ ಅಲ್ಲಿ ಎದ್ದಿರುವುದೋ ಎಂಬಂತೆ ಕಾಣುತ್ತಿದ್ದಿತು. ಶಂಖಧ್ವನಿಗೆ ಸಮಾನವಾದ ರಾಕ್ಷಸರ ವಿಜಯಘೋಷವು ಕೇಳಿಬರುತ್ತಿದ್ದಿತು. ನಾನಾಪ್ರಕಾರವಾದ ವಾದ್ಯಗಳು ಮೊಳಗುತ್ತಿದ್ದುವು. ರೂಪ-ಯೌವನಗಳಿಂದ

ಕೂಡಿದ್ದ ನಾರೀಮಣಿಯರಿಂದ ಆ ಅರಮನೆಯು ನಿಬಿಡವಾಗಿದ್ದಿತು. ಅಲ್ಲಿನ ರಾಜಮಾರ್ಗಗಳು ಜನಗಳ ವಾರ್ತಾಲಾಪದಿಂದ ಶಬ್ದಿತವಾಗಿದ್ದುವು. ಆ ಅರಮನೆಯ ಮಹಾದ್ವಾರಗಳು ಪುಟಕ್ಕೆ ಹಾಕಿದ ಚಿನ್ನದಿಂದ ಮಾಡಲ್ಪಟ್ಟಿದ್ದುವು. ಉತ್ತಮವಾದ ಭೂಷಣಗಳಿಂದ ಅದನ್ನು ಸಿಂಗರಿಸಿದ್ದರು. ಆದುದರಿಂದ ಅದು ಗಂಧರ್ವರ ವಾಸಗೃಹದಂತೆಯೂ ದೇವತೆಗಳ ನಿವಾಸದಂತೆಯೂ ಕಾಣುತ್ತಿದ್ದಿತು. ನಾಗಭವನದಂತೆಯೇ ರತ್ನಗಳ ರಾಶಿಯಿಂದ ರಾವಣನ ಆ ಅರಮನೆಯು ತುಂಬಿದ್ದಿತು. ತೇಜಸ್ಸಿನಿಂದ ಸುತ್ತಲೂ ಹರಡಿರುವ ಕಿರಣಗಳುಳ್ಳ ಸೂರ್ಯನು ಮಹಾಮೇಘವನ್ನು ಪ್ರವೇಶಿಸುವಂತೆ ಮಹಾದ್ಯುತಿಮಂತನಾದ ವಿಭೀಷಣನು ಅಣ್ಣನಾದ ರಾವಣನ ಅರಮನೆಯನ್ನು ಪ್ರವೇಶಿಸಿದನು. ಅಲ್ಲಿ ವಿಭೀಷಣನು ತನ್ನ ಅಣ್ಣನ ವಿಜಯದ ಉದ್ದೇಶದಿಂದ ವೇದವಿದರಾದ ಬ್ರಾಹ್ಮಣರಾಕ್ಷಸರು ಮಾಡುತ್ತಿದ್ದ ಪುಣ್ಯಾಹವಾಚನದ ಪವಿತ್ರಮಂತ್ರಗಳನ್ನು ಕೇಳಿದನು. ಬಳಿಕ ಮಹಾಬಲನಾದ ಅವನು ಮೊಸರಿನ ಪಾತ್ರೆಗಳನ್ನೂ ತುಪ್ಪದ ಪಾತ್ರೆಗಳನ್ನೂ ಕೈಗಳಲ್ಲಿ ಹಿಡಿದಿದ್ದ, ಹೂಗಳಿಂದಲೂ ಅಕ್ಷತೆಗಳಿಂದಲೂ ಸಂಪೂಜಿತರಾಗಿದ್ದ, ಮಂತ್ರಜ್ಞರಾದ ಬ್ರಾಹ್ಮಣರಾಕ್ಷಸರನ್ನು ನೋಡಿದನು. ಅರಮನೆಗೆ ಆಗಮಿಸಿದ ವಿಭೀಷಣನನ್ನು ಅಲ್ಲಿದ್ದ ರಾಕ್ಷಸರು ಸ್ವಾಗತಿಸಿ ಸತ್ಕರಿಸಿದರು. ಬಳಿಕ ಅವನು, ತನ್ನ ತೇಜಸ್ಸಿನಿಂದ ದೇದೀಪ್ಯಮಾನನಾಗಿ ಕಾಣುತ್ತಿದ್ದ, ಸಿಂಹಾಸನದಲ್ಲಿ ಕುಳಿತಿದ್ದ, ಕುಬೇರನ ತಮ್ಮನಾದ, ಮಹಾಬಾಹುವಾದ ರಾವಣನಿಗೆ ನಮಸ್ಕರಿಸಿದನು. ಶಿಷ್ಟಾಚಾರವನ್ನು ತಿಳಿದಿದ್ದ ವಿಭೀಷಣನು– 'ವಿಜಯತಾಂ ಮಹಾರಾಜಃ' 'ಮಹಾರಾಜನಿಗೆ ವಿಜಯವಾಗಲಿ'–ಇವೇ ಮುಂತಾದ ಪರಂಪರಾಗತವಾದ ಜಯಶಬ್ದಗಳನ್ನು ಘೋಷಿಸುತ್ತಾ, ರಾವಣನು ದೃಷ್ಟಿಯ ಸಂಕೇತದಿಂದಲೇ ಸೂಚಿಸಿದ ಸುವರ್ಣಭೂಷಿತವಾದ ಸಿಂಹಾಸನದಲ್ಲಿ ಕುಳಿತನು. ಜಗತ್ತಿನ ಸುಖ-ದುಃಖಗಳನ್ನು ಚೆನ್ನಾಗಿ ತಿಳಿದಿದ್ದ ವಿಭೀಷಣನು ನಮಸ್ಕಾರವೇ ಮೊದಲಾದ ವ್ಯಾವಹಾರಿಕವಿಷಯಗಳನ್ನು ಯಥಾನುಕ್ರಮವಾಗಿ ಮುಗಿಸಿ, ಸಾಂತ್ವನಪೂರ್ಣವಾದ ಮಾತುಗಳಿಂದ ತನ್ನ ಹಿರಿಯಣ್ಣನನ್ನು ಪ್ರಸನ್ನಗೊಳಿಸುತ್ತಾ, ಏಕಾಂತದಲ್ಲಿ ಮಂತ್ರಿಗಳ ಸನ್ನಿಧಿಯಲ್ಲಿ ದೇಶ-ಕಾಲ ಮತ್ತು ಪ್ರಯೋಜನಕ್ಕೆ ಅನುರೂಪವಾದ,

ಯುಕ್ತಿಯ ಮೂಲಕವಾಗಿ ಸಿದ್ಧಾಂತಿಸಿದ, ಅತ್ಯಂತಹಿತಕರವಾದ ಈ ಮಾತನ್ನು ಹೇಳಿದನು :

**ಯದಾಪ್ರಭೃತಿ ವೈದೇಹೀ ಸಂಪ್ರಾಪ್ತೇಹ ಪರಂತಪ ।**
**ತದಾಪ್ರಭೃತಿ ದೃಶ್ಯನ್ತೇ ನಿಮಿತ್ತಾನ್ಯಶುಭಾನಿ ನಃ ॥೧೪॥**

"ಶತ್ರುಗಳಿಗೆ ಪರಿತಾಪವನ್ನುಂಟುಮಾಡುವವನೇ! ಅಣ್ಣ! ಯಾವಾಗ ವಿದೇಹರಾಜಕುಮಾರಿಯಾದ ವೈದೇಹಿಯು ಈ ಲಂಕಾಪಟ್ಟಣಕ್ಕೆ ಬಂದಳೋ ಆವಾಗಿನಿಂದ ನಮಗೆ ಅನೇಕಪ್ರಕಾರವಾದ ಅಮಂಗಳಸೂಚಕ ವಾದ ಅಪಶಕುನಗಳು ಕಾಣಿಸಿಕೊಳ್ಳುತ್ತಲೇ ಇವೆ.

**ಸಸ್ಫುಲಿಙ್ಗಃ ಸಧೂಮಾರ್ಚಿಃ ಸಧೂಮಕಲುಷೋದಯಃ ।**
**ಮನ್ತ್ರಸಂಧುಕ್ಷಿತೋಽಪ್ಯಗ್ನಿರ್ನ ಸಮ್ಯಗಭಿವರ್ಧತೇ ॥೧೫॥**

ಮಂತ್ರವಿದರಾದ ಬ್ರಾಹ್ಮಣರಾಕ್ಷಸರಿಂದ ಹವಿಸ್ಸುಗಳ ಮೂಲಕವಾಗಿ ಹೋಮಮಾಡಲ್ಪಟ್ಟ ಅಗ್ನಿಯು ಚೆನ್ನಾಗಿ ಪ್ರಜ್ವಲಿಸುತ್ತಿಲ್ಲ. ಕಿಡಿಗಳು ಅಗ್ನಿಯಿಂದ ಹೊರಚಿಮ್ಮುತ್ತಿರುತ್ತವೆ. ಅದರ ಜ್ವಾಲೆಯು ಹೊಗೆಯಿಂದ ಆವೃತವಾಗಿರುತ್ತದೆ. ಅರಣಿಯನ್ನು ಕಡೆಯುವಾಗಲೂ ಅಗ್ನಿಯು ಹೊಗೆ ಯೊಡನೆಯೇ ಕಾಣಿಸಿಕೊಳ್ಳುತ್ತದೆ.

**ಅಗ್ನಿಷ್ಟೇಷ್ವಗ್ನಿಶಾಲಾಸು ತಥಾ ಬ್ರಹ್ಮಸ್ಥಲೀಷು ಚ ।**
**ಸರೀಸೃಪಾಣಿ ದೃಶ್ಯನ್ತೇ ಹವ್ಯೇಷು ಚ ಪಿಪೀಲಿಕಾಃ ॥೧೬॥**

ಅಗ್ನಿಯನ್ನು ಇರಿಸುವ ಅಗ್ನಿಗೃಹಗಳಲ್ಲಿಯೂ ಮತ್ತು ವೇದಾಧ್ಯಯನ ವನ್ನು ಮಾಡುವ ಸ್ಥಳಗಳಲ್ಲಿಯೂ ಹಾವುಗಳು ಕಾಣಿಸಿಕೊಳ್ಳುತ್ತಿವೆ. ಹೋಮದ್ರವ್ಯಗಳಿಗೆ ಇರುವೆಗಳು ಮುತ್ತುತ್ತಿವೆ.

**ಗವಾಂ ಪಯಾಂಸಿ ಸ್ಕನ್ನಾನಿ ವಿಮದಾ ವರಕುಞ್ಜರಾಃ ।**
**ದೀನಮಶ್ವಾಃ ಪ್ರಹೇಷನ್ತೇ ನ ಚ ಗ್ರಾಸಾಭಿನನ್ದಿನಃ ॥೧೭॥**

ಹಸುಗಳ ಕೆಚ್ಚಲುಗಳು ಬತ್ತಿಹೋಗಿವೆ. ಅವು ಹಾಲನ್ನೇ ಕೊಡುತ್ತಿಲ್ಲ. ಶ್ರೇಷ್ಠವಾದ ಆನೆಗಳೂ ಮದರಹಿತವಾಗಿವೆ. ಕುದುರೆಗಳು ಹೊಸ ಹುಲ್ಲಿನಿಂದ ಸಂತೋಷಪಡುತ್ತಿಲ್ಲ. ದೀನಸ್ವರದಲ್ಲಿ ಕೆನೆಯುತ್ತಿವೆ.

**ಖರೋಷ್ಟ್ರಾಶ್ವತರಾ ರಾಜನ್ಭಿನ್ನರೋಮಾಃ ಸ್ರವನ್ತಿ ಚ ।**
**ನ ಸ್ವಭಾವೇಽವತಿಷ್ಠನ್ತೇ ವಿಧಾನೈರಪಿ ಚಿನ್ತಿತಾಃ ॥೧೮॥**

ಕತ್ತೆಗಳ ಮತ್ತು ಒಂಟೆಗಳ ರೋಮಗಳು ಊರ್ಧ್ವಮುಖವಾಗಿ ನಿಮಿರಿನಿಂತಿವೆ. ಅವುಗಳು ಕಣ್ಣೀರು ಸುರಿಸುತ್ತಿವೆ. ವಿಧಿಪೂರ್ವಕವಾದ ಚಿಕಿತ್ಸೆಗಳನ್ನು ಮಾಡಿಸಿದರೂ ಅವುಗಳು ಪೂರ್ಣವಾಗಿ ಸ್ವಸ್ಥವಾಗಿಲ್ಲ. ತಮ್ಮ ಹಿಂದಿನ ಸ್ವಭಾವವನ್ನು ಹೊಂದುತ್ತಿಲ್ಲ.

**ವಾಯಸಾಃ ಸಙ್ಘಶಃ ಕ್ರೂರಾ ವ್ಯಾಹರನ್ತಿ ಸಮನ್ತತಃ ।**
**ಸಮವೇತಾಶ್ಚ ದೃಶ್ಯನ್ತೇ ವಿಮಾನಾಗ್ರೇಷು ಸಙ್ಘಶಃ ॥೧೯॥**

ಕ್ರೂರವಾದ ಕಾಗೆಗಳು ಗುಂಪು-ಗುಂಪಾಗಿ ಎಲ್ಲೆಡೆಗಳಲ್ಲಿಯೂ ಕುಳಿತು 'ಕಾ-ಕಾ'–ಎಂದು ಕೂಗಿಕೊಳ್ಳುತ್ತಿವೆ. ಉಪ್ಪರಿಗೆಗಳ ಮೇಲೆ ಎಲ್ಲವೂ ಸೇರಿ ಗುಂಪು-ಗುಂಪಾಗಿ ಕುಳಿತಿರುವುದೂ ಕಂಡುಬರುತ್ತಿದೆ.

**ಗೃಧ್ರಾಶ್ಚ ಪರಿಲೀಯನ್ತೇ ಪುರೀಮುಪರಿ ಪಿಣ್ಡಿತಾಃ ।**
**ಉಪಪನ್ನಾಶ್ಚ ಸನ್ಧ್ಯೇ ದ್ವೇ ವ್ಯಾಹರನ್ತ್ಯಶಿವಂ ಶಿವಾಃ ॥೨೦॥**

ಮನೆಗಳ ಮೇಲೆ ಗುಂಪು-ಗುಂಪಾಗಿ ರಣಹದ್ದು ಗಳುಉಡುಗಿಕೊಂಡು ಕುಳಿತಿರುತ್ತವೆ. ಗುಳ್ಳೇನರಿಗಳು ಎರಡು ಸಂಧ್ಯಾಕಾಲಗಳಲ್ಲಿಯೂ ಲಂಕಾ ಪಟ್ಟಣದ ಬಳಿಗೆ ಬಂದು ಅಮಂಗಳಕರವಾದ ಧ್ವನಿಯಲ್ಲಿ ಕೂಗಿಕೊಳ್ಳುತ್ತಿವೆ.

**ಕ್ರವ್ಯಾದಾನಾಂ ಮೃಗಾಣಾಂ ಚ ಪುರದ್ವಾರೇಷು ಸಙ್ಘಶಃ ।**
**ಶ್ರೂಯನ್ತೇ ವಿಪುಲಾ ಘೋಷಾಃ ಸವಿಸ್ಫೂರ್ಜಿತನಿಃಸ್ವನಾಃ ॥೨೧॥**

ನಗರದ ಎಲ್ಲ ಮಹಾದ್ವಾರಗಳ ಸಮೀಪದಲ್ಲಿಯೂ ಗುಂಪು-ಗುಂಪಾಗಿ ಸೇರಿಕೊಂಡು ಮಾಂಸಾಶಿಗಳಾದ ಮೃಗಗಳು ಮಾಡುವ ಗಟ್ಟಿಯಾದ ಗರ್ಜನೆಗಳು ಮಿಂಚುಗಳ ಜೊತೆಯಲ್ಲಿ ಹೊರಬರುವ ಸಿಡಿಲಿನ ಶಬ್ದದಂತೆ ಕೇಳಿಬರುತ್ತಿದೆ.

ರಾವಣ! ಪರಿಸ್ಥಿತಿಯು ಹೀಗಿರುವಾಗ ಇದರ ಪರಿಹಾರಕ್ಕಾಗಿ ಈ ಒಂದು ಪ್ರಾಯಶ್ಚಿತ್ತವೇ ಸಾಕೆಂದು ನನಗೆ ಭಾಸವಾಗುತ್ತಿದೆ. ರಾಘವನಿಗೆ ವೈದೇಹಿಯನ್ನು ಒಪ್ಪಿಸಿಕೊಡು.

ನಾನು ಈ ಮಾತುಗಳನ್ನು ಲೋಭದಿಂದಲೋ, ಮೋಹದಿಂದಲೋ

ಹೇಳುತ್ತಿರುವೆನೆಂದು ನೀನು ಭಾವಿಸಿದರೂ ನನ್ನಲ್ಲಿ ದೋಷವೆಣಿಸಬೇಡ. ಸೀತೆಯ ಅಪಹರಣವಾದನಂತರ ಇಲ್ಲಿ ಕಾಣುತ್ತಿರುವ ನಾನು ವಿವರಿಸಿದ ಅಪಶಕುನಗಳನ್ನು ಲಂಕಾಪಟ್ಟಣದಲ್ಲಿರುವ ಜನರೆಲ್ಲರೂ ನೋಡುತ್ತಿದ್ದಾರೆ. ರಾಕ್ಷಸ-ರಾಕ್ಷಸಿಯರೂ ನೋಡುತ್ತಿದ್ದಾರೆ. ಅಂತಃಪುರದ ರಾಣೀವಾಸದವರೂ ನೋಡುತ್ತಿದ್ದಾರೆ. ಈ ವಿಷಯವನ್ನು ನಿನ್ನ ಕಿವಿಗಳಿಗೆ ಹಾಕಲು ಪ್ರಾಯಶಃ ಎಲ್ಲ ಮಂತ್ರಿಗಳೂ ಸಂಕೋಚಪಡುತ್ತಿದ್ದಾರೆ. ಆದರೆ ನಾನು ಯಾವುದನ್ನು ನೋಡಿರುವೆನೋ, ಯಾವುದನ್ನು ಕೇಳಿರುವೆನೋ ಅದನ್ನು ನಿನ್ನೊಡನೆ ಅವಶ್ಯವಾಗಿ ಹೇಳಲೇಬೇಕು. ಆದುದರಿಂದ ಈ ವಿಷಯದಲ್ಲಿ ಯಥೋಚಿತ ವಾಗಿ ವಿಚಾರಮಾಡಿ ನಿನಗೆ ಉಚಿತವೆನಿಸಿದ ರೀತಿಯಲ್ಲಿ ಕಾರ್ಯ ಮಾಡಬಹುದಾಗಿದೆ.”

ಹೀಗೆ ತಮ್ಮನಾದ ವಿಭೀಷಣನು ತನ್ನ ಮಂತ್ರಿಗಳ ಮಧ್ಯದಲ್ಲಿದ್ದ ರಾಕ್ಷಸರಾಜನಿಗೆ ಹಿತಕರವಾದ ಈ ಮಾತುಗಳನ್ನು ಹೇಳಿದನು.

ವಿಭೀಷಣನ ಈ ಹಿತಕರವಾದ, ಮಹಾರ್ಥಸಾಧಕವಾದ, ಮೃದು ವಾದ, ಯುಕ್ತಿಯುಕ್ತವಾದ, ಭೂತ-ಭವಿಷ್ಯದ್ವರ್ತಮಾನಗಳಲ್ಲಿಯೂ ಕಾರ್ಯಸಾಧನೆಗೆ ಸಮರ್ಥವಾದ ಮಾತುಗಳನ್ನು ಕೇಳಿ ಸೀತೆಯ ಪ್ರಸಂಗ ದಲ್ಲಿಯೇ ಬೇರೂರಿದ ಮನಸ್ಸುಳ್ಳವನಾಗಿದ್ದ ರಾವಣನು ಕೋಪಗೊಂಡು ಹೇಳಿದನು :

**ಭಯಂ ನ ಪಶ್ಯಾಮಿ ಕುತಶ್ಚಿದಪ್ಯಹಂ**
**ನ ರಾಘವಃ ಪ್ರಾಪ್ಸ್ಯತಿ ಜಾತು ಮೈಥಿಲೀಮ್ ।**
**ಸುರೈಃ ಸಹೇನ್ದ್ರೈರಪಿ ಸಂಗತಃ ಕಥಂ**
**ಮಮಾಗ್ರತಃ ಸ್ಥಾಸ್ಯತಿ ಲಕ್ಷ್ಮಣಾಗ್ರಜಃ ॥೨೮॥**

“ವಿಭೀಷಣ! ನಾನಾದರೋ ಯಾರಿಂದಲೂ ಯಾವ ಭಯವನ್ನೂ ಕಾಣುತ್ತಿಲ್ಲ. ಯಾವುದೇ ಕಾರಣದಿಂದಲೂ ರಾಘವನು ಮೈಥಿಲಿಯನ್ನು ಹೊಂದಲಾರನು. ಇಂದ್ರಸಹಿತರಾದ ದೇವತೆಗಳ ಸಹಾಯವನ್ನು ಪಡೆದು ಬಂದರೂ ಆ ಲಕ್ಷ್ಮಣನ ಅಣ್ಣನು ಯುದ್ಧದಲ್ಲಿ ನನ್ನ ಮುಂದೆ ಹೇಗೆ ನಿಂತಾನು?”

ಹೀಗೆ ಹೇಳಿ ದೇವಸೈನ್ಯವಿನಾಶಕನಾದ, ಮಹಾಬಲನಾದ, ಯುದ್ಧದಲ್ಲಿ

ಪ್ರಚಂಡಪರಾಕ್ರಮಿಯಾದ ದಶಾನನನು ಆಪ್ತವಾಕ್ಯವನ್ನು ಹೇಳಿದ ವಿಭೀಷಣನನ್ನು ಕಳುಹಿಸಿಕೊಟ್ಟನು.

೧೧೦ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೧೧ನೆಯ ಸರ್ಗ

## ರಾವಣನೂ ಮತ್ತು ಅವನ ಸಭಾಸದರೂ ಮುಂದಿನ ಕಾರ್ಯಕ್ಕಾಗಿ ಸಭಾಸದನದಲ್ಲಿ ಸೇರಿದುದು

**ಸ ಬಭೂವ ಕೃಶೋ ರಾಜಾ ಮೈಥಿಲೀಕಾಮಮೋಹಿತಃ ।**
**ಅಸಂಮಾನಾಚ್ಚ ಸುಹೃದಾಂ ಪಾಪಃ ಪಾಪೇನ ಕರ್ಮಣಾ ॥೧॥**

ರಾಕ್ಷಸೇಶ್ವರನಾದ ರಾವಣನು ಸೀತೆಯ ವಿಷಯದಲ್ಲಿ ಕಾಮಮೋಹಿತನಾಗಿದ್ದನು. ಅವನ ಹಿತೈಷಿಗಳೂ ಮತ್ತು ಸುಹೃದರೂ ಆಗಿದ್ದವರು ಅವನ ವಿಷಯದಲ್ಲಿ ತಿರಸ್ಕಾರಭಾವವನ್ನು ತಳೆದರು. ಅವನ ಕುತ್ಸಿತಕಾರ್ಯವನ್ನು ನಿಂದಿಸತೊಡಗಿದರು. ಪಾಪಿಷ್ಠವಾದ ಕಾರ್ಯವನ್ನು ಮಾಡಿದ ಕಾರಣ ಸತ್ಪುರುಷರ ದೃಷ್ಟಿಯಲ್ಲಿ ರಾವಣನು ಪಾಪಿಷ್ಠನಾದನು. ಈ ಎಲ್ಲ ಕಾರಣಗಳಿಂದಲೂ ಅವನು ಅತ್ಯಂತ ಕೃಶನೂ, ದುರ್ಬಲನೂ ಆದನು.

ರಾವಣನು ಅತ್ಯಂತಕಾಮಪೀಡಿತನಾಗಿ ವೈದೇಹಿಯನ್ನೇ ಯಾವಾಗಲೂ ಮನಸ್ಸಿನಲ್ಲಿ ಚಿಂತಿಸುತ್ತಿದ್ದನು. ಅವನ ಆಯುಷ್ಯವೂ ಕಳೆದುಹೋಗಿದ್ದ ಆ ಸಮಯದಲ್ಲಿ ರಾವಣನು ಯುದ್ಧದಲ್ಲಿಯೇ ಆಸಕ್ತಿಯುಳ್ಳವನಾದನು. ಅಮಾತ್ಯರೊಡನೆಯು, ಸ್ನೇಹಿತರೊಡನೆಯೂ ಯುದ್ಧದ ವಿಷಯವಾಗಿ ಮಾತನಾಡಲು ಅದು ಸಕಾಲವಾಗಿರುವುದೆಂದು ಆತನು ಭಾವಿಸಿದನು. ಒಡನೆಯೇ ಅವನು ಸುವರ್ಣಮಯವಾದ ಬಲೆಯಿಂದ ಆಚ್ಛಾದಿತವಾಗಿದ್ದ, ಮಣಿಗಳಿಂದಲೂ ಹವಳಗಳಿಂದಲೂ ಸಮಲಂಕೃತವಾಗಿದ್ದ, ಸುಶಿಕ್ಷಿತವಾದ ಕುದುರೆಗಳನ್ನು ಹೂಡಿದ್ದ ಮಹಾರಥವನ್ನು ಹತ್ತಿದನು. ಮಹಾಮೇಘದ ಧ್ವನಿಗೆ ಸಮಾನವಾದ ಧ್ವನಿಯಿಂದ ಕೂಡಿದ್ದ, ಶ್ರೇಷ್ಠವಾದ ಆ ರಥದಲ್ಲಿ ಕುಳಿತು ರಾಕ್ಷಸಶ್ರೇಷ್ಠನಾದ ರಾವಣನು ಸಭಾಭವನಕ್ಕೆ ಹೊರಟನು. ಕತ್ತಿ-ಗುರಾಣಿಗಳನ್ನೂ ಸಮಸ್ತವಾದ ಆಯುಧಗಳನ್ನೂ ಧರಿಸಿದ್ದ ರಾಕ್ಷಸರು, ರಾಕ್ಷಸರಾಜನ ಮುಂಭಾಗದಲ್ಲಿ ಹೊರಟರು. ನಾನಾವಿಧವಾದ ಆಭರಣಗಳಿಂದ

ಸಮಲಂಕೃತರಾಗಿದ್ದ ನಾನಾಪ್ರಕಾರವಾದ ವಿಕೃತವೇಷಗಳನ್ನು ಧರಿಸಿದ್ದ ರಾಕ್ಷಸರು ರಾವಣನ ಪಕ್ಕದಲ್ಲೂ, ಹಿಂಭಾಗದಲ್ಲೂ ಹೋಗುತ್ತಿದ್ದರು. ಅತಿರಥರು ರಥಗಳಲ್ಲಿಯೂ, ಗಜಸೈನಿಕರು ಮದಿಸಿದ ಮತ್ತು ಶ್ರೇಷ್ಠವಾದ ಆನೆಗಳ ಮೇಲೂ, ಅಶ್ವಸೈನಿಕರು ಆಡಾಡುತ್ತಾ ನೆಗೆ-ನೆಗೆದುಕೊಂಡು ಹೋಗುತ್ತಿದ್ದ ಕುದುರೆಗಳ ಮೇಲೂ ಕುಳಿತು ರಾವಣನ ಹಿಂದೆ ಹೋಗುತ್ತಿದ್ದರು. ಆ ಸೈನಿಕರಲ್ಲಿ ಕೆಲವರು ಗದೆಗಳನ್ನೂ, ಪರಿಘಗಳನ್ನೂ ಹಿಡಿದಿದ್ದರು. ಕೆಲವರು ಶಕ್ತಿ-ತೋಮರಗಳನ್ನು ಹಿಡಿದಿದ್ದರು.

ಕೆಲವರು ಗಂಡುಗೊಡಲಿಗಳನ್ನೂ ಮತ್ತೆ ಕೆಲವರು ಶೂಲಗಳನ್ನೂ ಹಿಡಿದಿದ್ದರು. ರಾವಣನು ಸಭೆಗೆ ಹೋಗುತ್ತಿದ್ದಾಗ ಸಾವಿರಾರು ವಾದ್ಯಗಳ ಮಹಾನಿನಾದವುಂಟಾಯಿತು. ಸಾವಿರಾರು ಶಂಖಗಳ ಘೋರವಾದ ಶಬ್ದವಾಯಿತು. ರಾವಣನು ಕುಳಿತಿದ್ದ ಆ ಮಹಾರಥವು ಚಕ್ರದ ಗಡ-ಗಡಾಶಬ್ದದಿಂದ ಎಲ್ಲ ದಿಕ್ಕುಗಳಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡುತ್ತಾ ಶೋಭಾಯಮಾನವಾಗಿ ಕಾಣುತ್ತಿದ್ದ ರಾಜಮಾರ್ಗವನ್ನು ಸೇರಿತು. ಆ ಸಮಯದಲ್ಲಿ ರಾಕ್ಷಸರಾಜನ ಮೇಲೆ ಹಿಡಿದಿದ್ದ ನಿರ್ಮಲವಾದ ಮತ್ತು ಬಿಳುಪಾಗಿದ್ದ ಶ್ವೇತಛತ್ರವು ಪೂರ್ಣಚಂದ್ರನಂತೆ ಶೋಭಾಯಮಾನವಾಗಿದ್ದಿತು. ರಾವಣನ ಬಲ ಮತ್ತು ಎಡಭಾಗಗಳಲ್ಲಿ ಸುವರ್ಣಮಯವಾದ ದಾರಗಳನ್ನೊಳಗೊಂಡಿದ್ದ ಶುದ್ಧಸ್ಫಟಿಕದಂತೆ ಬಿಳುಪಾಗಿದ್ದ ಅಥವಾ ಸ್ಫಟಿಕಶಿಲೆಯ ಹಿಡಿಯಿದ್ದ ಚಾಮರ ಮತ್ತು ತಾಳೆಯ ಬೀಸಣಿಗೆಗಳು ಪ್ರಕಾಶಿಸುತ್ತಿದ್ದುವು. ಮಾರ್ಗದ ಅಕ್ಕ-ಪಕ್ಕಗಳಲ್ಲಿ ನೆಲದ ಮೇಲೆ ನಿಂತಿದ್ದ ರಾಕ್ಷಸರು ಕೈಮುಗಿದುಕೊಂಡು ರಥದಲ್ಲಿ ಕುಳಿತಿದ್ದ ರಾಕ್ಷಸಶ್ರೇಷ್ಠನಾದ ರಾವಣನಿಗೆ ನಮಸ್ಕಾರ ಮಾಡುತ್ತಿದ್ದರು. ಕೆಲವರು ರಾಕ್ಷಸರು ಅವನನ್ನು ಸ್ತೋತ್ರಮಾಡುತ್ತಿದ್ದರು. ಕೆಲವರು ಜಯಕಾರಗಳನ್ನು ಹೇಳುತ್ತಿದ್ದರು. ಕೆಲವರು ವೃದ್ಧರು ಆಶೀರ್ವಾದ ಮಾಡುತ್ತಿದ್ದರು. ಹೀಗೆ ಸ್ತೋತ್ರ-ಜಯಕಾರ-ಆಶೀರ್ವಾದಗಳೊಡನೆ ಮಹಾತೇಜಸ್ವಿಯಾದ ರಾವಣನು ಸುವ್ಯವಸ್ಥಿತವಾಗಿದ್ದ ಮತ್ತು ಮಂಗಳಕರವಾಗಿದ್ದ ಸಭಾಭವನವನ್ನು ಸೇರಿದನು. ಆ ಸಭಾಭವನದ ನೆಲದ ಮೇಲೆ ಚಿನ್ನ ಮತ್ತು ಬೆಳ್ಳಿಯಿಂದ ಮಾಡಿದ ತಗಡನ್ನು ಹಾಸಿದ್ದರು. ಅದರ ನಡು-ನಡುವೆ ವಿಶುದ್ಧವಾದ ಸ್ಫಟಿಕಮಣಿಗಳಿದ್ದುವು. ಅದರ ಮೇಲೆ ಸುವರ್ಣಮಯವಾದ

ಪಟ್ಟವಸ್ತ್ರದ ಮೇಲು ಹೊದ್ದಿಕೆಯಿದ್ದಿತು. ಅದು ತನ್ನದೇ ಆದ ಪ್ರಭೆಯಿಂದ ರಾರಾಜಿಸುತ್ತಿದ್ದಿತು. ಸದಾಕಾಲದಲ್ಲಿಯೂ ಪ್ರಭೆಯಿಂದ ಕೂಡಿರುತ್ತಿದ್ದ ಆ ದಿವ್ಯಸಭೆಯನ್ನು ಆರುನೂರು ಪಿಶಾಚರು ಸಂರಕ್ಷಿಸುತ್ತಿದ್ದರು. ವಿಶ್ವ ಕರ್ಮನಿರ್ಮಿತವಾದ ಅಂತಹ ರಮ್ಯವಾದ ಸಭೆಯನ್ನು ರಾವಣನು ಪ್ರವೇಶಿಸಿದನು.

ಆ ಸಭೆಯಲ್ಲಿ ವೈಡೂರ್ಯಮಣಿಗಳಿಂದ ರಚಿತವಾದ ಒಂದು ವಿಶಾಲ ವಾದ ಮತ್ತು ಉತ್ತಮವಾದ ಸಿಂಹಾಸನವಿದ್ದಿತು. ಅದರ ಮೇಲೆ 'ಪ್ರಿಯಂಕು' ಎಂಬ ಮೃಗದ ಚರ್ಮವನ್ನು ಹೊದ್ದಿಸಿದ್ದರು. ಆ ಸಿಂಹಾಸನದಲ್ಲಿ ಒರಗುದಿಂಬೂ ಇದ್ದಿತು. ಅಂತಹ ಶ್ರೇಷ್ಠವಾದ ಸಿಂಹಾಸನದಲ್ಲಿ ರಾವಣನು ಕುಳಿತುಕೊಂಡನು. ಬಳಿಕ ಅವನು ಲೋಕೇಶ್ವರನಂತೆ ಶೀಘ್ರಗಾಮಿಗಳಾದ ದೂತರಿಗೆ ಆಜ್ಞಾಪಿಸಿದನು :

"ಶತ್ರುಗಳ ಸಂಬಂಧವಾಗಿ ಮಾಡಬೇಕಾದ ಮಹಾಕಾರ್ಯವೊಂದಿದೆ. ಆ ಕಾರ್ಯವು ಯಾವುದೆಂಬುದನ್ನು ನಾನು ಚೆನ್ನಾಗಿ ತಿಳಿದಿದ್ದೇನೆ. ಆದುದ ರಿಂದ ನೀವೀಗಲೇ ಸುವಿಖ್ಯಾತರಾದ ರಾಕ್ಷಸರನ್ನು ನನ್ನ ಬಳಿಗೆ ಕರೆತನ್ನಿರಿ."

ರಾವಣನ ಆ ಮಾತನ್ನು ಕೇಳಿ ದೂತರು ಲಂಕಾಪಟ್ಟಣದ ಎಲ್ಲ ಕಡೆ ಗಳಲ್ಲಿಯೂ ಸುತ್ತಾಡಿದರು. ಒಂದೊಂದು ಮನೆಗಳಿಗೂ ಹೋದರು. ವಿಹಾರಸ್ಥಳಗಳಿಗೂ, ಶಯನಾಗಾರಗಳಿಗೂ, ಉದ್ಯಾನವನಗಳಿಗೂ ಹೋಗಿ ನಿರ್ಭಯವಾಗಿ ಅಲ್ಲಿದ್ದ ಎಲ್ಲ ರಾಕ್ಷಸರಿಗೂ ರಾಜಾಜ್ಞೆಯಂತೆ ರಾಜಭವನಕ್ಕೆ ಹೋಗಲು ಪ್ರಚೋದಿಸಿದರು. ರಾಜಾಜ್ಞೆಯನ್ನು ಕೇಳುತ್ತಲೇ ಆ ರಾಕ್ಷಸರಲ್ಲಿ ಕೆಲವರು ರಥಗಳ ಮೇಲೂ, ಕೆಲವರು ಮದಿಸಿದ ಆನೆಗಳ ಮೇಲೂ, ಕೆಲವರು ಪುಷ್ಟವಾಗಿದ್ದ ಕುದುರೆಗಳ ಮೇಲೂ ಕುಳಿತು ರಾಜಭವನಕ್ಕೆ ತೆರಳಿ ದರು. ಕೆಲವರು ಕಾಲ್ನಡಿಗೆಯಲ್ಲಿಯೇ ಅಲ್ಲಿಗೆ ಹೋದರು. ಆ ಸಮಯದಲ್ಲಿ ಓಡಿಹೋಗುತ್ತಿದ್ದ ರಥ-ಗಜಾಶ್ವಗಳಿಂದ ವ್ಯಾಪ್ತವಾಗಿದ್ದ ಆ ಲಂಕಾಪಟ್ಟಣವು ಗರುಡಪಕ್ಷಿಗಳಿಂದ ಆಚ್ಛಾದಿತವಾದ ಆಕಾಶದಂತೆಯೇ ಕಾಣುತ್ತಿದ್ದಿತು. ಸಭಾ ಭವನವನ್ನು ತಲುಪಿದನಂತರ ರಾಕ್ಷಸರು ತಮ್ಮ-ತಮ್ಮ ವಾಹನಗಳನ್ನು ಹೊರ ಭಾಗದಲ್ಲಿ ನಿಲ್ಲಿಸಿ ಪಾದಚಾರಿಗಳಾಗಿ ಸಿಂಹವು ಗಿರಿಗುಹೆಯನ್ನು ಪ್ರವೇಶಿಸು ವಂತೆ ಸಭಾಭವನವನ್ನು ಪ್ರವೇಶಿಸಿದರು. ಪ್ರವೇಶಿಸುತ್ತಲೇ ಸಭಾಸದ

ರೆಲ್ಲರೂ ರಾಜನ ಕಾಲುಮುಟ್ಟಿ ನಮಸ್ಕರಿಸಿದರು. ಹಾಗೆಯೇ ರಾಜ ನಿಂದಲೂ ಸತ್ಕೃತರಾದರು. ಬಳಿಕ ಕೆಲವು ರಾಕ್ಷಸರು ಸುವರ್ಣಮಯವಾದ ಸಿಂಹಾಸನಗಳ ಮೇಲೂ, ಕೆಲವರು ದರ್ಭಾಸನದ ಮೇಲೂ, ಕೆಲವರು ನೆಲದ ಮೇಲೂ ಕುಳಿತುಕೊಂಡರು. ರಾಜಾಜ್ಞೆಯಂತೆ ಆ ಸಭೆಯಲ್ಲಿ ಎಲ್ಲರೂ ಏಕತ್ರ ಸೇರಿ ರಾಕ್ಷಸಾಧಿಪನಾದ ರಾವಣನ ಸಮೀಪದಲ್ಲಿ ಯಥಾ ಯೋಗ್ಯವಾದ ಆಸನಗಳಲ್ಲಿ ಕುಳಿತುಕೊಂಡರು. ಕೈಗೊಂಡ ಕಾರ್ಯದ ನಿಶ್ಚಿತವಾದ ಪ್ರಯೋಜನಗಳು ಯಾವುವೆಂಬುದನ್ನು ತಿಳಿಸುವುದರಲ್ಲಿ ಪಂಡಿತರಾದ ಮುಖ್ಯಮಂತ್ರಿಗಳೂ, ಸದ್ಗುಣೋಪೇತರಾದ, ಸರ್ವಜ್ಞರಾದ, ಬುದ್ಧಿಯ ಮೂಲಕವಾಗಿಯೇ ಸಕಲವನ್ನೂ ವಿಮರ್ಶಿಸಿ ನೋಡುವ ಅಮಾತ್ಯರೂ, ಶೂರರೂ–ಎಲ್ಲ ವಿಷಯಗಳ ನಿಶ್ಚಯಕ್ಕಾಗಿ ಮತ್ತು ಸುಖಪ್ರಾಪ್ತಿಯು ಹೇಗೆಂಬುದನ್ನು ನಿರ್ಣಯಿಸುವುದಕ್ಕಾಗಿ ನೂರಾರು ಸಂಖ್ಯೆಯಲ್ಲಿ ಸುವರ್ಣವರ್ಣದ ಆ ಮಹಾಸಭೆಗೆ ಆಗಮಿಸಿದರು.

ಅನಂತರ ಯಶಸ್ವಿಯಾದ, ಮಹಾತ್ಮನಾದ ವಿಭೀಷಣನು ಸುವರ್ಣ ದಿಂದ ಚಿತ್ರಿತವಾಗಿದ್ದ, ಸುಂದರವಾದ ಕುದುರೆಗಳಿಂದ ಯುಕ್ತವಾಗಿದ್ದ, ವಿಶಾಲವಾಗಿದ್ದ, ಶ್ರೇಷ್ಠವೂ ಶುಭಕರವೂ ಆಗಿದ್ದ ರಥದಲ್ಲಿ ಕುಳಿತು ತನ್ನ ಅಣ್ಣನಾದ ರಾವಣೇಶ್ವರನ ಸಭಾಭವನಕ್ಕೆ ಹೋದನು. ಅನುಜನಾದ ವಿಭೀಷಣನು ಮೊದಲು ತನ್ನ ನಾಮಧೇಯವನ್ನು ಹೇಳಿ ಅಭಿವಾದನ ಪೂರ್ವಕವಾಗಿ ಅಣ್ಣನ ಕಾಲುಗಳಿಗೆ ನಮಸ್ಕರಿಸಿದನು. ಶುಕ ಮತ್ತು ಪ್ರಹಸ್ತರೂ ಹಾಗೆಯೇ ಮಾಡಿದರು. ಅನಂತರ ರಾವಣನು ಅವರೆಲ್ಲರನ್ನೂ ಯಥಾಯೋಗ್ಯವಾದ ಪ್ರತ್ಯೇಕ-ಪ್ರತ್ಯೇಕವಾದ ಆಸನಗಳಲ್ಲಿ ಕುಳ್ಳಿರಿಸಿದನು. ಆ ಸಭೆಯಲ್ಲಿ ಸುವರ್ಣ-ರತ್ನಾಭರಣಗಳಿಂದ ವಿಭೂಷಿತರಾಗಿದ್ದ, ಒಳ್ಳೆಯ ವಸ್ತ್ರಗಳನ್ನುಟ್ಟಿದ್ದ ರಾಕ್ಷಸರು ಪೂಸಿಕೊಂಡಿದ್ದ ಬಹುಮೌಲ್ಯದ ಅಗುರು, ಚಂದನಗಳ ಮತ್ತು ಅಲಂಕರಿಸಿಕೊಂಡಿದ್ದ ಪುಷ್ಪಹಾರಗಳ ಸುಗಂಧಗಳು ಎಲ್ಲ ಕಡೆಗಳಲ್ಲಿಯೂ ಪ್ರಸರಿಸಿದ್ದಿತು.

ಆ ರಾವಣನ ಮಹಾಸಭೆಯಲ್ಲಿ ಸುಳ್ಳುಹೇಳುವವರು ಯಾರೂ ಇರಲಿಲ್ಲ. ಯಾರೂ ಕಿರುಚಿಕೊಳ್ಳುತ್ತಿರಲಿಲ್ಲ. ಗಟ್ಟಿಯಾಗಿ ಮಾತನಾಡುತ್ತಿರ ಲಿಲ್ಲ. ಎಲ್ಲರೂ ಸಫಲಮನೋರಥರಾಗಿದ್ದರು. ಭಯಂಕರಪರಾಕ್ರಮಿಗಳಾ

ಗಿದ್ದರು. ಎಲ್ಲರೂ ತಮ್ಮ ಸ್ವಾಮಿಯಾದ ರಾವಣನ ಮುಖವನ್ನೇ ಎವೆ ಯಿಕ್ಕದೇ ನೋಡುತ್ತಿದ್ದರು. ಶಸ್ತ್ರಧಾರಿಗಳಾದ, ಮಹಾಬಲಿಷ್ಠರಾದ, ಮನನ ಶೀಲರಾದ, ವೀರರಾದ ರಾಕ್ಷಸರು ನೆರೆದಿದ್ದ ಆ ಮಹಾಸಭೆಯ ಮಧ್ಯದಲ್ಲಿ ದೇವತೆಗಳ ಮಧ್ಯದಲ್ಲಿ ಇಂದ್ರನು ಪ್ರಕಾಶಿಸುವಂತೆಯೇ ರಾವಣನು ಪ್ರಕಾಶಿಸುತ್ತಿದ್ದನು.

೧೧ನೆಯ ಸರ್ಗವು ಮುಗಿಯಿತು.



## ರಾವಣನು ನಗರದ ರಕ್ಷಣೆಗಾಗಿ ಸೈನಿಕರನ್ನು ನಿಯಮಿಸಿದುದು : ಸೀತೆಯ ವಿಷಯದಲ್ಲಿ ತನಗಿರುವ ಆಸಕ್ತಿಯನ್ನೂ ಮತ್ತು ಅವಳನ್ನು ಅಪಹರಿಸಿದ ಪ್ರಸಂಗವನ್ನೂ ತಿಳಿಸಿ ಮುಂದಿನ ಕಾರ್ಯಕ್ಕೆ ಸಭಾಸದರ ಸಮ್ಮತಿಯನ್ನು ಬಯಸಿದುದು : ಕುಂಭಕರ್ಣನಿಂದ ರಾವಣನ ನಿಂದನೆ : ಬಳಿಕ ಸಮಸ್ತ ಶತ್ರುಗಳನ್ನೂ ಸಂಹರಿಸುವ ಭಾರವನ್ನು ತಾನೇ ವಹಿಸಿಕೊಂಡುದು

**ಸ ತಾಂ ಪರಿಷದಂ ಕೃತ್ಸ್ನಾಂ ಸಮೀಕ್ಷ್ಯ ಸಮಿತಿಂಜಯಃ ।**
**ಪ್ರಚೋದಯಾಮಾಸ ತದಾ ಪ್ರಹಸ್ತಂ ವಾಹಿನೀಪತಿಮ್ ॥೧॥**

ಯುದ್ಧದಲ್ಲಿ ಯಾವಾಗಲೂ ಜಯಗಳಿಸುವವನಾಗಿದ್ದ ರಾವಣನು ಸಮಗ್ರಸಭೆಯನ್ನು ವೀಕ್ಷಿಸಿ ಸೇನಾಪತಿಯಾದ ಪ್ರಹಸ್ತನಿಗೆ ಹೇಳಿದನು :

"ಸೇನಾಪತಿಯೇ! ಅಸ್ತ್ರವಿದ್ಯೆಯಲ್ಲಿ ಪಾರಂಗತರಾದ ರಥಾಶ್ವ-ಗಜ-ಪದಾತಿಸೈನಿಕರು ನಗರದ ರಕ್ಷಣೆಯಲ್ಲಿ ತತ್ಪರರಾಗಿರುವಂತೆ ಆಜ್ಞಾಪಿಸು."

ಜಿತೇಂದ್ರಿಯನಾದ ಪ್ರಹಸ್ತನು ರಾಜಾಜ್ಞೆಯನ್ನು ಪರಿಪಾಲಿಸುವ ಇಚ್ಛೆಯಿಂದ ಸಮಸ್ತಸೈನಿಕರನ್ನೂ ನಗರದ ಹೊರ-ಒಳಭಾಗಗಳಲ್ಲಿ ಯಥಾಯೋಗ್ಯವಾದ ಸ್ಥಾನಗಳಲ್ಲಿ ಇರಿಸಿದನು. ಹೀಗೆ ಪ್ರಹಸ್ತನು ನಗರದ ರಕ್ಷಣೆಗಾಗಿ ಎಲ್ಲ ಸೈನಿಕರನ್ನೂ ನಿಯೋಜಿಸಿ ರಾವಣನಿಗೆ ಅಭಿಮುಖವಾಗಿ ಕುಳಿತು ಹೇಳಿದನು :

"ಮಹಾರಾಜ! ಮಹಾಬಲಿಷ್ಠನಾದ ಮಹಾರಾಜನಾದ ನಿನ್ನ ಸೈನ್ಯ

ವನ್ನು ನಾನು ನಗರದ ಹೊರ-ಒಳಭಾಗಗಳಲ್ಲಿ ಆಯಕಟ್ಟಿನ ಸ್ಥಾನಗಳಲ್ಲಿ ನಿಲ್ಲಿಸಿದ್ದೇನೆ. ಈಗ ನೀನು ವ್ಯಾಕುಲವಿಲ್ಲದ ಮನಸ್ಸಿನಿಂದ ಶೀಘ್ರವಾಗಿಯೇ ನಿನಗೆ ಅಭೀಷ್ಟವಾದ ಕಾರ್ಯವನ್ನು ಮಾಡಬಹುದು."

ರಾಜ್ಯದ ಹಿತೈಷಿಯಾದ ಪ್ರಹಸ್ತನ ಈ ಮಾತನ್ನು ಕೇಳಿ ತನ್ನ ಸುಖದ ಮೇಲೆಯೇ ಹೆಚ್ಚು ಆಸಕ್ತನಾಗಿದ್ದ ರಾವಣನು ಸ್ನೇಹಿತರ ಮಧ್ಯದಲ್ಲಿ ಈ ಮಾತುಗಳನ್ನು ಹೇಳಿದನು :

**ಪ್ರಿಯಾಪ್ರಿಯೇ ಸುಖೇ ದುಃಖೇ ಲಾಭಾಲಾಭೇ ಹಿತಾಹಿತೇ ।**
**ಧರ್ಮಕಾಮಾರ್ಥಕೃಚ್ಛ್ರೇಷು ಯೂಯಮರ್ಹಥ ವೇದಿತುಮ್ ॥**

"ಧರ್ಮ-ಕಾಮಾರ್ಥಗಳ ವಿಷಯದಲ್ಲಿ ಸಂಕಟವು ಪ್ರಾಪ್ತವಾಗಿರುವ ಈ ಸಮಯದಲ್ಲಿ ನೀವು ಪ್ರಿಯ-ಅಪ್ರಿಯ ; ಸುಖ-ದುಃಖ ; ಲಾಭ-ಹಾನಿ ; ಹಿತ-ಅಹಿತ–ಇವುಗಳ ವಿಷಯವಾಗಿ ವಿಚಾರಮಾಡಲು ಸಮರ್ಥ ರಾಗಿರುವಿರಿ.

ನೀವು ಪರಸ್ಪರ ವಿಚಾರಮಾಡಿ ಸಮಾಲೋಚಿಸಿ ಯಾವ ಯಾವ ಕಾರ್ಯಗಳನ್ನು ನನ್ನ ಸಲುವಾಗಿ ಆರಂಭಿಸಿರುವಿರೋ ಅವು ಯಾವುವೂ ಇದುವರೆಗೆ ಯಾವುದೇ ಕಾರಣದಿಂದಲೂ ನಿಷ್ಫಲವಾಗಿರುವುದಿಲ್ಲ. ಚಂದ್ರ-ಗ್ರಹ-ನಕ್ಷತ್ರಗಳಿಂದಲೂ, ದೇವತೆಗಳಿಂದಲೂ ಸಮಾವೃತನಾದ ಇಂದ್ರನು ಯಾವ ರೀತಿಯಲ್ಲಿ ಸ್ವರ್ಗದ ಸಂಪತ್ತನ್ನು ಉಪಭೋಗಿಸುತ್ತಿರುವನೋ ಹಾಗೆಯೇ ನಿಮ್ಮಿಂದ ಸುತ್ತುವರಿಯಲ್ಪಟ್ಟಿರುವ ನಾನು ಲಂಕಾರಾಜ್ಯದ ಸಂಪತ್ತನ್ನು ಉಪಭೋಗಿಸುತ್ತಿದ್ದೇನೆ. ನಾನು ಯಾವುದೇ ಕಾರ್ಯವನ್ನು ಮಾಡಿದರೂ ಅದಕ್ಕೆ ನಿಮ್ಮ ಸಮರ್ಥನೆಯನ್ನು ಪಡೆಯಲು ಪ್ರಯತ್ನಿಸುತ್ತಲೇ ಇದ್ದೇನೆ. ಆದರೆ ಆಗ ಕುಂಭಕರ್ಣನು ಮಲಗಿ ನಿಂದ್ರಿಸುತ್ತಿದ್ದುದರಿಂದ ಈ ವಿಷಯವನ್ನು ಚರ್ಚಿಸಲು ಸಾಧ್ಯವಾಗಲಿಲ್ಲ. ಮಹಾಬಲನಾದ, ಸರ್ವಶಸ್ತ್ರಧಾರಿಗಳಿಗೂ ಶ್ರೇಷ್ಠನಾದ ಈ ಕುಂಭಕರ್ಣನು ಆರು ತಿಂಗಳವರೆಗೆ ಮಲಗಿಯೇ ಇದ್ದು ಈಗ ತಾನೇ ಎದ್ದಿದ್ದಾನೆ.

ರಾಕ್ಷಸರ ಸಂಚಾರಭೂಮಿಯಾಗಿದ್ದ ದಂಡಕಾರಣ್ಯದಿಂದ ಜನಕನಮಗ ಳಾದ ರಾಮನ ಪ್ರಿಯಭಾರ್ಯೆಯಾದ ಸೀತೆಯನ್ನು ನಾನು ಕರೆತಂದಿದ್ದೇನೆ. ಆದರೆ ಮಂದಗಾಮಿನಿಯಾದ ಈ ಸೀತೆಯು ನನ್ನ ಹಾಸಿಗೆಯಲ್ಲಿ ಮಲಗಲು

ಇಷ್ಟಪಡುತ್ತಿಲ್ಲ. ನನ್ನ ದೃಷ್ಟಿಯಲ್ಲಿ ಸೀತೆಗೆ ಅನುರೂಪಳಾಗಿರುವ ಬೇರೊಬ್ಬ ಸುಂದರಸ್ತ್ರೀಯು ಮೂರು ಲೋಕಗಳಲ್ಲಿಯೂ ಇರುವುದಿಲ್ಲ.

**ತನುಮಧ್ಯಾ ಪೃಥುಶ್ರೋಣೀ ಶಾರದೇನ್ದುನಿಭಾನನಾ ।**
**ಹೇಮಬಿಮ್ಬನಿಭಾ ಸೌಮ್ಯಾ ಮಾಯೇವ ಮಯನಿರ್ಮಿತಾ ॥೧೪॥**

ತೆಳುವಾದ ನಡುವುಳ್ಳವಳು. ಸ್ಥೂಲವಾದ ನಿತಂಬವುಳ್ಳವಳು. ಚಂದ್ರ ಸದೃಶವಾದ ಮುಖವುಳ್ಳವಳು. ಚಿನ್ನದ ಪ್ರತಿಮೆಯಂತೆಯೇ ಇದ್ದಾಳೆ. ಮಯಾಸುರನಿಂದ ನಿರ್ಮಿತವಾದ ಮಾಯೆಯೋ ಎಂಬಂತೆ ಕಾಣುತ್ತಾಳೆ.

**ಸುಲೋಹಿತತಲೌ ಶ್ಲಕ್ಷ್ಣೌ ಚರಣೌ ಸುಪ್ರತಿಷ್ಠಿತೌ ।**
**ದೃಷ್ಟ್ವಾ ತಾಮ್ರನಖೌ ತಸ್ಯಾ ದೀಪ್ಯತೇ ಮೇ ಶರೀರಜಃ ॥೧೫॥**

ಅವಳ ಪಾದತಲಗಳು ಕೆಂಪಾಗಿವೆ. ಸುಂದರವಾಗಿಯೂ ಸುದೃಢ ವಾಗಿಯೂ ಇವೆ. ಕೆಂಪಾಗಿರುವ ಅವಳ ಕಾಲುಗುರುಗಳನ್ನು ನೋಡಿದೊಡ ನೆಯೇ ಕಾಮಾಗ್ನಿಯು ಉದ್ದೀಪನಗೊಳ್ಳುತ್ತದೆ.

**ಹುತಾಗ್ನೇರರ್ಚಿಸಂಕಾಶಾಮೇನಾಂ ಸೌರೀಮಿವ ಪ್ರಭಾಮ್ ।**
**ಉನ್ನಸಂ ವದನಂ ವಲ್ಗು ವಿಪುಲಂ ಚಾರುಲೋಚನಮ್ ।**
**ಪಶ್ಯಂಸ್ತದಾ ವಶಸ್ತಸ್ಯಾಃ ಕಾಮಸ್ಯ ವಶಮೇಯಿವಾನ್ ॥೧೬॥**

ತುಪ್ಪದ ಆಹುತಿಯಿಂದ ಉದ್ದೀಪ್ತನಾದ ಅಗ್ನಿಯ ಜ್ವಾಲೆಯಂತೆಯೂ ಸೂರ್ಯನ ಪ್ರಭೆಯಂತೆಯೂ ಇರುವ ಸೀತಾದೇವಿಯ ಎತ್ತರವಾದ ಮೂಗಿನಿಂದಲೂ ವಿಶಾಲವಾದ ಕಣ್ಣುಗಳಿಂದಲೂ ಕೂಡಿರುವ ವಿಶಾಲವೂ ಸುಂದರವೂ ಆದ ಮುಖವನ್ನು ನೋಡಿ ನಾನು ಪರವಶನಾಗಿ ಕಾಮದೇವನ ಅಧೀನನಾಗಿ ಬಿಟ್ಟಿದ್ದೇನೆ.

**ಕ್ರೋಧಹರ್ಷಸಹಾಯೇನ ದುರ್ವರ್ಣಕರಣೇನ ಚ ।**
**ಶೋಕಸಂತಾಪನಿತ್ಯೇನ ಕಾಮೇನ ಕಲುಷೀಕೃತಃ ॥೧೭॥**

ಆ ಕಾಮವು ಕ್ರೋಧ-ಹರ್ಷ ಸಹಿತವಾಗಿದೆ. ನನ್ನ ದೇಹಕಾಂತಿಯು ಕೆಡುವಂತೆ ಮಾಡಿದೆ. ಸದಾ ಶೋಕ-ಸಂತಾಪಗಳನ್ನು ಉಂಟುಮಾಡುತ್ತಿದೆ. ಅಂತಹ ಕಾಮವು ನನ್ನನ್ನು ಕಲುಷಗೊಳಿಸಿಬಿಟ್ಟಿದೆ.

**ಸಾ ತು ಸಂವತ್ಸರಂ ಕಾಲಂ ಮಾಮಯಾಚತ ಭಾಮಿನೀ ।**
**ಪ್ರತೀಕ್ಷಮಾಣಾ ಭರ್ತಾರಂ ರಾಮಮಾಯತಲೋಚನಾ ।**
**ತನ್ಮಯಾ ಚಾರುನೇತ್ರಾಯಾಃ ಪ್ರತಿಜ್ಞಾತಂ ವಚಃ ಶುಭಮ್ ॥**

ವಿಶಾಲನೇತ್ರೆಯಾದ ಸೀತೆಯು ತನ್ನ ಪತಿಯನ್ನು ನಿರೀಕ್ಷಿಸುತ್ತಾ ಒಂದು ವರ್ಷದ ಗಡುವು ಕೇಳಿದ್ದಾಳೆ. ಮನೋಹರನೇತ್ರೆಯಾದ ಸೀತೆಯ ಆ ಶುಭಕರವಾದ ಮಾತನ್ನು ಕೇಳಿ ಅದನ್ನು ನಡೆಸಿಕೊಡುವುದಾಗಿ ಪ್ರತಿಜ್ಞೆ ಮಾಡಿದ್ದೇನೆ.*

**ಭ್ರಾನ್ತೋಽಹಂ ಸತತಂ ಕಾಮಾದ್ಯಾತೋ ಹಯ ಇವಾಧ್ವನಿ ॥೧೯॥**

**ಕಥಂ ಸಾಗರಮಕ್ಷೋಭ್ಯಂ ತರಿಷ್ಯನ್ತಿ ವನೌಕಸಃ ।**
**ಬಹುಸತ್ತ್ವಸಮಾಕೀರ್ಣಂ ತೌ ವಾ ದಶರಥಾತ್ಮಜೌ ॥೨೦॥**

ಬಹುದೀರ್ಘವಾದ ಮಾರ್ಗದಲ್ಲಿ ನಡೆದ ಕುದುರೆಯು ಆಯಾಸಗೊಳ್ಳುವಂತೆ ಕಾಮಪೀಡಿತನಾಗಿರುವ ನಾನು ಬಹಳ ಆಯಾಸಗೊಂಡಿ ದ್ದೇನೆ. ಆದರೆ ಶತ್ರುಗಳ ಕಡೆಯಿಂದ ನಾನು ಯಾವ ಭಯವನ್ನೂ ನಿರೀಕ್ಷಿಸುತ್ತಿಲ್ಲ. ವಾನರರೇ ಆಗಲೀ ದಶರಥನ ಮಕ್ಕಳಾದ ರಾಮ-ಲಕ್ಷ್ಮಣರೇ ಆಗಲೀ ಅಸಂಖ್ಯಾತವಾದ ಜಲಜಂತುಗಳಿಂದಲೂ ಮೀನುಗಳಿಂದಲೂ ಸಮಾಕುಲವಾಗಿ ಎದುರಿಸಲು ಅಸಾಧ್ಯವಾದ ಸಮುದ್ರವನ್ನು ಹೇಗೆ ತಾನೇ ದಾಟುವರು?

ಅಥವಾ–'ಒಂದೇ ಒಂದು ಕಪಿಯು ಬಂದು ಮಹತ್ತರವಾದ ಸಂಹಾರ

---

* ಇಲ್ಲಿ ರಾವಣನು ಸಮಯೋಚಿತವಾಗಿ ಸುಳ್ಳುಹೇಳಿದ್ದಾನೆ. ಅವಳಿಗೆ ಒಂದು ವರ್ಷದ ಅವಧಿಯನ್ನು ಕೊಟ್ಟಿರುವುದು ನಿಜ. ಅರಣ್ಯ-೫೬-(೨೪.೨೫) ಅದನ್ನು ಸೀತೆಯು ಕೇಳಲಿಲ್ಲ. ತಾನಾಗಿಯೇ ಕೊಟ್ಟನು. ಆ ಅವಧಿಯಲ್ಲಿ ತನ್ನ ವಶಳಾಗದಿದ್ದರೆ ಅವಳನ್ನು ಪಾಚಕರು ಪ್ರಾತಃಕಾಲದ ತಿಂಡಿಗಾಗಿ ಕೊಚ್ಚಿಹಾಕುವರೆಂದೂ ಹೇಳಿದ್ದನು. ಪುನಃ ಸುಂದರಕಾಂಡದಲ್ಲಿಯೂ ಎರಡು ತಿಂಗಳ ಅವಧಿಯನ್ನು ಕೊಡುತ್ತಾ ಅದೇ ಮಾತನ್ನೇ ರಾವಣನು ಹೇಳಿದ್ದಾನೆ. (ಸುಂದರಕಾಂಡ ಸರ್ಗ ೨೨ ಶ್ಲೋಕ ೮-೯) ಈ ಎರಡು ಪ್ರಕರಣದಲ್ಲಿಯೂ ಸೀತೆಯ ತಿರಸ್ಕಾರದ ಮಾತನ್ನು ಕೇಳಿ ರಾವಣನು ಕೋಪದಿಂದ ಹೇಳಿದನೇ ಹೊರತು ಸೀತೆಯು ಯಾವಾಗಲೂ ಯಾವ ಅವಧಿಯನ್ನೂ ಕೇಳಿಲ್ಲ. ಈ ಸಮಯದಲ್ಲಿ ರಾವಣನು ಅತಿಘೋರವಾದ ಮತ್ತು ಪಾಪಕರವಾದ ಸುಳ್ಳನ್ನೇ ಹೇಳಿದ್ದಾನೆ.

ಕಾರ್ಯವನ್ನು ಮಾಡಿಬಿಟ್ಟಿತು. ಇದರಿಂದ ನಾವು ಯೋಚಿಸಿ ಕಾರ್ಯಮಾಡ ಬೇಕಲ್ಲವೇ?'–ಎಂದು ನೀವು ಭಾವಿಸುವಿರಾದರೆ ಅದನ್ನು ನಿಮ್ಮ ಬುದ್ಧಿಗೆ ಅನುಗುಣವಾಗಿ ಯೋಚಿಸಿ ಹೇಳಿರಿ. **'ದುರ್ಜ್ಞೇಯಾಃ ಕಾರ್ಯಗತಯಃ'**– ಯಾವ ಕಾರ್ಯಗಳನ್ನು ಮಾಡಿದರೆ ಎಂತಹ ಫಲಿತಾಂಶವು ಪ್ರಾಪ್ತ ವಾಗುವುದೆಂಬುದನ್ನು ತಿಳಿಯುವುದು ಬಹಳ ಕಷ್ಟವೇ ಸರಿ. ಒಂದಂತೂ ನಿಶ್ಚಯ. ಮನುಷ್ಯರಿಂದ ನಮಗೆ ಯಾವ ಭಯವೂ ಇಲ್ಲ. ಆದರೂ ಕೂಡ ನೀವಿದನ್ನು ವಿಮರ್ಶಿಸಿ ಹೇಳಬೇಕು. ಹಿಂದೆ ನಡೆದ ದೇವಾಸುರಯುದ್ಧದಲ್ಲಿ ನಿಮ್ಮೊಡನೆ ಸೇರಿಕೊಂಡು ನಿಮ್ಮೆಲ್ಲರ ಸಹಾಯದಿಂದ ನಾನು ವಿಜಯವನ್ನು ಪಡೆದೆನು. ಈಗ ಸುಗ್ರೀವಪ್ರಮುಖರಾದ ವಾನರರನ್ನು ಜಯಿಸಲು ಕೂಡ ನೀವೆಲ್ಲರೂ ಸಹಾಯಮಾಡಿರಿ. ಸೀತೆಯು ಎಲ್ಲಿರುವಳೆಂಬುದನ್ನು ತಿಳಿದು ಆ ಇಬ್ಬರು ರಾಜಕುಮಾರರೂ ಸುಗ್ರೀವನೇ ಮೊದಲಾದ ವಾನರರನ್ನು ಮುಂದುಮಾಡಿಕೊಂಡು ಸಮುದ್ರದ ಆಚೆಯ ತೀರದಲ್ಲಿ ಬಂದಿಳಿದಿದ್ದಾರೆ.

**ಅದೇಯಾ ಚ ಮಯಾ ಸೀತಾ ವಧ್ಯೌ ದಶರಥಾತ್ಮಜೌ ।**
**ಭವದ್ಭಿರ್ಮನ್ತ್ರ್ಯತಾಂ ಮನ್ತ್ರಃ ಸುನೀತಿಶ್ಚಾಭಿಧೀಯತಾಮ್ ॥**

ಸೀತೆಯನ್ನು ಬಿಟ್ಟುಕೊಡದಂತೆಯೂ ಆ ಇಬ್ಬರು ದಶರಥನ ಮಕ್ಕಳನ್ನು ಸಂಹರಿಸಲು ಸಾಧ್ಯವಾಗುವಂತೆಯೂ ನೀವೆಲ್ಲರೂ ಸೇರಿ ಸಮಾಲೋಚಿಸಿರಿ. ಈ ಎರಡು ಕಾರ್ಯವನ್ನು ಸಾಧಿಸಲು ಸಾಧ್ಯವಾಗುವಂತಹ ಸುನಿಶ್ಚಿತವಾದ ಉಪಾಯವು ಯಾವುದೆಂಬುದನ್ನು ಹೇಳಿರಿ.

ಜಗತ್ತಿನಲ್ಲಿ ಇಂದ್ರಾದಿಗಳಿಗೂ ನನ್ನನ್ನು ಜಯಿಸುವ ಶಕ್ತಿಯಿರುವುದನ್ನು ನಾನು ಕಾಣುತ್ತಿಲ್ಲ. ಹೀಗಿರುವಾಗ ಮನುಷ್ಯನೊಬ್ಬನು ವಾನರರೊಡನೆ ಸಮುದ್ರವನ್ನು ದಾಟಿ ಇಲ್ಲಿಗೆ ಬಂದು ನನ್ನನ್ನು ಜಯಿಸುವ ಸಾಧ್ಯತೆಯೇ ಇಲ್ಲ. ಆದುದರಿಂದ ಸರ್ವಥಾ ನನಗೆ ಜಯವು ಲಭಿಸುತ್ತದೆ."

ಕಾಮಾತುರನಾಗಿದ್ದ ರಾವಣನ ಖೇದಪೂರ್ವಕವಾದ ಈ ಪ್ರಲಾಪ ವನ್ನು ಕೇಳಿ ಕುಂಭಕರ್ಣನು ಪರಮಕ್ರುದ್ಧನಾಗಿ ಹೇಳಿದನು :

**ಯದಾ ತು ರಾಮಸ್ಯ ಸಲಕ್ಷ್ಮಣಸ್ಯ**
**ಪ್ರಸಹ್ಯ ಸೀತಾ ಖಲು ಸಾ ಇಹಾಹೃತಾ ।**

**ಸಕೃತ್ಸಮೀಕ್ಷ್ಯೈವ ಸುನಿಶ್ಚಿತಂ ತದಾ**
**ಭಜೇತ ಚಿತ್ತಂ ಯಮುನೇವ ಯಾಮುನಮ್ ॥೨೮॥**

"ಮಹಾರಾಜ! ನೀನು ಯಾವಾಗ ರಾಮ-ಲಕ್ಷ್ಮಣರಿಗೆ ಸಂಬಂಧಿಸಿದವಳಾದ ಸೀತೆಯನ್ನು ಬಲಾತ್ಕಾರವಾಗಿ ಇಲ್ಲಿಗೆ ಸೆಳೆದು ತಂದೆಯೋ ಆಗಲೇ ನೀನು ಈ ಎಲ್ಲ ವಿಷಯಗಳನ್ನೂ ಚೆನ್ನಾಗಿ ಪರಿಶೀಲಿಸಿ, ಮುಂದೆ ಅದರಿಂದಾಗಬಹುದಾದ ಆಗು-ಹೋಗುಗಳನ್ನು ಊಹಿಸಿ ಕಾರ್ಯಮಾಡುವ ಬುದ್ಧಿಯನ್ನು ಆಶ್ರಯಿಸಬೇಕಾಗಿದ್ದಿತು. ಯಮುನೋತ್ರಿಯಿಂದ ಕೆಳಕ್ಕೆ ಇಳಿದು ಬರುವ ಯಮುನಾನದಿಯು ಅಲ್ಲಿರುವ ಕುಂಡವನ್ನು ತುಂಬಿಯೇ ಮುಂದೆ ಹರಿಯುತ್ತದೆ. ಅನಂತರ ಹಿಂದಿರುಗಿ ಬಂದು ಕುಂಡವನ್ನು ಸೇರಿಕೊಳ್ಳಲು ಅದಕ್ಕೆ ಸಾಧ್ಯವಿಲ್ಲ. ನೀನು ಸೀತೆಯನ್ನು ಕರೆತರುವ ಮೊದಲೇ ನಮ್ಮೆಲ್ಲರೊಡನೆ ಸಮಾಲೋಚಿಸಬೇಕಾಗಿದ್ದಿತು. ಕಾಲವು ಮೀರಿ ಪರಿಸ್ಥಿತಿಯು ವಿಷಮಿಸಿರುವಾಗ ಇಂತಹ ಮಂತ್ರಾಲೋಚನೆಯಿಂದ ಯಾವ ಪ್ರಯೋಜನವೂ ಇಲ್ಲ.

**ಸರ್ವಮೇತನ್ಮಹಾರಾಜ ಕೃತಮಪ್ರತಿಮಂ ತವ ।**
**ವಿಧೀಯೇತ ಸಹಾಸ್ಮಾಭಿರಾದಾವೇವಾಸ್ಯ ಕರ್ಮಣಃ ॥೨೯॥**

ಈ ಕಾರ್ಯದ ಹಿತಾಹಿತಗಳನ್ನು ಕುರಿತು ನೀನು ಮೊದಲೇ ನಮ್ಮೊಡನೆ ಮಂತ್ರಾಲೋಚನೆಮಾಡಿದ್ದರೆ ನಿನ್ನ ಕಾರ್ಯವು ಅಸದೃಶ ವಾದುದಾಗುತ್ತಿದ್ದಿತು.

**ನ್ಯಾಯೇನ ರಾಜಾ ಕಾರ್ಯಾಣಿ ಯಃ ಕರೋತಿ ದಶಾನನ ।**
**ನ ಸ ಸಂತಪ್ಯತೇ ಪಶ್ಚಾನ್ನಿಶ್ಚಿತಾರ್ಥಮತಿರ್ನೃಪಃ ॥೩೦॥**

ದಶಾನನ! ಯಾವ ರಾಜನು ಎಲ್ಲ ರಾಜಕಾರ್ಯಗಳನ್ನೂ ನ್ಯಾಯಪೂರ್ವಕವಾಗಿಯೇ ಮಾಡುವನೋ ಅಂತಹವನ ಬುದ್ಧಿಯು–'ತಾನು ಮಾಡಿದ್ದು ಸರಿ'–ಎಂಬ ನಿಶ್ಚಿತವಾದ ಅಭಿಪ್ರಾಯದಿಂದ ಕೂಡಿರುವುದರಿಂದ ಪುನಃ ಅವನು ಪಶ್ಚಾತ್ತಾಪಪಡಬೇಕಾಗುವುದಿಲ್ಲ.

**ಅನುಪಾಯೇನ ಕರ್ಮಾಣಿ ವಿಪರೀತಾನಿ ಯಾನಿ ಚ ।**
**ಕ್ರಿಯಮಾಣಾನಿ ದುಷ್ಯನ್ತಿ ಹವೀಂಷ್ಯಪ್ರಯತೇಷ್ವಿವ ॥೩೧॥**

ಸಾಮ-ದಾನ-ಭೇದವೇ ಮೊದಲಾದ ಉಪಾಯಗಳನ್ನು ಆಶ್ರಯಿಸದೇ

ಶಾಸ್ತ್ರಕ್ಕೆ ವಿರುದ್ಧವಾಗಿ ಮಾಡುವ ಕಾರ್ಯಗಳು ಅಪರಿಶುದ್ಧವಾದ ಹೋಮ ಕುಂಡಗಳಲ್ಲಿ ಹಾಕಿದ ಹವಿಸ್ಸುಗಳಂತೆ ಕೆಟ್ಟು ಹಾಳಾಗುತ್ತವೆ.

**ಯಃ ಪಶ್ಚಾತ್ಪೂರ್ವಕಾರ್ಯಾಣಿ ಕುರುತೇ ಬುದ್ಧಿಮೋಹಿತಃ ।**
**ಪೂರ್ವಂ ಚೋತ್ತರಕಾರ್ಯಾಣಿ ನ ಸ ವೇದ ನಯಾನಯೌ ॥೩೨॥**

ವಿಮೋಹಿತನಾದ ಯಾವನು ಮೊದಲು ಮಾಡಬೇಕಾದ ಕಾರ್ಯ ಗಳನ್ನು ಕಡೆಯಲ್ಲಿ ಮಾಡಲು ಅಪೇಕ್ಷಿಸುವನೋ ಮತ್ತು ಕಡೆಯಲ್ಲಿ ಮಾಡ ಬೇಕಾದುದನ್ನು ಮೊದಲೇ ಮಾಡಿಬಿಡುವನೋ–ಅಂತಹವನು ನೀತಿ ಮತ್ತು ಅನೀತಿಗಳು ಯಾವುದೆಂಬುದನ್ನೇ ತಿಳಿದಿರುವುದಿಲ್ಲ.

**ಚಪಲಸ್ಯ ತು ಕೃತ್ಯೇಷು ಪ್ರಸಮೀಕ್ಷ್ಯಾಧಿಕಂ ಬಲಮ್ ।**
**ಕ್ಷಿಪ್ರಮನ್ಯೇ ಪ್ರಪದ್ಯನ್ತೇ ಕ್ರೌಞ್ಚಸ್ಯ ಖಮಿವ ದ್ವಿಜಾಃ ॥೩೩॥**

ಶತ್ರುಗಳು ತಮ್ಮ ಎದುರಾಳಿಯು ಬಲದಲ್ಲಿ ತಮಗಿಂತಲೂ ಅಧಿಕ ನಾಗಿದ್ದರೂ ಅವನು ಚಪಲಚಿತ್ತನಾಗಿದ್ದರೆ ಅವನನ್ನು ದಮನಮಾಡಲು– ಹಂಸಪಕ್ಷಿಯು ದಾಟಿಹೋಗಲು ಅಸಾಧ್ಯವಾದ ಕ್ರೌಂಚಪರ್ವತದಲ್ಲಿ ಕುಮಾರಸ್ವಾಮಿಯು ತನ್ನ ಶಕ್ತ್ಯಾಯುಧದಿಂದ ಮಾಡಿರುವ ರಂಧ್ರವನ್ನು ಹುಡುಕಿಕೊಂಡು ಹೋಗುವಂತೆ–ಅವನ ದೋಷವನ್ನೇ ಹುಡುಕುತ್ತಿರುತ್ತಾರೆ.

**ತ್ವಯೇದಂ ಮಹದಾರಬ್ಧಂ ಕಾರ್ಯಮಪ್ರತಿಚಿನ್ತಿತಮ್ ।**
**ದಿಷ್ಟ್ಯಾ ತ್ವಾಂ ನಾವಧೀದ್ರಾಮೋ ವಿಷಮಿಶ್ರಮಿವಾಮಿಷಮ್ ॥**

ಮಹಾರಾಜ! ನೀನು ಮುಂದಾಗುವ ಪರಿಣಾಮವನ್ನು ಯೋಚನೆ ಮಾಡದೆಯೇ ಇಂತಹ ದುಷ್ಕರವಾದ ಕಾರ್ಯವನ್ನು ಆರಂಭಿಸಿಬಿಟ್ಟಿರುವೆ. ವಿಷಮಿಶ್ರವಾದ ಮಾಂಸದಂತೆ ಈ ಕಾರ್ಯವು ನಿನಗೆ ಮಾರಕವೇ ಆಗಿದೆ. ಸೌಭಾಗ್ಯವಶದಿಂದ ರಾಮನು ಇದುವರೆಗೂ ನಿನ್ನನ್ನು ಸಂಹರಿಸಿರುವುದಿಲ್ಲ.

ಶತ್ರುಗಳೊಡನೆ ನೀನು ಅಸದೃಶವಾದ ಕಾರ್ಯವನ್ನೇ ಪ್ರಾರಂಭಿಸಿ ರುವೆ. ನಾನಾದರೋ ನಿನ್ನ ಶತ್ರುಗಳನ್ನು ಸಂಹರಿಸಿ ಎಲ್ಲವನ್ನೂ ಸರಿಪಡಿಸು ತ್ತೇನೆ. ನಿಶಾಚರನೇ! ನಿನ್ನ ಶತ್ರುಗಳು ಇಂದ್ರ-ಸೂರ್ಯರೇ ಆಗಿದ್ದರೂ, ಅಗ್ನಿ-ವಾಯು-ಕುಬೇರರೇ ಆಗಿದ್ದರೂ, ವರುಣನೇ ಆಗಿದ್ದರೂ ಅವರೆಲ್ಲ ರೊಡನೆಯೂ ನಿನ್ನ ಸಲುವಾಗಿ ಯುದ್ಧಮಾಡುತ್ತೇನೆ ಮತ್ತು ಎಲ್ಲರನ್ನೂ

ನಿರ್ನಾಮಮಾಡುತ್ತೇನೆ. ಪರ್ವತಸದೃಶವಾದ ಶರೀರವನ್ನು ಹೊಂದಿರುವ, ನಿಶಿತವಾದ ಶೂಲವನ್ನು ಧರಿಸಿರುವ, ತೀಕ್ಷ್ಣವಾದ ಕೋರೆದಾಡೆಗಳನ್ನು ಹೊಂದಿರುವ ನನ್ನ ಗರ್ಜನೆಯನ್ನು ಕೇಳಿದೊಡನೆಯೇ ದೇವೇಂದ್ರನೂ ಭಯದಿಂದ ನಡುಗಿಹೋದಾನು. ರಾಮನು ನನ್ನನ್ನು ಮೊದಲನೆಯ ಬಾಣದಿಂದ ಪ್ರಹರಿಸಿ ಎರಡನೆಯ ಬಾಣವನ್ನು ಬಿಡುವುದರೊಳಗಾಗಿ ಅವನ ರಕ್ತವನ್ನು ಹೀರಿಬಿಡುತ್ತೇನೆ. ನೀನು ನಿಶ್ಚಿಂತನಾಗಿರು.

ಅಣ್ಣ! ದಶರಥನ ಮಗನಾದ ರಾಮನ ವಧೆಮಾಡಿ ಸುಖಾವಹವಾದ ವಿಜಯವನ್ನು ಸಾಧಿಸಲು ನಾನು ಪ್ರಯತ್ನಿಸುತ್ತೇನೆ. ಲಕ್ಷ್ಮಣನೊಡನೆ ರಾಮನನ್ನು ಸಂಹರಿಸಿ ಕಪಿಸಮೂಹಗಳನ್ನು ನುಂಗಿಬಿಡುತ್ತೇನೆ.

ರಾವಣೇಶ್ವರ! ನೀನು ಯಥೇಚ್ಛವಾಗಿ ವಿಹರಿಸು. ಶ್ರೇಷ್ಠವಾದ ವಾರುಣೀಮದ್ಯವನ್ನು ಪಾನಮಾಡು. ಯಾವ ವಿಧವಾದ ಆತಂಕವೂ ಇಲ್ಲದೆ ನಿಶ್ಚಿಂತನಾಗಿ ಪ್ರಜೆಗಳಿಗೆ ಹಿತಕರವಾದ ಕಾರ್ಯಗಳನ್ನು ಮಾಡು. ನಾನು ರಾಮನನ್ನು ಯಮನ ಮನೆಗೆ ಕಳುಹಿಸಿದನಂತರ ಬಹಳ ಕಾಲದವರೆಗೆ ಸೀತೆಯು ನಿನ್ನ ಅಧೀನದಲ್ಲಿರುವಳು."

೧೨ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೩ನೆಯ ಸರ್ಗ

## ಮಹಾಪಾರ್ಶ್ವನು ಬಲಾತ್ಕಾರಪೂರ್ವಕವಾಗಿ ಸೀತೆಯನ್ನು ಉಪಭೋಗಿಸಲು ಸಲಹೆ ನೀಡಿದುದು : ಶಾಪದ ಕಾರಣದಿಂದಾಗಿ ಹಾಗೆ ಮಾಡಲು ತನ್ನ ಅಸಾಮರ್ಥ್ಯವನ್ನು ರಾವಣನು ಪ್ರಕಟಿಸಿದುದು

**ರಾವಣಂ ಕ್ರುದ್ಧಮಾಜ್ಞಾಯ ಮಹಾಪಾರ್ಶ್ವೋ ಮಹಾಬಲಃ ।**
**ಮುಹೂರ್ತಮನುಸಂಚಿನ್ತ್ಯ ಪ್ರಾಞ್ಜಲಿರ್ವಾಕ್ಯಮಬ್ರವೀತ್ ॥**

ರಾವಣನು ಕೋಪಗೊಂಡಿರುವನೆಂಬುದನ್ನು ತಿಳಿದು ಮಹಾಬಲನಾದ ಮಹಾಪಾರ್ಶ್ವನು ಮುಹೂರ್ತಕಾಲದವರೆಗೆ ಮನಸ್ಸಿನಲ್ಲಿಯೇ ಸಮಾಲೋಚಿಸಿ ಕೈಮುಗಿದುಕೊಂಡು ರಾವಣನಿಗೆ ಹೇಳಿದನು :

**ಯಃ ಖಲ್ವಪಿ ವನಂ ಪ್ರಾಪ್ಯ ಮೃಗವ್ಯಾಲಸಮಾಕುಲಮ್ ।**
**ನ ಪಿಬೇನ್ಮಧು ಸಂಪ್ರಾಪ್ತಂ ಸ ನರೋ ಬಾಲಿಶೋ ಭವೇತ್ ॥೨॥**

"ಪ್ರಭುವೇ! ಹಿಂಸ್ರಮೃಗಗಳಿಂದಲೂ ಸರ್ಪಗಳಿಂದಲೂ ಕೂಡಿರುವ ದುರ್ಗಮವಾದ ಕಾಡಿಗೆ ಹೋಗಿ ಅಲ್ಲಿ ಕುಡಿಯಲು ಯೋಗ್ಯವಾದ ಮಧುವನ್ನೂ ಹೊಂದಿ ಅದನ್ನು ಕುಡಿಯದೇ ಯಾವನು ಸುಮ್ಮನಿರುವನೋ ಅಂತಹವನು ಮನುಷ್ಯರಲ್ಲಿ ಮೂರ್ಖನೆನಿಸಿಕೊಳ್ಳುತ್ತಾನೆ.

ಶತ್ರುವಿಧ್ವಂಸಕನೇ! ಮಹಾರಾಜ! ನೀನೇ ಸ್ವಯಂ ಈಶ್ವರನಾಗಿರುವೆ. ನಿನಗೆ ಈಶ್ವರರು ಮತ್ತಾರಿದ್ದಾರೆ? ಶತ್ರುಗಳ ತಲೆಯನ್ನು ಕಾಲಿನಿಂದ ಮೆಟ್ಟುತ್ತಾ ಅವರನ್ನು ಎಷ್ಟು ಮಾತ್ರಕ್ಕೂ ಪರಿಗಣಿಸದೆ ವೈದೇಹಿಯೊಡನೆ ರಮಿಸು.

**ಬಲಾತ್ಕುಕ್ಕುಟವೃತ್ತೇನ ವರ್ತಸ್ವ ಸುಮಹಾಬಲ ।**
**ಆಕ್ರಮ್ಯ ಸೀತಾಂ ವೈದೇಹೀಂ ತಥಾ ಭುಂಕ್ಷ್ವ ರಮಸ್ವ ಚ ॥೪॥**

ಮಹಾಬಲನೇ! ನೀನು ಸೀತೆಯ ವಿಷಯದಲ್ಲಿ ಕೋಳಿಗಳುವ್ಯವಹರಿಸುವಂತೆ ವ್ಯವಹರಿಸು.* ಬಲಾತ್ಕಾರವಾಗಿಯೇ ಅವಳನ್ನು ಪದೇ-ಪದೇ ಆಕ್ರಮಿಸುತ್ತಾ ಅವಳನ್ನು ಉಪಭೋಗಿಸು ಮತ್ತು ಅವಳೊಡನೆ ಕ್ರೀಡಿಸು.

**ಲಬ್ಧಕಾಮಸ್ಯ ತೇ ಪಶ್ಚಾದಾಗಮಿಷ್ಯತಿ ಯದ್ಭಯಮ್ ।**
**ಪ್ರಾಪ್ತಮಪ್ರಾಪ್ತಕಾಲಂ ವಾ ಸರ್ವಂ ಪ್ರತಿಸಹಿಷ್ಯತಿ ॥೫॥**

ನಿನ್ನ ಮನೋರಥವು ಪೂರ್ಣವಾದನಂತರ ನಿನಗೆ ಯಾವುದಾದರೂ ಭಯವುಂಟಾದರೂ ಅದಕ್ಕೆ ತಕ್ಕ ಪ್ರತೀಕಾರವನ್ನು ಮಾಡಬಹುದಾಗಿದೆ.

ನಮ್ಮ ಜೊತೆಯಲ್ಲಿ ಕುಂಭಕರ್ಣನೂ ಮಹಾಬಲಿಷ್ಠನಾದ ಇಂದ್ರಜಿತುವೂ ಇದ್ದುಬಿಟ್ಟರೆ ವಜ್ರಾಯುಧವನ್ನು ಹಿಡಿದಿರುವ ಇಂದ್ರನನ್ನೂ ತಡೆದು ನಿಲ್ಲಿಸಲು ಸಮರ್ಥರಾಗುತ್ತೇವೆ.

---

* ಕುಕ್ಕುಟೀನಾಂ ಕಾಮೀ ಕುಕ್ಕುಟಸಂಯೋಗೇ ಕ್ರೋಧೋ ಜಾತಿಧರ್ಮಃ । ಕ್ರುದ್ಧಾಮಾಕ್ರಮ್ಯ ಭೋಗಸ್ತು ಕೌಕ್ಕುಟಃ ಸೋಽಪಿ ಸೌಖ್ಯದಃ ॥ ವಾತ್ಸ್ಯಾಯನ. ಹೆಣ್ಣುಕೋಳಿಗಳು ಗಂಡುಕೋಳಿಗಳೊಡನೆ ಸಮಾಗಮವಾಗುವಾಗ ಕೋಪಗೊಳ್ಳುತ್ತವೆಯಂತೆ. ಆದರೂ ಗಂಡುಕೋಳಿಯು ಕೋಪಗೊಂಡ ಹೆಣ್ಣುಕೋಳಿಯೊಡನೆ

**ಉಪಪ್ರದಾನಂ ಸಾನ್ತ್ವಂ ವಾ ಭೇದಂ ವಾ ಕುಶಲೈಃ ಕೃತಮ್ ।**
**ಸಮತಿಕ್ರಮ್ಯ ದಣ್ಡೇನ ಸಿದ್ಧಿಮರ್ಥೇಷು ರೋಚಯೇ ॥೭॥**

ನೀತಿಶಾಸ್ತ್ರನಿಪುಣರಾದವರು ಹೇಳಿರುವ ಸಾಮ-ದಾನ-ಭೇದೋಪಾಯಗಳನ್ನು ಅತಿಕ್ರಮಿಸಿ ಅರ್ಥಸಿದ್ಧಿಗೆ ದಂಡೋಪಾಯವನ್ನೇ ಆಶ್ರಯಿಸುವುದು ಉಚಿತವೆಂದು ನಾನು ಭಾವಿಸುತ್ತೇನೆ.

ಮಹಾಬಲನೇ! ಇಲ್ಲಿಗೆ ಬರುವ ನಿನ್ನ ಸಮಸ್ತಶತ್ರುಗಳನ್ನೂ ನಾವು ಶಸ್ತ್ರಗಳ ಪ್ರತಾಪದಿಂದ ವಶಪಡಿಸಿಕೊಳ್ಳುತ್ತೇವೆ. ಇದರಲ್ಲಿ ಸಂಶಯವೇ ಇಲ್ಲ."

ಮಹಾಪಾರ್ಶ್ವನು ಹೀಗೆ ಹೇಳಲು ರಾವಣೇಶ್ವರನು ಅವನ ಮಾತನ್ನು ಹೊಗಳುತ್ತಾ ಹೇಳಿದನು :

"ಮಹಾಪಾರ್ಶ್ವ! ನಾನೊಂದು ಶಾಪಕ್ಕೆ ಗುರಿಯಾದೆ. ಬಹಳ ಹಿಂದೆಯೇ ನಡೆದ ಈ ಸಂಗತಿಯನ್ನು ಹೇಳುತ್ತೇನೆ. ಇದೊಂದು ನನ್ನ ಜೀವನದ ರಹಸ್ಯವಿಷಯವಾಗಿದೆ. ನಾನೊಮ್ಮೆ ಆಕಾಶದಲ್ಲಿ, ಅಗ್ನಿಯ ಜ್ವಾಲೆಯಂತೆ ಪ್ರಕಾಶಿಸುತ್ತಾ ಬ್ರಹ್ಮಭವನಕ್ಕೆ ಹೋಗುತ್ತಿದ್ದ ಪುಂಜಿಕಸ್ಥಲೀ ಎಂಬ ಅಪ್ಸರೆಯನ್ನು ನೋಡಿದೆನು. ಅವಳು ನನ್ನ ಭಯದಿಂದಾಗಿ ಅಲ್ಲಲ್ಲಿ ಬಚ್ಚಿಟ್ಟುಕೊಳ್ಳುತ್ತಾ ಮುಂದೆಹೋಗುತ್ತಿದ್ದಳು. ಅವಳನ್ನು ನಾನು ಬಲಾತ್ಕಾರಪೂರ್ವಕವಾಗಿ ವಿವಸ್ತ್ರಳನ್ನಾಗಿ ಮಾಡಿ ಉಪಭೋಗಿಸಿದೆನು. ಅನಂತರ ಅವಳು ಆನೆಯಿಂದ ಅಲುಗಾಡಿಸಲ್ಪಟ್ಟ ಕಮಲದಂತೆ ವಿವರ್ಣಳಾಗಿಯೇ ಬ್ರಹ್ಮಭವನಕ್ಕೆ ಹೋದಳು. ಮಹಾತ್ಮನಾದ ಪಿತಾಮಹನಿಗೆ ನಾನು ಆ ಅಪ್ಸರೆಯನ್ನು ಬಲಾತ್ಕಾರಪೂರ್ವಕವಾಗಿ ಉಪಭೋಗಿಸಿದುದು ತಿಳಿಯಿತೆಂದು ಭಾವಿಸಿದ್ದೇನೆ. ವಿವರ್ಣಳಾಗಿದ್ದ ಅಪ್ಸರೆಯನ್ನು ನೋಡಿ ಪರಮ ಕ್ರುದ್ಧನಾದ ಬ್ರಹ್ಮನು ನನಗೆ ಹೇಳಿದನು :

---

ಮಾಡಿದ ಸಮಾಗಮದಿಂದ ಸಂತೋಷಪಡುವುದಂತೆ. ಇದಕ್ಕೆ ಕುಕ್ಕುಟವೃತ್ತಿ ಎಂದು ಹೆಸರು. ಹಾಗೆಯೇ ಸೀತೆಯು ಕೋಪಗೊಂಡಿದ್ದರೂ ಅವಳೊಡನೆ ಬಲಾತ್ಕಾರ ಪೂರ್ವಕವಾಗಿ ಮಾಡುವ ಸಮಾಗಮವು ಸುಖದಾಯಕವೇ ಆಗುತ್ತದೆ ಎಂಬುದು ಮಹಾಪಾರ್ಶ್ವನ ಸಲಹೆ.

**ಅದ್ಯಪ್ರಭೃತಿ ಯಾಮನ್ಯಾಂ ಬಲಾನ್ನಾರೀಂ ಗಮಿಷ್ಯಸಿ ।**
**ತದಾ ತೇ ಶತಧಾ ಮೂರ್ಧಾ ಫಲಿಷ್ಯತಿ ನ ಸಂಶಯಃ ॥೧೪॥**

‘ಇಂದು ಮೊದಲ್ಗೊಂಡು ಅನ್ಯಸ್ತ್ರೀಯೊಡನೆ ನೀನು ಬಲಾತ್ಕಾರ ಪೂರ್ವಕವಾಗಿ ಸಮಾಗಮಮಾಡಿದ್ದೇ ಆದರೆ ನಿನ್ನ ತಲೆಯು ನೂರು ಹೋಳುಗಳಾಗಿಬಿಡುತ್ತದೆ. ಇದರಲ್ಲಿ ಸಂಶಯವೇ ಇಲ್ಲ.’

ಬ್ರಹ್ಮನ ಈ ಶಾಪದಿಂದ ನಾನು ಭಯಭೀತನಾಗಿದ್ದೇನೆ. ಈ ಕಾರಣ ದಿಂದಲೇ ನಾನು ಸೀತೆಯನ್ನು ನನ್ನ ಶುಭಕರವಾದ ಹಾಸಿಗೆಯ ಮೇಲಕ್ಕೆ ಬಲಾತ್ಕಾರಪೂರ್ವಕವಾಗಿ ಸೆಳೆದುಕೊಳ್ಳುತ್ತಿಲ್ಲ.

ಮಹಾಪಾರ್ಶ್ವ! ನನ್ನ ವೇಗವು ಸಮುದ್ರಕ್ಕೆ ಸಮಾನವಾಗಿದೆ. ನನ್ನ ಗತಿಯು ವಾಯುಗತಿಗೆ ಸಮಾನವಾಗಿದೆ. ಈ ವಿಷಯವು ರಾಮನಿಗೆ ತಿಳಿಯದು. ಈ ಕಾರಣದಿಂದಲೇ ಅವನಿಲ್ಲಿಗೆ ಬರುತ್ತಿದ್ದಾನೆ. ಪರ್ವತದ ಗುಹೆಯಲ್ಲಿ ಸುಖವಾಗಿ ಮಲಗಿರುವ ಸಿಂಹಕ್ಕೆ ಸಮಾನನಾಗಿರುವ, ಕೋಪ ಗೊಂಡು ಕುಳಿತಿರುವ ಮೃತ್ಯುವಿನಂತೆ ಅತಿಭಯಂಕರನಾಗಿರುವ ರಾವಣನನ್ನು ಯಾರು ತಾನೇ ಎಚ್ಚರಗೊಳಿಸಲು ಬಯಸುತ್ತಾರೆ? ಯುದ್ಧದಲ್ಲಿ ನನ್ನ ಧನುಸ್ಸಿನಿಂದ ಹೊರಡುವ ಎರಡು ನಾಲಿಗೆಗಳುಳ್ಳ ಸರ್ಪದಂತಿರುವ ಬಾಣಗಳ ವೇಗವನ್ನು ರಾಮನಿನ್ನೂ ನೋಡಿರುವುದಿಲ್ಲ. ಆದುದರಿಂದಲೇ ಅವನು ನನ್ನೊಡನೆ ಯುದ್ಧಮಾಡಲು ಅಪೇಕ್ಷಿಸುತ್ತಿದ್ದಾನೆ. ಬಹಳ ಶೀಘ್ರವಾಗಿಯೇ ನಾನು ಧನುಸ್ಸಿನಿಂದ ಹೊರಬೀಳುವ ವಜ್ರಾಯುಧಕ್ಕೆ ಸಮಾನವಾದ ನೂರಾರು ಬಾಣಗಳಿಂದ–ಪಂಜುಗಳಿಂದ ಮದಿಸಿದ ಆನೆಯನ್ನು ಸುಡುವಂತೆ–ರಾಮನನ್ನು ಸುಟ್ಟುಹಾಕುತ್ತೇನೆ. ಪ್ರಾತಃಕಾಲದಲ್ಲಿ ಉದಯಿಸಿದ ಸೂರ್ಯನು ನಕ್ಷತ್ರಗಳ ಪ್ರಭೆಯನ್ನು ಸೆಳೆದುಕೊಳ್ಳುವಂತೆ ವಿಶಾಲವಾದ ರಾಕ್ಷಸಸೈನ್ಯದಿಂದ ಸಮಾವೃತನಾದ ನಾನು ವಾನರಸೈನ್ಯವನ್ನು ವಿನಾಶಗೊಳಿ ಸುತ್ತೇನೆ. ಯುದ್ಧದಲ್ಲಿ ಸಹಸ್ರಾಕ್ಷನಾದ ಇಂದ್ರನಾಗಲೀ ವರುಣನಾಗಲೀ ನನ್ನನ್ನು ಎದುರಿಸಿ ನಿಲ್ಲಲಾರರು. ಹಿಂದೆ ನಾನು ಕುಬೇರನಿಂದ ಪರಿಪಾಲಿಸಲ್ಪಡುತ್ತಿದ್ದ ಈ ಲಂಕಾಪಟ್ಟಣವನ್ನು ನನ್ನ ಬಾಹುಬಲದಿಂದಲೇ ಗೆದ್ದುಕೊಂಡಿದ್ದೇನೆ.”

೧೩ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೪ನೆಯ ಸರ್ಗ

## ವಿಭೀಷಣನು ಶ್ರೀರಾಮನ ಅಜೇಯತ್ವವನ್ನು ಪ್ರತಿಪಾದಿಸುತ್ತಾ ಸೀತೆಯನ್ನು ರಾಮನಿಗೆ ಒಪ್ಪಿಸಲು ಸಲಹೆಯಿತ್ತುದು

ನಿಶಾಚರೇನ್ದ್ರಸ್ಯ ನಿಶಮ್ಯ ವಾಕ್ಯಂ
ಸ ಕುಮ್ಭಕರ್ಣಸ್ಯ ಚ ಗರ್ಜಿತಾನಿ ।
ವಿಭೀಷಣೋ ರಾಕ್ಷಸರಾಜಮುಖ್ಯ-
ಮುವಾಚ ವಾಕ್ಯಂ ಹಿತಮರ್ಥಯುಕ್ತಮ್ ॥೧॥

ರಾಕ್ಷಸರಾಜನಾದ ರಾವಣನ ಈ ಮಾತುಗಳನ್ನೂ ಕುಂಭಕರ್ಣನ ಗರ್ಜನೆಗಳನ್ನೂ ಕೇಳಿ ವಿಭೀಷಣನು ರಾವಣನಿಗೆ ಪ್ರಯೋಜನಕರವೂ ಹಿತಕರವೂ ಆದ ಈ ಮಾತನ್ನು ಹೇಳಿದನು :

"ಮಹಾರಾಜ! ಸೀತೆಯೆಂಬ ಹೆಸರಿನ ವಿಶಾಲವಾದ ಶರೀರವನ್ನು ಹೊಂದಿರುವ ಮಹಾಸರ್ಪವನ್ನು ನಿನ್ನ ಕುತ್ತಿಗೆಗೆ ಯಾರು ಹಾಕಿದರು? ಅವಳ ಎರಡು ತೋಳುಗಳ ನಡುವೆ ಇರುವ ಹೃದಯವೇ ಮಹಾಸರ್ಪದ ಶರೀರವೆಂದು ತಿಳಿ. ಅವಳ ಪತಿಯ ಸಂಬಂಧವಾದ ಚಿಂತೆಯೆಂಬುದೇ ಹಾವಿನ ಮಹಾವಿಷ. ಅವಳ ಮುಗುಳ್ನಗೆಯೇ ಹಾವಿನ ತೀಕ್ಷ್ಣವಾದ ಹಲ್ಲು. ಅವಳ ಕೈಗಳಲ್ಲಿರುವ ಐದೈದು ಬೆರಳುಗಳೇ ಹಾವಿನ ಐದು ಹೆಡೆಗಳು. ಅಂತಹ ವಿಷಸರ್ಪವನ್ನು ನೀನು ನಿನ್ನ ಕುತ್ತಿಗೆಗೆ ಹಾಕಿಕೊಂಡಿರುವೆ. ಪರ್ವತ ಶಿಖರದಂತೆ ಎತ್ತರವಾಗಿರುವ, ಹಲ್ಲುಗಳು ಮತ್ತು ಉಗುರುಗಳೇ ಆಯುಧ ವಾಗಿರುವ ವಾನರರು ಲಂಕೆಯ ಮೇಲೆ ದಂಡೆತ್ತಿ ಬರುವುದರೊಳಗಾಗಿಯೇ ಶ್ರೀರಾಮನಿಗೆ ಸೀತೆಯನ್ನು ಒಪ್ಪಿಸಿಬಿಡು. ಶ್ರೀರಾಮನಿಂದ ಬಿಡಲ್ಪಡುವ, ವಾಯುಸಮಾನವೇಗವುಳ್ಳ, ವಜ್ರಾಯುಧಕ್ಕೆ ಸಮಾನವಾದ ಬಾಣಗಳು ರಾಕ್ಷಸಶ್ರೇಷ್ಠರ ಕತ್ತುಗಳನ್ನು ಹಾರಿಸುವುದರ ಮೊದಲೇ ಶ್ರೀರಾಮನಿಗೆ ಸೀತೆ ಯನ್ನು ಒಪ್ಪಿಸಿಬಿಡು. ಮಹಾರಾಜ! ಕುಂಭಕರ್ಣನಾಗಲೀ, ಇಂದ್ರಜಿತು ವಾಗಲೀ, ಮಹಾಪಾರ್ಶ್ವ-ಮಹೋದರರಾಗಲೀ, ನಿಕುಂಭ-ಕುಂಭರಾಗಲೀ, ಅತಿಕಾಯನೇ ಆಗಲೀ ರಣರಂಗದಲ್ಲಿ ಶ್ರೀರಾಮನಿಗೆ ಎದುರಾಗಿ ನಿಲ್ಲಲು

ಖಂಡಿತವಾಗಿಯೂ ಸಮರ್ಥರಲ್ಲ. ಸೂರ್ಯ-ವಾಯುಗಳೇ ನಿನ್ನನ್ನು ರಕ್ಷಿಸಲು ಬಂದರೂ, ನೀನು ಯಮ ಮತ್ತು ಇಂದ್ರರ ಹೊಟ್ಟೆಯಲ್ಲಿ ಹೊಕ್ಕರೂ, ಆಕಾಶ-ಪಾತಾಲಗಳನ್ನು ಪ್ರವೇಶಿಸಿದರೂ ಶ್ರೀರಾಮನ ಕೈಯಿಂದ ಜೀವಸಹಿತನಾಗಿ ತಪ್ಪಿಸಿಕೊಳ್ಳಲಾರೆ."

ವಿಭೀಷಣನ ಈ ಮಾತುಗಳನ್ನು ಕೇಳಿ ಪ್ರಹಸ್ತನು ಹೇಳಿದನು :

"ನಾವು ದೇವತೆಗಳಿಗೇ ಆಗಲೀ ದಾನವರಿಗೇ ಆಗಲೀ ಭಯಪಡತಕ್ಕ ವರಲ್ಲ. ಭಯವೆಂದರೇನೆಂಬುದೇ ನಮಗೆ ತಿಳಿಯದು. ನಮಗೆ ಯುದ್ಧದಲ್ಲಿ ಯಕ್ಷ-ಗಂಧರ್ವರಿಂದಾಗಲೀ, ಮಹಾಸರ್ಪಗಳಿಂದಾಗಲೀ, ಪಕ್ಷಿಗಳಿಂದಾ ಗಲೀ, ನಾಗಗಳಿಂದಾಗಲೀ ಭಯವಿಲ್ಲ. ಹೀಗಿರುವಾಗ ಯುದ್ಧದಲ್ಲಿ ಮನುಷ್ಯೇಂದ್ರನಾದ ದಶರಥನ ಮಗನಾದ ರಾಮನಿಂದ ಭಯವು ಹೇಗೆ ತಾನೇ ಬಂದಿತು?"

ಪ್ರಹಸ್ತನ ಆ ಅಹಿತಕರವಾದ ಮಾತನ್ನು ಕೇಳಿ, ರಾಜನಿಗೆ ಹಿತವನ್ನೇ ಬಯಸುವವನಾಗಿ, ಧರ್ಮಾರ್ಥ-ಕಾಮಗಳಲ್ಲಿ ನಿಶ್ಚಿತವಾದ ಬುದ್ಧಿಯುಳ್ಳವ ನಾಗಿದ್ದ ವಿಭೀಷಣನು ಮಹಾಪ್ರಯೋಜನಕಾರಿಯಾದ ಈ ಮಾತನ್ನು ಪುನಃ ಹೇಳಿದನು :

"ಪ್ರಹಸ್ತನೇ! ಅಧರ್ಮದಲ್ಲಿಯೇ ಬುದ್ಧಿಯಿರುವವನಿಗೆ ಸ್ವರ್ಗಕ್ಕೆ ಹೋಗಲು ಸಾಧ್ಯವಿಲ್ಲ. ಹಾಗೆಯೇ–ರಾವಣ, ಮಹೋದರ,* ನೀನು, ಕುಂಭಕರ್ಣ ಎಲ್ಲರೂ ರಾಮನ ವಿಷಯದಲ್ಲಿ ಯಾವ ಅರ್ಥವು ಬರುವಂತೆ ಮಾತನಾಡುತ್ತಿರುವಿರೋ–ಅದನ್ನು ಕಾರ್ಯಗತಮಾಡಲು ಸಾಧ್ಯವಾಗು ವುದಿಲ್ಲ.

ಅರ್ಥವಿಶಾರದನಾದ ಶ್ರೀರಾಮನನ್ನು ಸಂಹರಿಸಲು ನನ್ನಿಂದಾಗಲೀ, ನಿನ್ನಿಂದಾಗಲೀ, ಸಮಸ್ತರಾದ ರಾಕ್ಷಸರಿಂದಲೇ ಆಗಲೀ ಹೇಗೆ ತಾನೇ ಸಾಧ್ಯ ವಾಗುತ್ತದೆ? ನೌಕೆಯಾಗಲೀ, ದೋಣಿಯಾಗಲೀ ಇಲ್ಲದೇ ಮಹಾಸಮುದ್ರ ವನ್ನು ದಾಟಲು ಸಾಧ್ಯವಾಗುವುದೇ?

---

* ಮಹೋದರನೆಂಬ ರಾಕ್ಷಸನು ಈ ಹಿಂದೆ ಮಾತನಾಡಿದ ಪ್ರಸಂಗವು ಬಂದಿಲ್ಲ. ಆದರೂ ವಿಭೀಷಣನು ಈ ಮಾತನ್ನು ಹೇಳಿರುವುದರಿಂದ ಮಹೋದರನೆಂಬುವನೂ ರಾವಣನಿಗೆ ಒತ್ತಾಸೆನೀಡಿ ಮಾತನಾಡಿದನೆಂದು ಭಾವಿಸಬೇಕಾಗಿದೆ.

ಶ್ರೀರಾಮನು ಜೀವನದಲ್ಲಿ ಧರ್ಮವೇ ಪ್ರಧಾನವೆಂದು ಭಾವಿಸಿರತಕ್ಕವನು. ಸುಪ್ರಸಿದ್ಧವಾದ ಇಕ್ಷ್ವಾಕುವಂಶದಲ್ಲಿ ಜನ್ಮವನ್ನು ತಾಳಿದ್ದಾನೆ. ಮಹಾರಥನಾದ ಅವನು ಸಮಸ್ತಕಾರ್ಯಗಳನ್ನೂ ಸಾಧಿಸಲು ಸಮರ್ಥನಾಗಿದ್ದಾನೆ. ಇಂತಹ ಪ್ರಸಿದ್ಧಪರಾಕ್ರಮಿಯಾದ ಶ್ರೀರಾಮನ ಎದುರಾಗಿ ನಿಲ್ಲುವ ದೇವತೆಗಳು ಕೂಡ ಮೂಢರಾಗುತ್ತಾರೆ. ಪ್ರಹಸ್ತ! ಶ್ರೀರಾಮನಿಂದ ಬಿಡಲ್ಪಡುವ ಗೃಧ್ರದ ರೆಕ್ಕೆಗಳಿಂದ ಯುಕ್ತವಾದ, ದುರ್ಜಯವಾದ ಮತ್ತು ಸುತೀಕ್ಷ್ಣವಾದ ಬಾಣಗಳು ಎಲ್ಲಿಯವರೆಗೆ ನಿನ್ನ ಶರೀರವನ್ನು ಭೇದಿಸಿ ಒಳಗೆ ಪ್ರವೇಶಿಸುವುದಿಲ್ಲವೋ ಅಲ್ಲಿಯವರೆಗೆ ನೀನು ಹೀಗೆಯೇ ಹರಟುತ್ತಿರುವೆ. ಎದುರಾಳಿಯ ಪ್ರಾಣಗಳನ್ನೇ ಅಂತಗೊಳಿಸುವ, ವಜ್ರಾಯುಧಕ್ಕೆ ಸಮಾನವಾದ ವೇಗವುಳ್ಳ, ತೀಕ್ಷ್ಣವಾದ ಬಾಣಗಳು ರಾಘವನ ಧನುಸ್ಸಿನಿಂದ ಬಿಡಲ್ಪಟ್ಟು ನಿನ್ನ ಶರೀರವನ್ನು ಭೇದಿಸಿ ಇನ್ನೂ ಒಳಗೆ ಪ್ರವೇಶಿಸಿಲ್ಲ. ಆದುದರಿಂದಲೇ ನೀನು ಹೀಗೆಲ್ಲಾ ಹರಟುತ್ತಿರುವೆ. ರಾವಣನಾಗಲೀ, ಮಹಾಬಲಿಷ್ಠನಾದ ತ್ರಿಶಿರಸನಾಗಲೀ, ಕುಂಭಕರ್ಣನ ಮಗನಾದ ನಿಕುಂಭನಾಗಲೀ, ಇಂದ್ರನನ್ನೇ ಜಯಿಸಿರುವ ಮೇಘನಾದನಾಗಲೀ ಇಂದ್ರನಿಗೆ ಸಮಾನನಾದ ದಶರಥನ ಮಗನಾದ ಶ್ರೀರಾಮನ ವೇಗವನ್ನು ಸಹಿಸಲು ಸಮರ್ಥರಲ್ಲ. ದೇವಾಂತಕನಾಗಲೀ, ನರಾಂತಕನಾಗಲೀ, ಅತಿಕಾಯನಾಗಲೀ, ಮಹಾಕಾಯನಾಗಲೀ, ಅತಿರಥನಾಗಲೀ, ಪರ್ವತಕ್ಕೆ ಸಮನಾದ ಶಕ್ತಿಯಿರುವ ಅಕಂಪನನಾಗಲೀ ಯುದ್ಧದಲ್ಲಿ ಶ್ರೀರಾಮನಿಗೆ ಎದುರಾಗಿ ನಿಲ್ಲಲು ಶಕ್ತರಲ್ಲ. ಈ ರಾವಣರಾಜನಾದರೋ ವ್ಯಸನಗಳಿಗೆ ವಶವಾಗಿರತಕ್ಕವನು.* ಆದುದರಿಂದ ಇವನು ಯಾವ ಕಾರ್ಯವನ್ನೇ ಆಗಲೀ ಚೆನ್ನಾಗಿ ಸಮಾಲೋಚಿಸಿ ಮಾಡುವವನಲ್ಲ. ಮೇಲಾಗಿ ಇವನು ಸ್ವಾಭಾವಿಕವಾಗಿಯೇ ಮಹಾಕ್ರೂರನು. ರಾಕ್ಷಸರ ವಿನಾಶಾರ್ಥವಾಗಿ ಶತ್ರುತುಲ್ಯರಾದ ನೀವು ಮಿತ್ರರ ರೂಪದಲ್ಲಿ ಇವನ ಸೇವೆಯನ್ನು ಮಾಡುತ್ತಿರುವಿರಿ. ಅನಂತವಾದ ಶಾರೀರಕಬಲದಿಂದ

---

* ಕಾಮಂದಕನೀತಿಯಲ್ಲಿ ರಾಜನ ಏಳು ವ್ಯಸನಗಳನ್ನು ಹೇಳಿದ್ದಾರೆ. ವಾಗ್ದಣ್ಡಯೋಶ್ಚ ಪಾರುಷ್ಯಮರ್ಥದೂಷಣಮೇವ ಚ । ಪಾನಂ ಸ್ತ್ರೀ ಮೃಗಯಾ ದ್ಯೂತಂ ವ್ಯಸನಂ ಸಪ್ತಧಾ ಪ್ರಭೋಃ॥ ಕಠೋರ ಮಾತು, ಕಠೋರ ಶಿಕ್ಷೆ, ಧನದ ಅಪವ್ಯಯ, ಮದ್ಯಪಾನ, ಸ್ತ್ರೀವಿಲಾಸ, ಬೇಟೆ ಮತ್ತು ದ್ಯೂತ–ಇವು ರಾಜನ ಏಳು ವ್ಯಸನಗಳು.

ಸಂಪನ್ನನಾದ, ಸಾವಿರ ತಲೆಗಳುಳ್ಳ, ಭಯಂಕರನಾದ, ಮಹಾಬಲಿಷ್ಠನಾದ ಶೇಷನಾಗನಿಂದ ಬಲಪೂರ್ವಕವಾಗಿ ಸುತ್ತಲ್ಪಟ್ಟಿರುವ ಈ ರಾಜನನ್ನು ನೀವೆಲ್ಲರೂ ಸೇರಿ ಮೇಲೆತ್ತಿ ಬಂಧನದಿಂದ ಬಿಡುಗಡೆಮಾಡಿರಿ. ಈ ನಮ್ಮ ರಾಜನು ಇದುವರೆಗೂ ನಿಮ್ಮ ಕಾಮನೆಗಳೆಲ್ಲವನ್ನೂ ಪೂರ್ಣಗೊಳಿಸಿದ್ದಾನೆ. ನೀವೆಲ್ಲರೂ ಇವನ ಸುಹೃದರೂ ಹಿತೈಷಿಗಳೂ ಆಗಿರುವಿರಿ. ಆದುದರಿಂದ ನೀವೆಲ್ಲರೂ ಸೇರಿ–ಭಯಂಕರವಾದ ಭೂತದಿಂದ ಪೀಡಿತನಾದ ಪುರುಷನನ್ನು ಅವನ ಹಿತೈಷಿಗಳು ಬಲಾತ್ಕಾರದಿಂದಲಾದರೂ ಆ ಮಹಾಭೂತದಿಂದ ಬಿಡಿಸಿಕೊಳ್ಳುವಂತೆ–ಈ ರಾವಣನನ್ನು ಮೃತ್ಯುಪಾಶದಿಂದ ಬಿಡಿಸಿಕೊಳ್ಳಬೇಕಾಗಿದೆ. ಅವಶ್ಯಕತೆಯುಂಟಾದರೆ ಇವನ ಮುಡಿಯನ್ನಾದರೂ ಹಿಡಿದು ಅನುಚಿತವಾದ ಮಾರ್ಗದಲ್ಲಿ ಹೋಗುತ್ತಿರುವ ಇವನನ್ನು ತಡೆದು ರಕ್ಷಿಸಬೇಕಾಗಿದೆ. ರಾವಣನೀಗ ಅಗಾಧವಾದ ನೀರಿರುವ ರಾಘವನೆಂಬ ಸಾಗರದಲ್ಲಿ ಬಿದ್ದು ಮುಚ್ಚಿ ಹೋಗುತ್ತಿದ್ದಾನೆ. ಅಥವಾ ಕಾಕುತ್ಸ್ಥನೆಂಬ ಪಾತಾಲದಲ್ಲಿ ಬಿದ್ದುಹೋಗುತ್ತಿದ್ದಾನೆ. ಇಂತಹ ಸಮಯದಲ್ಲಿ ನೀವೆಲ್ಲರೂ ಸೇರಿ ಇವನನ್ನು ಉದ್ಧರಿಸುವುದು ಯುಕ್ತವಾಗಿದೆ. ನಾನಾದರೋ ರಾಕ್ಷಸರಿಂದ ಕೂಡಿರುವ ಈ ಲಂಕಾಪಟ್ಟಣದ ಮತ್ತು ಸುಹೃದರಿಂದ ಕೂಡಿದ ರಾವಣರಾಜನ ಹಿತಕ್ಕಾಗಿ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುತ್ತೇನೆ :

**ನರೇನ್ದ್ರಪುತ್ರಾಯ ದದಾತು ಪತ್ನೀಮ್ ॥**

ರಾವಣನು ನರೇಂದ್ರನ ಮಗನಾದ ಶ್ರೀರಾಮನಿಗೆ ಸೀತಾದೇವಿಯನ್ನು ಒಪ್ಪಿಸಿಬಿಡಲಿ. ಒಳ್ಳೆಯ ಮಂತ್ರಿಯು ತನ್ನ ಮತ್ತು ಶತ್ರುಪಕ್ಷದ ಬಲ-ಪರಾಕ್ರಮಗಳನ್ನು ತಿಳಿದುಕೊಳ್ಳಬೇಕು. ಎರಡು ಪಕ್ಷಗಳ ಸ್ಥಿತಿ, ಹಾನಿ ಮತ್ತು ವೃದ್ಧಿಗಳನ್ನು ತನ್ನ ಬುದ್ಧಿಯಿಂದ ವಿಚಾರಮಾಡಬೇಕು. ಅನಂತರವೇ ಅವನು ಸ್ವಾಮಿಗೆ ಹಿತಕರವಾದ ಮತ್ತು ಉಚಿತವಾದ ಮಾತನ್ನು ಹೇಳಬೇಕು.”

೧೪ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೫ನೆಯ ಸರ್ಗ

## ಇಂದ್ರಜಿತುವು ವಿಭೀಷಣನನ್ನು ಹಾಸ್ಯಮಾಡಿದುದು : ವಿಭೀಷಣನು ಅವನನ್ನು ನಿಂದಿಸುತ್ತಾ ತನ್ನ ಅಭಿಪ್ರಾಯವನ್ನು ಪುನಃ ಪ್ರತಿಪಾದಿಸಿದುದು

**ಬೃಹಸ್ಪತೇಸ್ತುಲ್ಯಮತೇರ್ವಚಸ್ತ-**
**ನ್ನಿಶಮ್ಯ ಯತ್ನೇನ ವಿಭೀಷಣಸ್ಯ ।**
**ತತೋ ಮಹಾತ್ಮಾ ವಚನಂ ಬಭಾಷೇ**
**ತದೇನ್ದ್ರಜಿನ್ನೈರ್‌ಋತಯೋಧಮುಖ್ಯಃ ॥೧॥**

ಬೃಹಸ್ಪತಿಯ ಬುದ್ಧಿಗೆ ಸಮಾನವಾದ ಬುದ್ಧಿಯಿಂದ ಕೂಡಿದ್ದ ವಿಭೀಷಣನ ಮಾತುಗಳನ್ನು ಪ್ರಯತ್ನಪೂರ್ವಕವಾಗಿ ಕೇಳಿದನಂತರ ರಾಕ್ಷಸ ಸೈನಿಕರಿಗೆ ಮುಖ್ಯಸ್ಥನಾದ ಮಹಾತ್ಮನಾದ ಇಂದ್ರಜಿತುವು ಹೇಳಿದನು :

**ಕಿಂ ನಾಮ ತೇ ತಾತ ಕನಿಷ್ಠವಾಕ್ಯ-**
**ಮನರ್ಥಕಂ ಚೈವ ಸುಭೀತವಚ್ಚ ।**
**ಅಸ್ಮಿನ್ಕುಲೇ ಯೋಽಪಿ ಭವೇನ್ನಜಾತಃ**
**ಸೋಽಪೀದೃಶಂ ನೈವ ವದೇನ್ನ ಕುರ್ಯಾತ್ ॥೨॥**

“ಚಿಕ್ಕಪ್ಪ! ನೀನು ಬಹಳ ಭಯಪಟ್ಟುಕೊಂಡಿರುವವನಂತೆ ನಿರರ್ಥಕವಾದ ಈ ಮಾತುಗಳನ್ನೇಕೆ ಆಡುತ್ತಿರುವೆ? ಹೀಗೆ ಮಾತನಾಡುವವ ನಾಗಲೀ, ಇಂತಹ ಕಾರ್ಯವನ್ನು ಮಾಡುವವನಾಗಲೀ ನಮ್ಮ ಕುಲದಲ್ಲಿ ಹುಟ್ಟಲೇ ಬಾರದಾಗಿತ್ತು.

ತಂದೆಯೇ! ನಮ್ಮ ಈ ರಾಕ್ಷಸರ ವಂಶದಲ್ಲಿ ಈ ಚಿಕ್ಕಪ್ಪನೊಬ್ಬನೇ ಹೀಗೆ ಬಲ-ವೀರ್ಯ-ಪರಾಕ್ರಮಗಳಿಂದಲೂ ಧೈರ್ಯ-ಶೌರ್ಯ-ತೇಜಸ್ಸುಗಳಿಂದಲೂ ರಹಿತನಾಗಿದ್ದಾನೆ.

ಹೇಡಿಯೇ! ಚಿಕ್ಕಪ್ಪ! ಆ ಮಾನವರಾಜಕುಮಾರರು ಎಷ್ಟು ಮಾತ್ರದವರು? ನಮ್ಮಲ್ಲಿರುವ ಸಾಧಾರಣರಾಕ್ಷಸನೊಬ್ಬನೇ ಅವರಿಬ್ಬರನ್ನೂ ಸಂಹರಿಸಬಲ್ಲನು. ಹೀಗಿರುವಾಗ ನೀನೇಕೆ ಹೀಗೆ ನಮ್ಮನ್ನು ಭಯ ಪಡಿಸುತ್ತಿರುವೆ? ನಾನಾದರೋ ಮೂರು ಲೋಕಗಳಿಗೂ ಅಧಿಪತಿಯಾದ

ದೇವರಾಜನಾದ ಇಂದ್ರನನ್ನೇ ಸ್ವರ್ಗದಿಂದ ಸೆಳೆದು ತಂದು ಭೂಮಿಯಲ್ಲಿ ಬಂಧಿಸಿಟ್ಟಿದ್ದೆನು. ಆ ಸಮಯದಲ್ಲಿ ಸಮಸ್ತದೇವತೆಗಳೂ ಭಯಪೀಡಿತರಾಗಿ ದಿಕ್ಕಾಪಾಲಾಗಿ ಓಡಿಹೋದರು. ಬಲಪೂರ್ವಕವಾಗಿ ನಾನು ಐರಾವತದ ಎರಡು ದಂತಗಳನ್ನೂ ಕಿತ್ತುಹಾಕಿ ಅದನ್ನು ಭೂಮಿಯ ಮೇಲೆ ಕೆಡವಿದೆನು. ಆ ಸಮಯದಲ್ಲಿ ಆ ಆನೆಯು ಗಟ್ಟಿಯಾಗಿ ಕಿರುಚಿಕೊಳ್ಳುತ್ತಿದ್ದಿತು. ಆ ನನ್ನ ಭಯಂಕರಪರಾಕ್ರಮದಿಂದ ನಾನು ಸಮಸ್ತದೇವತೆಗಳನ್ನೂ ಭಯದಿಂದ ನಡುಗಿಸಿಬಿಟ್ಟೆನು. ಅಂತಹ ನಾನು ದೇವತೆಗಳ ದರ್ಪವನ್ನೂ ದಮನ ಮಾಡಲು ಸಮರ್ಥನಾಗಿದ್ದೇನೆ. ದೊಡ್ಡ-ದೊಡ್ಡ ದೈತ್ಯರಿಗೂ ಶೋಕ ವನ್ನುಂಟುಮಾಡುವ ಸಾಮರ್ಥ್ಯವು ನನಗಿದೆ. ಹೀಗಿರುವಾಗ ಒಳ್ಳೆಯ ವೀರ್ಯ-ಪರಾಕ್ರಮವುಳ್ಳ ನಾನು ಮನುಷ್ಯಮಾತ್ರದವರಾದ ಸಾಮಾನ್ಯರಾದ ರಾಜಪುತ್ರರನ್ನು ಎದುರಿಸಲು ಹೇಗೆ ಶಕ್ತನಾಗುವುದಿಲ್ಲ?"

ಇಂದ್ರಸದೃಶನಾದ, ಶತ್ರುಗಳಿಂದ ಎದುರಿಸಲು ಅಸಾಧ್ಯನಾದ, ಮಹಾ ತೇಜಸ್ವಿಯಾದ ಇಂದ್ರಜಿತುವಿನ ಈ ಮಾತನ್ನು ಕೇಳಿ ಶಸ್ತ್ರಧಾರಿಗಳಲ್ಲಿ ಶ್ರೇಷ್ಠ ನಾದ ವಿಭೀಷಣನು ಮಹಾರ್ಥಯುಕ್ತವಾದ ಈ ಮಾತನ್ನು ಹೇಳಿದನು :

"ಮಗು! ನೀನಿನ್ನೂ ಬಾಲಕನು. ನಿನ್ನ ಬುದ್ಧಿಯು ಸ್ವಲ್ಪವೂ ಪಕ್ವವಾಗಿಲ್ಲ. ನಿನಗೆ ಕರ್ತವ್ಯಾಕರ್ತವ್ಯಗಳ ವಿಷಯದಲ್ಲಿ ನಿಶ್ಚಿತವಾದ ಬುದ್ಧಿ ಇಲ್ಲ. ಆದುದರಿಂದ ಆತ್ಮನಾಶಕ್ಕಾಗಿಯೇ ನೀನು ನಿರರ್ಥಕವಾದ ಈ ಅನೇಕ ಮಾತುಗಳನ್ನಾಡುತ್ತಿರುವೆ. ಮೇಘನಾದ! ನೀನು ರಾವಣನಿಗೆ ಮಗನೆಂದು ಹೇಳಿಕೊಂಡು ಬಹಿರಂಗದಲ್ಲಿ ಅವನ ಮಿತ್ರನಂತೆ ತೋರ್ಪಡಿಸಿಕೊಳ್ಳು ತ್ತಿರುವೆ. ಆದರೆ ಅಂತರಂಗದಲ್ಲಿ ನೀನು ನಿನ್ನ ತಂದೆಗೆ ನಿಜವಾದ ಶತ್ರುವೇ ಆಗಿರುವೆ. ಏಕೆಂದರೆ : ನೀನು ರಾಘವನಿಂದ ರಾಕ್ಷಸರ ವಿನಾಶವಾಗುವು ದೆಂಬುದನ್ನು ಕೇಳಿಯೂ ಮೋಹವಶನಾಗಿ ಅವನೊಡನೆ ಯುದ್ಧಮಾಡಲು ಅನುಮತಿಸುತ್ತಿರುವೆ. ನಿನ್ನ ಬುದ್ಧಿಯೀಗ ಬಹಳ ಕೆಟ್ಟಿದೆ. ಈಗ ನಿಶ್ಚಯ ವಾಗಿಯೂ ನೀನು ವಧಾರ್ಹನೇ ಆಗಿರುವೆ. ನಿನ್ನನ್ನು ಇಲ್ಲಿಗೆ ಕರೆಸಿಕೊಂಡಿ ರುವ ಈ ನಿನ್ನ ತಂದೆಯೂ ವಧಾರ್ಹನೇ ಸರಿ. ಏಕೆಂದರೆ : ಬಾಲಕನಾದ ಮತ್ತು ದುಃಸಾಹಸಿಯಾಗಿರುವ ನಿನ್ನನ್ನು ಈ ಮಂತ್ರಾಲೋಚಕರ ಸಭೆಗೆ ನಿನ್ನ ತಂದೆಯು ಕರೆತಂದಿರುವನಲ್ಲವೇ? ಮೇಘನಾದ! ನೀನು ಅವಿವೇಕಿ. ನಿನ್ನ

ಬುದ್ಧಿಯು ಪರಿಪಕ್ವವಾಗಿಲ್ಲ. ನಿನಗೆ ವಿನಯವೆಂಬುದೇ ಇಲ್ಲ. ನಿನ್ನ ಸ್ವಭಾವವು ಅತಿತೀಕ್ಷ್ಣವಾದುದು. ಅಲ್ಪಬುದ್ಧಿಯ ದುರಾತ್ಮನು ನೀನು. ಮೂರ್ಖನು. ದುರ್ಬುದ್ಧಿಯವನು. ಆದುದರಿಂದಲೇ ನೀನು ಹುಡುಗುತನದ ಮಾತುಗಳನ್ನಾಡುತ್ತಿರುವೆ. ಯುದ್ಧದಲ್ಲಿ ರಾಮನಿಂದ ಶತ್ರುಗಳ ಸಮಕ್ಷದಲ್ಲಿ ಬಿಡಲ್ಪಡುವ, ಬ್ರಹ್ಮದಂಡದಂತೆ ಪ್ರಕಾಶಮಾನವಾದ ಜ್ವಾಲೆಯಿಂದ ಕೂಡಿರುವ, ಕಾಲನಂತೆಯೇ ರೂಪವುಳ್ಳ, ಯಮದಂಡಸದೃಶವಾದ ಬಾಣಗಳನ್ನು ಯಾವನು ತಾನೇ ಸಹಿಸಿಕೊಳ್ಳುವನು?

**ಧನಾನಿ ರತ್ನಾನಿ ವಿಭೂಷಣಾನಿ**
**ವಾಸಾಂಸಿ ದಿವ್ಯಾನಿ ಮಣೀಂಶ್ಚ ಚಿತ್ರಾನ್ ।**
**ಸೀತಾಂ ಚ ರಾಮಾಯ ನಿವೇದ್ಯ ದೇವೀಂ**
**ವಸೇಮ ರಾಜನ್ನಿಹ ವೀತಶೋಕಾಃ ॥೧೪॥**

ಮಹಾರಾಜ! ಧನ-ರತ್ನಗಳನ್ನೂ, ಸುಂದರವಾದ ಆಭರಣಗಳನ್ನೂ, ದಿವ್ಯವಾದ ವಸ್ತ್ರಗಳನ್ನೂ, ವಿಚಿತ್ರಮಣಿಗಳನ್ನೂ ಸೀತಾದೇವಿಯೊಡನೆ ಶ್ರೀರಾಮನಿಗೆ ಸಮರ್ಪಿಸಿ ಶೋಕರಹಿತರಾಗಿ ಈ ಲಂಕೆಯಲ್ಲಿ ವಾಸಮಾಡಿ ಕೊಂಡಿರೋಣ."

ಗಿಜನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೬ನೆಯ ಸರ್ಗ

## ರಾವಣನು ವಿಭೀಷಣನ ಸಲಹೆಯನ್ನು ತಿರಸ್ಕರಿಸಿ ಅವಮಾನಿಸಿದುದು : ವಿಭೀಷಣನೂ ರಾವಣನನ್ನು ನಿಂದಿಸಿ ಸಭೆಯಿಂದ ಹೊರಟುಹೋದುದು

**ಸುನಿವಿಷ್ಟಂ ಹಿತಂ ವಾಕ್ಯಮುಕ್ತವನ್ತಂ ವಿಭೀಷಣಮ್ ।**
**ಅಬ್ರವೀತ್ಪರುಷಂ ವಾಕ್ಯಂ ರಾವಣಃ ಕಾಲಚೋದಿತಃ ॥೧॥**

ಒಳ್ಳೆಯ ರೀತಿಯಲ್ಲಿ ಮಂಡಿಸಲ್ಪಟ್ಟ, ಹಿತಕರವಾದ ವಿಭೀಷಣನ ಮಾತನ್ನು ಕೇಳಿ ಕಾಲಪ್ರೇರಿತನಾದ ರಾವಣನು ಅತ್ಯಂತಕಠೋರವಾದ ಈ ಮಾತನ್ನು ಹೇಳಿದನು :

**ವಸೇತ್ಸಹ ಸಪತ್ನೇನ ಕ್ರುದ್ಧೇನಾಶೀವಿಷೇಣ ವಾ ।**
**ನ ತು ಮಿತ್ರಪ್ರವಾದೇನ ಸಂವಸೇಚ್ಛತ್ರುಸೇವಿನಾ ॥೨॥**

"ಶತ್ರುವಿನೊಡನೆ ವಾಸಮಾಡಬಹುದು ; ಕೋಪಗೊಂಡಿರುವ ವಿಷಸರ್ಪದ ಜೊತೆಯಲ್ಲಾದರೂ ಇರಬಹುದು. ಆದರೆ ಮಿತ್ರನೆಂದು ಹೇಳಿಕೊಂಡು ಶತ್ರುವಿನ ಸೇವೆಮಾಡುವವನ ಜೊತೆಯಲ್ಲಿ ಖಂಡಿತ ವಾಗಿಯೂ ಇರಬಾರದು.

**ಜಾನಾಮಿ ಶೀಲಂ ಜ್ಞಾತೀನಾಂ ಸರ್ವಲೋಕೇಷು ರಾಕ್ಷಸ ।**
**ಹೃಷ್ಯನ್ತಿ ವ್ಯಸನೇಷ್ವೇತೇ ಜ್ಞಾತೀನಾಂ ಜ್ಞಾತಯಃ ಸದಾ ॥೩॥**

ರಾಕ್ಷಸ! ಮೂರು ಲೋಕಗಳಲ್ಲಿಯೂ ನಾನು ಜ್ಞಾತಿಗಳಾದವರ ಶೀಲಸ್ವಭಾವಗಳನ್ನು ಚೆನ್ನಾಗಿ ಬಲ್ಲೆನು. ದಾಯಾದರು ಯಾವಾಗಲೂ ತಮ್ಮ ಜ್ಞಾತಿಗಳ ವ್ಯಸನಗಳಲ್ಲಿ ಸಂತೋಷಪಡುತ್ತಾರೆ.

**ಪ್ರಧಾನಂ ಸಾಧನಂ ವೈದ್ಯಂ ಧರ್ಮಶೀಲಂ ಚ ರಾಕ್ಷಸ ।**
**ಜ್ಞಾತಯೋ ಹ್ಯವಮನ್ಯನ್ತೇ ಶೂರಂ ಪರಿಭವನ್ತಿ ಚ ॥೪॥**

ಯಾವನು ಜ್ಯೇಷ್ಠನಾಗಿರುವುದರಿಂದ ರಾಜ್ಯವನ್ನು ಪಡೆದು ಎಲ್ಲರಿಗೂ ಪ್ರಧಾನನಾಗುವನೋ, ರಾಜಕಾರ್ಯಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸಿ ಕೊಂಡು ಹೋಗುವನೋ, ವಿದ್ವಾಂಸನೋ, ಧರ್ಮಶೀಲನೋ ಮತ್ತು ಶೂರನೋ ಅಂತಹವನನ್ನು ಜ್ಞಾತಿಗಳು ಅವಮಾನಿಸುತ್ತಾರೆ ಮತ್ತು ಸಮಯವು ಸಿಕ್ಕಿದಾಗ ಮುಖಭಂಗಮಾಡುತ್ತಾರೆ.

**ನಿತ್ಯಮನ್ಯೋನ್ಯಸಂಹೃಷ್ಟಾ ವ್ಯಸನೇಷ್ವಾತತಾಯಿನಃ ।**
**ಪ್ರಚ್ಛನ್ನಹೃದಯಾ ಘೋರಾ ಜ್ಞಾತಯಸ್ತು ಭಯಾವಹಾಃ ॥೫॥**

ಜ್ಞಾತಿಗಳು ಯಾವಾಗಲೂ ಪರಸ್ಪರವಾಗಿ ಒಬ್ಬನಿಗೆ ಸಂಕಟವು ಒದಗಿ ತೆಂದರೆ ಸಂತೋಷಪಡುತ್ತಾರೆ. ಅವರು ಸಮಯಬಂದಾಗ ವಧೆಮಾಡಲು ಯತ್ನಿಸುತ್ತಾರೆ.* ಅವರು ಯಾವಾಗಲೂ ತಮ್ಮ ಅಭಿಪ್ರಾಯವನ್ನು ಗೋಪ್ಯ

---

* ಆತತಾಯೀ ವಧೋದ್ಯತಃ (ಅಮರಕೋಶ). ಬೆಂಕಿ ಇಡುವವನು, ವಿಷ ಹಾಕು ವವನು, ಕತ್ತಿಯಿಂದ ಹೊಡೆದು ಕೊಲ್ಲುವವನು, ಹಣವನ್ನು ಕಿತ್ತುಕೊಳ್ಳುವವನು, ಹೆಂಡತಿಯನ್ನು ಅಪಹರಿಸುವವನು, ಭೂಮಿಯನ್ನು ಕಿತ್ತುಕೊಳ್ಳುವವನು–ಈ ಐವರೂ

ವಾಗಿಯೇ ಇಟ್ಟುಕೊಂಡಿರುತ್ತಾರೆ. ಆದುದರಿಂದಲೇ ಅವರು ಕ್ರೂರಿಗಳೂ, ಭಯಂಕರರೂ ಆಗಿರುತ್ತಾರೆ.

ಹಿಂದೊಮ್ಮೆ ಪದ್ಮವನದಲ್ಲಿದ್ದ ಆನೆಗಳು ಹಗ್ಗಗಳನ್ನು ಹಿಡಿದಿದ್ದ ಮನುಷ್ಯರನ್ನು ನೋಡಿ ಕೆಲವು ಶ್ಲೋಕಗಳನ್ನು ಹಾಡಿದುವಂತೆ. ಆ ಶ್ಲೋಕ ಗಳನ್ನೇ ನಾನೂ ನಿನಗೆ ಹೇಳುವೆನು, ಕೇಳು :

**ನಾಗ್ನಿರ್ನಾನ್ಯಾನಿ ಶಸ್ತ್ರಾಣಿ ನ ನಃ ಪಾಶಾ ಭಯಾವಹಾಃ ।**
**ಘೋರಾಃ ಸ್ವಾರ್ಥಪ್ರಯುಕ್ತಾಸ್ತು ಜ್ಞಾತಯೋ ನೋ ಭಯಾವಹಾಃ ॥೭॥**

"ನಮಗೆ ಅಗ್ನಿಯಿಂದಾಗಲೀ, ಬೇರೆ ಬೇರೆ ಶಸ್ತ್ರಗಳಿಂದಾಗಲೀ, ಹಗ್ಗ ಗಳಿಂದಾಗಲೀ ಭಯವಿಲ್ಲ. ಸ್ವಾರ್ಥಿಗಳಾದ ಜ್ಞಾತಿಗಳೇ ನಮಗೆ ಭಯ ವನ್ನುಂಟುಮಾಡತಕ್ಕವರು.*

**ಉಪಾಯಮೇತೇ ವಕ್ಷ್ಯನ್ತಿ ಗ್ರಹಣೇ ನಾತ್ರ ಸಂಶಯಃ ।**
**ಕೃತ್ಸ್ನಾದ್ಭಯಾಜ್ಜ್ಞಾತಿಭಯಂ ಸುಕಷ್ಟಂ ವಿದಿತಂ ಚ ನಃ ॥೮॥**

ಇವರೆಲ್ಲರೂ ನಮ್ಮನ್ನು ಹಿಡಿಯಲು ಉಪಾಯವನ್ನೇನೋ ಹೇಳು ತ್ತಾರೆ. ಇದರಲ್ಲಿ ಸಂಶಯವೇ ಇಲ್ಲ. ಆದರೆ ಅದನ್ನು ಕಾರ್ಯಗತಮಾಡು ವವರು ನಮ್ಮ ಜ್ಞಾತಿಗಳೇ. ಆದುದರಿಂದ ಸಮಗ್ರಭಯದ ದೃಷ್ಟಿಯಿಂದ ನೋಡಿದರೆ ನಮ್ಮ ಜ್ಞಾತಿಗಳಿಂದ ಉಂಟಾಗುವ ಭಯವು ಅತ್ಯಂತಕಷ್ಟ ದಾಯಕವಾದುದು."

**ವಿದ್ಯತೇ ಗೋಷು ಸಂಪನ್ನಂ ವಿದ್ಯತೇ ಬ್ರಾಹ್ಮಣೇ ತಪಃ ।**
**ವಿದ್ಯತೇ ಸ್ತ್ರೀಷು ಚಾಪಲ್ಯಂ ವಿದ್ಯತೇ ಜ್ಞಾತಿತೋ ಭಯಮ್ ॥೯॥**

ಗೋವುಗಳಲ್ಲಿ ಸಂಪತ್ತು ಇರುತ್ತದೆ. (ಗೋವುಗಳನ್ನು ಧನದ ರೂಪ ದಲ್ಲಿಯೂ ಉಪಯೋಗಿಸುತ್ತಿದ್ದರು. ದಾನಕ್ಕಾಗಿಯೂ ಉಪಯೋಗಿಸು

---

ಆತತಾಯೀ ಎನಿಸುತ್ತಾರೆ. "ಅಗ್ನಿದೋ ಗರದಶ್ಚೈವ ಖಡ್ಗಘಾತೀ ಧನಾಪಹಃ । ಸ್ತ್ರಿಯೋ ಭುವೋಽಪಹರ್ತಾ ಚ ಷಡೇತೇ ಆತತಾಯಿನಃ ॥"

* ಪಳಗಿದ ಆನೆಯ ಮೂಲಕವೇ ಕಾಡಾನೆಯನ್ನು ಹಿಡಿಯುವುದು ಪದ್ಧತಿ.

ತ್ತಾರೆ.) ಆದುದರಿಂದ ಗೋವೇ ಸಂಪತ್ತು. ಬ್ರಾಹ್ಮಣರಲ್ಲಿ ತಪಸ್ಸಿರುತ್ತದೆ. ಸ್ತ್ರೀಯರಲ್ಲಿ ಚಾಪಲ್ಯವಿರುತ್ತದೆ. ಅಂತೆಯೇ ಜ್ಞಾತಿಗಳಿಂದ ಭಯವಿರುತ್ತದೆ.

ಸೌಮ್ಯನೇ! ವಿಭೀಷಣ! ನಾನು ಸಕಲಲೋಕಗಳಿಂದಲೂ ಸಮ್ಮಾನಿತನಾಗಿದ್ದೇನೆ. ಐಶ್ವರ್ಯವಂತನಾಗಿದ್ದೇನೆ. ಸತ್ಕುಲದಲ್ಲಿ ಹುಟ್ಟಿದ್ದೇನೆ. ಶತ್ರುಗಳ ತಲೆಯನ್ನು ಮೆಟ್ಟಿ ನಿಂತಿದ್ದೇನೆ. ಆದುದರಿಂದ ನನಗೆ ನೀನು ಹೇಳುತ್ತಿರುವುದು ಇಷ್ಟವಾಗುತ್ತಿಲ್ಲ.

**ಯಥಾ ಪುಷ್ಕರಪರ್ಣೇಷು ಪತಿತಾಸ್ತೋಯಬಿನ್ದವಃ ।**
**ನ ಶ್ಲೇಷಮಭಿಗಚ್ಛನ್ತಿ ತಥಾನಾರ್ಯೇಷು ಸೌಹೃದಮ್ ॥೧೧॥**

ಕಮಲದ ಎಲೆಗಳ ಮೇಲೆ ಬಿದ್ದ ಜಲಬಿಂದುಗಳು ಕಮಲದೆಲೆಗೆ ಅಂಟಿಕೊಳ್ಳುವುದಿಲ್ಲ. ಹಾಗೆಯೇ ಅನಾರ್ಯರಲ್ಲಿ ಸ್ನೇಹವು ಅಂಟಿಕೊಳ್ಳುವುದಿಲ್ಲ.

**ಯಥಾ ಶರದಿ ಮೇಘಾನಾಂ ಸಿಞ್ಚತಾಮಪಿ ಗರ್ಜತಾಮ್ ।**
**ನ ಭವತ್ಯಮ್ಬುಸಂಕ್ಲೇದಸ್ತಥಾನಾರ್ಯೇಷು ಸೌಹೃದಮ್ ॥೧೨॥**

ಶರತ್ಕಾಲದಲ್ಲಿ ಮೇಘಗಳು ಗರ್ಜಿಸುತ್ತಿದ್ದರೂ ಮಳೆಗರೆಯುತ್ತಿದ್ದರೂ ಭೂಮಿಯು ಮಾತ್ರ ನೀರಿನಿಂದ ಹೇಗೆ ನೆನೆಯುವುದಿಲ್ಲವೋ–ಅದೇ ರೀತಿಯಲ್ಲಿ ಅನಾರ್ಯರ ಹೃದಯದಲ್ಲಿ ಸ್ನೇಹದಿಂದ ಆರ್ದ್ರತೆ ಉಂಟಾಗುವುದಿಲ್ಲ.

**ಯಥಾ ಮಧುಕರಸ್ತರ್ಷಾದ್ರಸಂ ವಿನ್ದನ್ನ ತಿಷ್ಠತಿ ।**
**ತಥಾ ತ್ವಮಪಿ ತತ್ರೈವ ತಥಾನಾರ್ಯೇಷು ಸೌಹೃದಮ್ ॥೧೩॥**

ದುಂಬಿಯು ಪಿಪಾಸೆಯಿಂದ ಹೂವಿನಲ್ಲಿರುವ ರಸವನ್ನೆಲ್ಲಾ ಹೀರಿಕೊಳ್ಳುತ್ತದೆ. ಆದರೆ ಅದು ಅಲ್ಲಿಯೇ ಯಾವಾಗಲೂ ಇರುವುದಿಲ್ಲ. ಅದರಂತೆ ಅನಾರ್ಯರೂ ಸ್ವಲ್ಪಕಾಲದವರೆಗೆ ಸುಖೋಪಭೋಗಗಳನ್ನು ಅನುಭವಿಸುತ್ತಿದ್ದು ಹೊರಟುಹೋಗುತ್ತಾರೆ. ಸುಹೃಜ್ಜನೋಚಿತವಾದ ಶಾಶ್ವತ ಸ್ನೇಹವು ಅವರಲ್ಲಿರುವುದಿಲ್ಲ. ಹಾಗೆಯೇ ನೀನೂ ಅನಾರ್ಯನಾಗಿರುವೆ.

**ಯಥಾ ಮಧುಕರಸ್ತರ್ಷಾತ್ಕಾಶಪುಷ್ಪಂ ಪಿಬನ್ನಿವ ।**
**ರಸಮತ್ರ ನ ವಿನ್ದೇತ ತಥಾನಾರ್ಯೇಷು ಸೌಹೃದಮ್ ॥೧೪॥**

ದುಂಬಿಯು ಮಧುವನ್ನು ಹೀರಿಕೊಳ್ಳುವ ಆಸೆಯಿಂದ ಕಾಶಪುಷ್ಪದ (ಜಂಬುಹುಲ್ಲಿನ ಹೂವಿನ ) ಮೇಲೆ ಕುಳಿತುಕೊಳ್ಳುತ್ತದೆ. ಆದರೆ ಅದಕ್ಕೆ

ಅಲ್ಲಿ ರಸವು ಸಿಕ್ಕುವುದಿಲ್ಲ. ಹಾಗೆಯೇ ಅನಾರ್ಯರೊಡನೆ ಮಾಡುವ ಸ್ನೇಹವು ನಿಷ್ಪ್ರಯೋಜಕವಾಗುತ್ತದೆ.

**ಯಥಾ ಪೂರ್ವಂ ಗಜಃ ಸ್ನಾತ್ವಾ ಗೃಹ್ಯ ಹಸ್ತೇನ ವೈ ರಜಃ ।**
**ದೂಷಯತ್ಯಾತ್ಮನೋ ದೇಹಂ ತಥಾನಾರ್ಯೇಷು ಸೌಹೃದಮ್ ॥**

ಆನೆಯು ಯಾವ ರೀತಿಯಲ್ಲಿ ಮೊದಲು ಸ್ನಾನಮಾಡಿ ಅನಂತರ ಧೂಳನ್ನು ಸೊಂಡಿಲಿನಿಂದೆತ್ತಿಕೊಂಡು ಮೈಮೇಲೆ ಸುರಿದುಕೊಳ್ಳುವುದೋ ಹಾಗೆಯೇ ದುರ್ಜನರೊಡನೆ ಮಾಡಿದ ಸ್ನೇಹವು ದೂಷಿತವಾಗುತ್ತದೆ.

ರಾಕ್ಷಸಕುಲಕಳಂಕನೇ! ನಿನಗೆ ಧಿಕ್ಕಾರವಿರಲಿ. ನಿನ್ನನ್ನು ಬಿಟ್ಟು ಬೇರೆ ಯಾರಾದರೂ ನೀನೀಗ ಹೇಳಿದ ಮಾತನ್ನೇ ಹೇಳಿದ್ದಿದ್ದರೆ ಈ ಮುಹೂರ್ತದಲ್ಲಿಯೇ ಅವನು ಪ್ರಾಣದಿಂದ ಉಳಿಯುತ್ತಿರಲಿಲ್ಲ."

ಹೀಗೆ ರಾವಣನು ಅತಿಕಠೋರವಾದ ಮಾತನಾಡಲು ನ್ಯಾಯವಾದಿಯಾದ ವಿಭೀಷಣನು ನಾಲ್ಕು ಮಂದಿ ರಾಕ್ಷಸರೊಡನೆ ಗದಾಪಾಣಿಯಾಗಿ ಆಕಾಶಕ್ಕೆ ಹಾರಿದನು. ಅಂತರಿಕ್ಷವನ್ನು ಸೇರಿದ ಜಿತಕ್ರೋಧನಾದ ವಿಭೀ ಷಣನು ರಾಕ್ಷಸರ ಅಧಿಪತಿಯಾದ ಅಣ್ಣನಾದ ರಾವಣನಿಗೆ ಹೇಳಿದನು :

"ಮಹಾರಾಜ! ನೀನೀಗ ಧರ್ಮಮಾರ್ಗವನ್ನು ಬಿಟ್ಟಿರುವೆಯಾದರೂ ನೀನು ನನ್ನ ಅಣ್ಣನಾಗಿರುವುದರಿಂದ ತಂದೆಗೆ ಸಮಾನನೂ ಮತ್ತು ಮಾನ್ಯನೂ ಆಗಿರುವೆ. ಆದುದರಿಂದ ನೀನು ಮನಬಂದಂತೆ ಏನು ಬೇಕಾದರೂ ಹೇಳಿಕೊ. ಆದರೆ ಇಂತಹ ಕಠೋರವಾದ ಮಾತುಗಳನ್ನು ನಾನು ಸಹಿಸತಕ್ಕವನಲ್ಲ. ದಶಾನನ! ನಿನ್ನ ಹಿತವನ್ನು ಬಯಸಿದ ನಾನು ಸುಂದರವಾದ ನೀತಿಯುಕ್ತವಾದ ಮಾತುಗಳನ್ನು ಹೇಳಿದೆನು. ಆದರೆ ಇಂದ್ರಿಯಗಳನ್ನು ಜಯಿಸದ ಕಾಲನಿಗೆ ವಶರಾಗುವ ಜನರು ಅಂತಹ ಹಿತಕರವಾದ ಮಾತುಗಳನ್ನು ಅಂಗೀಕರಿಸುವುದಿಲ್ಲ.

**ಸುಲಭಾಃ ಪುರುಷಾ ರಾಜನ್ಸತತಂ ಪ್ರಿಯವಾದಿನಃ ।**
**ಅಪ್ರಿಯಸ್ಯ ತು ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ॥೨೧॥**

ಓ ರಾಜನೇ! ಯಾವಾಗಲೂ ಪ್ರಿಯವಾದುದನ್ನೇ ಹೇಳುವ ಪುರುಷರು

ಸುಲಭವಾಗಿ ಸಿಕ್ಕುತ್ತಾರೆ. ಆದರೆ ಅಪ್ರಿಯವಾದರೂ ಹಿತವಾದ ಮಾತುಗಳನ್ನು ಹೇಳುವವರಾಗಲೀ, ಕೇಳುವವರಾಗಲೀ ದುರ್ಲಭರೇ ಸರಿ.

**ಬದ್ಧಂ ಕಾಲಸ್ಯ ಪಾಶೇನ ಸರ್ವಭೂತಾಪಹಾರಿಣಾ ।**
**ನ ನಶ್ಯನ್ತಮುಪೇಕ್ಷೇಯಂ ಪ್ರದೀಪ್ತಂ ಶರಣಂ ಯಥಾ ॥೨೨॥**

ಸಮಸ್ತಪ್ರಾಣಿಗಳ ಪ್ರಾಣಗಳನ್ನೂ ಅಪಹರಿಸುವ ಕಾಲನಿಂದ ಬಂಧಿಸಲ್ಪಟ್ಟು ವಿನಾಶಹೊಂದುತ್ತಿರುವ ನಿನ್ನ ವಿಷಯದಲ್ಲಿ–ಉರಿದುಹೋಗುತ್ತಿರುವ ಮನೆಯನ್ನು ನೋಡುತ್ತಿರುವವರು ಹೇಗೆ ಉದಾಸೀನರಾಗಿರುವುದಿಲ್ಲವೋ ಹಾಗೆಯೇ ನಾನು ಉಪೇಕ್ಷೆಯನ್ನು ತೋರಲಿಲ್ಲ. ಹಿತಕರವಾದ ಮಾತುಗಳನ್ನೇ ಆಡಿದೆ.

ಪ್ರದೀಪ್ತವಾದ ಅಗ್ನಿಗೆ ಸಮಾನವಾದ, ನಿಶಿತವಾದ ಮತ್ತು ಸುವರ್ಣ ಭೂಷಿತವಾದ ಶ್ರೀರಾಮನ ಬಾಣಗಳಿಂದ ನೀನು ಹತನಾಗುವುದು ನನಗೆ ಇಷ್ಟವಿಲ್ಲ. ಕಾಲಕ್ಕೆ ವಶೀಭೂತರಾದ ನಂತರ ಮಹಾಮಹಾಶೂರರೂ, ಬಲಿಷ್ಠರೂ, ಶಸ್ತ್ರಾಸ್ತ್ರಕೋವಿದರೂ ಆದ ನಿನ್ನ ಕಡೆಯ ಸೈನಿಕರು ಮರಳಿನಿಂದ ಕಟ್ಟಿದ ಸೇತುವೆಯಂತೆ ವಿನಾಶಹೊಂದುತ್ತಾರೆ.

ಅಣ್ಣ! ನಿನ್ನ ಹಿತವನ್ನೇ ಅಪೇಕ್ಷಿಸಿ ಗೌರವಭಾವನೆಯಿಂದ ನಾನು ಕೆಲವು ಮಾತುಗಳನ್ನಾಡಿದೆನು. ಅದು ನಿನಗೆ ಸಹ್ಯವಾಗದಿದ್ದರೆ ಕ್ಷಮಿಸಿಬಿಡು. ಸರ್ವಪ್ರಕಾರದಿಂದಲೂ ನೀನು ನಿನ್ನನ್ನು ರಕ್ಷಿಸಿಕೊ. ರಾಕ್ಷಸರಿಂದ ಯುಕ್ತವಾಗಿರುವ ಈ ಲಂಕಾಪಟ್ಟಣವನ್ನು ರಕ್ಷಿಸು. ನಿನಗೆ ಮಂಗಳವಾಗಲಿ. ನಾನಿನ್ನು ಹೋಗಿಬರುತ್ತೇನೆ. ನಾನಿಲ್ಲದ ಕಾರಣ ನೀನು ನಿರಾತಂಕನಾಗಿ ಸುಖವಾಗಿರು.

ರಾಕ್ಷಸೇಶ್ವರ! ನಿನ್ನನ್ನು ಈ ಪಾಪಕಾರ್ಯದಿಂದ ತಡೆಯುವ ಸುಹೃದನಾಗಲೀ, ಹಿತೋಪದೇಶಮಾಡುವವನಾಗಲೀ, ಮಂತ್ರಾಲೋಚನೆಯನ್ನು ಮಾಡಿ ಒಳ್ಳೆಯ ಸಲಹೆಯನ್ನು ನೀಡುವವನಾಗಲೀ ಈ ರಾಕ್ಷಸಸಮೂಹದಲ್ಲಿಯೇ ಯಾವನೊಬ್ಬನೂ ಇರುವುದಿಲ್ಲ. ಇದು ಸತ್ಯ.

ನಿಶಾಚರನೇ! ನಿನ್ನ ಹಿತೈಷಿಯಾದ ನಾನು, ನೀನು ಅನುಚಿತವಾದ ಮಾರ್ಗದಲ್ಲಿ ಹೋಗುವುದನ್ನು ಬಾರಿ ಬಾರಿಗೂ ತಡೆಯಲು ಪ್ರಯತ್ನಿಸಿದೆನು.

ಆದರೆ ನನ್ನ ಮಾತು ನಿನಗೆ ರುಚಿಸುತ್ತಿಲ್ಲ. ಕಳೆದುಹೋದ ಆಯುಷ್ಯವುಳ್ಳ ಮನುಷ್ಯರು ಜೀವನದ ಅಂತ್ಯಕಾಲವು ಸಮೀಪಿಸಿದಾಗ ಸುಹೃದರು ಹೇಳುವ ಹಿತಕರವಾದ ಮಾತುಗಳನ್ನು ಅಂಗೀಕರಿಸುವುದಿಲ್ಲ."

೧೬ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೭ನೆಯ ಸರ್ಗ

## ವಿಭೀಷಣನ ಶರಣಾಗತಿ : ಶ್ರೀರಾಮನು ವಿಭೀಷಣನಿಗೆ ಆಶ್ರಯ ಕೊಡುವ ವಿಷಯದಲ್ಲಿ ಸಾಧಕ-ಬಾಧಕಗಳನ್ನು ತನ್ನ ಮಂತ್ರಿಗಳೊಡನೆ ಚರ್ಚಿಸಿದುದು

**ಇತ್ಯುಕ್ತ್ವಾ ಪರುಷಂ ವಾಕ್ಯಂ ರಾವಣಂ ರಾವಣಾನುಜಃ ।**
**ಆಜಗಾಮ ಮುಹೂರ್ತೇನ ಯತ್ರ ರಾಮಃ ಸಲಕ್ಷ್ಮಣಃ ॥೧॥**

ರಾವಣನ ತಮ್ಮನಾದ ವಿಭೀಷಣನು ರಾವಣನಿಗೆ ಈ ರೀತಿಯ ಕಠೋರವಾದ ಮಾತುಗಳನ್ನು ಹೇಳಿ ಮುಹೂರ್ತಕಾಲದೊಳಗೆ ರಾಮ-ಲಕ್ಷ್ಮಣರಿದ್ದ ಸ್ಥಳಕ್ಕೆ ಆಗಮಿಸಿದನು.

ವಿಭೀಷಣನ ಶರೀರವು ಮೇರುಪರ್ವತದ ಶಿಖರದಂತಿದ್ದಿತು. ಮಿಂಚಿನಂತೆ ಉಜ್ಜ್ವಲವಾಗಿದ್ದಿತು. ಹಾಗೆ ಆಕಾಶದಲ್ಲಿದ್ದ ವಿಭೀಷಣನನ್ನು ಭೂಮಿಯ ಮೇಲಿದ್ದ ವಾನರನಾಯಕರು ನೋಡಿದರು. ಭಯಂಕರಪರಾಕ್ರಮಿಗಳಾದ ನಾಲ್ವರು ಅನುಚರರು ಅವನ ಜೊತೆಯಲ್ಲಿದ್ದರು. ಅವರೂ ಕವಚಗಳನ್ನು ತೊಟ್ಟು ಉತ್ತಮವಾದ ಆಯುಧಗಳನ್ನು ಹಿಡಿದಿದ್ದರು ಮತ್ತು ನಾನಾವಿಧವಾದ ಭೂಷಣಗಳಿಂದ ಸಮಲಂಕೃತರಾಗಿದ್ದರು. ವಿಭೀಷಣನಾದರೋ ಮೇಘದಂತೆಯೂ, ಪರ್ವತದಂತೆಯೂ ಕಾಣುತ್ತಿದ್ದನು. ವಜ್ರಾಯುಧದ ಪ್ರಭೆಗೆ ಸಮಾನವಾದ ಪ್ರಭೆಯುಳ್ಳವನಾಗಿದ್ದನು. ವೀರನಾದ ಅವನು ಶ್ರೇಷ್ಠವಾದ ಆಯುಧಗಳನ್ನು ಹಿಡಿದು ದಿವ್ಯವಾದ ಆಭರಣಗಳಿಂದ ಭೂಷಿತನಾಗಿದ್ದನು.

ನಾಲ್ವರು ರಾಕ್ಷಸರೊಡನೆ ಬಂದ ಐದನೆಯವನಾದ ವಿಭೀಷಣನನ್ನು ನೋಡಿ ದುರ್ಧರ್ಷನಾದ, ಬುದ್ಧಿವಂತನಾದ ಮತ್ತು ವಾನರರಾಜನಾದ

ಸುಗ್ರೀವನು ತನ್ನ ಅನುಯಾಯಿಗಳಾದ ವಾನರರೊಡನೆ ಸಮಾಲೋಚಿಸ ತೊಡಗಿದನು. ಸ್ವಲ್ಪಹೊತ್ತು ಯೋಚಿಸುತ್ತಿದ್ದು ಸುಗ್ರೀವನು ಹನುಮಂತನೇ ಮೊದಲಾದ ವಾನರರಿಗೆ ಉತ್ತಮೋತ್ತಮವಾದ ಈ ಮಾತನ್ನು ಹೇಳಿದನು :

"ವಾನರರೇ! ಅದೋ ಅಲ್ಲಿ ನೋಡಿರಿ! ಸಮಸ್ತವಾದ ಆಯುಧ ಗಳಿಂದಲೂ ಸಂಪನ್ನನಾಗಿರುವ ಈ ರಾಕ್ಷಸನು ಇನ್ನೂ ನಾಲ್ವರು ರಾಕ್ಷಸ ರೊಡನೆ ಇಲ್ಲಿಗೆ ಬರುತ್ತಿದ್ದಾನೆ. ಈ ರಾಕ್ಷಸನು ಬರುತ್ತಿರುವುದು ನಮ್ಮೆಲ್ಲರನ್ನೂ ಸಂಹರಿಸಲೆಂದೇ. ಇದರಲ್ಲಿ ಸಂಶಯವೇ ಇಲ್ಲ."

ರಾಜನಾದ ಸುಗ್ರೀವನ ಈ ಮಾತನ್ನು ಕೇಳಿ ಆ ಎಲ್ಲ ವಾನರಶ್ರೇಷ್ಠರೂ ದೊಡ್ಡ-ದೊಡ್ಡ ವೃಕ್ಷಗಳನ್ನೂ ಪರ್ವತದ ಬಂಡೆಗಳನ್ನೂ ಎತ್ತಿಕೊಂಡು ಈ ಮಾತನ್ನು ಹೇಳಿದರು :

"ಮಹಾರಾಜ! ನೀನು ಶೀಘ್ರವಾಗಿ ತಡಮಾಡದೆ ಆ ಎಲ್ಲ ರಾಕ್ಷಸ ರನ್ನೂ ಸಂಹರಿಸುವಂತೆ ಆಜ್ಞಾಪಿಸು. ಮರುಕ್ಷಣದಲ್ಲಿಯೇ ಮಂದಮತಿ ಗಳಾದ ಈ ರಾಕ್ಷಸರು ಹತರಾಗಿ ಭೂಮಿಯ ಮೇಲೆ ಬೀಳುತ್ತಾರೆ."

ಹೀಗೆ ವಾನರರು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದಾಗ ವಿಭೀಷಣನು ತನ್ನ ನಾಲ್ವರು ಅನುಯಾಯಿಗಳೊಡನೆ ಉತ್ತರತೀರಕ್ಕೆ ಬಂದು ಆಕಾಶದಲ್ಲಿ ಸ್ವಸ್ಥನಾಗಿ ನಿಂತನು. ಮಹಾಬುದ್ಧಿವಂತನಾದ, ಮಹಾಪುರುಷ ನಾದ ವಿಭೀಷಣನು ಆಕಾಶದಲ್ಲಿಯೇ ನಿಂತು ಸುಗ್ರೀವನೇ ಮೊದಲಾದ ವಾನರನಾಯಕರ ಕಡೆಗೆ ನೋಡುತ್ತಾ ಗಟ್ಟಿಯಾದ ಧ್ವನಿಯಲ್ಲಿ ಹೇಳಿದನು :

"ವಾನರಶಿರೋಮಣಿಗಳೇ! ಕೇಳಿರಿ. ರಾವಣನೆಂಬ ಹೆಸರಿನ ದುರಾ ಚಾರಿಯಾದ ರಾಕ್ಷಸನು ನಿಶಾಚರರೆಲ್ಲರಿಗೂ ರಾಜನಾಗಿದ್ದಾನೆ. ನಾನು ಅವನ ತಮ್ಮನು. ನನ್ನ ಹೆಸರು ವಿಭೀಷಣನೆಂದು. ಜಟಾಯುವನ್ನು ಕೊಂದು ಆ ರಾವಣನು ಜನಸ್ಥಾನದಿಂದ ಸೀತೆಯನ್ನು ಅಪಹರಿಸಿ ತಂದನು. ದೀನೆಯಾದ ಅಸಹಾಯಕಳಾದ ಸೀತೆಯನ್ನು ರಾವಣನು ಬಂಧನದಲ್ಲಿಟ್ಟಿದ್ದಾನೆ. ಅವಳೀಗ ರಾಕ್ಷಸಿಯರ ರಕ್ಷಣೆಯಲ್ಲಿದ್ದಾಳೆ. ನಾನು ನಾನಾಪ್ರಕಾರವಾದ ಯುಕ್ತಿಯುಕ್ತ ವಾದ ಮಾತುಗಳಿಂದ ಶ್ರೀರಾಮನಿಗೆ ಸೀತೆಯನ್ನು ಒಪ್ಪಿಸುವಂತೆ ಬೋಧಿಸಿದೆನು. ಆದರೆ ಸಾಯುತ್ತಿರುವ ಮನುಷ್ಯನು ಔಷಧವನ್ನು ಪರಿ

ಗ್ರಹಿಸುವುದಿಲ್ಲ. ಹಾಗೆಯೇ ಕಾಲಚೋದಿತನಾದ ಅವನು ಅತ್ಯಂತಹಿತಕರವಾದ ನನ್ನ ಮಾತುಗಳನ್ನು ಅಂಗೀಕರಿಸಲಿಲ್ಲ. ಇಷ್ಟು ಮಾತ್ರವಲ್ಲ ; ಅವನು ನನ್ನ ವಿಷಯದಲ್ಲಿ ಅತಿಕಠೋರವಾದ ಮಾತುಗಳನ್ನಾಡಿದನು. ಒಬ್ಬ ದಾಸನನ್ನು ಅವಮಾನಿಸುವಂತೆ ನನ್ನನ್ನು ಅವಮಾನಿಸಿದನು. ಆದುದರಿಂದ ನಾನು–

**ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ ॥೧೬॥**

ನನ್ನ ಹೆಂಡತಿ-ಮಕ್ಕಳನ್ನೂ ಪರಿತ್ಯಜಿಸಿ ರಾಘವನಿಗೆ ಶರಣಾಗಿ ಬಂದಿರುತ್ತೇನೆ.

**ಸರ್ವಲೋಕಶರಣ್ಯಾಯ ರಾಘವಾಯ ಮಹಾತ್ಮನೇ ।**
**ನಿವೇದಯತ ಮಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಮ್ ॥೧೭॥**

ವಾನರರೇ! ಶೀಘ್ರವಾಗಿ ಸಕಲಲೋಕಶರಣ್ಯನಾದ ಮಹಾತ್ಮನಾದ ರಾಘವನಿಗೆ ವಿಭೀಷಣನು ಶರಣಾಗತನಾಗಲು ಬಂದು ನಿಂತಿರುವನೆಂದು ಹೇಳಿರಿ.”

ವಿಭೀಷಣನ ಆ ಮಾತನ್ನು ಕೇಳಿ ಶೀಘ್ರವಾದ ಗಮನವುಳ್ಳ ಸುಗ್ರೀವನು ಆವೇಶದೊಡನೆ ಲಕ್ಷ್ಮಣನ ಎದುರಿನಲ್ಲಿ ಶ್ರೀರಾಮನಿಗೆ ಹೇಳಿದನು :

**ರಾವಣಸ್ಯಾನುಜೋ ಭ್ರಾತಾ ವಿಭೀಷಣ ಇತಿ ಶ್ರುತಃ ।**
**ಚತುರ್ಭಿಃ ಸಹ ರಕ್ಷೋಭಿರ್ಭವನ್ತಂ ಶರಣಂ ಗತಃ ॥೧೮॥**

“ವಿಭೀಷಣನೆಂದು ವಿಖ್ಯಾತನಾಗಿರುವ ರಾವಣನ ತಮ್ಮನು ತನ್ನ ನಾಲ್ವರು ಅನುಚರರೊಡನೆ ನಿನಗೆ ಶರಣಾಗತನಾಗಿ ಬಂದಿದ್ದಾನೆ.

**ಪ್ರವಿಷ್ಟಃ ಶತ್ರುಸೈನ್ಯಂ ಹಿ ಪ್ರಾಪ್ತಃ ಶತ್ರುರತರ್ಕಿತಃ ।**
**ನಿಹನ್ಯಾದನ್ತರಂ ಲಬ್ಧ್ವಾ ಉಲೂಕೋ ವಾಯಸಾನಿವ ॥೨೦॥**

ಶತ್ರುಸೈನ್ಯದ ಒಬ್ಬ ರಾಕ್ಷಸನು ಯಾವ ಮುನ್ಸೂಚನೆಯೂ ಇಲ್ಲದೆ ನಮ್ಮೊಡನೆ ಸೇರಿಕೊಳ್ಳಲು ಆಗಮಿಸಿದ್ದಾನೆ. ಗೂಬೆಯು ಸಮಯ ಕಾಯುತ್ತಿದ್ದು ಕಾಗೆಗಳ ಮರಿಗಳನ್ನು ಕಬಳಿಸುವಂತೆ ಇವನು ನಮ್ಮ ಸೈನ್ಯದಲ್ಲಿ ಸೇರಿಕೊಂಡು ಸಮಯ ನೋಡಿ ನಮ್ಮೆಲ್ಲರನ್ನೂ ಸಂಹರಿಸಬಹುದೆಂಬುದು ನನ್ನ ಭಾವನೆಯಾಗಿದೆ.

**ಮನ್ತ್ರೇ ವ್ಯೂಹೇ ನಯೇ ಚಾರೇ ಯುಕ್ತೋ ಭವಿತುಮರ್ಹಸಿ ।**
**ವಾನರಾಣಾಂ ಚ ಭದ್ರಂ ತೇ ಪರೇಷಾಂ ಚ ಪರಂತಪ ॥೨೧॥**

ಶತ್ರುತಾಪಕನೇ! ಶ್ರೀರಾಮ! ವಾನರರಿಗೆ ಜಯವಾಗುವ ಶತ್ರುಗಳ ನಿಗ್ರಹದ ಮಂತ್ರಾಲೋಚನೆಯಲ್ಲಿಯೂ, ವ್ಯೂಹರಚನೆಯಲ್ಲಿಯೂ, ಶತ್ರುಗಳೊಡನೆ ಈಗ ಅನುಸರಿಸಬೇಕಾದ ಸಾಮ-ದಾನಾದಿ ನೀತಿಯ ವಿಷಯವಾಗಿಯೂ ಮತ್ತು ಶತ್ರುಪಕ್ಷದ ಸೈನಿಕರ ಚಲನ-ವಲನಗಳನ್ನು ತಿಳಿದು ಬರುವ ಗೂಢಚಾರರ ವಿಷಯದಲ್ಲಿಯೂ ನೀನು ಜಾಗರೂಕನಾಗಿರಬೇಕಾಗಿದೆ. ಇದರಿಂದ ನಿನಗೂ ಮತ್ತು ನಮ್ಮೆಲ್ಲರಿಗೂ ಮಂಗಳವುಂಟಾಗುತ್ತದೆ.

**ಅನ್ತರ್ಧಾನಗತಾ ಹ್ಯೇತೇ ರಾಕ್ಷಸಾಃ ಕಾಮರೂಪಿಣಃ ।**
**ಶೂರಾಶ್ಚ ನಿಕೃತಿಜ್ಞಾಶ್ಚ ತೇಷು ಜಾತು ನ ವಿಶ್ವಸೇತ್ ॥೨೨॥**

ಈ ರಾಕ್ಷಸರು ಯಾವಾಗಲೂ ಬೇಕು-ಬೇಕಾದ ರೂಪಗಳನ್ನು ಧರಿಸುತ್ತಾರೆ. ಅವರು ಅಂತರ್ಧಾನಹೊಂದಲೂ ಸಮರ್ಥರಾಗಿದ್ದಾರೆ. ಅವರು ಮಹಾಶೂರರು. ಶತ್ರುಗಳನ್ನು ವಂಚಿಸುವುದು ಹೇಗೆಂಬುದನ್ನು ತಿಳಿದಿರತಕ್ಕವರು. ಆದುದರಿಂದ ಇಂತಹವರ ವಿಷಯದಲ್ಲಿ ವಿಶ್ವಾಸವನ್ನಿಡಬಾರದು.

ರಾಘವ! ಇವನು ರಾಕ್ಷಸರಾಜನಾದ ರಾವಣನ ಗುಪ್ತಚಾರನಿರಬಹುದು. ಹಾಗೇನಾದರೂ ಆಗಿದ್ದರೆ ಇವನು ನಮ್ಮೊಳಗೆ ಸೇರಿಕೊಂಡು ನಮ್ಮಲ್ಲಿ ಭೇದವನ್ನು ಕಲ್ಪಿಸಿಬಿಡಬಹುದು. ಅಥವಾ ಬುದ್ಧಿವಂತನಾದ ಈ ರಾಕ್ಷಸನು ನಮ್ಮಲ್ಲಿ ಸೇರಿಕೊಂಡು ನಮ್ಮ ಮನಸ್ಸಿನಲ್ಲಿ ವಿಶ್ವಾಸವನ್ನು ಹುಟ್ಟಿಸಿ ಅನಂತರ ನಮ್ಮಲ್ಲುಂಟಾಗುವ ಯಾವುದಾದರೂ ಛಿದ್ರವನ್ನು ಕಂಡುಕೊಂಡು ಒಡನೆಯೇ ನಮ್ಮನ್ನು ಪ್ರಹರಿಸಲೂಬಹುದು.

**ಮಿತ್ರಾಟವೀಬಲಂ ಚೈವ ಮೌಲಭೃತ್ಯಬಲಂ ತಥಾ ।**
**ಸರ್ವಮೇತದ್ಬಲಂ ಗ್ರಾಹ್ಯಂ ವರ್ಜಯಿತ್ವಾ ದ್ವಿಷದ್ಬಲಮ್ ॥೨೫॥**

ಮಿತ್ರರಾಜರು ಕಳುಹಿಸಿದ ಸೈನ್ಯವನ್ನು ಸೇರಿಸಿಕೊಳ್ಳಬಹುದು. ಕಾಡುಜನರನ್ನಾದರೂ ಸೈನ್ಯದಲ್ಲಿ ಸೇರಿಸಿಕೊಳ್ಳಬಹುದು. ಪರಂಪರಾಗತವಾದ ರೀತಿಯಲ್ಲಿ ವೇತನಗಳನ್ನು ಕೊಡುವುದರ ಮೂಲಕ ಸೈನ್ಯಸಂಗ್ರಹಮಾಡಬಹುದು. ಈ ವಿಧಾನಗಳಲ್ಲಿ ರಾಜನಾದವನು ಸೈನ್ಯಸಂಗ್ರಹಮಾಡಬಹುದು. ಆದರೆ ಶತ್ರುಗಳಿಗೆ ಸಂಬಂಧಿಸಿದ ಸೈನ್ಯವನ್ನು ಮಾತ್ರ ಪರಿಗ್ರಹಿಸಬಾರದು.

**ಪ್ರಕೃತ್ಯಾ ರಾಕ್ಷಸೋ ಹ್ಯೇಷ ಭ್ರಾತಾಮಿತ್ರಸ್ಯ ವೈ ಪ್ರಭೋ ।**
**ಆಗತಶ್ಚ ರಿಪೋಃ ಪಕ್ಷಾತ್ಕಥಮಸ್ಮಿನ್ಹಿ ವಿಶ್ವಸೇತ್ ॥೨೬॥**

ರಾಘವ! ಹುಟ್ಟಿನಿಂದಲೇ ಇವನು ರಾಕ್ಷಸನಾಗಿದ್ದಾನೆ. ನಮ್ಮ ಶತ್ರು ವಿನ ತಮ್ಮನು ಬೇರೆ ಆಗಿದ್ದಾನೆ ಮತ್ತು ಶತ್ರುಪಕ್ಷದಿಂದ ಇಲ್ಲಿಗೆ ಬಂದಿದ್ದಾನೆ. ಇಂತಹವನ ಮೇಲೆ ವಿಶ್ವಾಸವನ್ನಿಡುವುದಾದರೂ ಹೇಗೆ ಸಾಧ್ಯ?

ಉಚಿತವಾದ ವ್ಯವಹಾರಗಳನ್ನು ನಡೆಸುವವರಲ್ಲಿ ಶ್ರೇಷ್ಠನಾದವನೇ! ರಾಘವ! ರಾವಣನೇ ಈ ವಿಭೀಷಣನನ್ನು ಕಳುಹಿಸಿರುವನೆಂದು ಭಾವಿಸುವುದು ಯೋಗ್ಯವಾಗಿದೆ. ಆದುದರಿಂದ ನನ್ನ ಅಭಿಪ್ರಾಯದಂತೆ ಈ ಸಮಯದಲ್ಲಿ ಇವನನ್ನು ಬಂಧನದಲ್ಲಿಡುವುದೇ ಯುಕ್ತವಾಗಿ ಕಾಣುತ್ತದೆ. ವಕ್ರಬುದ್ಧಿಯವನಾದ ರಾವಣನಿಂದಲೇ ಕಳುಹಿಸಲ್ಪಟ್ಟು ಇವನಿಲ್ಲಿಗೆ ಬಂದಿದ್ದಾನೆ. ಇವನು ಮಾಯೆಯಿಂದ ತನ್ನ ನಿಜಸ್ವಭಾವವನ್ನು ಮುಚ್ಚಿಕೊಂಡೇ ಇರುತ್ತಾನೆ. ನೀನು ಇವನ ಮೇಲೆ ಸಂಪೂರ್ಣವಾಗಿ ವಿಶ್ವಾಸವನ್ನಿಟ್ಟನಂತರ ಸಮಯ ನೋಡಿ ನಿನ್ನನ್ನೇ ಪ್ರಹರಿಸುತ್ತಾನೆ. ಇದೇ ಉದ್ದೇಶದಿಂದಲೇ ಇವನಿಲ್ಲಿಗೆ ಬಂದಿರುವನೆಂಬುದು ನನ್ನ ಅಭಿಪ್ರಾಯವಾಗಿದೆ. ಇವನು ಮಹಾ ಕ್ರೂರಿಯಾದ ರಾವಣನ ತಮ್ಮ. ಈ ಒಂದು ಕಾರಣದಿಂದಲೇ ಇವನನ್ನು ಇವನ ನಾಲ್ವರು ಅನುಚರರೊಡನೆ ತೀಕ್ಷ್ಣವಾದ ಆಯುಧದಿಂದ ವಧಿಸುವುದು ಉಚಿತವಾಗಿದೆ.”

ಮಾತನಾಡುವುದರಲ್ಲಿ ಕುಶಲನಾದ, ವಿಭೀಷಣನನ್ನು ನೋಡಿ ಕ್ರುದ್ಧನಾಗಿದ್ದ, ಸೇನಾಪತಿಯಾದ ಸುಗ್ರೀವನು ಪ್ರವಚನಕುಶಲನಾದ ಶ್ರೀರಾಮನಿಗೆ ಹೀಗೆ ಹೇಳಿ ಮೌನವಾದನು.

ಮಹಾಬಲಿಷ್ಠನಾದ ರಾಘವನು ಸುಗ್ರೀವನ ಆ ಮಾತುಗಳನ್ನು ಕೇಳಿ ತನ್ನ ಬಳಿ ಕುಳಿತಿದ್ದ ಹನುಮಂತನೇ ಮೊದಲಾದ ಕಪಿನಾಯಕರಿಗೆ ಹೇಳಿದನು:

“ವಾನರನಾಯಕರೇ! ವಾನರರಾಜನಾದ ಸುಗ್ರೀವನು ರಾವಣನ ತಮ್ಮನಾದ ವಿಭೀಷಣನ ವಿಷಯದಲ್ಲಿ ಯುಕ್ತಿಯುಕ್ತವಾಗಿ ಆಡಿದ ಮಾತುಗಳನ್ನು ನೀವೆಲ್ಲರೂ ಕೇಳಿರುವಿರಿ. ಮಿತ್ರರಿಗೆ ಶಾಶ್ವತವಾದ ಉನ್ನತಿಯನ್ನು

ಬಯಸುವ, ಬುದ್ಧಿವಂತನಾದ ಮತ್ತು ಸಮರ್ಥನಾದ ಪುರುಷನು ಕರ್ತವ್ಯಾಕರ್ತವ್ಯದ ವಿಷಯದಲ್ಲಿ ಸಂದೇಹವುಂಟಾದಾಗ ತನ್ನ ಅಭಿಪ್ರಾಯವನ್ನು ಸೂಚಿಸುವುದು ಯುಕ್ತವಾಗಿಯೇ ಇದೆ. ಹಾಗೆಯೇ ಈ ವಿಷಯದಲ್ಲಿ ನೀವೂ ನಿಮ್ಮ-ನಿಮ್ಮ ಅಭಿಪ್ರಾಯಗಳನ್ನು ಹೇಳಿರಿ."

ಹೀಗೆ ಶ್ರೀರಾಮನು ಕಪಿನಾಯಕರ ಅಭಿಪ್ರಾಯವನ್ನು ಕೇಳಲು ಶ್ರೀರಾಮನಿಗೆ ಪ್ರಿಯವನ್ನುಂಟುಮಾಡಬೇಕೆಂಬ ಅಭಿಪ್ರಾಯವಿದ್ದ ಆ ಎಲ್ಲ ವಾನರರೂ ಆಲಸಿಕೆಯನ್ನು ತೊರೆದು ಉತ್ಸಾಹಪೂರ್ವಕವಾಗಿ ಮತ್ತು ಆದರಪೂರ್ವಕವಾಗಿ ತಮ್ಮ-ತಮ್ಮ ಅಭಿಪ್ರಾಯಗಳನ್ನು ಹೇಳಲು ಉಪಕ್ರಮಿಸಿದರು :

"ರಾಘವ! ಮೂರು ಲೋಕಗಳಲ್ಲಿ ನಿನಗೆ ತಿಳಿಯದೇ ಇರುವ ವಿಷಯವೇ ಯಾವುದೂ ಇಲ್ಲ. ನಾವು ನಿನ್ನ ಸುಹೃದರೆಂಬುದನ್ನು ವಿಶ್ವಕ್ಕೆ ಸೂಚಿಸುತ್ತಾ ಹೀಗೆ ಪ್ರಶ್ನಿಸುತ್ತಿರುವೆ.

**ತ್ವಂ ಹಿ ಸತ್ಯವ್ರತಃ ಶೂರೋ ಧಾರ್ಮಿಕೋ ದೃಢವಿಕ್ರಮಃ ।**
**ಪರೀಕ್ಷ್ಯಕಾರೀ ಸ್ಮೃತಿಮಾನ್ನಿಸೃಷ್ಟಾತ್ಮಾ ಸುಹೃತ್ಸು ಚ ॥೩೬॥**

ನೀನು ಸತ್ಯವ್ರತನು ; ಶೂರನು ; ಧರ್ಮಾತ್ಮನು ; ಸುದೃಢಪರಾಕ್ರಮನು ; ಯುಕ್ತಾಯುಕ್ತತೆಯನ್ನು ಪರೀಕ್ಷಿಸಿ ಕಾರ್ಯಮಾಡತಕ್ಕವನು ; ಸ್ಮರಣಶಕ್ತಿಸಂಪನ್ನನು ; ಸುಹೃದರಲ್ಲಿ ಸಂಪೂರ್ಣವಾದ ವಿಶ್ವಾಸವನ್ನಿಟ್ಟಿರುವವನು.

ಆದುದರಿಂದ ಬುದ್ಧಿವಂತರಾದ ಮತ್ತು ಸಮರ್ಥರಾದ ನಿನ್ನ ಸಚಿವರೆಲ್ಲರೂ ಒಬ್ಬೊಬ್ಬರಾಗಿ ಯುಕ್ತಿಯುಕ್ತವಾದ ಅಭಿಪ್ರಾಯವನ್ನು ಮಂಡಿಸಲಿ."

ವಾನರರೆಲ್ಲರೂ ಹೀಗೆ ಹೇಳಲು ಎಲ್ಲರಿಗಿಂತಲೂ ಮೊದಲು ಯುವರಾಜನಾದ ಅಂಗದನು ವಿಭೀಷಣನ ಗುಣ-ದೋಷಗಳ ಪರಿಶೀಲನೆಯೇ ಪ್ರಯೋಜನನಾಗಿ ಉಳ್ಳ ಈ ಮಾತುಗಳನ್ನು ಹೇಳಿದನು :

**ಶತ್ರೋಃ ಸಕಾಶಾತ್ಸಂಪ್ರಾಪ್ತಃ ಸರ್ವಥಾ ಶಙ್ಕ್ಯ ಏವ ಹಿ ।**
**ವಿಶ್ವಾಸಯೋಗ್ಯಃ ಸಹಸಾ ನ ಕರ್ತವ್ಯೋ ವಿಭೀಷಣಃ ॥೩೯॥**

"ರಾಘವ! ವಿಭೀಷಣನು ಶತ್ರುಗಳ ಕಡೆಯಿಂದ ಬಂದಿರುತ್ತಾನೆ.

ಅವನ ವಿಷಯದಲ್ಲಿ ನಾವು ಸಂದೇಹಿಸಲೇಬೇಕಾಗಿದೆ. ಆದುದರಿಂದ ಒಡನೆಯೇ ನಾವು ಅವನನ್ನು ವಿಶ್ವಾಸಪಾತ್ರನನ್ನಾಗಿ ಮಾಡಿಕೊಳ್ಳುವುದು ಸರಿಯಲ್ಲ.

**ಛಾದಯಿತ್ವಾತ್ಮಭಾವಂ ಹಿ ಚರನ್ತಿ ಶಠಬುದ್ಧಯಃ ।**
**ಪ್ರಹರನ್ತಿ ಚ ರನ್ಧ್ರೇಷು ಸೋಽನರ್ಥಃ ಸುಮಹಾನ್ಭವೇತ್ ॥೪೦॥**

ವಂಚನೆಯ ಬುದ್ಧಿಯಿಂದ ಕೂಡಿರುವ ಜನರು ತಮ್ಮ ಮನೋಭಾವವನ್ನು ಬಹಿರಂಗಗೊಳಿಸದೆ ಎಲ್ಲ ಕಡೆಗಳಲ್ಲಿಯೂ ಸಂಚರಿಸುತ್ತಿರುತ್ತಾರೆ. ಸಮಯವು ಸಿಕ್ಕಿದೊಡನೆಯೇ ಪ್ರಹರಿಸುತ್ತಾರೆ. ಹಾಗೇನಾದರೂ ಆದರೆ ಮಹತ್ತರವಾದ ಅನರ್ಥವೇ ಸಂಭವಿಸುತ್ತದೆ.

**ಅರ್ಥಾನರ್ಥೌ ವಿನಿಶ್ಚಿತ್ಯ ವ್ಯವಸಾಯಂ ಭಜೇತ ಹ ।**
**ಗುಣತಃ ಸಂಗ್ರಹಂ ಕುರ್ಯಾದ್ದೋಷತಸ್ತು ವಿಸರ್ಜಯೇತ್ ॥**

ಆದುದರಿಂದ ಗುಣ-ದೋಷಗಳನ್ನು ಮೊದಲೇ ವಿಚಾರಮಾಡಿ ನಿಶ್ಚಯಿಸಬೇಕು. ಈ ವ್ಯಕ್ತಿಯನ್ನು ನಾವು ಸೇರಿಸಿಕೊಂಡರೆ ಪ್ರಯೋಜನವಾಗುವುದೇ? ಅನರ್ಥವು ಸಂಭವಿಸುವುದೇ? ಎಂಬುದನ್ನು ವಿಮರ್ಶೆಯ ಮೂಲಕವಾಗಿ ನಿಶ್ಚಯಿಸಿ ವಿಭೀಷಣನನ್ನು ಸೇರಿಸಿಕೊಳ್ಳುವುದು ಒಳ್ಳೆಯದೆಂದು ಕಂಡುಬಂದರೆ ಅವನನ್ನು ಸೇರಿಸಿಕೊಳ್ಳಬೇಕು. ಸೇರಿಸಿಕೊಳ್ಳುವುದು ದೋಷವೆಂದು ಕಂಡುಬಂದರೆ ವಿಸರ್ಜಿಸಬೇಕು.

**ಯದಿ ದೋಷೋ ಮಹಾಂಸ್ತಸ್ಮಿಂಸ್ತ್ಯಜ್ಯತಾಮವಿಶಙ್ಕಿತಮ್ ।**
**ಗುಣಾನ್ವಾಪಿ ಬಹೂನ್ ಜ್ಞಾತ್ವಾ ಸಂಗ್ರಹಃ ಕ್ರಿಯತಾಂ ನೃಪ ॥**

ಮಹಾರಾಜ! ವಿಭೀಷಣನನ್ನು ಸೇರಿಸಿಕೊಳ್ಳುವುದರಲ್ಲಿ ದೋಷವಿರುವುದಾದರೆ ಹಿಂದು-ಮುಂದು ನೋಡದೆ ಅವನನ್ನು ಪರಿತ್ಯಜಿಸು. ಅವನನ್ನು ಸೇರಿಸಿಕೊಳ್ಳುವುದರಿಂದ ಹೆಚ್ಚು ಗುಣಗಳಿವೆಯೆಂದು (ನಿನಗೆ ಮನವರಿಕೆಯಾದರೆ) ಅವನನ್ನು ಸೇರಿಸಿಕೊ."

ಅಂಗದನು ಹೀಗೆ ಹೇಳಿದನಂತರ ಶರಭನು ಚೆನ್ನಾಗಿ ಯೋಚನೆಮಾಡಿ ಪ್ರಯೋಜನಕರವಾದ ಈ ಮಾತನ್ನು ಹೇಳಿದನು :

**ಕ್ಷಿಪ್ರಮಸ್ಮಿನ್ನರವ್ಯಾಘ್ರ ಚಾರಃ ಪ್ರತಿವಿಧೀಯತಾಮ್ ॥೪೩॥**

**ಪ್ರಣಿಧಾಯ ಹಿ ಚಾರೇಣ ಯಥಾವತ್ಸೂಕ್ಷ್ಮಬುದ್ಧಿನಾ ।**
**ಪರೀಕ್ಷ್ಯ ಚ ತತಃ ಕಾರ್ಯೋ ಯಥಾನ್ಯಾಯ್ಯಂ ಪರಿಗ್ರಹಃ ॥೪೪॥**

"ಮಹಾರಾಜ! ಅವನ ಆಂತರಿಕ ಅಭಿಪ್ರಾಯವೇನೆಂಬುದನ್ನು ತಿಳಿದು ಬರಲು ನಮ್ಮ ಕಡೆಯ ಗುಪ್ತಚಾರನೊಬ್ಬನನ್ನು ಅವನ ಬಳಿಗೆ ಕಳುಹಿಸು. ಸೂಕ್ಷ್ಮಬುದ್ಧಿಯವನಾದ ಗುಪ್ತಚಾರನನ್ನು ಕಳುಹಿಸಿ ಅವನ ಮೂಲಕವಾಗಿ ಅವನನ್ನು ಸಂಪೂರ್ಣವಾಗಿ ಪರೀಕ್ಷಿಸು. ಅನಂತರವೇ ಅವನನ್ನು ಯಥೋಚಿತವಾಗಿ ಪರಿಗ್ರಹಿಸುವುದು ಉಚಿತವಾಗಿದೆ."

ಶರಭನು ಹೀಗೆ ಹೇಳಿದನಂತರ ವಿದ್ವಾಂಸನಾದ ಜಾಂಬವಂತನು ಶಾಸ್ತ್ರ ಬುದ್ಧಿಯಿಂದ ಎಲ್ಲವನ್ನೂ ಸಂಪೂರ್ಣವಾಗಿ ವಿಮರ್ಶಿಸಿ ಗುಣಯುಕ್ತವಾದ, ದೋಷರಹಿತವಾದ ತನ್ನ ಈ ಅಭಿಪ್ರಾಯವನ್ನು ವಿಜ್ಞಾಪಿಸಿಕೊಂಡನು :

**ಬದ್ಧವೈರಾಚ್ಚ ಪಾಪಾಚ್ಚ ರಾಕ್ಷಸೇನ್ದ್ರಾದ್ವಿಭೀಷಣಃ ।**
**ಅದೇಶಕಾಲೇ ಸಂಪ್ರಾಪ್ತಃ ಸರ್ವಥಾ ಶಙ್ಕ್ಯತಾಮಯಮ್ ॥೪೬॥**

"ಬದ್ಧವೈರಿಯಾದ ಮತ್ತು ಮಹಾಪಾಪಿಷ್ಠನಾದ ರಾವಣನ ಕಡೆಯಿಂದ ಇವನು ಬಂದಿರುತ್ತಾನೆ. ಇವನು ಆಗಮಿಸಲು ಇದು ಸರಿಯಾದ ಸಮಯವೂ ಅಲ್ಲ; ಸರಿಯಾದ ಸ್ಥಾನವೂ ಅಲ್ಲ. ಆದುದರಿಂದ ಇವನ ವಿಷಯದಲ್ಲಿ ಸಂದೇಹಿಸಲೇಬೇಕಾಗಿದೆ."

ಜಾಂಬವಂತನು ಹೀಗೆ ಹೇಳಿದನಂತರ ನೀತಿ ಮತ್ತು ಅನೀತಿಗಳ ಸ್ವರೂಪವನ್ನು ಚೆನ್ನಾಗಿ ತಿಳಿದಿದ್ದ, ವಾಗ್ಮಿಯಾಗಿದ್ದ ಮೈಂದನು ಯುಕ್ತಿ ಯುಕ್ತವೂ ಶ್ರೇಷ್ಠವೂ ಆದ ಈ ಮಾತನ್ನು ಹೇಳಿದನು :

**ಅನುಜೋ ನಾಮ ತಸ್ಯೈಷ ರಾವಣಸ್ಯ ವಿಭೀಷಣಃ ।**
**ಪೃಚ್ಛತಾಂ ಮಧುರೇಣಾಯಂ ಶನೈರ್ನರವರೇಶ್ವರ ॥೪೮॥**

"ಮಹಾರಾಜ! ಈ ವಿಭೀಷಣನು ರಾವಣೇಶ್ವರನ ತಮ್ಮನು. ಆದುದರಿಂದ ಇವನನ್ನು ಮಧುರವಾದ ಮಾತುಗಳಿಂದ ನಿಧಾನವಾಗಿ ಪ್ರಶ್ನಿಸುವುದು ಯುಕ್ತವಾಗಿ ಕಾಣುತ್ತದೆ.

**ಭಾವಮಸ್ಯ ತು ವಿಜ್ಞಾಯ ತತಸ್ತತ್ತ್ವಂ ಕರಿಷ್ಯಸಿ ।**
**ಯದಿ ದುಷ್ಟೋ ನ ದುಷ್ಟೋ ವಾ ಬುದ್ಧಿಪೂರ್ವಂ ನರರ್ಷಭ ॥**

ಹಾಗೆ ಮಾತನಾಡುವುದರ ಮೂಲಕ ಇವನ ಭಾವವೇನೆಂಬುದನ್ನು ತಿಳಿದು ಬುದ್ಧಿಪೂರ್ವಕವಾಗಿ ಇವನು ದುಷ್ಟನೇ? ಅಲ್ಲವೇ? ಎಂಬುದನ್ನು

ಯಥಾವತ್ತಾಗಿ ನಿಶ್ಚಯಿಸಬೇಕು. ಅನಂತರ ನೀನು ಯಾವುದು ಉಚಿತವೋ ಅದನ್ನು ಮಾಡಬಹುದಾಗಿದೆ.”

ಮೈಂದನು ಹೀಗೆ ಹೇಳಿದನಂತರ ಸಚಿವಶ್ರೇಷ್ಠನಾದ, ಶಾಸ್ತ್ರಾಭ್ಯಾಸ ಮೂಲಕವಾದ ಸಂಸ್ಕಾರದಿಂದ ಸಂಪನ್ನನಾದ ಹನುಮಂತನು–ಕೇಳಲು ಇಂಪಾಗಿಯೂ, ಅರ್ಥವತ್ತಾಗಿಯೂ, ಸುಂದರವಾಗಿಯೂ, ಸಂಕ್ಷಿಪ್ತ ವಾಗಿಯೂ ಇದ್ದ ಈ ಮಾತನ್ನು ಹೇಳಿದನು :

**ನ ಭವನ್ತಂ ಮತಿಶ್ರೇಷ್ಠಂ ಸಮರ್ಥಂ ವದತಾಂ ವರಮ್ ।**
**ಅತಿಶಾಯಯಿತುಂ ಶಕ್ತೋ ಬೃಹಸ್ಪತಿರಪಿ ಬ್ರುವನ್ ॥೫೧॥**

“ಪ್ರಭುವೇ! ನೀನು ಬುದ್ಧಿವಂತರಲ್ಲಿ ಶ್ರೇಷ್ಠನು. ಸಮರ್ಥನು. ವಾಗ್ಮಿಗಳಲ್ಲಿ ಶ್ರೇಷ್ಠನು. ಬೃಹಸ್ಪತಿಗೇ ಆದರೂ ನಿನ್ನನ್ನು ಅತಿಶಯಿಸಿ ಮಾತನಾಡಲು ಸಾಧ್ಯವಾಗುವುದಿಲ್ಲ.

**ನ ವಾದನ್ನಾಪಿ ಸಙ್ಘರ್ಷಾನ್ನಾಧಿಕ್ಯಾನ್ನ ಚ ಕಾಮತಃ ।**
**ವಕ್ಷ್ಯಾಮಿ ವಚನಂ ರಾಜನ್ಯಥಾರ್ಥಂ ರಾಮ ಗೌರವಾತ್ ॥೫೨॥**

ಈಗ ನಾನು ವಾದಮಾಡಲೆಂದಾಗಲೀ, ಸ್ಪರ್ಧೆಗಾಗಲೀ, ಎಲ್ಲರಿ ಗಿಂತಲೂ ಅಧಿಕವಾದ ಬುದ್ಧಿಮತ್ತೆಯು ಇರುವುದೆಂದಾಗಲೀ, ಯಾವು ದಾದರೂ ಕಾಮನೆಯಿಂದಾಗಲೀ ಮಾತನಾಡುತ್ತಿಲ್ಲ. ಕಾರ್ಯಗೌರವದ ದೃಷ್ಟಿಯಿಂದ ಯಥಾರ್ಥವಾದ ಮಾತನ್ನು ನಿವೇದಿಸುತ್ತೇನೆ.

ರಾಘವ! ಅಂಗದನೇ ಮೊದಲಾದ ನಿನ್ನ ಮಂತ್ರಿಗಳು ಆಕಾಶದಲ್ಲಿ ನಿಂತಿರುವ ವಿಭೀಷಣನನ್ನು ನಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವುದರಿಂದ ಉಂಟಾಗುವ ಅರ್ಥ ಅಥವಾ ಅನರ್ಥಗಳನ್ನು ಪರೀಕ್ಷಿಸಬೇಕೆಂದು ಹೇಳಿದ್ದ ರಲ್ಲಿ ನಾನು ದೋಷವಿದೆಯೆನ್ನುತ್ತೇನೆ. ಏಕೆಂದರೆ : ಹಾಗೆ ಪರೀಕ್ಷಿಸಲು ಇದು ಸಮಯವೂ ಅಲ್ಲ ; ಸಾಧ್ಯವೂ ಇಲ್ಲ.

**ಋತೇ ನಿಯೋಗಾತ್ಸಾಮರ್ಥ್ಯಮವಬೋದ್ಧುಂ ನ ಶಕ್ಯತೇ ।**
**ಸಹಸಾ ವಿನಿಯೋಗೋ ಹಿ ದೋಷವಾನ್ಪ್ರತಿಭಾತಿ ಮೇ ॥೫೪॥**

ವಿಭೀಷಣನು ಆಶ್ರಯಕೊಡಲು ಯೋಗ್ಯನೇ? ಅಲ್ಲವೇ?–ಎಂಬು ದನ್ನು ನಿರ್ಣಯಿಸಬೇಕಾದರೆ ಮೊದಲು ಅವನಿಗೆ ಯಾವುದಾದರೂ ಕಾರ್ಯ ವನ್ನು ವಹಿಸಿಕೊಡಬೇಕು. ಆದರೆ ಅವನು ನಮ್ಮ ಪಕ್ಷಕ್ಕೆ ಬಂದೊಡನೆಯೇ

ಅವನಿಗೆ ಯಾವುದಾದರೂ ಕಾರ್ಯವನ್ನು ವಹಿಸಿಕೊಡುವುದು ನನಗೆ ದೋಷವಾಗಿ ಕಾಣುತ್ತದೆ.

ಗುಪ್ತಚಾರರನ್ನು ಕಳುಹಿಸಿ ಅವನ ಅಂತರಂಗವನ್ನು ತಿಳಿಯಬೇಕೆಂಬ ನಿನ್ನ ಸಚಿವರಿಂದ ಬಂದ ಸಲಹೆಯೂ ಪ್ರಯೋಜನವಿಲ್ಲದ್ದು. ಏಕೆಂದರೆ : ಅದನ್ನು ಕಾರ್ಯಗತಮಾಡಲು ಸಾಧ್ಯವೇ ಇಲ್ಲ. ಯಾವ ರಾಜನು ನಮ್ಮಿಂದ ದೂರವಿರುವನೋ, ಯಾವನ ವಿಷಯದಲ್ಲಿ ನಮಗೇನೂ ತಿಳಿದಿರುವುದಿಲ್ಲವೋ ಅಂತಹವನ ಬಳಿಗೆ ಗೂಢಚಾರರನ್ನು ಕಳುಹಿಸುವುದರಲ್ಲಿ ಅರ್ಥವಿದೆ. ಈ ಪ್ರಕರಣದಲ್ಲಾದರೋ ನಮ್ಮ ಆಶ್ರಯವನ್ನು ಪ್ರಾರ್ಥಿಸುತ್ತಿರುವವನು ಇಲ್ಲೇ ಇದ್ದಾನೆ. ತಾನಾರೆಂಬುದನ್ನೂ, ತಾನೇಕೆ ತನ್ನ ಅಣ್ಣನನ್ನೂ, ಹೆಂಡತಿ ಮತ್ತು ಮಕ್ಕಳನ್ನೂ ತೊರೆದು ಬಂದೆನೆಂಬುದನ್ನೂ ಅವನೇ ಸ್ಪಷ್ಟವಾಗಿ ಹೇಳುತ್ತಿದ್ದಾನೆ. ಇಂತಹವನ ಬಳಿಗೆ ಗೂಢಚಾರರನ್ನು ಕಳುಹಿಸುವುದರಲ್ಲಿ ಪ್ರಯೋಜನವೇನಿದೆ?

ವಿಭೀಷಣನು ಬಂದಿರುವ ಕಾಲವಾಗಲೀ, ಸ್ಥಳವಾಗಲೀ ಸರಿಯಾಗಿಲ್ಲ ಎಂಬ ಅಭಿಪ್ರಾಯಕ್ಕೆ ನನ್ನ ಬುದ್ಧಿಗೆ ಅನುಸಾರವಾಗಿ ವಿವೇಚಿಸಿ ಹೇಳಲಿರುವ ಈ ಮಾತನ್ನು ಲಾಲಿಸು, ಪ್ರಭುವೇ!

**ಸ ಏಷ ದೇಶಃ ಕಾಲಶ್ಚ ಭವತೀತಿ ಯಥಾ ತಥಾ ।**
**ಪುರುಷಾತ್ಪುರುಷಂ ಪ್ರಾಪ್ಯ ತಥಾ ದೋಷಗುಣಾವಪಿ ॥೫೭॥**

**ದೌರಾತ್ಮ್ಯಂ ರಾವಣೇ ದೃಷ್ಟ್ವಾ ವಿಕ್ರಮಂ ಚ ತಥಾ ತ್ವಯಿ ।**
**ಯುಕ್ತಮಾಗಮನಂ ಹ್ಯತ್ರ ಸದೃಶಂ ತಸ್ಯ ಬುದ್ಧಿತಃ ॥೫೮॥**

ವಿಭೀಷಣನು ಇಲ್ಲಿಗೆ ಬರಲು ಇದೇ ಉತ್ತಮಕಾಲವೂ ಮತ್ತು ಸ್ಥಳವೂ ಆಗಿದೆ. ಅದು ಹೇಗೆಂಬುದನ್ನು ನಿರೂಪಿಸುವೆನು ಕೇಳು : ವಿಭೀಷಣನು ಒಬ್ಬ ನೀಚಪುರುಷನ ಬಳಿಯಿಂದ ಹೊರಟು ಒಬ್ಬ ಸತ್ಪುರುಷನ ಬಳಿಗೆ ಬಂದಿದ್ದಾನೆ. ಹೀಗೆ ಬಂದ ಅವನು ಗುಣ-ದೋಷಗಳನ್ನು ವಿವೇಚಿಸಿಯೇ ಬಂದಿದ್ದಾನೆ. ರಾವಣನಲ್ಲಿರವ ದುಷ್ಟತೆಯನ್ನೂ ನಿನ್ನಲ್ಲಿರುವ ಪರಾಕ್ರಮವನ್ನೂ ನೋಡಿ ರಾವಣನನ್ನು ಬಿಟ್ಟು ನಿನ್ನ ಬಳಿಗೆ ಬಂದಿದ್ದಾನೆ. ಆದುದರಿಂದ ಅವನಿಲ್ಲಿಗೆ ಬಂದಿರುವುದು ಸರ್ವಥಾ ಯುಕ್ತವಾಗಿಯೂ ಇದೆ. ಅವನ ಶ್ರೇಷ್ಠವಾದ ಬುದ್ಧಿಗೆ ಅನುರೂಪವಾಗಿಯೂ ಇದೆ.

ನಮ್ಮ ಮಂತ್ರಿಗಳಲ್ಲೊಬ್ಬರು–'ಅಪರಿಚಿತರಾದ ಪುರುಷರ ಮೂಲಕ ವಾಗಿ ಅವನನ್ನು ನಾನಾರೀತಿಯಲ್ಲಿ ಪ್ರಶ್ನಿಸಿ ಅವನ ಇಂಗಿತವನ್ನು ತಿಳಿಯ ಬೇಕು'–ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ನಾನು ಚೆನ್ನಾಗಿ ವಿಚಾರ ಮಾಡಿ ನಿಶ್ಚಯಿಸಿರುವ ಒಂದು ಅಭಿಪ್ರಾಯವಿದೆ ; ಅದನ್ನೇ ಹೇಳುತ್ತೇನೆ.

**ಪೃಚ್ಛ್ಯಮಾನೋ ವಿಶಙ್ಕೇತ ಸಹಸಾ ಬುದ್ಧಿಮಾನ್ವಚಃ ।**
**ತತ್ರ ಮಿತ್ರಂ ಪ್ರದುಷ್ಯೇತ ಮಿಥ್ಯಾ ಪೃಷ್ಟಂ ಸುಖಾಗತಮ್ ॥೬೦॥**

ಅಪರಿಚಿತನಾದ ಮನುಷ್ಯನು ವಿಭೀಷಣನ ಬಳಿಗೆ ಹೋಗಿ– 'ನೀನಾರು? ಎಲ್ಲಿಂದ ಬಂದಿರುವೆ? ಏಕೆ ಬಂದಿರುವೆ?'–ಮುಂತಾಗಿ ಪ್ರಶ್ನಿಸಿದರೆ ಬುದ್ಧಿವಂತನಾದವನು ನಮ್ಮ ವಿಷಯದಲ್ಲಿ ಸಂದೇಹಪಡುತ್ತಾನೆ. ನಮಗೆ ಅವನಾರೆಂಬುದು ತಿಳಿದಿದ್ದರೂ ನಮಗೇನೂ ತಿಳಿಯದೆಂಬ ರೀತಿ ಯಲ್ಲಿ ಪ್ರಶ್ನಿಸುವುದರಿಂದ ಸುಲಭವಾಗಿ ಸಿಕ್ಕಿದ ಮಿತ್ರನ ಮನಸ್ಸು ಕೆಟ್ಟು ಹೋಗಬಹುದು. ಇದರಿಂದ ನಾವು ಮಿತ್ರಲಾಭದಿಂದ ವಂಚಿತರಾಗುತ್ತೇವೆ.

**ಅಶಕ್ಯಃ ಸಹಸಾ ರಾಜನ್ಭಾವೋ ವೇತ್ತುಂ ಪರಸ್ಯ ವೈ ।**
**ಅನ್ತಃಸ್ವಭಾವೈರ್ಗೀತೈಸ್ತೈರ್ನೈಪುಣ್ಯಂ ಪಶ್ಯತಾ ಭೃಶಮ್ ॥೬೧॥**

ಬೇರೆಯವನ ಮನಸ್ಸಿನಲ್ಲಿ ಯಾವ ಭಾವನೆಯಿರುವುದೆಂಬುದನ್ನು ತಿಳಿಯುವುದು ಅಸಾಧ್ಯವೇ ಸರಿ. ಅವನು ಮಾತನಾಡುವಾಗ ಮಧ್ಯ-ಮಧ್ಯ ದಲ್ಲಿ ಆಗುವ ಸ್ವರಭೇದಗಳಿಂದ ಅವನು ಸಾಧುಭಾವದಿಂದ ಬಂದಿರುವನೋ ಅಥವಾ ಅಸಾಧುಭಾವದಿಂದ ಬಂದಿರುವನೋ ಎಂಬುದನ್ನು ನಿನ್ನಲ್ಲಿರುವ ನೈಪುಣ್ಯದಿಂದ ತಿಳಿಯಬಹುದಾಗಿದೆ.

**ನ ತ್ವಸ್ಯ ಬ್ರುವತೋ ಜಾತು ಲಕ್ಷ್ಯತೇ ದುಷ್ಟಭಾವತಾ ।**
**ಪ್ರಸನ್ನಂ ವದನಂ ಚಾಪಿ ತಸ್ಮಾನ್ಮೇ ನಾಸ್ತಿ ಸಂಶಯಃ ॥೬೨॥**

ವಿಭೀಷಣನೀಗ ಮಾತನಾಡಿರುವುದರಲ್ಲಿ ದುಷ್ಟಭಾವವೇ ಕಾಣುತ್ತಿಲ್ಲ. ಅವನ ಮುಖವೂ ಪ್ರಸನ್ನವಾಗಿದೆ. ಆದುದರಿಂದ ಇವನು ಸಾಧುಭಾವ ದಿಂದಲೇ ಬಂದಿರುವನೆಂಬುದರಲ್ಲಿ ನನಗಾವ ಸಂಶಯವೂ ಇಲ್ಲ.

ದುಷ್ಟಪುರುಷನು ಯಾವಾಗಲೂ ನಿಃಶಂಕನಾಗಿ ಸ್ವಸ್ಥಚಿತ್ತನಾಗಿ ನಮ್ಮ ಮುಂದೆ ಬರಲಾರನು. ಮೇಲಾಗಿ ಇವನ ಮಾತೂ ದೋಷರಹಿತವಾಗಿದೆ. ಆದುದರಿಂದ ಇವನ ವಿಷಯದಲ್ಲಿ ನನಗೆ ಸ್ವಲ್ಪವಾದರೂ ಸಂದೇಹವಿಲ್ಲ.

**ಆಕಾರಶ್ಛಾದ್ಯಮಾನೋऽಪಿ ನ ಶಕ್ಯೋ ವಿನಿಗೂಹಿತುಮ್ ।**
**ಬಲಾದ್ಧಿ ವಿವೃಣೋತ್ಯೇವ ಭಾವಮನ್ತರ್ಗತಂ ನೃಣಾಮ್ ॥೬೪॥**

ಮನುಷ್ಯನು ತನ್ನ ಆಕಾರವನ್ನು ಮುಚ್ಚಿಕೊಳ್ಳಬಹುದು. ಆದರೆ ಅವನು ತನ್ನ ಮನಸ್ಸಿನಲ್ಲಿರುವ ಭಾವನೆಯನ್ನು ಮುಚ್ಚಿಟ್ಟುಕೊಳ್ಳಲಾರನು. ಹೊರಗಿನ ಮುಖವು ಅಂತರಂಗದಲ್ಲಿರುವ ಭಾವನೆಯನ್ನು ಬಲಪೂರ್ವಕವಾಗಿ ಪ್ರಕಟಿಸಿಯೇ ತೀರುತ್ತದೆ.

ಯಾವ ಕಾರ್ಯವನ್ನು ಯಾವಾಗ ಮಾಡಬೇಕೆಂಬುದನ್ನು ತಿಳಿದವ ರಲ್ಲಿ ಶ್ರೇಷ್ಠನಾದವನೇ! ವಿಭೀಷಣನ ಆಗಮನರೂಪವಾದ ಈ ಕಾರ್ಯವು ದೇಶ-ಕಾಲಗಳಿಗೆ ಅನುರೂಪವಾಗಿಯೇ ಇದೆ. ಪ್ರಾಯೋಗಿಕವಾಗಿ ಮಾಡುವ ಆ ಕಾರ್ಯವು ಬಹಳ ಬೇಗ ಫಲದಾಯಕವಾಗುತ್ತದೆ. ನಿನ್ನ ಕಾರ್ಯದಕ್ಷತೆ, ರಾವಣನ ಮಿಥ್ಯಾಚಾರ, ವಾಲಿಯ ವಧ, ಸುಗ್ರೀವನ ಪಟ್ಟಾಭಿಷೇಕ–ಈ ಎಲ್ಲ ವಿಷಯಗಳನ್ನೂ ಕೇಳಿ ತಾನೂ ಕೂಡ ನಿನ್ನ ಸಹಾಯದಿಂದ ರಾಜ್ಯ ವನ್ನು ಪಡೆದುಕೊಳ್ಳುವ ಸಲುವಾಗಿ ವಿಭೀಷಣನು ಬುದ್ಧಿಪೂರ್ವಕವಾಗಿಯೇ ಇಲ್ಲಿಗೆ ಆಗಮಿಸಿದ್ದಾನೆ. ಈ ಎಲ್ಲ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಶರಣಾಗತನಾಗಿ ಬಂದಿರುವ ಇವನಿಗೆ ಆಶ್ರಯವನ್ನು ನೀಡುವುದು ಉಚಿತ ವಾಗಿ ಕಾಣುತ್ತದೆ. ಬುದ್ಧಿವಂತರಲ್ಲಿ ಶ್ರೇಷ್ಠನಾದವನೇ! ಈ ರಾಕ್ಷಸನ ಋಜುತ್ವದ (ಸರಳತೆಯ) ವಿಷಯವಾಗಿ ನಾನು ಯಥಾಶಕ್ತಿ ನಿವೇದಿಸಿದ್ದೇನೆ. ಇದನ್ನು ಕೇಳಿದನಂತರ ನಿನಗೆ ಯಾವುದು ಉಚಿತವಾಗಿ ಕಾಣುವುದೋ ಅದನ್ನು ನೀನು ಮಾಡಬಹುದಾಗಿದೆ."

ಗಿ೭ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೮ನೆಯ ಸರ್ಗ

## ಶ್ರೀರಾಮನು ಶರಣಾಗತರಕ್ಷಣೆಯ ಮಹತ್ತ್ವವನ್ನೂ ಮತ್ತು ತನ್ನ ವ್ರತವನ್ನೂ ವಿವರಿಸಿ ಹೇಳಿದುದು : ವಿಭೀಷಣ ಸಮಾಗಮ

**ಅಥ ರಾಮಃ ಪ್ರಸನ್ನಾತ್ಮಾ ಶ್ರುತ್ವಾ ವಾಯುಸುತಸ್ಯ ಹ ।**
**ಪ್ರತ್ಯಭಾಷತ ದುರ್ಧರ್ಷಃ ಶ್ರುತವಾನಾತ್ಮನಿ ಸ್ಥಿತಮ್ ॥೧॥**

ವಾಯುಪುತ್ರನಾದ ಹನುಮಂತನ ಮುಖದಿಂದ ಅವನ ಹೃದಯದಲ್ಲಡ

ಗಿದ್ದ ಮಾತನ್ನು ಕೇಳಿ ಪ್ರಸನ್ನಚಿತ್ತನಾದ, ಎದುರಿಸಲು ಅಸಾಧ್ಯನಾದ ಶ್ರೀರಾಮನು ಹೇಳಿದನು :

"ಮಿತ್ರರೇ! ವಿಭೀಷಣನ ಸಂಬಂಧವಾಗಿ ನಾನೂ ಕೆಲವು ಮಾತುಗಳನ್ನಾಡಲು ಅಪೇಕ್ಷಿಸುತ್ತೇನೆ. ನೀವೆಲ್ಲರೂ ನನ್ನ ಹಿತಸಾಧನೆಯಲ್ಲಿಯೇ ಆಸಕ್ತರಾಗಿರುವಿರಿ. ಆದುದರಿಂದ ನನ್ನ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ನೀವೂ ಕೇಳಬೇಕೆಂಬುದು ನನ್ನ ಇಚ್ಛೆಯಾಗಿದೆ.

**ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ ।**
**ದೋಷೋ ಯದ್ಯಪಿ ತಸ್ಯ ಸ್ಯಾತ್ಸತಾಮೇತದಗರ್ಹಿತಮ್ ॥೩॥**

ಮಿತ್ರಭಾವದಿಂದ ಬಂದಿರುವ ಈ ವಿಭೀಷಣನನ್ನು ನಾನು ಯಾವುದೇ ಕಾರಣದಿಂದಲೂ ಪರಿತ್ಯಜಿಸುವುದಿಲ್ಲ. ಅವನಲ್ಲಿ ಕೆಲವು ದೋಷಗಳೇ ಇರಬಹುದು. (ಅಲ್ಪ-ಸ್ವಲ್ಪ) ದೋಷವಿರುವವನಿಗೂ ಆಶ್ರಯವನ್ನು ಕೊಡುವುದು ಸತ್ಪುರುಷರಿಗೆ ನಿಂದಿತವಾದುದೇನೂ ಅಲ್ಲ."

ವಾನರರಾಜನಾದ ಸುಗ್ರೀವನು ಶ್ರೀರಾಮನು ಹೇಳಿದ ಈ ಮಾತನ್ನು ತಾನೂ ಪುನಃ ಹೇಳುತ್ತಾ ಆ ಮಾತನ್ನು ಸಂಪೂರ್ಣವಾಗಿ ವಿಮರ್ಶಿಸಿ ಅನಂತರ ಶುಭಕರವಾದ ಈ ಮಾತನ್ನು ಹೇಳಿದನು :

**ಸುದುಷ್ಟೋ ವಾಪ್ಯದುಷ್ಟೋ ವಾ ಕಿಮೇಷ ರಜನೀಚರಃ ।**
**ಈದೃಶಂ ವ್ಯಸನಂ ಪ್ರಾಪ್ತಂ ಭ್ರಾತರಂ ಯಃ ಪರಿತ್ಯಜೇತ್ ।**
**ಕೋ ನಾಮ ಸ ಭವೇತ್ತಸ್ಯ ಯಮೇಷ ನ ಪರಿತ್ಯಜೇತ್ ॥೫॥**

"ಪ್ರಭುವೇ! ಇವನು ದುಷ್ಟನಾಗಲೀ ; ದುಷ್ಟನಾಗದೆಯೇ ಇರಲಿ ; ಇವನು ರಾಕ್ಷಸನೆಂಬುದಂತೂ ನಿಜ. ಆದರೆ ಸಂಕಟದಲ್ಲಿ ಸಿಕ್ಕಿಹಾಕಿಕೊಂಡಿರುವ ಅಣ್ಣನಾದ ರಾವಣನನ್ನೇ ಇವನು ಬಿಟ್ಟುಬಂದ ಮೇಲೆ ಮುಂದೆ ಇವನು ಯಾವ ಸಂಬಂಧಿಯನ್ನು ಅಥವಾ ಮಿತ್ರನನ್ನು ತಾನೇ ಪರಿತ್ಯಜಿಸದೇ ಇರುತ್ತಾನೆ?"

ವಾನರಾಧಿಪತಿಯಾದ ಸುಗ್ರೀವನ ಈ ಮಾತನ್ನು ಕೇಳಿ ಸತ್ಯಪರಾಕ್ರಮನಾದ ಶ್ರೀರಾಮನು ಎಲ್ಲರ ಮುಖಗಳನ್ನೂ ಒಮ್ಮೆ ನೋಡಿದನು. ಮುಗುಳ್ನಗೆಯನ್ನು ಬೀರುತ್ತಾ ಶುಭಲಕ್ಷಣಸಂಪನ್ನನಾದ ಲಕ್ಷ್ಮಣನಿಗೆ ಹೇಳಿದನು:

**ಅನಧೀತ್ಯ ಚ ಶಾಸ್ತ್ರಾಣಿ ವೃದ್ಧಾನನುಪಸೇವ್ಯ ಚ ।**
**ನ ಶಕ್ಯಮೀದೃಶಂ ವಕ್ತುಂ ಯದುವಾಚ ಹರೀಶ್ವರಃ ॥೮॥**

"ಲಕ್ಷ್ಮಣ! ಶಾಸ್ತ್ರಗಳನ್ನು ಅಧ್ಯಯನಮಾಡದೇ, ವೃದ್ಧರನ್ನು ಸೇವಿಸದೇ ಇರುವವನು ಹರೀಶ್ವರನಾದ ಸುಗ್ರೀವನು ಆಡಿದ ಇಂತಹ ಮಾತುಗಳನ್ನು ಹೇಳಲು ಶಕ್ಯವಿಲ್ಲ."

ಲಕ್ಷ್ಮಣನಿಗೆ ಹೀಗೆ ಹೇಳಿದನಂತರ ಶ್ರೀರಾಮನು ಸುಗ್ರೀವನಿಗೆ ಹೇಳುತ್ತಾನೆ.

"ಸುಗ್ರೀವ! ನೀನು ವಿಭೀಷಣನ ವಿಷಯದಲ್ಲಿ ಭ್ರಾತೃಪರಿತ್ಯಾಗ ಮಾಡಿದ ಯಾವ ದೋಷವನ್ನು ಆರೋಪಿಸಿರುವೆಯೋ ಇದರಲ್ಲಿ ನಾವು ಪರಿಗಣಿಸಬೇಕಾಗಿರುವ ಸೂಕ್ಷ್ಮವಾದ ಒಂದು ಅಂಶವೂ ಇರುವುದೆಂದು ನಾನು ಭಾವಿಸುತ್ತೇನೆ. ಇದನ್ನು ನಾವು ಎಲ್ಲ ರಾಜರಲ್ಲೂ ಕಾಣುತ್ತೇವೆ ಮತ್ತು ಲೋಕದಲ್ಲಿ ಇದು ಪ್ರಸಿದ್ಧವೂ ಆಗಿದೆ. ಅದನ್ನೇ ನಾನು ನಿನಗೆ ಹೇಳಬಯಸುತ್ತೇನೆ.

**ಅಮಿತ್ರಾಸ್ತತ್ಕುಲೀನಾಶ್ಚ ಪ್ರಾತಿದೇಶ್ಯಾಶ್ಚ ಕೀರ್ತಿತಾಃ ।**
**ವ್ಯಸನೇಷು ಪ್ರಹರ್ತಾರಸ್ತಸ್ಮಾದಯಮಿಹಾಗತಃ ॥೧೦॥**

ತನ್ನೊಡನೆ ಹುಟ್ಟಿದ ಜ್ಞಾತಿಗಳು ಮತ್ತು ತನ್ನ ರಾಜ್ಯದ ಸಮೀಪ ದಲ್ಲಿರುವ ರಾಜರು ಶತ್ರುಗಳಾಗಿದ್ದರೆ ಕಷ್ಟಸಮಯದಲ್ಲಿ ಪ್ರಹರಿಸುತ್ತಾರೆ. ಇದು ಲೋಕನೀತಿಯೇ ಆಗಿದೆ. ಈ ಕಾರಣದಿಂದಲೇ ವಿಭೀಷಣನು ಇಲ್ಲಿಗೆ ಬಂದಿದ್ದಾನೆ.*

**ಅಪಾಪಾಸ್ತತ್ಕುಲೀನಾಶ್ಚ ಮಾನಯನ್ತಿ ಸ್ವಕಾನ್ಹಿತಾನ್ ।**
**ಏವಂ ಪ್ರಾಯೋ ನರೇನ್ದ್ರಾಣಾಂ ಶಙ್ಕನೀಯಸ್ತು ಶೋಭನಃ ॥**

ಪಾಪರಹಿತರಾದ ಸ್ವವಂಶದವರು (ಜ್ಞಾತಿಗಳು) ತಮ್ಮ ಕುಲದ

---

* ವಿಭೀಷಣನು ರಾವಣನಿಗೆ ಜ್ಞಾತಿ. ಅದೇ ವಂಶದವನು. ಆದರೆ ಲಂಕೆಯಲ್ಲಿ ಅವನಿಗೆ ಎಲ್ಲರೂ ವಿರೋಧಿಗಳು. ಆದುದರಿಂದ ಅವನು ಕಷ್ಟದಲ್ಲಿದ್ದಾನೆ. ರಾವಣನು ತನ್ನನ್ನು ಈ ಕಷ್ಟಸಮಯದಲ್ಲಿ ಸಂಹರಿಸಬಿಡಬಹುದೆಂಬ ಭಯದಿಂದ ವಿಭೀಷಣನು ಇಲ್ಲಿಗೆ ಬಂದಿದ್ದಾನೆ. ಇದು ಶ್ರೀರಾಮನ ಅಭಿಪ್ರಾಯವಾಗಿದೆ.

ಹಿತಕ್ಕೆ ಯಾವಾಗಲೂ ಮಾನ್ಯತೆಯನ್ನು ಕೊಡುತ್ತಾರೆ. ಆದರೆ ನರೇಂದ್ರರಿಗೆ ಅವರು ಶುಭಪ್ರದರಾಗಿದ್ದರೂ ಶಂಕನೀಯರೇ ಆಗಿರುತ್ತಾರೆ. (ಅವರು ಹೇಳುವ ಹಿತಕರವಾದ ಮಾತುಗಳು ತಮ್ಮ ಹಿತಕ್ಕೆ ವಿರೋಧವಾಗಿ ಹೇಳುತ್ತಿರುವಂತೆ ಭಾಸವಾಗುತ್ತವೆ.) ಈ ಕಾರಣದಿಂದಲೇ ವಿಭೀಷಣನು ಇಲ್ಲಿಗೆ ಬಂದಿದ್ದಾನೆ.

**ಯಸ್ತು ದೋಷಸ್ತ್ವಯಾ ಪ್ರೋಕ್ತೋ ಹ್ಯಾದಾನೇಽರಿಬಲಸ್ಯ ಚ ।**
**ತತ್ರ ವೈ ಕೀರ್ತಯಿಷ್ಯಾಮಿ ಯಥಾಶಾಸ್ತ್ರಮಿದಂ ಶೃಣು ॥೧೨॥**

ಸುಗ್ರೀವ! ನೀನು ಶತ್ರುಪಕ್ಷದ ಸೈನಿಕರನ್ನು ಸೇರಿಸಿಕೊಳ್ಳುವುದರಲ್ಲಿ ಯಾವ ದೋಷವನ್ನು ಹೇಳಿದೆಯೋ ಆ ವಿಷಯದಲ್ಲಿ ನೀತಿಶಾಸ್ತ್ರವನ್ನು ಅನುಸರಿಸಿ ಹೇಳುವ ಈ ಮಾತುಗಳನ್ನು ಕೇಳು :

**ನ ವಯಂ ತತ್ಕುಲೀನಾಶ್ಚ ರಾಜ್ಯಕಾಂಕ್ಷೀ ಚ ರಾಕ್ಷಸಃ ।**
**ಪಣ್ಡಿತಾ ಹಿ ಭವಿಷ್ಯನ್ತಿ ತಸ್ಮಾದ್ಗ್ರಾಹ್ಯೋ ವಿಭೀಷಣಃ ॥೧೩॥**

"ನಾವು ವಿಭೀಷಣನ ಕುಲಕ್ಕೆ ಸೇರಿದವರಲ್ಲ. (ಆದುದರಿಂದ ಮುಂದೆಯೂ ಇವನು ನಮ್ಮನ್ನು ಶಂಕಿಸಲು ಅವಕಾಶವಿಲ್ಲ.) ಮೇಲಾಗಿ ಇವನು ರಾಜ್ಯವನ್ನು ಪಡೆದುಕೊಳ್ಳುವ ಅಭಿಲಾಷೆಯಿಂದ ನಮ್ಮ ಕಡೆಗೆ ಬಂದಿದ್ದಾನೆ. (ಇವನ ಆಸೆಯು ಪೂರೈಸಬೇಕಾದರೆ ಇವನು ನಮ್ಮನ್ನು ಖಂಡಿತವಾಗಿಯೂ ಬಿಟ್ಟುಹೋಗಲಾರನು.) ರಾಕ್ಷಸರಲ್ಲಿಯೂ ಅನೇಕರು ಪಂಡಿತರಿದ್ದಾರೆ. (ಇವನೂ ಒಬ್ಬ ವಿದ್ವಾಂಸನೇ ಆದುದರಿಂದ ಇವನಿಂದ ನಮಗೆ ಮುಂದೆ ಹೆಚ್ಚಿನ ಸಹಾಯವಾಗುತ್ತದೆ.) ಈ ಕಾರಣಗಳಿಂದ ವಿಭೀಷಣನು ನಾವು ಆಶ್ರಯಕೊಡಲು ಅರ್ಹನಾಗಿದ್ದಾನೆ.

**ಅವ್ಯಗ್ರಾಶ್ಚ ಪ್ರಹೃಷ್ಟಾಶ್ಚ ತೇ ಭವಿಷ್ಯನ್ತಿ ಸಂಗತಾಃ ।**
**ಪ್ರಣಾದಶ್ಚ ಮಹಾನೇಷೋಽನ್ಯೋನ್ಯಸ್ಯ ಭಯಮಾಗತಮ್ ।**
**ಇತಿ ಭೇದಂ ಗಮಿಷ್ಯನ್ತಿ ತಸ್ಮಾದ್ಗ್ರಾಹ್ಯೋ ವಿಭೀಷಣಃ ॥೧೪॥**

ವಿಭೀಷಣನೇ ಮೊದಲಾದವರು ನಮ್ಮೊಡನೆ ಸೇರಿಕೊಂಡನಂತರ ಪ್ರಹೃಷ್ಟರೂ ನಿಶ್ಚಿಂತರೂ ಆಗುತ್ತಾರೆ. ಇವನು ಆಶ್ರಯಕ್ಕಾಗಿ ನಮ್ಮನ್ನು

ಪ್ರಾರ್ಥಿಸುತ್ತಿರುವುದನ್ನು ನೋಡಿದರೆ ರಾಕ್ಷಸರಲ್ಲಿ ಪರಸ್ಪರವಾಗಿ ಒಬ್ಬರಿಗೆ ಮತ್ತೊಬ್ಬರು ಭಯಪಡುತ್ತಿದ್ದಾರೆಂಬುದು ಸ್ಪಷ್ಟವಾಗಿ ಕಾಣುತ್ತಿದೆ. (ಶತ್ರುಗಳ ನಿಗ್ರಹಕ್ಕಾಗಿ ಅವರಲ್ಲಿ ನಾವೀ ಭೇದವನ್ನುಂಟುಮಾಡಬೇಕಾಗಿದ್ದರೂ ಈಗ ತಾನೇ ತಾನಾಗಿ ಆ ಭೇದವುಂಟಾಗಿದೆ.) ಅವರಲ್ಲಿಯೇ ಇಂತಹ ಭೇದವುಂಟಾಗಿ ಒಬ್ಬನು ನಮ್ಮನ್ನು ಆಶ್ರಯಿಸಿ ಬಂದಿರುವುದರಿಂದ ಆ ವಿಭೀಷಣನನ್ನು ನಾವು ಪ್ರತಿಗ್ರಹಿಸುವುದು ಉಚಿತವಾಗಿದೆ.

**ನ ಸರ್ವೇ ಭ್ರಾತರಸ್ತಾತ ಭವನ್ತಿ ಭರತೋಪಮಾಃ ।**
**ಮದ್ವಿಧಾ ವಾ ಪಿತುಃ ಪುತ್ರಾಃ ಸುಹೃದೋ ವಾ ಭವದ್ವಿಧಾಃ ॥**

ಸುಗ್ರೀವ! ಪ್ರಪಂಚದಲ್ಲಿ ಎಲ್ಲ ತಮ್ಮಂದಿರೂ ಭರತನಂತೆಯೇ ಇರುವುದಿಲ್ಲ. ತಂದೆಯಾದವನಿಗೆ ನನ್ನಂತೆ ಮಕ್ಕಳೂ ಇರುವುದಿಲ್ಲ. ಎಲ್ಲ ಮಿತ್ರರೂ ನಿನ್ನಂತೆಯೂ ಇರುವುದಿಲ್ಲ."

ಶ್ರೀರಾಮನು ಹೀಗೆ ಹೇಳಲು ಲಕ್ಷ್ಮಣಸಮೇತನಾಗಿ ಮಹಾಪ್ರಾಜ್ಞನಾದ ಸುಗ್ರೀವನು ಮೇಲೆದ್ದು ರಾಮನಿಗೆ ನಮಸ್ಕರಿಸಿ ಹೇಳಿದನು :

"ಉಚಿತವಾದ ಕಾರ್ಯವನ್ನು ಮಾಡುವವರಲ್ಲಿ ಶ್ರೇಷ್ಠನಾದವನೇ! ರಾಘವ! ಈ ವಿಭೀಷಣರಾಕ್ಷಸನನ್ನು ರಾವಣನೇ ಕಳುಹಿಸಿದ್ದಾನೆ. ಹೀಗೆ ನೀನು ಭಾವಿಸುವುದು ಯುಕ್ತವಾಗಿದೆ. ಆದುದರಿಂದ ಈ ಸಮಯದಲ್ಲಿ ಇವನನ್ನು ಬಂಧಿಸಿಡುವುದೇ ಉಚಿತವೆಂದು ನಾನು ಭಾವಿಸುತ್ತೇನೆ. ರಾವಣನಿಂದ ಕಳುಹಿಸಲ್ಪಟ್ಟಿರುವ ಇವನು ಕುಟಿಲವಾದ ಬುದ್ಧಿಯಿಂದಲೇ ಇಲ್ಲಿಗೆ ಆಗಮಿಸಿದ್ದಾನೆ. ನಾನು, ನೀನು ಮತ್ತು ಈ ಲಕ್ಷ್ಮಣ ಈ ಮೂವರೂ ಇವನನ್ನು ಸಂಪೂರ್ಣವಾಗಿ ನಂಬಿಬಿಟ್ಟನಂತರ ಸಮಯವನ್ನು ನೋಡಿ ನಮ್ಮನ್ನು ಪ್ರಹರಿಸುವುದೇ ಇವನ ಉದ್ದೇಶವಾಗಿದೆ. ಆದುದರಿಂದ ಇವನನ್ನು ಇವನ ನಾಲ್ವರು ಸಚಿವರೊಡನೆ ವಧಿಸುವುದೇ ಯೋಗ್ಯವಾಗಿದೆ. ಈ ವಿಭೀಷಣನು ಮಹಾಕ್ರೂರಿಯಾದ ರಾವಣನ ತಮ್ಮನೆಂಬುದನ್ನು ನಾವು ಮರೆಯಬಾರದು."

ಸೇನಾಪತಿಯಾದ ಸುಗ್ರೀವನು ವಾಕ್ಯಕುಶಲನಾದ ರಘುಶ್ರೇಷ್ಠನಿಗೆ ಹೀಗೆ ಹೇಳಿ ಸುಮ್ಮನಾದನು.

ಸುಗ್ರೀವನ ಈ ಮಾತನ್ನು ಕೇಳಿ ಶ್ರೀರಾಮನು ಸ್ವಲ್ಪ ಹೊತ್ತು ಅವನ ಅಭಿಪ್ರಾಯವನ್ನು ಕೂಲಂಕಷವಾಗಿ ವಿಮರ್ಶಿಸಿದನು. ಅನಂತರ ಶುಭಕರವಾದ ಈ ಮಾತನ್ನು ಕಪಿಶ್ರೇಷ್ಠನಾದ ಸುಗ್ರೀವನಿಗೆ ಹೇಳಿದನು :

**ಸುದುಷ್ಟೋ ವಾಪ್ಯದುಷ್ಟೋ ವಾ ಕಿಮೇಷ ರಜನೀಚರಃ ।**
**ಸೂಕ್ಷ್ಮಮಪ್ಯಹಿತಂ ಕರ್ತುಂ ಮಮಾಶಕ್ತಃ ಕಥಂಚನ ॥೨೨॥**

"ಸುಗ್ರೀವ! ಈ ನಿಶಾಚರನು ದುಷ್ಟನಾಗಿಯೇ ಇರಲಿ ; ದುಷ್ಟನಲ್ಲದೆಯೇ ಇರಲಿ. ಯಾವುದೇ ರೀತಿಯಲ್ಲಾದರೂ ನನಗೆ ಅತ್ಯಲ್ಪವಾದ ಅಹಿತವನ್ನು ಮಾಡಲು ತಾನೇ ಇವನಿಗೆ ಸಾಧ್ಯವಿರುವುದೇ?

**ಪಿಶಾಚಾನ್ದಾನವಾನ್ಯಕ್ಷಾನ್ಪೃಥಿವ್ಯಾಂ ಚೈವ ರಾಕ್ಷಸಾನ್ ।**
**ಅಙ್ಗುಲ್ಯಗ್ರೇಣ ತಾನ್ಹನ್ಯಾಮಿಚ್ಛನ್ಹರಿಗಣೇಶ್ವರ ॥೨೩॥**

ಕಪಿಗಳಿಗೆ ಸ್ವಾಮಿಯಾದ ಸುಗ್ರೀವನೇ! ನಾನೇನಾದರೂ ಇಚ್ಛಿಸಿದ್ದೇ ಆದರೆ ಈ ಪೃಥ್ವಿಯಲ್ಲಿರುವ ಪಿಶಾಚರನ್ನೂ, ದಾನವರನ್ನೂ, ಯಕ್ಷರನ್ನೂ, ರಾಕ್ಷಸರನ್ನೂ ನನ್ನ ಬೆರಳಿನ ಅಗ್ರಭಾಗದಿಂದಲೇ ಸಂಹಾರಮಾಡಬಲ್ಲೆನು.

**ಶ್ರೂಯತೇ ಹಿ ಕಪೋತೇನ ಶತ್ರುಃ ಶರಣಮಾಗತಃ ।**
**ಅರ್ಚಿತಶ್ಚ ಯಥಾನ್ಯಾಯಂ ಸ್ವೈಶ್ಚ ಮಾಂಸೈರ್ನಿಮನ್ತ್ರಿತಃ ॥೨೪॥**

ಪ್ರಸಿದ್ಧವಾದ ಈ ಕಥೆಯನ್ನು ನಾವೆಲ್ಲರೂ ಕೇಳಿದ್ದೇವೆ. ಕಪೋತವು ವಾಸವಾಗಿದ್ದ ವೃಕ್ಷದ ಬಳಿಗೆ ಬೇಡನೊಬ್ಬನು ನಡುಗುತ್ತಾ ಬಂದನು. ಸ್ವಭಾವತಃ ಪಕ್ಷಿಗಳಿಗೆ ಬೇಡನೇ ಶತ್ರು. ಮೇಲಾಗಿ ಆ ಬೇಡನು ಕಪೋತ ದೊಡನಿದ್ದ ಹೆಣ್ಣುಕಪೋತವನ್ನು ಕೊಂದುಹಾಕಿದ್ದನು. ಅಂತಹ ಪರಮ ಶತ್ರುವಾದ ಬೇಡನು ತಾನು ವಾಸಮಾಡುತ್ತಿದ್ದ ವೃಕ್ಷದ ಬುಡಕ್ಕೆ ನಡುಗುತ್ತಾ ಬರಲು ಕಪೋತವು ಅವನನ್ನು ಯಥೋಚಿತವಾಗಿ ಸತ್ಕರಿಸಿತು. (ಬೆಂಕಿಯನ್ನು ಹೊತ್ತಿಸಿ ಕಾಸಿಕೊಳ್ಳಲು ಅನುಕೂಲಮಾಡಿಕೊಟ್ಟು ಕಡೆಗೆ ತಾನೇ ಬೆಂಕಿಗೆ ಬಿದ್ದು ಆ ಬೇಡನಿಗೆ ಆಹಾರವಾಗಿ ಪರಿಣಮಿಸಿತು.) ತನ್ನ ಆಶ್ರಯಕ್ಕೆ ಬಂದವನನ್ನು ಎಷ್ಟು ಆದರದಿಂದ ಕಾಣಬೇಕೆಂಬುದನ್ನು ನಾವು ಈ ಕಪೋತದ ಉದಾಹರಣೆಯಿಂದ ತಿಳಿಯಬೇಕಾಗಿದೆ.

**ಸ ಹಿ ತಂ ಪ್ರತಿಜಗ್ರಾಹ ಭಾರ್ಯಾಹರ್ತಾರಮಾಗತಮ್ ।**
**ಕಪೋತೋ ವಾನರಶ್ರೇಷ್ಠ ಕಿಂ ಪುನರ್ಮದ್ವಿಧೋ ಜನಃ ॥೨೫॥**

ತನ್ನ ಭಾರ್ಯೆಯನ್ನೇ ಕೊಂದ ಬೇಡನನ್ನು ಆ ಕಪೋತವು ಆದರ ದಿಂದ ಬರಮಾಡಿಕೊಂಡಿತು. ಸಾಮಾನ್ಯವಾದ ಪಕ್ಷಿಯೊಂದು ತನ್ನ ಮನೆಗೆ ಬಂದವನಿಗೆ, ಅದರಲ್ಲಿಯೂ ಅಪಕಾರಿಗೆ, ಶತ್ರುವಿಗೆ ಇಂತಹ ಆದರವನ್ನು ತೋರಿಸಿರುವಾಗ ನನ್ನಂತಹವನ ವಿಷಯದಲ್ಲಿ ಹೇಳುವುದೇನಿದೆ?

ಹಿಂದೆ ಕಣ್ವಮುನಿಯ ಪುತ್ರನಾದ ಸತ್ಯವಾದಿಯಾದ ಕಂಡು ಮಹರ್ಷಿಯು ಧಾರ್ಮಿಕವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ಶ್ಲೋಕ ಗಳನ್ನು ಹಾಡಿದ್ದನು. ಅದನ್ನು ಹೇಳುವೆನು ; ಕೇಳು :

**ಬದ್ಧಾಞ್ಜಲಿಪುಟಂ ದೀನಂ ಯಾಚನ್ತಂ ಶರಣಾಗತಮ್ ।**
**ನ ಹನ್ಯಾದಾನೃಶಂಸ್ಯಾರ್ಥಮಪಿ ಶತ್ರುಂ ಪರಂತಪ ॥೨೮॥**

'ಶತ್ರುವೇ ಆಗಿದ್ದರೂ ಶರಣಾಗತನಾಗಿ ದೀನಭಾವದಿಂದ ಕೈಜೋಡಿಸಿ ಕೊಂಡು ದಯಾಯಾಚನೆಯನ್ನು ಮಾಡುತ್ತಿದ್ದರೆ ಅಂತಹವನನ್ನು ಖಂಡಿತ ವಾಗಿಯೂ ಸಂಹರಿಸಬಾರದು.

**ಆರ್ತೋ ವಾ ಯದಿ ವಾ ದೃಪ್ತಃ ಪರೇಷಾಂ ಶರಣಂ ಗತಃ ।**
**ಅಪಿ ಪ್ರಾಣಾನ್ಪರಿತ್ಯಜ್ಯ ರಕ್ಷಿತವ್ಯಃ ಕೃತಾತ್ಮನಾ ॥೨೯॥**

ದುಃಖಿಯೇ ಆಗಲೀ, ಅಭಿಮಾನಿಯೇ ಆಗಲೀ ಅವನು ತನ್ನ ಶತ್ರು ಗಳಿಗೆ ಶರಣಾಗತನಾದರೆ, ಶುದ್ಧಹೃದಯನಾದ ಶ್ರೇಷ್ಠಪುರುಷನು ಹಾಗೆ ಶರಣಾಗತನಾಗಿ ಬರುವ ತನ್ನ ಆ ಶತ್ರುವನ್ನು ಪ್ರಾಣಪರಿತ್ಯಾಗಮಾಡಿಯೇ ಆದರೂ ರಕ್ಷಿಸಬೇಕು.

**ತಂ ಚೇದ್ಭಯಾದ್ವಾ ಮೋಹಾದ್ವಾ ಕಾಮಾದ್ವಾಪಿ ನ ರಕ್ಷತಿ ।**
**ಸ್ವಯಾ ಶಕ್ತ್ಯಾ ಯಥಾನ್ಯಾಯಂ ತತ್ಪಾಪಂ ಲೋಕಗರ್ಹಿತಮ್ ॥**

ಒಂದು ವೇಳೆ ಅವನು ಭಯದಿಂದಲೋ, ಮೋಹದಿಂದಲೋ ಅಥವಾ ಯಾವುದಾದರೂ ದುಷ್ಟಕಾಮನೆಯಿಂದಲೋ ನ್ಯಾಯಾನುಸಾರ ವಾಗಿ ತನ್ನಲ್ಲಿರುವ ಶಕ್ತಿಯಿಂದ ಶರಣಾಗತನಾಗಿ ಬಂದ ಶತ್ರುವನ್ನು ರಕ್ಷಿಸ ದಿದ್ದರೆ ಅದು ಲೋಕನಿಂದ್ಯವಾದ ಮಹಾಪಾಪವಾಗುತ್ತದೆ.

**ವಿನಷ್ಟಃ ಪಶ್ಯತೋ ಯಸ್ಯಾ ರಕ್ಷಿತುಃ ಶರಣಾಗತಃ ।**
**ಆದಾಯ ಸುಕೃತಂ ತಸ್ಯ ಸರ್ವಂ ಗಚ್ಛೇದರಕ್ಷಿತಃ ॥೩೦॥**

ಶರಣಾಗತನಾಗಿ ಬಂದ ಪುರುಷನು ತನಗೆ ರಕ್ಷಣೆಯು ಸಿಕ್ಕದೆ ಶರಣ್ಯನ ಎದುರಿನಲ್ಲಿಯೇ ನಾಶಹೊಂದಿದರೆ ಅವನು ಶರಣ್ಯನ ಸಕಲವಾದ ಪುಣ್ಯವನ್ನೂ ತನ್ನ ಜೊತೆಯಲ್ಲೇ ತೆಗೆದುಕೊಂಡು ಹೋಗುತ್ತಾನೆ.'

**ಏವಂ ದೋಷೋ ಮಹಾನತ್ರ ಪ್ರಪನ್ನಾನಾಮರಕ್ಷಣೇ ।**
**ಅಸ್ವರ್ಗ್ಯಂ ಚಾಯಶಸ್ಯಂ ಚ ಬಲವೀರ್ಯವಿನಾಶನಮ್ ॥೩೧॥**

ಹೀಗೆ ಶರಣಾಗತನಾಗಿ ಬಂದವನಿಗೆ ರಕ್ಷಣೆಯನ್ನು ನೀಡದಿದ್ದರೆ ಮಹಾದೋಷವೇ ಉಂಟಾಗುತ್ತದೆ. ಶರಣಾಗಿ ಬಂದವನ ತ್ಯಾಗವು ಸ್ವರ್ಗ ಮತ್ತು ಯಶಸ್ಸಿನ ನಷ್ಟಕ್ಕೆ ಕಾರಣವಾಗುತ್ತದೆ.

ಆದುದರಿಂದ, ಸುಗ್ರೀವ! ಕಂಡುಮಹರ್ಷಿಯ ಯಥಾರ್ಥವಾದ ಮತ್ತು ಉತ್ತಮವಾದ ಮಾತಿನಂತೆ ನಡೆಯುತ್ತೇನೆ. ಏಕೆಂದರೆ : ಅದು ಪರಿಣಾಮ ದಲ್ಲಿ ಧರ್ಮ, ಯಶಸ್ಸು ಮತ್ತು ಸ್ವರ್ಗಗಳ ಪ್ರಾಪ್ತಿಗೆ ಕಾರಣವಾಗುತ್ತದೆ.

**ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।**
**ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥೩೩॥**

ಯಾರೇ ಆದರೂ ಒಂದೇ ಒಂದು ಬಾರಿ ಶರಣಾಗತನಾಗಿ– 'ಪ್ರಭುವೇ! ನಾನು ನಿನ್ನವನು. ನನ್ನನ್ನು ರಕ್ಷಿಸು'–ಎಂದು ಯಾಚಿಸುವನೋ ಅಂತಹವನಿಗೆ ಸಮಸ್ತಪ್ರಾಣಿಗಳ ದೆಸೆಯಿಂದಲೂ ಅಥವಾ ಅಂತಹವನಿಗೂ, ಹಾಗೆ ಯಾಚಿಸುವ ಸಮಸ್ತಪ್ರಾಣಿಗಳಿಗೂ ನಾನು ಅಭಯವನ್ನು ನೀಡು ತ್ತೇನೆ. ಇದು ನನ್ನ ಸತತವಾದ ವ್ರತವಾಗಿದೆ.

**ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ ।**
**ವಿಭೀಷಣೋ ವಾ ಸುಗ್ರೀವ ಯದಿ ವಾ ರಾವಣಃ ಸ್ವಯಮ್ ॥೩೪॥**

ಆದುದರಿಂದ ಕಪಿಶ್ರೇಷ್ಠನೇ! ಸುಗ್ರೀವ! ವಿಭೀಷಣನನ್ನು ಕರೆದು ಕೊಂಡು ಬಾ. ಅವನಿಗೆ ನಾನು ಅಭಯವನ್ನು ಕೊಟ್ಟುಬಿಟ್ಟಿದ್ದೇನೆ. ವಿಭೀಷಣನೇ ಏಕೆ? ರಾವಣನೇ ಶರಣಾಗತನಾಗಿ ಬಂದರೂ ಅವನನ್ನೂ ಕರೆದುಕೊಂಡು ಬಾ. ಅವನಿಗೂ ನಾನು ಅಭಯದಾನಮಾಡುತ್ತೇನೆ."

ಶ್ರೀರಾಮನ ಈ ಮಾತನ್ನು ಕೇಳಿ ಸೌಹಾರ್ದಭಾವದಿಂದ ತುಂಬಿದವನಾಗಿ ಪ್ಲವಗೇಶ್ವರನಾದ ಸುಗ್ರೀವನು ಹೇಳಿದನು :

**ಕಿಮತ್ರ ಚಿತ್ರಂ ಧರ್ಮಜ್ಞ ಲೋಕನಾಥ ಸುಖಾವಹ ।**
**ಯತ್ತ್ವಮಾರ್ಯಂ ಪ್ರಭಾಷೇಥಾಃ ಸತ್ತ್ವವಾನ್ಸತ್ಪಥೇ ಸ್ಥಿತಃ ॥**

"ಧರ್ಮಜ್ಞನೇ! ಲೋಕೇಶ್ವರರೆಲ್ಲರಿಗೂ ಶಿರೋಭೂಷಣಪ್ರಾಯನಾಗಿರುವವನೇ! ಸತ್ಯವಂತನಾದ ಸನ್ಮಾರ್ಗದಲ್ಲಿರುವ ನೀನು ಶರಣಾಗತ ಧರ್ಮದ ವಿಷಯವಾಗಿ ಇಂತಹ ಶ್ರೇಷ್ಠವಾದ ಮಾತನಾಡಿದುದರಲ್ಲಿ ಆಶ್ಚರ್ಯವೇನಿದೆ?

**ಮಮ ಚಾಪ್ಯನ್ತರಾತ್ಮಾಯಂ ಶುದ್ಧಂ ವೇತ್ತಿ ವಿಭೀಷಣಮ್ ।**
**ಅನುಮಾನಾಚ್ಚ ಭಾವಾಚ್ಚ ಸರ್ವತಃ ಸುಪರೀಕ್ಷಿತಃ ॥೩೭॥**

ನನ್ನ ಅಂತರಾತ್ಮವೂ ವಿಭೀಷಣನು ಶುದ್ಧನಾಗಿರುವನೆಂದೇ ಹೇಳುತ್ತಿದೆ. ಹನುಮಂತನು ಕೂಡ ಹೃದಯಪ್ರಕಾಶಕವಾದ ಊಹೆಯಿಂದಲೂ ಮತ್ತು ಅವನನ್ನು ಗಮನಿಸುವುದರಿಂದಲೂ ವಿಭೀಷಣನನ್ನು ಚೆನ್ನಾಗಿಯೇ ಪರೀಕ್ಷಿಸಿದ್ದಾನೆ.

ಆದುದರಿಂದ, ರಾಘವ! ವಿಭೀಷಣನು ಶೀಘ್ರವಾಗಿ ಇಲ್ಲಿಗೆ ಬಂದು ನಮ್ಮಲ್ಲೊಬ್ಬನಾಗಲಿ. ಮಹಾಪ್ರಾಜ್ಞನಾದ ವಿಭೀಷಣನು ನಮ್ಮ ಮಿತ್ರತ್ವವನ್ನು ಹೊಂದಲಿ."

ಅನಂತರ ವಾನರರಾಜನಾದ ಸುಗ್ರೀವನು ಹೇಳಿದ ಮಾತನ್ನು ಕೇಳಿ ರಾಜರಾಜನಾದ ಶ್ರೀರಾಮನು ಶೀಘ್ರವಾಗಿ ಮುಂದೆ ಹೋಗಿ—ಇಂದ್ರನು ಪಕ್ಷಿರಾಜನಾದ ಗರುಡನೊಡನೆ ಸೇರಿದಂತೆ-ವಿಭೀಷಣನೊಡನೆ ಸೇರಿದನು.

೧೮ನೆಯ ಸರ್ಗವು ಮುಗಿಯಿತು.

**ಏಳನೆಯ ಸಂಪುಟವು ಮುಗಿಯಿತು.**

ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

# ಪರಿಶಿಷ್ಟ

## ಶ್ರೀರಾಮನು ಏಕಪತ್ನೀವ್ರತಸ್ಥನೇ?

ಶ್ರೀರಾಮನಿಗೆ ಸೀತೆಯೊಬ್ಬಳೇ ಪತ್ನಿಯೋ ಅಥವಾ ಇನ್ನೂ ಹಲವಾರುಮಂದಿ ಪತ್ನಿಯರಿದ್ದರೋ? ಎಂಬ ಬಗೆಗೆ ವಿಚಾರಭೇದವಿದೆ. ಶ್ರೀರಾಮನಿಗೆ ಅನೇಕ ಪತ್ನಿಯರಿದ್ದರು ಎಂಬುದನ್ನು ಕೆಲವು ವಿದ್ವಾಂಸರು ಹೀಗೆ ಪ್ರತಿಪಾದಿಸುತ್ತಾರೆ :

ಶ್ರೀಮದ್ವಾಲ್ಮೀಕಿರಾಮಾಯಣದಲ್ಲಿಯೂ ಮತ್ತು ದೂರ್ವಾಸ, ಅಗಸ್ತ್ಯ, ವಾಸಿಷ್ಠ ಮುಂತಾದ ಇತರ ರಾಮಾಯಣಗಳಲ್ಲಿಯೂ ಸಹ ರಾಮನು ಬಹುಪತ್ನಿಯರನ್ನು ಪಡೆದಿದ್ದನೆಂಬುದಕ್ಕೆ ಸಾಕಷ್ಟು ಪ್ರಮಾಣಗಳಿವೆ. ಶ್ರೀಮದ್ವಾಲ್ಮೀಕಿರಾಮಾಯಣದಲ್ಲಿ ಬರುವ ಶ್ಲೋಕಗಳಿಗೆ ವ್ಯಾಖ್ಯಾನಕಾರರು–ಶ್ರೀರಾಮನು ಬಹುಪತ್ನಿಯುಳ್ಳವನೆಂದು ಅರ್ಥಮಾಡಿದರೆ ದೋಷವುಂಟಾದೀತೆಂಬ ಭಯದಿಂದ ಏಕಪತ್ನೀತ್ವದ ಅರ್ಥವನ್ನು ಬಹಳ ಕಷ್ಟಪಟ್ಟು ಮಾಡಿರುವರೇ ಹೊರತು ಸ್ವಾಭಾವಿಕವಾದ ಅರ್ಥದಿಂದ ರಾಮನಿಗೆ ಸೀತೆಯಲ್ಲದೇ ಬೇರೆಯ ಪತ್ನಿಯರೂ ಇದ್ದರೆಂಬುದು ಬಹಳ ಸ್ಪಷ್ಟವಾಗಿ ಕಾಣುತ್ತದೆ.

ರಾಮನಿಗೆ ಅನೇಕ ಪತ್ನಿಯರಿದ್ದರೆಂಬುದಕ್ಕೆ ಸಾಧಕವಾದ ಹಲವಾರು ಶ್ಲೋಕಗಳು ಶ್ರೀಮದ್ವಾಲ್ಮೀಕಿರಾಮಾಯಣದಲ್ಲಿಯೇ ಇವೆ.

**ಹೃಷ್ಟಾಃ ಖಲು ಭವಿಷ್ಯನ್ತಿ ರಾಮಸ್ಯ ಪರಮಾಃ ಸ್ತ್ರಿಯಃ ।**
**ಅಪ್ರಹೃಷ್ಟಾ ಭವಿಷ್ಯನ್ತಿ ಸ್ನುಷಾಸ್ತೇ ಭರತಕ್ಷಯೇ ॥**

ಅಯೋಧ್ಯಾಕಾಂಡ ಸರ್ಗ ೮, ಶ್ಲೋಕ ೧೨.

"ರಾಮನು ರಾಜನಾಗುವುದರಿಂದ ರಾಮನ ಶ್ರೇಷ್ಠರಾದ ಸ್ತ್ರೀಯರೆಲ್ಲರೂ ಹರ್ಷಿತರಾಗುತ್ತಾರೆ. ಭರತನ ಪ್ರಭಾವದ ವಿನಾಶದಿಂದಾಗಿ ನಿನ್ನ ಸೊಸೆಯರು ಸಂತೋಷಹೀನರಾಗುತ್ತಾರೆ."

**ಯಸ್ಸುಖೇಷೂಪಧಾನೇಷು ಶೇತೇ ಚನ್ದನರೂಷಿತಃ I**
**ವೀಜ್ಯಮಾನೋ ಮಹಾರ್ಹಾಭಿಸ್ತ್ರೀಭಿರ್ಮಮ ಸುತೋತ್ತಮಃ II**

ಅಯೋಧ್ಯಾಕಾಂಡ, ಸರ್ಗ ೪೨, ಶ್ಲೋಕ ೧೫.

"ಯಾವ ನನ್ನ ರಾಮನು ಚಂದನವನ್ನು ಲೇಪನಮಾಡಿಕೊಂಡು ಸುಖಕರವಾದ ಮಂಚದಲ್ಲಿ ಶ್ರೇಷ್ಠರಾದ ವರಸೀಯರಿಂದ ಮಂದಮಂದವಾಗಿ ವ್ಯಜನಗಳಿಂದ ಬೀಸಲ್ಪಡುತ್ತಾ ಮಲಗಿ ನಿದ್ರಿಸುತ್ತಾನೆಯೋ ಅಂತಹ ರಾಮನಿಂದ ಕಾಡಿನಲ್ಲಿ ನೆಲದ ಮೇಲೆ ಮಲಗಿದ್ದಾನೆ."

ಇಲ್ಲಿಯೂ ಸಹ 'ಹೃಷ್ಟಾಃ ಖಲು' ಎಂಬ ಶ್ಲೋಕದಲ್ಲಿ 'ಪರಮಾಃ ಸ್ತ್ರಿಯಃ' ಎಂದು ಪದಪ್ರಯೋಗಮಾಡಿರುವಂತೆ 'ಮಹಾರ್ಹಾಭಿಃ ಸ್ತ್ರೀಭಿಃ' ಎಂಬ ಪದಗಳನ್ನು ಬಳಸಲಾಗಿದೆ. ಯದ್ಯಪಿ ರಾಮನ ಶಯ್ಯಾಗಾರದಲ್ಲಿ ಪರಿಚಾರಿಕೆಯರಿರುವುದು ಅಸಮಂಜಸವೆನಿಸಿದರೂ 'ಸ್ತ್ರೀಭಿಃ' ಶಬ್ದಕ್ಕೆ ವ್ಯಾಖ್ಯಾನಕಾರರು 'ಪರಿಚಾರಿಕಾಭಿಃ' 'ಪರಿಚಾರಿಕೆಯರಿಂದ' ಎಂದೇ ವ್ಯಾಖ್ಯಾನಮಾಡಿರುತ್ತಾರೆ.

ಈ ಹಿಂದೆ ನಿರೂಪಿಸಿರುವಂತೆ 'ಮೋಘಂ ಹಿ' ಎಂಬ ಶ್ಲೋಕದಿಂದ ರಾಮನ ಏಕಪತ್ನೀತ್ವವನ್ನು ಸೂಚಿಸಿದ ಸೀತೆಯು ಅದರ ಮುಂದಿನ ಶ್ಲೋಕದಲ್ಲಿ ಹೀಗೆ ಹೇಳುತ್ತಾಳೆ :

**ಪಿತುರ್ನಿದೇಶಂ ನಿಯಮೇನ ಕೃತ್ವಾ ವನಾನ್ನಿವೃತ್ತಶ್ಚರಿತವ್ರತಶ್ಚ I**
**ಸ್ತ್ರೀಭಿಸ್ತು ಮನ್ಯೇ ವಿಪುಲೇಕ್ಷಣಾಭಿಸ್ತ್ವಂ ರಂಸ್ಯಸೇ ವೀತಭಯಃ ಕೃತಾರ್ಥಃ II**

"ಪಿತೃವಾಕ್ಯವನ್ನು ಪರಿಪಾಲಿಸಿ ಅರಣ್ಯವಾಸದಿಂದ ಹಿಂದಿರುಗಿದ ನೀನು (ರಾಮ) ಕೃತಕೃತ್ಯನಾಗಿ, ಭಯರಹಿತನಾಗಿ ಆಯತಾಕ್ಷಿಯರಾದ ಸ್ತ್ರೀಯರೊಡಗೂಡಿ ರಮಿಸುವೆ." ಈ ಶ್ಲೋಕದಲ್ಲಿಯೂ 'ಸ್ತ್ರೀಭಿಃ' ಎಂಬ ಪದಪ್ರಯೋಗವಿದೆಯೇ ಹೊರತು 'ಪತ್ನೀ' ಶಬ್ದವಿರುವುದಿಲ್ಲ. ಆದರೆ ಇಲ್ಲಿನ 'ಸ್ತ್ರೀ' ಶಬ್ದಕ್ಕೆ ಪರಿಚಾರಿಕೆಯರೆಂದು ಅರ್ಥಮಾಡುವ ಧೈರ್ಯವು ವ್ಯಾಖ್ಯಾನಕಾರರಿಗೂ ಇರುವುದಿಲ್ಲ. ಏಕೆಂದರೆ 'ಸ್ತ್ರೀಭಿಃ ಸಹ ರಂಸ್ಯಸೇ' ಎಂದು

ಸೀತೆಯು ಸ್ಪಷ್ಟವಾಗಿಯೇ ಹೇಳಿದ್ದಾಳೆ. ಆದುದರಿಂದ–'ನಾನು ಸತ್ತು ಹೋದನಂತರ' ಎಂದು ಸೀತೆಯ ಅಭಿಪ್ರಾಯವೇ ಹೊರತು 'ಈಗಲೂ ರಾಮನಿಗೆ ಅನೇಕಪತ್ನಿಯರಿದ್ದರೆಂಬ'–ಅಭಿಪ್ರಾಯವಲ್ಲ ಎಂದು ವ್ಯಾಖ್ಯಾನ ಕಾರರು ಅರ್ಥಮಾಡಲು ಯತ್ನಿಸಿದ್ದಾರೆ. ಒಂದುವೇಳೆ ರಾಮನ ಅನೇಕ ಪತ್ನಿಯರು ಅಯೋಧ್ಯೆಯಲ್ಲಿದ್ದರೆಂದು ಹೇಳುವುದಾದರೆ ಈ ಹಿಂದಿನ ಶ್ಲೋಕದಲ್ಲಿ ಸೀತೆಯು ಹೇಳಿರುವ–'**ತಥೈಕಪತ್ನೀತ್ವಮಿದಂ ನಿರರ್ಥಕಂ**' ಎಂಬುದಕ್ಕೆ ಅರ್ಥವೇ ಇಲ್ಲವೇ? ಎಂಬ ಪ್ರಶ್ನೆಗೆ ಸಮಾಧಾನವನ್ನು ಹೀಗೆ ಹೇಳಬಹುದಾಗಿದೆ : ಅರಣ್ಯವಾಸಕಾಲದಲ್ಲಿ ರಾಮನು ಏಕಪತ್ನೀವ್ರತಸ್ಥ ನಾಗಿದ್ದನೆಂಬುದರಲ್ಲಿ ಸಂಶಯವಿಲ್ಲ. ಆದರೆ ಇಷ್ಟು ಮಾತ್ರದಿಂದ ಅವನಿಗೆ ಬೇರೆಯ ಪತ್ನಿಯರಿರಲಿಲ್ಲವೆಂದು ಅರ್ಥಮಾಡಲು ಸಾಧ್ಯವಿಲ್ಲ. ಬೇರೆಯ ಪತ್ನಿಯರಿರದಿದ್ದರೆ–'ಅಯೋಧ್ಯೆಯನ್ನು ಸೇರಿದ ನಂತರ ಉತ್ತಮಸ್ತ್ರೀಯ ರೊಡನೆ ನೀನು ರಮಿಸುವೆ'–ಎಂಬ ಮಾತನ್ನು ಸೀತೆಯು ಹೇಳುತ್ತಿರಲಿಲ್ಲ. ಮತ್ತೊಮ್ಮೆ ಮದುವೆಮಾಡಿಕೊಳ್ಳುವ ಪ್ರಸ್ತಾಪಮಾಡಬಹುದಾಗಿದ್ದಿತು. ಆದುದರಿಂದ ರಾಮನಿಗೆ ಸೀತೆಯಲ್ಲದೇ ಇನ್ನೂ ಅನೇಕ ಪತ್ನಿಯರಿದ್ದರೆಂದು ಸೀತೆಯ ಮಾತಿನಿಂದಲೇ ಸ್ಪಷ್ಟವಾಗಿದೆ.

'ಏಕಪತ್ನೀವ್ರತ' ಶಬ್ದಕ್ಕೆ ಅರ್ಥಗಳನ್ನು ಹೀಗೂ ಮಾಡಬಹುದಾಗಿದೆ :

(1) **ಏಕಂ = ಮುಖ್ಯಂ ಪತ್ನೀಷು = ಸೀತಾ–ಭೂ–ನೀಳಾ–ವಿಮಲಾಪ್ರಭೃತಿಷು ಭಾರ್ಯಾಸು ವ್ರತಂ ನಿಯಮಃ ಯಸ್ಯ ಸಃ ಏಕಪತ್ನೀವ್ರತಃ (ಏಕಂ = ಮುಖ್ಯಂ, ಏಕೇ ಮುಖ್ಯಾನ್ಯಕೇವಲಾಃ–ಅಮರಃ)** ಮನುಸ್ಮೃತಿಯಲ್ಲಿ ಉಕ್ತವಾಗಿರುವಂತೆ ತನ್ನ ಪತ್ನಿಯರೊಡನೆ ನಿಯತಕಾಲದಲ್ಲಿ ಸಮಾಗಮಮಾಡುವವನು.

(2) **ಏಕಸ್ಮಿನ್ = ರಾಮೇ, ಪತ್ನೀನಾಂ = ಸೀತಾಪ್ರಭೃತಿ ಭಾರ್ಯಾಣಾಂ, ವ್ರತಂ = ನಿಯಮೋ ಯಸ್ಯ ಸಃ,** ತನ್ನೊಬ್ಬನಲ್ಲಿಯೇ ನೆಟ್ಟಮನಸ್ಸಿನಿಂದ ಕೂಡಿದ ಪತ್ನಿಯರಿಂದ ಕೂಡಿರುವವನು.

(3) **ಏಕಸ್ಮಿನ್ = ಅದ್ವಿತೀಯೇ, ಪರಮಾತ್ಮಸ್ವರೂಪಿಣಿ, ಪತ್ನೀನಾಂ ಭಾರ್ಯಾಣಾಂ ವ್ರತಂ = ನಿಯಮಃ, ಯಸ್ಯ ಸಃ** ಅದ್ವಿತೀಯನಾದ,

ಪರಮಾತ್ಮನಾದ ಶ್ರೀರಾಮನನ್ನು ಪರಮಪುರುಷನೆಂದು ತಿಳಿದು ಯಾವ ಇವನ ಭಾರ್ಯೆಯರು ವ್ರತ-ನಿಯಮಗಳಿಂದಿದ್ದು ಆರಾಧಿಸುತ್ತಿದ್ದರೋ ಅವನು.

(4) **ಏಕಸ್ಯಾಂ ಪತ್ನ್ಯಾಂ ವ್ರತಂ = ನಿಯಮೋ ಯಸ್ಯ ಸಃ,** ತನ್ನ ಪತ್ನಿಯರ ಋತುಕಾಲ ಮತ್ತು ನಿಯತಕಾಲಗಳನ್ನನುಸರಿಸಿ ಧರ್ಮಶಾಸ್ತ್ರದಲ್ಲಿ ಹೇಳಿರುವ ನಿರ್ಣಯಾನುಸಾರವಾಗಿ ಸಮಾಗಮಮಾಡುವವನು.

'ಸ ಸೀತಾಯಾಃ ಪರಾಂ ಭಾರ್ಯಾಂ ವವ್ರೇ'–ಎಂಬ ಶ್ಲೋಕದ ವಿಷಯವಾಗಿ ಸಮಾಧಾನವು ಈ ರೀತಿಯಾಗಿದೆ : ಧರ್ಮಪತ್ನಿಯಾದ ಯಾದ ಸೀತೆಯಿನ್ನೂ ಜೀವಿಸಿರುವಾಗ ಯಜ್ಞಾರ್ಥವಾಗಿ ಮತ್ತೊಬ್ಬಳನ್ನು ಧರ್ಮಪತ್ನಿಯನ್ನಾಗಿ ಮಾಡಿಕೊಳ್ಳಲಿಲ್ಲ. ಚಿನ್ನದಿಂದ ಸೀತೆಯ ಪ್ರತಿಮೆಯನ್ನು ಮಾಡಿಸಿ ಧರ್ಮಪತ್ನಿಯ ಸ್ಥಾನದಲ್ಲಿಟ್ಟುಕೊಂಡನು. ಈ ಪ್ರಕರಣದಿಂದಲೂ ಅವನಿಗೆ ಬೇರೆಯ ಪತ್ನಿಯರಿರಲಿಲ್ಲವೆಂದು ಅರ್ಥಮಾಡಲು ಸಾಧ್ಯವಿಲ್ಲ. ಅಶ್ವಮೇಧಯಾಗವನ್ನು ಮಾಡಲು ರಾಜನಿಗೆ ಮೂವರು ಪತ್ನಿಯರಿದ್ದೇ ಇರಬೇಕು. ಅವರುಗಳಿಗೆ ಯಜ್ಞಪ್ರಕ್ರಿಯೆಯಲ್ಲಿಯೇ ಮೂರು ಹೆಸರುಗಳನ್ನೂ ಕೊಟ್ಟಿರುತ್ತಾರೆ. (ಮಹಿಷೀ, ಪರಿವೃತ್ತಿಃ, ವಾವಾತಾ) ಈ ಹಿಂದೆ ಬಂದಿರುವ, ದಶರಥನು ಮಾಡಿದ ಅಶ್ವಮೇಧಯಾಗದಲ್ಲಿಯೂ ಈ ವಿಷಯವು ಬಹು ಸ್ಪಷ್ಟವಾಗಿದೆ.

**ಹೋತಾಧ್ವರ್ಯುಸ್ತಥೋದ್ಗಾತಾ ಹಯೇನ ಸಮಯೋಜಯನ್ ।**
**ಮಹಿಷ್ಯಾ ಪರಿವೃತ್ತ್ಯಾ ಚ ವಾವಾತಾಂ ಚ ತಥಾಪರಾಮ್ ॥**

ಬಾಲಕಾಂಡ ಸರ್ಗ ೧೪ ಶ್ಲೋಕ ೩೩.

ಆದುದರಿಂದ ಅಶ್ವಮೇಧಪ್ರಕ್ರಿಯೆಯಲ್ಲಿ ಉಕ್ತವಾಗಿರುವಂತೆ ಅಶ್ವಮೇಧಮಾಡುವವನಿಗೆ ಮೂವರು ಪತ್ನಿಯರಿದ್ದೇ ಇರಬೇಕು. ಅನೇಕ ಅಶ್ವಮೇಧಗಳನ್ನು ಮಾಡಿದ ಶ್ರೀರಾಮನು ಶ್ರುತಿಗೆ ವಿರೋಧವೆನಿಸಿದ ರೀತಿ ಯಲ್ಲಿ ಮಾಡಿರಲಾರನು.

'ಜಾನಕೀರಾಮ, ಸೀತಾರಾಮ, ಸೀತಾಪತಿ' ಎಂಬ ಹೆಸರುಗಳು ಪ್ರಸಿದ್ಧವಾಗಿರುವುದರಿಂದಲೂ ರಾಮನಿಗೆ ಸೀತೆಯೊಬ್ಬಳೇ ಹೆಂಡತಿಯೆಂದೂ

ಸಿದ್ಧಮಾಡಲಾಗುವುದಿಲ್ಲ. 'ರಾಧಾಕೃಷ್ಣ' ಎಂಬ ಹೆಸರು ಪ್ರಸಿದ್ಧಿಯಿದೆಯೆಂದ ಮಾತ್ರಕ್ಕೆ ಕೃಷ್ಣನೂ ಸಹ ಏಕಪತ್ನೀವ್ರತಸ್ಥನೆಂದು ಸಿದ್ಧಮಾಡಲಾಗುವುದೇ?

ರಾಮನು ದರ್ಭಶಯನಮಾಡಿದ ಪ್ರಕರಣದಲ್ಲಿ ಹೇಳಿರುವ ಶ್ಲೋಕ ದಿಂದಲೂ ಸಹ ರಾಮನಿಗೆ ಅನೇಕ ಭಾರ್ಯೆಯರಿದ್ದರೆಂದು ಸ್ಪಷ್ಟವಾಗಿ ಕಾಣುತ್ತದೆ.

**ವರಕಾಂಚನಕೇಯೂರಮುಕ್ತಾಪ್ರವರಭೂಷಣೈಃ ।**
**ಭುಜೈಃ ಪರಮನಾರೀಣಾಮಭಿಮೃಷ್ಟಮನೇಕಧಾ ॥**

ಯುದ್ಧಕಾಂಡ, ಸರ್ಗ ೨೧, ಶ್ಲೋಕ ೩

"ಶ್ರೇಷ್ಠಸ್ತ್ರೀಯರ ಕನಕಾಂಗದ-ಕೇಯೂರಗಳಿಂದ ಅಲಂಕೃತವಾದ ಭುಜಗಳಿಂದ ಸ್ಪರ್ಶಮಾಡಲ್ಪಟ್ಟ ಶ್ರೀರಾಮನ ಭುಜವು....."

ಶ್ರೀಮದ್ವಾಲ್ಮೀಕಿರಾಮಾಯಣದಲ್ಲಿ ಸೀತೆಯೊಡನೆ ನಡೆದ ವಿವಾಹದ ವಿಷಯವನ್ನೇ ಪ್ರಾಮುಖ್ಯವಾಗಿ ಹೇಳಿರುವುದು ನಿಶ್ಚಯ. ಆದರೆ ಇತರ ಪತ್ನಿಯರೊಡನೆ ವಿವಾಹವಾದ ವಿಷಯವನ್ನು ನಾವು ಗ್ರಂಥಾಂತರಗಳಿಂದ ಸಂಗ್ರಹಿಸಬಹುದಾಗಿದೆ.

**ದೂರ್ವಾಸ ರಾಮಾಯಣ :**

**ಕೋಸಲೋ ಭಾನುಮನ್ತಶ್ಚ ಮಗಧಶ್ಚಿತ್ರಭೂಷಣಃ ।**
**ಯುಧಾಜಿತ್ಕೇಕಯಾಧೀಶೋ ಕಾಶೀನಾಥಃ ಪ್ರತರ್ದನಃ ॥**

**ಪೃಥಕ್ಷೋಡಶ ಸಂಖ್ಯಾಕಾ ದುಹಿತೄಃ ಪುಣ್ಯಲಕ್ಷಣಾಃ ।**
**ಭೂನೀಳಾವಿಮಲಾಖ್ಯಾನಾಶ್ಚಾಷ್ಟಾವಿಂಶಾಧಿಕಂ ಶತಮ್ ॥**

**ಸರ್ವಾಭರಣಸಂಪನ್ನಾಸ್ಸುಮಧ್ಯಾ ರಾಮಮೋಹಿತಾಃ ।**
**ತಾಸಾಂ ಸಂಭವವೇಳಾಯಾಂ ರಾಘವಾರ್ಥೇ ನಿಯನ್ತ್ರಿತಾಃ ॥**
**ರಾಘವಾಯ ದದುಃ ಶ್ರೀಮಚ್ಛುಭಲಗ್ನೇಽಗ್ನಿಸಾಕ್ಷಿಕಮ್ ।**
**ತತಸ್ಸೀತಾಜ್ಞಯಾ ರಾಮಃ ಪಾಣೀನ್ಗೃಹ್ಣನ್ಸ್ವಪಾಣಿನಾ ॥**

**ಏಕಪತ್ನೀವ್ರತಃ ಸ್ಥಿತ್ವಾ ಪರ್ಯಗೃಹ್ಣನ್ಮಹಾಮತಿಃ ।**
**ವಸಿಷ್ಠವಾಮದೇವಾದಿಮುನಿಪ್ರವರಸನ್ನಿಧೌ ॥**

"ಕೋಸಲ, ಭಾನುಮಂತ, ಮಗಧ, ಚಿತ್ರಭೂಷಣ, ಯುಧಾಜಿತ್, ಕೇಕಯಾಧೀಶ, ಕಾಶೀನಾಥ, ಪ್ರತರ್ದನ–ಈ ಎಂಟು ರಾಜರು ತಮ್ಮ ಹದಿನಾರು ಮಂದಿ ಕನ್ಯೆಯರನ್ನು ರಾಮನಿಗೆ ಮದುವೆಮಾಡಿಕೊಟ್ಟರು. ಹೀಗೆ ಪುಣ್ಯಲಕ್ಷಣಸಂಪನ್ನೆಯರಾದ ಭೂ, ನೀಳಾ, ವಿಮಲಾ ಇವರುಗಳೇ ಮೊದಲಾದ, ರಾಮನಿಗಾಗಿಯೇ ಜನ್ಮತಾಳಿದ್ದ ಸರ್ವಾಭರಣಭೂಷಿತೆಯ ರಾದ ನೂರ ಇಪ್ಪತ್ತೆಂಟು ಕನ್ಯಾಮಣಿಯರನ್ನೂ ಸಹ ಶ್ರೀರಾಮನಿಗೆ ವಿವಾಹ ಮಾಡಿಕೊಟ್ಟರು. ಏಕಪತ್ನೀವ್ರತಸ್ಥನಾದ ಶ್ರೀರಾಮನೂ ಕೂಡ ಸೀತೆಯ ಅನುಜ್ಞೆಯನ್ನು ಪಡೆದು ಅಗ್ನಿಸಾಕ್ಷಿಯಾಗಿ ವಸಿಷ್ಠ-ವಾಮದೇವಾದಿಗಳ ಸಮ್ಮುಖದಲ್ಲಿ ಇವರ ಪಾಣಿಗ್ರಹಣಮಾಡಿದನು."

ಬ್ರಹ್ಮಾಣ್ಡಪುರಾಣ (ಬ್ರಹ್ಮ-ನಾರದ ಸಂವಾದ) :

**ಶ್ರೀಭೂನೀಳಾದಿಸಹಿತಂ ಶ್ರೀರಾಮಂ ಜಗದೀಶ್ವರಮ್ ।**
**ಪತ್ನೀಶತಸಮಾಯುಕ್ತಂ ಪದ್ಮನಾಭಂ ಚತುರ್ಭುಜಮ್ ॥**

"ಸೀತಾದೇವಿ, ಭೂದೇವಿ, ನೀಳಾದೇವೀಸಮೇತನಾದ, ಜಗದೀಶ್ವರ ನಾದ, ಶತಪತ್ನೀಯುತನಾದ, ಪದ್ಮನಾಭನಾದ, ಚತುರ್ಭುಜನಾದ ಶ್ರೀರಾಮನನ್ನು..."

ವಾಲ್ಮೀಕಿ ಚರಿತೆ :

**ಕೋಸಲಾದ್ಯಾಶ್ಚ ರಾಜಾನೋ ದಾಕ್ಷಿಣಾತ್ಯಾ ಹಿ ಬಾನ್ಧವಾಃ ।**
**ರಾಘವಾಯ ದದುಃ ಕನ್ಯಾಃ ಬಂಧುಪ್ರಾಬಲ್ಯದರ್ಶಿನಃ ॥**

"ಕೋಸಲದೇಶದ ಸಾಮಂತರಾಜರುಗಳೂ, ದಕ್ಷಿಣದೇಶದ ರಾಜರುಗಳೂ ಪ್ರಬಲಬಂಧುತ್ವವನ್ನು ವೃದ್ಧಿಗೊಳಿಸುವ ಸಲುವಾಗಿ ಶ್ರೀರಾಮನಿಗೆ ತಮ್ಮ ತಮ್ಮ ಕನ್ಯೆಯರನ್ನು ಮದುವೆಮಾಡಿಕೊಟ್ಟರು."

ಸ್ಕಾನ್ದಪುರಾಣ (ಬ್ರಹ್ಮಖಂಡ) :

**ಜನ್ಮ ಸ್ಯಾನ್ಮಮ ವೈ ಬ್ರಹ್ಮನ್ಕೌಶಿಕೇನ ಸಮಾಗಮಃ ।**
**ಯಾಗಸ್ಯ ರಕ್ಷಣಂ ಪುಣ್ಯಂ ರಾಕ್ಷಸಾನಾಂ ವಧಸ್ತಥಾ ॥**

ಮುಕ್ತಿರ್ಗೌತಮಭಾರ್ಯಾಯಾಃ ಶಾಪಸ್ಯ ಚ ಭವಿಷ್ಯತಿ ।
ಮಿಥಿಲಾದರ್ಶನಂ ಪುಣ್ಯಂ ಧನುಷಸ್ತ್ವಪಿ ಭೇದನಮ್ ॥

ಶುಭಂ ಜನಕರಾಜ್ಞೋ ವೈ ಭ್ರಾತೃಣಾಂ ಮೇ ಶುಭಂ ತಥಾ ।
ಮದಂಶಾದುದ್ಭವಂ ರಾಮಂ ಜಾಮದಗ್ನ್ಯಂ ಮಹಾಮುನಿಮ್ ॥

ದರ್ಶನಂ ಮಮ ವೀರ್ಯಸ್ಯ ಪಿತುಶ್ಚ ಮುನಿಭಿಃ ಸಹ ।
ಅಯೋಧ್ಯಾಗಮನಂ ಚೈವ ಸರ್ವೇಷಾಂ ನೋ ಭವಿಷ್ಯತಿ ॥

ಮಾತುಲಾಭ್ಯಾಗಮೋ ಭೂಮಿನೀಲಾದ್ಯೈರ್ಮಮ ಪದ್ಮಜ ।
ಅಷ್ಟಾವಿಂಶೋತ್ತರಂ ಕನ್ಯಾಶತಂ ಚೋದ್ವಾಹನಂ ಶುಭಮ್ ॥

ಶಮ್ಬರಾಸುರಪುತ್ರಸ್ಯ ಹರಣಂ ಚ ಮಯೇಪ್ಸಿತಮ್ ।
ಪಟ್ಟಾಭಿಷೇಕೋ ಮಮ ಚ ವಿಘ್ನೋ ದೇವಾಭಿವಾಂಛಿತಃ ॥

ವನವಾಸಸ್ಯ ಗಮನಂ ಭರತೇನ ಸಮಾಗಮಃ ।
ನಿವರ್ತನಂ ಚ ವೀರಸ್ಯ ಭರತಸ್ಯ ಮಹಾತ್ಮನಃ ॥

ಮಹಾವಿಷ್ಣುವು ಬ್ರಹ್ಮನಿಗೆ ಹೇಳುತ್ತಾನೆ :

"ನಾನು ರಾಮನಾಗಿ ಜನ್ಮತಾಳಿದ ನಂತರ ನಡೆಯಲಿರುವ ವೃತ್ತಾಂತವನ್ನು ಹೇಳುತ್ತೇನೆ, ಕೇಳುವವನಾಗು. ನನ್ನ ಜನ್ಮಾನಂತರದಲ್ಲಿ ಮಹಾಮುನಿ ಕೌಶಿಕರ ಸಮಾಗಮವಾಗುತ್ತದೆ. ರಾಕ್ಷಸರನ್ನು ಧ್ವಂಸಮಾಡಿ ಅವರ ಯಾಗರಕ್ಷಣೆ ಮಾಡುತ್ತೇನೆ. ಗೌತಮರ ಪತ್ನಿಯಾದ ಅಹಲ್ಯೆಯ ಶಾಪ ವಿಮೋಚನವಾಗುತ್ತದೆ. ಮಿಥಿಲೆಯನ್ನು ಕೌಶಿಕ-ಲಕ್ಷ್ಮಣಸಮೇತನಾಗಿ ಸಂದರ್ಶಿಸುತ್ತೇನೆ. ಅಲ್ಲಿ ಧನುರ್ಭಂಗವಾಗುತ್ತದೆ. ಅಯೋನಿಜೆಯಾದ ಜಾನಕಿಯನ್ನು ನಾನು ಮದುವೆಯಾಗುತ್ತೇನೆ. ನನ್ನ ಅನುಜರಿಗೂ ಅಲ್ಲಿಯೇ ಮದುವೆಯಾಗುತ್ತದೆ. (ಶುಭಂ ಎಂದರೆ ವಿವಾಹಶುಭಕಾರ್ಯ.) ನನ್ನ ಅಂಶಸಂಭೂತನೇ ಆದ ಜಮದಗ್ನಿಸುತ ಪರಶುರಾಮನೊಡನೆ ನನ್ನ ಸಮಾಗಮವಾಗುತ್ತದೆ. ನಮ್ಮಿಬ್ಬರಿಗೂ ನಡೆಯುವ ದ್ವಂದ್ವಯುದ್ಧವನ್ನೂ ಮತ್ತು ನನ್ನ ವಿಜಯವನ್ನೂ ನನ್ನ ತಂದೆಯಾದ ದಶರಥನೂ ಮಹರ್ಷಿಗಳೂ ನೋಡುತ್ತಾರೆ. ಅಲ್ಲಿಂದ ಮುಂದೆ ಅಯೋಧ್ಯೆಗೆ ಪ್ರಯಾಣಮಾಡು

ತ್ತೇವೆ. ಅನಂತರದಲ್ಲಿ ನನ್ನ ಸೋದರಮಾವನು ಅಯೋಧ್ಯೆಗೆ ಬರುತ್ತಾನೆ. ಭೂನೀಳಾದಿ ನೂರಿಪ್ಪತ್ತೆಂಟು ಕನ್ಯೆಯರೊಡನೆ ನನಗೆ ವಿವಾಹವಾಗುತ್ತದೆ. ಶಂಬರಾಸುರನ ಮಗನ ವಿನಾಶವನ್ನು ನಾನು ಇಚ್ಛಿಸುತ್ತೇನೆ. ಅಲ್ಲಿಂದ ಮುಂದೆ ನನಗೆ ನಡೆಯಲಿದ್ದ ಪಟ್ಟಾಭಿಷೇಕಕ್ಕೆ ದೇವತೆಗಳಿಂದ ವಿಘ್ನವಾಗುತ್ತದೆ. ಸೀತಾ-ಲಕ್ಷ್ಮಣರೊಡನೆ ನಾನು ಕಾಡಿಗೆ ಹೋಗುತ್ತೇನೆ. ಅಲ್ಲಿಗೆ ಭರತನೂ ಬರುತ್ತಾನೆ. ಭರತನಿಗೆ ಸಮಾಧಾನಹೇಳಿ ಅವನನ್ನು ಪುನಃ ಅಯೋಧ್ಯೆಗೆ ಕಳುಹಿಸುತ್ತೇನೆ.”

**ಪಾಂಚರಾತ್ರಾಗಮಸ್ಥ ಪದ್ಮಸಂಹಿತೆಯಲ್ಲಿ–**

**ಸೀತಾ ಶೀತಾಂಶುಸಂಕಾಶಾ ಭೂಮಿರ್ನೀಳಾಮಹಾಯಶಾಃ ।**
**ವಿಮಲೋತ್ಕರ್ಷಿಣೀ ಜ್ಞಾನಕ್ರಿಯಾಯೋಗಾಭಿಧಾ ಚ ಸಾ ॥**

**ಪ್ರಹ್ವಿಂಸಂತೀ ತಥೇಶಾನಾನುಗ್ರಹಾ ತುಲಸೀ ಬಲಾ ।**
**ಶಾಂತಿಃ ಸರಸ್ವತೀ ಪ್ರೀತೀ ರತಿಃ ಕಾಂತಿಃ ಪ್ರಭಾವತೀ ॥**

**ಭದ್ರಾ ಸುಭದ್ರಾ ವಿಜಯಾ ಪ್ರಜ್ಞಾ ಕಾನ್ತಿರ್ದಯಾ ಮತಿಃ ।**
**ಮಹೀಬಲಾ ಮಧುಮತೀ ಭದ್ರಾಂಗೀ ಪದ್ಮಿನೀ ಉಷಾ ॥**

**ಲಜ್ಜಾ ಪ್ರಭಾಸಾ ವಸುಧಾ ರೇವತೀ ಸುಬಲಾ ಕಳಾ ।**
**ಇತ್ಯಾದಿ ಪುಣ್ಯನಾರೀಣಾಂ ನವವಿಂಶೋತ್ತರಂ ಶತಮ್ ॥**

“ಚಂದ್ರನಿಭಳಾದ ಸೀತೆ, ಭೂಮಿ, ನೀಳಾ, ವಿಮಲಾ, ಉತ್ಕರ್ಷಿಣೀ– ಇವರೇ ಮುಂತಾದ ನೂರಿಪ್ಪತ್ತೊಂಬತ್ತು ರಾಮನ ಪತ್ನಿಯರ ಶುಭನಾಮ ಗಳು.”

**ಬ್ರಹ್ಮಖಣ್ಡ: ಶಿವಾಶಿವ ರಹಸ್ಯ (ಬ್ರಹ್ಮ-ವಿಷ್ಣು ಸಂವಾದ) :**

**ಏವಂ ನಿತ್ಯಾನಪಾಯಿನ್ಯೋ ಮಹಿಷ್ಯೋ ಜಾನಕೀಪತೇಃ ।**
**ಗೃಹೀತ್ವಾ ಚಾಮರಾನ್ದಿವ್ಯಾನ್ಸುಧಾಕರಸಮಪ್ರಭಾನ್ ॥**

**ವೀಜ್ಯಮಾನಾಃ ಸದಾ ಭಕ್ತ್ಯಾ ಮೋದನ್ತೇ ಶಿವಮಚ್ಯುತಮ್ ।**
**ದಿವ್ಯಾಪ್ಸರಸಗನ್ಧರ್ವಕನ್ಯಾಸಂಘಾಶ್ಚ ಭೂಷಿತಾಃ ॥**

**ಅನ್ತಃಪುರನಿವಾಸಿನ್ಯಃ ಪುರ್ಯಾವರಣಪಾಲಕಾಃ ।**
**ಪದ್ಮಹಸ್ತಾಶ್ರಿತಾಃ ಸರ್ವಾಃ ಕೋಟಿವೈಶ್ವಾನರಪ್ರಭಾಃ ॥**

**ಸುಗುಪ್ತಾಂತರತಂತ್ರಜ್ಞಾಃ ಪರಮಾನನ್ದನಿರ್ಭರಾಃ ।**
**ತಾಭಿಃ ಪರಿವೃತಃ ಶ್ರೀಮಾನ್ ಶುಶುಭೇ ಪರಮಃ ಪುಮಾನ್ ॥**

"ಹೀಗೆ ಯಾವಾಗಲೂ ಅಗಲದಿರುವ ಶ್ರೀರಾಮನ ಪತ್ನಿಯರು ಚಂದ್ರನಂತಿರುವ ಚಾಮರಗಳನ್ನು ಹಿಡಿದು ಭಕ್ತಿಯಿಂದ ಶ್ರೀರಾಮನಿಗೆ ಬೀಸುತ್ತಾ, ಆನಂದಿಸುತ್ತಾರೆ. ಅಪ್ಸರೆಯರು, ಗಂಧರ್ವಕನ್ಯೆಯರು ಇವರೇ ಮೊದಲಾದ ಒಳಗಿನ ತತ್ತ್ವವನ್ನು ತಿಳಿದಿರುವ (ಮನಸ್ಸಿನ ಭಾವವನ್ನು ತಿಳಿದು ನಡೆಯುವ), ಕೈಯಲ್ಲಿ ಪದ್ಮಗಳನ್ನು ಹಿಡಿದಿರುವ, ಅಂತಃಪುರವಾಸಿನಿಯರಾದ, ಕೋಟಿ ಸಂಖ್ಯೆಯ ಅಗ್ನಿಗಳಂತೆ ಪ್ರಕಾಶಮಾನರಾದ ಸ್ತ್ರೀಯರು ಶ್ರೀರಾಮನನ್ನು ಸೇವಿಸುತ್ತಿದ್ದರು. ಅವರಿಂದ ಸುತ್ತುವರಿಯಲ್ಪಟ್ಟವನಾಗಿ ಶ್ರೀರಾಮನು ಶೋಭಿಸಿದನು."

'**ಸುಗುಪ್ತಾಂತರತಂತ್ರಜ್ಞಾಃ** :' ಎಂಬ ವಿಶೇಷಣದಿಂದಾಗಿ ರಾಮನಿಗೆ ಅನೇಕಮಂದಿ ಭಾರ್ಯೆಯರಿದ್ದರೆಂಬುದು ಈ ಪ್ರಕರಣದಿಂದಲೂ ಸಿದ್ಧವಾಗುತ್ತದೆ.

**ಅಗಸ್ತ್ಯ ರಾಮಾಯಣ :**

**ರಾಮಸ್ತತಃ ಸಮಾಹೂಯ ಕೌಸಲ್ಯಾಂ ವಾಕ್ಯಮಬ್ರವೀತ್ ।**
**ಭಾರ್ಯಾಸ್ತಿಷ್ಠನ್ತು ಹೇ ಮಾತಃ ಸ್ತ್ರಿಯೋ ಮೇ ತವ ಸನ್ನಿಧೌ ॥**

**ಮದಾಗಮನಪರ್ಯನ್ತಂ ತ್ವಚ್ಛುಶ್ರೂಷಾಪರಾಯಣಾಃ ।**
**ಚತುರ್ದಶ ಚ ವರ್ಷಾಣಿ ಪಾಲಯ ತ್ವಂ ಮದೀಯಕಾಃ ॥**

**ಇತ್ಯುದೀರ್ಯ ತದಾ ರಾಮಃ ಪ್ರಣಿಪತ್ಯ ಚ ಮಾತರಮ್ ।**
**ಮೈಥಿಲೀಲಕ್ಷ್ಮಣಾಭ್ಯಾಂ ಚ ಸಹ ರಾಮೋ ವನಂ ಯಯೌ ॥**

ಕೈಕೇಯಿಯ ಮಾತಿನಂತೆ ತಂದೆಯ ವಾಕ್ಯಪರಿಪಾಲನೆಗಾಗಿ ಅರಣ್ಯಕ್ಕೆ ಹೋಗಲು ಸಿದ್ಧನಾದ ರಾಮನು ಕೌಸಲ್ಯಾದೇವಿಗೆ ಹೇಳಿದನು :

"ಅಮ್ಮ! ಈ ನನ್ನ ಭಾರ್ಯೆಯರು ನಾನು ವನವಾಸವನ್ನು ಮುಗಿಸಿ ಕೊಂಡು ಬರುವವರೆಗೂ ನಿನ್ನ ಶುಶ್ರೂಷೆ ಮಾಡುತ್ತಾ ನಿನ್ನ ರಕ್ಷಣೆಯಲ್ಲಿರಲಿ. ಹದಿನಾಲ್ಕು ವರ್ಷಗಳ ಕಾಲ ನೀನು ಇವರೆಲ್ಲರನ್ನೂ ರಕ್ಷಣೆಮಾಡು."

ಹೀಗೆ ಹೇಳಿ ರಾಮನು ತಾಯಿಗೆ ನಮಸ್ಕಾರಮಾಡಿ ಮೈಥಿಲೀ-ಲಕ್ಷ್ಮಣರ ಸಮೇತನಾಗಿ ಅರಣ್ಯಕ್ಕೆ ಹೊರಟುಹೋದನು.

ವಾಸಿಷ್ಠ ರಾಮಾಯಣ :

**ಕೃಷ್ಣೋಽಷ್ಟಮಹಿಷೀಭರ್ತಾ ಷೋಡಶಸ್ತ್ರೀಸಹಸ್ರಕಃ I**
**ಅನಾದಿಬ್ರಹ್ಮಚಾರೀತಿ ಯಥಾ ವಿಜ್ಞಾಯತೇ ನರೈಃ II**

**ತಥೈವ ರಾಮೋ ವಿಶ್ವಾತ್ಮಾ ಸಚ್ಚಿದಾನನ್ದರೂಪಭೃತ್ I**
**ಬಹುಸ್ತ್ರೀಕೋಽಪಿ ಧರ್ಮಾತ್ಮಾ ಹ್ಯೇಕಪತ್ನೀವ್ರತೋಽಭವತ್ II**

"ಕೃಷ್ಣನು ಎಂಟುಮಂದಿ ಪಟ್ಟಮಹಿಷಿಯರನ್ನೂ, ಹದಿನಾರು ಸಾವಿರ ಮಹಿಷಿಯರನ್ನೂ ಪಡೆದಿದ್ದರೂ ಭಕ್ತರುಗಳಿಂದ ಯಾವರೀತಿಯಲ್ಲಿ 'ಅನಾದಿಬ್ರಹ್ಮಚಾರಿ' ಎನಿಸಿಕೊಳ್ಳುವನೋ ಅದೇ ರೀತಿಯಲ್ಲಿ ಶ್ರೀರಾಮನೂ ಸಹ ಬಹುಪತ್ನೀಕನಾಗಿದ್ದಾಗ್ಯೂ 'ಏಕಪತ್ನೀವ್ರತ' ನೆಂಬ ಕೀರ್ತಿಯನ್ನು ಪಡೆದಿರುತ್ತಾನೆ."

ಈ ಪ್ರಕರಣಗಳಿಂದ ಶ್ರೀರಾಮನಿಗೆ ಸೀತೆಯಲ್ಲದೇ ಇನ್ನೂ ಅನೇಕ ಪತ್ನಿಯರು ಅಥವಾ ನೂರಇಪ್ಪತ್ತೆಂಟು ಪತ್ನಿಯರಿದ್ದರೆಂಬುದು ಸ್ಪಷ್ಟವಾಗುತ್ತದೆ. ರಾಜಧರ್ಮಕ್ಕೆ ಅನುಗುಣವಾಗಿ ರಾಮನಿಗೆ ಬಹುಪತ್ನಿಯರಿದ್ದರೆಂಬ ಮಾತ್ರದಿಂದ ರಾಮನು ದೋಷಭಾಗಿಯೆಂದು ಎಣಿಸುವ ಕಾರಣವಿಲ್ಲ. ಕೃಷ್ಣನು ಹದಿನಾರುಸಾವಿರ ಪತ್ನೀಸಮೇತನಾಗಿದ್ದರೂ ನಿಯಮಿತ, ಅಸ್ಖಲಿತ ವೀರ್ಯಸಮಾಗಮದಿಂದ 'ಅನಾದಿಬ್ರಹ್ಮಚಾರೀ' ಎಂದು ಪ್ರಸಿದ್ಧನಾಗಿರುವಂತೆ ರಾಮನು ನೂರಇಪ್ಪತ್ತೊಂಬತ್ತು ಭಾರ್ಯೆಯರನ್ನು ಪಡೆದಿದ್ದರೂ ಸಹ ಅವರೊಡನೆ ಪ್ರತ್ಯೇಕ-ಪ್ರತ್ಯೇಕವಾಗಿ ರಮಿಸುವ ಕಾಲದಲ್ಲಿ ಏಕಪತ್ನೀ ವ್ರತಸ್ಥನಾಗಿದ್ದನೆಂದು ಹೇಳಬಹುದಾಗಿದೆ.

XI

## ಶ್ರೀರಾಮನು ಏಕಪತ್ನೀವ್ರತಸ್ಥನೆಂಬ ಸಿದ್ಧಾಂತದ ನಿರೂಪಣೆ

ಆದರೆ ಕೂಲಂಕಷವಾಗಿ ವಿಚಾರಮಾಡಿ ನೋಡಿದಾಗ ಶ್ರೀರಾಮಚಂದ್ರನಿಗೆ ಸೀತೆಯೊಬ್ಬಳೇ ಪತ್ನೀ ಎಂಬ ಸಿದ್ಧಾಂತವನ್ನೇ ನಾವು ಹೊಂದುತ್ತೇವೆ. ಅದಕ್ಕೆ ಕಾರಣಗಳು ಹೀಗಿವೆ.

ಶ್ರೀರಾಮನು ಏಕಪತ್ನೀವ್ರತಸ್ಥನಾಗಿದ್ದನೆಂಬುದನ್ನು ವಾಲ್ಮೀಕಿ ರಾಮಾಯಣವು ಸ್ಪಷ್ಟವಾಗಿಯೇ ಸಾರುತ್ತದೆ.

1) ರಾಮಾಯಣದ ಸುಂದರಕಾಂಡದಲ್ಲಿ ಸೀತೆಯು '**ತಥೈಕಪತ್ನೀತ್ವ ಮಿದಂ ನಿರರ್ಥಕಂ**' 'ನನ್ನ ಈ ಏಕಪತ್ನೀತ್ವವು ವ್ಯರ್ಥವಾಯಿತಲ್ಲಾ!'–ಎಂದು ದುಃಖಿಸುತ್ತಾಳೆ.

ಇಲ್ಲಿ ಆಕೆಯು ತಾನೊಬ್ಬಳೇ ಶ್ರೀರಾಮನ ಪತ್ನೀ ಎಂಬುದನ್ನು ನಿರ್ವಿವಾದವಾಗಿ ಸೂಚಿಸುತ್ತಾಳೆ.

2) ಶ್ರೀರಾಮನು ಸೀತೆಯಲ್ಲದೇ ಬೇರೆಯವಳನ್ನು ಮದುವೆಯಾಗ ಲಿಲ್ಲ. ಸೀತೆಯು ಹತ್ತಿರದಲ್ಲಿಲ್ಲದಿದ್ದಾಗ ಪ್ರತಿಯೊಂದು ಯಜ್ಞದಲ್ಲಿಯೂ ಸುವರ್ಣದ ಸೀತಾಪ್ರತಿಮೆಯನ್ನೇ ಪತ್ನೀಸ್ಥಾನದಲ್ಲಿ ಇಟ್ಟುಕೊಳ್ಳುತ್ತಿದ್ದನು ಎಂದೇ ವಾಲ್ಮೀಕಿರಾಮಾಯಣದಲ್ಲಿ ಹೇಳಿದೆ.

**ನ ಸೀತಾಯಾಃ ಪರಾಂ ಭಾರ್ಯಾಂ ವವ್ರೇ ಸ ರಘುನನ್ದನಃ ।**
**ಯಜ್ಞೇ ಯಜ್ಞೇ ಚ ಪತ್ನ್ಯರ್ಥಂ ಜಾನಕೀ ಕಾಞ್ಚನೀ ಭವತ್ ॥**

ಉತ್ತರ-ಸರ್ಗ ೯೯-ಶ್ಲೋಕ ೮

3) ಶ್ರೀರಾಮನು ಸೀತೆಯಲ್ಲದೇ ಬೇರೆ ಯಾರನ್ನಾದರೂ ವಿವಾಹ ವಾಗಿದ್ದರೆ ಆ ವಿವಾಹದ ವಿಷಯವನ್ನು ಶ್ರೀಮದ್ರಾಮಾಯಣವೂ ಉಲ್ಲೇಖಿಸು ತ್ತಿತ್ತು. ಆ ಹೆಂಡತಿಯರ ಹೆಸರನ್ನೂ ಹೇಳುತ್ತಿತ್ತು. ಇದು ಯಾವುದೂ ವಾಲ್ಮೀಕಿರಾಮಾಯಣದಲ್ಲಿ ಕಂಡುಬರುವುದಿಲ್ಲ. ಸೀತೆಯ ಮಕ್ಕಳ ಹೆಸರು ಬರುತ್ತದೆ. ಇತರ ಪತ್ನಿಯರೂ ರಾಮನಿಗೆ ಇದ್ದಿದ್ದರೆ ಅವರಲ್ಲಿ ಒಬ್ಬಳಿ ಗಾದರೂ ಮಕ್ಕಳಾಗಲಿಲ್ಲವೇ? ಆ ಮಕ್ಕಳ ಹೆಸರನ್ನೇಕೆ ಹೇಳಿಲ್ಲ? ಮಹಾ

ಭಾರತದಲ್ಲಿ ಧೃತರಾಷ್ಟ್ರನಿಗೆ ವೈಶ್ಯಪತ್ನಿಯಲ್ಲಿ ಹುಟ್ಟಿದ ಪುತ್ರನ ಹೆಸರನ್ನೂ ಹೇಳಿದೆಯಲ್ಲವೇ?

4) ಶ್ರೀರಾಮನಿಗೆ ಬಹುಪತ್ನಿಯರಿದ್ದರೆಂದು ವಾಲ್ಮೀಕಿಯ ನಂತರ ಅತ್ಯಂತಪ್ರಾಚೀನಕವಿಯಾದ ಭಾಸನು ತನ್ನ ಯಾವ ರಾಮಾಯಣ ನಾಟಕ ದಲ್ಲಿಯೂ ಹೇಳಿಲ್ಲ. ಆ ಮಹಾಕವಿಯು ವಾಲ್ಮೀಕಿರಾಮಾಯಣ ಕಥೆಯಲ್ಲಿ ಕೆಲವು ಬದಲಾವಣೆಗಳನ್ನು ತನ್ನ ನಾಟಕಗಳಲ್ಲಿ ಮಾಡಿಕೊಂಡಿದ್ದಾನೆ. ಆದರೆ ಶ್ರೀರಾಮನಿಗೆ ಅನೇಕಪತ್ನಿಯರಿದ್ದರೆಂದು ಎಲ್ಲೂ ಸೂಚಿಸಿಲ್ಲ. ಭಾಸನ ನಂತರ ಬಂದ ಕಾಳಿದಾಸ, ಭವಭೂತಿ ಮುಂತಾದ ಕವಿಗಳೂ ಕೂಡ, ಎಲ್ಲಿಯೂ ಶ್ರೀರಾಮನು ಬಹುಪತ್ನೀಕನಾಗಿದ್ದನೆಂದು ಸೂಚಿಸಿಲ್ಲ. ಶ್ರೀ ಶಂಕರಾಚಾರ್ಯರು, ಶ್ರೀರಾಮಾನುಜಾಚಾರ್ಯರು, ಶ್ರೀಮಧ್ವಾಚಾರ್ಯರು ಇವರೇ ಮುಂತಾದ ಆಚಾರ್ಯಶ್ರೇಷ್ಠರು ಮತ್ತು ಅವರ ಶಿಷ್ಯಶ್ರೇಷ್ಠರು ತಮ್ಮ ಸ್ತೋತ್ರಾದಿ ಗ್ರಂಥಗಳಲ್ಲಿ ಶ್ರೀರಾಮನನ್ನು ವರ್ಣಿಸುವಾಗ ಆತನು ಬಹುಪತ್ನೀಕನೆಂದು ಎಲ್ಲಿಯೂ ಹೇಳಿಲ್ಲ. ಇಂಡೋನೇಷ್ಯಾ, ಜಾವಾ, ಸುಮಾತ್ರ, ಬಾಲಿ ಮುಂತಾದ ದೇಶಗಳಲ್ಲಿಯೂ ರಾಮನಿಗೆ ಬಹುಪತ್ನೀತ್ವದ ಸೂಚನೆಯು ಕಂಡುಬರುವುದಿಲ್ಲ. ಶ್ರೀರಾಮಾಷ್ಟೋತ್ತರದಲ್ಲಿಯೂ ಶ್ರೀರಾಮನನ್ನು ಏಕಪತ್ನೀವ್ರತಸ್ಥನೆಂದೇ ಹೇಳಿದ್ದಾರೆ. ಶ್ರೀರಾಮನು ಏಕಬಾಣವುಳ್ಳವನು, ಏಕವಾಣಿಯುಳ್ಳವನು, ಏಕರಾಣಿಯುಳ್ಳವನು– ಎಂದೇ ಮಹಾರಾಷ್ಟ್ರದ ರಾಮಭಕ್ತರು ಆತನನ್ನು ಸ್ತುತಿಸುತ್ತಾರೆ. ಆದುದರಿಂದ ಶ್ರೀರಾಮನು ಏಕಪತ್ನೀವ್ರತಸ್ಥನೆಂಬುದು ಕೇವಲ ಭಾವನಾತ್ಮಕ ವಾಗಿರುವ ಹೇಳಿಕೆಯಲ್ಲ ಆಧಾರಸಹಿತವಾದ ಹೇಳಿಕೆ. ಈ ಅಭಿಪ್ರಾಯಕ್ಕೆ ಪ್ರಾಚೀನವಾದ ಸಂಪ್ರದಾಯಪರಂಪರೆಯೂ ಇದೆ.

5) ಏಕಪತ್ನೀವ್ರತಸ್ಥ–ಎಂಬ ಪದಕ್ಕೆ ಪತ್ನಿಯರಲ್ಲಿ ಮುಖ್ಯವಾದ ವ್ರತವುಳ್ಳವನು ; ನಿಯತಕಾಲದಲ್ಲಿ ಮಾತ್ರ ಸಮಾಗಮಮಾಡುವವನು ; ತನ್ನೊಬ್ಬನಲ್ಲಿಯೇ ನೆಟ್ಟಮನಸ್ಸುಳ್ಳ ಅನೇಕಪತ್ನಿಯರುಳ್ಳವನು ; ಅದ್ವಿತೀಯ ಪರಮಾತ್ಮನಾದ ತನ್ನೊಬ್ಬನನ್ನೇ ಪರಮಪುರುಷನೆಂದು ತಿಳಿದು ಆರಾಧಿಸು ತ್ತಿದ್ದ ಅನೇಕಪತ್ನಿಯರನ್ನು ಹೊಂದಿದ್ದವನು ; ತನ್ನ ಪ್ರತಿಯೊಬ್ಬ ಪತ್ನಿ ಯಲ್ಲಿಯೂ ಆಕೆಯ ಋತುಕಾಲದಲ್ಲಿ ಶಾಸ್ತ್ರೋಕ್ತವಾಗಿ ಸಮಾಗಮ

ಮಾಡುವವನು–ಇತ್ಯಾದಿ ಅರ್ಥಗಳನ್ನು ಕಲ್ಪಿಸುವುದು ಸರಸ್ವತೀಪ್ರಾಣ ಪೀಡನ. ನೇರವಾಗಿ ಬರುವ ಸಹಜವಾದ ಅರ್ಥವನ್ನು ಬಿಟ್ಟು ಕ್ಲಿಷ್ಟಾರ್ಥ ವನ್ನು ಕಲ್ಪಿಸುವುದು, ಅದರಲ್ಲಿಯೂ ವಾಲ್ಮೀಕಿಯ ಸರಳಸುಭಗಸಾಹಿತ್ಯಕ್ಕೆ ಕಷ್ಟಪಟ್ಟು ಕಂಡಾಬಟ್ಟೆ ಅರ್ಥವನ್ನು ಕೋಶ-ವ್ಯಾಕರಣ-ತರ್ಕಗಳ ಮೇಲೆ ಮಾಡುವುದು ಪೂರ್ವಪಕ್ಷದಲ್ಲೂ ಸರಿಯಲ್ಲ. ಸಿದ್ಧಾಂತದಲ್ಲೂ ಸರಿಯಲ್ಲ. ಬ್ರಹ್ಮಚಾರೀ* ಎಂಬ ಪದಕ್ಕೆ ಅನ್ನತಿನ್ನುವವನು–ಎಂದು ಅರ್ಥಮಾಡಿ ದಂತಾಗುತ್ತದೆ.

ಆಕ್ಷೇಪ ೧ :-

ಹಾಗಾದರೆ ವಾಲ್ಮೀಕಿರಾಮಾಯಣದಲ್ಲಿ ಶ್ರೀರಾಮನ ಬಗೆಗೆ **'ರಾಮಸ್ಯ ಪರಮಾಃ ಸ್ತ್ರಿಯಃ** ಶ್ರೀರಾಮನ ಪರಮಸ್ತ್ರೀಯರು, **ಮಹಾರ್ಹಾಭಿಃ ಸ್ತ್ರೀಭಿಃ ವೀಜ್ಯಮಾನಃ** ಮಹಾರ್ಹರಾದ ಸ್ತ್ರೀಯರಿಂದ ಬೀಸಲ್ಪಡುತ್ತಿದ್ದ **ಭುಜೈಃ ಪರಮನಾರೀಣಾಂ ಪರಿಮೃಷ್ಟಂ** ಶ್ರೇಷ್ಠರಾದ ನಾರಿಯರ ಭುಜಗಳಿಂದ ಸ್ಪರ್ಶಿಸಲ್ಪಡುತ್ತಿದ್ದ'–ಎಂದೇಕೆ ಹೇಳಿದೆ?

ಸಮಾಧಾನ :-

ಈ ಎಲ್ಲ ಕಡೆಗಳಲ್ಲಿಯೂ ಸ್ತ್ರೀಯರು ಎಂದರೆ ಹೆಂಗಸರು ಎಂಬ ಅರ್ಥದಲ್ಲಿ ಹೇಳಿದೆಯೇ ಹೊರತು ಹೆಂಡತಿಯರು–**ಪತ್ನ್ಯಃ;ಭಾರ್ಯಾಃ**– ಎಂಬ ಪದಗಳನ್ನು ಎಲ್ಲಿಯೂ ಬಳಸಿಲ್ಲ. ಪತ್ನೀವಾಚಕವಾದ ಯಾವ ಶಬ್ದವೂ ಅಲ್ಲಿಲ್ಲ. ಆದುದರಿಂದ ಆ ಹೆಂಗಸರು ಶ್ರೀರಾಮನ ಪರಿಚಾರಿಕೆ ಯರು ಎಂದು ಅರ್ಥವೇ ಹೊರತು–'ಪತ್ನಿಯರು'–ಎಂಬ ಅರ್ಥವಲ್ಲ. ಆ ಹೆಂಗಸರು ಸೀತಾದೇವಿ ಮತ್ತು ಆಕೆಯ ಪರಿವಾರಕ್ಕೆ ಸೇರಿದ ಶ್ರೀರಾಮನ ಪರಿಚಾರಿಕೆಯರು.

---

* ಬ್ರಹ್ಮ = ಅನ್ನ, ಅನ್ನಂ ಬ್ರಹ್ಮೇತಿ ವ್ಯಜಾನಾತ್ ॥
ಚಾರೀ = ( ಚರಗತಿ ಭಕ್ಷಣಯೋಃ ) ತಿನ್ನುವವನು.

ಆಕ್ಷೇಪ ೨ :

**'ಸುಗುಪ್ತಾನ್ತರತತ್ತ್ವಜ್ಞಾಃ'**–ಆಂತರಿಕ ಭಾವವನ್ನು ತಿಳಿದ ಅನೇಕ ಪತ್ನಿಯರು'–ಎಂದು ಆ ಸ್ತ್ರೀಯರನ್ನು ಕುರಿತು ಹೇಳಿರುವುದರಿಂದ ಆ ಸ್ತ್ರೀಯರು ಹೆಂಡತಿಯರೇ ಆಗಿರಬೇಕಲ್ಲವೇ?

ಸಮಾಧಾನ :-

ಆ ಪದವು ವಾಲ್ಮೀಕಿರಾಮಾಯಣದಲ್ಲಿಲ್ಲ. ಬ್ರಹ್ಮಖಂಡದಲ್ಲಿ ಬರುತ್ತದೆ. ಸ್ವಾಮಿಯ ಅಂತರಂಗವನ್ನು ತಿಳಿದು ಶುಶ್ರೂಷೆಮಾಡುವವರು ಹೆಂಡತಿಯರೂ ಆಗಬಹುದು ; ಇತರ ಪರಿಚಾರಿಕೆಯರೂ ಆಗಬಹುದು. ಬ್ರಹ್ಮಖಂಡೋತ್ತರಕಾರರು ಆ ಸಂದರ್ಭದಲ್ಲಿ ಭಾರ್ಯೆಯರು–ಎಂಬ ಅರ್ಥದಲ್ಲಿ ಬಳಸಿದ್ದಾರೆ.

ಆಕ್ಷೇಪ ೩ :-

ಸೀತಾದೇವಿಯೇ ಮನಸ್ಸಿನಲ್ಲಿ ಶ್ರೀರಾಮನನ್ನು ಸಂಬೋಧಿಸಿ–'ನೀನು ಅರಣ್ಯದಿಂದ ಹಿಂದಿರುಗಿದ ಬಳಿಕ ಅನೇಕಸ್ತ್ರೀಯರೊಡನೆ ರಮಿಸುವೆ'– ಎಂದು ಹೇಳಿದ್ದಾಳಲ್ಲವೇ? ಇಲ್ಲಿ ಸ್ತ್ರೀಯರು ಎಂದರೆ ಹೆಂಡತಿಯರು– ಎಂದೇ ಅರ್ಥವಲ್ಲವೇ?

ಸಮಾಧಾನ :-

ಇದು ಸೀತೆಯು ಸಂಕಟದಲ್ಲಿ ಹೇಳಿರುವ ಮಾತು. ಪರಮಾರ್ಥದ ಘೋಷಣೆಯಲ್ಲ. 'ನಾನು ಹೋದರೂ ನಿನಗೆ ಮಡದಿಯರು ಸಿಕ್ಕದೇ ಇರುವುದಿಲ್ಲ ; ನಿನ್ನಂತಹ ಸುಂದರಸುಶೀಲನನ್ನು ಮದುವೆಯಾಗಲು ಅನೇಕಕನ್ಯೆಯರು ಸಿದ್ಧರಾಗುತ್ತಾರೆ. ನನಗೆ ತಾನೇ ನಿನ್ನನ್ನು ಕಳೆದುಕೊಂಡ ಮಹಾನಷ್ಟ'–ಎಂದು ಆಕೆಯು ಶೋಕದ ಆವೇಗದಲ್ಲಿ ಹೇಳುತ್ತಾಳೆ. ಉನ್ಮಾದದಲ್ಲಿ ಹೇಳುವ ಮಾತು ಸತ್ಯಾರ್ಥವೆಂದು ಪರಿಗಣಿಸಲ್ಪಡುವುದಿಲ್ಲ. ಸೀತೆಯ ವಿರಹದಿಂದಾಗಿ ಶ್ರೀರಾಮನು ಪರಿತಪಿಸುವುದನ್ನು ನೋಡಿದರೆ ಅವನಿಗೆ ಇತರ ಪತ್ನಿಯರೂ ಇದ್ದರೆಂಬುದನ್ನು ಕ್ಷಣಕಾಲವೂ ಯೋಚಿಸಲು ಸಾಧ್ಯವಾಗುವುದಿಲ್ಲ.

ಆಕ್ಷೇಪ ೪ :-

ಏಕಪತ್ನೀವ್ರತತ್ವಂ ಎಂಬಲ್ಲಿ ಏಕಪತ್ನೀ ಎಂಬ ಶಬ್ದಕ್ಕೆ ನಾವು 'ಮುಖ್ಯವಾದ ಪತ್ನೀವ್ರತವುಳ್ಳವನು'–ಇತ್ಯಾದಿಯಾಗಿ ಅರ್ಥಮಾಡಿದ್ದನ್ನು ಕ್ಲಿಷ್ಟವಾದ ಅರ್ಥ ; ಸರಸ್ವತೀ ಪ್ರಾಣಪೀಡನೆ–ಇತ್ಯಾದಿಯಾಗಿ ದೂಷಿಸಿದಿರಿ. ಆದರೆ '**ಸ್ತ್ರೀಭಿಃ।ಪರಮಾಃ ಸ್ತ್ರಿಯಃ**' ಎಂಬಲ್ಲಿಯ ಸ್ತ್ರೀ ಶಬ್ದಕ್ಕೆ 'ಪರಿಚಾರಿಕೆಯರು' ಎಂದು ಅರ್ಥಮಾಡುವುದು ಕ್ಲಿಷ್ಟವಾದ ಅರ್ಥಕಲ್ಪನೆ ಯಲ್ಲವೇ? '**ಸ್ನುಷಾಸ್ತೇ ಭರತಕ್ಷಯೇ**' ಎಂಬಲ್ಲಿ ಕೈಕೇಯಿಗೆ ಅನೇಕಮಂದಿ ಸೊಸೆಯರು ಇದ್ದರು–ಎಂದು ಸ್ಪಷ್ಟವಾಗಿಯೇ ತಿಳಿಯುತ್ತದೆ. ಭರತನಿಗೆ ಅನೇಕಮಡದಿಯರಿದ್ದಂತೆ ಶ್ರೀರಾಮನಿಗೂ ಏಕೆ ಅನೇಕಪತ್ನಿಯರಿದ್ದಿರ ಬಾರದು?

ಸಮಾಧಾನ :

ಭರತನಿಗೆ ಅನೇಕಹೆಂಡತಿಯರು ಇದ್ದರೆಂಬುದಕ್ಕೂ ಪ್ರಮಾಣವಿಲ್ಲ. ಮೇಲ್ಕಂಡ ವಾಕ್ಯದಲ್ಲಿ '**ಸ್ನುಷಾಃ** ' ಎಂದರೆ 'ಸೊಸೆಯಾದ ಮಾಂಡವೀ ಮತ್ತು ಆಕೆಯ ಪರಿವಾರದವರು' ಎಂದೇ ಅರ್ಥ. ಇದು ಕ್ಲಿಷ್ಟಾರ್ಥ ಕಲ್ಪನೆಯಲ್ಲ. ಇಂತಹ ಸ್ಪಷ್ಟಾರ್ಥದ ಪದಗಳು ಸಂಸ್ಕೃತದಲ್ಲಿವೆ. ಶ್ರುತಿಯಲ್ಲಿ–'**ಶಿವಾ ಪತಿಭ್ಯಃ ಸುಮನಾಃಸುವರ್ಚಾಃ**'–ಎಂಬಲ್ಲಿ ಪತಿಭ್ಯಃಎಂಬ ಬಹುವಚನದ ಪತಿ ಶಬ್ದಕ್ಕೆ ಅನೇಕಪತಿಗಳು ಎಂದು ಅರ್ಥವಲ್ಲ. 'ಪತಿಗೂ ಅವನ ಪರಿವಾರಕ್ಕೂ'–ಎಂದರ್ಥ. ಮತ್ತೊಂದು ಮಂತ್ರ : '**ಪತೀನಾಂ ಚ ದೇವ್ಯಾ ಣಾಂ ಚ**' ಇಲ್ಲಿಯೂ ಪತೀನಾಂ ಎಂಬ ಬಹುವಚನದ ಪತಿಶಬ್ದಕ್ಕೆ 'ಪತಿಗೆ, ಅವನ ಪರಿವಾರಕ್ಕೆ'–ಎಂದರ್ಥ. ಇಂತಹ ಪ್ರಯೋಗಗಳು ಅನೇಕವಾಗಿವೆ. ಪತಿ ಶಬ್ದಕ್ಕೆ ಬಹುವಚನಪ್ರಯೋಗವಿರುವುದರಿಂದ ವೇದಗಳ ಕಾಲದಲ್ಲಿ ಪ್ರತಿಯೊಬ್ಬ ವಧುವಿಗೂ ಅನೇಕಪತಿಗಳು ಇರುತ್ತಿದ್ದರೆಂಬ ಕುತ್ಸಿತವಾದ ಅರ್ಥವನ್ನು ಯಾರೂ ಮಾಡುವುದಿಲ್ಲ. ಪತಿ ಶಬ್ದದ ಬಹುವಚನಕ್ಕೆ ಪತಿ ಮತ್ತು ಆತನ ಪರಿವಾರದವರು ಎಂಬ ಅರ್ಥವಿರುವಂತೆಯೇ ರಾಮಾಯಣದಲ್ಲಿ ಬಂದಿರುವ **ಸ್ನುಷಾಃ** ಎಂಬ ಪದಕ್ಕೂ ಸೊಸೆಯಾದ ಮಾಂಡವೀ ಮತ್ತು ಆಕೆಯ ಪರಿವಾರದವರು ಎಂದೇ ಅರ್ಥಮಾಡಬೇಕು.

ಯಾರ ಇರುವಿಕೆಯು ಯಾವ ಅಧೀನವಾಗಿರುವುದೋ (ಅವರ) ಹೆಸರಿನಿಂದಲೇ ಅಧೀನದಲ್ಲಿರುವವರನ್ನು ಕರೆಯುವ ರೂಢಿ ಉಂಟು. **ಯದಧೀನಾ ಯಸ್ಯ ಸತ್ತಾ ತತ್ತದಿತ್ಯೇವ ಕಥ್ಯತೇ ।**

**ಮಹಾರ್ಹಾಭಿಃ ಸ್ತ್ರೀಭಿಃ । ಭುಜ್ಯೈಃ ಪರಮನಾರೀಣಾಂ । ಪರಮಾಃ ಸ್ತ್ರಿಯಃ ।** ಇತ್ಯಾದಿ ಕಡೆಗಳಲ್ಲಿ ಸ್ತ್ರೀಶಬ್ದಕ್ಕೆ ಹೆಂಗಸರು–ಎಂಬುದೇ ನೇರವಾದ ಅರ್ಥ. ಹೆಂಡತಿ ಒಬ್ಬಳೇ ಇರುವಾಗ ಆ ಹೆಂಗಸರು ಯಾರು?–ಎಂದರೆ ಹೆಂಡತಿಯ ಪರಿವಾರದ ಹೆಂಗಸರು ಎಂಬುದು ನ್ಯಾಯದಿಂದಲೂ ಸಿದ್ಧವಾಗುತ್ತದೆ. ಪ್ರಯೋಗದಿಂದಲೂ ಸಿದ್ಧವಾಗುತ್ತದೆ. ಸಂದರ್ಭದಿಂದಲೂ ಸಿದ್ಧವಾಗುತ್ತದೆ. ಕ್ಲಿಷ್ಟಕಲ್ಪನೆ ಕಿಂಚಿತ್ತೂ ಇಲ್ಲ. ಗೌರವಾರ್ಥದಲ್ಲಿ ಬಹುವಚನವನ್ನು ಉಪಯೋಗಿಸಿದೆ–ಎಂಬ ಕಲ್ಪನೆಯೂ ಬೇಕಾಗಿಲ್ಲ. ಸ್ತ್ರೀಶಬ್ದಕ್ಕೆ ಹೆಂಡತಿ–ಎಂಬುದು ಸಂದರ್ಭವಿಶೇಷದಲ್ಲಿ ಮಾತ್ರ–ಬರುವ ಅರ್ಥ. ಹೆಂಗಸು–ಎಂಬುದೇ ನೇರವಾದ ಅರ್ಥ. ಅಂತಃಪುರದಲ್ಲಿ ಪರಿಚಾರಿಕೆಯರು ಶ್ರೀರಾಮನ ಸೇವೆ ಮಾಡುವುದರಲ್ಲಿ ಅಸಮಂಜಸವೇನೂ ಇಲ್ಲ.

ಆಕ್ಷೇಪ-೫

ಶ್ರೀರಾಮನಿಗೆ ಅನೇಕಪತ್ನಿಯರು ಇದ್ದರು ಎಂಬುದಕ್ಕೆ ವಾಲ್ಮೀಕಿ ರಾಮಾಯಣದಲ್ಲಿ ಆಧಾರವಿಲ್ಲದಿರಬಹುದು. ಆದರೆ ದೂರ್ವಾಸರಾಮಾಯಣ, ವಾಸಿಷ್ಠರಾಮಾಯಣ, ಅಗಸ್ತ್ಯರಾಮಾಯಣ ಮುಂತಾದ ಕಡೆಗಳಲ್ಲಿ ಸ್ಪಷ್ಟವಾದ ಆಧಾರಗಳೇ ಇವೆಯಲ್ಲಾ? ಇಂತಿಂತಹವರು ಇಂತಿಂತಹ ಕನ್ಯೆಯರನ್ನು ಶ್ರೀರಾಮನಿಗೆ ಕೊಟ್ಟರು. ಸೀತೆಯ ಅನುಮತಿಯಿಂದ ಶ್ರೀರಾಮನು ಅವರನ್ನು ವಿವಾಹವಾದನು–ಎಂದು ನೇರವಾಗಿಯೇ ಹೇಳಿದೆಯಲ್ಲಾ? **ಅನುಕ್ತಮನ್ಯತೋ ಗ್ರಾಹ್ಯಂ**–ಒಂದುಕಡೆ ಹೇಳದೇ ಇರುವುದನ್ನು ಇನ್ನೊಂದು ಕಡೆಯಿಂದ ಗ್ರಹಿಸಬೇಕು–ಎಂಬ ನ್ಯಾಯದಂತೆ ಆ ಗ್ರಂಥಗಳ ಆಧಾರವನ್ನು ಅಂಗೀಕರಿಸಿ ಶ್ರೀರಾಮನಿಗೆ ಬಹುಪತ್ನೀತ್ವವನ್ನು ಹೇಳುತ್ತವೆ.

ಸಮಾಧಾನ :-

ಹಾಗೆ ಹೇಳುವುದು ಸರಿಯಲ್ಲ. ಏಕೆಂದರೆ : ಉಳಿದ ರಾಮಾಯಣ ಗಳು ವಾಲ್ಮೀಕಿರಾಮಾಯಣಕ್ಕೆ ವಿರೋಧವಿಲ್ಲದ ವಿಷಯದಲ್ಲಿ ಮಾತ್ರವೇ ಪ್ರಮಾಣವಾಗುತ್ತವೆ. ಶ್ರೀರಾಮನು ಏಕಪತ್ನೀವ್ರತವುಳ್ಳವನು ಎಂಬ ವಾಲ್ಮೀಕಿಯ ಹೇಳಿಕೆಗೆ ಇವು ವಿರುದ್ಧವಾಗಿರುವುದರಿಂದ ಇವು ಆ ಬಗೆಗೆ ಮುಖ್ಯಾರ್ಥದಲ್ಲಿ ಪ್ರಮಾಣಗಳಾಗುವುದಿಲ್ಲ.

'ಹಾಗಾದರೆ ವಾಸಿಷ್ಠರಾಮಾಯಣ ಪ್ರಮಾಣವಲ್ಲವೇ?' ಎಂದರೆ 'ಪ್ರಮಾಣವಲ್ಲ'–ಎಂದು ನಾವು ಹೇಳಲಿಲ್ಲ. ಅಧ್ಯಾತ್ಮತತ್ತ್ವಗಳ ವಿಷಯ ದಲ್ಲಿ ಅವು ಪ್ರಮಾಣಗಳು. ಕಥೆ ಮತ್ತು ತತ್ತ್ವ ಎರಡು ವಿಷಯಗಳಲ್ಲೂ ಪ್ರಮಾಣವಾದುದು ಶ್ರೀರಾಮನ ಸಮಕಾಲಿಕನಾದ ವಾಲ್ಮೀಕಿಯ ಗ್ರಂಥ ಮಾತ್ರವೇ ಆಗಿದೆ. ಎಲ್ಲ ಪೂರ್ವಾಚಾರ್ಯರೂ ಪರಿಗ್ರಹಿಸಿರುವುದುಅದನ್ನೇ.

ಆಕ್ಷೇಪ ೬ :-

ಶ್ರೀರಾಮನಿಗೆ ಅನೇಕಪತ್ನಿಯರಿದ್ದರು–ಎಂದು ಸುಳ್ಳು ಹೇಳಿದ್ದರಿಂದ ಯಾವ ತತ್ತ್ವಾರ್ಥ ಸ್ಥಾಪಿತವಾಯಿತು?

ಸಮಾಧಾನ :-

ಬ್ರಹ್ಮಜ್ಞಾನಿಗೆ ಅನೇಕಪತ್ನಿಯರಿದ್ದರೂ ಅವನು ನಿರ್ಲಿಪ್ತ ; ಸಮಾಧಿ ನಿಷ್ಠ ; ಶ್ರೀಕೃಷ್ಣನಂತೆ ಅನಾದಿಬ್ರಹ್ಮಚಾರೀ. "ಉಂಡೂ ಉಪವಾಸಿ ; ಬಳಸಿ ಬ್ರಹ್ಮಚಾರಿ" ಎಂಬ ಗಾದೆಯಂತೆ ಬ್ರಹ್ಮಸಮಾಧಿನಿಷ್ಠನಾಗಿದ್ದುದರಿಂದ ಅವನು ವಿವಾಹಿತನಾಗಿದ್ದರೂ ಅನೇಕಪತ್ನಿಯರನ್ನು ಹೊಂದಿದ್ದರೂ ಅವನು ಬ್ರಹ್ಮಚಾರಿಯೇ ಎಂಬ ಅಧ್ಯಾತ್ಮತತ್ತ್ವವನ್ನು ಸ್ಪಷ್ಟಪಡಿಸಲು ಆ ಗ್ರಂಥಗಳಲ್ಲಿ ಕಥೆಯನ್ನು ಕೊಂಚ ಬದಲಾಯಿಸಿದ್ದಾರೆ. ಆಧ್ಯಾತ್ಮಿಕವಾದ ಪಾಠಪ್ರವಚನ ದೃಷ್ಟಿಯಿಂದ ಇದು ಸರಿಯೇ ಆಗಿದೆ.

ಆಕ್ಷೇಪ ೭ :-

ವಾಸಿಷ್ಠರಾಮಾಯಣ, ದೂರ್ವಾಸರಾಮಾಯಣ ಇವೇ ಮುಂತಾದ ರಾಮಾಯಣಗಳಲ್ಲಿ ಮಾತ್ರವಲ್ಲದೇ ಶ್ರೀಪಾಂಚರಾತ್ರಾಗಮದಲ್ಲೂ

ಶ್ರೀರಾಮನಿಗೆ ವಿಮಲಾ, ಉತ್ಕರ್ಷಿಣೀ, ಭೂಮಿ, ನೀಳಾ ಮುಂತಾದ ಅನೇಕಪತ್ನಿಯರನ್ನು ಹೇಳಿದೆಯಲ್ಲಾ?

ಸಮಾಧಾನ :-

ಶ್ರೀರಾಮನು ಮನುಷ್ಯನಲ್ಲ ; ಸಾಕ್ಷಾತ್ ಶ್ರೀಮನ್ನಾರಾಯಣನೇ ಎಂಬುದನ್ನು ಹೇಳಿ ಉಪಾಸನೆಮಾಡಿಸುವುದರಲ್ಲಿ ಆಗಮಕ್ಕೆ ತಾತ್ಪರ್ಯ.

ಆಕ್ಷೇಪ ೮ :-

ನಿಮ್ಮ ಈ ವ್ಯಾಖ್ಯಾನಕ್ಕೆ ಆಧಾರವೇನು?

ಸಮಾಧಾನ :-

ಭೂಮಿ, ನೀಳಾ, ವಿಮಲಾ, ಉತ್ಕರ್ಷಿಣೀ, ಈಶಾನಾ, ಜ್ಞಾನಕ್ರಿಯಾ ಮುಂತಾದವರೆಲ್ಲರೂ ವೈಕುಂಠದಲ್ಲಿ ಶ್ರೀಮನ್ನಾರಾಯಣನ ಚಾಮರಸೇವಕಿಯರು. ಅದೇ ಹೆಸರಿನವರೇ ಶ್ರೀರಾಮನಿಗೂ ಚಾಮರಸೇವೆಮಾಡುತ್ತಿದ್ದಾರೆ. ಇವರೆಲ್ಲರೂ ಶ್ರೀರಾಮನ ಶ್ರೀಮನ್ನಾರಾಯಣನ ಪಟ್ಟಮಹಿಷಿಯಾದ ಮಹಾಲಕ್ಷ್ಮಿಯ ಅಂಶದಿಂದ ಹುಟ್ಟಿದ ಶಕ್ತಿಗಳು ; ವಿಭೂತಿಗಳು. ಈ ವಿಭೂತಿಗಳಿಂದ (ಐಶ್ವರ್ಯಗಳಿಂದ) ಸೇವಿತನಾದ ವಿಭೂತಿಪುರುಷ ಈಶ್ವರನೇ ಶ್ರೀರಾಮ ; ಶ್ರೀಮನ್ನಾರಾಯಣ–ಎಂಬ ತತ್ತ್ವವನ್ನು ಆಗಮವು ಸಾರುತ್ತದೆ. ಇಲ್ಲದಿದ್ದರೆ ಶ್ರೀರಾಮನ ಇತರ ಪತ್ನಿಯರೆಂದು ಆಗಮಗಳಲ್ಲೂ ಅಗಸ್ತ್ಯ-ವಾಸಿಷ್ಠಾದಿ ರಾಮಾಯಣಗಳಲ್ಲೂ ಹೇಳಲ್ಪಟ್ಟಿರುವ ಸ್ತ್ರೀಯರಿಗೆ ವೈಕುಂಠನಾರಾಯಣನ ಪರಿಚಾರಿಕೆಯರ ಹೆಸರನ್ನು ಏಕೆ ಹೇಳುತ್ತಿದ್ದರು?

ಶ್ರೀರಾಮನಿಗೆ ಸೀತೆಯೊಬ್ಬಳೇ ಪತ್ನಿಯಾಗಿದ್ದರೆ ಅವನು ಯಜ್ಞಾದಿಗಳನ್ನು ಹೇಗೆ ಮಾಡಿದ?

ಸಮಾಧಾನ :-

ಸೀತೆಯ ಚಿನ್ನದ ವಿಗ್ರಹವನ್ನೇ ಪತ್ನಿಯಾಗಿಟ್ಟುಕೊಂಡು ರಾಮನು ಯಜ್ಞಗಳನ್ನು ಮಾಡಿದ–ಎಂದು ವಾಲ್ಮೀಕಿಯು ನೇರವಾದ ಉತ್ತರವನ್ನೇ ಇದಕ್ಕೆ ಕೊಟ್ಟಿದ್ದಾನೆ.

ಆಕ್ಷೇಪ ೧೦ :-

ಅಶ್ವಮೇಧಯಾಗ ಮಾಡುವವನಿಗೆ ಮಹಷೀ, ಪರಿವೃತ್ತಿ, ವಾವಾತಾ– ಎಂಬ ಮೂವರು ಪತ್ನಿಯರು ಇರಲೇಬೇಕು. ಸೀತೆಯು ಅಥವಾ ಆಕೆಯ ಪ್ರತಿಮೆಯು ಪಟ್ಟಮಹಿಷಿಯಾದರೂ ಪರಿವೃತ್ತಿ, ವಾವಾತಾ ಎಂಬ ಬೇರೆ ಇಬ್ಬರು ಹೆಂಡತಿಯರಾದರೂ ಇರಲೇಬೇಕಲ್ಲವೇ?

ಸಮಾಧಾನ :-

ಅದು ಶಾಸ್ತ್ರಗಳು ಹೇಳುವ ಅಭ್ಯನುಜ್ಞಾವಿಧಿ. ಮೂವರು ಹೆಂಡತಿಯರಿದ್ದರೆ ಆಗ ಅವರಲ್ಲಿ ಯಾರು ಯಾರು ಯಾವ ಕೆಲಸಮಾಡಬೇಕು?– ಎಂಬುದನ್ನು ಶಾಸ್ತ್ರವು ಹೇಳುತ್ತದೆ. ಒಬ್ಬಳೇ ಹೆಂಡತಿ ಇದ್ದರೆ ಮೂವರ ಕೆಲಸವನ್ನು ಅವಳೊಬ್ಬಳೇ ಮಾಡಬೇಕು. ಸಾಮಾನ್ಯವಾಗಿ ರಾಜನಿಗೆ ಅನೇಕ ಹೆಂಡತಿಯರು ಇರುತ್ತಿದ್ದುದರಿಂದ ಆ ಮೂವರಿಗೂ ಬೇರೆ ಬೇರೆ ಕೆಲಸಗಳು ಶಾಸ್ತ್ರದಲ್ಲಿ ಹೇಳಲ್ಪಟ್ಟಿವೆ.

ಆಕ್ಷೇಪ ೧೧ :-

'ಶ್ರೀರಾಮನು ಯಜ್ಞಾರ್ಥವಾಗಿ ಇತರ ಹೆಂಗಸರನ್ನೂ ವಿವಾಹವಾಗಿದ್ದನು'–ಎಂದು ಮೀಮಾಂಸಕರೂ ಹೇಳುವರಲ್ಲವೇ?

ಸಮಾಧಾನ :-

ಮೀಮಾಂಸಕರು ಯಜ್ಞನಿಷ್ಠೆಯಲ್ಲಿ ಆಸಕ್ತರು. ಅವರ ಮೇಲ್ಕಂಡ ಮಾತು ಪ್ರಮಾಣವಲ್ಲ. ದ್ರೌಪದಿಯು ಪಾಂಡವರೈವರನ್ನೂ ಮದುವೆಯಾದಳೆಂಬ ಐತಿಹಾಸಿಕ ಕಥೆಯನ್ನು ಅವರು ಒಪ್ಪುವುದಿಲ್ಲ. ಇದಕ್ಕೆ ಕಾರಣ ಒಬ್ಬ ಸ್ತ್ರೀಗೆ ಒಬ್ಬಳೇ ಪತಿ–ಎಂಬ ಶಾಸ್ತ್ರವಚನ. ಪತಿಗೆ ಪತ್ನಿಯರು ಇರಲು ಶಾಸ್ತ್ರದಲ್ಲಿ ಅವಕಾಶವಿದೆ. ಆದರೆ ಹೆಂಗಸಿಗೆ ಅನೇಕಪತಿಗಳಿರಲು ಶಾಸ್ತ್ರದಲ್ಲಿ ಅವಕಾಶವಿಲ್ಲ. ಆದುದರಿಂದ ಅರ್ಜುನನೊಬ್ಬನೇ ಪಾಂಚಾಲಿಯನ್ನು ಮದುವೆಯಾದನೆಂದೂ ಉಳಿದ ನಾಲ್ವರೂ ದ್ರುಪದನ ಐಶ್ವರ್ಯವನ್ನು ಹಂಚಿಕೊಂಡರೆಂದೂ ಮೀಮಾಂಸಕರು ಸಮರ್ಥಿಸುತ್ತಾರೆ. ಐತಿಹಾಸಿಕವಾಗಿ

ಇದು ಅಪ್ರಮಾಣವಲ್ಲವೇ? ಅಂತೆಯೇ ರಾಮನ ವಿಷಯದಲ್ಲಿಯೂ ಇವರ ಮಾತು ಅಪ್ರಮಾಣ.


## ಉಪಸಂಹಾರ

ಶ್ರೀರಾಮನಿಗೆ ಸೀತೆಯೊಬ್ಬಳೇ ಪತ್ನಿ. ಉತ್ತಮಪರಿಚಾರಿಕೆಯರು ಹಲವಾರು ಮಂದಿ ಇದ್ದರು. ಶ್ರೀರಾಮನಿಗೆ ಸೀತೆಯಲ್ಲದೇ ಇತರ ಹೆಂಡತಿಯರೂ ಇದ್ದರೆಂದು ವಾಲ್ಮೀಕಿಯು ವಾಚ್ಯವಾಗಿ ಎಲ್ಲಿಯೂ ಹೇಳಿಲ್ಲ. ಸೂಚಿಸಿಯೂ ಇಲ್ಲ. ಇಂತಹ ಹೆಂಡತಿಯರ ಹೆಸರೂ ಇಲ್ಲ. ವಿವಾಹದ ಪ್ರಸ್ತಾಪವೂ ಇಲ್ಲ. ಅವರಿಂದ ಹುಟ್ಟಿದ ಪುತ್ರರ ಹೆಸರೂ ಇಲ್ಲ. ಅವನಿಗೆ ಒಬ್ಬಳೇ ಪತ್ನೀ–ಎಂಬುದನ್ನು ಸ್ಪಷ್ಟವಾಗಿ ಹೇಳಿದೆ. ವಾಲ್ಮೀಕಿರಾಮಾಯಣಕ್ಕಿಂತ ಭಿನ್ನವಾದ ಇತರ ರಾಮಾಯಣಗಳು ಮತ್ತು ಪಾಂಚರಾತ್ರಾದ್ಯಾಗಮಗಳು ತಾತ್ತ್ವಿಕವಾಗಿ ಮಾತ್ರವೇ ಪ್ರಮಾಣ. ಶ್ರೀರಾಮನಿಗೆ ಸೀತೆಯೊಬ್ಬಳೇ ಪತ್ನಿ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

---

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.